BROWN BOOK

TIGHT BINDING

UNIVERSAL LIBRARY
OU_200553
UNIVERSAL LIBRARY

# Karnataka Kavi Charite.

cked 1969

# ಕರ್ಣಾಟಕ ಕವಿಚರಿತೆ.

---

## Volume II

**(From the 15th Century to the end of the 17th)**

## ದ್ವಿತೀಯ ಸಂಪುಟ

(15 ನೆಯ ಶತಮಾನದಿಂದ 17 ನೆಯ ಶತಮಾನದ ಕೊನೆಯವರೆಗೆ)

BY

**Praktana Vimarsa Vichakshana, Rao Bahadur**

**R. Narasimhacharya,** M. A., M. R. A. S.

*Honorary Correspondent of the Government of India*
*Archaeological Deparatment.*
*Director of Archaeological Researches in Mysore.*
*Author of*
*'Karnataka Kavi Charite' Volume I, 'Nitimanjari*
*Parts I and II, Nagegadalu &c*

BANGALORE:

Printed at the City Press
1919.

*Copy right Registered*]

[*Price Rs. 5.*

ecked 1969.

# Contents

## I ವಿಷಯಸೂಚಿಕೆ.

---

### POETS

**ಈ ಸಂಪುಟದಲ್ಲಿ ಹೇಳಿರುವ ಕರ್ಣಾಟಕ ಕವಿಗಳ ವರ್ಣಾನುಕ್ರಮವಾದ ಹೆಸರುಗಳು.**


| ಹೆಸರು | ಕಾಲ | ಪುಟ |
|---|---|---|
| ಅಚರಾಜ | 1104 | 12 |
| ಅಚ್ಯುತದಾಸ | ಸು. 1650 | 411 |
| ಅಣ್ಣಾಜಿ | „ 1600 | 334 |
| ಅದೃಶ್ಯಕವಿ | „ 1580 | 305 |
| ಅದ್ವೈತಾನಂದ | „ 1700 | 554 |
| ಅನ್ನದಾನಿಮಲ್ಲಿಕಾರ್ಜುನಾಚಾರ್ಯ | „ 1650 | 440 |
| ಅಭಿನವಚಂದ್ರ | „ 1400 | 37 |
| ಅಭಿನವವಾದಿವಿದ್ಯಾನಂದ | 1533 | 227 |
| ಅಮೃತನಂದಿ | ಸು. 1300 | 33 |
| ಅರ್ಹದ್ದಾಸ | „ 1650 | 415 |
| ಆಚಣ್ಣ | „ 1195 | 21 |
| ಆದಿಯಪ್ಪ | „ 1650 | 414 |
| ಆದಿಯಪ್ಪ | „ 1700 | 555 |
| ಆನಂದಬಸವಲಿಂಗ ಶಿವಯೋಗಿ | „ 1500 | 146 |
| ಆಯತವರ್ಮ | „ 1400 | 38 |
| ಇಮ್ಮಡಿ ತೋಂಟದಯ್ಯ | „ 1530 | 226 |
| ಇಮ್ಮಡಿಮುರಿಗೆಯ ಸ್ವಾಮಿ | ಸು. 1590 | 313 |
| ಈಶ್ವರಕವಿ | „ 1500 | 150 |
| ಉಜ್ಜನೀಶ | „ 1550 | 259 |
| ಉತ್ತರದೇಶದ ಬಸವಲಿಂಗದೇವ | „ 1600 | 321 |
| ಎಮ್ಮೆಬಸವ | 1543 | 233 |
| ಎರಡನೆಯ ಚೆನ್ನಬಸವ | ಸು. 1500 | 163 |
| ಎಳಮಲೆಯ ಗುರುಶಾಂತದೇವ | „ 1565 | 298 |
| ಓದುವಗಿರಿಯ | „ 1525 | 207 |
| ಕೆಂಪಿನಂಜಯ್ಯ | „ 1560 | 294 |
| ಕನಕಚಂದ್ರ | „ 1300 | 34 |
| ಕನಕದಾಸ | „ 1550 | 237 |
| ಕರಸ್ಥಲದನಾಗಿದೇವ | „ 1430 | 69 |
| ಕಲ್ಲುಮಠದ ಪ್ರಭುದೇವ | „ 1430 | 61 |
| ಕಲ್ಲರಸ | „ 1450 | 93 |

| ಹೆಸರು | ಕಾಲ | ಪುಟ |
|---|---|---|
| ಕಲ್ಯಾಣಕೀರ್ತಿ | 1439 | 84 |
| ಕಲ್ಯಾಣದಸ್ವಾಮಿ | ಸು. 1500 | 172 |
| ಕವಿಪುಟ್ಟಣಾಂಕ ಪಂಡಿತ | „ 1380 | 35 |
| ಕವಿಮಲ್ಲ | „ 1400 | 41 |
| ಕವಿಮಾದಣ್ಣ | „ 1550 | 433 |
| ಕವಿಲಿಂಗ | „ 1490 | 137 |
| ಕವಿವಿಟ್ಠಲ | „ 1600 | 331 |
| ಕಾರುಗಹಳ್ಳಿ ಶಾಂತಯ್ಯ | „ 1700 | 532 |
| ಕಿಕ್ಕೇರಿಯಾರಾಧ್ಯ ನಂಜುಂಡ | „ 1550 | 265 |
| ಕುಂತಿ | „ 1500 | 174 |
| ಕುಮಾರಚೆನ್ನಬಸವ | „ 1550 | 254 |
| ಕುಮಾರಬಂಕನಾಥ | „ 1430 | 56 |
| ಕುಮಾರವಾಲ್ಮೀಕಿ | „ 1500 | 141 |
| ಕುಮಾರವ್ಯಾಸ | „ 1430 | 64 |
| ಕೃಷ್ಣ | „ 1700 | 540 |
| ಕೃಷ್ಣಶರ್ಮ | „ 1700 | 528 |
| ಕೊಂಡಗೂಳಿ ಕೇಶಿರಾಜ | „ 1160 | 19 |
| ಕೋಟೀಶ್ವರ | „ 1500 | 145 |
| ಗಂಗ | „ 1650 | 423 |
| ಗಂಗಾಧರ | „ 1550 | 270 |
| ಗಂಗಾಧರಾಚಾರ್ಯ | „ 1470 | 97 |
| ಗಜಾಂಕುಶ | „ 1000 | 3 |
| ಗಣದಾಸಿವೀರಣ್ಣ | „ 1600 | 346 |
| ಗುಣಚಂದ್ರ | „ 1650 | 416 |
| ಗುಣವರ್ಮ I | „ 900 | 1 |
| ಗುಬ್ಬಿಯ ಮಲ್ಲಣಾರ್ಯ | 1513 | 191 |
| ಗುಬ್ಬಿಯಮಲ್ಲಣ್ಣ | ಸು. 1475 | 101 |
| ಗುಮ್ಮಟಾರ್ಯ | „ 1500 | 169 |
| ಗುಮ್ಮಳಾಪುರದ ಸಿದ್ಧಲಿಂಗೇಶ್ವರ | „ 1480 | 127 |
| ಗುರುದೇವ | „ 1350 | 34 |
| ಗುರುನಂಜ | „ 1500 | 167 |
| ಗುರುಪ್ರಸಾದ | „ 1650 | 424 |
| ಗುರುಬಸವ | „ 1430 | 74 |
| ಗುರುಲಿಂಗವಿಭು | „ 1550 | 261 |
| ಗೋವಿಂದ | „ 1650 | 394 |
| ಚಂದ್ರಕವಿ | „ 1430 | 81 |
| ಚಂದ್ರಕೀರ್ತಿ | „ 1400 | 39 |
| ಚಂದ್ರಭಟ್ಟ | „ 1000 | 3 |
| ಚಂದ್ರಮ | 1645 | 371 |
| ಚಂದ್ರಮ | ಸು. 1650 | 422 |
| ಚಂದ್ರಶೇಖರ | „ 1700 | 526 |
| ಚತುರಾಸ್ಯಬೊಮ್ಮರಸ | „ 1450 | 92 |
| ಚತುರ್ಮುಖಬೊಮ್ಮರಸ | „ 1500 | 138 |
| ಚವುಂಡಿ | „ 1500 | 174 |
| ಚಾಕರಾಜ | „ 1500 | 173 |
| ಚಾಟುವಿಠಲನಾಥ | „ 1530 | 222 |
| ಚಾಮರಸ | „ 1430 | 59 |
| ಚಾಮರಾಜ | 1617 -37 | 359 |
| ಚಾಮಯ್ಯ | ಸು. 1700 | 535 |

| ಹೆಸರು | | ಕಾಲ | ಪುಟ |
|---|---|---|---|
| ಚಿಕ್ಕದೇವರಾಜ | | 1672 | |
| | | –1704 | 455 |
| ಚಿಕ್ಕರಸ | ಸು. | 1680 | 513 |
| ಚಿಕ್ಕುಪಾಧ್ಯಾಯ | | 1672 | 467 |
| ಚಿದಾನಂದಕವಿ | ಸು. | 1680 | 508 |
| ಚೆನ್ನಕವಿ | ,, | 1600 | 346 |
| ಚೆನ್ನಣ | ,, | 1650 | 432 |
| ಚೆನ್ನಪ್ಪ | ,, | 1650 | 440 |
| ಚೆನ್ನಬಸವಾಂಕ | ,, | 1550 | 234 |
| ಚೆನ್ನಮಲ್ಲಿಕಾರ್ಜುನ | ,, | 1550 | 294 |
| ಚೆನ್ನಮಲ್ಲೇಶ | ,, | 1700 | 543 |
| ಚೆನ್ನರಾಜ | ,, | 1570 | 300 |
| ಚೆನ್ನವೀರ | ,, | 1500 | 169 |
| ಚೆನ್ನವೀರಣ್ಣೊ | | | |
| ಡೆಯ | ,, | 1650 | 429 |
| ಚೆನ್ನವೃಷಭ | ,, | 1700 | 556 |
| ಚೆನ್ನಿಗ | ,, | 1700 | 530 |
| ಚೇರಮಾಂಕ | | 1526 | 208 |
| ಜಕ್ಕಣಾರ್ಯ | ಸು. | 1430 | 57 |
| ಜಕ್ಕಭೂಪಾಲ | ,, | 1620 | 361 |
| ಜಗದ್ದಳಸೋಮ | | | |
| ನಾಥ | ,, | 1150 | 15 |
| ಜಿನದೇವಣ್ಣ | | 1444 | 86 |
| ತಿಮ್ಮ | ಸು. | 1600 | 320 |
| ತಿಮ್ಮಕವಿ | | 1677 | 492 |
| ತಿಮ್ಮಣ್ಣಕವಿ | ಸು. | 1510 | 189 |
| ತಿಮ್ಮರಸ | ,, | 1550 | 408 |
| ತಿಮ್ಮರಸ | ,, | 1700 | 547 |
| ತಿರುಮಲಭಟ್ಟ | ,, | 1600 | 317 |
| ತಿರುಮಲಾರ್ಯ | | 1645 | |
| | | --1706 | 461 |
| ತಿರುಮಲೆವೈದ್ಯ | ಸು. | 1650 | 393 |
| ತೆರಕಣಾಂಬಿ | | | |
| ಬೊಮ್ಮರಸ | ,, | 1485 | 128 |
| ತೋಂಟದಸಿದ್ಧೇ | | | |
| ಶ್ವರ | ,, | 1470 | 97 |
| ದಿವಾಕರಣಂದಿ | | 1052 | 7 |
| ದೇಪರಾಜ | ಸು. | 1410 | 43 |
| ದೇವರಸ | ,, | 1650 | 391 |
| ದೇವರಸ | ,, | 1700 | 558 |
| ದೇವರಾಚಾರ್ಯ | ,, | 1650 | 379 |
| ದೇವೇಂದ್ರಮುನಿ | ,, | 1200 | 24 |
| ದೇವೋತ್ತಮ | ,, | 1600 | 330 |
| ದೈವಜ್ಞವಲ್ಲಭ | ,, | 1700 | 558 |
| ದೊಡ್ಡಣಾಂಕ | | 1578 | 303 |
| ದೊಡ್ಡತಿಮ್ಮದಾಸ | ಸು. | 1700 | 553 |
| ದೊಡ್ಡಯ್ಯ | ,, | 1550 | 251 |
| ದೊಡ್ಡಷಡಕ್ಷರಿ | | | |
| ಸ್ವಾಮಿ | ,, | 1650 | 428 |
| ಧರಣಿಪಂಡಿತ | ,, | 1650 | 417 |
| ಧರಣೋಜ | | 1424 | 49 |
| ನಂಜ | ಸು. | 1700 | 549 |
| ನಂಜಣಾರ್ಯ | ,, | 1650 | 438 |
| ನಂಜನಾಥನೃಪಾಲ | ,, | 1700 | 559 |
| ನಂಜುಂಡ | ,, | 1525 | 202 |
| ನಂಜೇಶಕವಿ | ,, | 1650 | 388 |
| ನರಸಾರ್ಯ | ,, | 1600 | 552 |
| ನರಸಿಂಹ | ,, | 1650 | 435 |

| ಹೆಸರು | ಕಾಲ | ಪುಟ | ಹೆಸರು | ಕಾಲ | ಪುಟ |
|---|---|---|---|---|---|
| ನರಹರಿ | ಸು. 1650 | 401 | ಪರಮಭಕ್ತ | ಸು. 1700 | 539 |
| ನರಹರಿತೀರ್ಥ | 1281 | 32 | ಪರ್ವತದೇವ | 1578 | 304 |
| ನಾಗರಸ | ಸು. 1650 | 406 | ಪರ್ವತಶಿವಯೋಗಿ | ಸು. 1650 | 397 |
| ನಾಗರಾಜ | 1331 | 34 | ಪಾಯಣಮುನಿ | 1606 | 353 |
| ನಾಗವ | ಸು. 1700 | 536 | ಪಾಯಣ್ಣವ್ರತಿ | ಸು. 1600 | 332 |
| ನಾರಸಿಂಹಶಾಸ್ತ್ರಿ | ,, 1570 | 300 | ಪಾಲ್ಕುರಿಕೆಸೋಮ | ,, 1195 | 23 |
| ನಾರಾಯಣಕವಿ | ,, 1450 | 95 | ಪುರಂದರದಾಸ | ,, 1540 | 232 |
| ನಿಃಕಲ | ,, 1700 | 560 | ಪೆಮ್ಮಸೆಟ್ಟಿ | ,, 1650 | 427 |
| ನಿಜಗುಣಶಿವಯೋಗಿ | ,, 1500 | 153 | ಪ್ರಧಾನಿ ತಿರುಮಲಾರ್ಯ | ,, 1600 | 326 |
| ನಿರಾಲಂಬಶರಣ | ,, 1700 | 561 | ಪ್ರಭಾಚಂದ್ರ | ,, 1300 | 34 |
| ನೀಲಕಂಠಶಿವಾಚಾರ್ಯ | ,, 1400 | 42 | ಪ್ರಭುಗ | ,, 1520 | 200 |
| ನೀಲಕಂಠಾಚಾರ್ಯ | ,, 1485 | 133 | ಪ್ರಾಸಭೂಷಣ | ,, 1650 | 427 |
| ನೀಲಕಂಠಾರಾಧ್ಯ | ,, 1500 | 168 | ಬತ್ತಲೇಶ್ವರ | ,, 1430 | 80 |
| ನೂತನನಾಗಚಂದ್ರ | ,, 1659 | 420 | ಬಸವ | ,, 1160 | 18 |
| ನೇಮಣ್ಣ | 1559 | 281 | ಬಸವ | ,, 1550 | 269 |
| ನೇಮಿವ್ರತಿ | ಸು. 1650 | 439 | ಬಸವ | ,, 1700 | 552 |
| ಪಂಚಬಾಣ | 1614 | 351 | ಬಸವಪ್ಪನಾಯಕ | ,, 1700 | 558 |
| ಪಂಡಿತಮಲ್ಲಿಕಾರ್ಜುನ | 1687 | 517 | ಬಸವರಾಜೇಂದ್ರ | ,, 1700 | 538 |
| ಪಟ್ಟುಗಂಬಿಳಿ ಸಿದ್ಧಲಿಂಗಸ್ವಾಮಿ | ಸು. 1700 | 532 | ಬಸವಲಿಂಗ | 1611 | 353 |
| ಪತ್ತಿಯಣ್ಣ | ,, 1700 | 557 | ಬಸವಲಿಂಗಕವಿ | 1679 | 500 |
| ಪದ್ಮಕವಿ | 1528 | 212 | ಬಸವಾಂಕ | ಸು. 1550 | 261 |
| ಪದ್ಮಣಪಂಡಿತ | 1627 | 368 | ಬಸವಾರಾಧ್ಯ | ,, 1700 | 557 |
| ಪದ್ಮನಾಭ | ಸು. 1680 | 514 | ಬಸವೇಶ | ,, 1600 | 344 |
| ಪದ್ಮಪ್ರಭ | ,, 1300 | 33 | ಬಾಚರಸ | ,, 1500 | 171 |
| ಪದ್ಮರಸ | 1599 | 314 | ಬಾಯುಣಾಚಾರ್ಯ | 1410 | 562 |
| ಪರಂಜ್ಯೋತಿಯತಿ | ಸು. 1450 | 93 | ಬಾಲಚಂದ್ರ | 1273 | 31 |
| | | | ಬಾಲಚಂದ್ರಕವಿ ಕಂದರ್ಪ | 1204 | 25 |

| ಹೆಸರು | ಕಾಲ | ಪುಟ |
|---|---|---|
| ಬಾಹುಬಲಿ | ಸು. 1560 | 287 |
| ಬಾಹುಬಲಿಪಂಡಿತ | 1352 | 35 |
| ಬಿರುದಗಳು | ಸು. 1500 | 175 |
| ಕನ್ನಡಜಾಣ | | 175 |
| ಗುಣರತ್ನ | | 176 |
| ಚಂದನತಿಲಕ | | 570 |
| ಚೂಡಾರತ್ನ | | 176 |
| ಬಲ್ಲವರರಸ | | 177 |
| ಬುಧಜನಮಿತ್ರ | | 177 |
| ಭೂಭುಜರತ್ನ | | 177 |
| ವರಕವಿಚಂದ್ರ | | 570 |
| ವಾಣೀಮುಕುರ | | 571 |
| ವಿದಗ್ಧಲಲಾಮ | | 177 |
| ವಿವೇಕಚೂಡಾರತ್ನ | | 177 |
| ವೈರಾಗ್ಯನಿಧಿ | | 177 |
| ಸರಸ್ವತೀಮುಖತಿಲಕ | | 178 |
| ಸುಕವಿಕಂಠಾಭರಣ | | 178 |
| ಸುಕವಿಕರ್ಣಾಭರಣ | | 571 |
| ಸುಕವಿನಿಕರನಿಳಿಂಪ | | 178 |
| ಸುಗುಣಕಂಠಾಭರಣ | | 178 |
| ಸುಗುಣಕರಂಡ | | 178 |
| ಸುಗುಣರತ್ನಕರಂಡ | | 178 |
| ಸುಜನಮನೋಜ | | 571 |
| ಬೆಂಗಳೂರು ಮುದ್ದವೀರಸ್ವಾಮಿ | ಸು. 1700 | 531 |
| ಬೊಂಬೆಯುಲಕ್ಕ | 1538 | 231 |
| ಬೊಪ್ಪಣಪಂಡಿತ | ಸು. 1180 | 21 |
| ಬೊಮ್ಮರಸ | ,, 1450 | 88 |
| ಬ್ರಹ್ಮಕವಿ | ,, 1600 | 341 |
| ಬ್ರಹ್ಮಶಿವ | ಸು. 1125 | 13 |
| ಭಟ್ಟಾಕಳಂಕದೇವ | 1604 | 348 |
| ಭಾರತಿನಂಜ | 1648 | 373 |
| ಭಾಸ್ಕರ | 1424 | 47 |
| ಭಾಸ್ಕರ | ಸು. 1550 | 375 |
| ಭೀಮಕವಿ | 1369 | 36 |
| ಮಂಗರಸ | 1508 | 179 |
| ಮಂಚಯ್ಯ | ಸು. 1650 | 440 |
| ಮಗ್ಗೆಯಮಾಯಿದೇವ | ,, 1430 | 70 |
| ಮನಸಿಜ | ,, 1000 | 3 |
| ಮರಿರಾಚವಟ್ಟೇಶ | ,, 1650 | 399 |
| ಮರುಳುಸಿದ್ಧ | ,, 1700 | 530 |
| ಮರುಳುಸಿದ್ಧೇಶ | ,, 1650 | 438 |
| ಮಲ್ಲಣ್ಣ | 1413 | 46 |
| ಮಲ್ಲರಸ | ಸು. 1680 | 510 |
| ಮಲ್ಲಿಕಾರ್ಜುನ | ,, 1245 | 26 |
| ಮಲ್ಲಿಕಾರ್ಜುನ | ,, 1600 | 345 |
| ಮಲ್ಲಿಕಾರ್ಜುನ | 1678 | 498 |
| ಮಲ್ಲಿಕಾರ್ಜುನಕವಿ | ಸು 1485 | 132 |
| ಮಲ್ಲಿಕಾರ್ಜುನಕವಿ | 1593 | 313 |
| ಮಲ್ಲಿಕಾರ್ಜುನರಾಯ | ಸು. 1600 | 338 |
| ಮಲ್ಲಿದೇವ | 1104 | 12 |
| ಮಲ್ಲು | ಸು. 1650 | 431 |
| ಮಹಾಂತಸ್ವಾಮಿ | ,, 1550 | 293 |
| ಮಹಾದೇವ | ,, 1650 | 435 |
| ಮಹಾಲಿಂಗದೇವ | ,, 1425 | 50 |
| ಮಾಘಣಂದಿ | ,, 1260 | 30 |
| ಮಾಧವ | ,, 1500 | 164 |

| ಹೆಸರು | | ಕಾಲ | ಪುಟ |
|---|---|---|---|
| ಮಾಧರದೇವ | ಸು. | 1650 | 415 |
| ಮುಪ್ಪಿನಯ್ಯ | ,, | 1700 | 555 |
| ಮುಮ್ಮಡಿತಮ್ಮ | ,, | 1665 | 450 |
| ಮುರಿಗೆದೇಶಿಕೇಂದ್ರ | ,, | 1550 | 291 |
| ಮುರಿಗೆಯ ಶಾಂತ ವೀರ | ,, | 1530 | 212 |
| ಮೌಕ್ತಿಕಕವಿ | ,, | 1120 | 12 |
| ಯಶಃಕೀರ್ತಿ | ,, | 1500 | 172 |
| ಯಶಶ್ಚಂದ್ರ | ,, | 1300 | 33 |
| ಯೋಗೀಂದ್ರ | ,, | 1650 | 412 |
| ರಂಗನಾಥ | ,, | 1675 | 490 |
| ರಂಗರಾಜ | ,, | 1660 | 449 |
| ರಂಗಾಚಾರ್ಯ | ,, | 1570 | 300 |
| ರತ್ನಾಕರವರ್ಣಿ | | 1557 | 274 |
| ರಾಘವಾಂಕ | ಸು. | 1165 | 20 |
| ರಾಚಪಟ್ಟದಾರಾ ರಾಧ್ಯ | ,, | 1650 | 389 |
| ರಾಮ | | 1689 | 519 |
| ರಾಮಚಂದ್ರ | ಸು. | 1625 | 367 |
| ರಾಮಚಂದ್ರ ಕವಿ | ,, | 1700 | 555 |
| ರಾಮಚಂದ್ರ ಗುರು ಶಿಷ್ಯ | ,, | 1550 | 260 |
| ರಾಮಬ್ರಹ್ಮಾನಂದ | ,, | 1700 | 543 |
| ರಾಮರಸವಿರೂ ಪಾಕ್ಷ | | 1538 | 232 |
| ರಾಯಸದ ಲಕ್ಷ್ಮೀ ಪತಿ | | 1662 | 450 |
| ರುದ್ರ | ಸು. | 1650 | 400 |
| ರೇಚುಗ | ,, | 1500 | 174 |
| ರಾಮೇಂದ್ರ | ಸು. | 1550 | 268 |
| ಲಕ್ಕಣ್ಣದಂಡೇಶ | | 1428 | 53 |
| ಲಕ್ಷ್ಮಣಾಂಕ | ಸು. | 1500 | 172 |
| ಲಕ್ಷ್ಮಯ್ಯ | ,, | 1700 | 535 |
| ಲಕ್ಷ್ಮೀಶ | ,, | 1700 | 522 |
| ಲಿಂಗ | ,, | 1550 | 256 |
| ಲಿಂಗಮಂತ್ರಿ | ,, | 1530 | 215 |
| ವಚನಕಾರರು | ,, | 1150 | |
| | | 1475 | 105 |
| ಅಂಬಿಗರಚೌಡಯ್ಯ | ,, | 1160 | 110 |
| ಅಜಗಣ್ಣ | ,, | 1160 | 110 |
| ಅಮುಗಿದೇವಯ್ಯ | ,, | 1160 | 111 |
| ಉರಿಲಿಂಗದೇವ | ,, | 1170 | 113 |
| ಉರಿಲಿಂಗಪೆದ್ದಿ | ,, | 1180 | 114 |
| ಗಜೇಶಮಸಣಯ್ಯ | ,, | 1160 | 111 |
| ಚಿಕ್ಕಯ್ಯ | ,, | 1160 | 112 |
| ಚೆನ್ನಬಸವ | ,, | 1160 | 106 |
| ನಿಜಗುಣದೇವ | ,, | 1160 | 111 |
| ಪ್ರಭುದೇವ | ,, | 1160 | 107 |
| ಬಸವ | ,, | 1160 | 106 |
| ಮಡಿವಾಳಮಾ ಚಯ್ಯ | ,, | 1160 | 109 |
| ಮಲ್ಲಿಕಾರ್ಜುನ ಪಂಡಿತ | ,, | 1160 | 110 |
| ಮಹಾದೇವಿಯಕ್ಕ | ,, | 1160 | 108 |
| ಮೋಳಿಗಯ್ಯ | ,, | 1160 | 109 |
| ರಾಮನಾಥ | ,, | 1170 | 114 |
| ರೇಕಣ್ಣ | ,, | 1170 | 113 |
| ಸಂಗಯ್ಯ | ,, | 1200 | 115 |

| ಹೆಸರು | ಕಾಲ | ಪುಟ |
|---|---|---|
| ಸಕಲೇಶಮಾದರಸ | ಸು. 1150 | 105 |
| ಸಿದ್ಧರಾಮ | ,, 1160 | 108 |
| ಸಿಮ್ಮಲಿಗೆಯ ಚೆನ್ನರಾಮ | ,, 1170 | 112 |
| ಸೊಡ್ಡಳಬಾಚರಸ | ,, 1160 | 107 |
| ಹೆಸರುತಿಳಿಯದವನು | ,, 1200 –1475 | 115 |
| ವರ್ಧಮಾನ | ,, 1600 | 316 |
| ವಾಸ್ವಲ್ಲಕೀವೈಶಿಕ | ,, 1150 | 17 |
| ವಾದಿ ಕುಮುದಚಂದ್ರ | ,, 1100 | 11 |
| ವಾದಿರಾಜ | ,, 1570 | 301 |
| ವಾರತಿಶೋಮಣ್ಣ | ,, 1600 | 337 |
| ವಿಜಯಣ್ಣ | 1448 | 86 |
| ವಿಜಯವೆಂಕಟರಮಣ | ಸು. 1700 | 554 |
| ವಿದ್ಯಾನಂದ | 1455 | 96 |
| ವಿರಕ್ತತೋಂಟದಾರ್ಯ | ಸು. 1560 | 281 |
| ವಿರತಮಹಲಿಂಗದೇವ | ,, 1500 | 147 |
| ವಿರೂಪರಾಜ | 1519 | 148 |
| ವಿರೂಪಾಕ್ಷ | ಸು. 1500 | 347 |
| ವಿರೂಪಾಕ್ಷಪಂಡಿತ | 1584 | 307 |
| ವೀರಚರಪತಿ | ಸು. 1650 | 425 |
| ವೀರನಂದಿ | 1153 | 18 |
| ವೀರಣಾರ್ಯ | ಸು. 1650 | 433 |
| ವೀರಣಾರಾಧ್ಯ | ,, 1650 | 429 |

| ಹೆಸರು | ಕಾಲ | ಪುಟ |
|---|---|---|
| ವೀರಭದ್ರರಾಜ | ಸು. 1530 | 217 |
| ವೀರಭದ್ರರಾಜ | ,, 1600 | 343 |
| ವೆಂಕಕವಿ | ,, 165[illegible] | 404 |
| ವೆಂಕಟಾರ್ಯಶಿಷ್ಯ | ,, 170[illegible] | 545 |
| ವೆಂಕಯಾರ್ಯ | ,, 1650 | [illegible] |
| ವೆಂಕಟಶರ್ಮ | ,, 1622 | 364 |
| ವೇಣುಗೋಪಾಲವರಪ್ರಸಾದ | ಸು. 1680 | 506 |
| ವೈಕುಂಠದಾಸ | ,, 1680 | 516 |
| ವ್ಯಾಸರಾಯ | ,, 1525 | 206 |
| ಶಂಕರದೇವ | ,, 1620 | 361 |
| ಶರಣಕವಿ | ,, 1165 | 21 |
| ಶಾಂತಮಲ್ಲ | ,, 1650 | 390 |
| ಶಾಂತರಸ | ,, 1600 | 340 |
| ಶಾಂತಲಿಂಗದೇಶಿಕ | 1672 | 454 |
| ಶಾಂತವೀರದೇಶಿಕ | ಸು. 1650 | 377 |
| ಶಾಂತವೃಷಭೇಶ | ,, 1700 | 551 |
| ಶಾಂತಾಚಾರ್ಯ | ,, 1700 | 554 |
| ಶಾಂತಕೀರ್ತಿಮುನಿ | 1519 | 200 |
| ಶಾಂತಿನಾಥ | 1068 | 7 |
| ಶಾಂತೇಶ | 1561 | 296 |
| ಶಿವಲಿಂಗಯೋಗಿ | ಸು. 1700 | 559 |
| ಶುಭಚಂದ್ರ | ,, 1200 | 25 |
| ಶುಭಚಂದ್ರ | ,, 1500 | 172 |
| ಶೃಂಗಾರಕವಿ | ,, 1600 | 338 |
| ಶೃಂಗಾರಕವಿ ಹಂಸರಾಜ | ,, 1600 | 328 |
| ಶೃಂಗಾರಮ್ಮ | ,, 1685 | 516 |
| ಶೇಷ | ,, 1650 | 438 |

| ಹೆಸರು | ಕಾಲ | ಪುಟ |
|---|---|---|
| ಶ್ಯಾಮಕುಂದಾಚಾರ್ಯ | ಸು. 700 | 1 |
| ಶ್ರೀಗಿರೀಂದ್ರ | ,, 1430 | 69 |
| ಶ್ರೀಧರದೇವ | ,, 1500 | 166 |
| ಶ್ರೀಧರಾಂಕ | ,, 1550 | 259 |
| ಶ್ರೀಧರಾಚಾರ್ಯ | 1049 | 3 |
| ಶ್ರೀನಾಥ | ಸು. 1500 | 152 |
| ಶ್ರೀನಿವಾಸಕವಿ | ,, 1700 | 550 |
| ಶ್ರೀಪಾದರಾಯ | ,, 1500 | 152 |
| ಶ್ರೀವಿಜಯದಂತೆನಾಥ | ,, 915 | 2 |
| ಶ್ರೀಶೈಲಾರ್ಯ | ,, 1700 | 557 |
| ಶ್ರುತಕೀರ್ತಿ | 1567 | 299 |
| ಷಡಕ್ಷರದೇವ | 1655 | 442 |
| ಸಂಗಮಬಸವೇಶ್ವರ | ಸು. 1600 | 325 |
| ಸಂಪಾದನೆಯ ಗುರುಲಿಂಗದೇವ | ,, 1670 | 453 |
| ಸಂಪಾದನೆಯ ಚೆನ್ನಂಜಿದೇವ | ,, 1530 | 214 |
| ಸಂಪಾದನೆಯ ಪರ್ವತೇಶ್ವರ | 1698 | 520 |
| ಸಂಪಾದನೆಯ ಸಿದ್ಧವೀರಣಾಚಾರ್ಯ | ಸು. 1600 | 324 |
| ಸದಾನಂದಯೋಗಿ | ,, 1530 | 222 |
| ಸದಾಶಿವ | ,, 1700 | 559 |
| ಸದಾಶಿವಯೋಗಿ | 1554 | 271 |
| ಸಪ್ಪಣ್ಣ | ಸು. 1700 | 560 |
| ಸರ್ವಜ್ಞ | ,, 1700 | 532 |
| ಸಹಜಾನಂದ | 1650 | 389 |

| ಹೆಸರು | ಕಾಲ | ಪುಟ |
|---|---|---|
| ಸಹವಾಸಿ ನಿರಂಜನಾವಧೂತ | ಸು. 1700 | 541 |
| ಸಾನಂದಶಿವಯೋಗಿ | ,, 1480 | 128 |
| ಸಾಳ್ವ | ,, 1550 | 243 |
| ಸಾಸಲಯ್ಯ | 1654 | 441 |
| ಸಿಂಗರಾರ್ಯ | ಸು. 1680 | 503 |
| ಸಿಂಗಿರಾಜ | ,, 1500 | 148 |
| ಸಿಂಹರಾಜ | ,, 1650 | 421 |
| ಸಿದ್ಧಪ್ಪ | ,, 1700 | 551 |
| ಸಿದ್ಧ | ,, 1700 | 556 |
| ಸಿದ್ಧನಂಜಯತಿ | ,, 1623 | 367 |
| ಸಿದ್ಧನಂಜೇಶ | ,, 1650 | 379 |
| ಸಿದ್ಧಮಲ್ಲೇಶ | ,, 1650 | 437 |
| ಸಿದ್ಧರಾಮ | ,, 1160 | 19 |
| ಸಿದ್ಧಲಿಂಗಶಿವಯೋಗಿ | ,, 1600 | 322 |
| ಸಿರಿನಾಮಧೇಯ | ,, 1550 | 257 |
| ಸುಕುಮಾರಭಾರತಿ | ,, 1550 | 267 |
| ಸುರಂಗಕವಿ | ,, 1500 | 160 |
| ಸೂರ್ಯ | ,, 1640 | 369 |
| ಸೋಮ | ,, 1700 | 538 |
| ಸೋಮನಾಥ | ,, 1650 | 412 |
| ಸೋಮನಾಥಕವಿ | ,, 1600 | 327 |
| ಸೋಮಶೇಖರಶಿವಯೋಗಿ | ,, 1700 | 527 |
| ಸೋಸಲೆ ರೇವಣಾಚಾರ್ಯ | 1623 | 365 |
| ಸ್ವತಂತ್ರಸಿದ್ಧಲಿಂಗೇಶ್ವರ | ಸು. 1480 | 125 |

| ಹೆಸರು | ಕಾಲ | ಪುಟ | ಹೆಸರು | ಕಾಲ | ಪುಟ |
|---|---|---|---|---|---|
| ಹರೀಶ್ವರ | ಸು. 1165 | 20 | ಹಿರಿಯೂರರಂಗ | ಸು. 1650 | 407 |
| ಹರೀಶ್ವರ | 1606 | 351 | ಹುಚ್ಚಣ್ಣ | 1587 | 312 |
| ಹಲಗ | ಸು. 1650 | 430 | ಹೊನ್ನಮ್ಮ | ಸು. 1680 | 505 |

—0—

# Contents

## ವಿಷಯಸೂಚಿಕೆ

## II Works

ಈ ಸಂಪುಟದಲ್ಲಿ ಹೇಳಿರುವ ಕರ್ಣಾಟಕ ಗ್ರಂಥಗಳ ವರ್ಣಾನುಕ್ರಮವಾದ ಹೆಸರುಗಳು.


| ಹೆಸರು | ಪುಟ | ಹೆಸರು | ಪುಟ |
|---|---|---|---|
| ಅಂತಃಕರಣಪ್ರಕಾಶಿಕೆ | 305 | ಅಪರಾಜಿತೇಶ್ವರಶತಕ | 277 |
| ಅಕಾರಾದಿ ವೈದ್ಯನಿಘಂಟು | 33 | ಅಪ್ರತಿಮವೀರಚರಿತ | 465 |
| ಅಕ್ರೂರಚರಿತ್ರೆ | 327 | ಅಮರಕೋಶಟೀಕೆ | 331 |
| ಅಕ್ಷರಮಾಲಿಕಾಸಾಂಗತ್ಯ | 486 | ಅಮರುಕ | 45 |
| ಅಖಂಡೇಶ್ವರವಚನ | 561 | ಅಮ್ಮನವರಚರಿತೆ | 514 |
| ಅನಾಮಯಸ್ತೋತ್ರಟೀಕೆ | 31 | ಅರುವತ್ತುಮೂವರ ತ್ರಿಪದಿ | 157 |
| ಅನುಪ್ರೇಕ್ಷೆ | 85 | ಅರ್ಥಪಂಚಕ | 481 |
| ಅನುಭವಶತಕ | 551 | ಅರ್ಧೇಂದುಮೌಳಿಶತಕ | 170 |
| ಅನುಭವಮುಕುರ | 93 | ಅವಧೂತಗೀತೆ | 78 |
| ಅನುಭವಮುದ್ರೆ | 390 | ಅಶ್ವವೈದ್ಯ | 171 |
| ಅನುಭವಾಮೃತ | 491 | ಅಶ್ವಶಾಸ್ತ್ರ | 37,367 |
| ಅನುಭವಸಾರ | 153 | ಅಷ್ಟಾವರಣಸ್ತೋತ್ರತ್ರಿವಿಧಿ | 20 |

| ಹೆಸರು | ಪುಟ |
|---|---|
| ಅಷ್ಟಾವರಣಸ್ತೋತ್ರದ ವಚನ | 298 |
| ಅಷ್ಟಾವರಣಸ್ತೋತ್ರಷಟ್ಪದ | 168 |
| ಆಚರಣೆಯಸಂಬಂಧದವಚನ | 214,324 555 |
| ಆಚಾರಸಾರಟೀಕೆ | 18 |
| ಆದಿತ್ಯಪುರಾಣ | 260 |
| ಆರಾಧ್ಯಚಾರಿತ್ರ | 134 |
| ಇಷ್ಟಲಿಂಗಸ್ತೋತ್ರ | 8 |
| ಉಚಿತಕಥೆಗಳು | 322 |
| ಉತ್ತರರಾಮಾಯಣ | 393,412 |
| ಉದ್ಭಟದೇವಚರಿತೆ | 2‘2 |
| ಉಪಾಧ್ಯಾಯನಿರಪೇಕ್ಷಾ | 484 |
| ಉಮಾಮಹೇಶ್ವರಶತಕ | 220 |
| ಉಮಾಸ್ತೋತ್ರಷಟ್ಪದಿ | 168 |
| ಏಕೋತ್ತರಶತಸ್ಥಲ | 52 |
| ಏಕೋತ್ತರಶತಸ್ಥಲಷಟ್ಪದಿ | 70 |
| ಏಕೋತ್ತರಶತಸ್ಥಲೀಟೀಕೆ | 69 |
| ಏಕೋನವಿಂಶತಿಪ್ರಬಂಧ | 214 |
| ಐಪುರೀಶ್ವರಶತಕ | 73 |
| ಐರಾವತ | 68 |
| ಕಂಠೀರವನರಸರಾಜವಿಜಯ | 374 |
| ಕಂದಶತಕ | 222 |
| ಕನ್ನಡರತ್ನಕರಂಡಕ | 38 |
| ಕಪೋತವಾಕ್ಯ | 549 |
| ಕಬ್ಬಿಗರ ಕೈಪಿಡಿ | 216 |
| ಕಮಲಾಚಲಮಾಹಾತ್ಮ್ಯ | 471 |
| ಕರಣಹಸುಗೆಯ ಟೀಕೆ | 937 |
| ಕರಸ್ಥಲದನಾಗಯ್ಯನ ಚರಿತೆ | 409 |
| ಕರಸ್ಥಲದನಾಗಿದೇವಕ್ರಿಯಿಧಿ | 69 |
| ಕರ್ಣವೃತ್ತಾಂತಕಥೆ | 326 |
| ಕರ್ಣಾಟಕ ಕಲ್ಯಾಣಕಾರಕ | 15 |
| ಕರ್ಣಾಟಕ ಶಬ್ದಮಂಜರಿ | 286 |
| ಕರ್ಣಾಟಕ ಶಬ್ದಾನುಶಾಸನ | 350 |
| ಕರ್ಣಾಟಕಸಂಜೀವನ | 339 |
| ಕಲ್ಯಾಣೇಶ್ವರ | 76 |
| ಕವಿಕಂಠಹಾರ | 370 |
| ಕವಿಜಿಹ್ವಾಬಂಧನ | 151 |
| ಕವಿಲಿಂಗನ ಪದ | 137 |
| ಕಾಮನಕಥೆ | 85 |
| ಕಾಮನ ಪದ | 542 |
| ಕಾಮುವಚನ | 542 |
| ಕಾಮಂದಕನೀತಿ | 484 |
| ಕಾರಣಾಗಮದ ವಾರ್ಧಕ | 172 |
| ಕಾರ್ಕಳದ ಗೊಮ್ಮಟೇಶ್ವರಚರಿತೆ | 371 |
| ಕಾರ್ತಿಕೇಯಾನುಪ್ರೇಕ್ಷಾಟೀಕೆ | 25 |
| ಕಾವ್ಯಜ್ಞಾನ | 234, 440, 559 |
| ಕಾವ್ಯಸಾರ | 229 |
| ಕೀರ್ತನೆಗಳು | 32,152,206,233, 243, 280, 303,359, 516 |

| ಹೆಸರು | ಪುಟ |
|---|---|
| ಕುಮುಟಿರಾಮನ ಕಥೆ | 423 |
| ಕುಮಾರರಾಮಕಥೆ | 214 |
| ಕೃಷ್ಣಕರ್ಣಾಮೃತ | 540 |
| ಕೃಷ್ಣಗೋಪೀವಿಲಾಸ | 516 |
| ಕೃಷ್ಣಚಾರಿತ್ರ | 557 |
| ಕೃಷ್ಣಲೀಲಾಭ್ಯುದಯ | 437 |
| ಕೇಶವಶತಕ | 554 |
| ಕೈವಲ್ಯಕಲ್ಪವಲ್ಲರಿ | 560 |
| ಕೈವಲ್ಯಚಿಂತಾಮಣಿ | 553 |
| ಕೈವಲ್ಯಪದ್ಧತಿ | 151 |
| ಕೊಟ್ಟೂರು ಬಸವೇಶ್ವರಪುರಾಣ | 511 |
| ಕ್ಷೇತ್ರಗಣಿತ | 54 |
| ಗಂಗೋದಯ | 23 |
| ಗಗನತಾರಾವಳಿ | 541 |
| ಗಣಭಾಷ್ಯರತ್ನಮಾಲೆ | 101 |
| ಗಣಸಹಸ್ರನಾಮ | 23 |
| ಗಣಿತಸಾರ | 122 |
| ಗೀತಗೋಪಾಲ | 459 |
| ಗುರುದತ್ತಚರಿತೆ | 392 |
| ಗುರುಬಸವಾರ್ಯರ ವಚನ | 71 |
| ಗುರುಬೋಧಾಮೃತ | 147 |
| ಗುರುಭಕ್ತಾಂಡಾರ ಚರಿತ್ರೆ | 427 |
| ಗುರುಮೂರ್ತಿಶಂಕರಶತಕ | 82 |
| ಗುರುರಗಳೆಯ ಟೀಕೆ | 391 |
| ಗುರುರಾಜಚಾರಿತ್ರ | 385 |
| ಗುರುಲಿಂಗಜಂಗಮಚಾರಿತ್ರ | 439 |
| ಗುರುಸ್ತೋತ್ರತ್ರಿಪದಿಯ ಟೀಕೆ | 397 |
| ಗುರುಸ್ತೋತ್ರದ ಟೀಕೆ | 295 |
| ಘೋರಾಸುರಯುದ್ಧ | 539 |
| ಚಂದ್ರನಾಥಾಷ್ಟಕ | 12 |
| ಚಂದ್ರಪ್ರಭಚರಿತೆ | 3,252 |
| ಚಂದ್ರಪ್ರಭಷಟ್ಪದಿ | 304 |
| ಚಂದ್ರಪ್ರಭಸ್ತುತಿ | 17 |
| ಚತುರಾಚಾರ್ಯಪುರಾಣ | 520 |
| ಚತುರಾಸ್ಯನಿಘಂಟು | 72 |
| ಚಾಮರಸಭಾರತ | 267 |
| ಚಾರಿತ್ರಸಾರಟೀಕೆ | 34 |
| ಚಿಕದೇವರಾಜವಿನ್ನಪ | 457 |
| ಚಿಕದೇವರಾಜವಂಶಾವಳಿ | 464, 507 |
| ಚಿಕದೇವರಾಜವಿಜಯ | 462 |
| ಚಿಕ್ಕಯ್ಯನ ಸಾಂಗತ್ಯ | 269 |
| ಚಿತ್ರಶತಕಸಾಂಗತ್ಯ | 488 |
| ಚಿನ್ಮಯಚಿಂತಾಮಣಿ | 421 |
| ಚೂಡಾಮಣಿನಾಸ್ತ್ಯಾನ | 201 |
| ಚೆನ್ನಬಸವಪುರಾಣ | 303 |
| ಚೆನ್ನಬಸವನವಂಕ್ರಗೊಪ್ಪದಟೀಕೆ | 163 |
| ಚೆನ್ನಬಸವಸ್ತೋತ್ರದ ಟೀಕೆ | 21 |
| ಚೆನ್ನಮಲ್ಲೇಶ್ವರಶತಕ | 295 |
| ಚೇರಮಕಾವ್ಯ | 209 |
| ಚೋರಕಥೆ | 338 |

| ಹೆಸರು | ಪುಟ | ಹೆಸರು | ಪುಟ |
|---|---|---|---|
| ಚೋಳರಾಜಸಾಂಗತ್ಯ | 257 | ತ್ರಿಷಷ್ಟಿ ಪುರಾತನರ ಚರಿತ್ರೆ | 161 |
| ಛಂದಸ್ಸಾರ | 416 | ತುಲಸೀಮಹಾತ್ಮ್ಯ | 412 |
| ಜಂಗಮರಗಳೆ | 127 | ತೊರವೆಯರಾಮಾಯಣ | 142 |
| ಜನವಶ್ಯ | 94 | ತೋಂಟದಸಿದ್ಧೇಶ್ವರನ ಪುರಾಣ | 297 |
| ಜಯನೃಪಕಾವ್ಯ | 180 | ತ್ರೈಲೋಕ್ಯಚೂಡಾಮಣಿಸ್ತೋತ್ರ | 13 |
| ಜಾತಕತಿಲಕ | 5 | ದಶಗ್ರಂಥಿಯ ಟೀಕೆ | 429 |
| ಜ್ಞಾನಚಂದ್ರಚರಿತೆ | 564,565 | ದಶಾವತಾರಚರಿತೆ | 511 |
| ಜ್ಞಾನಚಂದ್ರಾಭ್ಯುದಯ | 84 | ದ್ವಾದಶಾನುಪ್ರೇಕ್ಷೆ | 87 |
| ಜ್ಞಾನಭಾಸ್ಕರಚರಿತೆ | 281 | ದಿವ್ಯಸೂರಿಚರಿತೆ | 478 |
| ಜಿನದತ್ತರಾಯಚರಿತೆ | 514 | ದೀಪದಕಲಿಯರ ಕಾವ್ಯ | 544 |
| ಜಿನಮುನಿತನಯ | 9,420 | ದೇವೀಸ್ತೋತ್ರ | 575 |
| ಜಿನಸಂಹಿತಾಟೀಕೆ | 11 | ದೇವರಾಜೇಂದ್ರಸಾಂಗತ್ಯ | 535 |
| ಜಿನಸ್ತುತಿ | 85 | ದೊಡ್ಡಚಿಕ್ಕಣ್ಣರಸ್ವಾಮಿಯ ವಚನ | 428 |
| ಜೀವಂಧರಚರಿತೆ | 47 | ಧನ್ಯಕುಮಾರಚರಿತೆ | 414 |
| ಜೀವಂಧರಷಟ್ಪದಿ | 146 | ಧರ್ಮನಾಥಪುರಾಣ | 36 |
| ಜೀವಂಧರಸಾಂಗತ್ಯ | 131 | ಧರ್ಮಶರ್ಮಾಭ್ಯುದಯಟೀಕೆ | 4,172 |
| ಜೈಮಿನಿಭಾರತ | 523 | ನಂದಿಮಾಹಾತ್ಮ್ಯ | 395 |
| ತತ್ವತ್ರಯವಿವರಣ | 557 | ನನ್ನಯ್ಯಗಳ ಚಾರಿತ್ರ | 304,433 |
| ತತ್ವಭೇದಾಷ್ಟಕ | 86 | ನಮಕಚಮಕಟೀಕೆ | 169 |
| ತತ್ವಾರ್ಥಸೂತ್ರವೃತ್ತಿ | 7 | ನರಪಿಂಗಲಿ | 172,416 |
| ತಾತ್ಪರ್ಯಸಂಗ್ರಹಟೀಕೆ | 440 | ನರಸಿಂಹಚಾರಿತ್ರ | 530 |
| ತಿರುವಾಯ್ಮೊಳಿಟೀಕೆ | 489 | ನರಸಿಂಹಸ್ತುತಿಯಹಾಡು | 557 |
| ತ್ರಿಪುರಸುಂದರೀಸ್ತೋತ್ರ | 167 | ನವರಸಾಲಂಕಾರ | 321 |
| ತ್ರಿಭುವನತಿಲಕ | 198 | ನಳಚರಿತ್ರೆ | 241 |
| ತ್ರಿಲೋಕಶತಕ | 277 | ನಾಗಕುಮಾರಕಥೆ | 289 |

| ಹೆಸರು | ಪುಟ | ಹೆಸರು | ಪುಟ |
|---|---|---|---|
| ನಾಗಲಿಂಗತ್ರಿಪದಿಯ ಟೀಕೆ | 398 | ಪರಮಾರ್ಥಪ್ರಕಾಶಿಕೆ | 159 |
| ನಾಸಾರ್ಥಕಂದ | 347 | ಪರವಾದಿಗಜಾಂಕುಶತಾರಾವಳಿ | 169 |
| ನಾನಾರ್ಥರತ್ನಾಕರ | 331 | ಪಶ್ಚಿಮರಂಗಧಾಮಶತಕ | 535 |
| ನಿಜದೀಪ್ತಿಪ್ರಕಾಶಿಕೆ | 365 | ಪಶ್ಚಿಮರಂಗಮಾಹಾತ್ಮ್ಯ | 485,496 |
| ನಿಃಕಲರ ವಚನ | 560 | ಪಶ್ಚಿಮರಂಗಸಾಂಗತ್ಯ | 486 |
| ನಿರ್ವಾಣಲಕ್ಷ್ಮೀಪತಿನಕ್ಷತ್ರಮಾಲಿಕೆ | 21 | ಪಾದಸ್ತೋತ್ರ | 324 |
| ನೀತಿರತ್ನಾಭರಣ | 438 | ಪಾರ್ವತಿಯ ಸೋಬಾನೆ | 556 |
| ನೀತಿಶತಕದ ಸಾಂಗತ್ಯ | 487 | ಪಾರ್ವತೀವಲ್ಲಭಶತಕ | 219 |
| ನುಲಿಯಚಂದಯ್ಯನ ಕಥೆ | 556 | ಪಾಲ್ಕುರಿಸೋಮೇಶ್ವರಪುರಾಣ | 285 |
| ನೂರೊಂದು ಸ್ಥಲ | 57 | ಪಿಂಗಳಿಯ ಶಾಸ್ತ್ರ | 173 |
| ನೃಸಿಂಹಸ್ತವ | 557 | ಪುರಾತನರಗಳೆ | 191 |
| ನೇಮಿಜಿನೇಶಸಂಗತಿ | 185 | ಪುರುಷವಿರಹದಸಾಂಗತ್ಯ | 487 |
| ಪಂಚಪರಮೇಷ್ಠಿಗಳ ಬೊಲ್ಲಿ | 31 | ಪುರುಷಸೂಕ್ತಟೀಕೆ | 169 |
| ಪಂಚೀಕರಣಪದಗಳು | 337 | ಪ್ರತಿಷ್ಠಾಕಲ್ಪಟೀಕೆ | 11 |
| ಪಂಡಿತಾರಾಧ್ಯಚಾರಿತ್ರಟೀಕೆ | 314 | ಪ್ರಭುಗೀತೆ | 70 |
| ಪಂಪಾವಿರೂಪಾಕ್ಷಶತಕ | 408 | ಪ್ರಭಂಜನಚರಿತೆ | 183 |
| ಪಟಹಸ್ತನ ಚರಿತೆ | 555 | ಪ್ರಭುದೇವರ ಟೀಕಿನ ವಚನ | 56 |
| ಪದಾರ್ಥಸಾರಟೀಕೆ | 30 | ಪ್ರಭುದೇವರ ಪುರಾಣ | 351 |
| ಪದ್ಮೈಕೋತ್ತರ ಶತಸ್ಥಳ | 344 | ಪ್ರಭುದೇವರ ಮಂತ್ರಗೋಪ್ಯದಟೀಕೆ | 63 |
| ಪದ್ಮಾವತೀಚರಿತೆ | 515 | ಪ್ರಭುನಟನತಾರಾವಳಿ | 399 |
| ಪದ್ಮಿನೀಕಲ್ಯಾಣ | 517 | ಪ್ರಭುಲಿಂಗಕಂದದ ಟೀಕೆ | 398 |
| ಪದ್ಯಗಣಸಹಸ್ರನಾಮ | 563 | ಪ್ರಭುಲಿಂಗದ ಕಂದ | 212 |
| ಪರಮಾಗಮಸಾರ | 40 | ಪ್ರಭುಲಿಂಗಲೀಲೆ | 59 |
| ಪರಮಾತ್ಮಪ್ರಕಾಶಿಕೆ | 365 | ಪ್ರಸಾದಚಾರಿತ್ರ | 433 |
| ಪರಮಾನುಭವ ಬೋಧೆ | 156 | ಪ್ರಸಾದಚಿಂತಾಮಣಿಟೀಕೆ | 554 |
| ಪರಮಾರ್ಥಗೀತೆ | 155 | ಪ್ರಸಾದಸಾಂಗತ್ಯ | 431 |

| ಹೆಸರು | ಪುಟ |
|---|---|
| ಪ್ರಹ್ಲಾದಚರಿತ್ರೆ | 530 |
| ಪ್ರಹ್ಲಾದಚರಿತ್ರೆ | 402 |
| ಪ್ರಾಣನಾಥಶತಕ | 221 |
| ಪ್ರಾಭೃತ | 1 |
| ಪ್ರಾಯಶ್ಚಿತ್ತಟೀಕೆ | 95 |
| ಪ್ರೌಢರಾಯನ ಕಾವ್ಯ | 305 |
| ಬಸವಪುರಾಣಟೀಕೆ | 314 |
| ಬಸವಪುರಾಣದ ಪುರಾತನರಚರಿತೆ | 256 |
| ಬಸವರಾಜನ ಪವಾಡಗಳು | 530 |
| ಬಸವರಾಜ ವಿಜಯ | 446 |
| ಬಸವಶತಕ | 379 |
| ಬಸವಸ್ತುತಿಪಂಚರತ್ನ | 23 |
| ಬಸವಸ್ತೋತ್ರದ ತ್ರಿವಿಧಿ | 19 |
| ಬಸವಸ್ತೋತ್ರದ ವಚನ | 214 |
| ಬಸವೇಶ್ವರಪುರಾಣದ ಕಥಾಸಾಗರ | 322 |
| ಬಸವೇಶ್ವರವಚನಸಾರಾರ್ಥ | 397 |
| ಬಳ್ಳಿಗಾವಿಮಹಾತ್ಮ್ಯ | 354 |
| ಬ್ರಹ್ಮೋತ್ತರಖಂಡಟೀಕೆ | 361 |
| ಬಾಲಗ್ರಹಚಿಕಿತ್ಸೆ | 24 |
| ಬಿಜ್ಜಳರಾಯಚರಿತೆ | 418 |
| ಬಿಹಾರಗಣಿತ | 376 |
| ಭಕ್ತಿಬಿನ್ನಹದ ರಗಳೆ | 363 |
| ಭಕ್ತಿರಸಸೋನೆ | 440 |
| ಭಕ್ತಿರಸಾಯನ | 389 |
| ಭಗವಚ್ಚರಿತೆ | 554 |
| ಭಗವದ್ಗೀತೆ | 406 |
| ಭಾರತೇಶ್ವರಚರಿತೆ | 278 |
| ಭಾಗವತ | 223,459 |
| ಭಾಗವತಸಂಹಿತಾರ್ಥ | 95 |
| ಭಾರತ | 66,225,244,459 |
| ಭಾರತಕಥಾಸಂಗ್ರಹ | 361 |
| ಭಾರತತಾತ್ಪರ್ಯನಿರ್ಣಯಟೀಕೆ | 303 |
| ಭಾರತದ ಉತ್ತರಭಾಗ | 190 |
| ಭಾರತಸ್ತ್ರೀಪರ್ವ | 550 |
| ಭಾವಚಿಂತಾರತ್ನ | 193 |
| ಭಾವಚಿಂತಾರತ್ನಟೀಕೆ | 532 |
| ಭಾವರತ್ನಾಭರಣ | 379 |
| ಭಾಷಾಕುಸುಮಮಂಜರಿ | 543 |
| ಭಿಕ್ಷಾಟನಚರಿತೆ | 263 |
| ಭುಜಬಲಿ ಚರಿತೆ | 356 |
| ಭೃಂಗಿದಂಡಕ | 36 |
| ಭೃಂಗಿಸ್ತವಟೀಕೆ | 34 |
| ಭೈರವೇಶ್ವರಕಾವ್ಯ | 265 |
| ಭೈರವೇಶ್ವರಕಾವ್ಯದ ಕಥಾಸಾಗರ | 322 |
| ಭೈರವೇಶ್ವರಕಾವ್ಯದ ಕಥಾಸೂತ್ರರತ್ನಾಕರ | 455 |
| ಭೈರವೇಶ್ವರಪುರಾಣ | 323 |
| ಮಂತ್ರಮಹತ್ವದ ಕಂದ | 19 |
| ಮಗ್ಗೆಯ ಮಾಯಿದೇವವಚನ | 70 |
| ಮದನಮೋಹಿನಿಯ ಕಥೆ | 435 |
| ಮನುರಾಜನ ಕಾವ್ಯ | 291 |
| ಮನೋವಿಜಯ ಕಾವ್ಯ | 78 |

| ಹೆಸರು | ಪುಟ |
|---|---|
| ಮನೋವಿಜಯ ತಾತ್ಪರ್ಯ | 287 |
| ಮನ್ಮಥವಿಜಯ | 41 |
| ಮಲಬಸವರಾಜಚಾರಿತ್ರ | 148 |
| ಮಲಯರಾಜಸ್ತೋತ್ರಟೀಕೆ | 34 |
| ಮಲ್ಲಿಕಾರ್ಜುನಜಪ | 345 |
| ಮಲ್ಲಿಕಾರ್ಜುನಶತಕ | 556 |
| ಮಲ್ಲೇಶ್ವರಶತಕ | 257 |
| ಮಲ್ಹಣಸ್ತೋತ್ರಟೀಕೆ | 34 |
| ಮಹತ್ರಿನಕಾವ್ಯ | 439 |
| ಮಹಾದೇವಿಯಕ್ಕನ ಪುರಾಣ | 235 |
| ಮಹಾವಿಭೂತಿಮಹಿಮೆ | 538 |
| ಮಹಾವೀರಾಚಾರ್ಯಗಣಿತಟೀಕೆ | 558 |
| ಮಹಿಮ್ನಸ್ತವಟೀಕೆ | 365 |
| ಮಹಿಮ್ನಸ್ತೋತ್ರಟೀಕೆ | 34 |
| ಮಾಚಿದೇವನ ಮನೋವಿಲಾಸ | 146 |
| ಮಾಣಿಕಸ್ವಾಮಿಚರಿತೆ | 537 |
| ಮಾಧವಾಲಂಕಾರ | 165 |
| ಮಾಯಿದೇವಶತಕತ್ರಯಟೀಕೆ | 287 |
| ಮಾರ್ಕಂಡೇಯರಾಮಾಯಣ | 409 |
| ಮಿತ್ರವಿಂದಾಗೋವಿಂದ | 503 |
| ಮಿಶ್ರಷಟ್ಸ್ಥಲದ ವಚನ | 429 |
| ಮಿಶ್ರಸ್ತೋತ್ರ | 324 |
| ಮಿಶ್ರಸ್ತೋತ್ರದ ತ್ರಿವಿಧಿ | 19 |
| ಮಿಶ್ರಸ್ತೋತ್ರದ ವಚನ | 214 |
| ಮಿಶ್ರಾರ್ಪಣದ ಟೀಕೆ | 397 |
| ಮುಕ್ತ್ಯಂಗನೆಯ ಕಂಠಮಾಲೆ | 126 |

| ಹೆಸರು | ಪುಟ |
|---|---|
| ಮುಡಿಗೆಯ ಅಷ್ಟಕ | 20 |
| ಮುನಿವಂಶಾಭ್ಯುದಯ | 509 |
| ಮುರಿಗೆಯಶಾಂತವೀರಸ್ತುತಿ ನಾಂದ್ಯ | 293,294 |
| ಮೈದುನರಾಮನ ರಗಳೆ | 364 |
| ಮೈರಾವಣನ ಕಾಳಗ | 144 |
| ಮೋಕ್ಷಸಾಮ್ರಾಜ್ಯಟೀಕೆ | 34 |
| ಮೋಹನತರಂಗಿಣಿ | 238 |
| ಯಜುರ್ವೇದಭಾಷ್ಯಟೀಕೆ | 167 |
| ಯದುಗಿರಿಮಾಹಾತ್ಮ್ಯ | 482 |
| ಯಾದವಗಿರಿಮಾಹಾತ್ಮ್ಯ | 482,493 545 |
| ಯೋಗರತ್ನಾಕರ | 340 |
| ರಂಗಧಾಮನೀತಿಶತಕದ ಸಾಂಗತ್ಯ | 487 |
| ರಂಗಧಾಮಪುರುಷವಿರಹದ ಸಾಂಗತ್ಯ | 487 |
| ರಂಗಧಾಮಸ್ತುತಿಸಾಂಗತ್ಯ | 485 |
| ರಂಗನಾಯಕ ರಂಗನಾಯಕೀ ಸ್ತುತಿಸಾಂಗತ್ಯ | 489 |
| ರಂಗಸ್ವಾಮಿಯ ಶೃಂಗಾರ ಸೂತ್ರೋದಾಹರಣೆ | 488 |
| ರಟ್ಟನಜಾತಕ | 270 |
| ರತ್ನಾಕರಾಧೀಶ್ವರಶತಕ | 329 |
| ರಥೋದ್ಧರಣೆ ವಾಕ್ಯ | 325 |
| ರಸರತ್ನಾಕರ | 248 |
| ರಾಘವಾಂಕಚಾರಿತ್ರ | 381 |

| ಹೆಸರು | ಪುಟ |
|---|---|
| ರಾಜಶೇಖರವಿಲಾಸ | 443 |
| ರಾಜೇಂದ್ರವಿಜಯ | 291 |
| ರಾಜೇಂದ್ರವಿಜಯಪುರಾಣ | 323 |
| ರಾಮಚಂದ್ರಚರಿತ್ರ | 526 |
| ರಾಮಧಾನ್ಯಚರಿತೆ | 239 |
| ರಾಮನಾಥವಿಲಾಸ | 271 |
| ರಾಮಾನುಜವಿಜಯ | 553 |
| ರಾಮಾಯಣ | 11,80 |
| ರಾಮಾಯಣಟೀಕೆ | 360 |
| ರುಕ್ಮಾಂಗದಚರಿತೆ | 413,475 |
| ರುಕ್ಮಾಂಗದಚರಿತ್ರೆ | 438 |
| ರೇಣುಕಾರ್ಯಚರಿತೆ | 552 |
| ರೇವಣಸಾಂಗತ್ಯ | 552 |
| ರೇವಣಸಿದ್ಧೇಶ್ವರಕಾವ್ಯ | 46 |
| ರೇವಣಸಿದ್ಧೇಶ್ವರಪುರಾಣ | 139 |
| ಲಕ್ಷ್ಮಿಯ ಶೋಭಾನೆ | 303 |
| ಲಿಂಗಲೀಲಾವಿಲಾಸಚಾರಿತ್ರ | 62 |
| ಲಿಂಗವಿಕಳಾವಸ್ಥೆಯ ವಚನ | 290 |
| ಲಿಂಗಸ್ತೋತ್ರದ ವಚನ | 324 |
| ಲಿಂಗಾರ್ಚನೆರಗಳೆ | 347 |
| ಲೋಕಸ್ವರೂಪ | 422 |
| ವಚನಗಳು | 105 |
| ವಜ್ರಕುಮಾರಚರಿತೆ | 341 |
| ವಜ್ರಬಾಹುಚರಿತೆ | 226 |
| ವರಾಂಗನೃಪಚರಿತೆ | 418 |
| ವರ್ಧಮಾನಚರಿತೆ | 212 |

| ಹೆಸರು | ಪುಟ |
|---|---|
| ವಾಕ್ಯಸುಧಾಟೀಕೆ | 543 |
| ವಾತೂಲತಂತ್ರಟೀಕೆ | 104 |
| ವಿಂಶತಿಪ್ರರೂಪಿಣೀಟೀಕೆ | 33 |
| ವಿಕ್ರಮವಿಲಾಸ | 426 |
| ವಿಜಯಕುಮಾರಿಯ ಚರಿತೆ | 299 |
| ವಿಭೂತಿಮಹಿಮೆ | 254 |
| ವಿರೂಪಾಕ್ಷಸ್ಥಾನ | 81 |
| ವಿವೇಕಚಿಂತಾಮಣಿ | 158 |
| ವಿಶೇಷಾರ್ಥಪ್ರಕಾಶಿಕಾಟೀಕೆ | 259 |
| ವಿಷ್ಣುಪುರಾಣ (ಗದ್ಯ) | 478 |
| ವಿಷ್ಣುಪುರಾಣ (ಪದ್ಯ) | 477 |
| ವೀರಭದ್ರವಿಜಯ | 218 |
| ವೀರಭದ್ರಸಾಂಗತ್ಯ | 539 |
| ವೀರಮಾಹೇಶ್ವರತಂತ್ರಟೀಕೆ | 570 |
| ವೀರಮಾಹೇಶ್ವರಾಚಾರಸಂಗ್ರಹ ಟೀಕೆ | 259 |
| ವೀರಮಾಹೇಶ್ವರಾಚಾರ ಸಾರೋದ್ಧಾರಟೀಕೆ | 128 |
| ವೀರಶೈವರಗಳೆ | 363 |
| ವೀರಶೈವಸಿದ್ಧಾಂತಶಿಖಾಮಣಿ ಟೀಕೆ | 259,366 |
| ವೀರಶೈವಾಮೃತಪುರಾಣ | 195 |
| ವೀರಸಂಗಯ್ಯನ ಚರಿತೆ | 437 |
| ವೀರಸಂಗಯ್ಯನ ಚೌಪದ | 54 |
| ವೀರೇಶ್ವರಚರಿತೆ | 432 |
| ವೃಷಭಗೀತೆ | 77 |

| ಹೆಸರು | ಪುಟ | ಹೆಸರು | ಪುಟ |
|---|---|---|---|
| ವೃಷಭೇಂದ್ರವಿಜಯ | 446 | ಶಿವತತ್ವಚಿಂತಾಮಣಿ | 55 |
| ವೆಂಕಟಗಿರಿಮಾಹಾತ್ಮ್ಯ | 483,496 | ಶಿವಮಹಿಮಾಶಿಕ್ಷಕ | 294 |
| ವೆಂಕಟೇಶ್ವರಪ್ರಬಂಧ | 404 | ಶಿವಯೋಗಪ್ರದೀಪಿಕಾಟೀಕೆ | 557 |
| ವೈಕುಂಠವರ್ಣನೆ | 301 | ಶಿವಯೋಗಾಂಗಭೂಷಣ | 74 |
| ವೈದ್ಯಸಾಂಗತ್ಯ | 250 | ಶಿವಲಿಂಗಚಾರಿತ್ರ | 378 |
| ವೈದ್ಯಸಾರಸಂಗ್ರಹ | 300, 559 | ಶಿವಲಿಂಗಮಹಿಮಾಷಟ್ಪದ | 581 |
| ವೈದ್ಯಾಮೃತ | 166 | ಶಿವಸರ್ವಾಂಗಸ್ತುತಿ | 559 |
| ವೈಭೋಗರಾಜಾಸ್ಥಾನ | 201 | ಶಿವಸರ್ವಾವಯವಸ್ತೋತ್ರ | 559 |
| ವೈರಾಗ್ಯಪುರಾಣ | 424 | ಶಿವಾಧನಶತಕ | 72 |
| ವೈರಾಗ್ಯಷಟ್ಪದಿ | 213 | ಶಿವಾಧಿಕ್ಯಪುರಾಣ | 354 |
| ಶಂಕರದಾಸಿಮಯ್ಯನ ಚರಿತ್ರೆ | 518 | ಶಿವಾಧಿಕ್ಯಶಿಖಾಮಣಿಟೀಕೆ | 365,367 |
| ಶಂಕರದೇವರ ಕಂದ | 362 | ಶಿವಾವಲ್ಲಭಶತಕ | 72 |
| ಶಂಕರಶತಕ | 362 | ಶೀಲವಂತಯ್ಯನ ತ್ರಿವಿಧಿಯ ಟೀಕೆ | 453 |
| ಶಂಕರಸಂಹಿತೆ | 452 | ಶುಕಸಪ್ತತಿ | 484,485 |
| ಶಂಭುಪೂಜಾವಿಧಿ | 254 | ಶೂದ್ರಕ | 1 |
| ಶಕುನಪ್ರಪಂಚ | 173 | ಶೃಂಗಾರಕಥೆ | 315 |
| ಶಕುನಸಾರ | 173 | ಶೃಂಗಾರದ ಹಾಡುಗಳು | 489 |
| ಶಬರಶಂಕರವಿಲಾಸ | 448 | ಶೃಂಗಾರಶತಕದ ಸಾಂಗತ್ಯ | 485 |
| ಶರಣಸ್ತೋತ್ರದ ವಚನ | 298 | ಶೃಂಗಾರಸ್ತೋತ್ರೋದಾಹರಣೆ | 408 |
| ಶರಣುಬಸವರಗಳೆ | 24 | ಶೇಷಧರ್ಮ | 459,483 |
| ಶಾಂತಿನಾಥಚರಿತೆ | 200 | ಶ್ರೀಕಂಠಸೋಮೇಶ್ವರಶತಕ | 221 |
| ಶಾರದಾವಿಲಾಸ | 249 | ಶ್ರೀಪದಾಶೀತಿ | 21 |
| ಶಾರೀರಪ್ರಕಾಶಿಕೆ | 365 | ಶ್ರೀಪಾಲಚರಿತೆ | 181,558 |
| ಶಿಖಾರತ್ನವಚನ | 18 | ಶ್ರೀರಂಗಮಾಹಾತ್ಮ್ಯ | 300,483,498 |
| ಶಿವಗಣಚಾರಿತ್ರ | 389 | ಶ್ರೇಣಿಕಚರಿತ್ರೆ | 86 |
| ಶಿವಗೀತೆ | 318 | ಶ್ವೇತನಸಾಂಗತ್ಯ | 132 |

| ಹೆಸರು | ಪುಟ |
|---|---|
| ಷಟ್ಸ್ಥಲಗದ್ಯ | 70 |
| ಷಟ್ಸ್ಥಲವಿವೇಕ | 51 |
| ಷಟ್ಸ್ಥಲೋಪದೇಶ | 56 |
| ಷಟ್ಸ್ಥಲದ ಬೆಡಗಿನವಚನದಟೀಕೆ | 527 |
| ಷಟ್ಸ್ಥಲಜ್ಞಾನಚಾರಿತ್ರಟೀಕೆ | 51 |
| ಷಟ್ಸ್ಥಲಜ್ಞಾನಸಾರಾಮೃತ | 100 |
| ಷಟ್ಸ್ಥಲಜ್ಞಾನಸಾರಾಮೃತದ ವಚನದ ಟೀಕೆ | 527 |
| ಷಟ್ಸ್ಥಲದ ಲಿಂಗಾಂಗಸಂಬಂಧದ ನಿರ್ವಚನ | 127 |
| ಷಟ್ಸ್ಥಲಸ್ತೋತ್ರದ ವಚನ | 298 |
| ಷಡಕ್ಷರರಗಳೆ | 363 |
| ಸಂಗೀತಸತ್ಕೃತಿ | 544 |
| ಸದ್ಗುರುರಗಳೆ | 24 |
| ಸದ್ಗುರುರಗಳೆಯ ಟೀಕೆ | 365 |
| ಸದ್ಗುರುರಹಸ್ಯ | 75 |
| ಸನತ್ಕುಮಾರಚರಿತೆ | 129,353 |
| ಸಮ್ಯಕ್ತ್ವಕೌಮುದಿ | 186,333 |
| ಸರಜಾಹನುಮೇಂದ್ರಚರಿತೆ | 528 |
| ಸರಜಾಹನುಮೇಂದ್ರಯಶೋವಿಲಾಸ | 528 |
| ಸರ್ವಜ್ಞನ ತ್ರಿಪದಿ | 533 |
| ಸರ್ವಜ್ಞಮೂರ್ತಿಯ ತ್ರಿವಿಧಿ | 324 |
| ಸಹಜಾತ್ಮಪ್ರಕಾಶಟೀಕೆ | 34 |
| ಸಹಸ್ರಗಣನಾಮ | 345 |
| ಸ್ವತಂತ್ರಸಿದ್ಧಲಿಂಗೇಶ್ವರವಚನ | 125 |
| ಸ್ವಪ್ನಗದ್ಯ | 302 |
| ಸ್ವಪ್ರಕಾಶ | 543 |
| ಸ್ವರೂಪಾಮೃತ | 77 |
| ಸ್ವಸ್ವರೂಪಪ್ರಕಾಶಿಕೆ | 365 |
| ಸಾತ್ವಿಕಬ್ರಹ್ಮವಿದ್ಯಾವಿಲಾಸ (ಗ) | 450 |
| ಸಾತ್ವಿಕಬ್ರಹ್ಮವಿದ್ಯಾವಿಲಾಸ | 480 |
| ಸಾನಂದಗಣೇಶಸಾಂಗತ್ಯ | 207 |
| ಸಾರಸ್ವತವ್ಯಾಕರಣಟೀಕೆ | 169 |
| ಸಾಸಲಭೈರವೇಂದ್ರ ಚರಿತೆ | 254 |
| ಸಿದ್ಧನೀತಿ | 551 |
| ಸಿದ್ಧಾಂತಸಾರ ಟೀಕೆ | 34 |
| ಸಿದ್ಧೇಶ್ವರಪುರಾಣ | 282 |
| ಸಿರಿಯಾಳಸೆಟ್ಟಿಯ ಸಾಂಗತ್ಯ | 435 |
| ಸಿರುಮನ ಸಾಂಗತ್ಯ | 556 |
| ಸುಕುಮಾರಚರಿತೆ | 7 |
| ಸುಯೋಗಚಾರಿತ್ರ | 424 |
| ಸುವಿಚಾರಚರಿತೆ | 439 |
| ಸೂಕ್ತಿಸುಧಾಕರ | 558 |
| ಸೂಕ್ತಿಸುಧಾರ್ಣವ | 26 |
| ಸೂಪಶಾಸ್ತ್ರ | 184 |
| ಸೊಣ್ಣಭೈರೆಗೌಡನ ಚರಿತ್ರೆ | 513 |
| ಸೊಬಗಿನಸೋನೆ | 43 |
| ಸೋಮಾರಾಧ್ಯಶತಕ | 23 |
| ಸೌಂದರಪುರಾಣ | 89 |
| ಸೌಂದರ ವಿಲಾಸ | 335 |
| ಸೌಂದರ್ಯರತ್ನಾಕರ | 268 |

| ಹೆಸರು | ಪುಟ | ಹೆಸರು | ಪುಟ |
|---|---|---|---|
| ಹದಿಬದೆಯಧರ್ಮ | 505 | ಹಲಾಯುಧಸ್ತೋತ್ರಟೀಕೆ | 34 |
| ಹಮ್ಮೀರಕಾವ್ಯ | 291 | ಹಸ್ತಿಗಿರಿಮಾಹಾತ್ಮ್ಯ | 473 |
| ಹಯಸಾರಸಮುಚ್ಚಯ | 369 | ಹಸ್ತ್ಯಾಯುರ್ವೇದ ಟೀಕೆ | 343 |
| ಹರಿಭಕ್ತಿಸಾರ | 242 | ಹಾಲಾಸ್ಯಪುರಾಣ | 575 |
| ಹರಿಶ್ಚಂದ್ರಸಾಂಗತ್ಯ | 208,231,232, 430 | ಹೇರೂರು ಹೆಣ್ಣಿನಸಾಂಗತ್ಯ | 435 |


---

# ಕರ್ಣಾಟಕ ಕವಿಚರಿತೆ

## INTRODUCTION.

In the Introduction to the First Volume of the **KARNATAKA KAVICHARITE** or **LIVES OF KANNADA POETS** the antiquity of the Karnataka country and language and the support given by kings and nobles to the advancement of the Kannada language and literature were briefly touched upon. A few more details will now be given about these and other matters connected with them before saying a few words about the present volume, in the hope that they may increase the respect of the Kannadigas for, and arouse their interest in, their country and language, and that as a consequence earnest efforts may be made by them for the advancement of both.

### Antiquity of the Kannada Country.

The Kannada country was once under the rule of such ancient dynasties of kings as the Maurya, the Andhra, the Kadamba and the Ganga.

It is stated in Jaina works that when a great twelve years' famine occurred during the reign of the Maurya king Chandragupta, the Jaina community under the leadership of Bhadrabahu, the last Srutakevali, migrated to the Punnata kingdom in the south of Mysore; that king Chandragupta abdicated and accompanied Bhadrabahu as his disciple; that on reaching Sravana Belgola Bhadrabahu, seeing the approach of his death, ordered the community to proceed on their journey, stopped at Sravana Belgola and died there (in B. C. 297) being attended on by his disciple Chandragupta during his last moments; and that after the death of his preceptor Chandragupta lived there for some time and ultimately died by the Jaina rite of *sallekhana* or starvation. With regard to this account Dr. Vincent Smith writes—"My present impression is that the tradition has a solid foun-

dation on fact."[1] A few facts which appear to support the traditional account may be mentioned here. On the smaller hill at Sravana Belgola there are even now a cave and a temple named after Bhadrabahu and Chandragupta respectively. An inscription[2] of the 7th century on the same hill states that the couple of ascetics Bhadrabahu and Chandragupta lived on the hill. Two more epigraphs[3] of the 9th century near Seringapatam tell us that the same hill was marked with the footprints of the same couple of ascetics.

Three inscriptions of the time of Asoka, the grandson of Chandragupta, are found in the Molakalmuru Taluk of the Chitaldrug District in the Mysore State. Recently an Asoka inscription was discovered at Maski in the Nizam's Dominions. We learn from the Ceylonese Buddhist Chronicle *Mahavamsa* that Asoka sent a Buddhist missionary to Banavase and another to Mahisha-mandala. The late Dr. Fleet was of opinion that the Mahisha-mandala mentioned above did not refer to Mysore but to a province on the banks of the Narbada. But Mahisha-rashtra or Maisa-nadu occurs as the name of Mysore in inscriptions and literature. Maisa is only a *tadbhava* or currupt form of Mahisha. The above facts show the connection of the Mauryas with the Kannada country.

A Prakrit inscription[4] of about the middle of the 2nd century A. D., engraved on a pillar at Malvalli in the Shikarpur Taluk of the Shimoga District, records a grant by Haritiputra-Satakarni for the god Isvara of the village, and a Sanskrit inscription[5] of the early part of the 5th century, incised on a pillar standing in front of the Pranavesvara temple at Talgunda in the same Taluk, states that the god Pranavesvara had been worshipped by Satakarni and other kings. At Chitaldrug have been unearthed lead coins issued

1. *Early History of India* (3rd edition), page 146. 2. Sravana Belgola 17. 3. *Epigraphia Carnatica,* III, Seringapatam 147 and 148. 4. *Ibid.,* VII Shikarpur 263. 5. Shikarpur 176.

by the Andhrabhrityas and their viceroys. These facts afford evidence that the Kannada country was in the possession of the Andhras.

Below the Prakrit inscription on the Malvalli pillar mentioned above is engraved another of about the middle of the 3rd century which registers a grant of land for the goP Isvara of Malvalli by a Kadamba king. Further it is stated in the above-mentioned Talgunda pillar, inscription that the Kadamba king Kakusthavarma constructed a tank for the god Pranavesvara. The tank, which is in front of the Pranavesvara temple, is popularly known as Panamana-kere, *Panama* being a corrupt form of *Pranava*, the first word in the name of the god. There is evidence to show that Kakusthavarma was a contemporary of Samudragupta (330—375), the celebrated king of the Gupta dynasty, and was connected with him by matrimonial alliance. It is thus clear that the Kadambas were connected with the Kannada country.

The numerous old records of the Gangas occurring in all parts of the Kannada country bear ample testimony to their rule over it.

It was stated before that the Jaina community migrated from the north to the Punnata kingdom in the south of Mysore. This ancient kingdom is known as Punnad in Kannada and is named Paunnata by Ptolemy in the 2nd century A. D. who says that it was noted for the precious stone called beryl. It was ruled by Rashtravarma and other kings from their capital Kirtipura, the modern Kittur situated on the Kapini river in the Heggadadevankote Taluk of the Mysore District.

Mysore, as stated before, is named Mahisha-rashtra or Maisa-nadu in inscriptions and literature. In the Tamil Anthology called *Aga-nanuru* verse 115 composed by the ancient poet Mamulanar of about the 2nd century A. D. names Erumai-nadu (*erumai* = buffalo) and says that it was situated in the west (Kuda-nadu); and verse 36, attributed to Nakkirar, another ancient poet, tells us that in a battle that was

fought at Talaiyalankanam the Pandya king Nedunjeliyan defeated the combined forces of these seven chiefs, namely, the Chera, the Chola, Tidiyan, Elini, Irungovenman, Porunan and Erumaiyuran (he of Mahishapura). Verse 253 of the same poet states that Erumaiyuran was related to the Badagas. In another old Tamil work called *Silappadikaram* it is stated that the Chera king Senguttuvan of about the 2nd century A. D., while on an expedition to the north, stayed on the Nilgiris and witnessed with great pleasure the dance of the Kannadigas. These facts testify to the antiquity of the Mysore country.

Varahamihira, who flourished in the 5th century, mentions the Karnataka country in his *Brihatsamhita.* The poet Rajasekhara, who lived in about A. D. 900, refers in his *Kavyamimamsa* to the mannerisms of the Kannadigas in reading their books.

## Greatness of the Kannada Country.

The Kannada country was the abode of every comfort and possessed all the marks of a high state of civilisation. It was adorned by virtuous kings, distinguished scholars, able statesmen, celebrated divines, brave warriors, pious devotees famous merchants, skilful artists and loyal servants. It is described in glowing terms by many poets and chroniclers. These descriptions are not mere poetical fancies; they are amply borne out by the accounts furnished to us by foreign writers.

**KINGS.**—The Kannada country was ruled over by such renowned kings as Sripurusha, Nripatunga, Tailapa, Tribhuvanamalla, Vishnuvardhana, Vira-Ballala, Bukka, Harihara, Krishna-Deva-Raya, Rajanripa, Kanthirava-Narasa-Raja, and Chikk-Deva-Raja. Distinguished for their valour, justice, liberality and appreciation of merit, they have left behind a name which is even now cherished and honored in many parts of the country. Though professing a faith differing from those of their subjects, they treated the

latter with marked impartiality and extended their support to all alike. Whenever there was a quarrel between different creeds, they took up the role of arbitrators and brought about reconciliation. Merit, wherever found, was appreciated and honored by them.

**SCHOLARS &c.**—The Kannada country was the birth-place of Madhvacharya, the leader of the Dvaita school of philosophy, and gave shelter to Sankaracharya and Ramanujacharya, the leaders respectively of the Advaita and Visishtadvaita schools of philosophy. It was also the birth-place of Basavesvara, the leader of the Virasaiva sect. The monasteries established by these leaders with their numerous branches are to be found all over the country. Moreover, the Kannada country was deservedly famous for its pre-eminent scholars, ascetics, philosophers and devotees such as Vidyatirtha, Vidyaranya, Sayanacharya, Sripadaraya, Vyasaraya, Raghavendra-yati, Anantacharya, Vedanta-charya, Purandara-dasa, Kanaka-dasa, Siddharama, Tontada-Siddhalinga, Nemichandra and Subhachandra.

**WARRIORS.**—We learn from the Ceylon chronicles that a Chola king named Elala conquered Ceylon in 205 B. C. with the help of a Mysore army.[1] In an inscription of the Rashtrakuta king Dantidurga it is stated that the Karnataka army was capable of defeating the ruler of Kanchi and the Kerala, Pandya and Chola kings.[2]

**MERCHANTS.**—It was stated before that lead coins of the Andhrabhritya kings were unearthed near Chitaldrug. There were likewise found at the same place a brass coin of the Chinese emperor Han Wu-ti of about the middle of the 2nd century B. C. and silver coins known as denarii of the Roman emperor Augustus who died in A. D. 14. These finds lead us to the not unreasonable inference that the Kannada country had in ancient times commercial intercourse with distant foreign countries. In inscriptions and

1. *The Lost Cities of Ceylon*, 26. 2. *Indian Antiquary*, XI, 114.

literature the epithets *Vadda-vyavahari* (great merchant) and *Raja-sreshthi* (royal merchant) are applied to prominent merchants. An inscription[1] of about 1120 states that Hoysala-setti and Nemi-setti were the royal merchants of the Hoysala king Vishnuvardhana; another[2] of 1188 tells us that Chettapa-setti imported in ships excellent horses and elephants and superior pearls and sold them to kings, and that Daseya transported commodities of the east to the west and *vice versa* and articles of the south to the north and *vice versa*; and a third[3] of 1255 says that Kunjanambi-setti, a celebrated merchant of the Hoysala kingdom, supplied all the things required by the Malava, Kalinga, Chola and Pandya kings.

**ARTISTS.**—The ornate buildings erected by the artists of the Kannada country at Ellora, Ittagi, Belur, Halebid, Somanathapur, Nandi, Sringeri, Sravana Belgola, Hampe and other places have caused not a little astonishment to foreign experts. Some of these artists have recorded their names on the pedestals of the images executed by them, this practice being rarely found outside Mysore. A word may here be said about some peculiar features of the Vidyasankara temple at Sringeri built in about 1357. Its plan is unique in India: it is apsidal (oval) at both the ends. Even temples apsidal at one end are rather rare in India. The present plan is somewhat similar to that of Trajan's basalica at Rome, built in A. D. 98, with apses at both the ends. The skill of the artists who designed and built such a unique temple is beyond all praise. Further, the central hall is supported by 12 well carved pillars, each of which has sculptured on its back a sign of the zodiac such as the ram, the bull and so forth, arranged in such a way that the rays of the sun fall on them in the order of the solar months.

**LOYAL SERVANTS.**– The Kannada country was adorned by loyal servants, both male and female, who showed their

1. Sravana Belgola 137 [Revised Edition]. 2. Arsikere 22, 3. Arsikere 108.

undying attachment and fidelity to their masters by readily laying down their lives. One or two instances will suffice. On the death of the Hoysala king Ballala II in 1220, a prince of the name of Kuvara-Lakshma, deeming it a shame to survive his lord, died with his wife and his whole battalion of a thousand choice warriors.[1] Honni, a female servant of Honnavve-nayakiti, had her head cut off on the death of her mistress in 1215.[2] Another remarkable instance of selfless devotion is furnished by a family of chiefs who were faihful servants of the Hoysala kings. They took upon themselves a vow not to survive their lords and committed suicide along with their wives and male and female servants in regular succession on the death of their successive masters[3].

## Antiquity of the Kannada Language.

The occurrence of some Kannada words in a Greek drama of the 2nd century A. D. discovered at Oxyrhincus in Lower Egypt has already been referred to in the Introduction to Volume I of the LIVES OF KANNADA POETS[4]. Among the Kannada authors that preceded him, Nripatunga mentions Durvinita who is most probably the Ganga king of that name who ruled about A. D. 500. Kannada inscriptions make their appearance from about the 5th century. Besides the authors named by Nripatunga, Srivardhadeva and Syamakundacharya appear to have written in Kannada in about 700. Amirtasagara, a Jaina Tamil poet who flourished before the 11th century, states in his *Yapparungalakkarigai*, a work on prosody, that there existed in the Kannada language a work on prosody named *Gunagankiyam* and that the Tamil work adopted some of its characteristics, one of which was addressing the rules to a woman. Unfortunately the name of the author is not given, nor has the work come down to us. It is very probable that this author dedicated his work to the Eastern Chalukya king Vijayaditya III (844-888) who had the distinctive epithets Gunaga, Gunaganka and Gunake-nalla.

1. Belur 112. 2. Molakalmuru 12. 3. Krishnarajapete 10. 4. Page 2.

## Patronage to the Kannada Language.

From the earliest times kings and nobles have patronised Kannada language and literature. Among the patrons may be mentioned the Gangas, the Rashtrakutas, the Western Chalukyas, the Kakatiyas, the Hoysalas, the Eastern Chalukyas, the Rattas of Saundatti, the Silaharas of Karad, the Kongalvas, the Chengalvas, the Tuluva kings, the Chautas, and the kings of Vijayanagar and Mysore; as also the Palegars or chiefs of Ummattur, Nuggehalli, Sugatur, Piriyapattana, Hadinadu, Belur, Chikkanayakanhalli, Mudigere, Bijjavara, Ikkeri, and Kalale. Besides these kings and chiefs, ministers, generals and other officers subordinate to them, and many minor chiefs have also encouraged literary men. It is also worthy of note that not a few of the above-mentioned kings, chiefs and high personages were themselves authors of works in Kannada. These statements will now be illustrated in some detail by a few examples.

**THE GANGAS.**—It is very probable that the Ganga king Durvinita (c. 500) is identical with his namesake mentioned as a Kannada prose writer by Nripatunga. As we learn from an inscription[1] that the work *Gajashtaka* composed by Sivamara (c. 800) was sung by women when pounding grain, it must have been a Kannada work. Ereyappa (c. 900), who had the distinctive title Mahendrantaka, was the patron of Gunavarma I, the author of the *Sudraka*, the *Harivamsa* and other works. Chavunda-Raya, the minister of Rachamalla, composed the *Chavundaraya-purana* in 978. Nagavarma I, who was patronised by Rachamalla's younger brother Rakkasa-Ganga, was the author of the *Chhandombudhi* and other works.

**THE RASHTRAKUTAS.**—It is well known that among these kings Nripatunga (814-877) was an author. The title "matchless poet" is applied in an inscription[2] to Srivijaya-dandanatha, a subordinate of Indra-Raja III (915-917). Krishna-Raja III (939-968) bestowed the title Kavi-chakravarti on the poet Ponna.

1. Nagar 35. 2. *Epigraphia Indica, X,* 150.

**THE WESTERN CHALUKYAS.**—The feudatory chief Arikesari was the patron of the famous poet Pampa I. King Tailapa (973—987) conferred on the Poet Ranna the title Kavichakravarti. Sridharacharya, who was patronised by Ahavamalla (1042—1068), wrote the *Jataka-tilaka* in 1049. Santinatha the minister of the chief Lakshma who was a subordinate of Bhuvanaikamalla (1068—1076), was the author of the poem *Sukumara-charite*; and Nagavarmacharya, the minister for peace and war of Udayaditya: the great minister of the same king, composed the *Chandrachudamani-sataka*. Under the patronage of Machi-raja, a subordinate of king Ahavamalla's son Jayasimha, Chandraraja wrote the *Madana-tilaka* and other works; another son of the same king, Kirtivarma, a younger brother of Vikramaditya, was the author of the *Govaidya*; and Brahmasiva, *a protege* of the same king and a friend of Kirtivarma, wrote the *Samayaparikshe* and the *Trailokyarakshamani-stotra*. Nagavarma II was the court poet of Jagadekamalla II (1138—1150); Durgasimha, the minister for peace and war of the same king, wrote the *Panchatantra*; and Madhusudanadeva, the composer of the inscription Davangere 41, was honored by Vira-Pandya of Uchchangi, a feudatory of the same sovereign.

**THE KAKATIYAS.**—It is stated that Raghavanka (c. 1165 read his poem *Viresvara-charite* at the court of Prataparudra of Warangal and was honored by the king. Palkurike Somanatha flourished during the time of another Prataparudra (c. 1300).

**THE HOYSALAS.**—Abhinava-Pampa and the poetess Kanti seem to have been honored at the court of Ballala I (1100—1106). Rajaditya wrote his *Kshetra-ganita* and other, mathematical works during the reign of Vishnuvardhana (1111—1141). Sumanobana, the father of the poet Janna, was the court poet of Narasimha I (1141—1173). The authors Kereya Padmarasa and Harisvara were respectively the minister and the accountant of the same king, Ballala II

(1173—1220) conferred the title Kavi-chakravarti on the poet Janna. His minister Bachi-raja is described in an inscription[1] as the equal of Poona in poetical skill. At the instance of two other ministers of his, namely, Chandramauli and Vasudhaikabandhava-Recharasa, Rudrabhatta and Achanna wrote respectively the *Jagannathavijaya* and the *Vardhamana-purana*. Under the patronage of Padmanabha, another subordinate of his, Nemichandra composed the *Ardhanemi*. Polalva-dandanatha, the minister of Narasimha II (1220-1235) was the author of the poem *Haricharitra*. Mallikarjuna, the father of Kesiraja, wrote the *Suktisudharnava* for the recreation of Somesvara (1233 1254).

**THE EASTERN CHALUKYAS.**—As stated before, *Gunagankiyam*, a work on prosody, came into existence during the reign of Gunaganka-Vijayaditya (844—888). Narayana-bhatta, who helped Nannayya-bhatta, the court poet of Raja-raja (1022—1063), in the composition of the Telugu Bharata was also a Kannada poet.

**THE RATTAS OF SAUNDATTI.**—Parsva-pandita, the author of the *Parsvanatha-purana*, was the court poet of Kartavirya IV (1202—1220), and the poet Balachandra-kavi-kandarpa also flourished during the same reign. Gunavarma II was patronised by Santivarma, a subordinate of the same king.

**THE SILAHARAS OF KARAD.**—By order of Lakshmana-Raja, the son of Gandaraditya, Kannaparya wrote the *Neminatha-purana*. The *Lilavati* was also composed during the same reign by Nemichandra.

**THE KONGALVAS.**—Mauktika-kavi, the author of the *Chandranathashtaka*, seems to have been patronised by Vira-Kongalva (c, 1190).

**THE CHENGALVAS.**—Mangarasa III, who wrote the *Samyaktva-kaumudi* (1508) and other works, was the son of Vijaya, the chief of Kallahalli, who was the hereditary

1 Hassan 119.

minister of the Chengalva kings. Nanjunda wrote the *Kumararama-kathe* during the reign of Chengalva Nanja-Raya (1502—1533).

**THE TULUVA KINGS.**—At the instance of Bhairava's son Pandya-Raya, king of the Tuluva country the *Jnanachandrabhyudaya* was composed by Kalyanakirti in 1439. Kotisvara wrote the *Jivandhara-shatpadi* in about 1500 by order of Haiva-nripa's son Sangama, the ruler of Sangitapura. Ratnakara-varni, the author of the *Bharatesvara-charite*, which he wrote in 1557, received the title Sringara-kavi at the court of Bhairasa-Odeyar of the Tuluva country. Salva, the author of the *Bharata* and other works, was the court poet of Salva-malla, the king of the Tuluva Haiva and Konkana countries. It was by order of Bhairavendra of the Kelavane throne that Bahubali wrote the *Nagakumara-charite*, and Chandrama the *Gommatesvara-charite*. Adiyappa wrote the *Dhanyakumara-charite* under the patronage of king Bhairava-Raya of Gera-soppe, and Payanna his *Ahimsa-charite* under the patronage of the son of king Sangama-Raya of Sangitapura. Chandra sekhara, the author of the first part of the *Kamachandra-charitra*, was the court poet of Lakshmana-Bangara of the Tuluva country, and Padmanabha completed the work in 1730 under the patronage of Chenna-Raya, the ruler of Mulike.

**THE CHAUTAS.**—During Chennamambe's reign Tiru-mala-samanta's treasurer Padmanabha wrote the *Padmavati-charite* and during Abbakkadevi's reign Pattabhirama composed the *Ratnasekhara-charite*. Surala wrote the *Padmavati-charite* in 1761 by order of Chennamma-devi, the queen of Chaudrasekhara-Chikkaraya.

**THE VIJAYANAGAR KINGS.**—Mangarasa I, the ruler of Mugulipura, wrote the *Khagendramanidarpana* during the rule of Harihara I (1336—1353). Madhura, the author of the *Dharmanatha-purana*, was the court poet of Harihara II (1377—1404). Deparaja, son of Bukka I's son Kamparaja,

wrote the *Sobaginasone* and other works. The authors Lakkanna-dandesa and Jakkanarya were the ministers of Deva-Raya II (1419—1446). Chandrakavi was patronised by Gururaya, another minister of the same king. The poets Chamarasa, Magge Mayideva, Gurubasava and Battalesvara wrote their works under the patronage of the same sovereign and Kumara-Vyasa also seems to have written his *Bharata* during the same reign. It was during the rule of Mallikarjuna (1446—1467) that Kallarasa wrote the *Janavasya.* Tontada Siddhalinga flourished during the reign of Virupaksha (1467—1478). Kavi-Linga was the court poet of Saluva-Narasinga (1487—1493). By order of Krishna-Deva-Raya (1509—1529) Timmanna-kavi wrote the latter portion of the *Bharata.* Sadanandayogi appears to have written his *Bhagavata* during the rule of Achyuta-Raya (1530—1542). Emmebasava was honored by Salakaraja's son Tirumalaraja, a subordinate of Sadasiva-Raya (1543—1567). Bhattakalanka wrote the *Sara-traya* at the instance of Sri-Ranga-Raya I (1573-1584) and his disciple Bhattakalanka wrote the grammatical work *Sabdanusasana* during the rule of Venkatapati-Raya I (1586—1615).

THE MYSORE KINGS.—Rajanripa's (1578—1617) minister Tirumalarya was the author of the *Karnavrittanta-kathe.* King Chama-Raja (1617—1637) wrote prose versions of the *Ramayana* and the *Brahmottarakhanda,* and under his patronage Ramachandra wrote the *Asva-sastra* and Padmana-pandita the *Hayasara-samuchchaya.* The authors Bharati-Nanja and Govindavaidya were the *proteges* of Kanthirava-Narasa-Raja (1638—1659), and the mathematical work *Behara-ganita* was composed by Bhaskara under the patronage of the same king. King Chikka-Deva-Raja (1672—1704) was not only an author himself, having written the *Binnapa* and other works, but also patronised a large number of poets and poetesses. Among the latter may be mentioned his ministers Tirumalarya and Chikkupadhyaya, the poets Timmakavi, Mallikarjuna. Singararya, Venugopalavaraprasada. Chida-

nanda-kavi and Mallarasa, and the poetesses Honnamma and Sringaramma. Krishna-Raja I (1713—1731) patronised the authors Cheluva and Ramayanam Tirumaleyacharya, and his queen Chelvambe wrote the *Varanandi-kalyana* and other works. The authors Venkamatya and Katti Gopala-raja were the subordinates of Krishna-Raja II (1734—1766). Singaracharya wrote the *Sriranga-mahatmya* under the patronage of Chama-Raja (1770—1776) and Devachandra wrote his *Rajavalikathe* by order of Devirammanni, the queen of Khasa Chama-Raja (1776—1796). Krishna Raja III (1799—1868) was not only a voluminous writer himself but was also a munificent patron of literary merit. By his encouragement many works were written by Aliya Lingaraja, Nanjunda of Devalapura, Srinivasa-kavi, Santaraja-pandita, Venkatarama-sastri, Subrahmanya, Nanjappa of Maddagiri, Sitarama-suri, Kempu Narayana, Ramakrishna-sastri, Kamala-pandita and others. By order of his queens Cheluva-jammanni and Devajammanni, Bhagavatam Krishnasvami wrote a Kannada version of the *Vasishtha-Ramayana* in 1869.

**THE PALEGARS.**—Nilakanthacharya wrote the *Aradhya-charitra* under the patronage of Vira-Nanjendra (1482—1494) of Ummattur; Linga-mantri wrote the lexicon *Kabbigara-kaipidi* at the instance of Raya-bhupa of Nuggehalli; Mummadi-Tamma of Sugatur was the author of the *Sankara-samhite*. Doddyya, the author of the *Chandraprabha-charite*, was patronised by Virupa-raja of Piriyapattana; Narasimha-bhatta composed the medical work *Vaidyasarasangraha* by order of Chenna-raja of Hadinadu; and Surya-kavi, the author of the lexicon *Kavikanthahara*, was a *protege* of Venkatadri-Nayaka (1626—1643) of Belur. Sosale Revana-charya wrote Kannada versions of some Sanskrit works at the instance of Mudiyappa-Nayaka of Chikkanayakanhalli and of Raghuvappa-Nayaka of Mudigere. Virakta Tonta-darya, the author of the *Siddhesvara-purana* and several other works, was patronised by Tontada Siddhalinga-bhupa of Bijjavara, and Mallikarjuna-kavi by Immadi Chikka-bhupa

of the same place. By order of Venkatappa-Nayaka (1582—1629) of Ikkeri Tirumala-bhatta wrote the *Sivagite*. Basavappa-Nayaka (1697—1714) of Ikkeri was the author of the *Suktisudhakara*, and his successor Somasekhara-Nayaka's minister Nirvanaiya wrote the *Sivapujavidhana*. The Kalale chief Vira-Raja wrote the *Vaidyasamhitasararnava*, and his *protege* Chennayya the *Padmini-parinava*. Deva-Raja, son of Vira-Raja, was the patron of Rangaiya, the author of the *Tulakaveri-mahatmya*. Nanja-Raja, younger brother of Deva-Raja, was himself a voluminous author, under whose patronage Nuronda wrote the *Saundara-kavya* and Venkatesa the *Halasya-mahatmya*.

Further, Deva-kavi (c. 1200), the author of the *Kusumavali*, was patronised by Chikkaraja-chamupa, Mahabala-kavi (1254), who wrote the *Neminatha-purana*, by Ketaya-Nayaka, Vijayanna (1448), the author of the *Dvadasanuprekshe*, by Honnabandi Deva-Raja, the ruler of Vemmanabhavi in the Beluvala-nadu, and Bommarasa (c. 1450), who composed the *Saundara-purana* by Tipparasa, the ruler of Denkanikote.

Some more authors appear to have been minor chiefs in possession of a small principality or one or more villages. The following table gives their names, works and approximate period :—

| AUTHOR. | WORK. | TIME. |
|---|---|---|
| Udayaditya, son of the Chola chief Somanatha. | Udayadityalankara ... | c. 1150 |
| Somaraja, son of Indu-sekhara-raja. | Udbhata-kavya ... | 1222 |
| Madhava, ruler of Hiriyur. | Madhavalankara ... | c. 1500 |
| Viruparaja, a Bhima among the Cholas. | Tribhuvana-tilaka ... | 1519 |

| AUTHOR. | WORK. | TIME. |
|---|---|---|
| His son Virabhadraraja. | Virabhadra vijaya &c. | c. 1530 |
| Ramendra, son of Rama-bhupati, ruler of Kakolal. | Saundarya-katharatna. | c. 1550 |
| Annaji, son of Ayyana-bhupa. | Saundara-vilasa ... | c. 1600 |
| Sringarakavi, son of Bommarasa, ruler of Rasavali. | Karnataka-sanjivana. | ,, |
| Virabhadraraja, son of Nrisimharaja. | Commentary on Palakapya's Hastyayurveda. | ,, |
| Jakka-bhupala ... | Bharatakathasangraha. | c. 1620 |
| Narahari, ruler of Ballalapura. | Prahlada-charite ... | c. 1650 |
| Virajanapati, ruler of Belagodu. | Vikrama-vilasa ... | ,, |
| Sesha, younger brother of Raghava-bhuvara. | Rukmangada-charitre. | ,, |
| Basavarajendra ... | Mahavibhuti-mahime... | c. 1700 |
| Nanjanatha-bhupala ... | Vaidyasarasangraha ... | ,, |
| Chennaraja ... | Venkatesvara-sataka... | c. 1750 |
| Nanjayya, son of Lingarajendra. | Kapota-vakya ... | ,, |
| Krishnaraja of Salem ... | Vivekabharana &c ... | 1769 |

## The Southern and Northern Schools in Kannada.

Some scholars have written at length about the so-called southern and northern schools in Kannada and expressed the opinion that they owe their existence mainly to the influence of Tamil and Telugu respectively. There do not, however, seem to be sufficient grounds for this opinion. It is true that the expressions southern and northern schools do occur in the *Kavirajamarga* of Nripatunga, the *Kavyavalokana* of Nagavarma II and the *Sabdanusasana* of Bhattakalanka. Thus in the second chapter of the *Kavirajamarga* these expressions are used when treating of the ten merits of composition. But this part of the chapter is mostly a translation of the first chapter of the *Kavyadarsa* of Dandi in which the expressions are used in the sense of the Vaidarbha and Gauda schools or styles in Sanskrit. Consequently whatever Nripatunga has written with regard to the merits of composition refers as in the original to the Vaidarbha and Gauda schools, and not to the southern and northern schools in Kannada. For examples of Nripatunga's translation of Dandi's verses the reader is referred to the Kannada Introduction. Nripatunga, however, gives in another place[1] what he considers to be the distinguishing characteristics of the southern and northern schools in Kannada, which consist merely in the use of one of the recognised duplicate forms of certain verbs in preference to the other. Whatever may have been the case during or previous to the time of Nripatunga, we find no such distinction observed by authors who came after him.

Let us see what Nagavarma II says about the southern and northern schools. He has adopted the title of the first chapter of Dandi's work, namely, *Marga-vibhaga*, for the first section, which treats of the same subject, of the third chapter of his *Kavyavalokana* and has closely followed Dandi, like Nripatunga, in the treatment of the ten merits of composition.

1. II, 100—104.

His verses 500 and 521 are merely a translation of verses 41 and 42 of the first chapter of the *Kavyadarsa*. So, the southern and northern schools mentioned by Nagavarma II do not refer to any such schools in Kannada but to the Vaidarbha and Gauda schools in Sanskrit.

Coming now to Bhattakalanka, we find that in his commentary on *sutra* 288 he recognises the existence of the southern and northern schools in Kannada and tells us that of the two forms of the pronoun of the first person *nán* is used by the poets of the north and *an* by those of the south. But this dictum is not borne out by literature, since we find both the forms used indiscriminately by the poets of the north and the south.

If according to the scholars mentioned above the northern school in Kannada arose through Telugu influence, that language ought to have only the form *nénu* of the pronoun of the first person, but we find in it also the other form *ènu* corresponding to the *àn* of the southern school. Again, if the southern school arose, according to them, through Tamil influence, there is no reason for the existence in that language of *nàn*, the form of the northern school.

The foregoing enquiry has led us to the conclusion that according to Nripatunga and Bhattakalanka there exist the southern and northern schools in Kannada, their distinguishing characteristics being the use of one of the recognised duplicate forms of certain verbs and the pronoun of the first person in preference to the other. But a study of Kannada literature shows that these distinctions are more honored in the breach than in the observance by the poets. Nor have we any valid grounds for supposing that the above-mentioned schools werè brought into existence by Tamil or Telugu influence. It does not therefore appear to serve any useful purpose at present to make too much of what is evidently a distinction without a difference and quarrel abuot the southern and northern schools in Kannada.

3

## The Karnataka-Kavicharite or Lives of Kannada Poets.

The first volume of this work was published so far back as 1907, nearly twelve years ago, and it may naturally be asked why there was such a long delay in bringing out the Second volume of the work. It is my duty to answer this question, and in answering it some personal matters have also to be mentioned. Mr. S. G. Narasimhachar, my collaborator in writing the first volume, died within a few years after its publication. His sound scholarship in Kannada, his poetical skill, his great modesty and amiable disposition commanded the admiration and respect of all those who came in contact with him. It is not too much to say that his untimely death is a great loss not only to the Mysore State but also to the whole Kannada country. Personally it was an irreparable loss to me. It cooled my zeal for this labour of love. With the heavy duties of the Archæological Department, it appeared well-nigh impossible for me to find leisure to continue this work single-handed. I therefore came to the conclusion, though with the greatest reluctance, that I should give up the work and leave its completion to other scholars.

But after the lapse of some time I found that there was no likelihood of any one else undertaking the work, and it occurred to me that the experience gained in writing the first volume and the materials laboriously collected for the work ought not to be lost to the country, and that the duty of completing the task, however difficult and wearisome, ought to be undertaken by me. Patriotism and the love of the language thus impelled me to take a firm resolve that I should somehow find time and do this humble service to the Kannadigas

### The Second Volume.

When however the work was commenced, the difficulties appeared to increase in number. It was found that the materials previously collected were meagre and incomplete

and formed only a very small part of the equipment necessary for carrying out the work. When formerly the manuscripts in the Madras Oriental Library and other places were examined, attention was chiefly directed to matters relating to the first volume leaving the others for fuller investigation at some future time. Unfortunately, however, it was found on a second visit that a great many of the manuscripts formerly noticed had been lost or destroyed by moths. And it was not possible even after a diligent search to procure elsewhere copies of these lost manuscripts. This accounts for the very brief notices of some of the poets, which are based on the meagre notes taken formerly. Another trouble that had to be contended with was the extreme difficulty in obtaining on loan even for a short period manuscripts from their owners. It is to be deplored that many owners of manuscripts have a strong disinclination even to show them to others, not to speak of lending them even for a day or two. Some even go so far as to deny the possession of any manuscripts. Further, my heavy official duties left very little time at my disposal to attend to this self-imposed task. I had to do it single-handed whenever I could snatch a little leisure. There was moreover considerable delay in the press owing to shortage of paper due to the war, and other causes. These facts account for the long delay in the appearance of this volume.

For the purposes of this volume I examined the manuscripts in the Madras Oriental Library, the Mysore Oriental Library, the Sarasvati-bhandara of the Mysore Palace, and the private libraries of Messrs. Dorbali-Sastri of Sravana Belgola, M. A. Ramanuja Iyengar of Mysore, Subba-Pandit and Narasimha-Sastri of Agara, Yelandur Taluk, Patel Isvaraiya of Agrahara, Koratigere Sub-Taluk, Basavalingayya of the Hiriya-matha at Kunigal, and Bommarasa-Pandit of the Archaeological Office, Bangalore. Some manuscripts were kindly sent for reference by Messrs. Karnataka-bhasharatna Karibasava-Sastri and M. V. Chandrasekhara-Sastri of Mysore, and K. Ramasvami Iyengar and Jirige Basavalingappa of Bangalore. I

also received from some other gentlemen a few notes concerning a few works that were either in their possession or came under their notice. My acknowledgments are due to all the gentlemen mentioned above.

This volume contains the lives of about 350 poets who flourished from the beginning of the 15th century to the end of the 17th. Among these, about 160 are Virasaivas, 75 Jainas, 60 Brahmanas, and 50 others. It is not to be supposed that every one of them was a great poet. I have deemed it proper to include in the work every poet that came under my notice, as otherwise there is every likelihood of the names of many ordinary poets being quite forgotten. This volume includes many poets and works not known before: it may be roughly stated that nearly one half of the poets and works dealt with here are either quite new or very little known. A careful study of the work will make this quite clear. The first forty-two pages contain matter in the shape of additions and corrections belonging to the period treated of in the first volume. A noticeable feature in Virasaiva literature is the number of old works known as *Vachanas* written in simple lucid vigorous prose, with the object of popularising religious and philosophical truths. I have put together in one place all the available information about these prose writers and given extracts from their works (pp. 105—124). Similarly I have dealt with some of the titles of poets met with in literature (pp. 175—178). Three appendixes are given at the end of the work. The first contains accounts of a few poets left out in the volume though belonging to the period dealt with in it; the second gives corrections and some items of additional information; and the third deals with an ancient poet that came under notice but recently. At the beginning are given for convenience of reference two alphabetical lists, one, of the poets, and the other, of the works, treated of in the volume.

I do not venture to assert that this volume includes all the poets that flourished in the 15th, 16th, and 17th centuries. I can however say this much, that no poet that has come under

my notice has been left out. As stated before, the accounts of some of the poets are very meagre owing to the want of fuller information. In the absence of any other evidence the period of some of the poets has been inferred from the state of the manuscript, the mode of writing, the date of transcription, the style &c. If those who are in possession of the requisite materials help in the removal of these defects hey will be doing a gieat favour to students of Kannada, literature. Some one may ask the question—" Why are you in such a hurry to publish a work which is admittedly defective ?", and my reply is this : " Man is mortal ; it is not right that the materials laboriously gathered during a period of nearly a quarter of a century should be allowed to perish with the gatherer ; if on the other hand they are published and laid before the public, there is a likelihood, at some time or other, of their being corrected and improved upon". I therefore offer this volume as a further tribute to the Kannadigas with a full knowledge of its defects. I may however be permitted to state that it was my intense love for the language that impelled me to this difficult task and not any desire for gain. If the volume will conduce in however small a degree to the advancement of the Kannada language, I shall deem my labours amply reward- e d.*

I am deeply grateful to His Highness the Maharaja of Mysore for having graciously permitted me to dedicate this volume to him.

* With regard to the antiquity of the Kannada language, the following may be of some interest: - According to Jaina tradition Brahmi, the daughter of Rishabhadeva, the first Jaina who flourished in the Sushama-Dushshama period of the present cycle (*avasarpini*), invented 18 alphabets, including among others, Kannada. Recently a curious inscription of about the 9th century was found in a Jaina Temple in the Deogarh Fort, containing specimens of different alphabets mostly Dravidian. *Report on the Hindu and Buddhist Mounments*, Northern Circle, for 1918, p. 10.

God willing, I propose to write a third volume bringing the account up to date.

It only remains for me to express my thanks to scholars and the press for their appreciative notices of the First Volume of the Lives of Kannada Poets, and to the authorities of the Mysore University for their help in getting the present volume printed.

BANGALORE,
*July 1919.*

R. NARASIMHACHAR.

# ಅವತರಣಿಕೆ

ಪ್ರಥಮಸಂಪುಟದ ಅವತರಣಿಕೆಯಲ್ಲಿ ಕನ್ನಡನಾಡಿನ ಮತ್ತು ಕನ್ನಡನುಡಿಯ ಪ್ರಾಚೀನತೆ, ಕನ್ನಡನುಡಿಗೆ ರಾಜರುಗಳ ಪ್ರೋತ್ಸಾಹ ಈ ವಿಷಯಗಳು ಸಂಗ್ರಹವಾಗಿ ನಿರೂಪಿತವಾಗಿವೆ. ಕನ್ನಡಿಗರಿಗೆ ತಮ್ಮ ನಾಡುನುಡಿಗಳಲ್ಲಿ ಗೌರವ ಬುದ್ಧಿಯೂ ಆದರಾತಿಶಯವೂ ಹುಟ್ಟಿ ಅವುಗಳ ಏಳಿಗೆಗಾಗಿ ಉತ್ಸಾಹದಿಂದೊಡಗೂಡಿದ ಪ್ರಯತ್ನವು ಉಂಟಾಗಬೇಕೆಂಬ ಉದ್ದೇಶದಿಂದ ಮೇಲೆಹೇಳಿದ ವಿಷಯಗಳನ್ನೂ ಅವಕ್ಕೆ ಸಂಬಂಧಿಸಿದ ಇನ್ನು ಕೆಲವು ವಿಷಯಗಳನ್ನೂ ಸ್ವಲ್ಪಮಟ್ಟಿಗೆ ಇಲ್ಲಿ ವಿವರಿಸಿ ಅನಂತರ ಈ ಸಂಪುಟದ ವಿಷಯವಾಗಿ ಒಂದೆರಡು ಮಾತುಗಳನ್ನು ಒರೆಯುತ್ತೇನೆ.

## ಕನ್ನಡನಾಡಿನ ಪ್ರಾಚೀನತೆ

ಕನ್ನಡನಾಡು ಮೌರ್ಯರು, ಆಂಧ್ರರು, ಕದಂಬರು, ಗಂಗರು ಮೊದಲಾದ ಪುರಾತನ ರಾಜವಂಶದವರ ಆಳಿಕೆಗೆ ಒಳಪಟ್ಟಿದ್ದಿತು. ಮೌರ್ಯರಾಜನಾದ ಚಂದ್ರಗುಪ್ತನ ಕಾಲದಲ್ಲಿ ಉತ್ತರದೇಶದೊಳಗೆ ದ್ವಾದಶವಾರ್ಷಿಕಕ್ಷಾಮವುಂಟಾಗಲು, ಕೊನೆಯ ಶ್ರುತಕೇವಲಿಯಾದ ಭದ್ರಬಾಹುವೆಂಬ ಜೈನಗುರು ಜೈನಸಂಘದೊಡನೆ ದಕ್ಷಿಣದಿಕ್ಕಿನಲ್ಲಿರುವ ಪುನ್ನಾಟರಾಷ್ಟ್ರಕ್ಕೆ ಪ್ರಯಾಣಮಾಡಿದಾಗ, ಚಂದ್ರಗುಪ್ತನು ರಾಜ್ಯವನ್ನು ತ್ಯಜಿಸಿ ಭದ್ರಬಾಹುವಿಗೆ ಶಿಷ್ಯನಾಗಿ ಅವನೊಡನೆ ತಾನೂ ಹೊರಟು ಬಂದಂತೆಯೂ, ಶ್ರವಣಬೆಳುಗೊಳವನ್ನು ಸೇರಿದೊಡನೆ ಭದ್ರಬಾಹುವಿಗೆ ಅವಸಾನಕಾಲವು ಪ್ರಾಪ್ತವಾಗಲು ಅವನ ಆಜ್ಞಾನುಸಾರವಾಗಿ ಸಂಘವನ್ನು ಮುಂದಕ್ಕೆ ಕಳುಹಿಸಿ ಚಂದ್ರಗುಪ್ತನು ಗುರುವಿನ ಪರಿಚರ್ಯೆಗೋಸ್ಕರ ಅಲ್ಲಿಯೇ ನಿಂತಂತೆಯೂ, ಗುರುವಿನ ಮರಣಾನಂತರ ತಾನು ಅಲ್ಲಿಯೇ ತಪಸ್ಸುಮಾಡುತ್ತಿದ್ದು ಕೆಲವು ವರ್ಷಗಳಮೇಲೆ ಗತಿಸಿದಂತೆಯೂ ಜೈನಗ್ರಂಥಗಳಲ್ಲಿ ಉಕ್ತವಾಗಿದೆ. ಭದ್ರಬಾಹು ಕ್ರಿಸ್ತಪೂರ್ವ

೨೯೭ ರಲ್ಲಿ ಸತ್ತಂತೆ ತಿಳಿಯುತ್ತದೆ. ಭದ್ರಬಾಹುವೂ ಚಂದ್ರಗುಪ್ತನೂ ಶ್ರವಣಬೆಳುಗೊಳದಲ್ಲಿ ಇದ್ದರು ಎಂಬುದಕ್ಕೆ ಕೆಲವು ಆಧಾರಗಳು ದೊರೆಯುತ್ತವೆ. ಶ್ರವಣಬೆಳುಗೊಳದ ಚಿಕ್ಕಬೆಟ್ಟದ ಮೇಲೆ ಚಂದ್ರಗುಪ್ತ ಬಸ್ತಿ ಎಂಬ ಜಿನಾಲಯವೂ, ಭದ್ರಬಾಹುಗವಿ ಎಂಬ ಗುಹೆಯೂ ಈಗಲೂ ಇವೆ. ಸುಮಾರು ೭ ನೆಯ ಶತಮಾನದಲ್ಲಿ ಬರೆದ ಶ್ರವಣಬೆಳುಗೊಳದ ೧೭ ನೆಯ ಶಾಸನದಲ್ಲಿ "ಭದ್ರಬಾಹುಸಚಂದ್ರಗುಪ್ತಮುನೀಂದ್ರಯುಗ್ಮದಿನೊಪ್ಪೆ" ಎಂದೂ, ಸುಮಾರು ೯ ನೆಯ ಶತಮಾನದಲ್ಲಿ ಹುಟ್ಟಿದ ಶ್ರೀರಂಗಪಟ್ಟಣದ ೧೪೭, ೧೪೮ ನೆಯ ಶಾಸನಗಳಲ್ಲಿ "ಭದ್ರಬಾಹುಚಂದ್ರಗುಪ್ತಮುನಿಪತಿಚರಣಮುದ್ರಾಂಕಿತ ಜಗಲ್ಲಲಾಮಾಯಿತ ಶ್ರೀಕಟ್ವಪ್ರತೀರ್ಥಸನಾಥ ಬೆಳ್ಗೊಳ" ಎಂದೂ ಶ್ರವಣಬೆಳುಗೊಳದ ವಿಷಯವಾಗಿ ಹೇಳಿವೆ. ೯೩೧ರಲ್ಲಿ ಹರಿಷೇಣನಿಂದ ರಚಿತವಾದ ಕಥಾಕೋಶದಲ್ಲಿಯೂ, ಇತರ ಗ್ರಂಥಗಳಲ್ಲಿಯೂ ಈ ವಿಷಯವು ಉಕ್ತವಾಗಿದೆ. ಮಿ॥ ವಿನ್ಸೆಂಟ್ ಸ್ಮಿತ್ ಬರೆದಿರುವ ಹಿಂದೂದೇಶದ ಪುರಾತನ ಚರಿತ್ರೆಯಲ್ಲಿ ಚಂದ್ರಗುಪ್ತನು ರಾಜ್ಯವನ್ನು ಬಿಟ್ಟು ಜೈನಸನ್ಯಾಸಿಯಾಗಿ ಶ್ರವಣಬೆಳುಗೊಳಕ್ಕೆ ಬಂದನೆಂದು ಹೇಳುವ ಕಥೆ ನಿಜವಾಗಿರಬಹುದು, ಎಂದು ಹೇಳಿದೆ[1]

ಚಂದ್ರಗುಪ್ತನ ಮೊಮ್ಮಗನಾದ ಅಶೋಕನ ಶಾಸನಗಳು ಮೈಸೂರುಸಂಸ್ಥಾನದ ಮೊಳಕಾಲ್ಮೂರು ತಾಲ್ಲೂಕಿಗೆ ಸೇರಿದ ಸಿದ್ದಾಪುರದ ಬಳಿ ಇರುವ ಬ್ರಹ್ಮಗಿರಿಯ ಅಕ್ಷರಬಂಡೆಯ ಮೇಲೆಯೂ, ಅದೇ ಗ್ರಾಮಕ್ಕೆ ಸಮೀಪದಲ್ಲಿರುವ ಎಮ್ಮೆತಮ್ಮನ ಗುಂಡು ಎಂಬ ಗುಡ್ಡದಲ್ಲಿಯೂ, ಅದೇಗ್ರಾಮಕ್ಕೆ ಸುಮಾರು ೪ ಮೈಲಿ ದೂರದಲ್ಲಿರುವ ಜಟಿಂಗರಾಮೇಶ್ವರ ಬೆಟ್ಟದಲ್ಲಿಯೂ ಇವೆ. ಈ ಬೆಟ್ಟದಲ್ಲಿ ಇರುವ ೯೬೨ರಲ್ಲಿ ಬರೆದ ಒಂದು ಶಾಸನದಿಂದ ಜಟಿಂಗರಾಮೇಶ್ವರ ದೇವಸ್ಥಾನವು ಪೂರ್ವದಲ್ಲಿ ಇಟ್ಟಿಗೆಯಿಂದ ಕಟ್ಟಲ್ಪಟ್ಟಿದ್ದು ಆವರ್ಷದಲ್ಲಿ ಶಿಲೆಯಿಂದ ನಿರ್ಮಿತವಾಯಿತೆಂದೂ, ಆಸ್ಥಳದಲ್ಲಿಯೇ ರಾವಣನು ಜಟಾಯುವನ್ನು ಕೊಂದುದೆಂದೂ ಹೇಳಿದೆ. ಈ ಬೆಟ್ಟದ ಪಕ್ಕದಲ್ಲಿರುವ ಮತ್ತೊಂದು ಬೆಟ್ಟದಲ್ಲಿ

---

1 *Early History of India* (3rd edition)*l* page 146.

ಒಂದು ಜಟಿಂಗರಾಮೇಶ್ವರದಲ್ಲಿ ಸಹ ಇದೆ. ಈಚೆಗೆ ಹೈದರಾಬಾದ್ ಸೀಮೆಗೆ ಸೇರಿದ ಮಾಸ್ಕಿ ಎಂಬ ಸ್ಥಳದಲ್ಲಿಯೂ ಒಂದು ಅಶೋಕಶಾಸನವು ಕಂಡುಹಿಡಿಯಲ್ಪಟ್ಟಿದೆ. ಇತರ ಶಾಸನಗಳಲ್ಲಿ ದೇವಾನಾಂಪ್ರಿಯ ಎಂಬ ಅಶೋಕನ ಬಿರುದುಮಾತ್ರ ಹೇಳಿದೆ. ಈ ಶಾಸನದಲ್ಲಿ ಅಶೋಕ ಎಂಬ ಹೆಸರೇ ಉಕ್ತವಾಗಿದೆ. ಅಶೋಕನು ಬನವಸೆಗೆ ಒಬ್ಬ ಬೌದ್ಧ ಮತೋಪದೇಶಕನನ್ನೂ ಮಹಿಷಮಂಡಲಕ್ಕೆ ಮತ್ತೊಬ್ಬನನ್ನೂ ಕಳುಹಿಸಿದಂತೆ ಮಹಾವಂಶವೆಂಬ ಗ್ರಂಥದಲ್ಲಿ ಬರೆದಿದೆ. ಮಹಿಷಮಂಡಲವು ಮಹಿಶೂರ ದೇಶವಲ್ಲ, ನರ್ಮದಾ ನದಿಯ ಸಮೀಪದ ಪ್ರಾಂತವು ಎಂದು ಮೆ|| ಫ್ಲೀಟ್ ಬರೆದಿದ್ದರೂ ಮೈಸೂರು ಸೀಮೆಗೆ ಮಹಿಷರಾಷ್ಟ್ರ ಅಥವಾ ಮೈಸನಾಡು ಎಂಬ ಹೆಸರು ಶಾಸನಗಳಲ್ಲಿಯೂ, ಪ್ರಾಚೀನಗ್ರಂಥಗಳಲ್ಲಿಯೂ ದೊರೆಯುತ್ತದೆ. ಮೈಸ ಎಂಬುದು ಮಹಿಷ ಎಂಬ ಶಬ್ದದ ತದ್ಭವವು. ಮೇಲೆ ಹೇಳಿದ ವಿಷಯಗಳಿಂದ ಮೌರ್ಯರಿಗೂ ಕನ್ನಡ ನಾಡಿಗೂ ಇದ್ದ ಸಂಬಂಧವು ವ್ಯಕ್ತವಾಗುತ್ತದೆ.

ಶಿಕಾರಿಪುರ ತಾಲ್ಲೂಕಿಗೆ ಸೇರಿದ ಮಳವಳ್ಳಿ ಎಂಬ ಗ್ರಾಮದಲ್ಲಿರುವ ಸುಮಾರು ೨ನೆಯ ಶತಮಾನ ಮಧ್ಯಭಾಗದಲ್ಲಿ ಹುಟ್ಟಿದ ಒಂದು ಪ್ರಾಕೃತ ಶಾಸನದಲ್ಲಿ ಆ ಗ್ರಾಮದ ಈಶ್ವರದೇವರಿಗೆ ಹಾರಿತೀಪುತ್ರ ಶಾತಕರ್ಣಿ ಎಂಬ ಆಂಧ್ರರಾಜನು ಭೂಮಿಯನ್ನು ಬಿಟ್ಟಂತೆ ಹೇಳಿದೆ. ಅದೇ ತಾಲ್ಲೂಕಿನಲ್ಲಿರುವ ತಾಳಗುಂದವೆಂಬ ಗ್ರಾಮದ ಪ್ರಣವೇಶ್ವರ ದೇವಸ್ಥಾನಕ್ಕೆ ಇದಿರಿಗಿರುವ ಸುಮಾರು 5 ನೆಯ ಶತಮಾನದ ಆದಿಭಾಗದಲ್ಲಿ ಹುಟ್ಟಿದ ಒಂದು ಶಾಸನದಲ್ಲಿ ಪ್ರಣವೇಶ್ವರನು ಶಾತಕರ್ಣಿ ಮುಂತಾದವರಿಂದ ಪೂಜಿತನಾಗಿದ್ದನು ಎಂದು ಬರೆದಿದೆ. ಇವರಿಂದ ಈ ಎರಡು ಗ್ರಾಮಗಳಲ್ಲಿರುವ ಈಶ್ವರ ದೇವಸ್ಥಾನಗಳು ಬಹಳ ಪುರಾತನವಾದುವು ಎಂದು ತಿಳಿಯುತ್ತದೆ. ಚಿತ್ರದುರ್ಗದಲ್ಲಿ ಆಂಧ್ರಭೃತ್ಯರ ಪ್ರತಿನಿಧಿಯೊಬ್ಬನು ನಿಂತು ಆಳುತ್ತಿದ್ದಂತೆ ಅಲ್ಲಿ ದೊರೆತ ನಾಣ್ಯಗಳಿಂದ ತಿಳಿಯುತ್ತದೆ. ಈ ನಾಣ್ಯಗಳು ಸೀಸದವು; ಇವುಗಳೊಳಗೆ ರಾಜರ ನಾಣ್ಯಗಳಲ್ಲಿ ಚೈತ್ಯವೂ ಬೋಧಿವೃಕ್ಷವೂ ಅಂಕಿತವಾಗಿರುವುದಲ್ಲದೆ ಮುಡಾನಂದ, ಚುಟುಕಡಾನಂದ ಎಂಬ ರಾಜನಾಮಗಳೂ ದೊರೆಯುತ್ತವೆ.

ಪ್ರತಿನಿಧಿಯು ನಾಣ್ಯಗಳಲ್ಲಿ ಅವನ ಹೆಸರೂ ವೃಷಭವೂ ಬೋಧಿವೃಕ್ಷವೂ ಕೆತ್ತಲ್ಪಟ್ಟಿವೆ. ಈ ವಿಷಯಗಳು ಆಂಧ್ರರಾಜರ ಸಂಬಂಧವನ್ನು ತೋರಿಸುತ್ತವೆ.

ಮೇಲೆ ಹೇಳಿದ ಮಳವಳ್ಳಿಯ ಪ್ರಾಕೃತಶಾಸನದ ಕೆಳಗೆ ಸುಮಾರು 3ನೆಯ ಶತಮಾನದ ಮಧ್ಯಭಾಗದಲ್ಲಿ ಲಿಖಿತವಾದ ಮತ್ತೊಂದು ಪ್ರಾಕೃತಶಾಸನವಿದೆ. ಇದರಲ್ಲಿ ಒಬ್ಬ ಕದಂಬರಾಜನು ಅದೇ ಈಶ್ವರದೇವರಿಗೆ ಭೂಮಿಯನ್ನು ಬಿಟ್ಟಂತೆ ಹೇಳಿದೆ. ಅಲ್ಲದೆ ಹಿಂದೆ ಹೇಳಿದ ತಾಳಗುಂದದ ಶಾಸನದಲ್ಲಿ[1] ಕದಂಬ ರಾಜನಾದ ಕಾಕುತ್ಸ್ಥವರ್ಮನು ಪ್ರಣವೇಶ್ವರ ದೇವರಿಗಾಗಿ ಒಂದು ಕೆರೆಯನ್ನು ಕಟ್ಟಿಸಿದಂತೆ ಹೇಳಿದೆ. ಈ ಕೆರೆ ಪ್ರಣವೇಶ್ವರ ದೇವಸ್ಥಾನದ ಇದಿರಿಗೆ ಇದೆ. ಇದನ್ನು ಈಗಲೂ ಪಣಮನ ಕೆರೆ ಎಂದು ಕರೆಯುತ್ತಾರೆ. ಪಣಮ ಎಂಬುದು ದೇವರ ಹೆಸರಿನ ಆದಿಭಾಗವಾದ ಪ್ರಣವ ಎಂಬುದರ ಅಪಭ್ರಂಶವಾಗಿದೆ. ಈ ಕಾಕುತ್ಸ್ಥವರ್ಮನು ಗುಪ್ತರಾಜರಲ್ಲಿ ಪ್ರಸಿದ್ಧನಾದ ಸಮುದ್ರಗುಪ್ತನ (330-375) ಸಮಕಾಲದವನಾಗಿ ಅವನೊಡನೆ ವಿವಾಹ ಸಂಬಂಧವನ್ನು ಪಡೆದಿದ್ದಂತೆ ತಿಳಿಯುತ್ತದೆ. ಈ ವಿಷಯಗಳು ಕದಂಬರ ಸಂಬಂಧವನ್ನು ಸೂಚಿಸುತ್ತವೆ.

ಜೈನಸಂಘವು ಪುನ್ನಾಟ ರಾಷ್ಟ್ರಕ್ಕೆ ಪ್ರಯಾಣಮಾಡಿದಂತೆ ಹಿಂದೆ ತಿಳಿಸಿದೆ. ಈ ಪುನ್ನಾಟರಾಷ್ಟ್ರವು ಮೈಸೂರು ಸೀಮೆಯ ದಕ್ಷಿಣಭಾಗದಲ್ಲಿ ಇದ್ದಿತು. ಇದನ್ನು ರಾಷ್ಟ್ರವರ್ಮನೇ ಮೊದಲಾದ ರಾಜರು ಕೀರ್ತಿಪುರವೆಂಬ ರಾಜಧಾನಿಯಲ್ಲಿ ನೆಲಸಿ ಆಳಿದರು. ಇದಕ್ಕೆ ಕನ್ನಡ

1. ಈ ಶಾಸನವು ಸಂಸ್ಕೃತದಲ್ಲಿ ಬರೆದಿದೆ. ಇದನ್ನು ಬರೆದ ಕವಿಗೆ ಕುಬ್ಜ ಎಂದು ಹೆಸರು. ಇದರ ಆರಂಭದಲ್ಲಿ ಅಪೂರ್ವವಾದ ಛಂದಸ್ಸಿನಲ್ಲಿ ಬರೆದಿರುವ ೩೪ ಪದ್ಯಗಳಿವೆ. ಇವುಗಳ ಲಕ್ಷಣವು ಯಾವ ಛಂದೋಗ್ರಂಥದಲ್ಲಿಯೂ ಉಕ್ತವಾಗಿರುವಂತೆ ತೋರುವುದಿಲ್ಲ. ಉದಾಹರಣೆಗಾಗಿ ಒಂದು ಪದ್ಯವನ್ನು ಇಲ್ಲಿ ಬರೆಯುತ್ತೇನೆ:

ಜಯತಿ ವಿಶ್ವವೇದಸಂಘಾತಃ ಸಿದ್ಧಿತ್ರೈಕಮೂರ್ತಿಃ ಸನಾತನಃ |
ಸ್ಥಾಣುರಿಂದುರಶ್ಮಿವಿಚ್ಛುರಿತದ್ಯುತಿಮುಜ್ಜ್ವಲಾಭಾರಮಂಡನಃ ||

ದಲ್ಲಿ ಪುನ್ನಾಡು ಎಂದು ಹೆಸರು. ಕೀರ್ತಿಪುರವೆಂಬುದು ಈಗ ಹೆಗ್ಗಡ ದೇವನಕೋಟೆ ತಾಲ್ಲೂಕಿನಲ್ಲಿರುವ ಕಿತ್ತೂರು. ಎರಡನೆಯ ಶತಮಾನ ದಲ್ಲಿದ್ದ ಟಾಲಮಿ ಎಂಬವನು ಪುನ್ನಾಟರಾಷ್ಟ್ರದ ಹೆಸರನ್ನು ಪೌನ್ನಾತ ಎಂದು ಹೇಳಿ ಅದು ವೈಡೂರ್ಯ ರತ್ನಕ್ಕೆ (Beryl) ಹೆಸರುವಾಸಿಯನ್ನು ಹೊಂದಿದ್ದಿತು ಎಂದು ಬರೆದಿದ್ದಾನೆ.

ಮೈಸೂರುಸೀಮೆಗೆ ಮಹಿಷರಾಷ್ಟ್ರ ಅಥವಾ ಮೈಸನಾಡು ಎಂಬ ಹೆಸರು ಉಕ್ತವಾಗಿದೆ ಎಂದು ಹಿಂದೆ ಹೇಳಿದೆಯಷ್ಟೆ. ತಮಿಳು ಭಾಷೆಯಲ್ಲಿರುವ ಅಹನಾನೂರು ಎಂಬ ಕವಿಸೂಕ್ತಿಕದಂಬದಲ್ಲಿ ಸುಮಾರು 2ನೆಯ ಶತಮಾನದಲ್ಲಿದ್ದ ಮಾಮೂಲನಾರ್ ಎಂಬ ಕವಿಯ ಉಕ್ತಿಯಾದ 115 ನೆಯ ಪದ್ಯದಲ್ಲಿ ಎರುಮೈನಾಡು (ಎರುಮೈ_ಮಹಿಷ) ಎಂಬ ಹೆಸರನ್ನು ಹೇಳಿ ಇದು ಪಶ್ಚಿಮಪ್ರಾಂತದಲ್ಲಿ (ಕುಡನಾಡು) ಇದೆ ಎಂದೂ ಹೇಳಿದೆ. ನಕ್ಕೀರರ್ ಎಂಬ ಮತ್ತೊಬ್ಬ ಪುರಾತನಕವಿಯ ಉಕ್ತಿಯಾದ 36 ನೆಯ ಪದ್ಯದಲ್ಲಿ ನೆಡುಂಜೆಳಿಯನ್ ಎಂಬ ಪಾಂಡ್ಯರಾಜನು ತಲೈಯಾಲಂಕಾನಂ ಎಂಬ ಸ್ಥಳದಲ್ಲಿ ಚೇರನ್, ಚೋಳನ್, ತಿತಿಯನ್, ಎಳಿನಿ, ಎರುಮೈಯೂರನ್ (ಮಹಿಷಪುರದವನು) ಇರುಂಕೋವೇಣ್ಮಾನ್, ಪೊರುನನ್ ಎಂಬ ಏಳು ರಾಜರನ್ನೂ ಯುದ್ಧದಲ್ಲಿ ಸೋಲಿಸಿದಂತೆ ಹೇಳಿದೆ. ಅದೇ ಕವಿಯ ಉಕ್ತಿಯಾದ ೩೪೩ ನೆಯ ಪದ್ಯದಲ್ಲಿ ಮಹಿಷಪುರದವನು ಬಡಗರ ಕುಲದವನು ಎಂದು ಉಕ್ತವಾಗಿದೆ. ಶಿಲಪ್ಪದಿಕಾರಂ ಎಂಬ ಮತ್ತೊಂದು ತಮಿಳು ಗ್ರಂಥದಲ್ಲಿ ಸುಮಾರು 2 ನೆಯ ಶತಮಾನದಲ್ಲಿ ಶೆಂಗುಟ್ಟುವನ್ ಎಂಬ ಚೇರರಾಜನು ಉತ್ತರದಿಕ್ಕಿಗೆ ಹೋಗುವಾಗ ನೀಲಗಿರಿಯಲ್ಲಿ ತಂಗಿ ಕನ್ನಡರು ಆಡಿದ ಕುಣಿತವನ್ನು ನೋಡಿ ಸಂತೋಷಿಸಿದನು ಎಂದು ಹೇಳಿದೆ. ಈ ಅಂಶಗಳಿಂದ ಮೈಸೂರುದೇಶದ ಪ್ರಾಚೀನತೆ ವ್ಯಕ್ತವಾಗುತ್ತದೆ.

ಐದನೆಯ ಶತಮಾನದಲ್ಲಿದ್ದ ವರಾಹಮಿಹಿರನು ತನ್ನ ಬೃಹತ್ಸಂಹಿತೆಯಲ್ಲಿ ಕರ್ಣಾಟಕ ಎಂಬ ಹೆಸರನ್ನು ಹೇಳಿದ್ದಾನೆ. ಸುಮಾರು 900 ರಲ್ಲಿದ್ದ ರಾಜಶೇಖರನೆಂಬ ಸಂಸ್ಕೃತ ಕವಿ ತನ್ನ ಕಾವ್ಯಮೀಮಾಂಸೆ ಎಂಬ ಗ್ರಂಥದಲ್ಲಿ ಕರ್ಣಾಟರು ಹೆಮ್ಮೆಯಿಂದ ಟಂಕಾರದೊಡನೆ ಓದು

ತ್ತಾರೆ ಎಂದು ಅವರು ಓದುವ ರೀತಿಯನ್ನು ನಿರೂಪಿಸಿದ್ದಾನೆ.[1]

ಕನ್ನಡನಾಡಿನ ಮಹಿಮೆ

ಕನ್ನಡನಾಡು ಸಕಲಸುಖಗಳಿಗೂ, ಉತ್ತಮಗುಣಗಳಿಗೂ ನಿವಾಸಭೂಮಿಯಾಗಿದ್ದುದಲ್ಲದೆ, ಧರ್ಮಪರಾಯಣರಾದ ರಾಜರಿಂದಲೂ, ಪ್ರಸಿದ್ಧರಾದ ವಿದ್ವಾಂಸರಿಂದಲೂ, ಸಮರ್ಥರಾದ ರಾಜ್ಯತಂತ್ರಜ್ಞರಿಂದಲೂ, ಪ್ರಖ್ಯಾತರಾದ ತತ್ವದರ್ಶಿಗಳಿಂದಲೂ, ಭಕ್ತಶಿರೋಮಣಿಗಳಿಂದಲೂ, ಮಹಾಶೂರರಿಂದಲೂ, ಪ್ರಬಲರಾದ ವರ್ತಕರಿಂದಲೂ, ಕುಶಲರಾದ ಶಿಲ್ಪಿಗಳಿಂದಲೂ, ಸ್ವಾಮಿಭಕ್ತಿಶೋಭಿತರಾದ ಸೇವಕರಿಂದಲೂ, ಅಲಂಕೃತವಾಗಿದ್ದಿತು. ಕನ್ನಡನಾಡನ್ನೂ ಮೈಸೂರನ್ನೂ ಚಿಕ್ಕುಪಾಧ್ಯಾಯನು (1672) ಹೀಗೆ ವರ್ಣಿಸಿದ್ದಾನೆ—

ಗಾಡಿಯ ಸೀಮೆ ಚೆಲ್ವಿಂಗೆಡೆ ತಾಣಮಲಂಪಿನ ಸಂತೆ ಪೆಂಪು ಸಾ |
ರ್ದಾಡುವ ಭೂಮಿ ಸೌಖ್ಯದೆಡೆ ಪುಣ್ಯದ ಗೊತ್ತು ವಿನೋದದಾಗರಂ ||
ಮೋಡಿಯ ಮಂಟಪಂ ಸಿರಿಯ ಪೆರ್ಚುಗೆಗೊಳ್ಗನೆ ಮುಕ್ತಿಕಾಂತೆ ಕೈ |
ಗೂಡುವ ಬೀಡು ಕನ್ನಡದ ನಾಡು ವಿರಾಜಿಪುದೆಂತು ಬಣ್ಣಿಪೆಂ ||
ಬೀರದ ಮಂದಿರಂ ಬಿನಯದಂಗಡಿಯೊಳ್ಪಿನ ಸೋಪೆ ನಯ್ಯಶ್ರಿಂ |
ಗಾಗರಸಾಗರಂ ಚಪದ ಚಾವಡಿಯೋಜೆಯ ಬೀಡು ಭಾಗ್ಯದೊಂ ||
ದಾರವೆ ಸರ್ವಪುಣ್ಯದ ಶವರ್ಮನೆಯೈಸಿರಿಯಾಗರಂ ಮಹೀ |
ಶೂರಪುರಂ ವಿರಾಜಿಸಿತು ಭೂರಮಣೀಲಸದಂಘ್ರಿನೂಪುರಂ ||

ವಿಜ್ಞಾನೇಶ್ವರನು ತನ್ನ ಮಿತಾಕ್ಷರಾ ಎಂಬ ವ್ಯಾಖ್ಯಾನದಲ್ಲಿ ಕಲ್ಯಾಣಪುರಕ್ಕೂ ಅದರ ದೊರೆಯಾದ ತ್ರಿಭುವನಮಲ್ಲನೆಂಬ ವಿಕ್ರಮಾರ್ಕನಿಗೂ ಹೋಲಿಸಬಹುದಾದ ಪಟ್ಟಣವೂ ರಾಜನೂ ಭೂತಳದಲ್ಲಿಲ್ಲ ಎಂದು ಬರೆದಿದ್ದಾನೆ.[2]

---

1. ರಸಃ ಕೋಽಪ್ಯಸ್ತು ಕಾವ್ಯಸ್ತು ರೀತಿಃ ಕೋಽಪ್ಯಸ್ತು ವಾ ಗುಣಃ |
ಸಗರ್ವಂ ಸರ್ವಕರ್ಣಾಟಾಃ ಟಂಕಾರೋತ್ತರಪಾಠಿನಃ ||

2. ನಾಸೀದಸ್ತಿ ಭವಿಷ್ಯತಿ ಕ್ಷಿತಿತಲೇ ಕಲ್ಯಾಣಕಲ್ಪಂ ಪುರಂ|
ನೋ ದೃಷ್ಟಃ ಶ್ರುತ ಏವ ವಾ ಕ್ಷಿತಿಪತಿಃ ಶ್ರೀವಿಕ್ರಮಾರ್ಕೋಪಮಃ ||

ಈ ವರ್ಣನೆಗಳು ಬರಿಯ ಕವಿ ಕಲ್ಪನೆಯೆಂದು ಭಾವಿಸಲಾಗದು. ವಿದೇಶೀಯರು ಇಂಡಿಯಾದೇಶದ ರಾಜ್ಯಗಳನ್ನೂ ಪಟ್ಟಣಗಳನ್ನೂ ವರ್ಣಿಸಿ ಬರೆದಿರುವ ಗ್ರಂಥಗಳಿಂದ ಈ ವರ್ಣನೆಗಳು ಬಹಳ ಮಟ್ಟಿಗೆ ದೃಢೀಕೃತವಾಗುತ್ತವೆ.

ರಾಜರು—ಕನ್ನಡನಾಡಿನಲ್ಲಿ ಶ್ರೀಪುರುಷ, ನೃಪತುಂಗ, ತೈಲಪ, ತ್ರಿಭುವನಮಲ್ಲ ವಿಷ್ಣುವರ್ಧನ, ವೀರಬಲ್ಲಾಳ, ಬುಕ್ಕ, ಹರಿಹರ, ಕೃಷ್ಣದೇವರಾಯ, ರಾಜನೃಪ, ಕಂಠೀರವನರಸರಾಜ, ಚಿಕ್ಕದೇವರಾಜ, ಇವರೇ ಮೊದಲಾದ ಪರಾಕ್ರಮಶಾಲಿಗಳೂ, ವಿದ್ಯಾಪಕ್ಷಪಾತಿಗಳೂ, ಧರ್ಮನಿಷ್ಠರೂ ಆದ ದೊರೆಗಳು ರಾಜ್ಯಭಾರ ಮಾಡಿ ದಿಗಂತ ವಿಶ್ರಾಂತವಾದ ಕೀರ್ತಿಯನ್ನು ನೆಲೆಗೊಳಿಸಿದ್ದಾರೆ. ಇವರು ಭಿನ್ನ ಮತಸ್ಥರಾದರೂ ರಾಗದ್ವೇಷಗಳಿಲ್ಲದೆ ಅನ್ಯಮತಗಳನ್ನು ಸಮದೃಷ್ಟಿಯಿಂದ ಕಾಣುತ್ತ ಅವಕ್ಕೆ ಪ್ರೋತ್ಸಾಹವನ್ನು ಕೊಡುತ್ತಿದ್ದರು. ಬೇರೆ ಬೇರೆ ಮತಸ್ಥರಿಗೆ ಪರಸ್ಪರವೈಮನಸ್ಯವು ಹುಟ್ಟಿದಾಗ ಸಮಾಧಾನಪಡಿಸಿ ಸೌಹಾರ್ದವನ್ನುಂಟುಮಾಡುತ್ತಿದ್ದರು. ಗುಣಗ್ರಾಹಿಗಳಾಗಿ ಗುಣವಿಶಿಷ್ಟರಿಗೆ ತಕ್ಕ ಮನ್ನಣೆಯನ್ನು ಮಾಡಿ ಗೌರವಿಸುತ್ತಿದ್ದರು.

ವಿದ್ವಾಂಸರು ಇತ್ಯಾದಿ—ಕನ್ನಡನಾಡು ದ್ವೈತಮತೋದ್ಧಾರಕ ಮಧ್ವ ಗುರುವಿಗೆ ತವರುಮನೆ; ಅದ್ವೈತಮತೋದ್ಧಾರಕ ಶಂಕರ ಗುರುವಿಗೂ, ವಿಶಿಷ್ಟಾದ್ವೈತ ಮತೋದ್ಧಾರಕ ರಾಮಾನುಜ ಗುರುವಿಗೂ ಆಶ್ರಯಸ್ಥಾನ. ವೀರಶೈವಮತೋದ್ಧಾರಕ ಬಸವೇಶ್ವರನಿಗೂ ಇದೇ ತವರುಮನೆ. ಇವರುಗಳಿಂದ ಸ್ಥಾಪಿತವಾದ ಮಠಗಳೂ, ಶಾಖಾಮಠಗಳೂ ಇಲ್ಲಿ ಈಗಲೂ ಶೋಭಿಸುತ್ತಿರುವುವು ಅಲ್ಲದೆ ಈ ನಾಡು ವಿದ್ಯಾತೀರ್ಥ, ವಿದ್ಯಾರಣ್ಯ, ಸಾಯಣಾಚಾರ್ಯ, ಶ್ರೀಪಾದರಾಯ, ವ್ಯಾಸರಾಯ, ರಾಘವೇಂದ್ರಯತಿ, ಅನಂತಾಚಾರ್ಯ, ವೇದಾಂತಾಚಾರ್ಯ, ಪುರಂದರದಾಸ, ಕನಕದಾಸ, ಸಿದ್ಧರಾಮ, ತೋಂಟದ ಸಿದ್ಧಲಿಂಗ, ನೇಮಿಚಂದ್ರ, ಶುಭಚಂದ್ರ ಇವರೇ ಮುಂತಾದ ವಿದ್ವದ್ವರ್ಯರಿಂದಲೂ, ತಪೋಧನರಿಂದಲೂ, ತತ್ವದರ್ಶಿಗಳಿಂದಲೂ, ಭಕ್ತಶಿರೋಮಣಿಗಳಿಂದಲೂ, ಹೆಸರುವಾಸಿಯನ್ನು ಹೊಂದಿದ್ದಿತು.

ಶೂರರು—ಎಲಲ ಎಂಬ ಚೋಳನು ಮೈಸೂರು ಸೇನೆಯ ಸಹಾಯದಿಂದ ಲಂಕೆಯನ್ನು ಕ್ರಿ. ಪೂ. 205 ರಲ್ಲಿ ಜಯಿಸಿದಂತೆ ಸಿಂಹಳದ್ವೀಪದ ಚರಿತ್ರೆಯಲ್ಲಿ ಹೇಳಿದೆ[1]. ರಾಷ್ಟ್ರಕೂಟರಾಜನಾದ ದಂತಿದುರ್ಗನ ಒಂದು ಶಾಸನದಲ್ಲಿ ಕರ್ಣಾಟಕಸೇನೆ ಕಾಂಚಿಯ ದೊರೆ, ಕೇರಳರಾಜ ಚೋಳ, ಪಾಂಡ್ಯ ಮುಂತಾದವರನ್ನು ಸೋಲಿಸುವುದರಲ್ಲಿ ಸಮರ್ಥವಾದುದು ಎಂದು ಹೇಳಿದೆ.[2]

ವರ್ತಕರು—ಚಿತ್ರದುರ್ಗದಲ್ಲಿ ಆಂಧ್ರಭೃತ್ಯರ ಸೀಸದ ನಾಣ್ಯಗಳು ದೊರೆತುವೆಂದು ಹಿಂದೆ ತಿಳಿಸಿದ್ದೇನೆ. ಅದೇ ಸ್ಥಳದಲ್ಲಿ ಕ್ರಿಸ್ತಪೂರ್ವ 2ನೆಯ ಶತಮಾನದಲ್ಲಿದ್ದ ಹರ್ವುತಿ ಎಂಬ ಚೀನದೇಶದ ಚಕ್ರವರ್ತಿಯ ಹಿತ್ತಾಳೆಯ ನಾಣ್ಯವೂ ಕ್ರಿಸ್ತಶಕ 14 ರಲ್ಲಿ ಗತಿಸಿದ ಅಗಸ್ಟಸ್ ಎಂಬ ರೋಮ್ ಚಕ್ರವರ್ತಿಯ ಡಿನೇರಿಯಸ್ ಎಂಬ ಬೆಳ್ಳಿಯ ನಾಣ್ಯವೂ ದೊರೆತಿರುವುದರಿಂದ ಪೂರ್ವಕಾಲದಲ್ಲಿ ಕನ್ನಡನಾಡಿನ ವಾಣಿಜ್ಯಕ್ಕೆ ಎಷ್ಟರಮಟ್ಟಿಗೆ ವ್ಯಾಪ್ತಿಯಿದ್ದಿತು ಎಂಬಂಶವನ್ನು ಸ್ವಲ್ಪಮಟ್ಟಿಗೆ ಊಹಿಸಬಹುದಾಗಿದೆ. ಪ್ರಬಲರಾದ ವರ್ತಕರಿಗೆ ವಡ್ಡವ್ಯವಹಾರಿ, ರಾಜಶ್ರೇಷ್ಠಿ ಎಂಬ ಹೆಸರುಗಳು ಶಾಸನಗಳಲ್ಲಿಯೂ ಗ್ರಂಥಗಳಲ್ಲಿಯೂ ಹೇಳಿವೆ. ಸುಮಾರು 1120 ರಲ್ಲಿ ಹೊಯ್ಸಳಸೆಟ್ಟಿ, ನೇಮಿಸೆಟ್ಟಿ ಎಂಬ ವರ್ತಕರು ಹೊಯ್ಸಳರಾಜನಾದ ವಿಷ್ಣುವರ್ಧನನ ರಾಜಶ್ರೇಷ್ಠಿಗಳಾಗಿದ್ದಂತೆಯೂ, 1188 ರಲ್ಲಿ ಚೆಟ್ಟಪಸೆಟ್ಟಿ ಎಂಬವನು ಇಂದ್ರನ ಉಚ್ಚೈಶ್ರವಸ್ಸಿಗೆ ಸಮನಾದ ಕುದುರೆಗಳನ್ನೂ ಐರಾವತಕ್ಕೆ ಸದೃಶವಾದ ಆನೆಗಳನ್ನೂ ಶ್ರೇಷ್ಠವಾದ ಮುತ್ತುಗಳನ್ನೂ ಹಡಗುಗಳಲ್ಲಿ ತಂದು ದೊರೆಗಳಿಗೆ ಮಾರುತ್ತಿದ್ದಂತೆಯೂ ಅದೇ ಕಾಲದಲ್ಲಿ ದಾಸೆಯನೆಂಬ ವರ್ತಕನು ಪೂರ್ವದೇಶದ ವಸ್ತುಗಳನ್ನು ಪಶ್ಚಿಮದೇಶಕ್ಕೂ ಪಶ್ಚಿಮದೇಶದ ವಸ್ತುಗಳನ್ನು ಪೂರ್ವದೇಶಕ್ಕೂ ಉತ್ತರದೇಶದ ಭಂಡಗಳನ್ನು ದಕ್ಷಿಣದೇಶಕ್ಕೂ ದಕ್ಷಿಣದೇ

---

1 *The Lost Cities Of Ceylon* page 26.

2 ಕಾಂಚೀಶಕೇರಳನರಾಧಿಪಪಾಂಡ್ಯಚೋಳಶ್ರೀಹರ್ಷವಜ್ರಟವಿಭೇದವಿಧಾನದಕ್ಷಂ | ಕರ್ಣಾಟಕಂ ಬಲಂ. *Indian Antiquary XI*, 114.

ಕದ ಭಂಡಗಳನ್ನು ಉತ್ತರದೇಶಕ್ಕೂ ಕಳುಹಿಸುತ್ತಿದಂತೆಯೂ, 1255 ರಲ್ಲಿ ಕುಂಜಸಂಬಿಸೆಟ್ಟಿ ಎಂಬವನು ಮಾಳವ, ಕಳಿಂಗ, ಚೋಳ, ಪಾಂಡ್ಯ ಈ ರಾಜರುಗಳ ಸಮಯಕ್ಕೆ ಬೇಕಾದ ವಸ್ತುಗಳನ್ನು ಒದಗಿಸಿಕೊಡುತ್ತ ಹೊಯ್ಸಳರಾಜ್ಯದಲ್ಲಿ ಕೀರ್ತಿಯನ್ನು ಪಡೆದಿದ್ದಂತೆಯೂ ಕೆಳಗಣ ಶಾಸನಪದ್ಯಗಳಿಂದ ತಿಳಿಯುತ್ತದೆ—

ಧರಣೀಪಾಳಕನಪ್ಪ ಪೊಯ್ಸಳನರಾಜಶ್ರೇಷ್ಠಿಗಳ್ ತಮ್ಮುತಿ ।
ಬಳರೆನಲ್ ಪೊಯ್ಸಳಸೆಟ್ಟಿಯುಂ ಗುಣಾಗಣಾಂಭೋರಾಶಿಯೆಂಬೊಂದು ಸುಂ ॥
ದರಗಂಭೀರದ ನೇಮಿಸೆಟ್ಟಿಯುಮಿವರ್ ಶ್ರೀಜೈನಧರ್ಮಕ್ಕೆ ತಾ ।
ಯ್ಗರೆಗಳ್ ತಾಮೆನೆ ಸಂದ ಪೆಂಪಸವಳಂ ಪವಿತ್ತು ಭೂಭಾಗದೊಳ್[1] ॥
ಹರಿಯ ಹಯಕ್ಕೆ ತೋಡೆನಿಪ ಪೇಷಜಯಂಗಳನಿಂದ್ರದಂತಿಯೊಳ್ ।
ದೊರೆಯೆನಿಸಿಪ್ಪ ದಂತಿಗಳನಭ್ರದೊಳಾದ ಸುಪಾಣಿಮುತ್ತಿನೊಳ್ ॥
ಸರಿಯೆನಿಸಿಪ್ಪ ಮುತ್ತುಗಳನೆಯ್ದೆ ಬಹಿತ್ರದೆ ತಂದು ಮಾಣಿಸಂ ।
ಧರಣಿಪಗೊಲ್ದು ಕಮ್ಮಟದ...ಚೆಟ್ಟಿಪಸೆಟ್ಟಿ ಸಂತತಂ ॥
ಹರಿದಾಶಾಭಾಂಡಮುಂ ವಾರುಣಿಗೆ ನಡಸುವಂ ವಾರುಣೀವಸ್ತುವಂ ವಿ ।
ಸ್ತರದಿಂದಿಂದ್ರಾಶಿಯೊಳ್ ಪೆರ್ಚಿಸುವನೊಸೆದು ಕೌಬೇರಿಯಿಂ ದ್ಯುಮ್ನಮ ಂನೋ ॥
ಡಿರೆ ಯಾಮ್ಯಾಭಾಗದೊಳ್ ಸಂದಿಸುವನೆಸೆವ ಮಾಲ್ಯಂಗಳಂ ಯಾಮ್ಯದಿಂದು ।
ತ್ತರದಿಕ್ಕಿಂಗಟ್ಟುವಂ ನೋಡನುಪಮವಣಿಜಂ ದಾಸಿಯಂ ದೋಷದೂರಂ[2] ॥
ಬೀರನ ಮಾಳವೇಂದ್ರನ ಕಳಿಂಗನ ಚೋಳನ ಪಾಂಡ್ಯಭೂಭುಜಾ ।
ಧಾರನ ಮುಟ್ಟಿದೊಂದವಸರಂಗಳನಾಗಳೆ ಪೂಣ್ದುಮಾಳ್ಪ ಪ ॥
ಸ್ತಾರದ ಪುಣ್ಯಸಂಪದದಿನೊಪ್ಪುವ ಸೆಟ್ಟಿಗೆ ಕುಂಜಸಂಬಿಗಿ ।
ನ್ನಾರೆಣೆಯೆಂಬಿನಂ ನೆಗಳ್ದನಗ್ಗದ ಹೊಯ್ಸಳರಾಯರಾಜ್ಯದೊಳ್[3] ॥

ಶಿಲ್ಪಿಗಳು—ವಾಸ್ತುವಿದ್ಯಾವಿಶಾರದರಾದ ಶಿಲ್ಪಿಗಳು ಎಲ್ಲೋರ, ಇಟ್ಟಗಿ, ಬೇಲೂರು, ಹಳೆಯಬೀಡು, ಸೋಮನಾಥಪುರ, ನಂದಿ, ಶೃಂಗೇರಿ, ಶ್ರವಣಬೆಳುಗೊಳ, ಹಂಪೆ ಮೊದಲಾದ ಸ್ಥಳಗಳಲ್ಲಿ ನಿರ್ಮಿಸಿರುವ

1. ಶ್ರವಣಬೆಳುಗೊಳದ ಶಾಸನ ನಂಬರು 137 (ಹೊಸಮುದ್ರಣ)
2. ಅರಸೀಕೆರೆ 22. 3. ಅರಸೀಕೆರೆ 108

ದೇವಾಲಯಗಳೂ ಕೆತ್ತಿರುವ ವಿಗ್ರಹಗಳೂ ವಿದೇಶೀಯರಾದ ಶಿಲ್ಪಶಾಸ್ತ್ರಜ್ಞರನ್ನು ಆಶ್ಚರ್ಯರಸದಲ್ಲಿ ಮುಳುಗಿಸಿವೆ. ಈ ಶಿಲ್ಪಿಗಳಲ್ಲಿ ಹಲವರು ತಾವು ಕೆತ್ತಿದ ವಿಗ್ರಹಗಳ ಬುಡದಲ್ಲಿ ತಮ್ಮ ಹೆಸರುಗಳನ್ನು ಬರೆದುಕೊಂಡಿದ್ದಾರೆ; ಈ ಪದ್ಧತಿ ಮೈಸೂರು ದೇಶದಲ್ಲಿ ಮಾತ್ರ ಇದ್ದಂತೆ ತಿಳಿಯುತ್ತದೆ. ಶೃಂಗೇರಿಯಲ್ಲಿ ಸುಮಾರು 1357 ರಲ್ಲಿ ಕಟ್ಟಿದ ವಿದ್ಯಾಶಂಕರ ದೇವಸ್ಥಾನವೆಂಬ ಒಂದು ಕಟ್ಟಡದ ವೈಚಿತ್ರ್ಯವನ್ನು ಮಾತ್ರ ಸ್ವಲ್ಪಮಟ್ಟಿಗೆ ಸೂಚಿಸುತ್ತೇನೆ. ಇದರ ಸಂವಿಧಾನದಂತಹ ಸಂವಿಧಾನವು (plan) ಭರತವರ್ಷದಲ್ಲಿ ಎಲ್ಲಿಯೂ ಇಲ್ಲ. ಈ ಕಟ್ಟಡವು ಸೌತೆಯಕಾಯಂತೆ ಎರಡುತುದಿಗಳಲ್ಲಿಯೂ ವರ್ತುಲವಾಗಿದೆ (apsidal at both ends). ಇಂತಹ ಕಟ್ಟಡಕ್ಕೆ ಬಸಿಲಿಕಾ (Basilica) ಎಂದು ಸಂಜ್ಞೆ; ಇದನ್ನು ನೋಡಬೇಕಾದರೆ ರೋಂ ಪಟ್ಟಣಕ್ಕೆ ಹೋಗಬೇಕು ಭರತವರ್ಷದಲ್ಲಿ ಎಲ್ಲಿಯೂ ದೃಗ್ಗೋಚರವಾಗದ ಇಂತಹ ಸಂವಿಧಾನವನ್ನು ಏರ್ಪಡಿಸಿ ಈ ಕಟ್ಟಡವನ್ನು ಕಟ್ಟಿದ ಶಿಲ್ಪಿಗಳ ಚಾತುರ್ಯವು ಸ್ತೋತ್ರಾರ್ಹವಾಗಿದೆ. ಅಲ್ಲದೆ ಈ ದೇವಸ್ಥಾನದ ನವರಂಗದಲ್ಲಿ ಮೇಷಾದಿದ್ವಾದಶರಾಶಿ ಚಿಹ್ನೆಗಳಿಂದ ಅಂಕಿತವಾಗಿರುವ 12 ಕಂಭಗಳನ್ನು ಆ ಆ ಚಿಹ್ನೆಕ್ಕನುಗುಣವಾಗಿ ಆ ಆ ಕಂಭದಮೇಲೆ ಆ ಆ ತಿಂಗಳಲ್ಲಿ ಸೂರ್ಯರಶ್ಮಿ ಬೀಳುವಂತೆ ನಿಲ್ಲಿಸಿರುವ ಶಿಲ್ಪಿಕೌಶಲವು ಯಾರಿಗೆ ತಾನೆ ಆಶ್ಚರ್ಯವನ್ನುಂಟುಮಾಡದು ?

ಸ್ವಾಮಿಭಕ್ತರು: ಸ್ವಾಮಿಯೇ ದೇವರೆಂದು ಭಾವಿಸಿ ಅವನಿಗೋಸ್ಕರ ತಮ್ಮ ಪ್ರಾಣವನ್ನು ಕೂಡ ಉತ್ಸಾಹದೊಡನೆ ಒಪ್ಪಿಸಿ ಸ್ವಾಮಿಭಕ್ತಿಯ ಪರಾಕಾಷ್ಠೆಯನ್ನು ತೋರಿಸಿದ ಅನೇಕಪುರುಷರೂ ಸ್ತ್ರೀಯರೂ ಈ ನಾಡನ್ನು ಅಲಂಕರಿಸಿದ್ದರು. ಈ ವಿಷಯಕ್ಕೆ ಒಂದೆರಡು ಉದಾಹರಣೆಗಳನ್ನು ಕೊಡುತ್ತೇನೆ. ತನ್ನ ಸ್ವಾಮಿಯಾದ ವೀರಬಲ್ಲಾಳನು 1220 ರಲ್ಲಿ ಸಾಯಲು ಸ್ವಾಮಿಯ ಮರಣಾನಂತರ ಬದುಕಿರುವುದು ನಾಚಿಕೆಗೇಡೆಂದು ಭಾವಿಸಿ ತನ್ನ ಸತಿಯೊಡನೆಯೂ ತನ್ನ ಕೈಯಕೆಳಗಿದ್ದ ಸಾವಿರಜನ ವೀರರೊಡನೆಯೂ ಮೃತಿಯನ್ನು ಹೊಂದಿದ ಕುವರಲಕ್ಷ್ಮನ ಪ್ರಭಾವವು ಕೆಳಗಣ ಪದ್ಯಗಳಲ್ಲಿ ಹೇಳಿದೆ—

ಗುರುವುಂ ದೈವಮುಮಾಳ್ದನೆ । ಪರತ್ರೆಗಂ ತನಗಿಹತ್ರೆಗಂ ಪೆಱನೊರ್ವಂ ।

ಗುರುವಿಲ್ಲ ದೈವಮಿಲ್ಲೆನೆ ! ಧರೆಗೆಸೆವಂ ಕುವರಲಕ್ಷ್ಮ ದಂಡಾಧೀಶಂ ||
ಧನಮುಂ ಪ್ರಾಣಮುಮೆಂಬಿವಂ ಕುವರಲಕ್ಷ್ಮಂ ಪೇರುಬಾಳ್ವವೇ |
ವನ ದಾನೋನ್ನತಿಗಂ ಜಯೋನ್ನತಿಗವಿನಾಭರ್ ಪೂರ್ವ್ದು ಮುಂದಿಟ್ಟ ರಾ||
ಮನ ಬೀಡಿಂಗಣುವಂ ಯಮಾತ್ಮಜನ ಬೀಡಿಂಗರ್ಜುನಂ ಚಂದ್ರಜಾ |
ಟನ ಬೀಡಿಂಗೆ ಕುಮಾರನಿರ್ದ ತೆಱದಿಂದಿರ್ದಪ್ಪನೇಂ ಧೀರನೋ ||
ತನ್ನೊಡನೆ ತೊಱೆದ ಸುಭಟರ | ತನ್ನ ಮನಃಪ್ರಿಯೆಯ ತನ್ನ ಪರಮಾಯುಷ್ಯಂ |
ತನ್ನಾಳ್ದಂಗಾಯ್ತೆನಿಸಿದ | ನೇನ್ನೆಟ್ಟನೆ ಕಲಿಯೊ ಕುವರಲಕ್ಷ್ಮ ಚಮೂಪಂ[1] ||

ಸುಮಾರು 1218 ರಲ್ಲಿ ತನ್ನ ಸ್ವಾಮಿನಿಯಾದ ಹೊಯ್ಸಳರಾಯ ಕೀರ್ತಿ ಸುಮುಲು ಹೊನ್ನಿ ಎಂಬವಳು ತನ್ನ ತಲೆಯನ್ನು ಕೊಟ್ಟು ಸುರ ಲೋಕವನ್ನೈದಿದಳು ಎಂದು ಒಂದು ಶಾಸನದಲ್ಲಿ[2] ಉಕ್ತವಾಗಿದೆ. 1291 ರಲ್ಲಿ ಬರೆದ ಮತ್ತೊಂದು ಶಾಸನದಲ್ಲಿ[3] ಹೊಯ್ಸಳರಾಜಪರಂಪರೆಗೆ ಸೇರಿದ ಬಿಟ್ಟಿಬ್ಬ ದೊರೆಯೂ ಸತ್ತಾಗ ಕನ್ನಡಿಗನೊನೆಯರಾಳುಗಳು ಎಂದು ಪ್ರಸಿದ್ಧಿಯನ್ನು ಪಡೆದಿದ್ದ ಆ ದೊರೆಗಳ ಸೇನಾಪತಿಗಳ ವಂಶದಲ್ಲಿ ಬಿಟ್ಟಿಬ್ಬನು ತನ್ನ ಸತಿಯರೊಡನೆಯೂ ಸೇವಕಸೇವಕಿಯರೊಡ ನೆಯೂ ಸತ್ತಂತೆ ಹೇಳಿದೆ.

## ಕನ್ನಡನುಡಿಯ ಪ್ರಾಚೀನತೆ

ಕೆಳಗಣ ಈಜಿಪ್ಟಿನಲ್ಲಿ ದೊರೆತ ಕ್ರಿಸ್ತುಶಕ ೨ನೆಯ ಶತಮಾನದಲ್ಲಿ ರಚಿತವಾದ ಒಂದು ಗ್ರೀಕ್ ನಾಟಕವಲ್ಲಿ ಕೆಲವು ಕನ್ನಡ ಶಬ್ದಗಳು ದೊ ರೆಯುತ್ತವೆ ಎಂಬ ಅಂಶವು ಪ್ರಥಮಸಂಪುಟದ ಅವತರಣಿಕೆಯಲ್ಲಿಯೇ ತಿಳಿಸಿದೆ. ನೃಪತುಂಗನು ತನ್ನ ಕವಿರಾಜಮಾರ್ಗದಲ್ಲಿ ತನಗೆ ಹಿಂದೆ ಇದ್ದ ಗದ್ಯಗ್ರಂಥಕರ್ತೃಗಳಲ್ಲಿ ದುರ್ವಿನೀತನ ಹೆಸರನ್ನು ಹೇಳಿದ್ದಾನೆ. ಈತನು ಸುಮಾರು 500 ರಲ್ಲಿದ್ದ ಆ ಹೆಸರಿನ ಗಂಗರಾಜನಾಗಿರಬಹುದು. ಐದನೆಯ ಶತಮಾನದಿಂದ ಕನ್ನಡಶಾಸನಗಳು ದೊರೆಯುತ್ತವೆ. ನೃಪ ತುಂಗನು ಹೇಳುವ ಕವಿಗಳಲ್ಲದೆ ಶ್ರೀವರ್ಧದೇವ, ಶ್ಯಾಮಕುಂದಾ ಚಾರ್ಯ ಇವರುಗಳು ಸುಮಾರು 700ಕ್ಕೆ ಹಿಂದೆ ಗ್ರಂಥರಚನೆಯನ್ನು ಮಾ

---

1. ಬೇಲೂರು 112. 2. ಮೊಳಕಾಲುಮುರು 12. 3. ಕೃಷ್ಣರಾಜ ಪೇಟೆ 10.

ಡಿರುವಂತೆ ತೋರುತ್ತದೆ. ಹನ್ನೊಂದನೆಯ ಶತಮಾನಕ್ಕೆ ಹಿಂದೆ ಇದ್ದ ಅಮೃತಸಾಗರನೆಂಬ ಕವಿಯಿಂದ ರಚಿತವಾದ ಯಾಪ್ಪರುಂಗಲಕ್ಕಾರಿಹೈ ಎಂಬ ತಮಿಳು ಛಂದೋಗ್ರಂಥದಿಂದ ಕನ್ನಡದಲ್ಲಿ ಗುಣಗಾಂಕಿಯಂ ಎಂಬ ಒಂದು ಛಂದೋಗ್ರಂಥವು ಇದ್ದಂತೆಯೂ ಅದರಲ್ಲಿ ಕವಿ ತನ್ನ ವಿನಯವನ್ನು ಸೂಚಿಸಿರುವುದಲ್ಲದೆ ಒಬ್ಬ ಸ್ತ್ರೀಯನ್ನು ಸಂಬೋಧಿಸಿ ಗ್ರಂಥವನ್ನು ಬರೆದಿರುವಂತೆಯೂ ಇದೇ ರೀತಿಯನ್ನು ತಮಿಳು ಗ್ರಂಥಕಾರನೂ ಅನುಸರಿಸಿರುವಂತೆಯೂ ತಿಳಿಯುತ್ತದೆ. 1 ಕನ್ನಡ ಗ್ರಂಥವನ್ನು ಬರೆದ ಕವಿಯ ಹೆಸರು ಹೇಳಿಲ್ಲ. ಅವನು ತನ್ನ ಗ್ರಂಥವನ್ನು ಗುಣಗ, ಗುಣಗಾಂಕ, ಗುಣಕೆನಲ್ಲ ಎಂಬ ವಿಶೇಷಣಗಳುಳ್ಳ 3ನೆಯ ವಿಜಯಾದಿತ್ಯನೆಂಬ (844-888) ಮೂಡಣಚಾಲುಕ್ಯರಾಜನಿಗೆ ಅಂಕಿತಮಾಡಿರುವಂತೆ ತೋರುತ್ತದೆ. ಈ ಗ್ರಂಥವು ನಮಗೆ ದೊರೆತಿಲ್ಲ.

ಕನ್ನಡನುಡಿಯ ವೈಲಕ್ಷಣ್ಯವನ್ನು ಸೂಚಿಸುವ ಕೆಲವು ವಿನೋದಕರವಾದ ಪದ್ಯಗಳನ್ನು ಕೆಳಗೆ ಬರೆಯುತ್ತೇನೆ—

ಎತ್ತಂ ಹೇಱೆಂಬರ್ ಪೇ | ಱೆತ್ತೆಂಬರ್ ಕಲ್ಲುಮಸ್ಕೊಳಿಕ್ಕಿದ ಕೋಟೆಯ |
ಮುತ್ತೆಂಬರ್ ಮರನೊಂದಂ | ಹತ್ತೆಂಬರ್ ನೋಡ ಕನ್ನಡಂ ವಿಸ್ಮಯದಂ ||
ಹುರಿಯೋಡ ಸಿರಿವಂತಿಗೆಯೆಂದೆಂಬುದು | ನರನ ಪಾರುವನೇದೆಂಬುದು |
ಮರಗೆತ್ತುವನನೋಜನೆಂದೆಂಬುದೇನ | ಚ್ಚರಿ ರಂಗ ಕನ್ನಡದೊಳ್ಪು ||
ಸರಸನನರಸನೆಂಬುದು ಪೂರ್ಣಗೃಹವನು | ಅರಮನೆಯೆಂದುಸಿರುವುದು |
ನರಪಕುಮಾರನನರಮಗನೆಂಬುದೇ | ನೊರೆ ರಂಗ ಕನ್ನಡದೊಳ್ಪು2 ||

ಕನ್ನಡನುಡಿಗೆ ಪ್ರೋತ್ಸಾಹ.

ಕನ್ನಡನುಡಿ ಪೂರ್ವದಿಂದಲೂ ರಾಜರುಗಳ ಮತ್ತು ಮಂಡಲಿಕರ ಪ್ರೋತ್ಸಾಹದಿಂದ ಏಳಿಗೆಯನ್ನು ಹೊಂದಿರುತ್ತದೆ. ಗಂಗರು, ರಾಷ್ಟ್ರಕೂಟರು, ಚಾಲುಕ್ಯರು, ಕಾಕತೀಯರು, ಹೊಯ್ಸಳರು, ಮೂಡಣಚಾ

1. ಗುಣಗಾಂಕಿಯಮೆನ್ನುಂ ಕರುನಾಟಕಚ್ಚಂದಮೇ ಪೋಲ್ ಮಹಡಾಮನ್ನಿಲೈಯುಡೈತ್ತಾಯ್ ಅವ್ವೈಯಡಕ್ಕಮುಡೈತ್ತಾಯ್.

2. ಕೊನೆಯ ಎರಡು ಪದ್ಯಗಳು ಚಿಕ್ಕುಪಾಧ್ಯಾಯನಿಂದ (1672) ರಚಿತವಾದುವು.

ಲುಕ್ಯರು, ಸೌಂದತ್ತಿಯ ರಟ್ಟರು, ಕರಹಾಟದ ಶಿಲಾಹಾರರು, ಕೊಂಗಾಳ್ವರು, ಚೆಂಗಾಳ್ವರು, ತುಳುವದೇಶದ ಅರಸರು, ಚಾಟರು, ವಿಜಯನಗರದ ಅರಸರು, ಮೈಸೂರರಸರು; ಉಮ್ಮತ್ತೂರು, ಸುಗ್ಗಹಳ್ಳಿ, ಸುಗಟೂರು, ಪಿರಿಯಪಟ್ಟಣ, ಹದಿನಾಡು, ಬೇಲೂರು, ಚಿಕ್ಕನಾಯಕನಹಳ್ಳಿ, ಮುದಿಗೆರೆ, ಬಿಜ್ಜವರ, ಇಕ್ಕೇರಿ, ಕಳಲೆ ಈ ಸ್ಥಳಗಳ ಪಾಳೆಯಗಾರರು; ಇವರುಗಳಲ್ಲಿ ಕೆಲವರು ಸ್ವತಃ ಕವಿಗಳಾಗಿಯೂ ಹಲವರು ಕವಿಪೋಷಕರಾಗಿಯೂ ಇದ್ದರು. ಈ ಪ್ರಭುಗಳು ಮಾತ್ರವಲ್ಲದೆ ಇವರ ಕೈಯ ಕೆಳಗೆ ಇದ್ದ ಮಂತ್ರಿಗಳು, ದಂಡನಾಯಕರು, ಪಸಾಯಿತರು ಮುಂತಾದ ಅಧಿಕಾರಿಗಳಲ್ಲಿಯೂ ಚಿಕ್ಕ ಚಿಕ್ಕ ಪಾಳೆಯ ಪಟ್ಟುಗಳ ವಿಭುಗಳಲ್ಲಿಯೂ ಕೆಲವರು ಕವಿಗಳಾಗಿಯೂ ಹಲವರು ಕವಿಪೋಷಕರಾಗಿಯೂ ಇದ್ದರು. ಈ ವಿಷಯವನ್ನು ಉದಾಹರಣೆಗಳೊಡನೆ ಸ್ವಲ್ಪ ಮಟ್ಟಿಗೆ ಕೆಳಗೆ ವಿವರಿಸುತ್ತೇನೆ —

ಗಂಗರು — ಈ ರಾಜರಲ್ಲಿ ಸುಮಾರು 500 ರಲ್ಲಿದ್ದ ದುರ್ವಿನೀತನು ನೃಪತುಂಗನ ಹೇಳಿಕೆಯ ಪ್ರಕಾರ ಕನ್ನಡದಲ್ಲಿ ಗದ್ಯಗ್ರಂಥಕಾರನಾಗಿದ್ದಿರಬಹುದು ಶಿವಮಾರನು (780-814) ಬರೆದ ಗಜಾಷ್ಟಕವು "ಒನಕೆವಾಡಾದುದು[1]" ಎಂಬ ಒಂದು ಶಾಸನದಿಂದ[2] ತಿಳಿವುದರಿಂದ ಇದು ಕನ್ನಡಗ್ರಂಥವಾಗಿರಬೇಕು. ಮಹೇಂದ್ರಾಂತಕ ಎಂಬ ಬಿರುದುಳ್ಳ ಎರೆಯಪ್ಪನು (886-913) ಶೂದ್ರಕ, ಹರಿವಂಶ ಮೊದಲಾದ ಗ್ರಂಥಗಳನ್ನು ಬರೆದ 1ನೆಯ ಗುಣವರ್ಮನಿಗೆ ಪೋಷಕನಾಗಿದ್ದನು. ರಾಚಮಲ್ಲನ ಮಂತ್ರಿಯಾದ ಚಾವುಂಡರಾಯನು 978 ರಲ್ಲಿ ಚಾವುಂಡರಾಯಪುರಾಣವನ್ನು ಬರೆದನು ಈ ರಾಜನ ತಮ್ಮನಾದ ರಕ್ಕಸಗಂಗನ ಆಶ್ರಿತನಾಗಿದ್ದ ನಾಗವರ್ಮನು ಛಂದೋಂಬುಧಿ ಮೊದಲಾದ ಗ್ರಂಥಗಳನ್ನು ರಚಿಸಿದನು.

ರಾಷ್ಟ್ರಕೂಟರು — ಈ ದೊರೆಗಳಲ್ಲಿ ನೃಪತುಂಗನು ಕವಿಯಾಗಿದ್ದ ಸಂಗತಿ ತಿಳಿದೇ ಇದೆ. ಮೂರನೆಯ ಇಂದ್ರರಾಜನ (915-917) ಕೈಯ ಕೆಳಗಿದ್ದ ಶ್ರೀ ವಿಜಯದಂಡನಾಥನಿಗೆ ಒಂದು ಶಾಸನದಲ್ಲಿ[3] ಅನು

1. ಹೆಂಗಸರು ಧಾನ್ಯವನ್ನು ಕುಟ್ಟುವಾಗ ಹೇಳುವ ಹಾಡು. 2. ನಗರ 35. 3. *Epigraphia Indica*, X, 150.

ಪಮುಕವಿ ಎಂಬ ಬಿರುದು ಹೇಳಿವೆ. ಮೂರನೆಯ ಕೃಷ್ಣರಾಜನು (939-968) ಪೊನ್ನನಿಗೆ ಕವಿಚಕ್ರವರ್ತಿ ಎಂಬ ಬಿರುದನ್ನು ಕೊಟ್ಟನು.

ಚಾಲುಕ್ಯರು—ಈ ವಂಶಕ್ಕೆ ಸೇರಿದ ಅರಿಕೇಸರಿ ಎಂಬ ಸಾಮಂತ ರಾಜನು ಆದಿಪಂಪನಿಗೆ ಪೋಷಕನಾಗಿದ್ದನು. ತೈಲಪನು (973-987) ರನ್ನನಿಗೆ ಕವಿಚಕ್ರವರ್ತಿ ಎಂಬ ಬಿರುದನ್ನು ಕೊಟ್ಟನು. ಆಹವಮಲ್ಲನ (1042-1068) ಆಶ್ರಿತನಾದ ಶ್ರೀಧರಾಚಾರ್ಯನು ಜಾತಕತಿಲಕವೆಂಬ ಜ್ಯೋತಿಷ ಗ್ರಂಥವನ್ನು 1049 ರಲ್ಲಿ ಬರೆದಿದ್ದಾನೆ. ಭುವನೈಕಮಲ್ಲನ (1068-1076) ಪಸಾಯಿತನಾದ ಲಕ್ಷ್ಮನೃಪನ ಕೈಯ ಕೆಳಗೆ ಮಂತ್ರಿಯಾಗಿದ್ದ ಶಾಂತಿನಾಥನು ಸುಕುಮಾರಚರಿತವನ್ನು ರಚಿಸಿದನು. ಇದೇ ರಾಜನ ಮಹಾಪ್ರಧಾನನಾದ ಉದಯಾದಿತ್ಯನಲ್ಲಿ ಸಂಧಿವಿಗ್ರಹಿಯಾಗಿದ್ದ ನಾಗವರ್ಮಾಚಾರ್ಯನೇ ಚಂದ್ರಚೂಡಾಮಣಿಶತಕವನ್ನು ಬರೆದವನು. ಆಹವಮಲ್ಲನ ಮಗನಾದ ಜಯಸಿಂಹನ ಕೈಯ ಕೆಳಗೆ ಅಧಿಕಾರಿಯಾಗಿದ್ದ ಮಾಚಿರಾಜನ ಆಶ್ರಿತನಾಗಿ ಚಂದ್ರರಾಜನು ಮದನತಿಲಕವೇ ಮೊದಲಾದ ಗ್ರಂಥಗಳನ್ನು ಬರೆದನು. ಅದೇ ಆಹವಮಲ್ಲನ ಮಗನೂ ವಿಕ್ರಮಾದಿತ್ಯನ ತಮ್ಮನೂ ಆದ ಕೀರ್ತಿವರ್ಮನು ಗೋವೈದ್ಯವನ್ನು ಬರೆದಿದ್ದಾನೆ. ಅದೇ ರಾಜನ ಆಶ್ರಿತನೂ ಕೀರ್ತಿವರ್ಮನ ಮಿತ್ರನೂ ಆದ ಬ್ರಹ್ಮಶಿವನು ಸಮಯಪರೀಕ್ಷೆ, ತ್ರೈಲೋಕ್ಯಚೂಡಾಮಣಿಸ್ತೋತ್ರ ಇವುಗಳನ್ನು ರಚಿಸಿದ್ದಾನೆ. ಎರಡನೆಯ ಜಗದೇಕಮಲ್ಲನಲ್ಲಿ (1138-1150) 2ನೆಯ ನಾಗವರ್ಮನು ಕಟಕೋಪಾಧ್ಯಾಯನಾಗಿದ್ದನು. ಪಂಚತಂತ್ರವನ್ನು ಬರೆದ ದುರ್ಗಸಿಂಹನು ಇದೇ ರಾಜನಲ್ಲಿ ಸಂಧಿವಿಗ್ರಹಿಯಾಗಿದ್ದಂತೆ ತಿಳಿಯುತ್ತದೆ. ದಾವಣಗೆರೆಯ 41ನೆಯ ಶಾಸನವನ್ನು ಬರೆದ ಮಧುಸೂದನದೇವನು ಇದೇ ರಾಜನ ಸಾಮಂತನಾದ ಉಚ್ಚಂಗಿಯ ವೀರಪಾಂಡ್ಯನಿಂದ ಪೂಜಿತನಾಗಿದ್ದನು.

ಕಾಕತೀಯರು—ಪ್ರತಾಪರುದ್ರನ ಆಸ್ಥಾನದಲ್ಲಿ ರಾಘವಾಂಕನು ಸ್ವರಚಿತವಾದ ವೀರೇಶ್ವರ ಚರಿತೆಯನ್ನು ಓದಿ ವಾದಿಗಳನ್ನು ಜಯಿಸಿದಂತೆ ಹೇಳಿದೆ. ಮತ್ತೊಬ್ಬ ಪ್ರತಾಪರುದ್ರನ ಕಾಲದಲ್ಲಿ ಸೋಮೇಶ್ವರಶತಕವನ್ನು ಬರೆದ ಪಾಲ್ಕುರಿಕೆ ಸೋಮನಾಥನು ಬಾಳಿದಂತೆ ತಿಳಿಯುತ್ತದೆ.

ಹೊಯ್ಸಳರು— ಒಂದನೆಯ ಬಲ್ಲಾಳನ ಕಾಲದಲ್ಲಿ (1100-1106) ಅಭಿನವಪಂಪನೂ ಕಂತಿಯೂ ಇದ್ದಂತೆ ತಿಳಿಯುತ್ತದೆ. ವಿಷ್ಣುವರ್ಧನನ ಆಳಿಕೆಯಲ್ಲಿ (1111-1141) ರಾಜಾದಿತ್ಯನು ಕ್ಷೇತ್ರಗಣಿತವೇ ಮೊದಲಾದ ಗ್ರಂಥಗಳನ್ನು ಬರೆದನು. ಜನ್ನನ ತಂದೆಯಾದ ಸುಮನೋಬಾಣನು 1ನೆಯ ನಾರಸಿಂಹನ (1141-1173) ಕಟಕೋಪಾಧ್ಯಾಯನಾಗಿದ್ದನು. ಇದೇ ರಾಜನ ಕರಣಿಕನಾದ ಹರೀಶ್ವರನೂ, ಮಂತ್ರಿಯಾದ ಕೆರೆಯ ಪದ್ಮರಸನೂಗ್ರಂಥಗಳನ್ನು ಬರೆದಿದ್ದಾರೆ. ಎರಡನೆಯಬಲ್ಲಾಳನ (1173-1220) ಮಂತ್ರಿಯಾದ ಬೂಚಿರಾಜನು ಕವಿತೆಯಲ್ಲಿ ಪೊನ್ನನಿಗೆ ಸಮಾನನಾಗಿದ್ದನೆಂದು ಒಂದು ಶಾಸನದಿಂದ[1] ತಿಳಿಯುತ್ತದೆ. ಅದೇ ರಾಜನ ಸೆಜ್ಜೆವಳ್ಳನಾದ ಪದ್ಮನಾಭನ ಇಷ್ಟಾನುಸಾರವಾಗಿ ಅರ್ಧನೇಮಿಯನ್ನು ಬರೆದಂತೆ ನೇಮಿಚಂದ್ರನು ಹೇಳುತ್ತಾನೆ. ಅದೇ ರಾಜನ ಮಂತ್ರಿಯಾದ ಚಂದ್ರಮೌಳಿಯಿಂದ ಪೋಷಿತನಾಗಿ ರುದ್ರಭಟ್ಟನು ಜಗನ್ನಾಥವಿಜಯವನ್ನು ಬರೆದನು. ಅದೇ ದೊರೆಯ ಮತ್ತೊಬ್ಬ ಮಂತ್ರಿಯಾದ ವಸುಧೈಕಬಾಂಧವ ರೇಚರಸನ ಪ್ರೇರಣೆಯಿಂದ ಅಚಣ್ಣನು ವರ್ಧಮಾನಪುರಾಣವನ್ನು ಬರೆದಂತೆ ತಿಳಿಯುತ್ತದೆ. ಇದೇ ರಾಜನಿಂದ ಜನ್ನನು ಕವಿಚಕ್ರವರ್ತಿ ಎಂಬ ಬಿರುದನ್ನು ಪಡೆದನು. ಎರಡನೆಯ ನಾರಸಿಂಹನ (1220-1235) ಮಂತ್ರಿಯಾದ ಪೋಲಾಳ್ವದಂಡನಾಥನು ಹರಿಚಾರಿತ್ರವನ್ನು ರಚಿಸಿದನು. ಕೇಶಿರಾಜನ ತಂದೆಯಾದ ಮಲ್ಲಿಕಾರ್ಜುನನು ಸೂಕ್ತಿಸುಧಾರ್ಣವವನ್ನು ಸೋಮೇಶ್ವರನ (1233-1254) ವಿನೋದಾಕರ್ಣನಕ್ಕಾಗಿ ಬರೆದಂತೆ ಹೇಳುತ್ತಾನೆ.

ಮೂಡಣಚಾಲುಕ್ಯರು— ಗುಣಗಾಂಕವಿಜಯಾದಿತ್ಯನ ಕಾಲದಲ್ಲಿ (844-888) ಗುಣಗಾಂಕಿಯಂ ಎಂಬ ಕರ್ಣಾಟಕ ಛಂದೋ ಗ್ರಂಥವು ಹುಟ್ಟಿದಂತೆ ಹಿಂದೆಯೇ ತಿಳಿಸಿದೆ. ರಾಜರಾಜನ (1022-1063) ಆಸ್ಥಾನ ಕವಿಯಾದ ನನ್ನಯ್ಯಭಟ್ಟನಿಗೆ ಸಹಾಯಕನಾಗಿದ್ದ ನಾರಾಯಣಭಟ್ಟನು ಕನ್ನಡದಲ್ಲಿಯೂ ಕವಿಯಾಗಿದ್ದಂತೆ ತಿಳಿಯುತ್ತದೆ.[2]

---

1. ಹಾಸನ 119
2. ಯಃ ಸಂಸ್ಕೃತಕರ್ಣಾಟಪ್ರಾಕೃತಪೈಶಾಚಿಕಾಂಧ್ರಭಾಷಾಸು ॥
ಕವಿರಾಜಶೇಖರ ಇತಿ ಪ್ರಥಿತಃ ಸುಕವಿತ್ವವಿಭವೇನ ॥

ಸೌಂದತ್ತಿಯ ರಟ್ಟರು — ಪಾರ್ಶ್ವನಾಥಪುರಾಣವನ್ನು ಬರೆದ ಪಾರ್ಶ್ವ ಪಂಡಿತನು 4 ನೆಯ ಕಾರ್ತವೀರ್ಯನ (1202-1220) ಆಸ್ಥಾನಕವಿಯಾಗಿದ್ದನು. ಅದೇ ರಾಜನ ಕಾಲದಲ್ಲಿ ಬಾಳಚಂದ್ರಕವಿ ಕಂದರ್ಪನು ಬಾಳಿದಂತೆ ತಿಳಿಯುತ್ತದೆ. ಪುಷ್ಪದಂತಪುರಾಣವನ್ನು ಬರೆದ 2ನೆಯ ಗುಣವರ್ಮನು ಅದೇ ದೊರೆಯ ಕೈಯಕೆಳಗೆ ನಾಳ್ಪ್ರಭುವಾಗಿದ್ದ ಶಾಂತಿವರ್ಮನ ಆಶ್ರಿತನು.

ಕರಹಾಟದ ಶಿಲಾಹಾರರು— ಗಂಡರಾದಿತ್ಯನ ಮಗನಾದ ಲಕ್ಷ್ಮಣರಾಜನ ಆಜ್ಞಾನುಸಾರವಾಗಿ ಕಣ್ಣಪಾರ್ಯನು ನೇಮಿನಾಥಪುರಾಣವನ್ನು ಬರೆದನು. ಅದೇ ರಾಜನ ಆಳಿಕೆಯಲ್ಲಿ ನೇಮಿಚಂದ್ರನು ಲೀಲಾವತಿಯನ್ನು ರಚಿಸಿದನು.

ಕೊಂಗಾಳ್ವರು — ಚಂದ್ರನಾಥಾಷ್ಟಕವನ್ನು ಬರೆದ ಮೌಕ್ತಿಕಕವಿ ವೀರಕೊಂಗಾಳ್ವನ (ಸು. 1120) ಕಾಲದಲ್ಲಿ ಬಾಳಿದಂತೆ ತೋರುತ್ತದೆ.

ಚೆಂಗಾಳ್ವರು — ಸಮ್ಯಕ್ತ್ವಕೌಮುದಿ (1508) ಮುಂತಾದ ಗ್ರಂಥಗಳನ್ನು ಬರೆದ 3 ನೆಯ ಮಂಗರಸನು ಚೆಂಗಾಳ್ವರಾಜರ ಕುಲಕ್ರಮಾಗತ ಮಂತ್ರಿಯಾದ ಕಲ್ಲಹಳ್ಳಿಯ ಪ್ರಭು ವಿಜಯನ ಮಗನು. ಚೆಂಗಾಳ್ವನಂಜರಾಯನ (1502-1533) ಆಳಿಕೆಯಲ್ಲಿ ನಂಜುಂಡನು ಕುಮಾರರಾಮಕಥೆಯನ್ನು ರಚಿಸಿದನು.

ತುಳುವದೇಶದ ಅರಸರು— ತುಳುವದೇಶದ ದೊರೆ ಭೈರವಸುತ ಪಾಂಡ್ಯರಾಯನ ಇಷ್ಟಾನುಸಾರವಾಗಿ ಕಲ್ಯಾಣಕೀರ್ತಿ ಜ್ಞಾನಚಂದ್ರಾಭ್ಯುದಯವನ್ನು 1439 ರಲ್ಲಿ ಬರೆದಂತೆ ಹೇಳುತ್ತಾನೆ. ಸುಮಾರು 1500 ರಲ್ಲಿ ಕೋಟೀಶ್ವರನು ಹೈವನೃಪಸುತ ಸಂಗೀತಪುರದ ದೊರೆ ಸಂಗಮನ ಆಜ್ಞಾನುಸಾರವಾಗಿ ಜೀವಂಧರಷಟ್ಪದಿಯನ್ನು ಬರೆದನು. ಭರತೇಶ್ವರಚರಿತೆಯನ್ನು 1557 ರಲ್ಲಿ ಬರೆದ ರತ್ನಾಕರವರ್ಣಿ ತುಳುವದೇಶದ ಭೈರಸಒಡೆಯರ ಆಸ್ಥಾನದಲ್ಲಿ ಶೃಂಗಾರಕವಿ ಎಂಬ ಬಿರುದನ್ನು ಪಡೆದನು. ಭಾರತ ಮುಂತಾದ ಗ್ರಂಥಗಳನ್ನು ರಚಿಸಿದ ಸಾಳ್ವನು ತೌಳವಹೈವಕೊಂಕಣದೇಶಾಧಿನಾಥನಾದ ಸಾಳ್ವಮಲ್ಲನ ಆಸ್ಥಾನಕವಿಯಾಗಿದ್ದನು. ಕೆಲವನೆಸಿಂಹಾಸನದ ಅರಿರಾಯರಗಂಡರ ದಾವಣಿ ಭೈರವೇಂದ್ರನ ಆಜ್ಞೆಯಿಂದ ಬಾಹುಬಲಿ ನಾಗಕುಮಾರಚರಿತೆಯನ್ನು ಬರೆದನು. ಚಂದ್ರಮನು ಅರಿರಾಯರ ಗಂಡರದಾವಣಿ ಭೈರವನೃಪನ ಆಜ್ಞಾನುಸಾರವಾಗಿ 1646 ರಲ್ಲಿ ಕಾರ್ಕ

ಳಿದ ಗೊಮ್ಮಟೇಶ್ವರ ಚರಿತೆಯನ್ನು ರಚಿಸಿದನು. ಗೇರಸೊಪ್ಪೆಯ ದೊರೆ ಭೈರವರಾಯನ ಆಳಿಕೆಯಲ್ಲಿ ಆದಿಯಪ್ಪನು ಧನ್ಯಕುಮಾರಚರಿತೆಯನ್ನು ಬರೆದನು. ಅಹಿಂಸಾಚರಿತೆಯನು 17.8 ರಲ್ಲಿ ರಚಿಸಿದ ವಾಯಣ್ಣನು ಸಂಗೀತಪುರದರಸ ಸಂಗಮರಾಯ ಪುತ್ರನ ಆಶ್ರಿತನಾಗಿದ್ದನು. ರಾಮಚಂದ್ರಚರಿತ್ರದ ಪೂರ್ವಭಾಗವನ್ನು ಬರೆದ ಚಂದ್ರಶೇಖರನು ತುಳುವದೇಶದ ಲಕ್ಷ್ಮಣಬಂಗರಾಜನ ಆಸ್ಥಾನಕವಿ. ತೌಳವದೇಶದ ಮೂಲಿಕೆಯ ರಾಜನಾದ ಚೆನ್ನರಾಯನಿಂದ ಪೋಷಿತನಾಗಿ ಪದ್ಮನಾಭನು ರಾಮಚಂದ್ರಚರಿತ್ರದ ಉತ್ತರಭಾಗವನ್ನು 1,5) ರಲ್ಲಿ ರಚಿಸಿದನು.

ಚೌಟರು—ಚೆನ್ನಮ್ಮಾಂಬೆಯ ಆಳಿಕೆಯಲ್ಲಿ ತಿರುಮಲಸಾಮಂತನ ಕೋಶಾಧ್ಯಕ್ಷನಾದ ಪದ್ಮನಾಭನು ಪದ್ಮಾವತೀ ಚರಿತೆಯನ್ನೂ, ಅಬ್ಬಕ್ಕದೇವಿಯ ಆಳಿಕೆಯಲ್ಲಿ ಪಟ್ಟಾಭಿರಾಮನು ರತ್ನಶೇಖರಚರಿತ್ರೆಯನ್ನೂ, ಚಂದ್ರಶೇಖರ ಚಿಕ್ಕರಾಯನ ರಾಣಿವಾಸದ ಚೆನ್ನಮ್ಮದೇವಿಯ ಆಜ್ಞಾನುಸಾರವಾಗಿ ಸುರಾಲನು 17(1 ರಲ್ಲಿ ಪದ್ಮಾವತೀ ಚರಿತೆಯನ್ನೂ ರಚಿಸಿದರು.

ವಿಜಯನಗರದ ಅರಸರ—ಒಂದನೆಯ ಹರಿಹರನ (1336-1353) ಆಳಿಕೆಯಲ್ಲಿ ಮುಳುಗುಳಿಯಪುರದ ಅಧಿಪನಾದ 1ನೆಯ ಮಂಗರಸನು ಖಗೇಂದ್ರಮಣಿದರ್ಪಣವನ್ನು ಬರೆದನು ಧರ್ಮನಾಥಪುರಾಣವನ್ನು ಬರೆದ ಮಧುರನು 2ನೆಯ ಹರಿಹರನ (1377-1404) ಆಸ್ಥಾನಕವಿಯಾಗಿದ್ದನು. ಒಂದನೆಯ ಬುಕ್ಕನ ಮಗನಾದ ಕಂಪರಾಜನ ಪುತ್ರ ದೇಪರಾಜನು ಸೊಬಗಿನಸೋನೆ ಅಮರುಕ ಎಂಬ ಗ್ರಂಥಗಳನ್ನು ಬರೆದಿದ್ದಾನೆ. ಎರಡನೆಯ ದೇವರಾಯನ (1419-1446) ಮಂತ್ರಿಗಳಲ್ಲಿ ಲಕ್ಕಣ್ಣದಂಡೇಶನು ಶಿವತತ್ವಚಿಂತಾಮಣಿಯನ್ನೂ ಜಕ್ಕಣಾರ್ಯನು ನೂರೊಂದುಸ್ಥಲವನ್ನೂ ಬರೆದರು. ಇದೇರಾಜನ ಮಹಾಪ್ರಧಾನನಾದ ಗುರುರಾಜನ ಪ್ರೇರಣೆಯಿಂದ ಚಂದ್ರಕವಿ ವಿರೂಪಾಕ್ಷಾಸ್ಥಾನ ಮೊದಲಾದ ಗ್ರಂಥಗಳನ್ನು ರಚಿಸಿದನು. ಇದೇ ದೊರೆಯ ಪ್ರೋತ್ಸಾಹದಿಂದ ಚಾಮರಸನು ಪ್ರಭುಲಿಂಗಲೀಲೆಯನ್ನೂ, ಮಗ್ಗೆಯಮಾಯಿದೇವನು ಶತಕತ್ರಯವನ್ನೂ ಗುರುಬಸವನು ಶಿವಯೋಗಾಂಗ ಭೂಷಣವೇ ಮುಂತಾದ ಸಪ್ತಕಾವ್ಯಗಳನ್ನೂ ಬತ್ತಲೇಶ್ವರನು ರಾಮಾಯಣವನ್ನೂ ಬರೆದರು. ಕುಮಾ

ರವ್ಯಾಸನೂ ಇದೇರಾಜನ ಆಳಿಕೆಯಲ್ಲಿ ಭಾರತವನ್ನು ಬರೆದಂತೆ ತೋರುತ್ತದೆ. ಮಲ್ಲಿಕಾರ್ಜುನನ (1446-1467) ಆಳಿಕೆಯಲ್ಲಿ ಕಲ್ಲರಸನು ಜನವಶ್ಯವನ್ನು ಬರೆದಿದ್ದಾನೆ. ಷಟ್ಸ್ಥಲಜ್ಞಾನಸಾರಾಮೃತವನ್ನು ರಚಿಸಿದ ತೋಂಟದ ಸಿದ್ಧಲಿಂಗನು ವಿರೂಪಾಕ್ಷನ (1467-1478) ಆಳಿಕೆಯಲ್ಲಿ ಬಾಳಿದನು. ಕವಿಲಿಂಗನಪದ ಎಂಬ ಗ್ರಂಥವನ್ನು ರಚಿಸಿದ ಕವಿಲಿಂಗನು ಸಾಳುವನರಸಿಂಗರಾಯನ (1487--1493) ಆಸ್ಥಾನಕವಿಯಾಗಿದ್ದನು. ಕೃಷ್ಣರಾಯನ (1509--1529) ಆಜ್ಞಾನುಸಾರವಾಗಿ ತಿಮ್ಮಣ್ಣಕವಿ ಭಾರತದ ಉತ್ತರಭಾಗವನ್ನು ಬರೆದನು. ಚಾಟುವಿಟ್ಠಲನಾಥ ಎಂಬ ಬಿರುದುಳ್ಳ ಸದಾನಂದಯೋಗಿ ಅಚ್ಯುತರಾಯನ (1530--1542) ಆಳಿಕೆಯಲ್ಲಿ ಭಾಗವತವನ್ನು ಬರೆದಂತೆ ತೋರುತ್ತದೆ. ಸದಾಶಿವರಾಯನ (1543-1567) ಆಳಿಕೆಯಲ್ಲಿ ಸಲಕರಾಜನ ಮಗನಾದ ತಿರುಮಲರಾಜನು ಕಾಲಜ್ಞಾನವನ್ನು ಬರೆದ ಎಮ್ಮೆಬಸವನಿಗೆ ಒಂದು ಗ್ರಾಮವನ್ನು ಕೊಟ್ಟಂತೆ ತಿಳಿಯುತ್ತದೆ[1]. ಶಬ್ದಾನುಶಾಸನವನ್ನು ಬರೆದ ಭಟ್ಟಾಕಳಂಕನ ಗುರುವಾದ ಭಟ್ಟಾಕಳಂಕನು 1ನೆಯ ಶ್ರೀರಂಗರಾಯನ (1573-1584) ಆಸ್ಥಾನದಲ್ಲಿ ಆತನ ಪ್ರೇರಣೆಯಿಂದ ಸಾರತ್ರಯವನ್ನೂ ಅಲಂಕಾರತ್ರಯವನ್ನೂ ಓದಿ ಕೀರ್ತಿವಡೆದಂತೆ—

ಶ್ರೀರಂಗರಾಜನೃಪತಿ । ಪ್ರೇರಣೆಯಿಂ ವಿಜಯಮುನಿಪನುಪದೇಶನದಿಂ ।
ಸಾರತ್ರಿತಯಮುಮುಸಲಂ । ಕಾರತ್ರಿತಯಮುಮನೋದಿ ಜಸಮ ಪಡೆದಂ ॥

ಎಂಬ ಬಿಳಿಗಿತಾಲ್ಲೂಕಿನಲ್ಲಿರುವ ಒಂದು ಶಾಸನದ ಪದ್ಯದಿಂದತಿಳಿಯುತ್ತದೆ. ಅದೇಶಾಸನದಲ್ಲಿ ಶಬ್ದಾನುಶಾಸನಕಾರನಾದ ಭಟ್ಟಾಕಳಂಕನು 1ನೆಯ ವೆಂಕಟಪತಿರಾಯನ (1586--1617) ಆಳಿಕೆಯಲ್ಲಿ ಬಾಳಿದಂತೆ ಹೇಳಿದೆ.

ಮೈಸೂರರಸರು—ರಾಜನೃಪನ (1578-1617) ಪ್ರಧಾನಿಯಾದ ತಿರುಮಲಾರ್ಯನು ಕರ್ಣವೃತ್ತಾಂತ ಕಥೆಯನ್ನು ಬರೆದಿದ್ದಾನೆ. ಚಾಮರಾಜನು (1617-1637) ರಾಮಾಯಣ, ಬ್ರಹ್ಮೋತ್ತರಖಂಡ ಇವುಗಳನ್ನು

1. *Mysore Archaeological Report for* 1917, *Page* 51.

ರಚಿಸಿದನು. ಇದೇ ರಾಜನ ಪ್ರೋತ್ಸಾಹದಿಂದ ರಾಮಚಂದ್ರನು ಅಶ್ವ ಶಾಸ್ತ್ರವನ್ನೂ ಪದ್ಮಣಪಂಡಿತನು ಹಯಸಾರಸಮುಚ್ಚಯವನ್ನೂ ಬರೆದರು. ಭಾರತಿನಂಜ, ಗೋವಿಂದ ವೈದ್ಯ ಇವರು ಕಂಠೀರವನರಸರಾಜನ (1638-1659) ಆಶ್ರಿತರಾಗಿ ಕಂಠೀರವ ನರಸರಾಜವಿಜಯವನ್ನು ಬರೆದರು. ಇದೇ ರಾಜನಿಂದ ಪೋಷಿತನಾಗಿ ಭಾಸ್ಕರನು ಬೇಹಾರ ಗಣಿತವನ್ನು ರಚಿಸಿದನು. ಚಿಕ್ಕದೇವರಾಜನು (1672-1704) ಚಿಕ್ಕದೇವರಾಜಬಿನ್ನಪ ಮೊದಲಾದ ಗ್ರಂಥಗಳನ್ನು ಬರೆದನು. ಇದೇ ರಾಜನ ಪ್ರೋತ್ಸಾಹದಿಂದ ತಿರುಮಲಾರ್ಯನು ಅಪ್ರತಿಮ ವೀರಚರಿತ ಮೊದಲಾದ ಗ್ರಂಥಗಳನ್ನೂ, ಚಿಕ್ಕುಪಾಧ್ಯಾಯನು ಕಮಲಾಚಲಮಾಹಾತ್ಮ್ಯ ಮುಂತಾದುವನ್ನೂ ತಿಮ್ಮಕವಿ ಯಾದವಗಿರಿಮಾಹಾತ್ಮ್ಯ ಮೊದಲಾದುವನ್ನೂ, ಮಲ್ಲಿಕಾರ್ಜುನನು ಶ್ರೀರಂಗಮಾಹಾತ್ಮ್ಯವನ್ನೂ, ಸಿಂಗರಾರ್ಯನು ಮಿತ್ರವಿಂದಾಗೋವಿಂದವನ್ನೂ, ವೇಣುಗೋಪಾಲವರಪ್ರಸಾದನು ಚಿಕದೇವರಾಜವಂಶಾವಳಿಯನ್ನೂ, ಚಿದಾನಂದಕವಿ ಮುನಿವಂಶಾಭ್ಯುದಯವನ್ನೂ, ಮಲ್ಲರಸನು ದಶಾವತಾರಚರಿತೆಯನ್ನೂ, ಹೊನ್ನಮ್ಮನು ಹದಿಬದೆಯ ಧರ್ಮವನ್ನೂ, ಶೃಂಗಾರಮ್ಮನು ಪದ್ಮಿನೀ ಕಲ್ಯಾಣವನ್ನೂ ರಚಿಸಿದರು. ಒಂದನೆಯ ಕೃಷ್ಣರಾಜನ (1713-1731) ಆಶ್ರಿತನಾಗಿ ಬಾಲವೈದ್ಯದ ಚೆಲುವನು ಕನ್ನಡ ಲೀಲಾವತಿ, ರತ್ನಶಾಸ್ತ್ರ ಇವುಗಳನ್ನು ಬರೆದನು. ರಾಮಾಯಣಂ ತಿರುಮಲೆಯಾಚಾರ್ಯ ಎಂಬ ಕವಿಯೂ ಈ ದೊರೆಯ ಆಶ್ರಿತನು. ಇದೇ ರಾಜನ ಮಹಿಷಿಯಾದ ಚೆಲ್ವಾಂಬೆ ವರನಂದೀಕಲ್ಯಾಣ ಮೊದಲಾದ ಗ್ರಂಥಗಳನ್ನು ಬರೆದಿದ್ದಾಳೆ. ರಾಮಾಯಣ, ಇಂದಿರಾಭ್ಯುದಯ ಮೊದಲಾದ ಗ್ರಂಥಗಳನ್ನು ಬರೆದ ವೆಂಕಾಮಾತ್ಯನು ೨ನೆಯ ಕೃಷ್ಣರಾಜನ (1734-176.) ಆಶ್ರಿತನು. ಇದೇ ರಾಜನ ಮಾವನಾದ ಕತ್ತಿಗೋಪಾಲ ರಾಜನು ಕಮಲಾಚಲಮಾಹಾತ್ಮ್ಯವನ್ನು ರಚಿಸಿದ್ದಾನೆ. ಸಿಂಗರಾಚಾರ್ಯನು ಚಾಮರಾಜನ (1770-1776) ಆಶ್ರಿತನಾಗಿ ಶ್ರೀರಂಗಮಾಹಾತ್ಮ್ಯವನ್ನು ಬರೆದನು. ಖಾಸಾ ಚಾಮರಾಜನ (1776-1796) ಮಹಿಷಿಯಾದ ದೇವೀರಮ್ಮಣ್ಣಿಯ ಪ್ರೇರಣೆಯಿಂದ ದೇವಚಂದ್ರನು ರಾಜಾವಳೀಕಥೆಯನ್ನು ರಚಿಸಿದನು. ಮುಮ್ಮಡಿ ಕೃಷ್ಣ ರಾಜನು (1799-1868) ಸೌಗಂಧಿಕಾಪರಿಣಯವೇ ಮೊದಲಾದ ಅನೇಕ ಗ್ರಂಥ

ಗಳನ್ನು ರಚಿಸುವುದಲ್ಲದೆ ಕವಿಗಳಿಗೆ ಉದಾರಾಶ್ರಯವನ್ನು ಕೊಟ್ಟು ಗ್ರಂಥಗಳನ್ನು ಬರೆಯಿಸಿ ಕನ್ನಡ ಸಾಹಿತ್ಯವನ್ನು ವೃದ್ಧಿಗೊಳಿಸಿದನು. ಈತನ ಪ್ರೋತ್ಸಾಹದಿಂದ ಅಳಿಯ ಲಿಂಗರಾಜ, ದೇವಲಾಪುರದ ನಂಜುಂಡ, ಶ್ರೀನಿವಾಸಕವಿ, ಶಾಂತರಾಜಪಂಡಿತ, ವೆಂಕಟರಾಮಶಾಸ್ತ್ರಿ, ಸುಬ್ರಹ್ಮಣ್ಯ, ಮದ್ದಗಿರಿ ನಂಜಪ್ಪ, ಸೀತಾರಾಮಸೂರಿ, ಕೆಂಪುನಾರಾಯಣ, ರಾಮಕೃಷ್ಣಶಾಸ್ತ್ರಿ, ಕಮಲ ಪಂಡಿತ ಮೊದಲಾದವರು ಹಲವು ಗ್ರಂಥಗಳನ್ನು ರಚಿಸಿದ್ದಾರೆ. ಈತನ ಮಹಿಷಿಯರಾದ ರಮಾವಿಲಾಸದ ಚೆಲುವಾಜಮ್ಮಣ್ಣಿ, ಸೀತಾವಿಲಾಸದ ದೇವಾಜಮ್ಮಣ್ಣಿ ಇವರುಗಳ ಆಜ್ಞಾನುಸಾರವಾಗಿ ಭಾಗವತ ಕೃಷ್ಣಸ್ವಾಮಿ 1869 ರಲ್ಲಿ ವಾಸಿಷ್ಠರಾಮಾಯಣಟೀಕೆಯನ್ನು ಬರೆದನು.

ಪಾಳೆಯಗಾರರ — ಉಮ್ಮತ್ತೂರು ವೀರನಂಜೇಂದ್ರನ (1482-1494) ಪ್ರೋತ್ಸಾಹದಿಂದ ನೀಲಕಂಠಾಚಾರ್ಯನು ಆರಾಧ್ಯಚಾರಿತ್ರವನ್ನೂ, ಅಚ್ಯುತರಾಯನ ಸಾಮಂತನಾದ ನುಗ್ಗೆಹಳ್ಳಿಯ ರಾಯಭೂಪಾಲನ ಪ್ರೇರಣೆಯಿಂದ ಲಿಂಗಮಂತ್ರಿ ಕಬ್ಬಿಗರಕೈಪಿಡಿಯನ್ನೂ, ಸುಗಟೂರ ಪ್ರಭುವಾದ ಮುಮ್ಮಡಿ ತಮ್ಮನು ಶಂಕರಸಂಹಿತೆಯನ್ನೂ, ಪಿರಿಯಪಟ್ಟಣದ ವಿರುಪರಾಜೇಂದ್ರನ ಆಶ್ರಿತನಾದ ದೇವಣ್ಣಯ್ಯನು ಚಾಮಪ್ರಭುಚರಿತೆಯನ್ನು, ಹದಿನಾಡು ಚೆನ್ನರಾಜನ ಆಜ್ಞಾನುಸಾರವಾಗಿ ಎಳಂದೂರು ನಾರಸಿಂಹಭಟ್ಟನು ವೈದ್ಯಸಾರಸಂಗ್ರಹವನ್ನೂ, ಬೇಲೂರು ವೆಂಕಟಾದ್ರಿನಾಯಕನ (1626-1643) ಪ್ರೋತ್ಸಾಹದಿಂದ ಸೂರ್ಯಕವಿ ಕವಿಕಂಠಹಾರವನ್ನೂ ಬರೆದರು. ಸೋಸಲೆ ರೇವಣಾಚಾರ್ಯನು ಚಿಕ್ಕನಾಯಕನಹಳ್ಳಿ ಮುದಿಯಪ್ಪನಾಯಕನ (೧೬೨೪)ಇಷ್ಟಾನುಸಾರವಾಗಿ ಮಹಿಮ್ನಸ್ತವಟೀಕೆಯನ್ನೂ ಮುದಿಗೆರೆ ರಘುಪಪ್ಪನಾಯಕನ ಪ್ರೇರಣೆಯಿಂದ ಶಿವಾಧಿಕ್ಯಶಿಖಾಮಣಿಟೀಕೆಯನ್ನೂ ರಚಿಸಿದನು. ಬಿಜ್ಜವರದ ತೋಂಟದ ಸಿದ್ಧಲಿಂಗ ಭೂಪನ ಆಶ್ರಿತನಾದ ವಿರಕ್ತತೋಂಟದಾರ್ಯನು ಸಿದ್ಧೇಶ್ವರ ಪುರಾಣ ಮೊದಲಾದ ಗ್ರಂಥಗಳನ್ನೂ ಅದೇ ಬಿಜ್ಜವರದ ಇಮ್ಮಡಿ ಚಿಕ್ಕಭೂಪನ (1593) ಪ್ರೋತ್ಸಾಹದಿಂದ ಮಲ್ಲಿಕಾರ್ಜುನಕವಿ ಶಂಕರಕವಿಕೃತ ಸಂಸ್ಕೃತಬಸವಪುರಾಣಕ್ಕೆ ಟೀಕೆ

ಯನ್ನೂ ರಚಿಸಿದರು. ಇಕ್ಕೇರಿ ವೆಂಕಟಪ್ಪನಾಯಕನ (1582-1629) ಆಜ್ಞೆಯಿಂದ ತಿರುಮಲಭಟ್ಟನು ಶಿವಗೀತೆಯನ್ನೂ, ಬಸವಪ್ಪನಾಯಕನು (1697-1714) ಸೂಕ್ತಿಸುಧಾಕರವನ್ನೂ, ಸೋಮಶೇಖರನಾಯಕನ (1714-1739) ಮಂತ್ರಿಯಾದ ನಿರ್ವಾಣಯ್ಯನು ಶಿವಪೂಜಾವಿಧಾನವನ್ನೂ ಬರೆದರು. ಕಳಲೆ ವೀರರಾಜನು ವೈದ್ಯಸಂಹಿತಾಸಾರಾರ್ಣವವನ್ನು ರಚಿಸಿದನು; ಇವನ ಆಶ್ರಿತನಾದ ಚೆನ್ನಯ್ಯನು ಪದ್ಮಿನೀಪರಿಣಯವನ್ನು ಬರೆದನು; ಇದೇ ವೀರರಾಜನ ಮಗನಾದ ಕಳಲೆ ದೇವರಾಜನ ಆಶ್ರಿತ ರಂಗಯ್ಯನು ತುಲಾಕಾವೇರೀಮಾಹಾತ್ಮ್ಯವನ್ನು ಬರೆದಿದ್ದಾನೆ; ಈ ದೇವರಾಜನ ತಮ್ಮನಾದ ಕಳಲೆ ನಂಜರಾಜನು ಕಕುದ್ಗಿರಿಮಹಾತ್ಮ್ಯವೇ ಮೊದಲಾದ ಅನೇಕಗ್ರಂಥಗಳನ್ನು ರಚಿಸಿದ್ದಾನೆ; ಇವನ ಆಶ್ರಿತರಲ್ಲಿ ನೂರೊಂದನು ಸೌಂದರಕಾವ್ಯವನ್ನೂ ವೆಂಕಟೇಶನು ಹಾಲಾಸ್ಯಮಾಹಾತ್ಮ್ಯವನ್ನೂ ಬರೆದಿದ್ದಾರೆ.

ಅಲ್ಲದೆ ಕುಸುಮಾವಳೀಕಾವ್ಯವನ್ನು ಬರೆದ ದೇವಕವಿಗೆ (ಸು. 1200) ಚಿಕ್ಕರಾಜಚಮೂಪನೂ, ನೇಮಿನಾಥ ಪುರಾಣವನ್ನು ರಚಿಸಿದ ಮಹಾಬಲಕವಿಗೆ (1254) ಕೇತಯನಾಯಕನೂ, ದ್ವಾದಶಾನುಪ್ರೇಕ್ಷಾಕಾರನಾದ ವಿಜಯಣ್ಣನಿಗೆ (1448) ಬೆಳುವಲನಾಡಿನ ವೆಮ್ಮನಭಾವಿಯ ಪ್ರಭು ಹೊನ್ನಬಂದಿಯ ದೇವರಾಜನೂ, ಸೌಂದರ ಪುರಾಣ ಕರ್ತೃವಾದ ಬೊಮ್ಮರಸನಿಗೆ (ಸು. 1450) ಕೊಂಕಣಿಕೋಟೆ ಪುರಾಧಿಪ ತಿಪ್ಪರಸನೂ ಪೋಷಕರಾಗಿದ್ದಂತೆ ತಿಳಿಯುತ್ತದೆ.

ಇನ್ನು ಕೆಲವರು ಕವಿಗಳು ಚಿಕ್ಕ ಚಿಕ್ಕ ಪಾಳೆಯಪಟ್ಟುಗಳಿಗೂ ಗ್ರಾಮಗಳಿಗೂ ವಿಭುಗಳಾಗಿದ್ದಂತೆ ತೋರುತ್ತದೆ. ಇವರುಗಳ ಹೆಸರನ್ನೂ ತತ್ಕೃತ ಗ್ರಂಥನಾಮವನ್ನೂ ಕೆಳಗಣ ಪಟ್ಟಿಯಲ್ಲಿ ಕೊಟ್ಟಿದ್ದೇನೆ:—

| ಕವಿ. | ಗ್ರಂಥ. | ಕಾಲ. |
|---|---|---|
| ಚೋಳರಾಜನಾದ ಸೋಮನಾಥನ ಮಗ ಉದಯಾದಿತ್ಯ | ಉದಯಾದಿತ್ಯಾಲಂಕಾರ | ಸು. 1150 |
| ಇಂದುಶೇಖರರಾಜನ ಮಗ ಸೋಮರಾಜ | ಉದ್ಭಟಕಾವ್ಯ | 1222 |

| | | |
|---|---|---|
| ಹಿರಿಯೂರ ಪ್ರಭು ಮಾಧವ | ಮಾಧವಾಲಂಕಾರ | ಸು. 1500 |
| ಚೋಳರಭೀಮ ಏಳುಬೀಡಿನಗೋವ | | |
| ವಿರುಪರಾಜ | ತ್ರಿಭುವನತಿಲಕ | 1519 |
| ಇವನ ಮಗ ವೀರಭದ್ರರಾಜ | ವೀರಭದ್ರವಿಜಯ | ಸು 1530 |
| ಕಾಕೋಳಲಧಿಪ ರಾಮಭೂಪತಿಪುತ್ರ | | |
| ರಾಮೇಂದ್ರ | ಸೌಂದರ್ಯಕಥಾರತ್ನ | ಸು. 1550 |
| ಅಯ್ಯಣಭೂಪಪುತ್ರ ಅಣ್ಣಾಜಿ | ಸೌಂದರವಿಳಾಸ | ಸು. 1600 |
| ರಸವಾಳಿಪ್ರಭು ಬೊಮ್ಮರಸನ ಮಗ | | |
| ಶೃಂಗಾರಕವಿ | ಕರ್ಣಾಟಕ ಸಂಜೀವನ | ಸು. 1600 |
| ನೃಸಿಂಹರಾಜನಮಗ ವೀರಭದ್ರ | | |
| ರಾಜ | ಪಾಲಕಾಪ್ಯಹಸ್ತ್ಯಾಯುರ್ವೇದಟೀಕೆ | ಸು. 1600 |
| ಜಕ್ಕಭೂಪಾಲ | ಭಾರತಕಥಾಸಂಗ್ರಹ | ಸು. 1620 |
| ಬಲ್ಲಾಳಪುರದ ಪ್ರಭು ನರಹರಿ | ಪ್ರಹ್ಲಾದ ಚರಿತ್ರೆ | ಸು. 1650 |
| ಬೆಳಗೋಡ ಪ್ರಭು ವೀರಜನಪತಿ | ವಿಕ್ರಮವಿಲಾಸ | ಸು. 1650 |
| ರಾಘವಭೂವರನನುಜ ಶೇಷ | ರುಕ್ಮಾಂಗದ ಚರಿತ್ರೆ | ಸು. 1650 |
| ಬಸವರಾಜೇಂದ್ರ | ಮಹಾವಿಭೂತಿಮಹಿಮೆ | ಸು. 1700 |
| ನಂಜನಾಥ ಭೂಪಾಲ | ವೈದ್ಯಸಾರಸಂಗ್ರಹ | ಸು. 1700 |
| ಚೆನ್ನರಾಜ | ವೆಂಕಟೇಶ್ವರಶತಕ | ಸು. 1750 |
| ಆಹವವಿಜಯ ಲಿಂಗರಾಜೇಂದ್ರತನುಜ | | |
| ನಂಜಯ್ಯ | ಕಪೋತವಾಕ್ಯ | ಸು. 1750 |
| ಶಾಲ್ಯದ ಕೃಷ್ಣರಾಜ | ವಿವೇಕಾಭರಣ ಇತ್ಯಾದಿ | 1769 |

## ದಕ್ಷಿಣೋತ್ತರ ಮಾರ್ಗಗಳು.

ಕನ್ನಡದಲ್ಲಿ ದಕ್ಷಿಣಮಾರ್ಗ, ಉತ್ತರಮಾರ್ಗ ಎಂಬ ಭೇದಗಳು ಕ್ರಮವಾಗಿ ತಮಿಳಿನ ಮತ್ತು ತೆಲುಗಿನ ಸಂಪರ್ಕದಿಂದ ಉಂಟಾಗಿವೆ ಎಂದೂ ಇವುಗಳಿಗೆ ಅಸಾಧಾರಣವಾದ ಗುರುತುಗಳು ಇಂಥವು ಎಂದೂ ಕೆಲವರು ನಿರ್ಧರಿಸಿ ಬರೆದಿದ್ದಾರೆ. ಈಬರೆವಣಿಗೆಗೆ ಸರಿಯಾದ ಆಧಾರವಿರುವಂತೆ ತೋರುವುದಿಲ್ಲ. ದಕ್ಷಿಣಮಾರ್ಗ, ಉತ್ತರಮಾರ್ಗ ಎಂಬ ಮಾತುಗಳೇನೋ ಕವಿರಾಜಮಾರ್ಗ, ಕಾವ್ಯಾವಲೋಕನ, ಶಬ್ದಾನುಶಾಸನ ಈ ಗ್ರಂಥಗಳಲ್ಲಿ ಹೇಳಿವೆ. ಕವಿರಾಜಮಾರ್ಗದ 2ನೆಯಪರಿಚ್ಛೇದದಲ್ಲಿ ಕಾವ್ಯಗುಣಗಳನ್ನು ವಿವರಿಸುವಾಗ ಈಮಾತುಗಳು ಬಂದಿವೆ. ಆದರೆ ಈ ಭಾಗದಲ್ಲಿ ನೃಪತುಂಗನು ಬರೆದಿರುವ ಅಂಶವೆಲ್ಲಾ ಪ್ರಾಯಿಕವಾಗಿ ದಂಡಿಯ ಕಾವ್ಯಾದರ್ಶದ ಮಾರ್ಗವಿಭಾಗವೆಂಬ ಪ್ರಥಮಪರಿಚ್ಛೇದದಲ್ಲಿ ಉಕ್ತವಾದ ವಿಷಯದ ಪರಿವರ್ತನವಾಗಿದೆ. ದಂಡಿ ದಕ್ಷಿಣಮಾರ್ಗ, ಉತ್ತರಮಾರ್ಗ ಎಂಬ ಮಾತುಗಳನ್ನು ಕ್ವಾಚಿತ್ಕವಾಗಿಯೂ[1] ಅದೇ ಅರ್ಥದಲ್ಲಿ ವೈದರ್ಭ ಮಾರ್ಗ, ಗೌಡಮಾರ್ಗ ಎಂಬ ಮಾತುಗಳನ್ನು ವಿಶೇಷವಾಗಿಯೂ ಉಪಯೋಗಿಸಿದ್ದಾನೆ; ನೃಪತುಂಗನು ಈ ಅರ್ಥವನ್ನು ಹೇಳದೆ ದಕ್ಷಿಣೋತ್ತರ ಶಬ್ದಗಳನ್ನು ಮಾತ್ರ ಉಪಯೋಗಿಸಿದ್ದಾನೆ. ಇಷ್ಟೇ ವ್ಯತ್ಯಾಸವೇ ಹೊರತು ಮತ್ತೇನೂ ಇಲ್ಲ. ಆದುದರಿಂದ ಕಾವ್ಯಗುಣಗಳವಿಷಯವಾಗಿ ನೃಪತುಂಗನು ಹೇಳಿರುವುದೆಲ್ಲಾ ಮಾತೃಕೆಯಲ್ಲಿರುವಂತೆ ವೈದರ್ಭಗೌಡಮಾರ್ಗಗಳಿಗೆ ಅನ್ವಯಿಸುತ್ತದೆಯೇ ಹೊರತು ಕನ್ನಡದ ಭೇದಗಳಿಗಲ್ಲ. ನೃಪತುಂಗನು ಈ ಭಾಗದಲ್ಲಿ ಕಾವ್ಯಾದರ್ಶವನ್ನು ಪರಿವರ್ತಿಸಿರುವ ವಿಷಯವು ಕೆಳಗಣ ಉದಾಹರಣೆಗಳಿಂದ ಸ್ಪಷ್ಟವಾಗದೆ ಇರಲಾರದು—

1 ಕವಿಗಳುಮನಾದಿಲೋಕೋ | ದ್ಭವರಪ್ಪುದಱಿಂದನಂತಗಣನಾನುಗತಂ |
ಸವಿಶೇಷೋಕ್ತಿಗಳುಮನಂ | ತವಿಧಂಗಳನಂತಭೇದಮುದಱಿಂ ಮಾರ್ಗಂ ||
ಜನಿತವಿಭಾಗಂಗಳ್ ವಾ | ಙ್ಮನಸಾತೀತಂಗಳಿಂತು ಮಾರ್ಗೋಕ್ತಿಗಳೊಳ್ |
ನೆನೆದಱಿಪಲಾಪರಾರದ | ನನಿಶ್ಚಿತಕ್ರಮವಿಶೇಷಗುಣಯುಕ್ತಕಮಂ ||

---

1. ಕಾವ್ಯಾದರ್ಶ, I, 60, 80.

ಅಂತುಂ ಭೇದಮನಿನಿಸಾ | ನಂತುತ್ತರದಕ್ಷಿಣೋರುಮಾರ್ಗದ್ವಯದಾ |
ಚಿಂತಿಸಿ ಪುರಾಣಕವಿವಿದಿ | ತಾಂತರಮಂ ಪೇೞ್ವೆನೞಿವಮಾೞ್ಕೆಯೊಳಿನ್ನಾ ||
ಇಂತಿರೆ ಮಾರ್ಗದ್ವಿತಯಗ | ತಾಂತರಮಂ ಪೇೞ್ದನೆಲ್ಲಿಯುಂ ಕ್ಷೀರಗುಡಾ |
ದ್ಯಂತರರಸಾಂತರಂ ಜಾ | ತ್ಯಂತರಮಪ್ಪಂತೆನಂತಮಂತರ್ಭೇದಂ ||

ಕವಿರಾಜಮಾರ್ಗ, II. 47-49, 95.

ಅಸ್ತ್ಯನೇಕೋ ಗಿರಾಂ ಮಾರ್ಗಃ ಸೂಕ್ಷ್ಮಭೇದಃ ಪರಸ್ಪರಂ |
ತತ್ರ ವೈದರ್ಭಗೌಡೀಯೌ ವರ್ಣ್ಯೇತೇ ಪ್ರಸ್ಫುಟಾಂತರೌ ||
ಇತಿ ಮಾರ್ಗದ್ವಯಂ ಭಿನ್ನಂ ತತ್ಸ್ವರೂಪನಿರೂಪಣಾತ್ |
ತದ್ಭೇದಾಸ್ತು ನ ಶಕ್ಯಂತೇ ವಕ್ತುಂ ಪ್ರತಿಕವಿ ಸ್ಥಿತಾಃ ||
ಇಕ್ಷುಕ್ಷೀರಗುಡಾದೀನಾಂ ಮಾಧುರ್ಯಸ್ಯಾಂತರಂ ಮಹತ್ |
ತಥಾಪಿ ನ ತದಾಖ್ಯಾತುಂ ಸರಸ್ವತ್ಯಾಪಿ ಶಕ್ಯತೇ ||

ಕಾವ್ಯಾದರ್ಶ I. 40, 101-102,

2 ಸಮಮಧುರನಿಬಿಡಕಾಂತಸು | ಕುಮಾರಸುಸಮಾಹಿತಪ್ರಸನ್ನೋದಾರ |
ಪ್ರಮಿತಗ್ರಾಮ್ಯೋಜಸ್ವಿ | ಕ್ರಮದಿಂ ದಶಭೇದಮಲ್ಲಿ ದಕ್ಷಿಣಮಾರ್ಗಂ ||
ಅವಱ ವಿಪರ್ಯಯವೃತ್ತಿ | ಪ್ರವಿಭಕ್ತವಿಕಲ್ಪಮಕ್ಕುಮುತ್ತರಮಾರ್ಗಂ ||

ಕವಿರಾಜಮಾರ್ಗ II, 52-53.

ಶ್ಲೇಷಃ ಪ್ರಸಾದಃ ಸಮತಾ ಮಾಧುರ್ಯಂ ಸುಕುಮಾರತಾ |
ಅರ್ಥವ್ಯಕ್ತಿರುದಾರತ್ವಮೋಜಃಕಾಂತಿಸಮಾಧಯಃ ||
ಇತಿ ವೈದರ್ಭಮಾರ್ಗಸ್ಯ ಪ್ರಾಣಾ ದಶಗುಣಾಃ ಸ್ಮೃತಾಃ |
ಏಷಾಂ ವಿಪರ್ಯಯಃ ಪ್ರಾಯೋ ದೃಶ್ಯತೇ ಗೌಡವರ್ತ್ಮನಿ ||

ಕಾವ್ಯಾದರ್ಶ I, 41-42.

3 ಲೋಕಪ್ರತೀತಸುಭಗವಿ | ವೇಕಾಳಾಪಂ ಪ್ರಸನ್ನಮದುಮಿಂತಕ್ಕುಂ |
ಶರದಮಲಾಂಬರದೊಳ್ ಹಿಮ' ಕರನೆಸೆದತ್ತೆಂಬುದಾಪ್ರಸನ್ನಮಿದಕ್ಕುಂ ||

ಕವಿರಾಜಮಾರ್ಗ, II,75-76.

ಪ್ರಸಾದವತ್ಪ್ರಸಿದ್ಧಾರ್ಥಮಿಂದೋರಿಂದೀವರದ್ಯುತಿ |
ಲಕ್ಷ್ಮ ಲಕ್ಷ್ಮೀಂ ತನೋತೀತಿ ಪ್ರತೀತಿಸುಭಗಂ ವಚಃ ||

ಕಾವ್ಯಾದರ್ಶ I. 45.

4 ಮಿಗೆ ವಸ್ತುಗತಸ್ಥಿತಿಯಂ । ಬಗೆದಗ್ಗಳವಾಗಿ ಪೇೞ್ದೊಡಕ್ಕುಮುದಾರಂ ।
ಬಗೆವೊಡೆ ಕಲ್ಪದ ಪದವಿಯು । ನೆಗೞ್ತೆಗಿದುಮೂಲಮುದಱ ಪಾಂಗಿಂತಕ್ಕುಂ ॥

ಕವಿರಾಜಮಾರ್ಗ, 11,77

ಉತ್ಕರ್ಷವಾನ್ ಗುಣಃ ಕಶ್ಚಿದ್ಯಸ್ಮಿನ್ನುಕ್ತೇ ಪ್ರತೀಯತೇ ।
ತದುದಾರಾಹ್ವಯಂ ತೇನ ಸನಾಥಾ ಕಾವ್ಯಪದ್ಧತಿಃ ॥

ಕಾವ್ಯಾದರ್ಶ, 1, 76.

5 ಮಿಗೆ ನಿಬಿಡಬಂಧನೆಂಬುದು । ತಗುಳ್ದುದು ವರ್ಣಂಗಳಗಲದಿರೆ ವೃತ್ತಕ್ಕಂ ।
ನೆಗೞ್ದಿಲ್ಪಪ್ರಾಣಾಕ್ಷರ । ನಿಗದಿತಮೇತದ್ವಿಪರ್ಯಯೋಕ್ತಂ ಶಿಥಿಲಂ ॥

ಕವಿರಾಜಮಾರ್ಗ, II, 62.

ಶ್ಲಿಷ್ಟಮಸ್ಪೃಷ್ಟಶೈಥಿಲ್ಯಮಲ್ಪಪ್ರಾಣಾಕ್ಷರೋತ್ತರಂ ॥

ಕಾವ್ಯಾದರ್ಶ, I, 43.

6 ಒಂದಱ ಮಾತುಗಳಂ ಪೆಱ। ತೊಂದಱೊಳಱಿದಿಟ್ಟು ಕೂಡೆ ಪೇೞ್ದೊಡದಕ್ಕುಂ ॥
ಸುಂದರತರಂ ಸಮಾಹಿತ । ಮೆಂದುಂ ಪತ್ತದಱ ಲಕ್ಷ್ಯವಿಲಾಸನಕ್ಕುಂ ॥
ವಿನಿಮೀಳಿತಕುಮುದವನಂ । ಜನಿತೋನ್ಮೀಲಾರವಿಂದವನಲಕ್ಷ್ಮೀಕಂ ।
ದಿನಕರನುದಯಂಗೆಯ್ದಂ । ವಿನಿಹತತಿಮಿರಂ ವಿಶಿಷ್ಟಸಂಧ್ಯಾಶ್ಲೇಷಂ ॥

ಕವಿರಾಜಮಾರ್ಗ II, 71-72.

ಅನ್ಯಧರ್ಮಸ್ತತೋಽನ್ಯತ್ರ ಲೋಕಸೀಮಾನುರೋಧಿನಾ ।
ಸಮ್ಯಗಾಧೀಯತೇ ಯತ್ರ ಸ ಸಮಾಧಿಃ ಸ್ಮೃತೋ ಬುಧೈಃ ॥
ಕುಮುದಾನಿ ನಿಮೀಲಂತಿ ಕಮಲಾನ್ಯುನ್ಮಿಷಂತಿ ಚ ॥

ಕಾವ್ಯಾದರ್ಶ, I, 93-94.

ಕವಿರಾಜಮಾರ್ಗದಲ್ಲಿ ಮತ್ತೊಂದು ಕಡೆ[1] ಸ್ವಭಾವೋಕ್ತಿ ದಕ್ಷಿಣಮಾರ್ಗಕ್ಕೂ ವಕ್ರೋಕ್ತಿ ಉತ್ತರಮಾರ್ಗಕ್ಕೂ ಭೇದಕಗುಣವೆಂದು ಹೇಳಿದೆ. ಇನ್ನೊಂದು ಕಡೆ[2] ದೀರ್ಘಸಮಾಸವಿಲ್ಲದಿರುವಿಕೆಯೂ ಮೃದು ಬಂಧವೂ ದಕ್ಷಿಣಮಾರ್ಗಕ್ಕೆ ಗುರುತೆಂದೂ ದೀರ್ಘಸಮಾಸವೂ ಕಟುಬಂಧವೂ ಉತ್ತರಮಾರ್ಗಕ್ಕೆ ಗುರುತೆಂದೂ ಉದಾಹರಣೆಗಳ ಮೂಲಕ ವಿವರಿಸಿದೆ. ಈ ಲಕ್ಷಣಗ

1. II, 50-51. 2. II, 106 108.

ಳೂ ವೈದರ್ಭಗೌಡಮಾರ್ಗಗಳಿಗೆ ಅನ್ವಯಿಸುತ್ತವೆಯೇ ಹೊರತು ಕನ್ನಡದ ಭೇದಗಳಿಗಲ್ಲ ಏಕೆಂದರೆ ಎಲ್ಲಾ ಲಕ್ಷಣಗ್ರಂಥಗಳಲ್ಲಿಯೂ ವೈದರ್ಭಗೌಡ ಮಾರ್ಗಗಳಿಗೆ ಈಗುರುತುಗಳು ಹೇಳಿವೆ. ಈಭಾಗಗಳನ್ನು ಬಿಟ್ಟರೆ ಕನ್ನಡದ ದಕ್ಷಿಣೋತ್ತರಮಾರ್ಗಗಳಿಗೆ ಸಂಬಂಧಿಸುವ ವಿಷಯವು ಕವಿರಾಜಮಾರ್ಗದಲ್ಲಿ ಒಂದೇ ಒಂದುಕಡೆ[1] ದೊರೆಯುತ್ತದೆ. ಅದಾವುದೆಂದರೆ ಕ್ರಿಯೆಗಳಲ್ಲಿ ನೋಟ್ಪಿಂ, ತರಿಸುವೆಂ ಇತ್ಯಾದಿರೂಪಗಳನ್ನು ದಕ್ಷಿಣಮಾರ್ಗದ ಕವಿಗಳೂ ಅವಕ್ಕೆ ಪ್ರತಿಯಾಗಿ ನೋಡುವೆಂ, ತರಿಪೆಂ ಇತ್ಯಾದಿರೂಪಗಳನ್ನು ಉತ್ತರಮಾರ್ಗದ ಕವಿಗಳೂ ಪ್ರಯೋಗಿಸುತ್ತಾರೆ, ಎಂಬುದೇ. ಏವಂಚೆ ಸಮಾನಾರ್ಥಕವಾದ ಕೆಲವು ದ್ವಿರೂಪಕ್ರಿಯೆಗಳಲ್ಲಿ ಒಂದು ಉತ್ತರಮಾರ್ಗದಲ್ಲಿಯೂ ಮತ್ತೊಂದು ದಕ್ಷಿಣಮಾರ್ಗ ದಲ್ಲಿಯೂ ವಿಶೇಷವಾಗಿ ಬಳಕೆಯಲ್ಲಿರುವುದೇ ಈಮಾರ್ಗಗಳಿಗೆ ಭೇದಕಗುಣವೆಂದು ಫಲಿತವಾಯಿತು. ನೃಪತುಂಗನ ಕಾಲದಲ್ಲಿ ಒಂದುವೇಳೆ ಈ ಭೇದವು ಇದ್ದಿರಬಹುದು. ಆದರೆ ಈಚೆಯ ಗ್ರಂಥಗಳಲ್ಲಿ ಕ್ರಿಯೆಗಳ ರೂಪದ್ವಯವು ದೊರೆಯುತ್ತದೆ. ಉತ್ತರಮಾರ್ಗದಲ್ಲಿ, ನೃಪತುಂಗನ ಹೇಳಿಕೆಯ ಪ್ರಕಾರ ಟಕಾರವಿಶಿಷ್ಟವಾದ ಕ್ರಿಯಾರೂಪವು ಬಳಕೆಯಲ್ಲಿಲ್ಲ, ತೆಲುಗಿನಲ್ಲಿಯೂ ಟಕಾರವಿಲ್ಲ, ಆದುದರಿಂದ ಉತ್ತರಮಾರ್ಗವು ತೆಲುಗಿನ ಸಂಪರ್ಕದಿಂದ ಹುಟ್ಟಿತು ಎಂದು ನಿರ್ಣಯಿಸುವುದು ಧಾರ್ಷ್ಟ್ಯವೇಸರಿ. ತೆಲುಗಿನಲ್ಲಿ ಈಗ ಟಕಾರವಿಲ್ಲದಿದ್ದರೂ ಒಂದಾನೊಂದುಕಾಲದಲ್ಲಿ ಅದು ಇದ್ದಿರಬಹುದು ಎಂಬ ಊಹೆಗೆ ಸಾಧಕವಾದ ಗುರುತುಗಳು ಶಬ್ದಗಳಲ್ಲಿ ಕಾಣುತ್ತವೆ. ತಮಿಳಿನಲ್ಲಿರುವ ಪ್ರೊಟ್ಟುದು ಎಂಬ ಶಬ್ದವ ಕನ್ನಡದಲ್ಲಿ ಪ್ರೊಟ್ಟು ಎಂಬ ರೂಪದಲ್ಲಿಯೂ ತೆಲುಗಿನಲ್ಲಿ ಪ್ರೊದ್ದು ಎಂಬ ರೂಪದಲ್ಲಿಯೂ ಇದೆ. ತಮಿಳಿನ ಮತ್ತು ಕನ್ನಡದ ಪಟಿ ಎಂಬ ಶಬ್ದವು ತೆಲುಗಿನಲ್ಲಿ ಪ್ರಾ ಎಂದಾಗಿದೆ. ತಮಿಳು ಕನ್ನಡಗಳಲ್ಲಿರುವ ಪಾಟು, ಏಟು ಎಂಬ ಮಾತುಗಳು ತೆಲುಗಿನಲ್ಲಿ ಪಾಡು, ಏಡು ಎಂಬ ರೂಪಗಳಲ್ಲಿವೆ. ಈ ಉದಾಹರಣಗಳಿಂದ ಟಕಾರವು ತೆಲುಗಿನಲ್ಲಿ ಕೆಲವುಕಡೆ ರೇಫವಾಗಿಯೂ ಕೆಲವುಕಡೆ ಡಕಾರವಾಗಿಯೂ ಪರಿಣಮಿಸಿದೆ ಎನ್ನಬಹುದು.

---

1. II, 100-104

ಇನ್ನು ನಾಗವರ್ಮನು ದಕ್ಷಿಣೋತ್ತರಮಾರ್ಗಗಳ ವಿಷಯವಾಗಿ ಏನು ಹೇಳುತ್ತಾನೆ ನೋಡುವ. ಕಾವ್ಯಾವಲೋಕನದ 3 ನೆಯ ಅಧಿಕರಣದ ಮಾರ್ಗವಿಭಾಗದರ್ಶನವೆಂಬ 1ನೆಯ ಪ್ರಕರಣದಲ್ಲಿ ನಾಗವರ್ಮನು ನೃಪತುಂಗನಂತೆಯೇ ಕಾವ್ಯಗುಣಗಳ ವಿವರಣೆಯಲ್ಲಿ ದಂಡಿಯನ್ನು ಅನುಸರಿಸಿ ಕೊನೆಗೆ ದಂಡಿಯ

ಇತಿ ವೈದರ್ಭಮಾರ್ಗಸ್ಯ ಪ್ರಾಣಾ ದಶಗುಣಾಃ ಸ್ಮೃತಾಃ |
ಏಷಾಂ ವಿಪರ್ಯಯಃ ಪ್ರಾಯೋ ದೃಶ್ಯತೇ ಗೌಡವರ್ತ್ಮನಿ ||

ಎಂಬ ಶ್ಲೋಕವನ್ನು ಪರಿವರ್ತಿಸಿ ಕೆಳಗಣ ಪದ್ಯವನ್ನು ಬರೆದಿದ್ದಾನೆ—

ಇವು ನಿಯತಂ ದಕ್ಷಿಣದೇ | ಶವರ್ತಿ ಕವಿರಾಜಮಾರ್ಗದೊಳ್ ನೆಗಳ್ದಿಂ ಮ |
ತ್ತವರ ವಿಪರ್ಯಯವೃತ್ತಿಯೆ | ಬವಣಿಸುಗುಮುದೀಚ್ಯಮಾರ್ಗದೊಳ್ ಪ್ರಾಯ
ರತೆಯಿಂ ||

ಇದರ ಮುಂದಣ ಪದ್ಯವಾದ

ವೈದರ್ಭಗೌಡಮಾರ್ಗವಿ | ಭೇದಂ ಬಗೆವೊಡೆ ಗತಾನುಗತಿಕಮಿದೆಂದೊ |
ಲ್ದಾದರಿಪರ್ ಕೆಲಬರ್ ಸಂ | ವಾದದೊಳೆರಡುಂ ಸಮಾರ್ಥಮಪ್ಪುದರಿಂದಂ ||

ಎಂಬುದರಲ್ಲಿ ಭಾಮಹನ ಕಾವ್ಯಾಲಂಕಾರದಲ್ಲಿಯ

ಗೌಡೀಯಮಿದಮೇತತ್ತು ವೈದರ್ಭಮಿತಿ ಕಿಂ ಪೃಥಕ್ |
ಗತಾನುಗತಿಕನ್ಯಾಯಾನ್ನಾನಾಖ್ಯೇಯಮಮೇಧಸಾಂ ||

ಎಂಬ ಶ್ಲೋಕದ ಅರ್ಥವನ್ನು ಹೇಳಿ ಆ ಪ್ರಕರಣವನ್ನು ಮುಗಿಸಿದ್ದಾನೆ. ಇದರಿಂದ ನಾಗವರ್ಮನು ಹೇಳುವ ದಕ್ಷಿಣೋತ್ತರಮಾರ್ಗಗಳು ವೈದರ್ಭಗೌಡಮಾರ್ಗಗಳೇ ಹೊರತು ಕನ್ನಡದ ಭೇದಗಳಲ್ಲ ಎಂಬುದು ವ್ಯಕ್ತವಾಗುತ್ತದೆ.

ಆಧುನಿಕನಾದ ಭಟ್ಟಾಕಳಂಕನು ತನ್ನ ಕರ್ಣಾಟಕ ಶಬ್ದಾನುಶಾಸನದ "ಆದೇಃ" ಎಂಬ 288 ನೆಯ ಸೂತ್ರದ ವ್ಯಾಖ್ಯಾನದಲ್ಲಿ ನಾರ್ ಎಂಬ ರೂಪವನ್ನು ಉತ್ತರ ಮಾರ್ಗದ ಕವಿಗಳು ಅಂಗೀಕರಿಸಿದ್ದಾರೆ, ದಕ್ಷಿಣಮಾರ್ಗದ ಕವಿಗಳು ಅದನ್ನು ಬಿಟ್ಟು ಅರ್ ಎಂಬ ರೂಪವನ್ನು ಅಂಗೀಕರಿಸಿದ್ದಾರೆ ಎಂದು ಹೇಳಿ, ದಕ್ಷಿಣೋತ್ತರಮಾರ್ಗಭೇದಸೂಚಕವಾದ ಪ್ರಯೋಗಗಳನ್ನು ನೃಪತುಂಗನ ಗ್ರಂಥದಲ್ಲಿ ನೋಡಬಹುದು ಎನ್ನುತ್ತಾನೆ. ಇಲ್ಲಿಯ ದಕ್ಷಿಣೋತ್ತರಶಬ್ದಗಳು ಕನ್ನಡದ ಭೇದಗಳಿಗೆ ಅನ್ವ

ಯಿಸುತ್ತವೆ ಎಂಬುದರಲ್ಲಿ ಸಂಶಯವಿಲ್ಲ. ಆದರೆ ಉತ್ತರ ಮಾರ್ಗವು ತೆಲುಗಿನ ಸಂಪರ್ಕದಿಂದ ಹುಟ್ಟಿದ್ದ ಪಕ್ಷದಲ್ಲಿ ತೆಲುಗಿನಲ್ಲಿ ನೇನು ಎಂಬ ರೂಪವು ಮಾತ್ರ ಇದ್ದಿರಬೇಕು ; ಆದರೆ ಆ ಭಾಷೆಯಲ್ಲಿ ದಕ್ಷಿಣಮಾರ್ಗದ ಅರ್ ಎಂಬುದಕ್ಕೆ ಸರಿಯಾದ ಏನು ಎಂಬ ರೂಪವೂ ಇದೆ. ಹಾಗೆಯೇ ಉತ್ತರಮಾರ್ಗದ ನಾನ್ ಎಂಬ ರೂಪವು ದಕ್ಷಿಣಮಾರ್ಗಕ್ಕೆ ಕಾರಣವೆಂದು ಹೇಳುವ ತಮಿಳಿನಲ್ಲಿಯೂ ಉಂಟು.

ಇದುವರೆಗೂ ಮಾಡಿದ ವಿಚಾರದಿಂದ—ಕನ್ನಡದಲ್ಲಿ ದಕ್ಷಿಣೋತ್ತರಮಾರ್ಗಗಳುಂಟು ; ಅವಕ್ಕೆ ಸಮಾನಾರ್ಥಕವಾದ ದ್ವಿರೂಪಕ್ರಿಯೆಗಳಲ್ಲಿಯೂ ಉತ್ತಮಪುರುಷ ದ್ವಿರೂಪಸರ್ವನಾಮಗಳಲ್ಲಿಯೂ ಅನ್ಯತರವನ್ನು ಪ್ರಯೋಗಿಸುವುದೇ ಭೇದಕ ಗುಣವು —ಎಂದು ಫಲಿತವಾಯಿತು. ಈ ಭೇದಕ್ಕೆ ತಮಿಳಾಗಲಿ ತೆಲುಗಾಗಲಿ ಕಾರಣವೆಂದು ಹೇಳಲು ಆಧಾರವಿಲ್ಲ. ಆದುದರಿಂದ ಅತ್ಯಲ್ಪವಾಗಿಯೂ ಅಮುಖ್ಯವಾಗಿಯೂ ಇರುವ ಈ ಭೇದವನ್ನು ಆಧಾರವಾಗಿಟ್ಟುಕೊಂಡು ದಕ್ಷಿಣೋತ್ತರಮಾರ್ಗಗಳಿಗಾಗಿ ಈಗ ಹೋರಾಡುವುದು ಅಷ್ಟು ಪ್ರಯೋಜನಕಾರಿಯಲ್ಲ.

ಕನ್ನಡ, ತಮಿಳು, ತೆಲುಗು ಎಂಬ ಭಾಷೆಗಳು ಒಂದೇ ಭಾಷಾವರ್ಗಕ್ಕೆ ಸೇರಿದುವಾದುದರಿಂದ ಶಬ್ದಗಳಲ್ಲಿಯೂ ವ್ಯಾಕರಣಪ್ರಕ್ರಿಯೆಗಳಲ್ಲಿಯೂ ಕೂಡಿದ ಮಟ್ಟಿಗೂ ಹೋಲಿಕೆಗಳು ಇದ್ದೇ ಇರುತ್ತವೆ. ಈ ಹೋಲಿಕೆಗಳಿಗೆ ಪರಸ್ಪರ ಸಂಪರ್ಕವು ಕಾರಣವೆಂದು ಹೇಳಲಿಕ್ಕಾಗುವುದಿಲ್ಲ. ಕನ್ನಡಕ್ಕೂ ತಮಿಳಿಗೂ ಇರುವಷ್ಟು ಹೋಲಿಕೆಗಳು ಕನ್ನಡಕ್ಕೂ ತೆಲುಗಿಗೂ ಇಲ್ಲ. ಅನೇಕ ಶಬ್ದಗಳೂ ಅನೇಕ ವ್ಯಾಕರಣ ಪ್ರಕ್ರಿಯೆಗಳೂ ಕನ್ನಡ ತಮಿಳುಗಳಲ್ಲಿ ಒಂದೇ ಆಗಿವೆ. ತೆಲುಗಿನಲ್ಲಿ ಇಂಥ ಸಾಮ್ಯಗಳು ಕಡಮೆ. ಈ ಭಾಷೆಗೆ ಅಸಾಧಾರಣವಾದ ಅಕ್ಷರಪಲ್ಲಟವೇ ಮುಂತಾದ ಮಾರುಪಾಡುಗಳಿಂದ ಅನೇಕ ಸಂದರ್ಭಗಳಲ್ಲಿ ಮಾತುಗಳ ಸ್ವರೂಪವನ್ನು ಗೊತ್ತುಮಾಡುವುದೇ ಕಷ್ಟವಾಗಿರುತ್ತದೆ. ಈ ಯಂಶವನ್ನು ತೋರಿಸುವುದಕ್ಕಾಗಿ ಕೆಲವು ಉದಾಹರಣೆಗಳನ್ನು ಕೆಳಗೆ ಕೊಡುತ್ತೇನೆ—

| | | | | | |
|---|---|---|---|---|---|
| ತಮಿಳು | ಇವರ್ | ಆಗಾದು | ಉರಲ್ | ಉಳ್ | ಅದೈ |
| ಕನ್ನಡ | ಇವರು | ಆಗದು | ಒರಲ್ | ಒಳ್ | ಅದಂ |
| ತೆಲುಗು | ವೀರು | ಕಾದು | ರೋಲು | ಲೋ | ದಾನಿ |

## ಕರ್ಣಾಟಕ ಕವಿಚರಿತೆ.

ಈ ಗ್ರಂಥದ ಪ್ರಥಮಸಂಪುಟವನ್ನು ಪ್ರಕಟಿಸಿ 12 ವರ್ಷಗಳಾದುವು. ಎರಡನೆಯ ಸಂಪುಟವು ಹೊರಬೀಳಲು ಏಕೆ ಇಷ್ಟು ಸಾವಕಾಶವಾಯಿತು ಎಂಬ ಪ್ರಶ್ನೆ ಸ್ವಾಭಾವಿಕವಾಗಿ ಹುಟ್ಟಬಹುದು. ಇದಕ್ಕೆ ಉತ್ತರವನ್ನು ಕೊಡಬೇಕಾದುದು ನನ್ನ ಕರ್ತವ್ಯವಾಗಿದೆ. ಈ ಸಂದರ್ಭದಲ್ಲಿ ಕೆಲವು ಸ್ವಂತ ವಿಷಯಗಳನ್ನೂ ತಿಳಿಸಬೇಕಾಗಿ ಬಂದಿದೆ. ಪ್ರಥಮಸಂಪುಟವನ್ನು ಬರೆವಾಗ ನನಗೆ ವಿಶೇಷ ಸಹಾಯಕರಾಗಿದ್ದ ವೆ॥ ರಾ॥ ಎಸ್. ಜಿ. ನರಸಿಂಹಾಚಾರ್ಯರು ಆ ಪುಸ್ತಕವು ಪ್ರಕಟವಾದ ಕಲವು ವರ್ಷಗಳಲ್ಲಿಯೇ ವೈಕುಂಠವಾಸಿಯಾದ ಸಂಗತಿ ಎಲ್ಲರಿಗೂ ವಿದಿತವಾಗಿಯೇ ಇದೆ. ಇವರಿಗಿದ್ದ ಕೂಲಂಕಷವಾದ ಕರ್ಣಾಟಕಭಾಷಾಪಾಂಡಿತ್ಯವೂ ಮನೋಹರವಾದ ಕವಿತಾಮಾರ್ಗವೂ ಇಂಥ ವೈದುಷ್ಯಕ್ಕೆ ಅಲಂಕಾರವಾದ ವಿನಯಸಂಪತ್ತಿಯೂ ಎಲ್ಲರ ಮನಸ್ಸನ್ನೂ ಆಕರ್ಷಿಸುತ್ತಿದ್ದುವು. ಇವರ ಅಕಾಲಮರಣದಿಂದ ಮೈಸೂರುದೇಶಕ್ಕೆ ಮಾತ್ರವೇ ಅಲ್ಲದೆ ಕನ್ನಡನಾಡೆಲ್ಲಕ್ಕೂ ವಿಶೇಷನಷ್ಟವುಂಟಾಯಿತೆಂದು ಹೇಳಿದರೆ ಅತ್ಯುಕ್ತಿಯಾಗಲಾರದು. ನನಗಂತೂ ಇವರ ಮರಣದಿಂದ ಬಲದ ಭುಜನೇ ಹೋದಹಾಗಾಯಿತು. ಮುಂದಣ ಕೆಲಸವನ್ನು ನಿರ್ವಹಿಸಬೇಕೆಂಬ ಉತ್ಸಾಹವು ತಗ್ಗಿತು. ಶಾಸನದ ಇಲಾಖೆಯ ಹಲವುವಿಧವಾದ ಕೆಲಸಗಳನ್ನು ಸಮರ್ಪಕವಾಗಿ ಮಾಡಿಕೊಂಡು ಈ ಕರ್ಣಾಟಕಕವಿಚರಿತೆಯ ಕೆಲಸಕ್ಕೂ ಬೇಕಾದ ಅವಕಾಶವನ್ನು ಒದಗಿಸಿಕೊಳ್ಳುವುದು ಅಸಾಧ್ಯವಾಗಿ ಕಂಡುಬಂದಿತು. ಹಲವು ಮಾತುಗಳಿಂದೇನು ಇನ್ನಾರಾದರೂ ಕನ್ನಡಭಾಷಾಭಿಮಾನಿಗಳು ಈ ಕಾರ್ಯವನ್ನು ಕೈಗೊಂಡು ಕೊನೆಗಾಣಿಸಲಿ, ನನ್ನಿಂದ ಸಾಧ್ಯವಲ್ಲ ಎಂಬ ಭಾವನೆಯಿಂದ ಬುದ್ಧಿ ತಟಸ್ಥವಾಯಿತು.

ಹೀಗೆ ಕೆಲವುಕಾಲವು ಕಳೆಯಿತು. ಈ ಕೆಲಸಕ್ಕೆ ಇನ್ನಾರೂ ಕೈಹಾಕುವ ಸಂಭವವು ತೋರಲಿಲ್ಲ. ಪ್ರಥಮಸಂಪುಟವನ್ನು ಬರೆದುದರಿಂದ ಉಂಟಾದ ಅನುಭವವೂ ದ್ವಿತೀಯಸಂಪುಟಕ್ಕಾಗಿ ಸಂಗ್ರಹಿಸಿದ ಸಾಮಗ್ರಿಯೂ ವ್ಯರ್ಥವಾಗಬಾರದೆಂದು ಮನಸ್ಸಿಗೆ ತೋರಿತು. ಹೇಗಾದರೂ ಅವಕಾಶಮಾಡಿಕೊಂಡು ಎಷ್ಟುಕಷ್ಟವಾದರೂ ಈ ಕಾರ್ಯವನ್ನು ನೆರವೇರಿಸುವುದು ಅವಶ್ಯ ಕರ್ತವ್ಯವೆಂಬ ಭಾವನೆ ಹುಟ್ಟಿತು. ಅದರಮೇಲೆ ಈವಿಧ

ನಾಡ ಭಾಷಾಸೇವೆಯನ್ನು ಮಾಡಿಯೇತೀರಬೇಕೆಂಬ ದೃಢಸಂಕಲ್ಪವನ್ನು ಕೈಗೊಂಡೆನು.

ದ್ವಿತೀಯ ಸಂಪುಟ.

ಆದರೆ ಕೆಲಸವನ್ನುಆರಂಭಿಸಿದಮೇಲೆ ಕಷ್ಟಗಳು ಹೆಚ್ಚುತ್ತಬಂದುವು. ಪೂರ್ವದಲ್ಲಿ ಸಂಗ್ರಹಿಸಿದ್ದ ಸಾಮಗ್ರಿ ಅಲ್ಪವಾಗಿಯೂ ಅಪೂರ್ಣವಾಗಿಯೂ ಇದ್ದಿತು. ಮುಂದಕ್ಕೆ ಸಂಗ್ರಹಿಸಬೇಕಾದ ಅಂಶಗಳು ಬಹಳವಾಗಿದ್ದುವು. ಹಿಂದೆ ಮದರಾಸ್ ಪ್ರಾಚ್ಯಕೋಶಾಲಯ ಮುಂತಾದ ಸ್ಥಲಗಳಲ್ಲಿ ಪುಸ್ತಕಗಳನ್ನು ಪರಿಶೀಲಿಸಿದಾಗ ಪ್ರಥಮಸಂಪುಟಕ್ಕೆ ಬೇಕಾದ ವಿಷಯಗಳನ್ನು ಮಾತ್ರ ವಿಸ್ತಾರವಾಗಿ ಗುರುತುಹಾಕಿಕೊಂಡು, ಅವಶ್ಯಕತೆ ಬಿದ್ದಾಗ ಪುನಃ ಹೋಗಿ ನೋಡಬಹುದೆಂಬ ಭಾವನೆಯಿಂದ ಮಿಕ್ಕವಿಷಯಗಳನ್ನು ಬಹಳಸಂಗ್ರಹವಾಗಿ ಗುರುತುಹಾಕಿದ್ದೆನು. ಮತ್ತೊಂದಾವೃತ್ತಿ ಹೋಗಿ ನೋಡಿದಾಗ ಹಿಂದೆ ನೋಡಿದ್ದ ಪುಸ್ತಕಗಳಲ್ಲಿ ಹಲವು ನನ್ನ ದುರದೃಷ್ಟದಿಂದ ಹುಳುಗಳ ಬಾಯಿಗೆ ತುತ್ತಾಗಿ ನಾಶವಾಗಿಹೋಗಿದ್ದುವು. ಹೀಗೆ ನಷ್ಟವಾದ ಪುಸ್ತಕಗಳ ಪ್ರತ್ಯಂತರಗಳು ಬೇರೆಕಡೆ ಎಷ್ಟು ಹುಡುಕಿದರೂ ದೊರೆಯದೆ ಹೋದುದರಿಂದ ಕೆಲವು ಕವಿಗಳ ಚರಿತೆಯನ್ನು ಹಿಂದೆ ಗುರುತುಹಾಕಿದ ಅಲ್ಪಸ್ವಲ್ಪವಿಷಯಗಳ ಆಧಾರದಮೇಲೆ ಅತಿಸಂಗ್ರಹವಾಗಿ ಬರೆಯಬೇಕಾಯಿತು. ಹಲವು ಸಂಧರ್ಭಗಳಲ್ಲಿ ಅವಲೋಕನಕ್ಕಾಗಿ ಸ್ವಲ್ಪಕಾಲ ಪುಸ್ತಕಗಳನ್ನು ಪಡೆವುದಕ್ಕೋಸ್ಕರ ನಾನು ಪಟ್ಟ ಕಷ್ಟವು ಇಷ್ಟಿಷ್ಟೆಂದು ಹೇಳಲಾಗುವುದಿಲ್ಲ ಅನೇಕ ಜನರು ತಮ್ಮಲ್ಲಿ ಪುಸ್ತಕಗಳಿದ್ದರೂ ಇಲ್ಲವೆಂದು ಹೇಳುತ್ತಾರೆ. ಮತ್ತೆ ಕೆಲವರು ಅವುಗಳನ್ನು ಇತರರಿಗೆ ತೋರಿಸುವುದಕ್ಕೆ ಹಿಂದೆಗೆಯುತ್ತಾರೆ. ಇನ್ನು ಕೆಲವರು ಇನ್ನೊಬ್ಬರಕೈಗೆ ಅವುಗಳನ್ನು ಕೊಡಲು ಸರ್ವಥಾ ಸಮ್ಮತಿಸುವುದಿಲ್ಲ. ಈವಿಷಯಗಳು ಶೋಚನೀಯವೇ ಸರಿ. ಕಷ್ಟವಾದ ಸರಕಾರದ ಕೆಲಸವನ್ನು ಸಮರ್ಪಕವಾಗಿ ನಿರ್ವಹಿಸಿಕೊಂಡು ಅವಕಾಶವು ದೊರೆತಹಾಗೆಲ್ಲಾ ಅತಿಶ್ರಮಸಾಧ್ಯವಾದ ಈ ಗ್ರಂಥರಚನಾ ಕಾರ್ಯವನ್ನು ಮತ್ತೊಬ್ಬರ ಸಹಾಯವಿಲ್ಲದೆ ಕೇವಲ ಭಾಷಾಭಿಮಾನದ ಬಲದಿಂದ ನಿರ್ವಹಿಸುತ್ತ ಬಂದುದರಿಂದ ವಿಳಂಬಕ್ಕೆ ಕಾರಣವಾಯಿತು

ಈ ಸಂಪುಟವನ್ನು ಬರೆವುದಕ್ಕಾಗಿ ಮದರಾಸ್ ಪ್ರಾಚ್ಯಕೋಶಾಲಯ, ಮೈಸೂರು ಪ್ರಾಚ್ಯಕೋಶಾಲಯ, ಮೈಸೂರು ಮಹಾರಾಜರವರ ಅರಮನೆಗೆ ಸೇರಿದ ಸರಸ್ವತೀ ಭಂಡಾರ; ಶ್ರೀಮಂತರು ಶ್ರವಣಬೆ

ಳೊಳಗಳದ ಪಂಡಿತ ದೊಡ್ಡಬೆಲೆ ಶಾಸ್ತ್ರಿಗಳು, ಮೈಸೂರು ಎಂ.ಎ. ರಾಮಾ ನುಜಯ್ಯಂಗಾರ‍್ಯರು, ಎಳಂದೂರು ತಾಲ್ಲೂಕು ಅಗರದ ಸುಬ್ಬಾಪಂಡಿ ತರು, ಅಗರದ ನರಸಿಂಹಶಾಸ್ತ್ರಿಗಳು, ಕೊರಟಗೆರೆ ಸಬ್‌ತಾಲ್ಲೂಕು ಅಗ್ರ ಹಾರದ ಪಟೇಲ್ ಈಶ್ವರಯ್ಯನವರು, ಕುಣಿಗಲ್ ಹಿರಿಯಮಠದ ಬಸವ ಲಿಂಗಯ್ಯನವರು, ಬೆಂಗಳೂರು ಶಾಸನದ ಇಲಾಖಾ ಜೊಮ್ಮರಸ ಪಂಡಿ ತರು, ಇವರುಗಳಲ್ಲಿದ್ದ ಪುಸ್ತಕಸಂಗ್ರಹಗಳು; ಇವುಗಳಲ್ಲಿ ದೊರೆತ ಪುಸ್ತ ಕಗಳನ್ನೆಲ್ಲಾ ಪರೀಕ್ಷಿಸಿ ನೋಡಿದೆನು ಅಲ್ಲದೆ ಶ್ರೀಮಂತರು ಕರ್ಣಾ ಟಕಭಾಷಾರತ್ನ ಕರಿಬಸವಶಾಸ್ತ್ರಿಗಳು, ಮಾಗಡಿ ಕೆ. ರಾಮಸ್ವಾಮ್ಯ ಯ್ಯಂಗಾರ‍್ಯರು, ಮೈಸೂರು ಎಂ. ವಿ. ಚಂದ್ರಶೇಖರ ಶಾಸ್ತ್ರಿಗಳು, ಬೆಂಗ ಳೂರು ಜೀರಿಗೆ ಬಸವಲಿಂಗಪ್ಪನವರು ಇವರುಗಳು ಕಳುಹಿಸಿಕೊಟ್ಟ ಕೆಲವು ಪುಸ್ತಕಗಳನ್ನು ಪರಿಶೀಲಿಸಿದೆನು. ಇನ್ನು ಕೆಲವರು ಮಿತ್ರರು ತಮ್ಮಲ್ಲಿರುವ ಅಥವಾ ತಮಗೆ ತಿಳಿದ ಕೆಲವು ಗ್ರಂಥಗಳ ವಿಷಯವಾಗಿ ಕಳುಹಿಸಿಕೊಟ್ಟ ಸೂಚನೆಗಳನ್ನು ವಿಮರ್ಶಿಸಿದೆನು. ಹೀಗೆ ನಾನು ಪರೀಕ್ಷಿಸಿದ ತಾಳಪತ್ರದ ಪುಸ್ತಕಗಳ ಸಂಖ್ಯೆ ಸುಮಾರು ಬಂದು ಸಾವಿರ ದಮೇಲಿರಬಹುದು. ಮೇಲೆ ಹೇಳಿದ ಎಲ್ಲಾ ಮಹನೀಯರುಗಳ ಉಪ ಕಾರವೂ ಚಿರಸ್ಮರಣೀಯವಾಗಿದೆ.

ಈ ಸಂಪುಟದಲ್ಲಿ 15ನೆಯ ಶತಮಾನದ ಆದಿಭಾಗದಿಂದ 17ನೆಯ ಶತಮಾನದ ಕೊನೆಯವರೆಗೆ ಬಾಳಿದ ಸುಮಾರು 350 ಕವಿಗಳ ಚರಿತೆ ಹೇಳಿದೆ. ಈ ಕವಿಗಳಲ್ಲಿ ಸುಮಾರು 160 ಮಂದಿ ವೀರಶೈವರೂ 79 ಮಂದಿ ಜೈನರೂ 60 ಮಂದಿ ಬ್ರಾಹ್ಮಣರೂ 51 ಮಂದಿ ಇತರರೂ ಆಗಿ ದ್ದಾರೆ. ಇವರೆಲ್ಲರೂ ಉದ್ದಾಮಕವಿಗಳೆಂದು ಹೇಳಲಾಗುವುದಿಲ್ಲ. ನನ್ನ ತಿಳಿವಳಿಕೆಗೆ ಬಂದ ಪ್ರತಿಯೊಬ್ಬ ಗ್ರಂಥಕರ್ತನ ಹೆಸರೂ ಗ್ರಂಥ ದಲ್ಲಿ ಇರಬೇಕೆಂಬ ಉದ್ದೇಶದಿಂದ ಎಲ್ಲರನ್ನೂ ಸೇರಿಸಿದ್ದೇನೆ. ಹೀಗೆ ಮಾಡದಿದ್ದರೆ ಅನೇಕ ಸಾಧಾರಣ ಕವಿಗಳ ಹೆಸರೇ ಮರೆತುಹೋಗುವು ದರಲ್ಲಿ ಸಂಶಯವಿಲ್ಲ. ಈ ಗ್ರಂಥವು ಹಿಂದೆ ತಿಳಿಯದಿದ್ದ ಅನೇಕಕವಿ ಗಳ ಚರಿತೆಯನ್ನು ಒಳಕೊಂಡಿದೆ. ಈ ವಿಷಯವು ಗ್ರಂಥವನ್ನು ಕ್ರ ಮವಾಗಿ ಓದಿನೋಡಿದಲ್ಲಿ ಸ್ವತಃ ವ್ಯಕ್ತವಾಗುವುದರಿಂದ ಅದನ್ನು ಇಲ್ಲಿ ವಿವರಿಸಬೇಕಾದ ಆವಶ್ಯಕತೆಯಿಲ್ಲ. ಮೊದಲು 42 ಪುಟಗಳಲ್ಲಿ ಪ್ರಥಮ

ಸಂಪುಟಕ್ಕೆ ಸೇರಬೇಕಾದ ಕೆಲವು ಹೊಸ ವಿಷಯಗಳನ್ನೂ ಕೆಲವು ತಿದ್ದುಪಾಡುಗಳನ್ನೂ ತಿಳಿಸಿದ್ದೇನೆ. ವೀರಶೈವಕವಿಗಳಲ್ಲಿ ಹಲವರು ಗೂಢವಾದ ವೇದಾಂತ ವಿಷಯಗಳನ್ನು ಎಲ್ಲರಿಗೂ ತಿಳಿವಂತೆ ಸುಲಭವಾದ ಮಾತುಗಳಲ್ಲಿ ವಚನರೂಪವಾಗಿ ಬರೆದಿದ್ದಾರೆ. ಈ ವಚನಕಾರರ ಹೆಸರು ಅಂಕಿತ ಮುಂತಾದ ವಿಷಯಗಳನ್ನು ಉದಾಹರಣೆಗಳೊಡನೆ ಒಂದೇ ಕಡೆ (ಪುಟಗಳು 105-124) ಸೇರಿಸಿ ಬರೆದಿದ್ದೇನೆ ಹೀಗೆಯೇ ಕೆಲವು ಪದ್ಯಗಳಲ್ಲಿ ದೊರೆವ ಕವಿಗಳ ಬಿರುದುಗಳ ವಿಷಯವಾಗಿ ಒಂದೇ ಕಡೆ (ಪುಟಗಳು 175-178) ಕೆಲವು ಮಾತುಗಳನ್ನು ಹೇಳಿದ್ದೇನೆ. ಗ್ರಂಥದ ಕೊನೆಯಲ್ಲಿ ಮೂರು ಪರಿಶಿಷ್ಟಗಳಿವೆ. ಒಂದನೆಯದರಲ್ಲಿ ಈ ಸಂಪುಟಕ್ಕೆ ಸೇರಬೇಕಾದ ಕೆಲವರು ಕವಿಗಳ ಚರಿತೆ ಹೇಳಿದೆ. ಎರಡನೆಯದರಲ್ಲಿ ಗ್ರಂಥಶುದ್ಧಿಯೂ ಕೆಲವು ವಿಶೇಷವಿಷಯಗಳೂ ಉಕ್ತವಾಗಿವೆ. ಮೂರನೆಯದರಲ್ಲಿ ಈಚೆಗೆ ತಿಳಿದುಬಂದ ಒಬ್ಬ ಪುರಾತನಕವಿಯ ವಿಷಯವು ಹೇಳಿದೆ. ಆದಿಭಾಗದಲ್ಲಿ ವಾಚಕರ ಸೌಕರ್ಯಕ್ಕಾಗಿ ಈಸಂಪುಟದಲ್ಲಿ ವಿವರಿಸಿರುವ ಕವಿಗಳ ಮತ್ತು ಗ್ರಂಥಗಳ ಹೆಸರುಗಳು ಬೇರೆಬೇರೆ ವರ್ಣಾನುಕ್ರಮವಾಗಿ ಪುಟಸಂಖ್ಯೆಯೊಡನೆ ಕೊಟ್ಟಿದೆ.

ಈ ಸಂಪುಟದಲ್ಲಿ 15, 16, 17 ಈ ಮೂರು ಶತಮಾನಗಳಲ್ಲಿದ್ದ ಎಲ್ಲಾ ಕವಿಗಳ ವಿಷಯವೂ ಬಂದಿದೆ ಎಂದು ಧೈರ್ಯವಾಗಿ ಹೇಳಲಾರೆನು. ನನ್ನ ತಿಳಿವಳಿಕೆಗೆ ಬಂದ ಆವ ಕವಿಯ ಹೆಸರನ್ನೂ ಬಿಟ್ಟಿಲ್ಲ ಎಂದು ಮಾತ್ರ ಹೇಳಬಲ್ಲೆನು ಹೆಚ್ಚಾದ ಅಂಶಗಳು ತಿಳಿದು ಬಾರದಿರುವುದರಿಂದ ಕೆಲವರು ಕವಿಗಳ ಚರಿತೆ ಅತಿಸಂಗ್ರಹವಾಗಿ ಬರೆಯಲ್ಪಟ್ಟಿದೆ. ಕವಿಗಳ ಕಾಲವನ್ನು ನಿರ್ಧರಿಸುವುದರಲ್ಲಿ ಬೇರೆ ಆಧಾರವಿಲ್ಲದ ಕಡೆ ಪುಸ್ತಕಗಳ ಸ್ವರೂಪ, ಅಕ್ಷರದ ರೀತಿ, ಪ್ರತಿಮಾಡಿದವರು ಹೇಳುವ ಕಾಲ, ಭಾಷಾಶೈಲಿ ಮುಂತಾದುವುಗಳಿಂದ ಕಾಲವನ್ನು ಊಹಿಸಿದ್ದೇನೆ. ಸಾಧನಸಂಪತ್ತಿಯುಳ್ಳ ಮಹನೀಯರು ಈ ಕೊರತೆಗಳನ್ನು ಸಾಧ್ಯವಾದ ಮಟ್ಟಿಗೆ ನಿವಾರಣೆ ಮಾಡಲು ಸಹಾಯಮಾಡಿದರೆ ಬಹಳ ಉಪಕಾರವಾಗುವುದು. ಇಷ್ಟು ಕೊರತೆಗಳುಳ್ಳ ಈ ಗ್ರಂಥವನ್ನು ಏಕೆ ಇಷ್ಟು ಆತುರವಾಗಿ ಪ್ರಕಟಿಸಬೇಕು ಎಂಬ ಪ್ರಶ್ನೆ ಸ್ವಾಭಾವಿಕವಾಗಿ ಅಂಕುರಿಸಬಹುದು. ಇದಕ್ಕೆ ಉತ್ತರವೇನೆಂದರೆ—ಮನುಷ್ಯನ ದೇಹವು ಶಾಶ್ವತವಲ್ಲ; ನಾನು ಸುಮಾರು 30

ಸಿಕ್ಷುಷದಿಂದ ಭಾಷಾಸೇವೆಮಾಡಿ ಸಂಗ್ರಹಿಸಿದ ವಿಷಯಗಳು " ಜೀರ್ಣ ಮಂಗೇ ಸುಭಾಷಿತಂ " ಎಂಬಂತೆ ವ್ಯರ್ಥವಾಗಬಾರದು ; ಅವುಗಳನ್ನು ಪ್ರಕಟಿಸಿ ಕನ್ನಡಿಗರ ಮುಂದೆ ಇಟ್ಟರೆ ಅವರು ಒಂದಾನೊಂದುಕಾಲದಲ್ಲಿ ತಪ್ಪುಗಳನ್ನು ತಿದ್ದಿ ಶುದ್ಧಮಾಡಿ ವೃದ್ಧಿಗೊಳಿಸುವ ಸಂಭವವುಂಟು—ಎಂಬುದೇ. ಆದುದರಿಂದ ಕೊರತೆಗಳಿವೆ ಎಂದು ತಿಳಿದೂ ಈ ಗ್ರಂಥವನ್ನು ಕನ್ನಡಿಗರಿಗೆ ಕಾಣಿಕೆಯಾಗಿ ಒಪ್ಪಿಸಿದೇನೆ. ಇದರಿಂದ ಕನ್ನಡ ಭಾಷೆಯ ಅಭಿವೃದ್ಧಿಗೆ ಅಲ್ಪಸ್ವಲ್ಪ ಸಹಾಯವಾದರೂ ನನ್ನ ಶ್ರಮವು ಸಾರ್ಥಕವಾಯಿತೆಂದು ಆನಂದಿಸುವೆನು. ಭಾಷಾಸೇವೆಯನ್ನು ಮಾಡಬೇಕೆಂಬ ಉತ್ಕಟೇಚ್ಛೆಯಿಂದ ಈ ಗ್ರಂಥವನ್ನು ಬರೆದಿದ್ದೇನೆಯೇ ಹೊರತು ಖ್ಯಾತಿಲಾಭಪೂಜೆಗಳಿಗಾಗಿ ಅಲ್ಲ. ಇದರಲ್ಲಿರಬಹುದಾದ ಗುಣವನ್ನು ಮಾತ್ರ ಗ್ರಹಿಸಿ ಅಭಿನಂದಿಸುವುದು ಸಹೃದಯರಾದ ಮಹನೀಯರುಗಳಿಗೆ ಸ್ವಭಾವವಾಗಿದೆ. ಆದರೂ ಇದರಲ್ಲಿರುವ ತಪ್ಪುಗಳನ್ನೂ ನಿರ್ದಾಕ್ಷಿಣ್ಯವಾಗಿ ತಿಳಿಸಿ ನನಗೂ ಕನ್ನಡಸಾಹಿತ್ಯಕ್ಕೂ ಉಪಕಾರಮಾಡಬೇಕೆಂದು ಅವರನ್ನು ಬೇಡಿಕೊಳ್ಳುತ್ತೇನೆ.

ಹದಿನೇಳನೆಯ ಶತಮಾನದಿಂದ ಈಚೆಗೆ ಬಾಳಿದ ಕವಿಗಳ ಚರಿತೆಯನ್ನು ಮೂರನೆಯ ಸಂಪುಟವಾಗಿ ಬರೆಯಬೇಕೆಂಬ ಕೋರಿಕೆಯಿದೆ. ಈ ಕೋರಿಕೆಯನ್ನು ದೇವರು ನೆರವೇರಿಸಬೇಕೆಂದು ಪ್ರಾರ್ಥಿಸುತ್ತೇನೆ.

ಈಸಂಪುಟವನ್ನು ತಮಗೆ ಅರ್ಪಿಸಲು ಅಪ್ಪಣೆಯನ್ನು ದಯಪಾಲಿಸಿದುದಕ್ಕಾಗಿ ಶ್ರೀಮನ್ಮಹಾರಾಜರವರಿಗೆ ಅತ್ಯಂತ ಕೃತಜ್ಞನಾಗಿದ್ದೇನೆ.

ಪ್ರಥಮಸಂಪುಟದ ವಿಷಯವಾಗಿ ಸದಭಿಪ್ರಾಯಗಳನ್ನು ತಿಳಿಸಿದ ಮಹನಿಯರುಗಳ ದ್ವಿತೀಯಸಂಪುಟದ ಮುದ್ರಣಕ್ಕೆ ಸಹಕಾರಿಗಳಾದ ಮೈಸೂರು ವಿಶ್ವವಿದ್ಯಾನಿಲಯದ ಅಧಿಕಾರಿಗಳ ಉಪಕಾರವು ಚಿರಸ್ಮರಣೆಯವಾಗಿದೆ.

ಕನ್ನಡಕವಿಗಳ ಜಸಮಂ | ಕನ್ನಡಿಸೀಗ್ರಂಥದೊಂದನೆಯ ಸಂಪುಟಮಂ |
ಮುನ್ನಂ ಕನ್ನಡನಾಡಿನ | ಬಿನ್ನಣಿಗಳ್ಗೊಲ್ದು ಕಾಣ್ಕೆಯಾಗರ್ಪಿಸಿದೆಂ ||
ಇನ್ನಿತ್ತ ಮೆಱೆದ ಕವಿಗಳ | ಸನ್ನುತಚರಿತಾಬ್ಧಿಯಲ್ಲಿ ನಾನಱಿವನಿತಂ |
ಕನ್ನಡಿಗರ ಮನಕೊಲವ | ಪ್ಪನ್ನಂ ಬಣ್ಣಿಸಿದೆನೆರಡನೆಯ ಸಂಪುಟದೊಳ್ ||
ಇದಱಲ್ಲಿ ದೋಷವಿರ್ದೊಡೆ | ಸದಯರ್ ವಿಬುಧರ್ ಸಮಂತುತಿರ್ದುಗೆಮುದದಿಂ |
ದಿದಱಲ್ಲಿನಿಸಾನುಂ ಗುಣ | ಮೊದವಿರ್ದೊಡೆ ಮೆಚ್ಚಿ ಕೊಳ್ಗೆ ಸೌಹೃದದಿಂದಂ ||
ಶ್ರೀರಾಮಾನುಜಪದಸರ | ಸೀರುಹಷಟ್ಪದನನಂತದೇಶಿಕವಂಶ್ಯಂ |
ನಾರಾಯಣಾರ್ಯತನುಭವ | ನೋರಂತೊರೆದಂ ನೃಸಿಂಹಕವಿಯೀಕೃತಿಯಂ ||

ರಾ. ನರಸಿಂಹಾಚಾರ್ಯ

ಶ್ರೀ.

# ಕರ್ಣಾಟಕ ಕವಿಚರಿತೆ.

## ದ್ವಿತೀಯ ಸಂಪುಟ.

ಹದಿನಾಲ್ಕನೆಯ ಶತಮಾನದಿಂದ ಮುಂದಕ್ಕೆ ಕವಿಗಳ ಚರಿತ್ರೆಯನ್ನು ಕ್ರಮವಾಗಿ ಬರೆಯಲು ಆರಂಭಿಸುವುದಕ್ಕೆ ಮೊದಲು ಈಚೆಗೆ ನಮ್ಮ ತಿಳಿವಳಿಕೆಗೆ ಬಂದ, ಪ್ರಥಮಸಂಪುಟಕ್ಕೆ ಸೇರಬೇಕಾದ, ಕೆಲವು ಹೊಸ ವಿಷಯಗಳನ್ನೂ ಕೆಲವು ತಿದ್ದುಪಾಡುಗಳನ್ನೂ ಇಲ್ಲಿ ತಿಳಿಸುವುದು ಅವಶ್ಯಕವಾಗಿದೆ.

### 14 ನೆಯ ಶತಮಾನಕ್ಕೆ ಹಿಂದೆ ಇದ್ದ ಕವಿಗಳು.

### ಶ್ಯಾಮಕುಂದಾಚಾರ್ಯ. ಸು. 700.

ಈ ಜೈನಕವಿ ಪ್ರಾಭೃತವನ್ನು ಕನ್ನಡದಲ್ಲಿ ಬರೆದಿರುವುದಾಗಿ ಇಂದ್ರನಂದಿಯ ಶ್ರುತಾವತಾರದಲ್ಲಿಯ

ಕಾಲೇ ತತಃ ಕಿಯತ್ಯಪಿ ಗತೇ ಪುನಃ ಶ್ಯಾಮಕುಂದಸಂಜ್ಞೇನ |
ಪ್ರಾಕೃತಸಂಸ್ಕೃತಕರ್ಣಾಟಭಾಷಯಾ ಪದ್ಧತಿಃ ಪರಾ ರಚಿತಾ ||

ಎಂಬ ಭಾಗದಿಂದ ತಿಳಿಯುತ್ತದೆ. ಈತನು ತುಂಬುಲೂರಾಚಾರ್ಯನ ಅಥವಾ ಶ್ರೀವರ್ಧದೇವನ [1] ಕಾಲದಲ್ಲಿಯೋ ಅಥವಾ ಅವನ ಕಾಲಕ್ಕೆ ಸ್ವಲ್ಪ ಹಿಂದೆಯೋ ಇದ್ದಂತೆ ತೋರುತ್ತದೆ. ಇವನ ಗ್ರಂಥವು ದೊರೆತಿಲ್ಲ.

---

### ಗುಣವರ್ಮ I [2] ಸು. 900.

ಈತನು ಶೂದ್ರಕ ಎಂಬ ತನ್ನ ಗ್ರಂಥದಲ್ಲಿ ಮಹೇಂದ್ರಾಂತಕ ಎಂಬುದೇ ಮೊದಲಾದ ಬಿರುದುಗಳುಳ್ಳ ಒಬ್ಬ ಗಂಗರಾಜನನ್ನು ವಿಶೇಷವಾಗಿ

1. Volume 1, 7. 2. *Ibid.*, 64 and 370.

ಸ್ತುತಿಸಿ ಶೂದ್ರಕರಾಜನಿಗೆ ಹೋಲಿಸಿದ್ದಾನೆ. ಗಂಗರಾಜರಲ್ಲಿ ಮಹೇಂದ್ರಾಂತಕ ಎಂಬ ಬಿರುದುಳ್ಳವನು 886 ರಿಂದ 913ರ ವರೆಗೆ ಆಳಿದ ಎರೆಯಪ್ಪನು ಒಬ್ಬನೇ ಆದುದರಿಂದ ಕವಿ ಈತನ ಆಶ್ರಿತನಾಗಿ ಇದ್ದಿರಬೇಕು. ಆದುದರಿಂದ ಇವನ ಕಾಲವು ಸುಮಾರು 900 ಆಗಿರಬಹುದು.

---

## ಶ್ರೀವಿಜಯದಂಡನಾಥ. ಸು. 915

ಕಡಪಾಡಿಸ್ಟ್ರಿಕ್ಟ್ ದಾನವುಲಪಾಡು ಎಂಬ ಗ್ರಾಮದಲ್ಲಿರುವ ಒಂದು ಶಾಸನದಲ್ಲಿ [1] ಈತನನ್ನು 'ಅನುಪಮಕವಿ', 'ಅಱುವಿಂಗೋಜ' ಎಂದು ಹೊಗಳಿದೆ. ಈತನು ಕವಿಯಾಗಿದ್ದಿರಬಹುದು; ಆವ ಗ್ರಂಥವನ್ನು ಬರೆದಿದ್ದಾನೆಯೋ ತಿಳಿಯದು. ಈತನು ಜೈನನು, ಬಳಿಕುಲದವನು. ಇವನು ರಾಷ್ಟ್ರಕೂಟರಾಜನಾದ ಇಂದ್ರ III (915-917) ಎಂಬವನಲ್ಲಿ ದಂಡನಾಯಕನಾಗಿದ್ದಂತೆಯೂ ಬಹಳ ಪರಾಕ್ರಮಶಾಲಿಯಾಗಿದ್ದಂತೆಯೂ ಕೊನೆಗೆ ಸನ್ಯಾಸನವಿಧಿಯಿಂದ ನಿರ್ವಾಣವನ್ನು ಪಡೆದಂತೆಯೂ ಮೇಲಣ ಶಾಸನದಿಂದ ತಿಳಿಯುತ್ತದೆ. ಈ ಶಾಸನದಿಂದ ಇವನ ಸ್ತುತಿರೂಪವಾದ ಕೆಲವು ಪದ್ಯಗಳನ್ನು ಕೆಳಗೆ ಬರೆಯುತ್ತೇವೆ.

ಪತಿಯ ಬೆಸದಿಂದಮುಚಿತರ | ನತಿಕೋಪದಿನಿಕ್ಕಿ ಗೆಲ್ದು ಪರಿಪಾಳಿಸಿದಂ |
ಚತುರುದಧಿವಲಯಮೆಲ್ಲಮ | ನತಿರಥನೀ ದಂಡನಾಯಕಂ ಶ್ರೀವಿಜಯಂ ||
ತುರಗದಬಿಂಗಳನೊಡ್ಡಿದ | ಕರಿಘಟೆಯುಂ ಪಿರಿಯ ನೆರವಿಯುಂ ಬಲ್ಲಣೆಯುಂ |
ಧುರದೆಡೆಯೊಳಱಿದು ಗೆಲ್ಗುಂ | ಕರದಸಿ ಕಗಮುರಿದು ರಣದೊಳನುಪಮ
ಕವಿಯಾ ||

ಅಟ್ಟವಿಧಕರ್ಮಮೆಲ್ಲಮ | ನಟ್ಟುಂಬರಿಗೊಂಡು ಕಿಡಿಪೆನೆಂಬುದೆ ಬಗೆಯಿಂ |
ಪುಟ್ಟಿದನುದಾತ್ತಸತ್ವಂ | ನೆಟ್ಟನೆ ವಿಬುಧೇಂದ್ರವಂದ್ಯನಱುವಿಂಗೋಜಂ ||
ತಾನಱಿದು ತೊಱೆದು ನೆಟ್ಟನೆ|ಮಾನಿಸವಾೞ್ವೆವುದೆಂಗು ಸನ್ಯಾಸನದೊಳ್ |
ಮಾನಸಿಕೆಗಿಡದೆ ಕೊಂಡೊನ|ನೂನಸುಖಾಸ್ಪದಮನಱ್ತಿಯೊಳ್ ಶ್ರೀವಿಜಯಂ||

---

1. *Epigraphia Indica*, X, 150.

## ಗಜಾಂಕುಶ,[1] ಮನಸಿಜ,[2] ಚಂದ್ರಭಟ್ಟ.[3] ಸು. 1000

ಈ ಕವಿಗಳನ್ನು ಶ್ರೀಧರಾಚಾರ್ಯನು[4] ತನ್ನ ಜಾತಕತಿಲಕದಲ್ಲಿ (1049) ಸ್ತುತಿಸಿರುವುದರಿಂದ ಇವರುಗಳು ಅವನ ಕಾಲಕ್ಕೆ ಹಿಂದೆ, ಎಂದರೆ ಸುಮಾರು 1000 ರಲ್ಲಿಯೋ ಅಥವಾ ಆಕಾಲಕ್ಕೆ ಸ್ವಲ್ಪ ಹಿಂದೆಯೋ, ಇದಿರಬೇಕು.

---

## ಶ್ರೀಧರಾಚಾರ್ಯ. 1049

ಈತನು ಜಾತಕತಿಲಕವನ್ನು ಬರೆದಿದ್ದಾನೆ. ಚಂದ್ರಪ್ರಭಚರಿತೆಯನ್ನೂ ಬರೆದಿರುವಂತೆ ಜಾತಕತಿಲಕದ ಅಂತ್ಯಭಾಗದಲ್ಲಿರುವ

ಸುಭಗವಚಂ ಕಾವ್ಯಕವಿ | ತ್ವಭೂಷಣಂ ಶ್ರೀಧರಾರ್ಯರಚಿತಂ ಚಂದ್ರ |
ಪ್ರಭಚರಿತಂ ಶಾಸ್ತ್ರಕವಿ | ತ್ವಭೂಷಣಂ ಧರೆಗೆ ನೆಗೞ್ದ ಜಾತಕತಿಲಕಂ ||
ಆದಿದೆನ್ನದೆ ಜಾತಕತಿಲ | ಕದೊಳಱಿವುದು ಗಣಿತಧರ್ಮಮಂ ಸಕಳಜಗ |
ದ್ವಿದಿತಂ ಚಂದ್ರಪ್ರಭಚರಿ|ತದೊಳಱಿವುದು ಕಾವ್ಯಧರ್ಮಮಂ ಬುಧನಿವಹಂ||

ಎಂಬ ಪದ್ಯಗಳಿಂದ ತಿಳಿಯುತ್ತದೆ. ಆದರೆ ಈ ಗ್ರಂಥವು ನಮಗೆ ದೊರೆತಿಲ್ಲ.

ಇವನು ಜೈನಕವಿ. ಇವನ ಸ್ಥಳ ಬೆಳುವಲನಾಡಿನಲ್ಲಿರುವ ನರಿಗುಂದ. "ವಿಪ್ರಕುಲೋತ್ತಮಂ" ಎಂದು ಹೇಳಿಕೊಂಡಿದ್ದಾನೆ. "ಇದುವರೆಗೂ ಆರೂ ಕನ್ನಡದಲ್ಲಿ ಜ್ಯೋತಿಷವನ್ನು ಬರೆದಿಲ್ಲ; ನೀನು ಜಾತಕತಿಲಕವನ್ನು ಬರೆಯಬೇಕು" ಎಂದು ವಿದ್ವಾಂಸರು ಹೇಳಲು ಈ ಗ್ರಂಥವನ್ನು ಬರೆದಂತೆ ಕವಿ ಹೇಳುತ್ತಾನೆ. ಇದರಿಂದ ಕನ್ನಡದಲ್ಲಿ ಜ್ಯೋತಿಷವನ್ನು ಬರೆದವರಲ್ಲಿ ಇವನೇ ಪ್ರಥಮಕವಿಯೆಂದು ತಿಳಿಯುತ್ತದೆ. ಈಯಂಶವನ್ನು ಬಾಹುಬಲಿ (ಸು. 1550) ತನ್ನ ನಾಗಕುಮಾರಕಥೆಯ ಆದಿಭಾಗದಲ್ಲಿಯ ಈ ಪದ್ಯದಲ್ಲಿ ದೃಢೀಕರಿಸುತ್ತಾನೆ—

---

1. Volume I, 67. 2. *Ibid.*, 115. 3. *Ibid.*, 136. 4. ಇವನ ಚರಿತವನ್ನು ನೋಡಿ.

ಜ್ಯೋತಿಷವಿದ್ಯೆಗೆ ಮೊದಲಿಗ ಸಲೆ ವಾದಿ | ವ್ರಾತಭಯಂಕರನೆನಿಪ |
ಖ್ಯಾತಿಗೆ ನೆಲೆಯಾದ ಶ್ರೀಧರಾಚಾರ್ಯರ | ಪ್ರೀತಿ ಕೈಮಿಗೆ ಬಲಗೊಂಬೆ ||

ಈ ಗ್ರಂಥವನ್ನು "ಧರಣಿಗಿರಿನಿಧಿಶಕಕಾಂಕಂ ವಿರೋಧಿಸಂವತ್ಸರದಲ್ಲಿ" ಎಂದರೆ ಶಕ 971 (ಕ್ರಿಸ್ತ 1049) ರಲ್ಲಿ ಬರೆದಂತೆ ಹೇಳುತ್ತಾನೆ. ಗ್ರಂಥಾಂತ್ಯದಲ್ಲಿ "ಧಾತ್ರಿಯನಾಹವಮಲ್ಲಭೂಮಿಪಾಳಕನೆಸೆದಾಳ್ಗೆ" ಎಂಬುದರಿಂದ ಕವಿ ಚಾಳುಕ್ಯರಾಜನಾದ ಆಹವಮಲ್ಲನ (1042-1068) ಆಳಿಕೆಯಲ್ಲಿದ್ದನೆಂದು ತಿಳಿಯುತ್ತದೆ.

ಈ ಕವಿಗೆ ಗದ್ಯಪದ್ಯವಿದ್ಯಾಧರ, ಬುಧಮಿತ್ರ ಎಂಬ ಬಿರುದುಗಳುಂಟು. ತನ್ನ ಗುಣಾದಿಗಳನ್ನೂ ಕವಿತಾಪ್ರೌಢಿಯನ್ನೂ ಈ ಪದ್ಯಗಳಲ್ಲಿ ಹೇಳಿದ್ದಾನೆ:—

ವಿಧುವಿಶದಯಶೋನಿಧಿ ಕಾ|ವ್ಯಧರ್ಮಜಿನಧರ್ಮಗಣಿತಧರ್ಮಮಹಾಂಭೋ |
ನಿಧಿಯೆನೆ ನೆಗೞ್ದಂ ಜಗದೊಳ್ |ಬುಧಮಿತ್ರಂ ನಿಜಕುಲಾಂಬುಜಾಕರಮಿತ್ರಂ ||
ರಸಭಾವಸಮನ್ವಿತನೆಂ | ದು ಸುಭಗನೆಂದಖಿಳವೇದಿಯೆಂದನ್ವಿತನೆಂ |
ದು ಸಮಗ್ರನೆಂದು ಸಲೆ ಬ | ಣ್ಣಿಸುವುದು ಧರೆ ಗದ್ಯಪದ್ಯವಿದ್ಯಾಧರನಂ ||
ಅನವದ್ಯಂ ಕವಿತಾಗುಣಾರ್ಣವನಿಳಾದೇವಾನ್ವಯಾಬ್ಧ್ಯಂಬುಜಾ |
ವನಿಭಂ ಪ್ರೌಢವಿಳಾಸಿಸೀಮನಸಿಜಂ ಶ್ರೀಶೀಲಭದ್ರಂ ದ್ವಿಷ ||
ಜ್ಜನದುರ್ವಾರಗಜಾಂಕುಶಂ ಸುಜನರತ್ನಂ ತಾನೆನಲ್ಕೇಂ ಕೃತಾ |
ರ್ಥನೊ ಕರ್ಣಾಟಕವೀಂದ್ರಸದ್ಗುಣ ? ಗುಣಾಸಂಜ್ಞಾಧರಂ ಶ್ರೀಧರಂ ||

ಕೊನೆಯ ಪದ್ಯದಲ್ಲಿ ಆದಿಪಂಪ (ಕವಿತಾಗುಣಾರ್ಣವ), ಚಂದ್ರ ಅಥವಾ ಚಂದ್ರಭಟ್ಟ (ಅಂಬುಜಾರಿ), ಮನಸಿಜ, ? ಗುಣವರ್ಮ (ಶೀಲಭದ್ರ), ಗಜಾಂಕುಶ, ರನ್ನ ಎಂಬ ಪೂರ್ವಕವಿಗಳ ಹೆಸರನ್ನೂ ಸೂಚಿಸಿದ್ದಾನೆ.[1]

---

1 ಇದರಿಂದ ಈ ಕವಿಗಳೆಲ್ಲಾ 1049ಕ್ಕೆ ಹಿಂದೆ ಇದ್ದವರೆಂಬುದು ವ್ಯಕ್ತವಾಗುತ್ತದೆ. ಆದುದರಿಂದ ಪ್ರಥಮಸಂಪುಟದಲ್ಲಿ ಮನಸಿಜ, ಗಜಾಂಕುಶ, ಚಂದ್ರ ಅಥವಾ ಚಂದ್ರಭಟ್ಟ ಇವರುಗಳಿಗೆ ಹೇಳಿರುವ ಕಾಲವನ್ನು 1049ಕ್ಕೆ ಹಿಂದೆ ಹಾಕಬೇಕು.

"ಧರಣೀಸ್ತುತಾರ್ಯಭಟನಂ । ನಿರತಿಶಯೋಜ್ವಳಯಶಃಪ್ರಕೋರಕನಂ ಶ್ರೀ। ಕರಣ" ಎಂಬ ಅಸಮಗ್ರವಾದ ಪದ್ಯದಲ್ಲಿ ಆರ್ಯಭಟನ ಹೆಸರು ಹೇಳಿದೆ.

ಇವನ ಗ್ರಂಥ—

## ಜಾತಕತಿಲಕ

ಇದು ಜ್ಯೋತಿಷಗ್ರಂಥ ; ಕಂದವೃತ್ತಗಳಲ್ಲಿ ಬರೆದಿದೆ; 24 ಅಧಿಕಾರಗಳಾಗಿ ಭಾಗಿಸಲ್ಪಟ್ಟಿದೆ. ಅಧಿಕಾರಗಳ ಹೆಸರು–ಸಂಜ್ಞಾ, ಬಲಾಬಲ, ಗರ್ಭ, ಜನ್ಮ, ತಿರ್ಯಗ್ಜನ್ಮ, ಅರಿಷ್ಟ, ಅರಿಷ್ಟಭಂಗ, ಆಯುರ್ದಾಯ, ದಶಾಂತರ್ದಶಾ, ಅಷ್ಟಕವರ್ಗ, ಜೀವ, ರಾಜಯೋಗ, ನಾಭಿಸಂಯೋಗ, ಚಂದ್ರಯೋಗ, ದ್ವಿತ್ರಿಯೋಗ, ದೀಕ್ಷಾಯೋಗ, ರಾಶಿ, ಲಗ್ನಭಾವ, ದ್ರೇಕ್ಕಾಣ, ದೃಷ್ಟ, ಅನಿಷ್ಟ, ಸ್ತ್ರೀಜಾತಕ, ನಿರ್ಯಾಣ, ನಷ್ಟಜಾತಕ. ಈ ಗ್ರಂಥದ ಉತ್ಕೃಷ್ಟತೆಯನ್ನು ಕವಿ ಈ ಪದ್ಯಗಳಲ್ಲಿ ಹೇಳಿದ್ದಾನೆ-

ಪದಪೂರಣಮನಣಂ ಪುಗಿ । ಸದೆ ಕುದಿದು ವೃಥಾಕ್ಷರಂಗಳಂ ಪ್ರಾಸದೊಳಿ ।
ಕ್ಕದೆ ಶಾಸ್ತ್ರದರ್ಥಮುಂ ಬಸು । ಡದೆ ಪೂರ್ಣೋಯಿನೋದುವೇಱುವ್ರೊಡಾರ್
ಮೆಚ್ಚದಿದಂ ॥

ಅಮಿತಾರ್ಥಂ ಸಕಲಾಚಾ। ರ್ಯಮತಾಂತಸ್ಸಾರಮತಿಗಭೀರಂ ಹೃದಯಂ ।
ಗಮುಮನ್ಯಶಾಸ್ತ್ರನಿರಪೇ । ಕ್ಷಮೆಂಬಿನಂ ಖ್ಯಾತಮಾಯ್ತು ಜಾತಕತಿಲಕಂ ॥

ಸುಕರಮುಚಿತಕ್ರಿಯಾಕಾ । ರಕಮಪಶಬ್ದ ಪ್ರದೂರಮುಪನೇಯಂ ಸಾ ।
ರ್ಥಕಪದವಿನ್ಯಾಸಂ ಜಾ । ತಕತಿಲಕಮಿದೆಂದು ಕೊಂಡುಕೊಳೆಯದರೊಳರೇ ॥

ಲಲಿತವಚೋಲಲನಾನನ । ತಿಲಕಂ ದೈವಜ್ಞವದನತಿಲಕಂ ವಿದ್ಯ ।
ತ್ಕುಲಮುಖತಿಲಕಂ ಜಾತಕ।ತಿಲಕಂ ತ್ರೈಲೋಕ್ಯತಿಲಕಮಿದು ಕೇವಲಮೇ॥

ಗ್ರಂಥಾವತಾರದಲ್ಲಿ ಜಿನಸ್ತುತಿಯೂ ಸರಸ್ವತೀಸ್ತುತಿಯೂ ಇವೆ. ಅಧಿಕಾರಾಂತ್ಯದಲ್ಲಿ ಈಗದ್ಯವಿದೆ—

ಇದು ಭಗವದರ್ಹತ್ಪರಮೇಶ್ವರಚರಣಸರಸಿರುಹಷಟ್ಪದಾಯಮಾನಂ ಸರಸಪ್ರಸನ್ನಂ ವಚೋಲಕ್ಷ್ಮೀಧರಂ ಗದ್ಯಪದ್ಯವಿದ್ಯಾಧರಂ ಶ್ರೀ ಶ್ರೀಧರಾಚಾರ್ಯಪ್ರಣೀತಮಪ್ಪ ಜಾತಕತಿಲಕದೊಳ್

ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

## ಜ್ಯೋತಿಷದ ಪ್ರಯೋಜನ

ಭವಬದ್ಧಶುಭಾಶುಭಕ | ರ್ಮವಿಪಾಕದ ಫಲವನಱಿವುಗುಂ ಜ್ಯೋತಿರ್ಜ್ಞಾ
ನವದೆಂತೆನೆ ಕತ್ತಲೆವನೆ | ಯ ವಸ್ತುವಂ ತೋರ್ಪ ಸೊಡರ ಬೆಳಗಿನ ತೆಱದಿಂ||

## ಗ್ರಹಬಲ

ಶನಿಯಿಂದಂ ಮಹಿಜಾತನಾ ಮಹಿಜನಿಂದಂ ಸೌಮ್ಯನಾ ಸೋಮನಂ |
ದನನಿಂದಂ ಗುರುವಾ ಸುರೇಂದ್ರಗುರುವಿಂದಂ ಶುಕ್ರನಾ ಶುಕ್ರನಿಂ ||
ವನಜಾತಾಹಿತನಾ ವನೇಜರಿಪುವಿಂ ಪಂಕೇಜಮಿತ್ರಂ ಬಳಾ |
ಢ್ಯನೆನಿಕ್ಕುಂ ಕ್ರಮದಿಂದಮೀ ಗ್ರಹಬಳಂ ನೈಸರ್ಗಿಕಂ ನಾಮದಿಂ ||

## ಸ್ತ್ರೀಪುಂಜನನ

ಅಸಮಾಲಯದೊಳ್ ನಿಲೆ ಸೂ | ರ್ಯಸುರೇಜ್ಯರ್ ಬಳಯುತರ್ ನರಂ
ಪುಟ್ಟುಗುಮಾ |
ಅಸಿತೇಂದುಗಳತಿಬಳರಾ | ಗಿ ಸಮದೊಳಿರೆ ರಮಣಿ ಪುಟ್ಟುಗುಂ ಬುಧಮಿತ್ರಾ ||

## ಪ್ರಸವದಿನ

ವಿದಿತಂ ಕಾಂತೆಗೆ ಪೋಱುತೀವಿದುದು ಪೇಱಿನ್ನಾವುದಕ್ಕುಂ ಪ್ರಸೂ |
ತದಿನಂ ತಾನೆನೆ ಚಂದ್ರನಾವ ಗೃಹದೊಳ್ ತತ್ಕಾಲದೊಳ್ ನಿಂದನಾ ||
ಸದನದ್ವಾದಶಭಾಗಮಂತೆನಿತು ಸಲ್ಗುಂ ಮುಂತೆ ತತ್ಸಂಖ್ಯೆಗೇ |
ಪದಿನೆತ್ತಲ್ ? ನಿಶಚಂದ್ರಮಂ ಪ್ರಸವಕಾಲಂ ಕಾಂತೆಗಂತಾ ದಿನಂ ||

## ಅರಿಷ್ಟನಾಶ

ಪಿರಿದು ಪಳಂಚಿದೆ ಱಳೇಂ ಸುರ | ಗುರುವೊರ್ವನೆ ವೀರ್ಯವಂತನುಂ ಕಾಂತನುಮಾ|
ಗಿರೆ ಜನ್ಮಲಗ್ನದೊಳ್ ಸಂ ! ಹರಿಸುಗುಮಘಮಂ ಕರೀಂದ್ರಮಂ
ಸಿಂಹದವೋಲ್ ||

## ಶಿಶುಮರಣ

ಬರೆ ಕನ್ಯಾಲಗ್ನಂ ಭಾ | ಸ್ಕರನಲ್ಲಿರೆ ಮೀನದೊಳ್ ಶನೈಶ್ಚರನಿರೆ ಸುಂ |
ದರಿ ಸಾಗುಮುದಯುದಯ್ದನೆ | ಯ ರಾಶಿಯೊಳ್ ಭೂಜನಿರೆ ತನೂಜಂ
ಸಾಗುಂ ||

### ನಕ್ಷತ್ರವನ್ನು ಕಂಡುಹಿಡಿವುದು

ಸಮನಿಸಿದ ಪೃಚ್ಛಕನ ಪೆಸ | ರ ಮಾತ್ರೆಯೊಳ್ ಕೂಡಿಕೊಂಡು ಛಾಯಾಂಗುಳಿವಾ|
ಸಮನಿಸಿಪ್ಪ್ರತ್ತೇೞಱುನೆ | ತ್ತಿ ಮಿಕ್ಕುದಕ್ಕುಂ ಧನಿಷ್ಠೆ ಮೊದಲೆನೆ ಭಗಣಂ||

### ದೀರ್ಘಾಯು

ತ್ರಿದಶಾಧೀಶ್ವರಮಂತ್ರಿಶೀತಕರರೆಂಬೀಯಿರ್ವರುಂ ಕರ್ಕಿಗೇ |
ಹದೊಳಿರ್ದಂದು ಶಶಾಂಕಸೂನುಸಿತರೆಂಬೀಯಿರ್ವರುಂ ಕೇಂದ್ರಗೇ ||
ಹದೊಳಿರ್ದಂದು ರಿಪುತ್ರಿಲಾಭಗೃಹದೊಳ್ ಮಿಕ್ಕನ್ಯರಿರ್ದಂದು ಪು |
ಟ್ಟಿದ ಮರ್ತ್ಯಂಗೆ ಚಿರಾಯು ಸಂಭವಿಸುಗುಂ ಸಂಯುಕ್ತ್ವರತ್ನಾಕರಾ ||

---

### ದಿವಾಕರಣಂದಿ.[1] 1062

ಈತನ ತತ್ವಾರ್ಥಸೂತ್ರವೃತ್ತಿ ಈಚೆಗೆ ದೊರೆಯಿತು. ಇದಕ್ಕೆ ತತ್ವಾರ್ಥಸೂತ್ರಾನುಗತಕರ್ಣಾಟಕಲಘುವೃತ್ತಿ ಎಂದು ಹೆಸರು. ಮೂಲವು ಗೃಧ್ರಪಿಂಛಾಚಾರ್ಯಕೃತ. ವೃತ್ತಿಯ ಆದಿಯಲ್ಲಿ

ನತ್ವಾ ಜಿನೇಶ್ವರಂ ವೀರಂ ವಕ್ಷ್ಯೇ ಕರ್ಣಾಟಭಾಷಯಾ |
ತತ್ವಾರ್ಥಸೂತ್ರಸೂತ್ರಾರ್ಥಂ ಮಂದಬುದ್ಧ್ಯನುರೋಧತಃ ||

ಎಂಬ ಶ್ಲೋಕವೂ ಅಂತ್ಯದಲ್ಲಿ

ಇದು ಸಕಲಾಗಮಸಂಪನ್ನಶ್ರೀಮಚ್ಚಂದ್ರಕೀರ್ತಿಭಟ್ಟಾರಕ ಪದ್ಮನಂದಿಸಿದ್ಧಾಂತದೇವ ಶ್ರೀಪಾದಪ್ರಸಾದಾಸಾದಿತಸಮಸ್ತಸಿದ್ಧಾಂತಾಮೃತಪಾರಾವಾರ ಶ್ರೀಮದ್ದಿವಾಕರಣಂದಿಭಟ್ಟಾರಕಮುನೀಂದ್ರವಿರಚಿತ ತತ್ವಾರ್ಥಸೂತ್ರಾನುಗತಕರ್ಣಾಟಕಲಘುವೃತ್ತಿಯೊಳ್

ಎಂಬ ಗದ್ಯವೂ ಇವೆ. ಪ್ರಕರಣ 10

---

### ಶಾಂತಿನಾಥ.[2] 1068

ಈತನ ಸುಕುಮಾರಚರಿತೆ ಈಚೆಗೆ ದೊರೆಯಿತು. ಇದು ಚಂಪೂರೂಪವಾಗಿದೆ ; 12 ಆಶ್ವಾಸಗಳಾಗಿ ಭಾಗಿಸಲ್ಪಟ್ಟಿರುವಂತೆ ತೋರು

---

1. Volume I, 362. 2. *Ibid.*, 364.

ತ್ತದೆ. ನಮಗೆ ದೊರೆತ ಪ್ರತಿಯಲ್ಲಿ ಆದ್ಯಂತಗಳಲ್ಲಿ ಓಲೆಗಳು ಹೋಗಿರುವುದಲ್ಲದೆ ಮಧ್ಯದಲ್ಲಿಯೂ ಹಲವು ಕಡೆ ಓಲೆಗಳು ಶಿಥಿಲವಾಗಿಯೂ ಲುಪ್ತವಾಗಿಯೂ ಇರುವುದರಿಂದ ಗ್ರಂಥದ ಆನುಪೂರ್ವಿಯನ್ನಾಗಲಿ ಕವಿಯ ವಿಷಯವನ್ನಾಗಲಿ ತಿಳಿಸಲು ಸಾಧ್ಯವಿಲ್ಲದೆ ಇದೆ. ಇದರಲ್ಲಿ ಸೂರದತ್ತ ರಾಜನಿಗೂ ಯಶೋಭದ್ರೆಗೂ ಹುಟ್ಟಿದ ಸುಕುಮಾರನೆಂಬ ರಾಜಕುಮಾರನ ಚರಿತ್ರವು ಹೇಳಿದೆ. ಈತನು ಯಶೋಭದ್ರಾಚಾರ್ಯರ ಉಪದೇಶದಿಂದ ಪೂರ್ವಸ್ಮರಣೆಯನ್ನು ಪಡೆದು ವೈರಾಗ್ಯದಿಂದ ಅವರಲ್ಲಿಯೇ ದೀಕ್ಷೆಯನ್ನು ಹೊಂದಿ ಕೊನೆಗೆ ಮುಕ್ತಿಯನ್ನು ಪಡೆಯುತ್ತಾನೆ.

ಆಶ್ವಾಸಗಳ ಅಂತ್ಯದಲ್ಲಿ ಈ ಗದ್ಯವಿದೆ—

ಇದು ಸಮಸ್ತವಿನೇಯಜನವಿನಮಿತ ಶ್ರೀವರ್ಧಮಾನಮುನೀಂದ್ರವಂದ್ಯಪರಮಜಿನೇಂದ್ರಶ್ರೀಪಾದಪದ್ಮವರಪ್ರಸಾದೋತ್ಪನ್ನಸಹಜಕವೀಶ್ವರ ಶ್ರೀಶಾಂತಿನಾಥಪ್ರಣೀತಮಪ್ಪ ಸುಕುಮಾರಚರಿತ್ರದೊಳ್

ಪ್ರಥಮಸಂಪುಟದಲ್ಲಿ (ಪುಟ 364) ಹೇಳಿರುವಂತೆಯೇ ಈ ಕವಿಯ ಗುರು ವರ್ಧಮಾನಮುನಿಯೆಂದೂ ಕವಿಗೆ ಪರಮಜಿನಮತಾಂಭೋಜಿನೀರಾಜಹಂಸಂ, ಸರಸ್ವತೀಮುಖಮುಕುರಂ, ಸಹಜಕವೀಶ್ವರ. ಎಂಬ ಬಿರುದುಗಳು ಇದ್ದುವೆಂದೂ ಈ ಗ್ರಂಥದಿಂದಲೂ ತಿಳಿಯುತ್ತದೆ ಈ ವರ್ಧಮಾನಮುನಿ ಮೂಲಸಂಘದ ದೇಶೀಯಗಣದ ಕೊಂಡಕುಂದಾನ್ವಯಕ್ಕೆ ಸೇರಿದವನೆಂದು ಹೇಳಿದೆ.

ಈ ಗ್ರಂಥದಿಂದ ಕೆಲವು ಭಾಗಗಳನ್ನು ತೆಗೆದು ಬರೆಯುತ್ತೇವೆ—

ಮುನಿ

ಮುನಿವವರುಂ ಕೂರ್ಪವರುಂ | ಮುನಿಸುಂ ಕೂರ್ಮೆಯುಮನುಂಟುಮಾಡುವ ಪದದೊಳ್ |
ಮುನಿಯದ ಕೂರದ ಮುಸಿಸದ | ಮುನಿಪತಿ ಭಾಪಿಪೊಡೆ ತಾನೆ ಜಿನಪತಿಯಲ್ತೇ ||

ಉದ್ಯಾನ (ಅದ್ಯಂತಪ್ರಾಸದ ರಗಳೆ)

ಆ ಸಿರುಪನುಗೃಹಬಹಿರುದ್ಯಾನಂ | ತಾನೆಸೆದೊಪ್ಪುಗುಮಪ್ರತಿಮಾನಂ |
ನಾಗಲತಾವಿಸ್ತೀರ್ಣಮದಪ್ಪುದು | ಪೂಗದ್ರುಮಸಂಕೀರ್ಣಮೆನಿಪ್ಪುದು |

ಬನದೊಳೆತ್ತಲುಂ ಸುೞಿವರಗಿಳಿಗಳೆ | ಜೆನುಗಿ ರಾಗದಿಂದಂ ಮೊರೆವಳಿಗಳೆ |
ಪೋ ಪುಗಿಲ್ ಪುಗಿಲ್ ಸಿಲ್ಲೆನುತೆ ಕರಂ| ಕಾಪುಗೊಂಡು ಜಡಿವುದು ಪಿಕನಿಕರಂ||

## ವಿವಾಹಗೇಹ (ಲಲಿತರಗಳೆ)

ಮರಕತಭಿತ್ತಿಗಳಿಂ ಭಿತ್ತಿವೆತ್ತು | ಪೊಸದೇಸೆಯೊಳೆತ್ತಂ ಭಂಗಿವೆತ್ತು |
ವಜ್ರದ ಕಂಭಂಗಳ ಕಾಂತಿ ಮಿಂಚೆ | ಪರಭಾಗಂಬಡೆದವೞೊಳ್ ಪಳಂಚೆ |
ಪೊಂಗಳಸಂಗಳ್ ತಳತಳನೆ ತೊಳಗೆ | ಕಪ್ಪುರದ ಸೊಡರ್ಗಳೋರಂತೆ ಬೆಳಗೆ |
ಪೊಂದಳಿರ್ಗಳ ತೋರಣದೊಳಗೆ ಪೊೞಗೆ | ಕೆಂದಳಿರ್ಗಳ ಮಾಲೆಗಳೆೞಗಿ
ತುೞುಗೆ |
ಭಾವಿಸುವಂದಸು ಪುಣ್ಯಾವತಾರ ! ಮಾರಯ್ವಂದದು ಸಂಸಾರಸಾರ |
ಈ ಲೋಕದೊಳದಱಂತಪ್ಪುವಿಲ್ಲ | ಒಣ್ಣಿಸಲದನಾವನುಮಱಿದನಿಲ್ಲ ||

## ಊಟ

ಎಳಮಾವಿನ ಮಿಡಿ ಮಾಗುಳಿ|ಮೆಳಸಿನ ಕರೆ ಜಿತ್ರಲಟ್ಟೆಯಿಾಳೆಯ ಗೊಲೆಯಿಂ|
ದಳವಟ್ಟಿರೆ ಲಾವಣಕಂ | ಗಳನಿಕ್ಕಿದರಾಗಳರ್ಥಿಯಿಂದಂಗನೆಯರ್ ||
ಇದು ಬಾಳ್ಕೊಸರಿದು ಕಳಲಿಂ|ತಿದು ರುಚಿವೆತ್ತಿರ್ದ್ದ ಪಾನಮಿದು ಮಜ್ಜಿಗೆ ತಾ|
ನಿದು ಶಿಖರಿಣಿಯೆನುತುಂ ತಿಂ|ಬಿ ತಿಂಬಿ ತಂದೆಱೆದರಬಲೆಯರ್ ಸಿರ್ಪುಗಳಿಂ ||

## ಜಿನಸ್ತುತಿ

ಕಿವಿಗಳ್ ನಿನ್ನ ಮೃದೂಕ್ತಿಯಂ ಬಯಸಿ ಕೇಳುತ್ತಿರ್ಕೆ ಕಣ್ಗಳ್ ಮಹೋ |
ತ್ಸವದಿಂ ನಿನ್ನನೆ ನೋಡುತಿರ್ಕೆ ಸಲೆ ಕೈಗಳ್ ನಿನ್ನ ಪಾದಾರವಿಂ ||
ದವನೋತರ್ಚ್ಚಿಸುತಿರ್ಕೆ ಸಂದ ಮನಮೆಂದುಂ ನಿನ್ನ ದಿವ್ಯಸ್ವರೂ |
ಪವನಾರಾಧಿಸುತಿರ್ಕೆ ವಿಶ್ರುತವಿನೇಯಸ್ವಾರ್ಥಚಿಂತಾಮಣೀ ||

## ಜಿನಸ್ತುತಿ (ಪದ್ದಳಿ)

ಜಯ ಜಯ ಭುವನತ್ರಯಪರಮದೇವ | ದೇವೇಂದ್ರಾಭ್ಯರ್ಚಿತಚರಣಕಮಲ |
ಕಮಲವಿರಹಿತನಿರುಪಮದೇಹ | ದೇಹಾಶ್ರಿತಶುಭಲಕ್ಷಣವಿನೂತ |
ನೂತನಸಂಗತಕೈವಲ್ಯಬೋಧ | ಬೋಧಪ್ರಕಾಶವಸ್ತುಸ್ವರೂಪ |
ರೂಪಾತಿಶಯಾನ್ವಿತ ವಿತತವಿಭವ | ಭವನಿವಹಪಟಲನಿರ್ಮುಕ್ತಜೀವ ||

### ಸುಕುಮಾರನ ಭೋಗ

ಮಾಸರಮೊಕ್ಕ ಕತ್ತುರಿಯ ಪಂಕಮನಲ್ಲದೆ ಪಂಕಮಂ ಕರಂ |
ಬೀಸುವ ಚಾರುಚಾಮರದ ಗಾಳಿಯನಲ್ಲದೆ ಗಾಳಿಯಂ ಮನೋ ||
ಭಾಸುರಮಪ್ಪ ಕಪ್ಪುರದ ದೂಳಿಯನಲ್ಲದೆ ದೂಳಿಯಂ ನಿಜಾ |
ವಾಸದೊಳೆಂತುಟೆಂದಱಿಯನಿಂತುಟು ಪುಣ್ಯಮಗಣ್ಯಮಾತನಾ ||

### ನಾಗಶ್ರೀಯ ವರ್ಣನೆ. (ರಗಳೆ)

ಸುದತಿಯ ತೊಳಗುವ ತೋಳ ಮೊದಲ್ಗಳ್ | ಮದನವಿಲಾಸದ ಮೊತ್ತ ಮೊದಲ್ಗಳ್ |
ಲಲನಾರತ್ನದ ಬಾಹುಯುಗಂಗಳ್ | ಲಲಿತಲತಾಶಾಖಾಸದೃಶಂಗಳ್ |
ಸುರುಚಿರಮೃದುತರಪಲ್ಲವದಂತಿರೆ | ಕರತಳಮೊಪ್ಪುಗುಮೆಸೆದೋರಂತಿರೆ |
ಕರಶಾಖೆಗಳತನುಕ್ಷುರದಂದಂ | ಕರನಖನುವು ಕೇದಗೆಯೆಸಳಂದಂ |
ನೋಡೆ ಕುಮಾರಿಯ ಬಳ್ಕುವ ಮಧ್ಯಂ|ನಾಡೆ ಮನೋಜ್ಞಂ ಪೊಗೞಲಸಾಧ್ಯಂ|
ಲಾವಣ್ಯಾಂಬುರಸದ್ರುವರೂಪಂ | ಭಾವಿಪೊಡಾಕೆಯ ನಾಭೀಕೂಪಂ |
ಜಲಜದಳಾಕ್ಷಿಯ ಕಣ್ಮಲರಂದಂ | ಪೊಳೆವೆಳಮೀಂಗಳ ಪೊಣರ್ಗಳ ಚಂದಂ|
ಅಗಣಿತಗುಣೆಯಂ ವಿಬುಧನಿಕಾಯಂ | ಪೊಗೞಲ್ನೆಱೆವರೆ ನಾಗಶ್ರೀಯಂ ||

### ನಾಗಶ್ರೀಯ ಪಾಂಡಿತ್ಯ

ಪ್ರತಿಭಾಸಂಸ್ಕೃತಿಯಿಂ ಸಲಕ್ಷಣತರಂಗೋಪಾಂಗದಿಂ ವಿಶ್ವವಿ |
ಶ್ರುತವರ್ಣಾರ್ಥದಿನರ್ಥದೃಷ್ಟಿಯಿನಳಂಕಾರೋಕ್ತಿಯಿಂ ನಿರ್ಣಯೋ ||
ಚಿತವಿನ್ಯಾಸದಿನತ್ಯುದಾತ್ತರಸದಿಂದಾ ಕನ್ಯೆ ಸಾಕ್ಷಾತ್ಸರ |
ಸ್ವತಿ ತಾನೆಂಬಿನಮೇಂ ಪ್ರಭಾವಿಸಿದಳೋ ನಾನಾಕಳಾಳಾಪಮಂ ||
ನೆರೆದಾ ರಾಜಸಭಾಂತರಾಳದೊಳುದಾತ್ತಾರ್ಥೋಕ್ತಿಯಿಂ ತನ್ನೊಳಾರ್ |
ದೊರೆಯೆಂಬನ್ನೆಗಮುದ್ಗತಪ್ರಥಿತಶಬ್ದಾರ್ಥೋಕ್ತಿಯಿಂ ವ್ಯಕ್ತಮಾ ||
ಗಿರೆ ವಕ್ಖಾಣಿಸಿ ತದ್ವಿದರ್ ಪೊಗೞ್ದು ಬಾಪ್ಪೆಂಬನ್ನೆಗಂ ತತ್ಪತಿಂ |
ವರೆ ವೇದಾದಿಕಳಾಕಳಾಪಮನಶೇಷಾಳಾಪದಿಂದೋದಿದಳ್ ||
ಸಕಲವ್ಯಾಕರಣಾರ್ಥಶಾಸ್ತ್ರನಿಪುಣರ್ ಮಾರ್ಕೊಂಡರಿಲ್ಲುರ್ಕಿ ತಾ |
ರ್ಕಿಕರೊಟ್ಟೈಸಿದರಿಲ್ಲ ಸತ್ಕವಿಗಳಡ್ಡಂಬಂದರಿಲ್ಲುಂತೆ ಭುಂ ||

ಭುಕನಿೂಲೋಕದೊಳಾರೊಳಂ ಜನಿಯಿಸಿತ್ತಿಲ್ಲೆಂಬಿನಂ ವಿಪ್ರಕ |
ನ್ಯಕೆ ವಿದ್ವಜ್ಜನದಿಂದಮಂದು ಪಡೆದಳ್ ಪಾಂಡಿತ್ಯಸೌಂದರ್ಯಮಂ ||

---

## ವಾದಿ ಕುಮುದಚಂದ್ರ. ಸು. 1100

ಈತನು ಜಿನಸಂಹಿತೆಯೆಂಬ ನಾಮಾಂತರವುಳ್ಳ ಪ್ರತಿಷ್ಠಾಕಲ್ಪಕ್ಕೆ ಕನ್ನಡವ್ಯಾಖ್ಯಾನವನ್ನು ಬರೆದಿದ್ದಾನೆ. ಇವನು ಜೈನಕವಿ ; ಮಾಘಣಂದಿ ಸಿದ್ಧಾಂತಚಕ್ರವರ್ತಿಯ ಮಗನು; ಚತುರ್ವಿಧಪಾಂಡಿತ್ಯ ಚಕ್ರವರ್ತಿ ಎಂದು ತನ್ನನ್ನು ವಿಶೇಷಿಸಿ ಹೇಳಿಕೊಂಡಿದ್ದಾನೆ. ವ್ಯಾಖ್ಯಾನದ ಆರಂಭದಲ್ಲಿ—

ಶ್ರೀಮಾಘನಂದಿಸಿದ್ಧಾಂತ ಚಕ್ರವರ್ತಿತನೂಭವಃ |
ಕುಮುದೇಂದುರಹಂ ವಚ್ಮಿ ಪ್ರತಿಷ್ಠಾಕಲ್ಪಟಿಪ್ಪಣಂ ||

ಎಂಬ ಶ್ಲೋಕವೂ, ಅಂತ್ಯದಲ್ಲಿ—

ಇತಿ ಶ್ರೀಮಾಘನಂದಿಸಿದ್ಧಾಂತಚಕ್ರವರ್ತಿಸುತ ಚತುರ್ವಿಧಪಾಂಡಿತ್ಯಚಕ್ರವರ್ತಿ ಶ್ರೀವಾದಿಕುಮುದಚಂದ್ರಪಂಡಿತದೇವವಿರಚಿತೇ ಪ್ರತಿಷ್ಠಾಕಲ್ಪಟಿಪ್ಪಣೇ

ಎಂಬ ಗದ್ಯವೂ ಇವೆ.

ದೇವಚಂದ್ರನು ತನ್ನ ರಾಮಕಥಾವತಾರದಲ್ಲಿ (1797) ಪಂಪರಾಮಾಯಣದ ವಿಷಯವಾಗಿ ಹೀಗೆ ಬರೆದಿದ್ದಾನೆ—

ಶ್ರೀಮೂಲಸಂಘ ಬಲಾತ್ಕಾರಗಣ ಶ್ರೀಮಾಘಣಂದಿಸಿದ್ಧಾಂತಚಕ್ರವರ್ತಿಸುತ ಚತುರ್ವಿಧಪಾಂಡಿತ್ಯ ಶ್ರೀವಾದಿಕುಮುದಚಂದ್ರಪಂಡಿತದೇವರಚಿತರಾಮಾಯಣಸಮಾನವಾದ ಶ್ರೀಮದಭಿನವಪಂಪರಚಿತರಾಮಾಯಣಂ.

ಇದರಿಂದ ಈ ಕವಿ ಒಂದು ರಾಮಾಯಣವನ್ನೂ ಬರೆದಿರುವಂತೆ ತಿಳಿಯುತ್ತದೆ. ಅಲ್ಲದೆ ನಾಗಚಂದ್ರನ (ಸು. 1105) ಕಾಲಕ್ಕೆ ಹಿಂದೆ ಇದ್ದಂತೆ ತೋರುತ್ತದೆ. ಇವನ ಕಾಲವು ಸುಮಾರು 1100 ಆಗಿರಬಹುದೆಂದು ಊಹಿಸುತ್ತೇವೆ.

ಬಾಲಚಂದ್ರನು (ಸು. 1170) [1] ತನ್ನ ತತ್ತ್ವಾರ್ಥತಾತ್ಪರ್ಯವೃತ್ತಿಯನ್ನು ಒಬ್ಬ ಕುಮುದಚಂದ್ರ ಭಟ್ಟಾರಕನ ಪ್ರತಿಬೋಧನಾರ್ಥವಾಗಿ ರಚಿಸಿದಂತೆ ಹೇಳುತ್ತಾನೆ. ಈ ಕುಮುದಚಂದ್ರನು ಬೇರೆ.

1. Vol. I, 197.

## ಅಚರಾಜ, ಮಲ್ಲಿದೇವ.[1] 1104

ಇವರುಗಳು ಬರೆದ ಅಬ್ಬಲೂರುಶಾಸನದ ವಿವರವು ಪ್ರಥಮಸಂಪುಟದಲ್ಲಿ ಹೇಳಿಲ್ಲ. ಈ ಶಾಸನದಲ್ಲಿ ದಂಡನಾಯಕಗೋವಿಂದರಸನು ಏಚಿಗಾವುಂಡನ ಪ್ರಾರ್ಥನಾನುಸಾರವಾಗಿ ಅಬ್ಬಲೂರ ಬ್ರಹ್ಮೇಶ್ವರದೇವಸ್ಥಾನಕ್ಕೆ ನಾಗರಖಂಡಕ್ಕೆ ಸೇರಿದ ಮುರಿಗನಹಳ್ಳಿಯನ್ನು ಶೈವಾಚಾರ್ಯನಾದ ಸೋಮೇಶ್ವರಪಂಡಿತನ ಕಾಲಂ ಕರ್ಚಿ ಬಿಟ್ಟಂತೆ ಹೇಳಿದೆ. ಈ ಶಾಸನದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ-

ಶ್ರೀಕಂಠದೇವಸ್ತುತಿ.

ಶರಪಾದಾಂಭೋಜದೊಳ್ ಚಿತ್ತಮನೆಸೆವ ಮುಖಾಂಭೋಜದೊಳ್ ಭಾರತೀಸೌಂ |
ದರಿಯಂ ಚಾರಿತ್ರದೊಳ್ ನಿರ್ಮಲತೆಯನಖಿಲಾಶಾಂತದೊಳ್ ಶಕ್ರದಿಕ್ಕುಂ ||
ಜರಭಾಸ್ವತ್ಕೀರ್ತಿಯಂ ಚಾಪ್ಪುಱೆ ನಿಲಿಸಿದನುದ್ಯದ್ಗುಣೌಘಂ ಮುನೀಂದ್ರಾ|
ಭರಣಂ ಶ್ರೀಕಂಠದೇವಂ ಬುಧಜನತಿಲಕಂ ತರ್ಕವಿದ್ಯಾಸಮುದ್ರಂ ||

ಸೋಮೇಶ್ವರಸೂರಿಸ್ತುತಿ.

ಕೆಲಬರ್ ತರ್ಕವಿಶಾರದರ್ ಕೆಲಬರಾಪ್ತಾಳಾಪಸಂಬೋಧಕರ್ |
ಕೆಲಬರ್ ನಾಟಕಕೋವಿದರ್ ಕೆಲಬರೊಳ್ಗಬ್ಬಂಗಳಂ ಬಲ್ಲವರ್ ||
ಕೆಲಬರ್ ವ್ಯಾಕರಣಜ್ಞರಿಂತಿನಿತುಮಂ ಬಲ್ಲನ್ನರಿಲ್ಲೆಲ್ಲಮಂ |
ಸಲೆ ಸೋಮೇಶ್ವರಸೂರಿ ಬಲ್ಲನನಘಂ ನೈಯಾಯಿಕಾಗ್ರೇಸರಂ ||
ಅಕಳಂಕಾಮ್ರಕುಜಾತಚೈತ್ರಸಮಯಂ ಲೋಕಾಯತಾಂಭೋಧಿಶೀ |
ತಕರಂ ಸಾಂಖ್ಯದಿಶಾದಿಶಾರದನಿ ಮೀಮಾಂಸಾಂಗನಾಕಂಬುಕಂ ||
ಕನನ್ಮೌಕ್ತಿಕಭೂಷಣಂ ಸುಗತನೀರೇಜಾತಚಂಡಾಂಶು ತಾ |
ರ್ಕಿಕಸೋಮೇಶ್ವರಸೂರಿ ಪೆಂಪುವಡೆದಂ ನೈಯಾಯಿಕಾಗ್ರೇಸರಂ ||

---

## ಮೌಕ್ತಿಕಕವಿ. ಸು. 1120

ಚಂದ್ರನಾಥಾಷ್ಟಕದ ಅಂತ್ಯದಲ್ಲಿರುವ

ಕೃತಕೃತ್ಯಂ ಮೌಕ್ತಿಕಂ ಸತ್ಕವಿ ವಿರಚಿಸಿದೀ ಸಾರಮುಪ್ಪಷ್ಟಕಶ್ರೀ |
ಸ್ತುತಿಯಂ ಪೇಟ್ದೋದುಪಾಲಿಪ್ಪವರ್ಗೆ ನಿರುಪಮಾನಂದಮಂ ಮಾಳ್ಕೆ ಸೀತಾ||

---

[1] Vol. I, 366.

ಪತಿರಾಮಸ್ಥಾಪಿತೋದ್ಯತ್ತ್ರಿಭುವನತಿಲಕಾಲಂಕೃತಖ್ಯಾತಿನಾಮಾಂ |
ಕಿತಮಾಗೊಪ್ಪಿರ್ಪ ಪೆರ್ಗ್ಗಡಲಪುರವರಾಧೀಶ್ವರಂ ಚಂದ್ರನಾಥಾ ||

ಎಂಬ ಪದ್ಯದಿಂದ ಈ ಅಷ್ಟಕವನ್ನು ಬರೆದವನು ಮೌಕ್ತಿಕ ಕವಿಯೆಂದು ತೋರುತ್ತದೆ. ಇಲ್ಲಿ ಹೇಳಿರುವ ಪೆರ್ಗ್ಗಡಲು ಅಥವಾ ಹೆಗ್ಗಡಲು ಎಂಬ ಸ್ಥಳವು ಜೈನರಾದ ಕೊಂಗಾಳ್ವರ ರಾಜ್ಯಕ್ಕೆ ಸೇರಿದ್ದಿತು. ಇದನ್ನು ವೀರಕೊಂಗಾಳ್ವದೇವನು ಸುಮಾರು 1120ರಲ್ಲಿ ಮೇಘಚಂದ್ರನ ಶಿಷ್ಯನಾದ ಪ್ರಭಾಚಂದ್ರಸಿದ್ಧಾಂತದೇವನಿಗೆ ದಾನವಾಗಿ ಕೊಟ್ಟಂತೆ ಒಂದು ಶಾಸನದಿಂದ [1] ತಿಳಿಯುತ್ತದೆ. ಸುಮಾರು 1189ರಲ್ಲಿ ಈ ಸ್ಥಳದೊಳಗೆ ಶೈವರು ಪ್ರಬಲರಾಗಿದ್ದಂತೆ ಇತರಶಾಸನಗಳಿಂದ [2] ತಿಳಿವುದರಿಂದ ಅಲ್ಲಿ ಜೈನರ ಪ್ರಾಬಲ್ಯದ ಕಾಲವು ಸುಮಾರು 1120 ಆಗಿರಬಹುದು. ಆಕಾಲವನ್ನೇ ಕವಿಗೆ ಕೊಟ್ಟಿದ್ದೇವೆ.

ಈ ಗ್ರಂಥದಲ್ಲಿ 9 ವೃತ್ತಗಳಿವೆ ; ಪ್ರತಿವೃತ್ತವೂ ಚಂದ್ರನಾಥ ಎಂದು ಮುಗಿಯುತ್ತದೆ. ಇದರಿಂದ ಒಂದು ಪದ್ಯವನ್ನು ಉದ್ಧರಿಸಿ ಬರೆಯುತ್ತೇವೆ:—

ಕುಮತೋಗ್ರಗ್ರೀಷ್ಮತಪ್ತಂಗಿದು ಹಿಮಕರಬಿಂಬಂ ಪರಸ್ತೋತ್ರಸಿಕ್ತ |
ಭ್ರಮತೃಷ್ಣೋಹ್ವಂಗೆ ಸೌಧಂ ಕಬಳಮನೃತದುರ್ವಾಸನಾವಾಸಿತಾತ್ಮಂ ||
ಗಮಳಾಂಭೋಜಂ ಕುದೃಷ್ಟ್ಯಾಮಯಿಗಿದು ಘನಸಾರಾಂಜನಂ ಕುಶ್ರುತಾನ್ಯಾ|
ಗಮದುರ್ಮಂತ್ರಂಗೆ ನಿನ್ನಾಕೃತಿಯಿದಮೃತಬೀಜಾಕ್ಷರಂ ಚಂದ್ರನಾಥಾ ||

---

## ಬ್ರಹ್ಮಶಿವ [3]. ಸು. 1125

ಈತನು ತ್ರೈಲೋಕ್ಯ ಚೂಡಾಮಣಿಸ್ತೋತ್ರವನ್ನೂ ಬರೆದಿರುವಂತೆ ತೋರುತ್ತದೆ. ಈ ಗ್ರಂಥದ 20ನೆಯದಾದ "ಪಡೆದಾಡಂತವೆ ಕೊಂದು" ಎಂಬ ಪದ್ಯವು [4] ಈ ಕವಿಯ ಸಮಯಪರೀಕ್ಷೆಯಲ್ಲಿ ದೊರೆಯುತ್ತದೆ. ಇದರ ಅಂತ್ಯಭಾಗವನ್ನು ಕೇಶಿರಾಜನು ಶಬ್ದಮಣಿದರ್ಪಣದಲ್ಲಿ ಉದಾಹರಿಸಿದ್ದಾನೆ. ಸಮಯಪರೀಕ್ಷೆಯಲ್ಲಿ ಇರುವಂತೆಯೇ ಈ ಗ್ರಂಥದಲ್ಲಿಯೂ ಅನ್ಯಮತದೂಷಣವು ವಿಶೇಷವಾಗಿದೆ. ಗ್ರಂಥಾಂತ್ಯದಲ್ಲಿರುವ

---

1. *Mysore Archæological Report* for 1912 13, para 64. 2. Arkalgud 79 and 81
3. Vol. I, 108 4. *Ibid.*, 109.

ಎಡೆಯಾಡುತ್ತುಮನೂನಜೈನಭವನಶ್ಲಾನಂದದಿಂದಂ ತಳ |
ರ್ದೆಡೆಗಲ್ತೆಂ ಪರಮಾಗಮಾಭ್ಯಸನದಿಂದಾಪ್ರೋಟ್ಟಿಮಾಗಳ್ ತೊದ |
ಲ್ನುಡಿಗಲ್ತೆಂ ಕಿಱಿಯಂದು ಪುಣ್ಯವಶದಿಂದಾರಾಜ್ಯಪೂಜ್ಯಾಸ್ಪದಂ |
ಬಡೆದಾಗಳ್ ಕವಿಚಕ್ರವರ್ತಿಪೆಸರಂ ತ್ರೈಲೋಕ್ಯಚೂಡಾಮಣೀ ||

ಎಂಬ ಪದ್ಯದಿಂದ ಈತನು ರಾಜಮರ್ಯಾದೆಯನ್ನೂ ಕವಿಚಕ್ರವರ್ತಿಯೆಂಬ ಬಿರುದನ್ನೂ ಪಡೆದಂತೆ ತಿಳಿಯುತ್ತದೆ. ಈ ಗ್ರಂಥದಲ್ಲಿ 36 ವೃತ್ತಗಳಿವೆ; ಇದಕ್ಕೆ ಛತ್ತೀಸರತ್ನಮಾಲೆ ಎಂಬ ಹೆಸರೂ ಉಂಟು. ಪ್ರತಿ ಪದ್ಯವೂ ತ್ರೈಲೋಕ್ಯಚೂಡಾಮಣಿ ಎಂದು ಮುಗಿಯುತ್ತದೆ. ಇದರಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ:—

ಅಱಿವಿಲ್ಲೆಂಬುದನಕ್ಷಸೂತ್ರಮಣಿಯಿಂ ಕಾರುಣ್ಯಮಿಲ್ಲೆಂಬುದಂ |
ಮಿಱುಗುತ್ತಿರ್ಪ ತ್ರಿಸೂಳದಿಂ ತನಗಣಂ ನಾಣ್ ಮುನ್ನಮಿಲ್ಲೆಂಬುದಂ ||
ಮೊಱೆಗೆಟ್ಟರ್ಚಿಪ ಲಿಂಗದಿಂ ತಪದ ಮಾತಿಲ್ಲೆಂಬುದಂ ಗೌರಿಯಿಂ |
ದಱಿದೇನೆಂದು ಜಡರ್ ಮೃಡಂಗೆಱಗುವರ್ ತ್ರೈಲೋಕ್ಯಚೂಡಾಮಣೀ ||
ಪಡೆಮಾತೇಂ ಗಡ ಮತ್ಸ್ಯಕಚ್ಛಪವರಾಹಾಕಾರಮಂ ತಾಳ್ದಿದಂ |
ಗಡ ಕುಬ್ಜದ್ವಿಜನಾಗಿ ದೈತ್ಯನಿದಿರೊಳ್ ದಾನಕ್ಕೆ ಕೆಯ್ಯಾಂತವಂ |
ಗಡ ಸಂಗ್ರಾಮದೊಳಾಂತು ಕಾದಿಯೆ ಜರಾಸಂಧಂಗೆ ಬೆನ್ನಿತ್ತವಂ |
ಗಡ ದೇವಂ ಗಡ ಪೇಱೊವ್ಡಿನ್ನವಣಕಂ ತ್ರೈಲೋಕ್ಯಚೂಡಾಮಣೀ ||
ಕೆಱೆಯಂ ಸಂಜೆಯನಿಂದ್ರನಂ ಗಣಪನಂ ಗೌರೀಶನಂ ಭಾನುವಂ |
ಪೆಱೆಯಂ ಗೋಕುಳಮಂ ಗಿರಿಪ್ರಕರಮಂ ಬಾದುಂಬೆಯಂ ಕಾಂತಿಯಂ |
ತೊಱೆಯಂ ವಾರ್ಧಿಯನಯ್ದು ಪಾಲುಮರನಂ ದೈವಂಗಳೆಂದಿಂತು ಕೂ |
ರ್ತೆಱಗುತ್ತಿರ್ಪವರೆಂತು ಮುಕ್ತಿವಡೆವರ್ ತ್ರೈಲೋಕ್ಯಚೂಡಾಮಣೀ ||
ಜಿನಮಾರ್ಗಂಬಿಡದನ್ಯಮಾರ್ಗಮನದೇಂ ಪೇೞ್ ದೂಷಣಂಗೆಯ್ದು ದು |
ರ್ಜನನಾದಂ ಕರಮೆನ್ಗೆ ಮೆಚ್ಚದವರ್ಗಳ್ ಮಧ್ಯಸ್ಥರಾರಯ್ಯೆ ಪಾ ||
ವಿನ ಪಲ್ಲೊಳ್ ವಿಷಮುಂಟು ಕಿಚ್ಚು ಸುಡುಗುಂ ನಂಜಱ್ಕಿದೆಂಬಂತೆ ಪೇ |
ೞ್ವನಿದಂ ವಸ್ತುವಿಚಾರಮಾತೆಱನಿದಂ ತ್ರೈಲೋಕ್ಯಚೂಡಾಮಣೀ ||

## ಜಗದ್ದಳ ಸೋಮನಾಥ. ಸು. 1150.

ಇವನು ಕರ್ಣಾಟಕ ಕಲ್ಯಾಣಕಾರಕವನ್ನು ಬರೆದಿದ್ದಾನೆ. ಈತನು ಜೈನಕವಿ. ಇವನಿಗೆ ವಿಚಿತ್ರಕವಿ ಎಂಬ ಬಿರುದಿದ್ದಂತೆ ತಿಳಿಯುತ್ತದೆ. ತನ್ನ ಗ್ರಂಥವನ್ನು ಸುಮನೋಬಾಣಕವಿಯೂ ಅಭಯಚಂದ್ರಸಿದ್ಧಾಂತಿಗಳೂ ತಿದ್ದಿದಂತೆ

ಸುಮನೋಬಾಣಕವೀಂದ್ರ | ಪ್ರಮುಖಂಬೆರಸಭಯಚಂದ್ರಸಿದ್ಧಾಂತಿಗಳು |
ಕ್ರಮಮಾಗೆ ತಿರ್ದಿದೀಕೃತಿ|ಗಮರ್ದುದು ಸೌಭಾಗ್ಯಮೊಂದಿದಾಯುಂ
ಶ್ರೀಯುಂ||

ಎಂಬ ಪದ್ಯದಲ್ಲಿ ಹೇಳುವುದರಿಂದ ಕವಿ ಸುಮನೋಬಾಣನ ಸಮಕಾಲದವನು ಎಂಬುದು ವ್ಯಕ್ತವಾಗುತ್ತದೆ. ಸುಮನೋಬಾಣನು ಸುಮಾರು 1150ರಲ್ಲಿ ಇದ್ದುದಾಗಿ ತಿಳಿವುದರಿಂದ [1] ಕವಿಯ ಕಾಲವೂ ಅದೇ ಆಗಿರಬೇಕು. ಅಲ್ಲದೆ ಇವನು ಸ್ತುತಿಸುವ ಮಾಘನಂದಿ 1131ರಲ್ಲಿ ಗತಿಸಿದ ಗಂಗರಾಜನ ಮಗನಾದ ಬೊಪ್ಪನ ಗುರುವಾಗಿದ್ದಂತೆ ಸುಮಾರು 1135ರಲ್ಲಿ ಬರೆದ ಶ್ರವಣಬೆಳ್ಗೊಳದ 144ನೆಯ ಶಾಸನದಿಂದ ತಿಳಿವುದರಿಂದ ಈ ವಿಷಯವೂ ನಾವು ಕವಿಗೆ ಕೊಟ್ಟಿರುವ ಕಾಲವನ್ನು ದೃಢಪಡಿಸುತ್ತದೆ.

ಇವನ ಗ್ರಂಥ

### ಕರ್ಣಾಟಕ ಕಲ್ಯಾಣಕಾರಕ

ಇದು ವೈದ್ಯಗ್ರಂಥ : ಪೂಜ್ಯಪಾದಕೃತಕಲ್ಯಾಣಕಾರಕದ ಭಾಷಾಂತರವು. ನಮಗೆ ದೊರೆತ ಅಸಮಗ್ರಪ್ರತಿಯಲ್ಲಿ (1) ಪೀಠಿಕಾಪ್ರಕರಣ, (2) ಪರಿಭಾಷಾಪ್ರಕರಣ, (3) ಷೋಡಶಜ್ವರನಿದಾನಚಿಕಿತ್ಸಾನಿರೂಪಣ, (4) ಅತಿಸಾರಗ್ರಹಣೀನಿದಾನಚಿಕಿತ್ಸಾನಿರೂಪಣ, (5) ರಕ್ತಪಿತ್ತನಿದಾನಚಿಕಿತ್ಸಾನಿರೂಪಣ, (6) ಕ್ಷಯನಿದಾನಚಿಕಿತ್ಸಾನಿರೂಪಣ, (7) ಉದರರೋಗನಿದಾನಚಿಕಿತ್ಸಾನಿರೂಪಣ, (8) ಗುಲ್ಮನಿದಾನಚಿಕಿತ್ಸಾನಿರೂಪಣ ಎಂಬ 8 ಅಧ್ಯಾಯಗಳು ಮಾತ್ರ ಇವೆ. ವಾಹಟ, ಸಿದ್ಧಸಾರ, ಚರಕ ಎಂಬ ವೈದ್ಯಗ್ರಂಥಗಳಿಗಿಂತ ಪೂಜ್ಯಪಾದನ ಕಲ್ಯಾಣಕಾರಕವು ಉತ್ಕೃಷ್ಟವಾದುದೆಂದೂ ಅದರಲ್ಲಿ ಹೇಳಿರುವ ಚಿಕಿತ್ಸೆ ಮದ್ಯಮಾಂಸಮಧುವರ್ಜಿತವೆಂದೂ ಈ ಪದ್ಯದಲ್ಲಿ ಹೇಳುತ್ತಾನೆ—

---

1 Vol. I, 135

ಸುಕರಂ ತಾನೆನೆ ಪೂಜ್ಯಪಾದಮುನಿಗಳ್ ಮುಂ ಪೇಳ್ದ ಕಲ್ಯಾಣಕಾ |
ರಕಮಂ ಬಾಹಟಸಿದ್ಧಸಾರಚರಕಾದ್ಯುತ್ಕೃಷ್ಟಮಂ ಸದ್ಗುಣಾ ||
ಧಿಕಮಂ ವರ್ಜಿತಮದ್ಯಮಾಂಸಮಧುವಂ ಕರ್ಣಾಟದಿಂ ಲೋಕರ |
ಕ್ಷಕಮಂ ಚಿತ್ರಮದಾಗೆ ಚಿತ್ರಕವಿ ಸೋಮಂ ಪೇಳ್ದನಿಂತಳ್ತಿಯಿಂ ||

ಗ್ರಂಥಾವತಾರದಲ್ಲಿ ಚಂದ್ರನಾಥಸ್ತುತಿ ಇದೆ. ಬಳಿಕ ಕವಿ ಸಿದ್ಧಾದಿಗಳು[1], ಸರಸ್ವತಿ, ಮಾಧವೇಂದು, ಸೈದ್ಧಾಂತಿಕಚಕ್ರವರ್ತಿ ಅಭಯಚಂದ್ರ, ಕನಕಚಂದ್ರಪಂಡಿತದೇವ ಇವರುಗಳನ್ನು ಹೊಗಳಿದ್ದಾನೆ. ಅಧ್ಯಾಯಾಂತ್ಯದಲ್ಲಿ—ಇದು ವಿಚಿತ್ರಕವಿಜಗದ್ದಳಸೋಮನಾಥವಿರಚಿತಮಪ್ಪ ಕರ್ಣಾಟಕಕಲ್ಯಾಣಕಾರಕದೊಳ್—ಎಂದಿದೆ.

ಕೀರ್ತಿವರ್ಮನ (ಸು. 1125) ಗೋವೈದ್ಯವನ್ನು[2] ಬಿಟ್ಟರೆ ಇದೇ ನಮಗೆ ದೊರೆತಿರುವ ಕನ್ನಡ ವೈದ್ಯಗ್ರಂಥಗಳಲ್ಲಿ ಪುರಾತನವಾದುದು. ಇದರಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

### ಜ್ವರೋತ್ಪತ್ತಿ

ಮಲಸಂಗ್ರಹದಿಂದುದರಾ | ನಲನಳಿಪಿಂದಾಮಚಲನೆಯಿಂ ಜ್ವರವೊಗೆಗುಂ |
ಕೆಲರಾ ತ್ರಿಪುರಧ್ವಂಸಿಯ | ಲಲಾಟಲೋಚನದಿನೊಗೆದುದೆಂಬರ್ ಜ್ವರಮಂ ||

### ಚಿಕಿತ್ಸೆ

ಜ್ವರದಾದಿಯೊಳುಪವಾಸಂ | ಜ್ವರಮಧ್ಯಮದಲ್ಲಿ ಗಂಜಿ ಪೇಳ್ವ ಕಷಾಯಂ |
ಜ್ವರಪಾಕದೊಳಸ್ತ್ರಹಿತ | ಜ್ವರದೊಳ್ ಮಾಂಹರಣಮಿನಿತಿವಾರೋಗ್ಯಕರಂ ||

### ಪಿತ್ತಜ್ವರಕ್ಕೆ ಕಲ್ಕ

ಸಿರಿಕಂಪಂ ಬಾಳಂ ಶ | ರ್ಕರೆ ಬೇವಿನ ಕಡ್ಡಿ ಭದ್ರಮುಸ್ತೆ ದ್ರಾಕ್ಷಂ |
ಬೆರಸರೆದು ಕುಡಿಯಲೆಱೆದೊಡೆ | ಪರಿಹರಿಸುಗುಮೆಯ್ದೆ ಪಿತ್ತಜನಿತಜ್ವರಮಂ ||

### ವಿಷಮಜ್ವರಕ್ಕೆ ನಸ್ಯ

ಪೊಸಚಿಕ್ಕಣಿಕೆಯ ಪುಲ್ಲಂ | ಪೊಸಬೆಳ್ಳುಳ್ಳಿಯ ರಸಂಗಳಂ ತಳದಿಂದಂ |
ಪೊಸೆದಾಗಳೆ ನಸ್ಯಂಗೆಯೆ | ಬಸವಲ್ಲೆನಿಪಾ ಜ್ವರಂಗಳಂ ಮಸುಳಿಸುಗುಂ ||

---

1 ಸಿದ್ಧರು, ಆಚಾರ್ಯರು, ಉಪಾಧ್ಯಾಯರು, ಸಾಧುಗಳು. 2. Vol. I, 106.

### ಬಿದ್ದ ನಾಲಗೆಗೆ

ಪಲಕಾಲದ ಪುಣಿಸೆಯ ಪ | ಣ್ಣ ಲೇಪ್ಯಮಂ ಮಾಡೆ ಸನ್ನಿಪಾತಜ್ವರದಿಂ |
ಸಲೆ ಪೊರಳದಿರ್ದ ನಾಲಗೆ | ಗೆ ಲೇಸಸೀಗುಂ ಜ್ವರಂಗಳಂ ಪಿಂಗಿಸುಗುಂ ||

### ಪಿತ್ತಾತಿಸಾರಕ್ಕೆ

ಪರಿವತಿಸಾರಂ ಪಿರಿದಾ | ಗಿರೆ ಹೂಲಿಯಬೇರ ತಿಗುಡನೆಮ್ಮೆ ಯ ಮೊಸರೊಳ್ |
ಬೆರಸಿಬ್ಬ ಸೈಂಧವಂ ಕೂ | ಡಿದೆ ಮೆಲ್ವುದು ದಿವ್ಯಯೋಗಮಿದು ಪರಿಹರಿಕುಂ||

### ರಕ್ತಪಿತ್ತಕ್ಕೆ

ಬರಸುವುದು ಜಾ ಘೃತಮಂ ಶ | ರ್ಕರೆಯಂ ನೆಲ್ಲಿಯುಮನಮರ್ದುವಳ್ಳಿಯ ಪುಡಿಯಂ |
ಪಿರಿದೆನಿಪ ರಕ್ತಪಿತ್ತದ | ಭರಮಂ ಪರಿಹರಿಕುಮಱಗಿದಮೃತಾಮಳಕಂ ||

---

## ವಾಗ್ವಲ್ಲಕೀವೈಣಿಕ. ಸು. 1150

ಈತನು ಚಂದ್ರಪ್ರಭಸ್ತುತಿಯನ್ನು ಬರೆದಿದ್ದಾನೆ. ಇವನು ಜೈನ ಕವಿ; ತನ್ನ ಹೆಸರನ್ನು ಹೇಳಿಕೊಂಡಿಲ್ಲ, ಈ ಬಿರುದನ್ನು ಮಾತ್ರ ಹೇಳಿದ್ದಾನೆ. ಇವನ ಕಾಲವು ಸುಮಾರು 1150 ಆಗಿರಬಹುದೆಂದು ಊಹಿಸುತ್ತೇವೆ—

ಇವನ ಗ್ರಂಥ

### ಚಂದ್ರಪ್ರಭಸ್ತುತಿ

ಇದರಲ್ಲಿ 14 ಕಂದಗಳಿವೆ; ಬಂಧವು ಮನೋಹರವಾಗಿದೆ. ಕೆಲವು ಕಂದಗಳನ್ನು ಉದ್ಧರಿಸಿ ಬರೆಯುತ್ತೇವೆ—

ತನುರುಚಿರರುಚಿಗಳಂ ಪಾ | ಲ್ಗೊಸಲೆಂದಾಸೆಯೊಳೆ ಸಾರ್ದ ಹಂಸಾವಳಿಯೆಂ|
ಬಿನಮೆಸೆದುಪೊಳೆಯುತಿರ್ದುವ |ಜಿನಪತಿಯಿರ್ಕೆಲದೊಳಮಳಚಾಮರಯುಗ್ಮಂ||
ಪಳಿಕಿನರುಚಿಯೊಳ್ ಮಿಂದವೊ|ಲೆಳಮುತ್ತಿನ ಕಾಂತಿಯಿಂದೆ ಸುಣ್ಣಕ್ಕಿದವೋಲ್|
ಮಳಯಜದೊಳ್ ಮುೞುಗಿದವೋಲ್ | ತೊಳತೊಳತೊಳಗಿದುದು ಮೂರ್ತಿ ಚಂದ್ರಪ್ರಭನಾ ||
ಪವಳದಕುಡಿವೆರಸಿ ಸುಧಾ | ರ್ಣವದಿಂ ಪೊಱಮಡುವ ಚಂದ್ರನಂತಿರೆ ತೀವಿ|
ದ ನವಯುವಮರೀಚಿಯೊಳ್ ಪ| ಲ್ಲವಾಧರಂ ತೊಳಗಿದತ್ತು ಜಿನಮುಖಚಂದ್ರಂ||

## ವೀರಣಂದಿ. 1153

ಈತನು ಸ್ವಕೃತವಾದ ಆಚಾರಸಾರಕ್ಕೆ ಕನ್ನಡವ್ಯಾಖ್ಯಾನವನ್ನು ಬರೆದಿದ್ದಾನೆ. ಇವನು ಜೈನಕವಿ; ಇವನ ಗುರು ಮೇಘಚಂದ್ರ. ಶಕ 1076 ಶ್ರೀಮುಖದಲ್ಲಿ--ಎಂದರೆ 1153ರಲ್ಲಿ ಈ ವ್ಯಾಖ್ಯಾನವನ್ನು ಬರೆದಂತೆ ಅದರಲ್ಲಿರುವ

ಸ್ವಸ್ತಿ ಶ್ರೀಮನ್ಮೇಘಚಂದ್ರತ್ರೈವಿದ್ಯದೇವರ ಶ್ರೀಪಾದಪ್ರಸಾದಾಸಾದಿತಾತ್ಮಪ್ರಭಾವ ಸಮಸ್ತವಿದ್ಯಾಪ್ರಭಾವ ಸಕಲದಿಗ್ವರ್ತಿಕೀರ್ತಿ ಶ್ರೀಮದ್ವೀರಣಂದಿಸಿದ್ಧಾಂತಚಕ್ರವರ್ತಿಗಳ್ ಶಕವರ್ಷಂ 1076 ಶ್ರೀಮುಖನಾಮಸಂವತ್ಸರದ ಜ್ಯೇಷ್ಠಶುಕ್ಲ 1 ಸೋಮವಾರದಂದು ತಾವು ಮಾಡಿದಾಚಾರಸಾರಕ್ಕೆ ಕರ್ಣಾಟಕವೃತ್ತಿಯಂ ಮಾಡಿದಪರ್'[1]

ಎಂಬ ಗದ್ಯದಿಂದ ತಿಳಿಯುತ್ತದೆ. ಇದರಿಂದ ಮಾದರಿಗಾಗಿ ಒಂದು ಶ್ಲೋಕದ ವ್ಯಾಖ್ಯಾನವನ್ನು ತೆಗೆದು ಬರೆಯುತ್ತೇವೆ:---

ಪರಿವ್ರಾಡ್ಬ್ರಹ್ಮಕಲ್ಪಾಂತಂ ಯಾತ್ಯುಗ್ರಾಚಾರವಾನ್ ।
ಆಜೀವಕಃ ಸಹಸ್ರಾರಕಲ್ಪಾಂತಂ ದರ್ಶನೋಜ್ಝಿತಃ ॥

ಪರಿವ್ರಾಟ್, ಪರಿವ್ರಾಜಕಂ. ಬ್ರಹ್ಮಕಲ್ಪಾಂತಂ, ಬ್ರಹ್ಮಕಲ್ಪಂಬರಂ. ಅತ್ಯುಗ್ರಾಚಾರವಾನ್, ಚಟ್ಟಿತ್ತಪ್ಪ ನೆಗಱ್ತೆಯನುಳ್ಳನಾದೊಡಂ. ಆಜೀವಕಃ, ಬೌದ್ಧಭೇದಮಪ್ಪ ಕಾಂಜಿಭಿಕ್ಷು. ಸಹಸ್ರಾರಕಲ್ಪಾಂತಂ, ಸಹಸ್ರಾರಕಲ್ಪಂಬರಂ. ದರ್ಶನೋಜ್ಝಿತಃ, ಸಂಯಕ್ತ್ವಮಿಲ್ಲದಂ. ಯಾತಿ, ಪೋಕುಂ[2].

---

## ಬಸವ[3] ಸು. 1160

ಈತನು ಶಿಖಾರತ್ನವಚನವನ್ನೂ ಬರೆದಿದ್ದಾನೆ. ಇದರಲ್ಲಿ 34 ವಚನಗಳಿವೆ. ಇವನ ವಚನಗ್ರಂಥಗಳಲ್ಲೆಲ್ಲಾ "ಕೂಡಲಸಂಗಮದೇವ" ಎಂಬ ಅಂಕಿತವು ದೊರೆಯುತ್ತದೆ. "ಕೂಡಲ ಚೆನ್ನಸಂಗಮದೇವ" ಎಂಬ ಅಂಕಿತವು ಚೆನ್ನಬಸವನ ಗ್ರಂಥಗಳಿಗೆ ಗುರುತು. ಶಿಖಾರತ್ನವಚನದಿಂದ ಒಂದೆರಡು ವಚನಗಳನ್ನು ಉದಾಹರಿಸುತ್ತೇವೆ—

ಶ್ರೋತ್ರ ನೇತ್ರ ತ್ವಕ್ಕು ಘ್ರಾಣ ಜಿಹ್ವೆ ಎಂಬ ಜ್ಞಾನೇಂದ್ರಿಯಂಗಳು ತಾನಿರ್ದಲ್ಲಿ ; ಶಬ್ದ ಸ್ಪರ್ಶ ರೂಪ ರಸ ಗಂಧವೆಂಬ ಪಂಚವಿಷಯಂಗಳು ತಾನಿರ್ದಲ್ಲಿ ;

1. *Indian Antiquary* for 1912, 88. 2. *Ibid*, 89 3. Vol. I, 142.

ವಚನ ಗಮನ ಆದಾನ ವಿಸರ್ಜನ ಆನಂದವೆಂಬ ಕರ್ಮೇಂದ್ರಿಯಂಗಳು ತನ್ಮಾತ್ರಂಗಳು ತಾನಿರ್ದಲ್ಲಿ ; ಮನ ಬುದ್ಧಿ ಚಿತ್ತ ಅಹಂಕಾರ ಜೀವನೆಂಬ ಜೀವಪಂಚಕಂಗಳು ತಾನಿರ್ದಲ್ಲಿ ; ಇವೆಲ್ಲ ತನ್ನಲ್ಲಿ ಉತ್ಪತ್ತಿಸ್ಥಿತಿಲಯವಾಗಿ ಮತ್ತೆ ತನ್ನಧೀನದಲ್ಲಿ ಆಡುತ್ತಿಹುವಲ್ಲದೆ ಸ್ವತಂತ್ರಪರಬ್ರಹ್ಮವೇ ತಾನೆಂದಱಿದ ಮಹಾಶರಣನು ಅವಱಧೀನದಲ್ಲಿ ತಾನಲ್ಲ ನೋಡಾ ಅಪ್ರಮಾಣ ಕೂಡಲಸಂಗಮದೇವಾ.

ಕಲ್ಲದೇವರು ದೇವರಲ್ಲ ; ಮಣ್ಣದೇವರು ದೇವರಲ್ಲ ; ಮರದದೇವರು ದೇವರಲ್ಲ : ಪಂಚಲೋಹದಲ್ಲಿ ಮಾಡುವ ದೇವರು ದೇವರಲ್ಲ ; ಸೇತುರಾಮೇಶ್ವರ ಗೋಕರ್ಣ ಕಾಶಿ ಕೇದಾರ ಮೊದಲಾದ ಅಷ್ಟಾಷಷ್ಟಿಕೋಟಿಪುಣ್ಯತೀರ್ಥಂಗಳು ಪುಣ್ಯಕ್ಷೇತ್ರಂಗಳಲ್ಲಿ ಇಹ ದೇವರು ದೇವರಲ್ಲ ; ತನ್ನತಾನಱಿದು ತಾನಾರೆಂದು ತಿಳಿದಡೆ ತಾನೇ ದೇವ ನೋಡಾ ಅಪ್ರಮಾಣ ಕೂಡಲಸಂಗಮದೇವಾ.

---

## ಕೊಂಡಗೂಳಿ ಕೇಶಿರಾಜ [1] ಸು. 1160

ಈತನ ಷಡಕ್ಷರಕಂದಕ್ಕೆ[2] ಮಂತ್ರಮಹತ್ವದ ಕಂದ ಎಂಬ ಹೆಸರೂ ಉಂಟು.

---

## ಸಿದ್ಧರಾಮ [3] ಸು. 1160

ಈತನು ಬಸವಸ್ತೋತ್ರದತ್ರಿವಿಧಿಯನ್ನೂ ಬರೆದಿದ್ದಾನೆ. ಇದರಲ್ಲಿ 125 ಪದ್ಯಗಳಿವೆ. ಇದರಿಂದಲೂ ಇವನ ಬೇರೆ ಎರಡು ಗ್ರಂಥಗಳಿಂದಲೂ ಒಂದೊಂದು ಪದ್ಯವನ್ನು ಉದಾಹರಿಸುತ್ತೇವೆ—

### ಬಸವಸ್ತೋತ್ರದತ್ರಿವಿಧಿ.

ಲೋಕಲೋಕವನೆಲ್ಲ ಲೋಕಿಸದೆ ನಿಂದಲ್ಲಿ | ಬೇಕುಮಾಡಿದನೆನ್ನ ಬಸವಲಿಂಗ |
ಮಕುಟಮಂಡಲದಲ್ಲಿ ಮನೆಗಟ್ಟಿ ನಿಂದವನು|ಅಕಳಂಕಬಸವನ್ನೆ ಯೋಗಿನಾಥ||

### ಮಿಶ್ರಸ್ತೋತ್ರದತ್ರಿವಿಧಿ. [4]

ಇಹಪರದ ಪರಿಯನು ಅಯ್ಯ ನೀನೇ ಬಲ್ಲೆ|ನಿಮ್ಮ ಶರಣನು ಬಲ್ಲ ಪ್ರಭುರಾಯನು|
ಆತನನು ಮತದಿಂದ ಮಾಯೆಯನು ಗೆಲುವುದನು | ನೀವೆನಗೆ ಕಲಿಸುವುದು ಯೋಗಿನಾಥ||

---

1. Vol. I, 152. 2. *Ibid.*, 153. 3. *Ibid.*, 150. 4. *Ibid.*, 151.

ಚೆನ್ನೆಯರ ಬಲೆಯಲ್ಲಿ ಎನ್ನನಿರಿಸಿದೆ ಪ್ರಭುವೆ|ಇನ್ನಿದಕೆ ಭಾವಜನು ಬೇಂಟೆಗಾಱ|
ಕುನ್ನಿಗಳು ತಾವೈದು ಎನ್ನ ಗ್ರಹಿಸದಮುನ್ನ | ಚಿನ್ಮಯಪ್ರಭು ಸಲಹೊ
ಯೋಗಿನಾಥ ||

ಅಷ್ಟಾವರಣಸ್ತೋತ್ರದತ್ರಿವಿಧಿ [1]

ಇದರ ಒಂದು ಪ್ರತಿಯಲ್ಲಿ 144 ಪದ್ಯಗಳಿವೆ.

ಶಿವಭಕ್ತಿಶರಧಿಯಲಿ ನೆಲೆಗೊಳಿಸಿದಾತ ಗುರು | ಪರಿಕಿಸಿಯೆ ಭವವ ಹಱಿದಾತ
ಗುರುವೈ |
ಶ್ರೀಗುರುವೆ ಎಂಬ ನಾಮಾಕ್ಷರತ್ರಯದಲ್ಲಿ|ಈನು ಪ್ರಜ್ವಲಿತನೈ ಯೋಗಿನಾಥ [2]||

---

ಹರೀಶ್ವರ [3] ಸು. 1165

ಇವನ ಮುಡಿಗೆಯಅಷ್ಟಕದಿಂದ ಪ್ರಥಮಸಂಪುಟದಲ್ಲಿ[4] ಪದ್ಯಗಳನ್ನು ಉದಾಹರಿಸಿಲ್ಲ. ಇದರಲ್ಲಿ 8 ವೃತ್ತಗಳಿವೆ; ಎಲ್ಲವೂ ಕ್ಷಕಾರಪ್ರಾಸದಲ್ಲಿವೆ; ಒಂದೊಂದೂ ಮುಡಿಗಿಕ್ಕಿದೆನಿಕ್ಕಿದೆನಾವನೆತ್ತುವಂ ಎಂದು ಮುಗಿಯುತ್ತದೆ. ಇದರಿಂದ ಎರಡು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ಕುಕ್ಷಿಯೊಳಿಟ್ಟು ಭಕ್ತಕುಲಮಂ ಪರಿರಕ್ಷಿಪ ದೇವದೇವನ |
ಬ್ಜಾಕ್ಷವಿರಿಂಚಿಗಳ್ ತುದಿಮೊದಲ್ಪರೆಗಾಣದ ದೇವದೇವನಾ |
ವಕ್ಷದೊಳಾಲ್ದು ಬೊಬ್ಬಿಱಿವ ದೇವಕರೋಟಿಯ ದೇವನೀವಿರೂ |
ಪಾಕ್ಷನೆ ದೇವನೆಂದು ಮುಡಿಗಿಕ್ಕಿದೆನಿಕ್ಕಿದೆನಾವನೆತ್ತುವಂ ||
ತ್ರ್ಯಕ್ಷನೆ ದೇವನಕ್ಷಿಶಿಖಿಗಂಗಜನಾಹುತಿಯಾಗೆ ಬೇಳ್ದ ಭಾ |
ಳಾಕ್ಷನೆ ದೇವನಬ್ಜಜನ ನೆತ್ತಿಯ ಪಾತ್ರೆಯನೆತ್ತಿದಾಮಹಾ |
ಭಿಕ್ಷುವೆ ದೇವನಂತಕನನೀಡಿಱಿದೆತ್ತಿ ಪೊರಳ್ಚಿದಾವಿರೂ |
ಪಾಕ್ಷನೆ ದೇವನೆಂದು ಮುಡಿಗಿಕ್ಕಿದೆನಿಕ್ಕಿದೆನಾವನೆತ್ತುವಂ ||

---

ರಾಘವಾಂಕ. [5] ಸು. 1165

ಇವನ ಸೋಮನಾಥಚರಿತೆಯಲ್ಲಿ[6] 5 ಆಶ್ವಾಸಗಳೂ 500 ಪದ್ಯಗಳೂ ಇವೆ.

---

1. Vol. 1, 152. 2. ಇವನಗ್ರಂಥಗಳಲ್ಲಿಯ ಯೋಗಿನಾಥ ಎಂಬ ಶಬ್ದವು ಚೆನ್ನಬಸವನನ್ನು ಸಂಬೋಧಿಸುತ್ತದೆ. 3. Vol., I, 170. 4. *Ibid.*, 179. 5 *Ibid.*, 180. 6. *Ibid.*, 185.

### ಶರಣಕವಿ. [1] ಸು. 1165.

ಅಬ್ಬಲೂರು ಶಾಸನಕ್ಕೆ ಹೇಳಿರುವ ಕಾಲವು ಸು. 1195 ಎಂದಿರಬೇಕು. ಪ್ರಥಮಸಂಪುಟದ 234ನೆಯ ಪುಟವನ್ನು ನೋಡಿ.

---

### ಬೊಪ್ಪಣಪಂಡಿತ. [2] ಸು. 1180.

ಇವನ ನಿರ್ವಾಣಲಕ್ಷ್ಮೀಪತಿನಕ್ಷತ್ರಮಾಲಿಕೆಯಿಂದ ಪ್ರಥಮಸಂಪುಟದಲ್ಲಿ [3] ಪದ್ಯಗಳನ್ನು ಉದಾಹರಿಸಿಲ್ಲ. ಇಲ್ಲಿ ಎರಡು ಪದ್ಯಗಳನ್ನು ಅನುವಾದಮಾಡುತ್ತೇವೆ—

ಪರಭಾವಂ ಪರಭಾವಮಂ ಜನಿಯಿಕುಂ ಸ್ವಾತ್ಮಸ್ಥಭಾವಂ ನಿರಂ |
ತರಿತಂ ಸ್ವಾತ್ಮಗತತ್ವಮಂ ಬಗೆಯೆ ಪಾತ್ರಂ ಲೋಹದಿಂ ನಿರ್ಮಿತಂ ||
ನಿರತಂ ಲೋಹಮಯಂ ಸುವರ್ಣರಚಿತಂ ಸೌವರ್ಣಮೆಂಬಂದದಿಂ |
ಪರಮಲ್ತೆಂಬುದು ನಿನ್ನ ಶಾಸ್ತ್ರದ ತಿರುಳ್ ನಿರ್ವಾಣಲಕ್ಷ್ಮೀಪತೀ ||
ಸಮಯಜ್ಞಾನದೆ ಸಿದ್ಧಿಯಾಗದದಱೊಳ್ ಶ್ರದ್ಧಾನಮಿಲ್ಲಾದೊಡಾ |
ಸಮಯಜ್ಞಾನಮುಮಲ್ಲಿ ನಂಬುಗೆಯುಮುಂಟಾಗಿರ್ದೊಡಂ ಶುದ್ಧಸಂ ||
ಯಮಮಿಲ್ಲಾದೊಡಮಂತುಮಾಗದದಱಿಂ ರತ್ನತ್ರಯೀಸಿದ್ಧಿಯಿಂ |
ಸಮನಿಕ್ಕುಂ ಮುನಿಗೆಂದು ನೀಂ ಬೆಸಸಿದೈ ನಿರ್ವಾಣಲಕ್ಷ್ಮೀಪತೀ ||

---

### ಆಚಣ್ಣ. [4] ಸು. 1195.

ಈತನು ಶ್ರೀಪದಾಶೀತಿ ಎಂಬ ಒಂದು ಸಣ್ಣಗ್ರಂಥವನ್ನೂ ಬರೆದಿರುವಂತೆ ತೋರುತ್ತದೆ. ಇದರ ಕೊನೆಯಲ್ಲಿರುವ

ಜಿನಸಮಯಸಮುದ್ಧರಣಂ | ಜಿನಮತಸಿದ್ಧಾಂತವಾರ್ಧಿವರ್ಧನಚಂದ್ರಂ |
ಜಿನರಂತೆ ಭವ್ಯಸೇವ್ಯಂ| ಜಿನಮುನಿಯಾಚಣ್ಣನಮಳಗುಣಗಣನಿಳಯಂ ||

ಎಂಬ ಪದ್ಯದಿಂದ ಗ್ರಂಥಕರ್ತನು ಆಚಣ್ಣನೆಂದು ತೋರುತ್ತದೆ. ಈ ಗ್ರಂಥವು ಣಮೋ ಅರುಹಂತಾಣಂ ಇತ್ಯಾದಿ ಪಂಚಪದಗಳ ಮಹಿಮೆಯನ್ನು ತಿಳಿಸುತ್ತದೆ : ಎಂದರೆ ಅರ್ಹಂತರು, ಸಿದ್ಧರು, ಆಚಾರ್ಯರು,

---

1. Vol. I, 196. 2. *Ibid.*, 218. 3. *Ibid.*, 220. 4. *Ibid.*, 236.

ಉಪಾಧ್ಯಾಯರು, ಸಾಧುಗಳು ಎಂಬ ಪಂಚಪರಮೇಷ್ಠಿಗಳ ನಾಮದ ಮಹಿಮೆಯನ್ನು ಬೋಧಿಸುತ್ತದೆ. ವರ್ಧಮಾನಪುರಾಣಕರ್ತೃವಾದ ಆಚಣ್ಣನಿಗೆ ಪಂಚಪರಮಗುರುಪದವಿನತ ಎಂಬ ಅಸಾಧಾರಣವಾದ ಬಿರುದು ಇರುವುದರಿಂದ ಅವನೇ ಇದನ್ನೂ ಬರೆದಿರಬಹುದು ಎಂಬ ಉಕ್ತಿ ನಿರಾಧಾರವಾದುದಲ್ಲ. ಈ ಗ್ರಂಥದ ಬಂಧವು ಪ್ರೌಢವಾಗಿದೆ ; ಸುಮಾರು 94 ಕಂದಗಳಿವೆ. ಇದರ ಉತ್ಕೃಷ್ಟತೆಯನ್ನು ಕವಿ ಈ ಪದ್ಯದಲ್ಲಿ ತಿಳಿಸಿದ್ದಾನೆ-

ನಿರಪಾಯಾತ್ಮಪ್ರಭಾವಂ ಪರಮಹಿಮಕರಂ ದೂಷಿತಾಶೇಷದೋಷಂ |
ದುರಘವ್ರಾತಾಬ್ಜವಕ್ತ್ರಂ ವಿರಹಿಜನಹಿತಂ ಸತ್ಪಥಜ್ಯೋತಿಶಶ್ವ ||
ತ್ಪರಿಪೂರ್ಣಂ ನಿಷ್ಕಳಂಕಂ ಬುಧಹೃದಯಗತಧ್ವಾಂತವಿಧ್ವಂಸಿತೇಜಂ |
ಧರೆಯೊಳ್ವರ್ತಿಕ್ಕೆ ನಿಚ್ಚಂ ಕುವಲಯಸುಖದಂ ಶ್ರೀಸಮಾಶೀತಿಚಂದ್ರಂ ||

ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ—

ಪಂಚಪದ

ಶ್ರೀಮತ್ಪಂಚಪದಂ ಗುರು | ನಾಮಾದಿತ್ರಿತಳಮತುಳರಮ್ಯಂ ಹರ್ಮ್ಯಂ |
ದಾಮಮಯಂ ಸುಖಕಲಶೋ | ದ್ದಾಮಂ ವಿಶ್ರಾಮಧಾಮಮಕ್ಕೆಮಗನಿಶಂ||

ಗುರುಪದ

ಸುಖದ ಕಣಿ ಸುಖದ ತಿಂತಿಣಿ|ಸುಖದ ಬನಂ ಸುಖದ ಸುಗ್ಗಿ ಸುಖದ ಬಸಂತಂ|
ಸುಖದ ತಿಳಿ ಸುಖದ ಪೊಂಪುಳಿ | ಸುಖದೊಬ್ಬುಳಿ ಸುಖದ ಸೋನೆಯೆಸಿಸದೆ ಸಿಸದಂ ||

ಸುಖದ ತನಿರಸದ ಪೆರ್ಮಡು|ಸುಖದೊತ್ತಿನ ಸುತ್ತು ಸುಖದತಣ್ಬುಳಿಲೆನಿಕುಂ|
ಸುಖದದೊಣೆ ಸುಖದದೀರ್ಘಿಕೆ|ಸುಖದಕೊಳಂ ಸುಖದಯಂತ್ರಧಾರಾಗಾರಂ||

ಭುವನತ್ರಯಮಂ ನಿಜರುಚಿ | ನವಾಮೃತಾರ್ಣವದೊಳಾವಗಂ ತೇಂಕಿಸುತಿ |
ರ್ಪವಿತರ್ಕ್ಯಕಾಂತಿಕಾಂತಂ|ಶಿವಪದಮಂ ಕುಡುಗೆ ನಮಗೆ ಗುರುಪದಮನಘಂ||

ಮರುಳಕ್ಕೆಮ ಪುರುಳಕ್ಕೆಮ | ದುರಿತಾಹಿತಭೀತಿಯಿಂ ಭವತ್ಪದಪದ್ಮಂ |
ಶರಣೆಂದು ಪೊರ್ದಿದೆನ್ನಂ | ಪರಿಪಾಳಿಸದಿರ್ದೊಡೆತ್ತ ನಿಮಗೆ ಗುರುತ್ವಂ||

ಪ್ರಣವ

ಅತಿಶಯಚಿಂತಾಮಣಿ ವಿ | ಶ್ರುತವಿದ್ಯಾಕಲ್ಪಕಂದಳೀಕಂದಮಿಳಾ |
ಸ್ತುತಬೋಧವಾರ್ಧಿವೇಳಾ|ಸಿತರುಚಿಸಂಪೂರ್ಣಬಿಂಬವಿಭವಂ ಪ್ರಣವಂ ||

ಸಾಧುಗಳು

ಒಡಿದುಂ ನುಡಿದುಂ ತಮ್ಮೊ|ಳ್ನಡೆಯಂಪಡಿದೋರು ಜಡರನೊಯ್ಯನೆ ಕೃಪೆಯಿಂ|
ಕಡೆಡೆಗೆಯ್ದಿಪ ಸಾಧುಗ | ಳಡಿದಳಿಗಳ್ ಕಿಡಿಸುಗೆಮ್ಮ ಜನ್ಮಶ್ರಮಮಂ ||

---

## ಪಾಲ್ಕುರಿಕೆ ಸೋಮ.[1] ಸು. 1195

ಇವನು ಬಸವಸ್ತುತಿರೂಪವಾದ ಪಂಚರತ್ನವನ್ನೂ ಬರೆದಿದ್ದಾನೆ. ಇದರ ಅಂತ್ಯಶ್ಲೋಕದಿಂದ[2] ಇದು ಏತತ್ಕೃತವೆಂದು ತಿಳಿಯುತ್ತದೆ. ಇದರಲ್ಲಿ ೫ ವೃತ್ತಗಳಿವೆ. ಒಂದನ್ನು ತೆಗೆದು ಬರೆಯುತ್ತೇವೆ—

ನರಸುರವರಧೀರಾ ನಂದಿಕೇಶಾವತಾರ
ವಿಷಮವಿಷಯದೂರಾ ವಿಶ್ವಲೋಕೈಕ್ಯಸಾರ |
ಗತಕಲಿಮಲಸಂಗಾ ಖ್ಯಾತಿಗೋಷ್ಠೀಪ್ರಸಂಗ
ಶರಣು ಬಸವಲಿಂಗಾ ಸಜ್ಜನಾಂಭೋಜಭೃಂಗ ||

ಈತನು ಗಂಗೋದಯವೆಂಬ ಕಾವ್ಯವನ್ನೂ ಬರೆದಿದ್ದಾನೆಂದು ಹೇಳುತ್ತಾರೆ. ಇವನ ಶತಕಕ್ಕೆ ಸೋಮಾರಾಧ್ಯಶತಕ ಎಂಬ ಹೆಸರೂ ಉಂಟು.

ಇವನ ಗಣಸಹಸ್ರನಾಮದ ಆರಂಭದಲ್ಲಿಯೂ ಒಂದೊಂದುಗಣದ ಅಂತ್ಯದಲ್ಲಿಯೂ ಗ್ರಂಥಾಂತ್ಯದಲ್ಲಿಯೂ ಕೆಲವು ಪದ್ಯಗಳಿವೆ. ಸಹಸ್ರನಾಮ ಎಂಬ ಹೆಸರಿದ್ದರೂ ನಮಗೆ ದೊರೆತ ಪ್ರತಿಯಲ್ಲಿ ಒಟ್ಟು 1066 ನಾಮಗಳಿವೆ: ಪ್ರಮಥಗಣ 430, ರುದ್ರಗಣ 149, ವೃಷಭಗಣಯೋಗಾಚಾರ್ಯರು 22, ಅರುವತ್ತುಮೂವರು 67, ಷೋಡಶರು 16, ತೇರಸರು 13, ದಶಗಣಂಗಳು 10, ಅಮರಗಣ 359. ಈ ಅಮರಗಣದಲ್ಲಿ ಬಸವ, ಚೆನ್ನಬಸವ ಮುಂತಾದವರ ಹೆಸರುಗಳಲ್ಲದೆ ಈ ಹೆಸರುಗಳೂ ಹೇಳಿವೆ:—ಅಮುಗಿದೇವಯ್ಯ, ಗಜೇಶಮಸಣಯ್ಯ, ಕಲಿದೇವಯ್ಯ, ಉರಿಲಿಂಗಪೆದ್ದಯ್ಯ, ಸತ್ಯಕ್ಕ, ವೀರಸಂಗಯ್ಯ, ಕೊಡಗೂಸು, ಗುಂಡಬ್ರಹ್ಮಯ್ಯ, ನುಲಿಯ ಚಂದಯ್ಯ, ಚಿಮ್ಮುಲಿಗೆಚಂದಯ್ಯ, ಮೈದುನರಾಮಯ್ಯ, ಹೇರೂರಹೆಣ್ಣು, ವೀರಬಲ್ಲಾಳ, ಏಕಾಂತರಾಮಯ್ಯ, ನಿಂಬಾಣದಗಣೇಶ್ವರ, ಅನಿಮಿಷಯ್ಯ, ಬೊಂತಲದೇವಿ, ಶಿವಲೆಂಕಮಂಚಣ್ಣ, ಸೊರಸಾನಿ, ಮರುಳುಶಂಕರದೇವ, ಸೂಳೆನಂಬಿಯಕ್ಕ,

1. Vol. I, 229. 2. ಶ್ರೀಮತೇ ವೃಷಭೇಂದ್ರಾಯ ಸೋಮನಾಥೇನ ಧೀಮತಾ | ಪಂಚರತ್ನಮಿದಂ ದತ್ತಂ ಜ್ಞಾನವೈರಾಗ್ಯಭಕ್ತಿದಂ ||

ಸೂಳೆಬೊಮ್ಮಲದೇವಿ, ಸೂಳೆಸದ್ಮಲದೇವಿ, ಸೂಳೆಕಾಮಲದೇವಿ, ಸೂಳೆಸಂಕಲದೇವಿ, ಭಿಲ್ಲಮರಾಯ, ಕೋಲಶಾಂತಯ್ಯ, ನಸ್ಸಯ್ಯ, ನೀಲಲೋಚನೆ, ಅಜಗಣ್ಣ, ನಿಜಗುಣದೇವ. ಇವರುಗಳೆಲ್ಲಾ ಕವಿಯ ಕಾಲಕ್ಕೆ ಹಿಂದೆ ಇದ್ದಿರಬೇಕು. ಕೆಲವರು ಮಾತ್ರ ಸಮಕಾಲದವರಾಗಿ ಕಾಣುತ್ತಾರೆ.

ಇವನ ಶರಣುಬಸವರಗಳೆಯಲ್ಲಿ 108 ಕಂದಗಳಿವೆ ಎಂದು ಬರೆದಿರುವುದು[1] ತಪ್ಪು ; 108 ವಾಕ್ಯಗಳು ಅಥವಾ ನುಡಿಗಳು ಇವೆ ಎಂದಿರಬೇಕು. ಅಂತ್ಯದಲ್ಲಿ ಮಾತ್ರ ಒಂದು ಕಂದವಿದೆ. ಈ ನುಡಿಗಳಲ್ಲಿ ಎರಡನ್ನು ಉದಾಹರಿಸುತ್ತೇವೆ.—

ಅಚಲಶೈವಧರ್ಮನಿರ್ಣಯಾವತಾರ ಶರಣು ಬಸವ |
ವಿಕಟಭವಸರಿತ್ಸಮೂಹಶೀತಿಪೋತ್ರ ಶರಣು ಬಸವ |

ಈತನು ಸದ್ಗುರುರಗಳೆ, ಚೆನ್ನಬಸವಸ್ತೋತ್ರದರಗಳೆ ಎಂಬ ಗ್ರಂಥಗಳನ್ನೂ ಬರೆದಿದ್ದಾನೆ. ಇವುಗಳಿಂದ ಎರಡೆರಡು ನುಡಿಗಳನ್ನು ತೆಗೆದು ಬರೆಯುತ್ತೇವೆ—

ಸದ್ಗುರುರಗಳೆ

ಭವತಿಮಿರಹರದೀಪಿಕಾವರ್ತಿ ಸದ್ಗುರುವೆ |
ಶ್ರೀಷಡಕ್ಷರಜಮನುಜಾಲಮುಖ ಸದ್ಗುರುವೆ |

ಚೆನ್ನಬಸವಸ್ತೋತ್ರದ ರಗಳೆ

ಬಸವಗುರುವಚೋಮೃತಗಳಿತವೃಜಿನಪಂಕ ಚೆನ್ನಬಸವ |
ಬಸವಪಾದಕಮಲಕರ್ಣಿಕಾನಿವಾಸ ಚೆನ್ನಬಸವ |

---

## ದೇವೇಂದ್ರಮುನಿ. ಸು. 1200

ಈತನು ಬಾಲಗ್ರಹಚಿಕಿತ್ಸೆಯನ್ನು ಬರೆದಿದ್ದಾನೆ. ಇವನು ಜೈನಕವಿ ; ಸುಮಾರು 1200ರಲ್ಲಿ ಇದ್ದಿರಬಹುದೆಂದು ಊಹಿಸುತ್ತೇವೆ.

ಇವನ ಗ್ರಂಥವು ಬಹಳಮಟ್ಟಿಗೆ ವಾಕ್ಯರೂಪವಾಗಿದೆ.

1. Vol. I, 233.

## ಶುಭಚಂದ್ರ. ಸು. 1200

ಈತನು ಕಾರ್ತಿಕೇಯಾನುಪ್ರೇಕ್ಷೆಗೆ ಟೀಕೆಯನ್ನು ಬರೆದಿದ್ದಾನೆ. ಇವನು ಜೈನಕವಿ; ತ್ರೈವಿದ್ಯವಿದ್ಯಾಧರ, ಷಡ್ಭಾಷಾಕವಿಚಕ್ರವರ್ತಿ ಎಂದು ತನ್ನನ್ನು ವಿಶೇಷಿಸಿ ಹೇಳಿಕೊಂಡಿದ್ದಾನೆ. ಇವನ ಕಾಲವು ಸುಮಾರು 1200 ಆಗಿರಬಹುದು.

---

## ಬಾಳಚಂದ್ರಕವಿಕಂದರ್ಪ.[1] 1204

ಈ ಜೈನಕವಿ ಬಾಂಬೆಪ್ರೆಸಿಡೆನ್ಸಿಗೆ ಸೇರಿದ ಬೆಳಗಾಮಿನಲ್ಲಿ ಇದ್ದ[2] ಎರಡು ಶಿಲಾಶಾಸನಗಳನ್ನು ಬರೆದುದಾಗಿ ಆ ಶಾಸನಗಳ ಅಂತ್ಯದಲ್ಲಿರುವ ಈ ಭಾಗಗಳಿಂದ ತಿಳಿಯುತ್ತದೆ—

ದೋಷವ್ಯತೀತಮರ್ಥಾವಿ | ಶೇಷಮುದೆನೆ ಪೇೞ್ದನೊಲ್ದು ಶಾಸನಮಂ ಪೀ |
ಯೂಷಸಮಸೂಕ್ತಿ ಜಾತು | ಭಾಷಾಕವಿಚಕ್ರವರ್ತಿ ಕವಿಕಂದರ್ಪಂ ||

ಶ್ರೀಮನ್ಮಾಧವಚಂದ್ರತ್ರೈವಿದ್ಯಚಕ್ರವರ್ತಿವಾಕ್ಸುಧಾರಸನಾಭ್ಯುದಿತನಿತ್ಯಸಾಹಿತ್ಯವನಕಮಲಮರಾಳಂ ಬಾಳಚಂದ್ರದೇವಂ ಪೇೞ್ದ ಶಾಸನಂ

ಪ್ರಹತಾರಿಬ್ರಜಕಾರ್ತವೀರಸಚಿವಂ ಶ್ರೀಬೀಚಿರಾಜಂ ಯಶೋ |
ಮಹಿತಂ ಪೇೞುವೆನಲ್ಕೆ ಶಾಸನಮನೊಲ್ಪಿಂ ಬಾಳಚಂದ್ರಂ ಗುಣಾ ||
ಗ್ರಹಿವಿದ್ವಜ್ಜನಸಮ್ಮತಸ್ಫುಟಪದಾರ್ಥಾಳಂಕ್ರಿಯಾಸಂಕುಳಾ |
ವಹಮಪ್ಪಂತಿರೆ ಪೇೞ್ದನಿಂತು ಕವಿಕಂದರ್ಪಂ ಬುಧಾಧೀಶ್ವರಂ ||

ಈ ಶಾಸನಗಳು 1204ರಲ್ಲಿ ಹುಟ್ಟಿದುವು. ಇವುಗಳಲ್ಲಿ ಸೌಂದತ್ತಿಯ ರಟ್ಟರಾಜರಲ್ಲಿ ಒಬ್ಬನಾದ ಕಾರ್ತವೀರ್ಯ(IV)ನ ಶ್ರೀಕರಣಾಗ್ರಗಣ್ಯ ಬೀಚಿರಾಜನು ಬೆಳಗಾಮಿನಲ್ಲಿ ಕಟ್ಟಿಸಿದ ರಟ್ಟಜಿನಾಲಯಕ್ಕೆ ಕಾರ್ತವೀರ್ಯನೂ ಇತರರೂ ದತ್ತಿಯನ್ನು ಬಿಟ್ಟಂತೆ ಹೇಳಿದೆ. ಈ ಶಾಸನಗಳಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ: —

### ಜಿನಸಮಯ

ಶ್ರೀಜಿನಸಮಯನವಾಂಬುಧಿ | ರಾಜಿಸುತಿರ್ಕ್ಕುಮಧನೋರ್ಜಿತಾಮೃತರತ್ನ |
ಶ್ರೀಜನನಗೃಹಂ ಸತ್ವದ | ಯಾಜೀವನಮಪರಿಮಿತಗಭೀರಮಪಾರಂ ||

---

1. Vol. I, 244. 2. ಈಗ ಈ ಶಾಸನಗಳು ಬ್ರಿಟಿಷ್ ಮ್ಯೂಜಿಯಮಿನಲ್ಲಿ ಇವೆ *Epigraphica Indica*, XIII, 15-36.

**ಚಂದಲ ದೇವಿ**

ನರಪತಿಲಕ್ಷ್ಮೀದೇವಸತಿ ಚಂದಲದೇವಿ ನಿಜೋರ್ಧ್ವಹಸ್ತದಿಂ |
ಧರೆಗೆಸೆಯಲ್ಕೆ ಸಂಕ್ರಮಣದೊಳ್ಕುಡೆ ಕಾಂಚನಮಂ ಬೆರಲ್ಗಳೊಳ್ ||
ಬೆರಸಿದ ಹೇಮಕಾಳಿಕೆಯ ಕರ್ಪೆಸೆದಿರ್ಪುದು ಬಾಹುಕಲ್ಪವ |
ಲ್ಲರಿಯ ತಳಪ್ರವಾಳದ ನಖಪ್ರಸವಕ್ಕೆಳಸಿರ್ದ ತುಂಬಿವೋಲ್ ||

**ಲಕ್ಷ್ಮೀದೇವ.**

ವನಿತೆಯರಂ ಮರುಳ್ಚುವಸಮಾಕೃತಿಯಿಂ ಸುಮನೋಭಿವೃದ್ಧಿಯಂ |
ಜನಿಯಿಪ ಶೀಲದಿಂ ಕುವಲಯಕ್ಕೆ ವಿಕಾಸಮನೀವ ನ್ಯೆಮೆಯಿಂ ||
ಜನನಯನಕ್ಕೆ ಕಾಮನೊ ವಸಂತನೊ ಚಂದ್ರಮನೋ ದಿಟಕ್ಕೆ ಪೇ |
ಳೆನೆ ವಿಭು ಲಕ್ಷ್ಮೀದೇವನೆಸೆವಂ ಕವಿಸಂಕುಲಕಲ್ಪಭೂರುಹಂ ||

**ಬೀಚಿರಾಜ**

ಅನುಪಮವಿದ್ಯೆಗುದ್ಧವಿನಯಂ ಸಿರಿಗೊಪ್ಪುವ ಚಾಗದೇಳ್ಗೆ ಗಾ |
ವನಕೆ ಎಸಿಮರ್ಲಾಚರಣಮಾಯುಗೆ ಏಸ್ತೃತಕೀರ್ತಿ ವಾಕ್ಪ್ರವ ||
ರ್ತನೆಗೆ ಖುಕೋಕ್ತಿ ತನ್ನೆಸಕದಿಂ ಸಲೆ ಮಂಡನಮಾಗೆ ವರ್ತಿಪಂ |
ಜನಪತಿಕಾರ್ತವೀರ್ಯಸಚಿವೈಕಶಿರೋಮಣಿ ಬೀಚನುರ್ವಿಯೊಳ್ ||

---

## ಮಲ್ಲಿಕಾರ್ಜುನ. [1] ಸು. 1245

ಈಚೆಗೆ ಇವನ ಸೂಕ್ತಿಸುಧಾರ್ಣವದ ಮತ್ತೊಂದು ಪ್ರತಿ ದೊರೆಯಿತು. ಇದರಲ್ಲಿ 15 ಆಶ್ವಾಸಗಳಿವೆ. ಆರಂಭದಲ್ಲಿ ಜಿನಸ್ತುತಿ ಇದೆ. ಪಂಡಿತರು ಕರೆದು ಈ ಗ್ರಂಥವನ್ನು ಮಾಡು ಎನಲು ಮಾಡಿದೆನು ಎಂದು ಕವಿ ಹೇಳುತ್ತಾನೆ. ಪ್ರಥಮಸಂಪುಟದಲ್ಲಿ ಅನುವಾದಮಾಡಿರುವಂತೆ,[2] ಒಂಬತ್ತನೆಯ ಆಶ್ವಾಸ ಮೊದಲುಗೊಂಡು ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ—

ix ಸೂರ್ಯೋದಯ

ವರ್ಣನೀಯಾಂಶಗಳು.—

ಹಳಹಳನಿರ್ದ ತಾರೆ ಕಳೆಗುಂದಿದ ಚಂದ್ರನಲರ್ಕೆಗುಂದಿದು |
ತ್ಪಲವನ ಶೈತ್ಯಮಪ್ಪೆಲರು ನಂದುವ ದೀಪಮುಗಲ್ವ ಜಾರೆಯರ್ ||

---

1. Vol. I, 298. 2. *Ibid.,* 302

ಗಱಿವುವ ಕೋೞಿ ಶಂಖಮರುಣಚ್ಛವಿ ಕೆಂಪಿನ ಮಂಡಲಂ ರತ |
ಕ್ಕೆಳಸುವ ಕೋಕಮಬ್ಜವಿಕಸಂ ಸಲೆ ಸೂರ್ಯನ ವರ್ಣನಕ್ರಮಂ ||

---

ಜನಿಸಿದ ತಾಣಮೇಂ ಕಿಱಿದೆ ವಾರ್ಧಿ ಸಹೋದರಿಯೇಂ ದರಿದ್ರೆಯೇ |
ಘನತರಭಾಗ್ಯಲಕ್ಷ್ಮಿಯೊಡಹುಟ್ಟಿದನೇಂ ಲಘುವೇ ಹಿಮಾಂಶು ಭಾ ||
ವನೆನಿಪನೇನೊ ಜಾವಳನೆ ಕೃಷ್ಣನುಮೆಂಬುದುಕೇಳ್ದು ಮರ್ತ್ಯರೆ |
ಸ್ನನೆ ಮಿಗೆ ಕರ್ಚೆ ಕೊಳ್ವರೆನುತೂಳ್ವವೊಲಾರ್ದುದು ಶಂಖನಿಸ್ವನಂ ||
ಮೂಡಣಸಂಜೆ ಕೆಂದಳಿರ ಕಾವಣದಂತಿರೆ ಚಂದ್ರಮಂಡಲಂ |
ಬಾಡಿದ ಮಾಧವೀಮಧುರಮಂಜರಿಯಂತಿರೆ ತಾರಕಾಳಿ ನೀ ||
ಗೋಡಿ ಕಟಿಲ್ದು ಬಿೞ್ದು ಕೞಿವೂಗೆಣೆಯಾಗಿರೆ ತಣ್ಣನಪ್ಪೆಲರ್ |
ತೀಡೆ ತಪೋವನಂಬೊಲತಿಪಾವನಮಾಯ್ತು ನಭಂ ಪ್ರಭಾತದೊಳ್ ||

x ಋತು

**ವರ್ಣನೀಯಾಂಶಗಳು—**

ತರುಮೃಗಪಕ್ಷಿಮೇಘಜಳವಾಯುದಿಶಾಜವಕಾಯುಭೋಗಭಾ |
ಸ್ಕರವಿಧುರಾತ್ರಿವಾಸರಸುರಾಲಯ?ಪರ್ವರತೋಪಚಾರಸಿಂ ||
ಧುರಮದಜನ್ಮಯಾನಮದನೋದಯಸಸ್ಯವಿಶೇಷಭಾವದೊಳ್ |
ಪರಿಣತನಪ್ಪವಂಗೆ ಋತುವರ್ಣನವಿಸ್ತರಮೊಪ್ಪಿ ತೋಱುಗುಂ ||

---

ಮದನನ ದಂಡು ಮಲ್ಲಿಗೆಯ ಬಂಡು ಪಿಕಾಳಿಯ ತೊಂಡು ಪೂತ ಚೂ |
ತದ ತನಿಗೊಬ್ಬು ಮಾಧವಿಯ ಪರ್ಬು ತಮಾಲದ ಮಬ್ಬು ರಾಜಕೀ ||
ರದ ತನಿಸೊರ್ಕು ಕಾಮಿಜನದುರ್ಕು ವಿಯೋಗಿಯ ಸೆರ್ಕು ಕೂಡೆ ಬಂ |
ದುದು ಮಧುವಾಸರಂ ವಿವಿಧಕೇಸರಮುದ್ಧತಧೂಳಿಧೂಸರಂ ||
ಪಿಂಗಳವಾದ ನೆಲ್ಲ ತೆನೆಯಂ ನಲಿಗರ್ಚಿದ ರಕ್ತಚಂಚು ಪ |
ಕ್ಷಂಗಳ ಶಾಡ್ವಲಚ್ಛವಿ ಮನಂಗೊಳೆ ಪಾಱುವ ಕೀರಮಾಲೆ ರೋ ||
ದೋಂಗಣಮೆಂಬ ಪಟ್ಟಣದೊಳೊಪ್ಪುವ ಬೆಳ್ಮುಗಿಲೆಂಬ ಬಳ್ಳಿಮಾ |
ಡಂಗಳ ಪೊನ್ನ ಮಾಣಿಕದ ಪಚ್ಚೆಯ ತೋರಣದಂತೆ ರಂಜಿಕುಂ ||

xi ವನಕ್ರೀಡೆ

**ವರ್ಣನೀಯಾಂಶಗಳು—**

ವನಪಾಲರ್ ಪೇೞ್ವ ಭೂಪರ್ ತರುಣಿಯರೊಡನಾ ನಂದನಕ್ಕೆಯ್ದೆ ಪೋಪಾ|

ಬನದೊಳ್ ಪೂಗೊಯ್ವ ಪೂವಿಂ ತೊಡಿಗೆಯನೊಲವಿಂ ಮಾೞ್ಪ
ತೂಗುಯ್ಯಲಂ ಮಾ ||
ವಿನೊಳಾಡುತ್ತಿರ್ಪ ಬೆಟ್ಟೇಱುವ ಮರವಡರ್ದುಂ ಕಾವಣಕ್ಕೋಪ ತಂತ |
ಮ್ಮಿನಿಯರ್ ತ್ರೈತುಂಬುದಂ ವರ್ಣಿಸುಗೆ ಕವಿ ವನಕ್ರೀಡೆಯೊಳ್ ವರ್ಣನೀಯಂ||

---

ಸ್ಮರರಾಜಂ ವನಪಾಲನಾಗೆ ರತಿಲಾವಣ್ಯಪ್ರವಾಹೋತ್ಕರಂ |
ಪರಿನೀರಾಗೆ ನಿರಂತರಂ ಋತುಗಳಾಳಿಂ ಕಾಪಿನಾಳಾಗೆ ಚೈ ||
ತ್ರರಥೋದ್ಯಾನದ ಚೆಲ್ವನೊತ್ತರಿಸಿ ಕೇಳೀಶೈಲಕೇಳೀಸರೋ |
ವರಕೇಳೀಗೃಹಮೆಂಬಿವಂ ತಳೆದು ಕೇಳೀನಂದನಂ ರಂಜಿಕುಂ ||
ಪರಭಾಗಂ ಪೊಣ್ಮೆ ವನ್ನಂ ತನುಲತೆ ಲತೆಯೊಳ್ ಕೂಡೆ ತುಂಗಸ್ತನಂ ಮಂ |
ಜರಿಯೊಳ್ ಮುಂಡಾಡೆ ಕಣ್ಗಳ್ ಬೆರಸೆ ಕುಸುಮದೊಳ್ ಕುಂತಳಂ
ತುಂಬಿಯೊಳ್ ತ ||
ಳ್ತಿರೆ ಪುಷ್ಪಾಮೋದದೊಳ್ ಸುಯ್ ಕಲಸೆ ಕರತಳಚ್ಛಾಯೆ ತಳ್ಕೈಸೆ ಬಾಲಾಂ|
ಕುರಮಂ ಪೂಗೊಯ್ವಳೊರ್ವಳ್ ಲತೆಲತೆಗೊಲವಿಂ ಬಿರ್ದುವಂದಂ
ತರಿದರ್ಳ್ ||

## xii ಜಲಕ್ರೀಡೆ

**ವರ್ಣನೀಯಾಂಶಗಳು**—

ಬೆಮರಂ ವಾರಿವಿಳಾಸಮಂ ಸಲಿಲಧಾರಾಯಂತ್ರವಾರಿಪ್ರವೇ |
ಶಮನಾಲೇಪನಕಂಪಮಂ ಮುಳಿಸುಲೀಲಾಯುದ್ಧಮಂ ಕಾಮಿನೀ ||
ಶ್ರಮಮಂ ಮೂಡಿಮುೞುಂಗುತಿರ್ಪ ಪರಿಯಂ ಮೆಯ್ಯುರ್ಬಮಂ ಚೆಲ್ವಮಂ|
ಕ್ರಮದಿಂದಂ ಪೊಱಮಟ್ಟು ನಿಂದ ನಿಲವಂ ಪೇೞ್ವರ್ ಜಲಕ್ರೀಡೆಯೊಳ್ ||

---

ಇದು ಪಿರಿದುಂ ವಸಂತಸಖಿಯೌವನರತ್ನನಿಧಾನಮಂತಿದ |
ಲ್ತಿದು ಕುಸುಮಾಸ್ತ್ರಶಸ್ತ್ರಚಯಕೋಶಮಹೀಗೃಹಮಂತಿದಲ್ತು ಮ ||
ತ್ತಿದು ರತಿನಾಥಕಲ್ಪಲತಿಕಾಪ್ರಮದೈಕಕೃತಾಲವಾಲವೆಂ |
ಬುದನೆನೆಸಿತ್ತು ಸಂದಣಿಸಿ ನಿಂದಬಲಾವಳಿಯಿಂದೆ ಪೂಗೊಳಂ ||
ಸ್ಫುರಿತಾಂಗಂ ಸೂಸೆ ಲಾವಣ್ಯಮನೆಸೆವಲಗಣ್ ಚಲ್ಲಮಂ ಸೂಸೆ ಲೀಲಾ |

ದರಹಾಸಂ ಸೂಸೆ ಬೆಳ್ದಿಂಗಳನಲಘುಕುಚಂ ಮೇಲುದಂ ಸೂಸೆ ಚಾಮೀ ||
ಕರಕಾಂಚೀಮಂಜುಗುಂಜದ್ಧ್ವನಿ ಕಿವಿಗಮರ್ದಂ ಸೂಸೆ ತಳ್ಪೊಪ್ಪುಪುವುಸುಯ್ಯೆಕ|
ತ್ತುರಿಗಂಪಂ ಸೂಸೆ ಲಕ್ಷ್ಮೀಪತಿಯ ತನುವಿನೊಳ್ ಸೂಸಿದಳ್
ನೀರನೊರ್ವಳ್ ||

## xiii ಮದ್ಯಪಾನ

**ವರ್ಣನೀಯಾಂಶಗಳು—**

ಮದಿರಾಪಾನವಿಕಾರಮಂ ನವವಯಸ್ಸಂಪತ್ತಿಯಂ ಬಂದು ನೋ |
ಡಡವೊಲ್ ನೋಡುವ ನಲ್ಲನಿರ್ದರನನತ್ಯುತ್ಸಾಹಮಂ ಮಾಡೆ ಚಿ ||
ತ್ತದೊಳಾಗಲ್ ತನುಮಧ್ಯೆಗಾಯ್ತೆನಸುಮಾನತ್ವಂ ಚತುರ್ಭಂಗಿಭೇ |
ದದ ಲೀಲಾನಯನಪ್ರಧಾನವಿಧಿಯಿಂ ಕಾದಂಬರೀಗೋಷ್ಠಿಯೊಳ್ ||

---

ಇರೆ ನವಪದ್ಮರಾಗಚಷಕಂ ನಿಜಹಸ್ತತಳಾಗ್ರದೊಳ್ ಮನೋ |
ಹರೆ ತಳಿದೊರ್ಗೆಲಂ ತಳೆದ ಕೋಮಲವಲ್ಲರಿಯಂತೆ ರಕ್ತಪಂ ||
ಕರುಹಮನಾಂತ ಪಂಕಜಿನಿಯಂತೆ ಸಮೋದಿತಚಂದ್ರಬಿಂಬಮಂ |
ಧರಿಯಿಸಿದಿಂದ್ರದಿಗ್ವನಿತೆಯಂತೆಸೆದಳ್ ಮಧುಪಾನಗೋಷ್ಠಿಯೊಳ್ ||
ಅಲರ್ಗಣ್ ಕೆಂಪಡರಲ್ಕೆ ಪೊಂಗಿದಧರಂ ಬೆಳ್ಪೇಱೆ ರೋಮೋದ್ಗಮಂ |
ತಲೆದೋಱಲ್ ಬೆಮರುಣ್ಮೆ ಲಜ್ಜೆ ತೊಲಗಲ್ ನಿತಾಂತ್ರಣವಾಗಲ್ ಮದಂ ||
ಬಲಿಯಲ್ ಕಣ್ ಮುಗಿಯುತ್ತೆ ಮೂರ್ಛೆ ಮಿಗೆ ತೋಱಲ್ಕಂದು ಚೆಲ್ವಾದುದ|
ಗ್ಗಳಮೆಂಬಂತಿರಲಿನ್ನದೇವೊಗೞ್ವೆನೋ ಕಾದಂಬರೀಸಂಗಮಂ ||

## xiv ಸುರತಕ್ರೀಡೆ.

**ವರ್ಣನೀಯಾಂಶಗಳು—**

ಪರಿರಂಭಂ ಚುಂಬನಂ ಸೀತ್ಕೃತಗಳರುತಿ ದಂತಚ್ಛದಂ ರೇಖೆವೊಯ್ಯಲ್ |
ಕರಣಂಗಳ್ ಪಲ್ಲಟಂ ನಚ್ಚಿನ ಮುಖರತೆ ಸುಯ್ ಕಂಪನಸ್ವೇದಮಂಗಾಂ ||
ತರವೂರಂ ರೋಮಹರ್ಷಂ ನಯನಮುಕುಳನಂ ಮಂಚಚಂಚತ್ಸಕುಂತಿ |
ಸ್ವರಮೊಪ್ಪಲ್ಕೊಪ್ಪುವನ್ನಂ ಮೆಱೆಗೆ ಕವಿತೆಯೊಳ್ ನೋಡೆ ಸಂಭೋಗ
ವರ್ಣಂ ||

---

ಬಗೆಯೊಳ್ ಪೊಣ್ಮುವಲಂಪು ಕಾತರಿಕೆಯುಂ ತಂದೀಯೆ ಮೆಯ್ಮೆಯ್ಗೆ ಸಂ |
ದುಗಳೇನಿರ್ಪೊಡಮಿಲ್ಲದಂತೆ ಮಿಗಿಲುಂ ತಳ್ತಪ್ಪಿ ಬಾಯ್ಗೊಟ್ಟದೊಳ್ ||
ಮಿಗೆ ಪೀರ್ವಂತು ಮನೋನುರಾಗರಸಮಂ ಮೆಯ್ವೆರ್ಚೆ ಕಾದಲ್ಮೆ ಕೈ |
ಮಿಗುವನ್ನಂ ನೆರೆದರ್ ಮನಃಪ್ರಿಯತಮರ್ ನಾನಾಕಲಾಪ್ರೌಢಿಯಿಂ ||
ಸ್ತನಶೈಲೋದ್ಭೂತಗಂಗಾನದಿಯೆನಿಸುವ ಹಾರಾಳಿ ಕಾಳಿಂದಿಯಾದ |
ತ್ತನೆ ನೈಲ್ಯಂಬೆತ್ತ ರೋಮಾವಳಿಯುಭಯನದೀಸಂಗದಿಂ ಪಾಪವಿಚ್ಛೇ ||
ದನರೂಪಂಬೆತ್ತ ದೋಷಾಕರನಿದಱೊಳೆ ತಾಂ ಮಜ್ಜನಂಗೆಯ್ದನೆಂದೆಂ |
ಬಿನೆಗಂ ಚೆಲ್ವಾಯ್ತು ಕಾಂತಾಘನಕುಚಯುಗಳೋನ್ಮಧ್ಯ.ಸ್ತಂ ನಖಾಂಕಂ ||

XV ವಿಪ್ರಲಂಭ

ವರ್ಣನೀಯಾಂಶಗಳು—

ಪುರದಿಂ ಮೌನದಿನನ್ಯದೇಶಗಮನವ್ಯಾಸಂಗದಿಂ ಸುವ್ರತಾಂ |
ತರದಿಂ ಕೂಡಿದ ವಲ್ಲಭರ್ಗೆ ವಿರಹಂ ಪೂರ್ವಾನುರಕ್ತರ್ಗೆ ತಾಂ ||
ವಿರಹಂ ಸಂದಿಸಿ ಪಾಱುಯಿಂದೆ ಪಿರಿದುಂ ಬರ್ಕುಂ ದಶಾವಸ್ಥೆಗಳ್ |
ಹರಿಣಾಂಕಾದಿಗಳಂಜಿಕುಂ ಸರಸಸೇವ್ಯಂ ವಿಪ್ರಲಂಭಸ್ಥಳಂ ||

---

ಇನಿಯಂ ಪ್ರಾಣಮುಗಲ್ದು ಪೋಪ ತೆಱದಿಂದೇನಿಂದಗಲ್ದಿರ್ದನಾ |
ತನ ಪೋಗಿಂಗೆನಗಕ್ಕ ನೋವಿಸುಮಿಲ್ಲೇಕೆಂದೊಡೊಂದುಂಟು ನ ||
ಲ್ಲನ ಚಿತ್ತಂ ಪೆಱಪಿಂಗೆ ಪಿಂಗದೆ ತಗುಳ್ದೊರ್ದಂತೆ ನಿಷ್ಕಾರಣಂ |
ನೆನೆವೀಚಿತ್ತದ ಮಾಯ್ದ ನಾಣಿಲಿತನಕ್ಕಾಂ ನೋಂತೆನಬ್ಜಾನನೇ ||
ಮಲ್ಲಿಗೆಯಲ್ಲಿ ಪೂತ ಲತೆಯಲ್ಲಿ ಮುಗಿಲ್ಗಡವಲ್ಲಿ ಮಾಲತೀ |
ವಲ್ಲರಿಯಲ್ಲಿ ಸೋಗೆನವಿಲಲ್ಲಿ ಸುಗಂಧಸಮೀರನಲ್ಲಿ ಮಾ ||
ವಲ್ಲಿ ಮದಾಳಿಯಲ್ಲಿ ಗಿಳಿಯಲ್ಲಿ ಪಿಕಾವಳಿಯೆಲ್ಲವಲ್ಲಿ ಕಾ |
ರಲ್ಲಿ ವಸಂತನಲ್ಲಿಯೆನೆ ಕೊಲ್ಲದೆ ಕಾಮಿಯನಾವನಂ ವನಂ ||

---

## ಮಾಘಣಂದಿ. 1 ಸು. 1260

ಈತನು ಪದಾರ್ಥಸಾರ ಎಂಬ ಗ್ರಂಥಕ್ಕೂ ಕರ್ಣಾಟಕಟೀಕೆಯನ್ನು ಬರೆದಿದ್ದಾನೆ. ಇವನ ಗುರುಪರಂಪರೆ ಹೀಗೆ ಹೇಳಿದೆ—

1. Vol. I, 313.

ಶ್ರೀಮೂಲಸಂಘದ ಬಲಾತ್ಕಾರಗಣದ ವರ್ಧಮಾನ; ಶಿಷ್ಯ ಪದ್ಮನಂದಿ; ಸಧರ್ಮ ಶ್ರೀಧರಾಚಾರ್ಯ; ಶಿಷ್ಯ ವಾಸುಪೂಜ್ಯ; ಶಿಷ್ಯ ಶುಭಚಂದ್ರ; ಶಿಷ್ಯ ಅಭಯನಂದಿ; ಶಿಷ್ಯ ಅರ್ಹನಂದಿ ; ಶಿಷ್ಯ ದೇವಚಂದ್ರ ; ಶಿಷ್ಯ ಅಷ್ಟೋಪವಾಸಿ ಕನಕಚಂದ್ರ ; ಶಿಷ್ಯ ನಯಕೀರ್ತಿ; ಶಿಷ್ಯ ಮಾಸೋಪವಾಸಿ ರವಿಚಂದ್ರ; ಶಿಷ್ಯ ಶ್ರುತಕೀರ್ತಿ; ಶಿಷ್ಯ ವೀರಣಂದಿ; ಶಿಷ್ಯ ಗಂಡವಿಮುಕ್ತನೇಮಿಚಂದ್ರ; ಶಿಷ್ಯ ಗುಣಚಂದ್ರ; ಶಿಷ್ಯ ಪಕ್ಷೋಪವಾಸಿ ಜಿನಚಂದ್ರ; ಶಿಷ್ಯ ವರ್ಧಮಾನ; ಶಿಷ್ಯ ಶ್ರೀಧರ; ಶಿಷ್ಯ ವಾಸುಪೂಜ್ಯ; ಶಿಷ್ಯ ಉದಯಚಂದ್ರ; ಶಿಷ್ಯ ಕುಮುದಚಂದ್ರ; ಶಿಷ್ಯ ಮಾಘಣಂದಿ (ಕವಿ)

ಕವಿ " ಚತುರನುಯೋಗಕುಶಲರುಂ ಸಿದ್ಧಾಂತಾಭಿವರ್ಧನಸುಧಾಕರರುಂ ಎನಿಸಿದ ಶ್ರೀಮಾಘಣಂದಿಸಿದ್ಧಾಂತಚಕ್ರವರ್ತಿಗಳ್ " ಎಂದು ಹೇಳಿದೆ. ಇವನ ಸ್ತುತಿರೂಪವಾದ ಎರಡು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ಅರೆವೆಣ್ಣಾದನದೊರ್ವನೊರ್ವನುರಮಂ ಕೂರ್ತಿತ್ತನೊರ್ವಳ್ಗೆ ದೇ |
ವರೊಳೊರ್ವಂ ಮೊರೆಗೆಟ್ಟನೆನ್ನೊಳೆಡರ್ದೆಂದಂಗೋದ್ಭವಂ ಬಿಂಕಮೇ ||
ಱರೆ ತನ್ನೊಳ್ಗುಣದಿಂದೆ ಕಟ್ಟಿ ವೃಷದಿಂದಂ ಪೆಟ್ಟಮಂ ಪೂಡಿ ನೋ |
ಡಿರೆ ಸೈದ್ಧಾಂತಿಕಮಾಘಣಂದಿಯೆ ಱದಂ ಪ್ರೋದ್ದಾಮನಂ ಕಾಮನಂ ||
ಮಲ್ಲಿಗೆಯ ನಗೆಮೊಗಂಗಳ್| ಮೆಲ್ಲನೆ ಬೆಳ್ಪೇಱ ಮಂದಮರುತಂ ಭಯದಿಂ |
ದಲ್ಲಲ್ಲಿಗೆ ಪುಗೆ ಮದನನ | ಬಿಲ್ಲಂ ಶ್ರೀಮಾಘಣಂದಿಯತಿಪತಿ ಮುಱದಂ ||

ಈತನ ಟೀಕೆಯಲ್ಲಿ 30 ಪರಿಚ್ಛೇದಗಳಿವೆ. ಇದನ್ನು " ಕರ್ಣಾಟದೇಶದ ಜನಂಗಳಱವಂತಾಗಿ ಜಡಮತಿಗಳಂ ಕುಱತು ವ್ಯಕ್ತಾರ್ಥಮಾಗಿ" ಕವಿ ಬರೆದನು. ಪರಿಚ್ಛೇದಗಳ ಕೊನೆಯಲ್ಲಿ ಈ ವಾಕ್ಯವಿದೆ—

ಇದು ವೀತರಾಗಸರ್ವಜ್ಞಪ್ರಣೀತಮುಂ ಸಪ್ತಭಂಗೀಸಮಾಲಿಂಗಿತಮುಮಪ್ಪ ಪದಾರ್ಥಸಾರಶಾಸ್ತ್ರದೊಳ್.

ಈತನ ಶಾಸ್ತ್ರಸಾರಸಮುಚ್ಚಯಟೀಕೆಯಲ್ಲಿ 4 ಅಧ್ಯಾಯಗಳಿವೆ.

---

## ಬಾಲಚಂದ್ರ[1] 1273

ಈತನು ಪಂಚಪರಮೇಷ್ಠಿಗಳಬೊಲ್ಲಿಯನ್ನೂ ಬರೆದಿದ್ದಾನೆ. ಇವನು ಅಭಯಚಂದ್ರಸಿದ್ಧಾಂತಚಕ್ರವರ್ತಿಯ ಶಿಷ್ಯನು. ಈ ಗ್ರಂಥವು

1. Vol. I. 315.

ಪಂಚಪರಮೇಷ್ಠಿಗಳ—ಎಂದರೆ ಅರ್ಹಂತರು, ಸಿದ್ಧರು, ಆಚಾರ್ಯರು, ಉಪಾಧ್ಯಾಯರು, ಸಾಧುಗಳು ಇವರುಗಳ ಸ್ತುತಿರೂಪವಾದ ಗದ್ಯ ಗ್ರಂಥ. ಆದಿಯಲ್ಲಿ

ದ್ರವ್ಯಗುಣಪರ್ಯಯಂಗಳ | ನವ್ಯಗ್ರಕುಶಾಗ್ರಬುದ್ಧಿಯಿಂ ಭಾವಿಸುವಂ |
ಗವ್ಯವಹಿತನಿಜತತ್ವಂ | ಶ್ರವ್ಯಮೆನಲ್ ಪಂಚಗುರುಪದಂ ಶ್ರಯಣೀಯಂ ||

ಎಂಬ ಪದ್ಯವಿದೆ. ಅಂತ್ಯದಲ್ಲಿ ಈ ಪದ್ಯಗಳಿವೆ—

ಪದಪಂಚಕಮಕ್ಷಯಸಂ | ಪದಹೇತುಕಮೆಂದು ನಂಬಿ ಭಾವಿಸುವಂಗ |
ಭ್ಯುದಯಾದಿಕಮೇಂ ಗಹನಮೆ | ವಿದಿತಂ ಬಾಲೇಂದುಬುಧನಿರೂಪಿತವಿಧದಿಂ||
ಸಿದ್ಧಾಂತವೇದ್ಯಭಯಚಂದ್ರಪದಾರವಿಂದೇ | ಆರಾಧ್ಯ ಪಂಚಗುರುಮೋಕ್ಷಪದ ಸ್ವರೂಪಂ |
ಬಾಲೇಂದುನಾ ನಿಗದಿತಂ ಸುಜನೋತ್ತಮಾ ಯೇ | ತೇ ಭಾವಯಂತು ತರಸಾ ಸಮತಾಂ ಲಭಂತೇ ||

---

## ನರಹರಿತೀರ್ಥ. 1281

ಈತನು ವಿಷ್ಣುಸ್ತುತಿರೂಪವಾದ ಹಾಡುಗಳನ್ನು ಬರೆದಿದ್ದಾನೆ. ಇವನು ಮಾಧ್ವಕವಿ; ಮಧ್ವಗುರುವಿನಿಂದ ಮೂರನೆಯ ಪಟ್ಟದಸ್ವಾಮಿಯಾಗಿದ್ದನು. ಸನ್ಯಾಸಿಯಾಗುವುದಕ್ಕೆ ಮುಂದೆ ಗಂಜಾಂ ಪ್ರಾಂತದಲ್ಲಿ ಅಧಿಕಾರಿಯಾಗಿದ್ದನು. ಚಿಕಾಕೋಲಿನಲ್ಲಿ 1281, 1293 ರಲ್ಲಿ ಹುಟ್ಟಿದ ಈತನ ಶಿಲಾಶಾಸನಗಳು ದೊರೆಯುತ್ತವೆ.[1] ಈತನು 1333 ರಲ್ಲಿ ಗತಿಸಿದನೆಂದು ಹೇಳುತ್ತಾರೆ. ಈತನ ಹಾಡುಗಳಲ್ಲಿ ಒಂದನ್ನು ತೆಗೆದು ಬರೆಯುತ್ತೇವೆ—

ರಾಗ ಆನಂದಭೈರವಿ. ಅಟತಾಳ.

ಪಲ್ಲವಿ|| ಇಂತು ಮರುಳಾದೆ ||
ಅನುಪಲ್ಲವಿ || ಇಂತು ಮರುಳಾಗಿ ಬಯಲಿಗೆ ಬಿಲಿದೆ ರಕ್ಷಿಸಯ್ಯ ರಘುಕುಲತಿಲಕ ||

ಮಾತಿನಲ್ಲಿ ಹರಿದಾಸತನ | ನೀತಿಯಲ್ಲಿ ಬಲುಪ್ರೌಢತನ |
ಪ್ರೀತಿ ಧನದುರ್ವಿಷಯದಲ್ಲಿ ನಿ | ರ್ಭೀತಿ ದೈವಗುರುದ್ರೋಹದಲಿ ||1||

1. *Madras Epigraphical Reports* for 1896 and 1900.

ಏಕಾಂತದಲಿ ಧನದ ಗೋಷ್ಠಿ | ಲೋಕಾಂತದಲಿ ವೈರಾಗ್ಯದ ಗೋಷ್ಠಿ |
ಶ್ರೀಕಾಂತನ ಸೇವೆಗೆ ಅನುಮಾನ | ಭೂಕಾಂತನ ಸೇವೆಗೆ ಸನ್ಮಾನ ||2||
ಭಜಿಸು ಬ್ರಹ್ಮಾದಿವಂದಿತಹರಿಯ | ತ್ಯಜಿಸು ಕಾಮಾದಿಶತ್ರುಗಳ |
ಸುಜನವಂದಿತನಾದ ನರಹರಿಯ | ಭಜಿಸು ಶ್ರೀಹರಿರಘುಪತಿಯ ||3||

---

## ಯಶಶ್ಚಂದ್ರ. ಸು. 1300

ಈ ಕವಿಯ ಹೆಸರನ್ನು ಮಧುರನು[1] (ಸು.1385) ತನ್ನ ಧರ್ಮನಾಥ ಪುರಾಣದಲ್ಲಿಯೂ ಭಾಸ್ಕರನು(1424) ತನ್ನ ಜೀವಂಧರಚರಿತ್ರೆಯಲ್ಲಿಯೂ ಹೇಳಿದ್ದಾರೆ. ಭಾಸ್ಕರನು ಯಶಶ್ಚಂದ್ರನ ಬಹುಜ್ಞತೆ ಎಂದು ಈತನನ್ನು ಗೌರವಿಸಿದ್ದಾನೆ. ಇವನು ಆವ ಗ್ರಂಥವನ್ನು ಬರೆದಿದ್ದಾನೆಯೋ ತಿಳಿಯದು. ಇವನ ಕಾಲವು ಸುಮಾರು 1300 ಆಗಿರಬಹುದು.

---

## ಪದ್ಮಪ್ರಭ. ಸು. 1300

ಇವನು ವಿಂಶತಿಪ್ರರೂಪಣೀಟೀಕೆಯನ್ನು ಬರೆದಿದ್ದಾನೆ. ಈತನು ಜೈನಕವಿ. ಸುಮಾರು 1250 ರಲ್ಲಿ ಹುಟ್ಟಿದ ಮಾಘಣಂದಿ ಶ್ರಾವಕಾಚಾರ ದಿಂದ ಅನುವಾದಮಾಡುವುದರಿಂದ ಆ ಕಾಲಕ್ಕೆ ಈಚೆ ಸುಮಾರು 1300 ರಲ್ಲಿ ಇದ್ದಿರಬಹುದು. ಇವನ ಗ್ರಂಥದಿಂದ ಇಂಡಿಯನ್ ಆಂಟಿಕ್ವರಿಯಲ್ಲಿ[2] ಉದ್ಧರಿಸಿರುವ ಸ್ವಲ್ಪ ಭಾಗವನ್ನು ಬರೆಯುತ್ತೇವೆ—

ಅಚ್ಚುದಪದೊತ್ತಿ ಅಜೀವಾ.

ಅಜೀವಾ, ಅಂಬಿಲಕೂಅನುಂಬರ್. ಅಚ್ಚುದಪದೊತ್ತಿ, ಅಚ್ಯುತಕಲ್ಪಪರ್ಯಂತಂ ಪುಟ್ಟುವರ್.

## ಅಮೃತನಂದಿ. ಸು. 1300

ಇವನು ಅಕಾರಾದಿ ವೈದ್ಯನಿಘಂಟುವನ್ನು ಬರೆದಿದ್ದಾನೆ. ಈತನು ಜೈನಕವಿ ; ಸುಮಾರು 1300 ರಲ್ಲಿ ಇದ್ದಿರಬಹುದೆಂದು ತೋರುತ್ತದೆ. ಇವನ ನಿಘಂಟುವಿನಲ್ಲಿ ಸಂಸ್ಕೃತಪದಗಳಿಗೆ ಕನ್ನಡದ ಪರ್ಯಾಯ ಶಬ್ದಗಳು ಹೇಳಿವೆ.

---

Vol. I, 347. 2. For 1912, 89.

## ಪ್ರಭಾಚಂದ್ರ. ಸು. 1300

ಈತನು ಸಿದ್ಧಾಂತಸಾರ, ಚಾರಿತ್ರಸಾರ ಇವುಗಳಿಗೆ ಟೀಕೆಯನ್ನು ಬರೆದಿದ್ದಾನೆ. ಇವನು ಜೈನಕವಿ. ಇವನ ಕಾಲವು ಸುಮಾರು 1300 ಆಗಿರ ಬಹುದೆಂದು ಊಹಿಸುತ್ತೇವೆ.

---

## ಕನಕಚಂದ್ರ. ಸು. 1300

ಈತನು ಕೊಂಡಕುಂದಾಚಾರ್ಯನ ಮೋಕ್ಷಪ್ರಾಭೃತ ಅಥವಾ ಸಹ ಜಾತ್ಮಪ್ರಕಾಶ ಎಂಬ ಗ್ರಂಥಕ್ಕೆ ಕನ್ನಡವ್ಯಾಖ್ಯಾನವನ್ನು ಬರೆದಿದ್ದಾನೆ. ಇವನು ಜೈನಕವಿ; ಸುಮಾರು 1300 ರಲ್ಲಿ ಇದ್ದಿರಬಹುದು.

---

## ನಾಗರಾಜ.[1] 1331

ಈತನ ಪುಣ್ಯಾಸ್ರವವನ್ನು[2] ಆರ್ಯಸೇನನು ತಿದ್ದಿ ಅಂದಗೊಳಿಸಿದ ನೆಂದು

> ಶ್ರುತವಾರ್ಧಿಯಾರ್ಯಸೇನ | ವ್ರತಿಪತಿ ಕೊಂಡಾಡಿ ತಿರ್ದೆ ಕನ್ನಡದೊಳ್ಪಂ |
> ಪ್ರತಿಪಾದಿಸಿದನೆನಲ್ಕೀ | ಕೃತಿ ಪೆರ್ಮೆಯನಾಂತುದೆಂಬುದೇನಚ್ಚರಿಯೇ ||

ಎಂಬ ಪದ್ಯದಲ್ಲಿ ಹೇಳಿದ್ದಾನೆ. ಈ ಆರ್ಯಸೇನನೂ ಕವಿಯಾಗಿದ್ದಿರ ಬೇಕೆಂದು ತೋರುತ್ತದೆ. ಅವ ಗ್ರಂಥಗಳನ್ನು ಬರೆದಿದ್ದಾನೆಯೋ ತಿಳಿ ಯದು.

---

## ಗುರುದೇವ. ಸು. 1350.

ಈತನು ಮಹಿಮ್ನಸ್ತೋತ್ರ, ಮಲ್ಹಣಸ್ತೋತ್ರ, ಮಲೆಯರಾಜಸ್ತೋ ತ್ರ, ಅನಾಮಯಸ್ತೋತ್ರ, ಹಲಾಯುಧಸ್ತೋತ್ರ, ಭೃಂಗಿಸ್ತವ ಇವುಗಳಿಗೆ ಕನ್ನಡವಾಖ್ಯಾನವನ್ನು ಬರೆದಿದ್ದಾನೆ.

ಇವನು ವೀರಶೈವಕವಿ; ಮಲ್ಲಿಕಾರ್ಜುನಪಂಡಿತಾರಾಧ್ಯನ (ಸು. 1160) ವಂಶೋದ್ಭವನು. ಸಂಸ್ಕೃತದಲ್ಲಿ ಈತನು ಬರೆದಿರುವ ವೀರಶೈವಾ ಚಾರಪ್ರದೀಪಿಕೆಯಲ್ಲಿ ತನ್ನ ಪರಂಪರೆಯನ್ನು ಹೀಗೆ ಹೇಳಿಕೊಂಡಿದ್ದಾನೆ—

1. Vol. I, 331. 2. *Ibid.*, 332.

ದ್ರಾಕ್ಷಾರಾಮದ ಕೋಟಿಪಲ್ಯಾಖ್ಯದೇಶಿಕ; ಮಗ ಭೀಮಪಂಡಿತ, ಅವನ ಹೆಂಡತಿ ಗೌರಮಾಂಬೆ, ಇವರ ಮಗ ಮಲ್ಲಿಕಾರ್ಜುನಪಂಡಿತ, ಇವನು ವೆಲನಾಡುಚೋಳನ ಆಸ್ಥಾನದಲ್ಲಿ ವಾದಿಗಳನ್ನು ಜಯಿಸಿದನು; ಮಗ ಪಂಡಿತಾರಾಧ್ಯ; ಮಗ ವೀರಾರಾಧ್ಯ; ತತ್ಪ್ರತೀಕಸಂಭೂತ ಗುರುಬಸವ ; ಮಕ್ಕಳು ಗಂಗಾಧರ, ಬಸವ ; ಬಸವನ ಮಕ್ಕಳು ಹಿರಿಯಾರ್ಯ, ಪಂಡಿತಾರ್ಯ ; ಪಂಡಿತಾರ್ಯನ ಮಗ ಗುರುಲಿಂಗ ; ಮಕ್ಕಳು ಗುರುದೇವ, ಪಂಡಿತಾರ್ಯ, ಬಸವಾರಾಧ್ಯ, ಜಕ್ಕಾರಾಧ್ಯ.

ಈ ಗುರುದೇವನೇ ವ್ಯಾಖ್ಯಾಕಾರ. ವೀರಶೈವಾಚಾರಪ್ರದೀಪಿಕೆ ಯನ್ನು ಸಿದ್ಧದೇವನಿಗೋಸ್ಕರ ರಚಿಸಿದಂತೆ ಹೇಳುತ್ತಾನೆ. ಈ ಸಿದ್ಧದೇವ ನಾರೋ ತಿಳಿಯದು. ಮಲ್ಲಿಕಾರ್ಜುನಪಂಡಿತನಿಂದ (ಸು. 1160) 7ನೆಯ ತಲೆಯವನಾದುದರಿಂದ ಇವನ ಕಾಲವು ಸುಮಾರು 1350 ಆಗಬಹುದು.

ಟೀಕೆಯ ಕೊನೆಯಲ್ಲಿ ಈ ಗದ್ಯವಿದೆ---

ಇತಿ ಶ್ರೀಮದ್ವೇದಾಗಮೋಪನಿಷತ್ಪುರಾಣೋಕ್ತಮಾರ್ಗ ಪ್ರವರ್ತನ ಪ್ರವೀಣ ಪಂಡಿತಾರಾಧ್ಯದೇವನಾಮಾಚಾರ್ಯವರ್ಯತನೂಭವಗುರುಲಿಂಗದೇವಾಹ್ವಯದೇಶಿಕೇಂದ್ರ ಪ್ರತೀಕೋದ್ಭವ ಗುರುದೇವಾಖ್ಯೇನ ಕರ್ಣಾಟ ಭಾಷಾಕೃತಾ ಟೀಕಾ ಪರಿಸಮಾಪ್ತಾ.

---

## ಬಾಹುಬಲಿ ಪಂಡಿತ. 1352

ಈತನು ಧರ್ಮನಾಥಪುರಾಣವನ್ನು ಬರೆದಿದ್ದಾನೆ. ನಮಗೆ ಈ ಗ್ರಂ ಥದ ಕೊನೆಯ ಓಲೆ ಮಾತ್ರ ದೊರೆತಿರುವುದರಿಂದ ಕವಿಯ ವಿಷಯವಾ ಗಿಯೂ ಗ್ರಂಥದ ವಿಷಯವಾಗಿಯೂ ವಿಶೇಷಾಂಶಗಳನ್ನು ತಿಳಿಸಲು ಅವ ಕಾಶವಿಲ್ಲದೆ ಇದೆ. ಈತನು ಜೈನಕವಿ; ನಯಕೀರ್ತಿಯ ಶಿಷ್ಯನು. ಈ ಗ್ರಂಥವನ್ನು ಶಕ 1274 ನಂದನದಲ್ಲಿ, ಎಂದರೆ 1352 ರಲ್ಲಿ, ಬರೆದಂತೆ

ಸ್ವಸ್ತಿ ಶ್ರೀಶಕವತ್ಸರಂ ಸಲೆ ಚತುಸ್ಸಪ್ತದ್ವಯೈಕಾಂಕವಿ |
ನ್ಯಸ್ತಂ ನಂದನವರ್ಷದಲ್ಲಿ ಮಧುಮಾಸಶ್ವೇತಪಕ್ಷಾಷ್ಟಮಿೀ ||
ವಿಸ್ತಾರೀಕೃತ ಸೋಮವಾರದೊಳಿದಂ ಸಂಪೂರ್ಣಮಂ ಮಾಡಿದಂ |
ಪ್ರಸ್ತುತ್ಯಪ್ರತಿಭಾಪರಂ ಭುಜಬಲಿಪ್ರಖ್ಯಾತಯೋಗೀಶ್ವರಂ ||

ಎಂಬ ಪದ್ಯದಿಂದ ತಿಳಿಯುತ್ತದೆ. ಈತನಿಗೆ ಉಭಯಭಾಷಾಕವಿ ಚಕ್ರವರ್ತಿ ಎಂಬ ಬಿರುದಿದ್ದಂತೆ ತೋರುತ್ತದೆ. ತನ್ನ ಗುಣಾದಿಗಳನ್ನು ಈ ಪದ್ಯದಲ್ಲಿ ಹೇಳಿಕೊಂಡಿದ್ದಾನೆ---

ಪಿರಿದುಂ ಸಂತೋಷಮಂ ತಾಳ್ದಿದನತಿಶಯವತ್ಕಾವ್ಯಮಂ ಮಾಡಿ ತೇಜ |
ಸ್ಫುರಣಂ ವಿದ್ಯಾಸಮುದ್ರಾಮೃತಮಯಕಿರಣಂ ವಂದಿಮಂದಾರರೂಪಂ ||
ಸ್ಮರರೂಪಂ ನೀರಜಂ ಬಾಹುಬಲಿ ಸುಕವಿರಾಜಂ ವಿಪಶ್ಚಿತ್ಸಹಾಯಂ |
ಧರಣೀಶೋಲ್ಲಾಲನೀಯಂ ಘನಗುಣನಿವಹಂ ಚಾತುರೀಜನ್ಮಗೇಹಂ ||

ಇವನ ಗ್ರಂಥ

## ಧರ್ಮನಾಥಪುರಾಣ.

ಇದು ಚಂಪೂರೂಪವಾಗಿದೆ; 16 ಆಶ್ವಾಸಗಳಾಗಿ ಭಾಗಿಸಲ್ಪಟ್ಟಿದೆ. ಇದರಲ್ಲಿ 15 ನೆಯ ತೀರ್ಥಂಕರನಾದ ಧರ್ಮನಾಥನ ಚರಿತವು ಹೇಳಿದೆ. ಆಶ್ವಾಸಗಳ ಅಂತ್ಯದಲ್ಲಿ ಈ ಗದ್ಯವಿದೆ---

ಇದು ಸಕಲಭುವನಜನವಿನೂಯಮಾನಾನೂನಮಹಿಮಾಮಾನನೀಯ ಪರಮ ಜಿನಸಮಯಕಮಳಿನೀಕಳಹಂಸಾಯಮಾನ ಶ್ರೀಮನ್ನಯಕೀರ್ತಿದೇವಪ್ರಸಾದಸಂಪಾದ ಪಾದಸಿಧಾನದೀಪವರ್ತಿಯುಭಯಭಾಷಾಕವಿಚಕ್ರವರ್ತಿ ಬಾಹುಬಲಿಪಂಡಿತದೇವಪವಿ ನಿರ್ಮಿತಮಪ್ಪ ಧರ್ಮನಾಥಪುರಾಣದೊಳ್.

---

## ಭೀಮಕವಿ. [1] 1369

ಈತನು ಭೃಂಗಿದಂಡಕವನ್ನೂ ಬರೆದಿರುವಂತೆ ಸಿದ್ಧನಂಜೇಶನ (ಸು. 1650) ರಾಘವಾಂಕಚಾರಿತ್ರದಿಂದ ತಿಳಿಯುತ್ತದೆ.

---

## ಕವಿಪುಟ್ಟಣಾಂಕ ಪಂಡಿತ. ಸು. 1380

ಮನ್ಮಥವಿಜಯವನ್ನು ಬರೆದ ಕವಿಮಲ್ಲನು (ಸು. 1400) ಈತನನ್ನು ಹೀಗೆ ಸ್ತುತಿಸಿದ್ದಾನೆ---

ಚತುರಚತುರ್ಮುಖಂ ಕೃತಕೃತಿಪ್ರಮುಖಂ ವರವೇದಶಾಸ್ತ್ರವಿ |
ಶ್ರುತಮತಿ ಕಾಮತತ್ವಭರತಾಗಮಶಬ್ದವಿಚಾರಕಾವ್ಯಪ ||
ದ್ಧತಿರಸಭಾವರಾಗರಮಣೀಯಕರಂ ಕವಿಪುಟ್ಟಣಾಂಕಪಂ |
ಡಿತನೆನಲಾತನಿಂದಖಿವು ಪೊಣ್ಮಿದ ಮಲ್ಲನದೇಂ ಕೃತಾರ್ಥನೋ ||

1, Vol. I, 342.

ಇದರಿಂದ ಈತನು ದೊಡ್ಡ ಪಂಡಿತನೂ ಕವಿಯೂ ಆಗಿದ್ದಂತೆಯೂ ಕವಿಮಲ್ಲನಿಗೆ ವಿದ್ಯಾಗುರುವಾಗಿದ್ದಂತೆಯೂ ತಿಳಿಯುತ್ತದೆ. ಆವ ಗ್ರಂಥಗಳನ್ನು ಬರೆದಿದ್ದಾನೆಯೋ ತಿಳಿಯದು. ಇವನು ಸುಮಾರು 1380ರಲ್ಲಿ ಇದ್ದಿರಬಹುದು.

---

## ಅಭಿನವಚಂದ್ರ. [1] ಸು. 1400

ಈತನು ಬ್ರಾಹ್ಮಣಕವಿ. ಇವನ ತಂದೆ ಕಾಳಪಯ್ಯ, ತಾಯಿ ಅತ್ತಿಸುಬ್ಬೆ, ಅಣ್ಣ ಸೋಮದೇವ, ಸ್ಥಳ ಬಾಗೆವಾಡಿ. "ಚಂದ್ರಕವೀಂದ್ರ ವಾಗ್ವಿಲಾಸಂ ನೆಗಟಿಲ್ ವಾಜಿಶಾಸ್ತ್ರಮಂ ವಿರಚಿಸುವೆಂ" ಎಂಬುದರಿಂದ ಹಿಂದೆ ವಾಜಿಶಾಸ್ತ್ರವನ್ನು ಬರೆದ ಚಂದ್ರಕವಿಯನ್ನು ಅನುಸರಿಸಿ ಕವಿ ಈ ಗ್ರಂಥವನ್ನು ಬರೆದಂತೆ ತೋರುತ್ತದೆ. ಈ ಚಂದ್ರಕವಿ ಮದನತಿಲಕವನ್ನು ಬರೆದ ಚಂದ್ರರಾಜನಾಗಿರಬಹುದು. ಆ ಚಂದ್ರಕವಿಯನ್ನು ಅನುಸರಿಸಿ ಅಭಿನವಚಂದ್ರ ಎಂದು ಕವಿ ತನಗೆ ಹೆಸರಿಟ್ಟುಕೊಂಡಿರಬಹುದು. ತನ್ನ ಕವಿತಾಚಾತುರಿಯನ್ನು ಈ ಪದ್ಯಗಳಲ್ಲಿ ಹೇಳಿಕೊಂಡಿದ್ದಾನೆ—

ಪ್ರಹಸಿತಸರಸ್ವತೀಮುಖ | ಕುಹರವಿನಿರ್ಗತಸುತಪ್ರಸನ್ನಾಳಾಪಂ |
ಸಹಜವಿದೆಂಬಂತಿರೆ ವಾ | ಙ್ಮಹಿಮೆಯನಾಂ ಮೆಱೆದು ವಿಬುಧರಂ ಮೆಚ್ಚಿಸುವೆಂ||
ಅರ್ಥಾವಗಾಧಮೆನಿಸಿ | ಪ್ಪರ್ಥಂ ಬುಧಜನದ ಮನಕೆವರೆ ಪೇಟಲ್ಕಂ |
ಸ್ವರ್ಥಂ ಕವಿತಾಪ್ರಭವಸ | ಮರ್ಥಿಕೆಯೆನಗುಂಟು ಪೇೞ್ವೆನೆನ್ನಱಿವನಿತಂ ||

ಕುಕವಿಗಳನ್ನು ಈ ಪದ್ಯದಲ್ಲಿ ನಿಂದಿಸಿದ್ದಾನೆ.—

ಅಗೞ್ದಡಪಿ ಪೆಱರ ಕೃತಿಯಂ|ತಗುಳ್ದುಮವಂ ನುಡಿದು ಕೊರಲ ಸೆರೆ ಜಗಿವಿನೆಗಂ|
ಬಗುಳ್ದು ಬೞಿಕೆಡದಕಾಲೊಳ್ |ನುಗುಳ್ದು ಮನಂಮಗುೞ್ದು ಮಣಿವ ದುಷ್ಕವಿ
ಕವಿಯೇ ||

ಇವನ ಗ್ರಂಥ

### ಅಶ್ವಶಾಸ್ತ್ರ.

ಇದು 16 ಅಧ್ಯಾಯಗಳಾಗಿ ಭಾಗಿಸಲ್ಪಟ್ಟಿದೆ; 888 ಪದ್ಯಗಳನ್ನು ಒಳಕೊಂಡಿದೆ. ಪದ್ಯಗಳು ಪ್ರಾಯಿಕವಾಗಿ ಕಂದಗಳಾಗಿವೆ. ಗ್ರಂಥಾವ

---

1. Vol. I, 358.

ತಾರದಲ್ಲಿ ವಿಷ್ಣುಸ್ತುತಿ ಇದೆ. ಬಳಿಕ ಕವಿ ಶಿವ, ಬ್ರಹ್ಮ, ಸೂರ್ಯ, ಗಣಪತಿ, ಲಕ್ಷ್ಮಿ, ಮಹಿಷಾಸುರಮರ್ದಿನಿ ಇವರುಗಳನ್ನು ಸ್ಮರಿಸಿದ್ದಾನೆ. ತನ್ನ ಕವಿತಾಶಕ್ತಿಯನ್ನು ತೋರಿಸಲು ಈ ಗ್ರಂಥವನ್ನು ಪದ್ಯರೂಪವಾಗಿ ಬರೆದಂತೆ ಈ ಪದ್ಯದಲ್ಲಿ ಹೇಳಿದ್ದಾನೆ—

ಕನ್ನಡಕವಿ ನಿಜಕವಿತೆಯ | ಬಿನ್ನಣಮಂ ಮೆಱೆವುದರಿಂದೆ ಪದ್ಯದೊಳದಱಿಂ |
ಬಿನ್ನಣಮನಱಿಪಲೆಂದಾ | ನೆನ್ನರ್ಥಿಯ ವಾಜಿಶಾಸ್ತ್ರಮಂ ವಿರಚಿಸುವೆಂ ||

ಅಧ್ಯಾಯಗಳ ಅಂತ್ಯದಲ್ಲಿ ಗ್ರಂಥಕ್ಕೆ ಚಂದ್ರಮತ ಎಂಬ ಹೆಸರು ಹೇಳಿದೆ. ಈ ಗ್ರಂಥದಿಂದ ಇನ್ನೂ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ—

ತೆರೆಯಿಲ್ಲದೆ ಸೆರೆಯಿಲ್ಲದೆ | ನರೆಯಿಲ್ಲದೆ ಕಿಱಿಯವಾಗಿ ತೆಳ್ಳನೆ ವೊನೆಯಾ |
ಗಿರೆ ಕಿವಿಗಳೊಳಗೆ ನುಣ್ಣಾ | ಗಿರೆ ಕಟಮುಂ ವಿಕಟಮಾಗದಿರೆ ಹರಿ ಶುಭದಂ ||
ವಾಜಿಯೆ ಮೊದಲಾ ವಿಜಯ | ಕ್ಕಾಜಿಯೊಳರಸಂಗೆ ಬುದ್ಧಿವಂತಂಗದಱಿಂ |
ವಾಜಿಗಳನೆಯ್ದೆ ಪೊರೆವುದು | ಪೂಜಿಸುವುದು ವಿಜಯಲಕ್ಷ್ಮಿಯಂ ಬಯಸುವವಂ||
ಶೃಂಗಿಯ ಬೇರುಂ ವಾಣಿಜ | ದಿಂಗುಂ ಬೆಳ್ಳುಳ್ಳಿ ತಿಗಡೆ ಸೈಂಧವಮಿವಾ ಪಂ |
ಚಾಂಗಮುಮಂ ಸಮನಾಗಿ ತು | ರಂಗಕ್ಕಿಕ್ಕುವುದು ಸರ್ವಶೂಲಾಪಹರಂ ||
ತುರಗಕ್ಕೆ ಲದ್ದಿ ಪೋಱಮಡ|ದಿರೆ ಪುಣಿಸೆಯ ಪಣ್ಣ ಬತ್ತಿಯೊಳ್ ಸೈಂಧವಮಂ |
ಬೆರಸಿ ಗುದಮುಖದೊಳಿಡೆ ಬಾ | ಹಿರಮಕ್ಕುಂ ಕಠಿನಮಾಗಿ ಬಿಗಿದಿರ್ದ ಮಲಂ ||

---

## ಅಯತವರ್ಮ. ಸು. 1400

ಈತನು ಕನ್ನಡರತ್ನಕರಂಡಕವನ್ನು ಬರೆದಿದ್ದಾನೆ. ಇವನು ಜೈನ ಕವಿ; ವರ್ಧಮಾನಸಿದ್ಧಾಂತದೇವನ ಶಿಷ್ಯನು. ಇವನ ವಿಷಯವಾಗಿ ಇವನ ಗ್ರಂಥದಿಂದ ಇನ್ನೇನೂ ತಿಳಿವುದಿಲ್ಲ. ಇವನ ಕಾಲವನ್ನು ನಿಶ್ಚಯಿಸುವುದಕ್ಕೂ ಸರಿಯಾದ ಆಧಾರವಿಲ್ಲ ; ಸುಮಾರು 1400ರಲ್ಲಿ ಇದ್ದಿರಬಹುದೆಂದು ತೋರುತ್ತದೆ.

ಇವನ ಗ್ರಂಥ

### ಕನ್ನಡ ರತ್ನಕರಂಡಕ.

ಇದು ಚಂಪೂಗ್ರಂಥ ; ಸಮ್ಯಗ್ದರ್ಶನಸ್ವರೂಪನಿರೂಪಣ, ಸಮ್ಯಗ್ಜ್ಞಾನಸ್ವರೂಪನಿರೂಪಣ, ಸಮ್ಯಕ್ಚಾರಿತ್ರಸ್ವರೂಪನಿರೂಪಣ ಎಂದು

3 ಪರಿಚ್ಛೇದಗಳಾಗಿ ಭಾಗಿಸಲ್ಪಟ್ಟಿದೆ. ಇದರಲ್ಲಿ ಜೈನಮತಕ್ಕೆ ಸಂಬಂಧಪಟ್ಟ ರತ್ನತ್ರಯವೆಂಬ ದರ್ಶನಜ್ಞಾನಚಾರಿತ್ರಗಳು ವರ್ಣಿಸಲ್ಪಟ್ಟಿವೆ. ಗ್ರಂಥಾವತಾರದಲ್ಲಿ ಚತುರ್ವಿಂಶತಿಜಿನಸ್ತುತಿ ಇದೆ. ಗ್ರಂಥಾಂತ್ಯದಲ್ಲಿ ಈ ಗದ್ಯವಿದೆ—

ಇದು ಭಗವದರ್ಹತ್ಪರಮೇಶ್ವರಪರಮಭಟ್ಟಾರಕವೀತರಾಗಸರ್ವಜ್ಞವದನವನಜಸಮುದ್ಗತಸದಸದಾತ್ಮಕಪರಮತತ್ತ್ವಭಾವನಾಭಾವಿತಸ್ವಾಂತ ಶ್ರೀವರ್ಧಮಾನಸಿದ್ಧಾಂತದೇವಚರಣಸರಸೀರುಹಸ್ಮರಣಪರಿಣತಾಂತಃಕರಣಕುಶೇಶಯ ಶ್ರೀಮದಾಯತವರ್ಮವಿರಚಿತಮಪ್ಪ ರತ್ನಕರಂಡಕದೊಳ್.

ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ—

**ರತ್ನತ್ರಯ**

ತತ್ತ್ವದ ರುಚಿ ಸಮ್ಯಕ್ತ್ವಂ | ತತ್ತ್ವಂಗಳನೊಳ್ಳಿತಾಗಿಯ**ಱಿ**ವುದು ಬೋಧಂ |
ತತ್ತ್ವಂ ತನ್ನೊಳ್ ನೆ**ಱೆ**ದಿರೆ | ಸತ್ತ್ವಂಗಳನೋವಿಕಾವುದದುವೆ ಚರಿತ್ರಂ ||

**ಸಲ್ಲೇಖನೆ**

ಎಲ್ಲಾ ಪರಿಗ್ರಹಮುಮಣ | ಮಿಲ್ಲದ ಮನದೊಡೆಯನಾಗಿ ಸಲೆ ತಪಮಂ ತ |
ಳ್ವಿಲ್ಲದೆ ಕೆಯ್ಕೊಳ್ವುದು ತಾಂ | ಸಲ್ಲೇಖನೆಯೆಂದು ಪೇೞ್ವರಾಚಾರ್ಯರ್ಕಳ್ ||

**ವೈರಾಗ್ಯ**

ಜಳಬುದ್ಬುದದಿಂ ಕ್ಷಣಿಕಂ | ಜಳಧರನಿವಹಂಗಳಿಂದಮಧ್ರುವಮುಳ್ಕಂ |
ಗಳ ರಂಜನೆಯಂತಚಿರಂ | ಬಳಸಿದ ಬಂಧುಗಳುಮೊಡಲುಮೊಡವೆಯುಮೆಂತುಂ ||
ಚತುರಂಗಬಲಮುಮಾಯುಧ | ತತಿಯುಂ ಬರಮಿತ್ತ ದೈವಮುಂ ಬಂಧುಗಳುಂ |
ಕ್ಷಿತಿಯುಂ ನಿಜಭುಜವೀರ್ಯಮು | ಮತೀತಮಪ್ಪಂದು ಕಾಯಲಾ**ಱ**ವು ಸರರಂ ||
ಸಂಸಾರಕಾರಣಂಗಳ್ | ಹಿಂಸಾರುಚಿ ಕಳವು ಪುಸಿ ಪರಸ್ತ್ರೀಗಮನಂ |
ಮಾಂಸಮಧುಮದ್ಯಸೇವನೆ | ಸಂಸಯಮೇಂ ದುಃಖಕಾರಣಂಗಳಿವಿನಿತುಂ ||

---

## ಚಂದ್ರಕೀರ್ತಿ. ಸು. 1400

ಈತನು ಪರಮಾಗಮಸಾರವನ್ನು ಬರೆದಿದ್ದಾನೆ. ಇವನು ಜೈನಕವಿ. ಗ್ರಂಥಾಂತ್ಯದಲ್ಲಿರುವ

ಮುನಿಪತಿ ದರ್ಶನಶುದ್ಧಂ | ವಿನುತಯಶಂ ಶೀಲರತ್ನನಚಳಿತಧೈರ್ಯಂ |
ಮನಸಿಜಮದಕರಿಸಿಂಹಂ | ವಿನಯನಿಧಾನಂ ಸರಸ್ವತೀಮುಖತಿಲಕಂ ||

ಯಮನಿಯಮಧ್ಯಾನಯುತಂ | ಸಮಚಿತ್ತಂ ತತ್ತ್ವವೇದಿ ವೈರಾಗ್ಯಯುತಂ |
ಶಮಿತಕಷಾಯಂ ನಿಸ್ಪೃಹ | ನಮಲಂ ಭವ್ಯಂ ಸರಸ್ವತೀಮುಖತಿಲಕಂ ||

ಎಂಬ ಪದ್ಯಗಳಲ್ಲಿ ಕವಿ ತನ್ನ ಗುಣಾದಿಗಳನ್ನು ಹೇಳಿಕೊಂಡಿರುವಂತೆ ತೋರುತ್ತದೆ. ಅಲ್ಲದೆ ಆತನಿಗೆ ಸರಸ್ವತೀಮುಖತಿಲಕ ಎಂಬ ಬಿರುದು ಇದ್ದಂತೆಯೂ ತಿಳಿಯುತ್ತದೆ. ಒಂದೆರಡುಪದ್ಯಗಳು ಕವಿಜನಮಿತ್ರ ಎಂದು ಮುಗಿಯುತ್ತವೆ. ಇದೂ ಕವಿಯ ಬಿರುದಾಗಿದ್ದರೂ ಇರಬಹುದು. ಕವಿಯ ಕಾಲವನ್ನು ನಿರ್ಧರಿಸಲು ಆವ ಆಧಾರವೂ ಇಲ್ಲ ; ಸುಮಾರು 1400ರಲ್ಲಿ ಇದ್ದಿರಬಹುದೆಂದು ತೋರುತ್ತದೆ.

ಇವನ ಗ್ರಂಥ

### ಪರಮಾಗಮಸಾರ

ಇದು ಕಂದವೃತ್ತಗಳಲ್ಲಿ ಬರೆದಿದೆ ; ಪದ್ಯಗಳು 132. ಇದರಲ್ಲಿ ಆತ್ಮಸ್ವರೂಪ, ವೈರಾಗ್ಯ ಮುಂತಾದ ವಿಷಯಗಳು ನಿರೂಪಿತವಾಗಿವೆ. ಇದಕ್ಕೆ ಈ ಹೆಸರು ಬರಲು ಕಾರಣವನ್ನು ಕವಿ ಈ ಪದ್ಯದಲ್ಲಿ ಹೇಳುತ್ತಾನೆ—

ಪರಮಜಿನೇಶ್ವರಮತದೊಳ್ | ಪರಿಕಿಸಿ ಸಾರಾಯಮಪ್ಪುವಂ ಕೊಂಡು ಕರಂ |
ವಿರಚಿಸಿತಪ್ಪುದಱಿಂದಂ | ಪರಮಾಗಮಸಾರಮಾದುದೀಕೃತಿಯುಂದಂ ||

ಗ್ರಂಥಾವತಾರದಲ್ಲಿ ಪುರುದೇವಸ್ತುತಿ ಇದೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ಎನ್ನ ಧನಮೆನ್ನ ಪುತ್ರರಿ | ದೆನ್ನಯ ಗೃಹಮೆನ್ನ ವಸ್ತುವಾಹನಮೆನುತುಂ |
ತನ್ನ ನಿಜಾತ್ಮನನಱಿಯದೆ | ಮನ್ನಿಸುಗುಂ ಮೂಢಮತಿಯೊಳೊಂದಿದ ಜೀವಂ ||
ಧ್ಯಾನಂ ಕಿಚ್ಚಾಗೆ ಲಸದ್ | ಜ್ಞಾನಂ ತಿದಿಯಾಗೆ ವೃತ್ತಮೌಷಧಮಾಗಲ್ |
ಜ್ಞಾನಿ ಸುಡುಗಾತ್ಮಲೋಹಮ | ನೇನುಂ ಮಳಮೊಂದು ನಿಲ್ಲದಂತಿರೆ ಮುದದಿಂ ||
ನೀರೊಳಗೆ ಪುಟ್ಟಿ ಪದ್ಮಂ | ನೀರೊಳ್ ತಾಂ ಮುಟ್ಟದಂತೆ ನಿಜಶುದ್ಧಾತ್ಮಂ |
ಸಾರಮಣಮಲ್ಲದೀ ಸಂ | ಸಾರದೊಳೊಂದಿರ್ದುಮೊಂದನಮಳನಮೂರ್ತಂ ||
ಅನಪ್ಪೊಡಘವಿಹೀನಂ | ತಾನಪ್ಪೊಡೆ ಕರ್ಮಜನಿತಮಾಯೊಡಲೆನುತುಂ |
ಜ್ಞಾನಿಯದಱಿಲ್ಲಿ ಮೋಹಮ|ನೇನುಂ ಪೊರ್ದಿಸದೆ ನೆಗೞ್ಗೆ ಮಾತ್ಮೋನ್ನತಿಯೊಳ್||
ತನು ತನಗೆಂಬ ತನ್ನಿ ತನಗೆಂಬ ಧನಂ ತನಗೆಂಬ ರಾಜ್ಯರಂ |
ಜನೆ ತನಗೆಂಬ ದರ್ಪಮನದಿರ್ಪಿಯೆ ತನ್ನೊಳೆ ತಾನೆ ಭಾವಿಸಲ್ ||

ತನು ತನಗಲ್ಲ ತನ್ನಿ ತನಗಲ್ಲ ಧನಂ ತನಗಲ್ಲ ರಾಜ್ಯರಂ |
ಜನೆ ತನಗಲ್ಲವೆಂದುಱುದು ನಿಂದುದೆ ಯೋಗಿಗೆ ಯೋಗಲಕ್ಷಣಂ ||

---

## ಕವಿಮಲ್ಲ. ಸು. 1400

ಈತನು ಮನ್ಮಥವಿಜಯುವನ್ನು ಬರೆದಿದ್ದಾನೆ. ಇವನು ಬ್ರಾಹ್ಮಣ ಕವಿ; ಕವಿಪುಟ್ಟಣಾಂಕಪಂಡಿತನಿಂದ [1] ವಿದ್ಯೆಯನ್ನು ಕಲಿತಂತೆ ಹೇಳುತ್ತಾನೆ.ಇವನಿಗೆ ಲಕ್ಷಣಕವಿ ಎಂಬ ಬಿರುದಿದ್ದಂತೆ ತಿಳಿಯುತ್ತದೆ. ಸಂಸ್ಕೃತ ಕವಿಗಳಲ್ಲಿ ಕಾಳಿದಾಸಬಾಣಮಯೂರರನ್ನು ಸ್ಮರಿಸಿ ಕನ್ನಡಕವಿಗಳಲ್ಲಿ ಅಗ್ಗಳ ಮುಂತಾದವರನ್ನು ಈ ಪದ್ಯಗಳಲ್ಲಿ ಸ್ತುತಿಸುತ್ತಾನೆ—

ಇಳೆಯೊಳ್ ಕರ್ಣಾಟಭಾಷಾವಿದರೆನಲೆಸೆವೊಳ್ಗಬ್ಬಿಗರ್ ತಾವೆನಿಪ್ಪ |
ಗ್ಗಳದೇವಂ ನೇಮಿಚಂದ್ರಂ ಮನಸಿಜ ಸುಜನೋತ್ತಂಸ ರುದ್ರಾಂಕ ಪೊನ್ನಂ ||
ಕಳೆಯಣ್ಣಂ ನಾಗವರ್ಮಾದ್ಯನುಪಮಗುಣಿಗಳ್ ನೂತನಬ್ರಹ್ಮರೆಮ್ಮೊಳ್ |
ವಿಳಸದ್ವಾಗ್ವೃತ್ತಿಯಂ ಕಾಳ್ಪರಮೆಸಗುವಿನಂ ಮಾಱ್ಕೆ ಕಾರುಣ್ಯದಿಂದಂ ||
ನಿರತಂ ಕರ್ಣಾಟಕದೊಳ್ | ಪರಿಕಿಸೆ ಶಬ್ದಜ್ಞನಾವನೊರ್ವನೆ ಲೋಕ |
ಕ್ಕರಿದಲ್ತೆ ಭಾಷೂ ಕವಿಕುಂ |ಜರಕೇಶವರಾಜ ಗೋಚರಿಸು ಮನ್ಮನದೊಳ್ ||

ಇವನ ಗ್ರಂಥ

### ಮನ್ಮಥವಿಜಯ

ಇದು ಚಂಪೂರೂಪವಾಗಿದೆ. ಗ್ರಂಥಾವತಾರದಲ್ಲಿ ಕವಿ ಕಾಮನನ್ನು ಸ್ತುತಿಸಿದ್ದಾನೆ; ಬಳಿಕ ಈಶ್ವರ, ವಿಷ್ಣು, ಬ್ರಹ್ಮ, ಆದಿಶಕ್ತಿ, ಗಣೇಶ, ಸರಸ್ವತಿ ಇವರುಗಳನ್ನು ಪರಿವಿಡಿಯಿಂದ ಹೊಗಳಿದ್ದಾನೆ. ತನ್ನ ಗ್ರಂಥದ ಹೆಸರು ಮುಂತಾದುದನ್ನು ಈ ಪದ್ಯದಲ್ಲಿ ಹೇಳಿದ್ದಾನೆ—

ಸ್ಮರವಿಜಯಂ ಕೃತಿವೆಸರಾ | ದರಿಪರ್ ಶೃಂಗಾರಸಾರಕೋವಿದರೊಲವಿಂ |
ವಿರಚಿಸಿದಂ ಲಕ್ಷಣಕವಿ | ವರನೆಂದೆನೆ ಮೆಚ್ಚಿ ಕೂರ್ತು ಪೊಗೞದರೊಳರೇ ||

ಗ್ರಂಥಾಂತ್ಯದಲ್ಲಿ ಈ ಗದ್ಯವಿದೆ—

ಇದು ವಿದಿತಮದನಮುದ್ರಾಂಕಿತವಿದೂರಜನನಿಬಂಧನಕಾರಾಗಾರಮಭಿನವನಾಯಕನಾಯಿಕಾಶೃಂಗಾರಸಾರೋದ್ಧಾರಮುಂ ಸಕಲವಿಬುಧಸೇವ್ಯಮಾನಮುಂ ಲಕ್ಷಣಕವೀಂದ್ರವಿರಚಿತಮಪ್ಪ ಮನ್ಮಥವಿಜಯದೊಳ್

---

1. 36ನೆಯ ಪುಟವನ್ನು ನೋಡಿ.

ಈ ಗ್ರಂಥದಿಂದ ಸ್ವಪ್ರಶಂಸಾರೂಪವಾದ ಕವಿಯ ಒಂದುಪದ್ಯವನ್ನು ಉದ್ಧರಿಸಿ ಬರೆಯುತ್ತೇವೆ—

ಚತುರಾಸ್ಯಂ ಜಡಜಸ್ಥನಂಗಜಹರಂ ಕಾಡೊಳ್ ಸಮುಂತಿರ್ಪನ |
ಚ್ಯುತನೆಂದುಂ ಸಿರಿಯಿಂದೆ ಗರ್ವಿತನವಂ ಭೂಭಾರಕಜ್ಞಾನಿ ಗೀ ||
ಷ್ಪತಿ ಪಾಣ್ಬಂ ? ಗೊರವಂಕಳಾವಳಿಯನೆಂದಿಂತೆಲ್ಲಿಯುಂ ನಿಲ್ಲದ |
ಪ್ರತಿಮಳ್ ಸತ್ಕವಿಮಲ್ಲನೊಳ್ ಮೊಗದೆ ನಿಂದಳ್ ವಾಣಿ ಸಲ್ಲೀಲೆಯಿಂ ||

---

## ನೀಲಕಂಠಶಿವಾಚಾರ್ಯ. ಸು 1400

ಈತನು ಬರೆದಿರುವ ಬ್ರಹ್ಮಸೂತ್ರವ್ಯಾಖ್ಯಾನರೂಪವಾದ ಕ್ರಿಯಾಸಾರವೆಂಬ ಸಂಸ್ಕೃತಗ್ರಂಥದ 19ನೆಯ ಉಪದೇಶದ ಕೊನೆಯಲ್ಲಿರುವ "ಅಧ್ವನಾಮಧ್ವಪತೇ ಶ್ರೇಷ್ಠಸ್ಯಾಧ್ವನಃ ಪಾರಮಶೀಯೇತಿ ಮಂತ್ರೇಣ ಕೃತಕಲಾಸನ್ನಿಧಾನಸ್ಯ ಲಿಂಗಸ್ಯ ದೀಕ್ಷಾಪೂರ್ವಕಧಾರಣಮಿತ್ಯಾಗಮಪ್ರಕಾರೋ ಭಾಷಾಪ್ರಬಂಧೇಸ್ಮತ್ಕೃತೇವಲೋಕನೀಯಃ" ಎಂಬ ಭಾಗದಿಂದ ಇವನು ಒಂದು ಕನ್ನಡಗ್ರಂಥವನ್ನೂ ಬರೆದಿರುವಂತೆ ತಿಳಿಯುತ್ತದೆ.

ಈತನು ವೀರಶೈವಕವಿ; ಇವನ ತಂದೆ ಮಲ್ಲಯದೇವ, ತಾಯಿ ಚೆನ್ನಮಾಂಬೆ. ಮಲ್ಲಣಾರ್ಯನ ವೀರಶೈವಾಮೃತಪುರಾಣದಲ್ಲಿ (1530) ಈತನ ಕ್ರಿಯಾಸಾರರಿಂದ ಅನುವಾದಮಾಡಿರುವುದರಿಂದ ಈತನು ಅವನ ಕಾಲಕ್ಕೆ ಹಿಂದೆ ಇದ್ದಿರಬೇಕು. ಎಷ್ಟು ಹಿಂದೆ ಇದ್ದನೋ ತಿಳಿಯದು; ಸುಮಾರು 1400 ರಲ್ಲಿ ಇದ್ದಿರಬಹುದೆಂದು ಊಹಿಸುತ್ತೇವೆ.

## ಹದಿನೈದನೆಯ ಶತಮಾನದ ಕವಿಗಳು.

---

### ದೇಪರಾಜ ಸು. 1410

ಈತನು ಸೊಬಗಿನಸೋನೆ, ಅಮರುಕ ಈ ಗ್ರಂಥಗಳನ್ನು ಬರೆದಿದ್ದಾನೆ. ಇವನು ವಿಜಯನಗರದ ರಾಜವಂಶಕ್ಕೆ ಸೇರಿದವನು. "ಸಂಗಮೇಂದ್ರಕುಲದಿಂಗಡಲಿಗೆ ನೆಱೆ। ದಿಂಗಳೆನಿಪ ಕಂಪಸುತನು; ಕಂಪಮಹೀಪತಿಕುಲರತ್ನಾಲಯರಾಕಾಮೃತರುಚಿ" ಎಂದು ಹೇಳಿಕೊಂಡಿದ್ದಾನೆ. ವಿಜಯನಗರದ ರಾಜರ ಮೂಲಪುರುಷನಾದ ಸಂಗಮನಿಗೆ ಕಂಪ ಎಂಬ ಒಬ್ಬ ಮಗನಿದ್ದನು. ಈ ಕಂಪನ ತಮ್ಮನಾದ ಬುಕ್ಕರಾಯನಿಗೂ (1353-1377) ಕಂಪ ಎಂಬ ಒಬ್ಬ ಮಗನಿದ್ದನು. ಕವಿ ಈ ಎರಡನೆಯ ಕಂಪನ ಮಗನಾಗಿರಬಹುದೆಂದು ತೋರುತ್ತದೆ. ಹಾಗಿದ್ದ ಪಕ್ಷದಲ್ಲಿ ಇವನ ಕಾಲವು ಸುಮಾರು 1410 ಆಗಬಹುದು. ತ್ರ್ಯಂಬಕದೇವನಿಂದ ಕನ್ನಡಚಿತ್ರಾಶುಕವಿತ್ವವನ್ನು ಕಲಿತಂತೆ ಹೇಳುತ್ತಾನೆ. ಒಂದುಕಡೆ "ಸುರಭುಜವನಿಪುರಪ್ರಭುವಾಯಿಭೂವರಸೂನು ದೇವೇಂದ್ರ ಕೇಳ್" ಎಂದು ಸಂಬೋಧಿಸಿದ್ದಾನೆ. ಈ ದೇವೇಂದ್ರನಾರೋ ತಿಳಿಯದು.

ಪೂರ್ವಕವಿಗಳಲ್ಲಿ ವಾಲ್ಮೀಕಿ, ಕಾಳಿದಾಸ, ಬಾಣ ಇವರುಗಳನ್ನು ಸ್ಮರಿಸಿದ್ದಾನೆ. ತನ್ನ ಕವಿತಾಚಾತುರಿಯನ್ನು ಈ ಪದ್ಯಗಳಲ್ಲಿ ಹೇಳಿಕೊಂಡಿದ್ದಾನೆ—

ಪದಪದ್ಧತಿಯ ಪೋಲುವೆ ಬಿನ್ನಣ ರಸ | ಚದುರತೆ ಬೆಱಗು ಬೆಡಗು ರೂಪು |
ಒದವಿದುವೆಯ್ದೆ ಕಂಪಜದೇಪಭೂಪ ಪೇ | ೞಿದ ಕಬ್ಬದೊಳು ಶಿವನೊಲವಿಂದ ||
ಜಾಣರ ಮಚ್ಚು ರಸಿಕರ ರಸಾಯನ | ವಾಣಿಯ ಸಿರಿ ಭಾವಕರಿಗೆ |
ಮಾಣಿಕಗನ್ನಡಿ ಕೇಳ್ವ ಕೋವಿದರಿಗೆ | ಪ್ರಾಣ ದೇಪಭೂಪನೊಳ್ನುಡಿ ||

ಇವನ ಗ್ರಂಥಗಳಲ್ಲಿ

#### 1. ಸೊಬಗಿನಸೋನೆ

ಇದು ಸಾಂಗತ್ಯದಲ್ಲಿ ಬರೆದಿದೆ; ಕಥೆ 7, ಸಂಧಿ 29. ಪದ್ಯ 1992 ಇದರಲ್ಲಿ ಉಕ್ತವಾದ ಕಥೆಗಳನ್ನು ಕವಿ ಈ ಪದ್ಯದಲ್ಲಿ ಸೂಚಿಸಿದ್ದಾನೆ—

ಸುರಭಾವತಿಯ ಕಂಜರೆಯ ವಸಂತೆಯ | ಶರಭಕ್ತೆವನಜನಾಗರಪಕ್ಕಿ |
ಬರಗೆಯ ಕಥೆಯ ಪತ್ರಿಣಿಯ ಶೃಂಗಾರವ | ವಿರಚಿಸಿದನು ದೇಪನರನಾಥ ||

ಈ ಕಥೆಗಳನ್ನು ತನ್ನ ಹೆಂಡತಿ ಕೇಳಲು ಹೇಳಿದಂತೆ ತಿಳಿಯುತ್ತದೆ. ತನ್ನ ಗ್ರಂಥವು "ಚದುರಕರ್ಣಾಟದ ಕಳೆಯಜೀವನ ಬಗ್ಗಿನ ಬಗೆ" ಎಂದು ಹೇಳುತ್ತಾನೆ. ಆರಂಭದಲ್ಲಿ ಪಂಪಾನಾಥನ ಸ್ತುತಿ ಇದೆ. ಬಳಿಕ ಕವಿ ತೊರೆಗಲ್ಲ ವಿನಾಯಕನನ್ನೂ ಸರಸ್ವತಿಯನ್ನೂ ಹೊಗಳಿದ್ದಾನೆ. ಸಂಧಿಗಳ ಆದ್ಯಂತಗಳಲ್ಲಿ ಶಿವಸ್ತುತಿರೂಪವಾದ ಒಂದೊಂದು ವೃತ್ತವಿದೆ. ಪುರ, ಗಿರಿ, ಋತು, ನಂದನ, ರವಿ, ಶಶಿ ಮೊದಲಾದ 18 ಕಾವ್ಯಾಂಗಗಳಲ್ಲಿ ಆದಷ್ಟು ಅಂಗಗಳನ್ನು ಸೇರಿಸಿ ಪೂರ್ವಕವಿಗಳನ್ನು ನೋಂತು ಗ್ರಂಥವ ಪೇೞ್ವೆಂ ಎಂದು ಕಥೆಯನ್ನು ಆರಂಭಿಸಿದ್ದಾನೆ.

ಇವನ ಬಂಧವು ಲಲಿತವಾಗಿದೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ಶಿವಸ್ತುತಿ

ಸುರರೆಲ್ಲಗ್ಗೇ ಸುರತ್ನಭೂಷಣಚಯಂಗೊಟ್ಟಂತು ಕುಂಭೀನಸಾ |
ಭರಣಂಮೊಟ್ಟೆಯೊ ತಾವಕಾಂಘ್ರಿಭಜಕಗ್ಗೈಶ್ವರ್ಯಮಂ ಸಾರ್ಚಿ ನೀಂ ||
ತಿರಿಯಲ್ ಕಲ್ತೆಯೊ ನೆಟ್ಟನೆಣ್ದೆಸೆಗಳಂ ದಿಕ್ಪಾಲಕಗ್ಗಿತ್ತು ಸಂ |
ಚರಿಸಲ್ ಸಾರ್ದೆಯೊ ರುದ್ರಭೂಮಿಯೆಡೆಗಂ ಪಂಪಾವಧೂಟೀವರಾ ||

ಸಮುದ್ರ

ಹರಿಯೆನೆ ಶಂಖಚಕ್ರಾಂಕಿತ ಶಿವನೆನೆ | ಸುರಸಿಂಧುವಹವಜ್ಜ ಭವನೆನೆ |
ಸರಸತಿಯೊಣ್ಮೆನಿಂದ್ರನೆನೆ ಬಳಾಹಕ | ಪರಿವೃತಮುದ್ರ ಪೂರ್ವಸಮುದ್ರ ||
ತೆರೆಯಿವು ನೀರ್ವಾವಿವು ಸಲಿಲದ ಮದ | ಕರಿಯಿವು ಜಲಗೊಳ್ವ ಮುಗಿಲಿವು |
ನೊರೆಯಿವು ಸಂಕಿವು ಮುತ್ತಿವು ಸಿಡಿವ ನೀ | ರುರುಳಿಯಿವೆಂದೞಿವಡಿಲ್ಲಲ್ಲಿ ||

ಚಂದ್ರೋದಯ

ಪುಳಕಿಸಿ ಮುತ್ತುಗಳಿಂ ರಾಗಿಸಿ ಕೆಂಬ | ವಳವಳ್ಳಿಯಿಂ ನೊರೆಯಿಂ ನಕ್ಕು |
ವಳಿಗೈಯಿಂ ಶಱ್ಕೈಸಲುರ್ವುವೊಲಬ್ಧಿ | ಬಳೆವುದು ತಿಂಗಳೊಗೆಯಲಾಗ ||

ಹಂಸ

ಹುದುಕಾಸೆಗೊಲಿದು ಪಕ್ಕವನಲುಗಿಸಿ ಬಾ | ಯ್ವಿಡುತ ಬೆಂಬಿಡದ ಮಱಿಗಳಿಗೆ |
ಒಡನಿನಿವಂಡ ಸವಿದು ಕೊಡುತೆಱಕೆಯೊ | ಳಡಗಿಸಿ ಸಲಹುತೆಸೆವುವಂಚೆ ||

ಕೋಗಿಲೆ

ಕನಗೊರ್ನರನು ಸವಿದುಱೆ ಸೊಕ್ಕಿ ತಳಿರ್ಮಿಡಿ | ನನೆತೀವಿದೆಳಮಾವುಗಳನೇಱಿ|
ಮನಸಿಜನುಕ್ಕಡಗಾಳಿಗಳಿಂಚರ | ವೆನೆ ಕೂಗಿದುವು ಕೋಗಿಲೆಗಳು ||

### ಸರೋವರ

ಅಳಿಯಿಕ್ಕೆಯಂಚೆಯೊಡುಂಬೊಲ ಪೂಣರ್ವಕ್ಕಿ | ಗಳ ನೆಲೆ ನೀರ್ವುರ್ಗಗಳ ಗೊತ್ತು|
ಮೆಲುಗಾಳಿಯ ಚಾವಡಿ ಮೀನ್ಗಳ ಬಾಱು | ಕುಳಿಗೇಡೆಯೆನಿಪ ಕೊಳನ ಕಂಡ ||
ಸುಮನೋಮಕರಂದಸಂದೋಹ ಕಾಸಾರ | ಸುಮನೋಮಕರಂದಸಂದೋಹ |
ಕಮಲಕುವಲಯವಿರಾಜಿತ ಕಣ್ಗೆದು | ಕಮಲಕುವಲಯವಿರಾಜಿತ ||
ಕುಮುದಕುಮುದಕುಮುದೇಶಜನನವಾರ್ಧಿ | ಕಮಲಕಮಲಕಮಲಾಲಯ |
ವಿಮದವಿಮದವಿಮದಾಶ್ರಯಮಿಂತಿದು | ಹಿಮಹಿಮಹಿಮರೋಚಿರಸಸಾರ ||

### ಪಿಶುನರು

ಪೆತ್ತರ ಪಗೆಮಾಱ್ಪರು ಕಿಚ್ಚಿಲ್ಲದೆ | ಪೊತ್ತಿಕ್ಕಿ ಪೊಗಸಲೆಣಿಸುವರು |
ಬಿತ್ತುವರ್ ಕಿವಿಯೊಳು ಬೆಳಸುವರೆದೆಯೊಳು|ಚಿತ್ತರವೆಂತೊ ಪಿಸುಣವಿದ್ಯೆ ||

---

### 2. ಅಮರುಕ

ಇದು ಸಂಸ್ಕೃತದಲ್ಲಿರುವ ಅಮರುಕಶತಕದ ಭಾಷಾಂತರವು; ಪರಿವರ್ಧಿನೀ ಷಟ್ಪದಿಯಲ್ಲಿ ಬರೆದಿದೆ. ಇದರ ಉತ್ಕೃಷ್ಟತೆಯನ್ನು ಕವಿ ಕೆಳಗಣ ಪದ್ಯದಲ್ಲಿ ಹೇಳಿದ್ದಾನೆ—

ಸ್ಮರರಾಜ್ಯದ ಮೈಸಿರಿ ಶೃಂಗಾರದ | ಶರನಿಧಿ ರತಿನಾಟ್ಯದ ರಂಗಸ್ಥಳ |
ವಿರಹದ ನೆಲೆವೀಡೋಪರ ಕೂರಾಟದ ಕೊಸರಿನ ಗೊತ್ತು ||
ಸರಸರ ಸಂತವಣೆಯ ಮನೆ ಸುಗ್ಗಿಯ | ಪೊರೆವಾಗರ ಭಾವಾಲಯವಪ್ಪಂ |
ತಿರೆ ಪೇೞಿದನಮರುಕವನು ದೇಪಮಹೀಪತಿ ಕನ್ನಡಿಸಿ ||

ಗ್ರಂಥಾವತಾರದಲ್ಲಿ ಶಿವಸ್ತುತಿ ಇದೆ. ಬಳಿಕ ಕವಿ ಪಾರ್ವತಿ, ಗಣೇಶ, ಸರಸ್ವತಿ ಇವರುಗಳನ್ನು ಹೊಗಳಿದ್ದಾನೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ಇರುಳೋಪರ ಮೃದುತಳ್ಪದೊಳೊಲಿದು | ಚ್ಚರಿಸುವ ಕಾಮಕಲಾಲಾಪವ ಮನೆ |
ಯರಗಿಳಿ ಕೇಳ್ದದನಿರದೆ ಪಿರಿಯರೊಳಗುದಯದೊಳುಸಿರುತಿರೆ ||
ದರಹಸಿತಾನನೆ ಲಜ್ಜಿಸಿ ಕರ್ಣಾ | ಭರಣದ ಮಾಣಿಕ್ಯವ ದಾಳಿಂಬದ |
ಪರಳೆಂದೀವ ನೆವದಿ ನಿಲಿಸಿದಳಾ ಕೀರನ ಬಲ್ಸರವ ||
..ಯ.ಡುಗಿಹ ಕಟಕಾಮುಖಕರಬಾ | ಹ್ಯದಲುಣ್ಮುವ ನಖರದ್ಯುತಿಯಿಂ ಪುದಿ |
ದೊದಗಿದ ಕಿವಿಯೆಳದಳಿರಿನ ತೊಂಬೆಯೆೞಂಕೆಗೆ ಮುೞಿಮುೞಿದು ||

ಕದುರ್ಕುವ ಮಱಿದುಂಬಿಯ ಕೇಳಿಯ ಸಿರಿ | ಯೊದವಿದ ನಗಜಾತೆಯ ನಯನಾಂಚಲ |
ಮುದವಿತ್ತಾವಗವೆನ್ನನಲಂಪಿಂದಲಸದೆ ರಕ್ಷಿಪುದು ||
ಬಿಗಿಯಪ್ಪುವ ಬಲ್ಪಿಂ ತಗ್ಗಿದ ಕುಚ | ಯುಗದೊಳೊಗೆವ ಪುಳಕದ ಘನರಾಗ |
ದ್ವಿಗುಣರಸೋದ್ರೇಕದ ವಿಗಳಿತಕಾಂಚಿಯ ಕಟ್ಟಂ ಪಡೆವಾ ||
ನಗೆಗಣ್ಣೊಳ್ ಮಾಣದೆ ಮಾಣೆನ್ನನು| ಬಗೆಗೊಳುವಕ್ಕಱೊಳುಸಿರ್ಗೊಳುತಾತ |
ಗ್ಗಿದಳೋ ಕರಗಿದಳೋ ಮನ್ಮನದೊಳಗೞಿದಳೊ ಮಲಗಿದಳೋ ||

---

## ಮಲ್ಲಣ್ಣ. 1413

ಇವನು ರೇವಣಸಿದ್ಧೇಶ್ವರಕಾವ್ಯವನ್ನು ಬರೆದಿದ್ದಾನೆ. ಈತನು ವೀರಶೈವಕವಿ; "ಜಾಲವಾದಿಯ ಶಂಕರಶಂಭುವ ಪಾದಪದ್ಮದ ಕೃಪೆಯ ವರಕವಿ" ಎಂಬುದರಿಂದ ಇವನ ಸ್ಥಳವು ಜಾಲವಾದಿಯಾಗಿರಬಹುದು. "ರೇವಣನ ಕಾವ್ಯವ ನಿರ್ಮಿಸಿದನ್ಯೆ ಪೂರ್ವಭಿತ್ತಿಯಮೇಲೆ ಚಿತ್ರವನು" ಎಂಬುದರಿಂದ ಪೂರ್ವಗ್ರಂಥಗಳನ್ನು ನೋಡಿ ಈ ಗ್ರಂಥವನ್ನು ರಚಿಸಿದಂತೆ ತಿಳಿಯುತ್ತದೆ. ಮದರಾಸ್ ಪ್ರಾಚ್ಯಕೋಶಾಲಯದಲ್ಲಿರುವ ಈ ಗ್ರಂಥದ ಒಂದುಪ್ರತಿಯಲ್ಲಿ ಗ್ರಂಥವು ಶಕ 1335 ರಲ್ಲಿ, ಎಂದರೆ 1413 ರಲ್ಲಿ, ಹುಟ್ಟಿದಂತೆ ಹೇಳಿದೆ.

ಇವನ ಗ್ರಂಥ

### ರೇವಣಸಿದ್ಧೇಶ್ವರಕಾವ್ಯ

ಇದು ಭಾಮಿನೀಷಟ್ಪದಿಯಲ್ಲಿ ಬರೆದಿದೆ; ಸಂಧಿ 3, ಪದ್ಯ 310[1]. ಇದರಲ್ಲಿ ವೀರಶೈವಾಚಾರ್ಯರು ಐವರಲ್ಲಿ ಒಬ್ಬನಾದ ರೇವಣಸಿದ್ಧನ [2] ಚರಿತ್ರವು ಹೇಳಿದೆ. ಆರಂಭದಲ್ಲಿ ಸರಸ್ವತಿಯ ಸ್ತುತಿಯಿದೆ. ಬಳಿಕ ಕವಿ ಗಣಪತಿ, ಬ್ರಹ್ಮವಿಷ್ಣುಮಹೇಶರು ಇವರುಗಳನ್ನು ಸ್ತುತಿಸಿದ್ದಾನೆ. ಈ ಗ್ರಂಥದಿಂದ ಒಂದು ಪದ್ಯವನ್ನು ಉದಾಹರಿಸುತ್ತೇವೆ---

ಮಂತ್ರವಾದಿ

ಮಾರಿಯನು ಹಿಡಿತಹೆನು ಮದ್ದಿಲಿ | ನೂಱುಖಂಡುಗ ಬಡಿಸೆಯುಂಬೆನು |
ಮೀಱಿ ಕಡಲೆಯ ಮೆಲುವೆಯಿಪ್ಪತ್ತೈದುಖಂಡುಗವ ||

---

1. ಮತ್ತೊಂದು ಪ್ರತಿಯಲ್ಲಿ ಸಂಧಿ 7, ಪದ್ಯ 326 ಎಂದಿದೆ. 2. Vol. I, 162.

ಆಱುಖಂಡುಗ ಹಿಂಡಿಯೊಹುತಿ | ಮೂಱುಬಾವಿಯ ನೀರ ಕುಡಿಯುವೆ |
ನಾರು ಎನ್ನನು ದಣಿಸಲಾಪರು ಎಂದನವಧೂತ ||

---

## ಭಾಸ್ಕರ. 1424

ಈತನು ಜೀವಂಧರಚರಿತೆಯನ್ನು ಬರೆದಿದ್ದಾನೆ. ಇವನು ಜೈನ ಬ್ರಾಹ್ಮಣನು, ವಿಶ್ವಾಮಿತ್ರಗೋತ್ರದವನು, ಬಸವಾಂಕನ ಮಗನು. "ಪೆನುಗೊಂಡೆಯ ಶಾಂತೀಶ್ವರನ ಜಿನವಾಸದಲಿ ಜೀವಂಧರಚರಿತೆಯ ರಚಿಸಿದನು'' ಎಂಬುದರಿಂದ ಪೆನುಗೊಂಡೆ ಈತನ ವಾಸಸ್ಥಳವೆಂದು ತೋರುತ್ತದೆ. ಈ ಗ್ರಂಥವನ್ನು ಶಕ 1345 ನೆಯ ಕ್ರೋಧಿವರ್ಷದ ಫಾಲ್ಗುಣದಲ್ಲಿ, ಎಂದರೆ 1424 ರಲ್ಲಿ, ರಚಿಸಿದಂತೆ ಹೇಳುತ್ತಾನೆ.

ಪೂರ್ವಕವಿಗಳನ್ನು ಕೆಳಗಣ ಪದ್ಯದಲ್ಲಿ ಸ್ಮರಿಸುತ್ತಾನೆ.—

ವಿನುತನೇಮಿಯ ರೀತಿ ಗುಣವ | ರ್ಮನ ಚಮತ್ಕೃತಿ ನಾಗವರ್ಮನ |
ನೆನಹು ಪೊನ್ನನ ದೇಸೆ ವಿಜಯನ ಭಾಷವಗ್ಗಳನ ||
ಸನುನಯೋಕ್ತಿ ಗಜಾಂಕುಶನ ಬಿ | ನ್ನಣ ಯಶಶ್ಚಂದ್ರನ ಬಹುಜ್ಞತೆ |
ಯನುಕರಿಸಲೀ ಕಾವ್ಯದೊಳಗೆನಗವರ ಕರುಣದಲಿ ||

ಇವನ ಗ್ರಂಥ

### ಜೀವಂಧರಚರಿತೆ

ಇದು ಭಾಮಿನೀಷಟ್ಪದಿಯಲ್ಲಿ ಬರೆದಿದೆ; ಸಂಧಿ 18, ಪದ್ಯ 1000. ಇದರಲ್ಲಿ ರಾಜಪುರಿಯ ಸತ್ಯಂಧರರಾಜನ ಮಗನಾದ ಜೀವಂಧರರಾಜನ ಚರಿತ್ರವು ವರ್ಣಿತವಾಗಿದೆ. ವಾದೀಭಸಿಂಹಸೂರಿ ಸಂಸ್ಕೃತದಲ್ಲಿ ರಚಿಸಿದ ಜೀವಂಧರಚರಿತವನ್ನು ತಾನು ಕನ್ನಡಿಸಿದಂತೆ ಕವಿ ಹೇಳುತ್ತಾನೆ. ಗ್ರಂಥಾವತಾರದಲ್ಲಿ ಜಿನಸ್ತುತಿ ಇದೆ. ಬಳಿಕ ಕವಿ ಸಿದ್ಧಾದಿಗಳು, ಸರಸ್ವತಿ, ಅನುಬದ್ಧಕೇವಲಿಗಳೆನಿಸಿದ ಸುಧರ್ಮಗೌತಮ ಜಂಬೂಗಣಧರರು, ಶ್ರುತಕೇವಲಿಗಳೆಂಬ ವಿಷ್ಣ್ವಪರಾಜಿತ ನಂದಿ ಭದ್ರಬಾಹುಗೋವರ್ಧನರು ಇವರುಗಳನ್ನು ಸ್ತುತಿಸಿ ಅನಂತರ ಭೂತಬಲಿಯಿಂದ ಚಾರಿತ್ರಭೂಷಣನವರೆಗೆ [2]

---

ಸಿದ್ಧರು, ಆಚಾರ್ಯರು, ಉಪಾಧ್ಯಾಯರು, ಸಾಧುಗಳು. 2. ಭೂತಬಲಿ, ಪುಷ್ಪದಂತ, ವೀರಸೇನ, ಜಿನಸೇನ, ಅಕಳಂಕ, ಕವಿಪರಮೇಷ್ಠಿ, ಸಮಂತಭದ್ರ, ಕುಂಡಕುಂದ, ವಾದೀಭಸಿಂಹ, ಪಂಡಿತದೇವ, ಕುಮಾರಸೇನ, ವರ್ಧಮಾನ, ಧರ್ಮಭೂಷಣ ಕುಮಾರಸೇನನ ಶಿಷ್ಯ ವೀರಸೇನ, ಚಾರಿತ್ರಭೂಷಣ.

ಗುರುಗಳನ್ನು ಸ್ಮರಿಸಿದ್ದಾನೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇನೆ—

ಸಂಜೆ

ನುಡಿಸಿ ತುಂಬಿಯನೆಲರ ದಟ್ಟಡಿ | ಯಿಡಿಸಿ ಗೂಡಿನ ತೊಟ್ಟಿಲೊಳು ಖಗ |
ವಿಡಿದು ನಗಿಸಿಯೆ ಕುಮುದಿನಿಯ ತೂಕಡಿಸಿ ಕಮಲಿನಿಯ ||
ಕಡುತಮಪನಬುಡೆಂದು ಕೋಕನ | ಬೆಡಗನಂಜಿಸಿ ಹಲವು ಮಕ್ಕಳ |
ಹಡೆದ ತಾಯಂದದಲಿ ಸಂಧ್ಯಾಮಡದಿಯೊಪ್ಪಿದಳು ||

ಗೋದೋಹನ

ಅಡಿಯನವನಿಯೊಳೂಱಿ ಕಱುಗಳ | ಮಡದೊಳೊಲವಿಂದಾತು ಕಂದಲ |
ತೊಡೆಯೊಳೞುಕಿ ಕಟಾಕ್ಷದೀಧಿತಿ ದುಗ್ಧಧಾರೆಯಲ ||
ತೊಡರೆ ಸೆಳೆನಡು ಬಳುಕೆ ಸಡಿಲಿದ | ಮುಡಿಯ ಗೋಣಿನೊಳೌಂಕೆ ತನು ಬೆಮ |
ರಿಡುತ ಸುರಭಿಯ ಕಱೆವಬಲೆಯರ ಕುವರನೀಕ್ಷಿಸಿದ ||

ವೇಶ್ಯಾಸ್ತ್ರೀಯರು

ಮಱಿಲ ಸರವಿಯ ಹೊಸೆವ ಕೊರಡಿನೊ | ಳೆಳೆಯ ಕೋವ ಮರೀಚಿಕಂಗಳ |
ತಳೆವ ಧರೆಗಗನವನು ತಾಳವ ಮಾಡಿ ಬಾಜಿಸುವ ||
ಶಿಲೆಯೊಳಗೆ ಮುೞುಗುವ ತುಷಾರವ | ನಳೆವ ನೀರೊಳು ಬೆಣ್ಣೆಗಳೆವ |
ಗ್ಗಳದ ವೇಶ್ಯಾಮಾತೆಯುಽನವನೀಶನೀಕ್ಷಿಸಿದ ||

ತಪಸ್ವಿಗಳು

ಹೃದಯದಮಳಜ್ಯೋತಿಯನು ಬೆಳ | ಗದೆ ನವಾರತಿಯೆತ್ತಲೇನಹು |
ದೊದವಿದೊಳಗಣ ಮಲವ ತೊಳೆಯದೆ ದೇಹಕಲ್ಮಷವ ||
ಮುದದಿ ತೊಳೆದೊಡದೇನು ಕರ್ಮವ | ಬಿದಿರಿಸದೆ ಮುಕ್ತಿಯನು ಸಾರುವ |
ವಿಧವದೆಂತೆಂದವನಿಪತಿ ಜಱೆದನು ತಪಸ್ವಿಗಳ ||

ನೀತಿ

ಕೂಟಸಾಕ್ಷಿಗೆ ಗುರುವಿನಾಜ್ಞೆಯ | ದಾಟಿದಗೆ ಪಾಷಂಡಿಗಧಮಗೆ |
ತೋಟಿಗೆಳಸುವಗತಿಜಡಗೆ ಪತಿಕಾರ್ಯಘಾತುಕಗೆ ||
ಕೌಟಿಲಂಗೆ ಬಕವ್ರತಗೆ ಬೂ | ತಾಟವೆಸಗುವಗನ್ಯಮರ್ಮೋ |
ದ್ಘಾಟಕಗೆ ಪರನಿಂದಿತಂಗಿಹಪರಗಳಿಲ್ಲೆಂದ ||
ಧರಣಿಯೊಳಗತ್ಯಂತವಿಷಯಾ | ತುರರಿಗಾಯುರ್ನಷ್ಟವವಿಳ್ಳೆ |
ಶ್ವರಿಯನೋಸರಿಸುವುದು ಕೀರ್ತ್ಯಂಗನೆಗೆ ಕೇಡಹುದು ||

ಗರುವತನ ಪಿಂಗುವುದು ಧೈರ್ಯದ |ಶರಧಿ ನೆಱೆ ಬತ್ತುವುದು ಕುಲ ಪೈ |
ಸರಿಸುವುದು ಸಂದೇಹವಿಲ್ಲದಕರಸ ಕೇಳೇದ ||

---

ಧರಣೋಜ. 1424

ಈತನು ದಾವಣಗೆರೆಯ 29 ನೆಯ ಶಾಸನವನ್ನು ಬರೆದಂತೆ ಆ ಶಾಸನದ ಕೊನೆಯಲ್ಲಿರುವ

ಹರಿಹರದೇವರ ವರದಿಂ | ವರಗದ್ಯಂ ಪದ್ಯ.. ವಂ ಶಾಸನದೊಳ್ |
ಬರೆದಂ ಮನುಕುಲರತ್ನಾ | ಕರಚಂದ್ರಂ ಮಾಚಿದೇವಸುತಧರಣೋಜಂ ||

ಎಂಬ ಪದ್ಯದಿಂದ ತಿಳಿಯುತ್ತದೆ. "ಹರಿಹರದೇವರ ವರದಿಂ" ಎಂಬುದರಿಂದ ಇವನು ಕವಿತ್ವವನ್ನು ಮಾಡಿರಬಹುದು ಎಂದು ತೋರುತ್ತದೆ. ಈ ಶಾಸನವು 1424 ರಲ್ಲಿ ಬರೆದುದು. ಇದರಲ್ಲಿ ವಿಜಯನಗರದ ದೊರೆ ದೇವರಾಯನ (1419–1446) ಆಳಿಕೆಯಲ್ಲಿ ಬುಳ್ಳನೃಪನು ಹರಿದ್ರಾನದಿಗೆ ಕಟ್ಟೆಯನ್ನು ಹಾಕಿ ಕಾಲುವೆಯನ್ನು ತೆಗೆದಂತೆ ಹೇಳಿದೆ. ಇದರಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ಹರಿಹರ

ಸ್ಮರಕರಿವರಮುಖಪಿತನಂ | ಮುರಪುರಹರನಂ ನಗೇಂದುಧರನಂ ವಿಲಸ |
ದ್ವರದಾಭಯಕರನಂ ಹರಿ | ಹರನಂ ಭಜಿಪೆಂ ಕೃಪಾಸುಧಾಸಾಗರನಂ ||

ಚಾಮರಾಜಸ್ತುತಿ

ಪಿರಿದುಂ ಸದ್ಧರ್ಮಮೇ ಮೂರ್ತಿಯನನುಕರಿಸಿತ್ತೋ ಘನಜ್ಞಾನಮೇ ಭಾ |
ಸುರಗಾತ್ರಂಬೆತ್ತುದೋ ಸತ್ಕಲೆಗಳೆ ಪುರುಷಾಕಾರಮಂ ತಾಳ್ದುವೋ ಭೂ ||
ಸುರರುತ್ಸಾಹಂ ಶರೀರಂಬಡೆದುದೊ ದಿಟಮೆಂಬಂದದಿಂ ರಾಜಿಪಂ ಸಂ |
ಗರಧೀರಂ ಚಾಮರಾಜಂ ಕೃತಸುಕೃತಸಮಾಜಂ ಧರಾಕಲ್ಪಭೂಜಂ ||
ಗಂಡರಗೂಳಿವರಾನ್ವಯ | ಮಂಡನಕಲಿಚಾಮನೃಪತಿ ನಿಜಕೀರ್ತಿ ತರಂ |
ಗೊಂಡಿಡಿದಿರೆ ಕರ್ಪೂರಕ | ರಂಡಕಮೆನೆ ಚೆಲ್ವುವೆತ್ತುದಬ್ಜಭವಾಂಡಂ ||

ಬುಳ್ಳನೃಪಸ್ತುತಿ.

ವೀರಭಗೀರಥಂ ಗಗನಗಂಗೆಯನುರ್ವಿಗೆ ತಂದನಂತದೇಂ |
ಪೌರುಷಮಲ್ತು ಕೇಳ್ ಗಗನದಿಂ ಕೆಳಗಿರ್ದುದು ಹರಿದ್ರೆಯೆತ್ತಲುಂ ||
ಬಾರದಿರಲ್ಕೆ ಕಟ್ಟೆ ಪಿಡಿದಟ್ಟಿ ಹರೀಶಪುರಕ್ಕೆ ಕೊಂಡು ಬಂ |

ದೀರಸೆಯೊಳ್ ಪೆಸರ್ವ್ವೆಡೆದ ಬುಳ್ಳಚಮೂಪನಿದೇಂ ಸಭಾಗ್ಯನೋ ||
ಓರಂತೆ ತೀವಿ ಬಹುಕೆ ನ್ನೀರಿಂ ಪರಿಕಾಲ್ ವಿರಾಜಿಕುಂ ಬುಳ್ಳನೃಪಂ |
ಧಾರಿಣಿಗೆ ರಚಿಸಿದಾ ವಿ | ಸ್ತಾರದ ಸೀಮಂತದಗ್ರಸಿಂದೂರದವೋಲ್ ||

---

## ಮಹಾಲಿಂಗದೇವ ಸು 1425

ಈತನು ಏಕೋತ್ತರಶತಸ್ಥಲ, ಪ್ರಭುದೇವರ ಷಟ್ಸ್ಥಲಜ್ಞಾನಚಾರಿತ್ರವಚನದ ಟೀಕೆ ಇವುಗಳನ್ನು ಬರೆದಿದ್ದಾನೆ.

ಇವನು ವೀರಶೈವಕವಿ. ಇವನ "ಅನಾದಿಗುರುಕುಲದನ್ವಯವು" ಹೀಗೆ ಹೇಳಿದೆ—

(1) ಸೋಮಶಂಭುದೇಶಿಕ, (2) ಸಕಲಾಗಮಾಚಾರ್ಯ, (3) ಶಿವಲೆಂಕಮಂಚಣ್ಣ, (4) ಉರಿಲಿಂಗದೇವ,[1] (5) ಉರಿಲಿಂಗಪೆದ್ದಣ್ಣ, (6) ಸರ್ವೇಶ್ವರದೇವ, (7) ವಿಶ್ವೇಶ್ವರಪೆದ್ದಣ್ಣ, (8) ಸಂಹಿತೆಯ ಕಾಳಿದಾಸಭಟ್ಟ, (9) ಸದಾಶಿವದೇವ, (10) ಪ್ರಣಮಿದೇವ, (11) ಈಶಾನದೇವ, (12) ಮೌನಿವಾಸದೇವ, (13) ಚೆನ್ನಸೋಮೇಶ್ವರ, (14) ಬಾಗೆಯಬಂಕನಾಥ, (15) ಶಂಕರದೇವ, (16) ಗಂಗಾಧರದೇವ, (17) ಬಂಕನಾಥದೇವ, (18) ಪುರಾಣದ ಮಾಯಿದೇವ, (19) ಬಂಕಯ್ಯ, (20) ಮಹಾಲಿಂಗದೇವ (ಕವಿ). ಇವನ ಶಿಷ್ಯ (21) ಕುಮಾರಬಂಕನಾಥ; ಅವನ ಕರಜಾತ ಜಕ್ಕಣಾರ್ಯ.

ಈ ಜಕ್ಕಣಾರ್ಯನು ಪ್ರೌಢದೇವರಾಯನಲ್ಲಿ (1419-1446) ದಂಡೇಶನಾಗಿದ್ದಂತೆ ತಿಳಿಯುತ್ತದೆ. ಇವನಿಗೋಸ್ಕರ ಮಹಾಲಿಂಗದೇವನು ಮೇಲೆ ಹೇಳಿದ ಗ್ರಂಥಗಳನ್ನು ಬರೆದುದಾಗಿ ತಿಳಿವುದರಿಂದ ಈತನ ಕಾಲವು ಸುಮಾರು 1425 ಆಗಬಹುದು. ಇವನಿಗೆ "ಪುಲಿಗೆರೆಯ ಪುರವರಾಧೀಶ್ವರ, ಅಪೂರ್ವಸ್ವಯಂಭುಪ್ರಸನ್ನಚೆನ್ನದಕ್ಷಿಣಶ್ರೀಸೋಮನಾಥದೇವರ ದಿವ್ಯಶ್ರೀಪಾದಪದ್ಮಾರಾಧಕ, ತ್ರಿಕಾಂಡನಿಷ್ಠ, ಪರಮವೀರಶೈವಾಗಮಾಚಾರ್ಯ" ಎಂಬ ವಿಶೇಷಣಗಳು ಹೇಳಿವೆ. ಇವನಿಗೆ ವಾರಾಣಸೀಂದ್ರ ಎಂಬ ಹೆಸರೂ ಇದ್ದಂತೆ ತೋರುತ್ತದೆ.

---

1. ಒಂದು ಪ್ರತಿಯಲ್ಲಿ ಮೊದಲು ನಾಲ್ಕು ಹೆಸರುಗಳು ಹೀಗೆ ಕೊಟ್ಟಿವೆ:—(1) ಪರಶಿವ, (2) ನಂದಿಕೇಶ್ವರ, (3) ದುರ್ವಾಸದೇವ, (4) ದ್ವಿತೀಯಸ್ವಯಂಭು ತ್ರಿನೇತ್ರದೇವ 6 ನೆಯದು ವಿಶ್ವೇಶ್ವರಪೆದ್ದಣ; 7 ನೆಯದು ಸದಾಶಿವದೇವ.

ಈತನ ಗ್ರಂಥಗಳಲ್ಲಿ

1. ಪ್ರಭುದೇವರ ಷಟ್ಸ್ಥಲಜ್ಞಾನಚಾರಿತ್ರವಚನದ ಟೀಕೆ

ಇದಕ್ಕೆ ಷಟ್ಸ್ಥಲವಿವೇಕ ಎಂಬ ಹೆಸರೂ ಇರುವಂತೆ ತೋರುತ್ತದೆ; ಸ್ಥಲ 6, ವಚನ 694. ಆರಂಭದಲ್ಲಿ ಜಕ್ಕಣಾರ್ಯನು ಪ್ರಾರ್ಥಿಸಲು ಮಹಾಲಿಂಗದೇವನು

ತಮ್ಮ ಪರಮಜ್ಞಾನಾನುಭಾವಪ್ರಸನ್ನಪ್ರಕಾಶದಿಂ ಷಟ್ಸ್ಥಲವನು ಪ್ರಭುದೇವರ ವಚನಂಗಳಿಂದ ಸಂಕಲ್ಪಿಸಿ ಸುಲಲಿತವಾಕ್ಯಾಮೃತವಾಗಿ ಆ ವಚನಂಗಳನು ಟೀಕಿಸಿ ಪರಮಾರ್ಥತತ್ವಬೋಧೆಯನು ನಿರೂಪಿಸಿದ ಕ್ರಮವೆಂತೆಂದಡೆ

ಎಂದಿದೆ. ಅಂತ್ಯದಲ್ಲಿ

ಮಹಾಲಿಂಗದೇವರು ತಮ್ಮ ನಿಜಶಿಷ್ಯ ಭಕ್ತಿಭಂಡಾರಿ ಜಕ್ಕಣಾರ್ಯಂಗೆ ಸತ್ಪ್ರೇಮಮಹಾನುಭಾವಸಂಬೋಧೆಯ ಸಂಬಂಧನಿರೂಪಣಕಾರಣಾರ್ಥಂ ವಿರಚಿತಮಪ್ಪ ಪ್ರಭುದೇವರ ಷಟ್ಸ್ಥಲದ ಟೀಕು

ಎಂದಿದೆ. ಮತ್ತೊಂದು ಪ್ರತಿಯ ಕೊನೆಯಲ್ಲಿ

ಇದು ಪ್ರಭುದೇವರ ವಚನದಾಖ್ಯಾನ. ಇದನು ಎನ್ನಲ್ಲಿ ತೋಱಿದ ಅಲ್ಪಮತಿಯಿಂದ ನಾನು ಅನ್ವಯವ ಮಾಡಿದೆನು

ಎಂದಿದೆ. ಟೀಕೆಯ ಆರಂಭದಲ್ಲಿ ಬಸವ, ಚೆನ್ನಬಸವ, ಪ್ರಭುದೇವ ಇವರುಗಳ ಸ್ತುತಿ ಇದೆ. ಈ ಗ್ರಂಥದಿಂದ ಒಂದು ವಚನದ ಟೀಕೆಯನ್ನು ತೆಗೆದು ಬರೆಯುತ್ತೇವೆ—

ವಚನ|| ಶಿಲೆಯೊಳಗಣ ಪಾವಕನಂತೆ, ಉದಕದೊಳಗಣ ಪ್ರತಿಬಿಂಬದಂತೆ, ಬೀಜದೊಳಗಣ ವೃಕ್ಷದಂತೆ, ಶಬ್ದದೊಳಗಣ ನಿಶ್ಶಬ್ದದಂತೆ, ಗೋಹೇಶ್ವರಾ ನಿಮ್ಮ ಶರಣಸಂಬಂಧ.

ಟೀಕೆ|| ಶಿಲೆಯೊಳಗಿರ್ಪ ಅಗ್ನಿ ಮೈದೋಱದಹಾಂಗೆ ಪರಬ್ರಹ್ಮವು ಪಿಂಡಸ್ಥವಾಗಿರ್ದು ಕಾಣಿಸದೆಂಬುದೀಗ ಶಿಲೆಯೊಳಗಣ ಪಾವಕನಂತೆ ಎಂಬ ಶಬ್ದಕ್ಕರ್ಥ; ಆವುದಾನೊಂದು ಪ್ರತಿಬಿಂಬವುದಕದೊಳಗಿರ್ದು ಆವುದಕದ ಗುಣಧರ್ಮಕರ್ಮವ ಹೊದ್ದದಹಾಂಗೆ ಆ ಪರಬ್ರಹ್ಮವು ಪಿಂಡಸ್ಥವಾಗಿರ್ದು ಆ ಪಿಂಡದ ಗುಣಧರ್ಮಕರ್ಮವ ಹೊದ್ದದಿರ್ಪುದೀಗ ಉದಕದೊಳಗಣ ಪ್ರತಿಬಿಂಬದಂತೆ ಎಂಬ ಶಬ್ದಕ್ಕರ್ಥ; ಬೀಜದೊಳಗಿರ್ಪ ವೃಕ್ಷದಹಾಂಗೆ ಆ ಪರಬ್ರಹ್ಮವು ಪಿಂಡಮಧ್ಯದಲ್ಲಿ ಗೂಢವಾಗಿರ್ಪುದೆಂಬುದೀಗ ಬೀಜದೊಳಗಣ ವೃಕ್ಷದಂತೆ ಎಂಬ ಶಬ್ದಕ್ಕರ್ಥ; ಶಬ್ದದೊಳಗೆ ನಿಶ್ಶಬ್ದವಾಗಿರ್ದುದನು

ಭೇದಿಸಬಾರದಹಾಂಗೆ ಆ ಪರಬ್ರಹ್ಮವು ಪಿಂಡಸ್ಥವಾಗಿರ್ದು ಅಭೇದ್ಯವಾಗಿರ್ಪುದೆಂಬುದೀಗ ಶಬ್ದಗೊಳಗಣ ನಿಶ್ಶಬ್ದದಂತೆ ಎಂಬ ಶಬ್ದಕ್ಕರ್ಥ. ಇದು ಪಿಂಡಸಂಭವನಿರ್ವಚನ.

## 2 ಏಕೋತ್ತರಶತಸ್ಥಲ

ಇದರ ಆರಂಭದಲ್ಲಿ

ಮಹಾಲಿಂಗದೇವರು ತಮ್ಮ ಪರಮಜ್ಞಾನಾನುಭಾವ ಪ್ರಸನ್ನಪ್ರಕಾಶದಿಂ ಷಟ್ಸ್ಥಲವನು ಬಸವರಾಜದೇವರು, ಚೆನ್ನಬಸವರಾಜದೇವರು, ಪ್ರಭುದೇವರು ಮುಖ್ಯವಾದ ಅಸಂಖ್ಯಾತಮಹಾಗಣಂಗಳ ಪರಮವಾಕ್ಯಾಮೃತವಪ್ಪ ವಚನಂಗಳಿಂದ ಭಕ್ತಿಭಂಡಾರಿ ಜಕ್ಕಣಾರ್ಯಂಗೆ ಹೇಳಿದುದು

ಎಂದಿದೆ. ಅಂತ್ಯದಲ್ಲಿ

ಪಿಂಡಾದಿಜ್ಞಾನಶೂನ್ಯಾಂತಮಾದ ಏಕೋತ್ತರಶತಸ್ಥಲ ಸಮಾಪ್ತ

ಎಂದಿದೆ. ಗ್ರಂಥವು 12 ಪರಿಚ್ಛೇದಗಳಾಗಿ ಭಾಗಿಸಲ್ಪಟ್ಟಿದೆ. ಅಂಗಸ್ಥಲ 44ಕ್ಕೆ ವಚನ 465, ಸ್ಥಲನಿರ್ದೇಶದ ಪದನು 253, ಉಭಯಂ ವಚನ 718. ಲಿಂಗಸ್ಥಲ 57 ಕ್ಕೆ ವಚನ 462, ಸ್ಥಲನಿರ್ದೇಶದ ಪದನು 295, ಉಭಯಂ ವಚನ 757. ಒಟ್ಟು 1475. ಈ ಗ್ರಂಥದಲ್ಲಿ ವೀರಶೈವಮತದೊಳಗೆ ಪ್ರಸಿದ್ಧವಾದ ಅಂಗಸ್ಥಲ 44, ಲಿಂಗಸ್ಥಲ 57, ಎರಡೂ ಕೂಡಿ ಆದ 101 ಸ್ಥಲಗಳು ಸಪ್ರಮಾಣವಾಗಿ ವಿವರಿಸಲ್ಪಟ್ಟಿವೆ.

ಅಂಗಸ್ಥಲ 44ಕ್ಕೆ ವಿವರ:—

(1) ಭಕ್ತಸ್ಥಲ 15[1] (2) ಮಾಹೇಶ್ವರಸ್ಥಲ 9[2] (3) ಪ್ರಸಾದಿಸ್ಥಲ 7[3] (4) ಪ್ರಾಣಲಿಂಗಿಸ್ಥಲ 5[4] (5) ಶರಣಸ್ಥಲ 4[5] (6) ಐಕ್ಯಸ್ಥಲ 4[6].

---

ಸೂಚನೆ—ಪ್ರತಿಯೊಂದಕ್ಕೂ ಸ್ಥಲ ಎಂಬ ಶಬ್ದವನ್ನು ಸೇರಿಸಿ ಓದಬೇಕು.

1. ಪಿಂಡ, ಪಿಂಡಜ್ಞಾನ, ಸಂಸಾರಹೇಯ, ಗುರುಕರುಣ, ಲಿಂಗಧಾರಣ, ವಿಭೂತಿಧಾರಣ, ರುದ್ರಾಕ್ಷಿಧಾರಣ, ಪಂಚಾಕ್ಷರೀಜಪ, ಭಕ್ತಿ, ಉಭಯ, ತ್ರಿವಿಧಸಂಪತ್ತಿ, ಚತುರ್ವಿಧಸಾರಾಯ, ಉಪಾಧಿಮಾಟ, ನಿರುಪಾಧಿಮಾಟ, ಸಹಜಮಾಟ.

2. ಮಾಹೇಶ್ವರ, ಲಿಂಗನಿಷ್ಠಾ, ಪೂರ್ವಾಶ್ರಯನಿರಸನ, ವಾಗದ್ವೈತನಿರಸನ, ಆಹ್ವಾನವಿಸರ್ಜನನಿರಸನ, ಅಷ್ಟತನುಮೂರ್ತಿನಿರಸನ, ಸರ್ವಗತನಿರಸನ, ಶಿವಜಗನ್ಮಯ, ಭಕ್ತದೇಹಿಕಲಿಂಗ.

3. ಪ್ರಸಾದಿ, ಗುರುಮಾಹಾತ್ಮ್ಯ, ಲಿಂಗಮಾಹಾತ್ಮ್ಯ, ಜಂಗಮಮಾಹಾತ್ಮ್ಯ, ಭಕ್ತಮಾಹಾತ್ಮ್ಯ, ಶರಣಮಾಹಾತ್ಮ್ಯ ಪ್ರಸಾದಮಾಹಾತ್ಮ್ಯ.

4. ಪ್ರಾಣಲಿಂಗಿ, ಪ್ರಾಣಲಿಂಗಾರ್ಚನ, ಶಿವಯೋಗಸಮಾಧಿ, ಲಿಂಗನಿಜ, ಅಂಗಲಿಂಗ.

5. ಶರಣ, ತಾಮಸನಿರಸನ, ನಿರ್ದೇಶ, ಶೀಲಸಂಪಾದನ.

6. ಐಕ್ಯ, ಸರ್ವಾಚಾರಸಂಪತ್ತಿ, ಏಕಭಾಜನ, ಸಹಭೋಜನ.

(1) ರಿಂದ (6) ರವರೆಗೆ ಕೊಟ್ಟಿರುವುದೇ ಪ್ರಸಿದ್ಧವಾದ ಷಟ್ಸ್ಥಲವೆಂಬುದು.

ಲಿಂಗಸ್ಥಲ 57ಕ್ಕೆ ವಿವರ:—

(1) ಆಚಾರಲಿಂಗಸ್ಥಲ 9 [1] (2) ಗುರುಲಿಂಗಸ್ಥಲ 9 [2] (3) ಶಿವಲಿಂಗಸ್ಥಲ 9 [3] (4) ಜಂಗಮಲಿಂಗಸ್ಥಲ 12 [4] (5) ಪ್ರಸಾದಿ ಲಿಂಗಸ್ಥಲ 9 [5] (6) ಮಹಾಲಿಂಗಸ್ಥಲ 9 [6].

ವೀರಶೈವಾಮೃತಪುರಾಣದಲ್ಲಿ (1530) ಜಂಗಮಲಿಂಗಸ್ಥಲ 9 ಎಂದೂ ಅದರ ಕೊನೆಯ 3 ಸ್ಥಲಗಳನ್ನೂ ಮುಂದಣ 6 ನ್ನೂ ಸೇರಿಸಿ ಪ್ರಸಾದಿಲಿಂಗಸ್ಥಲ 9 ಎಂದೂ ಅದರ ಕೊನೆಯ 3 ಸ್ಥಲಗಳನ್ನು ಮುಂದಕ್ಕೆ ಸೇರಿಸಿ ಮಹಾಲಿಂಗಸ್ಥಲ 12 ಎಂದೂ ಹೇಳಿದೆ. ಗುರುರಾಜಚಾರಿತ್ರದಲ್ಲಿಯೂ (ಸು. 1650) ಹೀಗೆಯೇ ಇದೆ. ಈ ವ್ಯತ್ಯಾಸಕ್ಕೆ ಕಾರಣವೇನೋ ತಿಳಿಯಲಿಲ್ಲ.

ಈ ಗ್ರಂಥದಿಂದ ಒಂದು ವಚನವನ್ನು ತೆಗೆದು ಬರೆಯುತ್ತೇವೆ—

ಕ್ಷೀರದೊಳು ಘೃತವಡಗಿ ನೀರು ಮುತ್ತಿನೊಳಡಗಿ |
ಆರೈದು ನೋಡೆ ಬೀಜದೊಳು ವೃಕ್ಷ ||
ಸಾರಿರ್ದು ಮೊಳೆದೋರದಂತಿರ್ಪ ಮಹಘನವ |
ನಾರು ಭೇದಿಸಿ ಕಾಣಲರಿದು ನೋಡಾ ||

---

## ಲಕ್ಕಣ್ಣ ದಂಡೇಶ. 1428

ಈತನು ಶಿವತತ್ವಚಿಂತಾಮಣಿಯನ್ನು ಬರೆದಿದ್ದಾನೆ. ಇವನು ವೀರಶೈವಕವಿ. ಮೂರುರಾಯರ ಗಂಡ, ಗಜವೇಂಟೆಕಾರ ಎಂಬ ಬಿರುದುಗ

---

1. ದೀಕ್ಷಾಗುರು, ಶಿಕ್ಷಾಗುರು, ಜ್ಞಾನಗುರು, ಕ್ರಿಯಾಲಿಂಗ, ಭಾವಲಿಂಗ, ಜ್ಞಾನಲಿಂಗ, ಸ್ವಯ, ಚರ, ಪರ.

2. ಕ್ರಿಯಾಗಮ, ಭಾವಾಗಮ, ಜ್ಞಾನಾಗಮ, ಸಕಾಯ, ಅಕಾಯ, ಪರಕಾಯ, ಧರ್ಮಾಚಾರ, ಭಾವಾಚಾರ, ಜ್ಞಾನಾಚಾರ.

3. ಕಾಯಾನುಗ್ರಹ, ಇಂದ್ರಿಯಾನುಗ್ರಹ, ಪ್ರಾಣಾನುಗ್ರಹ, ಕಾಯಾರ್ಪಿತ, ಕರಣಾರ್ಪಿತ, ಭಾವಾರ್ಪಿತ, ಶಿಷ್ಯ, ಶುಶ್ರೂಷಾ, ಸೇವ್ಯ.

4. ಜೀವಾತ್ಮ, ಅಂತರಾತ್ಮ, ಪರಮಾತ್ಮ, ನಿರ್ದೇಹಾಗಮ, ನಿರ್ಭಾವಾಗಮ, ನಷ್ಟಾಗಮ, ಆದಿಪ್ರಸಾದಿ, ಅಂತ್ಯಪ್ರಸಾದಿ, ಸೇವ್ಯಪ್ರಸಾದಿ, ದೀಕ್ಷಾಪಾದೋದಕ, ಶಿಕ್ಷಾಪಾದೋದಕ, ಜ್ಞಾನಪಾದೋದಕ.

5. ಕ್ರಿಯಾನಿಷ್ಪತ್ತಿ, ಭಾವನಿಷ್ಪತ್ತಿ, ಜ್ಞಾನನಿಷ್ಪತ್ತಿ, ಪಿಂಡಾಕಾಶ, ಬಿಂದ್ವಾಕಾಶ, ಮಹದಾಕಾಶ, ಕ್ರಿಯಾಪ್ರಕಾಶ, ಭಾವಪ್ರಕಾಶ, ಜ್ಞಾನಪ್ರಕಾಶ.

6. ಕೊಂಡುದು ಪ್ರಸಾದ, ನಿಂದುದೋಗರ, ಚರಾಚರನಾಸ್ತಿ, ಭಾಂಡ, ಭಾಜನ, ಅಂಗಲೇಪನ, ಸ್ವಯಪರವರಿಯದ, ಭಾವಾಭಾವನಷ್ಟ, ಜ್ಞಾನಶೂನ್ಯ.

ಳುಳ್ಳ ದೇವರಾಯನಲ್ಲಿ ತಾನು ಮಹಾಪ್ರಧಾನನಾಗಿಯೂ ಅವನಿಗೆ ಆಪ್ತಮಿತ್ರನಾಗಿಯೂ ಅವನ ರಾಜ್ಯಾಭ್ಯುದಯಕ್ಕೆ ಕಾರಣಭೂತನಾಗಿಯೂ ಇದ್ದಂತೆ ಈ ಪದ್ಯಭಾಗಗಳಲ್ಲಿ ಹೇಳದ್ದಾನೆ—

ಧರೆಗಧಿಕ ಮೂಱುರಾಯರ ಗಂಡನಪ್ರತಿಮ |
ಬಿರುದಾಂಕ ಗಜವೇಂಟೆಕಾಱ ದೇವೇಂದ್ರಭೂ |
ವರನ ಮಹದೈಶ್ವರ್ಯಶರಧಿಚಂದ್ರೋದಯನುದಾರಕರುಣಾಧಾರನು ||
ನಿರುಪಮಿತಸಪ್ತಾಂಗರಾಜ್ಯವರ್ಧನಕಳಾ |
ಧರನಮಲಕೀರ್ತಿಯುತ ಲಕ್ಕಣ್ಣದಂಡೇಶ.

ಈ ಕಲಿಯುಗದೊಳತಿಪ್ರೌಢಮತಿ ದೇವರಾಜೇಂದ್ರನ ಮಹಾಪ್ರಧಾನಂ. ಇಭವೇಂಟೆಕಾಱದೇವೇಂದ್ರನುನ್ನತ ಕೆಳೆಯನು.

ಈ ದೊರೆ 1419ರಿಂದ 1446 ವರೆಗೆ ಆಳಿದ ವಿಜಯನಗರದ ರಾಜನಾದ ಪ್ರೌಢದೇವರಾಯನು. ಈತನಲ್ಲಿ ಕವಿ ಅಧಿಕಾರಿಯಾಗಿದ್ದ ವಿಷಯವು ಕೆಲವು ಶಾಸನಗಳಲ್ಲಿಯೂ ಹೇಳಿದೆ. ಕವಿಗೆ ಲಕ್ಕಣಾಮಾತ್ಯ, ಲಕ್ಕಣ್ಣ ಒಡೆಯ ಎಂಬ ಹೆಸರುಗಳೂ ಉಂಟು.

ಮುಳುಬಾಗಿಲ 2ನೆಯ ಮತ್ತು 96ನೆಯ ಶಾಸನಗಳಲ್ಲಿ(1431) ಈತನು ವಿಷ್ಣುವರ್ಧನಗೋತ್ರದವನೆಂದೂ ಹೆಗ್ಗಡೆದೇವ ಒಮ್ಮಾಯಮ್ಮ ಇವರುಗಳ ಮಗನೆಂದೂ ಈತನಿಗೆ ಮಾದಣ್ಣದಣ್ಣಾಯಕನೆಂಬ ಒಬ್ಬ ಸಹೋದರನಿದ್ದನೆಂದೂ ದೇವರಾಯನ ಧರ್ಮದಿಂದ ವಿರೂಪಾಕ್ಷಪುರದ ವಿರೂಪಾಕ್ಷದೇವರಿಗೆ ಸೇವೆಮಾಡಿದನೆಂದೂ ಹೇಳಿದೆ. ಕೋಲಾರದ 104ನೆಯ ಶಾಸನದಿಂದ(1428) ಈತನು ದೇವರಾಯನಿಗೆ ಧರ್ಮವಾಗಬೇಕೆಂದು ಭೂದಾನವನ್ನು ಮಾಡಿದಂತೆಯೂ, ಬೌರಿಂಗ್ ಪೇಜಿ 72 (1430), 87 (1433) ಈ ಶಾಸನಗಳಿಂದ ಇವನು ಮುಳುವಾಗಿಲುರಾಜ್ಯದಲ್ಲಿಅಧಿಕೃತನಾಗಿದ್ದಂತೆಯೂ, ಮಾಲೂರು 1ನೆಯ ಶಾಸನದಿಂದ (1434) ಈತನೂ ಇವನ ಸಹೋದರನಾದ ಮಾದಣ ಒಡೆಯರೂ ದೇವರಾಯನ ನಿರೂಪದಿಂದ ಸಾಳುವಗೋಪರಾಜನಿಗೆ ತೇಕಲನ್ನು ಬಿಟ್ಟುಕೊಟ್ಟಂತೆಯೂ ತಿಳಿಯುತ್ತದೆ. ಕೋಲಾರದ 104ನೆಯ ಶಾಸನದ ಕಾಲವನ್ನೇ ಈತನಿಗೆ ಮೇಲೆ ಕೊಟ್ಟಿದ್ದೇವೆ.

ಸಿದ್ಧನಂಜೇಶನು (ಸು. 1650) ತನ್ನ ಗುರುರಾಜಚಾರಿತ್ರದಲ್ಲಿ ಈ ಕವಿಯನ್ನು ಸ್ಮರಿಸಿ ಇವನ ಗ್ರಂಥದಿಂದಲೂ ವಿಷಯಗಳನ್ನು ಸಂಗ್ರಹಿಸಿದಂತೆ ಹೇಳುತ್ತಾನೆ.

ಇವನ ಗ್ರಂಥ

**ಶಿವತತ್ವಚಿಂತಾಮಣಿ**

ಇದು ವಾರ್ಧಕಷಟ್ಪದಿಯಲ್ಲಿ ಬರೆದಿದೆ; ಸಂಧಿ 54, ಪದ್ಯ 2221. ಇದರಲ್ಲಿ ನಿತ್ಯಾನಿತ್ಯವಸ್ತುವಿವರಣ, ಸಕಲನಿಷ್ಕಲವಿಚಾರ, ಶಿವನ 25 ಲೀಲೆಗಳು, ಭುವನಕೋಶ, ಶಿವಲೋಕವರ್ಣನ, ಶಿವನಂದೀಶಸಂವಾದ, ಬಸವಚರಿತ, ಗಣಪ್ರಶಂಸೆ, ಧರ್ಮಾಧರ್ಮವಿವರಣ, ಪಂಚಾಕ್ಷರೀಭಸಿತರುದ್ರಾಕ್ಷೆಗಳ ಮಾಹಾತ್ಮ್ಯ, ಲಿಂಗಧಾರಣ, ಶಿವಪೂಜಾವಿಧಿ, ಪಾದೋದಕಪ್ರಸಾದಮಹಿಮೆ, ಶಿವಾಧಿಕ್ಯ, ಮಾಹೇಶ್ವರಾಚರಣೆ, ಷಟ್ಸ್ಥಲ ಇವೇ ಮುಂತಾದ ವಿಷಯಗಳು ಪ್ರತಿಪಾದಿಸಲ್ಪಟ್ಟವೆ. ಪ್ರತಿಪದ್ಯವೂ "ವಿಮಲಚರಣಾಂಬುಜಕ್ಕೆ ಶರಣು" ಎಂದು ಮುಗಿಯುತ್ತದೆ. ಈ ಗ್ರಂಥದ ಉತ್ಕೃಷ್ಟತೆಯನ್ನು ಕವಿ ಹೀಗೆ ಹೇಳಿದ್ದಾನೆ—

ಗುರುವಚನದಮೃತಮಂ ಶ್ರುತಿಪುರಾಣಾಗಮದ |
ಪರಮಾರ್ಥದಮೃತಮಂ ವರಪುರಾತನವಚನ |
ಪರಿಯಾಯದಮೃತಮಂ ಶಿವತಾಂತ್ರಿಕರು ಪೇಳ್ದ ಸಿದ್ಧಾಂತವೆನಿಪಮೃತಮಂ||
ಪರಮಾನುಭಾವದನುಪಮಗೋಷ್ಠಿಯಮೃತದೊಳು |
ಬೆರಸಿ ಮಥನಿಸಿ ಪಡೆದ ಲಕ್ಕಣ್ಣದಂಡೇಶ |
ಧರಿಸಿರ್ಪ ತತ್ವಚಿಂತಾಮಣಿಯನಾವವರ ಚರಣಾಂಬುಜಕ್ಕೆ ಶರಣು ||
ಇದು ವೀರಶೈವಸಿದ್ಧಾಂತತಂತ್ರದ ಸೂತ್ರ |
ಇದು ಸಕಲವೇದಾಗಮದ ಶಿಖಾಸೂತ್ರವಿಂ |
ತಿದು ಪರಮನಿರ್ವಾಣಪದವೆನಿಪ ಶಾಂಭವೀಯಯೋಗದ ಸೂತ್ರವು ||

ಗ್ರಂಥಾವತಾರದಲ್ಲಿ ಶಿವಸ್ತುತಿ ಇದೆ. ಬಳಿಕ ಕವಿ ವಿರೂಪಾಕ್ಷನೆನಿಸಿದ ಮಹಲಿಂಗಮೂರ್ತಿ, ಪಾಶುಪತಸದ್ವ್ರತಗುಣಾಗ್ರಣಿ ಮಲ್ಲಿಕಾರ್ಜುನ ಗುರು, ಪ್ರಭುವರ, ಬಸವ, ಚೆನ್ನಬಸವ ಇವರುಗಳನ್ನು ಸ್ತುತಿಸಿದ್ದಾನೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

**ಕಾಲಸಂಹಾರ**

ಇಡಿದ ಜಡೆಯೆಡೆಯೊಳಡರುವ ಗಂಗೆಯುಡುಪತಿಯ |
ನಡಿಗಡಿಗೆ ಬಡದೆ ನಡುಗಿಸಿ ಜಡಿವ ಫಣಿಪತಿಯ |
ಪಡೆವಣೆಯ ಲೊಡರಿಡುವ ನಿಡುಲಸರಿ ನಡುದೊಡೆಯ ಮಡದಿಯಿಂ ಕಡುರಂಜಿಸೆ ||

ಕಿಡಿಯಿಡುತ ಘುಡುಘುಡಿಪ ಕಡುವೆಳಪ ನಡುನಯನ |
ಸಿಡಿಲ ಸಡಗರದ ಡಮರುಗದೊಡನೊಡನೆ ನುಡಿಯೆ |
ಮೃಡನು ತಡೆಯದೆ ಯಮನ ಸುಡಲುರಿದನೆಂಬವನ ಚರಣಾಂಬುಜಕ್ಕೆ ಶರಣು||

ಮನ್ಮಥ

ದಿಟ್ಟಸಿದ್ಧರನೆಯೆಬ್ಬಟ್ಟಿ ಯತಿಗಳ ಕೊರಲ |
ಮೆಟ್ಟಿ ಸಿರ್ಜಗರ ಬಾಯಟ್ಟಿ ವಿರಹಿಗಳ ಜೆ |
ನ್ನಟ್ಟಿಯಿಾಕ್ಷಿಪರ ಹುಡಿಗುಟ್ಟಿ ನಾನಾಜನರ ತಟ್ಟಿ ದಿಕ್ಕೆಂಟ ಮುಟ್ಟಿ ||
ಕಟ್ಟುಗ್ರತಪಸಿಗಳ ಸುಟ್ಟಸುವ ಸೀಗುವರ |
ಬಿಟ್ಟಧಿಕನಮಾನಿಗಳ ಕಟ್ಟಿ ನಡೆಗೊಂಡು ಹಿಮ |
ವೆಟ್ಟವಂ ಕಂಡ ಮನ್ಮಥವೀರನೆಂಬವವರ ಚರಣಾಂಬುಜಕ್ಕೆ ಶರಣು ||

ನೀತಿ

ವಿನಯವುಳ್ಳಭಿಮಾನಿಗವಮಾನವಾದಂತೆ |
ಮನವೊಲಿದ ಕೂಟದೆಡೆಗಗಲಿಕೆಯು ಬಂದಂತೆ |
ಯನುಗುಣದ ಯವ್ವನಂ ತಪ್ಪಿ ಮುಪ್ಪಡಸುತಿರೆ ಮ್ಮ ಸುಕ್ಕಿ ಸರೆಗಳೊದವಿ ||
ತನು ನಡುಗಿ ಸರ್ವಾಂಗಶಿಥಿಲದಿಂ ನಿಸ್ಸತ್ವ |
ವನುಗೊಂಡು ನಡೆಯುಡುಗಿ ಬಾಗಿ ಬಸವಳಿಯುತಿರೆ |
ವನಿತೆಗಂ ಪುರುಷನನ್ಯೋನ್ಯಪಗೆಯೆಂಬವನ ಚರಣಾಂಬುಜಕ್ಕೆ ಶರಣು ||

---

## ಕುಮಾರಬಂಕನಾಥ. ಸು. 1430

ಈತನು ಷಟ್ಸ್ಥಲೋಪದೇಶ, ಪ್ರಭುದೇವರ ಟೀಕಿನ ವಚನ ಇವುಗಳನ್ನು ಬರೆದಿದ್ದಾನೆ. ಇವನು ವೀರಶೈವಕವಿ; ಮಹಾಲಿಂಗದೇವನ (ಸು. 1425) ಶಿಷ್ಯನು; ವಿಜಯನಗರದ ದೊರೆ ದೇವರಾಯನಲ್ಲಿ (1419-1446) ದಂಡನಾಥನಾಗಿದ್ದ ಜಕ್ಕಣಾರ್ಯನ ಗುರು. ಇವನ ಕಾಲವು ಸುಮಾರು 1430 ಆಗಬಹುದು.

ಈತನ ಗ್ರಂಥಗಳು ಬಹಳಮಟ್ಟಿಗೆ ಮಹಾಲಿಂಗದೇವನ ಗ್ರಂಥಗಳನ್ನು ಹೋಲುತ್ತವೆ.

---

**ಜಕ್ಕಣಾರ್ಯ.** ಸು. 1430

**ಈತನು** ನೂರೊಂದು ಸ್ಥಲವನ್ನು ಎಂದರೆ ಏಕೋತ್ತರಶತಸ್ಥಲವನ್ನು ಬರೆದಿದ್ದಾನೆ. ಇವನು ವೀರಶೈವಕವಿ; ಮಹಾಲಿಂಗದೇವನ[1] (ಸು. 1425) ಶಿಷ್ಯನಾದ ಕುಮಾರಬಂಕನಾಥನ ಕರಜಾತನು. ಇವನಿಗೆ ಜಕ್ಕಣ್ಣ, ಜಕ್ಕಪ್ಪ ಎಂಬ ಹೆಸರೂ ಉಂಟು; ಭಕ್ತಿಭಂಡಾರಿ ಎಂಬ ಬಿರುದಿದ್ದಂತೆ ತಿಳಿಯುತ್ತದೆ. ಇವನು ವಿಜಯನಗರದ ಪ್ರೌಢದೇವರಾಯನಲ್ಲಿ (1419-1446) ದಂಡನಾಯಕನಾಗಿದ್ದನು. ಇವನ ಕಾಲವು ಸುಮಾರು 1430 ಆಗಬಹುದು. ಮಹಾಲಿಂಗದೇವನು ಈತನ ಉಪದೇಶಾರ್ಥವಾಗಿ ಎರಡು ಗ್ರಂಥಗಳನ್ನು ಬರೆದ ಸಂಗತಿ ಹಿಂದೆಯೇ ತಿಳಿಸಿದೆ[1]. ಕಲ್ಲುಮಠದ ಪ್ರಭುದೇವ, ಪ್ರಭುಲಿಂಗಲೀಲಾಕರ್ತೃ ಚಾಮರಸ, ಕರಸ್ಥಲದ ನಾಗಿದೇವ, ವೀರಣ್ಣೊಡೆಯ ಮುಂತಾದ ವಿರಕ್ತರು ಈತನ ಸಮಕಾಲದವರಾಗಿದ್ದಂತೆ ತಿಳಿಯುತ್ತದೆ. ಇವನು ವೀರಶೈವಗ್ರಂಥಗಳ ರಚನೆಗಾಗಿ ಅಪರಿಮಿತವಾದ ದ್ರವ್ಯವನ್ನು ವೆಚ್ಚಮಾಡಿದಂತೆ ಗುಬ್ಬಿಯಮಲ್ಲಣಾರ್ಯನ ವೀರಶೈವಾಮೃತ ಪುರಾಣದಲ್ಲಿ (1530) ಹೇಳಿದೆ.

ಇವನ ಗ್ರಂಥ

**ನೂರೊಂದುಸಲ**

ಇದರ ವಿಷಯವಾಗಿ ಗ್ರಂಥಾರಂಭದಲ್ಲಿ ಹೀಗೆ ಹೇಳಿದೆ:—

ಈ ಶಾಸ್ತ್ರವು ಕಾಮಿಕಾಗಮದಲ್ಲಿ ಹೇಳಿದೆ ಅದಂ ರೇವಣಸಿದ್ಧೇಶ್ವರನು ಅಗಸ್ತ್ಯಂಗೆ ಬೋಧಿಸಿದಂ. ಅದೇ ವೀರಶೈವರಿಗೆ ಸ್ಥಲಭೇದದಿಂದ ಆಱುಪ್ರಕಾರವನುಳ್ಳುದಹುದು. ಮೊದಲಲ್ಲಿ ಭಕ್ತಸ್ಥಲ 15, ಮಾಹೇಶ್ವರಸ್ಥಲ 9, ಪ್ರಸಾದಿಸ್ಥಲ 7, ಪ್ರಾಣಲಿಂಗಿಸ್ಥಲ 5, ಶರಣಸ್ಥಲ 4, ಐಕ್ಯಸ್ಥಲ 4. ಅನಂತರ ಲಿಂಗಸ್ಥಲಂಗಳನಾಶ್ರಯಿಸಿದಲ್ಲಿ ಅಲ್ಲಿ ಆಚಾರಲಿಂಗಸ್ಥಲ 9, ಗುರುಲಿಂಗಸ್ಥಲ 9, ಶಿವಲಿಂಗಸ್ಥಲ 9, ಜಂಗಮಲಿಂಗಸ್ಥಲ 12, ಪ್ರಸಾದಿಲಿಂಗಸ್ಥಲ 9, ಮಹಾಲಿಂಗಸ್ಥಲ 9. ಅಂತು ಅಂಗಸ್ಥಲ 44, ಲಿಂಗಸ್ಥಲ 57, ಉಭಯಂ ಪಿಂಡಾದಿ ಜ್ಞಾನಶೂನ್ಯಾಂತ 101 ಸ್ಥಲ.[2] ಅವನೆ ನಿರೂಪಿಸಿದ ಪುರಾತನರ ಮಹಾವಚನಂಗಳೊಳಗೆ ಜಕ್ಕಣಾರ್ಯರು ಸಾರಾಯವಾದ ನೂಱೊಂದು ಸ್ಥಲವಚನಗಂಳಂ ತೆಗೆದುಕೊಂಡು ಸೂತ್ರವಿಟ್ಟು ಸಂಗ್ರಹಿಸಿದರು. ಅಂತು ಅಂಗಸ್ಥಲ 44ಕ್ಕಂ ಸೇರಿದ ಪದನು 253 ; ಲಿಂಗಸ್ಥಲ 57ಕ್ಕಂ ಸೇರಿದ ಪದನು 297 ; ಉಭಯಂ 550

---

1. 50ನೆಯ ಪುಟವನ್ನು ನೋಡಿ 2 52ನೆಯ ಪುಟವನ್ನು ನೋಡಿ.

ಈ ಗ್ರಂಥದ ವಿಷಯವಾಗಿಯೂ ಚಾಮರಸ ಪ್ರಭುಲಿಂಗಲೀಲೆಯ ವಿಷಯವಾಗಿಯೂ ಭೈರವೇಶ್ವರಕಾವ್ಯದ ಕಥಾಸೂತ್ರರತ್ನಾಕರದಲ್ಲಿ (1672) ಹೀಗೆ ಹೇಳಿದೆ—

ಕುಂತಲದೇಶದಲ್ಲಿ ವಿದ್ಯಾನಗರಿಯೆಂಬ ಪಟ್ಟಣದಲ್ಲಿ ಪ್ರೌಢರಾಯನೃಪನು. ಅವನ ಗುರುಗಳು ಮುಕುಂದಪೆದ್ದಿ, ವೃಂದಾಚಾರ್ಯನು. ಅವರು ವಿಷ್ಣುಮತವ ಬೋಧಿಸುತ ತಮ್ಮ ಭಾರತರಾಮಾಯಣಮಂ ಒಂಬತ್ತುತಿಂಗಳು ಬೋಧಿಸಿ 18 ಮೆಱವಣಿಗೆಯಂ ಮಾಡಿರಲು, ಇತ್ತ ವೀರಶೈವಕೆ ಮುಖ್ಯವಾದ 21 ಗುರುಸಂಪ್ರದಾಯಕ್ಕೆ [1] ಶ್ರೇಷ್ಠರಾದ ಕುಮಾರಬಂಕನಾಥದೇವರ ಶಿಷ್ಯರಾದ ಜಕ್ಕಣಾರ್ಯಪಂಡಿತರು ತಮ್ಮ ಗುರುನಿರೂಪದಿಂದ ಸಕಲಪುರಾತನರ ವಚನಂಗಳಿಂದ ಏಕೋತ್ತರಶತಸ್ಥಲವಂ ಸೂತ್ರವ ಕಲ್ಪಿಸಿ ಸ್ಥಲವಿಟ್ಟು ವಸ್ತುಕವರ್ಣಕದಿಂದ ಸಂಗ್ರಹಿಸಿ ಪ್ರಭುದೇವರು ನಿರೂಪಿಸಿದ ವಚನಂಗಳಿಗೆಯೂ ಸೂತ್ರಸ್ಥಲವಿಟ್ಟು ಅರ್ಥಪದ್ಧತಿಯ ವ್ಯಾಖ್ಯಾನವಂ ಮಾಡಿ ಕಲ್ಲಮಠದಪ್ರಭುದೇವಾಚಾರ್ಯರು, ಚಾಮರಸಯ್ಯನೆಂಬ ಆರಾಧ್ಯರು, ಕರಸ್ಥಲದ ನಾಗಿದೇವರು, ವೀರಣ್ಣೊಡೆಯದೇವರು ಮುಖ್ಯವಾದ 101 ವಿರಕ್ತರು ಭಕ್ತರು ಸಹವಾಗಿ ಏಕೋತ್ತರಶತಸ್ಥಲವಂ ಪುಷ್ಪಕದೊಳಗಿಟ್ಟು ಸರ್ವಸಂಭ್ರಮದಿಂದ ರಾತ್ರಿಯಲ್ಲಿ ಮೆಱವಣಿಗೆಯಂ ಮಾಡಲು, ಮುಕುಂದಪೆದ್ದಿ ನೋಡಿ ಜಕ್ಕಣ್ಣದಂಡೇಶಮಂತ್ರಿ ಪ್ರೌಢನ ಸಭೆಗೆ ಬಂದಾಗ ಜಕ್ಕಣ್ಣನಿಗೂ ಅವನಿಗೂ ವಾಗ್ವಾದವಾಗಿ ಜಕ್ಕಣ್ಣನು "ಹರಿಯಜೇಂದ್ರಾದಿಮುನಿಮುನಿಗಳಿಗೆಯೂ ಪ್ರಮಥರ ಮಹತ್ತ್ವ ತಿಳಿಯದು" ಎನ್ನಲು ಆ ಮಾತಿಗೆ ವೃಂದಾಚಾರ್ಯನು "ನಮ್ಮ ಭಾರತವ ಸತ್ತವರ ಕಥೆಯೆಂದಿರಿ; ಸತ್ತವರಲ್ಲದೆ ನಿತ್ಯರಾದವರ ಕಥೆಯನು ವೀರಶೈವರು ಮಾಡಿದ ನಿಮ್ಮಗಣಂಗಳ ಕಥೆಯನು ತಂದಡೆ ರಾಜನು ಕೊಡುವ ತ್ರಿಸರವನು ಕಂಕಣವನು ಪಡೆಯಬಹುದು. ಒಂದುತಿಂಗಳಿಗೆ ಕೊಂಡುಬನ್ನಿ" ಎಂದು ಹೇಳಲು, ಬಳಿಕ ಚಿಂತೆಯಿಂದ ಆರಾಧ್ಯಚಾಮಯ್ಯನು ನಿದ್ರೆಗೈಯಲು ಸ್ವಪ್ನದಲ್ಲಿ ವೀರಭದ್ರೇಶ್ವರನು ಬಂದು "ಚಾಮಯ್ಯ ! ನೀನು ಚಿಂತಿಸದಿರು. ಪ್ರಭುಲಿಂಗಲೀಲೆ 25ಗತಿ ಎಂದು ದಿನ 1ಕ್ಕೆ 101 ಪದನ ಮಾಡಿ 11 ದಿನಕ್ಕೆ ಸಮಾಪ್ತಿಯಂ ಮಾಡು" ಎಂದು ನಿರೂಪಿಸಲು, ಚಾಮಯ್ಯನು ತಾ ಕಂಡ ಸ್ವಪ್ನವನು ಶಿವಭಕ್ತರಿಗೆ ಪೇಳಿ ಪುಷ್ಪದ ತೋಂಟದಲ್ಲಿ ಕುಳ್ಳಿರ್ದು ಲೀಲೆ ತುಂಬಿದಂತೆ ದಿನ 1ಕ್ಕೆ 101 ಪದನ ಬರೆದು 11 ದಿನಕ್ಕೆ ಸಮಾಪ್ತಿಯಂ ಮಾಡಿ ಜಕ್ಕಣಾರ್ಯರು ಮೊದಲಾದ

1. 50ನೆಯ ಪುಟವನ್ನು ನೋಡಿ.

ಭಕ್ತರುಸಹವಾಗಿ ಪ್ರೌಢರಾಯನ ಸಭೆಗೆ ಪ್ರಭುಲಿಂಗಲೀಲೆಯಂ ಕೊಂಡು ಪೋಗಿ ಓದಿಸಲು ಪ್ರೌಢರಾಯನು ಮೆಚ್ಚಿ ಕಂಕಣತ್ರಿಸರವನು ಕೊಟ್ಟು ಜಕ್ಕಣಾರ್ಯರ ಮನ್ನಿಸಲು ಜಕ್ಕಣಾರ್ಯರು, ಕಲ್ಲಮಠದಪ್ರಭುದೇವರು, ಚಾಮಯ್ಯ ಮೊದಲಾದ ಶಿವಭಕ್ತರು ಪ್ರಭುಲಿಂಗಲೀಲೆಯಂ ಮೆಱವಣಿಗೆಯಂ ಮಾಡಿ ಸುಖದಲ್ಲಿರ್ದರು.

---

## ಚಾಮರಸ. ಸು. 1430

ಈತನು ಪ್ರಭುಲಿಂಗಲೀಲೆಯನ್ನುಬರೆದಿದ್ದಾನೆ. ಇವನು ವೀರಶೈವ ಕವಿ; ಆರಾಧ್ಯಬ್ರಾಹ್ಮಣನು; ಜಕ್ಕಣಾರ್ಯನ [1] ಸಮಕಾಲದವನು. ಪ್ರೌಢ ದೇವರಾಯನ (1419-1446) ಸಭೆಯಲ್ಲಿ ತನ್ನ ಗ್ರಂಥವನ್ನು ಓದಿ ಮರ್ಯಾದೆಯನ್ನು ಪಡೆದಂತೆ ತಿಳಿವುದರಿಂದ [2] ಈತನ ಕಾಲವು ಸುಮಾರು 1430 ಆಗಬಹುದು. ಪ್ರೌಢದೇವರಾಯನ ಕಾಲದಲ್ಲಿ ವಿಜಯನಗರದಲ್ಲಿದ್ದ 101 ವಿರಕ್ತರೊಳಗೆ ಇವನೊಬ್ಬನು ಎಂದು ವೀರಶೈವಗ್ರಂಥಗಳಿಂದ ತಿಳಿಯುತ್ತದೆ. ಗುರುರಾಜಚಾರಿತ್ರದಲ್ಲಿ (ಸು. 1650) ಈತನಿಗೆ ವೀರಶೈವಾಚಾರ್ಯ ಸಾರೋದ್ಧಾರ, ಅನ್ಯಮತಕೋಲಾಹಳ ಎಂಬ ವಿಶೇಷಣಗಳು ಹೇಳಿವೆ. ಕವಿ ಈ ಗ್ರಂಥದಲ್ಲಿ ತನ್ನ ಹೆಸರನ್ನು ಹೇಳಿಕೊಂಡಿಲ್ಲದಿದ್ದರೂ ಇತರಗ್ರಂಥಗಳಿಂದ ಇದು ಏತತ್ಕೃತವೆಂಬುದು ವ್ಯಕ್ತವಾಗುತ್ತದೆ. ರಾಘವಾಂಕ ಚಾರಿತ್ರದಲ್ಲಿ ಈತನು ಉದ್ದನೆಯ ವೀರೇಶನಿಂದ ವೀರಶೈವೋಪದೇಶವನು ಪಡೆದು ಪ್ರಭುಲಿಂಗಲೀಲೆಯನ್ನು ರಚಿಸಿದಂತೆ ಹೇಳಿದೆ.

ಇವನ ಗ್ರಂಥ

### ಪ್ರಭುಲಿಂಗಲೀಲೆ

ಇದು ಭಾಮಿನೀಷಟ್ಪದಿಯಲ್ಲಿ ಬರೆದಿದೆ; ಗತಿ 25, ಪದ್ಯ 1111. ಇದರಲ್ಲಿ ಪ್ರಭುದೇವನ ಅಥವಾ ಅಲ್ಲಮನ ಚರಿತವು[3] ಹೇಳಿದೆ. ಈ ಗ್ರಂಥ ರಚನೆಯ ವಿಷಯವಾಗಿ ಭೈರವೇಶ್ವರಕಾವ್ಯದ ಕಥಾಸೂತ್ರರತ್ನಾಕರದಲ್ಲಿ (1672) ಹೇಳಿರುವ ಅಂಶಗಳನ್ನು ಹಿಂದೆಯೇ ತಿಳಿಸಿದ್ದೇವೆ. [2] ಇದೇ ವಿಷಯವಾಗಿ ಗುರುರಾಜಚಾರಿತ್ರದಲ್ಲಿ ಹೀಗೆ ಹೇಳಿದೆ—

ನೃಪಾಸ್ಥಾನದೊಳು ಈವರ್ತಮಾನದಿ ಕವಿತಾಪ್ರೌಢರಾರೆಂದೆನೆ ಕುಮಾರ ವ್ಯಾಸಕವಿ, ಚಾಮರಸರು ಎಂದಿರ್ವರಂ ಕರೆದು ಭುವನನುತಭಾರತವ ಕರ್ಣಾಟಭಾ

---

1. 57 ನೆಯ ಪುಟವನ್ನು ನೋಡಿ. 2 58ನೆಯ ಪುಟವನ್ನು ನೋಡಿ. 3. Vol. I, 148

ರತಿಯೊಳುಸುರಿ ನೀವೆಂದೊರೆಯಲು ಇರ್ವರೂ ಬೇಱೆಯೊಂದೊಂದು ಕೃತಿವೇೞುತಿರೆ ಕಬ್ಬಿಗರು ಬಂದು ಚಾಮಣ್ಣ ನಿನ್ನ ಕಾವ್ಯವ ನೋೞ್ಪೆವು ಎನಲು ಪುಸ್ತಕವ ತಂದು ಕಾಳೆಗದ ಕಥನದ ಓಲೆಯ ಹೆಬ್ಬೆರಲೊಳು ಹಿಳಿದು ಹಿಂಡೆ ರಕ್ತಂ ಬೀೞೆ ಸರ್ವರೂ ರಸಕಾವ್ಯವಹುದೆಂದು ಕೊಂಡಾಡಿ ಪೋದರು. ಆ ವಾರ್ತೆಯನು ಕುಮಾರವ್ಯಾಸನು ಕೇಳಿ ಚಿಂತಾಕ್ರಾಂತನಾಗಿ ತನ್ನ ಹೆಂಡತಿಯೊಡನೆ ನಿಮ್ಮಣ್ಣನು ಹೇೞಿದ ಕೃತಿಯನು ನೀನು ತಂದು ಸುಟ್ಟು ಬೊಟ್ಟಿಟ್ಟೊಡೆ ನಾನು ಬಾೞ್ವೆನು ಅಲ್ಲದೊಡೆ ಸಾವೆನು ಎನಲು ಅವಳು ಅಂತೆಗೈದಳು. ಚಾಮರಸನ ಕೃತಿ ನಷ್ಟವಾಯಿತು. ಅವನು ಚಿಂತೆಯಲ್ಲಿರೆ ಈಶ್ವರನು ಸ್ವಪ್ನದಲ್ಲಿ ಬಂದು "ಅನ್ಯದೈವವ ಕೀರ್ತಿಸುವುದುಂಟೆ? " ಎನಲು ಚಾಮರಸನು ಸಂಸಾರವನು ಬಿಟ್ಟು ಪಂಪೆಗೆ ಹೋಗಿ ದೀಕ್ಷೆಯ ಪಡೆದು ನಿಜಭಕ್ತನಾಗಿದ್ದನು.

ಭಾರತವನೊರೆದಾ ಕುಮಾರವ್ಯಾಸಂಗೊಸೆದು |
ಭೂರಮಣನೊಲಿದು ಕನಕಸ್ನಾನಮಂ ಮಾೞ್ಪೊ |
ಡಾರಂಭಿಸಲ್ಕೆ ಸತ್ತವರ ಕಥೆಗುಂಟೆ ಕನಕಸ್ನಾನ ತೆಗೆಯೆನ್ನಲು |
ಧಾರಿಣಿಯೊಳುಳ್ಳ ಕಥೆಯೆಲ್ಲ ಸತ್ತವರ ಕಥೆ |
ತೋಱು ಬದುಕಿದರ ಕಥೆಯೊಳವೆ ಎನಲೊಳವೆಂದು |
ಚಾರುಪ್ರಭುಲಿಂಗಲೀಲೆಯನೊರೆದು ಮೆಱಸಿದಂ ಲೀಲೆಯಾ ಚಾಮರಸನು ||

ಇಲ್ಲಿ ಹೇಳಿರುವ ದೊರೆ ಪ್ರೌಢದೇವರಾಯನೇ ಆಗಿರಬೇಕು. ಈ ಇತಿಹಾಸವು ನಿಜವಾಗಿದ್ದ ಪಕ್ಷದಲ್ಲಿ ಭಾರತವನ್ನು ಬರೆದ ಕುಮಾರವ್ಯಾಸನು ಚಾಮರಸನ ಭಾವನೆಂದೂ ಪ್ರೌಢದೇವರಾಯನ ಕಾಲದಲ್ಲಿ ಇದ್ದನೆಂದೂ ನಂಬಬೇಕಾಗುತ್ತದೆ.

ಈ ಗ್ರಂಥವು ತೆಲುಗಿನಲ್ಲಿಯೂ ಅರವಿನಲ್ಲಿಯೂ ಪದ್ಯರೂಪವಾಗಿ ಭಾಷಾಂತರ ಮಾಡಲ್ಪಟ್ಟಿದೆ.

ಗ್ರಂಥಾವತಾರದಲ್ಲಿ ಗುರುಗೊಗೇಶ್ವರಲಿಂಗದ ಸ್ತುತಿ ಇದೆ. ಬಳಿಕ ಕವಿ ಬಸವನಿಂದ ಗಾಣದ ಕನ್ನಪಯ್ಯನವರೆಗೆ [1] ಪುರಾತನರನ್ನು ಸ್ತುತಿಸಿದ್ದಾನೆ. ತನ್ನ ಗ್ರಂಥದ ವಿಷಯವಾಗಿಯೂ ಅದನ್ನು ಅಧಿಕರಿಸುವವರ ವಿಷಯವಾಗಿಯೂ ಹೀಗೆ ಹೇಳಿದ್ದಾನೆ—

1 ಸಂಗನಬಸವ, ಚೆನ್ನಸಂಗನ ಬಸವ, ಸಿದ್ಧರಾಮ, ಮಹದೇವಿಯಕ್ಕ, ಮಡಿವಳ ಮಾಚಿದೇವ, ಮರುಳುಶಂಕರದೇವ, ಕಿನ್ನರಿಯಬೊಮ್ಮಣ್ಣ, ಏಲೇಶ್ವರದ ಕೇತಯ್ಯ, ಗಾಣದ ಕನ್ನಪಯ್ಯ. .

ಸತ್ತವರ ಕಥೆಯಲ್ಲ ಜನಪದ | ಕುತ್ತದಲಿ ಬಲುಕುದಿದು ಕರ್ಮದ |
ಕತ್ತರಿಗೆ ಸಿಕ್ಕುವರ ಸೀಮೆಯ ಮಾತು ತಾನಲ್ಲ ||
ಹೊತ್ತು ಹೋಗದೆ ಪುಂಡರಾಲಿಪ | ಮತ್ತಮತಿಗಳ ಗೋಷ್ಠಿಯಲ್ಲಿದು |
ಸತ್ಯಶರಣರು ತಿಳಿವುದೀ ಪ್ರಭುಲಿಂಗಲೀಲೆಯನು ||
ಬಾಯ ನುಡಿಗಳ ಕೇಳಿ ಕಿವಿಯೊಳ | ಗಾಯೆನುತ ಪರಿಣಮಿಸಿ ಹೋಹ ವಿ |
ಡಾಯವಲ್ಲಿದು ತಮ್ಮ ತನುಮನಧನವನೆಲ್ಲವನು ||
ಬೀಯವಮಾಡಿಯೆ ಲಿಂಗದಲಿ ನಿಜ | ಕಾಯ ನಿಲುವಡೆ ನಿತ್ಯರಪ್ಪಡೆ |
ದಾಯಿಗರು ಲಾಲಿಸುವುದೀ ಪ್ರಭುಲಿಂಗಲೀಲೆಯನು ||

ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ಬನವಸಿ

ಅದಱೊಳವನೀಕಾಂತೆಗೊಪ್ಪುವ | ವದನವೋ ಶೃಂಗಾರಸಾರದ |
ಸದನವೋ ಸೊಬಗಿನ ಸುಮಾನದ ಸುಖದ ನೆಲೆವೀಡೋ ||
ಸುದತಿರತ್ನಗಳೊಗೆವ ಚೆಲುವಂ | ಬುಧಿಯೊ ಪೇಳೆನೆ ಸಕಲಸೌರಂ |
ಭದಲಿ ಸೊಗಸಿಹುದಲ್ಲಿ ಬನವಸಿಯೆಂಬ ಪಟ್ಟಣವು ||

ಮಾಯೆ

ಬೀಱುತಿರ್ದಳು ಮುದ್ದುತನವನು | ಹೇಱುತಿರ್ದಳು ಸಕಲಚೆಲುವನು |
ತೋಱುತಿರ್ದಳು ಜಗದ ಜಂಗುಳಿಗಾಡುವೊಲನಾಗಿ ||
ಸಾಱುತಿರ್ದಳು ಸಕಲಸೊಬಗನು | ಮಿಾಱುತಿರ್ದಳು ದಿನದಿನಕೆ ಕಳೆ |
ಯೇಱುತಿರ್ದಳು ಮಾಯೆ ವಿವಿಧವಿಲಾಸವೃತ್ತಿಯಲಿ ||

ಭಕ್ತಿ

ಕೋಪದುರಿಯಲಿ ಕೊಱಗಿ ದರ್ಪದ | ತಾಪದಲಿ ಲಯವಾಗಿ ಮತ್ಸರ |
ಕೂಪದಲಿ ಕುಕ್ಕಿರಿಸಿ ಡಂಬಿನ ಸೀಮೆಯಲಿ ಸಿಕ್ಕಿ ||
ಲೋಪಬುದ್ಧಿಗೆ ಲೋಲನಾಗಿ ಮ | ಹಾಪರಾಧದಲುಕ್ಕಿ ಸೊಕ್ಕುವ |
ಪಾಪಿಗಹುದೇ ಭಕ್ತಿಯೆಂಬುದು ಬಸವ ಕೇಳೆಂದ ||

---

## ಕಲ್ಲಮಠದ ಪ್ರಭುದೇವ ಸು. 1430

ಈತನು ಲಿಂಗಲೀಲಾವಿಲಾಸಚಾರಿತ್ರ, ಪ್ರಭುದೇವರ ಮಂತ್ರಗೋಪ್ಯದ ಟೀಕೆ ಇವುಗಳನ್ನು ಬರೆದಿದಾನೆ. ಇವನು ವೀರಶೈವಕವಿ; ವಿಬ್ಯಾ

ನಗರದ 101 ವಿರಕ್ತರಲ್ಲಿ ಒಬ್ಬನು; ಜಕ್ಕಣಾರ್ಯ[1], ಚಾಮರಸ ಇವರ ಸಮಕಾಲದವನು.

ಇವನ ಗ್ರಂಥಗಳಲ್ಲಿ

1 ಲಿಂಗಲೀಲಾವಿಲಾಸಚಾರಿತ್ರ

ಇದು ಷಟ್ಸ್ಥಲವನ್ನು ಬೋಧಿಸುವ ವಚನಗ್ರಂಥ; ಸ್ಥಲ 16, ವಚನ 720. ಇದರ ವಿಷಯವಾಗಿ ಗ್ರಂಥಾರಂಭದಲ್ಲಿ ಹೀಗೆ ಹೇಳಿದೆ—

ಭಕ್ತಿಕಾಂಡವೆ ಷಟ್ಸ್ಥಲಮಾರ್ಗ. ಈ ಮಾರ್ಗವೆ ಲಿಂಗಲೀಲಾವಿಲಾಸಚಾರಿತ್ರ. ಇದನು ವಿದ್ಯಾನಗರದ ಕಲ್ಲಮಠದಪ್ರಭುದೇವಾರ್ಯನು ಪುರಾತನರ ವಚನಂಗಳಲ್ಲಿ ಸಾರವಾದ ವಚನಂಗಳಂ ತೆಗೆದುಕೊಂಡು ಷೋಡಶಸ್ಥಲಪರಿಕ್ರಮದಿಂದ ಸೇರಿಸಿ ಅರ್ಥೈಸಿದ ವಚನಾಗಮವಿದು. ಇದು ಷಟ್ಸ್ಥಲಲಿಂಗಾಂಗಸಂಬಂಧಜ್ಞಾನಕ್ರಿಯಾಯುಕ್ತವಾದ ಶರಣಮಾರ್ಗ.

ಪ್ರಭುದೇವ, ಬಸವ, ಚೆನ್ನಬಸವ, ಮಹಾದೇವಿಯಕ್ಕ ಮುಂತಾದ ಪುರಾತನರ ವಚನಂಗಳಲ್ಲಿ 720ನು ತೆಗೆದುಕೊಂಡು ಷೋಡಶಸ್ಥಲಪರಿಕ್ರಮದಿಂದ ಸೇರಿಸಿ ವ್ಯಾಖ್ಯಾನವಂ ಮಾಡಿದನು ವಿದ್ಯಾನಗರದ ಕಲ್ಲಮಠದಪ್ರಭುದೇವಾರ್ಯನು.

ಸ್ಥಳಗಳ ಆದಿಯಲ್ಲಿ ಕೆಲವು ಸಂಸ್ಕೃತಶ್ಲೋಕಗಳೂ ಅವುಗಳ ವ್ಯಾಖ್ಯಾನವೂ ಇವೆ. ಒಂದೆರಡು ವಚನಗಳನ್ನು ಟೀಕೆಯೊಡನೆ ಉದಾಹರಿಸುತ್ತೇವೆ—

ನೆನೆಯಲಱಿಯೆ ನಿರ್ಧರಿಸಲಱಿಯೆ ಮನವಿಲ್ಲಾಗಿ, ಭಾವಿಸಲಱಿಯೆ ಬೆರಸಲಱಿಯೆ ಭಾವ ನಿರ್ಭಾವವಾಯಿತ್ತಾಗಿ, ಧ್ಯಾನಮೌನವನಱಿಯೆ ಧ್ಯಾನಮೌನಾತೀತ ತಾನೆಯಾಯಿತ್ತಾಗಿ, ಜ್ಞಾತೃಜ್ಞಾನಜ್ಞೇಯಂಗಳಿಲ್ಲವ ಮಾಱಿ ಅಭಿನವಮಲ್ಲಿಕಾರ್ಜುನನಲ್ಲಿ ಪರಮಸುಖಿಯಾಗಿರ್ದೆ.

ಟೀಕೆ|| ಜ್ಞಾತೃವೆ ಆತ್ಮನು, ಜ್ಞಾನವೆ ಅಱಿವು, ಜ್ಞೇಯವೆ ಅಱಿಹಿಸಿಕೊಂಬ ಲಿಂಗ; ಅಂತು ಆತ್ಮಾನುಜ್ಞಾನದಿಂದ ತನ್ನ ನಿಜವೆ ಲಿಂಗವೆಂದಱಿದು ಲಿಂಗಾಂಗಸಂಯೋಗಿಯಾದಲ್ಲಿ ಅಂಗಮನಭಾವಜ್ಞಾನಂಗಳೆಲ್ಲಾ ಲಿಂಗದೊಳೈಕ್ಯವಾಗಿ ಲಿಂಗವಾದ ಶರಣನ ಸುಖಕ್ಕೆ ಪ್ರತಿಯಿಲ್ಲವೆಂಬುದೀವಚನದ ತಾತ್ಪರ್ಯಾರ್ಥ.

---

1. 57ನೆಯ ಪುಟವನ್ನು ನೋಡಿ.

ತನು ನಷ್ಟ ಮನ ನಷ್ಟ ನೆನಹು ನಷ್ಟ ಭಾವ ನಷ್ಟ ಜ್ಞಾನ ನಷ್ಟ; ಇಂತೀ ಪಂಚನಷ್ಟದೊಳಗೆ ನಾನು ನಷ್ಟವಾದೆನು; ಆ ನಷ್ಟದೊಳಗೆ ನೀನು ನಷ್ಟವಾದೆ, ಕಲಿದೇವರ ದೇವಾ ಎಂಬ ನುಡಿ ನಿಶ್ಶಬ್ದಬ್ರಹ್ಮಮುಚ್ಯತೇ ಎನುತಿತ್ತು.

ಟೀಕೆ|| ಲಿಂಗಾಂಗಸಂಬಂಧಿಯಾದ ಶರಣನ ತನುಮನಭಾವಜ್ಞಾನಂಗಳೆಲ್ಲವೂ ಲಿಂಗದೊಳೈಕ್ಯವಾಗಿ ಅಱುವ ಅಱುಹಿಸಿಕೊಂಬಿವೆರಡಱಿದು ಮಹಾಘನಲಿಂಗವೆ ತಾನಾದಲ್ಲಿ ತಾನೆಂಬಱುಹಿನ ಉಲುಹಡಗಿ ನಿಶ್ಶಬ್ದಬ್ರಹ್ಮವೆ ಆಗಿರ್ದ ಶರಣನೆಂಬುದೀ ವಚನದ ತಾತ್ಪರ್ಯಾರ್ಥ.

---

## 2. ಪ್ರಭುದೇವರ ಮಂತ್ರಗೋಪ್ಯದ ಟೀಕೆ

ಪ್ರಭುದೇವನ ಮಂತ್ರಗೋಪ್ಯದಲ್ಲಿ[1] 27 ಪದ್ಯಗಳಿವೆ. ಇದು ಅವಕ್ಕೆ ವ್ಯಾಖ್ಯಾನ. ಟೀಕೆಯ ಆರಂಭದಲ್ಲಿ ಈ ವಾಕ್ಯವಿದೆ—

ಅಂದಿನ ಚಿತ್ಪ್ರಭು ತಾನೆ ಇಂದಿನ ಕಲ್ಲಮಠದಪ್ರಭುವಿನಂಗದಲ್ಲಿ ಒಡೆದು ಮೂಡಿ ಬೆಳಗುತ್ತಿರ್ದು ತನ್ನಂದಿನ ಮಂತ್ರಗೋಪ್ಯದಿಪ್ಪತ್ತೇೞುವಚನಂಗಳಿಗೆ ಅರ್ಥಮಂ ತಾನೆ ಅರ್ಥೈಸಿದನೆಲ್ಲಾ ಶಿವಗಣಂಗಳಱಿವಂತೆ. ಇದು ಶಿವಜ್ಞಾನದರ್ಪಣಮಾಗಿರ್ದುದು.

ಒಂದು ಪದ್ಯವನ್ನೂ ಅದರ ಟೀಕೆಯನ್ನೂ ಬರೆಯುತ್ತೇವೆ—

ಪದ್ಯ|| ಎಂಟೆಸಳ ಕಮಲದಾ ನವಬ್ರಹ್ಮಪುರದೊಳಗೆ |
ಎಂಟುಬೀದಿಯೊಳೆಂಟು ಕರಿಗಳುಂಟು |
ಎಂಟುಕರಿಗಳ ಸುಟ್ಟು ಕಂಟಕಂಗಳ ಗೆಲಿದು |
ದಾಂಟಿದೆನು ಸಂಸಾರಸಾಗರವನು||

ಟೀಕೆ|| ಬ್ರಹ್ಮಾಂಶಿಕವಪ್ಪ ಆತ್ಮನು ಪಂಚಬ್ರಹ್ಮದಿಂದೊಗೆದ ಪಾಂಚಭೌತಿಕ ದೇಹಯುಕ್ತನಾಗಿರಲು ಇಂತೆರಡುಬ್ರಹ್ಮರಿಂದೊಗೆದ ಹೊಸಕೃತ್ರಿಮದೇಹವೆಂಬುದೀಗ ನವಬ್ರಹ್ಮಪುರವೆಂಬ ಶಬ್ದಕ್ಕರ್ಥ; ಆದೇಹದ ಹೃದಯಕಮಲದ ಎಂಟೆಸಳು ಸಂಚಲ ಗುಣರೂಪವಾಗಿಹುವೆಂಬುದೀಗ ಎಂಟೆಸಳ ಕಮಲದಾ ಎಂಬ ಶಬ್ದಕ್ಕರ್ಥ; ಅಷ್ಟತನುವೀಧಿಗಳ ಅಷ್ಟಮದಂಗಳೆಂಬುವೀಗ ಎಂಟುಬೀದಿಯೊಳೆಂಟು ಕರಿಗಳುಂಟು ಎಂಬ ಶಬ್ದಕ್ಕರ್ಥ; ಅಷ್ಟದಳಗುಣವಿಡಿದು ಈಯೆಂಟುಮದದಿಂದ ದೇಹ ತಾನೆಂದು ಜೀವ ತಾನಾಗಿ ಸತ್ತು ಹುಟ್ಟುವನಾಗಿ ಅದೀಗ ಕಂಟಕವೆಂಬ ಶಬ್ದಕ್ಕರ್ಥ; ಇಂತಪ್ಪ ದೇಹದಲ್ಲಿ ಜ್ಞಾನೋದಯವಾದ ಶರಣನು ಆಜ್ಞಾನಾಗ್ನಿಯಿಂದ ಆ ದೇಹದ ಗುಣಂಗಳ

---

1. Vol. I, 149.

ಅಷ್ಟಮದಂಗಳೆಲ್ಲವನು ದಹನವ ಮಾಡಿದನೆಂಬುದೀಗ ಎಂಟುಕರಿಗಳ ಸುಟ್ಟು ಎಂಬ ಶಬ್ದಕ್ಕರ್ಥ; ಇಂತು ಜ್ಞಾನಮುಖದಿಂದ ದೇಹಭಾವವಳಿದು ಶಿವಭಾವಧ್ಯಾನದಿಂದ ಜನನಮರಣವ ಪರಿಹರಿಸಿ ಭವಸಾಗರವ ಜಯಿಸಿದ ಶರಣನೆಂಬುದೀಗ ಕಂಟಕಂಗಳ ಗೆಲಿದು ದಾಂಟಿದೆನು ಸಂಸಾರಸಾಗರವನು ಎಂಬ ಶಬ್ದಕ್ಕರ್ಥ.

ತಾತ್ಪರ್ಯ || ಇಂತು ಜ್ಞಾನದಿಂದ ದೇಹವಾಸನೆಯಳಿದು ಆ ಶಿವಜ್ಞಾನದಿಂದವೆ ಭವವಿರಹಿತವಹುದಲ್ಲದೆ ಮಿಕ್ಕಿನ ಅಷ್ಟಾಂಗಯೋಗಂಗಳ ತನುದಂಡನೆಯ ಕರ್ಮಂಗಳಿಂದ ದೇಹವಾಸನೆಯಳಿಯದೆಂದು ಪ್ರಭುದೇವರು ಸಿದ್ಧರಾಮಯ್ಯದೇವರಿಗೆ ಉಪದೇಶಿಸಿದರೆಂಬುದೀವಚನಾರ್ಥ.

---

## ಕುಮಾರವ್ಯಾಸ. ಸು. 1430

ಈತನು ಭಾರತದಲ್ಲಿ ಮೊದಲು 10 ಪರ್ವಗಳನ್ನು ಬರೆದಿದ್ದಾನೆ. ಇವನು ಬ್ರಾಹ್ಮಣಕವಿ; ಮಾಧ್ವನೆಂದು ಕೆಲವರು ಹೇಳುತ್ತಾರೆ. ಇವನ ಸ್ಥಳ ಕೋಳಿವಾಡು ಎಂದೂ ಇವನ ಪೂರ್ವಿಕರು ಕುಲಕ್ರಮವಾಗಿ ಸೇನಬೋವರೆಂದೂ ಇವನ ನಿಜವಾದ ಹೆಸರು ನಾರಣಪ್ಪ ಎಂದೂ ಗದುಗಿನಪ್ರಾಂತದ ಜನರಲ್ಲಿ ಪ್ರವಾದವಿದೆ. ಈತನು ಗದುಗಿನ ವೀರನಾರಾಯಣದೇವರ ಭಕ್ತನು; ಆ ದೇವರ ಅಂಕಿತದಲ್ಲಿಯೇ ತನ್ನ ಗ್ರಂಥವನ್ನು ಬರೆದಿದ್ದಾನೆ. ವಿಜಯನಗರದ ದೊರೆಯಾದ ಕೃಷ್ಣದೇವರಾಯನ (1509-1529) ಆಳಿಕೆಯ ಆರಂಭದಲ್ಲಿ ಈ ಗ್ರಂಥವು ಹುಟ್ಟಿತೆಂದು ಮೆ|| ರೈಸ್‌, ಮೆ|| ಕಿಟ್ಟೆಲ್ ಮುಂತಾದವರು ಬರೆದಿರುವುದನ್ನು ಎಲ್ಲರೂ ಒಪ್ಪಿಕೊಂಡಿರುವಂತೆ ತೋರುತ್ತದೆ. ಈ ಹೇಳಿಕೆಗೆ ಸರಿಯಾದ ಆಧಾರವಿರುವಂತೆ ಕಾಣುವುದಿಲ್ಲ. ತಿಮ್ಮಣ್ಣಕವಿ ಈ ಕೃಷ್ಣದೇವರಾಯನ ಆಜ್ಞಾನುಸಾರವಾಗಿ ಬರೆದಿರುವ ಕೃಷ್ಣರಾಜಭಾರತದ ಆದಿಭಾಗದಲ್ಲಿ ಕುಮಾರವ್ಯಾಸನ ಭಾರತವು ಈ ದೊರೆಯ ಆಳಿಕೆಯಲ್ಲಿ ಹುಟ್ಟಿದಂತೆ ಹೇಳಿಲ್ಲ. ತಿಮ್ಮಣ್ಣಕವಿಯನ್ನು ಕುರಿತು ದೊರೆ "ಲೇಸೆನಿಸಿ ಮೊದಲಾ ಕುಮಾರವ್ಯಾಸ ದಶಪರ್ವಗಳ ಹೇಳಿದ ಭಾರತದ ಉಳಿದ ಪರ್ವಗಳ ನೀ ಸಕಲಜನ ಮೆಚ್ಚುವಂತೆ ಪೇಟು" ಎನ್ನುತ್ತಾನೆ. "ಮೊದಲಾ ಕುಮಾರವ್ಯಾಸ" ಎಂಬುದರಿಂದ ಈದೊರೆಯ ಕಾಲಕ್ಕೆ ಹಿಂದೆಯೇ ಆ ಭಾರತವು ಹುಟ್ಟಿರಬೇಕೆಂದು ಊಹಿಸಬಹುದಾ

ಗಿದೆ. ಈ ಊಹೆಯನ್ನು ವೀರಶೈವಗ್ರಂಥಗಳಲ್ಲಿ ಕುಮಾರವ್ಯಾಸನವಿಷಯವಾಗಿ ಹೇಳಿರುವ ಒಂದು ಇತಿಹಾಸವು[1] ದೃಢೀಕರಿಸುತ್ತದೆ. ಗುರುರಾಜಚಾರಿತ್ರ (ಸು. 1650), ಚೋರಬಸವಚರಿತ್ರೆ (1763) ಈ ಗ್ರಂಥಗಳಲ್ಲಿ ಈ ಇತಿಹಾಸವು ಹೀಗೆ ಹೇಳಿದೆ--

ವಿಜಯನಗರದ ಪ್ರೌಢದೇವರಾಯನು (1419-1446) ತನ್ನ ಆಸ್ಥಾನದಲ್ಲಿ ಕವಿತಾಪ್ರೌಢರಾದ ಕುಮಾರವ್ಯಾಸ, ಚಾಮರಸ ಇವರಿಬ್ಬರನ್ನೂ ಕರೆದು ಭಾರತವನ್ನು ಕನ್ನಡದಲ್ಲಿ ಬರೆಯಿರಿ ಎಂದು ಆಜ್ಞಾಪಿಸಲು, ಅವರಿಬ್ಬರೂ ಬರೆದರು. ವಿದ್ವಾಂಸರು ಚಾಮರಸನ ಕಾವ್ಯವನ್ನು ನೋಡಿ ರಸಕಾವ್ಯವಹುದೆಂದು ಕೊಂಡಾಡಲು, ಕುಮಾರವ್ಯಾಸನು ಚಿಂತಾಕ್ರಾಂತನಾಗಿ ತನ್ನ ಹೆಂಡತಿಯೊಡನೆ ನಿಮ್ಮಣ್ಣನಾದ ಚಾಮರಸನು ಹೇಳಿದ ಕೃತಿಯನ್ನು ನೀನು ತಂದು ಸುಟ್ಟು ಬೊಟ್ಟಿಟ್ಟರೆ ನಾನು ಬಾಳುವೆನು, ಅಲ್ಲದೊಡೆ ಸಾವೆನು ಎನ್ನಲು ಅವಳು ಹಾಗೆಯೇ ಮಾಡಿ ಗಂಡನನ್ನು ಸಮಾಧಾನಪಡಿಸಿದಳು. ಚಾಮರಸನ ಕೃತಿ ನಷ್ಟವಾಗಲು, ಅವನು ಪ್ರಭುಲಿಂಗಲೀಲೆಯೆಂಬ ಬೇರೊಂದು ಗ್ರಂಥವನ್ನು ರಚಿಸಿ ದೊರೆಯ ಸಭೆಯಲ್ಲಿ ಓದಲು, ವಿದ್ವಾಂಸರೆಲ್ಲರೂ ಮೆಚ್ಚಿದರು; ದೊರೆ ಆನೆಯಮೇಲೆ ಮೆರೆವಣಿಗೆ ಮಾಡಿಸಿದನು. ಕುಮಾರವ್ಯಾಸನಿಗೆ ಕನಕಾಭಿಷೇಕವನ್ನು ಮಾಡುವುದಾಗಿ ದೊರೆ ಮೊದಲು ನಿಶ್ಚಯಿಸಿದ್ದನು. ಆದರೆ ಚಾಮರಸನು--ಕುಮಾರವ್ಯಾಸನ ಭಾರತವು ಸತ್ತವರ ಕಥೆ, ನನ್ನ ಗ್ರಂಥವು ಸಾಯದ ಪುಣ್ಯಪುರುಷರ ಚರಿತೆ--ಎಂದು ಹೇಳಲು, ದೊರೆ ನಿಜವೆಂದು ತಿಳಿದು ಭಾರತವನ್ನು ನಿಸ್ಸಾರಗೈದು ಕುಮಾರವ್ಯಾಸನಿಗೆ ಕನಕಸ್ನಾನವನ್ನು ಪರಿಹರಿಸಿ ಚಾಮರಸನಿಂದ ವೀರಶೈವದೀಕ್ಷೆಯನ್ನು ಪಡೆದನು.

ಇದರಿಂದ ಕುಮಾರವ್ಯಾಸನು ದೇವರಾಯನ ಆಳಿಕೆಯಲ್ಲಿದ್ದನೆಂದೂ ಪ್ರಭುಲಿಂಗಲೀಲೆಯನ್ನು ಬರೆದ ಚಾಮರಸನ ತಂಗಿಯ ಗಂಡನೆಂದೂ ತಿಳಿಯುತ್ತದೆ. ಈ ಇತಿಹಾಸದ ಪ್ರಕಾರ ಇವನ ಕಾಲವು ಸುಮಾರು 1430 ಆಗುವುದು. ಇದು ಇವನ ನಿಜವಾದ ಕಾಲವೆಂದು ತೋರುತ್ತದೆ.

ಈ ಕವಿಯನ್ನು ಕುಮಾರವಾಲ್ಮೀಕಿ (ಸು. 1500), ಲಕ್ಷ್ಮಕವಿ (1723), ಕೋವಯ್ಯ (ಸು. 1750), ಬೊಬ್ಬೂರುರಂಗ(ಸು. 1760) ಮೊದಲಾದ ಕವಿಗಳು ಸ್ತುತಿಸಿದ್ದಾರೆ.

1 60ನೆಯ ಪುಟವನ್ನು ನೋಡಿ.

ತನ್ನ ಕವಿತಾಶಕ್ತಿಯನ್ನೂ ತನ್ನ ಕಾಲಕ್ಕೆ ಹಿಂದೆ ಹುಟ್ಟಿದ್ದ ರಾಮಾಯಣಕಥಾಪ್ರತಿಪಾದಕವಾದ ಗ್ರಂಥಗಳ ಬಾಹುಳ್ಯವನ್ನೂ ಈ ಪದ್ಯಗಳಲ್ಲಿ ತಿಳಿಸಿದ್ದಾನೆ—

ಹಲಗೆಬಳಹವ ಪಿಡಿಯದೊಂದ | ದಗ್ಗಳಿಕೆ ಪದವಿಟ್ಟುಱಿಪದೊಂದ |
ಗ್ಗಳಿಕೆ ಪರರೊಡ್ಡವದ ರೀತಿಯ ಕೊಳ್ಳದಗ್ಗಳಿಕೆ ||
ಬಳಸಿ ಬರೆಯಲು ಕಂಠಪತ್ರದ | ಉಲುಹು ಕೆಡದಗ್ಗಳಿಕೆಯೆಂಬೀ |
ಬಲುಹು ಗದುಗಿನ ವೀರನಾರಾಯಣನ ಕಿಂಕರಗೆ ||
ತಿಣುಕಿದನು ಫಣಿರಾಯ ರಾಮಾ | ಯಣದ ಕವಿಗಳ ಭಾರದಲಿ ತಿಂ |
ಥಿಣಿಯ ರಘುವರಚರಿತೆಯಲಿ ಕಾಲಿಡಲು ತೆಱಪಿಲ್ಲ ||
ಬಣಗುಕವಿಗಳ ಬಗೆವನೇ ಸಾ | ಕೆಣೆಸದಿರು ಶುಕರೂಪನಲ್ಲವೆ |
ಕುಣಿಸಿ ನಗನೇ ಕವಿಕುಮಾರವ್ಯಾಸನುಱಿದವರ ||

ಇವನ ಗ್ರಂಥ

### ಭಾರತ

ಇದು ಭಾಮಿನೀಷಟ್ಪದಿಯಲ್ಲಿ ಬರೆದಿದೆ; ಪರ್ವ 10, ಸಂಧಿ 152, ಪದ್ಯ 8479. ಭಾರತದ ಮೊದಲು 10 ಪರ್ವಗಳನ್ನು ಮಾತ್ರ ಬರೆದಿದ್ದಾನೆ. ಈ ಗ್ರಂಥದ ಉತ್ಕೃಷ್ಟತೆಯನ್ನು ಕವಿ ಈ ಪದ್ಯದಲ್ಲಿ ಹೇಳಿದ್ದಾನೆ—

ಅರಸುಗಳಿಗಿದು ವೀರ ದ್ವಿಜರಿಗೆ | ಪರಮವೇದದ ಸಾರ ಯೋಗೀ |
ಶ್ವರರ ತತ್ವವಿಚಾರ ಮಂತ್ರಿಜನಕ್ಕೆ ಬುದ್ಧಿಗುಣ ||
ವಿರಹಿಗಳ ಶೃಂಗಾರ ವಿದ್ಯಾ | ಪರಿಣತರಲಂಕಾರ ಕಾವ್ಯಕೆ |
ಗುರುವೆನಲು ರಚಿಸಿದ ಕುಮಾರವ್ಯಾಸ ಭಾರತವ ||

ಗ್ರಂಥಾವತಾರದಲ್ಲಿ ಗದುಗಿನ ವೀರನಾರಾಯಣಸ್ತುತಿ ಇದೆ. ಬಳಿಕ ಕವಿ ಲಕ್ಷ್ಮಿ, ಬ್ರಹ್ಮ, ಸರಸ್ವತಿ, ಶಿವ, ಪಾರ್ವತಿ, ಗಣೇಶ, ವೇದವ್ಯಾಸ ಇವರುಗಳನ್ನು ಹೊಗಳಿದ್ದಾನೆ. ಪರ್ವಗಳ ಕೊನೆಯಲ್ಲಿ—

ಇತಿ ಶ್ರೀಮದಚಿಂತ್ಯಮಹಿಮಗದುಗುವೀರನಾರಾಯಣಚರಣಾರವಿಂದಮಕರಂದಮಧುಪಾನಪುಷ್ಟವಚಷ್ಷಟ್ಪದೀನಿಕಾಯ ಶ್ರೀಮತ್ಕುಮಾರವ್ಯಾಸಯೋಗೀಂದ್ರವಿರಚಿತಮಪ್ಪ ಕರ್ಣಾಟಭಾರತಕಥಾಮಂಜರಿಯೊಳ್

ಎಂಬ ಗದ್ಯವಿದೆ. ಜೈಮಿನಿಭಾರತವನ್ನು ಬಿಟ್ಟರೆ ಇದೇ ಕನ್ನಡಿಗರ ವಿಶೇಷಾದರಕ್ಕೆ ಪಾತ್ರವಾದ ಗ್ರಂಥವು. ಇದರಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ:—

### ದ್ರೌಪದಿಯ ಸೌಂದರ್ಯ

ಹೊರೆಯ ಸಖಿಯರ ನೋಟ ಮೈಯಲಿ | ಹರಿದು ಒಟಿಲಸು ಚಿತ್ತವೀಕೆಯ |
ಧರಿಸಿ ಕುಸಿಯದು ಕಿವಿಗಳಿಗೆ ಮೆಲ್ನುಡಿಯು ಸವಿಸವಿದು ||
ಅರುಚಿಯಾಗದು ನಾಸಿಕವು ಮೈ | ಪರಿಮಳದ ಪೂರದಲಿ ಗಂಧಾಂ |
ತರಕೆ ನೆಱೆಯದು ರೂಪವೇನೆಂಬೆನು ನಿತಂಬಿನಿಯಾ ||
ನಳಿನಮುಖಿಯರ ಸಕಲಸೃಷ್ಟಿಗೆ | ಕಳಸವಿದು ಸೌಂದರ್ಯವಸನದ |
ವಿಲಸವಿದು ರತಿರಮಣವೈಭವರತ್ನಕೋಶವಿದು ||
ಲಲನೆಯರ ಸೀಮಂತಮಣಿ ಜಗ | ದೊಳಗೆ ಚೆಲುವಿನ ಕಣಿ ತಪೋಧನ |
ಕುಲಜರಿಗೆ ಸೃಣೆಯೆನಲು ಮೆಱೆದುದು ರೂಪವಂಗನೆಯಾ ||
ಹೊಳೆಹೊಳೆದುದಾಭರಣರತ್ನಾ | ವಳಿಯ ರುಚಿ ತನ್ಮಣಿರುಚಿಯು ಮು |
ಕ್ಕುಱಿಸಿತಂಗಚ್ಛವಿ ತದಂಗಪ್ರಭೆಯನಡಹಾಯ್ದು ||
ಥಳಥಳಿಸಿದುದು ವದನ ಮುಖಮಂ | ಡಲದ ಕಾಂತಿಯಸೊದೆದು ಕಣ್ಗಳ ||
ಬೆಳಗು ೭ಸಟಂಬರಿದುದೇನೆಂಬೆನು ನಿತಂಬಿನಿಯಾ ||
ಪರಿಮಳದ ಪರಮಾಣುಗಳ ಸಂ | ವರಿಸಿ ಮುಕ್ತಾಫಲದ ಕೆಂದಾ |
ವರೆಯ ಮೞಱದುಂಬಿಗಳ ವರ್ಣಾಂತರವನಳವಡಿಸಿ ||
ಸರಸವೀಣಾಧ್ವನಿಯ ಹಂಸೆಯ | ಗರುವಗತಿಗಳನಾಯ್ದು ಮನ್ಮಥ |
ವರವಿರಿಂಚಿಯೆ ಸೃಜಿಸಿದನು ಪಾಂಚಾಲನಂದನೆಯಾ ||

### ಕೊಳ

ಉಲಿವ ಕೋಕಿಲಪಾಠಕರ ಮೆಱೆ | ವಳಿಕುಲದ ಗಾಯಕರ ಹಂಸಾ |
ವಳಿಯ ಸುಭಟರ ಜಡಿವ ಕೊಳರ್ವಕ್ಕಿಗಳ ಪಡಿಯಱರ ||
ಅಲರ್ದ ಹೊಂದಾವರೆಯ ನವಪರಿ | ಮಳದ ಸಿಂಹಾಸನದಿ ಲಕ್ಷ್ಮೀ |
ಲಲನೆಯೋಲಗಸಾಲೆಯಂತಿರೆ ಮೆಱೆದುದಾಸರಸಿ ||

### ಅರ್ಜುನನ ಪುತ್ರಶೋಕ

ಮುಚ್ಚಿದನು ಕಣ್ಗಳನು ಧೈರ್ಯದ | ಕೆಚ್ಚಿನೆದೆ ಕರಗಿದುದು ಶೋಕದ |
ಕಿಚ್ಚು ಕೊಂಡುದು ಮನವನಖಿಳೇಂದ್ರಿಯದ ಸುಱವಡಗಿ ||

ಎಚ್ಚಱಿಡಗಿತು ನೆಲಕೆ ಕೈಗಳ | ಬಿಚ್ಚಿ ಬಿರಿದನು ಪುತ್ರಶೋಕದ |
ಹೆಚ್ಚುಗೆಯ ತಾಪವನು ಹೆಸರಿಡಲಱಿಯೆನರ್ಜುನನ ||

ಕರ್ಣಾರ್ಜುನರ ಯುದ್ಧ

ಮನದೊಳಗೆ ಮೊಗೆದೀಂಟಿದರು ಮೂ | ಗಿನಲಿ ಸೂಸಿದರಡಿಗಡಿಗೆ ಕ |
ಣ್ಣಿನಲಿ ಕುಡಿಕುಡಿದುಗುೞಿದರು ಮೂದಲೆಯ ಮಾತಿನಲಿ ||
ಮನದೊಳಂಕುರವಾಗಿ ಕಡೆಗ | ಣ್ಣಿನಲಿ ಪಲ್ಲವವಾಗಿ ರಣವಾ |
ತಿನಲಿ ಪೂತುದು ಕರ್ಣಪಾರ್ಥರ ರೋಷಮಯಜಾಲ ||

ವಿದುರನೀತಿ

ಕೋಪವೆಂಬುದನರ್ಥಸಾಧನ | ಕೋಪವೇ ಸಂಸಾರಬಂಧನ |
ಕೋಪದಿಂದುರುತರದ ಸುಕೃತವು ಲಯವನೈದುವುದು ||
ಕೋಪವನು ವರ್ಜಿಸಲುಬೇಹುದು | ಕೋಪವುಳ್ಳವನಾವನಾಗಲಿ |
ಕಾಪುರುಷನಿಹಪರಕೆ ಚಿತ್ತೈಸೆಂದನಾ ವಿದುರ ||
ಯತಿ ಕೆಡುಗು ದುಸ್ಸಂಗದಲಿ ಭೂ | ಪತಿ ಕೆಡುಗು ದುರ್ಮಂತ್ರಿಯಲಿ ವರ |
ಸುತ ಕೆಡುಗು ಲಾಲನೆಗಳಲಿ ಕೃಷಿ ಕೆಡುಗುಪೇಕ್ಷೆಯಲಿ ||
ಮತಿ ಕೆಡುಗು ಮಧುಪಾನದಲಿ ಸ | ದ್ಗತಿ ಕೆಡುಗು ದುಶ್ಚರಿತದಲಿ ನಿಜ |
ಸತಿ ಕೆಡುಗು ದುರ್ವ್ಯಸನದಲಿ ಭೂಪಾಲ ಕೇಳೆಂದ ||

ಈತನು ಐರಾವತ ಎಂಬ ಗ್ರಂಥವನ್ನೂ ಬರೆದಿರುವಂತೆ ತೋರುತ್ತದೆ. ಇದರಲ್ಲಿ 4 ಸಂಧಿಗಳೂ 441 ಪದ್ಯಗಳೂ ಇವೆ. ಗ್ರಂಥಾಂತ್ಯದಲ್ಲಿ ಗದುಗಿನವೀರನಾರಾಯಣ ಎಂಬ ಅಂಕಿತವಿದೆ. ಮುದ್ರಿತವಾದ ಭಾರತದಲ್ಲಿ ಈ ಸಂಧಿಗಳಿಲ್ಲ. ಈ ಗ್ರಂಥದಲ್ಲಿ ಕುಂತಿ ಐರಾವತಪೂಜೆಮಾಡಿದ ಕಥೆ ಹೇಳಿದೆ. ಇದರಿಂದ ಒಂದು ಪದ್ಯವನ್ನು ತೆಗೆದು ಬರೆಯುತ್ತೇವೆ-

ಅಂದು ಗೋಕುಲದೊಳಗೆ ದೇವಪು | ರಂದರನು ಬಲುಮೞೆಯ ಸುರಿಯಲು |
ಮಂದರವ ಕಿಱುಬೆರಳಿನಿಂದಲಿ ನೆಗಪಿ ಕಾದವನ ||
ಸೌಂದರಿಯನೆೞೆದೊಯ್ದ ದೈತ್ಯನ | ಕಂಧರವ ಕತ್ತರಿಸಿ ಭೂಮಿಯ |
ತಂದವನ ಬಲುತೋಟಿ ಬೇಡೆಂದೊದಱಿದುವು ಕಹಳೆ ||

## ಶ್ರೀಗಿರೀಂದ್ರ. ಸು. 1430

ಈತನು ಜಕ್ಕಣಾರ್ಯನ (ಸು. 1430) ಏಕೋತ್ತರಶತಸ್ಥಲಿಗೆ ಟೀಕೆಯನ್ನು ಬರೆದಿದ್ದಾನೆ. ಇವನು ವೀರಶೈವಕವಿ; ವಾರಾಣಸೀಂದ್ರನ[1] ಶಿಷ್ಯನು; ಸಿರಿಯಾಳತ್ರಿಪುರಾರಿಯ ಮಗನು. ಇವನ ಟೀಕೆಯ ಕೊನೆಯಲ್ಲಿರುವ— ವಾರಾಣಸೀಂದ್ರನ ಉಪದೇಶದಿಂದ ಜಕ್ಕಣ್ಣನು ಬರೆದ ಏಕೋತ್ತರಶತಸ್ಥಲಿಗೆ ಶ್ರೀಗಿರೀಂದ್ರನು ಬರೆದ ವ್ಯಾಖ್ಯಾನ—ಎಂಬ ವಾಕ್ಯದಿಂದ ಇವನು ಜಕ್ಕಣಾರ್ಯನ ಸಮಕಾಲದವನು ಎಂದು ವ್ಯಕ್ತವಾಗುತ್ತದೆ.

---

## ಕರಸ್ಥಲದ ನಾಗಿದೇವ. ಸು. 1430

ಇವನು ಒಂದು ತ್ರಿಪದೀಗ್ರಂಥವನ್ನು ಬರೆದಿದ್ದಾನೆ. ಇದಕ್ಕೆ ಕರಸ್ಥಲದ ನಾಗಿದೇವತ್ರಿವಿಧಿ ಎಂದು ಹೆಸರು. ಇವನು ವೀರಶೈವಕವಿ; ಅಕ್ಕಸಾಲೆಯಜಾತಿಯವನು; ಕರಸ್ಥಲದ ವೀರಣ್ಣೊಡೆಯನ ಶಿಷ್ಯನು; 101 ವಿರಕ್ತರಲ್ಲಿ ಒಬ್ಬನು. ಈತನು ಪ್ರೌಢದೇವರಾಯನ (1419-1446) ಕಾಲದಲ್ಲಿದ್ದಂತೆ ಚೆನ್ನಬಸವಪುರಾಣದಲ್ಲಿ (1584) ಹೇಳಿದೆ[2]. ಇವನು ಜಕ್ಕಣಾರ್ಯ, ಕಲ್ಲಮಠದಪ್ರಭುದೇವ, ಚಾಮರಸ ಇವರ ಸಮಕಾಲದವನು. ಇವನಿಗೆ ಕರಸ್ಥಲದ ನಾಗಿಲಿಂಗ ಎಂಬ ಹೆಸರೂ ಉಂಟು.

ಇವನ ಗ್ರಂಥ

### ಕರಸ್ಥಲದ ನಾಗಿದೇವತ್ರಿವಿಧಿ.

ಇದು ತ್ರಿಪದಿಯಲ್ಲಿ ಬರೆದಿದೆ, ಪದ್ಯ 31. ಇವು ಗೂಢಾರ್ಥವುಳ್ಳ ಪದ್ಯಗಳು; ವೀರಶೈವಸಿದ್ಧಾಂತವನ್ನು ಬೋಧಿಸುತ್ತವೆ. ಇವಕ್ಕೆ ಪರ್ವತಶಿವಯೋಗಿಯಿಂದ (ಸು. 1650) ರಚಿತವಾದ ಒಂದು ಕನ್ನಡವ್ಯಾಖ್ಯಾನವೂ ಇದೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ಎಂಟುಮೊನೆಯಮೇಲೆ ಏೞು ದುರ್ಗವ ಮೂಱು | ದಾಂಟಿ ಅರಣ್ಯವ ಸುಡುತಲಿ|
ದಾಂಟಿ ಅರಣ್ಯವ ಸುಡುತಲಿ ನರಿನಾಯ |
ಬೇಂಟೆಯನಾಡಿ ಮೆಱೆದುದು ||

ಹಸಿವುತೃಷೆವಿಷಯವ ಹೊಸೆದು ಭಸ್ಮವ ಮಾಡಿ|ಕಿಸುಕುಳದ ಗಂಟ ಕಡೆಗೊದ್ದು|
ಕಿಸುಕುಳದ ಗಂಟ ಕಡೆಗೊದ್ದು ಸಂಸಾರ |
ಹಸಗೆಟ್ಟಿತೆಂದು ನಗುತಿರ್ದೆ ||

---

1. 50ನೆಯ ಪುಟವನ್ನು ನೋಡಿ. 2. ಸಂಧಿ 63, ಪದ್ಯಗಳು 7-20.

ನಾಲ್ಕುಮನೆಯ ಮುಂದೆ ನಾಲ್ಕುದೇಗುಲವಿಹೆ | ನಾಲ್ಕುಹನ್ನೆರಡು ಚೌಕದ |
ನಾಲ್ಕುಹನ್ನೆರಡುಚೌಕದಾ ಬಾಗಿಲು |
ಓಂಕಾರದಲ್ಲಿ ಮುಚ್ಚಿಗಿತು ||
ಪರಿಮಳವ ಕೊಂಬಂತೆ ವರಭೃಂಗನಂದದಿ | ಪರಮಹಂಸನೊಳೊಡವೆರೆದು |
ಪರಮಹಂಸನೊಳೊಡವೆರೆದು ಕರಸ್ಥಲದ |
ಗುರುಶಾಂತನೊಡನೆ ಬಯಲಾದೆ ||

---

ಮುಗ್ಗೆಯ ಮಾಯಿದೇವ. ಸು. 1430

ಈತನು ಅನುಭವಸೂತ್ರ, ಪ್ರಭುಗೀತೆ, ಏಕೋತ್ತರಶತಸ್ಥಲಷಟ್ಪದಿ, ಷಟ್ಸ್ಥಲಗದ್ಯ, ಶತಕತ್ರಯ, ಮುಗ್ಗೆಯಮಾಯಿದೇವವಚನ ಎಂಬ ಗ್ರಂಥಗಳನ್ನು ಬರೆದಂತೆ ತಿಳಿಯುತ್ತದೆ. ಅನುಭವಸೂತ್ರವು ಸಂಸ್ಕೃತದಲ್ಲಿ ಬರೆದಿದೆ. ಇದರಿಂದ ಕವಿಯವಿಷಯವಾಗಿ ಈಯಂಶಗಳು ತಿಳಿಯುತ್ತವೆ:—

ಮಲಪ್ರಹಾರೀನದಿಯ ತೀರದಲ್ಲಿರುವ ಐಪುರಕ್ಷೇತ್ರದ ಸೋಮನಾಥದೇವರ ಅನುಗ್ರಹದಿಂದ ಉಪಮನ್ಯುಶಿವಾಚಾರ್ಯನು ಹುಟ್ಟಿದನು; ಮಗ ಭೀಮನಾಥ, ಮಗ ಕಳೇಶ್ವರ, ಮಗ ಬೊಪ್ಪನಾಥ, ಮಗ ನಾಕರಾಜ, ಶಿಷ್ಯ ಸಂಗಮೇಶ್ವರ, ಮಗ ಕವಿ ಮಾಯಿದೇವ. ಇವನಿಗೆ ಕಲ್ಯಾಣದ ಎಂಬ ಹೆಸರೂ ಉಂಟು.

ಇವನು ವೀರಶೈವಕವಿ, ಐಪುರದ ಸೋಮನಾಥದೇವರ ಭಕ್ತನು. ವಿರೂಪಾಕ್ಷಪಂಡಿತನ (1584) ಚೆನ್ನಬಸವಪುರಾಣದಲ್ಲಿಯು

ಎಲೆರಾಮ ಕೇಳಿನ್ನು ಸಕಲಾಗಮಂಗಳಿಗೆ |
ನೆಲೆಯೆನಿಸಿ ಪ್ರೌಢನಿಂ ಪೂಜೆಯಂ ಕೊಂಡು ಷ |
ಟ್ಸ್ಥಲಮಾರ್ಗಮಂ ಸಕಲಶಿವಭಕ್ತಸಂತತಿಗೆ ಕರತಳಾಮಳಕವಾಗಿ ||
ತಿಳಿವೊಲನುಭವಸೂತ್ರವಾದಿಶಾಸ್ತ್ರಂಗಳಂ |
ಗೆಲವಿನಿಂ ಪೇಳ್ದು ನಿಜಶಿವಸಮಾಧಿಯಲಿ ಮಿಗೆ |
ನಲವಿನಿಂದಲ್ಲಿ ಮಗ್ಗೆಯ ಮಾಯಿದೇವಪ್ರಭುವರನಿರದೆ ಮುಕ್ತನಹನು [1] ||

ಎಂಬ ಪದ್ಯದಿಂದ ಈತನು ವಿಜಯನಗರದ ರಾಜನಾದ ಪ್ರೌಢರಾಯನ (1419-1446) ಕಾಲದಲ್ಲಿದ್ದಂತೆ ತಿಳಿವುದರಿಂದ ಇವನ ಕಾಲವು

---

1. ಸಂಧಿ 63, ಪದ್ಯ 38.

ಸುಮಾರು (1430) ಆಗಬಹುದು. ಶಾಂತಲಿಂಗದೇಶಿಕನು (1672) ತನ್ನ ಭೈರವೇಶ್ವರಕಾವ್ಯದ ಕಥಾಸೂತ್ರರತ್ನಾಕರದಲ್ಲಿ ಈ ಕವಿಯ ವಿಷಯವಾಗಿ ಹೀಗೆ ಬರೆದಿದ್ದಾನೆ:—

ಮಗ್ಗೆಯೆಂಬ ಪುರದಲ್ಲಿ ಮಾಯಿದೇವಾಚಾರ್ಯಪ್ರಭುಗಳು ವಿಶೇಷಾರ್ಥವನು ಭಾವಸೂತ್ರವಂ ಕಲ್ಪಿಸಿ ಪ್ರಭುಗೀತಿ ಷಟ್ಪದರೂಪವಾದ ಏಕೋತ್ತರಶತಸ್ಥಲವಂ ನಿರೂಪಿಸಿ ಭಕ್ತಿಜ್ಞಾನವೈರಾಗ್ಯಸ್ವರೂಪಮಾದ ಶತಕತ್ರಯಪ್ರಬಂಧಮಂ ಪೇಳಿ ಷಟ್ಸ್ಥಲಗದ್ಯಮಂ ನಿರೂಪಿಸಿ ಕುಮತವಿಭೇದಿ ಷಟ್ಸ್ಥಲಬ್ರಹ್ಮವಾದಿಯೆಂದು ಹೊಗಳಿಸಿಕೊಳ್ಳುತ್ತಿರಲು ವೆಂಕಟಪತಿರಾಯನಳಿಯನು ಶ್ರೀರಂಗರಾಯನು ನಾರಸಿಂಹಪುರಕ್ಕೆ ವಾದಕ್ಕೆ ಕರಸಲು ಬಂದು ಜಯಸ್ತಂಭವನು ನೆಟ್ಟು ಹೋದರು. ಐಪುರದ ಸೋಮನಾಥನೆಂಬ ತಮ್ಮಿಷ್ಟಲಿಂಗದಲ್ಲಿ ಐಕ್ಯವಾದರು.

ಪ್ರೌಢದೇವರಾಯನಿಗೂ ವೆಂಕಟಪತಿರಾಯನಿಗೂ ಸುಮಾರು 200 ವರ್ಷ ಅಂತರವಿರುವುದರಿಂದ ಶಾಂತಲಿಂಗದೇಶಿಕನು ಹೇಳಿರುವ ದೊರೆಯ ಹೆಸರು ತಪ್ಪಾಗಿರಬೇಕು.

ಸಿದ್ಧನಂಜೇಶನು (ಸು. 1650) ತನ್ನ ಗುರುರಾಜಚಾರಿತ್ರದಲ್ಲಿ—ಮಗ್ಗೆಯಮಾಯಿದೇವಂ ಲಿಂಗವಂತರಿಗೆ ನರಕವಿಲ್ಲೆಂದು ವಿದ್ಯಾನಗರದಲ್ಲಿ ನೆಟಲ್ಲಿಲ್ಲದ ಜಯಸ್ತಂಭವಂ ನಿಲಿಸಿದಂ—ಎಂದು ಹೇಳಿದ್ದಾನೆ. ಇದೇವಿಷಯವನ್ನು ವಿರಕ್ತತೋಂಟದಾರ್ಯನೂ (ಸು. 1560) ತನ್ನ ಪಾಲ್ಕುರಿಕೆಸೋಮೇಶ್ವರಪುರಾಣದಲ್ಲಿ ಹೇಳಿದ್ದಾನೆ.

ವೀರಶೈವಗ್ರಂಥಗಳಲ್ಲಿ ಈ ಕವಿಯನ್ನು ಪ್ರಭು, ವಿಭು ಎಂದು ವಿಶೇಷಿಸಿ ಹೇಳಿರುವುದರಿಂದ ಈತನು ದೊಡ್ಡ ಪದವಿಯಲ್ಲಿದ್ದಂತೆ ತೋರುತ್ತದೆ.

ಇವನ ಗ್ರಂಥಗಳಲ್ಲಿ

### ಶತಕತ್ರಯ

ಇದು ಶಿವಾಧವಶತಕ, ಶಿವಾವಲ್ಲಭಶತಕ, ಐಪುರೀಶ್ವರಶತಕ ಎಂಬ ಮೂರು ಶತಕಗಳನ್ನು ಒಳಕೊಂಡಿದೆ. ಈ ಶತಕಗಳು ವೃತ್ತದಲ್ಲಿ ಬರೆದಿವೆ; ವೀರಶೈವಸಿದ್ಧಾಂತಕ್ಕೆ ಅನುಸಾರವಾಗಿ ಜ್ಞಾನ ಭಕ್ತಿ ವೈರಾಗ್ಯಗಳನ್ನು ಬೋಧಿಸುತ್ತವೆ. ಇವಕ್ಕೆ ವಿರಕ್ತತೋಂಟದಾರ್ಯನು (ಸು. 1560) ಒಂದು ವ್ಯಾಖ್ಯಾನವನ್ನು ಬರೆದಿದ್ದಾನೆ.

ಈ ಶತಕಗಳಲ್ಲಿ

### ಶಿವಾಧವಶತಕ.

ಇದರಲ್ಲಿ 101 ವೃತ್ತಗಳಿವೆ; ಪ್ರತಿಪದ್ಯವೂ ಶಿವಾಧವ ಎಂದು ಮುಗಿಯುತ್ತದೆ. ಆರಂಭದಲ್ಲಿ ಬಸವ, ಚೆನ್ನಬಸವ, ಪ್ರಭುದೇವ ಇವರುಗಳ ಸ್ತುತಿ ಇದೆ. ಈ ಗ್ರಂಥವನ್ನು "ಷಟ್ಸ್ಥಲಾತ್ಮಕವಿಶಿಷ್ಟಮಹತ್ತರಭಕ್ತಿಯೋಗವಿದ್ಯಾಪರಮಾರ್ಥತತ್ವಮಯಮಪ್ಪ ಲಸಚ್ಛತಕಪ್ರಬಂಧಂ" ಎಂದ ಕವಿ ವಿಶೇಷಿಸಿ ಹೇಳಿದ್ದಾನೆ. ಇದರಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ—

ನೋಡದಮುನ್ನ ದರ್ಪಣವ ದರ್ಪಣಭಾವಮದುಂಟು ವಿಭ್ರಮಂ |
ಗೂಡಿ ವಿರಾಜಿಸುತ್ತಭಿಮುಖಾಸ್ಪದಮಾದ ನಿಜಸ್ವರೂಪಮಂ ||
ನೋಡಿದನಂತರಂ ಮರಳಿ ದರ್ಪಣಭಾವಮದುಂಟೆ ತತ್ವಮಂ |
ನೋಡದಮುನ್ನ ಮಾಯೆ ಬೞಿಕೆಲ್ಲಿಯ ಮಾಯೆ ಬಿಡಾ ಶಿವಾಧವಾ ||

ಲಿಂಗಮೆ ತತ್ಪದಂ ತ್ವಮಿತಿಶಬ್ದಪದಂ ವಿಮಳಾಂಗಮಾದ್ವಿಧಾ |
ಸಂಗಮಸಿಪ್ರಮಾಣಪದಮೆಂದು ವಿವೇಕಪರಾನುಭೂತಿಯಿಂ ||
ದಂ ಗುರು ಪೇೞ್ದ ತತ್ವಮಸಿವಾಕ್ಯಪದಾರ್ಥಮನಿಂತು ಯೋಚಿಪಾ |
ತಂಗುೞಿದಾಗಮಂ ಬಯಲ ಮಾತಿನ ಮಾಲೆ ಕಣಾ ಶಿವಾಧವಾ ||

ಸ್ಫಟಿಕಮಣಿ ಸ್ವಭಾವವಿಮಲಂ ಪರಮಾರ್ಥದಿನೀಕ್ಷಿಪಲ್ಲಿ ಸಂ |
ಘಟಿಸಿದುಪಾಧಿಯಿಂ ಮಲಿನವಾಸನೆಯಾದೊಡೆ ದೋಷಮೇಂ ಪರಿ ||
ಸ್ಫುಟತರಚಿತ್ಪ್ರಕಾಶಘನಮೂರ್ತಿಯೆನಿಪ್ಪ ಶಿವಾತ್ಮಯೋಗಿಯಂ |
ಪಟುಬಹಿರಾವೃತಪ್ರಚುರಸಂಸ್ಸೃತಿ ಪೊರ್ದಿದೊಡೇಂ ಶಿವಾಧವಾ ||

---

### ಶಿವಾವಲ್ಲಭಶತಕ

ಇದರಲ್ಲಿ 103 ವೃತ್ತಗಳಿವೆ; ಪ್ರತಿಪದ್ಯವೂ ಶಿವಾವಲ್ಲಭ ಎಂದು ಮುಗಿಯುತ್ತದೆ. ಆರಂಭದಲ್ಲಿ ಐಪುರದ ಸೋಮೇಶ್ವರದೇವರ ಸ್ತುತಿಯೂ, ಬಸವ, ಚೆನ್ನಬಸವ, ಪ್ರಭುದೇವ ಇವರುಗಳ ಸ್ತುತಿಯೂ ಇವೆ. ಇದರಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ಮಲಮೂತ್ರಕ್ರಿಮಿಮಾಂಸಶೋಣಿತಮಯಾಪೂತಾಂಗಮಂ ಪೂತನಿ |
ರ್ಮಲತೀರ್ಥೋದಕದೊಳ್ ಮುೞುಂಗಿಸಿ ವೃಥಾ ತತ್ತೀರ್ಥಮಂ ದುಷ್ಟದು ||

ಜಾಲಮಂ ಮಾಡಿ ವಿಮೋಹದಿಂದಕಟ ಪುಣ್ಯಕ್ಕೋಸುಗಂ ಪಾಪಮಂ |
ವಿಲಸದ್ಭಕ್ತಿವಿಶುದ್ಧಿಹೀನಭವಿಗಳ್ ಮಾಳ್ಪರ್ ಶಿವಾವಲ್ಲಭಾ ||
ಮೊದಲಿಲ್ಲೆಂದೆಲೆ ಕರ್ಮಮಂ ಬಱಿದೆ ಮತ್ತುಂಟೆಂದು ಮತ್ತಂತದ |
ಕ್ಕಿದುಪಾಯಂ ಪರಿಹಾರಮೆಂದು ಬಱಿದೊಂದಂ ಮಾಡಿ ಮತ್ತಾಗಳಂ ||
ತದು ಹೋಯಿತ್ತು ವಿಮುಕ್ತರೆಂದು ಬಱಿದೇ ತಮ್ಮಲ್ಲಿ ತಾವೇ ವಿಮೋ |
ಹದ ಸಂಕಲ್ಪದ ಕರ್ಮಿಗಳ್ ಗೆಲಿಹುವರ್ ನೋಡಾ ಶಿವಾವಲ್ಲಭಾ ||
ಪರೆಯೇ ಮಾನಸಭಕ್ತಿ ಚಾಕ್ಷುಷಪದಂ ಪಶ್ಯಂತಿಯೇ ವಾಚಿಕ |
ಸ್ಫುರಣಂ ಮಧ್ಯಮೆಯೇ ಗುರೂಕ್ತಿಮತದಿಂ ಸತ್ಕಾಯಿಕಂ ಭಕ್ತಿ ವೈ ||
ಖರಿಯೇ ನೋಱ್ಪೊಡದಿಂತು ನಾಲ್ಕುತೆಱನಾಗಿರ್ಕುಂ ಮನಶ್ಚಕ್ಷುರು |
ತ್ತರವಾಕ್ಕಾಯಚತುರ್ವಿಧಪ್ರಣಿಧಿಯೊಳ್ ತಾನೇ ಶಿವಾವಲ್ಲಭಾ ||

---

ಐಪುರೀಶ್ವರಶತಕ

ಇದರಲ್ಲಿ 113 ವೃತ್ತಗಳಿವೆ; ಪ್ರತಿಪದ್ಯವೂ ಮಹದೈಪುರೀಶ್ವರಾ ಎಂದು ಮುಗಿಯುತ್ತದೆ. ಆರಂಭದಲ್ಲಿ ಐಪುರೀಶ್ವರಸ್ತುತಿ ಇದೆ. ಇದರಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ.—

ಅಱಿದಪೆನೆಂಬವಂಗಱಿಯಬಾರದು ನಿನ್ನ ನಿಜಪ್ರಯತ್ನದಿಂ |
ದಱಿದಪೆನೆನ್ನದಂಗಱಿಯಬರ್ಪುದು ನೀಂ ಕೃಪೆಮಾಡೆ ಚೋದ್ಯಮೇ ||
ನಱಿಸುವವಂಗೆ ಸಿಲ್ಕದು ನಿಧಾನಮಯತ್ನಪರಂಗೆ ಭಾಗ್ಯದಿಂ |
ದಱಿಸದೆ ಸಿಲ್ಕುವಂತೆ ಪರಮಪ್ರಭುವೇ ಮಹದೈಪುರೀಶ್ವರಾ ||
ಕ್ಷೀರಸಮುದ್ರಸನ್ನಿಧಿಯೊಳಿರ್ದು ಪಿಪಾಸಿತನಾಗಿ ಭೂಮಿಯಂ |
ಹಾರೆಯನಾಂತಗುಳ್ವವನೊಲಾಯ್ತು ಸಮಸ್ತಸುಖೈಕಸಿದ್ಧಿವಿ ||
ಸ್ತಾರಕನಪ್ಪ ನಿನ್ನನುಪದಾವಿಸದನ್ಯಮನುಷ್ಯಮಾತ್ರಮಂ |
ಹಾರುವ ಬುದ್ಧಿಯೆನ್ನ ಪರಮಪ್ರಭುವೇ ಮಹದೈಪುರೀಶ್ವರಾ ||
ತನ್ನ ಸತೀಸುತಾನುಚರಬಂಧುಜನಂಗಳುಮಿನ್ನು ಮತ್ತೆ ಮಿ |
ಕ್ಕನ್ಯರುಮಾತ್ಮದೇಹಕರಣಾದಿಗಳುಂ ಸಲೆ ತಾನುಮೆಲ್ಲರುಂ ||
ನಿನ್ನವರೆಂದು ನಿನ್ನೊಡವೆಯೆಂದು ನಿಜೇಶ್ವರಪೂಜೆಗೆಯ್ವವಂ |
ಧನ್ಯನದೀಗ ಪೂಜೆ ಪರಮಪ್ರಭುವೇ ಮಹದೈಪುರೀಶ್ವರಾ ||

ಇವನ ಇತರಗ್ರಂಥಗಳು ನಮಗೆ ದೊರೆತಿಲ್ಲ.

## ಗುರುಬಸವ. ಸು. 1430

ಈತನು ಶಿವಯೋಗಾಂಗಭೂಷಣ, ಸದ್ಗುರುರಹಸ್ಯ, ಕಲ್ಯಾಣೇಶ್ವರ, ಸ್ವರೂಪಾಮೃತ, ವೃಷಭಗೀತೆ, ಅವಧೂತಗೀತೆ, ಮನೋವಿಜಯಕಾವ್ಯ ಈ ಗ್ರಂಥಗಳನ್ನು ಬರೆದಿದ್ದಾನೆ. ಗುರುಬಸವಾರ್ಯರ ವಚನ ಎಂಬ ಹಾಡಿನರೂಪವಾದ ಒಂದು ಗ್ರಂಥವು ದೊರೆಯುತ್ತದೆ. ಇದೂ ಏತತ್ಕವಿಕೃತವಾಗಿರಬಹುದೋ ಏನೋ ತಿಳಿಯದು.

ಇವನು ವೀರಶೈವಕವಿ. ಮನೋವಿಜಯಕಾವ್ಯದ ಕೊನೆಯ ಗದ್ಯದಲ್ಲಿ "ಶಿವಯೋಗಿಜನಸೇವಿತಚರಣಾರವಿಂದ ಷಟ್ಸ್ಥಲಜ್ಞಾನಪ್ರಭಾಪುಂಜರಂಜಿತಾಂತರಂಗ ವೀರಶೈವಮತಸ್ಥಾಪನಾಚಾರ್ಯನಪ್ಪ ಶ್ರೀಮದ್ಗುರುಬಸವೇಶ್ವರಂ" ಎಂದು ಹೇಳಿರುವುದರಿಂದ ಈತನು ಬಹಳಪ್ರಸಿದ್ಧನಾದ ವೀರಶೈವಗುರುವಾಗಿದ್ದಂತೆ ತಿಳಿಯುತ್ತದೆ. ಚೆನ್ನಬಸವಪುರಾಣದ 63 ನೆಯ ಸಂಧಿಯ 15,16,35ನೆಯ ಪದ್ಯಗಳಿಂದ ಇವನು ವಿಜಯನಗರದ ರಾಜನಾದ 2ನೆಯ ಪ್ರೌಢದೇವರಾಯನ (1419-1446) ಕಾಲದಲ್ಲಿ ಇದ್ದಂತೆ ತಿಳಿಯಬರುತ್ತದೆ. ಇವನ ಕಾಲವು ಸುಮಾರು 1430 ಆಗಬಹುದು.

### ಇವನಗ್ರಂಥಗಳು

ಇವನ 7 ಗ್ರಂಥಗಳು ಸಪ್ತಕಾವ್ಯವೆಂದು ಪ್ರಸಿದ್ಧವಾಗಿವೆ. ಎಲ್ಲವೂ ವೀರಶೈವವೇದಾಂತಪ್ರತಿಪಾದಕವಾಗಿಯೂ ಗುರುಶಿಷ್ಯಸಂವಾದರೂಪವಾಗಿಯೂ ಇವೆ. ಒಟ್ಟು 1243 ಪದ್ಯಗಳಿವೆ.

ಈ ಗ್ರಂಥಗಳಲ್ಲಿ

### 1 ಶಿವಯೋಗಾಂಗಭೂಷಣ

ಇದು ಪರಿವರ್ಧಿನೀ ಷಟ್ಪದಿಯಲ್ಲಿ ಬರೆದಿದೆ; ಸಂಧಿ 6, ಪದ 278. ಈ ಗ್ರಂಥದಲ್ಲಿ ಯೋಗಾಭ್ಯಾಸಕ್ರಮ, ಯೋಗಾಸನ, ಮುಂತಾದ ವಿಷಯಗಳು ಹೇಳಿವೆ. ಇದರ ಉತ್ಕೃಷ್ಟತೆಯನ್ನು ಕವಿ ಈ ಪದ್ಯದಲ್ಲಿ ಹೇಳಿದ್ದಾನೆ:

ಶ್ರುತಿವನಿತೆಯ ಮುಖಗನ್ನಡಿ ಶಾಸ್ತ್ರ | ಪ್ರತತಿಯ ನಿಲುಕಡೆ ತರ್ಕಂಗಳ ಸ |
ನ್ಮತ ನಿಖಿಲಾಗಮತತ್ವರಹಸ್ಯಂಗಳ ಘನಚೇತನವು ||
ಸ್ಮೃತಿಗಳ ಮುದ ಪೌರಾಣಂಗಳ ನಿಜ | ಮತಿಯಖಿಲಾದ್ಯರ ವಚನಂಗಳ ನಿ |
ಶ್ಚಿತಮತವೀಯೋಗಾಂಗವಿಭೂಷಣವೆಂದನು ದೇಶಿಕನು ||

ಈ ಗ್ರಂಥಕ್ಕೆ ಶಿವಯೋಗಾಂಗಭೂಷಣ ಎಂಬ ಹೆಸರು ಬರಲಿಕ್ಕೆ ಕಾರಣವು ಈ ಪದ್ಯದಲ್ಲಿ ಹೇಳಿದೆ—

ಸತ್ಯ ವಿರತಿ ಗತಲಾಲಸನಿಶ್ಚಲ | ಯುಕ್ತಿ ಮನೋಮತನಿರಸನಚೇಷ್ಟಾಖ |
ನಿತ್ಯಸ್ವಪ್ರತ್ಯಕ್ಷತೆಸಂತೃಪ್ತಿಗಳೆ ಯಮಾದಿಗಳು ||
ಅತ್ಯುತ್ಸಾಹದೊಳಿವನನುದಿನ ನಿಜ | ಭಕ್ತಿಸಹಿತ ಭೂಷಿಸಿ ಶಿವನೊಳು ಸಂ |
ವ್ಯಕ್ತದಲೇ ಬೆರಸುವ ಕಾರಣವಿದು ಯೋಗಾಂಗವಿಭೂಷಣವು ||

ಪದ್ಯಗಳು ಪ್ರಾಯಿಕವಾಗಿ ಎಂದನು ದೇಶಿಕನು, ಹೇಳಿದ ದೇಶಿಕನು, ಎಂದು ಮುಗಿಯುತ್ತವೆ. ಗ್ರಂಥಾಂತ್ಯದಲ್ಲಿ ಕೆಲವು ಅನುಷ್ಟುಪ್‌ಶ್ಲೋಕಗಳೂ ಇವೆ. ಈ ಗ್ರಂಥದಿಂದ ಒಂದೆರಡು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ—

ಇಱುಹೆಯು ಕೋಶವನಬುಜಭವಾಂಡವ|ನರಣಿಯು ಮೇರುಗಿರಿಯು ದಿಕ್ಪುಂಜವ |
ಕರಸಂಪುಟಿಕೆಯನಂಬುನಿಧಿಯ ಚುಲುಕೋದಕಮಾತ್ರಕವಂ ||
ತರಣಿಯು ಖದ್ಯೋತವ ಗೋಷ್ಪದಮಂ|ಧರಣಿಯು ಸಮವೆಂದೆನಿಸುವಮಹಿಮೆಯು |
ಹರವರಿಯಿಂ ಸುೞಿದಾಡುವನಿಳೆಯೊಳಗೆಂದನು ದೇಶಿಕನು ||
ಹಸಿಯದೆ ಹುಸಿಯದೆ ಕುಸಿಯದೆ ನೆಸೆಯದೆ | ಹಸಗೆಡದಖಿಳರೊಳಗೆ ಕಾರುಣ್ಯಂ |
ಮಸುಳಿಸದುದ್ರೇಕಿಸದೆ ವೃಥಾ ದೈನ್ಯದಿ ವಿಷಯಂಗಳೊಳು ||
ಪಸರಿಸಿ ಹರಿದಾಡದೆ ಲೌಕಿಕರಿಂ | ವಸನಾಗಿರದೆ ಮನಸ್ಸಂಸಾರದ |
ಬೆಸುಗೆಯುೞಿದು ಸುೞಿಯುತ್ತಿಹನಿಳೆಯೊಳಗೆಂದನು ದೇಶಿಕನು ||

---

## 2 ಸದ್ಗುರುರಹಸ್ಯ

ಇದು ಭಾಮಿನೀಷಟ್ಪದಿಯಲ್ಲಿ ಬರೆದಿದೆ; ಉಪದೇಶ 9, ಪದ್ಯ 237. ಈ ಗ್ರಂಥದ ವಿಷಯವಾಗಿ ಕವಿ ಹೀಗೆ ಬರೆದಿದ್ದಾನೆ—

ವೇದದಂತುಟಿದಲ್ಲ ಶಾಸ್ತ್ರದ | ಹೋದ ಹೊಲಬಲ್ಲೆಲೆ ಪುರಾಣದ |
ಗಾದೆಗಳ ಜಂಜಡದ ಜಾಡ್ಯದ ಜೆನುಗು ತಾನಲ್ಲ ||
ಆದರಿಸಿ ಕೇಳುವಡೆ ಪರಮಸ | ಮಾಧಿಶಾಂಭವಸತ್ಯಸನ್ಮ್ಯ |
ಗ್ಬೋಧಲೀಲಾಲೋಲಶೀಲಾನ್ವಯರಹಸ್ಯವಿದು ||

ಗ್ರಂಥಾದಿಯಲ್ಲಿ ಬಸವಸ್ತುತಿ ಇದೆ. ಇದರಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ಬಸವಸ್ತುತಿ

ಘಟವನಳಿದಾಕಾಶದಂತುಟು | ಪಟವನಳಿದಿಹ ಚಿತ್ರದಂತುಟು |
ಸಟೆಯನಳಿದುರುಸತ್ಯದಂತುಟುಪಾಧಿಯಂ ಪಱಿದು ||
ನಟಿಸಿ ತೋಱುವ ದೀಪದಂತುಟು | ಕುಟಿಲಮಾಯೆಯನಳಿದು ನಿಜದೊಳ್ |
ಘಟಿಸಿದಮಲಬ್ರಹ್ಮಗುರುಬಸವಂಗೆ ಶರಣೆಂಬೆ ||

ಶಿಷ್ಯನಿಗೆ ಉಪದೇಶ

ನೊಂದು ತಾಪತ್ರಯಗಳಿಂದವೆ | ಮುಂದುಗೆಟ್ಟಿಹ ಜಗವ ಕಾಣುತ |
ಹಂದೆಯಂ ಹಾವಡರಿದಂತವಿವೇಕದಿಂ ತನ್ನ ||
ಬೆಂದ ತುಂದನಿಮಿತ್ತ ಪೆರಱಿಂ | ಕೊಂದು ಕೂಗಿ ನಿರರ್ಥ ನಿರಯದೊ |
ಳೊಂದಬೇಡೆಂದ್ಯೆದೆ ಪೇಳಿದ ದೇಶಿಕೋತ್ತಮನು ||
ಕರ್ಮಕಪಟವ ನಂಬಿ ಪರಮನ | ಮರ್ಮವಱಿಯದೆ ವಾಗ್ವಿಲಾಸದಿ |
ಬೊಮ್ಮವಾರ್ತೆಯ ನುಡಿದು ಶಿಶ್ನೋದರಪರಾಯಣದ ||
ಧರ್ಮದಲಿ ನೀ ನಡೆದು ಹಮ್ಮಿನ | ಬಿಮ್ಮು ಮಿಗೆ ತಲೆಗೇಱಿ ಮಗನೇ |
ಗಮ್ಮನಿಱಿಯಲ್ಬೇಡ ನಿರಯದೊಳೆಂದ ದೇಶಿಕನು ||

---

## 3. ಕಲ್ಯಾಣೇಶ್ವರ

ಇದು ಪರಿವರ್ಧಿನೀಷಟ್ಪದಿಯಲ್ಲಿದೆ; ಪದ್ಯ 102. "ಕಲ್ಯಾಣೇಶ್ವರನೆನಿಸುವ ಬಸವನ ಕಾರುಣ್ಯದಿಂ ಭಾಪಿಸುತಿಹುದೆಂದನು ದೇಶಿಕನು" ಎಂಬುದರಿಂದ ಈ ಗ್ರಂಥದ ಕಲ್ಯಾಣೇಶ್ವರ ಎಂಬ ಹೆಸರಿಗೆ ಕಾರಣವು ಊಹಿಸಬಹುದಾಗಿದೆ. ಇದರಲ್ಲಿ-ಬಸವನ ಸಹಚರಿಯಾದ ನಂದಿನಿ ತನ್ನ ಕಿಂಕರನಾದ ವಿಚಿತ್ರಕನೆಂಬ ಗಣೇಶ್ವರನು ಸುಜ್ಞಾನಚರಿತ್ರನಾಗಲು ಮಾಡಿದ ಜ್ಞಾನಬೋಧೆಯನ್ನು ದೇಶಿಕನು ಶಿಷ್ಯನಿಗೆ ನಿರೂಪಿಸಿದಂತೆ ಹೇಳಿದೆ. ಗ್ರಂಥಾವತಾರದಲ್ಲಿ ಬಸವಸ್ತುತಿಯೂ ಬಸವಸಹಚರಿಯಾದ ನಂದಿನಿಯ ಸ್ತುತಿಯೂ ಇವೆ. ಇದರಿಂದ ಒಂದೆರಡು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ಪ್ರಳಯಾರ್ಕನ ದೀಪ್ತಿಯನೊಳಕೊಂಡು|ಜ್ವಲಿಸುವ ಲಿಂಗದ್ಯುತಿ ಸರ್ವಾಂಗವ|
ಬಳಸಿ ಮಹಾತೇಜಃಪುಂಜೀಕೃತವಾಗಿ ಬಹಿಷ್ಕರಿಸಿ ||
ಮಲೆಯುತ ದಳವೇಱುತ ಥಳಥಳಿಸುತ|ಘುಳುಘುಳಿಸುತಘೂರ್ಮಿಸುತ ಸಮಸ್ತವ|
ಸುಱಿಸುಱಿಗೊಳುತಿಹುದೀಗ ಮಹಾಸಿದ್ಧಿಗೆ ಕುಱುಹಱಿಯೆಂದ ||
ಆಡುತಲನುಭವದೊಳು ಗುರುವಚನವ|ಪಾಡುತ ಸುಮನೋದೃಷ್ಟಿಯೊಳೊಲವಿಂ |
ನೋಡುತ ಲಿಂಗವ ಚಿತ್ತಾಂತರ್ಗತವಹ ಬಹುಬಾಧೆಗಳಂ ||
ಝೂಡಿಸಿ ಸತ್ಯಾನಂದಾಂಬುಧಿತುಳು | ಕಾಡುತ ನಿಜವಿಶ್ರಾಂತಿಯೊಳೀ ಪರಿ |
ರೂಢಿಯೊಳಗೆ ನಿರುಪಮಸುಖದಿಂದಿಹುದೆಂದನು ದೇಶಿಕನು ||

---

## 4. ಸ್ವರೂಪಾಮೃತ

ಇದು ಭಾಮಿನೀಷಟ್ಪದಿಯಲ್ಲಿದೆ; ಪರಿಚ್ಛೇದ 3, ಪದ್ಯ 77. ಗ್ರಂಥಾದಿಯಲ್ಲಿ ಬಸವಸ್ತುತಿ ಇದೆ. ಇದರಿಂದ ಒಂದೆರಡು ಪದ್ಯಗಳನ್ನುದ್ಧರಿಸಿ ಬರೆಯುತ್ತೇವೆ—

ತೆಗೆದು ವಾಯುಗಳಂ ಸದಾತ್ಮನು | ಬಿಗಿದು ಧಾತುಗಳಂ ಶರೀರವ |
ನಗಲದಿರುತಿರಲಿಹುದದಲ್ಲದಿರಲ್ ಕ್ಷಣಾರ್ಧದೊಳು ||
ಹಗಲು ನಾಯ್ನರಿನೋಣಗಳೀ ಕಾ | ಗೆಗಳು ನೊರಜುಗಳೀ ಶರೀರವ |
ಸೊಗಸದೊಗಡಿಸದೆಳಸುವುವೆ ನೀಂ ತಿಳಿದು ನೋಡೆಂದ ||
ವಿಷಯತಳಿರಿಂ ತಳಿತು ಕೊರ್ವಿದ | ದಶವಿಧೇಂದ್ರಿಯಶಾಖೆಗಳನೆ |
ಗ್ಗೆಸೆಯೊಳಿಟ್ಟುದ್ಯಾನಮಾಗಿ ಶರೀರಭೂರುಹವು ||
ವ್ಯಸನಪುಷ್ಪದಿ ಕರ್ಮಫಲದಿಂ | ದೆಸೆದಿರಲು ತತ್ಫಲವನುಲ್ಲಾ |
ಲಸದಿ ಮಾನಸವಕ್ಕಿ ವಿಸಟಂಬರಿದು ತಿನುತಿಹುದು ||

---

## 5. ವೃಷಭಗೀತೆ

ಇದು ಭೋಗಷಟ್ಪದಿಯಲ್ಲಿ ಬರೆದಿದೆ; ಪದ್ಯ 101. ಪದ್ಯಗಳು ಪ್ರಾಯಿಕವಾಗಿ ಬಾಳ್ವನವ ಕೃತಾರ್ಥನು, ತಿಳಿವನವ ಕೃತಾರ್ಥನು ಎಂದು ಮುಗಿಯುತ್ತವೆ. ಈ ಗ್ರಂಥವು ಬಸವಸ್ತುತಿರೂಪವಾಗಿಯೂ ವೀರಶೈವವೇದಾಂತಪ್ರತಿಪಾದಕವಾಗಿಯೂ ಇದೆ. ಇದರಿಂದ ಒಂದೆರಡು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ಪೞಿಯದಿಹುದೆ ಧರ್ಮ ತನುವ | ಕೆಳೆಯದಿಹುದೆ ಸಿದ್ಧಿ ಚಿತ್ತ |
ವೆಲುಗದಿಹುದೆ ಮುಕ್ತಿ ಮಱೆದು ನುಡಿದ ವಕ್ಕಣೆ ||
ಹೊಳೆಯದಿಹುದೆ ಸತ್ವ ರೋಷ | ದಳೆಯದಿಹುದೆ ಶಾಂತಿ ಕಪಟ |
ವೊಳೆಯದಿಹುದೆ ಸೌಖ್ಯವಿದನು ತಿಳಿಯಲವ ಕೃತಾರ್ಥನು ||
ಶಮದಮಾದಿಗುಣವಿಶಿಷ್ಟ | ವಿಮಲಚಿತ್ರಪುಷ್ಪನಷ್ಟ |
ಮಮತೆಹೀನ ದುಃಖಸುಖಸಮಾನವಾಗಿಯೇ ||
ಭ್ರಮಣಭವವಿಕಾರನಾಟ್ಯ | ವಿಮುಖನಾಗಿ ತನ್ನ ತಾನೆ |
ಸಮವನಱಿದನನ್ಯಸುಖದೊಳಿರ್ಪನವ ಕೃತಾರ್ಥನು ||

## 6. ಅವಧೂತಗೀತೆ

ಇದು ವಿರಕ್ತಿಬೋಧಕವಾದ ಹಾಡಿನ ರೂಪದಲ್ಲಿದೆ; ಹಾಡು 101. ಅಂತ್ಯದಲ್ಲಿ ಅವಧೂತಲಕ್ಷಣವು ಹೇಳಿದೆ ಗ್ರಂಥಾದಿಯಲ್ಲಿ ಬಸವಸ್ತುತಿ ಇದೆ. ಇದರಿಂದ ಒಂದೆರಡು ನುಡಿಗಳನ್ನು ತೆಗೆದು ಬರೆಯುತ್ತೇವೆ—

ಹಸುಗಱಿಯದೆ ಸೊಣಗನು ಮತಿಗೆಟ್ಟು|ಮುಸುರೆಯ ಮಡಕೆಯೊಳಗೆಮೊಗವಿಟ್ಟು|
ದೆಸೆಗಾಣದೆ ಬಾಧೆಗೆ ತನುಗೊಟ್ಟು | ಪೆಸಗೊಳಲಿದು ಸಂಸಾರದ ಗುಟ್ಟು ||
ವಡಬ ಜಡಂ ಗುಣಮಹಿಸಂತಾನ | ಸುಡುವ ವಿಷಂ ಪೀಯೂಷಸಮಾನ|
ಪೊಡೆವ ಸಿಡಿಲ್ ಮಂಜುಳವರಗಾನ | ಮೃಡಗುರುಕರುಣಕಟಾಕ್ಷದ ಭಾನ ||

## 7. ಮನೋವಿಜಯಕಾವ್ಯ

ಇದು ಕುಸುಮಷಟ್ಪದಿಯಲ್ಲಿ ಬರೆದಿದೆ; ಪ್ರಕರಣ 9; ಪದ್ಯ 355. ಈ ಗ್ರಂಥದಲ್ಲಿ—ಸುವಿವೇಕನೆಂಬ ಜ್ಞಾನಿ ಸಂಸಾರಕಲಸಿ ಗುರುವಿಡಿದು ತನ್ನ ನಿಜ ತಾನಾದ ಸಂಗತಿ ಹೇಳಿದೆ. ಇದರ ಉತ್ಕೃಷ್ಟತೆಯನ್ನು ಕವಿ ಈ ಪದ್ಯಗಳಲ್ಲಿ ಹೇಳಿದ್ದಾನೆ—

ಸದುಗುರುಕಟಾಕ್ಷದಿಂ | ದುದಿಸಿದ ನಿಜಾನುಭವ |
ದುದಯದಿಂದಖಿಲಾದ್ಯರನುಮತದೊಳು ||
ವಿದಿತವೇದಾಗಮೋ | ಕ್ತದೊಳುಪನಿಷತ್ತುಗಳೊ |
ಳೊದವಿಸಿದ ಸಮ್ಮತಿಯ ಸಂಗ್ರಹವಿದು ||

ಇದು ಶ್ರುತಿಸ್ಮೃತಿಯ ಸೌ | ಖ್ಯದ ಸುಖಂ ವೇದಾಂತ |
ದೊದವು ನಿಜಶೈವಸಿದ್ಧಾಂತಮತದ ||
ಹೃದಯವಾದ್ಯರ ಕರುಣ | ದುದಯದನುಭವಸಿದ್ಧ |
ವಿದನಱಿವರೀಸುವಿಧದಱಿವಱಿವರು ||

ಗ್ರಂಥಾವತಾರದಲ್ಲಿ ಬಸವಸ್ತುತಿ ಇದೆ. ಬಳಿಕ ಕವಿ ಅಲ್ಲಮ, ಚೆನ್ನಬಸವ, ಮಡಿವಾಳ, ಸಿದ್ಧರಾಮ, ಇವರುಗಳನ್ನೂ ನೂತನಪುರಾತನರನ್ನೂ ಸ್ತುತಿಸಿದ್ದಾನೆ. ಗ್ರಂಥಾತ್ಯದಲ್ಲಿ ಈ ಗದ್ಯವಿದೆ---

ಶ್ರೀಮತ್ಪರಮಪರಮಾನಂದನಿತ್ಯನಿರ್ಮಲನಿರಘನಿರ್ಗುಣನಿರಾವರಣಸಕಲಜಗದ್ಭರಿತಭಕ್ತಜನಮನೋ...........ವಯೋಗಿಜನಸೇವಿತಚರಣಾರವಿಂದ ಷಟ್ಸ್ಥಲಜ್ಞಾನಪ್ರಭಾಪುಂಜರಂಜಿತಾಂತರಂಗ ವೀರಶೈವಮತಸ್ಥಾಪನಾಚಾರ್ಯನಪ್ಪ ಶ್ರೀಮದ್ಗುರುಬಸವೇಶ್ವರಂ ಸಕಲಭಕ್ತಜನಹಿತಾರ್ಥವಾಗಿ ಸುಜ್ಞಾನಿಗಳಿಗಾನಂದಮಪ್ಪ....ಸ್ತಶಿವಯೋಗೀಶ್ವರರಱಿದಾಚರಿಸಲೆಂದು ವೇದಾಗಮೋಪನಿಷತ್ಸಮ್ಮತಿಯಿಂ ನಿರೂಪಿಸಿದ ಮನೋವಿಜಯವೆಂಬ ಪ್ರಕರಣಂ ಪರಿಸಮಾಪ್ತಂ.

ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ---

ಪಿಸುಣತೆಗೆ ಹಿಗ್ಗಿ ಮಿಗೆ | ಕಿಸುಕುಳದೊಳೊಗ್ಗಿ ಸಂ |
ತಸವಟ್ಟು ಕಳವುಹಾದರಹಿಂಸೆಗೆ ||
ಬೆಸಗೆಯ್ದು ನಿಂದೆತಾ | ಮಸಕುಟಿಲಕುಹಕದೊಳ |
ಗೆಸೆದು ಮನವಿನಿಸಱಿಯೊಳ್ ಬೆಸೆದಿರ್ಪುದು ||
ಚಿಪ್ಪಿನೊಡಕಂ ಬೆಳ್ಳಿ | ಯಪ್ಪುದೆಂದದ ಪಿಡಿಯ |
ಲಪ್ಪುದೇ ಭ್ರಾಂತಿಯಾಪುತ್ತಿನೆಡೆಯೊಳ್ ||
ಇರ್ಪ ಸರವಿಯೆ ಸರ್ಪ | ನಪ್ಪುದೆಂದಂಜಿಯಿಂ |
ತಿರ್ಪುದೇ ಸಂಶಯವಿದೆಂದಱಿವುದು ||
ನಳಿನಮಿತ್ರನ ಕಿರಣ | ತಳಿಗೆಯೊಳ್ ಬೆಳಗಲದು |
ತೊಳಗದೇ ಶತಗುಣೋತ್ತರಮದಾಗಿ ||
ಹಱಿವುಂಟೆ ರವಿಗೆ ಸಂ | ಚಳ ತಳಿಗೆಯಿಂದ್ದೈಸೆ |
ತಿಳಿವುದಾಪರಿಯ ಪರಮಾತ್ಮನಿರವಂ ||

ಅಱಿವುಮಱವೆಗಳೆರಡ | ರಱುತದಿಂ ಹುಸಿದಿಟಗ |
ಳೆಱುಬಿಽಂ ನಾನು ನೀನೆಂಬುಭಯದ ||
ಸಱಿಕಿನಿಂ ಮನವೆಂಬು | ದಱಿ ಕುವರ ನೀ ಜಾಗ್ರ |
ದುಱುಸುಪ್ತಿಮಧ್ಯದೊಳ್ ಕನಸಿನಂತೆ ||

## ಬತ್ತಲೇಶ್ವರ. ಸು. 1430

ಈತನು ಒಂದು ರಾಮಾಯಣವನ್ನು ಬರೆದಿರುವಂತೆ ತೋರುತ್ತದೆ. ಈ ಗ್ರಂಥದಲ್ಲಿ ಕೆಲವುಕಡೆ

ಹರಿಕಥೆಗೆ ಸರಿ ಹುಟ್ಟದಿದನಾ | ದರಿಸಿದವರಿಹಪರವ ಗೆಲುವರು |
ಧರೆಗೆ ಸೂಱೆಯಿಸಿತ್ತ ವರಕವಿ ಬತ್ತಲೇಶ್ವರನು ||
ಬಂದನೋಲಗದೊಳಗೆ ವಾನರ | ವೃಂದ ನಲಿನಲಿದಾಡುತಿರಲಾ |
ನಂದದಲಿ ವರವಿತ್ತ ರಘುಪತಿ ಬತ್ತಲೇಶ್ವರಗೆ ||

ಎಂದು ದೊರೆಯುತ್ತದೆ. ಇನ್ನು ಕೆಲವುಕಡೆ ನಿರ್ವಾಣನಾಯಕ, ನಿರ್ವಾಣಲಿಂಗ ಎಂಬ ಅಂಕಿತಗಳು ಇವೆ. ಇವು ಬತ್ತಲೇಶ್ವರ ಎಂಬುದಕ್ಕೆ ಪರ್ಯಾಯಶಬ್ದಗಳಾಗಿರಬಹುದು. ಮುದ್ರಿತವಾಗಿರುವ ನೀತಿಸಾರವೆಂಬ ಗ್ರಂಥದಲ್ಲಿಯ

ವರರುಚಿ ಕಾಳಿದಾಸ ಸುಕುಮಾರಕುಮಾರಕವ್ಯಾಸ ಬಾಣನುಂ |
ಹರಿಹರಸಾರ್ವಭೌಮಕವಿ ರನ್ನನು ರೇಚುಗ ದುರ್ಗಸಿಂಹನುಂ ||
ವರಕವಿಬತ್ತಲೇಶ್ವರನು ರಾಘವನಗ್ಗಳ ರುದ್ರಭಟ್ಟನುಂ |
ತುರಗ ಮಯೂರ ಹಂಪುಗನು ಕುಂತಿಚವುಂಡಿಯರೇ ಕವೀಂದ್ರರು ||

ಎಂಬ ಪದ್ಯದಲ್ಲಿ ಈ ಕವಿಯ ಹೆಸರು ಹೇಳಿದೆ. ಇವನು ವೀರಶೈವಕವಿ. ಗುರುರಾಜಚಾರಿತ್ರದಲ್ಲಿ (ಸು. 1650) ದೇವರಾಯನ (1419-1446) ಆಳಿಕೆಯಲ್ಲಿ ಪಂಪಾಪುರದಲ್ಲಿದ್ದ ಕರಸ್ಥಲದ ನಾಗಲಿಂಗ, ವೀರಣ್ಣೊಡೆಯ ಮುಂತಾದ 101 ವಿರಕ್ತರ ಗೋಷ್ಠಿಯಲ್ಲಿ ಈತನನ್ನೂ ಸೇರಿಸಿರುವುದರಿಂದ ಇವನ ಕಾಲವು ಸುಮಾರು 1430 ಆಗಬಹುದು.

ಪ್ರಹ್ಲಾದಚರಿತ್ರೆಯನ್ನು ಬರೆದ ಚೆನ್ನಿಗನು (ಸು. 1700) ಈತನನ್ನು ಸ್ತುತಿಸಿದ್ದಾನೆ.

## ಚಂದ್ರಕವಿ. ಸು. 1430

ಈತನು ವಿರೂಪಾಕ್ಷಾಸ್ಥಾನ, ಗುರುಮೂರ್ತಿಶಂಕರಶತಕ ಇವುಗಳನ್ನು ಬರೆದಿದ್ದಾನೆ. ಇವನು ವೀರಶೈವಕವಿ. ಇವನಿಗೆ ಚಂದ್ರಶೇಖರ ಎಂಬ ಹೆಸರೂ ಉಂಟು. ಅಷ್ಟಭಾಷೆಗಳಲ್ಲಿ ಪ್ರವೀಣನಾಗಿದ್ದನೆಂದು ಹೇಳಿದೆ; ಈ ಭಾಷೆಗಳು ಅವುವೋ ತಿಳಿಯದು. ವಿಜಯನಗರದ ದೊರೆಯಾದ ವಿಜಯರಾಯನ ಮಗ ಗಜವೇಂಟೆಕಾರ ಪ್ರೌಢದೇವರಾಯನ (1419-1446) ಮಹಾಪ್ರಧಾನ ಗುರುರಾಯನ ಆಜ್ಞಾನುಸಾರವಾಗಿ ಈ ಗ್ರಂಥಗಳನ್ನು ಬರೆದಂತೆ ಹೇಳುವುದರಿಂದ ಕವಿ ಸುಮಾರು 1430 ರಲ್ಲಿ ಇದ್ದಿರಬಹುದು. ತನ್ನ ಕವಿತೆಯ ಉತ್ಕೃಷ್ಟತೆಯನ್ನು ಈ ಪದ್ಯದಲ್ಲಿ ತಿಳಿಸಿದ್ದಾನೆ—

ಅಲರ್ಗಣೆಯಿಂದಿಮ್ಮಡಿ ತಂ | ಬೆಲರಿಂ ಮೂವಡಿ ವಸಂತನಿಂ ನಾಲ್ವಡಿ ಕಾ |
ದಲರಿಂದಯ್ವಡಿ ಮೋಹಿಪು | ದೆಲೆಚಂದ್ರಕವೀಂದ್ರ ನಿನ್ನ ಕನ್ನಡಗಬ್ಬಂ ||

ಇವನ ಗ್ರಂಥಗಳಲ್ಲಿ

### 1. ವಿರೂಪಾಕ್ಷಾಸ್ಥಾನ.

ಇದು ಚಂಪೂರೂಪವಾಗಿದೆ; ಪಂಪೆಯ ವಿರೂಪಾಕ್ಷನ ಆಸ್ಥಾನವನ್ನು ವರ್ಣಿಸುವ ಗ್ರಂಥ. ಈ ಗ್ರಂಥರಚನೆಗೆ ಕಾರಣವನ್ನು ಕವಿ ಈ ರೀತಿಯಾಗಿ ಹೇಳಿದ್ದಾನೆ—

ಕುಂತಳದೇಶಸೀಮಂತಮಣಿಯಾದ ವಿಜಯನಗರದೊಳ್ ವಿಜಯನೃಪನ ಮಗಂ ದೇವನೃಪತಿಯಾಳ್ದಂ. ಆತಂಗೆ ಪ್ರೌಢದೇವರಾಯನೆಂದುಂ ಪೆಸರ್. ಗಜವೇಂಟೆಕಾಱಬಿರುದಪ್ರಸಿದ್ಧನಾದ ಆ ಪ್ರೌಢಪ್ರತಾಪದೇವರಾಯನ ಸಭಾಸರೋಜವಾಸರೇಂದ್ರನುಂ, ಅತ್ರಿಮುನಿಪವಿತ್ರಗೋತ್ರಸುಧಾರ್ಣವಪೂರ್ಣಚಂದ್ರನುಂ, ಅರಸಾಮಾತ್ಯತನೂಜನುಂ, ಸಕಲಕಲಾಕುಶಲನೂತನಭೋಜರಾಜನುಂ, ರಾಯಭಂಡಾರಿ ನಾರಾಯಣಬಿರುದಾಂಕನುಂ ಎನಿಪ ಗುರುರಾಯಮಹಾಪ್ರಧಾನಂ ಎನ್ನಂ ನೋಡಿ ಚಂದ್ರಶೇಖರಕವೀಶ್ವರ ನೀಂ ನೆಗೞ್ದ ಅಷ್ಟಭಾಷೆಗಳ್ಗೆ ಆಗರಮಾದೆ; ಕನ್ನಡದ ಬಿನ್ನಣಮಂ ಪಂಪೆಯಾಳ್ದನ ಓಲಗಮಂ ರಚಿಸಿ ತೋಱುವುದು ಎನಲು ಈ ಗ್ರಂಥಮಂ ಪೇೞ್ದೆಂ. ಈ ಕೃತಿರತ್ನಮಂ ಗುರುರಾಯಮಹಾಪ್ರಧಾನಂ ಪಂಪಾರಮಣನ ಚರಣಾಂಬುಜಕರ್ಪಿಸಿದಂ.

ಗ್ರಂಥಾವತಾರದಲ್ಲಿ ಪಂಪೆಯ ವಿರೂಪಾಕ್ಷನ ಸ್ತುತಿಯಿದೆ. ಬಳಿಕ ಕವಿ ಗಣೇಶ, ತಿಟ್ಟವಾದೇವಿ ಇವರುಗಳನ್ನು ಹೊಗಳಿದ್ದಾನೆ.

ಇವನ ಬಂಧವು ಪ್ರೌಢವಾಗಿಯೂ ಮನೋಹರವಾಗಿಯೂ ಇದೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ—

**ಪುಷ್ಪವಾಟಿ**

ಋತುಗಳ ಸೆಜ್ಜೆ ತುಂಬಿಗಳ ಜೇವಣಶಾಲೆ ಮನೋಜನಸ್ತ್ರಸಂ |
ತತಿಯ ಸಮುದ್ಭವಸ್ಥಳಿ ಕುಮಾರಸಮೀರಕನಾಡುವಂಗಳಂ ||
ರತಿಲತಿಕಾಗೃಹಂ ಸೆಗಟ್ಟಿ ಕೆಂಪಿನದೊಂದು ಕೆರಂಡಮೆನ್ನದಿ |
ನ್ನತಿಶಯಮಾಗಿ ಬಣ್ಣಿಸುವನೆಲ್ಲಿಯುನಲ್ಲಿಯ ಪುಷ್ಪವಾಟಿಯಂ ||

**ಸಂಗೀತ**

ತಿಂಗಳ ಬಿಂಬಮಂ ಹಿಡಿದು ಹಿಂಡೆ ಪಳಚ್ಚನೆ ಸೋರ್ವ ಸೋನೆಯಂ |
ತಿಂಗಡಲಿಂ ಪೊದಟ್ಟಿಮದರ್ನೆತ್ತಿದೊಡೊಯ್ಯನೆ ಸೋರ್ವ ಸೋನೆಯಂ ||
ತಂಗಜನಿಕ್ಷುಕಾರ್ಮುಕವನೇಱಿಸೆ ಜುಮ್ಮನೆ ಸೋರ್ವ ಸೋನೆಯಂ |
ತೇಂ ಗಡ ಸೀಯನುಣ್ಮೆದುದೊ ಗೇಯದ ಮೆಲ್ಲುಲಿ ಜಾಣಗಾಣನ ||

**ಕೊಳಲು**

ಮದನನ ಕರ್ವುವಿಲ್ಗೆ ತಿರುವಾದೆಳದುಂಬಿಯ ಝುಂಕೃತಸ್ವನಂ |
ಮದನನ ಬೀರಮಂ ಬೆಳಪ ಮೋಹನಬಾಣದ ಭೀಂಕೃತಾರವಂ ||
ಮದನನ ಮುಂದೆ ಬರ್ಪ ರತಿದೇವಿಯ ನೂಪುರಶಿಂಜಿತಂ ದಿಟ |
ಕ್ಕಿದು ಪೆಱತಲ್ಲೆಸಿಪ್ಪ ತೆಱದಿಂ ಪೊಱಪೊಣ್ಮೆತು ವಾಸದಿಂಚರಂ ||

---

## 2. ಗುರುಮೂರ್ತಿಶಂಕರಶತಕ

ಇದು ವೃತ್ತದಲ್ಲಿ ಬರೆದಿದೆ; ಪ್ರತಿವೃತ್ತವೂ ಗುರುಮೂರ್ತಿಶಂಕರಾ ಎಂದು ಮುಗಿಯುತ್ತದೆ. ಈ ಗ್ರಂಥವನ್ನು "ಭಕ್ತಿಗೆ ವಿರಕ್ತಿಗೆ ಮುಕ್ತಿಗೆ ಬೀಜವಾಗೆ ಪೇಳ್ವುದು" ಎಂದು ಗುರುರಾಯಮಹಾಸಚಿವೇಂದ್ರನು ಅಜ್ಞಾಪಿಸಲು ಬರೆದಂತೆ ಕವಿ ಹೇಳುತ್ತಾನೆ. ಆರಂಭದಲ್ಲಿ ಶಿವಸ್ತುತಿ ಇದೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

## ದೇವರಾಯನ ಸ್ತುತಿ

ಜಲನಿಧಿ ಸೀಮೆ ರಾಜ್ಯವಿಭವಕ್ಕೆ ದಿಟಂ ಗಜವೇಂಟೆ ಸೀಮೆ ಮಾ |
ರ್ಬಲಕಱುವತ್ತುನಾಲ್ಕು ಕಳೆ ಸೀಮೆಯಭಿಜ್ಞತೆಗಬ್ಜಜಾಂಡದು ||
ಜ್ವಲವೃತಿ ಸೀಮೆ ಕೀರ್ತಿಗೆನೆ ಸೋಮಕುಲಕ್ಷಿತಿಪಾಲರಲ್ಲಿ ವೆ |
ಗ್ಗಳಿಸಿಹನೇಱುಗ್ಗಯಿಂ ವಿಜಯರಾಯತನೂಭವದೇವಭೂವರಂ ||
ಜನಪತಿಮಾತ್ರಮೇ ಗುಣದೊಳೀಕ್ಷಿಪೊಡಯ್ದನೆಯಂಬುರಾಶಿಯಾ |
ಱನೆಯ ಸುಪರ್ವಭೂಮಿರುಹವೇೞನೆಯಗ್ಗದ ಚಕ್ರವರ್ತಿಯೆಂ ||
ಟನೆಯ ಕುಲಾದ್ರಿಯೊಂಬತನೆಯೊರ್ವ ದಿಶಾಪತಿ ಪೇೞ ಶೇನೊ ಪ |
ತ್ತನೆಯ ವಿರಿಂಚಿಯೆಂಬುದು ಜಗಜ್ಜನಿತಂ ಗಜವೇಂಟೆಕಾಱನಾ ||

## ನೀತಿ

ಒಡಲ ಪೊಡರ್ಪು ತುಟ್ಟಿಸದಮುನ್ನ ನಿಜೇಂದ್ರಿಯವರ್ಗದೇಱುಗ್ಗಯೊ |
ಗ್ಗುಡಿಸದಮುನ್ನ ಮುಪ್ಪು ಮುಱಿದೊತ್ತದಮುನ್ನ ಲಲಾಟದಕ್ಕರಂ ||
ತೊಡೆಯದಮುನ್ನ ನಿಮ್ಮ ಪದಮಂ ನೆಱೆ ಪೂಜಿಸವೇೞ್ಕುನ್ಮೈದೆ ನೀ |
ರಡಸೆ ಬೞಿಕ್ಕೆ ಬಾವಿಯನಗೞ್ದಪರೇ ಗುರುಮೂರ್ತಿಶಂಕರಾ ||
ಬಯ್ದೊಡೆ ಮೇಳನಾಡಿದನೆನುತ್ತಪರಾಧಮಸಿಟ್ಟು ಸಾವನ್ನೋಲ್ |
ಪೊಯ್ದೊಡೆ ಬುದ್ಧಿವೇೞ್ದನೆನುತರ್ಥಮನೊಯ್ದೊಡೆ ತಾನೆ ಕೊಟ್ಟು ತಾ ||
ನೊಯ್ದನೆನುತ್ತೆ ನೂಂಕಿದೊಡೆ ಬಾಗಿಲೊಳಿರ್ಪೆನೆನುತ್ತುಮಾಳ್ದನಿ |
ತ್ತಯ್ದುಪಣಕ್ಕೆ ಮಾಱಿ ತನುವಂ ಪೊರೆದೇಂ ಗುರುಮೂರ್ತಿಶಂಕರಾ ||
ತುಡುಗುಣಿಯಂತೆ ಬೆಂದ ಮನಮೆಲ್ಲೆಡೆಗೆಯ್ದುವುದೆಯ್ದದೊರ್ಮೆ ನಿಂ |
ದೊಡೆ ಭವದಿಂ ಭಯಂ ಬಿಡದು ಬಿಟ್ಟೊಡೆ ಬಲ್ಲರ ಗೊಟ್ಟಿಗೊಲ್ಲದೊ ||
ಲ್ದೊಡೆ ಚಪಲತ್ವಮಂ ಬಿಡದು ಬಿಟ್ಟೊಡೆ ಭಕ್ತಿಯೊಳಿರ್ಪೆನೆನ್ನದೆಂ |
ದೊಡೆ ನೆಲೆಗೊಳ್ಳದಿನ್ನಿದಕೆ ಪೇೞ್ ಗತಿಯಂ ಗುರುಮೂರ್ತಿಶಂಕರಾ ||
ಮುನಿನವನಾದೊಡಂ ಪರಗೇ ನೋವನೊಡರ್ಚದೆ ರಂಭೆಯಾದೊಡಂ |
ವನಿತೆಗೆ ಮೆಚ್ಚಿ ಸಿಲ್ಕದೆ ದರಿದ್ರತೆಯಾದೊಡಮರ್ಥಿಗೇನುವಿ ||
ಲ್ಲೆನಿಸದೆ ಹಾನಿಯಾದೊಡಮಸತ್ಯವ ಪೇೞದೆ ಬಾೞ್ವ ಮರ್ತ್ಯನೇ |
ಮುನಿವರನಾತನಾಚರಣೆಯುಗ್ರತಪಂ ಗುರುಮೂರ್ತಿಶಂಕರಾ ||

## ಕಲ್ಯಾಣಕೀರ್ತಿ. 1439

ಈತನು ಜ್ಞಾನಚಂದ್ರಾಭ್ಯುದಯ, ಕಾಮನಕಥೆ, ಅನುಪ್ರೇಕ್ಷೆ, ಜಿನಸ್ತುತಿ, ತತ್ವಭೇದಾಷ್ಟಕ ಎಂಬ ಗ್ರಂಥಗಳನ್ನು ಬರೆದಿದ್ದಾನೆ. ಇವನು ಜೈನಕವಿ. ಇವನ ದೀಕ್ಷಾಗುರು ಮೂಲಸಂಘದ ದೇಶೀಯಗಣದ ಲಲಿತಕೀರ್ತಿ. ಜ್ಞಾನಚಂದ್ರಾಭ್ಯುದಯವನ್ನು "ಶಕನೃಪನ ರತಿಲೋಕ (1362) ಸಂಖ್ಯೆಯಿಂ ವಿದಿತಸಿದ್ಧಾರ್ಥಿ" ವರ್ಷದಲ್ಲಿ—ಎಂದರೆ 1439 ರಲ್ಲಿ, ಬರೆದಂತೆಯೂ ಕಾಮನಕಥೆಯನ್ನು ಲಲಿತಕೀರ್ತಿಯ ಶಿಷ್ಯನಾದ ತುಳುವದೇಶದ ದೊರೆ ಭೈರವಸುತಪಾಂಡ್ಯರಾಯನ ಇಷ್ಟಾನುಸಾರವಾಗಿ ಬರೆದಂತೆಯೂ ಕವಿ ಹೇಳುತ್ತಾನೆ. ಸಿದ್ಧರಾಶಿ ಎಂಬ ಗ್ರಂಥವನ್ನೂ ಈತನು ಬರೆದಿರುವಂತೆ ತೋರುತ್ತದೆ.

ಇವನ ಗ್ರಂಥಗಳಲ್ಲಿ

### 1. ಜ್ಞಾನಚಂದ್ರಾಭ್ಯುದಯ

ಇದು ವಾರ್ಧಕ, ಭಾಮಿನಿ, ಪರಿವರ್ಧಿನಿ ಈ ಷಟ್ಪದಿಗಳಲ್ಲಿ ಬರೆದಿದೆ; ಸಂಧಿಗಳಾಗಿ ವಿಭಾಗಿಸಿಲ್ಲ; ಒಟ್ಟು 908 ಪದ್ಯಗಳಿವೆ. ಇದಕ್ಕೆ ಜ್ಞಾನಚಂದ್ರಷಟ್ಪದಿ ಎಂಬ ಹೆಸರೂ ಉಂಟು. ಇದರಲ್ಲಿ ಜ್ಞಾನಚಂದ್ರನೆಂಬ ರಾಜನು ತಪಸ್ಸುಮಾಡಿ ಮುಕ್ತಿಯನ್ನು ಪಡೆದ ಕಥೆ ಹೇಳಿದೆ. ಗ್ರಂಥಾವತಾರದಲ್ಲಿ ಮಹಾವೀರಸ್ತುತಿ ಇದೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

#### ಸ್ತ್ರೀವರ್ಣನೆ

ಅರುಣಮಣಿದ್ಯುತಿರದನಚ್ಛದನೆಯು | ಮರಕತಮಣಿರುಚಿನಿಭತನುಯಷ್ಟಿಯು |
ಹರಿನೀಲದ ಕಿರಣಾಂಕುರಸನ್ನಿಭಕುಂತಳಭಾಸುರೆಯು ||
ಪರಭೃತರವನಿಭಕೋಮಲವಾಣಿಯು | ದರಹಸಿತಾಸ್ಯೆಯು ಮದಗಜಗಮನೆಯ |
ತರುಣಿಯ ಜಿತರಂಭೆಯ ರೂಪನು ವರ್ಣಿಪ ಕೋವಿದನಾವಂ ||
ಅಡಿಗಳ ಚೆಲ್ವಿಂದಸುಕೆಯ ತಳಿರನು | ನಡೆಯಿಂ ವರಹಂಸಿಯ ನಡೆಯನು ಕಿಱು |
ದೊಡೆಯಿಂ ಕಾಮನ ಬಾಣಧಿಯನು ಮೇಣ್ ಕದಳಿಯ ಕಂಭವನು ||
ತೊಡೆಗಳ ಚೆಲ್ವಿಂ ಜಱಿವಳು ಜಘನದ | ಕಡುಚೆಲ್ವಿಂ ಕರಿಕುಂಭಸ್ಥಳವನು |
ನಡುವಿಂ ಪವಿಯಂ ಕುಚದಿಂ ಕಳಶವ ಗಳದಿಂ ಶಂಖವನು ||

ನಂದನವನ

ಗಱಿಪುವ ಗಿಳಿಗಳ ಮೊರೆವಳಿನಿವಹದ | ನಲಿದುಲಿದಾಡುವ ಪಿಕನಿಕರಂಗಳ |
ಸುೞಿಸುೞಿದೆಳಸುವ ಪುರುಳಿಗಳೊಳೀಯ ಸಲೆ ಪೆಣ್ದುಂಬಿಗಳ ||
ಸುಲಲಿತಕಳಕಳಕೋಲಾಹಲದಿಂ | ವಿಲಸಿತಕಿನ್ನರಜನದಂಪತಿಗಳ |
ಕಳಕಳನಿನದಂ ಮಸುಳಿಸುತಿಪುದಾ ನಂದನವನದಲ್ಲಿ ||

2. ಕಾಮನಕಥೆ

ಇದು ಸಾಂಗತ್ಯದಲ್ಲಿ ಬರೆದಿದೆ; ಸಂಧಿ 4, ಪದ್ಯ 331. ಅಲ್ಲಲ್ಲಿ ಕಂದ ಷಟ್ಪದಿವಚನಗಳೂ ಇವೆ. ಇದರಲ್ಲಿ ಜೈನಮತಾನುಸಾರವಾಗಿ ಕಾಮನ ಕಥೆ ಹೇಳಿದೆ. ಗ್ರಂಥಾವತಾರದಲ್ಲಿ ನೇಮಿಜಿನನನ್ನೂ ಬಳಿಕ ಸರಸ್ವತಿ, ಜಿನಮುನಿಗಳು, ಸ್ವಗುರು ಲಲಿತಕೀರ್ತಿ, ಇವರುಗಳನ್ನೂ ಕವಿ ಹೊಗಳಿದಾನೆ. ಈ ಗ್ರಂಥದಿಂದ ಒಂದೆರಡು ಪದ್ಯಗಳನ್ನು ತೆಗೆದು ಬರೆಯುತ್ತೇವೆ-

ಮಗುವನ್ನು ರಾಕ್ಷಸನು ಒಯ್ಯಲು ರುಕ್ಮಿಣಿಯ ಪ್ರಲಾಪ

ಪಕ್ಕವಿಲ್ಲದ ಪಕ್ಕಿಯಂದದಿ ನನ್ನನು | ದೊಕ್ಕನೆ ಮಾಡಿದೆ ಮಗನೆ |
ದಿಕ್ಕಾವುದು ಪೇೞೆನಗಿನ್ನು ನಂದನ | ಅಕ್ಕಟ ತಾಯನು ತೊಱೆವೈ ||
ಹಾ ಸಜ್ಜನಜನಶೃಂಗಾರಹಾರನೆ | ಹಾ ಸರ್ವಕಳೆಗಳ ಸಿಧಿಯೆ |
ಹಾ ಸುತ ಸವತಿಯ ಕಣ್ಗೆ ನೀ ಕಸವಾದೆ | ಹಾ ಸರಸೀರುಹನಯನ ||

3. ಅನುಪ್ರೇಕ್ಷೆ

ಇದರಲ್ಲಿ 74 ಪದ್ಯಗಳಿವೆ. ಕೊಂಡಕುಂದಾಚಾರ್ಯನ ಗಾಹೆಯ ಅರ್ಥವನ್ನು ಭಾವಿಸಿ ಈ ಗ್ರಂಥವನ್ನು ಬರೆದಂತೆ ಕವಿ ಹೇಳುತ್ತಾನೆ. ಇದರಿಂದ ಒಂದೆರಡು ಪದ್ಯಗಳನ್ನು ಉದಾಹರಿಸುತ್ತೇವೆ—

ವಿಲಸದಿಂದ್ರಿಯಪಾಟವಂ | ನೆಲಸಿದಂಗದ ಸೌಷ್ಠವಂ |
ತೊಳಪ ಮಿಂಚಿನ ರೀತಿಯಿಂ | ತೊಲಗಿ ಹೋಹುದು ಜೀವನೇ ||
ನೆನೆದು ಸಂಸೃತಿಜಲಧಿಯೊ | ಳನುದಿನಂ ನೆಱೆ ಮುೞುಗಿದಾ |
ನಿನಗೆ ನೀನೆಲೆ ಶೋಕಿಸೈ | ಕನಲಿ ದುಃಖವನುಣದಿರು ||

4. ಜಿನಸ್ತುತಿ

ಇದರಲ್ಲಿ 27 ಕಂದಗಳಿವೆ. ಇದರಿಂದ ಒಂದೆರಡು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ಅಲಸದೆ ನಾಲ್ಕುಂ ಗತಿಯೊಳ್ | ಬೞಲಿಸಿದೆನ್ನೊಂದು ಚಿತ್ತವೃತ್ತಿಯ ಪರಿಯಂ |
ತೊಲಗಿಸಿ ತನ್ನೊಳ್ ನಿಲಿಸುವ | ಸುಲಭತೆಯಂ ಬಿಡದೆ ನೆನೆವುದೆನಗೆಂದಹುದೋ ||
ಒಂದಿದ ವಿಷಯಕಷಾಯದ | ದಂದುಗಮಂ ಕಿಡಿಸಲಾರ್ಪ ಪರಮಾನಂದಂ |
ಬಂದು ನೆಲೆಗೊಳಿಸುವಂದದ | ಛಂದಂಗಳ ಬಿಡದೆ ನೆನೆವುದೆನಗೆಂದಹುದೋ ||

5 ತತ್ವಭೇದಾಷ್ಟಕ

ಇದರಲ್ಲಿ 9 ಪದ್ಯಗಳಿವೆ. ಒಂದು ಪದ್ಯವನ್ನು ಉದ್ಧರಿಸಿ ಬರೆಯುತ್ತೇವೆ—

ಕೂಡೆ ಬಾರದ ಪೂತಿಗಂಧದ ದೇಹದಂದವ ನೋಡು ನೀ|
ಗಾಡು ಬೇಗದಿ ಸಂಗಸಂಗವ ಬಿಟ್ಟು ತೊಟ್ಟನೆ ರಾಗದಿಂ ||
ದಾಡುವಲ್ಲಿಯು ಪಾಡುವಲ್ಲಿಯು ನೋಡುವಲ್ಲಿಯು ನಿನ್ನನೇ |
ನೋಡಿ ನಿನ್ನೊಳು ಭಾವಿಸಾತ್ಮನ ಚಾರುತತ್ವದ ಭೇದಮಂ ||

---

## ಜಿನದೇವಣ್ಣ. 1444

ಈತನು ಶ್ರೇಣಿಕಚರಿತ್ರೆಯನ್ನು ಬರೆದಿದ್ದಾನೆ. ಇವನು ಜೈನಕವಿ. ಈ ಗ್ರಂಥವನ್ನು ಶಕ 1366 ರಲ್ಲಿ, ಎಂದರೆ 1444ರಲ್ಲಿ, ಬರೆದಂತೆ ಹೇಳುತ್ತಾನೆ ಎಂದು ಮಿ|| ರೈಸ್ ಬರೆದಿದ್ದಾರೆ.

ಇವನ ಗ್ರಂಥ

ಶ್ರೇಣಿಕಚರಿತ್ರೆ

ಇದರಲ್ಲಿ ಶ್ರೇಣಿಕರಾಜನ ಕಥೆ ಹೇಳಿರುವಂತೆ ತೋರುತ್ತದೆ.

---

## ವಿಜಯಣ್ಣ. 1448

ಈತನು ದ್ವಾದಶಾನುಪ್ರೇಕ್ಷೆಯನ್ನು ಬರೆದಿದ್ದಾನೆ. ಇವನು ಜೈನಕವಿ. ಕುಂತಳದೇಶದ ಬೆಳುವಲನಾಡೊಳಗಣ ವೆಮ್ಮನಭಾವಿಯ ಶಾಂತಿನಾಥಬಸದಿಯಲ್ಲಿ ಆ ಊರ ಪ್ರಭು ಹೊನ್ನಬಂದಿಯ ದೇವರಾಜನ ಆಜ್ಞಾನುಸಾರವಾಗಿ ಈ ಗ್ರಂಥವನ್ನು ಶಕ 1369ನೆಯ ವಿಭವಸಂವತ್ಸರದಲ್ಲಿ (1448) ಬರೆದಂತೆ ಕವಿ ಹೇಳುತ್ತಾನೆ. ಈತನ ಸ್ಥಳ ವೆಮ್ಮನಭಾವಿಯಾಗಿರಬಹುದು. ಈತನ ಗುರು ಪಾರ್ಶ್ವಕೀರ್ತಿ ಎಂದು ತೋರುತ್ತದೆ. ದೇವ

ಚಂದ್ರನ ರಾಜಾವಳೀಕಥೆಯಲ್ಲಿ(1838)ವಿಜಯಣ್ಣನು ರತ್ನಾಕರವರ್ಣಿಯ (1557) [1] ಸಮಕಾಲದವನೆಂದು ಹೇಳಿರುವುದು ಭ್ರಾಂತಿಮೂಲವೆಂದು ತೋರುತ್ತದೆ.

ಇವನ ಗ್ರಂಥ

ದ್ವಾದಶಾನುಪ್ರೇಕ್ಷೆ

ಇದು ಸಾಂಗತ್ಯದಲ್ಲಿ ಬರೆದಿದೆ; ಪರಿಚ್ಛೇದ 12, ಪದ್ಯ 1448. ಅಲ್ಲಲ್ಲಿ ಕೆಲವು ವೃತ್ತಗಳೂ ಕಂದಗಳೂ ಇವೆ. ಇದರಲ್ಲಿ ಅಧ್ರುವಾನುಪ್ರೇಕ್ಷೆ, ಶರಣಾನುಪ್ರೇಕ್ಷೆ, ಏಕತ್ವಾನುಪ್ರೇಕ್ಷೆ, ಅನ್ಯತ್ವಾನುಪ್ರೇಕ್ಷೆ, ಸಂಸಾರಾನುಪ್ರೇಕ್ಷೆ, ಲೋಕಾನುಪ್ರೇಕ್ಷೆ, ಅಶುಚಿತ್ವಾನುಪ್ರೇಕ್ಷೆ, ಆಸ್ರವಾನುಪ್ರೇಕ್ಷೆ, ಸಂವರಾನುಪ್ರೇಕ್ಷೆ, ನಿರ್ಜರಾನುಪ್ರೇಕ್ಷೆ, ಧರ್ಮಾನುಪ್ರೇಕ್ಷೆ, ಬೋಧಿದುರ್ಲಭಾನುಪ್ರೇಕ್ಷೆ ಎಂಬ 12 ಅನುಪ್ರೇಕ್ಷೆಗಳು ಅಥವಾ ಚಿಂತನೆಗಳು ನಿರೂಪಿಸಲ್ಪಟ್ಟಿವೆ. ಗ್ರಂಥಾವತಾರದಲ್ಲಿ ವೃಷಭಜಿನನ ಸ್ತುತಿ ಇದೆ. ಬಳಿಕ ಕವಿ ಸಿದ್ಧಾದಿಗಳು, ಸರಸ್ವತಿ, ವೃಷಭಸೇನಾದಿಗೌತಮಗಣಧರರು, ವಿಜಯಕೀರ್ತಿ, ಅವನ ಶಿಷ್ಯ ಪಾರ್ಶ್ವಕೀರ್ತಿ ಇವರುಗಳನ್ನು ಹೊಗಳಿದ್ದಾನೆ. ಪರಿಚ್ಛೇದಗಳ ಕೊನೆಯಲ್ಲಿ ಈ ಗದ್ಯವಿದೆ—

ಇತಿ ಶ್ರೀಮದ್ದೇವೇಂದ್ರವೃಂದಮಣಿಮುಕುಟಕಿರಣರಂಜಿತಪಾದಾರವಿಂದದ್ವಂದ್ವ ಭಗವದರ್ಹತ್ಪರಮೇಶ್ವರಮುಖಕಮಲವಿನಿರ್ಗತ ದ್ವಾದಶಾನುಪ್ರೇಕ್ಷೆಯೊಳ್.

ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ—

ಧರ್ಮವನೊಲ್ಲದೆ ಭೋಗಕ್ಕೆ ಹರಿವಾತ । ಕರ್ಮವಶದೊಳಮೃತವನು ।
ನಿರ್ಮಲಸೌಖ್ಯಕಾರಣವೆಂದಱಿಯದೆ । ದುರ್ಮತಿ ಕಾಲ್ದೊಳೆವಂತೆ ॥
ಬಾಲಕನೆಂದು ಕೃಪೆಯ ಮಾಡಿ ಬಿಡನವ । ಮೇಲೆನಿಸುವ ಹಿರಿಯರನು ।
ಪಾಲಿಸಬೇಕೆಂಬವನಲ್ಲ ಮನದಲ್ಲಿ । ಕಾಲನೆಂಬವ ಪಾತಕನು ॥
ನಿನ್ನ ನಚ್ಚಿದ ದೇಹ ಹೆಂಡಿರು ಮಕ್ಕಳು । ನಿನ್ನ ಧನವ ತಿನ್ನುವರು ।
ನಿನ್ನನಂತಕ ಬಂದೆಱೆದೊಯ್ವ ವೇಳೆಯೊಳ್ । ನುಣ್ಣನೆ ಕೆಲಕೆ ಸಾರುವರು ॥
ಜೀವನು ಪೋಗೆ ತತ್ಕ್ಷಣದಲ್ಲಿ ಹೆಣನೆಂದು । ಓವದೆ ಸುಡುವರು ಬೇಗ ।
ಈವಿದ ಗುಣವಿಲ್ಲದಿರೆ ನಡೆವೆಣನೆಂಬ । ರೀವಿಧ ನೋಡಿರೆ ದೇಹ ॥

---

1 ಇವನ ಚರಿತೆಯನ್ನು ನೋಡಿ.

ಸುರಲೋಕಂಗಳ ಪೊಕ್ಕೊಡಂತಿರದೆ ತಾಂ ಪಾತಾಳಮಂ ಪೊಕ್ಕೊಡಂ |
ಗಿರಿದುರ್ಗಂಗಳ ಪೊಕ್ಕೊಡಂ ಶರಧಿಯಂ ಪಾಯ್ದಲ್ಲಿ ಪೊಕ್ಕಿರ್ದೊಡಂ ||
ಭರದಿಂ ಪರ್ವತದಗ್ರದಲ್ಲಿ ಗುಹೆಯಂ ಪೊಕ್ಕಿರ್ದೊಡಿಂತೆಲ್ಲಿಯುಂ |
ಶರಣೆಲ್ಲಂ ಪೆಱತಾವ ಠಾವು ನಿಸಗಂ ಸದ್ಧರ್ಮದುರ್ಗಂ ವಿನಾ ||

---

## ಬೊಮ್ಮರಸ. ಸು. 1450

ಈತನು ಸೌಂದರಪುರಾಣವನ್ನು ಬರೆದಿದ್ದಾನೆ. ಇವನು ವೀರಶೈವ ಕವಿ. "ದಿವ್ಯಶಿವಕವೀಂದ್ರರ ಭೃತ್ಯನೆನಿಪ ಕರ್ಣಾಟಕವಿ" ಎಂದು ಹೇಳಿ ಕೊಂಡಿದ್ದಾನೆ. ಈ ಗ್ರಂಥವನ್ನು ಡೆಂಕಣಿಕೋಟೆಪುರವರಾಧೀಶನಾದ ಗುಂಡಬೊಮ್ಮ, ಚೋಳನಾರಾಯಣ, ಚೋಳರ ಭೀಮ ಎಂಬ ಬಿರುದು ಗಳುಳ್ಳ ಕಾಮನೃಪಸಿರುಮಯಾಂಬಾಪುತ್ರನಾದ ಪರಮಮಾಹೇಶ್ವರ ವೈಶ್ಯ ಕುಲತಿಲಕ ಕವಿಕಮಲಭಾಸ್ಕರ ತಿಪ್ಪರಸನು ರಚಿಸಹೇಳಲು, ಚೊಕ್ಕದೇ ವಪಾರ್ಯನ ಮಗ ಗುಮ್ಮಳಾಪುರವರಾಧೀಶ ಚಿಕ್ಕವೀರಣಾರ್ಯನ ಆಜ್ಞಾನು ಸಾರವಾಗಿ ರಚಿಸಿದಂತೆ ಹೇಳುತ್ತಾನೆ. ಅಲ್ಲದೆ ಒಬ್ಬ ವಿಶ್ವನಾಥಾಚಾರ್ಯನನ್ನು ವಿಶೇಷವಾಗಿ ಸ್ತುತಿಸಿ ಅವನ ವಂಶಪರಂಪರೆಯನ್ನು ಹೀಗೆ ಹೇಳಿದ್ದಾನೆ:—

ಸೋಮಶಂಭು; ಮಗ "ಕಾಮಿಕಂ ಕಾರಣಂ ಸುಪ್ರಭೇದಂ ಸೂಕ್ಷ್ಮಸಾನು ಸುಜ್ಞಾನಸಂತಾನಮುಖ್ಯಾಗಮಸ್ತೋಮದರ್ಥವ್ಯಕ್ತಿಯಂ ಮಾಡಿ ವೀರಶೈವಾಚಾರ ಪಸರಿಸುತಿರೆ ಪ್ರೇಮದಿಂದುಪದೇಶವಿತ್ತ" ಸಕಲಾಗಮಾಚಾರ್ಯ; ಮಗ ಶಿವಲೆಂಕಮಂಚ ಣ್ಣಪಂಡಿತಾರಾಧ್ಯ; ಮಗ ಉರಿಲಿಂಗಪೆದ್ದಣಾಚಾರ್ಯ; ಮಗ ವಿಶ್ವೇಶಪೆದ್ದಣ್ಣ; ಮಗ ವಿಭೂತಿಯ ಸಿದ್ಧಮಲ್ಲೇಶ; ಮಗ ಶಿವಗುರೂತ್ತಮ ಸೋಮನಾಥಾಚಾರ್ಯ; ಮಗ ಅನಂತಪೆದ್ದಣ್ಣದೇಶಿಕೇಂದ್ರ; ಮಗ ವಾರಾಣಸಿಯ ಬಲ್ಲಣಾಚಾರ್ಯ; ಮಗ ವೀರಶೈ ವೋದ್ಧರಣ ನಾಗಿದೇವಾರ್ಯ; ಮಗ ನೀಲಕಂಠಾಚಾರ್ಯ; ಮಗ ವಿಶ್ವನಾಥಾಚಾರ್ಯ; ಮಗ ಮಧುವರಸಗುರುನಾಥ; ಮಗ ನೀಲಕಂಠಾಚಾರ್ಯ; ಮಗ ವಿಶ್ವನಾಥಾಚಾರ್ಯ.

"ಹೃದಯದೊಳು ಭಾವಿಸಿ ನಮಸ್ಕರಿಸುವೆನು ವಿಶ್ವನಾಥಸದ್ಗುರುವ" ಎಂಬುದರಿಂದ ಈ ವಿಶ್ವನಾಥಾಚಾರ್ಯನು ಕವಿಗೆ ಗುರುವಾಗಿದ್ದಂತೆ ತೋರು ತ್ತದೆ. ಮೇಲೆ ಹೇಳಿದ ಚೊಕ್ಕದೇವಪಾರ್ಯನು ಶಿವತತ್ವಚಿಂತಾಮಣಿಯನ್ನು ಬರೆದ ಲಕ್ಕಣ್ಣದಣ್ಣಾಯಕನಿಗೆ(1428) ಸ್ವಲ್ಪ ಹೆಚ್ಚು ಕಡಮೆ ಸಮಕಾಲದವ

ನೆಂದು ಆ ಗ್ರಂಥದಿಂದಲೂ ಮಲ್ಲಣಾರ್ಯನ ವೀರಶೈವಾಮೃತಪುರಾಣದಿಂದಲೂ[1] ಊಹಿಸಲು ಅವಕಾಶವಿರುವುದರಿಂದ ಅವನ ಮಗ ಚಿಕ್ಕ ವೀರಣಾರ್ಯನ ಕಾಲವು ಸುಮಾರು 1450 ಆಗಬಹುದು. ಕವಿಯ ಕಾಲವೂ ಇದೇ. ಕವಿಯ ಸಮಕಾಲದವನಾದ ವಿಶ್ವನಾಥಾಚಾರ್ಯನು ಶಿವಲೆಂಕಮಂಚಣ್ಣನಿಂದ(ಸು. 1160) 12 ನೆಯ ತಲೆಯವನಾಗುತ್ತಾನೆ. ತಲೆಗೆ 25 ವರ್ಷಗಳ ಪ್ರಕಾರ ಲೆಕ್ಕಮಾಡಿದರೆ ಕವಿಗೆ ನಾವು ಕೊಟ್ಟ ಕಾಲವು ದೃಢೀಕೃತವಾಗುತ್ತದೆ. ಅಲ್ಲದೆ ಈ ವಿಶ್ವನಾಥಾಚಾರ್ಯನ ಮಗನಾದ ನೀಲಕಂಠಾಚಾರ್ಯನು[2] ಬರೆದಿರುವ ಆರಾಧ್ಯಚಾರಿತ್ರದಿಂದ ಇವನ ಕಾಲವು ಸುಮಾರು 1485 ಎಂದು ಹೊರಪಡುತ್ತದೆ. ಈ ವಿಷಯವೂ ಬೊಮ್ಮರಸನಿಗೆ ನಾವು ಹೇಳಿರುವ ಕಾಲವನ್ನು ದೃಢಪಡಿಸುತ್ತದೆ.

ಪೂರ್ವಕವಿಗಳಲ್ಲಿ ಭಾರವಿ, ಬಾಣ, ಉದ್ಭಟದೇವ, ಕಾಳಿದಾಸ, ಮಲುಹಣ, ಭೋಜ ಈ ಸಂಸ್ಕೃತಕವಿಗಳನ್ನೂ, ಹರೀಶ್ವರ, ಸೋಮನಾಥ ಈ ಕನ್ನಡಕವಿಗಳನ್ನೂ ಸ್ಮರಿಸಿದ್ದಾನೆ.

ಇವನ ಗ್ರಂಥ

### ಸೌಂದರಪುರಾಣ

ಇದು ವಾರ್ಧಕಷಟ್ಪದಿಯಲ್ಲಿ ಬರೆದಿದೆ; ಸಂಧಿ 19, ಪದ್ಯ 1205. ಇದರಲ್ಲಿ 63 ಶಿವಭಕ್ತರಲ್ಲಿ ಒಬ್ಬನಾದ ಸೌಂದರೇಶ ಅಥವಾ ನಂಬಿಯಣ್ಣ ಎಂಬವನ ಚರಿತ್ರವು ವರ್ಣಿತವಾಗಿದೆ. "ಹರಿಹರೇಶ್ವರ ಸೋಮನಾಥ ಮೊದಲಾದ ಕವಿವರರು ವಿಸ್ತರಿಸಿದೀ ಸಂಬ್ಯಣಾಂಕನ ಪುಣ್ಯಚರಿತೆಯನು ವರ್ಣಕದೊಳಾನು ಪೇಳ್ದಪೆಂ" ಎಂದು ಕವಿ ಹೇಳುತ್ತಾನೆ. ಕಥಾಸಾರವು ಈ ಪದ್ಯದಲ್ಲಿ ಸೂಚಿತವಾಗಿದೆ:—

ಬಲವಂದು ಮತ್ತಗಜ ವಂದಿಸಿದುದಾವಂಗೆ |
ನೆಲೆಮೊಲೆಯೊಳಿರ್ದು ಶಂಕರನುಸಿರ್ದನಾವನೊಳು |
ಬಲುಹಿಂದೆ ಮೊಸಳೆ ನುಂಗಿದ ಶಿಶುವದಾವವನದೆಸೆಯಿಂದ ಮಗುಳ್ದುದಿಳೆಗೆ ||
ಸುಲಭನಾವವನಾಸತಗ್ಗಾರ್ಗವನಿಂದಿಷ್ಟ |
ಫಲ ಚೇರಮಂಗಾದುದಾವವನ ಭಜಿಸಿ ನಿ |
ರ್ಮಳಶೈವನಭವಪುರಿಯಂ ಸಾರ್ದನಾ ಸೌಂದರೇಂದ್ರಸಂ ಪೊಗಳ್ವೆನೊಲಿದು ||

---

1. ಕಾಂಡ 8, ಸಂಧಿ 8. 2 ಇವನ ಚರಿತೆಯನ್ನು ನೋಡಿ

ಕವಿ ಈ ಗ್ರಂಥವನ್ನು ನೀಲಕಂಠನ ಅಂಕಿತದಲ್ಲಿ ಬರೆದಿದ್ದಾನೆ. ತನ್ನ ಕಾವ್ಯದ ಉತ್ಕೃಷ್ಟತೆಯನ್ನು ಈ ಪದ್ಯಗಳಲ್ಲಿ ಹೇಳಿದ್ದಾನೆ—

ಕಣ್ಗೆ ಚೆಲ್ವಾಗೆ ನಸುಬಿರಿದ ಜಾಜಿಯ ನನೆಯ |
ತಣ್ಗಂಪನುಂಡು ತಣ್ಣನೆ ತಣಿದು ಕಡುಸೊಕ್ಕಿ |
ನುಣ್ಗೊರಲಿನಿಂಚರಂ ಪೊಱಪೊಣ್ಮೆ ಸುೞಿವ ಮಱಿದುಂಬಿಯ ವಿಲಾಸದಂತೆ ||
ಬಿಣ್ಗೊನರ್ಪೇಱಿದಿಮ್ಮಾಮರದ ಪೊದಱ ಮೇ |
ಗಣ್ಗೆ ನೆಗೆದೆಳದಳಿರ ಕರ್ದುಕಿ ಮೆಲ್ಲುಲಿದೋರ್ಪ |
ಪೆಣ್ಗೋಗಿಲೆಯ ಲೀಲೆಯಂತೆ ರಸಿಕರ್ಗೆ ನಲವೀವುದೀ ದಿವ್ಯಕಾವ್ಯಂ ||
ಇಂಬುವಡೆದಿರಲಚ್ಚಗನ್ನಡದ ಸುಡಿ ತದ್ಭ |
ವಂ ಬಹಳದೇಶೀಯರಸಭಾವವರ್ಧನಚಿ |
ತ್ರಂ ಬಗೆಯ ಬಂದಿವಿಡಿವತಿಲಲಿತಪದಬಂಧ ಚದುರು ಬಿನ್ನಣ ಬೆಡಂಗು ||
ತುಂಬಿ ತುಳುಕಾಡುತಿರೆ ನಲವು ಮಿಗೆ ಕಾವ್ಯಮುಖ |
ದಿಂ ಬಣ್ಣಿಸುವೆನು ಶಿವಶರಣರಾಹಾ ಎನಲು |
ನಂಬಿಯನು ಮಹಿಮಾವಲಂಬಿಯನು ಸಾಕ್ಷಾತ್ತ್ರಿಯಂಬಕಪ್ರತಿಬಿಂಬಿಯ ||

ಗ್ರಂಥಾವತಾರದಲ್ಲಿ ನೀಲಕಂಠಲಿಂಗಸ್ತುತಿ ಇದೆ. ಬಳಿಕ ಕವಿ ವಿಶ್ವನಾಥಾಚಾರ್ಯನ ವಂಶಪರಂಪರೆಯನ್ನು ಹೇಳಿ ಅವನನ್ನು ವಿಶೇಷವಾಗಿ ಸ್ತುತಿಸಿದ್ದಾನೆ. ಆಮೇಲೆ ಭೃಂಗಿ, ವೀರಭದ್ರ, ತಿರುಜ್ಞಾನಸಂಬಂಧಿಯೆನಿಸಿ ಜಿನಮತವನತಿಗಳೆದು ಪರಮಶಿವಧರ್ಮಪಥವನು ತೋಱಿ ಜಗವ ಪಾವನವ ಮಾಡಿದ ಷಣ್ಮುಖ, ಇವರನ್ನು ಹೊಗಳಿ, ಮಂಡಗೆಮಾದರಸನಿಂದ ಮಡಿವಳಮಾಚಿಯವರೆಗೆ[1] ಪುರಾತನರನ್ನೂ ರೇವಣಸಿದ್ಧ, ಮರುಳಸಿದ್ಧ, ಏಕೋರಾಮ, ಪಂಡಿತಾರಾಧ್ಯ ಎಂಬ ಮಠಚತುಷ್ಟಯದ ಚರಲಿಂಗಮೂರ್ತಿಗಳನ್ನೂ ಗುಮ್ಮಳಾಪುರದ ಮಹಾಮಹತ್ತರನ್ನೂ ಸ್ಮರಿಸಿದ್ದಾನೆ.

ಇವನ ಬಂಧವು ಲಲಿತವಾಗಿಯೂ ಧಾರಾಳವಾಗಿಯೂ ಇದೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

1 ಮಂಡಗೆಮಾದರಸ, ಬಸವದಂಡಾಧೀಶ, ಕಲಿಕಾಮದೇವ, ಶಂಕರದಾಸಿಮಯ್ಯ, ಒಹಿಲದೇವ, ಕಣ್ಣಪ್ಪ, ಮಹದೇವಿ, ಮುಕ್ತಾಯಿ, ಸಾಮವೇದಿ, ಭೋಗಣ್ಣ, ಅಜಗಣ್ಣ, ಚೇರಮಾಂಕ, ದೀಪಧಕಲಿಯಾರ, ಚೆನ್ನಬಸವ, ಸಿದ್ಧರಾಮ, ಮಡಿವಾಳಮಾಚಿ.

### ಕಳಮಕ್ಷೇತ್ರ

ಮಿಸುಪ ಬೆಳುದಿಂಗಳಿಂದೊಸರುತಿಹ ಶಶಿಕಾಂತ |
ವಿಸರದ್ದ್ರವಾಂಬುವೇ ಕಾಲುವೆಗಳಾಗಿ ದೆಸೆ |
ದೆಸೆಗೆ ಪರಿಯಲು ತೀಡುತಿರ್ಪ ಮಂದಾನಿಲನ ಸಂಚಾರದಿಂದಲುಗುವ ||
ಕುಸುಮದ ಪರಾಗವೇ ಗೊಬ್ಬರಮದಾಗೆ ತವೆ |
ಪಸುರೇಱಿ ಪಾಲ್ನಿಡಿದುವೆನಲು ಕಳಮಕ್ಷೇತ್ರ |
ವೆಸೆವುವಾದೇಶದೊಳು ಭೂಮಾತೆ ಧರಿಯಿಸಿದ ಪಸುರ್ವರಲ ತೊಡಿಗೆಯಂತೆ ||

### ಆಲಿಕಲ್ಲು

ಕುಡಿಮಿಂಚೆನಿಪ್ಪ ನಚ್ಚಣಿ ಗಗನರಂಗದೊಳ್ |
ಬೆಡಗುವಡೆವೊಲು ರಿಂಗಣಂಗುಣಿಯಲೆಂದು ಮು |
ನ್ನೊಡರಿಚಿದ ಪೂವಲಿಯೊ ನೀಲಾಭ್ರವೆನಿಸುವ ತಮಾಲವೃಕ್ಷದ ಪಜ್ಜೆಯು ||
ಜಡಿಯೆ ಪವಮಾನನಿಳೆಗೊಕ್ಕ ಕುಸುಮಂಗಳೋ |
ಕಡಲೊಳುದಕವ ಮೊಗೆವ ವೇಳೆಯೊಳು ಸಿಲುಕಿದೊ |
ಳ್ಪಿಡಿದ ಪೆಮುರ್ಮುತ್ತುಗಳುದುದೊ ನೀರದೌಘವೆನೆ ಕಡುಸೂಸಿತಾಲಿವರಲು ||

### ನಂಬಿಯಣ್ಣನ ಹೆಂಡತಿ ಪರವೆಯ ಸೌಂದರ್ಯ

ಎಳವಿದಿರ ಕೋಮಲತ್ವವನಾಂತು ನಳನಳಿಪ |
ನಳಿತೋಳು ರಂಜಿಸಿತು ನುಣ್ಮೊಲೆಗಳಿಡಿಕಿಱಿದು |
ಬಳೆದು ಸೆಳೆನಡುವಿಂಗೆ ಬಿಣ್ಪಾಯ್ತು ತನು ಕನಕಚಂಪಕದ ಪುಷ್ಪದಂತೆ ||
ಪೊಳೆದು ನಱುಗಂಪ ಬೀಱಿದುದಿಂದ್ರನೀಲಮಣಿ |
ಯೊಳಗಣ ತಿರುಳ್ಗೆ ತೊಣೆಯಾದುವಾ ಕುರುಳ್ಗಳು |
ಜ್ವಳಿಸಿದುವು ಕದಪು ಕಣ್ಗೊನೆ ಧವಳಕಾಂತಿಯಂ ಪಡೆದುದಂದಾ ಪರವೆಗೆ ||
ತಳಿರಮೇಲಂಗಜನ ಬತ್ತಳಿಕೆಯದಱಮೇ |
ಲೆಳವಾಳೆಗಂಬವದಱಗ್ರದೊಳು ಗಿರಿಯು ತ |
ಪ್ಪಲು ತಪ್ಪಲಗ್ರದೊಳು ಲತೆ ಲತೆಯಮೇಲೆ ಪೊಂಗೊಡಮದಱ ಕೆಲಬಲದೊಳು ||
ಲಲಿತಚಂಪಕಮಾಲೆಯದಱಗ್ರದೊಳು ಶಂಖ |
ಬಱಕದಱಮೇಲೆ ರನ್ನದ ಮುಕುರವದಱಮೇ |
ಲಳಿಕುಳ ಮಯೂರವಿರ್ದಪುವೆನಲು ಪರವೆಯಾಕಾರ ಕಣ್ಗೆಸೆದಿರ್ದುದು ||

ಬೆರಸಿ ಕಟ್ಟಾಸೆಯೊಡನೆಯ್ದಿ ದಾನಾರ್ಥಿಯಾ |
ಗೆಱಗಿದ ಸದಾಳಿಗಳ ತೆವರಿ ನಿಸ್ಸಾರತೆಯ |
ಧರಿಸಿ ಪುಷ್ಪಿತಲತೆಯೊಳೊಂದಿ ನಲವಿಂ ಪಲ್ಲವಗ್ರಾಹಿಯಾಗಿ ಮೆಱೆವ ||
ಕರಿಗಿರಿಗಳಳಿಗಿಳಿಗಳೆಂತು ಸರಿಯೆನಿಪುವೀ |
ಪರವೆನಾಚಿಯ ಮಂದಗತಿಗೆ ವಿಸ್ತೀರ್ಣಪೀ |
ವರಪಯೋಧರಕೆ ನುಣ್ಗುರುಳಿಂಗೆ ಮಧುರೋಕ್ತಿಗಳಿಗೆಂಬವೋಲೆಸೆದಳು ||

---

## ಚತುರಾಸ್ಯ ಬೊಮ್ಮರಸ. ಸು. 1450

ಈತನು ಚತುರಾಸ್ಯ ನಿಘಂಟುವನ್ನು ಬರೆದಿದ್ದಾನೆ. ಇವನು ವೀರ ಶೈವಕವಿಯೆಂದು ತೋರುತ್ತದೆ. ಇವನಿಗೆ ಚತುರಾನನ, ಚತುರಾಸ್ಯ ಎಂಬ ಹೆಸರುಗಳೂ ಉಂಟು. ಗಗನಾನ್ವಯತಿಲಕನಾದ ಹಂಪರಸನ ಮಗ ತಿಪ್ಪ ರಸನೆಂಬ ಬ್ರಾಹ್ಮಣನ ಇಷ್ಟಾನುಸಾರವಾಗಿ ಈ ಗ್ರಂಥವನ್ನು ಬರೆದಂತೆ ಹೇಳುತ್ತಾನೆ. ಅಚ್ಚಾಗಿರುವ ಚತುರಾಸ್ಯನಿಘಂಟುವಿನಲ್ಲಿ ದೊರೆವ "ಸಂತ ಸದಿನಱಿಪಿದಂ ಕವಿ | ಚಿಂತಾಮಣಿಯೆನಿಪ ಸರಸಕವಿ ತಿಪ್ಪರಸಂ" ಎಂಬ ಪದ್ಯಭಾಗದಿಂದ ಈ ತಿಪ್ಪರಸನೂ ಈ ಗ್ರಂಥರಚನೆಗೆ ಸಹಾಯಕನಾಗಿ ದ್ದಂತೆ ತೋರುತ್ತದೆ. ಕವಿಯ ಕಾಲವನ್ನು ನಿರ್ಧರಿಸುವುದಕ್ಕೆ ಸರಿಯಾದ ಆಧಾರವಿಲ್ಲ. ಸೌಂದರಪುರಾಣವನ್ನು ಬರೆದ ಬೊಮ್ಮರಸನೂ (ಸು. 1450) ಒಬ್ಬ ತಿಪ್ಪರಸನ ಇಷ್ಟಾನುಸಾರವಾಗಿ ಆ ಗ್ರಂಥದನ್ನು ಬರೆದಂತೆ ಹೇಳು ತ್ತಾನೆ. ಆದರೆ ಆ ತಿಪ್ಪರಸನು ವೈಶ್ಯಕುಲತಿಲಕನಾದ ಕಾಮನೃಪನ ಮಗ ನೆಂದು ಹೇಳಿರುವುದರಿಂದ ಕವಿ ಆ ಬೊಮ್ಮರಸನಲ್ಲವೆಂದು ತೋರುತ್ತದೆ. ಆದರೂ ಇವನ ಕಾಲವು ಸುಮಾರು 1450 ಆಗಿರಬಹುದೆಂದು ಊಹಿ ಸುತ್ತೇವೆ.

ಇವನ ಗ್ರಂಥ

### ಚತುರಾಸ್ಯನಿಘಂಟು.

ಇದು ಕಂದದಲ್ಲಿ ಬರೆದಿದೆ; ಪದ್ಯ 130; ಪ್ರತಿಪದ್ಯವೂ ಚತುರಾಸ್ಯ ಎಂದು ಮುಗಿಯುತ್ತದೆ. ಇದರೊಳಗೆ "ಉಸಿರ್ವೆಂ ದೇಸಿ ತದ್ಭವಂ ತತ್ಸ ಮಮಂ" ಎಂದು ಕವಿ ಹೇಳುತ್ತಾನೆ. ಗ್ರಂಥಾವತಾರದಲ್ಲಿ ಪಂಪೆಯಾಳ್ದನ ಸ್ತುತಿ ಇದೆ. ಇದರಿಂದ ಒಂದೆರಡು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ:

ಜಗುನೆಯೆ ಯಮುನೆ ದುಕೂಲವೆ|ದುಗುಲಂ ವೀಟಿಕೆಯೆ ವೀಳೆಯಂ ಪೇಟಿಕೆ ಪೇ|
ಳಿಗೆ ತಾರಗೆ ತಾರಕೆಯುಂ | ದುಗೆಯುಂದುಕೆ ತದ್ಭವಂಗಳಿವು ಚತುರಾಸ್ಯ ||
ಎಲರುಣಿಯೆನೆ ಭುಜಗಂ ನೆಲ | ಕಲನೆಂದೆನೆ ಲೋಭಿ ಕಾವನೆನೆ ಕಾಮಂ ಕಾ |
ದಲನೆಂದೆನೆ ನಲ್ಲಂ ನಾ | ಣಿಲಿಯೆನಲಭಿಮಾನಹೀನನೆಲೆ ಚತುರಾಸ್ಯ ||

---

## ಪರಂಜ್ಯೋತಿಯತಿ. ಸು. 1450

ಇವನು ಅನುಭವಮುಕುರವನ್ನು ಬರೆದಿದ್ದಾನೆ. ಈತನು ಸ್ಮಾರ್ತ ಕವಿ; ವಿದ್ಯಾಶ್ರಮನ ಶಿಷ್ಯನು; ಸುಮಾರು 1450 ರಲ್ಲಿ ಇದ್ದಿರಬಹುದೆಂದು ಊಹಿಸುತ್ತೇವೆ.

ಇವನ ಗ್ರಂಥ

ಅನುಭವಮುಕುರ

ಇದು ತ್ರಿಪದಿಯಲ್ಲಿ ಬರೆದಿದೆ; ಸಂಧಿ16, ಸೂತ್ರ 102, ತ್ರಿಪದಿ 995. ಅದ್ವೈತವೇದಾಂತವನ್ನು ಬೋಧಿಸುವ ಗ್ರಂಥ. ಸಂಧಿಗಳ ಕೊನೆಯಲ್ಲಿ ಈ ಗದ್ಯವಿದೆ—

ಇತಿ ಶ್ರೀಕೈವಲ್ಯಾನ್ವಯಪ್ರವರ್ತಕ ಪರಮಹಂಸಪರಿವ್ರಾಜಕಾಚಾರ್ಯ ಸಕಲ ಯೋಗೀಂದ್ರಬೃಂದವಂದ್ಯಪಾದಾರವಿಂದ ಶ್ರೀವಿದ್ಯಾಶ್ರಮಪಾದಕಮಲಸೀರಾಜಹಂಸ ಶ್ರೀಪರಂಜ್ಯೋತಿಯತಿವಿರಚಿತಮಪ್ಪ ಅನುಭವಮುಕುರದೊಳ್.

---

## ಕಲ್ಲರಸ. ಸು. 1450

ಈತನು ಜನವಶ್ಯವನ್ನು ಬರೆದಿದ್ದಾನೆ. ಇವನು ವೀರಶೈವಕವಿ ಎಂದು ತೋರುತ್ತದೆ. "ಧಾತ್ರೀಶದೇವನೃಪಪುತ್ರ ಮೂರುರಾಯರಗಂಡ ವೈರಿನೃಪಗಜಗಂಡಭೇರುಂಡನಾದ ಯದುವಂಶವನಧಿವಿಧು" ಮಲ್ಲಿಕಾರ್ಜುನ ನೃಪಾಲನು ತನ್ನ ಹೆಂಡತಿಗೆ ಹೇಳಿದ ಜನವಶ್ಯವನ್ನು ತಾನು ವಿಸ್ತರಿಸಿ ಕನ್ನಡ ದಲ್ಲಿ ಬರೆದಂತೆ

ಮಲ್ಲಿಕಾರ್ಜುನಧರಾ |ವಲ್ಲಭನೊಸೆದು ತನ್ನ |ನಲ್ಲಳರಿವಂತೊರೆದ ಜನವಶ್ಯಮಂ|
ಸಲ್ಲಲಿತವಾಣಿ ಕವಿ | ಕಲ್ಲರಸನರಿವವರ|ಮೆಲ್ಲೆದೇಯನಿಂಬುಗೊಳ್ವಂತೆ ಬರೆದಂ ||

ಎಂಬ ಪದ್ಯದಲ್ಲಿ ಕವಿ ಹೇಳುತ್ತಾನೆ. ಈ ಮಲ್ಲಿಕಾರ್ಜುನನು 1446 ರಿಂದ 1467ರ ವರೆಗೆ ಆಳಿದ ವಿಜಯನಗರದ ರಾಜನಾಗಿರಬೇಕೆಂದು ತೋರುತ್ತದೆ. ಆದುದರಿಂದ ಕವಿಯ ಕಾಲವು ಸುಮಾರು 1450 ಆಗಬಹುದು. ಪೂರ್ವಕವಿಗಳಲ್ಲಿ ಭೋಜನನ್ನು ಸ್ಮರಿಸಿದ್ದಾನೆ.

ಇವನ ಗ್ರಂಥ

## ಜನವಶ್ಯ

ಇದು ಭೋಗಶರಕುಸುಮಷಟ್ಪದಿಗಳಲ್ಲಿ ಬರೆದಿದೆ; ಸಂಧಿ 12. ಇದಕ್ಕೆ ಮದನತಿಲಕ, ಮಲ್ಲಿಕಾರ್ಜುನವಿಜಯ ಎಂಬ ಹೆಸರುಗಳೂ ಉಂಟು. ಕಾಮಶಾಸ್ತ್ರವನ್ನು ಪ್ರತಿಪಾದಿಸುವ ಗ್ರಂಥ. ಇದನ್ನು ಮೊದಲು "ಮಲ್ಲಿಕಾರ್ಜುನನೃಪಾಲ ಕಾಮಶಾಸ್ತ್ರದ ನೆಲೆಯನಱುಹು" ಎಂದು ಹೆಂಡತಿ ಕೇಳಲು ದೊರೆ ನಿರೂಪಿಸಿದಂತೆ ಕವಿ ಹೇಳುತ್ತಾನೆ. ಈ ಗ್ರಂಥದಲ್ಲಿ ವಾತ್ಸ್ಯಾಯನ ಮುಂತಾದವರ ಮತವು ಹೇಳಿದೆ. ಇದರ ಉತ್ಕೃಷ್ಟತೆಯನ್ನು ಕವಿ ಹೀಗೆ ಹೇಳಿದ್ದಾನೆ—

ಅಡಿಗಡಿಗೆ ಕಿವಿಗೊಡುತೆ । ನುಡಿನುಡಿಗೆ ತಲೆದೂಗು ।
ತೆಡೆಯೆಡೆಗೆ ಹೋ ಲೇಸು ಲೇಸೆನುತ್ತೆ ।
ಒಡನೊಡನೆ ರೋಮಾಂಚ । ಮಡರೆ ಮೈಯೊಳ್ ಕೇಳ್ವ ।
ರೊಡಲೊಳೀಕೃತಿರತ್ನಮೆಸೆವುದಬಲೆ ॥
ಪದಿರಿನೋವರಿಯೊಲ್ಮೆ । ಯುದಯಸ್ಥಲಂ ಸೌಖ್ಯ ।
ದುದಧಿಯಱಿವಿನ ಗೊತ್ತು ಕಳೆಯಾರನೆ ।
ಮುದದ ನೆಲೆವೀಡು ಭಾ । ವದ ಸುಗ್ಗಿಯಪ್ಪುದೆಲೆ ।
ಸುದತಿಯಾಂ ಪೇೞ್ದ ಜನವಶ್ಯಮಿಳೆಗೆ ॥

ಬಿನ್ನಣದ ನೆಲೆವೀಡು।ಕನ್ನಡದ ಪುಟ್ಟುಗಣಿ।ಚೆನ್ನ ಚೆನ್ನೆಯರಿಚ್ಚೆ ಪೆರ್ಚುವಿಕ್ಕೆ।

ಇದರಲ್ಲಿ ಪ್ರತಿಪಾದಿತವಾದ ಅಂಶಗಳನ್ನು ಈ ಪದ್ಯದಲ್ಲಿ ಸೂಚಿಸಿದ್ದಾನೆ-

ಪುರುಷರಿಂಗಿತಮನಂ।ಬರುಹಮುಖಿಯರ ತೆಱನ।ನಿರದವರ ಸಂಭೋಗಸರ್ವಸ್ವವ ।
ಪರಿಪರಿಯ ಜಾತಿಸಂ । ಕರಭೇದಮೆಂಬಿವಂ.

ಗ್ರಂಥಾವತಾರದಲ್ಲಿ ಶಿವಸ್ತುತಿಯಿದೆ. ಬಳಿಕ ಕವಿ ವಿಷ್ಣು, ದುರ್ಗಿ, ವೀರಭದ್ರ, ಗಣೇಶ, ಸರಸ್ವತಿ, ಸ್ವಗುರು ಕ್ರಿಯಾಶಕ್ತಿ ಇವರುಗಳನ್ನು ಸ್ತುತಿಸಿದ್ದಾನೆ.

ಇವನ ಬಂಧವು ಲಲಿತವಾಗಿದೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ಸರ್ವಧರ್ಮಂಗಳ್ಗೆ । ಪೂರ್ವಮಪ್ಪುದಱಿಂದೆ । ಸರ್ವಾಶ್ರಮಾಧಾರವಪ್ಪ ಕತದಿಂ ।
ಉರ್ವಿಯೊಳ್ ಮನುಜರ್ಗೆ । ಸರ್ವಸೌಖ್ಯವನೀವ । ಗುರ್ವಿನಿಂದೆಸೆವುದು ಗೃಹಸ್ಥಾಶ್ರಮಂ ॥

ತೃಣದ ಕೊನೆಯ ಜಲ | ಕಣವೆನಿಪುದು ವೆಂ । ತಣಿಸಿದ ಜವ್ವನವದಱೊಳಗೆ ।
ಎಣಿಸದೆ ಕಮ್ಮಂ ।ಗಣೆ ಕುಣಿಸಿದವೊಲ್ । ಕುಣಿಯುದನನೆ ಕುಱಿಯೆನಿಸುವನು॥

ಸುದತಿಯರಿಂಗಿತ । ವಿದು ಗುಣವಿದು ಬಗೆ । ಯಿದು ಸಾಜವಿದನುವಿದು ಜೇಷ್ಟೆ ।
ಇದು ಜಾತಿಯಿದೊಂ । ದಿದ ಧರ್ಮವಿದೆಂ । ಬುದನಱಿಯದೆ ಬೆರಸುವನಧಮ ॥

ಜಾತಿಯನಱಿಯದೆ । ಸೋತುದನಱಿಯದೆ । ರೀತಿಯನಱಿಯದೆ ಸೊಬಗೆಯರ ।
ಪ್ರೀತಿಯನಱಿಯದೆ । ಭೀತಿಯನಱಿಯದೆ । ಕೂರ್ತವನೇ ಕುಱಿಯಬ್ಜಮುಖೀ॥

ತರುಣಿ ಮನೋಜನ । ಕರಿಣಿ ಕಲೆಯು ವು । ಸ್ಫುರಿಣೆ ವಿಲಾಸದ ಸರಣಿ ಮಿಗೆ ।
ಪುರುಳಱಿಯದ ಬಾ । ಹಿರನೊಳಗಿರಲದು । ಮರುಳನ ಕೈಮಾಣಿಕದಂತೆ ॥

---

## ನಾರಾಯಣಕವಿ. ಸು. 1450

ಈತನು ಭಾಗವತಸಂಹಿತಾರ್ಥವನ್ನು ಬರೆದಿದ್ದಾನೆ. ಇವನು ಬ್ರಾಹ್ಮಣಕವಿ; ತನ್ನ ಗುರುಪರಂಪರೆಯನ್ನು ಹೀಗೆ ಹೇಳಿದ್ದಾನೆ—ವಿದ್ಯಾರಣ್ಯಯೋಗಿ, ಶಿಷ್ಯ ಆತ್ಮಾರಾಮಯೋಗಿ, ಶಿಷ್ಯ ನರಸಿಂಹ, ಶಿಷ್ಯ ನಾರಾಯಣಕವಿ. ರಾಮಚಂದ್ರಚರಣಾರವಿಂದ ಮಕರಂದಾಸ್ವಾದಿತಭ್ರಮರವರ, ಹರಿದಾಸೋತ್ತಮ ಎಂದು ತನ್ನನ್ನು ವಿಶೇಷಿಸಿ ಹೇಳಿಕೊಂಡಿದ್ದಾನೆ. ಇವನು ಹೇಳುವ ವಿದ್ಯಾರಣ್ಯಯೋಗಿ 1386 ರಲ್ಲಿ ಗತಿಸಿದ ಶೃಂಗೇರಿಯ ಮಠದ ಸ್ವಾಮಿಯಾಗಿದ್ದ ಪಕ್ಷದಲ್ಲಿ ಇವನ ಕಾಲವು ಸುಮಾರು 1450 ಆಗಬಹುದು.

ಇವನ ಗ್ರಂಥ

### ಭಾಗವತಸಂಹಿತಾರ್ಥ

ಇದು ಗದ್ಯರೂಪವಾಗಿದೆ; ಭಾಗವತಮಹಾಪುರಾಣದ ತಾತ್ಪರ್ಯವನ್ನು ನಿರೂಪಿಸುತ್ತದೆ. ನಮಗೆ ದೊರೆತ ಪ್ರತಿಯಲ್ಲಿ 4 ಸ್ಕಂಧಗಳು ಮಾತ್ರ ಇವೆ.

---

## ವಿದ್ಯಾನಂದ. 1455

ಈತನು ಪ್ರಾಯಶ್ಚಿತ್ತವೆಂಬ ಸ್ವರಚಿತಸಂಸ್ಕೃತಗ್ರಂಥಕ್ಕೆ ಕನ್ನಡ ಟೀಕೆಯನ್ನು ಬರೆದಿದ್ದಾನೆ. ಇವನು ಜೈನಕವಿ; ಬ್ರಹ್ಮಸೂರಿಯ ಅಥವಾ ಬೊಮ್ಮರಸೋಪಾಧ್ಯಾಯನ ಮಗನು. ಅಕಲಂಕ, ಚಂದ್ರಪ್ರಭ, ವಿದ್ಯಾನಂದ ಇವರುಗಳನ್ನು ತನಗೆ ವ್ರತಗುರುವಿದ್ಯಾಗುರುತ್ರಯ ಎಂದು ಹೇಳಿದ್ದಾನೆ. ಅಲ್ಲದೆ ವಿಜಯಕೀರ್ತಿ ಎಂಬ ಗುರು ಬಾಲ್ಯದಿಂದ ಉಪದೇಶ ಮಾಡಿ ಪಾಲಿಸಿದನು ಎನ್ನುತ್ತಾನೆ. ಮೂಲದ ಆರಂಭದಲ್ಲಿ ವಿಜಯಜಿನಸ್ತುತಿಯಿದೆ. ಈ ವಿಜಯಜಿನನು ಕನಕಗಿರಿಯೆಂಬ ನಾಮಾಂತರವುಳ್ಳ ಮಲೆಯೂರ ದೇವರು. ಕವಿ ಆಪ್ರಾಂತದವನಾಗಿರಬಹುದು. ಯುವಸಂವತ್ಸರದಲ್ಲಿ ಗ್ರಂಥವನ್ನು ಬರೆದಂತೆ ಹೇಳಿದೆ. ಇದು ಕ್ರಿಸ್ತ 1455 ಆಗಿರಬಹುದೆಂದು ತೋರುತ್ತದೆ. ಇವನ ವ್ಯಾಖ್ಯಾನವು ಪ್ರೌಢವಾಗಿ ಹಳಗನ್ನಡದಲ್ಲಿ ಬರೆಯಲ್ಪಟ್ಟಿದೆ. ಅಲ್ಲಲ್ಲಿ ಕಂದಗಳೂ ವೃತ್ತಗಳೂ ಉದಾಹೃತವಾಗಿವೆ. ಇವುಗಳನ್ನು ಗ್ರಂಥಾಂತರದಿಂದ ಅನುವಾದಮಾಡಿದಂತೆ ತೋರುವುದಿಲ್ಲ; ಇವು ಕವಿಕೃತವೆಂದೇ ತೋರುತ್ತದೆ. ಈ ಪದ್ಯಗಳಲ್ಲಿ ಕೆಲವನ್ನು ಕೆಳಗೆ ಬರೆಯುತ್ತೇವೆ—

### ಸತ್ಪುರುಷರು

ಎನಿತೆನಿತು ದೋಷತತಿಯೊಳ | ವನಿತಂ ಪ್ರಕಟಿಸದೆ ಸುಗುಣಮೊಂದನೆ ಕೊಳ್ವ |
ಮನುಜನೆ ಧಾರ್ಮಿಕನುತ್ತಮ | ನನೂನಗುಣಮಣಿಕರಂಡಹೃದಯಂ ಸದಯಂ ||
ಇನಿತೆಲ್ಲಂ ಪುಣ್ಯದ ಫಲ | ಮನಿತಂ ಸತ್ಪಾತ್ರತತಿಗೆ ದಣಿಯಿಸಿ ತನಗೊಂ |
ದಿನಿಸನೆ ಸೇವಿಪ ಮನುಜನ | ಘನಪುಣ್ಯವ್ರಜದ ಬೆಳೆಯ ಕಡೆಗಾಣ್ಬವರಾರ್ ||

### ಕರ್ಮ

ಸಿರಿವಂತರಡಿಯೊಳಿರಿಸುವ | ಪಿರಿದುಂ ದುರ್ದೀನಹೀನಮಂ ನುಡಿಯಿಸುವಾ |
ದರಿಸದೆ ನಿರ್ದಾಟಿಸೆ ಪ | ಲ್ಗಿರಿಯಿಸುವಾ ಕರ್ಮದಲ್ಲಿ ಕೋಪಿಸು ಜೀವಾ ||

### ಗುರುದಕ್ಷಿಣೆ

ಮಕ್ಕಳನೋದಲಿಟ್ಟು ಬಿಡದೋದಿಸುವರ್ಗೆ ಮನೀಪಿತಾರ್ಥಮಂ |
ದೊಕ್ಕನೆ ಕೊಟ್ಟು ಮನ್ನಿಸದೆ ಬೇಡಿದೊಡೀಯದೆ ವಂಚನೋಕ್ತಿಯಿಂ ||
ಕಕ್ಕಸಮಾಗಿ ಕಾಲಮನೆ ನೂಂಕಿ ಕುಡಲ್ ಮನಮಿಲ್ಲದಿರ್ದರಾ |
ಮಕ್ಕಳ ಬುದ್ಧಿ ಕೆಟ್ಟು ಜಡರಪ್ಪರವರ್ಗ್ಗಳುಮುತ್ತರೋತ್ತರಂ ||

## ಗಂಗಾಧರಾಚಾರ್ಯ. ಸು. 1470

ಈತನು ಆರಾಧ್ಯಚಾರಿತ್ರವನ್ನು ಬರೆದ ನೀಲಕಂಠಾಚಾರ್ಯನ (ಸು. 1485) ಗುರು. ಇವನನ್ನು ನೀಲಕಂಠಾಚಾರ್ಯನು ತನ್ನ ಗ್ರಂಥದಲ್ಲಿ ಕರ್ಣಾಟಸಂಸ್ಕೃತಭಾಷಾಪ್ರವೀಣನೆಂದೂ ಶಿವಾಗಮಬೋಧಕನೆಂದೂ ಈ ಪದ್ಯದಲ್ಲಿ ಸ್ತುತಿಸಿದ್ದಾನೆ--

ಮಿನುಪ ಕರ್ಣಾಟಸಂಸ್ಕೃತಶಬ್ದಶಾಸ್ತ್ರದಿಂ ।
ಕನದಮಲಮಾದ ಸವಿನುಡಿಪಸರದೆಸಕದಿಂ ।
ಜನವಿತಾನದ ಕಿವಿಗೆ ಮಾಣಿಕ್ಯಖಚಿತನೂತ್ನಾಭರಣಮಂ ರಚಿಸುತೆ ॥
ಮನಸಿಜಾಂತಕನಾಗಮಂಗಳಂ ಭಕ್ತರ್ಗೆ ।
ಮನವೊಸೆದು ಬೋಧಿಸುತ್ತೆನಗೆಸದ್ವಿದ್ಯೆಯಂ ।
ವಿನಯದಿಂದಿತ್ತ ಗಂಗಾಧರಾಚಾರ್ಯಂಗೆ ವಂದಿಪೆಂ ಭಕ್ತಿಯಿಂದೆ ॥

ಈತನು ಕವಿ ಎಂಬುದರಲ್ಲಿ ಸಂದೇಹವಿಲ್ಲ. ಆವ ಗ್ರಂಥಗಳನ್ನು ಬರೆದಿದ್ದಾನೆಯೋ ತಿಳಿಯದು.

---

## ತೋಂಟದಸಿದ್ಧೇಶ್ವರ. ಸು. 1470

ಈತನು ಷಟ್ಸ್ಥಲಜ್ಞಾನಸಾರಾಮೃತವನ್ನು ಬರೆದಿದ್ದಾನೆ. ಇವನು ವೀರಶೈವಕವಿ. ಇವನಿಗೆ ತೋಂಟದಸಿದ್ಧಲಿಂಗಯತಿ ಎಂಬ ಹೆಸರೂ ಉಂಟು. ಇವನು ಹರದನಹಳ್ಳಿ ಗೋಸಲಚೆನ್ನಬಸವೇಶ್ವರನ ಶಿಷ್ಯನು. ಕಗ್ಗರೆಯ ಸಮೀಪದಲ್ಲಿರುವ ನಾಗಿಣೀನದಿಯ ತೀರದಲ್ಲಿ ತೋಂಟದೊಳಗೆ ಬಹಳಕಾಲ ಶಿವಯೋಗದಲ್ಲಿ ಇದ್ದುದರಿಂದ ಈತನಿಗೆ "ತೋಂಟದ" ಎಂಬ ವಿಶೇಷಣವು ರೂಢಿಯಾಗಿ ಬಂದಿದೆ. ಇವನು ಕುಣಿಗಲಿಗೆ ಸಮೀಪದಲ್ಲಿರುವ ಎಡೆಯೂರಲ್ಲಿ ಸಮಾಧಿಯನ್ನು ಹೊಂದಿದನು. ಆ ಊರಲ್ಲಿ ಈತನ ಜ್ಞಾಪಕಾರ್ಥವಾಗಿ ಕಟ್ಟಿಸಿದ ಸಿದ್ಧಲಿಂಗೇಶ್ವರವೆಂಬ ಒಂದು ದೇವಸ್ಥಾನವು ಈಗಲೂ ಇದೆ. ಈತನು ವೀರಶೈವರಲ್ಲಿ ಬಹಳ ಪ್ರಸಿದ್ಧನಾದ ಗುರು. ಈತನ ಚರಿತೆಯನ್ನು ಕುರಿತು ಹಲವು ಗ್ರಂಥಗಳು ಹುಟ್ಟವೆ. ಇವುಗಳಲ್ಲಿ ಈತನು "ನಿರಂಜನಗಣೇಶ್ವರನ ಅಪರಾವತಾರ" ವೆಂದು ಹೇಳಿದೆ. ಮೇಲೆ ಹೇಳಿದ ಸಿದ್ಧಲಿಂಗೇಶ್ವರದೇವಸ್ಥಾನದ ಪ್ರಾಕಾರದಲ್ಲಿ ಸುಮಾರು 1500 ರಲ್ಲಿ ಬರೆದ

ಒಂದು ಶಿಲಾಶಾಸನವಿದೆ.[1] ಇದರಲ್ಲಿ ಈತನ ಮಹಿಮೆಯನ್ನು ವಿಶೇಷವಾಗಿ ಕೊಂಡಾಡಿ ಈತನ ಶಿಷ್ಯರಲ್ಲಿ ಕೆಲವರ ಹೆಸರನ್ನು ಹೇಳಿ ಈತನಿಗೋಸ್ಕರ ಕೆಲರು ಭಕ್ತರು ಎಡೆಯೂರಲ್ಲಿ ಒಂದು ಕಲ್ಲುಮಠವನ್ನು ಕಟ್ಟಿಸಿದಂತೆ ಹೇಳಿದೆ. ಇದರಿಂದ ಸ್ವಲ್ಪಭಾಗವನ್ನು ತೆಗೆದು ಕೆಳಗೆ ಬರೆಯುತ್ತೇವೆ—

ಇಂತಪ್ಪ ಅನಾದಿಜಂಗಮವೇ ಜಗದ್ಧಿತಾರ್ಥವಾಗಿ ಚರಿಸಿದ ಕ್ರಮವೇತೆಂದಡೆ-ಜ್ಞಾನಕ್ರಿಯಾಸ್ವರೂಪನುಂ, ಸರ್ವಾಂಗಲಿಂಗಿ ಷಟ್ಸ್ಥಲಜ್ಞಾನಿ ಸರ್ವಾಚಾರಸಂಪನ್ನ ಪಾದೋದಕಪ್ರಸಾದಪ್ರತಿಷ್ಠಾಚಾರ್ಯನುಂ, ಅಷ್ಟಾವರಣಾಲಂಕರಣ ದ್ವೈತಾದ್ವೈತತಿಮಿರಮಾರ್ತಾಂಡನುಂ, ಇಂತಪ್ಪ ದಿವ್ಯಶಿವಯೋಗಿ ಸಿದ್ಧಲಿಂಗೇಶ್ವರಂಗೆ ಸಮ್ಯಗ್ಜ್ಞಾನೋದಯವಾಗಿ ಸಂಸಾರಹೇಯಮಂ ಮಾಡಿ ಶರಣುಹೊಕ್ಕ ಶಿಷ್ಯಜನಗಳ ನಾಮಪರಿಕ್ರಮಂಗಳೆಂತೆಂದಡೆ—ಸಪ್ಪೆದೇವರು, ಉಪ್ಪಿನಹಳ್ಳಿಯ ಸ್ವಾಮಿ ಸಿದ್ಧದೇವರು, ನಂಜೆದೇವರು, ಬೋಳಬಸವರಾಜದೇವರು, ಗುಮ್ಮಳಾಪುರದ ಸಿದ್ಧಲಿಂಗದೇವರು, ಪಟಣದೇವರು, ರೇವಣಸಿದ್ಧದೇವರು, ಸೀಲವಂತದೇವರು, ಚಿಟ್ಟಿಗದೇವರು ಇಂತೆ ಇವರು ಮುಖ್ಯವಾದ ಭಕ್ತಮಾಹೇಶ್ವರರ್ಗ್ಗೆ ಷಟ್ಸ್ಥಲಜ್ಞಾನಲಿಂಗಾಂಗಸಂಬಂಧಸಮರಸೈಕಾರ್ಥಮಂ ಬೋಧಿಸಿ ಮುಕ್ತರಂ ಮಾಡಿ ಷಟ್ಸ್ಥಲೈಕಾರ್ಥವಾಗಿ ಮಾಡುವ ಕ್ರಿಯೆಗಳೆಲ್ಲ ನಿಷ್ಪತ್ತಿಯಾಗಿ ಎಡೆಯ ಊರಲ್ಲಿ ತಮಗೆ ಕಟ್ಟಿಸಿದ ಮಠದಲ್ಲಿ ಶಿವಯೋಗಸಮಾಧಿಸನ್ನದ್ಧರಾದರು. ತೋಂಟದಸ್ವಾಮಿಯ ಪಾದಪದ್ಮಾರಾಧಕರಾದ ದಾನಿವಾಸನಿವಾಸಿಗಳಾದ ಚೆನ್ನರಾಯಒಡೆಯರು ಚೆನ್ನರಾಯಒಡೆಯರ ಮಕ್ಕಳು ಲಿಂಗಪ್ಪಒಡೆಯರು ಲಿಂಗಪ್ಪಒಡೆಯರ ಮಕ್ಕಳು ಪಾದೋದಕಪ್ರಸಾದಸಂಪನ್ನರಾದ ಚೆನ್ನವೀರಪ್ಪಒಡೆಯರು ಚೆನ್ನವೀರಪ್ಪಒಡೆಯರ ಸತಿ ಪರ್ವತಮ್ಮ ದಂಪತಿಗಳು ತಮ್ಮ ಭಕ್ತಿಯಿಂದ ತೋಂಟದ ಸ್ವಾಮಿಗೆ ಕಲ್ಲುಮಠವ ಕಟ್ಟಬೇಕೆಂದು ಚಿಟ್ಟಿಗದೇವರಿಗೆ ಪದಾರ್ಥಮಂ ಕೊಟ್ಟು ನಮಸ್ಕಾರಮಂ ಮಾಡಲಾಗಿ ಭಕ್ತಿಪದಾರ್ಥಮಂ ಕೈಕೊಂಡು ಎಡೆಯೂರಿಗೆ ಬಿಜಯಂಗೆಯ್ದು ತೋಂಟದಸ್ವಾಮಿಗೆ ಕಲ್ಲುಮಠವನು ಎಂಟು ಜಡೆಯ ಬಗೆಯ ಹಿರಿಯರು ಚಿಟ್ಟಿಗದೇವರು ಕಟ್ಟಿಸಿದರು.

ಈತನು ವಿಜಯನಗರದ ರಾಜನಾದ ವಿರೂಪಾಕ್ಷನ (1467-1478) ಕಾಲದಲ್ಲಿದ್ದಂತೆ ವಿರೂಪಾಕ್ಷಪಂಡಿತನ (1584) ಚೆನ್ನಬಸವಪುರಾಣದಿಂದ[2]

1. Kunigal 49. 2. ಸಂಧಿ 63, ಪದ್ಯಗಳು 39-40.

ಊಹಿಸಬಹುದಾಗಿದೆ. ಇವನ ಕಾಲವು ಸುಮಾರು 1470 ಆಗಬಹುದು. ಚೆನ್ನಬಸವಪುರಾಣದಲ್ಲಿ ಈತನ ವಿಷಯವಾಗಿ ಹೀಗೆ ಹೇಳಿದೆ—

ಈಶಂ ನಿರಂಜನಗಣೇಶನೊಡನೆ ||
ವರಗಣೇಶ್ವರರನೇಳ್ನೂರ್ವರಂ ಕೂಡಿಕೊಂ | ಡಿರದೆ ಭೂಮಿಯೊಳುದಿಸಿ ಜಂಗಮ ಸ್ಥಲವಾಂತು |
ಪರಮಷಟ್ಸ್ಥಲವನುದ್ಧರಿಸೆಂದು ಕಳುಹಲವರೊಡಗೂಡಿ ಭೂಮಿಗಿಳಿದು ||
ಪರಮಗೋಸಲಚೆನ್ನಬಸವೇಶ್ವರನ ಹಸ್ತ | ಸರಸಿರುಹದಿಂದಾ ನಿರಂಜನಗಣೇಶ್ವರಂ|
ಹರುಷದಿಂದೊಗೆದು ಸಿದ್ಧೇಶನಾಮವನಾಂತು ಕಗ್ಗೆರೆಯ ತೋಂಟಕ್ಕೈದಿ ||
ಇರೆ ನಂಬಿಯಣ್ಣನೆಂಬಾತನತಿಭಕ್ತಿಯಿಂ| ಶರಣೆಂದು ಭಿಕ್ಷಕ್ಕೆ ಬಿನ್ನವಿಸಿಕೊಂಡೀಗ|
ತಿರುಗಿ ಬಂದಾನೆ ಕರಕೊಂಡು ಪೋದಪೆನೆಂದು ಕಗ್ಗೆರೆಗೆ ಪೋಗಲಾಗ ||
ಜಗಳದಿಂದೂರೊಡೆದುಪೋಗಿ ಕೆಲದಿವಸಕ್ಕೆ | ಮಗುಳೆ ಬಪ್ಪನ್ನೆಗಂ ತೋಂಟದೊಳಗೇನುಮಂ |
ಬಗೆಯದೆ ಶಿವಧ್ಯಾನದಿಂದೆ ಪರವಶವನೈದಿರೆ ಗೆದಲೆ ಹುತ್ತವಿಕ್ಕೆ ||
ಜಗವೆಲ್ಲವತಿಚೋದ್ಯದಿಂ ನೋಡಿ ಹುತ್ತಮಂ ಬಗಿದು ಕಂಡಾಗ ತೋಂಟದ ಸಿದ್ಧಲಿಂಗನೆಂ |
ಬಗಣಿತಮಹಾಪುರುಷನೆಂದು ಪೂಜಿಸುವರೆಲೆ ಸಿದ್ಧರಾಮೇಶ ಕೇಳು ||

ಚೆನ್ನಬಸವಪುರಾಣದಲ್ಲಿಯೂ ವಿರಕ್ತತೋಂಟದಾರ್ಯನ (ಸು. 1560) ಸಿದ್ಧೇಶ್ವರಪುರಾಣದಲ್ಲಿಯೂ ಈತನ ಶಿಷ್ಯಮಂಡಲಿಯಲ್ಲಿ ಮೇಲೆಹೇಳಿದ ಶಾಸನದಲ್ಲಿ ಉಕ್ತವಾದ ಹೆಸರುಗಳಜತೆಗೆ ಇನ್ನೂ ಕೆಲವು ಹೆಸರುಗಳುಹೇಳಿವೆ.[1]

---

1 ಚೆನ್ನಬಸವಪುರಾಣ—ಸಿದ್ಧಲಿಂಗೇಶ್ವರ, ಕಂಬಳಿಯದೇವ, ಸಿದ್ಧನಂಜೇಶ್ವರ, ಚೆನ್ನದೇವ, ದೊಡ್ಡಸಿದ್ಧಲಿಂಗೇಶ್ವರ, ಕಂಕಣದದೇವ, ಲಂಬಕರ್ಣದದೇವ, ಸಿದ್ಧಮಲ್ಲೇಶ್ವರ, ಗುಮ್ಮಳಾಪುರದ ಸಿದ್ಧಲಿಂಗೇಶ್ವರ, ಎಡತೊರೆಯ ಗುರುಸಿದ್ಧವೀರಣ್ಣೊಡೆಯ, ಘನಲಿಂಗದೇವ, ಚಿಕ್ಕಮಲ್ಲೇಶ, ಮುರುಳಸಿದ್ಧೇಶ್ವರ, ಚಂದ್ರಶೇಖರ, ಸುರಿಗಿಯಾರ್ಯ, ಶಾಂತಮಲ್ಲಿಕಾರ್ಜುನದೇವ, ಬೆಡಗಿನಪರ್ವತೇಶ್ವರ, ಪಟ್ಟಣದದೇವ, ಜಿಗುನಿಯಮುರುಳದೇವ, ಮಾಳಿಯದೇವ, ಬತ್ತಲೆಯದೇವ, ಸಂಪಗೆಯ ರಾಜವಟ್ಟದೇವ, ಸಪ್ಪೆಯಾರ್ಯ, ಉಪ್ಪಿನಹಳ್ಳಿಯಾರ್ಯ, ಶೀಲವಂತಾರ್ಯ, ಕೊಡಗಿಯಹಳ್ಳಿಯಾರ್ಯ, ಜೋಲಿಯಬಸವೇಶ್ವರ, ರಾಜವಟ್ಟಕೋರಿಯ ಸಿದ್ಧಬಸವೇಶ್ವರ, ಹಿರಣ್ಯಾರ್ಯ, ಶಿವಪೂಜೆಯಾರ್ಯ ಅಥವಾ ಬೋಳಬಸವೇಶ, ಕಿತ್ತಾವರದ ಚೆನ್ನಮಲ್ಲೇಶ್ವರ. ಸಿದ್ಧೇಶ್ವರಪುರಾಣ—ಪಟ್ಟಣದದೇವ, ಬೋಳಬಸವ, ಸಪ್ಪೆಯಯತಿ, ಸಿದ್ಧಮಲ್ಲೇಶ, ಘಟ್ಟಸಿದ್ಧಯ್ಯ, ಉಪ್ಪಿನಹಳ್ಳಿಯಯ್ಯ, ರಾಜೋಟಿಯದೇವ, ಚಿಟ್ಟಿಗಯತೀಶ್ವರ, ಚಂದ್ರಶೇಖರ, ಕಟ್ಟೆಯಪುರದ ನಂಜದೇವ, ಘನಲಿಂಗಿದೇವ, ಗುಮ್ಮಳಾಪುರದ ಸಿದ್ಧಲಿಂಗೇಶ, ಶೀಲವಂತೇಶ್ವರ, ಹುಚ್ಚುಪರ್ವತದೇವ, ಕಂಕಣದದೇವ, ದೊಡ್ಡಸಿದ್ಧಯ್ಯ.

ಇವನ ವಿಷಯವಾಗಿ ವಿರಕ್ತತೋಂಟದಾರ್ಯನ ಸಿದ್ಧೇಶ್ವರಪುರಾಣ, ಶಾಂತೇಶನ (1561) ತೋಂಟದಸಿದ್ಧೇಶ್ವರಪುರಾಣ ಮೊದಲಾದ ಗ್ರಂಥಗಳು ಹುಟ್ಟಿವೆ. ಪ್ರಾಯಿಕವಾಗಿ ಈತನ ಕಾಲಕ್ಕೆ ಈಚೆಯ ವೀರಶೈವಕವಿಗಳೆಲ್ಲಾ ಈತನನ್ನು ತಮ್ಮ ಗ್ರಂಥಗಳಲ್ಲಿ ಸ್ತುತಿಸಿದ್ದಾರೆ.

ಇವನ ಗ್ರಂಥ

ಷಟ್ಸ್ಥಲಜ್ಞಾನಸಾರಾಮೃತ.

ಇದು ವಚನರೂಪವಾಗಿದೆ; ವಚನ 701, ವೃತ್ತ 7; ಪ್ರತಿವಚನವೂ 'ಮಹಾಲಿಂಗಗುರುಶಿವಸಿದ್ಧೇಶ್ವರಪ್ರಭುವೆ' ಎಂದು ಮುಗಿಯುತ್ತದೆ. ಇದರಲ್ಲಿ ಷಟ್ಸ್ಥಲದ ವಿಚಾರವು ವಿಸ್ತಾರವಾಗಿ ನಿರೂಪಿಸಲ್ಪಟ್ಟಿದೆ. ಇದರಿಂದ ಕೆಲವು ವಚನಗಳನ್ನು ಉದ್ಧರಿಸಿ ಬರೆಯುತ್ತೇವೆ—

(1) ಉದಯಕಾಲದೊಳೆದ್ದು ಹೂಪತ್ರೆಗಳ ಕೊಯ್ಯೆಂದು ಹೋಱ ಉಪಚಾರ ಮಾಡುವುದೆಲ್ಲ ಬಱಿಯ ಭಾವದ ಬಟಿಲಿಕೆ ನೋಡಾ. ಅಱಿಲದೆ ಬಱಲದೆ ಆಯಾಸಬಡದೆ ಒಳಗಣ ಜ್ಯೋತಿಯ ಬೆಳಗಿನ ಕಳೆಯು ಕಮಲವ ಪೂಜಿಸಬಲ್ಲ ಶರಣಂಗೆ ಬೆಳಗಾಗಿ ಎದ್ದು ಪೂಜಿಸಿಹೆನೆಂಬ ಕಳವಳವೇನು ಹೇಳಾ ಮಹಾಲಿಂಗಗುರುಶಿವಸಿದ್ಧೇಶ್ವರಪ್ರಭುವೇ.

(2) ನಿತ್ಯತೃಪ್ತಂಗೆ ಹಸಿವಿನ ಭಯವುಂಟೆ? ಸತ್ಯಜ್ಞಾನಿಗೆ ಅಜ್ಞಾನದ ಭಯವುಂಟೆ ? ವಾತಪಿತ್ತಶ್ಲೇಷ್ಮ ನಷ್ಟವಾದಾತಂಗೆ ತಾಪತ್ರಯಾದಿಗಳ ಭಯವುಂಟೆ ? ಸ್ವಯಂಜ್ಯೋತಿಪ್ರಕಾಶವುಳ್ಳಾತನು ಚಂದ್ರಸೂರ್ಯಾದಿಗಳನಾಶ್ರಯಿಸುವನೆ ? ನಿಜದಿಂದ ತನ್ನ ತಾನಱಿದು ತಾನೇ ತಾನಾದಾತನು ಮಾಯೆಯ ಗಜಬಜೆಯ ಹುಸಿಗೆ ಬೆದಱುವನೆ ಮಹಾಶರಣನು ? ಮಹಾಲಿಂಗಗುರುಶಿವಸಿದ್ಧೇಶ್ವರಪ್ರಭುವೇ.

(3) ತಾನೊಬ್ಬನು ಕೊಲುವರು ಹಲಬರು. ಹಲವು ದಿಕ್ಕಿನ ಕಿಚ್ಚೆದ್ದು ಸುಡುವಲ್ಲಿ ನೆಲನ ಮಱೆಹೊಗಲು ಜಲಮಯವಾಯಿತ್ತು ನೋಡಾ. ಜಲದೊಳಗಾಱುವನ ಜಲಂಧರರಕ್ಕಸ ಭಕ್ಷಿಸುತ್ತಿರಲು ಅಕಟಕಟಾ ಶಿವನೆ ಎನಲು ಮುಕ್ಕಣ್ಣ ತೆಱೆದನು; ರಕ್ಕಸನ ಸೊಕ್ಕು ಮುಱಿಯಿತ್ತು, ಕೊಲುವರು ಹಲಬರು ನೆಲನ ಬಿಟ್ಟೋಡಿದರು, ಹಲವು ದಿಕ್ಕಿನ ಕಿಚ್ಚು ಕೆಟ್ಟಿತ್ತು, ನೆಲ ಕರಗಿತ್ತು, ಜಲವಱತಿತ್ತು, ಜಲಧಿಯ ಸಾಗರವ ದಾಂಟಿ ಅಮೃತಸಾಗರವ ಬೆರಸಿ ಅನುಪಮಸುಖಿಯಾನಯ್ಯ ಮಹಾಲಿಂಗಗುರುಶಿವಸಿದ್ಧೇಶ್ವರಪ್ರಭುವೇ.

## ಗುಬ್ಬಿಯ ಮಲ್ಲಣ್ಣ. ಸು. 1475

ಇವನು ಗಣಭಾಷ್ಯರತ್ನಮಾಲೆ, ವಾತುಲತಂತ್ರಟೀಕೆ ಇವುಗಳನ್ನು ಬರೆದಿದ್ದಾನೆ. ಈತನು ವೀರಶೈವಕವಿ; ಭಾವಚಿಂತಾರತ್ನವನ್ನೂ (1513) ವೀರಶೈವಾಮೃತಪುರಾಣವನ್ನೂ (1530) ಬರೆದ ಬಸವಪುರಾಣದ ಮಲ್ಲಣಾರ್ಯನ ಪಿತಾಮಹನು. ಇವನ ಸ್ಥಳ ಗುಬ್ಬಿ. ವೀರಶೈವಾಮೃತಪುರಾಣದಲ್ಲಿ ಇವನ ಪರಂಪರೆ ಹೀಗೆ ಹೇಳಿದೆ:—ಅಮರಗುಂಡದ ಮಲ್ಲಿಕಾರ್ಜುನ; ಇವನ ಶಿಷ್ಯ ಶೂಲವೇರಿದ ಮಹತ್ವವುಳ್ಳ ಗುರುಭಕ್ತ; ಇವನ ಮಗ ದೇಶಿಕಪಟ್ಟವರ್ಧನನಾದ ಸೌಂದರ್ಯಮಲ್ಲಿಕಾರ್ಜುನಪಂಡಿತ; ಇವನ ಮಗ ನಾಗನಾಥಾರ್ಯ; ಇವನ ಮಗ ಅಮರಗುಂಡಾರ್ಯ; ಇವನ ವಂಶೋದ್ಭೂತ ಕವಿ ಗುಬ್ಬಿಯಮಲ್ಲಣ್ಣ. ಕವಿ ಹರಶರಣರಣುಗ, ಹರಶರಣರ ಕಾರುಣ್ಯದಶಿಶು ಎಂದು ತನ್ನನ್ನು ಹೇಳಿಕೊಂಡಿದ್ದಾನೆ. ಇವನ ಪ್ರಪೌತ್ರನಾದ ಶಾಂತೇಶನ (1561) ಸಿದ್ಧೇಶ್ವರಪುರಾಣದಿಂದ ಈತನು ತೋಂಟದ ಸಿದ್ಧಲಿಂಗಯತಿಯ (ಸು. 1470) ಶಿಷ್ಯನಾಗಿದ್ದಂತೆ ತಿಳಿಯುತ್ತದೆ. ಇವನ ಕಾಲವು ಸುಮಾರು 1475 ಆಗಬಹುದು.

ಈತನ ಗ್ರಂಥಗಳಲ್ಲಿ

### 1. ಗಣಭಾಷ್ಯರತ್ನಮಾಲೆ

ಇದು ವಚನಗ್ರಂಥ. ಇದಕ್ಕೆ ಗಣಭಾಷಿತರತ್ನಮಾಲೆ ಎಂಬ ಹೆಸರೂ ಉಂಟು.

ಇದರಲ್ಲಿ ಕವಿ ಅಂಗಸ್ಥಲ 44, ಲಿಂಗಸ್ಥಲ 57 ಈ 101 ಸ್ಥಲಗಳಲ್ಲಿ ವೀರಶೈವರು ಆಚರಿಸಬೇಕಾದ ಆಚರಣೆಗಳನ್ನು ಅನುಭವಾದಿಸದ್ಭಕ್ತಮಹಿಮಾಂತವಾದ 101 ಸ್ಥಲಗಳೆಂದು ಸಂಗ್ರಹಿಸಿ ವೇದಾಗಮಪುರಾಣೇತಿಹಾಸಾದಿಗ್ರಂಥಗಳಿಂದ ಪ್ರಮಾಣಗಳನ್ನೂ ಪುರಾತನರ ಕನ್ನಡವಚನಗಳನ್ನೂ ಉದಾಹರಿಸಿ ವಿವರಿಸಿದ್ದಾನೆ. ಅಂಗಸ್ಥಲಕ್ಕೆ ಸೇರಿದ ಗ್ರಂಥ 237, ವಚನ 227, ಲಿಂಗಸ್ಥಲಕ್ಕೆ ಸೇರಿದ ಗ್ರಂಥ 246, ವಚನ 264. ಒಟ್ಟು ಗ್ರಂಥವಚನಗಳು 974. ಈ ಗ್ರಂಥದ ವಿಷಯವಾಗಿ ಕವಿ ಹೀಗೆ ಬರೆದಿದ್ದಾನೆ—

ಇದು ಪರಮವೀರಶೈವಸಿದ್ಧಾಂತತತ್ವಜ್ಞಾನ, ಇದು ವೀರಶೈವಪ್ರತಿಷ್ಠಾಸ್ಥಾಪನಾಚಾರ್ಯ, ಇದು ದಿವ್ಯವೇದಾಂತಶಿರೋಮಣಿ, ಇದು ಸಮಸ್ತಶಾಸ್ತ್ರಮುಖ್ಯಮುಖದರ್ಪಣ, ಇದು ಮಹಾಜ್ಞಾನಪ್ರವರ್ಧನಪರಮಾನುಭಾವಸಂಬೋಧೆ, ಇದು ಸರ್ವಾ

ಚಾರಸಂಪನ್ನರ ಸಮಾರೂಢಸಂಗ್ರಹ, ಇದು ಪರಮರಾಜಯೋಗಸಾಧ್ಯಸನ್ನಿಧಾನ, ಇದು ರಸಾಮೃತಪ್ರಸನ್ನಪ್ರಸಾದ, ಇದು ಅಜ್ಞಾನತಿಮಿರಾಂಜನವಪ್ಪ ಮಹಾಪ್ರಸಂಗ. ಬಸವರಾಜದೇವರು, ಚೆನ್ನಬಸವದೇವರು, ಪ್ರಭುದೇವರು ಮುಖ್ಯವಾದ ಅಸಂಖ್ಯಾತ ಮಹಾಗಣಂಗಳು ನೂಱೊಂದಱಲ್ಲಿ ನಡೆದು ನುಡಿದ ವಚನಂಗಳು ಸ್ಥಲಭಿನ್ನವಾಗಿ ದೋಱಡೆ ಚಂದವಲ್ಲೆಂದು ಕಂಠಮಾಲೆಯ ಕೋದು ಹಣಿಗೆಯಱದು ಸೇರಿಸಿದೆನು ನಿಮ್ಮ ಕಾರುಣ್ಯದ ಶಿಶು ಗುಬ್ಬಿಯಮಲ್ಲಣ್ಣಾಗಳು; ಶಿವಗಣಂಗಳ ಶಿವಾನುಭಾವಸ್ತೋತ್ರಮಂ ಮಾಡಿ ಶಿವಗಣಂಗಳ ಮುಖಕ್ಕೆ ನಿರ್ಮಲದರ್ಪಣಮೆನೆ ಸಮರ್ಪಿಸಿದೆನು.

ಇದು ಶ್ರೀಮದನಿರ್ವಾಚ್ಯಸ್ವರೂಪನಪ್ಪ ಪರಶಿವನ ಸಾಕಾರಸ್ವರೂಪರಾದ ಅಸಂಖ್ಯಾತಮಹಾಗಣಂಗಳ್ ಪರಮಕಲ್ಯಾಣಪುರದೊಳ್ ವಿರಚಿಸಿ ಹರಭಕ್ತಿಮಾರ್ಗಮಂ ಸ್ಥಲವಿಟ್ಟು ನುಡಿದ ವಚನಂಗಳಂ ವರಗುರುನಾಥನಾಜ್ಞೆಯಿಂ ಧರೆಯ ನೂತನಗಣಂಗಳಱಯಲೊರೆದನು ಭಾವಾನಂದಸುಖಾಂಭೋರಾಶಿಪರಮಷಟ್ಸ್ಥಲಮಾರ್ಗದ ಕರುವನು ಪರಮಲಿಂಗಾಂಗಸಂಬಂಧದ ಸಿರಿ ಹರನೊಲಿರವಱದಿರ್ಪುದಕೇ ಪರಮಚಾರಿತ್ರವೆನಿಸುವ ಭಾಷ್ಯರತ್ನಮಾಲೆಯುಂ ವರವೇದಶಾಸ್ತ್ರಪುರಾಣಾಗಮೇತಿಹಾಸಾದಿನಾನಾಧರ್ಮಶಾಸ್ತ್ರೋಕ್ತಗ್ರಂಥಂಗಳಿಂ ಆದ್ಯರ ವಚನಂಗಳಿಂ ನೂಱೊಂದುಸ್ಥಲ[1] ಮಾಗಿ ಸೇರಿಸಿದಂ ಹರಶರಣರಣುಗಂ ಗುಬ್ಬಿಯಮಲ್ಲಣ್ಣಾಗಳ್.

1. ಪ್ರತಿಯೊಂದಕ್ಕೂ ಸ್ಥಲ ಎಂಬ ಶಬ್ದವನ್ನು ಸೇರಿಸಿ ಓದಬೇಕು.

**ಅಂಗಸ್ಥಲ 44** (1) ಅನುಭವ (2) ಶರಣಸಂಗವಿಯೋಗಾವಸ್ಥ (3) ಶರೀರನಿರಸನ (4) ಮನೋನಿರಸನ (5) ಇಂದ್ರಿಯನಿರಸನ (6) ಸಂಸಾರನಿರಸನ (7) ಸಂಸಾರವ್ಯಾಪ್ತಿನಿರಸನ (8) ನಿದ್ರಾನಿರಸನ (9) ಆಶಾನಿರಸನ (10) ದ್ವೈಂದ್ವಕರ್ಮನಿರಸನ (11) ತ್ರಿಬಂಧನಿರಸನ (12) ಮಾಯಾವಿಲಾಸವಿಧಿ (13) ಜನನಭಯ (14) ಜ್ಞಾನಪರಾಮರಿಕೆಯ (15) ಶಿವಕಾರುಣ್ಯಾಹ್ವಾನ (16) ದೃಷ್ಟನಷ್ಟ (17) ವೈರಾಗ್ಯ (18) ಅನರ್ಥಜೀವಿತನಿರಸನ (19) ಅನ್ಯದೈವನಿರಸನ (20) ಅನ್ಯದೇವತಾಭಜನನಿರಸನ (21) ಶಿವಲಿಂಗಾರ್ಚನಪ್ರತಿಷ್ಠಾ (22) ವಾಗದ್ವೈತನಿರಸನ (23) ಶೂನ್ಯ (24) ಸ್ವಯಂಭುಲಿಂಗಉಮಾಪತಿ (25) ವಿಶ್ವೋತ್ಪತ್ತಿ (26) ದೇಹದೇಹಿಗಳುತ್ಪತ್ತಿ (27) ಅಷ್ಟಮೂರ್ತಿನಿರಸನ (28) ಸರ್ವಗತನಿರಸನ (29) ವಿದ್ಯಾವಾದನಿರಸನ (30) ಕರ್ಮವಾದನಿರಸನ (31) ಕರ್ಮಯೋಗನಿರಸನ (32) ಊರ್ಧ್ವಪುಂಡ್ರನಿರಸನ (33) ಅದೀಕ್ಷಾಲಿಂಗಾರ್ಚನನಿರಸನ (34) ಶೈವದೀಕ್ಷಾನಿರಸನ (35) ಪುನರ್ದೀಕ್ಷಾಪ್ರತಿಷ್ಠಾ (36) ಭವಿಸಂಗನಿರಸನ (37) ಭವಿಪಾಕನಿರಸನ (38) ಪರದಾರನಿರಸನ (39) ಕಳವುನಿರಸನ (40) ಹುಸಿನಿರಸನ (41) ಹಿಂಸಾನಿರಸನ (42) ತಾಮಸಭಕ್ತಸಂಗನಿರಸನ (43) ತಾಮಸದೀಕ್ಷಾನಿರಸನ (44) ಸಹಜದೀಕ್ಷಾ,

ಗ್ರಂಥಾವತಾರದಲ್ಲಿ ಈ ಪದ್ಯವಿದೆ—

ಶ್ರೀಗುರುವೆ ಪರಮಗುರುವೆ ಮ|ಹಾಗುರುವೇ ನಿಮ್ಮ ಕೃಪೆಯೊಳಂ ಪರಮಾಮೃತ|
ಸಾಗರವೆಂಬಂತಿಗನು | ದ್ಯೋಗಿಸಿದೆಂ ಶಾಸ್ತ್ರವಚನಸಮ್ಮತದಿಂದಂ ||

ಸ್ಥಲಗಳ ಅಂತ್ಯದಲ್ಲಿ—ಇತಿ ಶ್ರೀಮದಸಂಖ್ಯಾತಪುರಾತನಗಣಭೂಷಿತರತ್ನಮಾಲಾಯಾಂ-ಎಂದಿದೆ. ಪ್ರತಿಸ್ಥಲದ ಆರಂಭದಲ್ಲಿಯೂ ಕನ್ನಡದಲ್ಲಿ ಅವತರಣಿಕೆ ಇದೆ. ಆಮೇಲೆ ಕವಿ ಸಂಸ್ಕೃತಶ್ಲೋಕಗಳನ್ನು ಉದಾಹರಿಸಿ "ಇಂತೀ ಪುರಾಣವಾಕ್ಯಂಗಳನು ಶ್ರೀಗುರು ಪುರಾತನರಿಗೆ ಉಪದೇಶವಿತ್ತ ಠಾವು" ಎಂದು ಮುಗಿಸಿ, ಅನಂತರ "ಇನ್ನು ಆ ಪುರಾತನರು ಗುರುವಾಕ್ಯ ತಪ್ಪದೆ ನಡೆದು ನುಡಿದ ವಚನಂಗಳು" ಎಂದು ಪುರಾತನರ ಕನ್ನಡವಚನಗಳನ್ನು ಉದಾಹರಿಸಿ ಆಯಾಸ್ಥಲವನ್ನು ಮುಗಿಸುತ್ತಾನೆ. ಈ ಗ್ರಂಥದಿಂದ ಒಂದು ಸ್ಥಲವನ್ನು ತೆಗೆದು ಬರೆಯುತ್ತೇವೆ—

ಕಳವುನಿರಸನಸ್ಥಲ

ಇಂತೀ ಪ್ರಕಾರದಿಂ ಶಿವಭಕ್ತರು ತಮ್ಮ ಸ್ವಸ್ತ್ರೀಯರ ಸಂಗವಲ್ಲದೆ ಅನ್ಯಸ್ತ್ರೀ

---

ಲಿಂಗಸ್ಥಲ 57 (1) ದೀಕ್ಷಾವಿಧಿಕ್ರಮ (2) ಗುರುಶಿಷ್ಯಪ್ರವೇಶ (3) ಗುರುಮಾಹಾತ್ಮ್ಯ (4) ವಿಭೂತಿಮಾಹಾತ್ಮ್ಯ (5) ರುದ್ರಾಕ್ಷಮಾಹಾತ್ಮ್ಯ (6) ಪಂಚಾಕ್ಷರೀಮಾಹಾತ್ಮ್ಯ (7) ಲಿಂಗಧಾರಣಮಾಹಾತ್ಮ್ಯ (8) ಶಿವಲಿಂಗಾರ್ಚನ (9) ಲಿಂಗಾರ್ಪಿತ (10) ಪಾದೋದಕಮಾಹಾತ್ಮ್ಯ (11) ಪ್ರಸಾದಮಾಹಾತ್ಮ್ಯ (12) ಸದ್ಭಕ್ತವರ್ಣಾಧಿಕ್ಯ (13) ಪೂರ್ವಾಶ್ರಯನಿರಸನ (14) ಗುರುಭಕ್ತಿಶುಶ್ರೂಷಾ (15) ಪಾತ್ರಾಪಾತ್ರವಿವರಣ (16) ತಾಮಸಭಕ್ತನಿರಸನ (17) ತಾಮಸಮಾಹೇಶನಿರಸನ (18) ತಾಮಸಪ್ರಸಾದಿನಿರಸನ (19) ತಾಮಸಪ್ರಾಣಲಿಂಗಿನಿರಸನ (20) ತಾಮಸಶರಣನಿರಸನ (21) ತಾಮಸೈಕ್ಯನಿರಸನ (22) ಸ್ಥಾವರಲಿಂಗಪೂಜಾನಿರಸನ (23) ಉಪವಾಸನಿರಸನ (24) ಶಿವಲಿಂಗಾರ್ಚನಾವಿಧಿಕ್ರಮ (25) ಶಿವಲಿಂಗಪೂಜಾಶ್ರದ್ಧಾ (26) ಅಭಿನ್ನಲಿಂಗ (27) ಜಂಗಮಲಿಂಗಶ್ರದ್ಧಾ (28) ಜಂಗಮಲಿಂಗಾರ್ಪಿತ (29) ತೀರ್ಥಪ್ರಸಾದಲಿಂಗಾರ್ಪಿತ (30) ತಾಮಸಶೀಲನಿರಸನ (31) ತಾಮಸಸಹಭೋಜನನಿರಸನ (32) ವಾಗದ್ವೈತನಿರಸನ (33) ತಾಮಸಾನುಭಾವನಿರಸನ (34) ದಾಸೋಹಪ್ರತಿಷ್ಠಾ (35) ಕಾಮ್ಯಪ್ರತಿಷ್ಠಾ (36) ಕಾಮ್ಯನಿರಸನ (37) ಸದ್ಭಕ್ತಚಾರಿತ್ರ (38) ಷಟ್ಸ್ಥಲನಿರ್ಣಯ (39) ಶಿವಭಕ್ತಪರೀಕ್ಷಾ (40) ಅನ್ಯೈಷ್ಠಿಕನಿರಸನ (41) ಸದ್ಭಕ್ತನೈಷ್ಠಿಕಾ (42) ವೀರದಾಸತ್ವನಿಷ್ಠಾ (43) ವಿಶ್ವಾಸಪ್ರತಿಷ್ಠಾ (44) ಶಿವಲಿಂಗವಿಕಳಾವಸ್ಥಾ (45) ಶಿವಲಿಂಗಕೂಟಾತುರ (46) ಶಿವಲಿಂಗಯೋಗಾನಂದ (47) ಬಾಹ್ಯಾಭ್ಯಂತರಲಿಂಗಸಂಯೋಗ (48) ಭಿನ್ನಭೋಜನನಿರಸನ (49) ಸಾವಧಾನಾರ್ಪಿತ (50) ಭಕ್ತದೇಹಿಕಲಿಂಗ (51) ಅನಾಗಮ (52) ಶರಣಚಾರಿತ್ರ (53) ಸ್ತುತಿನಿಂದಾನಿರಸನ (54) ನಿರಹಂಭಾವ (55) ಸದ್ಭಕ್ತಶುಶ್ರೂಷಾ (56) ಸದ್ಭಕ್ತನಮಸ್ಕಾರ (57) ಸದ್ಭಕ್ತಮಾಹಾತ್ಮ್ಯ. ಒಟ್ಟು 101 ಸ್ಥಲಗಳು.

ಯರ ಸಂಗವ ಮಾಡಲಾಗದೆಂಬುದಂ ಪ್ರತಿಷ್ಠೆಯಂ ಮಾಡಿ ನುಡಿದರ್ ಮಹಾಪುರಾತನರ್. ಇಂತಾ ಪರದಾರಮಂ ಬಿಟ್ಟು ಲಿಂಗಸಾಹಿತ್ಯನಾದೇನೆಂಬಾತಂಗೆ ಕಳವು ಶೌಚವುಂ ಕೆಡಿಸುವುದೆಂಬುದನಱಿದು ಇನ್ನು ಕಳವ ಶಿವಭಕ್ತರು ಬಿಡಬೇಕೆಂಬುದಂ ಪ್ರತಿಷ್ಠೆಯಂ ಮಾಡಿ ನುಡಿದ ವಚನಂಗಳಿಂ ಮುಂದೆ ಕಳವುನಿರಸನಸ್ಥಲವಾದುದು.

ಶಿವಧರ್ಮೇ—ತೃಣಂ ವಾ ಯದಿ ವಾಕಾಶಂ ಮೃದಂ ವಾ ಜಲಮೇವ ಚ |
ಪರಸ್ಯಾಪಹರೇಜ್ಜಂತುರ್ನರಕಂ ಚ ಪ್ರಪದ್ಯತೇ ||

ಟೀಕೆ—ಹುಲ್ಲುಕಡ್ಡಿಯಪ್ಪಾದೊಡಂ ಆಕಾಶದಪ್ಪಾದೊಡಂ ಒಪ್ಪಿಡಿಮಣ್ಣಾದೊಡಂ ಒಕ್ಕುಡಿತೆಯುದಕವಾದೊಡಂ ಲೋಗರ ಸೊಮ್ಮ ಕಾಣಲೀಯದೆ ಬಲುಹಿಂದೆ ಕೊಂಡವಂಗೆ ಎಂದೂ ಕೇಡಿಲ್ಲದ ನರಕವಹುದು. (ಹೀಗೆಯೇ ಇನ್ನೂ 3 ಶ್ಲೋಕಗಳನ್ನು ಟೀಕೆಯೊಡನೆ ಹೇಳಿದಮೇಲೆ), ಇಂತೀ ಪುರಾಣವಾಕ್ಯಂಗಳನು ಶ್ರೀಗುರು ಪುರಾತನರಿಗೆ ಉಪದೇಶವಿತ್ತ ತಾವು.

ಇನ್ನು ಆ ಪುರಾತನರು ಗುರುವಾಕ್ಯತಪ್ಪದೆ ನಡೆದು ನುಡಿದ ವಚನಂಗಳು.

(1) ಕುಳಿತು ಲಿಂಗವ ಪೂಜಿಸಿ ಅಲ್ಲದಾಟವನಾಡುವರಯ್ಯಾ. ಬೆಳ್ಳಿತ್ತಿನ ಮಱೆಯಲ್ಲಿ ಹುಲ್ಲೆಗಂಬ ತೊಡಚುವಂತೆ ಲೋಗರರ್ಥವ ಕಳುವ ಕಳ್ಳರಕ್ಕೈಯ ಪೂಜೆಯನೊಲ್ಲ ನೋಡಾ ನಮ್ಮ ಕೂಡಲಸಂಗಮದೇವ.

(2) ತೊಱೆಯ ಮೀವಣ್ಣಗಳಿರಾ ತೊಱೆಯಿರೆ ಪರಧನವ. ಪರದ್ರವ್ಯವ ಬಿಡದೆ ಹೋಗಿ ತೊಱೆಯಲ್ಲಿ ಮಿಂದರೆ ಆತೊಱೆಯೆಲ್ಲಾ ಬಱಿದೊಱೆಕಾಣಿರಯ್ಯಾ. ಕಳವ ತೊಱೆದು ತೊಱೆಯ ಮಿಂದರೆ ಒಲಿದುಕೂಡಿಕೊಂಬ ನಮ್ಮ ಕೂಡಲಸಂಗಮದೇವ.

(3) ಬಟ್ಟೆಯಲ್ಲಿ ಹೊನ್ನು ವಸ್ತ್ರ ಬಿದ್ದಿದ್ದರೆ ನಾನು ಕೈಮುಟ್ಟಿಯೆತ್ತಿದೆನಾದರೆ ನಿಮ್ಮಾಣೆ, ನಿಮ್ಮ ಪ್ರಮಥರಾಣೆ. ಅದೇನು ಕಾರಣವೆಂದರೆ—ನೀವಿಕ್ಕಿದ ಭಿಕ್ಷದಲ್ಲಿಪ್ಪೆನಾಗಿ ಇಂತಲ್ಲದೆ ನಾನು ಅಱಿಮನವನಾಡಿ ಪರದ್ರವ್ಯಕ್ಕೆ ಆಶೆಮಾಡಿದೆನಾದರೆ ನೀನಾಗಲೇ ಎನ್ನ ನರಕದಲ್ಲಿ ಅದ್ದಿ ನೀನೆದ್ದು ಹೋಗಾ ಶಂಭುಜಕ್ಕೇಶ್ವರ.

## 2. ವಾತುಲತಂತ್ರಟೀಕೆ

ಇದು ವಾತುಲತಂತ್ರ ಎಂಬ ಶೈವಾಗಮಕ್ಕೆ ಕನ್ನಡವ್ಯಾಖ್ಯಾನವು. ಆರಂಭದಲ್ಲಿ ಈ ಶ್ಲೋಕವಿದೆ—

ಶ್ರೀಮಚ್ಛುದ್ಧಾಖ್ಯತಂತ್ರೇಸ್ಮಿನ್ ಮಲ್ಲಿಕಾರ್ಜುನಧೀಮತಾ |
ಕರ್ಣಾಟಭಾಷಯಾ ಟೀಕಾ ಕ್ರಿಯತೇದ್ಯ ಮಯಾ ಸ್ಫುಟಂ ||

## ವಚನಕಾರರು. ಸು. 1150–1475

ಕಲ್ಲುಮಠದಪ್ರಭುದೇವನ (ಸು. 1430) ಲಿಂಗಲೀಲಾವಿಲಾಸಚಾರಿತ್ರ, ಜಕ್ಕಣಾರ್ಯನ(ಸು. 1430) ನೂರೊಂದುಸ್ಥಲ, ಗುಬ್ಬಿಯ ಮಲ್ಲಣ್ಣನ(ಸು. 1475) ಗಣಭಾಷ್ಯರತ್ನಮಾಲೆ ಈ ಗ್ರಂಥಗಳಲ್ಲಿ ಅನೇಕಪುರಾತನರ ವಚನಗಳು ಉದಾಹೃತವಾಗಿವೆ. ಈ ವಚನಕಾರರಲ್ಲಿ ಕೆಲವರು ಮಾತ್ರ ತಮ್ಮ ಹೆಸರನ್ನು ವ್ಯಕ್ತವಾಗಿ ಹೇಳಿಕೊಂಡಿದ್ದಾರೆ. ಉಳಿದವರೆಲ್ಲಾ ತಮ್ಮ ಇಷ್ಟದೈವದ ಅಂಕಿತದಲ್ಲಿ ವಚನಗಳನ್ನು ಬರೆದಿದ್ದಾರೆ. ಕೆಲವರ ಇಷ್ಟದೈವವು ಇಂಥದೆಂದು ತಿಳಿದಿರುವುದರಿಂದ ಅವರು ಇಂಥ ಕವಿಗಳೆಂದು ನಿಶ್ಚಯಿಸಬಹುದು. ಮಿಕ್ಕವರ ವಿಷಯದಲ್ಲಿ ಇದು ಸಾಧ್ಯವಲ್ಲ.

ಈ ಪುರಾತನರಲ್ಲಿ ಕೆಲವರು ಸ್ವಲ್ಪಹೆಚ್ಚುಕಡಮೆ ಬಸವನ ಸಮಕಾಲದವರಾಗಿಯೂ ಕೆಲವರು ಈಚೆಯವರಾಗಿಯೂ ಇದ್ದಂತೆ ತಿಳಿಯುತ್ತದೆ. ಅಂತು ಎಲ್ಲರೂ ಸುಮಾರು 1475 ಕ್ಕೆ ಹಿಂದೆ ಇದ್ದ ಕನ್ನಡಕವಿಗಳಾದುದರಿಂದ ಇವರ ವಿಷಯವನ್ನು ತಿಳಿದಮಟ್ಟಿಗೆ ಒಂದೇಕಡೆ ಹೇಳಿ ತತ್ಕೃತವಾದ ವಚನಗಳಲ್ಲಿ ಒಂದೆರಡನ್ನು ಉದ್ಧರಿಸಿ ಬರೆವುದು ಯುಕ್ತವಾಗಿ ತೋರುತ್ತದೆ. ಈ ಕವಿಗಳಲ್ಲಿ ಕೆಲವರ ಚರಿತೆಯು ಪ್ರಥಮಸಂಪುಟದಲ್ಲಿ ಬರೆದಿದೆ.[1] ಆದರೂ ಎಲ್ಲರೂ ವಚನಕಾರರಾದುದರಿಂದ ಅವರನ್ನೂ ಮಿಕ್ಕವರೊಡನೆ ಒಂದೇಕಡೆ ಸೇರಿಸಿ ತತ್ತತ್ಕೃತವಾದ ವಚನಗಳಲ್ಲಿ ಒಂದೆರಡನ್ನು ಅನುವಾದಮಾಡಿ ತೋರಿಸುವುದು ಪ್ರಯೋಜನಕಾರಿಯಾಗದೆ ಇರಲಾರದು

### ಸಕಲೇಶಮಾದರಸ. ಸು. 1150

ಸಕಲೇಶ್ವರ ಎಂಬ ಅಂಕಿತವುಳ್ಳ ಕೆಲವು ವಚನಗಳಿವೆ. ಇವು ಕೆರೆಯಪದ್ಮರಸನ (ಸು. 1165) ಪಿತಾಮಹನಾದ ಸಕಲೇಶಮಾದರಸನಿಂದ[2] ರಚಿತವಾದುವೋ ಏನೋ ತಿಳಿಯದು.

#### ವಚನ

ಬಲೀಂದ್ರನ ಸಿರಿಯಿಂದಲಧಿಕರ ನಾನಾರನೂ ಕಾಣೆ; ಅಂತಹ ಸಂಪತ್ತು ಮೂಱಡಿಗೈದದೆ ಹೋಯಿತ್ತು. ಕೆಡುವಂತಿದ್ದಿತೇ ಕೌರವನ ರಾಜ್ಯ ? ಮಡಿವಂತಿದ್ದಿತೇ ರಾವಳನ ಬಲ್ಲಾಳಿಕೆ ? ಪರಸ್ತ್ರೀಲಕ್ಷ್ಮೀದೇವಿಗೊಲಿದು ಒಂದುನಿಮಿಷದಲ್ಲಿ ಮಡಿದ. ಇದು ಸತ್ಯ. ಇದು ಸತ್ಯ. ಸಿರಿಸೌಕರ್ಯವೆಂಬುದು ಆಕಾಶದ ರಚನೆ. ಇದನಱಿದು

1. Vol. I, 142-161. 2. *Ibid.*, 189.

ದೇಹದಿಚ್ಛೆಯನತಿಗಳೆದು ನಮ್ಮ ಸಕಲೇಶ್ವರದೇವಂಗೋತು ನೀನೆಂಬ ಭ್ರಮೆಯೞಿಯಾ ಮರುಳೆ.

## 2 ಬಸವ [1]

ಈತನು ತನ್ನ ಇಷ್ಟದೈವವಾದ ಕೂಡಲಸಂಗಮದೇವರ ಅಂಕಿತದಲ್ಲಿ ವಚನಗಳನ್ನು ಬರೆದಿದ್ದಾನೆ.

### ವಚನಗಳು.

(1) ಹಾಲತೊಱೆಗೆ ಬೆಲ್ಲದಂತಹ ಕೆಸಱು, ಸಕ್ಕರೆಯಂತಹ ಮಱಲು, ತವರಾಜನಂತಹ ನೊರೆತೆರೆಗಳು. ಇಂತಪ್ಪ ಆದ್ಯರ ವಚನವಿರಲು ಬೇಱೆ ಬಾವಿಯ ತೋಡಿ ಉಪ್ಪುನೀರ ಸವಿದಂತಾಯಿತ್ತಯ್ಯಾ ಎನ್ನಯುಕ್ತಿ. ನಿಮ್ಮ ವಚನಂಗಳ ಕೇಳದೆ ಅನ್ಯಪುರಾಣಗಳ ಕೇಳಿ ಕೆಟ್ಟೆನಯ್ಯಾ ಕೂಡಲಸಂಗಮದೇವ.

(2) ಇನ್ನೇವೆನಿನ್ನೇವೆನಯ್ಯಾ ಎನ್ನ ಮನವೆಂಬ ಮರ್ಕಟನ ದಾಱಿ ಘನವಾಯಿತು; ಎನ್ನ ನಿಂದಲ್ಲಿ ನಿಲ್ಲಲೀಯದು; ಎನ್ನ ಕುಳಿತಲ್ಲಿ ಕುಳ್ಳಿರಲೀಯದು; ಕ್ಷಣದಲ್ಲಿ ಪಾತಾಳಕ್ಕೈದುತ್ತಿದೆ ; ಕ್ಷಣದಲ್ಲಿ ಆಕಾಶಕ್ಕೈದುತ್ತಿದೆ ; ಕ್ಷಣದಲ್ಲಿ ದಿಗ್ದೆಸೆಗೈದುತ್ತಿದೆ ; ಕೂಡಲಸಂಗಮದೇವ ಈ ಮನವೆಂಬ ಮರ್ಕಟನ ದಾಱಿಯನೆಂದಿಗೆ ನೀಗಿ ಎಂದು ನಿಮ್ಮ ನೊಡಗೂಡುವೆನಯ್ಯಾ.

(3) ಹೊನ್ನ ಹಾವುಗೆಯ ಮೆಟ್ಟಿದಾತನ, ಮಿಡಿಮುಟ್ಟಿದ ಕೆಂಜೆಡೆಯವನ, ಮೈಯಲ್ಲಿ ವಿಭೂತಿಯ ಪೂಸಿದವನ, ಕರದಲ್ಲಿ ಕಪಾಲವ ಹಿಡಿದವನ, ಶರೀರದಲರ್ಧವ ಸತಿಗೆ ಕೊಟ್ಟವನ, ಬಾಣನ ಬಾಗಿಲ ಕಾದವನ, ನಂಬಿಗೆ ಕುಂಟಣಿಯಾದವನ, ಚೋಳಂಗೆ ಹೊನ್ನಮಱೆಯ ಕಱೆದವನ, ಮಾಡಿದ ಪೂಜೆಯ ಕೊಂಬವನ, ಸದ್ಭಕ್ತರ ಹೃದಯಲ್ಲಿಪ್ಪವನ, ಕೊಂಡುಬಾರೆಲವ್ವಾ ಕೂಡಲಸಂಗಯ್ಯನೆಂಬವನ.

## 3 ಚೆನ್ನಬಸವ. [2]

ಈತನ ವಚನಗಳಲ್ಲಿ ಕೂಡಲಚೆನ್ನಸಂಗಮದೇವರ ಅಂಕಿತವಿದೆ.

### ವಚನಗಳು.

(1) ಪರರಾಶೆಯೆಂಬ ಜ್ವರ ಹತ್ತಿ ನಾಸು ಕಳವಳಿಸಿ ನುಡಿವೆನಯ್ಯಾ. ಹೊನ್ನುಹೆಣ್ಣುಮಣ್ಣುಬಯಸಿ ವಿಕಳತೆಗೊಂಡಂತೆ ಪ್ರಲಾಪಿಸುತ್ತ ನುಡಿವೆನಯ್ಯಾ. ಈ

1. Vol. I, 142. 2. *Ibid.,* 145.

ಕಳವಳವ ನಿಲಿಸಿ ನಿಮ್ಮ ಕರುಣಾಮೃತವೆಂಬ ಕಷಾಯವನೆಱೆದು ಪರರಾಶೆ ಯೆಂಬ ಜ್ವರವ ಮಾಣಿಸು ಬಸವಪ್ರಿಯ ಕೂಡಲಚೆನ್ನಸಂಗಮದೇವ.

(2) ಆನೆಯನೇಱಿದ ಮಾವತಿಗ ಚಕ್ರೇಶ್ವರನಾಗಬಲ್ಲನೆ ? ಆಯ್ಯಾ. ವೇದ ಶಾಸ್ತ್ರಾಗಮಪುರಾಣಂಗಳನೋದಿ ಕೇಳಿ ಹೇೞುವರೆಲ್ಲರೂ ನಡೆನುಡಿಪೂರಾಯವಾದ ಪುರಾತನರಾಗಬಲ್ಲರೆ ? ಅಯ್ಯಾ. ತೊತ್ತುಲಕ್ಷಣವಿರಲು ನಾಣ್ಯವ ನುಡಿಸಿ ನವರತ್ನ ದಾಭರಣಂಗಳಂ ತೊಡಿಸಿ ದಂಡಿಗೆಯ ನೇಱಿಸಲು 'ಶಂಕರಸ್ಯ ಯಥಾ ಗೌರೀ' ಎನಿಸಿಕೊ ಳಬಲ್ಲಳೆ? ಅಯ್ಯಾ. ಖ್ಯಾತಿಯಾಗಿ ನಿಜತತ್ವಂಗಳನೋದಿ ಕೇಳಿ ಹೇೞಿದಡೇನು? ಅದಕ್ಕೆ ತಕ್ಕ ಅಱಿವು ಆಚಾರವು ನಡೆನುಡಿಯಲ್ಲಿ ನಿರ್ಣಯವಿಲ್ಲದಿದ್ದಡೆ ಕುಂಭೀಪಾಕನಾಯಕ ನರಕ ತಪ್ಪದು ಕೂಡಲಚೆನ್ನಸಂಗಮದೇವ.

## 4 ಪ್ರಭುದೇವ. [1]

### ಈತನ ವಚನಗಳಲ್ಲಿ ಗುಹೇಶ್ವರ ಎಂಬ ಅಂಕಿತವಿದೆ.

### ವಚನಗಳು.

(1) ಸುತ್ತಿ ಸುತ್ತಿ ಬಂದಡಿಲ್ಲ; ಲಕ್ಷಗಂಗೆಯ ಮಿಂದಡಿಲ್ಲ; ತುಟ್ಟತುದಿಯ ಮೇರುಗಿರಿಯ ಮೆಟ್ಟಿ ಕೂಗಿದಡಿಲ್ಲ: ನಿತ್ಯನೇಮದಿಂದ ತನುಮುಟ್ಟಿಕೊಂಡಡಿಲ್ಲ; ನಿಚ್ಚ ಕ್ಕೆ ಮನವನಂದಂದಿಂಗೆ ಅತ್ತಿತ್ತ ಹರಿಯಲೀಯದೆ ಚಿತ್ತದಲ್ಲಿ ಧರಿಸಬಲ್ಲಡೆ ಬಚ್ಚಬಱಿಯ ಬೆಳಗು ಗುಹೇಶ್ವರಲಿಂಗವು.

(2) ಕರಿ ಸ್ಪರ್ಶನೇಂದ್ರಿಯದಿಂದ ಬಂಧನವಡೆದಱಿಯಿತ್ತು; ಪತಂಗನು ರೂಪೇಂದ್ರಿಯದಿಂದ ಬಂಧನವಡೆದಱಿಯಿತ್ತು; ಕುರಂಗನು ಶ್ರೋತ್ರೇಂದ್ರಿಯದಿಂದ ಬಂಧನವಡೆದಱಿಯಿತ್ತು ; ಮತ್ಸ್ಯವು ಜಿಹ್ವೇಂದ್ರಿಯದಿಂದ ಬಂಧನವಡೆದಱಿಯಿ ತ್ತು; ಇಂತೀಯೊಂದೊಂದು ಇಂದ್ರಿಯೋದ್ರೇಕದಿಂದ ಒಂದೊಂದುಪ್ರಾಣಿ ಪ್ರಳಯ ವಾಯಿತ್ತು ; ಪಂಚೇಂದ್ರಿಯಂಗಳ ಒಂದುಘಟದಲ್ಲಿ ತಾಳಿಹ ಮನುಷ್ಯಪ್ರಾಣಿಗಳಿಗೆ ಮಱವೆಯೆಡೆಗೊಂಡು ದೇಹಮೋಹಭ್ರಾಂತು ಮುಸುಕಿ ಮಾಯೆಯ ಬಾಯ ತುತ್ತ ಹುದು ಚೋದ್ಯವೇನು ಹೇೞಾ ಗುಹೇಶ್ವರ.

## 5 ಸೊಡ್ಡಳ ಬಾಚರಸ. [2]

### ಈತನ ವಚನಗಳಲ್ಲಿ ಸೊಡ್ಡಳ ಎಂಬ ಹೆಸರು ಸಿಕ್ಕುತ್ತದೆ.

### ವಚನಗಳು.

(1) ಗಂಡನುಳ್ಳ ಹೆಂಡಿರ ಕಂಡು ಅೞುಪದಿರಾ ಮನವೇ! ಬಂದ ಬಸುಱನು ಉಂಡ ಮೊಲೆಯನು ಕಂಡು ಮಱುಗದಿರಾ ಮನವೇ ! ಉದ್ದಂಡತನದಲಿ ನಡೆದ ಭಂಡ

1. Vol. I, 149. 2. *Ibid.*, 154.

ರೆನು ಹುಱುಗೊಂಡದಲ್ಲಿಕ್ಕದೆ ಬಿಡುವನೆ ನಮ್ಮ ದೇವರಾಯ ಸೊಡ್ಡಳ.

(2) ಗಂಗಾನದಿಯಲ್ಲಿ ಮಿಂದು ಗಂಜಳದಲ್ಲಿ ಹೊರಳುವರೆ? ಚಂದನವಿದ್ದಂತೆ ದುರ್ಗಂಧವ ಮೈಯಲ್ಲಿ ಪೂಸುವರೆ? ಸುರಭಿ ಮನೆಯಲ್ಲಿ ಕಱೆಯುತ್ತಿರೆ ಹರಿವರೆ ಸೊಣಗನ ಹಾಲಿಂಗೆ? ಬಯಸಿದಮೃತವಿದ್ದಂತೆ ಅಂಬಿಲವನೆಱೆದುಂಬ ಭ್ರಮಿತಮಾನವ ನೀನು ಕೇಳಾ! ಪರಮಪದವಿಯನೀವ ಚೆನ್ನಸೊಡ್ಡಳನಿದ್ದಂತೆ ಸಾವ ದೈವವ ನೋಂತಡೆ ಕಾವುದೇ ನಿನ್ನ?

## 6 ಸಿದ್ಧರಾಮ. [1]

ಈತನ ವಚನಗಳಲ್ಲಿ ಕಪಿಲಸಿದ್ಧಮಲ್ಲಿಕಾರ್ಜುನದೇವರ ಅಂಕಿತವಿದೆ.

### ವಚನಗಳು.

(1) ಸಂಸಾರವೆಂಬ ಸರ್ಪನ ಅಣಲೊಳಗಿಹೆನಯ್ಯಾ. ಆವಾಗ ನುಂಗಿತೆಂದಱಿಯೆ; ಆವಾಗ ಉಗುಳ್ದಿತೆಂದಱಿಯೆನಯ್ಯಾ. ಆದಱ ಬಾಯಿಂದೆನ್ನ ತೆಗೆದು ಕಾಯಯ್ಯಾ ಕಪಿಲಸಿದ್ಧಮಲ್ಲಿಕಾರ್ಜುನ.

(2) ಧರೆಯ ದೆಸೆವಳಯವೆಲ್ಲಾ ತನಗಾದಡಂ ನಿಲ್ಲಳು; ಎನಿತು ತ್ರಿಭುವನ ರಾಜ್ಯಪದಂಗಳು ತನಗಾದಡಂ ನಿಲ್ಲಳು; ಅನಿತಱೊಳಂ ತೃಪ್ತಿವಡೆಯಳು. ಈಯಾಶೆಯೆಂಬವಳಿಂದಲೆ ನಿಮ್ಮೆಡೆಗಾಣದಿರ್ಪೆ. ಈಯಾಶೆಯೆಂಬ ಪಾತಕಿಯನೆಂದಿಂಗೆ ನೀಗಿ ನಿಮ್ಮನೊಡಗೂಡಿ ಬೇಱಾಗದೆಂದಿರ್ಪೆನೋ ಕಪಿಲಸಿದ್ಧಮಲ್ಲಿಕಾರ್ಜುನ.

## 7 ಮಹಾದೇವಿಯಕ್ಕ [2]

ಈಕೆ ಚೆನ್ನಮಲ್ಲಿಕಾರ್ಜುನದೇವರ ಅಂಕಿತದಲ್ಲಿ ವಚನಗಳನ್ನು ಹೇಳಿದ್ದಾಳೆ.

### ವಚನಗಳು.

(1) ಅಮೇಧ್ಯದ ಹಡಿಕೆ; ಮೂತ್ರದ ಕುಡಿಕೆ; ಎಲುವಿನ ತಡಿಕೆ; ಕೀವಿನ ಹಡಿಕೆ; ಸುಡಲಿ ದೇಹವ. ಒಡಲುವಿಡಿದು ಕೆಡದಿರು, ಚೆನ್ನಮಲ್ಲಿಕಾರ್ಜುನನನಱಿ ಮರುಳೆ.

(2) ಒಮ್ಮೆ ಕಾಮನ ಕಾಲ ಹಿಡಿವೆ; ಮತ್ತೊಮ್ಮೆ ಚಂದ್ರಮಂಗೆ ಸೆರಗೊಡ್ಡಿ ಬೇಡುವೆ. ಸುಡಲಿ ವಿರಹವ. ನಾನಾರಿಗೆ ಧೃತಿಗೆಡುವೆ? ಚೆನ್ನಮಲ್ಲಿಕಾರ್ಜುನದೇವನೆನ್ನ ನೊಲ್ಲದಕಾರಣ ಎಲ್ಲರಿಗೆ ಹಂಗುಗಿತ್ತಿಯಾದೆನವ್ವಾ.

---

1 Vol. I, 150. 2. *Ibid.*, 154.

(3) ಬೆಟ್ಟದಮೇಲೊಂದುಮನೆಯ ಮಾಡಿ ಮೃಗಂಗಳಿಗಂಜಿದಡೆಂತಯ್ಯಾ ? ಸಮುದ್ರದ ತಡಿಯಲ್ಲಿ ಮನೆಯ ಮಾಡಿ ನೊರೆತೆರೆಗಳಿಗಂಜಿದಡೆಂತಯ್ಯಾ ? ಸಂತೆಯೊಳಗೊಂದುಮನೆಯ ಮಾಡಿ ಶಬ್ದಕ್ಕೆ ನಾಚಿದಡೆಂತಯ್ಯಾ ? ಚೆನ್ನಮಲ್ಲಿಕಾರ್ಜುನದೇವ ಕೇಳಯ್ಯಾ. ಲೋಕದೊಳಗೆ ಹುಟ್ಟಿದಬಳಿಕ ಸ್ತುತಿನಿಂದೆಗಳು ಬಂದಡೆ ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು.

## 8 ಮಡಿವಳಮಾಚಯ್ಯ. [1]

ಈತನು ಕಲಿದೇವರ ಅಂಕಿತದಲ್ಲಿ ವಚನಗಳನ್ನು ಹೇಳಿದಂತೆ ತೋರುತ್ತದೆ.

### ವಚನ

(1) ಹುಟ್ಟದ ಬೀಜವಿದ್ದಡೇನಯ್ಯಾ ಧರೆಯೊಳಗೆ; ಅಟ್ಟುಣಬಾರದ ಮಡಕೆಯಿದ್ದಡೇನಯ್ಯಾ ಮನೆಯೊಳಗೆ; ಶಿವ ನಿಮ್ಮ ಮುಟ್ಟದ ಮನವಿದ್ದಡೇನಯ್ಯಾ ತನುವಿನೊಳಗೆ. ಕೆಚ್ಚಲ ಕಚ್ಚಿದ ಉಣ್ಣೆ ಬಲ್ಲುದೇ ಕ್ಷೀರದ ರುಚಿಯನು ? ಬಚ್ಚಲೊಳಗಣ ಬಾಲಹುಳು ಬಲ್ಲುದೇ ನಿಚ್ಚಳದ ನೀರ ಸುಖವನು? ನಿಚ್ಚನಿಚ್ಚ ಲೋದುವ ಗಿಳಿ ಬಲ್ಲುದೇ ತನಗೆ ಬಹ ಬೆಕ್ಕಿನ ಬಾಧೆಯನು? ಹುಚ್ಚುಗೊಂಡ ನಾಯಿ ಬಲ್ಲುದೇ ಸಾಕಿದೊಡೆಯನನು? ಇದುಕಾರಣ ಒಡಲ ಪಡೆದಡೇನು ? ಮಡದಿಯರ ನೆರಹಿದಡೇನು ? ಒಡವೆಯ ಗಳಿಸಿದಡೇನು ? ಶಿವನೇ ನಿಮ್ಮನರಿಯದ ಮನುಜನ ಒಡಲೆಂಬುದು ಹೊಲೆಜೋಗಿಯ ಕೈಯ ಒಡೆದ ಸೊರೆಯಂತೆ ಕಾಣಾ ಕಲಿದೇವರದೇವ

(2) ತನುನಷ್ಟ ಮನನಷ್ಟ ನೆನಹುನಷ್ಟ ಭಾವನಷ್ಟ ಜ್ಞಾನನಷ್ಟ; ಇಂತೀ ಪಂಚನಷ್ಟದೊಳಗೆ ನಾನು ನಷ್ಟವಾದೆನು; ಆನಷ್ಟದೊಳಗೆ ನೀನು ನಷ್ಟವಾದೆ; ಕಲಿದೇವರದೇವಾ ಎಂಬ ನುಡಿ ನಿಶ್ಶಬ್ದಬ್ರಹ್ಮಮುಚ್ಯತೇ ಎನುತಿತ್ತು.

## 9 ಮೋಳಿಗಯ್ಯ.

ಈತನ ವಚನಗಳಲ್ಲಿ ನಿಷ್ಕಳಂಕಮಲ್ಲಿಕಾರ್ಜುನ ಎಂಬ ಅಂಕಿತವಿರುವಂತೆ ತೋರುತ್ತದೆ.

### ವಚನ

ಬೀಜ ವೃಕ್ಷವ ನುಂಗಿತ್ತೊ ವೃಕ್ಷ ಬೀಜವ ನುಂಗಿತ್ತೊ ಎಂದರಿದಾಗಲೇ ಭಕ್ತಿಸ್ಥಲ. ಮುತ್ತು ಜಲವ ನುಂಗಿತ್ತೊ ಜಲವು ಮುತ್ತ ನುಂಗಿತ್ತೊ ಎಂಬುದನರಿದಾಗಲೇ ಮಾಹೇಶ್ವರಸ್ಥಲ. ಪ್ರಭೆ ಪಾಷಾಣವ ನುಂಗಿತ್ತೊ ಪಾಷಾಣವು

1. Vol. I, 147. 2. *Ibid.*, 156.

ಪ್ರಭೆಯ ನುಂಗಿತ್ತೊ ಎಂಬುದನಱಿದಾಗಲೇ ಪ್ರಸಾದಿಸ್ಥಲ. ವಹ್ನಿ ಕಾಷ್ಠವ ನುಂಗಿತ್ತೊ ಕಾಷ್ಠವು ವಹ್ನಿಯ ನುಂಗಿತ್ತೊ ಎಂಬುದನಱಿದಾಗಲೇ ಪ್ರಾಣಲಿಂಗಿಸ್ಥಲ. ಸಾರ ಬಲಿದು ಶರಧಿಯ ಕೂಡಿದಾಗಲೇ ಶರಣಸ್ಥಲ. ವಾರಿ ಬಲಿದು ವಾರಿಧಿಯ ಕೂಡಿದಾಗಲೇ ಐಕ್ಯಸ್ಥಲ. ಇಂತಲ್ಲಡೆ ಷಟ್ಸ್ಥಲಬ್ರಹ್ಮಿಗಳೆಂತಾದೀರಣ್ಣಾ ? ಕಱೆಯದ ಪಶುವಿಂಗೆ ಕೃಣವ ಗೞಿಸುವಂತೆ, ಒಲ್ಲದ ಸತಿಗೆ ರತಿಕೂಟವ ಬೆಳಸುವಂತೆ, ಗೆಲ್ಲ ಸೋಲಕ್ಕೆ ಹೋರುವನಲ್ಲಿ ಬಲ್ಲತನವನಱಿಸುವಂತೆ, ಕೊಲ್ಲಿಯಾವಿನಲ್ಲಿ ಸಲ್ಲೀಲೆಯನಱಿಸುವಂತೆ, ಬಲಿದ ವಂಶದಲ್ಲಿ ಕೞಿಲೆಯುಱನಸುವಂತೆ, ಬಱುಮಾತಿಂಗೆಡೆಯಾದುದುಂಟೆ ? ಬಯಲುಗೊಂಡ ಘನಕ್ಕೆ ಅವಧಿಗೊಡಲಿಲ್ಲ. ಉರಿಗೊಂಡ ಕರ್ಪೂರಕ್ಕೆ ರೂಪಿಗೆಡೆಯಿಲ್ಲ. ಬಯಲ ಬಡಿದವಂಗೆ ಕೈಗೆ ಮೆತ್ತಗಿಲ್ಲ. ಮನವು ಮಹದಲ್ಲಿ ನಿಂದವಂಗೆ ಆಱನೆಣಿಸಲಿಲ್ಲ, ಮೂಱ ಮುಟ್ಟಲಿಲ್ಲ. ಮಾಱ ತೋಱದ ಘನವದು ತನ್ನಲ್ಲಿಯೇ ನಿರ್ಲೇಪ ನಿಷ್ಕಳಂಕಮಲ್ಲಿಕಾರ್ಜುನ.

## 10 ಅಂಬಿಗರ ಚೌಡಯ್ಯ.[1]

ಈತನ ವಚನಗಳಲ್ಲಿ ಇವನ ಹೆಸರು ವ್ಯಕ್ತವಾಗಿ ಹೇೞಿದೆ.

### ವಚನ

ಶುಕ್ಲಶೋಣಿತಪಿಂಡೈಕ್ಯನ ಚಿತ್ತವಾಯು ಆಱುದಳದ ಪದ್ಮದಲ್ಲಿಹುದು. ಮೊಲೆ ಮೂಡಿ ಬಂದಡೆ ಆ ಪಿಂಡವನು ಹೆಣ್ಣೆಂಬರು. ಗಡ್ಡಮಿಾಸೆಗಳು ಬಂದಡೆ ಆ ಪಿಂಡವನು ಗಂಡೆಂಬರು. ಆಯಿಬ್ಬರನಡುವೆ ಸುೞಿವ ಆತ್ಮನು ಹೆಣ್ಣೂ ಅಲ್ಲ ಗಂಡೂ ಅಲ್ಲ ನೋಡಾ. ಇವಱಂತುವ ತಿೞಿದು ನೋಡಿಹೆನೆಂದಡೆ ಶ್ರುತಿಗಗೋಚರವೆಂದಾತನಂಬಿಗರಚೌಡಯ್ಯ.

## 11 ಅಜಗಣ್ಣ.

ಈತನ ವಚನಗಳಲ್ಲಿಯೂ ಇವನ ಹೆಸರು ದೊರೆಯುತ್ತದೆ.

### ವಚನ

ಉಟ್ಟುದ ತೊಱೆದವಂಗೆ ಊರೇನು ಕಾಡೇನು ? ನಷ್ಟಸಂತಾನಕ್ಕೆ ಕುಲವೇನು ಚಲವೇನು ? ಹುಟ್ಟುಗೆಟ್ಟಾತಂಗೆ ಪುಣ್ಯವೇನು ಪಾಪವೇನು ? ಅದು ಕೆಟ್ಟುದು ಕೆಟ್ಟುದು; ತನ್ನ ತಾನಱಿಯದೆ ಬಟ್ಟಬಯಲಲ್ಲಿ ಬಿದ್ದ ಅಜಗಣ್ಣತಂದೆ.

## 12 ಮಲ್ಲಿಕಾರ್ಜುನ ಪಂಡಿತ.[2]

ಅಮರಗುಂಡದ ಮಲ್ಲಿಕಾರ್ಜುನ ಎಂಬ ಅಂಕಿತವುಳ್ಳ ಕೆಲವು ವಚನಗಳವೆ. ಇವು ಅಮರಗುಂಡದ ಮಲ್ಲಿಕಾರ್ಜುನಪಂಡಿತನಿಂದ ರಚಿತವಾದುವೋ ಏನೋ ತಿಳಿಯದು.

1. Vol. I, 157. 2. *Ibid.*, 161.

ವಚನ

ನೆನೆವ ಮನಕ್ಕೆ ಮಣ್ಣನೆ ತೋಱಿದೆ; ನೋಡುವ ಕಣ್ಣಿಗೆ ಹೆಣ್ಣನೆ ತೋಱಿದೆ; ಪೂಜಿಸುವ ಕೈಗೆ ಹೊನ್ನನೆ ತೋಱಿದೆ. ಈ ತ್ರಿವಿಧವನೆ ತೋಱಿಕೊಟ್ಟು ಮಱಹನಿಕ್ಕಿದೆಯಯ್ಯಾ ಅಮರಗುಂಡದ ಮಲ್ಲಿಕಾರ್ಜುನ. ನೀ ಮಾಡಿದ ಬಿನ್ನಾಣಕ್ಕಾನು ಬೆಱಗಾದೆನು.

## 13 ಅಮುಗಿದೇವಯ್ಯ

ಕೆಲವು ವಚನಗಳಲ್ಲಿ ಅಮುಗೇಶ್ವರಲಿಂಗ ಎಂಬ ಅಂಕಿತವಿದೆ. ಇವುಗಳನ್ನು ಈತನು ರಚಿಸಿರಬಹುದು.

ವಚನ

ವಿಶ್ವಮಯರೂಪಾಗಿ ಬಂದೆಯಯ್ಯಾ. ಭಕ್ತಿಗೆ ಎನ್ನ ಮನಕ್ಕೆ ಸಲೆ ಸಂದನಿಲವು ಅಮುಗೇಶ್ವರಲಿಂಗಕ್ಕೆ ಮಾಟವಾಯಿತ್ತು.

## 14 ಗಜೇಶಮಸಣಯ್ಯ

ಮಸಣಯ್ಯ ಪ್ರಿಯಗಜೇಶ್ವರ ಎಂಬ ಅಂಕಿತವುಳ್ಳ ಕೆಲವು ವಚನಗಳು ದೊರೆಯುತ್ತವೆ ಇವುಗಳನ್ನು ಈತನು ಬರೆದಿರಬಹುದು.

ವಚನ

ಶಿವನೆ ನೀನು ಗುರುವಾದೆ, ಲಿಂಗವಾದೆ, ಜಂಗಮವಾದೆ, ಭಕ್ತನಾದೆ. ಗುರುವಾಗಿದ್ದು ಭಕ್ತನೊಳಡಗಿದೆ; ಲಿಂಗವಾಗಿದ್ದು ಭಕ್ತನೊಳಡಗಿದೆ; ಜಂಗಮವಾಗಿದ್ದು ಭಕ್ತನೊಳಡಗಿದೆ. ಇಂತಡಗುವರೇ ಹಿರಿಯರು, ಇಂತಡಗುವರೇ ಗರುವರು, ಇಂತಡಗುವರೇ ಮಹಿಮರು; ಇವರಿಗೆ ಭಾಜನವೊಂದೆ, ಭೋಜನವೊಂದೆ. ಈ ನಾಲ್ಕು ಒಂದಾದ ಘನಕ್ಕೆ ಪರಿಮಾಣ ಬೇಱೆಂಬ ಶಾಸ್ತ್ರದ ಸೂತ್ರಗಳನೆನಗೆ ತೋಱದಿರಾ ಮಸಣಯ್ಯಪ್ರಿಯಗಜೇಶ್ವರ.

## 15 ನಿಜಗುಣದೇವ

ಈತನ ವಚನಗಳಲ್ಲಿ ಇವನ ಹೆಸರು ವ್ಯಕ್ತವಾಗಿ ಹೇಳಿದೆ.

ವಚನ

ಆನುಳ್ಳನಕ ನೀನುಂಟೆಲೆಮಾಯೆ, ಆನಿಲ್ಲದಿರ್ದಡೆ ನೀನಿಲ್ಲ. ಆಱ ನೀನೆಂಬು ಭಯವಱಿಯಲು ಆನಂದನಿಜಗುಣಯೋಗ.

## 16 ಚಿಕ್ಕಯ್ಯ

ಚಿಕ್ಕಯ್ಯಪ್ರಿಯಸಿದ್ಧಲಿಂಗ ಎಂಬ ಅಂಕಿತವು ಕೆಲವು ವಚನಗಳಲ್ಲಿದೆ. ಬಸವನ ಕಾಲದಲ್ಲಿ ಒಬ್ಬ ಚೋರಚಿಕ್ಕಯ್ಯನೆಂಬವನು ಇದ್ದಂತೆ ತಿಳಿಯುತ್ತದೆ. ಈ ವಚನಗಳು ತತ್ಕೃತವೋ ಏನೋ ತಿಳಿಯದು.

### ವಚನ

ಉದಯದಲ್ಲಿ ಹುಟ್ಟಿದ ಪ್ರಾಣಿಗಳಿಗೆ ಅಸ್ತಮಾನದಲ್ಲಿ ನಿಚ್ಚನಿಚ್ಚ ಮರಣವಾಯಿತ್ತಲ್ಲ. ಇದಱಂತುವ ತಿಳಿಯಲೊಲ್ಲದೆ ಅಜ್ಞಾನಿಗಳಾಗಿ ಹೋದರಲ್ಲ ಎಲ್ಲರು. ಚಿಕ್ಕಯ್ಯಪ್ರಿಯಸಿದ್ಧಲಿಂಗ ಇಲ್ಲ ಇಲ್ಲ ನಿಲ್ಲು ಮಾಣು.

## 17 ಸಿಮ್ಮಲಿಗೆಯ ಚೆನ್ನಯ್ಯ

ಸಿಮ್ಮಲಿಗೆಯಚೆನ್ನರಾಮ ಎಂಬ ಅಂಕಿತವುಳ್ಳ ಕೆಲವು ವಚನಗಳಿವೆ. ಇವು ಏತತ್ಕವಿಕೃತವಾಗಿರಬಹುದು.

### ವಚನಗಳು.

(1) ಎಲುವಿನ ಪಂಜರ, ನರವಿನ ಜಾಳಿಗೆ, ಅಮೇಧ್ಯದ ಹುತ್ತ, ಮೂತ್ರದ ಬಾವಿ, ಶ್ಲೇಷ್ಮದ ಕೆಸಱು, ಕೀವಿನ ಸೋನೆ, ನೆತ್ತರ ಮಡು, ನಾಡಿಗಳ ಸುತ್ತುವಳ್ಳಿ, ಪ್ರಾಣನೆಣಜಂತ್ರ, ಮಾಂಸದ ಗಟ್ಟಿಯ ತೆಪ್ಪ, ಕಿಸುಕುಳದ ಹೇಸಿಕೆ, ಅತಿಹೇಯದ ಮಲಿನದ ರೋಮತೊಗಲಪಾಕುಳಕ್ರಿಯೆಯ ಸಂಕುಲ, ಬಲಿದ ಪರರೇತೋರಜಸ್ಸಿನಲ್ಲಿ ಜನಿಸುವ ಉತ್ಪತ್ತಿಸ್ಥಿತಿಲಯದ ಬೀಜ, ಆಧಿವ್ಯಾಧಿಯ ತವರುಮನೆ, ಮೋಹದ ಬಲೆ, ವಿಷಯದ ಭವದುಃಖಸಾಗರ—ತೋಱಿ ಕೆಡುವ ತನು. ಇದು ನಿನ್ನದೆಂದು ಮಾಡಬಾರದ ಪಾಪಂಗಳಂ ಮಾಡಿ ಬಾರದ ಭವಂಗಳಲ್ಲಿ ಬಂದು ದೇಹದಿಚ್ಚೆಗೆ ನಡೆದು ಹುಸಿ ಮೆತ್ತಿ ಹೊದಿಸಿದ ಈ ದೇಹದಂತುವ ಕಂಡು ಮಱುಗುವೆ ಮರುಳುಮಾನವ. ಅಘೋರನರಕದಲ್ಲಿ ಕೆಡುವಾಗ ಅಡ್ಡಬಪ್ಪವರಾರು ಹೇಳಾ. ನಾಹಂಮಮತೆಯೆಂಬ ದೇದಿಚ್ಚೆಯಂ ಬಿಟ್ಟು ಸೋಹಂಬ್ರಹ್ಮಾಸ್ಮಿ ಎಂದು ಕೇಡಿಲ್ಲದ ಪದವ ಮಾಡಿಕೋ ಮರುಳೆ. ಮೋಹ ಬೇಡ ಕೆಡುವೆ. ನಿನ್ನಲ್ಲಿ ನೀನೇ ತಿಳಿದುನೋಡಾ ಸಿಮ್ಮಲಿಗೆಯಚೆನ್ನರಾಮ.

(2) ಬಟ್ಟೆಯಲ್ಲಿ ಹೋಗುತ್ತಿಪ್ಪ ಮನುಜನೊಬ್ಬನನು ಹುಲಿ ಕಾಡುಗಿಚ್ಚು ರಕ್ಕಸಿ ಕಾಡಾನೆಗಳು ನಾಲ್ಕುದಿಕ್ಕಿನಲ್ಲಿ ಅಟ್ಟಿ ಬರುತ್ತಿರಲು, ಅವಂ ಕಂಡು ಭಯದಿಂದ ಹೋಗಲು ದಿಕ್ಕುತೋಱದೆ ಹಾೞುಬಾವಿಯಂ ಕಂಡು ತಲೆಯೂಱೆ ಬೀೞುವಲ್ಲಿ ಹಾವ ಕಂಡು ಬೀೞಲಮ್ಮದೆ ಇಲಿ ಕಡಿದ ಬಳ್ಳಿಯಂ ಹಿಡಿದು ನಿಲ್ಲಲು, ಜೇನ ಹುೞು

ಮೈನೂಱುವಾಗ ಮೂಗಿನ ತುದಿಯಲೊಂದು ಹನಿ ಮಧುಬಿಂದು ಬೀೞಲಾಗಿ ಆ ಮಧುವಂ ಕಂಡು ಪಿರಿನಪ್ಪ ದುಃಖಂಗನೆಲ್ಲವ ಸೈರಿಸಿ ನಾಲಗೆಯಲ್ಲಿ ಆ ಮಧುವ ಸೇವಿಸುವನಂತೆ ಈ ಸಂಸಾರಸುಖವ ವಿಚಾರಿಸಿ ನೋಡಿದಡೆ ದುಃಖವಾಗರವು. ಇದನಱಿದು ಸಕಲವಿಷಯಂಗಳಲ್ಲಿಯು ಸುಖವಿಂತಟೆಂದು ನಿರ್ವಿಷಯಿಯಾಗಿ ನಿಂದ ನಿಲವು ನೀನೆ ನಿಮ್ಮಲಿಗೆಯಚೆನ್ನರಾಮ.

## 18 ರೇಕಣ್ಣ

ರೇಕಣ್ಣಪ್ರಿಯ ನಾಗಿನಾಥ ಎಂಬ ಅಂಕಿತವುಳ್ಳ ಕೆಲವು ವಚನಗಳಿವೆ. ಈ ರೇಕಣ್ಣನಾರೋ ತಿಳಿಯದು.

### ವಚನಗಳು

(1) ಕಳ್ಳನ ಕೈಯಲ್ಲಿ ಒಂದು ಒಳ್ಳೆಯ ರತ್ನವ ಕಂಡಡೆ ಎಲ್ಲರೂ ಬಂದು ತಲೆವಿಡಿವರಯ್ಯಾ. ಆರತ್ನವ ರತ್ನದ ವ್ಯವಹಾರಿ ಕೊಂಡಡೆ ಆರೂ ಬಾಯೆತ್ತಲಮ್ಮರು. ಶೈವಗುರುವಿನ ಕೈಯಲ್ಲಿ ಸಾಹಿತ್ಯವಾದ ಲಿಂಗವನು ವೀರಶೈವಗುರುವಿನ ಕೈಯಲ್ಲಿ ಕೊಟ್ಟು ಮರಳಿ ಕೊಂಡಡೆ ಆತ ಇಹಲೋಕಪೂಜ್ಯನು, ಪರಲೋಕಪೂಜ್ಯನು; ನಿಮ್ಮಾಣೆ ನಿಮ್ಮ ಪ್ರಮಥರಾಣೆ ತಪ್ಪದು ರೇಕಣ್ಣಪ್ರಿಯನಾಗಿನಾಥ.

(2) ಕೈಮಱೆದು ಕಾದುವ ಅಂಕವದೇಕೋ ? ಭಾವಮಱೆದು ನೋಡುವ ನೋಟವದೇಕೋ? ಭಯವ ಮಱೆದು ಮಾಡುವ ಭಕ್ತಿಯದೇಕೋ? ಏಕಾಂತದ ಸುಖಕ್ಕೆ ಲೋಕಾಂತವೇಕೋ ? ರೇಕಣ್ಣಪ್ರಿಯನಾಗಿನಾಥನಲ್ಲಿ ಗುರುವ ಮಱೆದು ಲಿಂಗವನೊಲಿಪೆನೆಂಬುದೇಕೋ ?

## 19 ಉರಿಲಿಂಗದೇವ. ಸು. 1170

ಉರಿಲಿಂಗದೇವ ಎಂಬ ಅಂಕಿತವುಳ್ಳ ಕೆಲವು ವಚನಗಳು ದೊರೆಯುತ್ತವೆ. ಇವು ಶಿವಲೆಂಕಮಂಚಣ್ಣನ (ಸು.1160) ಮಗನೂ ಉರಿಲಿಂಗಪೆದ್ದಿಯ (ಸು. 1180) ಗುರುವೂ ಆದ ಉರಿಲಿಂಗದೇವನಿಂದ[1] ರಚಿತವಾಗಿರಬಹುದು.

### ವಚನ

ಇಂಬಿನ ಚುಂಬನವಮೃತಾಹಾರ; ಆಲಿಂಗನವೆ ಆಭರಣ; ಸೋಂಕೆ ಸುವಸ್ತ್ರ; ನೋಟವೆ ಕೂಟ; ಒಡನಾಟವೆ ಅಷ್ಟಭೋಗ; ಎನಗೆ ಉರಿಲಿಂಗದೇವನ ಕೂಟ ಪರಾತ್ಪರವಾಙ್ಮನೋತೀತಪರಮಸುಖವು.

1. Vol. I, 215.

## 20 ಉರಿಲಿಂಗಪೆದ್ದಿ[1]

ಈತನ ವಚನಗಳಲ್ಲಿ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ ಎಂಬ ಅಂಕಿತವಿದೆ.

### ವಚನ

ಜ್ಯೋತಿಯ ಸಂಗದಿಂದ ಕರ್ಪೂರವು ಜ್ಯೋತಿಯಪ್ಪಂತೆ, ಅಪ್ಪುವಿನ ಸಂಗದಿಂದ ಲವಣವು ಅಪ್ಪುವಪ್ಪಂತೆ, ಶ್ರೀಗುರುವಿನ ಸಂಗದಿಂದ ಶಿಷ್ಯನು ಶ್ರೀಗುರುವಪ್ಪುದು ತಪ್ಪದು. "ಯಥಾ ಬೀಜಂ ತಥಾಂಕುರಂ" ಎಂಬುದು ತಪ್ಪದು ದಿಟ ದಿಟ ನೋಡಾ. ಕಲ್ಪವೃಕ್ಷದ ಬೀಜದಿಂದಾದ ಸಸಿ ಕಲ್ಪವೃಕ್ಷವಪ್ಪುದು ತಪ್ಪದು ನೋಡಾ. ಕಾಮಧೇನುವಿನ ಶಿಶು ಕಾಮಧೇನುವಪ್ಪುದು ತಪ್ಪದು ದಿಟ ದಿಟ ನೋಡಾ. ಸದ್ಗುರುವಿಂದಾದ ಶಿಷ್ಯನು ಸದ್ಗುರುವಪ್ಪುದು ತಪ್ಪದು ದಿಟ ದಿಟ ನೋಡಾ. ಶಿವ ಬಲ್ಲನು ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರ.

## 21. ರಾಮನಾಥ.

ರಾಮನಾಥ ಎಂಬ ಅಂಕಿತವು ಕೆಲವು ವಚನಗಳಲ್ಲಿದೆ. ಒಬ್ಬ ರಾಮನಾಥಾಚಾರ್ಯನು ಏಕೋರಾಮಿತಂದೆಯ ಶಿಷ್ಯನಾಗಿದಂತೆ ತಿಳಿಯುತ್ತದೆ.[2] ಸದಾಶಿವಯೋಗಿ (1554) ಒಬ್ಬ ರಾಮನಾಥಾಚಾರ್ಯನ ಚರಿತವನ್ನು ರಾಮನಾಥವಿಲಾಸ ಎಂಬ ಹೆಸರಿಂದ ಚಂಪೂರೂಪವಾಗಿ ಬರೆದಿದ್ದಾನೆ. ಈ ರಾಮನಾಥಾಚಾರ್ಯನು ಹೊಯ್ಸಳದೇಶದ ಮುದ್ರಾಪುರದಲ್ಲಿ ರಾಮೇಶ್ವರಲಿಂಗಮೂರ್ತಿಯಿಂದ ವೀರಶೈವದೀಕ್ಷೆಯನ್ನು ಪಡೆದು ಅದನ್ನು ಹುಸಿಯೆಂದು ತಿಳಿದು ಶಂಕೆಮಾಡಿದ ಶೈವರಿಗೆ ಆ ರಾಮೇಶ್ವರಲಿಂಗದಿಂದಲೇ ಸಾಕ್ಷಿಯನ್ನು ನುಡಿಯಿಸಿ ಮೆರೆದು ವೀರಶೈವಮತವೇ ಉತ್ತಮಮತವೆಂಬುದನ್ನು ಪ್ರಚುರಮಾಡಿದನೆಂದು ಈ ಗ್ರಂಥದಿಂದ ತಿಳಿಯುತ್ತದೆ. ಏಕೋರಾಮಿತಂದೆಯ ಶಿಷ್ಯನೂ ರಾಮನಾಥವಿಲಾಸದ ಕಥಾನಾಯಕನೂ ಒಬ್ಬನೇ ಎಂದು ತೋರುತ್ತದೆ. ಮೇಲೆ ಹೇಳಿದ ವಚನಗಳು ಏತತ್ಕೃತವಾಗಿರಬಹುದು.

### ವಚನಗಳು

(1) ಕಡೆಗೀಲಿಲ್ಲದ ಬಂಡಿ ಹೊಡಗೆಡೆವುದಂ ಮಾಣ್ಬುದೆ? ಕಡೆಗೀಲು ಬಂಡಿಗಾಧಾರ. ಕಡುದರ್ಪವೇಱಿದ ಒಡಲೆಂಬ ಬಂಡಿಗೆ ಮೃಡಶರಣರ ನುಡಿಗಡಣವೇ ಕಡೆಗೀಲು ಕಾಣಾ ರಾಮನಾಥ.

1. Vol. I, 215. 2 *Ibid.*, 163.

(2) ಆಡಗ ತಿಂಬರು ಕಣಕದಡಿಗೆಯಿರಲ್ಕೆ ; ಸುರೆಯ ಕುಡಿವರು ಹಾಲಿರಲ್ಕೆ ; ಮುಕ್ಕುವರು ಬಂಗಿಯ ಸಕ್ಕರೆಯಿರಲ್ಕೆ ; ಸ್ವಸ್ತ್ರೀಯಿದ್ದಂತೆ ಪರಸ್ತ್ರೀಯರಿಗೆ ಅಳುಪುವರು ; ಸತ್ತ ನಾಯ ಭಕ್ಷಿಸುವ ಹಡಿಕಿಗರನೇನೆಂಬೆನಯ್ಯಾ ರಾಮನಾಥ.

(3) ಮರದೊಳಗೆ ಮಂದಾಗ್ನಿಯನುರಿಯದಂತಿರಿಸಿದೆ ; ನೊರೆವಾಲೊಳಗೆ ತುಪ್ಪವ ಕಂಪಿಲ್ಲದಂತಿರಿಸಿದೆ ; ಶರೀರದೊಳಗಾತ್ಮನನಾರುಂ ಕಾಣದಂತಿರಿಸಿದೆ ; ನೀ ಬೆರಸಿಹ ಭೇದಕ್ಕೆ ಬೆಱಗಾದೆನಯ್ಯ ರಾಮನಾಥ.

(4) ಹರ ತನ್ನ ಭಕ್ತರ ತಿರಿವಂತೆ ಮಾಡುವ; ಒರೆದು ನೋಡುವ ಸುವರ್ಣದ ಚಿನ್ನದಂತೆ ; ಅರೆದು ನೋಡುವ ಚಂದನದಂತೆ ; ಅರಿದು ನೋಡುವ ಕಬ್ಬಿನ ಕೋಲಿನಂತೆ ; ಬೆದಱದೆ ಬೆಚ್ಚದೆ ಇದ್ದಡೆ ಕರಪಿಡಿದೆತ್ತಿಕೊಂಬ ನಮ್ಮ ರಾಮನಾಥನು.

## 22. ಸಂಗಯ್ಯ.

ಕೆಲವು ವಚನಗಳಲ್ಲಿ ಸಂಗಯ್ಯಪ್ರಿಯಬಂಕೇಶ್ವರ ಎಂಬ ಅಂಕಿತವಿದೆ. ಪಾಲ್ಕುರಿಕೆಸೋಮನಿಗೆ (ಸು. 1195) ಸಂಗಯ್ಯನೆಂಬ ಒಬ್ಬ ಶಿಷ್ಯನಿದ್ದಂತೆ ತಿಳಿಯುತ್ತದೆ.[1] ಈ ವಚನಗಳನ್ನು ಇವನು ರಚಿಸಿರಬಹುದೋ ಏನೋ ತಿಳಿಯದು.

ವಚನ

ಅಡಿಗಡಿಗೆ ಬಂದು ಅಡರುತ್ತಿಪ್ಪೆ ಕಡುಚಲ ನಿನಗೆ ಬೇಡ ಕಂಡೆಯಾ. ಮೃಡನೆ ಎನ್ನೊಡನೆ ತೊಡರಿ ನೀನು ಸಸಿನೆ ಹೋಗಲರಿಯೆ. ಅದು ಹೇಗೆಂದಡೆ ನಾನು ನಿನಗಂಜುವನಲ್ಲ. ಗಾಸಿಯಾಗಬೇಡ ಕಂಡೆಯಾ. ಹರಹರಾ! ಶಂಕರಾ! ಎನ್ನ ನೇಮಕ್ಕೆ ಅಡ್ಡಬಾರದಿರು. ಒಡವೆ ಸವೆದಡೆ ಒಡಲನೊಡ್ಡುವೆ. ಕಡಗಿ ನೋಡುವಡೊಮ್ಮೆ ಹಱಚು. ಬಂದು ಬಡವನಕೈಯ ಕಡುಹ ನೋಡೆನ್ನೊಡೆಯ ಸಂಗಯ್ಯಪ್ರಿಯ ಬಂಕೇಶ್ವರ.

ಇದುವರೆಗೂ ಹೇಳಿದ ಕವಿಗಳು ಬಸವನ ಸಮಕಾಲದವರೂ ಅವನಿಗಿಂತ ಸ್ವಲ್ಪ ಈಚೆಯವರೂ ಆಗಿದ್ದಾರೆ.

## ಹೆಸರುಗೊತ್ತಿಲ್ಲದ ವಚನಕಾರರು.

ಇನ್ನುಕೆಲವು ವಚನಗಳಲ್ಲಿ ಈ ಅಂಕಿತಗಳು ದೊರೆಯುತ್ತವೆ—

ಮಹಾಲಿಂಗಕಲ್ಲೇಶ್ವರ, ಮಹಾಲಿಂಗಗಜೇಶ್ವರ, ಮಹಾಲಿಂಗತ್ರಿಪುರಾಂತಕದೇವ, ಮಹಾಲಿಂಗಚೆನ್ನರಾಮ, ರಾಮೇಶ್ವರಲಿಂಗ, ಸದಾಶಿವಮೂರ್ತಿಲಿಂಗ, ಸಿದ್ಧ

1. Vol. I, 229.

ಸೋಮೇಶ್ವರಲಿಂಗ, ಹುಲಿಗೆರೆಯಸೋಮೇಶ್ವರ, ಉಳಿಯುಮೇಶ್ವರ, ಶಂಭುಜಕ್ಕೇಶ್ವರ, ಶಾಂತಮಲ್ಲಿಕಾರ್ಜುನಯ್ಯ, ಕಾಮಭೀಮಜೀವದನದೊಡೆಯ, ಗುರುಸಿದ್ಧಮಲ್ಲ, ನಾರಾಯಣಪ್ರಿಯರಾಮನಾಥ, ಮಾರೇಶ್ವರ, ಕಾಮಧೂಮಧೂಳೇಶ್ವರ, ಪುಣ್ಯಾರಣ್ಯದಹನಭೀಮೇಶ್ವರಲಿಂಗನಿರಂಗಸಂಗ, ಅರ್ಕೇಶ್ವರಲಿಂಗ, ಅಲೇಕನಾಥ, ಚಂಡೇಶ್ವರಲಿಂಗ, ಸೌರಾಷ್ಟ್ರಸೋಮೇಶ್ವರ, ಗಜೇಶ್ವರ, ಮಧುಕೇಶ್ವರ, ಚೆನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನ, ಈಶಾನ್ಯಮೂರ್ತಿಮಲ್ಲಿಕಾರ್ಜುನಲಿಂಗ, ನಂದಗೋಪಿಯಕಂದಪ್ರಿಯ ನಿಸ್ಸಂಗಲಿಂಗರಾಮನಾಥ, ನಿಜಗುರುಶಾಂತೇಶ್ವರ, ಏಣಾಂಕಧರಸೋಮೇಶ್ವರಲಿಂಗ, ಭೌಂಭೇಶ್ವರ, ನಾಸ್ತಿನಾಥ, ಸದ್ಯೋಜಾತಲಿಂಗ, ಸಂಗಮೇಶ್ವರಲಿಂಗ, ಗೋಪತಿನಾಥವಿಶ್ವೇಶ್ವರ, ಅಭಿನವಮಲ್ಲಿಕಾರ್ಜುನ, ಶಂಭುಸೋಮನಾಥಲಿಂಗ, ಸಿದ್ಧಸೋಮೇಶ, ಪುರದಮಲ್ಲಯ್ಯ, ಸದ್ಗುರುಶಂಭುಸೋಮೇಶ್ವರ, ಸಂಗಪ್ರಭು, ಹಂಪೆಯವಿರುಪಯ್ಯ, ಹುಲಿಗೆರೆಯವರದಸೋಮೇಶ, ರೇಕನಾಥಯ್ಯ, ಘನಗುರುಪ್ರಿಯಸೋಮನಾಥ.

ಇವುಗಳಲ್ಲಿ ಆವ ಅಂಕಿತವನ್ನು ಆವ ವಚನಕಾರನು ಉಪಯೋಗಿಸಿರುವನೋ ತಿಳಿಯದು. ಆದರೂ ಅಂಕಿತಗಳನ್ನೇ ಹೇಳಿ ಕೆಲವು ವಚನಗಳನ್ನು ಇಲ್ಲಿ ಉದಾಹರಿಸುವುದು ಯುಕ್ತವೆಂದು ತೋರುತ್ತದೆ. ಗ್ರಂಥಾಂತರಗಳಿಂದ ಮುಂದೆ ಈ ಅಂಕಿತಗಳನ್ನು ಉಪಯೋಗಿಸಿರುವ ಕವಿಗಳ ಹೆಸರುಗಳು ಗೊತ್ತಾದರೂ ಆಗಬಹುದು. ಈ ಕವಿಗಳಲ್ಲಿ ಕೆಲವರು ಬಸವನ ಸಮಕಾಲದವರೂ ಆಗಿರಬಹುದು. ಏನಂಚ ಇವರೆಲ್ಲರೂ 1475ಕ್ಕೆ ಹಿಂದೆ ಇದ್ದವರು.

ವಚನಗಳು

23 ಮಹಾಲಿಂಗಕಲ್ಲೇಶ್ವರ

(1) ಹಗಲು ಹಸಿವಿಗೆ ಕುದಿದು ಇರುಳು ನಿದ್ರೆಗೆ ಮಱುಗಿ ಉಱದಾದ ಹೊತ್ತೆಲ್ಲ ವಿಷಯದಲ್ಲಿ ಬೆಂದು ನಾ ನಿಮ್ಮ ದೆಸೆಯಱಿಯದ ಪಾಪಿ ನೋಡಯ್ಯಾ. ನಾ ನಿಮ್ಮ ದೆಸೆಯ-ಱಿಯದ ಕರ್ಮಿ ನೋಡಯ್ಯಾ. ಮಹಾಲಿಂಗಕಲ್ಲೇಶ್ವರ! ಅಸಗ ನೀರಡಸಿ ಸಾವತೆಱನಂತೆ ಎನ್ನ ಯುಕ್ತಿ.

(2) ಒಲಿದು ಒಲಿಸಿಕೊಳ್ಳಬೇಕು. ಒಲಿದಲ್ಲದೆ ಇಲ್ಲ. ಹಲವುಕೊಂಬೆಗೆ ಹಾಱದಿರು ಮರುಳೆ. ಅಟ್ಟಿ ನೋಡುವ; ಮುಟ್ಟಿ ನೋಡುವ; ತಟ್ಟಿನೋಡುವ; ಒತ್ತಿ

ನೋಡುವ. ಅಟ್ಟಿದಡೆ ಮುಟ್ಟಿದಡೆ ತಟ್ಟಿದಡೆ ಒತ್ತಿದಡೆ ನಿಷ್ಠೆಯ ಬಿಡದಿರ್ದಡೆ ತನ್ನನೀವ ಮಹಾಲಿಂಗಕಲ್ಲೇಶ್ವರ.

## 24 ಮಹಾಲಿಂಗಗಜೇಶ್ವರ.

ಒಲಿದವರ ಕೊಲುವಡೆ ಮಸೆದ ಕೂರಲಗೇಕೆ? ಅವರನೊಲ್ಲೆನೆಂಡಡೆ ಸಾಲದೆ? ಮಹಾಲಿಂಗಗಜೇಶ್ವರನ ಶರಣರನಗಲಿದಡೆ ತುಪ್ಪದಲ್ಲಿ ಕಿಚ್ಚ ನಂದಿಸಿದಂತಾಪೆನಪ್ಪಾ.

## 25 ಮಹಾಲಿಂಗತ್ರಿಪುರಾಂತಕದೇವ.

ನಿನ್ನ ಹರೆಯದ ರೂಹಿನ ಚೆಲುವಿನ ನುಡಿಯ ಜಾಣೆನ ಸಿರಿಯ ಸಂತೋಷದ ಕರಿತುರಗರಥಪದಾತಿಯ ನೆರವಿಯ ಸತಿಸುತರ ಬಂಧುಗಳ ಸಮೂಹದ ನಿನ್ನ ಕುಲದಭಿಮಾನದ ಗರ್ವವ ಬಿಡು. ಮರುಳಾಗದಿರು. ಅಕಟಕಟ ! ರೋಮಜನಿಂದ ಹಿರಿಯನೆ ? ಮದನನಿಂ ಚೆಲುವನೆ ? ಸುರಪತಿಯಿಂದ ಸಂಪನ್ನನೆ ! ವಾಮದೇವವಸಿಷ್ಠರಿಂದ ಕುಲಜನೆ ? ಅಂತಕನ ದೂತರು ಬಂದು ಕೈವಿಡಿನೆಳೆದೊಯ್ವಾಗ ನುಡಿ ತಡವಿಲ್ಲ ಕೇಳೊ ನರನೆ. ಎನ್ನ ಮಹಾಲಿಂಗತ್ರಿಪುರಾಂತಕದೇವರ ಪೂಜಿಸಿದೆಯಾದಡೆ ಕೇಡಿಲ್ಲದ ಪದ ದೊರೆಕೊಂಬುದು ಮರುಳೆ.

## 26 ಸದಾಶಿವಮೂರ್ತಿಲಿಂಗ.

ಅಂಗದಾಪ್ಯಾಯನವ ಆತ್ಮನಱಿವಂತೆ, ಆತ್ಮನ ಸುಖದುಃಖವ ಅಂಗ ತಾಳುವಂತೆ, ಅಂಗಕ್ಕು ಆತ್ಮಕ್ಕು ಅನ್ಯಭಿನ್ನವಿಲ್ಲ. ಪೂಜಿಸುವ ಭಕ್ತನು ಪೂಜಿಸಿಕೊಂಬಾ ವಸ್ತು ಈ ಉಭಯವು ಸದಾಶಿವಮೂರ್ತಿಲಿಂಗವು ತಾನೆ ತಾನೆ.

## 27 ಸಿದ್ಧಸೋಮೇಶ್ವರಲಿಂಗ.

ಶಿವನ ನೆನೆದಡೆ ಭವಹರವಹುದೆಂಬ ವಿವರಗೇಡಿಗಳ ಮಾತ ಕೇಳಲಾಗದು. ಅದೇನುಕಾರಣವೆಂದಡೆ—ಜ್ಯೋತಿಯ ನೆನೆದಡೆ ಕತ್ತಲೆ ಹರಿವುದೆ ? ಮೃಷ್ಟಾನ್ನವ ನೆನೆದಡೆ ಹೊಟ್ಟೆ ತುಂಬುವುದೆ ? ರಂಭೆಯ ನೆನೆದಡೆ ಕಾಮದ ಕಳವಳವು ಹಿಂಗುವುದೆ ? ನೆನೆದಡಾಗದು. ನಿರ್ಧರಿಸಿ ದ್ವಯಕುಳವಱಿದು ಬೆರಸಬಲ್ಲಡೆ ಸದ್ಗುರು ಸಿದ್ಧಸೋಮೇಶ್ವರಲಿಂಗವು ತಾನೆ.

## 28 ಉಳಿಯುಮೇಶ್ವರ.

(1) ಅಸ್ಥಿಚರ್ಮಮಾಂಸರಕ್ತಖಂಡದ ಚೀಲ ಲೆಕ್ಕಕ್ಕೆ ಬರುವುದೆ ? ಹುರುಳಿಲ್ಲ ಸಂಸಾರ. ಎಂದಿಗೆ ನಾನೀ ಹೊತ್ತ ಹೊಱೆಯನಿೞಿಹುವೆನೋ ? ಎಂದಿಗೆ

ನಾನಿದ ಬಳಸಿ ಕಳೆವೆನಯ್ಯಾ. ಎಡಹಿ ಕೊಡನುದಕವ ನಡುನೀರಲ್ಲೊಡೆವಂತೆ ಎನ್ನೊಡಲೊಡೆದು ನಿಮ್ಮನೆಂದಿಗೆ ಬೆರಸುವೆನು ಉಳಿಯುಮೇಶ್ವರ.

(2) ಭವಪಾಶಬಂಧದಿಂ ಬಿಗಿದು ಕವಿಲೆಯ ಹುಲಿಯ |
ಗವಿಯೊಳಗೆ ಕಟ್ಟಿದಂತಾದೆ ಸಂಸಾರವೆಂ |
ಬವಿಚಾರಸರ್ಪ ಸರ್ವಗ್ರಾಸಗೊಂಡುದಿದನೊಮ್ಮೆ ಪರಿಹರಿಸಿ ನಿಮ್ಮ ||
ಅವಿರಳಶ್ರೀಪಾದದೊಳು ಮಗ್ನನಾಗಿ ಮ |
ತ್ತವಿಕಲ್ಪಸಮಸುಖಾನಂದದೊಳಗೊಂದಿಹೆನೊ |
ಭವರಹಿತ ಪರಮೇಶ ಪಾಲಿಸ್ಯೆ ನಿಜ್ಜಗುರುವೆ ಉಳಿಯುಮೇಶ್ವರಲಿಂಗವೇ||

## 29 ಶಂಭುಜಕ್ಕೇಶ್ವರ.

(1) ಏಕೆನ್ನ ಬಾರದ ಭವಂಗಳಲ್ಲಿ ಬರಿಸಿದೆ ? ಏಕೆನ್ನ ಘೋರಸಂಸಾರದಲ್ಲಿರಿಸಿದೆ? ಏಕೆನಗೆ ಕರುಣಿಸಲೊಲ್ಲದೆ ಕಾಡಿಹ ಕೇಳಾ. ಹೇತಾ ಎನ್ನ ಲಿಂಗವೆ ನಾ ಮಾಡಿದ ತಪ್ಪೇನು. ಸಾಕಲಾದುದೆಂದು ಅತ್ತೊತ್ತಿ ನುಡಿದಡೆ ಏಕೆ ನಾ ನಿಮ್ಮ ಬಿಡುವೆ ಶಂಭು ಜಕ್ಕೇಶ್ವರ.

(2) ಇನಿಯಂಗೆ ತವಕವಿಲ್ಲ ಎನಗೆ ಸೈರಣೆಯಿಲ್ಲ ಮನದಿಚ್ಛೆಯನರಿವ ಸಖಿಯರಿಲ್ಲ. ಮನ್ಮಥವೈರಿಯನುಭಾವದಲ್ಲಿ ಮನ ಸಿಲುಕಿ ಬಿಡದು. ಇನ್ನೇವೆನಿನ್ನೇವೆ. ದಿನ ವೃಥಾ ಹೋಯಿತು. ಯೌವನದ ಬೇಸರವೋಗದಮುನ್ನ ಪಿನಾಕಿಯ ತಂದು ನೆರಹವ್ವಾ ಶಂಭುಜಕ್ಕೇಶ್ವರನ.

## 30 ಕಾಮಭೀಮಜೀವದನದೊಡೆಯ.

ದೊಡ್ಡವೆರಡು ಕಂಬದ ಮಧ್ಯದಲ್ಲಿ ಚಿಕ್ಕವೆರಡು ಕಂಬ ; ಇಂತೀನಾಲ್ಕರ ಮಧ್ಯದ ಮನೆ, ಅಸ್ಥಿಯಗಲು, ನರದ ಕಟ್ಟು, ಮಜ್ಜೆಯ ಸಾರ, ಮಾಂಸದ ಗೋಡೆ, ಚರ್ಮದ ಹೊದಿಕೆ, ಶೋಣಿತದ ಸಾರಣೆ, ಶುಕ್ಲದ ಕಂಬದಿಂದಲಿಪ್ಪುದೊಂದು ಚಿತ್ರದ ಮನೆ ನೋಡಾ. ಆ ಮನೆಗೆ ಒಂಬತ್ತು ಬಾಗಿಲು, ಈಡೆಪಿಂಗಳೆಯೆಂಬ ಗಾಳಿಯ ಬಾದಳ, ಮೃದುಕಠಿನವೆಂಬೆರಡಗುಳಿಯ ಭೇದವು ನೋಡಾ. ಇತ್ತಲೆಯ ಮೇಲಿಪ್ಪ ಸುಷುಮ್ನನಾಳವ ಮುಚ್ಚಿ ದಿವಾರಾತ್ರವೆಂಬ ಮುರಿವರಿಬಿನ ಉಭಯದ ಕದ ಕೆತ್ತು ಮನೆ ನಷ್ಟವಾಗಿ ಹೋದಡೆಯೂ ಮನೆಯೊಡೆಯ ಮತ್ತೊಂದು ಮನೆಗೆ ಹೋಹುದು ತಪ್ಪದು ನೋಡಾ. ಇಂತೀ ಮನೆಗೆ ಮರಳಿ ಬಾರದಂತೆ ಮಾಡಯ್ಯಾ! ಕಾಮಭೀಮಜೀವದನದೊಡೆಯ ನಿಮ್ಮ ಧರ್ಮ ನಿಮ್ಮ ಧರ್ಮ,

## 31 ಗುರುಸಿದ್ಧಮಲ್ಲ.

ಇಲ್ಲದ ಕುತ್ತವ ಕೊಂಡು ಬಲ್ಲವರ ಬಾಯ ಹೊಗಹೋದರೆ ಬಲ್ಲಬಲ್ಲರೆಲ್ಲಾ ಅಲ್ಲತ್ತತ್ತಗೊಳುತಿದ್ದರು. ಇದೆಲ್ಲಿಯ ಕುತ್ತವೆಂದು ತಿಳಿದು ವಿಚಾರಿಸಲು ಅದಲ್ಲಿಯೆ ಬಯಲಾಯಿತ್ತು ಗುರುಸಿದ್ಧಮಲ್ಲ.

## 32 ನಾರಾಯಣಪ್ರಿಯರಾಮನಾಥ.

(1) ತನ್ನ ಮಱೆದೊಡೆ ಜಗವೆಲ್ಲವು ತನ್ನ ಸುತ್ತಿದ ಮಾಯೆ; ತನ್ನನಱಿದೊಡೆ ತನ್ಮಯ ಅನ್ಯಭಿನ್ನವಿಲ್ಲ; ಪ್ರತಿಬಿಂಬದ ಹಾಹೆ ನಾರಾಯಣಪ್ರಿಯರಾಮನಾಥ.

(2) ಡಂಬಕದ ಪೂಜೆ ಹೋಹ ಹೊತ್ತಿನ ಕೇಡು; ಆಡಂಬರದ ಪೂಜೆ ತಾಮ್ರದ ಮೇಲಣ ಸುವರ್ಣಚ್ಛಾಯೆ; ಇಂತೀಪೂಜೆಗೆ ಹಾಸೊಪ್ಪವನಿಕ್ಕಿ ಮನಹೂಸಿ ಮಾಡುವ ಪೂಜೆ ಬೇರು ನೆನೆಯದ ನೀರು, ಆಯವಿಲ್ಲದ ಘಾಯ, ಭಾವವಿಲ್ಲದ ಘಟವಾಯುವೆಂದೆ ನಾರಾಯಣಪ್ರಿಯರಾಮನಾಥ.

## 33 ಮಾರೇಶ್ವರ.

ವೇದವ ಕಲಿತಲ್ಲಿ ಪಾಠಕನಲ್ಲದೆ ಜ್ಞಾನಿಯಲ್ಲ; ಶಾಸ್ತ್ರಪುರಾಣವನೋದಿದಲ್ಲಿ ಪಂಡಿತನಲ್ಲದೆ ಜ್ಞಾನಿಯಲ್ಲ ; ವ್ರತನೇಮಕೃತ್ಯಪೂಜಕನಾದಡೇನು ? ದಿವ್ಯಜ್ಞಾನದ ಠಾವನಱಿಯಬೇಕು. ಈ ಭೇದಂಗಳನಱಿದು ತಿಳಿದಲ್ಲಿ ಮನ ಸಂದಿತ್ತು ಮಾರೇಶ್ವರ.

## 34 ಕಾಮಧೂಮಧೂಳೇಶ್ವರ.

(1) ಕುಂಭಘಟಕ್ಕೆ ಒಳಗೂ ಬಯಲು ಹೊಱಗೂ ಬಯಲು; ಮಾಱಿ ತಾ ನೋಡುವಲ್ಲಿಯೂ ಬಯಲು. ಶುಕ್ಲಶೋಣಿತದಿಂದಾದ ಘಟಕ್ಕೆ ಬಯಲೆಂಬುದಕೆ ತೆಱಪಿಲ್ಲ ಚೇತನಕೊಳಗಾಗಿದ್ದುದಾಗಿ. ಪೃಥ್ವಿ ಪೃಥ್ವಿಯ ಕೂಡುವನ್ನೆವರ, ಅಪ್ಪು ಅಪ್ಪುವ ಕೂಡುವನ್ನೆವರ, ತೇಜ ತೇಜವ ಕೂಡುವನ್ನೆವರ, ವಾಯು ವಾಯುವ ಕೂಡುವನ್ನೆವರ, ಆಕಾಶವಾಕಾಶವ ಕೂಡುವನ್ನೆವರ, ಪಂಚತತ್ವಂಗಳೂ ತತ್ವವನೈದಿದಲ್ಲಿ, ಆತ್ಮಂಗೆ ಬಂಧಮೋಕ್ಷವೆಂಬ ಅಂದವಾವುದೂ ಇಲ್ಲ. ಉಂಟೆಂಬುದೂ ತನ್ನಿಂದ, ಇಲ್ಲೆಂಬುದೂ ತನ್ನಿಂದ; ಅನ್ಯವಾಗಿ ತೋಱುವ ತೋಱಿಕೆ ಇಲ್ಲಿ ಸ್ಥಾಣು ಚೋರಕನಂತೆ, ರಜ್ಜುಸರ್ಪನಂತೆ, ತಿಳಿದು ನೋಡಲಿಕೆ ಮತ್ತೇನೂ ಇಲ್ಲ ಕಾಮಧೂಮಧೂಳೇಶ್ವರ.

(2) ಪೂಜೆ ಪುಣ್ಯಕ್ಕೊಡಲು, ಜ್ಞಾನ ಶೂನ್ಯಕ್ಕೊಡಲು, ಉಂಟು ಇಲ್ಲ ಎಂಬುದು ಸಂದೇಹಕ್ಕೊಡಲು; ಇಂತೀಒಡಲಱಿದು ಕೊಡುವ ಕೊಂಬೆಸೆಯಾಟ ನಿಂದು ಶೂನ್ಯವೆಂಬ ಸುಟುಹು ಸತ್ತು ಚಿಟ್ಟೆಂಬ ಜೆಗುಟು ಹಱಿದು ಮತ್ತಾವ ಕಲೆ ದೋಱದೆ ನಿಂದ ನಿಜಾತ್ಮನು ತಾನು ತಾನೆ ಕಾಮಧೂಮಧೂಳೇಶ್ವರ.

## 35 ಪುಣ್ಯಾರಣ್ಯಾದಹನ ಭೀಮೇಶ್ವರಲಿಂಗ ನಿರಂಗಸಂಗ.

ಪೃಥ್ವಿ ಪೃಥ್ವಿಯ ಕೂಡಿದಲ್ಲಿ ಅಪ್ಪು ಅಪ್ಪುವ ಕೂಡಿದಲ್ಲಿ ತೇಜ ತೇಜವ ಕೂಡಿದಲ್ಲಿ ವಾಯು ವಾಯುವ ಕೂಡಿದಲ್ಲಿ ಆಕಾಶವಾಕಾಶವ ಕೂಡಿದಲ್ಲಿ ಜೀವನ ಪುಣ್ಯಾಪಾಪವಾವುದು ಹೇಳಿರಣ್ಣಾ; ಜೀವಪರಮರ ಮಧ್ಯದಲ್ಲಿ ನಿಂದು ಆೈಕೆಗೊಂಬವರಾರು ಹೇಳಿರಣ್ಣಾ; ಜೀವಕ್ಕೆ ಭವ ಕಾಯಕ್ಕೆ ಮರಣವೆಂಬರು ಕಾಯಜೀವದ ಬೆಸುಗೆಯಾವುದು ಹೇಳಿರಣ್ಣಾ; ಒಡಹೆಂಚ ಹೊಯ್ದರೆ ಧ್ವನಿ ಭಿನ್ನವಾದಂತೆ ಅದಱಿಂದ ಉಭೆಯಭಿನ್ನವಾವುದು ಹೇಳಿರಣ್ಣಾ; ಅದು ಭಿನ್ನಕಾಯದಿಂದಲೋ ನಾದಪ್ರಕೃತಿಯಿಂದಲೋ. ವಾಗದ್ವೈತಸಂಬಂಧವಲ್ಲ. ಸ್ವಯದ ನಿಲುವ ನಿನ್ನ ನೀನಱಿ ಪುಣ್ಯಾರಣ್ಯಾದಹನ ಭೀಮೇಶ್ವರಲಿಂಗ ನಿರಂಗಸಂಗ.

## 36 ಅರ್ಕೇಶ್ವರಲಿಂಗ.

(1) ನೆನಹು ನಿಜದಲ್ಲಿ ನಿಂದಲ್ಲಿ ಸುರುಳಿನ ತೊಡಕುಗಟ್ಟುಂಟೆ ? ಅಂಬರವೆ ನಡೆದಿದವಂಗೆ ಬೇಱೊಂದು ಇಂಬುಮಾಡಲುಂಟೆ ? ವಸ್ತುವಿನ ಅಂಗದಲ್ಲ ಸರ್ವವು ಹಿಂಗಿದಲ್ಲ ಅರ್ಕೇಶ್ವರಲಿಂಗವ ಕಟ್ಟುವುದಕ್ಕೆ ಠಾವುಂಟೆ ?

(2) ಉಂಟೆಂದೊಡೆ ಉಂಟು ಇಲ್ಲ ಎಂದೊಡೆ ಇಲ್ಲ ಎಂಬುದು ಅದು ತನ್ನ ಮನದ ಸಂದೇಹ. ತನಗೆ ಅನ್ಯಭಿನ್ನವಿಲ್ಲ ಅರ್ಕೇಶ್ವರಲಿಂಗವು ತಾನಾದಕಾರಣ.

## 37 ಅಲೇಖನಾಥ.

ಆತ್ಮ ನಿಸ್ಸಂಗತ್ವದ ಇರವು. ಪೃಥ್ವಿ ಅಪ್ಪು ತೇಜೋವಾಯುವಾಕಾಶವೆಂಬ ಪಂಚತತ್ವದ ಮಧ್ಯದಲ್ಲಿ ಪುದಿದಿರ್ಪ ಆತ್ಮನ ಬಿಡಯವನಱಿವಾಗ ಪೃಥ್ವಿ ಪೃಥ್ವಿಯಂ ಕೂಡಿತ್ತು ಅಪ್ಪು ಅಪ್ಪುವಂ ಕೂಡಿತ್ತು ತೇಜ ತೇಜವಂ ಕೂಡಿತ್ತು ವಾಯು ವಾಯುವಂ ಕೂಡಿತ್ತು ಆಕಾಶ ಆಕಾಶವ ಕೂಡಿದಲ್ಲಿ ಆತ್ಮನ ಪಾಪಪುಣ್ಯವಾವುದು ? ಬೇಱೆ ಒಂದು ಠಾವಿನಲ್ಲಿ ನಿಂದು ಅಱಿವ ತೆಱನಾವುದು ? ಅದಱ ಕುಱುಹ ಕೇಳಿಹರೆಂದು ಅಲೇಖನಾಥ ಶೂನ್ಯಕಲ್ಲಿನೊಳಗಾದೆಯಲ್ಲ.

## 38 ಚಂಡೇಶ್ವರಲಿಂಗ.

(1) ಲಿಂಗ ಹೋಯಿತ್ತೆಂಬ ಸಂದೇಹವುಂಟಾಯಿತ್ತಾದೊಡೆ ಅಂಗ ಉಳಿಯಬಲ್ಲುದೆ ? ಆತ್ಮ ಹೋದಲ್ಲಿ ಘಟ ಎಷ್ಟುದಿನ ಉಳಿದುದು ? ಚಂಡೇಶ್ವರಲಿಂಗಕ್ಕೆ ಸಂದಿಲ್ಲ ಮಡಿವಾಳಯ್ಯ.

(2) ಹಿಂದಣ ಭವಸಾಗರವನು ದಾಂಟಿದೆ; ಮುಂದಣ ಮುಕ್ತಿಪಥಕ್ಕೆ ಜ್ಞಾನವಂಕುರಿಸಿತ್ತು; ಇನ್ನಂಜೆನಂಜೆನಯ್ಯ. ಎನ್ನ ಮನೋಮೂರುತಿಯಪ್ಪ ಚಂಡೇಶ್ವರನ ಕಾರುಣ್ಯವಾಯಿತ್ತು. ಗೆದ್ದೆ ಗೆದ್ದೆ ಮಹಾಮಾಯೆಯ.

## 39 ಸೌರಾಷ್ಟ್ರಸೋಮೇಶ್ವರ.

ತಾನೆ ಶಿವನೆಂದು ಕುಱುಹುಕೊಱುವಹಾಂಗೆ ಸುಱಿದನಲ್ಲದೆ ಕುಱುಹುಂಟೆ ಶರಣಂಗೆ ? ಮತ್ತೊಮ್ಮೆ ಅಱಿವುಮಱವೆಯುಂಟೆ ಶರಣಂಗೆ? ಬಚ್ಚಿ ಬೇಱಿಲ್ಲದ ಬೆರಸಿ ಒಂದಲ್ಲದ ದ್ವಂದ್ವರಹಿತ ಸೌರಾಷ್ಟ್ರಸೋಮೇಶ್ವರ ನಿಮ್ಮ ಶರಣ.

## 40 ಗಜೇಶ್ವರ.

ದೇವರ ನೆನೆದು ಮುಕ್ತರಾದೆವೆಂದೆಂಬ ಯುಕ್ತಿಶೂನ್ಯರ ಮಾತು ಕೇಳಲಾಗದು. ಅದೇನು ಕಾರಣವೆಂದೊಡೆ ದೇವರ ನೆನೆವವರಿಗೆ ದೇವರುಂಟೆ ? ದೂರದಲ್ಲಿದ್ದವರ ನೆನೆವರಲ್ಲದೆ ಸಮೀಪದಲ್ಲಿದ್ದವರ ನೆನೆವರಿಲ್ಲ. ಇದನಱಿದು ನಿನ್ನೊಳಡಗಿದೆ ನಿನ್ನ ನೆನೆಯಲಿಲ್ಲ, ನೀನೆನಗೆ ಮುಕ್ತಿಯನೀಯಲಿಲ್ಲ, ನೀನಾನೆಂದೆನಲಿಲ್ಲ ಗಜೇಶ್ವರ.

## 41 ಮಧುಕೇಶ್ವರ.

ಅಡುವ ಮಡಕೆಯ ತೋಱಿಸಿ ಶಿಶುವಿನ ಹಸಿವನಡಗಿಸುವಂತೆ ಬಱಿದೆ ಗುಮ್ಮನಿದೆಯೆಂದು ಮೊಟನ ಬೆದಱಿಸಿ ಹಸುಳೆಯನಡಗಿಸುವಂತೆ ಎನ್ನ ಗಸಣಿಗಾಱದೆ ಗುರುಚರವೆಂಬ ಬಱಿಯ ಇರವ ತೋಱಿ ನೀನು ಎಲ್ಲಿ ಅಡಗಿದೆ ? ನಿನ್ನ ಕುಱುಹು ತ್ರಿವಿಧದಲ್ಲಿಯೂ ಕಾಣೆ. ಅದು ನಿನ್ನ ಘನವೊ ವಿಶ್ವಾಸದ ಹೀನವೊ ಉಭಯವು ನಿನ್ನ ಕೇಡು. ಆಳಿನಪಮಾನ ಆಳಿದಂಗೆ ತಪ್ಪದು. ನೀ ಕೆಡುವೆ ನಿನ್ನೊಳಗೆ ಮುನ್ನವೆ ನಾ ಕೆಡುವೆ ಶಂಭುಗಿಂದೆತ್ತ ಸ್ವಯಂಭುವಿಂಗತ್ತ ಅತಿಬಳ ನೋಡಾ ಮಾತುಗಳಂಗ ಮಧುಕೇಶ್ವರನು.

## 42 ಚೆನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನ

ಘಟಾಕಾಶಮಠಾಕಾಶದಲ್ಲಿ ತೋಱುವ ಬೆಳಗು ಘಟಮಠವೆಂಬ ಉಭಯವಿರುತ್ತಿರಲಿಕೆ ರೂಪುಗೊಂಡಿತ್ತು ಬಯಲು. ಘಟವೆಂಬ ಭೇದಂಗಳಱಿಯಲಾಗಿ ಆಕಾಶ

ತತ್ವದಲ್ಲಿ ನಿಶ್ಚಿಂತವನ್ನೈದಿ ಮಹದಾಕಾಶದಲ್ಲಿ ಲೀಯವಾದುದು ವ್ಯತಿರಿಕ್ತವೆಂಬುದು. ನಾವಶೂನ್ಯಐಕ್ಯನ ಅರ್ಪಿತಸ್ಥಲ ಚೆನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನ.

## 43 ಈಶಾನ್ಯಮೂರ್ತಿಮಲ್ಲಿಕಾರ್ಜುನಲಿಂಗ

ತಾರಕ ಮುಟ್ಟಿ ಗುರುವಿಸಕ್ಕೈಗೆ ಬಂದುದಲ್ಲ. ಅಱುತಱುಹಿಸಿಕೊಂಬುದಲ್ಲ. ಪರುಷರಸದಂತೆ ಮಾಟಕ್ಕೊಳಗಲ್ಲ. ಅದು ಮುಟ್ಟಿ ಲೋಹ ಶುದ್ಧವಲ್ಲದೆ ಪುನರಪಿ ಶುದ್ಧವಾದುದಿಲ್ಲ. ಇಂತೀ ಭೇದಂಗಳಲ್ಲಿ ನಿಮ್ಮ ನಿಶ್ಚಯವಾದುದು ಜೀವನ್ಮುಕ್ತ ಲಿಂಗವದು ಈಶಾನ್ಯಮೂರ್ತಿಮಲ್ಲಿಕಾರ್ಜುನಲಿಂಗವು ಏಕಮೂರ್ತಿಸ್ವಯಂಭು.

## 44 ನಂದಗೋಪಿಯಕಂದಪ್ರಿಯ ನಿಸ್ಸಂಗಲಿಂಗರಾಮನಾಥ

ವಾದ್ಯದೊಳಗಣ ನಾದದವೊಲು ಪಾಷಾಣದೊಳಗಣ ಪಾವಕನವೊಲು ಕಿಸಲಯದೊಳಗಣ ರಸದವೊಲು ಅಸಿಯ ಮೊನೆಯಲ್ಲಿ ತೋಱುವ ನಯಕುಸುಲವೊಲು ಮುಸುಕಿನೊಳಗೆ ತೋಱುವ ಆಕಾಶದ ಪ್ರತಿರೂಪಿನವೊಲು ಗಜಗತಿಯಂತೆ ಮಯೂರನಂತೆ ಉಲುವಡಗಿದ ವೃಕ್ಷ ಬಯಲೊಳಡಗಿದ ನಾದದಂತೆ ಹೊಱಹೊಮ್ಮದ ಐಕ್ಯ ಇಂತಿವಱಂದದಲ್ಲಿ ಸಂದ ಶರಣಂಗೆ ಸಂದೇಹಪರವಿಲ್ಲ ನಂದಗೋಪಿಯಕಂದಪ್ರಿಯ ನಿಸ್ಸಂಗಲಿಂಗರಾಮನಾಥ.

## 45 ನಿಜಗುರುಶಾಂತೇಶ್ವರ.

ಪರಿಪೂರ್ಣನಲ್ಲ ಪ್ರಾದೇಶಿಕನಲ್ಲ ನಿರುಶಯದೊಳತಿಶಯ ತಾ ಮುನ್ನಲ್ಲ. ಶರಣನೈಕ್ಯನಲ್ಲ ಪರಮನಲ್ಲ ಜೀವನಲ್ಲ ನಿರವಯನಲ್ಲ ಸಾವಯ ಬಱಕಲ್ಲ ಪರವಿಹವೆಂಬ ಭಯದೊಳಗಲ್ಲದನುವನು ನಿಜಾಲಯ ನಿಜಗುರುಶಾಂತೇಶ್ವರನ ಶರಣನ ನಿಲುವು ಉಪಮೆಗೆ ತಾನನುಪಮ

## 46 ಏಣಾಂಕಧರ ಸೋಮೇಶ್ವರಲಿಂಗ

ಚಿತ್ತವಸ್ತುವಿನಲ್ಲಿ ನಿಂದು ತನ್ನಯ ಗುಣದ ಬಿತ್ತಿಯನಱಿಯಬೇಕೆಂಬವರು ಅಱದು ಹೊಱಗಾದುವ ಬೇಱೆ ಮತ್ತೆ ಕುಱುಹಿಡಲೇಕೆ? ಅಱಿದು ನಿಶ್ಚಯವಾದವಂಗೆ ಬೇಱೆಯೊಂಡೆಡೆಯುಂಟೆ ? ಏಣಾಂಕಧರಸೋಮೇಶ್ವರಲಿಂಗಕ್ಕೆ ಪಡಿಮಚ್ಚವುಂಟೆ ?

## 47 ಭೌಂಭೇಶ್ವರ.

ಅರುಪಿನ ಪ್ರಸಂಗಕೆ ಮಚ್ಚರವೇಕೆ ? ಮಹಾನುಭಾವಿಗೆ ಮನ್ನಣೆಯ ಮಾಡ

ರೆಂಬ ತೇಜದ ಶಿಷ್ಟತೆಯೇಕೆ ? ತಾನು ತಾನಾದಮತ್ತೆ ತನಗೇನೂ ಅನ್ಯವಿಲ್ಲಾ ಎಂದೆ ಭೌಂಭೇಶ್ವರ.

## 48 ನಾಸ್ತಿನಾಥ

ಅನಲನು ಕೊಂಡ ಭೋಗಕ್ಕೆ ಪರಿಪ್ರಕಾರವುಂಟೆ ? ಶರಧಿ ಕೊಂಡ ಸಾಗರಕ್ಕೆ ಕುಱುಹಿನ ತಲೆಯುಂಟೆ ? ಲಿಂಗವು ಮುಟ್ಟಿದ ಅಂಗಕ್ಕೆ ಪುಣ್ಯವೆಂಬುದು ಹುಸಿ ನಾಸ್ತಿನಾಥ.

## 49 ಗೋಪತಿನಾಥವಿಶ್ವೇಶ್ವರ.

ಜೀವಕುಳವಱಯಿತ್ತು; ಜ್ಞಾನಕುಳವುಱಯಿತ್ತು; ಭವಪಾಶ ಹಱಿಯಿತ್ತು; ಅಜ್ಞಾನ ಹಿಂಗಿತ್ತು; ಎಲೆಗೋಪತಿನಾಥವಿಶ್ವೇಶ್ವರಲಿಂಗ ನಿಮ್ಮ ಕತ್ತ ಮನವಾಯಿತ್ತೆನಗೆ; ಕೃಪೆಯ ಮಾಡು ಕೃಪೆಯ ಮಾಡು ಶಿವದೋ ಶಿವದೋ.

## 50 ಅಭಿನವಮಲ್ಲಿಕಾರ್ಜುನ.

ನೆನೆಯಲಱಿಯೆ ನಿರ್ಧರಿಸಲಱಿಯೆ ಮನವಿಲ್ಲಾಗಿ, ಭಾವಿಸಲಱಿಯೆ ಬೆರಸಲಱಿಯೆ ಭಾವನಿರ್ಭಾವವಾಯಿತ್ತಾಗಿ, ಧ್ಯಾನಮೌನವನಱಿಯೆ ಧ್ಯಾನಮೌನಾತೀತ ತಾನೆಯಾಯಿತ್ತಾಗಿ, ಜ್ಞಾತೃಜ್ಞಾನಜ್ಞೇಯಂಗಳೆಲ್ಲವ ಮಱೆ ಅಭಿನವಮಲ್ಲಿಕಾರ್ಜುನನಲ್ಲಿ ಪರಮಸುಖಿಯಾಗಿರ್ದೆ.

## 51 ಶಂಭುಸೋಮನಾಥಲಿಂಗ.

ಎನ್ನ ತ್ರಿವಿಧಾತ್ಮ ನಿಮ್ಮ ಹೆಂಡಿರು. ಸತ್ವರಜಸ್ತಮಂಗಳು ನಿಮ್ಮ ಭೃತ್ಯರಯ್ಯಾ. ಅಂತಃಕರಣಚತುಷ್ಟಯಂಗಳು ನಿಮ್ಮ ಬಾಣಸಿಗರಯ್ಯಾ. ಅಷ್ಟಮದಂಗಳು ನಿಮ್ಮ ದಳವಾಯಿಗಳು. ನವರಸಂಗಳು ನಿಮ್ಮ ಭಂಡಾರಿಗಳಯ್ಯಾ. ದಶವಾಯುಗಳು ನಿಮ್ಮ ಛತ್ರಚಾಮರಸೀಗುರಿಗಳು. ಶಂಭುಸೋಮನಾಥಲಿಂಗ ನಿಮಗೆನ್ನ ಕಾಯ ಮುಂತಾಗಿ ಬಾಹ್ಯಾಂತರಡಿಂಗರಿಗರಯ್ಯಾ.

## 52 ಸಿದ್ಧ ಸೋಮೇಶ.

ಉರಿ ಕಪ್ಪುರವ ಸೋಂಕಿದಂತೆನ್ನೊಳು ಬೆರಸಿರ್ಪ ಮಹಾಘನವನು ತೋಱ ಪರಮಸುಖದೊಳಗಿರಿಸಿದ ಸಿದ್ಧಸೋಮೇಶ ಕರುಣಾಮೃತಗುರುವೆ ಶರಣು.

## 53 ಪುರದಮಲ್ಲಯ್ಯ.

ಒಳಗನಱುಹಿಸಿ ತಿಳುಹ | ಹೊಱಗೆ ಬೋಧಿಸಿ ನಿಲಿಸಿ |
ಒಳಗು ಹೊಱಗೆಂದೆಂಬಿವೆರಡ ಕೆಡಿಸಿ ||

ಕಳೆಯ ಲಿಂಗದೊಳೊಚ್ಚ | ತವನೊಪ್ಪುಗೊಳಿಸಿದಾ |
ಕರುಣಿ ಗುರು ಪುರದಮಲ್ಲಯ್ಯಗುರುವೇ ||

### 54 ಸದ್ಗುರು ಶಂಭುಸೋಮೇಶ್ವರ.

ಶಿವನೆ ಅಧಿಕನು ಶಿವಭಕ್ತನೆ ಕುಲಜನು ಶಿವನ ಪ್ರಸಾದದಿಂದಧಿಕವಾವುದಿಲ್ಲೆಂದುದು ಶ್ರುತಿ. ಇದನಱಿತು ಸದ್ಗುರುಶಂಭುಸೋಮೇಶ್ವರನ ಭಜಿಸಿ ಪ್ರಸಾದವ ಸೇವನೆಯ ಮಾಡದಿರಲು ಅಘೋರನರಕ ತಪ್ಪದು.

### 55 ಸಂಗಪ್ರಭು.

ಒಡೆಯರಿಗೊಡವೆಯನೊಪ್ಪಿಸಿ ಶುದ್ಧನು | ಎಡೆಯೊಳಗಾಮಾಡಿದುದಿಲ್ಲೆಂದಱಿ |
ದೊಡಲವಗುಣವಡಗಿಸಿ ನಿರಹಂಭಾವದೊಳಗೆ ಸಲೆ ಸಂದು ||
ಮೃಡಶರಣರುಗಳ ಕಂಡವರಡಿಗಳ | ಪಿಡಿದು ಸದಾಸುಖಿಯಾಗಿರ್ಪರ ಮೆ |
ಲ್ಲಡಿಗಳೊಳಗೆ ಹಾವುಗೆಯಾಗಿರುಸೆನ್ನನು ಸಂಗಪ್ರಭುವೇ ||

### 56 ಹಂಪೆಯ ವಿರುಪಯ್ಯ.

ದಶದಿಕ್ಕು ಸಚರಾಚರದೊಳಗೆಲ್ಲ ವಿವರಿಸಿ ನೋಡಲು ತನ್ಮಯ. ಅಪರಾಪರ ಹಂಪೆಯವಿರುಪಯ್ಯನಲ್ಲದಿಲ್ಲವೆಂದು ಶ್ರುತಿ ಸಾಱುತಿವೆ.

### 57 ಹುಲಿಗೆರೆಯ ವರದಸೋಮೇಶ

ಮಾಯಾಸಂಗ್ರಹಮಲವ ತೊಳೆದು ನಿರ್ಮಾಯಸ್ವರೂಪವನೆಯ್ದಿಸಿ ಕಾವುದು ಹುಲಿಗೆಱೆಯ ವರದಸೋಮೇಶನ ಅಕ್ಷಯಾನಂದಪಾದೋದಕ.

### 58 ರೇಕನಾಥಯ್ಯ.

ಸತ್ತು ಸಂಯೋಗದಿಂದೆ ಭಕ್ತಿರತಿಯ ಕೂಡಲು ಸಮತೆಯೆಂಬ ಬಸುಱಾಗಲು ಪರಿಣಾಮವೆಂಬ ಮಗ ಹುಟ್ಟಲು ರೇಕನಾಥಯ್ಯನೆಂದು ಹೆಸರಿಟ್ಟರು.

### 59 ಘನಗುರುಪ್ರಿಯಸೋಮನಾಥ.

ದಶವಾಯುಗಳ ತಮ್ಮ ವಶಕೆ ಹರಿಯಲೀಯದೆ ಊರ್ಧ್ವವಶಕೆ ಬಪ್ಪ ಪ್ರಣಮವಶನಾಗಿರಾ. ವಿಷಮಲೋಚನಘನಗುರುಪ್ರಿಯಸೋಮನಾಥ ಎಸಳಿನಾ ದಳದೊಳಗೆ ಬೆಳಗುತಿಹನು.

## ಸ್ವತಂತ್ರಸಿದ್ಧಲಿಂಗೇಶ್ವರ. ಸು. 1480

ಈತನು ಸ್ವತಂತ್ರಸಿದ್ಧಲಿಂಗೇಶ್ವರವಚನ, ಮುಕ್ತ್ಯಂಗನೆಯಕಂಠ ಮಾಲೆ ಇವುಗಳನ್ನು ಬರೆದಿದ್ದಾನೆ. ಇವನು ವೀರಶೈವಕವಿ. ವಿರೂಪಾಕ್ಷ ಪಂಡಿತನ (1584) ಚೆನ್ನಬಸವಪುರಾಣದಿಂದ[1] ತೋಂಟದಸಿದ್ಧಲಿಂಗ ಯತಿಗೆ(ಸು 1470) ಸಿದ್ಧಲಿಂಗೇಶ್ವರ, ದೊಡ್ಡಲಿಂಗೇಶ್ವರ ಎಂಬ ಇಬ್ಬರು ಶಿಷ್ಯರು ಇದ್ದಂತೆ ತಿಳಿಯುತ್ತದೆ. ಕವಿ ಇವರಲ್ಲಿ ಒಬ್ಬನಾಗಿರಬಹು ದೆಂದು ತೋರುತ್ತದೆ. ಹಾಗಿದ್ದಪಕ್ಷದಲ್ಲಿ ಇವನ ಕಾಲವು ಸುಮಾರು 1480 ಆಗಬಹುದು.

ಜಂಗಮರಗಳೆ ಎಂಬ ಗ್ರಂಥದ ಕೊನೆಯ ಕಂದದ "ಇಂತೀಜಂಗ ಮದಿರವಂ ಸಂತಸದಿಂ ಪೇಳ್ದ ಸಿದ್ಧಲಿಂಗೇಶ್ವರಂ" ಎಂಬ ಭಾಗದಿಂದ ಆ ಗ್ರಂಥವು ಸಿದ್ಧಲಿಂಗೇಶ್ವರಕೃತವೆಂದು ತಿಳಿಯುತ್ತದೆ. ಏತತ್ಕವಿಕೃತ ವಾಗಿದ್ದರೂ ಇರಬಹುದು.

ಇವನ ಗ್ರಂಥಗಳಲ್ಲಿ

### 1 ಸ್ವತಂತ್ರಸಿದ್ಧಲಿಂಗೇಶ್ವರ ವಚನ

ಇದು ವೀರಶೈವಸಿದ್ಧಾಂತವನ್ನು ಬೋಧಿಸುತ್ತದೆ; ವಚನ 430. ಪ್ರತಿವಚನದಲ್ಲಿಯೂ "ನಿಜಗುರುಸ್ವತಂತ್ರಸಿದ್ಧಲಿಂಗೇಶ್ವರ" ಎಂದು ಬರುತ್ತದೆ. ಈ ಗ್ರಂಥದಿಂದ ಕೆಲವು ವಚನಗಳನ್ನು ಉದ್ಧರಿಸಿ ಬರೆಯುತ್ತೇವೆ—

(1) ಕಣ್ಣು ಕಾಲು ಎರಡುಳ್ಳವನು ದೂರವೆಯ್ದುವನಲ್ಲದೆ ಕಣ್ಣು ಕಾಲು ಎರಡಱೊಳಗೊಂದಿಲ್ಲದವನು ದೂರವೆಯ್ದಲರಿಯನೆಂಬಂತೆ ಜ್ಞಾನರಹಿತವಾಗಿ ಕ್ರಿಯೆ ಯನೆಷ್ಟು ಮಾಡಿದಡೇನು ? ಅದು ಕಣ್ಣಿಲ್ಲದವನ ನಡೆಯಂತೆ; ಕ್ರಿಯೆರಹಿತವಾಗಿ ಜ್ಞಾನಿಯಾದಡೇನು ? ಅದು ಕಾಲಿಲ್ಲದವನ ಇರವಿನಂತೆ; ನಿಜಗುರುಸ್ವಸಂತ್ರಸಿದ್ಧಲಿಂಗೇಶ್ವರನ ನಿಜವ ಬೆರಸುವೊಡೆ ಜ್ಞಾನವೂ ಕ್ರಿಯೆಯೂ ಎರಡೂ ಬೇಕು.

(2) ಹಾವಡಿಗ ಹಾವನಾಡಿಸುವಲ್ಲಿ ತನ್ನ ಕಾದುಕೊಂಡು ಹಾವನಾಡಿಸುವ ನವನಂತೆ ಆವ ಮಾತನಾಡಿದಡೂ ತನ್ನ ಕಾದು ಆಡಬೇಕು. ಅದೆಂತೆಂದಡೆ ತನ್ನ ವಚನವೆ ತನಗೆ ಹಗೆಯಹುದಾಗಿ ಅನ್ಯರಿಂದ ಬಂದಿತ್ತೆನಬೇಡ; ಅಱಿವುದುಱಿವುದು ತನ್ನವಚನದಲ್ಲಿಯೆ ಅದೆ. ನಿಜಗುರುಸ್ವತಂತ್ರಸಿದ್ಧಲಿಂಗೇಶ್ವರಾ ಹಗೆಯೂ ಕೆಳೆಯೂ ತನ್ನ ವಚನವೇ ಬೇಱಿಲ್ಲ.

---

1, ಸಂಧಿ 63 ಪದ್ಯ 47.

(3) ವೇಷವ ಧರಿಸಿ ಭಾಷೆಯ ಕಲಿತು ದೇಶವ ಸುತ್ತಿ ಬಳಲಬೇಡ; ಜಗದೀಶನ ಪಾದವನೊಲಿದು ಪೂಜಿಸಿರಣ್ಣಾ. ಸವಿಯೂಟದಾಸೆಗೆ ಮನವೆಳಸಬೇಡ; ಪರಮೇಶನ ಪಾದವ ನೆನೆದು ಸುಖಿಸಿರಣ್ಣಾ. ತರ್ಕಶಾಸ್ತ್ರಾಗಮಜಾಲದ ಹೋರಟೆಯ ಹೊಗದೆ ಮೂಲಮಂತ್ರವ ಮಱಯದೆ ಸ್ಮರಿಸಿರಣ್ಣಾ. ಸಂಸಾರಿಗಳ ಸಂಗದೊಳಗಿರಬೇಡ; ಸದ್ಭಾವರ ಸಂಗದೊಳಿದ್ದು ನಿತ್ಯವ ಸಾಧಿಸಿಕೊಳ್ಳಿರಣ್ಣಾ. ಪರರ ಯಾಚಿಸಿ ತನುವ ಹೊರೆಯಬೇಡ; ಶಿವನಿಕ್ಕಿದ ಭಿಕ್ಷೆಯೊಳಗಿದ್ದು ನಿಜಗುರುಸ್ವತಂತ್ರಸಿದ್ಧಲಿಂಗೇಶ್ವರನನೊಲಿಸಿರಣ್ಣಾ.

(4) ಆಸೆಯೆಂಬ ಸ್ತ್ರೀಗೆ ಮನಸೋತವರೆಲ್ಲಾ ಕೆಟ್ಟ ಕೇಡನೇನೆಂಬೆನಯ್ಯಾ. ಯತಿಗಳಾಗಲಿ ವೇದಾಧ್ಯಾಯಿಗಳಾಗಲಿ ವ್ರತಿಗಳಾಗಲಿ ಸರ್ವವಿದ್ಯಾಕಲಾವಂತರಾಗಲಿ ನರರೊಳಗಾಗಲಿ ಸುರರೊಳಗಾಗಲಿ ಇವರೆಲ್ಲರ ಧನವುಳ್ಳವರ ಬಾಗಿಲ ಕಾಯಿಸಿದಳು ನೋಡಾ. ಇವಳಿಗಾರಾರು ಮರುಳಾಗರು ? ನಿಜಗುರುಸ್ವತಂತ್ರಸಿದ್ಧಲಿಂಗೇಶ್ವರನ ಶರಣರಲ್ಲದವರ ಕಿವಿಯ ಹಿಡಿದು ಕುಣಿಸಿದಳು ನೋಡಾ.

## 2 ಮುಕ್ತ್ಯಂಗನೆಯ ಕಂಠಮಾಲೆ

ಇದೂ ವಚನರೂಪವಾಗಿದೆ. ಇದಕ್ಕೆ ಒಂದು ಕನ್ನಡವ್ಯಾಖ್ಯಾನವಿದೆ. ವ್ಯಾಖ್ಯಾಕಾರನು ಈ ಗ್ರಂಥದ ವಿಷಯವಾಗಿಯೂ ತನ್ನ ವ್ಯಾಖ್ಯೆಯ ವಿಷಯವಾಗಿಯೂ ಹೀಗೆ ಬರೆದಿದ್ದಾನೆ---

ಸ್ವತಂತ್ರಸಿದ್ಧಲಿಂಗೇಶ್ವರನು ತಮ್ಮ ವಂಶೀಭೂತರಾದ ಗಣಂಗಳಱಿದಾನಂದಿಸಲು ತಮ್ಮ ನಿಜಾನುಭಾವದ ವಚನಾಮೃತಶರಧಿಯೊಳಗೆ ಅನರ್ಘ್ಯರತ್ನಂಗಳನೆ ತೆಗೆದು ಸರಂಗೊಳಿಸಿ ಮುಕ್ತ್ಯಂಗನೆಯ ಕಂಠಮಾಲೆಯೆನಲೊಪ್ಪುವ ವಚನಂಗಳೊಳಗೆ ಅತ್ಯಂತ ಗೋಪ್ಯವಾದ ವಚನಂಗಳನೆ ತೆಗೆದು ಮುಮುಕ್ಷುಜನಂಗಳ ಹೃದಯಾಂತರಾಳವನೆ ತೊಳಗಿ ಬೆಳಗಲೆಂದು ಕನ್ನಡಿಸಿ ಪೇೞ್ವೆಂ.

ಈ ಗ್ರಂಥದಿಂದ ಒಂದು ವಚನವನ್ನು ತೆಗೆದು ಬರೆಯುತ್ತೇವೆ---

ಹುಸಿಯಿಲ್ಲದ ಶಿಷ್ಯನು ಮಱಹಿಲ್ಲದೆ ಗುರುವಿನ ಪಾದವ ಪಿಡಿದಡೆ ಕುಱುಹಿಲ್ಲದ ಲಿಂಗವ ಕೊಡಲಿಕ್ಕಾಗಿ ತೆಱಹಿಲ್ಲದಪ್ಪಲೊಡನೆ ಬಱಿದಾದುವು ತನುಮನಪ್ರಾಣಂಗಳೆಲ್ಲವು. ಈ ಬೆಡಗಿನ ಉಪದೇಶವ ಪಡೆದ ಶಿಷ್ಯನಲ್ಲಿ ಗುರುವಡಗಿ ಗುರು ಶಿಷ್ಯನಾಗಿ ಯೆರಡು ಒಂದಾದ ಪರಿಯನೇನೆಂದುಪಮಿಸುವೆನಯ್ಯ ನಿಜಗುರುಸ್ವತಂತ್ರಸಿದ್ಧಲಿಂಗೇಶ್ವರನಲ್ಲಿ ಒಂದಾದ ಗುರುಶಿಷ್ಯನು.

3 ಜಂಗಮರಗಳೆ

ಇದರಲ್ಲಿ 108 ನುಡಿಗಳಿವೆ. ಒಂದೆರಡನ್ನು ತೆಗೆದು ಬರೆಯುತ್ತೇವೆ—

ಆದಿಮಧ್ಯಾಂತವರ್ಜಿತವೆನಿಪ ಜಂಗಮಂ |
ನಿತ್ಯನಿರ್ಮಲ ನಿರಘನಿಶ್ಚಿಂತಜಂಗಮಂ |

---

## ಗುಮ್ಮಳಾಪುರದ ಸಿದ್ಧಲಿಂಗೇಶ್ವರ. ಸು. 1480

ಈತನು ಷಟ್ಸ್ಥಲದಲಿಂಗಾಂಗಸಂಬಂಧದ ನಿರ್ವಚನವನ್ನು ಬರೆದಿದ್ದಾನೆ. ಇವನು ವೀರಶೈವಕವಿ. ವಿರೂಪಾಕ್ಷಪಂಡಿತನ (1584) ಚೆನ್ನಬಸವಪುರಾಣದ 63 ನೆಯ ಸಂಧಿಯ 47 ನೆಯ ಪದ್ಯದಿಂದ ಕವಿ ತೋಂಟದ ಸಿದ್ಧಲಿಂಗಯತಿಯ (ಸು. 1470) ಶಿಷ್ಯನಾಗಿದ್ದಂತೆ ತಿಳಿಯುತ್ತದೆ. ಅದೇ ಯತಿಯ ಶಿಷ್ಯನಾದ ಬೋಳಬಸವನನ್ನು[1] ತನ್ನ ಗ್ರಂಥದಲ್ಲಿ ಪ್ರತಿವಚನದಲ್ಲಿಯೂ ಸ್ತುತಿಸಿರುವುದರಿಂದ ಬೋಳಬಸವನು ಈತನಿಗೆ ವಿದ್ಯಾಗುರುವಾಗಿದ್ದಂತೆ ತೋರುತ್ತದೆ. ಬೋಳಬಸವನ ಮೂಲಕವಾಗಿ ಸಿದ್ಧಲಿಂಗಯತಿಯ ಅನುಗ್ರಹವು ತನಗೆ ಉಂಟಾಯಿತು ಎಂದು ಹೇಳುತ್ತಾನೆ. ಈತನ ಕಾಲವು ಸುಮಾರು 1480 ಆಗಬಹುದು.

ಇವನ ಗ್ರಂಥ—

ಷಟ್ಸ್ಥಲದಲಿಂಗಾಂಗಸಂಬಂಧದ ನಿರ್ವಚನ.

ಇದು ವೀರಶೈವಸಿದ್ಧಾಂತವನ್ನು ಬೋಧಿಸುತ್ತದೆ; ವಚನ 15. ಬಸವ ಮುಂತಾದ ಪುರಾತನರ ಸ್ತುತಿಯೂ ಅಲ್ಲಲ್ಲಿ ಬರುತ್ತದೆ. ಪ್ರತಿವಚನವೂ ಪ್ರಾಯಿಕವಾಗಿ ಬೋಳಬಸವೇಶ್ವರಾ ನಿಮ್ಮ ಧರ್ಮ ನಿಮ್ಮ ಧರ್ಮ ಎಂದು ಮುಗಿಯುತ್ತದೆ. ಇದರಿಂದ ಒಂದುವಚನವನ್ನು ತೆಗೆದು ಬರೆಯುತ್ತೇವೆ:

ಆಣವಮಲ ಮಾಯಾಮಲ ಕಾರ್ಮಿಕಮಲವೆಂಬ ಮಲತ್ರಯಂಗಳ ಕಳೆದು ಎನ್ನಂತರಂಗಬಹಿರಂಗಶುದ್ಧಾತ್ಮನ ಮಾಡಿದ ಮಡಿವಾಳಯ್ಯ. ಸಾಕಾರ ಮೂಱುಮೂಱುಹದಿನೆಂಟುಪ್ರಕಾರವನೊಳಕೊಂಡು ಎನ್ನ ಬಹಿರಂಗದಲ್ಲಿ ಆಯತವಾದನಯ್ಯ ಬಸವಣ್ಣ. ಎನ್ನ ನಿರಾಕಾರಮೂಱುಮೂಱುಹದಿನೆಂಟುಪ್ರಕಾರವನೊಳಕೊಂಡು ಎನ್ನಂತರಂಗದಲಿ ಸ್ವಾಯತವಾದನಯ್ಯಾ ಚೆನ್ನಬಸವಣ್ಣ. ನಿರಾಳನಿರ್ಮಾಯನಿಶ್ಶೂನ್ಯಬ್ರಹ್ಮವೇ ಉಭಯಸಂಗದಲ್ಲಿ ಸನ್ನಹಿತವಾದನಯ್ಯಾ ಪ್ರಭುದೇವರು. ಇಂತೀ ಅಂತ

---

1. ಚೆನ್ನಬಸವಪುರಾಣ, ಸಂಧಿ 63. ಪದ್ಯ 49.

ರಂಗಬಹಿರಂಗಆತ್ಮಸಂಗವನಱುಹಿ ಬೋಳಬಸವೇಶ್ವರನು ಸಿದ್ಧೇಶ್ವರನ ನಿಜಪದವನೊರೆದೊರೆದು ತೋಱಿದಕಾರಣ ಎನ್ನ ತನು ಬಯಲಾಯಿತ್ತು, ಮನ ಬಯಲಾಯಿತ್ತು, ಪ್ರಾಣ ಬಯಲಾಯಿತ್ತು, ಇಂದ್ರಿಯ ಬಯಲಾಯಿತ್ತು, ವಿಷಯ ಬಯಲಾಯಿತ್ತು. ಇಂತಿವಱೊಳಗೆ ನಾನು ಬಯಲಾದೆನು. ಪರಂಜ್ಯೋತಿಮಹಾಲಿಂಗಗುರುಸಿದ್ಧಲಿಂಗಪ್ರಭುವಿನಲ್ಲಿ ಹಿಂದುಮುಂದು ಎಡಬಲ ಅಡಿಆಕಾಶವೆಂಬ ಭೇದವನಱಿಯದೆ ಮುಟ್ಟಿಗಿನಿಶ್ಶಬ್ದಬ್ರಹ್ಮಮುಚ್ಯತೇ ಎಂಬ ನುಡಿ ಅಡಗಿತ್ತಯ್ಯಾ ನಿಮ್ಮ ಧರ್ಮ ನಿಮ್ಮ ಧರ್ಮ.

---

## ಸಾನಂದ ಶಿವಯೋಗಿ. ಸು. 1480.

ಈತನು ವೀರಮಾಹೇಶ್ವರಾಚಾರಸಾರೋದ್ಧಾರಕ್ಕೆ ಟೀಕೆಯನ್ನು ಬರೆದಿದ್ದಾನೆ. ಇವನು ವೀರಶೈವಕವಿ. "ಮೂಱುಸಾವಿರದ ತೋಂಟದಸಿದ್ಧೇಶ್ವರನ ಅಂತರ್ಭಾವಮನಃಕರಕಮಲದಲ್ಲಿ ಶಿವಲಿಂಗಪ್ರಾಣಿ ಶಿವಮಂತ್ರಶರೀರಿಯಾಗಿ ಅವತರಿಸಿದ ಶ್ರೀಮತ್ಸಾನಂದಶಿವಯೋಗಿಮಂತ್ರಮೂರ್ತಿ" ಎಂಬ ಗದ್ಯಭಾಗದಿಂದ ಇವನು ತೋಂಟದಸಿದ್ಧೇಶ್ವರನ(ಸು. 1470) ಶಿಷ್ಯನೆಂದು ಊಹಿಸುವುದಕ್ಕೆ ಅವಕಾಶವಿದೆ. ಹಾಗಿದ್ದಪಕ್ಷದಲ್ಲಿ ಇವನ ಕಾಲವು ಸುಮಾರು 1480 ಆಗಬಹುದು.

---

## ತೆರಕಣಾಂಬಿ ಬೊಮ್ಮರಸ ಸು. 1485

ಈತನು ಸನತ್ಕುಮಾರಚರಿತೆ, ಜೀವಂಧರಸಾಂಗತ್ಯ ಇವುಗಳನ್ನು ಬರೆದಿದ್ದಾನೆ. ಇವನು ಜೈನಕವಿ; ತೆರಕಣಾಂಬಿಯವನು; ವಾದೀಭಸಿಂಹ ನೇಮಿಚಂದ್ರಾರ್ಯನ ಪ್ರಪೌತ್ರನು; ಬೊಮ್ಮರಸೋಪಾಧ್ಯಾಯನ ಮಗನು. "ತೆರಕಣಾಂಬಿನಿವಾಸ ಪಾರ್ಶ್ವಜಿನೇಂದ್ರಚಂದ್ರಮನ ಚರಣಕಮಲಭ್ರಮರ" ಎಂದು ಹೇಳಿಕೊಂಡಿದ್ದಾನೆ. ತನ್ನ ಪ್ರಪಿತಾಮಹನಾದ ನೇಮಿಚಂದ್ರನು ಪ್ರೌಢರಾಯನ (1419–1446) ಸಭೆಯಲ್ಲಿ ವಿದ್ವಾಂಸರನ್ನು ವಾದದಲ್ಲಿ ಜಯಿಸಿ ಜಯಪತ್ರವನ್ನು ಪಡೆದಂತೆ

ಮಂಡಲೇಶ್ವರಪ್ರೌಢರಾಯನ । ಕಂಡು ತತ್ಸಭೆಯಲ್ಲಿ ರಂಜಿಪ ।  
ತಂಡತಂಡದ ವಾದಿವಿದ್ವಾನುಗಳ ಮದದುಱಿದು ॥

ಕೊಂಡು ಜಯಪತ್ರವನು ಭೂಗೆ ಪ್ರ । ಚಂಡತಾರ್ಕಿಕರತ್ನಸದ್ಗುಣ ।
ಮಂಡನಾಂಗಗೆ ನೇಮಿಚಂದ್ರಗೆ ಶಿರವ ಮೊಗ್ಗಿಪೆನು ॥
ಸೌರಾಷ್ಟ್ರರಾಯನ ಮೆಚ್ಚಿಸಿ ಜಯಪತ್ರವ | ಗಾಡಿಯಿಂ ತಂದಿಳೆಯೊಳಗೆ ।
ರೂಢಿವಡೆದ ನೇಮಿಚಂದ್ರನ ಕುಲದೀಪ | ಮಾಡಿದ ಕೃತಿ ರಾಜಿಸದೇ ॥

ಎಂಬ ಪದ್ಯಗಳಲ್ಲಿ ಹೇಳುತ್ತಾನೆ. ಆದುದರಿಂದ ಕವಿಯ ಕಾಲವು ಸುಮಾರು 1485 ಆಗಬಹುದು. ಸನತ್ಕುಮಾರಚರಿತೆಯ ಒಂದುಪ್ರತಿಯ ಕೊನೆಯಲ್ಲಿ ಈತನ ವಿಷಯವಾಗಿ ಈ ಗದ್ಯವು ದೊರೆಯುತ್ತದೆ—

ಶ್ರೀಮದಮರನರೋರಗೇಂದ್ರಪ್ರಮುಖ ಸಕಲಸುರನಮಿತಮೌಳಿಕೀಲಿತಮಾಣಿಕ್ಯಮಯೂಖಪುಂಜರಂಜಿತಪಾದಾಂಭೋಜವಿರಾಜಿತ ಶ್ರೀಮತ್ಪಾರ್ಶ್ವಜಿನೇಂದ್ರಚರಣಕಮಲಮತ್ತಮಧುಕರನುಂ, ಸುಕವಿನಿಕರಮಾನಸೋದ್ಯಾನವರವಸಂತನುಂ, ಕುಕವಿಗರ್ವಪರ್ವತಚೂರ್ಣೀಕೃತವಜ್ರನುಂ, ಜಿನಮತಾಹ್ಲಾದಿಕನಯನೀತಿಸದ್ವಿನಯಭರಿತಸುಚರಿತ್ರನುಂ, ಇತ್ಯಾದ್ಯನೇಕಗುಣಗಣಾಲಂಕೃತನಪ್ಪ ನೇಮಿಚಂದ್ರಾನ್ವಯಗಗನಪ್ರಕಾಶಿತಬಾಲದಿನಕರ ಬೊಮ್ಮರಸೋಪಾಧ್ಯಾಯಸುಕುಮಾರ ಬೊಮ್ಮರಸವಿರಚಿತಸನತ್ಕುಮಾರಪ್ರಬಂಧದೊಳ್.

ಈತನ ಗ್ರಂಥಗಳಲ್ಲಿ

1. ಸನತ್ಕುಮಾರಚರಿತೆ

ಇದು ಭಾಮಿನೀಷಟ್ಪದಿಯಲ್ಲಿ ಬರೆದಿದೆ; ಸಂಧಿ 17, ಪದ್ಯ 870, ಗ್ರಂಥಪ್ರಮಾಣ 2175. ಇದರಲ್ಲಿ ಹಸ್ತಿನಾಪುರದ ರಾಜನಾದ ವಿಶ್ವಸೇನನ ಮಗ ಸನತ್ಕುಮಾರರಾಜನ ಕಥೆ ಹೇಳಿದೆ. ಈ ಗ್ರಂಥದ ಉತ್ಕೃಷ್ಟತೆಯನ್ನು ಕವಿ ಈ ಪದ್ಯಗಳಲ್ಲಿ ಹೇಳಿದ್ದಾನೆ—

ಸೊಗಸುವಾತಿನ ಸೋನೆ ಸದ್ಭಾ । ವಗಳ ಸರಿ ಚಿತ್ರಾರ್ಥಪದಬಂ ।
ಧಗಳ ಮಿಂಚು ನವರಸಗಳೊಸರುವ ಸಾರ ಬಿನ್ನಣದ ॥
ಸುಗಮದಡಿ..ಡಲನಿಯಮವಾ್ರ । ಸುಗಳ ಧಾರಾವೃಷ್ಟಿ ಕಾವ್ಯದೊ ।
ಳೊಗೆಯೆ ಭೂಮಿಗೆ ಪೊಸತೆನಲು ರಂಜಿಪುದು ಮತ್ಕೃತಿಯ ॥
ಇಂದುಕಿರಣದ ಸಂದಣಿಯೊ ಮಿಗೆ । ಮಂದಮರುತನ ಸೋಂಕೊ ಪಾಡುತ ।
ಚಂದದಿಂ ನರ್ತಿಸುವ ಕೋರಿಯಪಾಂಗಕಾಂತಿಯಿದೋ ॥
ಚಂದನದ ಘನಸಾರಕಸ್ತುರಿ | ಯೊಂದುಗೂಡಿದ ಪರಿಮಳದ ಸೊಗ
ಸಿಂದ ವೆಗ್ಗಳವಿನಿದುಬಲ್ಲರಿಗೀಕೃತಿಯ ರಚನೆ ॥

ಗ್ರಂಥಾವತಾರದಲ್ಲಿ ಪಾರ್ಶ್ವಜಿನಸ್ತುತಿ ಇದೆ. ಬಳಿಕ ಕವಿ ಸಿದ್ಧಾದಿಗಳು, ಸರಸ್ವತಿ, ಪದ್ಮಾವತಿ ಇವರುಗಳನ್ನು ಹೊಗಳಿ ಅನಂತರ ಜಿನಧರ್ಮಶಾಸ್ತ್ರೋದ್ಧಾರರಾದ ಗುಣಭದ್ರಾಕಲಂಕವೀರಸೇನಪೂಜ್ಯಪಾದರನ್ನೂ ತನ್ನ ಪ್ರಪಿತಾಮಹನಾದ ವಾದೀಭಸಿಂಹನೇಮಿಚಂದ್ರಾರ್ಯನನ್ನೂ ಸ್ತುತಿಸಿದ್ದಾನೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ—

### ಸೂರ್ಯಾಸ್ತ

ಒಗೆಯೆ ಸಂಧ್ಯಾರಾಗ ಕೊರಗುತ | ಮುಗಿಯೆ ಸರಸಿಜಷಂಡ ದುಗುಡವ |
ತೆಗೆಯೆ ನೈದಿಲ ಬಳಗ ಸುಗಿಯೆ ರಥಾಂಗಪಕ್ಕಿಗಳು ||
ನೆಗೆಯೆ ತಾರಾವಳಿ ಮಹಾತಮ | ಮೊಗೆಯೆ ಭುವನವ ಮದನ ಬಿಲ್ಲನು |
ಬಿಗಿಯೆ ಸಾರಿದನಪರಶೈಲವನಾ ದಿವಾಕರನು ||

### ವನ

ಅರಗಿಳಿಗಳೋದುವ ಮಟವೊ ನು | ಣ್ಚರದ ಪಿಕಗಳ ಗಾನಶಾಲೆಯೊ |
ಪಿರಿದು ನಟಿಸುವ ನವಿಲ ನಾಟಕಮಂಟಪವೊ ಬಿಡದೆ ||
ಚರಿಸುವಂಚೆಗಳಾಡುವಂಗಣ | ಮೊರೆವ ಮಧುಪದ ಪ್ರೇಮದಾಲಯ |
ವರವಸಂತನ ರಾಜಗೃಹಮೆನೆ ವನವು ರಾಜಿಸಿತು ||

### ಊಟ

ಬಟ್ಟವೆಱೆಯೋ ಮಂಜಿನೊಬ್ಬುಳಿ | ಬಟ್ಟಿತಾದುದೊ ಅಮೃತರಸವಳ |
ವಟ್ಟು ವೃತ್ತದ ಪಿಂಡವಾದುದೊ ಚಂದ್ರಿಕೆಯೆ ಬಂದು ||
ಘಟ್ಟಿಗೊಂಡಿತೊ ಎನಲು ನೋಟ್ಪಿರ | ದಿಟ್ಟಿಗೊಲವನು ಮನಕೆ ಹಱುಷವ |
ಪುಟ್ಟಿಪುದ್ದಿನ ಕಡುಬ ಸವಿದರು ನೃಪರು ಮನ ನಲಿಯೆ ||
ತಿಲದ ಮಾಷಾದ್ಯಖಿಲಚೂರ್ಣಂ | ಗಳನು ತೆಂಗಿನಕಾಯ ತುರಿಯನು |
ಲಲನೆಯರು ಕರಿಬೇವಿನೆಲೆಯೇಲಕ್ಕಿಗಳ ಬೆರಸಿ ||
ಹಿಟಿದು ಜಂಬೀರೋದಕವ ಹದ | ಗೊಳಿಸಿ ಲವದಿಂ ಕಪ್ಪುರದಿ ಪರಿ |
ಮಳಿಪ ಬದಣೆಯಕಾಯ ಬಜ್ಜಿಯ ತಂದು ಬಡಿಸಿದರು ||
ಸುಱಿದು ಹುಳಿಮೇಲೋಗರವ ಚ | ಪ್ಪರಿದುಮುಪ್ಪಿನಕಾಯ ಕೈಯಲಿ |
ಮುಱಿದು ಹಪ್ಪಳಗಳನು ಮೆಲುತೊಲವಿಂದ ಪಚ್ಚಡಿಯ ||

ನೆಱೆ ಸವಿಯುತಾ ತಾಳಿದಂಗಳ । ತೆಱನಱಿದು ಸಾಧಿಸುತಲಾ ನೆಲ ।
ದೆಱೆಯುರೂಟವ ಮಾಡುತಿರ್ದರು ಜಿಷ್ವೆ ದಣಿವಂತೆ ॥

---

## 2. ಜೀವಂಧರಸಾಂಗತ್ಯ

ಇದರಲ್ಲಿ 20 ಸಂಧಿಗಳೂ 1449 ಪದ್ಯಗಳೂ ಇವೆ. ರಾಜಪುರಿಯ ಸತ್ಯಂಧರರಾಜನ ಮಗನಾದ ಜೀವಂಧರರಾಜನ ಕಥೆ ಇದರಲ್ಲಿ ಹೇಳಿದೆ. ಕಥಾಗರ್ಭವನ್ನು ಕವಿ ಈ ಪದ್ಯಭಾಗದಲ್ಲಿ ಸೂಚಿಸಿದ್ದಾನೆ—

ಸ್ಥಿರವಲ್ಲ ಸಂಸಾರಸುಖವೆಂದು ಜಿನದೀಕ್ಷೆ । ವೆರಸಿ ಸಕಲಕರ್ಮಗಳ ।
ಭರದಿಂದ ಹೇಸಿ ಮುಕ್ತಿಯನೆಯ್ದಿದ ಜೀವಂ । ಧರನ ಕೃತಿ.

ಈ ಗ್ರಂಥದ ಉತ್ಕೃಷ್ಟತೆಯನ್ನು ಹೀಗೆ ಹೇಳಿದ್ದಾನೆ—

ಬುಧಜನಮುಕುರ ರಸಿಕಕರ್ಣಭೂಷಣ । ಮೃದುನುಡಿಗಳ ನೆಲೆವನೆಯು ।
ಸಾರಹೃದಯರ ಸೌಭಾಗ್ಯದ ಸದನವು । ವೀರರ ವಿಜಯದ ನೆಲೆಯು ।
ಸುಗುಣರ ಕರ್ಣಾಮೃತ ರಸಿಕರ ಪೊಸ । ಬಗೆ ಜಾಣರ ಮನದಚ್ಚು ।

ನಮಗೆ ದೊರೆತ ಪ್ರತಿಯಲ್ಲಿ ಆದಿಭಾಗವು ಹೋಗಿದೆ. ಈ ಗ ಂಥ ದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

### ಚಂದ್ರಾಸ್ತ

ಗಿರಿಯನಡರಿ ತಪವಿದ್ದಲ್ಲದೆ ಮುನ್ನ । ನೆರಪಿಕೊಂಡಿರ್ದ ಕಲಂಕು ।
ಪರಿಹರಿಸದು ಎಂದು ಹೋಹಂತೆ ಪಡುವಣ । ಖರಿಗೆಯ್ದಿದ ಶಶಧರನು ॥
ಮಿತ್ರನೆ ಹಗೆಯಾದನು ರೋಹಿಣಿಯೆಂ । ಬುತ್ತಮಸತಿಯಗಲಿದನು ।
ಮತ್ತೆ ಕಲಂಕುದಳೆದೆನೆಂದು ಸಸಿ ಲಜ್ಜೆ । ವೆತ್ತು ಬಿದ್ದನು ಶರಧಿಯಲಿ ॥

### ಸೂರ್ಯಾಸ್ತ

ಮೂಡದಿಗಂಗನೆಯಪರದಿಗ್ವೆಣ್ಣಿಗೆ । ನೋಡ ಕಳುಹಿದ ಮಾಣಿಕದ ।
ಗಾಡಿವಡೆದ ಕೈಪಿಡಿಯೆನೆಯುತಿಗೆಂಪು । ಗೂಡಿ ನೇಸಱಿಬಟ್ಟೆಸೆಯಿತು ॥

### ನರ್ತನ

ಜಲಿಸುವ ಹೇಮಲತೆಯೊ ಕುಣಿದಾಡುವ । ಪೊಳೆವ ಮಿಸುನಿಯ ಪುತ್ತಳಿಯೋ ।
ಸುಱಿದು ಸುಱಿದು ತೋಱುವ ಬಳ್ಳಿಮಿಂಚೆನ । ಲೆಳವೆಣ್ಣು ನಟಿಸಿದಳೆದಸೆದು ॥

### ಮಾಲೆಗಾರ್ತಿ

ಭಾವಕಿಯೊರ್ವಳು ಪೂಮಾಲೆಯನಾಂತ । ಭಾವಮೊಪ್ಪಿದುದು ನೋಲ್ಪರಿಗೆ ।
ಕಾವದೇವನ ಜಾನಿಪ ಯೋಗಿಣಿಯ ಕೈಯ । ಪಾವನಜಪಸರದಂತೆ ॥

ಗರ್ಭಿಣಿ

ಬಿಳುಪೇಱಿತು ಮೊಗ ತೆಳುಪೇಱಿತು ಕೆನ್ನೆ | ಪೊಳಪೇಱಿತು ಕುಡಿನೋಟ |
ಕಳೆಯೇಱಿತು ಕೋಮಲಕಾಯ ಕುಂತಳ | ಬೆಳೆಯೇಱಿತು ನೀಱೆಯೊಳು ||

ನೀತಿ

ವರತತ್ತ್ವವೆಂಬ ಸಲಿಲದೊಳು ಹೃದಯದೊ | ಳಿರುವ ಕಲ್ಮಷವ ತೊಳೆಯದೆ |
ಹರಿವ ನದಿಯ ಸ್ನಾನದಿಂ ಮೈಯ ಮಲಿನವ | ಪರಿಹರಿಸಲು ಫಲವೇನು |

---

ಮಲ್ಲಿಕಾರ್ಜುನಕವಿ. ಸು. 1485

ಈತನು ಶ್ವೇತನಸಾಂಗತ್ಯವನ್ನು ಬರೆದಿದ್ದಾನೆ. ಇವನು ವೀರಶೈವಕವಿ. "ಶ್ರೀಗುರುಭಕ್ತಾಗ್ರಣೀಶ್ವರನನ್ವಯಸಾಗರಚಂದ್ರಮನೆನಿಪ ಮಲ್ಲಣಾರ್ಯನ ಕೃಪೆಯಿಂದ'' ಈ ಗ್ರಂಥವನ್ನು ಬರೆದುದಾಗಿ ಹೇಳುವುದರಿಂದಲೂ, "ಮಲ್ಲಣಾರ್ಯರ ಕೃಪೆಯಿಂದ ಲೌಲ್ಯವೆನಿಸಿದನು ಭಕ್ತರ ಮಧ್ಯದಿ ಮಲ್ಲಿಕಾರ್ಜುನಕವಿರಾಜ'' ಎಂಬುದರಿಂದಲೂ ಈತನು ಗುಬ್ಬಿಯಮಲ್ಲಣ್ಣನ (ಸು. 1475) ಶಿಷ್ಯನೆಂದು ತೋರುತ್ತದೆ. ಇವನ ಕಾಲವು ಸುಮಾರು 1485 ಆಗಿರಬಹುದು.

ಇವನ ಗ್ರಂಥ

ಶ್ವೇತನಸಾಂಗತ್ಯ

ನಮಗೆ ದೊರೆತ ಈ ಗ್ರಂಥದ ಪ್ರತಿ ಅಸಮಗ್ರವಾದುದರಿಂದ ಸಂಧಿ, ಪದ್ಯ ಇವುಗಳ ಸಂಖ್ಯೆಯನ್ನು ಹೇಳಲಾರೆವು. ಈ ಗ್ರಂಥಕ್ಕೆ ಸಿದ್ಧಸಾಂಗತ್ಯ ಎಂಬ ಹೆಸರೂ ಇರುವಂತೆ ತೋರುತ್ತದೆ. ಇದರಲ್ಲಿ ಶ್ವೇತನಿಗಾಗಿ "ಪ್ರೇತಪತಿಯ ಸೊಕ್ಕನು ಮುಱಿದ ಭೂತನಾಥನ ಲೀಲೆ'' ಹೇಳಿದೆ. ಈ ಗ್ರಂಥವನ್ನು ನಂಜೇಶ್ವರನು

ಮಲ್ಲಿಕಾರ್ಜುನಕವಿವಲ್ಲಭ ಸಂಸ್ಕೃತ | ದಲ್ಲಿ ಸಮರ್ಥನು ನೀನು |
ಇಲ್ಲಿ ಸಕಲಭಕ್ತಜನರು ಕೇಳ್ವಂದದೆ | ಸೊಲ್ಲಿಸು ಕನ್ನಡಭಾಷೆಯಲಿ ||

ಎಂದು ಹೇಳಲು ಕವಿ ಬರೆದಂತೆ ಹೇಳುತ್ತಾನೆ.

ಗ್ರಂಥಾವತಾರದಲ್ಲಿ ಶಿವ, ಬಸವ ಇವರ ಸ್ತುತಿ ಇದೆ. ಬಳಿಕ ಕವಿ ಗೂಳೂರಸಿಂಹಾಸನಾಗ್ರಣಿ ಗುರುಶಾಂತೇಶ್ವರದೇವನ ಅನುಗ್ರಹವನ್ನು ಬೇಡಿ ಗ್ರಂಥವನ್ನು ಆರಂಭಿಸಿದ್ದಾನೆ.

---

## ನೀಲಕಂಠಾಚಾರ್ಯ. ಸು. 1485

ಈತನು ಆರಾಧ್ಯಚಾರಿತ್ರವನ್ನು ಬರೆದಿದ್ದಾನೆ. ಇವನು ವೀರಶೈವ ಕವಿ. ತನ್ನ ವಂಶಪರಂಪರೆಯನ್ನು ಹೀಗೆ ಹೇಳಿಕೊಂಡಿದ್ದಾನೆ-

ಸೋಮಶಂಭುದೇಶಿಕ; ಇವನ ಮಗ "ಕಾಮಿಕಾದ್ಯಖಿಳಶಿವಕಥಿತತಂತ್ರಾವಳಿಗೆ ಪ್ರೇಮದಿಂ ವೃತ್ತಿದೀಪಿಕೆಗಳಂ ಬಿತ್ತರಿಸಿ ಸೋಮಧರಸಮಯಮಂ ಧರಣಿಯೊಳ್ ನಿಱಿಸಿದ" ಸಕಲಾಗಮಾಚಾರ್ಯ; ಮಗ "ವಿಶ್ವನಾಥಂಗೆ ಲೆಂಕತ್ವದಿಂದೆಸೆವ" ಶಿವಲೆಂಕಮಂಚಣ್ಣಪಂಡಿತ; ಮಗ ಉರಿಲಿಂಗದೇವದೇಶಿಕ; ಮಗ ಉರಿಲಿಂಗಪೆದ್ದಿ; ಮಗ ವಿಶ್ವೇಶ್ವರಪೆದ್ದಣಾರ್ಯ; ಮಗ "ವಿಭೂತಿಯ ಮಹಿಮೆಯಂ ಲೋಕದೊಳಗೆ ಪಸರಿಸಿದ" ವಿಭೂತಿಸಿದ್ಧಾಚಾರ್ಯ; ಮಗ ಸೋಮನಾಥಾರ್ಯ; ಮಗ ಅನಂತಪೆದ್ದಣ್ಣದೇಶಿಕ; ಮಗ ವಾರಾಣಸಿಯ ಬಲ್ಲಣಾರ್ಯ; ಮಗ ನಾಗನಾಥಾರ್ಯ; (ಮಗ) ನೀಲಕಂಠಾಚಾರ್ಯ; ಮಗ ವಿಶ್ವನಾಥಾರ್ಯ; ಇವನ ಸಂತತಿಯಲ್ಲಿ ಹುಟ್ಟಿದವನು ಮಧುವೇಶ್ವರ; ಮಗ ನೀಲಕಂಠಾಚಾರ್ಯ, "ಮತ್ಕೃತಿಯಂತರಾಯಮಂ ತವಿಸುಗೆ" ಎಂದು ಕವಿ ಈತನನ್ನು ಪ್ರಾರ್ಥಿಸುತ್ತಾನೆ; ಮಗ "ಶಿವೋಕ್ತತಂತ್ರೈಕಕರ್ತಾರ" ನಾದ ವಿಶ್ವನಾಥದೇಶಿಕ; ಮಗ ಕವಿ ನೀಲಕಂಠಾಚಾರ್ಯ.

ಇವನ ಗುರು ಕರ್ಣಾಟಸಂಸ್ಕೃತಭಾಷೆಗಳಲ್ಲಿ ಪ್ರವೀಣನಾಗಿ ಶಿವಾಗಮಗಳನ್ನು ಭಕ್ತರ್ಗೆ ಬೋಧಿಸಿದ ಗಂಗಾಧರಾಚಾರ್ಯ. ಕವಿ ತಾನು ಈಶ್ವರಭಕ್ತನಾದ ಗಜವೇಂಟೆಕಾರ ವೀರನಂಜೇಂದ್ರನಿಂದ ಪೂಜಿತನಾಗಿದ್ದಂತೆ ಈ ಪದ್ಯದಲ್ಲಿ ಹೇಳಿದ್ದಾನೆ---

> ಅರಿರಾಯಗರ್ವಪರ್ವತದಳನಬಿರುದನುರು । ತರವಿಪಕ್ಷಪ್ರಬಲಸೇನಾಬ್ಧಿಬಾಡಬಂ।
> ಪರಭೂಮಿಪಾಲಜೀವಪ್ರಭಂಜನಭೋಗಿ ಯಾಚಕಕಾಮರಭೂಜನು ॥
> ಕರಮೆಸೆವಗಜವೇಂಟೆಕಾಱನೀಶ್ವರಪಾದ । ಸರಸಿರುಹಸೇವಕಂ ವೀರನಂಜೇಂದ್ರನಿಂ।
> ಪರಿಪೂಜಿತಂ ನೀಲಕಂಠದೇಶಿಕನುಸಿರ್ದನೀಕೃತಿಯನಱ್ಱಿಯಿಂದೆ ॥

ಈ ವೀರನಂಜೇಂದ್ರನು 1482 ರಿಂದ 1494 ರವರೆಗೆ ಆಳಿದ ಉಮ್ಮತ್ತೂರು ದೊರೆಯಾದ ಮಹಾಮಂಡಳೇಶ್ವರ ಗಜಬೇಟೆಕಾರ ಇಮ್ಮಡಿರಾಯಬಡೆಯರ ಕುಮಾರ ವೀರನಂಜರಾಯಬಡೆಯರಾಗಿರಬೇಕು. ಈತನ ಆಳಿಕೆಯಲ್ಲಿ ಗುಂಡಲುಪೇಟೆ 9ನೆಯ ಶಾಸನ (1489), ನಂಜನಗೂಡು 102 (1492), 118 (1491); ತಿರುಮಕೂಡಲುನರಸೀಪುರ 67 (1494)

ಈ ಶಾಸನಗಳು ಹುಟ್ಟಿವೆ. ಈ ರಾಜನಿಂದ ಪೂಜಿತನಾದ ಕವಿಯ ಕಾಲವು ಸುಮಾರು 1485 ಆಗಬಹುದು.

"ವಿತತಕರ್ಣಾಟಲಕ್ಷಣಕಮಲಭವನೆನಿಸಿಪ ಚತುರವರ ನೀಲಕಂಠಾಚಾರ್ಯ" ಎಂದು ಕವಿ ತನ್ನನ್ನು ವಿಶೇಷಿಸಿ ಹೇಳಿಕೊಂಡಿದ್ದಾನೆ.

ಪೂರ್ವಕವಿಗಳಲ್ಲಿ

ಕಂಪಮುರ್ದ ಚಂದನದ ಪಂಕದೊಳ್ ಪರಿಮಳಂ |
ಸೆಂಪುವಡೆದಂತೆ ರಸಭರಿತಪ್ರಬಂಧದೊಳ್ |
ಸೊಂಪುದೋಱುವ ಶಬ್ದಸಂದರ್ಭವೊಪ್ಪುತಿರೆ ಪೊಸತಪ್ಪ ಯುಕ್ತಿಯಿಂದಂ ||
ಇಂಪಾಗಿ ಶಿವಗಣಪ್ರಕರಮಂ ಕೊಂಡಾಡಿ |
ಪಂಪೆಯೊಳು ಪಂಪಾವಿರೂಪಾಕ್ಷನೊಳಗವಿದ |
ಪಂಪೆಯ ಹರೀಶ್ವರಂ; ಪಾಲ್ಕುರಿಕೆಸೋಮೇಶ್ವರ

ಇವರುಗಳನ್ನು ಸ್ತುತಿಸಿದ್ದಾನೆ.

ಇವನ ಗ್ರಂಥ

(ಮಲ್ಲಿಕಾರ್ಜುನ)ಆರಾಧ್ಯಚಾರಿತ್ರ

ಇದು ವಾರ್ಧಕಷಟ್ಪದಿಯಲ್ಲಿ ಬರೆದಿದೆ; ಪ್ರಕರಣ 5, ಸಂಧಿ 65, ಪದ್ಯ 3069. ಇದರಲ್ಲಿ ಮಲ್ಲಿಕಾರ್ಜುನಪಂಡಿತಾರಾಧ್ಯನ ಚರಿತೆ ಹೇಳಿದೆ. ಪಂಡಿತಾರಾಧ್ಯನಿಗೆ ಬಸವನಲ್ಲಿದ್ದ ವಿಶ್ವಾಸದ ವಿಷಯವಾಗಿಯೂ ಆತನ ಸಂತತಿಯ ವಿಷಯವಾಗಿಯೂ ಕವಿ ಹೀಗೆ ಬರೆದಿದ್ದಾನೆ—

ಪಂಡಿತೇಶ್ವರನು ಬಸವನ ಮಾಹಾತ್ಮ್ಯವನ್ನು ಸ್ಮರಿಸುತ್ತ ಬಸವನ ಹಸ್ತದಿಂದ ಬಂದ ವಿಭೂತಿಯನ್ನು ಧರಿಸಿಕೊಂಡಕೂಡಲೆ ಅವನಿಗೆ ಕರ್ಣಾಟಭಾಷೆ ಬಂದಿತು.[1] ಅದರಲ್ಲಿ ಇಷ್ಟಲಿಂಗಸ್ತೋತ್ರವನ್ನೂ ಬಸವಮಾಹಾತ್ಮ್ಯಗೀತಗಳನ್ನೂ ಮಾಡಿ ಹಾಡುತ್ತ ಬಸವನನ್ನು ಎಂದಿಗೆ ನೋಡುವೆನು ಎಂದು ಉತ್ಸುಕನಾಗಿದ್ದನು. ಪಂಡಿತೇಶ್ವರನ ಮಗ ಕೇದಾರಾಧ್ಯನಿಗೆ ಜಗದಾರಾಧ್ಯಪಟ್ಟವಾಯಿತು. ಪಂಡಿತೇಶ್ವರನ ಕರಜಾತನಾದ ದೋನಮಾರ್ಯನಿಗೆ ಭಕ್ತಿರಾಜ್ಯದ ಪಟ್ಟವಾಯಿತು. ಕೇದಾರದೇಶಿಕನ ಮಕ್ಕಳು (1) ಮನುಪಂಡಿತ (2) ಚನ್ನವಿಭು (3) ಮಹಾದೇವ (4) ಭೀಮನಪಂಡಿತ. ಈ ಸಂತತಿಯಲ್ಲಿ ಯಮ್ಮಟೂರ ಗುರು ಸೋಮನಾಥನು ಹುಟ್ಟಿದನು. ಇವನ ಮಕ್ಕಳು (1) ವಿಶ್ವನಾಥ (2) ಸೂರೇಶ್ವರ (3) ಸಿಂಗಣ್ಣಮಂಚಾರ್ಯ.

1. Vol. I, 161.

ಶ್ರೀಗಿರಿಯಲ್ಲಿಯ ಶಿವಭಕ್ತರು ಪಾಲ್ಕುರಿಕೆಯಸೋಮೇಶ್ವರನನ್ನು ಕರೆದು ಪಂಡಿತಾರಾಧ್ಯಚರಿತವನ್ನು ಬರೆಯೆನಲು ಆತನು ಆಂಧ್ರಭಾಷೆಯಲ್ಲಿ ಬರೆದಂತೆಯೂ ಅದನ್ನು ತಾನು ಕನ್ನಡದಲ್ಲಿ ರಚಿಸಿದಂತೆಯೂ ಕವಿ ಹೇಳುತ್ತಾನೆ.

ಗ್ರಂಥಾವತಾರದಲ್ಲಿ ಶಿವಸ್ತುತಿ ಇದೆ. ಬಳಿಕ ಕವಿ ನಂದಿ, ಭೃಂಗಿ, ವೀರಭದ್ರ, ಅಲ್ಲಮ, ಬಸವ, ಚೆನ್ನಬಸವ, ಪಂಡಿತಾರಾಧ್ಯ, ದಕ್ಷಿಣಾಮೂರ್ತಿಗುರು, ವಿಶ್ವನಾಥಾರ್ಯ, ಸ್ವಗುರು ಗಂಗಾಧರಾಚಾರ್ಯ ಇವರುಗಳನ್ನು ಸ್ತುತಿಸಿದ್ದಾನೆ. ಸಂಧಿಗಳ ಅಂತ್ಯದಲ್ಲಿ ಈ ಪದ್ಯವಿದೆ--

ಸದಮಲಪ್ರಚುರವಿಶ್ರುತಪರಮಭಕ್ತಗಣ |
ಪದಸರೋರುಹಸಾಂದ್ರಮಕರಂದಪಾನಸಂ |
ಮುದಿತಚಂಚಚ್ಚಂಚರೀಕನನವರತಪಂಚಾಕ್ಷರೀಪ್ರಸಿತಹೃದಯಂ ||
ವಿದಿತಮಂಜುಳನೀಲಕಂಠಾಹ್ವಯಂ ಮನೋ |
ಮುದದೆ ಪೇಟ್ಕುರುತರಾರಾಧ್ಯಚಾರಿತ್ರದೊಳ್.

ಇವನ ಬಂಧವು ಲಲಿತವಾಗಿದೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ--

ಶಿವಸ್ತುತಿ

ಸುರನಿಕರವರಮಕುಟಮಣಿಕಿರಣಲಹರಿತತಿ |
ಪರಿಕಲಿತಪರಚರಣಸರಸಿರುಹಭಜಕಕುಲ |
ದುರಿತಸಮುದಯರುಚಿರಮದಕರಟಿದಳನಪಟುಹರಿಸದೃಶನತಸುರಹಿತಂ ||
ಕರಲಪನಸಿತನಮಲಶತತರಣಿಘೃಣಿವಿಸರ |
ಪರಿಭವವಿಲಸಿತತನು ಫಣಿಪಕರಕಟಕನುರು |
ತರಗರಳಸರಳಗಳನನವರತವವನಿಯಂ ಪೊರೆಗೆ ಗುರುನೀಲಕಂಠಂ ||

ಗುರುಸ್ತುತಿ

ಚರವೆ ಚಿರಲಿಂಗಯುತಶಿರವೆ ಹರಭಕ್ತಗೋ |
ಚರವೆ ಚರಿತವ್ರತೋತ್ಕರವೆ ಕರುಣಾಂಬುಸಾ |
ಗರವೆ ಗುರುತರಗುಣನಿಕರವೆ ಸುರುಚಿರಕಳೇವರವೆ ಪರಮದ ಮುಕುರವೇ ||
ವರವೆ ನಿರವಧಿಪುಣ್ಯಾಪುರವೆ ಸತಸೋಕ್ತಿವಿ |
ಸ್ತರವೆ ದುರಿತಾಬ್ಜಕುಂಜರವೆ ಪರಮಾರ್ಥಮಂ |
ಧಿರವೆ ನಿರುಪಮಶಾಂತಿಕರವೆ ಪುರರಿಪುಚಿದಾಕರವೆ ಕರುಣಿಪುದು ಗುರುವೇ ||

**ಜಗದನಾದಿತ್ವನಿರಸನ**

ಭರದಿನೀಜಗವೆಲ್ಲನಾದಿಯೆಂಬೀನುಡಿಯೆ |
ಪುರುಳಲ್ತದೆಂತೆನಲ್ ಕಾರ್ಯತ್ವದಿಂದೆ ಭಾ |
ಸುರಕಾರ್ಯಮಾದುದದು ಘಟದಂತನಿತ್ಯತೆಯೊಳೊಂದಿ ತೋಱುಗುಮನಿಶವೂ ||
ಪಿರಿದುಮದು ಕಾರ್ಯತ್ವಮೆಂತಪ್ಪುದೆಂಬೊಡದು |
ಕರಮೆ ಸಾವಯುತ್ವದಿಂದೆ ಸಾವಯವತ್ವ |
ವಿರುತಿರ್ಕುಮಾವುದಱೊಳದು ಭಾವಿಸಲ್ ಕಾರ್ಯಮೆಂಬುದಿದು ಸಿದ್ಧಾಂತವು ||

**ಚಾರ್ವಾಕಮತಖಂಡನ**

ಅತಿಶಯಂ ದೇಹಮೇ ಆತ್ಮನಾದೊಡೆ ವೇಱಂ |
ಮೃತಶರೀರಂ ದೃಷ್ಟಮಾಗಿರಲ್ ಭೂಸಲಿಲ |
ಹುತವಹಶ್ವಸನಂಗಳಿಂ ತೋರ್ಪ ದೇಹಚ್ಛೈತನ್ಯಮಂ ಕಾಣ್ಬರಿಲ್ಲ ||
ಮತಿವಿಕಳಚಾರ್ವಾಕ ಬಱಿದೆ ಬಕ್ಕುಡಿಗುಟ್ಟು |
ತತಿವಾದಿಪ್ಪೆ ಜನನಮರಣಾದಿಗಳ್ ನೋಡೆ |
ಸತತನೂತ್ಮನ ಧರ್ಮಮದಱಿಂದೆ ದೇಹದಿಂ ಬೇಱೊರ್ವನಾತ್ಮನುಂಟು ||
ಪಿರಿದವಸ್ಥಾತ್ರಯಂಗಳ್ಗೆ ಕಾರಣಮಪ್ಪ |
ಸುತುಚಿರಸ್ಥೂಲಾದಿತನುಗಳೊಳ್ ವ್ಯಾಪಿಸು |
ತ್ತುರುವಿಶ್ವತೈಜಸಪ್ರಾಜ್ಞರೆಂಬಭಿಧಾನದಿಂದೊರ್ವನೇ ಆತ್ಮನು ||
ನಿರುತದಿಂ ದೇಹದೊಳ್ ತೋಱೆ ತದ್ದೇಹಮದು |
ಭರದಿಂದೆ ಚೇತನತ್ವದೊಳೊಂದಿ ತೋಱುಗುಂ |
ಕರಮವಂ ತೊಲಗೆ ಮೃತದೇಹವೆನಿಸುಗುಮದಱಿನೀ ದೇಹಮಾತ್ಮನಲ್ತು ||
ಮಿಸುಪ ಚಕ್ರಮನೊತ್ತಿ ಪಿಡಿದಿರ್ದ ದಂಡದಿಂ |
ದೊಸೆದು ತಿರುಪಲ್ ಚಕ್ರಿ ಚಕ್ರಮದು ತಿರುಗುವಂ |
ತಸವಸಂ ದೇಹಮಾತ್ಮಪ್ರೇರಣೆಯಿನುಱದೆ ಚಲಿಸುತಿರ್ಕುಂ ಭಾವಿಸೆ ||
ನಿಸದಮಾತ್ಮಂ ದೇಹದಿಂ ತೊಲಗಿ ಪೋಗೆ ಮ |
ತ್ತಸುಗಳೈದಿದ ಶರೀರಂ ಶುದ್ಧಮಲ್ತೆಂದು |
ವಸುಧಾಜನಂ ಮುಟ್ಟದದಱಿಂದೆ ತನುವಿಲಕ್ಷಣನಾತ್ಮನುಂಟು ಸತತಂ ||

## ಕವಿಲಿಂಗ. ಸು. 1490

ಈತನು ಕವಿಲಿಂಗನಪದ ಎಂಬ ಗ್ರಂಥವನ್ನು ಬರೆದಿದ್ದಾನೆ. ಇವನು ವೀರಶೈವಕವಿಯೆಂದು ತೋರುತ್ತದೆ; ಕಾಮಶಾಸ್ತ್ರದಲ್ಲಿ ಪ್ರವೀಣನಾಗಿದ್ದಂತೆಯೂ ಗುಂಡರಾಜನ ಮಗನಾದ ಸಾಳುವನರಸಿಂಗರಾಜನ (1487-1493) ಆಸ್ಥಾನಕವಿಯಾಗಿದ್ದಂತೆಯೂ

ಇಂಗಿತವನಱಿಯಲೆಂದೀನಾರಿಯರಿಗಿತ್ತ । ಮಂಗಳಾಲಂಕಾರಸಮವಾಗಿರೆ ।
ಅಂಗಜಕಲಾನಿಪುಣ ಗಂಡಭೇರುಂಡಕವಿ । ಲಿಂಗ ನುಡಿಚಾಣಕಃ ಸಾಳ್ವಗೆ ॥
ಮಲೆವ ರಿಪುರಾಯಗಿರಿವಜ್ರವನದಾವಾ । ನಲ ವೈರಿವಾರ್ಧಿವಡಬ ಸಾಳ್ವ ।
ಕುಲರತ್ನ ಗುಂಡಭೂವರನರಸಿಂಗಗೆ । ತಲೆಯೊತ್ತಿ ಬಾಱ್ವ ಭೂಭುಜರುಂಟೆ ॥

ಎಂಬ ಪದಗಳಿಂದ ತಿಳಿಯಬಹುದಾಗಿದೆ. ಈ ನರಸಿಂಗನನ್ನು ಕವಿ ಬಹಳಕಡೆ ಸ್ತುತಿಸಿದ್ದಾನೆ. ಒಬ್ಬ "ಕನ್ನಡಜಾಣ ಎಳಜ"ನ ಹೆಸರು ಹೇಳಿದೆ. ಈತನಾರೋ ತಿಳಿಯದು. ಕವಿಯ ಕಾಲವು ಸುಮಾರು 1490 ಆಗಬಹುದು.

ಇವನ ಗ್ರಂಥ

### ಕವಿಲಿಂಗನ ಪದ

ಇವು ಪ್ರಾಯಿಕವಾಗಿ ಶೃಂಗಾರರಸಪ್ರಧಾನವಾದ ಹಾಡುಗಳು. ಪದವನ್ನು ಹೇಳಿ ಬಳಿಕ "ಈ ಪದಕ್ಕೆ ಸೂತ್ರ" ಎಂದು ಪದ್ಯಗಳು ಬರೆದಿವೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ—

ಅಳಿಗುರುಳ್ಗೆ ಪೂ ತಿಲಕಮಿಂದುನಿಭಾನನೆಗಂ ಲತಾಂಗಿಗಂ ।
ಮಲಯಜನೂಪುರಂ ಕಲಮರಾಳಸುಯಾನೆಗೆ ಮುತ್ತಿನೊಜ್ಜರಂ ।
ನಳಿನನಿಭಾಸ್ಯೆಗಂ ಪದಕ ಮೋಹಘನಸ್ತನಿಗಂ ಸುರತ್ನ ಕಂ ।
ಗೊಳಿಸುವ ಕಂಕಣಂ ಪವಳಬಾಯ್ದೆಱೆಯಳ್ಗೆ ನಿತಂಬಸೂತ್ರಮಂ ।
ಸೆಳೆನಡುವೊಪ್ಪುವಳ್ಗೊಲಿದು ನಾಯಕನಿತ್ತನದೇಂ ಮನಃಪ್ರಿಯಾ ॥
ಎಲ್ಲಿಯ ? ಸಾರಪಂ ಚದುರಿದೆಲ್ಲಿಯದಿಂತು ವಿವೇಕದೊಳ್ಪು ತಾ ।
ನೆಲ್ಲಿಯದಾಕೆಯಾಳ್ದಿಹಳು ದಂಭವದಾದಿಯೊಳಾ ಶಿಶುತ್ವದೊಳ್ ।
ನಿಲ್ಲದೆ ಪಾಲನೀಂಟುವವೊಲುಂ ಜನನಾಂತ್ಯದವೋಲು ನಲ್ಲನೊಳ್ ।
ಕಲ್ಲಿಲವಾಗಿ ತೋಱಿಸಿತನೆಂಬಳು ಬೊಮ್ಮನ ಕೂಟದೆಚ್ಚಱಂ ।
ಸೊಲ್ಲಿಸಲೆಂದು ಪುಟ್ಟುವುದೊ ಮೂಪಪನೊಳ್ಮೆಯನೆಂಮ ಕಾಣ್ಬುದೋ ॥

(ಇವು ಪಂಚಪಾದವೃತ್ತಗಳು)

ಪುಟ್ಟುವ ಬಾಲಕರೊಳ್ ನೆಱೆ | ಪುಟ್ಟಿದ ಕಡೆಯವರತೆಱದಿ ಬೆಳೆವವರೊಲ್ ತಾಂ|
ಏಟ್ಟಿಹುದಲ್ಲದೆ ನಲ್ಲನ | ನೆಟ್ಟನೆ ತನಗಪ್ಪನೆಂಬುದೆಂತಲೆ ರಮಣೀ ||

---

## ಚತುರ್ಮುಖ ಬೊಮ್ಮರಸ. ಸು. 1500

ಇವನು ರೇವಣಸಿದ್ಧೇಶ್ವರಪುರಾಣವನ್ನು ಬರೆದಿದ್ದಾನೆ. ಈತನು ವೀರಶೈವಕವಿ; ಮಾಯಣನ ಮಗನು, ಕಾಶ್ಯಪಗೋತ್ರದವನು, ಬೋಧಾಯನಸೂತ್ರದವನು, ಯಜುರ್ವೇದಿ. ರೇವಣಸಿದ್ಧೇಶ್ವರನ ವಂಶೋದ್ಭವನಾದ ಒಬ್ಬ ಬಾಲಸಿದ್ಧೇಶ್ವರನನ್ನು ವಿಶೇಷವಾಗಿ ಸ್ತುತಿಸಿದ್ದಾನೆ. ಇವನು ಕವಿಯ ಗುರುವಾಗಿದ್ದಂತೆ ತೋರುತ್ತದೆ. ಇವನ ಆಜ್ಞಾನುಸಾರವಾಗಿ ಕವಿ ಈ ಗ್ರಂಥವನ್ನು ಬರೆದಂತೆ ಹೇಳುತ್ತಾನೆ. ಸರಸಗೀರ್ವಾಣಭಾಷಾಯುಕ್ತ ಕರ್ಣಾಟವರವಚಶ್ರೀ ಲಸಿತವದನತಾಮರಸ, ಶೈವಾಗಮಜ್ಞ, ವರ್ಣಕ ಕವೀಂದ್ರಚತುರಾಸ್ಯ, ಕವಿಸಭಾಮಾಣಿಕ್ಯದೀಪ ಎಂದು ತನ್ನನ್ನು ವಿಶೇಷಿಸಿ ಹೇಳಿಕೊಂಡಿದ್ದಾನೆ. ಪೂರ್ವಕವಿಗಳಲ್ಲಿ ಮಗ್ಗೆಯಮಾಯಿದೇವನನ್ನು (ಸು. 1430) ಸ್ತುತಿಸುವುದರಿಂದ ಅವನ ಕಾಲಕ್ಕಿಂತ ಈಚೆಯವನೆಂಬುದು ಸ್ಪಷ್ಟವಾಗಿದೆ. ಈ ಗ್ರಂಥವನ್ನು ಶಾಂತಮಲ್ಲೇಶ್ವರನ ಅಂಕಿತದಲ್ಲಿ ಬರೆದಿದ್ದಾನೆ. ಯದ್ಯಪಿ ಈ ಗ್ರಂಥಕ್ಕೂ ಸೌಂದರಪುರಾಣಕ್ಕೂ[1] ಆದಿಭಾಗದಲ್ಲಿ ಬಹಳಮಟ್ಟಿಗೆ ಹೋಲಿಕೆಯಿದ್ದರೂ ಗುರು, ಅಂಕಿತ ಈಯಂಶಗಳಲ್ಲಿ ವ್ಯತ್ಯಾಸವಿರುವುದರಿಂದ ಈ ಬೊಮ್ಮರಸನು ಆ ಗ್ರಂಥವನ್ನು ಬರೆದ ಬೊಮ್ಮರಸನಿಗಿಂತ ಬೇರೆಯವನೆಂದು ತಿಳಿಯಬೇಕಾಗಿದೆ. ಈ ಹೋಲಿಕೆಯನ್ನು ನೋಡಿದರೆ ಇವರಿಬ್ಬರೂ ಸಮೀಪಸಂಬಂಧಿಗಳಾಗಿ ಇದ್ದಿರಬಹುದೆಂದು ತೋರುತ್ತದೆ. ಈ ಕವಿ ಆ ಕವಿಯ ಮೊಮ್ಮಗನಾಗಿದ್ದರೂ ಇರಬಹುದು. ಹಾಗಿದ್ದ ಪಕ್ಷದಲ್ಲಿ ಇವನ ಕಾಲವು ಸುಮಾರು 1500 ಆಗಬಹುದು.

ಪೂರ್ವಕವಿಗಳಲ್ಲಿ ಭಾರವಿ, ಮಲುಹಣ, ಕಾಳಿದಾಸ, ಬಾಣ, ಮಯೂರ ಈ ಸಂಸ್ಕೃತಕವಿಗಳನ್ನೂ ಹರೀಶ್ವರ, ಮಗ್ಗೆಯಮಾಯಿದೇವ, ಕೆರೆಯಪದ್ಮರಸ, ಪಾಲ್ಕುರಿಕೆಸೋಮನಾಥ ಈ ಕನ್ನಡ ಕವಿಗಳನ್ನೂ ಸ್ಮರಿಸಿದ್ದಾನೆ.

---

1. 89ನೆಯ ಪುಟವನ್ನು ನೋಡಿ.

ರಾಘವಾಂಕ ಮೊದಲಾದ ಕವಿಗಳನ್ನನುಸರಿಸಿ ಶಷಸರಳಲಟಿಗಳನ್ನು ಪ್ರಾಸಕ್ಕೆ ಸೇರಿಸಿದಂತೆ ಈ ಪದ್ಯದಲ್ಲಿ ಹೇಳುತ್ತಾನೆ—

ಓರಂತೆ ಶಷಸರಳಲಟಿಯಿವಂ ಪ್ರಾಸಕ್ಕೆ ।
ಸೇರಿಸಿದೆನೀಕಾವ್ಯದೊಳಗೆ ವರ್ಣಕಕವಿ ।
ಶ್ರೀರಾಘವಾಂಕಪಂಡಿತನಾದಿಯಾದ ಕಬ್ಬಿಗರು ನಿಜಕೃತಿಯೊಳೊರೆದಾ ॥
ಕಾರಣಂ ನಾಗವರ್ಮಂ ವಿನಿರ್ಮಿಸಿದ ಲರ ।
ಢೈರೇವ ಲಳಟಾಃ ಪ್ರಯತ್ನಾಶ್ರಯಾತೆನಿಪ ।
ಚಾರುಕರ್ಣಾಟಕವ್ಯಾಕರಣಸೂತ್ರ ಮೊದಲಾದುವುಂಟದುನಿಮಿತ್ತಂ ॥

ಇವನ ಗ್ರಂಥ

### ರೇವಣಸಿದ್ಧೇಶ್ವರಪುರಾಣ

ಇದು ವಾರ್ಧಕಷಟ್ಪದಿಯಲ್ಲಿ ಬರೆದಿದೆ; ಸಂಧಿ 13, ಪದ್ಯ 565. ಇದರಲ್ಲಿ ರೇವಣಸಿದ್ಧೇಶ್ವರನ ಚರಿತವು ಹೇಳಿದೆ. ಕಥಾಸಾರವನ್ನು ಕವಿ ಈ ಪದ್ಯದಲ್ಲಿ ಸೂಚಿಸಿದ್ದಾನೆ:—

ಶ್ರೀಶನನು ಕಾಂಚಿಯೊಳು ನುಡಿಸಿ ಚೋಳಂಗೆ ಕ ।
ನ್ಯಾಸಮೂಹದ ಬಂಧನವ ಬಿಡಿಸಿ ಬಿಜ್ಜಳಮ ।
ಹೀಶನಿಂ ಪೂಜೆಗೊಂಡಾದಿಶೈವಾಚಾರ್ಯನಾಗಿ ಲಂಕಾಪುರದೊಳು ॥
ಈಶಕೋಟಿತ್ರಯದ ಹದಿಟಗೆಯ್ದೊಲವಿಂ ವಿ ।
ಭೀಷಣನ ಪಾಲಿಸಿದ ವೀರಶೈವಪ್ರಥಮ ।
ದೇಶಿಕಂ ರೇವಣಾಸಿದ್ಧೇಶನೆಮಗೀಗೆ ಭಾಸುರಸದಾನಂದವ ॥

ರೇವಣಸಿದ್ಧ ಚರಿತವನ್ನು ಈಶಾನ್ಯಶಿವಗುರು ಸಂಸ್ಕೃತದಲ್ಲಿಯೂ ಹರೀಶ್ವರನು ರಗಳೆಯರೂಪವಾಗಿ ಕನ್ನಡದಲ್ಲಿಯೂ ಬರೆದಿದ್ದಾರೆ; ಈ ಉಭಯಮತವನ್ನರಿದು ತಾನು ಈ ಕಾವ್ಯವನ್ನು ಬರೆದಂತೆ ಕವಿ ಹೇಳುತ್ತಾನೆ. ಈ ಕಾವ್ಯದ ಉತ್ಕೃಷ್ಟತೆಯನ್ನು ಈ ಪದ್ಯಗಳಲ್ಲಿ ಹೇಳಿದ್ದಾನೆ—

ಕನ್ನಡಂ ಸಕ್ಕದದೊಳೊಂದಿ ಪುಟವಿಟ್ಟ ಚೆಂ ।
ಬೊನ್ನೊಳೊಂದಿದ ತರಂಗಿಸುವ ಕಡುರಂಗಿಡಿದ ।
ರನ್ನದಂತಿರಲೆಸೆವ ಪದಬಂಧವಚ್ಚಸಿರಪಚ್ಚಗಪ್ಪುರವೆರಸಿದ ॥
ಉನ್ನತಿಯ ಸವಿಗಂಪ ಸಾಲಿಡುವ ಜಾತಿಬಾ ।
ವನ್ನದಂತಿರೆ ಪೇಳ್ವೆನೀಕಾವ್ಯಮಂ ಬೆಡಂ ।
ಗಿಂ ನಿಖಿಲವಿದ್ವಜ್ಜನಂ ಮೆಚ್ಚೆ ಶಿವಶರಣಕರ್ಣಮಂಡನವೆನಿಸಲು ॥

ಪರಿಪಕ್ವಬಂಧುರದ್ರಾಕ್ಷಾಫಲಸ್ತಬಕ |
ದಿರವಿನಂದದಿ ರಸಂ ಬಹಿರಂತರಂಗನೊಳ್ |
ಪರಿವಡೆಯೆ ಭಾವವೆಸಕಂ ಮೋಹಕೊಳಗಾದ ಮುಗ್ಧೆ ನೋಡುವನೋಟದ||
ಸರಿಸಮಾಗಿರಲು ಪೇಳ್ವೆಂ.
ಕೃತಿರಸಂ ಜೇನೆಯ್ಯ ಹೂರದಂತಮುರ್ದುಗಾ
ಲುವೆಯಂತೆ ರಸದಾಳಿರಸದ ಪೆರ್ಬೊನಲಂತೆ |
ಕಿವಿಗುಡಿತೆಯಿಂದೀಂಟಬಲ್ಲ ರಸಿಕರ್ಗೆ ಕಡುಸವಿಯೆನಿಸಿದುದು.

ಗ್ರಂಥಾವತಾರದಲ್ಲಿ ಶಾಂತಮಲ್ಲಿಕಾರ್ಜುನಸ್ತುತಿ ಇದೆ. ಬಳಿಕ ಕವಿ ಪಾರ್ವತಿ, ರೇವಣಸಿದ್ಧೇಶ, ಮರುಳಸಿದ್ಧೇಶ, ಏಕೋರಾಮ, ಮಲ್ಲಿಕಾರ್ಜುನಪಂಡಿತಾರಾಧ್ಯ, ನಂದಿ, ಭೃಂಗಿ, ವೀರಭದ್ರ, ತಿರುಜ್ಞಾನಸಂಬಂಧಿ ನಾಮವನ್ನು ಪಡೆದ ಷಣ್ಮುಖ, ವಾಗೀಶ ಇವರುಗಳನ್ನು ಕ್ರಮವಾಗಿ ಸ್ತುತಿಸಿದ್ದಾನೆ. ಈಶ್ವರನ ಜ್ಞಾನಕಲೆ, ಲಾವಣ್ಯಕಲೆ, ವೀರಕಲೆ, ಆನಂದಕಲೆ, ಧರ್ಮಕಲೆ, ಇವು ರೇಣುಕ (ರೇವಣ), ಸೌಂದರೇಶ, ವೀರಭದ್ರ, ಷಣ್ಮುಖ, ವೃಷಭೇಂದ್ರ ಈ ರೂಪವಾಗಿ ಹುಟ್ಟಿದುವು; ಇವುಗಳಲ್ಲಿ ಮುಖ್ಯವಾದ ಜ್ಞಾನಕಲೆಯ ಲೀಲಾಕಥನವನ್ನು ಬರೆವುದಾಗಿ ಕವಿ ಹೇಳುತ್ತಾನೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನುಉದ್ಧರಿಸಿ ಬರೆಯುತ್ತೇವೆ:—

ಭತ್ತದ ಗದ್ದೆ

ಕೊನೆದೆನೆಯನಡರ್ದು ಚಂಚುವಿನಿಂ ಕರ್ದುಂಕಿ ಭೋಂ |
ಕನೆ ಪೊದಱ್ಗೊಱೆವ ಪಾಲ್ವನಿಗಳಂ ಸವಿದು ಸು |
ಮ್ಮನದಿನಿಕ್ಕೆಲದೊಳಂ ನೆಗೆದ ಗಿಳಿವಿಂಡು ಗಗನಶ್ರೀಯ ನುಣ್ಗೊರಲೊಳು ||
ಮಿನುಗುವಂಬುಜರಾಗರತ್ನವೆಡೆವಡೆದ ನೂ |
ತನಹರಿನ್ಮಾಣಿಕ್ಯಮಾಲೆಯೆಂಬಂದಮಂ |
ನೆನೆಯಿಸಲು ಪಸುರ್ವಡೆದು ಬೆಳೆದ ಕಮ್ಮಂಗಳಿವೆ ಕಣ್ಗೊಳಿಸುತಿರ್ಪುದಲ್ಲಿ||

ಸ್ತ್ರೀಯರು

ಜಡಿವ ನಿಡುಸೋಮರ್ಗುಡಿಗಳಿಡುಗುಂಡು ನುಣ್ಪಿಡಿದ |
ಕುಡುವುರ್ಬು ಪದವಿಲ್ಲು ಮಿಸುಪ ತೆಳ್ವಸುಱಿಮೇ |
ಲಡರ್ದ ಕೊನೆವಾಸೆ ಕೂರಿಟ್ಟಿ ಸುಕ್ಕುಂಗುರುಳ ಪಜ್ಜೆಗಳುರುಳ್ಗಳಾಗೆ ||

ದೃಢವುಳ್ಳ ಚಿತ್ತದಗ್ಗಳದ ಸಂಯಮಿಯುಮೃಗದ |
ಗಡಣಮಂ ಬೇಂಟೆಯಾಡುವ ಕೇತುಧೀವರಂ |
ಪಿಡಿದ ಸಾಧನದಿಕ್ಕೆಯೆನಿಪ್ಪೆಸೆದಲ ಗರುವೇಮುರು ನಡೆತಂದರೀಶನೆಡೆಗೆ ||

ಬೆಳದಿಂಗಳು

ಕೋಗಿಲೆಗಳರಸಂಚೆವಿಂಡಿನಂತಿರಲಿತ್ತರ |
ಸಾಗರಂ ಪಾಲ್ಗಡಲವೋಲಿರೆ ಮನೋಜ್ಞಕೃ |
ಷ್ಣಾಗರುರಸಂ ಚಂದನಕ್ಷೋದದಂತಿರೆ ಮಹೇಂದ್ರನೀಲೋತ್ಪಲತತಿ ||
ಭೋಗಿಸದ ಪೊಚ್ಚಪೊಸಮುತ್ತಿನಂತಿರೆ ಬೇಡಂ |
ಗಾಗೆ ಚಂದ್ರಾತಪಂ ಧಾರಿಣಿಯನೆಣ್ದೆಸೆಯ |
ನಾಗಸಮನಾವರಿಸಿ ತೀವಿತು ಪಳಚ್ಚನೆ ವಿಕಾಸವೆಯ್ದಲು ನೆಯ್ದಿಲು ||

ವಸಂತ

ಮಡುಗಳೊಳು ಗಿಡುಗಳೊಳು ಮರಗಳೊಳು ಬಳ್ಳಿಗಳೊ |
ಳಡಿಕಿಱಿವ ಮೆಲ್ಲರಲ್ದೊಡಬೆಯಂ ಮುಸುಕಿದಾ |
ಱಡಿಗಡಣ ಪಸರಿಸಿದ ತೆಳ್ಗಱಿಗಳಿಂಪ್ರನಣಿ ಕೆತ್ತಿಸಿದ ಪೊಂದೊಡುಗೆಯಂ ||
ಪೊಡವಿಯೆನಿಸುವ ಚೆಲ್ವ ಮಡದಿ ತೊಟ್ಟಂತಿರಲು |
ಬಿಡಗುವಡೆದಿರ್ದುದು ವಸಂತಕಾಲ ನಿತಾಂತ |
ಮುಡುಪತಿಯ ಬಿಂಬದೊಳಗಮೃತಕಳೆ ತುಳ್ಕಲು ವಿಯೋಗಿಸಂಕುಳವಳ್ಕಲು ||

ಸಾಹಿತ್ಯಜ್ಞರ ಅಪೂರ್ವತೆ

ಕಲ್ಲು ಕರಗುವುದುಗ್ರಫಣಿ ಸೋಲ್ವುದೋಣಮರಂ |
ಪಲ್ಲವಿಪುದೆರಲೆ ಸಿಲುಕುವುದು ಪಶು ಮೋಹಿಪುದು |
ನಿಲ್ಲದಱಿವೆಳವಸುಳೆ ಸಂತಸಮನೆಯ್ದುವುದು ಮುಗಿಲೊಸರ್ದು ಮಱೆಗಱೆವುದು||
ಸಲ್ಲಲಿತಸಂಗೀತರಸಕೆ ಸಾಹಿತ್ಯಮಂ |
ಬಲ್ಲನೊರ್ವನಪೂರ್ವವೀಧರಿತ್ರೀವಳಯ |
ದಲ್ಲಿ ರಸಭಾವಾರ್ಥಚಿತ್ರಪಱಿವುದು ಸುಲಭವಲ್ಲ ಸಕಲರ್ಗ್ಗದಾಗಿ||

---

## ಕುಮಾರವಾಲ್ಮೀಕಿ. ಸು. 1500

ಈತನು ರಾಮಾಯಣವನ್ನು ಬರೆದಿದ್ದಾನೆ; ಮೈರಾವಣನ ಕಾಳೆಗವನ್ನೂ ಬರೆದಿರುವಂತೆ ತೋರುತ್ತದೆ; ಈ ಗ್ರಂಥದಲ್ಲಿ ತನ್ನ ಹೆಸರನ್ನು

ನರಹರಿ ಎಂದು ಹೇಳಿಕೊಂಡಿದ್ದಾನೆ. ಕುಮಾರವಾಲ್ಮೀಕಿ ಎಂಬುದು ಬಿರುದೇ ಹೊರತು ಹೆಸರಲ್ಲ. ಇವನು ಬ್ರಾಹ್ಮಣಕವಿ. ಇವನ ಸ್ಥಳ ಸೋಲಾಪುರದ ಜಿಲ್ಲೆಯಲ್ಲಿರುವ ತೊರವೆಯೆಂಬ ಗ್ರಾಮ. ಅಲ್ಲಿಯ ದೇವರಾದ ನರಸಿಂಹನ ಅಂಕಿತದಲ್ಲಿ ತನ್ನ ಗ್ರಂಥಗಳನ್ನು ಬರೆದಿದ್ದಾನೆ. ಈ ರಾಮಾಯಣಕ್ಕೆ ಕವಿಯ ಗ್ರಾಮದಿಂದ ತೊರವೆಯ ರಾಮಾಯಣ ಎಂಬ ಹೆಸರು ರೂಢಿಯಾಗಿದೆ. ಇವನಿಗೆ ಕವಿರಾಜಹಂಸ ಎಂಬ ಬಿರುದಿದ್ದಂತೆ ತೋರುತ್ತದೆ. ವರ್ಣಕಕವಿಗಳಲ್ಲಿ ಕುಮಾರವ್ಯಾಸನೊಬ್ಬ ತಾನೊಬ್ಬ ಈ ಇಬ್ಬರೇ ಗಣ್ಯರು ಎಂಬ ಭಾವವನ್ನು "ಸರಸವರ್ಣಕಕವಿಗಳೊಳು ಭಾ। ಸುರ ಕುಮಾರವ್ಯಾಸನೊಬ್ಬನು । ವರಿಕಿಸುವೊಡಾನೊಬ್ಬ ಮಿಕ್ಕಿನ । ಬರಡುಕವಿಗಳ ಲೆಕ್ಕಿಸುವನೆ ಕುಮಾರವಾಲ್ಮೀಕಿ'' ಎಂಬ ಪದ್ಯಭಾಗದಲ್ಲಿ ತಿಳಿಸಿದ್ದಾನೆ. ಹೀಗೆ ಕುಮಾರವ್ಯಾಸನನ್ನು (ಸು. 1430) ಹೊಗಳುವುದರಿಂದ ಅವನಿಗಿಂತ ಈಚೆಯವನು ಎಂಬುದಂತೂ ಸ್ಪಷ್ಟವಾಗಿದೆ. ಆದರೆ ಎಷ್ಟುಕಾಲ ಈಚೆಯವನು ಎಂಬುದನ್ನು ನಿರ್ಧರಿಸುವುದು ಕಷ್ಟವಾಗಿದೆ. ಸುಮಾರು 1500 ರಲ್ಲಿ ಇದ್ದಿರಬಹುದೆಂದು ಊಹಿಸುತ್ತೇವೆ. ಈ ಕವಿಯನ್ನು ಬೊಬ್ಬೂರ ರಂಗನೇ (ಸು. 1760) ಮೊದಲಾದ ಕವಿಗಳು ತಮ್ಮ ಗ್ರಂಥಗಳಲ್ಲಿ ಸ್ಮರಿಸಿದ್ದಾರೆ. ತನ್ನ ಕವಿತಾಶಕ್ತಿಯನ್ನು ಈ ಪದ್ಯದಲ್ಲಿ ಹೇಳಿಕೊಂಡಿದ್ದಾನೆ-

ಪರರ ಬಗೆ ಪರರುಕ್ತಿ ಪರರು । ತ್ಕರುಷ ಪರರುನ್ನತಿಯ ಕೃತಿಯಪ ।
ಹರಣೆ ಪರರುಪಮಾನ ಪರರೊಡ್ಡವದ ಪರುಠವದ ॥
ಹರಹು ಹೊಗದಗ್ಗಳಿಕೆ ಪದಸಂ । ಚರಣೆಯಲಿ ಲಿಪಿ ತಿರುಗಿ ನೋಡದ ।
ಬಿರುದು ಬೇಱೆ ಕುಮಾರವಾಲ್ಮೀಕಿಯ ವಚೋಲಹರಿ ॥

ಇವನ ಗ್ರಂಥಗಳಲ್ಲಿ

### 1. ತೊರವೆಯರಾಮಾಯಣ

ಇದು ಭಾಮಿನೀಷಟ್ಪದಿಯಲ್ಲಿ ಬರೆದಿದೆ; ಸಂಧಿ 112, ಪದ್ಯ 5079. ಇದರ ಉತ್ಕೃಷ್ಟತೆಯನ್ನು ಕವಿ ಈ ಪದ್ಯಗಳಲ್ಲಿ ಹೇಳಿದ್ದಾನೆ—

ಶುಕಕವಿಯ ಸುಮ್ಮಾನ ಸೂರಿ । ಪ್ರಕರದಮಲಜ್ಞಾನ ಮುನಿಕರ ।
ಮುಕುರ ಗುಣಿಗಳ ಗೂಢನಿಧಿ ರಸಿಕರ ಸುಧಾಜಲಧಿ ॥
ಅಕುಟಿಲರ ಮನಮೆಚ್ಚು ಸಿರಿಹರಿ । ಭಕುತರುಮ್ಮಹದಚ್ಚು ಶಿವನೇ ।
ವಕರ ಮೆಚ್ಚು ಕುಮಾರವಾಲ್ಮೀಕಿಯ ಪ್ರಬಂಧಕೃತಿ ॥

ಪ್ರಿಯರಿಗಪ್ರಿಯರಿಗೆ ವಿವೇಕಾ | ಶ್ರಿಯರಿಗತಿಮೂರ್ಖರಿಗೆ ವಿಜ್ಞಾ |
ನಿಯರಿಗತಿಜಾಣರಿಗೆ ಜಡರಿಗಸೂಯಭಾವರಿಗೆ ||
ನಯವಿದರಿಗಜ್ಞರಿಗೆ ಹರುಷೋದಯದ ಪೆಂಪು ಕುಮಾರವಾಲ್ಮೀ |
ಕಿಯ ಪ್ರಬಂಧಪ್ರೌಢತರಕವಿತಾಚಮತ್ಕಾರ ||

ಗ್ರಂಥಾವತಾರದಲ್ಲಿ ತೊರವೆಯ ನರಸಿಂಹದೇವರ ಸ್ತುತಿ ಇದೆ. ಬಳಿಕ ಕವಿ ಶಿವ, ಲಕ್ಷ್ಮಿ, ಪಾರ್ವತಿ, ಬ್ರಹ್ಮ, ಸರಸ್ವತಿ, ಗಣೇಶ, ಆಂಜನೇಯ, ಭಾರದ್ವಾಜಗುರು, ವಾಲ್ಮೀಕಿ ಇವರುಗಳನ್ನು ಪರಿಪಿಡಿಯಿಂದ ಹೊಗಳಿದ್ದಾನೆ. ಬ್ರಾಹ್ಮಣಕವಿಗಳು ಬರೆದ ರಾಮಾಯಣಗಳಲ್ಲಿ ಇದೇ ಮೊದಲನೆಯದು. ಇದರಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ಸೀತೆಯ ಸೌಂದರ್ಯ

ಚರಣಕಾಂತಿಗಳಿಂದ ನೂಪುರ | ಗುರುನಿತಂಬದಿ ಕಾಂಚಿ ಕೋಮಲ |
ಕರದಿ ಕಂಕಣ ಬೆರಳಿನಿಂದುಂಗುರವು ಕೊರಳಿಂದ ||
ಸರದ ಮುತ್ತುಗಳೋಲೆ ಕದಪಿಂ | ದಿರದೆ ಮೆಱೆದುವು ಸ್ಮರಕರಾಗ್ರ |
ಸ್ಫುರಿತಚಾಪಕಲಾಪಶರದಭಿಮಾನದೇವತೆಯ ||
ಹೊಳೆಹೊಳೆವ ತನುಕಾಂತಿಯಲಿ ಗಜ | ಗಲಿಸಿದುವು ಹೊಂದೊಡವುಗಳು ಥಳ |
ಥಳಿಸಿದುವು ಮುತ್ತುಗಳು ದಂತಪ್ರಭೆಯ ಲಹರಿಯಲಿ ||
ಸುಲಲಿತಾಧರರಾಗದಿಂದು | ಜ್ವಲಿಸಿದುವು ಮಾಣಿಕ್ಯಚಯವಾ |
ರಳವು ಹೊಗಱುವಡೆಬುಜಗಂಧಿಯ ವಿವುಳವಿಭ್ರಮವ ||

ಸಮುದ್ರಕ್ಕೆ ಪ್ರಯೋಗಿಸಿದ ರಾಮಬಾಣ

ಇಱುಮುದುರಿ ಬಂದಂಬುನಿಧಿಯೊಡ | ಲೊಳಗೆ ತೆರೆತೆರೆಚಳಿಯ ಬಗಿಬಗಿ |
ದಿಱುವಡರಿದುದು ಛಟಛಟತ್ಕೃತಿಗಳ ಛಡಾಳದಲಿ ||
ತುಳುಕುತುಳುವ ತುಂತುರಿನ ಕಿಡಿ | ಹಱಚಿದುವು ಹೊದರೆದ್ದ ವಡಬಾ |
ನಳನನೊದೆದುದು ರಾಮಭದ್ರನ ಭೀಮಬಾಣಾಗ್ನಿ ||

ರಾವಣನ ಸೈನ್ಯ

ತೇಜಿಗಳ ತೆರೆವಾಲೆಗಳ ರಥ | ರಾಜಿಗಳ ನೆಗಱುಗಳ ನಾಗನ |
ಮಾಜಗಳ ನೀರೇಭಗಳ ಪನಃಸರದ ಜಲಚರರ ||
ರಾಜಿಸುವ ನಾನಾಯುಧಂಗಳ | ತೇಜದೌರ್ವಾನಳಸ ಬಗೆಯಲಿ |
ರಾಜರಾಜಾನುಜನ ಬಲಜಲರಾಸಿ ರಂಜಿಸಿತು ||

ರಾಮನ ವಿರಹ

ವನಜವನು ಕಂಡರಸ ವನಜಾ | ನನೆಯ ಕಂಡಿರೆಯೆಂದು ಕೈರವ |
ವನು ನಿರೀಕ್ಷಿಸಿ ಕೈರವಾಕ್ಷಿಯ ಕಾಣಿರೆಲೆ ಎನುತ ||
ವಿನುತಕೋಕವ ಕಂಡು ಕೋಕ | ಸ್ತನಿಯ ಕಂಡಿರೆಯೆನುತ ಬೆಸಗೊಂ |
ಡನು ಮದಾಳಿಯ ಕಂಡು ಕೇಳಿದನಳಿಕುಳಾಳಕಿಯ ||
ಕಂಡು ಹಂಸೆಯ ಹಂಸಗಮನೆಯ | ಕಂಡುಮುಂಟೇ ಎಂದು ಕೋಗಿಲೆ |
ಗಂಡು ಕೋಕಿಲಲಲಿತನಿನದೆಯ ಕಾಣಿರೆಲೆ ಎಂದು ||
ಮಂಡಲಿಯ ಮಧುರಧ್ವನಿಯ ಗಿಳಿ| ವಿಂಡಿನಲಿ ಕಲಕೀರವಚನದ |
ಹೆಂಡತಿಯ ನೀಂ ಕಾಣಿರೆಲೆ ಎಂದರಸ ಬೆಸಗೊಂಡ ||

2 ಮೈರಾವಣನ ಕಾಳೆಗ

ಇದೂ ಭಾಮಿನೀಷಟ್ಪದಿಯಲ್ಲಿ ಬರೆದಿದೆ; ಸಂಧಿ 4, ಪದ್ಯ 296.

ರಾವಣನು ರಾಮನನ್ನು ಸೋಲಿಸಲಿಕ್ಕೆ ಪಾತಾಳಲಂಕೆಯಲ್ಲಿರುವ ಮೈರಾವಣನ ಸಹಾಯವನ್ನು ಬೇಡಲು ಅವನು ನಿದ್ರೆಮಾಡುತ್ತಿದ್ದ ರಾಮಲಕ್ಷ್ಮಣರನ್ನು ಪಾತಾಳಲಂಕೆಗೆ ಒಯ್ದು ಕಂಕಣಾದೇವಿಯ ಗುಡಿಯಲ್ಲಿ ಸೆರೆಯಿಟ್ಟನು. ಈ ಸಂಗತಿಯನ್ನು ಹನುಮಂತನು ವಿಭೀಷಣನಿಂದ ತಿಳಿದು ಪಾತಾಳಲಂಕೆಗೆ ಹೋಗಿ ಮೈರಾವಣನನ್ನು ಯುದ್ಧದಲ್ಲಿ ಕೊಂದು ನೀಲಮೇಘನಿಗೆ ಪಟ್ಟವನ್ನು ಕಟ್ಟಿ ರಾಮಲಕ್ಷ್ಮಣರನ್ನು ಬೆಳಗಾಗುವುದರೊಳಗೆ ಪಾಳೆಯಕ್ಕೆ ಕರೆದುಕೊಂಡು ಬಂದನು—
ಎಂಬುದೇ ಇದರ ಕಥಾಗರ್ಭ.

ಗ್ರಂಥಾವತಾರದಲ್ಲಿ ರಾಮಸ್ತುತಿ ಇದೆ. ಬಳಿಕ ಕವಿ ಶಿವ, ಬ್ರಹ್ಮ, ಗಣೇಶ, ಸರಸ್ವತಿ, ಪರಮಹಂಸವಿದ್ಯಾಶಂಕರಗುರು[1], ವಾಲ್ಮೀಕಿ ಇವರುಗಳನ್ನು ಹೊಗಳಿದ್ದಾನೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ಚಂದ್ರೋದಯ

ಓಡಿದುದು ರವಿಕಿರಣಪಗಲಕೆ | ಝಾಡಿಸಿತು ಬಲುತಿಮಿರ ತಾರೆಗೆ |
ಮೂಡಿದುವು ಗಗನದಲಿ ಮೊಗಗುಂದಿದುವು ಕಮಲಗಳು ||
ಜೊಡೊಡೆಯೆ ರವಿವಕ್ಕಿ ಖಗಕುಲ | ಗೂಡ ಸಾರಲು ಚಂದ್ರಮನ ಗೆಳೆ |
ಮೂಡಿ ನಕ್ಕುವು ಕುಮುದ ವಾರಿಧಿ ಹಿಗ್ಗೆ ಪರುಷದಲಿ ||

---

1 ಈ ಗುರು ಶೃಂಗೇರಿಯವನಾದ ಪಕ್ಷದಲ್ಲಿ ಇವನ ಕಾಲವು 14ನೆಯ ಶತಮಾನದ ಮಧ್ಯಭಾಗವಾಗುತ್ತದೆ. ಕವಿ ಆಕಾಲದವನು ಎಂದು ಕೆಲವರು ಭಾವಿಸಬಹುದು. ಆದರೆ ಕುಮಾರವ್ಯಾಸನನ್ನು ಸ್ಮರಿಸುವುದರಿಂದ ಅಷ್ಟು ಹಿಂದಣವನಲ್ಲ ಎಂದು ತಿಳಿಯಬೇಕಾಗಿದೆ.

ಕಂಕಣಾದೇವಿಯ ಗುಡಿ

ಕೊಂಡದೋಕುಳಿಯಾಡುವರನುರಿ । ಗೆಂಡದೊಳು ಹೊರಳುವರ ಮಿಗೆ ಶರಿ ।
ಗೆಂಡದೊಳು ಮಿಾಯುವರನುರಿಯೊಳು ಹೊಕ್ಕು ಹೊರಡುವರ ||
ಕಂಡಗಳ ಕೊಯ್ದಿಡುವ ಕರುಳಿನ । ದಂಡೆಗಳ ತೆಗೆತೆಗೆದು ಮುಡಿಸುವ ।
ಗಂಡುಗಲಿದಾನವರ ನೆರವಿಯ ನೋಡುತ್ತೈತಂದ ||

ರಣರಂಗ

ಹರಿವ ರಕುತದ ಸುರಿವ ಕರುಳಿನ | ದುರುದುರಿಪ ಕಂಡಗಳ ಮುಂದಲೆ ।
ಬಿರಿದ ಗಾಯದ ಮುಱಿವುಗಳ ನೆಣವಸೆಯ ತೊರಳೆಗಳ ||
ತೆರಳಿ ಜೋಲುವ ತೊವಲ ಜಿಗಿಯೊಳು । ಹೊರಳುವರೆಜೀವದ ಭಟಾಳಿಯು ।
ನರಳುವತಿವೇದನೆಯೊಳೊಪ್ಪಿತು ರೌದ್ರರಣರಂಗ ||

---

ಕೋಟೇಶ್ವರ. ಸು. 1500

ಈತನು ಜೀವಂಧರಷಟ್ಪದಿಯನ್ನು ಬರೆದಿದ್ದಾನೆ. ಇವನು ಜೈನ ಕವಿ; ಇವನ ತಂದೆ ತುಳುದೇಶದ ಬಯಿದೂರ ಸೇನಾಪತಿಯಾದ ತಮ್ಮಣ ಸೆಟ್ಟಿ, ತಾಯಿ ರಾಮಕ್ಕ, ಅಣ್ಣ ಸೋಮೇಶ, ತಮ್ಮ ದುರ್ಗ. ತಾನು ಸಂಗೀತಪುರದಾಸ್ಥಾನರಾಜಶ್ರೇಷ್ಠಿಯಾದ ಕಾಮಣಸೆಟ್ಟಿಯ ಅಳಿಯನೆಂದು ಹೇಳಿಕೊಂಡಿದ್ದಾನೆ. ಇವನ ಗುರು ಬೆಳುಗುಳದ ಪಂಡಿತಯೋಗಿಯ ಶಿಷ್ಯನಾದ ಪ್ರಭಾಚಂದ್ರ; ದೇವರು ಸಂಗೀತಪುರದ ನೇಮಿಜಿನೇಶ; ಸ್ವಾಮಿ "ಗಂಡುಗಲಿಗಳ ಗಂಡ ಮಂಡಳೇಶ್ವರ ಹೈವನೃಪಸುತ" ಸಂಗೀತಪುರದ ದೊರೆ ಸಂಗಮ. ಈ ಸಂಗಮನ ಅಜ್ಞಾನುಸಾರವಾಗಿ ಗ್ರಂಥವನ್ನು ರಚಿಸಿದಂತೆ ಹೇಳುತ್ತಾನೆ. ಈ ಕವಿ ಸ್ತುತಿಸುವ ಗುರುಪರಂಪರೆಯಲ್ಲಿ ಕೊನೆಯವನು ವಿಜಯಕೀರ್ತಿಯ ಶಿಷ್ಯನಾದ ಶ್ರುತಕೀರ್ತಿ. ಮದರಾಸ್ ಪ್ರಾಚ್ಯಕೋಶಾಲಯದಲ್ಲಿರುವ ಬಿಳಿಗಿಯತಾಲ್ಲೂಕಿನ ಒಂದು ಶಾಸನದಿಂದ ಈ ಶ್ರುತಕೀರ್ತಿ ಸಂಗಮನಿಗೆ ಗುರುವಾಗಿದ್ದನೆಂದೂ ಇವನ ಶಿಷ್ಯಪರಂಪರೆಯಲ್ಲಿ 5 ನೆಯವನು ಕರ್ಣಾಟಕಶಬ್ದಾನುಶಾಸನಕಾರನಾದ ಭಟ್ಟಾಕಳಂಕನು (1604) ಎಂದೂ ತಿಳಿವುದರಿಂದ ಈ ಶ್ರುತಕೀರ್ತಿಯ ಸಮಕಾಲದವನಾದ ಕೋಟೇಶ್ವರನ ಕಾಲವು ಸುಮಾರು 1500 ಆಗಬಹುದು.

ಈಕವಿ ಹಿಂದಣ ಕವಿಗಳಲ್ಲಿ ಜನ್ನ, ನೇಮಿಚಂದ್ರ, ಹೊನ್ನ, ಹಂಪರಸ, ಅಗ್ಗಳ, ರನ್ನ, ಗುಣವರ್ಮ, ನಾಗವರ್ಮ ಇವರುಗಳನ್ನು ಸ್ಮರಿಸುತ್ತಾನೆ.

ಇವನ ಗ್ರಂಥ

**ಜೀವಂಧರಷಟ್ಪದಿ**

ಇದು ಭಾಮಿನೀಷಟ್ಪದಿಯಲ್ಲಿ ಬರೆದಿದೆ; ನಮಗೆ ದೊರೆತ ಅಸಮಗ್ರ ಪ್ರತಿಯಲ್ಲಿ 9 ಸಂಧಿಗಳೂ 10ನೆಯ ಸಂಧಿಯಲ್ಲಿ 118 ಪದ್ಯಗಳೂ ಇವೆ. ಈ ಗ್ರಂಥದಲ್ಲಿ ಜೀವಂಧರನ ಕಥೆ ಹೇಳಿದೆ. ಗ್ರಂಥಾವತಾರದಲ್ಲಿ ಜಿನಸ್ತುತಿ ಇದೆ. ಬಳಿಕ ಕವಿ ಸಿದ್ಧಾದಿಗಳು, ರತ್ನತ್ರಯ, ಸರಸ್ವತಿ, ಯಕ್ಷಯಕ್ಷಿಯರು ಇವರುಗಳನ್ನು ಸ್ಮರಿಸಿ, ಅನಂತರ ಕೊಂಡಕುಂದ, ಸಮಂತಭದ್ರ, ಪಂಡಿತಮುನಿ, ಧರ್ಮಭೂಷಣ, ಭಟ್ಟಾಕಳಂಕ, ದೇವಕೀರ್ತಿ, ಮುನಿಭದ್ರ, ಲಲಿತಕೀರ್ತಿ, ವಿಜಯಕೀರ್ತಿ, ಶ್ರುತಕೀರ್ತಿ ಈ ಗುರುಗಳನ್ನು ಹೊಗಳಿದ್ದಾನೆ. ಈ ಗ್ರಂಥದಿಂದ ಕವಿಗೆ ಸಂಬಂಧಿಸಿದ ಒಂದು ಪದ್ಯವನ್ನು ಉದ್ಧರಿಸಿ ಬರೆಯುತ್ತೇವೆ—

ತುಳುವಮಹಾದೇಶದೊಳು ಬಯಿದೂ | ರೊಳಗೆ ಸೇನಾಪತಿಯ ದಾಸಿಯ |
ಇಳೆಗೆ ಸೇವ್ಯನೆನಿಪ್ಪ ತಮ್ಮಣಸೆಟ್ಟಿಯಂಗನೆಯು ||
ಜಳಜಮುಖಿರಾಮಕ್ಕಗಾದರ | ಕುಳತಿಲಕಸೋಮೇಶ ಕವಿಜನ |
ನಿಳಯಕೋಟೀಶ್ವರನು ಸದ್ಗುಣದುರ್ಗನೆಂಬವನು ||

---

**ಆನಂದಬಸವಲಿಂಗಶಿವಯೋಗಿ. ಸು. 1500**

ಈತನು ಮಾಚಿದೇವಮನೋವಿಲಾಸವನ್ನು ಬರೆದಿದ್ದಾನೆ. ಇವನು ವೀರಶೈವಕವಿ. ತೋಂಟದಸಿದ್ಧಲಿಂಗನನ್ನೂ (ಸು. 1470) ಅವನ ಶಿಷ್ಯ ಬೋಳಬಸವನನ್ನೂ ಸ್ತುತಿಸಿ ಗ್ರಂಥವನ್ನು ಆರಂಭಿಸಿರುವುದರಿಂದ ಕವಿ ಬೋಳಬಸವನ ಶಿಷ್ಯನಾಗಿರಬಹುದೆಂದು ತೋರುತ್ತದೆ. ಹಾಗಿದ್ದಪಕ್ಷದಲ್ಲಿ ಕವಿಯ ಕಾಲವು ಸುಮಾರು 1500 ಆಗಬಹುದು.

ಇವನ ಗ್ರಂಥ

**ಮಾಚಿದೇವಮನೋವಿಲಾಸ**

ಇದು ಗದ್ಯರೂಪವಾಗಿದೆ; ಪ್ರಕರಣ 34. ಇದರಲ್ಲಿ ಮಡಿವಳಮಾಚಿದೇವನ ಮನೋಭಾವವನ್ನು ಅನುಸರಿಸಿ ವೀರಶೈವಸಿದ್ಧಾಂತವು ನಿರೂಪಿ

ತವಾಗಿದೆ. ಕವಿ ಅನೇಕಸಂಸ್ಕೃತಶ್ಲೋಕಗಳನ್ನು ಉದಾಹರಿಸಿ ಅವು ಗಳಿಗೆ ಟೀಕೆಯನ್ನು ಬರೆದಿದ್ದಾನೆ. ಗ್ರಂಥಾವತಾರದಲ್ಲಿ ಬಸವಸ್ತುತಿ ಇದೆ. ಬಳಿಕ ಕವಿ ಶಿವ, ವೀರಭದ್ರಾಪರಾವತಾರವಾದ ಮಾಚಿದೇವ, ತೋಂಟದಸಿದ್ಧಲಿಂಗ, ಬೋಳಬಸವ ಇವರುಗಳನ್ನುಸ್ತುತಿಸಿ

ಶ್ರೀಮದಮಂಪಾನಂದಸಂದೋಹಮಂದಿರಸುಂದರಾಕೃತಿಗಂಗಸಂಗವಿನಿರ್ಮುಕ್ತೋ ಲಿಂಗಾಂಗಿಜಂಗಮಪ್ರಿಯನಿಜಾನಂದಬಸವಲಿಂಗಾಭಿಸಂಜ್ಞಿಕೋ ಮಹಾಸಿದಂ ಕೃತವಾನ್ ಬುಧಭೂಷಣಂ ಮಾಚಿದೇವಮನೋವಿಲಾಸಂ

ಎಂದು ತನ್ನ ಸಂಗತಿಯನ್ನು ಹೇಳಿ ಗ್ರಂಥವನ್ನು ಆರಂಭಿಸಿದ್ದಾನೆ. ಪ್ರಕರಣಗಳ ಕೊನೆಯಲ್ಲಿ ಈ ಗದ್ಯವಿದೆ—

ಇತಿ ಶ್ರೀವೇದವೇದಾಂತಶಿವಾಗಮಸ್ಮೃತಿಪುರಾಣೇತಿಹಾಸಸಾರಭೂತ ವೀರಶೈವಾಚಾರಸಾರೋದ್ಧಾರೇ ಶ್ರೀಮದಾನಂದಬಸವಲಿಂಗಶಿವಯೋಗಿವಿರಚಿತೇ ಶಿವಾಧಿಕ್ಯಕಥನೇ ಮಾಚಿದೇವಮನೋವಿಲಾಸೇ.

---

## ವಿರತಮಹಲಿಂಗದೇವ. ಸು. 1500

ಈತನು ಗುರುಬೋಧಾಮೃತವನ್ನು ಬರೆದಿದ್ದಾನೆ. ಇವನು ವೀರಶೈವಕವಿ. ನಮಗೆ ದೊರೆತ ಈ ಗ್ರಂಥದ ಪ್ರತಿ ಶಕ 1557ನೆಯ ಭಾವ ವರ್ಷದಲ್ಲಿ (1634) ಪ್ರತಿಮಾಡಲ್ಪಟ್ಟಂತೆ ತಿಳಿವುದರಿಂದ ಗ್ರಂಥವು ಆ ಕಾಲಕ್ಕೆ ಹಿಂದೆ ಹುಟ್ಟಿರಬೇಕು. ಕವಿಯ ಕಾಲವು ಸುಮಾರು 1500 ಆಗಿರಬಹುದೆಂದು ಊಹಿಸುತ್ತೇವೆ.

ಇವನ ಗ್ರಂಥ

### ಗುರುಬೋಧಾಮೃತ

ಇದು ತ್ರಿಪದಿಯಲ್ಲಿ ಬರೆದಿದೆ; ಕೆಲವು ಕಂದವೃತ್ತವಚನಗಳೂ ಇವೆ; ಒಟ್ಟು 1021 ; ಸ್ಥಲ 5. ಈಗ್ರಂಥವು ಗುರುಶಿಷ್ಯಸಂವಾದರೂಪವಾಗಿ ವೈರಾಗ್ಯವನ್ನು ಬೋಧಿಸುತ್ತದೆ. ಆದಿಯಲ್ಲಿ ಶಿವಸ್ತುತಿ ಇದೆ. ಇದರಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ--

ಮಧುವಿನೊಳು ನೊಣ ಬಿದ್ದು । ಒದೆದುಕೊಂಬಂದದಲಿ ।
ಉದಯಾಸ್ತಮಾನ ಕುದಿದು ಕೋಟಲೆಗೊಂಬ ।
ಅಧಮಗೆಲ್ಲಿಯದು ನಿಜಸುಖ ॥

ಬಿಂದುವಮಾತ್ರದ ಸುಖಕೆ | ಮುಂದೆ ಪರ್ವತದಷ್ಟು |
ದಂದುಗವ ಹೊತ್ತು ತೊಳಲಿತೊಳಲಿ ಭವಭವದೊ |
ಳೊಂದಿ ಸಾವವಗೆ ಸುಖವುಂಟೇ ||
ತಲೆಹುಳುತ ನಾಯಂತೆ | ಲಲನೆಯರ ಮೋಹಕ್ಕೆ |
ಸಲೆ ಮಚ್ಚಿಕೊಂಡು ಇಹಪರವನಱಿಯದಿಹ |
ಮಲಧಾರಿಗೆತ್ತಣದು ನಿತ್ಯ ||
ಒಲ್ಲೆನೆನೆ ಒಲಿಸುವುದು | ಬಲ್ಲೆನೆಂಬರ ಮಱವೆ |
ಯಲ್ಲಿ ಕೆಡಹುವುದು ಮನವಿದುಂ ನೂಱಾಂತ |
ರೆಲ್ಲರಂ ತಲೆಯನರಿವುದು ||
ನಾಯ ಮೊಲೆವಾಲು ತಾ | ನಾಯಕುನ್ನಿಗೆ ಯೋಗ್ಯ |
ಪಾಯಸಕೆ ಯೋಗ್ಯವಹುದೆ ಲೋಭಿಯ ಧನವು |
ನಾಯ ಮೊಲೆವಾಲತೆಱನಂತೆ ||

---

## ಸಿಂಗಿರಾಜ. ಸು 1500

ಈತನು ಮಲಬಸವರಾಜಚಾರಿತ್ರವನ್ನು ಬರೆದಿದ್ದಾನೆ. ಇವನು ವೀರಶೈವಕವಿ; ಇವನ ಗುರು ದೇಮಿದೇವ. ಮಹಾದೇವಿಯಕ್ಕನ ಪುರಾಣ ವನ್ನು ಬರೆದ ಚೆನ್ನಬಸವಾಂಕನು (ಸು. 1550) ಇವನ ಹೆಸರನ್ನು ಹೇಳುವು ದರಿಂದ ಇವನು ಅವನಿಗಿಂತ ಹಿಂದೆ ಇದ್ದಿರಬೇಕೆಂಬುದು ಸ್ಪಷ್ಟವಾಗಿದೆ. ಆದರೆ ಎಷ್ಟು ಹಿಂದೆ ಇದ್ದನೋ ತಿಳಿಯದು. ಸುಮಾರು 1500 ರಲ್ಲಿ ಇದ್ದಿರಬಹುದೆಂದು ಊಹಿಸುತ್ತೇವೆ. ಇವನ ಹೆಸರು ಶೃಂಗಿರಾಜ ಎಂದೂ ದೊರೆಯುತ್ತದೆ.

ಇವನ ಗ್ರಂಥ

### ಮಲಬಸವರಾಜಚಾರಿತ್ರ

ಇದು ವಾರ್ಧಕಷಟ್ಪದಿಯಲ್ಲಿ ಬರೆದಿದೆ; ಅಲ್ಲಲ್ಲಿ ಇತರಷಟ್ಪದಿ ಗಳೂ ಇವೆ; ಸಂಧಿ 48, ಪದ್ಯ 1907. ಇದಕ್ಕೆ ಸಿಂಗಿರಾಜಪುರಾಣ ಎಂಬ ಹೆಸರೂ ಉಂಟು. ಇದರಲ್ಲಿ ಬಸವನ 88 ಪವಾಡಗಳು ವರ್ಣಿತವಾಗಿವೆ. ಇವುಗಳಲ್ಲಿ ಪ್ರತಿವಾದಮುಖದಿಂ ನೆಗಳ್ದ ಪವಾಡಗಳು 64, ಭಕ್ತಿಚಾರಿತ್ರ ಭಾವನಿಷ್ಠಾಪವಾಡಗಳು 24 ಎಂದು ಹೇಳಿದೆ. ಗ್ರಂಥಾವತಾರದಲ್ಲಿ ಕಾಶೀ ವಿಶ್ವನಾಥ, ವೀರೇಶ ಇವರುಗಳ ಸ್ತುತಿ ಇದೆ.

ಬಸವನ ಸಮಕಾಲದವನಾದ ಅನಿಮಿಷೇಂದ್ರನ ವಿಷಯವನ್ನು ಹೇಳುವಾಗ ಕವಿ ಅನಿಮಿಷೇಂದ್ರನು ಪಟ್ಟದಕಲ್ಲ ದೊರೆಯಾದ ತ್ರೈಲೋಕ್ಯಚೂಡೇಶನ ಮತ್ತು ಮಹಲೇಖೆಯ ಮಗನೆಂದು ಹೇಳಿ ಪಟ್ಟದಕಲ್ಲಿಗೆ ಆ ಹೆಸರು ಬರಲು ಕಾರಣವನ್ನು ಹೀಗೆ ಹೇಳುತ್ತಾನೆ—ಮಲಪ್ರಹಾರಿಯ ತಟದಲ್ಲಿ ನೃಪಕುಲಾನ್ವಯಪು, ಎಂದರೆ, ನಂದರು 9 ಪಟ್ಟವನ್ನೂ ಗುಪ್ತರು 10 ಪಟ್ಟವನ್ನೂ ಮೊರೆಯರು 21 ಪಟ್ಟವನ್ನೂ ಕಾದಂಬರು 27 ಪಟ್ಟವನ್ನೂ ಚಾಳುಕ್ಯರು 28 ಪಟ್ಟವನ್ನೂ ಆ ಸ್ಥಳದಲ್ಲಿ ಪಡೆದುದರಿಂದ ಅದಕ್ಕೆ ಪಟ್ಟದಕಲ್ಲು ಎಂಬ ನಾಮಧೇಯವಾಯಿತು. ಬಸವನ ಕಾಲದಲ್ಲಿ ಬಿಜ್ಜಳನ ಆಸ್ಥಾನದಲ್ಲಿ ದಾಮೋದರನೇ ಮೊದಲಾದ ಕೆಲವರು[1] ಕೊಂಡೆಯರು (ಚಾಡಿಕೋರರು) ಇದ್ದರೆಂದು ಕವಿ ಹೇಳುತ್ತಾನೆ. ಇವರು ಬಸವನಿಗೆ ವಿರೋಧಿಗಳಾಗಿದ್ದಿರಬಹುದು.

ಇವನ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ:

**ಅರಮನೆ.**

ಭೋಗದಾಗರವೊ ಸೊಬಗಿನ ಸೀಮೆಯೋ ಸುಖದ |
ಸಾಗರವೊ ಸಿರಿಯ ನೆಲೆವನೆಯೊ ಮಿಗೆ ಸೌಭಾಗ್ಯ |
ದಾಗಿನೊಬ್ಬುಳಿಯೊ ಚದುರಿನ ಬೀಡೊ ಮನ್ಮಥನ ಗರುಡಿಯೋ ಸುದತಿರತ್ನ ||
ಪೂಗ ತೀವಿದ ಕರಂಡಗೆಯೊ ವಾಗ್ದೇವಿಯನು |
ರಾಗದಾಶ್ರಯವೊ ಭಾವಿಸಿ ಪೊಗಳ್ವಡತಿ ಚೋದ್ಯ |
ಮಾಗಿ ಪೆಂಪೇಱಿ ಸೊಂಪಂ ಬೀಱುತಾರಾಜಸದನ ಕಣ್ಗೆಸೆದಿರ್ದುದು ||

**ಆನೆ**

ಪಟ್ಟಮದಗಜವ ತರಿಸೆಂದೊಡಾ ಯಂತ್ರಗಳ |
ಬಿಟ್ಟು ಚರಣದ ನಿಗಳಮಂ ಮದವನೇಱಿಸಿಯೆ |
ಕಟ್ಟಿ ವಜ್ರಾಂಗಿಪಕ್ಕರಿಕೆಗಳನಳವಡಿಸಿ ಕೊಟ್ಟು ಬಱಿಕೈಗಲಗನು ||

---

1. ದಾಮೋದರ, ಪೆದ್ದಿಭಟ್ಟ, ಅಜಕುಂಡಲದ ನೇಮಿ, ರಾಘವ, ಶಿಖಾಸೂತ್ರದಪ್ಪರಸ, ಅಣ್ಣಪ್ಪೊಪಾಧ್ಯಾಯ, ಸಾಮವೇದಿ ಅಪ್ಪಣ್ಣ, ಜನ್ನಪಂಡಿತ, ಸೋಮೋಪಾಧ್ಯಾಯ, ಚತುರ್ವೇದಿ ಕೃಷ್ಣ, ರಸಕವಿರಾಮ, ಎಗ್ಗದ ಸಂಗಿಭಟ್ಟ, ಕೂಚಿಭಟ್ಟ, ಕಾಳಿಮರಸ, ಕೇಶವ, ದುಷ್ಟನಾಚಿರಾಜ, ಖಚಪ, ಬಾಚರಸ, ಹೆಮ್ಮಾಡಿ ಕರಿಯಮಾಧವ, ಚೋಳಿಮಾಂಕ, ಹರಿಭಟ್ಟ, ಪೋಚರಸ, ಗೊಳವೆದ್ದಿಮೇಳಿ, ಮೂರ್ಖರಾಚರಸ, ಧೂರ್ತಬಿಟ್ಟರಸ. ಇವರೊಳಗೆಲ್ಲಾ ಬ್ರಾಹ್ಮಣರೆಂದು ತೋರುತ್ತದೆ.

ಹೆಟ್ಟಿ ದಂತಕ್ಕೆ ಸೂಸಂಗಿಗಳ ನೆಡೆವಿಡಡೆ|
ಕಟ್ಟಿ ಮೊಗರಂಬಜಾಪಿಗತಿಲಕಹೊರಜೆಗಳ |
ಲಿಟ್ಟು ಹೊರಜೆಯು ಬಲಿದು ಸುಂಟೆಚಮರಿಗಳಿಟ್ಟು ನಿಂದ ಮದಗಜನೊಪ್ಪಿತು ||

ಕೊಂಡೆಯರ ಪರಿಭವ.

ಕೊಂಡೆಯದ ಕೋಂಟೆ ನಿಂದಕದಗಳಿನೆಡೆಗೆಡೆಗೆ |
ತೊಂಡಿನಟ್ಟಳೆ ಕುಚಿತ್ತದ ಕೊತ್ತಳಂ ಸಜೆಯೊ |
ಳಂಡಿದಾಳ್ವೇರಿ ಕುಹಕದ ಕೆನೆಗಳಟಮುಟವ ಡೆಂಕಣೆಗಳಿಂದೊಪ್ಪುವ ||
ಲೆಂಡದುರ್ಮಾರ್ಗದುರ್ಗವ ಬಸವರಾಜೇಂದ್ರ |
ಕೊಂಡು ಖಳರಾಜನಂ ಕೊಲಲವನ ಹೇಡಿಸತಿ |
ಮುಂಡೆಮುಸುಕಿಕ್ಕಿ ಗೂಳೆಯನೆತ್ತಿದಂತೆ ಕೊಂಡೆಯರ ಮುಖರಸವಳಿತುದು ||
ಕುಲದೆದೆ ಬಿರಿಯಿತು ಕುಗ್ಗಿದುವೆತ್ತಿದ |
ತಲೆಗಳು ನಿಂದೆಯ ಮಂದಿರ ಬೆಂದುವು |
ಚಲದೊಡಲೊಡೆದುವು ತರ್ಕದ ಬಾಯ್ಗಳಿಗಿಕ್ಕಿದುವಗಳಿಗಳು ||
ಒಳಗೊಡೆದುವು ಕರ್ಮದ ಕರು ಬಲ್ಮೆಗ |
ಳಳಿದುವು ಕೊಂಡೆಯರಂಡಲೆಗರ್ಭಗ |
ಳಿಳಿದುವು ಬಸವನ ಭಕ್ತಿಯ ಭಾವದ ಭಾಸುರತೆಯ ಕಂಡು ||

---

ಈಶ್ವರಕವಿ.[1] ಸು 1500

ಈತನು ಕವಿಜಿಹ್ವಾಬಂಧನವನ್ನು ಬರೆದಿದ್ದಾನೆ. ಇವನು ಬ್ರಾಹ್ಮಣಕವಿಯೆಂದು ತೋರುತ್ತದೆ. ಇವನ ತಂದೆ ಕಚ್ಚುಟೇಶ ಇವನಿಗೆ ಅಭಿನವಕೇಶಿರಾಜ ಅಥವಾ ಅಭಿನವಕೇಶವ ಎಂಬ ಬಿರುದಿದ್ದಂತೆ ತಿಳಿಯುತ್ತದೆ.

ನವಜನರ ಕುಜೆತು ಛಂದೋ | ರ್ಣವದೊಳ್ ಕನ್ನಡದ ಪ್ರಾಸುವಡಿಭೇದಗಳಂ |
ವಿವರವಿಡಿದಷ್ಟಭಾಷಾ | ಕವಿವರಬಾಣಾಖ್ಯನೊಲಿದು ಪೇಳ್ದಂ ಮುದದಿಂ ||
ಶ್ರೀಕಾರಗಳಿಲ್ಲದ ಪದ | ಲೋಕದೊಳಂ ಸಲ್ಲದೆಂದ ಕವಿಘಶೆವರ್ಮಂ |

---

1. ನಮಗೆ ಇವನ ಗ್ರಂಥವು ಪೂರ್ತಿಯಾಗಿ ದೊರೆಯಲಿಲ್ಲ. 2ನೆಯ ಪರಿಚ್ಛೇದವು ಮಾತ್ರ ದೊರೆಯಿತು. ಇದರಲ್ಲಿ ಹೇಳಿರುವ ವಿಷಯಗಳು ಹೊರತು ಉಳಿದ ಅಂಶಗಳನ್ನೆಲ್ಲಾ ಮಿ|| ಕಿಟ್ಟೆಲ್ ನಾಗವರ್ಮನ ಛಂದೋಂಬುಧಿಗೆ ಬರೆದಿರುವ ಉಪೋದ್ಘಾತದಿಂದ (ಪುಟ 61) ತೆಗೆದುಕೊಂಡಿದ್ದೇವೆ.

ಎಂಬ ಪದ್ಯಗಳಿಂದಲೂ, "ಇತಿ ಬಾಣಕವಿವಿನಿರ್ಮಿತಮಪ್ಪ ಛಂದೋಂಬುರಾಶಿಪ್ರಥಮಪರಿಚ್ಛೇದಸ್ಸಮಾಪ್ತಃ" ಎಂಬ ಗದ್ಯದಿಂದಲೂ ಕವಿಗೆ ಬಾಣ, ಫಣಿವರ್ಮ ಎಂಬ ನಾಮಾಂತರಗಳೂ ಅಷ್ಟಭಾಷಾಕವಿವರ ಎಂಬ ಬಿರುದೂ ಗ್ರಂಥಕ್ಕೆ ಛಂದೋಂಬುಧಿ ಎಂಬ ಹೆಸರೂ ಇದ್ದಂತೆ ತಿಳಿಯುತ್ತದೆ. ಈಯಂಶಗಳನ್ನು ಮ.|| ಕಿಟ್ಟೆಲ್ ಹೇಳಿಲ್ಲ. ಅಭಿನವಕೇಶಿರಾಜ ಎಂದು ಹೇಳಿಕೊಂಡಿರುವುದರಿಂದ ಈತನು ಕೇಶಿರಾಜನಿಗಿಂತ (ಸು. 1260) ಈಚೆಯವನೆಂಬುದಂತೂ ಸ್ಪಷ್ಟವಾಗಿಯೇ ಇದೆ. ಆಂಧ್ರಕವಿಗಳು ಉಪಯೋಗಿಸುವ ವಡಿಗಳನ್ನು ವಿವರಿಸುವುದರಿಂದ ಅಪ್ಪಕವಿಯು (ಸು.1450) ಕಾಲಕ್ಕೆ ಈಚೆಯವನೆಂದು ತೋರುತ್ತದೆ. ಸುಮಾರು 1500 ರಲ್ಲಿ ಇದ್ದಿರಬಹುದು. ಕನಕದಾಸನು (ಸು. 1550) ಪ್ರಾಸುವಡಿಗಳನ್ನು ಉಪಯೋಗಿಸಿ ತನ್ನ ಮೋಹನತರಂಗಿಣಿಯನ್ನು ಬರೆವಂತೆ ಹೇಳುತ್ತಾನೆ.

ಇವನ ಗ್ರಂಥ.

### ಕವಿಜಿಹ್ವಾಬಂಧನ.

ಇದು ಮುಖ್ಯವಾಗಿ ಛಂದಸ್ಸನ್ನು ಬೋಧಿಸುವ ಗ್ರಂಥ; ಕಂದವೃತ್ತಗಳಲ್ಲಿ ಬರೆದಿದೆ: ಪರಿಚ್ಛೇದ 4.

1ನೆಯ ಪರಿಚ್ಛೇದದಲ್ಲಿ ಗಣಗಳೂ ಅವುಗಳ ವರ್ಣವಾಹನಮೈತ್ರೀವೈರಕುಲದೇವತಾಫಲಾದಿಗಳೂ ಹೇಳಿವೆ. 2ನೆಯದರಲ್ಲಿ ಪ್ರಾಸುವಡಿಗಳು ನಿರೂಪಿಸಲ್ಪಟ್ಟಿವೆ. ಪ್ರಾಸುಗಳಲ್ಲಿ ಸಿಂಹ, ಗಜ, ವೃಷಭ, ಶರಭ, ವಾಸವಾಕ್ಷಿ, ಮಿತ್ರ, ಮಹಾಪ್ರಾಣ ಮೊದಲಾದ 28 ಭೇದಗಳನ್ನು ಹೇಳುತ್ತಾನೆ. ವಡಿಗಳಲ್ಲಿ ಪದ್ಮ, ಗರುಡ, ಸಾರಂಗ, ಹಂಸ, ಪರಮಾರ್ಥ, ಕಾಕ ಎಂಬ 6 ಭೇದಗಳನ್ನೂ ಮತ್ತು ಸ್ವರ, ಸರಸ, ಏಕವರ್ಣ, ಸಂಯುಕ್ತಾಕ್ಷರ, ವರ್ಗ ಎಂಬ 5 ಭೇದಗಳನ್ನೂ ಹೇಳುತ್ತಾನೆ. 3ನೆಯದರಲ್ಲಿ ಅಕ್ಷರಗಳೂ, ಅವುಗಳ ಕುಲ, ಅಧಿದೇವತೆ ಮೊದಲಾದ ವಿಷಯಗಳೂ ಹೇಳಿವೆ. 4ನೆಯದರಲ್ಲಿ ಭಾವ, ಅಲಂಕಾರ, ಕಂದಷಟ್ಪದಿಗಳ ಲಕ್ಷಣ ಮುಂತಾದ ಅಂಶಗಳು ಹೇಳಿವೆ.

ಹೆಂಡತಿಯನ್ನು ಸಂಬೋಧಿಸಿ ಕವಿ ಗ್ರಂಥವನ್ನು ಬರೆದಿರುವಂತೆ ತೋರುತ್ತದೆ. ಇದರಿಂದ ಒಂದೆರಡು ಪದ್ಯಗಳನ್ನು ಉದಾಹರಿಸುತ್ತೇವೆ:

ಉಸಿರಿಲ್ಲದ ತನುವವೋಲ್ ಭಾ|ವಿಸಲುಂ ಪ್ರಾಸಿಲ್ಲದಿರ್ಪ ಪದಪದ್ಯಂಗಳ್ |
ಒಸೆದದನು ಹೇಟಿ ಕೇಳಿದ | ರಸಿಕಗಾಳಯುಷ್ಯಮಾನಹಾನಿಗಳಕ್ಕುಂ ||

ಅಧಿಕತರರೂಪಸಂಯುತೆ | ಮಧುರಾಂಕಿತವಚನರಚನೆ ನೀನಱಿವುದಿದಂ |
ಸುಧೆಗಡಲ ಪೞಿವ ಗುಣಯುತೆ|ವಿಧುಮುಖಿ ಲಲಿತಾಂಗಿ ವಾಸನಾಕ್ಷಿಪ್ರಾಸಂ ||

---

## ಶ್ರೀಪಾದರಾಯ. ಸು. 1500

ಈತನು ಕೀರ್ತನೆಗಳನ್ನು ಬರೆದಿದ್ದಾನೆ. ಇವನು ಮಾಧ್ವಕವಿ; ಮುಳುಬಾಗಿಲಲ್ಲಿರುವ ಪದ್ಮನಾಭತೀರ್ಥಮಠಕ್ಕೆ ಸ್ವಾಮಿಯಾಗಿದ್ದನು. ಈತನ ಬೃಂದಾವನವೂ ಅಲ್ಲಿಯೇ ಇದೆ. ಈತನು ವಿಜಯನಗರದ ದೊರೆಯಾದ ಸಾಳುವ ನರಸಿಂಗರಾಜನ (1487-1493) ವಿಶ್ವಾಸಕ್ಕೆ ಪಾತ್ರನಾಗಿದ್ದಂತೆ ತೋರುತ್ತದೆ.[1] ವಿಜಯನಗರದ ಕೃಷ್ಣದೇವರಾಯನ (1509-1529) ಕಾಲದಲ್ಲಿದ್ದ ವ್ಯಾಸರಾಯನೆಂಬ ಮಾಧ್ವಗುರುವಿಗೆ ಈತನು ವಿದ್ಯಾಗುರು. ಈತನ ಕೀರ್ತನೆಗಳಲ್ಲಿ ರಂಗವಿಠಲ ಎಂಬ ಅಂಕಿತವಿದೆ. ಒಂದನ್ನು ಉದಾಹರಿಸುತ್ತೇವೆ—

ರಾಗ ಮುಖಾರಿ. ಚಾಪುತಾಳ.

ಪಲ್ಲವಿ|| ಕಾಳೆಬೆಳದಿಂಗಳು ಈಸಂಸಾರ ಕತ್ತಲೆ ಬೆಳದಿಂಗಳು ||
ಉಂಟಾದ ಕಾಲಕ್ಕೆ ನಂಟರು ಇಷ್ಟರು | ಬಂಟರಾಗಿ ಬಾಗಿಲ ಕಾವರು |
ಉಂಟಾದ ದಿನ ತಪ್ಪಿ ಬಡತನ ಬಂದರೆ | ಒಂಟೆಯಾಂಗೆ ಮೋರೆದಿರುಗುವರಯ್ಯ ||1
ಹೆಡಗೆಯ ಭಕ್ಷ್ಯಕ್ಕೆ ಗಡಿಗೆಯ ತುಪ್ಪಕ್ಕೆ | ಸಡಗರದಿಂದುಂಬ ಸವಿನಂಟರು |
ಸಡಗರದಿನ ತಪ್ಪಿ ಬಡತನ ಬಂದರೆ | ಸಿಡಿಮಿಡಿಮಾಡುತ್ತ ನಡೆನಡೆಯೆಂಬರು ||2||
ಏೞುದಂಡಿಗೆ ನೂಱಾಱುಸಾವಿರ | ಮೂೞುದಿನದ ಭಾಗ್ಯಝುಣಝುಣವು |
ನೂಱಾಱುಸಾವಿರದಂಡವ ಕೊಟ್ಟರೆ | ರಂಗವಿಠಲನನೆ ಸರಿಯೆಂಬರಯ್ಯ ||3||

---

## ಶ್ರೀನಾಥ. ಸು 1500

ಸೌಂದರವಿಳಾಸವನ್ನು ಬರೆದ ಅಣ್ಣಾಜಿ (ಸು. 1600) " ಕ್ಷೋಣಿಯೊಳು ಕವಿರಾಜಮಕುಟಮಣಿ ಶ್ರೀನಾಥ " ಎಂದು ಈತನನ್ನು ಸ್ತುತಿಸಿದ್ದಾನೆ. ಇವನು ಆವ ಗ್ರಂಥವನ್ನು ಬರೆದಿದ್ದಾನೆಯೋ ತಿಳಿಯದು. ಇವನ ಕಾಲವು ಸುಮಾರು 1500 ಆಗಿರಬಹುದೆಂದು ಊಹಿಸುತ್ತೇವೆ.

---

1. ಶ್ರೀಪಾದರಾಯಾಷ್ಟಕ:—
ಶ್ರೀಮನ್ನೀರನೃಸಿಂಗರಾಜನೃಪತೇರ್ಭೂದೇವಕೃತ್ಯಾವ್ಯಥಾಂ ।
ದೂರೀಕೃತ್ಯ ತದರ್ಪಿತೋಜ್ವಲಮಹಾಸಿಂಹಾಸನೇ ಸಂಸ್ಥಿತಃ॥

## ನಿಜಗುಣಶಿವಯೋಗಿ. ಸು. 1500

ಈತನು ಅನುಭವಸಾರ, ಅರುವತ್ತುಮೂವರ ತ್ರಿಪದಿ, ಕೈವಲ್ಯಪದ್ಧತಿ, ಪರಮಾನುಭವಬೋಧೆ, ಪರಮಾರ್ಥಗೀತೆ, ಪರಮಾರ್ಥಪ್ರಕಾಶಿಕೆ, ವಿವೇಕಚಿಂತಾಮಣಿ ಈ ಗ್ರಂಥಗಳನ್ನು ಬರೆದಿದ್ದಾನೆ.

ಇವನು ವೀರಶೈವಕವಿ. ಇವನಿಗೆ ನಿಜಗುಣಾರಾಧ್ಯ ಎಂಬ ಹೆಸರೂ ಉಂಟು. ಶಂಭುಲಿಂಗನ ಬೆಟ್ಟದ ಸುತ್ತುಮುತ್ತಿನ ನಾಡಿಗೆ ಅರಸಾಗಿದ್ದು ಬಳಿಕ ವಿರಕ್ತನಾಗಿ ಆ ಬೆಟ್ಟದಲ್ಲಿ ನಿಂತು ಶಿವಯೋಗತತ್ಪರನಾಗಿದ್ದನೆಂದು ಹೇಳುತ್ತಾರೆ. ಇವನ ಗ್ರಂಥಗಳಲ್ಲೆಲ್ಲಾ ಶಂಭುಲಿಂಗನ ಅಂಕಿತವು ದೊರೆಯುತ್ತದೆ. ಈತನ ವಿವೇಕಚಿಂತಾಮಣಿಯಲ್ಲಿ ಉತ್ತರಮೀಮಾಂಸೆಯ ವಿಚಾರವನ್ನು ಹೇಳುವಾಗ ಸುಮಾರು 1250 ರಲ್ಲಿದ್ದ ಅಮಲಾನಂದನಿಂದ ರಚಿತವಾದ ಕಲ್ಪತರುವೆಂಬ ವ್ಯಾಖ್ಯಾನದ ಹೆಸರನ್ನು ಹೇಳುವುದರಿಂದ ಕವಿ ಆ ಕಾಲಕ್ಕೆ ಈಚೆಯವನು ಎಂಬುದು ವ್ಯಕ್ತವಾಗುತ್ತದೆ. ಇದರಿಂದ ಬಸವನ (ಸು. 1160) ಕಾಲದಲ್ಲಿದ್ದ ನಿಜಗುಣನೇ ಈತನು ಎಂಬ ಹೇಳಿಕೆ ನಿರಾಧಾರವಾದುದೆಂದು ತಿಳಿಯುತ್ತದೆ. 1655 ರಲ್ಲಿ ರಾಜಶೇಖರವಿಳಾಸವನ್ನು ಬರೆದ ಷಡಕ್ಷರದೇವನು ಈತನನ್ನು ಸ್ತುತಿಸುವುದರಿಂದ ಇವನು ಆ ಕಾಲಕ್ಕೆ ಹಿಂದೆ ಇದ್ದಿರಬೇಕು. ಎಷ್ಟುಹಿಂದೆ ಇದ್ದಿರಬಹುದೋ ತಿಳಿಯದು. ಇವನು ಚೆನ್ನಸದಾಶಿವಯೋಗಿಯ ಶಿವಯೋಗಪ್ರದೀಪಿಕೆಗೆ ಪರಮಾರ್ಥಪ್ರಕಾಶಿಕೆ ಎಂಬ ವ್ಯಾಖ್ಯಾನವನ್ನು ಬರೆದಿದ್ದಾನೆ. ಈ ಚೆನ್ನಸದಾಶಿವಯೋಗಿಯ ಕಾಲವಾವುದೋ ತಿಳಿಯದು. ಇದು ತಿಳಿದಿದ್ದರೆ ಕವಿಯ ಕಾಲವನ್ನು ನಿರ್ಧರಿಸುವುದಕ್ಕೆ ಸ್ವಲ್ಪ ಮಟ್ಟಿಗೆ ಸಹಕಾರಿಯಾಗುತ್ತಿದ್ದಿತು. ಇವನ ಕಾಲವು ಸುಮಾರು 1500 ಆಗಿರಬಹುದೆಂದು ಊಹಿಸುತ್ತೇವೆ.

ಇವನನ್ನು ಅನೇಕವೀರಶೈವಕವಿಗಳು ತಮ್ಮ ಗ್ರಂಥಗಳಲ್ಲಿ ಸ್ತುತಿಸಿದ್ದಾರೆ.

ಇವನ ಗ್ರಂಥಗಳಲ್ಲಿ

### 1 ಅನುಭವಸಾರ.

ಇದು ತ್ರಿಪದಿಯಲ್ಲಿ ಬರೆದಿದೆ; ಸಂಧಿ 8, ಸೂತ್ರ 46, ಪದ್ಯ 535.

ಇದರಲ್ಲಿ " ಸಕಲವೇದಾಂತಸಾರವನೆ ತಿಳಿವಂತೆ ಸಾಧಕರಿಗೆ ಬರೆವೆನು " ಎಂದು ಕವಿ ಹೇಳುತ್ತಾನೆ. ಗ್ರಂಥದ ಸ್ವರೂಪವನ್ನೂ ಉತ್ಕೃಷ್ಟತೆಯನ್ನೂ ಈ ಪದ್ಯಗಳಲ್ಲಿ ಹೇಳುತ್ತಾನೆ-

ಇದು ವೇದಶಿರದರ್ಥ|ವಿದು ಸಕಲಶಾಸ್ತ್ರೋಕ್ತ |
ವಿದು ಪುರಾತನರ ಮತವಿದು ಗುರೂಕ್ತಿ ಮ | ತ್ತಿದು ತತ್ವವಿದರ ನಿಜಮಾರ್ಗ ||
ರನ್ನಗನ್ನಡಿಯಲ್ಲಿ|ತನ್ನ ಮೊಗದಂದಮಂ |
ಚೆನ್ನಾಗಿ ಕಾಣ್ಬತೆಱನಂತೆ ನಿಜವಿದಱೊ | ಳಂ ನಾಡೆ ತೋರ್ಪುದಖಿಳರ್ಗೆ ||

ಇದು ಗುರುಶಿಷ್ಯ ಸಂವಾದರೂಪವಾಗಿದೆ. ಆರಂಭದಲ್ಲಿ ಶಂಭುಲಿಂಗನ ಸ್ತುತಿ ಇದೆ. ಬಳಿಕ ಪಾರ್ವತಿ, ಗಣಪತಿ, ಷಣ್ಮುಖ, ವೀರಭದ್ರ, ನಂದೀಶ್ವರ, ಗಣಗಳು ಇವರುಗಳನ್ನು ಕವಿ ಸ್ತುತಿಸಿದ್ದಾನೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ—

ಎಂತು ನಿರ್ಮಳಮುಕುರ|ದಂತರಾಳದೊಳು ಜಗ |
ವೆಂತು ತರು ಸರಸಿಯೊಳು ಪೊಳೆದು ತೋಱುತಿಹು|ದಂತೆಲ್ಲವಾತ್ಮನೊಳುತೋರ್ಕು||
ಪರಮಾತ್ಮನೆಂಬರ್ಕ ನಿರೆ|ಪ್ರಕೃತಿವಣೆಯಲ್ಲಿ|
ಸ್ಫುರಿಸುತಿಹುವಖಿಳತತ್ವವನಲನಂ | ತಿರಲು ಸರ್ವೇಶನವಿಕಾರಿ ||
ಪಳಿಕಿನೊಳು ತೋರ್ಪ ಕೆಂ|ಬೆಳಗು ಪುಸಿದಾಸಣವೆ |
ತಿಳಿಯೆ ದಿಟವೆಂತುಪಾಧಿಯೆ ನಿಜವಾತ್ಮ | ನೊಳು ಚಲನೆ ಮಿಥ್ಯೆಯೆನೆ ಕೇಳು ||
ಪಾರಮಾರ್ಥಿಕವಲ್ಲ|ದಾರಕ್ತತೆಯನೆ ತಾಂ |
ಕಾರಣಂಬಡೆದ ಕೆಂಬೆಳಗೆನಿಪ್ಪ ವ್ಯವ | ಹಾರಮುಂ ಮಿಥ್ಯೆಯಹುದಂತೆ ||
ಪುಸಿಯಾದ ಗಮನದಿಂ|ದೆಸೆವಖಿಳಭೋಗಮಂ |
ಪುಸಿಯೆಂಬುದಾಯ್ತು ನೀನೆ ತದ್ಗಮನಮಂ | ಪುಸಿಯೆಂಬೆಯಾದ ಕತದಿಂದ ||
ಇಂತುಪಾಧಿಗೆ ಸತ್ಯ|ವೆಂತು ಘಟಿಸುವುದು ವೇ |
ದಾಂತಮತದಲ್ಲಿ ಪೇಳ್ದಂತೆ ಸರ್ವಮಂ | ಭ್ರಾಂತಿಮಯವೆಂದು ತಿಳಿ ಪುತ್ರ ||

## 2 ಕೈವಲ್ಯಪದ್ಧತಿ.

ಇದು ಹಾಡುಗಳ ರೂಪವಾಗಿದೆ; ಸ್ಥಲ 5, ವಚನಂಗಳ ಜೋಡು 174, ಪದಗಳು 648. ಇದನ್ನು ಕವಿ ಆಬಾಲಯುವ್ವನವೃದ್ಧರಿಗಾಯಾಸವಿನಿತಿಲ್ಲದಂತೆ ಸಮ್ಯಗ್ಜ್ಞಾನಿಗಳೊಡಂಬಡುವಂತೆ ಸಕಲವೇದವೇದಾಂತಾಗಮಸ್ಮೃತಿಪುರಾ

ಣೇತಿಹಾಸಸೂತ್ರಾದಿಶಾಸ್ತ್ರಸಮ್ಮತದಿಂ ಪುರಾತನಗೀತಾನುಗುಣ್ಯವೆನಿಸಿ ಮೃದುಮಧುರ ಲಕ್ಷಣಯುಕ್ತವಾಗಿ ರಚಿಸಿರುವಂತೆ ಹೇಳುತ್ತಾನೆ. ಒಂದೊಂದು ಹಾಡಿನಲ್ಲಿ ಯೂ ಶಂಭುಲಿಂಗನ ಅಂಕಿತವಿದೆ. ಈ ಗ್ರಂಥದಿಂದ ಒಂದು ಹಾಡನ್ನು ತೆಗೆದುಬರೆಯುತ್ತೇವೆ-

**ರಾಗ ಮಾಳವ.**

ಪಲ್ಲವಿ|| ಯೋಗಿಗೆ ಸಕಲಸಂಸಾರಸಂಗವದಿಲ್ಲ |
ವಾಗಿ ತಿಳಿವರದು ಪುಸಿ ನೋಡು ರಮಣಿ ||
ಪರವಿದ್ಯೆಯೆಂಬ ಕುಲವನಿತೆಯುಂಟಗಲದ |
ಪರಿತೋಷವೆಂಬ ಮೋಹದಣುಗನುಂಟು |
ವಿರತಿಯೆಂಬನುಕೂಲಜನವುಂಟು ಕ್ಷಮೆಯೆಂಬ |
ಚರನುಂಟು ಶಾಂತಿಯೆಂಬ ಸಖನ ಸರಸನುಂಟು ||1||
ನುತಭಕ್ತಿಯೆಂಬ ಮಾತೆಯುಂಟುಸುಚರಿತ್ರವೆಂಬ |
ಪಿತನುಂಟು ಸತ್ಯವೆಂಬ ಕುವರಿಯುಂಟು |
ಹಿತವಾದ ನಂಬುಗೆಯೆಂಬಾತ್ಮಒನರಸಿಯುಂಟು |
ಮತಿಯೆಂಬ ದೇಹಮುಂಟು ವಿಚಾರವೆಂಬ ಕ್ಷೇತ್ರಮುಂಟು ||2||
ದಾಸಿಯುಂಟಹಿಂಸೆಯೆಂಬ ದಾಸನುಂಟಸ್ತೇಯವೆಂಬ |
ಲೇಸನೀವ ಧರ್ಮವೆಂಬ ವಾಹನಮುಂಟು |
ಭಾಸುರಮೈಕ್ರಾರ್ಯ್ಯದಿಯೆಂಬ ಪೌತ್ರರುಂಟು |
ಮುಕ್ತಿಯೆಂಬ ದೇಶಮುಂಟು ಶಂಭುಲಿಂಗವೆಂಬ ಗುರು ತನಗುಂಟು ||3||

**3 ಪರಮಾರ್ಥಗೀತೆ.**

ಇದು ಪ್ರಾಯಿಕವಾಗಿ ಲಲಿತರಗಳೆಯಲ್ಲಿದೆ ; ಕೆಲವು ಕಂದಗಳೂ ಇವೆ;ಗತಿ 11, ಕಂದ 32, ನಿರೂಪಣೆ 121, ಚರಣ 1496. ಗ್ರಂಥವು ಗುರುಶಿಷ್ಯಸಂವಾದರೂಪವಾಗಿದೆ. " ಶ್ರುತಿಪುರಾಣೇತಿಹಾಸಸ್ಮೃತಿಯ ರ್ಥವನಿಂತು ಕನ್ನಡಿಸಿದೆಂ " ಎಂದು ಕವಿ ಹೇಳುತ್ತಾನೆ. ಕೊನೆಯಲ್ಲಿ ಈ ಗದ್ಯವಿದೆ—

ಸ್ವಸ್ತಿ ಸಮಸ್ತಸುರವಿಸರಮಕುಟಮಣಿಗಣಕಿರಣಪ್ರಚುರಪ್ರವಾಹತರಂಗಿಣೀ ತಟವಿರಾಜಿತಪದರಾಜೀವಯುಗಳಶ್ರೀಶಂಭುಸತ್ಕೃಪಾಕಟಾಕ್ಷಸಾಂದ್ರಚಂದ್ರಿಕಾಸಂ

ಕ್ರಾಂತನಿರಸ್ತನಿಖಿಲಸಂಸಾರಶ್ರಮವಿಸ್ಫಾರಿತನಿಜಾನಂದಾಸ್ವಾದನಾಸಕ್ತಚಿತ್ತೋಪೇತ ನಿಜಗುಣಾಹ್ವಯೇನ ಶಿವಯೋಗಿನಾ ವಿರಚಿತಮಪ್ಪ ಪರಮಾರ್ಥಗೀತಸಾಮಪ್ರಕರಣಂ.

ಪದಲಕ್ಷಣವಿಲ್ಲದಿದ್ದರೂ ಈ ಗ್ರಂಥವು ವಿಶೇಷವಾದ ಅರ್ಥವನ್ನು ಒಳಕೊಂಡಿರುವುದರಿಂದ ಸೇವ್ಯವೆಂದು ಕವಿ ಈ ಪದ್ಯದಲ್ಲಿ ಹೇಳುತ್ತಾನೆ-

ಪದಲಕ್ಷಣಮಿಲ್ಲದೊಡಿಂ | ತಿದು ಸೇವ್ಯಂ ಜಗದೊಳರ್ಥಮುಳ್ಳುದಱಿಂದಂ |
ವಿದಿತಂ ಪೊನ್ನುಳ್ಳಂ ಗುಣ | ದೊದವಾವುದುಮಿಲ್ಲದಿರ್ದೊಡಂ ಗುಣಿಯಲ್ತೇ ||

ಈ ಗ್ರಂಥದಿಂದ ಒಂದೆರಡು ಗೀತಗಳನ್ನು ತೆಗೆದು ಬರೆಯುತ್ತೇವೆ-

ವರತನುಜನೆ ವಾಕ್ಕದು ನಾಲ್ಕಕ್ಕು | ಪರೆಪಶ್ಯಂತ್ಯಾದಿಗಳೆನಿಸಿಕ್ಕು |
ನುಡಿವಾತನ ತನುಮಧ್ಯದೊಳೆಂದು | ಬಿಡದಿಹ ನಾದವೆ ತಿಳಿ ಪರೆಯೆಂದು |
ನಾಭಿಯೊಳದು ನಿಷ್ಕಲವರ್ಣತೆಯು | ಶೋಭೆವಡೆಯೆ ಪಶ್ಯಂತಿಯೆ ತಿಳಿಯ |
ಹೃದಯದೊಳದು ನುಡಿವಿಚ್ಚಿಯೊಳೊಂದೆ | ಒದವಿದ ಮಧ್ಯಮೆಯಪ್ಪುದು ಮುಂದೆ|
ಅದು ಕೇಳಸುವಿಂದುರ ಮೊದಲಾಗಿ | ಪದವೆಂಟಱೊಳಕ್ಷರರೂಪಾಗಿ |
ಪುಟ್ಟುವ ವಚನವೆ ವೈಖರಿಯಕ್ಕು | ನೆಟ್ಟನೆ ಸಂಸೃತಿಗದು ಮೊದಲಕ್ಕು ||
ಬಱಿಕಿಂತೀವಿಷಯಂಗಳು ನೋಡೆ | ಘಱಿಲನೆ ಮೋಹಿಸಿ ಕೆಡುವುವು ಕೂಡೆ |
ಮುಗಿಲೊಡ್ಡಣೆ ಮಿಂಚಿನ ಕಳೆಯಂತೆ | ಮೃಗತೃಷ್ಣೆಯ ಕನಸಿನ ಸಿರಿಯಂತೆ |
ಸುರಧನುಬೊಬ್ಬುಳಿಕೆಯ ಬಗೆಯಂತೆ | ತೆರೆದೀಪಜ್ವಾಲೆಯ ತೆಱನಂತೆ |
ಸುಱಿಗಾಳಿಯ ಮಂಜಿನ ಪರಿಯಂತೆ | ಮಱೆಗಲ್ಲಿನ ನೆೞಲಂಚೆಗಳಂತೆ |
ಯುವತಿಯ ಚಿತ್ತದ ಕಾಹುರದಂತೆ | ವಿವಿಧವಿಷಯವೆಲ್ಲವು ತಾವಿಂತೆ |
ಅದಱಿಂ ದೃಢಮತಿಯವಱೊಳು ಸಲ್ಲ | ಮುದವಣುಮಾತ್ರದನಿತುಮಲ್ಲಿಲ್ಲ ||

## 4 ಪರಮಾನುಭವಬೋಧೆ.

ಇದು ಸಾಂಗತ್ಯದಲ್ಲಿ ಬರೆದಿರುವಂತೆ ತೋರುತ್ತದೆ ; ಸಂಧಿ 6, ಸೂತ್ರ 122, ಪದ 985. ಇದರಲ್ಲಿ "ಅದ್ವೈತತತ್ವವನು ಪ್ರಕಟಿಸುವೆನು ಬೋಧಗತಿಯಿಂದ" ಎಂದು ಕವಿ ಹೇಳುತ್ತಾನೆ. ಗ್ರಂಥವು ಯಾಜ್ಞವಲ್ಕ್ಯ ಮೈತ್ರೇಯಿಗಳ ಸಂವಾದರೂಪವಾಗಿದೆ. ಇದರ ಉತ್ಕೃಷ್ಟತೆಯನ್ನು ಕವಿ ಈ ಪದ್ಯದಲ್ಲಿ ಹೇಳಿದ್ದಾನೆ-

ಇದು ವೇದವೇದಾಂತದೊಳು ಗೋಪ್ಯವಾದರ್ಥ|ವಿದು ಪುರಾಣಾಗಮಸ್ಮೃತಿಸಾರ|
ಇದು ಪರಮಾರ್ಥದ ತಿರುಳು ತತ್ವರಹಸ್ಯ|ವಿದು ಪ್ರಾಕೃತವೆ ಎಲ್ಲರಱಿಯಲ್ಕೆ ||

ಆರಂಭದಲ್ಲಿ ಶಂಭುಲಿಂಗಸ್ತುತಿ ಇದೆ. ಬಳಿಕ ಕವಿ ಪಾರ್ವತಿ, ಗಣಪತಿ, ಗಣಗಳು, ಸಿರಾಭೂರಿಗುರು, ಶುಕ, ವಾಮದೇವ ಇವರುಗಳನ್ನು ಸ್ಮರಿಸಿದ್ದಾನೆ. ಕೊನೆಯಲ್ಲಿ ಪರಮಾರ್ಥಗೀತೆಯ ಅಂತ್ಯದಲ್ಲಿರುವ ಗದ್ಯವೇ ಇದೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ಕಾದ ಕಬ್ಬಿನದೊಂದು ಗಟ್ಟಿಯೊಳಗಣಿತ | ಮಾದ ಕಿಡಿಗಳುದಯಿಸುವಂತೆ |
ಭೇದರೂಪಿನ ಜಗಜ್ಜೀವರಕಲ್ಪಿತ | ನಾದೊರ್ವನಲ್ಲಿ ಮಸಗಿ ತೋರ್ಕುಂ ||
ಕೊಡನೀಗ ಮೃತ್ತಿಕೆಯೊಡನೇಕವಹುದೆಂಬ | ನುಡಿಯಂತೆ ತನಗೆ ಪರಮನೊಳು |
ಬಿಡದೊಂದುತನವೆಂಬುದಿದು ಕಾರ್ಯಕಾರಣ | ಪಿಡಿದುದಲ್ಲೊಂದು ಕಾಣಲುಬೇಕು |
ಹವಣಿಸೆ ನೀಲೋತ್ಪಲವಿದೆಂಬ ವಚನದಂ | ತವಿರಳಸೌಖ್ಯವಾರಿಧಿಯನು |
ತವೆ ತನ್ನ ನಿಜವೆಂಬುದಿದು ತನುಗುಣ ಗುಣಿ | ತ್ವವನುಂಟುಮಾಡವೆಂದಱುವುದು ||
ಜರೆಮೃತಿಯೊಡಲಿಂಗೆ ಹರಣಕ್ಕೆ ಕ್ಷುಧೆತೃಷ್ಣೆ | ಪರಿಶೋಕಮೋಹವಾಬುದ್ಧಿಗೆ |
ಅರಿವರ್ಗವಾಮನಸಿಗೆ ನಿಸ್ತರಂಗಚಿ | ಜ್ಜ್ವರಧಿಯೊಳವು ತೋಱುರವುವೇ ||
ತನು ರುಜೆಯಾಗರವತಿದುಃಖಸಾಗರ | ತನು ತಾಪಕ್ಲೇಶಾದಿಗಳ ಗೊತ್ತು |
ತನು ಮೂಲವದಱಿಂದಖಿಳದುಃಖವೆಲ್ಲಕ್ಕೆ | ತನುಭಾವವ ಜಯೆ ದುಃಖದ ಕೇಡು ||

## 5 ಅರುವತ್ತುಮೂವರ ತ್ರಿಪದಿ.

ಇದಕ್ಕೆ ಪುರಾತನರ ತ್ರಿವಿಧಿ ಎಂಬ ಹೆಸರೂ ಉಂಟು ; 77 ಪದ್ಯಗಳಿವೆ. ಈ ಗ್ರಂಥವು ಶಿವಭಕ್ತರಾದ ಅರುವತ್ತುಮೂವರ ಸ್ತುತಿರೂಪವಾಗಿದೆ. ಆರಂಭದಲ್ಲಿ ಶಂಭುಲಿಂಗ, ಪಾರ್ವತಿ, ಗಣಗಳು ಇವರುಗಳ ಸ್ತುತಿ ಇದೆ. ಇದರಿಂದ ಒಂದೆರಡು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

### ಪಾರ್ವತಿ.

ಇಂಗಡಲೊಳಿಂಪು ಬೆಳು|ದಿಂಗಳೊಳು ತಂಪು ಕುಸು |
ಮಂಗಳೊಳು ಕಂಪು ಬೆರೆದಂತೆ ಪರಮನೊಳು | ಪಿಂಗದಗಸುತೆಗೆ ನತನಪ್ಪೆ ||

### ಪುರಾತನರು.

ಕೊರಳ ವಿಷಮಂ ಕಂಡು|ಮರಣವಹುದೆಂದು ಭವ |
ಹರನನಾರಯ್ಯುತಿಹ ರುದ್ರಪಶುಪತಿಗೆ | ಶರಣೆಂದು ಸಿದ್ಧಿವಡೆವೆನು ||
ಮೃಡನ ದೃಷ್ಟಿಯೊಳು ರುಜೆ|ಯಡರಿತೆಂದತಿಭೀತಿ |
ವಿಡಿದು ನಿಜಲೋಚನವನಿತ್ತ ಕಣ್ಣಪ್ಪ | ನಡಿಗಳಂ ಪೊತ್ತು ಬಿಡದಿರ್ಪೆ ||

## 6 ವಿವೇಕಚಿಂತಾಮಣಿ.

ಇದು ಗದ್ಯಗ್ರಂಥ; ಪ್ರಕರಣ 10, ವಿಷಯಗಳು 765, ಗ್ರಂಥಸಂಖ್ಯೆ 6000. ಇದರಲ್ಲಿ ಆಗಮಾಮ್ನಾಯಸಮ್ಮತದಿಂ ಸ್ಮೃತಿಪುರಾಣೇತಿಹಾಸಪುರಾತನೋಕ್ತಿಗಳನುಸಾರದಿಂದಸುಭವಿಗಳಹುದೆಂಬಂತೆ ಸ್ವಕಪೋಲಕಲ್ಪಿತಮಲ್ಲದ ಸಾರತರಮಾದ ಸತ್ಯಾರ್ಥಂಗಳನೆ ಸಂಗ್ರಹಿಸಿ ಮುನ್ನುಳ್ಳ ಮಣಿಪುಂಜವಂ ರಂಜನೆಗೆಯ್ದು ತರವಱಿತು ಸರಂಗೊಳಿಸಿ ನವೀನಕಂಠಾಭರಣವೆನಿಸುವಂತೆ ಮುಮುಕ್ಷುಜನಂಗಳೀ ಜಗತ್ತಿನ ಸ್ಥಿತಿಗತಿಗಳಾವ ಪ್ರಕಾರದಿಂದಿಹುವೆಂದಱಿಸಿ ಬೞಿಲದಭಿವ್ಯಕ್ತಮಾಗಿಲ್ಲಯೆ ಸಲ್ಲೀಲೆಯಿಂದಱಿತು ಕೃತಾರ್ಥರಾಗಲೆಂದು ಬೆಳುಗನ್ನಡಮಾದ ವಚನರಚನೆಗಳಿಂ ಕವಿ ಹೇಳಿದ್ದಾನೆ. ಇದರ ಪ್ರಯೋಜನವನ್ನು

> ಶ್ರೀಮದನಂತಸೂರಿಜನಸಮ್ಮತದಿಂದೆಸೆವೀವಿವೇಕಚಿಂ |
> ತಾಮಣಿಯೆಂಬ ಸತ್ಕೃತಿಯನಾಲಿಸಿದಗ್ಗೆಡೆಗೊಂಡ ಸಂಶಯ |
> ಸ್ತೋಮವಡಂಗಿ ಬೇಱೆ ಬಹುಶಾಸ್ತ್ರವನೋದುವ ಬಾಧೆ ಪಿಂಗಿ ಸ |
> ತ್ಪ್ರೇಮದೊಳಕ್ಕುಮಿಷ್ಟಫಲಸಿದ್ಧಿಸಮುನ್ನತಿ ಶಂಭುಲಿಂಗದಿಂ ||

ಎಂಬ ಪದ್ಯದಲ್ಲಿ ಕವಿ ಸೂಚಿಸಿದ್ದಾನೆ. ಗ್ರಂಥಾಂತ್ಯದಲ್ಲಿ ಪರಮಾನುಭವಬೋಧೆ, ಪರಮಾರ್ಥಗೀತೆ ಇವುಗಳ ಕೊನೆಯಲ್ಲಿರುವ ಗದ್ಯವೇ ಇದೆ.

ಈ ಗ್ರಂಥದಲ್ಲಿ ತಿಳಿಯಬೇಕಾದ ಅನೇಕವಿಷಯಗಳನ್ನು ಹಲವು ಗ್ರಂಥಗಳಿಂದ ಸಂಗ್ರಹಿಸಿ ಬರೆದಿರುವುದರಿಂದ ಇದು ಬಹಳ ಉಪಕಾರಕವಾಗಿದೆ. ಇದರಿಂದ ಸ್ವಲ್ಪಭಾಗವನ್ನು ತೆಗೆದು ಬರೆಯುತ್ತೇವೆ---

### ವೇದಾಂತ ಶಾಸ್ತ್ರ.

ಬೞಿಕೆರಡನೆಯ ಭಾಗವೆ ಬ್ರಹ್ಮಾರ್ಥಪ್ರತಿಪಾದಕತ್ವದಿಂದುತ್ತರಮೀಮಾಂಸೆಯೆನಿಸಿಕೊಂಡು ವ್ಯಾಸಸೂತ್ರರೂಪದಿಂದೆಂಟಧ್ಯಾಯಮಾಗಿಹುದದಱೊಳಗೆ ಪೂರ್ವದ ನಾಲ್ಕಧ್ಯಾಯವೆ ದೇವಕಾಂಡವೆನಿಸಿಕೊಂಬುದದಱಲ್ಲಿ ಮಂತ್ರವಾದದಂತೆ ದೇವತಾದಿಲಕ್ಷಣವೆ ಬಲಭದ್ರರಾಮನಿಂ ಪ್ರತಿಪಾದಿಸಲ್ಪಟ್ಟಿತು. ಬೞಿಕುತ್ತರಮಾದ ನಾಲ್ಕಧ್ಯಾಯವೆ ಬ್ರಹ್ಮಕಾಂಡವೆನಿಸಿಕೊಂಬುದಾಸೂತ್ರಕ್ಕೆ ವ್ಯಾಸತಾತ್ಪರ್ಯಾನುಸಾರ ಬ್ರಹ್ಮಾತ್ಮೈಕ್ಯಪ್ರತಿಪಾದಕಮಾಗಿ ಶಂಕರಗುರುಭಗವತ್ಪಾದಾಚಾರ್ಯರಿಂದಧ್ಯಾಸಭಾಗಪೂರ್ವಕಮಾಗಿ ವೇದಾಂತಭಾಷ್ಯಂ ಗೈಯಲ್ಪಟ್ಟಿತು. ಬೞಿಕಾಭಾಷ್ಯಕ್ಕೆ ಟೀಕಾರೂಪಮಾಗಿ ವಿವರಣಾಚಾರ್ಯರಿಂ ವಿವರಣಂ ಮಾಡಲ್ಪಟ್ಟಿತು. ಮತ್ತಮಾ

ಶಂಕರಭಾಷ್ಯಕ್ಕೆ ವೃತ್ತಿ—ಪಂಚಪಾದಿಕೆ, ರಾಮಾನಂದೀಯ, ಬ್ರಹ್ಮವಿದ್ಯಾಭರಣ ಮುಂತಾದ ಅನೇಕವ್ಯಾಖ್ಯಾನಂಗಳ್ ತಚ್ಛಿಷ್ಯರಿಂ ರಚಿಸಲ್ಪಟ್ಟುವು ಆ ಶಂಕರಭಾಷ್ಯಕ್ಕೆ ತಾತ್ಪರ್ಯಬೋಧಕವಾಗಿ ವಾಚಸ್ಪತಿಮಿಶ್ರರಿಂ ಭಾಮತಿಯೆಂಬ ವ್ಯಾಖ್ಯಾನಂ ಮಾಡಲ್ಪಟ್ಟಿತದಕೆ ಕಲ್ಪತರುವೆಂಬ ವ್ಯಾಖ್ಯಾನವದಕೆ ಕೌಸ್ತುಭವೆಂಬ ಟೀಕೆ ಇಂತು ಸಿದ್ಧಾಂತಿತಮಾದ ಗ್ರಂಥಜಾತವೆ ವೇದಾಂತಶಾಸ್ತ್ರವೆನಿಸಿಕೊಳುತಿರ್ಕುಂ

## ವಿಘ್ನತ್ರಯ ಪರಿಹಾರ.

ಅಂತಾಮುಕ್ತಿಗೆ ಪ್ರತಿಬಂಧಂಗಳಾದ ಮೂಱು ವಿಘ್ನಂಗಳನೆಂತು ನಿವಾರಿಸಲಕ್ಕುಮೆನೆ—ಶ್ರವಣಮನನನಿಧಿಧ್ಯಾಸನಂಗಳೆಂಬ ಪ್ರಾಯಶ್ಚಿತ್ತರೂಪಮಾದ ಮಂಗಳಂಗಳಿಂ ಕ್ರಮವಾಗಿ ವಿಘ್ನತ್ರಯವಳಿವುದು. ಆಪ್ತವಚನದಿಂದಾಶೌಚಶ್ರವಣವಾಗಲು ತಾನು ಸೂತಕಿಯೆಂದು ದೃಢತರವಾಗಿ ನಂಬುವಂತೆ ಪ್ರತ್ಯಗಾತ್ಮಬ್ರಹ್ಮೈಕ್ಯತಾತ್ಪರ್ಯವನವಧರಿಸುವುದೆ ಶ್ರವಣವೆನಿಸುವುದಾಗಿ ಇದಱಿಂದ ಸಂಭಾವನೆ ನಿರಾಕೃತಮಕ್ಕುಂ. ಅಂತು ಶ್ರುತಮಾದ ವೇದಾಂತಾರ್ಥಮಂ ಸದ್ಯುಕ್ತಿಸತ್ತರ್ಕಂಗಳಿಂ ಚಿಂತನಂಗೈವುದೆ ಮನನವೆನಿಸುವುದು. ಇದಱಿಂ ಸಂಶಯಭಾವನೆ ನಿವೃತ್ತಮಕ್ಕುಂ. ಆ ಶ್ರವಣಮನನಂಗಳ ದೆಸೆಯಿಂದೆ ದೃಢತರವಾಗಿ ನಿಶ್ಚಿತಮಾದರ್ಥಮಂ ನಿಶ್ಚಲಚಿತ್ತದಿಂದನುಸಂಧಾನಂಗೊಂಡು ಬ್ರಹ್ಮಾಕಾರಾಂತಃಕರಣನಾಗಿರ್ಪುದೆ ನಿಧಿಧ್ಯಾಸನವೆನಿಸುವುದು. ಇದಱಿಂ ವಿಪರೀತಭಾವನೆಯೆಂಬ ವಿಘ್ನಂ ಪರಿಹಾರಮಕ್ಕುಂ.

## ಅಜಹಲ್ಲಕ್ಷಣೆ.

ಕುಂತಾಃ ಪ್ರವಿಶಂತಿ ಎಂಬಲ್ಲಿ ಅಚೇತನಂಗಳಾದ ಕುಂತಾಯುಧಂಗಳ್ ಚೇತನಸಂಬಂಧಮಿಲ್ಲದೆ ಪ್ರವೇಶಿಸುವುದನುಪಪನ್ನಮಾಗಿ ಕುಂತಶಬ್ದಂ ತನಗೆ ವಾಚ್ಯಾರ್ಥಮಾದ ಕುಂತಾಯುಧಂಗಳಂ ಬಿಡದೆ ಕುಂತಧಾರಿಗಳಂ ಲಕ್ಷಿಪುದೆ ಅಜಹಲ್ಲಕ್ಷ್ಯಾರ್ಥಮೆನಿಸುವುದು.

## 7 ಪರಮಾರ್ಥಪ್ರಕಾಶಿಕೆ.

ಇದು ಚೆನ್ನಸದಾಶಿವಯೋಗಿಕೃತ ಶಿವಯೋಗಪ್ರದೀಪಿಕೆಗೆ ಕನ್ನಡ ವ್ಯಾಖ್ಯಾನ; ಪರಿಚ್ಛೇದ 5. ಸಂಸ್ಕೃತಜ್ಞಾನವಿಲ್ಲದ ಮೋಕ್ಷಾಪೇಕ್ಷಿಗಳಿಗೆ ಸುಲಭವಾಗಿ ತಿಳಿವಂತೆ ಈ ವ್ಯಾಖ್ಯಾನವನ್ನು ಬರೆದುದಾಗಿ ಕವಿ ಹೇಳುತ್ತಾನೆ.

## ಸುರಂಗಕವಿ. ಸು. 1500

ಈತನು ತ್ರಿಷಷ್ಟಿಪುರಾತನರ ಚರಿತ್ರೆಯನ್ನು ಬರೆದಿದ್ದಾನೆ. ಇವನು ವೀರಶೈವಕವಿ; ಇವನ ತಂದೆ ಸಂಗಮವಿಭು, ತಾಯಿ ಮಹದೇವಿ. "ಪುಲಿಗೆರೆಯ ಪುರಾಧಿಪ ಶ್ರೀಸೋಮನಾಥಭಕ್ತಿಯುಕ್ತ" ಎಂಬುದರಿಂದ ಇವನ ಸ್ಥಳವು ಪುಲಿಗೆರೆಯಾಗಿರಬಹುದು. ಈ ಸೋಮನಾಥದೇವರ ಅಂಕಿತದಲ್ಲಿ ಗ್ರಂಥವನ್ನು ಬರೆದಿದ್ದಾನೆ. ಇವನಿಗೆ ಕರ್ಣಾಟಕಕವಿಚಕ್ರವರ್ತಿ ಎಂಬ ಬಿರುದಿದ್ದಂತೆ ತಿಳಿಯುತ್ತದೆ. "ಮನುಜಸ್ತುತಿಯಂ ಬಿಟ್ಟು ಸುರಂಗಕವಿ ನಾಲಗೆಯಂ ಗಿರಿಶಂಗೆ ಮಾಱಿದಂ" ಎಂದು ಹೇಳಿಕೊಂಡಿದ್ದಾನೆ.

ಇವನ ಕಾಲವನ್ನು ನಿರ್ಧರಿಸುವುದಕ್ಕೆ ಆವ ಆಧಾರವೂ ಇಲ್ಲ. ಇವನು ಹಿಂದಣ ಕನ್ನಡಕವಿಗಳಲ್ಲಿ ಆರ ಹೆಸರನ್ನೂ ಹೇಳಿಲ್ಲ; ಇವನ ಹೆಸರೂ ಕೂಡ ಮತ್ತಾವ ಕವಿಯಿಂದಲೂ ಉಕ್ತವಾಗಿಲ್ಲ. ಆದರೆ ಬಸವ, ಚೆನ್ನಬಸವ, ಪ್ರಭುದೇವ ಇವರುಗಳನ್ನು ಸ್ತುತಿಸಿದ್ದಾನೆ; ಅಲ್ಲದೆ 1 ನೆಯ ಆಶ್ವಾಸದ 28 ನೆಯ ಪದ್ಯದಲ್ಲಿ "ಪಾಲುಂಡು ಮೇಲುಂಬುದೇ" ಎಂಬ ವಾಕ್ಯವನ್ನು ಸೇರಿಸಿದ್ದಾನೆ; ಈ ವಾಕ್ಯವು ಪಾಲ್ಕುರಿಕೆ ಸೋಮನಾಥನ (ಸು. 1195) ಸೋಮೇಶ್ವರಶತಕದಲ್ಲಿ ದೊರೆವುದರಿಂದ ಆಕವಿಯ ಕಾಲಕ್ಕಿಂತ ಇವನು ಈಚೆಯವನಾಗಿರಬಹುದು; ಎಷ್ಟು ಈಚೆಯವನೋ ಹೇಳಲು ಸಾಧ್ಯವಲ್ಲ. ಸುಮಾರು 1500ರಲ್ಲಿ ಇದ್ದಿರಬಹುದೆಂದು ತೋರುತ್ತದೆ. ಈ ವಿಷಯದಲ್ಲಿ ಹೀಗೆಯೇಸರಿ ಎಂದು ಖಂಡಿತವಾಗಿ ಹೇಳಲಾರೆವು. ಷಡಕ್ಷರಿಗೂ (1655) ಇವನಿಗೂ ಹಲವುಕಡೆ ಹೋಲಿಕೆಗಳು ದೊರೆಯುತ್ತವೆ. ಆದರೆ ಷಡಕ್ಷರಿಗಿಂತ ಈಚೆಯವನೆಂದು ನಿರ್ಧರಿಸಿ ಹೇಳುವುದಕ್ಕಾಗುವುದಿಲ್ಲ.

ಹಿಂದಣ ಸಂಸ್ಕೃತಕವಿಗಳನ್ನು ಈ ಪದ್ಯದಲ್ಲಿ ಸ್ಮರಿಸಿದ್ದಾನೆ:—

ಭಲ್ಲಟನೋಜೆ ಬಾಣನ ಜಸಂ ಭವಭೂತಿಯ ಸಂದ ಬಿನ್ನಣಂ |
ಬಿಲ್ಹಣನುಕ್ತಿ ಭಾರವಿಯ ರೀತಿ ಮಯೂರನ ಬಂಧಗೌರವಂ |
ಮಲ್ಹಣನಚ್ಚಭಕ್ತಿ ವರಮಾಘನ ಜಾಣ್ನುಡಿ ದಂಡಿಯೊಳ್ಪು ವಾ |
ಗ್ವಲ್ಲಭಕಾಳಿದಾಸನ ರಸಂ ನೆಲಸಿರ್ಕೆ ಮದೀಯಕಾವ್ಯದೊಳ್ ||

ತನ್ನ ಕವಿತಾಚಾತುರಿಯನ್ನೂ ಗುಣಾದಿಗಳನ್ನೂ ಈಪದ್ಯಗಳಲ್ಲಿ ಹೇಳಿಕೊಂಡಿದ್ದಾನೆ—

ವರ್ಣಕವಸ್ತುಕಕವಿಜನ | ಕರ್ಣಾಭರಣಂ ಶಿವೈಕಸಮುದಯಪೀಯೂ |

ವಾರ್ಣವಚಂದ್ರನೆನಿಪ್ಪಂ | ಕರ್ಣಾಟಕನೀಂದ್ರನವುಮ ಸುಕವಿಸುರಂಗಂ ||
ಧರಣೀಶರ್ ಮೆಚ್ಚೆ ನಾನಾಚತುರಕಲೆಗಳಂ ತೋಱು ವಿಭ್ರಾಜಿಪಂ ಸ |
ದ್ಗುರುಪಾದಾಂಭೋಜಭೃಂಗಂ ನವರಸಕವಿತಾನರ್ತಕೀನೃತ್ಯರಂಗಂ ||
ಸರಸವ್ರಾತಾಂತರಂಗಂ ವಿಬುಧವಿನುತನಿಶ್ಶೇಷವಿದ್ಯಾಪ್ರಸಂಗಂ |
ಭರತಾಂಗಂ ಶೈವತುಂಗಂ ಪ್ರತಿಭಟಕವಿವೇಶ್ಯಾಭುಜಂಗಂ ಸುರಂಗಂ ||
ಬಿದಿ ಜಗಮಂ ನಿರ್ಮಿಸಿ ಸುಖ | ದೊದವ್ಯೆದದೆ ಚೈತ್ರನಂ ಸುಧಾಕರನಂ ನೀ |
ರದಮಂ ಸುರಂಗಕವಿಯಂ | ಪದಪಿಂದಂ ಪಡೆದು ಪರಮಸುಖಮಂ ಪಡೆದಂ ||

ಇವನ ಗ್ರಂಥ

**ತ್ರಿಷಷ್ಟಿಪುರಾತನರ ಚರಿತ್ರೆ.**

ಇದು ಚಂಪೂರೂಪವಾಗಿದೆ; ಆಶ್ವಾಸ 63. ಇದರಲ್ಲಿ ಪ್ರಸಿದ್ಧರಾದ 63 ಶಿವಭಕ್ತರ ಚರಿತ್ರವು ಹೇಳಿದೆ. ಉಪಮನ್ಯುಮುನಿ ಕಣಾದನಿಗೆ ಹೇಳಿದ ಈಚರಿತವನ್ನು ಲೈಂಗ್ಯಪುರಾಣದಲ್ಲಿದ್ದಂತೆ ತಾನು ಬರೆದುದಾಗಿ ಕವಿ ಹೇಳುತ್ತಾನೆ. ತನ್ನ ಕಾವ್ಯದ ಉತ್ಕೃಷ್ಟತೆಯನ್ನು ಈಪದ್ಯಗಳಲ್ಲಿ ತಿಳಿಸಿದ್ದಾನೆ—

ಅಲರ್ಗಳ ಕಂಪಿನಂತೆ ವಿಳಿದಾಡುವ ತುಂಬಿಯ ಬಂಬಲಂತೆ ಕಂ |
ಬೆಲರಿನ ಪೆರ್ಮೆಯಂತೆ ತನಿವಣ್ಗಳಿನೊಪ್ಪುವ ಮಾವಿನಂತೆ ಪಂ |
ಬಲಿಸುತೆ ಕಳ್ದು ನೋಡುವೆಳವೆಂಡಿರ ಕಣ್ಮಲರಂತೆ ಬಲ್ಲರಂ |
ನಲವಿನೊಳೆಯ್ದೆ ಸೋಲಿಪುದು ಕಬ್ಬಿಗರಾಳ್ದನ ಕಬ್ಬದೆಚ್ಚರಂ ||
ಶಿವಪದಭಕ್ತಿಯ ತಾಯ್ವನೆ | ನವರಸದೆಡೆ ಲಕ್ಷ್ಯಲಕ್ಷಣಂಗಳ ನೆಲೆಯಾ |
ಯ್ತವನಿಗೆ ಸುರಂಗಕವಿಯು | ತ್ಸವದಿಂದಂ ಪೇಳ್ದ ಕಾವ್ಯಸಾರೋದ್ಧಾರಂ ||
ಕಂದಂಗಳ್ ವಾಗ್ವನಿತೆಯ | ಕಂದಂಗಳ್ ಸಭ್ಯನವ್ಯಕಾವ್ಯಲಸನ್ಮಾ |
ಕಂದಂಗಳ್ ನವರಸದು | ಕ್ಕಂದಂಗಳೆನಲ್ಕೆ ಕವಿಸುರಂಗಂ ಪೇಳ್ದಂ ||

ಈ ಗ್ರಂಥದಲ್ಲಿ ಕಾವ್ಯಾಂಗಗಳು 18ನ್ನೂ ವರ್ಣಿಸುವಂತೆ ಕವಿ ಹೇಳುತ್ತಾನೆ. ಗ್ರಂಥಾವತಾರದಲ್ಲಿ ಸೋಮನಾಥಸ್ತುತಿ ಇದೆ. ಬಳಿಕ ಕವಿ ಬಸವ, ಚೆನ್ನಬಸವ, ಪ್ರಭುದೇವ, ಗಣೇಶ, ಸರಸ್ವತಿ ಇವರುಗಳನ್ನು ಕ್ರಮವಾಗಿ ಹೊಗಳಿದ್ದಾನೆ. ಆಶ್ವಾಸಗಳ ಅಂತ್ಯದಲ್ಲಿ ಈ ಗದ್ಯವಿದೆ:—

ಇದು ಸಕಲಸುರನಿಕರಮಕುಟಮಣಿಕ್ಯಮಾಲಾಮರೀಚಿಪುಂಜರಂಜಿತಪಾದಪಂಕಜಶ್ರೀಮತ್ಪಲಿಗೆರೆಯಪುರಾಧಿಪಶ್ರೀಸೋಮನಾಥಭಕ್ತಿಯುಕ್ತ ಕರ್ಣಾಟಕಕವಿಚಕ್ರವರ್ತಿವಿರಚಿತಮಪ್ಪ ತ್ರಿಷಷ್ಟಿಪುರಾತನರ ಚಾರಿತ್ರದೊಳ್.

ಈತನ ಬಂಧವು ಲಲಿತವಾಗಿಯೂ ಹೃದಯಂಗಮವಾಗಿಯೂ ಇದೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ:---

ಸಮುದ್ರ

ಹರಿಯ ನೆಲೆ ಸಿರಿಯ ತಾಯ್ಮನೆ|ಸುರಕುಜಗೆಡೆ ಪವಳದೇಳ್ಗೆ ಮುತ್ತಿನ ತಾಣಂ |
ವರಶಂಖದಿರ್ಕೆ ರತ್ನದ | ಹರವರಿಯೆಸಿಸಿತ್ತು ಬಹುಳವಾರಾವಾರಂ ||

ಕಾವೇರಿ

ಪರಿಕಿಪೊಡಿಂಪಿಂ ಗುಣ್ಪಿಂ | ಪರಮಪವಿತ್ರತೆಯನೀವ ಸೆಂಪಿಂ ತಂಪಿಂ |
ತರುಗಳ ಸೊಂಪಿಂ ಕಂಪಿಂ | ವರಕಾವೇರೀಸಮಾಖ್ಯನದಿಯೆಸೆದಿರ್ಕುಂ ||

ಆರಾಮ

ಅಲರ್ದಲಗೊಂಚಲಿಂ ಸೊಬಗುವ ಸಂಪಗೆ ತಳ್ತಿಡಿದಿರ್ದ ಪಣ್ಗಳಿಂ |
ಜೊಲೆಯುತುಮಿರ್ಪ ಮಾಮರನಲಂಪಿನೊಳೆಂಚರಮಾವ ಗಂಡುಗೋ |
ಗಿಲೆ ಪೊಸಗಂಪಿನೊಳ್ ಪೊರೆದು ತೀಡುವ ತೆಂಬೆಲರುರ್ಕುಸೊರ್ಕಿನಿಂ |
ನಲಿವೆಳದುಂಬಿವಿಂಡು ಪೊಟಿಲಾರವೆಯೊಳ್ ಪಿರಿದೊಪ್ಪಿ ತೋಱುಗುಂ ||

ವಾಗಿ

ಕಡುಬಳಿಗಾಱದೆ ನದಿಗಳ|ಮಡುವಿಂ ಪೊಱಮಟ್ಟು ತಡಿಯ ಪಾಸಱೆಯೊಳ್ ಮೆ|
ಯ್ನಡುಗುತೆ ಮೊಸಳೆಗಳೆಸಲ | ಕಡಿಗಳವೋಲ್ ಬಿಟ್ಟು ಪೊರಳುತಿರ್ದುವು ಬಿಸಿಲೊಳ್ ||

ಮಳೆಗಾಲ

ಒಡಿಗೆ ತನ ವೃಷಗೆ ಕಾಲ್ಗಳ್| ನಡುಗೆ ಮೊಗಂ ತಗ್ಗೆ ಕೋಡನೊಡ್ಡಿ ಬಿಗುರ್ತೋ|
ಳ್ಪೊಡೆಯೊಳ್ ಬಾಲಮನಿಟ್ಟಿಡಿ | ಯಿಡಲಾಱದೆ ಮೋಹುದೊಱೆದು ನಿಂದುವು ಪಶುಗಳ್ ||

ವೃದ್ಧತಾಪಸ

ಉಡುಗಿದುರಸ್ಥಲಂ ತೆರೆಗಳುಣ್ಮಿದ ಮೆಯ್ ಮಿಗೆ ಜೋಲ್ದ ಪುರ್ಬು ಬೆ |
ಳ್ಪಿಡಿದ ಜರಜ್ಜಟಾಳಿ ನೆಱೆ ಬಾಗಿದ ಬೆನ್ನು ಱೆ ತೂಗುವಾನನಂ |
ಪಿಡಿದ ಕರಾಂತಯಷ್ಟಿ ಪಿರಿದೊಪ್ಪಿರೆ ಪಲ್ಲಱೆಗುಟ್ಟುತಂದು ಮು |
ಪ್ಪಡಸಿದ ತಾಪಸಾಕೃತಿಯನಾಂತು ಶಿವಂ ನಡೆತಂದನಱ್ತಿಯಿಂ ||

### ಚಂದ್ರ

ವಿನುತವಸಂತನ ಬೆಳ್ಗೊಡೆ | ಬಿನದದೆ ರತಿ ಪಿಡಿದ ಮೌಕ್ತಿಕದ ಸೆಂಡಸಮಾ |
ಸ್ತ್ರನ ಕರದ ಕುಸುಮಕೋಟಕ | ಮೆಸೆಸೆದುದು ಜ್ಯೋತ್ಸ್ನೆಯಿಂ ಸುಧಾಕರಬಿಂಬಂ ||
ಸರಭಸದಿಂ ರತಿ ಬಂದೈ | ಸರಳನ ಕರತಳಕೆ ನಲಿದು ನೀಡುವ ಪೊಸಕ |
ಸ್ತುರಿಯಂ ತುಂಬಿದ ಪಳಿಕಿನ | ಕರಡಿಗೆಯೆನಿಸಿತ್ತು ಬಹ್ನುಗಿಂ ಶಶಿಬಿಂಬಂ ||

### ಮಾವು

ವರಫಲವಿತರಣಶೀಲಂ | ಧರಣಿಪಭೋಗಾನುಕೂಲವುರುಶುಕಲೀಲಂ |
ಪರಭೃತಪಾಲಂ ಮೆರೆದುದು | ಪರಿಗಾಯದ್ಭೃಂಗಜಾಲವಮೃತರಸಾಲಂ ||

### ಮಹೇಶ

ವರಮುಖಮಂಡನಕ್ಕೆ ಮುಡಿಗಂಪಿಗೆ ಚೆಲ್ವಿಗೆ ಭೋಗಸೌಖ್ಯಗಂ |
ಸರಿಪಡಿಪಾಟಿಪಾಸಟಿಗಳಾಗದೆ ತದ್ವಿಧು ವಾಯು ಕಂಬು ಬಂ |
ಧುರಮಧು ಕುಂದಿದಂ ಕರವೆ ಪಂಜಳ ನಾದನಸಂಗನಾದನಾ |
ಸುರವನವಾಸಿಯಾದನೆನುತಂಗನೆ ಬಣ್ಣಿಸಿದಳ್ ಮಹೇಶನಂ ||

---

## ಎರಡನೆಯ ಚೆನ್ನಬಸವ. ಸು. 1500

ಈತನು ಚೆನ್ನಬಸವನ ಪದಮಂತ್ರಗೋಪ್ಯಕ್ಕೆ ವಿವರಣವನ್ನು ಬರೆದಿರುವಂತೆ ತೋರುತ್ತದೆ. ಇವನು ವೀರಶೈವಕವಿ. ಇವನ ಕಾಲಕ್ಕೆ ಈಚೆ ಇವನ ವಿವರಣದ ಸಮ್ಮತಿಯಿಂದ ಇದೇ ಪದಮಂತ್ರಗೋಪ್ಯಕ್ಕೆ ಬೇರೆ ಒಂದು ಟೀಕೆಯನ್ನು ಬರೆದ ಒಬ್ಬ ಕವಿ (ಇವನು ತನ್ನ ಹೆಸರನ್ನು ಹೇಳಿಕೊಂಡಿಲ್ಲ) ತನ್ನ ಟೀಕೆಯ ಅಂತ್ಯದಲ್ಲಿ ಹೀಗೆ ಬರೆದಿದ್ದಾನೆ---

......ಲಿಂಗಾಂಗಸಂಯೋಗಸಮರಸವೆಂಬ ನಿರ್ವಯಲ ನಿಜಸಮಾಧಿಯ ಸ್ವರೂಪಾರ್ಥಂಗಳನು ಪರಶಿವಯೋಗಿರಾಜ ಸಿದ್ಧರಾಮೇಶ್ವರನ ನೆವದಿಂದ ತಮ್ಮಂಶೀಭೂತರಪ್ಪ ಮರ್ತ್ಯಲೋಕದ ಮಹಾಗಣಂಗಳು ಸ್ವೀಕರಿಸಿ ನಿಜಲಿಂಗೈಕ್ಯರಾಗಲೆಂದು ತಮ್ಮ ಸ್ವಾನುಭಾವಪ್ರಸಿದ್ಧವಾದ ಪರಮಾಮೃತವಾಕ್ಯಂಗಳಿಂದ ಪದವಿಟ್ಟು ನಿರೂಪಿಸಿದ ಮಂತ್ರಗೋಪ್ಯವೆಂಬ ಶಿವಶಾಸ್ತ್ರದಲ್ಲಿ ಸಂಪೂರ್ಣವಾಗಿರ್ಪ ಶಿವಾನುಭಾವಾರ್ಥಂಗಳೊಳಗೆ ಆಸುಜ್ಞಾನಗುರು ಚೆನ್ನಬಸವಣ್ಣ ಕರುಣಿಸಿದಷ್ಟು ಅರ್ಥವನರಿದು ಎರಡನೆಯ ಚೆನ್ನ

ಬಸವಣ್ಣನಾದ ಷಟ್ಸ್ಥಲಾನುಭಾವಜ್ಞರು ಪೇಳ್ದ ಪ್ರಸಾದವಾಕ್ಯಂಗಳ ಸಮ್ಮತಿಯಿಂದ ನಾನು ಬಲ್ಲಂತೆ ಕನ್ನಡಿಸಿದ ನುಡಿಗಳೊಳಗೆ ಇತ್ಯಾದಿ.

ವಿವರಣಕಾರನು ಸುಮಾರು 1500ರಲ್ಲಿ ಇದ್ದಿರಬಹುದು ಎಂದು ಊಹಿಸುತ್ತೇವೆ.

---

ಮಾಧವ. ಸು. 1500

ಈತನು ಮಾಧವಾಲಂಕಾರವನ್ನು ಬರೆದಿದ್ದಾನೆ. ಇವನು ಬ್ರಾಹ್ಮಣಕವಿ. ತನ್ನ ಪರಂಪರೆಯನ್ನು ಹೀಗೆ ಹೇಳಿಕೊಂಡಿದ್ದಾನೆ:—ಕುಂತಳ ದೇಶದ ಹರಗಟನಾಡ ಹಿರಿಯೂರಪ್ರಭುವಾದ "ವಾಜಿಕುಲತಿಲಕ ಕೌಂಡಿನ್ಯಗೋತ್ರೋದ್ಭವ ಪ್ರಭುಲಲಾಮ ಆಹವಭೀಮ ಹರಪಾದಾಂಬುಜಭೃಂಗ" ಆದಿರಾಜ ; ಇವನ ಮಗ ದೇಪರಸ; ಇವನ ಮಗ "ಶಿವಪಾದಾಂಬುಜಚಂಚರೀಕ ವಿದ್ಯಾನಟೀನೃತ್ಯಮಂದಿರ ರಿಪುಸೈನ್ಯಶೈಲಸುರಪ ದ್ವಿಜಕುಳಾಕಲ್ಪ ಸಕಲವಿದ್ಯಾಮಾಧವೀಮಾಧವ" ಹಿರಿಯೂರಪ್ರಭು ಮಾಧವ. ಇವನೇ ಕವಿ. ಮೇಲಣ ವಿಶೇಷಣಗಳಿಂದ ಇವನು ಅಧಿಕಾರಿಯಾಗಿಯೂ ಶೂರನಾಗಿಯೂ ಇದ್ದಂತೆಯೂ ತಿಳಿಯುತ್ತದೆ. ಆಶ್ವಾಸಾಂತ್ಯಗದ್ಯಗಳಲ್ಲಿ ತಾನು ಮೇಲುಗೋಟೆಯ ನಾರಾಯಣಸ್ವಾಮಿಯ ಭಕ್ತನೆಂದು ಹೇಳುತ್ತಾನೆ. ಇವನ ಕಾಲವು ಸುಮಾರು 1500 ಆಗಿರಬಹುದೆಂದು ಊಹಿಸುತ್ತೇವೆ. ತನ್ನ ಪಾಂಡಿತ್ಯವನ್ನೂ ಗುಣಾದಿಗಳನ್ನೂ ಈ ಪದ್ಯಗಳಲ್ಲಿ ಹೇಳಿಕೊಂಡಿದ್ದಾನೆ:—

ಭರತಂ ಛಂದಮಳಂಕೃತಂ ಮದನಶಾಸ್ತ್ರಂ ಗಾರುಡಂ ಚಾಪವಿ |
ದ್ಯೆ . ಸ . ಪಾ . ನಿಘಂಟು ಕಲ್ಪಿತಲಿಪಿ ಪ್ರಖ್ಯಾತಶಿಲ್ಪಿಕ್ರಮಂ ||
ಕರಣಂ ವ್ಯಾಕರಣಂ ಸಮಸ್ತಶಕುನಂ ನಾನಾವಧಾನಂಗಳೀ |
ಹಿರಿಯೂರಪ್ರಭು ಮಾಧವಾಂಕನೊಳೆ ತೋರ್ಕುಂ ನೋಡೆ ಭೂಭಾಗದೊಳ್ ||
ವಿವಿಧಾಲಂಕಾರಮೊಪ್ಪಂ ಪಡೆಯೆ ಸರಸರೇಖಾವಿಳಾಸಂ ಬೆಡಂಗಾ |
ನೆ ವಿನೂತಾನೇಕಭಾವಂ ನೆಗೞ್ದೆಸೆಯೆ ಪದನ್ಯಾಸಮಿಂಬಾಗೆ ವಾಙ್ಮಾ ||
ರ್ದವವತ್ಯಾನಂದವಂ ಮುಂದಿಡೆ ವರಕವಿತಾಕಾಂತೆಯಂ ಸತ್ಕಳಾಸೌ |
ಷ್ಠವದಿಂದುತ್ಸಾಹಮಂ ಪುಟ್ಟಿಸಿ ತನಗೆ ವಶಂಮಾಡಿದಂ ಮಾಧವಾಂಕಂ ||
ಸರಸತೆಯಿಂ ನಾನಾಲಂ | ಕರಣಾಭಿಜ್ಞಾನದಿಂದೆ ಕರ್ಣಾಟಕಳಾ |

ಪರಿಣತಿಯಿಂ ಮಾಧವನೀ । ಧರಣಿಯೊಳವದಾತಕೀರ್ತಿವಧುನಂ ಪಡೆದಂ ॥
ವನಿತಾಲಾವಣ್ಯರತ್ನಾಕರಕುಮುದಸಖಂ ನಿರ್ಜಿತಾನಂಗರೂಪಂ ।
ಘನತೇಜೋಮಂದಿರಂ ದುರ್ಧರರಿಪುಘನಸಂದೋಹತೀವ್ರಾನಿಳಂ ಸ ॥
ಜ್ಜನಲೋಕೋತ್ಸಾಹಪಂಕೇರುಹದಿವಸಕರಂ ಸತ್ಕಳಾವಲ್ಲಭಂ ಭೋ ।
ಗನಿವಾಸಂ ತಾನಳಂಕಾರಮನುಸಿರ್ದನಿದಂ ಶಾರದಾಕರ್ಣಪೂರಂ ॥

ಇವನ ಗ್ರಂಥ

### ಮಾಧವಾಲಂಕಾರ

ಇದು ದಂಡಿಯ ಕಾವ್ಯಾದರ್ಶದ ಭಾಷಾಂತರ ; 3 ಆಶ್ವಾಸಗಳಾಗಿ ಭಾಗಿಸಲ್ಪಟ್ಟದೆ. ಗ್ರಂಥಾವತಾರದಲ್ಲಿ ಈಶ್ವರಸ್ತುತಿ ಇದೆ. ಬಳಿಕ ಕವಿ ಗಣೇಶ, ಸರಸ್ವತಿ ಇವರುಗಳನ್ನು ಸ್ತುತಿಸಿದ್ದಾನೆ. ಆಶ್ವಾಸಾಂತ್ಯದಲ್ಲಿ ಈ ಗದ್ಯವಿದೆ—

ಇದು ನಮದಮರಕಲ್ಪಕುಜಮುಕುಟಕೋಟಿಘಟಿತನವಾರುಣಮಣಿಕಿರಣಕಿಸಲಯೋಪಹಿತವಿಮಳನಖಕಾಂತಿಕುಸುಮಮಂಜರೀರಂಜಿತ ಶ್ರೀಯದುಗಿರಿಸದನನಾರಾಯಣಚರಣಕಮಲಭ್ರಮರಾಯಮಾಣ ಸುಕವಿಮಾಧವಪ್ರಣೀತಾಲಂಕಾರನಿದಾನದೊಳ್.

ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ನುತಪೂರ್ವರಾಜಕೀರ್ತಿ । ಪ್ರತಿಬಿಂಬಂ ಶಬ್ದಮುಕುರದೊಳ್ ನೆಲೆಗೊಂಡಾ ।
ಕ್ಷಿತಿಪಾಲರಱಿದೊಡೇಂ ಕೇ|ಡತಿಶಯದಿಂ ಕೀರ್ತಿಬಿಂಬಮಾಕಲ್ಪಾಂತಂ[1] ॥
ಮತಿ ಮಿಗೆ ಪೂರ್ವವಾಸನೆಯ ಸದ್ಗುಣಮಂ ಬಱಿಸಂದು ತೋಱುವ ।
ದ್ಭುತತರಮಪ್ಪ ಸತ್ಪ್ರತಿಭೆಯಿಲ್ಲದವಂ ನೆಗಱ್ದೀ ಪ್ರಯತ್ನದಿಂ ॥
ಶ್ರುತಮನನಾರತಂ ಬಿಡದೆ ಸೇವಿಸಲ್ಶೈತರೆ ದೇವಿ ಕೂರ್ತು ನಿ ।
ಶ್ಚಿತದೆ ನವೀನವೆಂದೆನಿಪನುಗ್ರಹಮಂ ನೆಱೆ ಮಾಳ್ಪಳರ್ಥಿಯಿಂ[2] ॥
ನಿರುಪಮಕಾವ್ಯಶರೀರ । ಕ್ಕುರುತರಶೋಭಾಕರಂಗಳೆನಿಸುವ ಧರ್ಮೋ ।
ತ್ಕರಮೆಲ್ಲವಳಂಕೃತಿಪರಿ । ಕರಮೆನಿಸುಗೆ ಸಕಳವಿಬುಧಜನಮತದಿಂದಂ[3] ॥
ಸಮರೂಪಶಬ್ದವಾಚ್ಯತೆ । ಸಮನಿಸೆ ಪೆಸರಿಂದದಕ್ಕುಮೆಯ್ದೆ ಸಮಾನೋ ।
ಪಮೆಯೆಂತೆನಲುದ್ಯಾನಂ । ರಮಣೀಮುಖದಂತೆ ಸಾಳಕಾನನರಮ್ಯಂ[4] ॥

---

1 ಕಾವ್ಯಾದರ್ಶ I, 5. 2 *Ibid.*, I, 104. 3. *Ibid.*, II, 1. 4. *Ibid.*, II; 29.

## ಶ್ರೀಧರದೇವ. ಸು. 1500.

ಈತನು ವೈದ್ಯಾಮೃತವನ್ನು ಬರೆದಿದ್ದಾನೆ. ಇವನು ಜೈನಕವಿ; ಜಗದೇಕಮಹಾಮಂತ್ರವಾದಿ ಎಂದು ತನ್ನನ್ನು ವಿಶೇಷಿಸಿ ಹೇಳಿಕೊಂಡಿದ್ದಾನೆ. ಮುನಿಚಂದ್ರದೇವನ ಇಷ್ಟಾನುಸಾರವಾಗಿ ಈ ಗ್ರಂಥವನ್ನು ರಚಿಸಿದಂತೆ ತಿಳಿಯುತ್ತದೆ. ಕವಿಯ ವಿಷಯವಾಗಿ ಈ ಗ್ರಂಥದಿಂದ ಇನ್ನೇನೂ ತಿಳಿವುದಿಲ್ಲ. ಇವನು ಸುಮಾರು 1500 ರಲ್ಲಿ ಇದ್ದಿರಬಹುದೆಂದು ತೋರುತ್ತದೆ.

ಇವನ ಗ್ರಂಥ

### ವೈದ್ಯಾಮೃತ.

ಇದು ಚಂಪೂರೂಪವಾಗಿದೆ; ಗದ್ಯಭಾಗವೇ ಹೆಚ್ಚು, ಅಲ್ಲಲ್ಲಿ ಒಂದೊಂದು ಕಂದವೂ ಇದೆ; 24 ಅಧಿಕಾರಗಳಾಗಿ ಭಾಗಿಸಲ್ಪಟ್ಟಿರುವಂತೆ ತೋರುತ್ತದೆ. ಹಲವುಕಡೆ ಚಿಕಿತ್ಸಾವಿಧಾನದಲ್ಲಿ ಮಂತ್ರಗಳೂ ಹೇಳಿವೆ. ಗ್ರಂಥಾದಿಯಲ್ಲಿ ಈ ಪದ್ಯವಿದೆ —

ಶ್ರೀಧರದೇವಂ ಕರುಣದಿ | ನೀಧರೆಯೊಳ್ ಮಾನಿಸರ್ಗೆ ಸುಖಮಪ್ಪಿನೆಗಂ |<br>
ವ್ಯಾಧಿಹರಮಪ್ಪ ತೆಱಸಂ | ಸಾಧಿಸಿ ಪೇೞ್ದನಿದೊಂದು ವೈದ್ಯಾಮೃತಮಂ ||

ಕೆಲವು ಅಧಿಕರಣಗಳ ಕೊನೆಯಲ್ಲಿ ಈ ಗದ್ಯವಿದೆ—

ಇದು ಜಗದೇಕಮಹಾಮಂತ್ರವಾದಿ ಶ್ರೀಧರದೇವವಿರಚಿತಮಪ್ಪ ವೈದ್ಯಾಮೃತದೊಳ್.

ಈ ಗ್ರಂಥದಿಂದ ಸ್ವಲ್ಪ ಗದ್ಯಭಾಗವನ್ನು ಉದ್ಧರಿಸಿ ಬರೆಯುತ್ತೇವೆ:

### ಪಂಚಗುಲ್ಮಅತಿಚಾರ.

ಸೂರಣ, ಮಂಗರವಳ್ಳಿ, ಚಿತ್ರಮೂಲ, ಕುಸ್ತುಂಬರಿ ಇನಿತುಮಂ ಅಳೆಯಲಾಗಲಿ ಅಂಬಿಲದಲಾಗಲಿ ಅಸ್ವಾವಶೇಷಂಮಾಡಿ ಕೊಳಲೊಡಂ ಪಂಚಗುಲ್ಮಅತಿಚಾರಂ ಕೆಡುಗು.

### ಮೂಲವ್ಯಾಧಿ.

ವಿಷಮವಾದ ಕಠಿನಾಸನದಿಂದಂ ಮಲನಿರೋಧದಿಂದಂ ಮಂದಾಗ್ನಿಯಮೇಲೆ ಭೋಜನವ ಮಾಡುವುದಱಿಂದಂ ಮೂಲವ್ಯಾಧಿ ಪುಟ್ಟುಗುಂ. ಅದು ಆಱುಪ್ರಕಾರಮಕ್ಕು: ಇದ್ದೆಸೆಯ ರಕ್ತಂ ಅಪಾನಕ್ಕೆಱದು ಬದ್ಧವಾಗಿ ಸ...ಅಂತರ್ವಳಯಮೆಂಬೆರಡುಪ್ರಕಾರಮಕ್ಕು.ರಕ್ತವೊಡೆಯದೆ ದೇಹದೊಳಗೆ ಗಂಟಾಗಿ ಅಂತರ್ವಳಯಮಕ್ಕು

ಕಠಿನಾಸನದಿಂದಂ ಮುಲ ಶುದ್ಧವಾಗಿ ಪೋಪಾಗಳ್ ರಕ್ತವೊಡೆದು ನೊಳೆಗಳ್ ಪೊಱ ಮಡುಗು.ಗ.....ಬಹಿರ್ವಳಿಯುಮಕ್ಕು.ಅದಕ್ಕೆ ಆರೋಚಕಮಕ್ಕು . ವಿಷಮಾಗ್ನಿಯುಂ ಬೆನ್ನು ಬೇನೆಗೆಯ್ವುದುಂ ಕರುಳಱುಸುವುದುಂ ಹುಳಿದೇಗುಮಡಿಗಡಿಗೆ ಬರ್ಕುಂ.ಛರ್ದಿ ಯೆತ್ತುವುದುಂ ನಿಶ್ಶಕ್ತಿಯುಂ ಮಲಂ ಪಿಕ್ಕೆಯುಂ...ದುಂ ಗುದದಲ್ಲಿ ನೊಳೆಯುಪ್ಪುದುಂ ದೇಹದಲ್ಲಿ ಶೂಲೆ ಪಿರಿದಪ್ಪುದುಂ ಇದು ವಾತಲಕ್ಷಣಂ. ಉರಿವುದುಂ ಕೆಚ್ಚನಪ್ಪುದುಂ ನೀರ ತೃಷೆಯುಂ ಉರಿಮೂತ್ರಮುಮಡಿಗಡಿಗೆ ಬರ್ಕುಂ; ಇದು ಪಿತ್ತಲಕ್ಷಣಂ.ನೊ... ಗಪ್ಪುದುಂ ಗುದಂ ತಿಂಬುದುಂ ಆಮವೆರಸಿ ಮಲಂ ಪೋಪುದುಂ ಅತಿಜಡನಪ್ಪುದುಂ ಇದು ಶ್ಲೇಷ್ಮಲಕ್ಷಣಂ.ಒಂದೆರಡುಮೂಱುನೊಳೆಯಕ್ಕುಂ, ಗುದವಳಯ ಮೊಱಗೊಳಗೆ ತಿಮಿ ರವಕ್ಕುಂ, ತೀವ್ರಬೇನೆಯುಕ್ಕುಂ....ಲು ಸುಟ್ಟು ಕರಿಯುಂಮಾಡಿ ತಾಮ್ರಭಾಜನದಲಿಕ್ಕಿ ಸಿಂಬೆಯ ಹುಳಿಯುಂ ಭಾವನೆಯುಂ ಕೊಟ್ಟು ಕಲ್ಕಂಮಾಡಿ ವಿಸರ್ಪಸಹುಣ್ಣಂ ಬೆರಸೆಯ ಲೊಱಸಿ ಪೂಸಲು ಎಲ್ಲಾ ವಿಸರ್ಪಂ ಕೆಡುಗು.ಅರಿಸಿನಮುಂ ಚೂರ್ಣಂಮಾಡಿ ಕಳ್ಳಿಯ ಹಾಲಲು ಕಲಸಿ ಎಣ್ಣೆಯುಂ ಪೂಸಿ ಪೂಸುಗೆ ನೊಳೆ ಕರಗುವುವು. ತ್ರಿಕಟುಕ ಸೈಂಧವ ಕಾಳುಪೀರೆಯ ಎಲೆ ಇವನರೆದು ಗುದದಲೇಱುಸುಗೆ ಅಂತರ್ವಳಿಯುಂ ಕೆಡುಗು.

---

## ಗುರುನಂಜ. ಸು. 1500.

ಈತನು ಭಟ್ಟಭಾಸ್ಕರಕೃತ ಯಜುರ್ವೇದಭಾಷ್ಯಕ್ಕೆ ಕನ್ನಡಟೀಕೆಯನ್ನು ಬರೆದಿದ್ದಾನೆ. ಇವನು ವೀರಶೈವಕವಿ ; ಸಿದ್ಧಲಿಂಗನ ಶಿಷ್ಯನು, ನಾಸಾಪುರ (ಮೂಗೂರು) ಮಠನಿವಾಸಿ. "ಶ್ರೀಮದನಂತಮುಕ್ತಿಸೀಮಂತಿನೀಸೀಮಂತಸರಣಿವಿಹಾರಲೋಲಯೋಗೀಂದ್ರ, ಪರಮಶಿವಾನನ್ಯಯೋಗಯೋಜಕ, ಸ್ಮೃತಿಪುರಾಣಶಾಸ್ತ್ರಾರ್ಥದರ್ಶನನಿರಂಜನಸಿದ್ಧ" ಎಂದು ತನ್ನನ್ನು ವಿಶೇಷಿಸಿ ಹೇಳಿಕೊಂಡಿದ್ದಾನೆ. ಇವನ ಟೀಕೆ ಪ್ರೌಢವಾಗಿದೆ. ಇದಕ್ಕೆ ರುದ್ರಭಾಷ್ಯ ಎಂಬ ಹೆಸರಿರುವಂತೆ ತೋರುತ್ತದೆ. ಇದನ್ನು ಸತಾವರಶಾಂತಯೋಗಿಯ ಇಷ್ಟಾನುಸಾರವಾಗಿ ಬರೆದಂತೆ ಕವಿ ಹೇಳುತ್ತಾನೆ. ಇವನ ಕಾಲವು ಸುಮಾರು 1500 ಆಗಿರಬಹುದೆಂದು ಊಹಿಸುತ್ತೇವೆ.

ಗುರುನಂಜೆಸ್ವಾಮಿಗಳು ಸೇರಿಸಿದ ಉಮಾಸ್ತೋತ್ರಷಟ್ಪದ ಅಥವಾ ತ್ರಿಪುರಸುಂದರೀಸ್ತೋತ್ರ, ಅಷ್ಟಾವರಣಸ್ತೋತ್ರಷಟ್ಪದ ಎಂಬ ಎರಡು ಗ್ರಂಥಗಳು ದೊರೆಯುತ್ತವೆ. ಇವು ಈ ಕವಿಯಿಂದಲೇ ಸಂಕಲಿತವಾಗಿ

ರಬಹುದೋ ಏನೋ ತಿಳಿಯದು. ಇವುಗಳಿಂದ ಒಂದೆರಡು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ಉಮಾಸ್ತೋತ್ರಷಟ್ಪದ (ಪದ್ಯ109)

ಕುಳಿರ್ವೆಟ್ಟೆಱೆಯನ ಕುವರಿಯನೈಮೊಗ|ನೊಲವೆನಿಪಂಬುಜಕೆಱಗುವ ಬಮರಿಯ|
ನಲರ್ಗಣ್ಣಿಂ ಪೂಜಿಪ ಚರಣದ ರವಿಶತಕಿರಣದ ಸೊಂಪಂ ||
ಪೞುವೊಡಲಬಲೆಯನನುಪಮವಿಭವೆಯ | ಬಲವಂದಭಿನಮಿಪೆಂ ಬಗೆಯೊಳು ನೆಲೆ|
ಗೊಳೆ ಮಾಹೇಶ್ವರಿಯನು ಶಂಕರಿಯನು ಶಿವತತ್ವದ ಸಿರಿಯ ||
ಕೆಂಬಾಯ್ದೆಱೆಯ ಕೆಂಕಮಂ ಕಣ್ಣಬೆಳರ್ವಣ್ಣ | ಮಂ ಬನರಿದಲೆಯ ಕರ್ಪ೯ಂ
ಶಂಕರನ ಜಡೆದು |
ಱುಂಬಿಂಗೆ ತನುಲತೆಗೆ ಕಂಬುಕಂಧರಕೆ ರಾಗಂಬಡೆದು ಬಿಡದೆ ಕಡನಾ ||
ಇಂಬಿನಿಂದೀವಂತೆಳಸುವಗಜೆ ಸಲಹುಗನಿ|ಶಂ ಬೆಂಬಿಡದೆ ಗಿರೀಶಾಂಬಕಾಂಬುಜಕೆ ರೋ
ಲಂಬೆ ಯುಗಸಪ್ತಜಗದಂಬೆ ತತಸದ್ಗುಣಕದಂಬೆ ಕರುಣಾವಲಂಬೆ ||

ಅಷ್ಟಾವರಣಸ್ತೋತ್ರಷಟ್ಪದ (ಪದ್ಯ 113)

ಶಿವಗೆ ನೆಲ ಜಲ ಮರುತ್ತಗಗನ ಶಿಖಿ ಶಶಿಯಾತ್ಮ | ರವಿಯೆಂಬಿವೆಂಟಂಗವಹುವು
ಭಕ್ತಂಗೆ ಗುರು |
ಭವವಿಮೋಚನಲಿಂಗ ಚರ ಭೂತಿ ರುದ್ರಾಕ್ಷಿ ಶಿವಮಂತ್ರ ಪಾದೋದಕ ||
ತವೆ ಸುಪ್ರಸಾದವಷ್ಟಾವರಣವಷ್ಟಾಂಗ | ಏವಱಿಂ ಪ್ರಪಂಚಮಂ ಪೆರ್ಚಿಸುವ
ನಾಶಿವಂ |
ಶಿವನ ಭಕ್ತಂ ಪ್ರಪಂಚಾವಹನಹಂ ಭಕ್ತನಧಿಕಂ ಮಹೇಶನಿಂದ ||

———o———

## ನೀಲಕಂಠಾರಾಧ್ಯ. ಸು. 1500

ಈತನು ಪರವಾದಿಗಜಾಂಕುಶತಾರಾವಳಿಯನ್ನು ಬರೆದಿದ್ದಾನೆ. ಇವನು ವೀರಶೈವಕವಿ. ಗ್ರಂಥಾಂತ್ಯದಲ್ಲಿರುವ ಇದು ಸಮಸ್ತಹರಿಸುರವಿಸರವಿರಾಜನ್ಮಸ್ತಕನ್ಯಸ್ತನೂತ್ನರತ್ನಗಭಸ್ತಿವಿಸ್ಫತಸರಃಪದಾಕ್ಕಯಮಾನಪನ್ನಗಜಾವಲ್ಲಭಪಾದಪಂಕಜಲಸದ್ರೋಲಂಬನಪ್ಪ ಹರಗುರುಚರಚರಣಸೇವಾಧುರಂಧರನಪ್ಪ ಪರಮತವೇಶ್ಯಾಭುಜಂಗಬಿರುದಾಂಕನಾದ ಸತ್ಕವಿನೀಲಕಂಠಾರಾಧ್ಯದೇವ ಎಂಬ ಗದ್ಯಭಾಗದಿಂದ ಇವನಿಗೆ ಪರಮತವೇಶ್ಯಾಭುಜಂಗ ಎಂಬ ಬಿರುದಿದ್ದಂತೆ ತಿಳಿಯುತ್ತದೆ. ಇವನ ಕಾಲವು ಸುಮಾರು 1500 ಆಗಿರಬಹುದೆಂದು ತೋರುತ್ತದೆ.

ಇವನ ಗ್ರಂಥ

ಪರವಾದಿಗಜಾಂಕುಶತಾರಾವಳಿ

ಈ ಗದ್ಯಗ್ರಂಥವನ್ನು ಸಕಲವೇದಶಾಸ್ತ್ರೋಪನಿಷದರ್ಥಮಂ ಗರ್ಭೀಕರಿಸಿ ಜೈನಚಾರ್ವಾಕವಮಾಯಾವಾದಿವೈಷ್ಣವರೆಂಬ ಮದಗಜಕ್ಕೆ ಅಂಕುಶವಾಗಿ ರಚಿಸಿದಂತೆ ಕವಿ ಹೇಳುತ್ತಾನೆ. ಗ್ರಂಥಾದಿಯಲ್ಲಿ

ಶ್ರೀಗಿರಿಜಾಕುಚಕುಂಕುಮ | ರಾಗಾಂಕಿತವಕ್ಷನಕ್ಷಯಂ ಸರ್ವೇಶಂ |
ಯೋಗಿಜನಹೃನ್ನಿವಾಸಂ | ಭೋಗೀಂದ್ರಾಭರಣನೊಲ್ದು ಸಲುಹಲಿ ಜಗಮಂ ||

ಎಂಬ ಪದ್ಯವೂ ಗ್ರಂಥಾಂತ್ಯದಲ್ಲಿ

ಪರವಾದಿಗಜಾಂಕುಶಮೆಂ | ಬುರುತಾರಾವಳಿಯ ನೀಲಕಂಠಾರಾಧ್ಯಂ |
ವಿರಚಿಸಿದನೋದುವುದಿದಂ | ಪರಿಭವಮಿಲ್ಲಮಮ ನೋಡಲಿದುವೆ ಯಥಾರ್ಥಂ ||

ಎಂಬ ಪದ್ಯವೂ ಇವೆ.

---

## ಚೆನ್ನವೀರ. ಸು. 1500

ಈತನು ಸಾರಸ್ವತವ್ಯಾಕರಣ, ಪುರುಷಸೂಕ್ತ, ನಮುಕಚಮಕ ಇವುಗಳಿಗೆ ಕನ್ನಡಟೀಕೆಯನ್ನು ಬರೆದಿದ್ದಾನೆ. ಇವನು ವೀರಶೈವಕವಿ; ಯಾಗಂಟಿಶರಭಲಿಂಗಭಕ್ತನು, ತೈತ್ತಿರೀಯಯಜುಶ್ಯಾಖಾಧ್ಯಾಯ, ಅತ್ರಿಗೋತ್ರದವನು, ವೀರಮಾಹೇಶ್ವರತಂತ್ರಸೂತ್ರದವನು, ಶಿವಲೆಂಕಮಂಚಣ ಪಂಡಿತಾರಾಧ್ಯವಂಶೋದ್ಭವನು ; ಇವನ ತಂದೆ ಕೋಕಿಲಾಕುಂಡ ಸಂಗನ ಗುರುಲಿಂಗ, ತಾಯಿ ನಂದ್ಯಂಬೆ, ಗುರು ಪಿತೃವ್ಯಸಂಬಣ್ಣ, ಸ್ಥಳ ಸಹ್ಯಾದ್ರಿಯ ತಪ್ಪಲಲ್ಲಿರುವ ಕುಂಟಿಕಾಪುರ. ಇವನಿಗೆ ಕಾಶೀಕಾಂಡಚೆನ್ನವೀರಕವಿ ಎಂದೂ ಹೆಸರಿರುವಂತೆ ತೋರುತ್ತದೆ. ಇವನ ಕಾಲವು ಸುಮಾರು 1500 ಆಗಿರಬಹುದು. ಈ ವ್ಯಾಖ್ಯಾನಗಳನ್ನು ನೋಡಿದರೆ ಈತನು ದೊಡ್ಡಪಂಡಿತನು ಎಂಬುದಕ್ಕೆ ಅಡ್ಡಿಯಿಲ್ಲ. ಇವನ ಸಾರಸ್ವತವ್ಯಾಕರಣಟೀಕೆಗೆ ಶಬ್ದಮಣಿ ಎಂದು ಹೆಸರು.

---

## ಗುಮ್ಮಟಾರ್ಯ. ಸು. 1500.

ಈತನು ಅರ್ಧೇಂದುಮೌಳಿಶತಕವನ್ನು ಬರೆದಂತೆ ಆ ಶತಕದ ಒಂದು ಪ್ರತಿಯ ಕೊನೆಯ ಪದ್ಯದ

ಸೌರಾಷ್ಟ್ರಂ ಸೋಮನಾಥಂ ಪ್ರಭು ಗಿರಿಶಪದಕ್ಕೀಪ್ಸಿತಂ ಚಿತ್ತಭಕ್ತಿ |
ಶ್ರೀರಾಮುಂ ಗುಮ್ಮಟಾರ್ಯಂ ವಿರಚಿತವೆನಿಪರ್ಧೇಂದುಮೌಳಿಸ್ತವಾಖ್ಯಂ ||

ಎಂಬ ಅಶುದ್ಧವಾದ ಭಾಗದಿಂದ ತಿಳಿಯುತ್ತದೆ. ಇದರಿಂದ ಕವಿ ಸೌರಾಷ್ಟ್ರದ ಸೋಮನಾಥನ ಭಕ್ತನೆಂದು ತೋರುತ್ತದೆ. ಗುಮ್ಮಟಾರ್ಯ ಎಂಬ ಹೆಸರಿದ್ದರೂ ಜೈನಕವಿಯಲ್ಲವೆಂದು ತಿಳಿಯಬಹುದಾಗಿದೆ. ಇವನ ಕಾಲವು ಸುಮಾರು 1500 ಆಗಿರಬಹುದೆಂದು ಊಹಿಸುತ್ತೇವೆ.

ಇವನ ಗ್ರಂಥ

ಅರ್ಧೇಂದುಮೌಳಿಶತಕ

ಇದು 108 ವೃತ್ತಗಳನ್ನು ಒಳಕೊಂಡಿದೆ ; ಕೆಲವು ಪದ್ಯಗಳು ಅರ್ಧೇಂದುಮೌಳಿ ಎಂದೂ ಕೆಲವು ಅತ್ಯಂತಶುದ್ಧ ಎಂದೂ ಮುಗಿಯುತ್ತವೆ. ಗ್ರಂಥವು ಭಕ್ತಿವೈರಾಗ್ಯಗಳನ್ನು ಬೋಧಿಸುತ್ತದೆ ; ಶೈವಾಗಮೋಕ್ತಂ, ಶಮದಮನಿಯತಾರ್ಥಪ್ರದಂ ಎಂದು ಕವಿ ಇದನ್ನು ವಿಶೇಷಿಸಿ ಹೇಳಿದ್ದಾನೆ. ಇದರಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ—

ಮಸಿಯಂ ಪಾಲಿಂದೆ ಕರ್ಚಲ್ ಬಿಳಿದೆನಿಕುಮೆ ಕಲ್ ನೀರೊಳೆಂತಿರ್ದೊಡಂ ಮೆ |
ಲ್ಪು ಸಮಂತೇನಕ್ಕುಮೇ ಕಂಬಿಯೊಳವಸಿ ಚಿರಂ ಕಟ್ಟಿರಲ್ ನಾಯ ಬಾಲಂ ||
ಸಸಿನಂ ತಾನಕ್ಕುಮೇ ದುರ್ಗುಣದೊಳನುದಿನಂ ಮೆಚ್ಚುವಟ್ಟಿರ್ದನಂ ಮಾ |
ಣಿಸಲೆನ್ನಂ ಬರ್ಕುಮೇ ಸದ್ವಚನಶತದೊಳಂ ನೋಡೆ ಪೇಳ್ದೊಡತ್ಯಂತಶುದ್ಧಾ ||
ಅಸತ್ತುಂ ನಿದ್ರೆಗೆಯ್ದುಂ ಪಸಿದುಮಲಸಿಯುಂ ದುಃಖದೊಳ್ ಚಿಂತಿಸುತ್ತುಂ |
ಬೇಸತ್ತುಂ ಸರ್ವರೋಗಗ್ರಹಭಯಚಕಿತಾವಸ್ಥೆಯೊಳ್ ಕೂಡಿದಂದುಂ ||
ಕೂಸಾಗಿರ್ದಂದು ಮಾಯಾವ್ಯಸನಭರದೊಳಂ ಮುತ್ತೊಡಂ ನಿಮ್ಮ ತತ್ವಾ |
ಭ್ಯಾಸಂ ಮಚ್ಚಿತ್ತದೊಳ್ ಸಂಕ್ರಮಿಸುಗೆಯೆನಗೆಂದೆಂದುಮರ್ಧೇಂದುಮೌಳೀ ||
ಆನಾರ್ಗೇನಪ್ಪೆನೆಲ್ಲಿಂದೊಗೆದೆನೆನಗೆ ನಂಟರ್ಕಳಾರೆನ್ನ ಪೋಪ |
ಸ್ಥಾನಂ ತಾನಾವುದೆನ್ನಂ ಪಿಡಿದು ತಿರಿಪುತಿರ್ದಪ್ಪರಾರೆನ್ನ ಜನ್ಮಂ ||
ತಾನೇತಕ್ಕಾದುದೆಂದಿಂತಿದರ ಮೊದಲ ಭೇರಾವುದೇನೆಂದು ತನ್ನಿಂ |
ತಾನೇ ನಿಶ್ಚೈಸಿ ತನ್ನಂ ತಿಳಿಯೆ ನಿಜಪದಂ ತೋರ್ಪುದತ್ಯಂತಶುದ್ಧಾ ||
ಅಳಿಪಾರಾರಾಯುಮಂ ಕಂದಿಸದು ಕದಡದಾರಾರ ಗುಣ್ಪುಳ್ಳ ಧೈರ್ಯಂ |
ಗಳನಾರಾರೊಳ್ಪನಳ್ಕೈಸದು ಮಸುಳಿಸದಾರಾರ ಪೆರ್ಚಿರ್ದ ತೇಜಂ ||

ಗಳನಾರಾರುರ್ಕನಲ್ಲಾಡಿಸದು ಕೆಡಿಸದಾರಾಂರ ಬೀರಂಗಳಂ ಮಾ |
ಯ್ದಳಿಪೆನ್ನಂ ಪೊರ್ದದತ್ತತ್ತಲೆ ತಳರ್ಗಿನಿಸಂ ಬೇಱ್ಪೆನರ್ಧೇಂದುಮೌಳೀ ||
ಸಿರಿಯುಳ್ಳಂದೇಳಿಪೆಂ ಪೂಜಿಪೆನೆಡರಿನೊಳತ್ಯರ್ಥದಿಂ ಪ್ರಾಯದೊಳ್ ಮಾಂ |
ಕರಿಪೆಂ ಮುಪ್ಪಾಗಲಾಗಳ್ ನೆನೆಯುಬೊಡರಿಪೆಂ ಸಂತಮಿರ್ದಾದು ಕಾಣೆಂ ||
ಶರಣೆಂಬೆಂ ನೋವುಸಾವಾದೆಡೆಯೊಳದಱಿನಾನೆಲ್ಲಿಯುಂ ಧಾಳನ್ನೆ ಶಂ |
ಕರ ಕೈಕೊಂಡೆನ್ನುಮಂ ಪಾಲಿಪುದು ಕರಮೆ ನಿವಾಳ್ಯಜಮರ್ಧೇಂದುಮೌಳೀ ||

---

## ಬಾಚರಸ. ಸು. 1500

ಈತನು ಅಶ್ವವೈದ್ಯವನ್ನು ಬರೆದಿದ್ದಾನೆ. ಇವನು ಜೈನಕವಿ ಎಂದು ತೋರುತ್ತದೆ. ಇವನ ತಂದೆ ಚೌಂಡರಾಜ. ಇವನಿಗೆ ಸುಜನೈಕಬಾಂಧವ ಎಂಬ ಬಿರುದಿದ್ದಂತೆ ತಿಳಿಯುತ್ತದೆ. ಇವನ ಕಾಲವು ಸುಮಾರು 1500 ಆಗಿರಬಹುದೆಂದು ಊಹಿಸುತ್ತೇವೆ.

ಇವನ ಗ್ರಂಥ

ಅಶ್ವವೈದ್ಯ

ಇದರಲ್ಲಿ 35 ವೃತ್ತಗಳೂ ಕುದುರೆಗಳ ವರ್ಣ, ಸೆಲೆ ಮುಂತಾದ ವಿಷಯಗಳನ್ನು ಹೇಳುವ ಸ್ವಲ್ಪ ಗದ್ಯಭಾಗವೂ ಇವೆ. ತನ್ನ ಗ್ರಂಥದಲ್ಲಿ ಪ್ರತಿಪಾದಿತವಾದ ಅಂಶಗಳೇಮುಂತಾದ ವಿಷಯಗಳನ್ನು ಈ ಪದ್ಯದಲ್ಲಿ ಹೇಳಿದ್ದಾನೆ—

ಸುಶ್ರುತಶಾಲಿಹೋತ್ರನಳವಾಕ್ಯದೊಳಂ ಹಯಚೇಷ್ಟೆ ರೂಪು ದಂ |
ತ ಶ್ರವಣಾಕ್ಷಿ ವರ್ಣ ಸುೞಿ ನಾಲಗೆ ಗಂಧಶುಭಾಶುಭಂಗಳಂ ||
ವಿಶ್ರುತಮೂವತೈದೆನಿಪ ವೃತ್ತದೊಳಂ ನೆಱೆ ಪೇೞ್ವೆನಾಗಮೈ |
ಕಾಶ್ರಯಚೌಂಡರಾಜಸುತಬಾಚರಸಂ ಸುಜನೈಕಬಾಂಧವಂ ||

ಈ ಗ್ರಂಥದಿಂದ ಒಂದುಪದ್ಯವನ್ನು ತೆಗೆದು ಬರೆಯುತ್ತೇವೆ—

ಪೇರುರಮಾಗಿ ಮಾಂಸಲತೆವೆತ್ತು ಮಯೂರನ ಕಂಠದಂದದಿಂ |
ದೋರಣಮಾಗಿಯುಂ ನಿಡುಗೊರಲ್ ಕಡುಸಣ್ಣಮೆ ಗಂಡಮಂಡಲಂ ||
ಚಾರುಕಪೋಲಮುಂ ತೆಳುಪುವೆತ್ತೆಸೆಯಲ್ ಕಿವಿ ಸಣ್ಣಮಾಗಿಯುಂ |
ನೇರಿದಮಾಗಿ ನುಣ್ಪುಸಯಮಂ ಪಡೆಯಲ್ಕಿದು ರಾಜವಾಹನಂ ||

---

## ಕಲ್ಯಾಣದಸ್ವಾಮಿ. ಸು 1500.

ಈತನು ಕಾರಣಾಗಮದ ವಾರ್ಧಕವನ್ನು ಬರೆದಿದ್ದಾನೆ. ಇವನು ವೀರಶೈವಕವಿ ; ಸುಮಾರು 1500ರಲ್ಲಿ ಇದ್ದಿರಬಹುದೆಂದು ಊಹಿಸುತ್ತೇವೆ.

ಇವನ ಗ್ರಂಥ

ಕಾರಣಾಗಮದವಾರ್ಧಕ

ಇದು ವಾರ್ಧಕಷಟ್ಪದಿಯಲ್ಲಿ ಬರೆದಿದೆ; ಪದ್ಯ 25. ಇದರಲ್ಲಿ ಶೈವಾಗಮಗಳಲ್ಲಿ ಒಂದಾದ ಕಾರಣಾಗಮದ ವಿಷಯಗಳು ಸಂಗ್ರಹವಾಗಿ ಹೇಳಿವೆ.

---

## ಯಶಃಕೀರ್ತಿ. ಸು. 1500

ಈತನು ಧರ್ಮಶರ್ಮಾಭ್ಯುದಯಕ್ಕೆ ಟೀಕೆಯನ್ನು ಬರೆದಿದ್ದಾನೆ. ಇವನು ಜೈನಕವಿ; ಲಲಿತಕೀರ್ತಿಯ ಶಿಷ್ಯನು. ಇವನ ಕಾಲವು ಸುಮಾರು 1500 ಆಗಿರಬಹುದೆಂದು ಊಹಿಸುತ್ತೇವೆ. ಇವನ ಟೀಕೆಗೆ ಸಂದೇಹಧ್ವಾಂತದೀಪಿಕೆ ಎಂದು ಹೆಸರು. ಟೀಕೆಯ ಕೊನೆಯಲ್ಲಿ ಈ ಗದ್ಯವಿದೆ:

ಇತಿ ಶ್ರೀಮನ್ಮಂಡಲಾಚಾರ್ಯಲಲಿತಕೀರ್ತಿಶಿಷ್ಯಶ್ರೀಯಶಃಕೀರ್ತಿರಚಿತಾಯಾಂ ಸಂದೇಹಧ್ವಾಂತದೀಪಿಕಾಯಾಂ

---

## ಶುಭಚಂದ್ರ. ಸು. 1500

ಈತನು ನರಪಿಂಗಳಿಯನ್ನು ಬರೆದಿದ್ದಾನೆ. ಇವನು ಜೈನಕವಿ ; ಸುಮಾರು 1500ರಲ್ಲಿ ಇದ್ದಿರಬಹುದೆಂದು ತೋರುತ್ತದೆ.

ಇವನ ಗ್ರಂಥ

ನರಪಿಂಗಳಿ

ಇದು ಕಂದದಲ್ಲಿ ಬರೆದಿದೆ ; ಪದ್ಯ 167. ಇದರಲ್ಲಿ ಜ್ಯೋತಿಷಸಂಬಂಧವಾದ ಕೆಲವು ವಿಷಯಗಳು ಹೇಳಿವೆ. ಗ್ರಂಥಾಂತ್ಯದಲ್ಲಿ—ಇದು ಶುಭಚಂದ್ರಸಿದ್ಧಾಂತಯೋಗೀಂದ್ರವಿರಚಿತಮಪ್ಪ ನರಪಿಂಗಳಿ—ಎಂದಿದೆ.

---

## ಲಕ್ಷ್ಮಣಾಂಕ. ಸು. 1500

ಈತನು ಶಕುನಸಾರವನ್ನು ಬರೆದಿದ್ದಾನೆ. ಇವನು ಬ್ರಾಹ್ಮಣಕವಿ; ಕಮ್ಮವಂಶದವನು. ಇವನ ತಂದೆ ಮಲ್ಲಿನಾಥ. ಇವನು ಸುಮಾರು 1500ರಲ್ಲಿ ಇದ್ದಿರಬಹುದೆಂದು ತೋರುತ್ತದೆ.

ಇವನ ಗ್ರಂಥ

ಶಕುನಸಾರ

ಇದು ವೃತ್ತದಲ್ಲಿ ಬರೆದಿದೆ ; ಅಧಿಕಾರ 8, ಪದ್ಯ 312. ನಮಗೆ ದೊರೆತ ಪ್ರತಿ ಬಹಳ ಅಶುದ್ಧವಾದುದು. ಗ್ರಂಥಾವತಾರದಲ್ಲಿ ಶಿವಸ್ತುತಿ ಇದೆ. ಇದರಲ್ಲಿ ಪ್ರತಿಪಾದಿತವಾದ ವಿಷಯುಗಳು ರಾಜ್ಯ, ಓಲಗ, ಯಾತ್ರೆ ಲಾಭ, ಮಳೆ, ಫಲಾರ್ಘ, ವಿವಾಹ, ಗರ್ಭ, ಪುತ್ರೋತ್ಪತ್ತಿ, ಜಯ, ಆಕಸ್ಮಿಕಕಾಲ ಇತ್ಯಾದಿ.

ಈ ಗ್ರಂಥದಿಂದ ಒಂದು ಪದ್ಯವನ್ನು ಉದ್ಧರಿಸಿ ಬರೆಯುತ್ತೇವೆ—

ಎಡದೊಳ್ ಪಿಂಗಲಿ ಸುಸ್ವರಂಗಳಸಮಂಗಳ್'ಮಾಡೆ ಮೇಣಾವಗಂ |
ಕೊಡೆ ದುಶ್ಶಬ್ದಮುಮಂ ಸಮಂಗಳವಱಿಂ ಪೋಗಲ್ಕೆ ತನ್ನಿಷ್ಟಮಂ ||
ಪಡೆಗಂತಲ್ಲದೆ ಸುಸ್ವರಂ ? ವಿಟಸಮಂಗಳ್ಕಾಗಿ ಬಾಯ್ಕೊಂಡೊಡಾ |
ನುಡಿಗೇಳುತ್ತಮೆ ಪೋದವಂಗೆ ಪಿರಿದುಂ ಕೈಗೂಡದೊಳ್ಪಾವಗಂ ||

---

## ಚಾಕರಾಜ. ಸು. 1500

ಈತನು ಶಕುನಪ್ರಪಂಚವನ್ನು ಬರೆದಿದ್ದಾನೆ. ಇವನು ಬ್ರಾಹ್ಮಣ ಕವಿ ಎಂದು ತೋರುತ್ತದೆ ; ಇವನ ತಂದೆ ಲಕ್ಕರಾಜ. ನಮಗೆ ದೊರೆತ ಈತನ ಗ್ರಂಥದ ಪ್ರತಿ 1714ರಲ್ಲಿ ಬರೆದುದು. ಕವಿಯ ಕಾಲವು ಸುಮಾರು 1500 ಆಗಿರಬಹುದೆಂದು ಊಹಿಸುತ್ತೇವೆ. ಹಿಂದೆ ಶಕುನಶಾಸ್ತ್ರವನ್ನು ಬರೆದವರಲ್ಲಿ ವಸಿಷ್ಠ, ಗಾರ್ಗ್ಯ, ಲಾಕುಳನಾಥ, ವಸಂತರಾಜ ಇವರುಗಳ ಹೆಸರನ್ನು ಕವಿ ಹೇಳಿದ್ದಾನೆ.

ಇವನ ಗ್ರಂಥ

ಶಕುನಪ್ರಪಂಚ

ಇದು ಕಂದವೃತ್ತಗಳಲ್ಲಿ ಬರೆದಿದೆ ; ಅಧ್ಯಾಯ 25, ಪದ್ಯ 620. ಇದಕ್ಕೆ ಪಿಂಗಲಿಯಶಾಸ್ತ್ರ, ಪಿಂಗಲಿಯಶಕುನ ಎಂಬ ಹೆಸರುಗಳೂ ಉಂಟು. ಗ್ರಂಥಾವತಾರದಲ್ಲಿ ಪಂಪಾವಿರೂಪಾಕ್ಷಸ್ತುತಿಯಿದೆ. ಬಳಿಕ ಕವಿ ಗಣೇಶ, ಸರಸ್ವತಿ, ಚಾಮುಂಡಿ, ದಿಕ್ಪಾಲರು ಇವರುಗಳನ್ನು ಸ್ತುತಿಸಿ " ಪಿಂಗಲಿಯ ಶಾಸ್ತ್ರಾನೀಕಸಾರಂಗಳಂ ಪೇೞ್ವೆಂ " ಎಂದು ಗ್ರಂಥವನ್ನು ಆರಂಭಿಸಿದ್ದಾನೆ. ಇದರಲ್ಲಿರುವ ವಿಷಯುಗಳು ಈ ಪದ್ಯದಲ್ಲಿ ಸೂಚಿಸಿವೆ:

ಸ್ವರವಾಕಸ್ಮಿಕಚೇಷ್ಟಾಗತಿಸಮುದಯಮುಂ ರಾಜ್ಯಮುಂ ಸೇವೆಯುಂ ಬಂ |
ಧುರವೃಷ್ಟ್ಯರ್ಘಂ ವಿವಾಹಂ ಬೆಳೆ ರುಜೆ ಗಮನಂ ಗರ್ಭಮುಂ ದ್ಯೂತನಷ್ಟಂ ||
ವರಚೋರಂ ಬಂಧನಂ ಭೋಜನಮತಿಶಯನಿಕ್ಷೇಪಮೆಂದೆಂಬ ನಾನಾ |
ಪರಿಯಿಂ ಸರ್ವಾಧಿಕಾರಂಗಳನೆ ಶಕುನದಿಂ ಪೇಳ್ದನೀಚಾಕರಾಜಂ ||

ಗ್ರಂಥಾಂತ್ಯದಲ್ಲಿ ಈ ಗದ್ಯವಿದೆ—

ಇದು ಸಕಲಜನಮನೋರಂಜನಂ ಪಿಂಗಲಿಶಾಸ್ತ್ರಸಮುದಿತತ್ರಿಕಾಲಜ್ಞಾನೋದಯಂ ಶ್ರೀಚಾಕರಾಜವಿರಚಿತಮಪ್ಪ ಶಕುನಪ್ರಪಂಚದೊಳ್

ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ಕಳಸಂ ಕನ್ನಡಿ ವಿಪ್ರಸಂಕುಳಮು..ದ್ಯಾನಮುಂ ಗೀತಮುಂ |
ಗಳಸದ್ವಾಕ್ಯ ಪತಾಕೆ ತೋರಣ ಗಜಂ ಮೇಣಶ್ವ ಸೌಗಂಧಮು ||
ಜ್ವಳಸತ್ಪುಷ್ಪಫಲಾಳಿಯುಂ ಮೊಸರು ಪಾಲುಂ ತುಪ್ಪಮಿಂತೆಲ್ಲಮುಂ |
ತಿಳಿಯಲ್ಕೊಳ್ಳಿದುವೆಂದು ಪೇಳ್ದನೊಲವಿಂ ಶ್ರೀಲಕ್ಷ್ಮರಾಜಾತ್ಮಜಂ ||
ಮದುವೆಯ ಗೃಹದೊಳ್ಪಕ್ಕಿಯು | ಮುದದಿಂ ಶಿಬಿರವದಿನಂತರಾಳದಿ ಕೂಗಲ್ |
ಮದುವೆಯುಮಕ್ಕುಂ ಕಡೆಯೊಳ್|ಮುದವಳಿಗೆಯು ಬೇಱಿದೊರ್ವಗಂ ವಧುವಪ್ಪಳ್||
ಸಲೆ ಮಧ್ಯಾಹ್ನಂಬರಂ ಸೇವೆಗಳು ಸಮಮುಮಾಗಲ್ಕೆ ಮೇಣ್ ಬೈಗುಮುಟ್ಟಂ |
ಬಳಿವೆಂತುಂ ತೋಱಲಾಗಳ್ ಸಮಮನೊಡನೆ ಬಾಯ್ಕೊಳ್ವೊಡಂ ಮತ್ತೆ ಗೀತಂ ||
ಗಳುಮೆಂತುಂ ಭಾವಿಸಲ್ಕಾವಿಷಮವೆನಿಪೊಡಂ ಪ್ರಾಜ್ಯಸಾಮ್ರಾಜ್ಯಮಕ್ಕುಂ |
ತಿಳಿ ನೀನೆಂದೈದೆ ನೋಳ್ಪಿಗುಸಿರಿದನೊಲವಿಂ ಕೂರ್ತು ತಾಂ ಚಾಕರಾಜಂ ||

---

## ರೇಚುಗ, ಕುಂತಿ, ಚವುಂಡಿ. ಸು. 1500

ಮುದ್ರಿತವಾಗಿರುವ ನೀತಿಸಾರವೆಂಬ ಗ್ರಂಥದಲ್ಲಿಯ

ವರರುಚಿ ಕಾಳಿದಾಸ ಸುಕುಮಾರಕುಮಾರಕವ್ಯಾಸ ಬಾಣನುಂ |
ಹರಿಹರಸಾರ್ವಭೌಮಕವಿ ರನ್ನನು ರೇಚುಗ ದುರ್ಗಸಿಂಹನುಂ ||
ವರಕವಿಬತ್ತಲೇಶ್ವರನು ರಾಘವನಗ್ಗಳರುದ್ರಭಟ್ಟನುಂ |
ತುರಗಮಯೂರಹಂಪುಗನು ಕುಂತಿಚವುಂಡಿಯರೇ ಕವೀಂದ್ರರು ||

ಎಂಬ ಪದ್ಯದಲ್ಲಿ ರೇಚುಗ, ಕುಂತಿ, ಚವುಂಡಿ ಎಂಬವರನ್ನು ಕವಿಗಳ ಗೋಷ್ಠಿಯಲ್ಲಿ ಸೇರಿಸಿದೆ. ಇವರು ಆವ ಗ್ರಂಥಗಳನ್ನು ಬರೆದಿದಾ

ರೆಯೋ ತಿಳಿಯದು. ಇವರ ಕಾಲವು ಸುಮಾರು 1500 ಆಗಿರಬಹು ದೆಂದು ತೋರುತ್ತದೆ.

---

ಹದಿನಾರನೆಯ ಶತಮಾನದ ಕವಿಗಳ ಚರಿತವನ್ನು ಬರೆವುದಕ್ಕೆ ಮುಂದೆ ಕೆಲವು ಪದ್ಯಗಳಲ್ಲಿ ದೊರೆವ ಕವಿಗಳ ಬಿರುದುಗಳ ವಿಷಯವಾಗಿ ಒಂದೆರಡು ಮಾತುಗಳನ್ನು ಹೇಳುವುದು ಆವಶ್ಯಕವೆಂದು ತೋರುತ್ತದೆ.

## ಬಿರುದುಗಳು. ಸು. 1500

ಈ ಕೆಳಗೆ ಕೊಟ್ಟಿರುವ ಬಿರುದುಗಳು ಕೆಲವು ನೀತಿಬೋಧಕವಾದ ಪದ್ಯಗಳಲ್ಲಿ ದೊರೆಯುತ್ತವೆ. ಇವು ಆವ ಕವಿಗಳಿಗೆ ಅನ್ವಯಿಸುತ್ತವೆಯೋ ತಿಳಿಯದು. ಕವಿಗಳು ಸ್ವಕೃತಪದ್ಯಗಳ ಕೊನೆಯಲ್ಲಿ ತಮ್ಮ ಹೆಸರುಬಿರುದುಗಳನ್ನು ಹೇಳಿಕೊಳ್ಳುವ ಸಂಪ್ರದಾಯವಿರುವುದರಿಂದ ಈ ಬಿರುದುಗಳಲ್ಲಿ ಕೆಲವಾದರೂ ಕವಿಗಳಿಗೆ ಅನ್ವಯಿಸಬಹುದೆಂದು ತೋರುತ್ತದೆ. ಆದರೆ ಕವಿಗಳು ಇಂಥವರು, ಈಕಾಲದವರು ಎಂದು ನಿರ್ಣಯಿಸುವುದು ಸಾಧ್ಯವಲ್ಲ. ಸುಮಾರು 1500 ಎಂದು ಸ್ಥೂಲವಾಗಿ ಕಾಲವನ್ನು ಮೇಲೆ ಕೊಟ್ಟಿದ್ದೇವೆ. ಈ ಬಿರುದುಗಳಲ್ಲಿ ಕೆಲವು ಕವಿಗೆ ಸಂಬಂಧವಿಲ್ಲದೆ ಶ್ರೋತೃವಿಗೆ ಅನ್ವಯಿಸಬಹುದು.

### ಬಿರುದುಗಳು

ಕನ್ನಡಜಾಣ, ಕವಿಪಂಚಮಾರ್ಗಣ, ಗುಣರತ್ನ, ಚಂದನತಿಲಕ, ಚೂಡಾರತ್ನ, ಜಿನಮುನಿಪಾದ, ಬಲ್ಲನರರಸ, ಬುಧಜನಮಿತ್ರ, ಭೂಭುಜರತ್ನ, ಭೂಸುರತಿಲಕ, ಮದನಾಂಗನಾಶನ, ವರಕವಿಚಂದ್ರ, ವಾಣೀಮುಕುರ, ವಿದಗ್ಧಚೂಡಾರತ್ನ, ವಿದಗ್ಧಲಲಾಮ, ವಿವೇಕಚೂಡಾರತ್ನ, ವೈರಾಗ್ಯನಿಧಿ, ಸರಸ್ವತೀಮಣಿಹಾರ, ಸರಸ್ವತೀಮುಖತಿಲಕ, ಸುಕವಿಕಂಠಾಭರಣ,ಸುಕವಿಚೂಡಾರತ್ನ, ಸುಕವಿನಿಕರನಿಳಿಂಪ, ಸುಗುಣಕಂಠಾಭರಣ, ಸುಗುಣಕರಂಡ, ಸುಗುಣರತ್ನಕರಂಡ, ಸುಗುಣಾಭರಣ, ಸುಜನಮನೋಜ, ಸುಜನಮುಖಮಣಿಮುಕುರ, ಸುಜನೈಕಬಾಂಧವ.

ಈ ಬಿರುದುಗಳು ಬರುವ ಕೆಲವು ಪದ್ಯಗಳನ್ನು ಕೆಳಗೆ ಬರೆಯುತ್ತೇವೆ.—

### ಕನ್ನಡಜಾಣ

ಪೊಸಕಾಲದ ನವಿಲಾಟಂ | ಸಿಸುಗಳ ಮುದ್ದಾಟ ಹರಿಣಹರಿಣಿಯ ನೋಟಂ |
ರಸಕವಿಗಳ ಕರ್ಣಾಟಂ | ಶಶಿಮುಖಿಯೊಡಗೂಟದಂತೆ ಕನ್ನಡಜಾಣಾ ||

ಕಟ್ಟದೆ ಪಂಚೇಂದ್ರಿಯಮಂ | ಮುಟ್ಟದೆ ಪರತತ್ವದಲ್ಲಿ ಮನವದು ಯೋಗದ |
ವಟ್ಟವನಱಿಯದೆ ಸಗ್ಗದ | ಬಟ್ಟೆಯನೆಂತಱಿವರಣ್ಣ ಕನ್ನಡಜಾಣಾ ||
ಎಡಱದೆ ತಡೆಯದೆ ತಲೆಯಂ | ಕೊಡಹದೆ ಕಡುವಹಿಲಜಾಡ್ಯವೆನಿಸದೆ ರಸಮಂ |
ಕೆಡಿಸದೆ ಸರ್ವರ ಚಿತ್ತ | ಕ್ಕೊಡಬಡಲೋದುವನೆ ಗಮಕಿ ಕನ್ನಡಜಾಣಾ ||

## ಗುಣರತ್ನ

ಗುರು ದೈವಂ ವಿದ್ಯಾರ್ಥಿಗೆ | ತರುಣಿಗೆ ಪತಿ ದೈವಮುದಱಿ ಮನುಜರ್ಗೆಲ್ಲಂ |
ಪೊರೆವನೆ ದೈವಂ ಧರೆಯೊಳ | ಗರಸಂಗಂ ಪ್ರಜೆಯೆ ದೈವಮೆಲೆಗುಣರತ್ನಾ ||
ಧರ್ಮಕೆ ಕರ್ಮಕ್ಕತಿಥಿಗೆ | ಪೆರ್ಮೆಯ ಪಿತೃಗಳ್ಗೆ ದೇವಕಾರ್ಯಕ್ಕೆಂದುಂ |
ನಿರ್ಮಳಸಂತತಿಗಳ್ಗಂ | ಕೂರ್ಮೆಯ ಕುಲವಧುವೆ ಮುಖ್ಯಮೆಲೆಗುಣರತ್ನಾ ||
ರಾಗಿಸದಿಮ್ಮೆನ್ನದೆ ನೆಱೆ | ಬೇಗಂ ಕೇಳ್ದಾಗಳಲ್ಲಿ ಸುಖಿಸದೆ ತಲೆಯಂ |
ತೂಗದೆ ಹಾರೈಸದ ದು | ರ್ವೇಗಿಗೆ ಪೇಱುವರೆ ನೀತಿಯಂ ಗುಣರತ್ನಾ ||

## ಚೂಡಾರತ್ನ

ಓದಿನೊಳಲ್ಲದೆಯಿಹಪರ | ಸಾಧನಸಂಪತ್ತುಮಾಗದದುಕಾರಣದಿಂ |
ಓದುವುದು ಸಕಲಶ್ರುತಮಂ | ಭೇದಿಸಲಳವಪ್ಪುದಲ್ತೆ ಚೂಡಾರತ್ನಾ ||
ಓರಂತಿದಿರಿನ ಹೃದಯದ | ಸಾರಾಸಾರತೆಯನಱಿದು ನುಡಿವಂಗಿಳೆಯೊಳ್ |
ಕೂರದರಾರ್ ಮೆಚ್ಚದರಾ | ರಾರಾಧಿಸದಿರ್ಪರಾರೊ ಚೂಡಾರತ್ನಾ ||
ಸಿರಿ ತನಗೊಲ್ದಲ್ಲಿಯೆ ಕರೆ | ಕರೆದೀವುದು ಬಂಧುಜನಕಮಾಶ್ರಿತಜನಕಂ |
ಕರೆದೀಯದಿರ್ದೆಯಾದೊಡೆ | ಸಿರಿ ಸಂತೆಯ ನೆರವಿಯಂತೆ ಚೂಡಾರತ್ನಾ ||
ಎಲ್ಲಿ ಸುಶೀಲಂ ಸದ್ಗುಣ | ಮೆಲ್ಲಿ ದಯಾಧರ್ಮಮೆಸೆವ ಸತ್ಯಂ ನೆಲೆಗೊಂ |
ಡಲ್ಲಿಯೆ ಆಯುಂ ಸಿರಿಯುಂ | ಸಲ್ಲೀಲೆಯೊಳಿರ್ಪುವಲ್ತೆ ಚೂಡಾರತ್ನಾ ||
ಶರಣೆನೆ ಕಾವುದು ಬೇಡಿದೊ|ಡಿರದೀವುದು ತೊಡರೆ ಸೆಡೆಯದಿರುವುದು ಪುಸಿಯೊಳ್|
ಬೆರೆಯದೆ ನಡೆವುದು ನಡೆಯದೊ | ಡರಸಂ ಕಡುಬರಸನಲ್ತೆ ಚೂಡಾರತ್ನಾ ||
ಓಡಿಸಿದಂ ಹರಿಯಂ ತಿರಿ | ದೂಡಿಸಿದಂ ಹರನನಜನ ತಲೆಗಳನರಿದೀ |
ಡಾಡಿಸಿದನೆಂದೊಡುಱಿದರ | ನೋಡಾಡಿಸಿ ಕಾಡದಿಹನೆ ಚೂಡಾರತ್ನಾ ||
ಪೂತೊಳ್ಳಿತು ಕಾತೊಳ್ಳಿತು | ಬೀತೊಳ್ಳಿತು ಕಲ್ಪವೃಕ್ಷಮೆಲವದಮರನುಂ |
ಪೂತೇವುದೊ ಕಾತೇವುದೊ | ಬೀತೇವುದೊ ಧಾತ್ರಿಯಲ್ಲಿ ಚೂಡಾರತ್ನಾ ||
ಮೊಗಮೆಂಬ ತಂಬಟಂ ನಾ | ಲಗೆಯೆಂಬಾಕುಡುಹಿನಿಂ ದರಿದ್ರದ ಭಯದಿಂ |
ಮಿಗೆ ಹುಯ್ಯಲಿಡುವ ವಂದಿಯ | ಬಗೆಯದನೇ ಪಾಪಿಯಲ್ತೆ ಚೂಡಾರತ್ನಾ ||

ಕ್ಷಿತಿಯೊಳ್ ಕರ್ಣಾಟಂ ಸಂ | ಸ್ಕೃತಕಧಿಕಮದೆಂತೆನಲ್ಕೆ ಯವ್ವನೆಯವ್ವಾ |
ಸತಿಯ ಸುರೂಪಂ ಜಾಣು | ನ್ನತಿ ರತಿಯೇನವ್ವೆಗುಂಟೆ ಚೂಡಾರತ್ನಾ ||

ಬಲ್ಲವರರಸ

ಪರವಧುವಿಂಗಳಿಪಿದೊಡಿಹ|ಪರ ಕೆಡುಗುಂ ನೃಪತಿ ಮುಳಿಗು ಗಂಡರ್ ಕೊಲ್ವರ್ |
ಪುರದೊಳಗೆ ಹೊಲೆಯಕೆಱುವರ್ | ಪರವಧುವಿನ ಸಂಗ ಬೇಡ ಬಲ್ಲವರರಸಾ ||

ಬುಧಜನಮಿತ್ರ

ಕುತ್ತದ ಹರವರಿ ಪಾಪದ | ಬಿತ್ತು ಪರಾಭವದ ಬೆಳಸು ಪಸಿದ ಕೃತಾಂತಂ |
ಗೆತ್ತಿದ ಬೋನಂ ತನುವಿದ | ನಿತ್ಯಂ ತಾನೆಂದು ತಿಳಿಗೆ ಬುಧಜನಮಿತ್ರಾ ||

ಭೂಭುಜರತ್ನ

ಒಡವೆಯನಿತ್ತುಂ ಸಂತತ | ಮೊಡನುಂಡುಂ ಕೂಸುಗೊಟ್ಟುಮೆಂದುದನೆಂದುಂ|
ಕಡುಗೂರ್ತಮಪಿತಬಲಮುಂ | ಕಿಡಿಸುವುದುಚಿತಂ ನೃಪಂಗೆ ಭೂಭುಜರತ್ನಾ ||

ವಿದಗ್ಧಲಲಾಮ

ನಡೆವೆಡೆಯೊಳ್ ನುಡಿವೆಡೆಯೊಳ್|ಕುಡುವೆಡೆಯೊಳ್ ತನಗೆ ಸಿಂದೆ ಪೊರ್ದದತೆಱದಿಂ|
ನಡೆವುದು ನುಡಿವುದು ಕುಡುವುದು|ಪಡೆವುದು ಸತ್ಕೀರ್ತಿಯಂ ವಿದಗ್ಧಲಲಾಮಾ ||
ಬಲ್ಲವರಿವರಱಿಯದರಿವ | ರೊಲ್ಲದರಿವರೊಲ್ವರಿವರದೆನ್ನದೆ ಸಲೆ ಸಂ |
ದೆಲ್ಲರ ಚಿತ್ತಕ್ಕಂ ಸಲೆ | ಬಲ್ಲೊಡವಂ ಬಲ್ಲವಂ ವಿದಗ್ಧಲಲಾಮಾ ||

ವಿವೇಕಚೂಡಾರತ್ನ

ಪೞಿವಾವುದು ಕುಲಭಂಗಂ | ತಿಳಿವಾವುದು ಸಮತೆ ಬಂಧವಾವುದು ಮೋಹಂ |
ಕಳವಾವುದನೃತವೆಡರಿಂ | ದುೞಿವಾವುದು ಧೃತಿ ವಿವೇಕಚೂಡಾರತ್ನಾ ||

ಒಂದನೆಯ ಮಂಗರಾಜನ (ಸು. 1360) ಖಗೇಂದ್ರಮಣಿದರ್ಪಣ ದಲ್ಲಿ ವಿವೇಕಚೂಡಾರತ್ನ, ವಿದಗ್ಧಚೂಡಾರತ್ನ, ಬುಧಮಿತ್ರ ಎಂದು ಮುಗಿವ ಕೆಲವು ಪದ್ಯಗಳು ದೊರೆಯುತ್ತವೆ.[1]

ವೈರಾಗ್ಯನಿಧಿ

ಮುಚ್ಚದ ಹಱಿಹುಣ್ಣಂ ಕೊಳೆ|ಬಚ್ಚಲ ಕುೞಿ ಕೀವಿನೊಱತೆಯಿವನಂಗನೆಯರ್|
ಮುಚ್ಚಿ ಮುಸುಕಿಟ್ಟು ಲೋಕ | ಕ್ಕಚ್ಚುಗಮಂ ಮಾಟ್ಪರೈಸೆ ವೈರಾಗ್ಯನಿಧೀ ||

1. Vol. I, 337.

### ಸರಸ್ವತೀಮುಖತಿಲಕ

ರೋಗಿಯದಾವಂ ಖಣಿ ಸುಖ । ದಾಗರನಾವಂ ಜಿತೇಂದ್ರಿಯಂ ಗುರುಪದಸಂ ।
ಯೋಗಿಯದಾವಂ ಭಕ್ತ್ಯೋ । ದ್ಯೋಗದೊಳಿರ್ಪಂ ಸರಸ್ವತೀಮುಖತಿಲಕಾ ॥

ಪರಮಾಗಮಸಾರವನ್ನು ಬರೆದ ಚಂದ್ರಕೀರ್ತಿಗೆ (ಸು. 1400) ಈ ಬಿರುದಿದ್ದಂತೆ ತೋರುತ್ತದೆ.

### ಸುಕವಿಕಂಠಾಭರಣ

ಅವರವರಿನಪ್ಪ ಕಾರ್ಯ್ಯಮ|ನವರವರಿಂ ಮಾಡು ಬೇಂಟೆನ್ವೋಪೊಡೆ ನಾಯಂ ।
ತವೆ ಕಟ್ಟಿ ನಡೆವರಲ್ಲದೆ | ಕವಿಲೆಯನುಯ್ದಪರೆ ಸುಕವಿಕಂಠಾಭರಣಾ ॥
ಹಾಡಿಂಗೋದಿಂಗಱಿಯದ । ಪೇಡೆಗಳಂ ಬೇಡಿಬೇಡಿ ಬೆಳಗಪ್ಪುದಱಿಂ ।
ಬೇಡುವುದು ಕುಡುವನಂ ಕೊಂ | ಡಾಡುವನಂ ಕೂಡೆ ಸುಕವಿಕಂಠಾಭರಣಾ ॥

### ಸುಕವಿನಿಕರನಿಳಿಂಪ

ಬಾರೋ ಎನಲಯ್ಯಯ್ಯಾ|ಸಾರೋ ಎನಲಯ್ಯ ಆರೊ ಎನಲಯ್ಯಯ್ಯಾ ।
ತೀರದ ಸೇವೆಯ ದುಃಖವ | ನಾರುಪಮಿಸಬಹುದು ಸುಕವಿನಿಕರನಿಳಿಂಪಾ ॥

### ಸುಗುಣಕಂಠಾಭರಣ

ಕೆಟ್ಟ ವಚನದೊಳೆ ಹಿರಿಯರ | ದಟ್ಟಿಸಿ ಶರಣೆಂದೊಡವರ ನೋವಱಿದಪುದೇ ।
ಸುಟ್ಟುರೆ ಬಾವನ್ನವ ತೇ | ದಿಟ್ಟೊಡೆ ಕಂಪುಂಟೆ ಸುಗುಣಕಂಠಾಭರಣಾ ॥

### ಸುಗುಣಕರಂಡ

ಹಿಂದೆ ಗೞಿಸಿದುದು ಪೋದುದು|ಮುಂದಕ್ಕಿನ್ನೇವೆನೆಂದು ಚಿಂತಿಸಲೇಕೈ ।
ಅಂದಂದು ಸೇದುಬಾವಿಗೆ|ತಂದುದಕವನೆಱೆದರುಂಟೆ ಸುಗುಣಕರಂಡಾ ॥
ತಕ್ಕರ್ ಬರಲುಚಿತಾಸನ|ವಿಕ್ಕಿ ಕೆಲಕ್ಕೆಱ್ದು ಬನ್ನಿಮೆಂದೊಡೆ ಬಾಯೇಂ ।
ಮುಕ್ಕಹುದೆ ಅವನ ಸಿರಿ ತಾಂ|ಚಕ್ಕನೆ ಪೋದಪುದೆ ಸಹಜಸುಗುಣಕರಂಡಾ ॥

### ಸುಗುಣರತ್ನಕರಂಡ

ಕುಡಲುಂ ಭೋಗಿಸಲುಂ ಸಿರಿ|ಕಿಡುವುದೆ ಕೆಟ್ಟೊಱತೆ ತೋಡೆ ತವನಿಧಿಯಕ್ಕುಂ ।
ಕುಡದನ ಭೋಗಿಸದನ ಸಿರಿ|ಪಡಿಗದ ನೀರಂತೆ ಸುಗುಣರತ್ನಕರಂಡಾ ॥
ಹುಡಿಯೊಳಗೆ ಕೆಡಪಿ ತುಪ್ಪವ|ನುಡುಗುವ ಪೆರ್ಮರುಳಿನಂತೆ ಮಾನ್ಯರ ಮನಮಂ ।
ಕೆಡೆ ನುಡಿದು ಚರಣವಿಡಿದೊಡೆ|ಬಿಡುಪುದೆ ಮನದೇಱು ಸುಗುಣರತ್ನಕರಂಡಾ ॥
ಸಾವಾವುದು ಯಾತನೆಯಱೆ|ವಾವಾವುದು ಜಾರವನಿತೆ ಮಾನ್ಯರ ಮನದೇ ।
ಱಾವುದಮನ್ನಣೆ ಪಾತಕ |ವಾವುದು ಪರನಿಂದೆ ಸುಗುಣರತ್ನಕರಂಡಾ ॥

## ಹದಿನಾರನೆಯ ಶತಮಾನದ ಕವಿಗಳು.

---

### ಮಂಗರಸ[1] III 1508.

ಈತನು ಜಯನೃಪಕಾವ್ಯ, ಪ್ರಭಂಜನಚರಿತೆ, ಶ್ರೀಪಾಲಚರಿತೆ, ನೇಮಿಜಿನೇಶಸಂಗತಿ, ಸಂಯಕ್ತ್ವಕೌಮುದಿ, ಸೂಪಶಾಸ್ತ್ರ ಈ ಗ್ರಂಥಗಳನ್ನು ಬರೆದಿದ್ದಾನೆ.

ಇವನು ಜೈನಕವಿ; ಇವನ ಪಿತಾಮಹನು ಮಾಧವ; ತಂದೆ ಯದುವಂಶದ ಮಹಾಮಂಡಲೇಶ್ವರ ಚೆಂಗಾಳ್ವನೃಪರ ಸಚಿವಕುಲೋದ್ಭವನಾದ, ಉದ್ಧವಕುಲಚೂಡಾಮಣಿ ಶಾರ್ದೂಲಾಂಕನೆಸಿಸಿದ, ಹೊಯ್ಸಳದೇಶದ ಮಧ್ಯದಲ್ಲಿರುವ ಹೊಸವೃತ್ತಿಯನಾಡ ಮಹಾಪ್ರಭು ಕಲ್ಲಹಳ್ಳಿಯ ವಿಜಯಭೂಪಾಲ ; ತಾಯಿ ದೇವಿಲೆ ; ಗುರು ಚಿಕ್ಕಪ್ರಭೇಂದು. ಈತನಿಗೆ ಪ್ರಭುರಾಜ, ಪ್ರಭುಕುಲರತ್ನದೀಪ ಎಂಬ ಬಿರುದುಗಳಿದ್ದಂತೆ ತಿಳಿಯುತ್ತದೆ. ವಿಜಯಭೂಪಾಲನು "ಚೆಂಗಾಳ್ವನೃಪರ ದಂಡನಾಥಕುಲತಿಲಕಂ" ಎಂದೂ "ರಣಕಭಿನವವಿಜಯಂ" ಎಂದೂ ಹೇಳಿರುವುದರಿಂದ ಆತನು ಯುದ್ಧವೀರನಾಗಿದ್ದಂತೆ ತೋರುತ್ತದೆ. ಸಂಯಕ್ತ್ವಕೌಮುದಿಯನ್ನು ಶಕ 1431 ರಲ್ಲಿ, ಎಂದರೆ 1508ರಲ್ಲಿ ಬರೆದಂತೆ ಕವಿ ಹೇಳುತ್ತಾನೆ.

ಪೂರ್ವಕವಿಗಳನ್ನು ತತ್ಕೃತಕಾವ್ಯನಾಮದೊಡನೆ ನೇಮಿಜಿನೇಶಸಂಗತಿಯ ಈ ಪದ್ಯಗಳಲ್ಲಿ ಸ್ಮರಿಸುತ್ತಾನೆ—

ಪುರುಜಿನಪತಿಯ ಪುರಾಣಮನುಸಿರಿದ|ವರಕವಿಪಂಪರಾಜನನು |
ದುರಿತವಿದೂರಾಜಿತಚರಿತೆಯ ಪೇಳ್ದ|ಗರುವರನ್ನನ ಸ್ತುತಿಸುವೆನು ||
ದೇವಚಂದ್ರಪ್ರಭರನು ಕೊಂಡಾಡಿದ|ಶ್ರೀವಿಜಯರ ಪುಷ್ಪದಂತ |
ಭಾವಜಾರಿಯ ಪೊಗಳಿದ ಗುಣವರ್ಮನ|ಭಾವಶುದ್ಧಿಯೊಳು ನೆನೆವೆನು ||
ಪದಿನಾಲ್ಕನೆಯ ತೀರ್ಥಕರ ಚರಿತ್ರವ|ನೊದವಿ ಪೇಳಿದ ಜನ್ನಗನ |
ಮುದದಿಂದ ಧರ್ಮಚರಿತ್ರವನುಸಿರಿದ|ಚದುರಮಧುರನ ಸ್ತುತಿಪೆನು ||
ಶಾಂತೀಶನ ಪೊಗಳಿದ ಪೊನ್ನನ ರಘು|ಕಾಂತನ ಮಲ್ಲಿತೀರ್ಥಕರ |
ಸಂತಸದಿಂ ಪೊಗಳಿದ ನಾಗಚಂದ್ರನ|ಸಂತತಮಭಿವಂದಿಸುವೆನು ||

---

1. Vol. I, 336.

ಅಂಗಜರಿಪುನೇಮಿವೀರೇಶಚರಿತವ । ಪೊಂಗಿ ಪೊಗಳ್ದು ಕಣ್ಣಪನ ।
ಶೃಂಗಾರಕಾವ್ಯಲೀಲಾವತಿಯನು ಪೇ|ರ್ಪಾಂಗಿಕನೇಮಿಯ ನೆನೆವೆ ||
ಬಂಧುರಭರತಯಾದವವಂಶವನು ಕೃತಿ|ಬಂಧದೊಳಗೆ ಸೇರಿಸಿದ |
ಬಂಧುವರ್ಮನ ನೆನೆದು ನೇಮಿಚರಿತಪ್ರ | ಬಂಧವನಿರದುಸಿರುವೆನು ||

ಇತರಗ್ರಂಥಗಳಲ್ಲಿ ಸುಜನೋತ್ತಂಸ, ಅಗ್ಗಳ ಇವರನ್ನೂ ಸಹ ಸ್ಮರಿಸಿದ್ದಾನೆ. ತನ್ನ ಕವಿತಾಚಾತುರಿಯನ್ನು ಈ ಪದ್ಯಗಳಲ್ಲಿ ಹೇಳಿಕೊಂಡಿದ್ದಾನೆ:

ತಕ್ಕರ ಗೋಷ್ಠಿ ತನೂದರಿಯರ ಪೊಸ|ತಕ್ಕೆ ತೊಡಂಬೆಯಲರ್ ಪೊಸ ಜೇನೆಯ್ |
ಸಕ್ಕರೆ ತೀವಿದ ತನಿವಾಲೂದುವ ಕೆಂಕಣ ತೆಳ್ಳಿಲರು ||
ಮಕ್ಕಳ ಮುದ್ದುವೆರೆದ ನುಡಿ ಮದುರಿತು|ಚೊಕ್ಕಳಿಕೆಯ ನವಚಂದ್ರಿಕೆಯೆನೆ ಹೃದ|
ಯಕ್ಕೆ ವಿಲಾಸಮನೀವುದು ಸತ್ಪ್ರಭುರಾಜನ ಸವಿವಾತು ||
ರಸದಾಳಿಯಂತೆ ರಮಣಿಯರ ಚೆಂದುಟಿಯಂತೆ|ಪೊಸ ಜೇನ ಕೊಡದಂತೆ ಪೊಣ್ಮುವೆಳಜವ್ವನೆಯ |
ರೊಸೆದೀವ ತಾಂಬೂಲದಂತೆ ಕಾದಿಱುಪಿಯಾಱಿದ ಬಟ್ಟವಾಲಿನಂತೆ ||
ಅಸಿಯಳೊಡನಾಟದಂತರಮಾವಿನಿನಿವಣ್ಣ | ರಸದಂತೆಯಮೃತದಂತತಿರುಚಿಯ ಪಡೆದುದತಿ |
ರಸಿಕನತಿನಿಪುಣಮಂಗರಸನೊಪ್ಪುವ ವಾಕ್ಪ್ರಗುಂಫನಂ ಭಾವಿಸುವೊಡೆ ||

ಇವನ ಗ್ರಂಥಗಳಲ್ಲಿ

### 1. ಜಯನೃಪಕಾವ್ಯ

ಇದು ಪರಿವರ್ಧಿನೀಷಟ್ಪದಿಯಲ್ಲಿ ಬರೆದಿದೆ; ಸಂಧಿ 16, ಪದ್ಯ 1037. ಇದರಲ್ಲಿ ಕುರುಜಾಂಗಣವಿಷಯದ ರಾಜನಾದ ರಾಜಪ್ರಭದೇವನ ಮಗ ಜಯನೃಪನ ಕಥೆ ಹೇಳಿದೆ. ಈ ಚರಿತೆಯನ್ನು ಹಿಂದೆ ಜಿನಸೇನನು ರಚಿಸಿದ್ದಂತೆಯೂ ಅದನ್ನು ತಾನು "ವಾಲೊಳಗಯಿದಾರೆಯ ಸಕ್ಕರೆಯಂ ಬಿಡವೆರಸುವ ತೆಱದಿಂ ಸಕ್ಕದದೊಳು ಕನ್ನಡವಾತಂ ಬೆರಸಿ" ರಚಿಸಿದಂತೆಯೂ ಕವಿ ಹೇಳುತ್ತಾನೆ. ಗ್ರಂಥಾವತಾರದಲ್ಲಿ ಜಿನಸ್ತುತಿ ಇದೆ. ಅನಂತರ ಕವಿ ಸಿದ್ಧಾದಿಗಳು, ಯೋಗಿಗಳು, ಸರಸ್ವತಿ ಇವರನ್ನು ಸ್ತುತಿಸಿ ಬಳಿಕ ಗುಣಭದ್ರನಿಂದ ಶ್ರುತಮುನಿಯವರೆಗೆ[1] ಗುರುಗಳನ್ನು ಹೊಗಳಿದ್ದಾನೆ.

---

1. ಗುಣಭದ್ರ, ಕವಿಪರಮೇಷ್ಠಿ, ಬಾಹುಬಲಿ, ಅಕಳಂಕ, ಜಿನಸೇನ, ಪೂಜ್ಯಪಾದ, ಪಭೇಂದು, ತತ್ಪುತ್ರ ಶ್ರುತಮುನಿ.

ಇವನ ಬಂಧವು ಲಲಿತವಾಗಿದೆ ; ಸ್ವಭಾವೋಕ್ತಿ ಹೃದಯಂಗಮವಾಗಿದೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ವಸಂತ

ಮೊತ್ತಮೊದಲ್ ಮೊಗಗೆಡಿಸಿದ ಹಿಮರುಜೆ|ಯೊತ್ತಂಬವನಱಿಗೆ ಸುತಂ ಮೆಯ್ಯೊಳ್|
ಪತ್ತಿದ ದದ್ರುರಮಂ ಪಱಿವಡಿಸುತ್ತುದಿರ್ದೆಲೆದಲೆಗಳೊಳು ||
ಮತ್ತೆ ಚಿಗುರನಿರದೊದವಿಸುತೂದುವ|ಮೆತ್ತನೆಲರನಮುದ್ದೋತ್ತಿ ವನೌಷಧಿ |
ಗುತ್ತಮವೈದ್ಯಂ ಬರ್ಪಂದದಿ ಬಂದೆಸೆದುದು ನವಚೈತ್ರಂ ||

ಚಂದ್ರೋದಯ

ಸ್ಮರಮೋಹನಶಸ್ತ್ರಂಮಾಡಲ್ ಸುರ|ವರನೆಂಬೊವಜನುದಯರಾಗದ ಕೇ |
ಸುರಿಯಿಂ ಕಾಸಿ ಬೞಿಕ ಸಂಧ್ಯಾಸಂದಂಶದೆ ಪಿಡಿದೆತ್ತಿ ||
ಭರದಿನುದಯಗಿರಿಯೆಂಬಡೆಗಲ್ಲೊಳ|ಗಿರಿಸಿ ಪೊಳೆವ ಪೊಸಲೋಹದುರುಳಿಯಂ |
ಪಿರಿದುಂ ಪೋಲ್ತುದು ಮುಂದೆಸೆಯೊಳ್ ಮೂಡುವ ಹಿಮಕರಬಿಂಬಂ ||

ಕಾಡು

ಎರಲೆಯ ಬೀಡೆಕ್ಕಲನ ಕೊಟಾರಂ | ಕರಡಿಯ ಹಟ್ಟಿ ಕಡವೆಯೂರ್ ಚಮರಿಯ |
ಹುರಮೆಂಟಡಿಯ ಹೊಟಿಲ್ ಕಾಟಿಯ ಕೊಟ್ಟಂ ಖೞ್ಗಿಯ ಪಳ್ಳಿ ||
ಅರಸುಮಿಗದ ಪಟ್ಟಣಮಾನೆಯ ಮಟ | ಮೆರಲುಣಿಗಳ ನೆಲೆವನೆಯೆನಲತಿಬಂ |
ಧುರಮಾದುದು ಭೀಮಾರಣ್ಯಾಮಗಣ್ಯಾಮೃಗಾಳಿಶರಣ್ಯಾಂ ||

ಕೊಲೆ

ಕೊಲೆಯಿಂ ಸಾವೆಡೆಯೊಳಗಾಜೀವಕೆ | ಸಲೆ ದುಃಖಂ ಜನಿಯಿಪುದಾದುಃಖದ |
ಫಲಮಾಕೊಂದವನಂ ನರಕಾವನಿಯೊಳಗುದಯಿಸಿ ಬೞಿಕ ||
ಪಲವಗೆಲಪ್ಪನ್ನೆವರಂ ದುಃಖದ | ಜಲನಿಧಿಯೊಳ್ ತೇಂಕಾಡಿಪುದದಱಿಂ |
ಕೊಲೆಯುಂ ಮಱೆವುದು ಸದ್ಧರ್ಮ ಕಣಾ ಭವ್ಯಜನೋತ್ತಂಸಾ ||

## 2 ಶ್ರೀಪಾಲಚರಿತೆ

ಇದು ಸಾಂಗತ್ಯರೂಪವಾಗಿದೆ ; ಸಂಧಿ 14, ಪದ್ಯ 1527. ಇದರಲ್ಲಿ ಪುಂಡರೀಕಿಣೀಪುರದ ದೊರೆಯಾದ ಗುಣಪಾಲನ ಮಗ ಶ್ರೀಪಾಲನ ಕಥೆ ವರ್ಣಿತವಾಗಿದೆ. ಈ ಗ್ರಂಥದ ಉತ್ಕೃಷ್ಟತೆಯನ್ನು ಕವಿ ಈ ಪದ್ಯಲ್ಲಿ ಹೇಳಿದ್ದಾನೆ—

ಇದು ಭಾವಕಜನಕರ್ಣವಿಭೂಷಣ । ಮಿದು ರಸಿಕರ ಚಿತ್ತದೆಱಕ ।
ಇದು ವಾಣೀಮುಖಮಾಣಿಕ್ಯಮುಕುರ ಮ । ತ್ತಿದು ಶೃಂಗಾರಸುಧಾಬ್ಧಿ ॥

ಗ್ರಂಥಾವತಾರದಲ್ಲಿ ಕವಿ ವೀರನಾಥನನ್ನು ಸ್ತುತಿಸಿದ್ದಾನೆ. ಬಳಿಕ ಸಿದ್ಧಾದಿಗಳು, ನವಕೋಟಿತಪಸಿಗಳು, ಸರಸ್ವತಿ ಇವರುಗಳನ್ನು ಸ್ತುತಿಸಿ ಅನಂತರ ಸುಭದ್ರ ಪೂಜ್ಯಪಾದ ಭದ್ರಬಾಹು ಬಾಹುಬಲಿ ಗೌತಮ ಗುಣಭದ್ರ ಕವಿಪರಮೇಷ್ಠಿಗಳನ್ನು ಹೊಗಳಿದ್ದಾನೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ಗದ್ದೆ

ಕಱಮೆಯ ಕದಿರ ಮೀಸಲ ಕಂಪನುಣಲೆಂ । ದಳಿಸಿಸುಗಳು ಕೊನೆಯೇಱ ।
ಪೊಳೆದುವು ಪೂಗಣೆಯನ ಪಸುರ್ಗಾವಿನ । ತೊಳಪ ನೀಲದ ಮಿಂಟೆಯಂತೆ ॥

ಚಂದ್ರಗ್ರಹಣ

ನವಮುಕುರವನೊಳಗಿಟ್ಟ ಕರ್ವಟ್ಟೆಯು । ಗವಸಣಿಗೆಯೊ ಎಂಬಂತೆ ।
ತವಕದೊಳಿಂದುಬಿಂಬವ ರಾಹುಮಂಡಲ । ತವೆ ನುಂಗಿ ಕಣ್ಗೆ ರಾಜಿಸಿತು ॥

ಚಂದ್ರಾಸ್ತ

ಚರಿಸಿದೆನಿರುಳು ರಕ್ಕಸನಂತೆ ದೋಷಾ । ಕರನಾದೆನೀಪಾಪವನು ।
ಪರಿಹರಿಸುವೆನೆಂದಸ್ತಾದ್ರಿಯೇಱ ಕ । ಮ್ಮರಿಬೀೞ್ವವೊಲು ಬಿದ್ದನಿಂದು ॥

ಕತ್ತಲೆ

ಪೊಡವಿವೆಣ್ಣಾದಿತ್ಯಮಂಡಲವೆಂದೆಂಬ । ಸೊಡರ್ಗುಡಿಯಿಂ ಕಜ್ಜಳವನು ।
ಹಿಡಿವ ಹಂಚಿನ ತೆಱನೆಂದೆನೆ ಕಾವಳ । ವಡಸಿ ಕಪ್ಪಾದುದಾಗಸವು ॥

ಸ್ತ್ರೀವರ್ಣನೆ

ಜಲಜದ ಸಿರಿ ಕುರುವಿಂದದ ಕಡುಗೆಂಪು । ತಳಿರ ಮಾರ್ದವವಲತಿಗೆಯ ।
ತಿಳಿರಸದೊಬ್ಬುಳಿಗೊಂಡಂದದೊಳು ಪ । ಜ್ಜಳಿಸಿದುವವಳ ಪಜ್ಜೆಗಳು ॥
ಕುರುಳಿಂದ್ರನೀಲ ಕುಲಿಶ ದಂತ ಜೆಂದುಟಿ । ಕುರುವಿಂದ ಮೈ ಪುಷ್ಯರಾಗ ।
ಚರಣ ವಿದ್ರುಮ ನಖ ವೈಡೂರ್ಯಮೆನೆ ರನ್ನ । ಗರುವಿನಂತೆಸೆದಳಾರಮಣಿ ॥

ಕೊಳ

ಅಳಿಯೊಟಕೆ ವನದೊಡತಿ ಹೇಮಾಂಬುಜ । ದಲರ್ಗಳ ಕೆಲದಟ್ಟೆಸಹಿತ ।
ಒಲಿದಿಟ್ಟ ಬೆಳ್ಳಿಯ ಪರಿಯಾಣದಂತೆ ಪ । ಜ್ಜಳಿಸಿದುದಾಕಾಸಾರ ॥

ಪೊಳೆಪುದೋಱುವ ಪೊಡೆಮಗುಚುವ ಸುೞಿಗೊಂಡು|ಸುೞಿವ ತೇಲ್ವ..ಮಡುಗೆ|
ಇೞಿವ ಮೇಲಕೆ ಪುಟನೆಗೆವ ಹಲವು ಮೀಂ | ಗಳೆನೊಪ್ಪಿತಾತಿಳಿಗೊಳನು ||

ಯವ್ವನಮದ

ನಾವೆಱೆಧರ್ಮಗಳಿಲ್ಲ ಮೊಲಗಟ್ಟಿಲೆಯಿಲ್ಲ | ದಱಿವೆಂಬುದೊಂದಿನಿತಿಲ್ಲ ||
ದುಱುದುಂಬಿತನವಲ್ಲದೆ ಜವ್ವನದೊಳ | ಗಱಿನೆಂಬುದೆಳ್ಳನಿತಿಲ್ಲ ||

ವೈರಾಗ್ಯ

ಮಕ್ಕಳ ನೆರವಿ ಮಂಜಿನ ಪುಂಜವಾಹೆ | ಮ್ಮಕ್ಕಳೆಲ್ಲರು ಮಱಲೇರಿ !
ಮಿಕ್ಕ ನಂಟರು ಮುಗಿಲೊಡ್ಡು ವೈಭವ ಶಬ | ಕಿಕ್ಕಿದ ಸಕಲಶೃಂಗಾರ ||

3 ಪ್ರಭಂಜನ ಚರಿತೆ

ಇದೂ ಸಾಂಗತ್ಯದಲ್ಲಿ ಬರೆದಿದೆ; ನಮಗೆ ದೊರೆತ ಪ್ರತಿ ಅಸಮಗ್ರ. ಇದರಲ್ಲಿ ಶುಂಭದೇಶದ ಭಂಭಾಪುರದ ರಾಜನಾದ ದೇವಸೇನನ ಮಗ ಪ್ರಭಂಜನನ ಕಥೆ ಹೇಳಿದೆ. ಗ್ರಂಥಾವತಾರದಲ್ಲಿ ಜಿನಸ್ತುತಿ ಇದೆ. ಬಳಿಕ ಕವಿ ಮಧ್ಯಮಗುರು, ಉಪಾಧ್ಯಾಯರು, ಸಾಧುಗಳು, ಸರಸ್ವತಿ, ಯಕ್ಷರು, ನವಕೋಟಿಮುನಿಗಳು, ಸ್ವಗುರು ಚಿಕ್ಕಪ್ರಭೇಂದು ಇವರುಗಳನ್ನು ಸ್ತುತಿಸಿದ್ದಾನೆ. ಇದರಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ-

ಮೇರು

ಅಂಬರವೆಸರ ಸುದತಿ ನರಲೋಕವೆಂ | ದೆಂಬ ಹಂಚಿನೊಳಂಜನವನು |
ಇಂಬಿನೊಳಿಡಲೆಂದಿಟ್ಟ ಹೆಜ್ಜೊಡರೆಂ | ದೆಂಬಂತೆ ಮೇರುವೊಪ್ಪಿದುದು ||

ದೇಶವರ್ಣನೆ

ಸಿರಿಯಿಕ್ಕಿದಾಣ ಸಿಂಗರಕೆ ತವರ್ಮನೆ | ಸುರಭಿಶರನ ಬೀಡುದಾಣ |
ಗರುವಿಕೆಯೆಂಬ ಗಾಡಿಯ ಭಾಂಡಾಗಾರ | ದಿರವಾದುದಾಜನಪದವು ||
ಚಂಡಾಳಿಗಳ ಚೆಲ್ಲಾಟದೇೞ್ಗೆ ಖರ | ದಂಡಜಡಾಶ್ರಯದೇೞ್ಗೆ |
ಬಂಡೆಂಬುದಾನಾಡ ಕಾಸಾರಮಧ್ಯದ | ಪುಂಡರೀಕದೊಳಲ್ಲದಿಲ್ಲ ||

ದುರ್ಜನ

ಉಂಟಾಗಿ ನೀರೆಱೆದೋವಿದವರ ಕಾಲ | ಕುಂಟುಮಾಡುವ ಬೇಲದಂತೆ |
ಕಂಟಕವನು ಕಾಣೆಪರು ಕೆಲಂಬರು | ನಂಟುಮಾಡುವ ಮಾನ್ಯರಿಗೆ ||

ಸ್ತ್ರೀಗರ್ಹಣ

ಮೊಲದ ಮಂಡೆಯಮೇಲೆ ಮೊಳೆಯಿಸುವರು ಕೊಂಬ|ನಲರನಾಗಸದೊಳಾಗಿಪರು |
ಹುಲಿಯ ಮೊಲೆಯ ಹಿಡಿದಾಹಾಲ ಕಱೆವರು । ಲಲನಾಜನಕದು ಸಹಜ ||

4 ಸೂಪಶಾಸ್ತ್ರ

ಇದು ವಾರ್ಧಕಷಟ್ಪದಿಯಲ್ಲಿ ಬರೆದಿದೆ; ಅಧ್ಯಾಯ 6 ; ಪದ್ಯ 356. ಇದರಲ್ಲಿ ಪ್ರತಿಪಾದಿತವಾದ ಅಂಶಗಳು—ಪಿಷ್ಟಪಾಕ, ಪಾನಕ, ಕಳವಮಾನ್ನಪಾಕ, ಶಾಕಪಾಕ ಇತ್ಯಾದಿ. ಕವಿ " ಷಡ್ರಸವಿಪಾಕಭೇದಮನೆನ್ನ ಬಲ್ಲಂದದಿಂ ಪೇೞ್ವೆನು, ಸಂಸ್ಕೃತಸೂಪಶಾಸ್ತ್ರದೊಳು ಎನಗೆ ಅಱಿವನಿತ ತೆಗೆದು ಕನ್ನಡದಿ ಬರೆದೆನು, ನಳಭೀಮಗೌರಿಮತದೊಳು ಪೇೞ್ವೆನು'' ಎನ್ನುತ್ತಾನೆ. ಈ ಗ್ರಂಥರಚನೆಗೆ ಕಾರಣವನ್ನು ಹೀಗೆ ಹೇಳುತ್ತಾನೆ---

ವಸುಧಾವಲಯದ ಜೀವಿಗಳ ತನುರಕ್ಷಣೆಗೆ|ರಸರೂಪಗಂಧಶಬ್ದಸ್ಪರ್ಶಭೋಗಂಗ |
ಳೆಸಕವೇ ಮುಖ್ಯಮಾಪಂಚವಿಧವಿಷಯಗಳ ಭೋಗೋಪಭೋಗದೊಳಗೆ ||
ರಸನೇಂದ್ರಿಯಂ ತುಷ್ಟಿವಡೆಯಲಿಹಪರಸೌಖ್ಯ | ಮುಸುಕುವುದು ನಿಜಮದಱಿ
ನಾಭೋಜ್ಯವಸ್ತುವಂ |
ಹಸನಾಗಿ ಪಾಕಮಂ ಮಾೞ್ಪ ವಿವರದ ಶಾಸ್ತ್ರಮಂ ಮನಂಗೊಂಡು ಪೇೞ್ದಂ ||

ಈ ಗ್ರಂಥದ ಉತ್ಕೃಷ್ಟತೆಯನ್ನು ಈ ಪದ್ಯದಲ್ಲಿ ತಿಳಿಸಿದ್ದಾನೆ-

ಇದು ಹರುಷದಿಂದ ಲಾಲಿಸಿ ಕೇಳ್ವೆನೆಂದೆಂಬ |
ಸುದತಿಯರ ಕಿವಿಗೆ ನವಮಾಣಿಕದ ಮಿಂಜೋಲೆ |
ಯಿದು ಕಲಿವೆನೆಂದೋದುವಬಲೆಯರ ಬಾಯ್ದೆಱೆಗೆ ನವಸುಧಾರಸದ ಪಿಂಡ ||
ಇದು ಪಾಕವಂ ಮಾೞ್ಪೆನೆಂದುಜ್ಜುಗಂಮಾೞ್ಪಂ।
ಚದುರೆಯರ ಕೈಗೆ ನವರತ್ನಮುದ್ರಿಕೆಯೆನಿಸಿತು |

ಗ್ರಂಥಾವತಾರದಲ್ಲಿ ಜಿನಸ್ತುತಿಯೂ ಸರಸ್ವತೀಸ್ತುತಿಯೂ ಇವೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ಘರಿವಿಳಂಗಾಯಿ

ಹುರಿದ ತೆಂಗಾಯಿ ನಸುಬೆಂದ ಬೇಳೆಯ ಹೆಸರು |
ಹುರಿದು ಬೇಯಿಸಿದ ಸೊಜ್ಜಿಗೆಯಿವನು ಕೂಡಿ ಸ |
ಕ್ಕರೆಯಿಕ್ಕಿ ಕರ್ಪೂರವನು ತಳೆದು ಪಿಂಡಮಂ ಮಾಡಿಯೇ ಸಣ್ಣನಾಗಿ ||

ಅರೆದಕ್ಕಿಯೊಳಗದ್ದಿ ಹೊಚ್ಚಹೊಸತುಪ್ಪದೊಳು |
ಪಿರಿದು ಹಸನಾಗಿ ಬೇಯಿಸಿ ತೆಗೆದು ತುಪ್ಪವಿಡೆ |
ಘರಿವಿಳಂಗಾಯೆಂದು ಪೆಸರ್ವಡೆದು ನಾಲಗೆಯಕೊನೆಗೆ ಪೀಯೂಷವಾಯ್ತು ||

## ಹಾಲಗಾರಿಗೆ

ಉತ್ತಮದ ಸೊಜ್ಜಿಗೆಯ ನೆನಹಿ ನೀರಂ ಹಿಂಡಿ |
ಮತ್ತದಕೆ ಬಟ್ಟವಾಲ್ತಿಳಿದುಪ್ಪಮಂ ತಳಿದು |
ಮೆತ್ತನಪ್ಪಂತು ಮಿದಿದಿರಿಸಿಯದಱರ್ಧ ಹಾಲೊಳಗುಕ್ಕರಿಸಿದಕ್ಕಿಯ ||
ಒತ್ತಿ ಹಾಲಿಂದೆಱೆದು ಸವೆದ ಕಣಿಕದೊಳು ಬೆರ |
ಸುತ್ತ ಸಕ್ಕರೆಯ ಪಾಕದೊಳಿಕ್ಕಿ ಪರಿಮಳವ |
ನೊತ್ತರಿಸಿ ತುಪ್ಪದೊಳು ಬೇಯಿಸಿದ ಹಾಲಗಾರಿಗೆ ಪಿರಿದು ಸವಿದೋಱದೇ ||

## ಸವಡುರೊಟ್ಟಿ

ನವನೀತಮಂ ಕೆನೆಯುಮುಂ ಬೆರಸಿ ಕಣಿಕಮಂ |
ಸವೆವಂತೆ ಕುಟ್ಟಿ ಬಟ್ಟಲಮಾಡಿ ಹಪ್ಪಳದ |
ಸಮನಾಗಿಯೊತ್ತಿಯಿಮ್ಮೈಗೆ ಬೆಣ್ಣೆಯ ತೊಡೆದು ನಾಲ್ಕೈದುಕಲ್ಲಡುಕಿ ಕಲ್ಲ ||
ಅವಱೆರಡುಮೈಗೆ ಪಿಟ್ಟಿಯ ಬಟ್ಟಲಂ ಕವಿಸಿ |
ಹವಣಱಿದು ಹಂಚಿನೊಳು ಸುಟ್ಟು ಪಿಟ್ಟಿಯನು ತೆಗೆ |
ದವಕೆ ತುಪ್ಪವನಿಕ್ಕಲವು ಸವಡುರೊಟ್ಟಿವೆಸರಂ ಪಡೆದು ರಂಜಿಸುವುವು ||

## ಹಿಮಾಂಬುಪಾನಕ

ಉದಕದೊಳಗರ್ಧ ಸಕ್ಕರೆಯಿಕ್ಕಿ ಕರಗಿಸುವ |
ಹದನಱಿದು ದಾಳಿಂಬಮಾದಲದ ಹುಳಿಯಿಕ್ಕಿ |
ಸದಕಿದೆ (?) ಅಕ್ಕಿ ಹಸಿಯಲ್ಲಮಂ ಹಾಕಿ ಬೆಂಡೆಯ ಬೇರಿನಿಂದ ತಿರುಹಿ ||
ಕದಡಿ ಪನಿನೀರ ಸೇವಂತಿಗೆಯ ಹೂವಿಕ್ಕಿ |
ಯದನು ಸೇವಂತಿಯಂ ಪೊರೆದ ಮಡಕೆಯೊಳಿರಿಸಿ |
ಚದುರರಂತದಕೆ ಸಲೆ ಸೊಗಯಿಪ ಹಿಮಾಂಬುಪಾನಕವೆಂದು ಹೆಸರಿಡುವುದು ||

## 5. ನೇಮಿಜಿನೇಶಸಂಗತಿ

ಇದು ಸಾಂಗತ್ಯದಲ್ಲಿ ಬರೆದಿದೆ ; ಸಂಧಿ 35, ಪದ್ಯ1538. ಇದ ರಲ್ಲಿ 22ನೆಯ ತೀರ್ಥಕರನಾದ ನೇಮಿನಾಥನ ಚರಿತವು ವರ್ಣಿತವಾಗಿದೆ. “ ನೇಮಿತೀರ್ಥಕರರ ಕಥನವ ಪಾಡುಗಬ್ಬದೊಳನುಗೆಯ್ವೆನು ” ಎಂದು

ಕವಿ ಹೇಳುತ್ತಾನೆ. ಗ್ರಂಥಾವತಾರದಲ್ಲಿ ನೇಮಿನಾಥಸ್ತುತಿ ಇದೆ. ಬಳಿಕ ಕವಿ ಸಿದ್ಧರು, ಸೂರಿಗಳು, ಉಪದೇಶಕರು, ಸಾಧುಗಳು, ಸರಸ್ವತಿ, ಸರ್ವಾಹ್ಣಯಕ್ಷ, ಯಕ್ಷೇಶ್ವರಿ, ಗಣಧರರು ಇವರುಗಳನ್ನು ಸ್ತುತಿಸಿ ಆಮೇಲೆ ಗೃಧ್ರಪಿಂಛಾಚಾರ್ಯನಿಂದ ವಿಮಲಕೀರ್ತಿಯವರೆಗೆ ಗುರುಗಳನ್ನು[1] ಹೊಗಳಿದ್ದಾನೆ. ಅನಂತರ ಪೂರ್ವಕವಿಗಳನ್ನು ಸ್ಮರಿಸಿ ತನ್ನ ವಂಶಾವಳಿಯನ್ನು ಹೇಳಿ ಗ್ರಂಥವನ್ನು ಆರಂಭಿಸಿದ್ದಾನೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ದೇಶ

ಶ್ರುತಿಶೂನ್ಯವೆಂಬುದಕ್ರಮವೆಂಬುದು ವಕ್ರ | ಗತಿಯೆಂಬುದು ಭಾವಿಸಲು |
ನುತಮಾಗಿಯಾದೇಶದಹಿಯೊಳಲ್ಲದೆ ಜನ | ತತಿಯೊಳಗೊಂದಿನಿಸಿಲ್ಲ ||

ತ್ರಿವಿಕ್ರಮಾವತಾರ

ಉಡಿಯಮೇಲಿಟ್ಟ ಮೇಖಲೆಯ ಕಿಂಕಿಣಿಗಳ | ಪಡಿಯಾಗಿ ಮಿಗೆ ರಂಜಿಸಿದುವು |
ಉಡುನಿಕುರುಂಬವಂಬರತಲವ ಮುಟ್ಟಿ | ಕಡುಬೆಳೆದಾತ್ರಿವಿಕ್ರಮನ ||
ಕಡಲ ಮಧ್ಯದ ಭೂಮಿಯನೆಲ್ಲವನೊಂ | ದಡಿಮಾಡಿಯಾಗಸವೆಂಬ |
ಕೊಡೆಗೆ ಮತ್ತೊಂದುಕಾಲನು ಕಾವುಮಾಡುತ | ನಡುಗಿಸಿದನು ಭೂತಳವ ||
ಗಗನಮೆಂಬ ಗೂಡಾರಕಿಕ್ಕಿದ ಕಂಭ | ಮುಗಿಲೆಂಬ ಭೂಮಂಡಲವ |
ನೆಗಪಿದ ಪಂಚಫಣಾಶೇಷನನ್ನೊಲು | ಸೊಗಯಿಸಿತಾವಿಷ್ಣುಪಾದ |

6 ಸಂಯಕ್ತ್ವಕೌಮುದಿ

ಇದು ಉದ್ದಂಡಷಟ್ಪದಿಯಲ್ಲಿ ಬರೆದಿದೆ ; ಸಂಧಿ 12, ಪದ್ಯ 792. ಉದಿತೋದಯನೆಂಬ ರಾಜನು ಅರ್ಹದ್ದಾಸನೆಂಬ ವೈಶ್ಯವಿಭುವಿನ ಸ್ತ್ರೀಯರು ಹೇಳಿದ ಕಥೆಯನ್ನು ಕೇಳಿ ಸಂಯಕ್ತ್ವವನ್ನು ಧರಿಸಿ ದೀಕ್ಷೆಯನ್ನು ವಹಿಸಿ ಸ್ವರ್ಗಲೋಕವನ್ನು ಪಡೆದನು—ಎಂಬುದೇ ಕಥಾಗರ್ಭ. ಈ

---

1 ತತ್ವಾರ್ಥಕ್ಕೆ ವೃತ್ತಿಯನುದ್ಧರಿಸುತ ಮಹಿಮೆವಡೆದ ಗೃಧ್ರಪಿಂಛಾಚಾರ್ಯ, ಚವ್ವೀಸತೀರ್ಥೇಶ್ವರಕಥನವನೊರೆದ ಕವಿಪರಮೇಷ್ಠಿ, ಗುಣಭದ್ರ, ಕಲಿಯುಗಗಣಧರರಾದ ಮಾಘಣಂದಿ, ಛಂದೋಲಂಕಾರಶಬ್ದಶಾಸ್ತ್ರಗಳೆಲ್ಲ ಮೂರ್ತಿವಡೆದು ನಿಂದಂತಿರುವ ದೇವನಂದಿ, ಬೌದ್ಧರನು ಗೆಲಿದ ಅಕಲಂಕ, ಸ್ವಗುರುಪ್ರಭೇಂದು, ತಚ್ಛಿಷ್ಯ ಶ್ರುತಮುನಿ, ಇವನ ಸಹೋದರ ವಿಮಲಕೀರ್ತಿ 2. 179ನೆಯ ಪುಟವನ್ನು ನೋಡಿ.

ಕಥಾನಾಯಕನು ಕಾರ್ತಿಕಮಾಸದಲ್ಲಿ ಮಾಡುವ ಕೌಮುದಿಯ ಉತ್ಸವದಿಂದ ಸಂಯಕ್ತ್ವವನ್ನು ಪಡೆದನಾದುದರಿಂದ ಗ್ರಂಥಕ್ಕೆ ಈ ಹೆಸರು ಬಂದಿದೆ. "ಅತಿಕಠಿನಪಾಕಮಲ್ಲದೆ ಸುಗಮಮೆಂದೆನಿಪ ಷಟ್ಪದದೊಳು ಸಕ್ಕದಗನ್ನಡವ ಬೆರಸಿ ಮೃದುಪಾಕಮಪ್ಪಂದದಿಂ ವಿರಚಿಸಿದೆಂ" ಎಂದು ಕವಿ ಹೇಳುತ್ತಾನೆ. ಗ್ರಂಥದ ಉತ್ಕೃಷ್ಟತೆಯನ್ನು ಹೀಗೆ ಹೇಳಿಕೊಂಡಿದ್ದಾನೆ:-

ತರುಣಿಯರ ಬಿಂಬಾಧರಂ ಇಂದುರುಚಿ ಪೂವಿನತೊಡಂಬೆ ಪೀಯೂಷಪಿಂಡಂ ಜೇನ ಸೋನೆ ಪೊಸಸುಗ್ಗಿ ಕೆಂಬರಲ ತೊಡವು ಚಂದಣದಣ್ಪುಕೋಗಿಲೆಯ ನುಣ್ಚರಂ ಪ್ರಭುರಾಜಮಂಗರಸನೊರೆದ ಕೌಮುದಿಯ ಮಾತು.

ಗ್ರಂಥಾವತಾರದಲ್ಲಿ ವೀರಜಿನಸ್ತುತಿ ಇದೆ. ಬಳಿಕ ಕವಿ ಚತುರ್ವಿಂಶತಿತೀರ್ಥಕರರು, ಸಿದ್ಧಾದಿಗಳು, ಸರಸ್ವತಿ ಇವರುಗಳನ್ನು ಸ್ಮರಿಸಿ ಅನಂತರ ಗೌತಮನಿಂದ ಪ್ರಭೇಂದುವಿನವರೆಗೆ ಗುರುಗಳನ್ನು[1] ಸ್ತುತಿಸಿದ್ದಾನೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ:—

ಶರತ್ಕಾಲ

ಅಲ್ಲಲ್ಲಿ ಗಿಣ್ಣೆಕ್ಕುವಲ್ಲಲ್ಲಿ ಕುಱುಹನಿಡು |
ವಲ್ಲಲ್ಲಿ ಕದಿರುಗಡೆವಲ್ಲಲ್ಲಿ ಪೂದುಂಬು |
ವಲ್ಲಲ್ಲಿ ಪಾಲ್ದೀವುವಲ್ಲಲ್ಲಿ ಕಾಯಾಗುವಲ್ಲಲ್ಲಿ ಪಣ್ಣಾಗುವ ||
ಅಲ್ಲಲ್ಲಿಯಕ್ಕಿಮುಱುವಲ್ಲಲ್ಲಿ ಕೆಂಪಾಗು |
ವಲ್ಲಲ್ಲಿ ಕುಯ್ಯಲಾಗುವ ಪಲವು ಪೆಸರ್ವಡೆದ |
ನೆಲ್ಲ ಗದ್ದೆಗಳತಿಮುದಂಬಡಿಸಿದುವು ತಮ್ಮನೋವಿದ ಕುಟುಂಬಿಗಳ್ಗೆ ||
ನಳನಳಿಸಿ ಬೆಳೆದ ನವಗಂಧಶಾಲಿಯ ವನಕೆ |
ತಳೆಗಳಂ ಹೆಣೆವ ಕಪ್ಪಂ ತೋಡುವೆಸಕದ |
ಟ್ಟಳೆಯನಿಕ್ಕುವ ಬೆಚ್ಚುಗಳನಿರದೆ ನೆಡುವ ಗುಡಿಲಂ ಹೊದಿಸಿ ಹಸಮಾಡುವ ||
ಕಳನ ಕೆತ್ತುವ ಮೇಟಿಯುಂ ನೆಡುವ ಕುಡುಗೋಲ |
ನುಱಿಯದೇ ಮಸೆಯಿಸುವ ಗೊಂದಣಂ ಗುಡಿಯರುಗ |
ಳೊಳಗೊಪ್ಪುವಡೆದುದಾಬಂದು ಬಂಧುರತೆಯುಂ ನೆಱೆ ಪಡೆದ ಕಾರ್ತಿಕದೊಳು ||

---

1 ಗೌತಮ, ದೇವನಂದಿ, ಗುಣಭದ್ರ, ಜಿನಸೇನ, ರಾವುಳ ಕೊಂಡಕುಂದ, ಭುಜಬಲಿ, ಹೇಮದೇವ, ಮುನಿಚಂದ್ರ, ಪದ್ಮಪ್ರಭೆ, ಮಯೂರಪಿಂಛ, ನಂದಿಮಿತ್ರ, ಸಮಂತಭದ್ರ, ಕೇಶವ, ಮಾಘನಂದಿ, ಅಕಳಂಕ, ಭದ್ರಬಾಹು, ಕುಮುದೇಂದು, ಪ್ರಭೇಂದು.

## ಚಂದ್ರ

ವಿರಹಿಜನದೆರ್ದೆಯ ಲಗ್ಗೆಯನಿಡುವ ಮನಸಿಜನ |
ಕರತಳದ ಮೌಕ್ತಿಕದ ಸೆಂಡೋ ವಿಯೋಗಿಗಳ |
ಸಿರವ ಹರಿಯಿಡುವ ಕಾವನ ಕೈಯ ಚಕ್ರಮೋ ಓಪರನಗಲ್ದವರನು ||
ಭರದಿನಿಸುವಂಗಜನ ಕುಂಡಲಿತಕಾರ್ಮುಕವೊ |
ಹರನೊಡನೆ ಸೂಡ ಕಾದುವೆನೆಂದು ಪಲ್ಲಡಿಸು |
ವರಲಸರನೆಡಗೈಯ ವಜ್ರಖೇಟಕವೊ ಥಳಥಳಿಪ ಸಂಪೂರ್ಣಶಶಿಯೋ ||

## ಭೋಜನ

ದೊನ್ನೆಯಂ ಹರಪಿ ಬಾೞೆಲೆಹಾಳೆಯುಂ ಹಾಕಿ |
ಬಿನ್ನಣದೆ ಮಾಡಿವಾಚೌಕದೆಡೆಗಳಮುಂದೆ |
ಜನ್ನಿವಾರವ ಮೇಲಕೆತ್ತಿ ಕಿಱುಸುತ್ತುಮಂ ತೆಗೆದು ಸಡಿಲಿಸಿ ಧೋತ್ರಮಂ ||
ಚೆನ್ನಾಗಿಯಾಪೋಶನಮನೆತ್ತಿ ಕುಳ್ಳಿರ್ದು |
ಭಿನ್ನರುಚಿಮಾಡಿ ಹರಿಸದೆ ಗಡ್ಡಮೀಸೆಗಳು |
ಮಂ ನೀವಿಕೊಳ್ಳುತ್ತೆ ಭೋಜನವನಿಂತು ಮಾಡುತ್ತಿರ್ದರಾಪಾರ್ವರು ||
ಓಗರವ ತಾ ತೊಗೆಯನಿಕ್ಕು ಹಸನಾಯ್ತು ಮೇ |
ಲೋಗರವ ಬಡಿಸು ದೊನ್ನೆಗಳು ಹಿಡಿವಂತೆಯುಂ |
ಟಾಗಿ ಹೆರೆದುಪ್ಪವೇೞೆಯಾಪಳಿದ್ಯಮನಟ್ಟು ಕಲಸುವೋಗರವ ತೋಱಾ ||
ಬೇಗದಿಂದೆಡೆಮಾಡಿದಿಡ್ಡಲಿಗೆದೋಸೆಗಳ |
ಮೇಗೆ ಸಕ್ಕರೆಬಟ್ಟವಾಲ ಹೊಯ್ಯೆನುತಮಾ |
ರೋಗಣೆಯನಾಪೊಟ್ಟೆಯೊಡೆವ ಮರ್ಯಾದೆಯೊಳಗುಂಡು ತೇಗುತ್ತಿರ್ದರು ||
ಪಾಯಸದ ಪರಿಗಳಂ ನೋಡಿ ಪಂಡಿತರೆ ಸವಿ |
ಯಾಯಿತೇಯಾಯ್ತುಪಾಧ್ಯಾಯರೇ ಕರಜಿಗೆಯ |
ಕಾಯ ದೋಸೆಗಳ ಹಸನಂ ಪುರೋಹಿತರೆ ಚೆನ್ನಾಗಿ ಸವಿಸವಿದು ನೋಡಿ ||
ಈಯೆಣ್ಣೆಯೂರಿಗೆಯ ಮೃದುತರಕೆ ಸರಿಯುಂಟೆ |
ಜೋಯಿಸರೆ ಕೇಳಿ ಸಕ್ಕರೆಬುರುಡೆಗಳ್ ನಮ್ಮ |
ಬಾಯ ಬಱಿನಂ ಬಿಡಿಸುತಿವೆ ದೀಕ್ಷಿತರೆ ಎಂದು ಕೊಂಡಾಡುತಿರ್ದರಾಗ ||

## ತಿಮ್ಮಣ್ಣಕವಿ. ಸು. 1510

ಈತನು ಭಾರತದ ಉತ್ತರಭಾಗವನ್ನು, ಎಂದರೆ ಶಾಂತಿಪರ್ವಮೊದಲುಗೊಂಡು 7 ಪರ್ವಗಳನ್ನು, ಬರೆದಿದ್ದಾನೆ. ಇವನು ಬ್ರಾಹ್ಮಣಕವಿ; ಭಾರದ್ವಾಜಗೋತ್ರದವನು; ಇವನ ತಂದೆ ಪದವಾಕ್ಯಪ್ರಮಾಣಜ್ಞನಾದ ಭಾನುಕವಿ ಅಥವಾ ಭಾಸ್ಕರಕವಿ; ವಿಜಯನಗರದ ರಾಜನಾದ ಕೃಷ್ಣರಾಯನ (1509-1529) ಆಜ್ಞಾನುಸಾರವಾಗಿ ಈ ಗ್ರಂಥವನ್ನು ರಚಿಸಿದಂತೆ ಹೇಳುತ್ತಾನೆ.

ಈ ದೊರೆಯ ಪರಂಪರೆಯನ್ನು ಹೀಗೆ ಹೇಳಿದ್ದಾನೆ:—ತುಳುವವಂಶದಲ್ಲಿ ತಿಮ್ಮನೃಪ; ಮಗ ಈಶ್ವರಕ್ಷಿತಿನಾಥ; ಮಗ ನರಸಕ್ಷ್ಮಾಧಿಪ. ಇವನು "ಸಕಲವಸುಧಾಜಾನಿಗಳ ನಿಜಭೃತ್ಯವರ್ಗದೊಳ್ಪೈದೆ ನಿಲಿಸಿದನು; ಷೋಡಶಮಹಾದಾನಗಳ ವಿರಚಿಸಿದನು; ಆತ ಕೊಳ್ಳದ ದುರ್ಗವೊಂದಿಲ್ಲಾತನಾಳದ ರಾಜ್ಯವೊಂದಿಲ್ಲಾತ ಮಾಡದ ದಾನಧರ್ಮಾವಳಿಗಳೊಂದಿಲ್ಲ ॥ ಆತನರಿಯದ ವಿದ್ಯೆಯೊಂದಿಲ್ಲಾತ ಸುಖಿಸದ ಭೋಗವೊಂದಿಲ್ಲೀತೆರದಿ ಭುಜಶಕ್ತಿಯಿಂದಾಳಿದನು ಭೂತಳವ." ಇವನ ಹೆಂಡತಿ ನಾಗಲಾಂಬಿಕೆ; ಮಗ ವಿದ್ಯಾನಗರಿಯಲಿ ಭುಜಬಲದಿ ಪಟ್ಟವ ಕಟ್ಟಿಕೊಂಡ ಖಿಳಕರ್ಣಾಟಾಧಿಪತಿಯಾಗಿಳೆಯನಾಳಿದ ಕೃಷ್ಣರಾಯ.

ಈ ಕೃಷ್ಣರಾಯನು ಒಡ್ಡೋಲಗದೊಳಿರ್ದು ಭಾರತಕಥೆಯ ಕೇಳಿ ಕವಿಜನವ ನೋಡಿ ತಿಮ್ಮಣನ ಕರೆದು ವಸ್ತ್ರಭೂಷಾವ್ರಾತವನು ಕೊಟ್ಟು ಮನ್ನಿಸಿ—ಲೇಸೆನಿಸಿ ಮೊದಲಾಕುಮಾರವ್ಯಾಸ ದಶಪರ್ವಗಳ ಹೇಳಿದ ಭಾರತದ ಉಳಿದ ಪರ್ವಗಳ ನೀ ಸಕಲಜನ ಮೆಚ್ಚುವಂತೆ ಪೇಳು; ಸುರನದಿಯ ಯಮುನಾತರಂಗಿಣಿ | ಬೆರಸಿ ಹರಿವಂದದಲಿ ಕವಿಕುಂ| ಜರಕುಮಾರವ್ಯಾಸನುರುವಾಗ್ಲಹರಿಯೊಡನೀಗ ॥ ಸರಿಯೆನಿಸಿ ನೀ ಕೂಡಿಸೈ ಸುರು | ಚಿರಭವತ್ಕವಿತಾಪ್ರವಾಹವ | ಪರಮಪುಣ್ಯನಿಧಾನವಹುದು—ಎನ್ನಲು, ಹಸಾದವೆನುತ್ತ ಕೈಕೊಂಡು ಭಾರತಕಥೆಯ ಕಡೆಮೆಯ ಕೃಷ್ಣರಾಯನಿಗಂಕಿತವ ಮಾಡಿ ತಿಮ್ಮಣನು ಹೇಳಿದನು.

ಸಂಧಿಗಳ ಕೊನೆಯಲ್ಲಿ ವೆಂಕಟೇಶದೇವರ ಮತ್ತು ಕೃಷ್ಣರಾಯನ ಅಂಕಿತಗಳಿವೆ. ಗ್ರಂಥಾಂತ್ಯದಲ್ಲಿ—ನರಸನೃಪಸುತಕೃಷ್ಣರಾಯಗೆ ವರ ಯಶವು ನಿಲುವಂತೆ ಪೇಟ್ದ ಭಾರತವು—ಎಂದು ಕವಿ ಹೇಳುತ್ತಾನೆ. ಇವನ ಕಾಲವು ಸುಮಾರು 1510 ಆಗಬಹುದು. ಇವನಿಗೆ ಕರ್ಣಾಟಕಕವಿ ಕುಲಸಾರ್ವಭೌಮ ಎಂಬ ಬಿರುದಿದ್ದಂತೆ ತಿಳಿಯುತ್ತದೆ.

ಇವನ ಗ್ರಂಥ

## ಭಾರತ

ಇದು ಭಾಮಿನೀಷಟ್ಪದಿಯಲ್ಲಿ ಬರೆದಿದೆ; ಸಂಧಿ 40, ಪದ್ಯ 3736. ಇದರಲ್ಲಿ ಶಾಂತಿಪರ್ವದಿಂದ ಕೊನೆಯವರೆಗೆ 7 ಪರ್ವಗಳಿವೆ. ಗ್ರಂಥಕ್ಕೆ ಕೃಷ್ಣರಾಜಭಾರತ ಎಂದು ಹೆಸರು. ಆರಂಭದಲ್ಲಿ ವೆಂಕಟೇಶಸ್ತುತಿ ಇದೆ. ಬಳಿಕ ಕವಿ ಪಂಪಾವಿರೂಪಾಕ್ಷ, ಬ್ರಹ್ಮ, ಲಕ್ಷ್ಮೀ, ಗಣೇಶ, ಸರಸ್ವತಿ ಇವರುಗಳನ್ನು ಕ್ರಮವಾಗಿ ಸ್ತುತಿಸಿದ್ದಾನೆ. ಪರ್ವಗಳ ಕೊನೆಯಲ್ಲಿ ಈ ಗದ್ಯವಿದೆ—

ಇತಿ ಶ್ರೀಮದಚಿಂತ್ಯಮಹಿಮವೆಂಕಟಪತಿಚರಣಾರವಿಂದಮಕರಂದಮಧುಪಾನಪುಷ್ಟವಚಷ್ಷಟ್ಪದೀನಿಕಾಯ ಶ್ರೀಮತ್ಕರ್ಣಾಟಕಕವಿಕುಲಸಾರ್ವಭೌಮ ತಿಮ್ಮಣ್ಣಕವೀಂದ್ರವಿರಚಿತಮಪ್ಪ ಕರ್ಣಾಟಕೃಷ್ಣರಾಯಭಾರತಕಥಾಮಂಜರಿಯೊಳ್.

ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ—

### ಸೂರ್ಯೋದಯ

ಕುಕ್ಕುಟದ ಕೂಗಾಟ ಮೂಡಣ । ದಿಕ್ಕಿನೆಲರೆಡೆಯಾಟ ಮರದುದಿ ।
ಪಕ್ಕಿಗಳ ಪರಿಪರಿಯ ಚಿಲಿಪಿಲಿರವದ ಚೀರಾಟ ॥
ಚಕ್ಕವಕ್ಕಿಯ ಕೂಟ ಕಮಲದ । ಸೊಕ್ಕುದುಂಬಿಯ ಬೇಟವೆಣ್ದೆಸೆ ।
ಮಿಕ್ಕ ಕತ್ತಲೆಯೋಟವೆಸೆದುದು ರವಿಯ ಬರವಿನಲಿ ॥

### ಚಂದ್ರೋದಯ

ವರನಿಶಾಕರನುದಯಧರಣೀ । ಧರದ ಶಿಖರದ ಬಟಿಯ ಜೇನಿನ ।
ಹರೆಯವೋಲಿರುಳೆಂಬ ಬೇಡನು ತೆಗೆಯುತಿರಲದನು ॥
ಸುರಿವ ಮಧುವಿನತೆಱದೊಳೆಸೆದುವು । ಸರಸಿಜಾರಿಯ ಕಿರಣಗಳು ಬೆಂ ।
ಬರಿವ ಮಧುಮಕ್ಷಿಗಳೆನಲುವುಡುನಿಕರವೊಪ್ಪಿದುವು ॥

### ವಸಂತ

ಕವಿದು ತೆಂಕಣಗಾಳಿಯೆಂದೆನಿ । ಸುವ ಮಹಾತಸ್ಕರನು ವರವನ ।
ಯುವತಿಯಂಗದ ಕಂಠಭೂಷಾವಳಿಯ ಕೀಳುತಿರೆ ॥
ಅವನಿಗುದಿರಿದ ಹೊನ್ನ ತಾಳಿಗ । ಳವೊಲು ಹಣ್ಣೆಲೆಗಳು ವಿರಾಜಿಸಿ ।
ದುವು ನಿರೀಕ್ಷಿಸಿಯವನು ಕೋಗಿಲೆಯಾಗ ಕೂಗಿದುದು ॥

### ವಜ್ರದತ್ತನ ಆನೆ

ನಿಾಱತೋ ಗಜವೈರಿಬಲವನು | ತೋಱತೋ ರಿಪುಭೂಭುಜಾಳಿಗೆ |
ಹೇಱಿತೋ ಭಂಗವನು ಮಲೆತಾಂತರಿಭಟಾವಳಿಯ ||
ಮಾಱಿತೋ ಸುರಕಾಮಿನಿಯರಿಗೆ | ತೋಱಿತೋ ನಿಜಬಲಕೆ ಜಯವನು |
ಹಾಱಿತೋ ರಿಪುವೀರಸಿರಿಯೆನೆ ಕರಿ ವಿಜೃಂಭಿಸಿತು ||

### ರಾಜನೀತಿ

ಒಲಿದು ವನಪಾಲಕನು ತೋಟವ | ಬೆಳಸಿ ವನದಲಿ ಕುಸುಮಫಲತತಿ |
ಗಳನು ಕೊಯ್ವಂದದಲಿ ಪ್ರಜೆಗಳ ಸಲಹಿ ತೆಱಗೆಯನು ||
ಕೊಳಲುಬೇಹುದು ಕಡಿದು ಬಹುತರು | ಗಳನುರುಹಿ ಕೆಂಡವನು ಕೊಂಡಂ |
ತಿಳಿಯ ಜನಗಳ ಬಾಧಿಪುದು ತಾನುಚಿತವಲ್ಲೆಂದ ||

### ಕೃಷ್ಣರಾಯನ ಕೀರ್ತಿ

ಶಿವನು ನಾರೀಕವಚಿ ಕೀಱಾ | ದವನು ಪನ್ನಗರಾಜ ಶರದ |
ಭುವನದೇತಕ್ಕೆಣಿಸಲದು ಜೀವನವ ಬಿಟ್ಟಹುದು ||
ಸವನೆನಗದಾರೆನುತಲತ್ಯು | ತ್ಸವದಿ ನರಸಯಕೃಷ್ಣರಾಯನ |
ಧವಳಕೀರ್ತಿಸುಧಾಂಶು ಗರ್ವಿಸುತಿರ್ಪುದನವರತ ||

### ಕೃಷ್ಣರಾಯನ ಪ್ರತಾಪ

ಹೆಱವನೆಱೆಯದೆ ಬೆಳಗಲಾಪುದೆ | ನಳಿನಮಿತ್ರನ ತೇಜವನಿಲನು |
ಸುಱಿದು ಹೆಚ್ಚಿಸದಿದ್ದೊಡುಂಟೇ ವಹ್ನಿಯಾಟೋಪ ||
ತಿಳಿಯೆ ತಾನಸಹಾಯಿಯಾಗು | ಜ್ವಳಿಸಿ ನರಸಯಕೃಷ್ಣರಾಯನ |
ಲಲಿತಭುಜತೇಜಃಕೃಶಾನುಪ್ರಭೆ ವಿಜೃಂಭಿಸಿತು ||

---

## ಗುಬ್ಬಿಯಮಲ್ಲಣಾರ್ಯ. ಸು. 1513

ಈತನು ಭಾವಚಿಂತಾರತ್ನ, ವೀರಶೈವಾಮೃತಪುರಾಣ ಇವುಗಳನ್ನು ಬರೆದಿದ್ದಾನೆ. ಪುರಾತನರಗಳೆ ಎಂಬ ಗ್ರಂಥವನ್ನೂ ಬರೆದಿರುವುದಾಗಿ ಪ್ರತೀತಿಯಿದೆ. ಇದು ನಮಗೆ ದೊರೆತಿಲ್ಲ

ಇವನು ವೀರಶೈವಕವಿ. ಇವನ ಸ್ಥಳ ಗುಬ್ಬಿ. ವೀರಶೈವಾಮೃತಪುರಾಣದಲ್ಲಿ ತನ್ನ ಪರಂಪರೆಯನ್ನು ಹೀಗೆ ಹೇಳಿಕೊಂಡಿದ್ದಾನೆ—

ಅಮರಗುಂಡದ ಮಲ್ಲೇಶ್ವರಾಚಾರ್ಯನು ; ಅವನ ಶಿಷ್ಯ ಶೂಲವೇರಿದ ಮಹತ್ವವುಳ್ಳ ಗುರುಭಕ್ತನು ; ಅವನ ಮಗ ದೇಶಿಕಪಟ್ಟವರ್ಧನ ಸೌಂದರ್ಯಮಲ್ಲಿಕಾರ್ಜುನಪಂತ ; ಅವನ ಮಗ ನಾಗನಾಥಾರ್ಯ ; ಅವನ ಮಗ ಅಹಿಯಂ ಲಿಂಗಕೆ ಛತ್ರಮಂ ಮಾಡಿದ ಅಮರಗುಂಡಾರ್ಯ ; ಇವನ ವಂಶದೊಳು ಗುಬ್ಬಿಯಮಲ್ಲಣ್ಣನು ಹುಟ್ಟಿ ಅನುಭವಯೋಗಷಟ್ಸ್ಥಲಖ್ಯಾತಮಂ ಗಣಭಾಷ್ಯರತ್ನಮಾಲೆಯಂ ಮಾಡಿ ವಾತೂಲಕ್ಕೆ ಟಿಪ್ಪಣವನೆಸಗಿದಂ. ಅವನ ಮಗ ಗುರುಭಕ್ತ ; ಇವನ ಹೆಂಡತಿ ಸಪ್ಪೆಯಮ್ಮ ; ಇವರ ಮಗ ಕವಿ ಗುಬ್ಬಿಯಮಲ್ಲಣಾರ್ಯ.

ಇವನ ಗುರು ಸಿದ್ಧಮಲ್ಲೇಶ ; ಶಿವಗಂಗೆಯ ಮೇಲಣಗವಿಯ ಸಿಂಹಾಸನಾಧೀಶ್ವರನಾದ ಶಾಂತನಂಜೇಶ್ವರನೂ ಇವನಿಗೆ ಗುರುವಾಗಿದ್ದಂತೆ ತಿಳಿಯುತ್ತದೆ. ಅಲ್ಲದೆ ಸಪ್ಪೆಯಲಿಂಗಣಾಚಾರ್ಯನು ತನಗೆ ವಿದ್ಯವನಿತ್ತು ಪೊರೆದನು ಎಂದು ಹೇಳುತ್ತಾನೆ. 'ಕರ್ಣಾಟಸಂಸ್ಕೃತೋಭಯಕವಿತ್ವಂಗಳಂ ಪೂರ್ಣಲಕ್ಷಣಚಮತ್ಕಾರದಿಂದಂ ಮಾಳ್ಪನಿರ್ಣಯಕೆ ನೀನೆಯಗ್ಗಳವಲಾ ಬಸವಪೌರಾಣಾರ್ಥವಂ ಪೇಳ್ವೊಡೆ ಅರ್ಣವಪ್ರಾಂತದ ಭೂಮಿಯೊಳು ಪೆಸರಾಗಿರ್ದೆ' ಎಂದು ಈತನನ್ನು ಇತರರು ಸ್ತುತಿಸಿದಂತೆ ಹೇಳಿರುವುದರಿಂದ ಇವನು ಉಭಯಭಾಷಾಕವಿಯೆಂದೂ ಬಸವಪುರಾಣದ ಅರ್ಥವನ್ನು ಹೇಳುವುದರಲ್ಲಿ ಪ್ರಸಿದ್ಧನೆಂದೂ ತಿಳಿಯುತ್ತದೆ. ಇವನಿಗೆ ಬಸವಪೌರಾಣದಮಲ್ಲಣಾರ್ಯ ಎಂಬ ಹೆಸರೂ ಉಂಟು. ಚೇರಮನು (1526) ತನ್ನ ಚೇರಮಕಾವ್ಯದಲ್ಲಿ "ವೇದಾಂತಸಿದ್ಧಾಂತಲಕ್ಷಣವೈದ್ಯಭರತಸಾಮುದ್ರಿಕಜ್ಯೋತಿಷಾಲಂಕಾರಸರಸಗೀತಂ | ವಾದ್ಯಶಕುನಸಬ್ವ್ಯಾಕರಣಸೂಪರತಿಶಾಸ್ತ್ರದೊಳಗೆ ಪರಿಣತನು ಎಂದು ಇವನನ್ನು ಹೊಗಳಿರುವುದರಿಂದ ಇವನು ಈ ಇತರಶಾಸ್ತ್ರಗಳಲ್ಲಿಯೂ ಪಂಡಿತನಾಗಿದ್ದಂತೆ ತೋರುತ್ತದೆ. ಭಾವಚಿಂತಾರತ್ನವನ್ನು ಶಕ 1435 ಶ್ರೀಮುಖದಲ್ಲಿ—ಎಂದರೆ 1513ರಲ್ಲಿಯೂ ವೀರಶೈವಾಮೃತಪುರಾಣವನ್ನು ಶಕ 145 ವಿಕೃತಿಯಲ್ಲಿ—ಎಂದರೆ 1530ರಲ್ಲಿಯೂ ಬರೆದಂತೆ ಹೇಳುತ್ತಾನೆ.

ಪೂರ್ವಕವಿಗಳನ್ನು ಈ ಪದ್ಯಗಳಲ್ಲಿ ಸ್ಮರಿಸಿದ್ದಾನೆ—

ಕಾಮಿತಾರ್ಥಾಮೃತರಸಾದಿಲಕ್ಷಣಸೌಮ್ಯ |
ರಾಮಣೀಯಕಪದಾಲಂಕಾರಗಳ್ಗೆ ನಿಜ |
ಸೀಮೆಯೆನಿಸುವ ಸೃಪಸೀಕೃತಿಗೆ ಕುಡುವ ಚಿಂತಾರತ್ನಮೆನಿಪ ಪುಣ್ಯ ||

ನಾಮನಂ ಸದ್ಗುಣಸ್ತೋಮನಂ ಬುಧಸಾರ್ವ |
ಭೌಮನಂ ಸಜ್ಜನಪ್ರೇಮನಂಶೀಲಜ |
ಶ್ರಾಮನಂ ಪಾಲ್ಕುರಿಕೆಸೋಮನಂ ಹೃತ್ಕುಮುದಧಾಮದೊಳ್ ಮಿಗೆ ಭಾಸಿಪೆಂ ||
ಪರಮಸುಖವಾಸನಂ ವರಕಾಳಿದಾಸನಂ | ಕರವಾಗ್ವಿಜಾಣನಂ ಶರಣನಹ ಬಾಣನಂ|
ನಿರುಪಮವಿಚಾರನಂ ಗರುವಮಾಯೂರನಂ ಪದ್ಮರಸನಂ ಸುರಸನಂ ||
ಹರಿಹರಕವೀಶನಂ ಗುರುಭಕ್ತಿಕೋಶನಂ|ಹರನ ಕಣ್ಕೈವ್ಯೈಗಳಾಗಿ ತನುಮನವಿತ್ತ|
ಪರಿಣತರ ನೆನೆದು ಕೃತಿವೇಳ್ವೆನು.

ಈತನನ್ನು ಚೇರಮ (156), ಸಿದ್ಧನಂಜೇಶ (ಸು. 1650), ಷಡಕ್ಷರದೇವ (1655)ಮೊದಲಾದ ಅನೇಕವೀರಶೈವಕವಿಗಳು ತಮ್ಮ ಗ್ರಂಥಗಳಲ್ಲಿ ಸ್ತುತಿಸಿದ್ದಾರೆ.

ಇವನ ಗ್ರಂಥಗಳಲ್ಲಿ

1 ಭಾವಚಿಂತಾರತ್ನ

ಇದು ವಾರ್ಧಕಷಟ್ಪದಿಯಲ್ಲಿ ಬರೆದಿದೆ ; ಸಂಧಿ 9, ಪದ್ಯ 371. ಈ ಗ್ರಂಥಕ್ಕೆ ಸತ್ಯೇಂದ್ರಚೋಳಕಥೆ ಎಂಬ ಹೆಸರೂ ಉಂಟು. ಇದಕ್ಕೆ ಭಾವಚಿಂತಾರತ್ನ ಎಂಬ ಹೆಸರನ್ನಿಡಲು ಕಾರಣವನ್ನು ಕವಿ ' ಕೃತಿಯ ಪಲ್ಲವತೊಡಗಿ ಪೂರ್ಣಮಪ್ಪನ್ನವಿಗಾ | ಕೃತಿಯೊಳುತ್ಪ್ರೇಕ್ಷೆಯಿಲ್ಲದುದೊಂದುಪದನಿಲ್ಲ | ಕೃತಿಗದುನಿಮಿತ್ತದಿಂ ಭಾವಚಿಂತಾರತ್ನವೆಂಬ ಪೆಸರು' ಎಂಬ ಪದ್ಯಭಾಗದಲ್ಲಿ ಹೇಳಿದ್ದಾನೆ. ' ತಿರುಜ್ಞಾನಸಂಬಂಧೀಶನು ಜಿನಮತವಿದಾರಣಂಗೈದು ತಿರುಪಾಟುಪದಿನಾರುಸಾವಿರವನೊರೆಯುತ ಕುಲಚ್ಚರೆಯಗೆ ಪ್ರಣವಪಂಚಾಕ್ಷರಿಯ ಮಹಿಮೆಯುಂ ತಿಳುಪೆ ಸತ್ಯೇಂದ್ರಚೋಳಭೂಪನ ಕಥೆಯುಂ ದ್ರಾವಿಡದೊಳೊರೆದುದಂ ' ತಾನು ಕನ್ನಡಿಸಿದಂತೆ ಹೇಳುತ್ತಾನೆ. ಇದರ ಕಥಾಗರ್ಭವು ಈ ಪದ್ಯದಲ್ಲಿ ಹೇಳಿದೆ—

ತರುಣಿ ಪೊರೆದಣುಗನಶ್ವದ ಖುರದ ಹತಿಯಿಂದ |
ಪರಭಕ್ತನಳಿಯಲದ ಕೇಳ್ದು ಕೊಲೆಯಿಂದಮಂ |
ಪರಿಕಿಸಿ ನಿಜಾತ್ಮಜಂ ಮೊದಲಟ್ಟಿಗೆಂಡ ನುಡಿಗಾವುದ್ದುಮಗನ ತಲೆಯ ||
ಅರಿಸುವೆಡೆಯೊಳ್ ಮತ್ತೆ ಭಕ್ತನಡೆಯೊಂದು ನಿಜ |
ಶಿರದೊಡನೆ ತರದೆಂಟುತಲೆಗಳಂ ಪಡೆದು ಶಂ |
ಕರನೂರ್ಗೆ ಪೋದ ಸತ್ಯೇಂದ್ರಚೋಳನ ಕಥೆಯನಿದ ಬೆಳಸಿ ಕೃತಿಮಾಳ್ಪೆನು |

ಈ ಗ್ರಂಥವು ಪಂಚಾಕ್ಷರಿಯ ಮಹತ್ವದ ಬೋಧೆ ಎಂದು ಕವಿ ಹೇಳುತ್ತಾನೆ. ಇದನ್ನು 'ಕಲ್ಯಾಣದಾದಿಬಸವೇಶ್ವರಮಹತ್ವಮಂ ಕಲ್ಯಾಣವಾಗಿ ಶರಣರ್ಗಱಿಪುವ, ಶಿವನ ಕಲ್ಯಾಣದುತ್ಸವದ ನಾಗವಲ್ಲಿಯ ಮೆಱೆವ' ಶಿವಪೂಜೆಯಾರ್ಯಯತಿಯ ಆಜ್ಞಾನುಸಾರವಾಗಿ ರಚಿಸಿದಂತೆಯೂ ನಾಗಲಿಂಗಯ್ಯನ ಪೌತ್ರನೂ ಲಿಂಗಪ್ಪನ[1] ಪುತ್ರನೂ ಆದ ತನ್ನ ಭಕ್ತ ಚೇರಮಾಂಕನಿಗೆ ಹೇಳಿದಂತೆಯೂ ತಿಳಿಯುತ್ತದೆ.

ಗ್ರಂಥಾವತಾರದಲ್ಲಿ ಭೋಗಮಲ್ಲೇಶನ ಸ್ತುತಿ ಇದೆ. ಬಳಿಕ ಕವಿ ಅಮರಗುಂಡದ ಶರ್ವ, ಸಿದ್ಧಮಲ್ಲಿಕಾರ್ಜುನಗುರು, ಭೃಂಗಿ, ನಂದಿ, ವೀರಭದ್ರ, ಅಲ್ಲಮ, ಬಸವ, ಚೆನ್ನಬಸವ, ಶಿವಲೆಂಕಮಂಚಣ್ಣ ಶ್ರೀಪತೀಶ್ವರ ಮಲ್ಲಿಕಾರ್ಜುನಪಂಡಿತರೆಂಬ ಪಂಡಿತತ್ರಯ, ಸಿದ್ಧರಾಮ, ಗೂಳೂರಶಾಂತದೇವ, ಗುಮ್ಮಳಾಪುರದಶಾಂತೇಶ, ಶಿವಪೂಜೆಯಾರ್ಯ, ಚಿಕ್ಕಬಸವಾಂಕ ಇವರುಗಳನ್ನು ಪರಿವಿಡಿಯಿಂದ ಸ್ತುತಿಸಿದ್ದಾನೆ.

ಇವನ ಬಂಧವು ಪ್ರೌಢವಾಗಿದೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದಹರಿಸಿ ಬರೆಯುತ್ತೇವೆ--

ಮುನಿಗಳು

ಪೂವಿಲ್ಲ ಗಡ ತನಗೆ ಕುಸುಮಶರನೆಂಬ ಪೆಸ |
ರಾವಕಾರಣವಾದುದಳಿನೆದೆಯನಾಗಿ ಲೋ |
ಕಾವಳಿಯ ಗೆಲ್ದ ಬಗೆಯೆಂತು ಪೆಣ್ಮಕ್ಕಳಂ ಕೊಂದುಕೂಗಿಡುವ ತನಗೆ ||
ಕಾವನೆಂದೆಂಬ ಪೆಸರೇ ಮೈಯಱಿಯಬಾರ |
ದಾವಿಗಡನವಿಚಾರದಿಂ ಲಜ್ಜೆಗೆಟ್ಟವಂ |
ಗಾವಳ್ಕೆವೆಂದು ಮಾರನ ಜಱೆದು ತಪವಿರ್ದರಲ್ಲಿ ವರಸನ್ಮುನಿಗಳು ||

ಛತ್ರದಮುಡಿ

ಮೂಡೆಗಟ್ಟಂ ಕಟ್ಟಿ ಹುಡುಕುನೀರೊಳ್ ಮೆಟ್ಟಿ |
ಕಾಡುತಿಹ ಪಾಮರರ ಕೈವಿಡಿತೆಗೊಳಗಾಗಿ |
ನಾಡೆ ಪಂಕಂಬೊಗುತ್ತಿರ್ದೆಯೊಡೆದು ಪುಲ್ಗರ್ಚಿ ಕಂಟಕಂಬಡೆದೆವಿನ್ನು ||
ರೂಢಿಸಿದ ಕಾವೇರಿಯಿಕ್ಕೆಲನೊಳಿರ್ದು ಶಶಿ |
ಚೂಡಂಗೆ ಸಲ್ವ ಪೇರೊಲ್ಮೆಯಂ ಪಡೆದವರ |
ಕೂಡೆ ಬಾಯ್ವಿಡಿಸದಿರೆನೆಂದು ರಾಗಿಸುವ ಕಳಮೆಯ ಮುಡಿಯ ಸಾಲ್ ಮೆಱೆದುವು||

---

1 ಚೇರಮಕಾವ್ಯದಲ್ಲಿ ಗಂಗಪ್ಪ ಎಂದಿದೆ.

### ಕಾವೇರಿ

ಸೂರಿಜನಹರ್ಷವಿಸ್ತಾರಿ ಸುಖಸಂಕಥಾ |
ಕಾರಿ ಬಳಿನಿರ್ದೆಗಂ ಕೆರಾರಿ ಬೆಳೆಸಿರಿಯಃ ಭರ |
ಭಾರಿ ಕುಶ್ರಮಸಂಗವೈರಿ ಜಲಚರಸದಾಧಾರಿ ಕಾಲಾರಿಶಿವನ ||
ನಾರಿಗಂಗಾಂಬಾವತಾರ ದುರ್ದೋಷಸಂ |
ಹಾರಿಯೆಂದೊದಱುತಿಹ ಭೇರಿಯಾರ್ಭಟವೀಚಿ |
ವಾರಿ ಬಹುಮಾರ್ಗಪ್ರಚಾರಿಯಾನಾಡ ಕಾವೇರಿ ಭೋರ್ಗರೆದೆಸೆದುದು ||

### ಶರಚ್ಚಂದ್ರ

ಕಾಲರಜಕಂ ಮಲಿನದಿವಸಾಂಬರವನಾವಿ |
ಶಾಲಸಾತಿಯ ಮಟಿಯೊಳೊಗೆದು ದಕ್ಷಂಗೀಯ |
ಲಾಲೋಕಿಸುತ್ತೈದೆ ಬೆಳೆಗಳಂ ಸಲಹಿದಳಿಯುಂಗೆ ಧವಳಾಂಬರವನು ||
ಮೂಲವೈರಂ ಪೋಗೆ ದೀವಳಿಗೆಯೊಳ್ ಕರೆದು |
ಮೇಲಿದಂ ಪೊದಿಸಿ ಪರಸುತ್ತಕ್ಷತೆಯನಿಟ್ಟ |
ವೋಲೊಪ್ಪಿದಂ ಶರನ್ಮೇಘದೊಳ್ ಚಂದ್ರಮಂ ತಾರಕಾನಿಕರದಿಂದೆ ||

### ಅಮೃತವತಿಯ ಪುತ್ರೇಷ್ಟೆ

ಚೆಲ್ಲೆಗಂಗಳ ಮಿನುಗುವರಳೆಲೆಯ ಮಾಂಗಾಯ್ಗ |
ಳುಲ್ಲಾಸದಿಂ ಮಿಱುಗುವೆಳನಗೆಯ ಮೊಳೆವಲ್ಲ |
ಗಲ್ಲದೆಡೆಯೊಳಗೊಸರ್ವ ಲಾಲಾಜಲಾಮೃತದೊಳಬ್ಬೆಂಬ ಸುತನ ತೊದಲ ||
ಸೊಲ್ಲನಾಲಿಸಿ ನೋಡಿ ತೆಗೆದು ಮೂರ್ಧ್ನಿಘ್ರಾಣ |
ದಲ್ಲಿ ತಣ್ಕೈಸಿ ಬಾಯೊಳ್ ಬಾಯನಿಟ್ಟೆಟ್ಕಿ |
ಱಲ್ಲಿ ಮುಂಡಾಡುವೆಂ ಪಾಡುವೆಂ ಮುದ್ದುಗಳ ಬೇಡುವೆನೆನುತ್ತೆ ನಲಿದಳ್ ||

### ವೀರಶೈವಾಮೃತಪುರಾಣ

ಇದೂ ವಾರ್ಧಕಷಟ್ಪದಿಯಲ್ಲಿ ಬರೆದಿದೆ ; ಕಾಂಡ 8, ಸಂಧಿ 136, ಪದ್ಯ 7099. ಇದರಲ್ಲಿ ವೀರಶೈವಸಿದ್ಧಾಂತವು ವಿಸ್ತಾರವಾಗಿ ಪ್ರತಿಪಾದಿಸಲ್ಪಟ್ಟದೆ. ವೇದಾಗಮಪುರಾಣೇತಿಹಾಸಸ್ಮೃತಿಗಳಿಂದ ವಾಕ್ಯಗಳು 'ಸಾಕ್ಷಿ' ಎಂದು ಅನುವಾದಮಾಡಲ್ಪಟ್ಟಿವೆ. ಅಲ್ಲದೆ ಶಿವನ 25 ಲೀಲೆಗಳು, ಪುರಾತನನೂತನಶರಣರ ಕಥೆಗಳು ಮುಂತಾದ ಅನೇಕವಿಷಯ

ಗಳು ಈ ಗ್ರಂಥದಲ್ಲಿ ಉಕ್ತವಾಗಿವೆ. ಶೀಲವಂತಾರ್ಯನ ಕರಜಾತನಾದ ಹಲಗೆಯಾರ್ಯನು ತನ್ನ ಶಿಷ್ಯ ಕೆಂಚವೀರನಿಗೆ ಬೋಧಿಸಿದ ಉಪದೇಶವನ್ನು ಪದ್ಯರೂಪವಾಗಿ ರಚಿಸು ಎಂದು ಹೇಳಲು ತಾನು ಅವನ ಆಜ್ಞಾನುಸಾರವಾಗಿ ಈ ಕೃತಿಯನ್ನು ಬರೆದಂತೆ ಹೇಳುತ್ತಾನೆ. "ಭೂಲೋಕಪಾವನಕಕುದ್ಗಿರಿಸುದಾಕ್ಷಿಣ್ಯಕೈಲಾಸವರಮೇಲಣಗವಿಯ ಸಿಂಹಾಸನಾಲಂಕೃತದ ಶಾಂತನಂಜೇಶ್ವರಾಂಘ್ರಿಪಂಕಜಭೃಂಗ" ಎಂಬುದರಿಂದ ಶಿವಗಂಗೆಯ ಮೇಲಣಗವಿಯ ಸಿಂಹಾಸನದ ಶಾಂತನಂಜೇಶನು ಈತನ ಗುರು ಎಂದು ತಿಳಿಯುತ್ತದೆ.

ಈಶಾಂತನಂಜೇಶನ ಗುರುಪರಂಪರೆ ಹೀಗೆ ಹೇಳಿದೆ--ಮಲೆಯಶಾಂತೇಶ ; ಶಿಷ್ಯ ಶಂಭುಗುರು ; ಶಿಷ್ಯ ಮಲೆಯವೀರೇಶ ; ಶಿಷ್ಯ ಸಿದ್ಧರಾಮೇಶ ; ಶಿಷ್ಯ ಶಾಂತನಂಜೇಶ. ಇವನ ಶಿಷ್ಯ ಚಿಕ್ಕ ಶಾಂತೇಶ್ವರನು ಯುವರಾಜಪಟ್ಟವನ್ನು ಹೊಂದಿರುವಂತೆ ಕವಿ ಹೇಳುತ್ತಾನೆ. ಹಲಗೆಯಾರ್ಯನು ಜ್ಯೋತಿಯಮ್ಮನ ಮನೆಯಲ್ಲಿ ಕಲ್ಲೇಶ್ವರ, ಸೃಂಧವದಶಾಂತದೇವ, ಕಲ್ಯಾಣಮಲ್ಲೇಶ್ವರ, ನಂಜಯ್ಯ, ಸಪ್ಪೆಯಮಲ್ಲಿಕಾರ್ಜುನವಿಭು, ಸಮಾಧಿಸಿದ್ಧಮ್ಮ, ಸಪ್ಪೆಯಮ್ಮ ಈ ವಿವೇಕಿಗಳಮಧ್ಯೇ ಕೆಂಚವೀರನಿಗೆ ಉಪದೇಶಿಸಿದಂತೆ ತಿಳಿಯುತ್ತದೆ. ಪೂರ್ವದಲ್ಲಿ ಲಕ್ಕಣ್ಣದಣ್ಣಾಯಕರು, ಭಂಡಾರಿಚಿಕ್ಕಪ್ಪ, ಕಲ್ಲೆಹದಕೇತಿಸೆಟ್ಟಿ ಇವರುಗಳು ಲಕ್ಷಸಂಖ್ಯೆಯ ವಿತ್ತಮಂ ವೆಚ್ಚಿಸುತ್ತ ಮಾಡಿದರೆಂಬುದು ಹೆಚ್ಚಲ್ಲ ; ನಿಸ್ಪೃಹನಾಗಿ ಈ ಕಾವ್ಯಮಂ ಮಾಡಿ ಸಕಲಮಾಹೇಶ್ವರರ ಕೃಪೆಗೆ ಪಾತ್ರನಾದ ಮಲ್ಲಣಾರ್ಯನ ಭಾಗ್ಯಕ್ಕೆ ಎಣೆಯುಂಟೇ---ಎಂದು ಶರಣರು ಕವಿಯನ್ನು ಹೊಗಳಿದಂತೆ ಹೇಳಿದೆ.

ಈ ಗ್ರಂಥದಲ್ಲಿ ಕವಿ ಹಿಂದೆ ತಾನು ಸತ್ಯೇಂದ್ರಚೋಳಕಥೆಯನ್ನು ರಚಿಸಿದಂತೆಯೂ ಲಕ್ಕಣ್ಣದಣ್ಣಾಯಕರ (1428) ಶಿವತತ್ವಚಿಂತಾಮಣಿಯಿಂದ ನೂತನಶರಣರ ವಿಷಯವಾದ ಕಥೆಗಳನ್ನು ಸಂಗ್ರಹಿಸಿದಂತೆಯೂ ಹೇಳುತ್ತಾನೆ. ಇದರಿಂದ ಕೆಲವು ವಿಷಯಗಳನ್ನು ತಾನು ಸಂಗ್ರಹಿಸಿದಂತೆ ಸಿದ್ಧನಂಜೇಶನು (ಸು. 1650) ತನ್ನ ಗುರುರಾಜಚಾರಿತ್ರದ ಈ ಭಾಗದಲ್ಲಿ ಹೇಳುತ್ತಾನೆ--

ವಿಮಲಸತ್ಕವಿಮಲ್ಲಣಾರ್ಯರಿಂದುದಿತಶ್ರೀವೀರಶೈವಾಮೃತಪುರಾಣದೊಳು ನೂತನ ಪುರಾತನರ ಪುರಾಣದೊಳಗೊರೆದ ವಿಸ್ತಾರವಾದ ನೂತನಪುರಾತನವಾದ ಸತ್ಕಥೆಗಳಂ ಸಂಗ್ರಹಿಸಿ ಪೇಟ್ವೆಂ.

ಗ್ರಂಥಾವತಾರದಲ್ಲಿ ಶಾಂತಮಲ್ಲಿಕಾರ್ಜುನಸ್ತುತಿ ಇದೆ. ಬಳಿಕ ಕವಿ ಬಿಟ್ಟಿಮಂಡೆಯಪ್ರಭು, ಸ್ವಗುರು ಶಾಂತನಂಜೇಶ, ಇವರುಗಳನ್ನು ಸ್ತುತಿಸಿದ್ದಾನೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ:

ಶಿವಸ್ತುತಿ

ಶರದ ಮಗನೇ ಸೂತನವನ ಬಾಯೊಳಗಾದ |
ತುರಗವಾಸಿಜನೇತ್ರವೆರಡು ಗಾಲಿಗಳಗಜೆ |
ಯರಸ ನೀಂ ನೊಗನ ತುದಿಯೊಳ್ ಕುಳಿತೆ ತಿರುವಿನಗ್ರದೊಳು ರಥವದಱ ನಡುವೆ||
ಪರಮತೂಣೀರವಾಮಧ್ಯದೊಳು ಬಿಲ್ಲಂಬು |
ನಿರುತೈಕವದಕೆ ಗುಱಿ ಮೂಱೆಂದೆನಿಪ್ಪ ಮು |
ಪ್ಪುರಮಂ ಗೆಲಿದ ಚಿತ್ರತರಶಾಂತಮಲ್ಲೇಶಮೂರ್ತಿ ದಿಗ್ಭರಿತಕೀರ್ತಿ ||

ಅರ್ಧನಾರೀಶ್ವರ

ಪಣೆಗಣ್ಣ ಕಸ್ತುರಿಯ ಬೊಟ್ಟು ಶಶಿರವಿನಯನ |
ವಣೆಯುರದ ಚೆಲ್ಲಿಗಂಗಳು ಗೇಯುರಸಪಾಂತ |
ಫಣಿಕುಂಡಲದ ರತ್ನಕಿರಣದಾಪೊನ್ನೋಲೆ ಸುಲಿಪಲ್ಲು ಕೆಂಬಲ್ಲುಗಳು |
ಅಣಿಯುರದ ಕರಿಗೊರಲು ರನ್ನದಾಳಿಯು ಜೆಲ್ಪು |
ಪೆಣನಾಂತ ಶೂಲಾದಿಗಳು ಬಱಿಕ ಲೀಲಾಬ್ಜ |
ಗಣನಾತಿಶಯನವ್ಯಗುಣಗಣನೆಯುಳವಟ್ಟ ಮೂರ್ತಿ ರಾಜಿಸುತಿರ್ದುದು ||

ಅಮರಾವತಿಯ ವರ್ಣನೆ

ಅಳ್ಕಿ ಬೆಟ್ಟನನೇಱಿ ನೀರೊಳಗೆ ಪೊಕ್ಕು ನೆಱೆ |
ಕಾಟಕ್ಕೆಱಿಯ ಪುಲ್ಗಚ್ಚಿ ತಿಂದೆಂಜಲಂ ಭಂಗ |
ದೊಳಕ್ಕಿಡಿದೆಮ್ಮನೀಪುರದ ಬೀದಿಂಗೊಳಕಟ ಕಟ್ಟಿ ತೂಗುತ್ತಿರ್ಪರು ||
ಕೊಳ್ಕಯ್ಯ ದೇವ ಎಂದುಱೆ ದೂಱುತಿರ್ಪೊಂದು |
ಮಾಟಕ್ಕಿಯಿಂ ಮಾಣಿಕಂ ಮುತ್ತು ನೀಲಂ ಪಚ್ಚೆ |
ಗಳ್ಕೇರಿಯಂಗಡಿಯೊಳೆಸೆಯೆ ಬರುತಿರ್ದನೀರೇೞ್ಗಗದ ಜನದೊಡೆಯನು ||

ಸ್ತ್ರೀಯರು

ಇವರ ನುಡಿ ಯತಿವರರ ಬಾಯ ಹುಡಿ ಭಾವಿಸ |
ಲ್ಕಿವರ ಬಾಹುಗಳು ಸಜ್ಜನರ ಬೇಹುಗಳು ಬಱಿ |
ಕಿವರ ಚೆಲ್ವಿನ ತುಱುಬು ಸುಜ್ಞಾನಿಗಳ ಸದಾಚಾರಿಗಳ ಮನದ ಜಱುಬು ||

ಇವರ ನಲ್ವಿನ ದೇಹವೃತ್ತಮರ ದಾಹವಿಂ |
ತಿವರ ನಡೆಯನಘರಸುಗಳಿಗಿನೇ ಕಡೆಯೆಂಬ |
ಯುವತಿಯರು ಬಂದರಾದೇನವದೋವೇಶಸಂ ನೋಡೆ ಕವುತವಾಗಿ ಕೂಡೆ ||

ಸಾವು

ನೆಲದಲಿದಾರ್ತನಾಮಂಜನಮಂ ಬಯಸುವಂ |
ಸಲೆ ಖಟ್ವದಿಂದಿಳಿಯನೆಳಸುವಂ ಪುದಿದಿರ್ದ |
ಮಲಮೂತ್ರದಿಂ ವಿವಸ್ತ್ರಗೆ ಲಜ್ಜೆಯುಂ ತೊಱೆಯುತೆರ್ದೆಗೊರಲ್ಗಳುಮೊಣಗುತ ||
ಸಲಿಲಮಂ ಬಯಸುತ್ತಲಂತಪ್ಪ ಬಾಧೆಯೊಳು |
ಸಲೆ ಗಳಿಸಿದರ್ಥಮುಂ ನೆನೆನೆನೆದು ದುಃಖದಿಂ |
ಮಲಮಲಂಮಱುಗುತಜ್ಞಾನದಿಂ ತನ್ನ ಗೃಹರಕ್ಷಣೆಗೆ ಚಿಂತಿಸುವನು ||

---

## ವಿರುಪರಾಜ. 1519

ಈತನು ತ್ರಿಭುವನತಿಲಕವನ್ನು ಬರೆದಿದ್ದಾನೆ. ಇವನು ವೀರಶೈವ ಕವಿ ; ರಾಜವಂಶಕ್ಕೆ ಸೇರಿದವನು. ತನ್ನ ಪರಂಪರೆಯನ್ನು ಹೀಗೆ ಹೇಳಿಕೊಂಡಿದ್ದಾನೆ —

ಏಱುಬೀಡಿನ ಗೋಪ ಚೋಳರಭೀಮ ಚೋಳನಾರಾಯಣ ಹನ್ನೊಂದುಬೀಡಿನಮಂಡಲಿಕರಗಂಡ ಹೊನ್ನೊರೆಬಿರುದಾಂಕ ಶ್ರೀಕಂಠವಂಶಾಬ್ಧಿಹಿಮಕರನಾದ ಚಿಕ್ಕವಿರೂಪಾಕ್ಷ ; ಮಗ ಸಂಗರಭೀಮ ಹೊನ್ನೊರೆಕಾವ ಏಱುಬೀಡಿನಗೋಪವೆಸರನು ತಾಳ್ದ ಕಾಮ ; ಇವನ ಹೆಂಡತಿ ವೀರಾಂಬೆ ; ಮಗ ನಾನಾಕಲಾರಾಮ ಚೋಳರಭೀಮ ಭೋಗನನುಜ ವಿರುಪರಾಜ (ಕವಿ).

ಈ ಗ್ರಂಥವನ್ನು ಶಕ 1441 ಪ್ರಮಾಥಿಯಲ್ಲಿ, ಎಂದರೆ 1519ರಲ್ಲಿ, ರಚಿಸಿದಂತೆ ಹೇಳುತ್ತಾನೆ.

ಪೂರ್ವಕವಿಗಳಲ್ಲಿ ಕೆರೆಯಪದ್ಮರಸ, ಹರಿದೇವ, ಪಾಲ್ಕುರಿಕೆಯಾರಾಧ್ಯ, ಮಾಯಿದೇವಪ್ರಭು, ಬಾಣ, ಮಯೂರ, ಕಾಳಿದಾಸ, ರಾಘವಾಂಕ ಇವರುಗಳನ್ನು ಸ್ಮರಿಸಿದ್ದಾನೆ.

ಇವನ ಗ್ರಂಥ

### ತ್ರಿಭುವನತಿಲಕ

ಇದು ಸಾಂಗತ್ಯದಲ್ಲಿದೆ ; ಸಂಧಿ 27, ಪದ್ಯ 1525. ಇದರಲ್ಲಿ 63

ಶಿವಭಕ್ತರೊಳಗೆ ಒಬ್ಬನಾದ ಚೇರಮಾಂಕನೃಪನ ಕಥೆ ಹೇಳಿದೆ. ಇದನ್ನು ಕವಿ ತನ್ನ ಹೆಂಡತಿಗೆ ಹೇಳಿದಂತೆ ತಿಳಿಯುತ್ತದೆ. ಈ ಗ್ರಂಥದವಿಷಯ ವಾಗಿ ಕವಿ ಹೀಗೆ ಹೇಳುತ್ತಾನೆ—

ಈಕಬ್ಬ ರಸಿಕಜನಗಳ ಕಿವಿಯ ಹಬ್ಬ, ಈಕಥೆಯಿಹಪರಸರ್ವಸೌಖ್ಯದ ಲತೆ.
ಚತುರಚಕೋರ ಜೀವಿಸೆ ಸೂರಿನೀಲಾಬ್ಜ | ವಿತತಿಗಿಂಬಾಗೆ ರಾಗೋತ್ಕರ |
ಕ್ಷಿತಿನಾಥ ಹೊನ್ನೊರೆವಿರೂಪರಾಜೇಂದ್ರನ | ಕೃತಿಚಂದ್ರ ಬೆಳಗುಗೆ ಭುವನವ |

ನೆಗಳ್ದುದು ವಿರೂಪಕ್ಷ್ಮಾಪನಿಂ ಸತ್ಕಲಾಕೋವಿದರಾರ್ಯೋ ಎಂದೆನಲ್ಕೀತ್ರಿಭುವನ ತಿಲಕಂ ಸವ್ಯಮಾಚಂದ್ರಸೇವ್ಯಂ.

ಗ್ರಂಥಾವತಾರದಲ್ಲಿ ಮಲ್ಲಿಕಾರ್ಜುನಸ್ತುತಿ ಇದೆ. ಬಳಿಕ ಕವಿ ಪಾರ್ವತಿ, ನಂದಿಷಣ್ಮುಖರು, ಬಸವಮಡಿವಾಳ ಚೆನ್ನಬಸವರು, ಗಣೇಶ, ಸರಸ್ವತಿ ಇವರುಗಳನ್ನು ಹೊಗಳಿದ್ದಾನೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

## ಮಲ್ಲಿಗೆ

ಪರಿಭವವಡೆದಂತಸುಗೆಮಾಂದಳಿಗಳು | ಮರಸೇರಿ ಬಾಳ್ವೆವೆಂಬುವ ಪೊಕ್ಕು |
ಸರಸಿಜಕುಮುದ ಜೀವಿಪುವೆಂದು ನಗುವವೊ | ಲರಲ್ದ ಮಲ್ಲಿಗೆಗಳೊಪ್ಪಿದುವಲ್ಲಿ ||

## ಬೇಡಸ್ತ್ರೀಯರು

ಕಡೆಗಣ್ಣ ಕಾಂತಿಗೋರಗೆಯಾದ ಪಲ್ಗದಿ | ರಡಿಗೆಂಪ ಮಿಾಱಿದಧರಕಾಂತಿ |
ಮುಡಿಗಪ್ಪ ಕೀಱ್ಮಾಡುವ ಮೈಯ ಪೊಗರಿಂದ|ನಡೆದುದು ಬಿಯದವೆಣ್ಗಳ ತಂಡ ||

## ಸಮುದ್ರ

ತೆರೆಗಳ ನೀಗುರಿಯಿಂದೆ ತುಷಾರಚಾ | ಮರದಿಂದೆ ಜಲಜಾತಪತ್ರದೆ |
ಸುರುಚಿರಮಣಿವಿಸ್ತರದಿಂದೆ ಸಿಂಧು ಭೂ | ವರನಂತೆ ಕಣ್ಗೆ ರಾಜಿಸುವುದು ||

## ದೇಹಾನಿತ್ಯತೆ

ನೀರ ಬೊಬ್ಬುಳಿಕೆಯ ಕಾರ್ಬೋನ್ನೊಳೆ ಕಟ್ಟಿ | ಯಾರೈಕೆಗೈದ ಮರುಳರಂತೆ |
ಶಾರೀರಸೌಖ್ಯವ ನಿಜವೆಂದು ತಿಳಿವುದು | ಪರಮಾರ್ಥವೇನು ಬಲ್ಲವರಿಗೆ ||

———o———

## ಶಾಂತಿಕೀರ್ತಿಮುನಿ. 1519

ಈತನು ಶಾಂತಿನಾಥಚರಿತೆಯನ್ನು ಬರೆದಿದ್ದಾನೆ. ಇವನು ಜೈನ ಕವಿ. ತುಳುದೇಶದೊಳಗಣ ವೇಣುಪುರದ ವೃಷಭಜಿನಾಲಯದಲ್ಲಿ ಈ ಗ್ರಂಥವನ್ನು ಶಕ1440 ಪ್ರಮಾಥಿಯಲ್ಲಿ—ಎಂದರೆ 1519ರಲ್ಲಿ, ರಚಿಸಿದಂತೆ ಹೇಳುತ್ತಾನೆ ಎಂದು ಮ॥ ರೈಸ್ ಬರೆದಿದ್ದಾರೆ.

ಇವನ ಗ್ರಂಥ

ಶಾಂತಿನಾಥಚರಿತೆ

ಇದು ಸಾಂಗತ್ಯದಲ್ಲಿ ಬರೆದಿರುವಂತೆ ತೋರುತ್ತದೆ ; ಸಂಧಿ 23 ಇದರಲ್ಲಿ 16ನೆಯ ತೀರ್ಥಂಕರನಾದ ಶಾಂತಿನಾಥನ ಕಥೆ ಹೇಳಿದೆ.

---

## ಪ್ರಭುಗ. ಸು. 150

ಈತನು ಚೂಡನಾಸ್ಥಾನ, ವೈಭೋಗರಾಜಾಸ್ಥಾನ ಎಂಬ ಗ್ರಂಥಗಳನ್ನು ಬರೆದಿದ್ದಾನೆ. ಇವನು ವೀರಶೈವಕವಿ. ಗುಮ್ಮಳಾಪುರದಶಾಂತೇಶನ ದೌಹಿತ್ರನು ; ಚಿಕ್ಕಾರ್ಯನ ಮಗನು.

ವೈಭೋಗರಾಜಾಸ್ಥಾನದಲ್ಲಿ ' ಮೊಲೆಗೊಯ್ದು ಪವಿತ್ರನಾರಿಗಾಕಂತುಹರಾಜ್ಞೆಯಿಂ ಮೊಲೆಯನಿತ್ತ ' ವಿರಕ್ತಶಿರೋಮಣಿಶಾಂತನ ಮಕ್ಕಳು ಚೆನ್ನಬಸವಗಣಾರ್ಯರನ್ನೂ, ' ಕವೀಶ್ವರಪ್ರಸರವಾ ಎಂಬಂತೆ ಸತ್ಯೇಂದ್ರನಾಕೃತಿಯುಂ ಪೇಳ್ದು ನಿರಂತರಂ ಶಿವಕಥಾಸಂದೋಹಸೌಖ್ಯಂಗಳಂ ಕ್ಷಿತಿಯೊಳ್ ಬೋಧಿಸಿ ಎಸೆವ ' ಮಲ್ಲಣಾರ್ಯನನ್ನೂ ಹೇಳಿ, ಇಂತಪ್ಪ ರಸಿಕಕವೀಶ್ವರರ್ ಪ್ರಭುಕವೀಶ್ವರನೇ ಬಾವೆಂದು ಮನ್ನಿಸಿ ಚಿಕ್ಕವಯಸ್ಸಿನಲ್ಲಿಯೇ ಸಂಸ್ಕೃತಕನ್ನಡಭಾಷೆಗಳಲ್ಲಿ ಪ್ರಾವೀಣ್ಯವು ನಿನಗೆ ಉಂಟಾಗಿದೆ, ಹಿಂದೆ ಗುರುರಾಯನ ಆಜ್ಞೆಯಿಂದ ಚಂದ್ರಕವಿ ವಿರೂಪಾಕ್ಷಾಸ್ಥಾನವನ್ನು ರಚಿಸಿದಂತೆ ನೀನು ನಾನಾಲಂಕಾರಚಿತ್ರಭಾವರಸಗಳಿಂದ ವೈಭೋಗರಾಜಾಸ್ಥಾನವನ್ನು ರಚಿಸಬೇಕೆಂದು ಹೇಳಲು ಆ ಗ್ರಂಥವನ್ನು ರಚಿಸಿದಂತೆ ಹೇಳುತ್ತಾನೆ.

ಇದರಿಂದ ಈತನು ಸತ್ಯೇಂದ್ರಚೋಳಕಥೆಯನ್ನು 1513ರಲ್ಲಿ ಬರೆದ ಗುಬ್ಬಿಯ ಮಲ್ಲಣಾರ್ಯನ ಸಮಕಾಲದವನೆಂದು ತೋರುತ್ತದೆ ; ಸುಮಾರು 1520ರಲ್ಲಿ ಇದ್ದಿರಬಹುದು.

ತನ್ನ ಕವಿತಾಚಾತುರಿಯನ್ನು ಈ ಪದ್ಯದಲ್ಲಿ ಹೇಳಿದ್ದಾನೆ—

ರಸದ ಪೊಡವು ಮ್ಯೆಸಿರಿಯ ನೇವು ಱು ಮ್ಯೆಮೆಯ ತೋವು ಶಾಸ್ತ್ರದೊಂ |
ದೆಸಕದ ಸೊಂಪು ಭಾವತತಿಯಿಂಪು ವಿರಾಜಿಪ ಪೆಂಪು ಕೀರ್ತಿಯ ||
ಪ್ರಸರದ ಗಾಡಿ ಜಾಣ್ನುಡಿಯ ಮೋಡಿ ಕವಿತ್ವದ ರೂಢಿಯಾಗಳೊಂ |
ದೆಸೆವುವು ಸತ್ಕವಿಪ್ರಭುಗನಲ್ಲೆನೆ ತದ್ಜ್ಞರೆ ಪೇಱ್ದನಿಂತಿದಂ ||

ಇವನ ಗ್ರಂಥಗಳಲ್ಲಿ

### 1. ಚೂಡನಾಸ್ಥಾನ

ಇದು ಚೂಡೆಯಲಿಂಗ, ಶೌಂಡನಾಥ ಎಂದು ಕರೆಯಲ್ಪಡುವ ಈಶ್ವರನ ಆಸ್ಥಾನದ ವರ್ಣನಾರೂಪವಾದ ಚಂಪೂಗ್ರಂಥ ; ಪದ್ಯ 101. ಇದರ ಉತ್ಕೃಷ್ಟತೆಯನ್ನು ಕವಿ ಈ ಪದ್ಯದಲ್ಲಿ ಹೇಳಿದ್ದಾನೆ—

ಪುರುಳ ತನಮೇನೆ ಸೊಗಸಿನ | ಕರು ಸಕ್ಕದಗನ್ನಡಂಗಳಿಕ್ಕಿನಿಗಡಲೊ |
ಗ್ಗರ ತೊಂಡುನುಡಿಯ ತಾಣಂ | ಸರಸತಿಯುರನೆಲೆಯಿದಾಯ್ತು ಚೆಲ್ವಿನ ಕಬ್ಬಂ ||

ಗ್ರಂಥಾವತಾರದಲ್ಲಿ ಶೌಂಡೇಶ್ವರನನ್ನು ಸ್ತುತಿಸಿ, ಬಳಿಕ ಪಾರ್ವತಿಯನ್ನೂ ಗಣಪತಿಯನ್ನೂ ಹೊಗಳಿದ್ದಾನೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ—

ಈಶ್ವರ

ಇಂಪಿಗಿದಿಂಪು ಪೊಂಪುೞಿಗೆ ಪೊಂಪುೞಿ ತಣ್ಪಿಗೆ ತಣ್ಪು ನುಣ್ಪಿಗೊ |
ಳ್ನುಣ್ಪಸಿ..ಸೊಗಸಿಗೊಳ್ಸೊಗಸಾರ್ಪಿಗೆಯಾವು ಕಂಪಿಗೊ ||
ಳ್ಗಂಪು ಸೊಗಕ್ಕೆಯೊಳ್ಸೊಗಮುಪಾರಕಪಾರಮನಾದಿಗಾದಿಯೆಂ |
ದುಂ ಪೊಗೞುತ್ತುಮಿರ್ಪುದು ಸಭಾಜನಮಾವಗಮಲ್ಲಿ ಶಂಭುವಂ ||

ಮಲಪ್ರಹಾರಿವದಿ

ಪಱಿವಿಡಿದುಗ್ಮೆ ಪೊಣ್ಮೆ ಕಡೆಗಣ್ಮುತೆ ಬಿರ್ದು ಧುಡುಮ್ಮನೆಱ್ದು ತೆ |
ಱ್ದೆರೆಗಳನೆತ್ತಿ ಪತ್ತುವಿಡೆ ಬಿತ್ತರಿಸುತ್ತುಱು ಸುತ್ತಿಮುತ್ತಿದಾ ||
ತರುಗಳನೊತ್ತಿ ಕಿೞ್ತು ಮಿಗೆ ಸಿರ್ಭರದಾರ್ಭಟೆ ಪರ್ಬಿ ಕೊರ್ಬಿ ಭೋ |
ರ್ಗರೆಯೆ ಘುಮುಘುಮುಘುಮ್ಮುಘುಮುಘುಮ್ಮೆನುತೊಪ್ಪುಗುಮಾನದೀದ್ವಯಂ ||

### 2. ವೈಭೋಗರಾಜಾಸ್ಥಾನ

ಇದು ವೈಭೋಗರಾಜ ಎಂದು ಕರೆಯಲ್ಪಡುವ ಈಶ್ವರನ ಆಸ್ಥಾನ ವರ್ಣನಾರೂಪವಾದ ಚಂಪೂಗ್ರಂಥ ; ಪದ್ಯ 101. ಇದು ಹುಟ್ಟುವುದಕ್ಕೆ

ಕಾರಣವನ್ನು ಹಿಂದೆಯೇ ತಿಳಿಸಿದ್ದೇವೆ. ಗ್ರಂಥಾವತಾರದಲ್ಲಿ ಕವಿ ವೈಘೋಗರಾಯನನ್ನು ಸ್ತುತಿಸಿ ಬಳಿಕ ಪಾರ್ವತಿ, ಗಣಪತಿ ಇವರುಗಳನ್ನು ಹೊಗಳಿದ್ದಾನೆ. ಈ ಗ್ರಂಥದಿಂದ ಒಂದೆರಡು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ—

ಗಣಪತಿ

ಮುಂಬನಿಸೊರ್ಕನುಂಬ ಮಱುದುಂಬಿಯ ಬಂಬಲಿನುಣ್ಮಿಪಿಂಚರಂ |
ತುಂಬಿರೆ ಗರ್ಭಭೋಗಿ ಸಿರವೆತ್ತಿ ಫಣಾಮಣಿರೋಚಿ ದೇಹಮಂ ||
ತಾಂ ಬಳಸೊಪ್ಪೆ ರಕ್ತಪಟಮಂ ತಳೆದಂತಿರೆ ರಾಜಿಸಿರ್ಪ ಹೇ |
ರಂಬನುಮೇಶಸೂನು ಮಿಗೆ ಮಾಡುಗೆ ಮತ್ಕೃತಿಗೊಲ್ದವಿಘ್ನಮಂ ||

ಸ್ತ್ರೀಯರು

ತಳಿರ ಬೆಡಂಗು ನುಣ್ದೊಡೆಯ ರಂಗಳವಾೞೆಯ ಪೊಂಗು ಜೆಲ್ವ ತ |
ಣ್ಬೆಳ್ದಿಂಗಲ ಪೊಡಪುಱ ಸಣ್ಣಲತೆಯಿರ್ಪಮಳ್ವಕ್ಕಿಯ ನೇಪುಱ ಬಳ್ಳಿಯೊಳ್ ||
ಬಳಸಿಕೆಗೊಂಬ ಕಂಬು ಸಲೆ ಕೋಗಿಲೆಯಿಂಬುೞ ಮಾವಿನಂಬು ಕ |
ಣ್ಗಳಿಕುಳದೋಪುಱ ಸೋಗೆಗಳ ಸೀಳ್ವಿರೆ ಬಂದರದಂದುಕಾಂತೆಯರ್ ||

---

## ನಂಜುಂಡ. ಸು. 1525

ಈತನು ಕುಮಾರರಾಮಕಥೆಯನ್ನು ಬರೆದಿದ್ದಾನೆ. ಇವನು ವೀರಶೈವಕವಿಯೆಂದು ತೋರುತ್ತದೆ.

ಇವನ ಪಿತಾಮಹನು ಯದುಕುಲಾಮಾತ್ಯವಂಶೋದ್ಭೂತನಾದ ಪ್ರಭುಕುಲಾಗ್ರಗಣ್ಯಪಿಜಯನೃಪಾಲ ; ತಂದೆ " ಅಂಡದಜಲ್ಲಿಯನಾನೆಯ ನಿಗಳಕೆ ಕಂಡರಿಸಿದ ಮಾವಣ್ಣದ ಬೊಂಬೆಯ ಕಂಡು ಮನದೊಳುಱ ಮಚ್ಚರಿಸುವ ಮಾೞಾಂತ ರಾವುತರ ಗಂಡನೆನಿಪ " ಮಾಧವ ; ಹಿರಿಯಯ್ಯನು ತುರಗದಂಡಕೆ ಬಲುಜಲ್ಲಿಯ ಕಟ್ಟಿದ ಬಿರುದುಳ್ಳ ರಾವುತ; ಕಿರಿಯ ತಂದೆ ವಿಜಯ : ಈ ಪಿಜಯನು

ಧರಣಿಯಱಿಯೆ ಧುರದೊಳಗೆ
ರಾಯುದಟಿವ ಕಾಣುತ ತನ್ನ ಪತಿ ನಂಜ | ರಾಯನ ಮುಂದೆ ಕುದುರೆಯ |
ರಾಯರ್ರಾವುತರಮೇಲೇಱ ತಿವಿದು ಸುರ | ರಾಯನಗರಿಗೈದಿದನು ||

ಎನ್ನುತ್ತಾನೆ. " ಜೆಂಗಳನಾಡ ನಾಲ್ವತ್ತುನಾಯಕಗಜಸಿಂಗವೆನಿಪ ಮಾಧವನ ಅಂಗೋದ್ಭವ ನಂಜುಂಡ, ಯದುಕುಲಾಮಾತ್ಯರೆಂದೆಂಬ ಕುಲಾಗತವಿದಿತಬಿರುದನಾಂತೆ

ಸೆವ ಚದುರಮಾಧವನಾತ್ಮಜ ನಂಜುಂಡ, ಅಂಚದಜಲ್ಲಿಯಾನೆಯ ನಿಗಳಕ್ಕೆ ಮಾಕೋಂಡು ಮಲೆವ ರಾವುತರ ಹಿಂಡಿನ ಗಂಡ ಮಾಧವನಾತ್ಮಜ ನಂಜುಂಡ, ವಾಗ್ವೈಖರೀವಲ್ಲಭ ಕವಿತಾವನಿತಾವಶೀಕರಣವಶ್ಯಮಂತ್ರಸಿದ್ಧ ಪ್ರಭುಕುಲಾಗ್ರಗಣ್ಯ ವಿಜಯನೃಪಾಲಪುತ್ರಮಾಧವಾತ್ಮಜನಂಜುಂಡ '' ಎಂದು ತನ್ನನ್ನು ವಿಶೇಷಿಸಿ ಹೇಳಿಕೊಂಡಿದ್ದಾನೆ. ಇದರಿಂದ ಈತನು ಜಯನೃಪಕಾವ್ಯವೇ ಮೊದಲಾದ ಗ್ರಂಥಗಳನ್ನು ಬರೆದ ಮಂಗರಸನ[1] (1508) ಸಹೋದರನ ಮಗನೆಂದು ವ್ಯಕ್ತವಾಗುತ್ತದೆ. ಮಂಗರಸನು ಶುದ್ಧಜೈನನಾಗಿದ್ದು ಅವನ ಸಹೋದರನ ಮಗನಾದ ಈತನು ಶೈವಮತದಲ್ಲಿ ಪಕ್ಷಪಾತವನ್ನು ತೋರ್ಪಡಿಸಿರುವುದನ್ನು ನೋಡಿದರೆ ಜೈನಮತವನ್ನು ಬಿಟ್ಟು ಶೈವಮತವನ್ನು ಅವಲಂಬಿಸಿರಬಹುದು ಎಂಬ ಊಹೆ ಹುಟ್ಟುತ್ತದೆ. ಜೈನಕಥೆಯನ್ನು ಬಿಟ್ಟು ಕುಮಾರರಾಮನ ಕಥೆಯನ್ನು ಬರೆದಿರುವುದು ಈ ಊಹೆಗೆ ಉಪಷ್ಟಂಭಕವಾಗುತ್ತದೆ. ಇವನ ಚಿಕ್ಕಪ್ಪನಾದ ವಿಜಯನು ತನ್ನ ಪತಿ ನಂಜರಾಯನಸಮಕ್ಷದಲ್ಲಿ ಯುದ್ಧದಲ್ಲಿ ಮಡಿದಂತೆ ಹಿಂದೆ ಹೇಳಿದೆ. ಈ ನಂಜರಾಜನು 1502ರಿಂದ 1533ರ ವರೆಗೆ ಆಳಿದ ಚೆಂಗಾಳ್ವನಂಜರಾಜನಾಗಿರಬೇಕು.

ಈ ಕಾರಣಗಳಿಂದ ಕವಿಯ ಕಾಲವು ಸುಮಾರು 1525 ಆಗಬಹುದು. "ಕನ್ನಡಸಂಸ್ಕೃತವೆಂಬಿವಱೊಳ್ ತೊಡಕೆಳ್ಳನಿತಿಲ್ಲದೆ ನಾಂ ಪೇೞಿದೆನು " ಎಂದು ಕವಿ ಹೇಳುತ್ತಾನೆ.

ಪೂರ್ವಕವಿಗಳನ್ನು ಈ ಪದ್ಯಗಳಲ್ಲಿ ಸ್ಮರಿಸುತ್ತಾನೆ—

ಕವಿತಾವನಿತೆಯ ಸಂಗಕೆ ಪೆಣ್ತನ | ಸವಿಯುಳ್ಳವೆಂದಾವಾಣೆ |
ತವಕದಿಂ ಗಂಡುರೂಪಾಂತಳೆಂಬಂತಿರ್ದ | ಕವಿಕಾಳಿದಾಸಗೆಱಗುವೆ ||
ಕ್ಷೋಣಿಯ ತಲೆದೂಗಿಸುವ ಕವಿತೆಯ ಪೇೞ್ವ| ಮಾಣದೆ ಬಲ್ಲವರಿಂದ |
ಬಾಣೋಚ್ಛಿಷ್ಟಂ ಜಗತ್ರಯಮೆನಿಸಿದ | ಬಾಣನ ಬಲಗೊಂಬೆನೊಲಿದು ||
ಕನ್ನಡಕವಿತೆಗೆ ಮೊದಲಿಗನೆಂದೆಂ| ಬುನ್ನತಕೀರ್ತಿಕಾಮಿನಿಯ |
ಬೆನ್ನ ಬಿಡದೆ ತೊೞಲುವ ಪಂಪರಾಜನ | ಚೆನ್ನಡಿಗಳಿಗೆಱಗುವೆನು ||
ಕಾದಂಬರಿಯ ಸುಡಿಸಿ ಲೀಲಾವತಿ | ಗಾದರದಿಂ ಕಪ್ಪನಿಟ್ಟು |
ಮೇದಿನಿಯನು ಮೆಚ್ಚಿಸಿದ ನೇಮಿಚಂದ್ರನ | ಪಾದಗಳನು ಬಲಗೊಂಬೆ ||
ಬಲಿದ ಕರ್ಣಾಟಕವಿಗಳೆಲ್ಲರ ಗೆಲ್ದು | ಬಲ್ಲಾಳಭೂಮಿಶ್ವರನ |

[1] 179 ನೆಯ ಪುಟವನ್ನು ನೋಡಿ

ನಿಲ್ಲದೆ ಮೆಚ್ಚಿಸಿಕೊಂಡ ಜನ್ನನ ಪದ | ಪಲ್ಲವಗಳಿಗೆಱಗುವೆನು ||
ಇಂಪುವಡೆದ ಕವಿತಾರಸಲಹರಿಯ | ಸೊಂಪಿನಿಂ ವಾದಿಗಳೆದೆಗೆ |
ಕಂಪನವನು ಪುಟ್ಟಿಸುವ ಗುಣನಂದಿಯ | ನಾಂ ಪೊಗೞುವೆ ಬಲಗೊಂಬೆ ||
ಗಜಗನ ಗುಣವರ್ಮನ ನಾಗಚಂದ್ರನ |ಸುಜನೋತ್ತಂಸನಸಗನ |
ಸುಜನರನ್ನನ ಶಾಂತಿವರ್ಮನ ಪದಸರ | ಸಿಜಗಳಿಗೊಲಿದೆಱಗುವೆನು ||
ರಗಳೆಯಕವಿಯೆಂದು ತೆಗೞೆ ವಾದಿಗಳುೞೆ | ಸೊಗಸೊಗುವಂತೆ ವಸ್ತುಕವ |
ನೆಗೞ್ದ ಹಂಪೆಯ ಹರಿಯಣ್ಣನ ಪದ | ಯುಗಳಕೆಱಗುವೆನೞ್ತಿಯೊಳು ||
ಪಿಂದಣವರ ಸವಿವಾತುಗಳಿಗೆ ಸರಿ | ಬಂದಿದೆ ಮೆಲ್ನುಡಿ ನಿನ್ನ |
ಎಂದು ಕೊಂಡಾಡಿಸಿಕೊಂಡ ಮಧುರನನಾ | ನಂದದಿಂ ಬಲಗೊಂಬೆನೊಲಿದು ||

ಇವನ ಗ್ರಂಥ

ಕುಮಾರರಾಮನಕಥೆ

ಇದು ಸಾಂಗತ್ಯದಲ್ಲಿ ಬರೆದಿದೆ ; ಅಲ್ಲಲ್ಲಿ ಕೆಲವು ಷಟ್ಪದಿಗಳೂ ಇವೆ ಆಶ್ವಾಸ 12, ಸಂಧಿ 47, ಪದ್ಯ 5807. ಇದರಲ್ಲಿ ಕರ್ಣಾಟದೇಶಾಧೀಶ್ವರನಾದ ಕಂಪನೃಪತಿಯ ಕುಮಾರ ಕುಮಾರರಾಮನ ಚರಿತವು ವರ್ಣಿತವಾಗಿದೆ.

ಚೆಂಡಾಟವಾಡುತ್ತಿದ್ದಾಗ ಚೆಂಡು ಅರಮನೆಗೆ ಹೋಗಿಬೀಳಲು ಕುಮಾರರಾಮನು ಅದನ್ನು ತೆಗೆದುಕೊಳ್ಳುವುದಕ್ಕೆ ಹೋದಾಗ ಅವನ ಮಲತಾಯಿಯಾದ ರತ್ನಾಜಿ ಅವನನ್ನು ಕೆಟ್ಟಮನದಿಂದ ಹಿಡಿದಳು. ಅವನು ತಪ್ಪಿಸಿಕೊಂಡುಹೋಗಲು ರತ್ನಾಜಿ ಗಂಡನೊಡನೆ ಇಲ್ಲದ ಚಾಡಿಯನ್ನು ಹೇಳಿ ಅವನನ್ನು ಕೊಲ್ಲಿಸಬೇಕೆಂದಾಗ ದೊರೆ ಮಂತ್ರಿಗೆ ಆಜ್ಞಾಪಿಸಲು ಅವನು ರಾಜಕುಮಾರನನ್ನು ನೆಲಮಾಳಿಗೆಯಲ್ಲಿರಿಸಿ ಕೊಂದೆನೆಂದು ಹೇಳಿಬಿಟ್ಟನು. ಈ ಸುದ್ದಿಯನ್ನು ಕೇಳಿ ತುರುಕರು ರಾಜ್ಯವನ್ನು ಮುತ್ತಲು ಕುಮಾರರಾಮನು ಬಹಳಪರಾಕ್ರಮದಿಂದ ಅವರೊಡನೆ ಏಕಾಕಿಯಾಗಿ ಕಾದಿ ಮಡಿದನು.
ಎಂಬುದೇ ಕಥಾಗರ್ಭ. ಇದನ್ನು

ರಸದಿಂದ ಪುಟ್ಟಿಸಿ ಭಾವದಿಂ ಬಲಿಯಿಸಿ | ಪೊಸಬಗೆವೆತ್ತಲಂಕೃತಿಯ |
ಎಸಕದಿಂ ಬಳೆಯಿಸಿ ಕೃತಿಯೆನಿಸುವೆನಿದ | ರಸಿಕರು ಮೆಚ್ಚುವಂದದಲಿ ||

ಎಂದು ಕವಿ ಹೇಳುತ್ತಾನೆ. ನಮಗೆ ದೊರೆತ ಪ್ರತಿಗಳಲ್ಲಿ ಮೊದಲು ಸ್ವಲ್ಪಭಾಗವಿಲ್ಲ. ಆಮೇಲೆ ಶಿವ, ಸರಸ್ವತಿ, ಗಣೇಶ ಇವರುಗಳ ಸ್ತುತಿಯಿದೆ. ಆಶ್ವಾಸಾಂತ್ಯದಲ್ಲಿ

ಇದು ಯದುಕುಲಾಮಾತ್ಯವಂಶದೊಳಗುದಯಿಸಿದ |
ಸದಮಲಯಶೋವಿರಾಜಿತವಿಜಯನೃಪತನುಜ |
ವಿದಿತವಿತರಣವಿನಯವಿಕ್ರಮವಿಭಾಸಿಯೆಂದೆನಿಪ ಮಾಧವನಾಮನ ||
ಉದರಾಬ್ಧಿಭವಚಂದ್ರ ನಂಜುಂಡನೊಲಿದೊರೆದ |
ಕದನಕಲಿಕಾಲಕಪಿಕೇತು ಕಲಿಶುಚಿರಾಮ |
ನುದಿತಕೃತಿಬಂಧದೊಳ್ ಮೃದುಪದನ್ಯಾಸನೊಳ್.

ಎಂಬ ಪದ್ಯವೂ ಗ್ರಂಥಾಂತ್ಯದಲ್ಲಿ

ಇದುಸಮಸ್ತಸುರಾಸುರಮೌಲಿಮಾಲಾಕೀಲಿತಸೂತ್ನರತ್ನಪ್ರಭಾಪುಂಜರಂಜಿತಚಂದ್ರಚೂಡಚರಣಾರವಿಂದಮಧೂಳೀಮಧುಕರಾಯಮಾನ ಮಾಧವಸೂನು ಕವಿತಾವಿಶಾರದನಂಜುಂಡವಿರಚಿತಮಪ್ಪ ಕುಮಾರರಾಮಮಹಾಪ್ರಬಂಧದೊಳ್

ಎಂಬ ಗದ್ಯವೂ ಇವೆ.

ಇವನ ಬಂಧವು ಲಲಿತವಾಗಿದೆ. ಈ ಗ್ರಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ---

ಸಮುದ್ರ

ಅರುಣಪ್ರವಾಳನಿಕರದಿನುತ್ಕಳಿಕಾ | ಭರದಿಂದ ಕುಶಜಯದಿಂದ |
ತಿರುಗುವ ವನಚರತತಿಯಿಂದಾಕಡ | ಲಿರದೆಸೆವುದು ವನದಂತೆ ||

**ಕರ್ಣಾಟದೇಶ**

ಕಾವೇರಿಯಿಂದ ಗೋದಾವರಿವರೆಗಮಿ | ದಾವಸುಧಾತಳವಳಯ |
ಭಾವಿಸೆ ಕರ್ಣಾಟಕಜನಪದವದ | ನಾವನೊಲಿದು ಬಣ್ಣಿಸುವನು ||
ನಡೆವಂಚೆ ನುಡಿವರಗಿಳಿ ನಲಿದಾಡುವ | ಬೆಡಗಿನ ನವಿಲು ಕೂಗಿಡುವ |
ಪಡಿಯಱವಕ್ಕಿ ಮೊರೆವ ಪರಮೆಗಳಿದೇ | ಗೆಡಿಪುವು ಪಥಿಕರನಲ್ಲಿ ||
ನುಡಿಯೆಂಬ ಮಾತು ಸಂಖ್ಯಾವಾಚಿಗಳ ಕಟ್ಟ | ಕಡೆಯೊಳು ಶಾಕವಾಟಿಯೊಳು |
ತಡೆಯದಾರಜಕರೊಳಲ್ಲದಾಜನಪದ | ದೆಡೆಯೊಳಿಲ್ಲೆಲ್ಲಿ ನೋಡಿದಡಂ ||

**ತುಂಗಭದ್ರೆ**

ಮಡುವಿಂದ ಬಾನ್ಗುಱ ನೆಗೆವೆಳಮೀನ್ಗಳ | ಗಡಣದಿಂದಾನದಿಯೆಂಬ |
ಮಡದಿ ಮುದನೊಳಾಡುವಣ್ಣೆಕಲ್ಲಂತೆ ಕ | ಣ್ಗೊಡನೆಸೆದುದು ನೋಟಕರ ||

ಕೊಳ

ಕೊಳರ್ವಕ್ಕಿಗಳ ಕೊಟ್ಟ ತುಂಬಿಯ ತುಱುಪಟ್ಟಿ | ಕಳಹಂಸೆಗಳ ಕಾಳೆಗದ |
ಕಳನೆಣೆವಕ್ಕಿಗಳೆಡೆಯೆನಲಾಪೂ | ಗೊಳನೆಸೆದುದು ಕಣ್ಗಳಿಗೆ ||

ಚಂದ್ರ

ಬೆಳುದಿಂಗಳೆಂದೆಂಬ ಪಾಲ್ಗಡಲಿಂ ಬಾಂ | ಬೊಳೆಗೆ ಜಲಕ್ರೀಡೆಗೆಂದು |
ತಳುವದೆಯ್ದುವ ಕಳಹಂಸನಂತಿಂದುವಂ | ಡಳವೆಸೆದುದು ಗಗನದೊಳು ||

ಅಡಕೆಯಮರ

ಅಲರ್ವಿಲ್ಲನ ಪಸುರ್ವರಲ ಮಿಂಟೆಗಳ ಜಂ | ಗುಳಿಯಂತೆ ಮೆಱೆವ ಬಿಣ್ಗೊನೆಯ|
ತಳೆದಿರ್ಪಡಕೆಯಮರದ ಸಾಲಲ್ಲಿ ಕ | ಣ್ಗೊಸಿದುವೇನ ಬಣ್ಣಿಪೆನು ||

---

ವ್ಯಾಸರಾಯ. ಸು. 1525

ಈತನು ಕೀರ್ತನೆಗಳನ್ನು ಬರೆದಿದ್ದಾನೆ. ಇವನು ಮಾಧ್ವಕವಿ; ಸೋಸಲೆಯಲ್ಲಿರುವ ವ್ಯಾಸರಾಯಮಠಕ್ಕೆ ಸ್ವಾಮಿಯಾಗಿದ್ದನು. ಈತನ ಗುರು ಬ್ರಹ್ಮಣ್ಯತೀರ್ಥ, ವಿದ್ಯಾಗುರು ಶ್ರೀಪಾದರಾಯ. ವಿಜಯನಗರದ ಕೃಷ್ಣದೇವರಾಯನ (1509-1529) ಕಾಲದಲ್ಲಿ ಈತನು ಇದ್ದಂತೆ ಕೆಲವು ಶಾಸನಗಳಿಂದ ತಿಳಿಯುತ್ತದೆ. ಕುಹುಯೋಗವು ಪ್ರಾಪ್ತವಾದಾಗ ರಾಜನ ಪ್ರಾರ್ಥನಾನುಸಾರವಾಗಿ ಈತನು ವಿಜಯನಗರದ ಸಿಂಹಾಸನದಮೇಲೆ ಕುಳಿತು ಆಯೋಗವು ಮುಗಿವವರೆಗೆ ಆಳಿದಂತೆ ಪ್ರತೀತಿಯಿದೆ. ತಿರುಪತಿಯಲ್ಲಿ ಶ್ರೀನಿವಾಸದೇವರಿಗೆ 12ವರುಷ ಅರ್ಚಕನಾಗಿದ್ದಂತೆ ಹೇಳುತ್ತಾರೆ. ಈತನ ಹಾಡುಗಳಲ್ಲಿ ಕೃಷ್ಣ ಎಂಬ ಅಂಕಿತವಿದೆ. ಒಂದು ಹಾಡನ್ನು ಉದಾಹರಿಸುತ್ತೇವೆ—

ರಾಗ ಮುಖಾರಿ. ಆದಿತಾಳ.

ಪಲ್ಲವಿ|| ನರನಾದಮೇಲೆ ಹರಿನಾಮ ಜಿಹ್ವೆಯಲಿರಬೇಕು ||
ಭೂತದಯಾಪರನಾಗಿರಬೇಕು | ಪಾತಕವೆಲ್ಲಾ ಕಳೆಯಲಿಬೇಕು |
ಮಾತುಮಾತಿಗೆ ಹರಿಯೆನಬೇಕು ||1||
ಶಾಂತಿಕ್ಷಮೆದಮೆಹಿಡಿಯಲಿಬೇಕು | ಭ್ರಾಂತಿಕ್ರೋಧವ ಕಳೆಯಲಿಬೇಕು |
ಸಂತತ ಸನ್ಮಾರ್ಗದಲ್ಲಿ ಇರಬೇಕು ||2||

ಕಾಮಕ್ರೋಧವ ತಾ ಬಿಡಬೇಕು | ಮಮತಾಹಂಕಾರವ ಕಳೆಯಲಿಬೇಕು |
ಸೌಮ್ಯರಾ ಸಂಗದೊಳಿರಬೇಕು ||3||
ವೇದಶಾಸ್ತ್ರವನೋದಲಿಬೇಕು |ಬೋಧತತ್ವವ ತಿಳಿಯಲಿಬೇಕು |
ಮಾಧವನ ಸ್ಮರಣೆಯ ಮಾಡಲಿಬೇಕು ||4||
ತಂದೆಕೃಷ್ಣನ ದಯವಿರಬೇಕು | ಬಂದುದುಂಡು ಸುಖಬಡಬೇಕು|
ಚೆಂದಾಗಿ ಜಗದೊಳಗಿರಬೇಕು ||5||

---

## ಓದುವಗಿರಿಯ. ಸು. 1525.

ಈತನು ಸಾನಂದಗಣೇಶಸಾಂಗತ್ಯ, ಹರಿಶ್ಚಂದ್ರಸಾಂಗತ್ಯ ಇವುಗಳನ್ನು ಬರೆದಿದ್ದಾನೆ ಇವನು ವೀರಶೈವಕವಿ ; " ಪುರಾಣದ ವಿರೂಪಾಕ್ಷನ ವರಗರ್ಭಶರಧಿಚಂದ್ರಮನ ಪರಮಪಾವನಮೂರ್ತಿ ಕಂತೆಯದೇವರ ಚರಣವ ನಾ ಬಲಗೊಂಬೆ " ಎಂಬುದರಿಂದ ಈ ಕಂತೆಯದೇವನು ಇವನ ಗುರುವಾಗಿರಬಹುದು. ಇವನ ತಂದೆ ಕರಿಯಸೋಮಪ್ಪ, ಶ್ರೀಗಿರಿಯಮಲ್ಲೇಶನ ಚರಣಕಮಲಮಧುಕರನು, ವರಕವಿಶರಧಿಚಂದ್ರಮನು ಎಂದು ತನ್ನನ್ನು ವಿಶೇಷಿಸಿ ಹೇಳಿಕೊಂಡಿದ್ದಾನೆ. ಹರಿಣಪುರಸಿಂಹಾಸನಾಧೀಶ್ವರ ಗುರುಕೆಂಪನಂಜೇಶ್ವರನುದರಜಾತ ನಂಜಯ್ಯನು ಈ ಎರಡುಗ್ರಂಥಗಳನ್ನೂ ತನ್ನಿಂದ ಬರಸಿದಂತೆ ಹೇಳುತ್ತಾನೆ. ಛಂದವಲಂಕಾರವೊಂದಿದ ವಡಿ ಪ್ರಾಸು ಬಿಂದುವೆಂಬೀಗಣನೆಯನೊಂದುವನರಿ'ತವನಲ್ಲ ಎನ್ನುತ್ತಾನೆ. ಇವನ ಹರಿಶ್ಚಂದ್ರಸಾಂಗತ್ಯವು ಶಕ 1498 ಈಶ್ವರವರ್ಷದಲ್ಲಿ—ಎಂದರೆ 1577 ರಲ್ಲಿ—ಪ್ರತಿಮಾಡಲ್ಪಟ್ಟಂತೆ ತಿಳಿವುದರಿಂದ ಇವನ ಕಾಲವು ಸುಮಾರು 1525 ಆಗಿರಬಹುದು.

ಪೂರ್ವಕವಿಗಳನ್ನು ಈ ಪದ್ಯದಲ್ಲಿ ಸ್ಮರಿಸಿದ್ದಾನೆ—

ಬಾಣಮಯೂರನುದ್ಭಟಕಾಳಿದಾಸನು | ಜಾಣಹಂಪೆಯಹರೀಶ್ವರನ |
ಮಾಣದೆ ಮಲುಹಣೇಶ್ವರರಾಘವಾಂಕನ | ಕೇಣವಿಲ್ಲದೆ ಬಲಗೊಂಬೆ ||

ಇವನ ಗ್ರಂಥಗಳಲ್ಲಿ

### 1. ಸಾನಂದಗಣೇಶಸಾಂಗತ್ಯ

ಸಂಧಿ 6, ಪದ್ಯ 440.[1] ಇದರ ಕಥಾಗರ್ಭವನ್ನು ಕವಿ " ನಿರ

---

1 ಇನ್ನೊಂದು ಪ್ರತಿಯಲ್ಲಿ 478 ಎಂದಿದೆ

ಯಾಧಿಪತಿಯ ಪಟ್ಟಣವ ಕೋಳ್ಕೊಂಡು ಕೈಲಾಸಕ್ಕೆ ಕೊಂಡೊಯ್ದ ಯತಿ ಸಾನಂದಚರಿತೆ" [1] ಎಂಬ ಪದ್ಯಭಾಗದಲ್ಲಿ ಸೂಚಿಸಿದ್ದಾನೆ. ಗ್ರಂಥಾವತಾರದಲ್ಲಿ ಶ್ರೀಗಿರಿಯಮಲ್ಲೇಶನ ಸ್ತುತಿ ಇದೆ. ಬಳಿಕ ಕವಿ ಗಣೇಶ, ಕಂತೆಯದೇವ ಇವರುಗಳನ್ನು ಸ್ಮರಿಸಿದ್ದಾನೆ. ಈ ಗ್ರಂಥದಿಂದ ಒಂದೆರಡು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ವನ

ನೆಱಿಲ ತಂಪಿನ ಕೊಳ ತಳಿರ ಮಂಟಪ ಸಣ್ಣ | ಮಱಿಲುವಟ್ಟೆಯ ರನ್ನಜಗಲಿ |
ಸುೞಿಗಾಳಿ ಸುತ್ತ ಪರ್ಬಿದ ಲತೆ ಪೂದೋಟ | ವಳವಟ್ಟು ಮೆಱೆದುವಾವನದಿ ||

ನರಕ

ಕಡಿದು ಕಚ್ಚಿ ಹೀರಿ ಹಾಱುವ ಜಿಗುಳೆಯು | ಬಿಡದೆ ಕಡಿವ ವಜ್ರದುಂಬಿ |
ಮಡಲಿೞಿದಿಹ ಮರಗೆಂಜುಗ ದಾರಿಯೊ | ಳೆಡೆದೆಱಿಹಿಲ್ಲ ನೋಡಿದರೆ ||
ವಿಷದ ಕಾರ್ಮಡು ಕೆಂಡದ ತೊಱಿ ದಳ್ಳುರಿ| ಮುಸುಕಿ ಹರಿವ ಪೆರ್ದೊಱೆಯು |
ಬಿಸಿನೀರ ಭಾವಿ ಹಾವಸೆಗಲ್ಲುಸೋಪಾನ | ಹೊಸಪರಿಯೆಲ್ಲಿ ನೋಡಿದರೆ ||

2. ಹರಿಶ್ಚಂದ್ರಸಾಂಗತ್ಯ

ಸಂಧಿ 6, ಪದ್ಯ 441. ಇದರಲ್ಲಿ ಹರಿಶ್ಚಂದ್ರನ ಕಥೆ ಹೇಳಿದೆ.

---

## ಚೇರಮಾಂಕ. 1526

ಈತನು ಚೇರಮಕಾವ್ಯವನ್ನು ಬರೆದಿದ್ದಾನೆ. ಇವನು ವೀರಶೈವ ಕವಿ ; ಇವನ ಪಿತಾಮಹನು ಆದ್ಯುಸಿರಿಯಾಳನನ್ವಯೋದ್ಭವನೂ ಚಿಕ್ಕವೀರೇಶಕರಜಾತನೂ ಆದ ನಾಗಲಿಂಗಸೆಟ್ಟಿ ; ತಂದೆ ರಾಜಪೂಜ್ಯನಾದ ಗಂಗಪ್ಪಸೆಟ್ಟಿ ; ಗುರು ಚೆನ್ನವೀರೇಶ. ಗುಬ್ಬಿಯಮಲ್ಲಣಾರ್ಯನ(1513) ಕೃಪೆಯಿಂದ ತನ್ನ ಗ್ರಂಥವನ್ನು ಬರೆದಂತೆ ಹೇಳುತ್ತಾನೆ. ಈ ಗ್ರಂಥನಿರ್ಮಾಣಕಾಲವು ಶಕ 1448ನೆಯ ವ್ಯಯಸಂವತ್ಸರ—ಎಂದರೆ 1526—ಎಂದು ಹೇಳಿದೆ.

ಪೂರ್ವಕವಿಗಳಲ್ಲಿ ವಾಲ್ಮೀಕಿ, ಮಯೂರ, ಹಲಾಯುಧ, ವಾಲ್ಕುರಿಕೆಸೋಮ, ಭೋಜ, ಬಾಣ ಇವರುಗಳನ್ನು ಸ್ತುತಿಸಿ

1 Vol. I, 217.

ಅರಸನರ್ಥವನಿತ್ತು ಶರಣಗ್ಗೆಯಾಕೆಱೆಯು |
ಮರುಳಿಂದ ಕಟ್ಟಿಸುತ ಬಯಲಾದ ಹಿರಿಯ ಪ |
ದ್ಮರಸರವರಣುಗನುಱೆ ರಾಮಾನುಜನ ಶಿಷ್ಯನಂ ಭಂಗಿಸುತ್ತಾತನ ||
ಪೊರೆದಸಂ ವೀರಬಲ್ಲಳನ ಸಭೆಯೊಳಗಿರ್ದು |
ಕರಮರ್ದನಂಗೈದ ಮಹಿಮೆಗವನಿಪನೆಱಗೆ |
ಬರುತ ಹಂಪೆಯೊಳೀಶಭಕ್ತರಂ ನುತಿಸಿದ ಹರೀಶನಂ ಬಲಗೊಂಬೆನು ||

ಎಂಬ ಪದ್ಯದಲ್ಲಿ ಕೆರೆಯಪದ್ಮರಸ, ಕುಮಾರಪದ್ಮರಸ, ಹರೀಶ್ವರ ಇವರುಗಳನ್ನು ಸ್ಮರಿಸುತ್ತಾನೆ. "ನವರಸಭಾವಲಕ್ಷಣಾಲಂಕಾರನಿಪುಣ" ಎಂದು ತನ್ನನ್ನು ವಿಶೇಷಿಸಿ ಹೇಳಿಕೊಂಡಿದ್ದಾನೆ.

ಇವನ ಗ್ರಂಥ

### ಚೇರಮಕಾವ್ಯ

ಇದು ವಾರ್ಧಕಷಟ್ಪದಿಯಲ್ಲಿ ಬರೆದಿದೆ ; ಸಂಧಿ 11, ಪದ್ಯ 555. ಇದರ ಕಥಾಗರ್ಭವು ಈ ಪದ್ಯದಲ್ಲಿ ಹೇಳಿದೆ—

ನಾರದನ ಬಿನ್ನಪಕೆ ಭಸಿತಕಾಯನ ಶಿವಂ |
ಧಾರಿಣಿಗೆ ಕಳುಪೆ ಚೇರಮನೆನಿಸಿ ರಕ್ಷಿಸಿ |
ಚಾರನಂ ಪರಕಲಿಸಿ ಭವನನುಜ್ಞೆಯ ಭದ್ರಗಾಯಕಂಗಿಷ್ಟವಿತ್ತು ||
ಆರುಚಿರನಂಬ್ಯಣ್ಣನೊಡನಿರ್ದು ಬಱಿಕವಂ |
ಮಾರಾರಿಯೂರ್ಗೆಯ್ದೆ ಪಿಂದೆ ಧಾಱೀಯವೋಗಿ |
ಚಾರುಕಾವ್ಯವನಲ್ಲಿ ಕೇಳಿಸಿದನೆಂಬಕಥೆ.

ಇದರ ಉತ್ಕೃಷ್ಟತೆಯನ್ನು ಕವಿ

ಬಿಟ್ಟಕಣ್ಣವರೂರ ಸುಧೆಯ ಸವಿ ಮನವಲರ್ದು |
ನಟ್ಟು ಕೂಡುವ ಲತಾಂಗಿಯ ಸೋಂಕು ಪುಳಕವಳ |
ವಟ್ಟು ಹಾಡುವ ಗಾನರಸದಿಂಪು ಜಾಜಿಯೊಳ್ಪರಿಲ ಕಂಪುಗಳ ಸೊಂಪು ||
ಕಟ್ಟಱಿಕಱಿನ ಸುತನ ರೂಪು ನಲ್ವಿನ ಸೈಪು |
ಮುಟ್ಟಿ ಪಂಚೇಂದ್ರಿಯಂ ನಲಿವವೋಲ್ ಗಂಗಪ್ಪ |
ನೆಟ್ಟಿಯಾತ್ಮಜಚೇರಮಂ ಪೇಳ್ದ ರಸಕಾವ್ಯವೆಸೆವುದಖಿಳರಿಗೆ ಸೇವ್ಯ ||
ರಸಿಕರಾಹಾ ಎನಲು ಭಾವಕರು ತಲೆದೂಗೆ |

ಪೊಸಬಗೆಯಿದೆಂದು ಕೊಂಡಾಡೆ ಲಾಕ್ಷಣಿಕರಾ |
ಲಿಸಲು ವಿದ್ವಜ್ಜನಂ ಸೇಱಿದೀಕಾವ್ಯ

ಎಂಬ ಪದ್ಯಗಳಲ್ಲಿ ಹೇಳಿದ್ದಾನೆ. ಈ ಗ್ರಂಥವನ್ನು

ವೇದಾಂತಸಿದ್ಧಾಂತಲಕ್ಷಣವೈದ್ಯಭರತಸಾಮುದ್ರಿಕಜ್ಯೋತಿಷಾಲಂಕಾರಸರಸ ಗೀತಂ ವಾದ್ಯಶಕುನಸದ್ವ್ಯಾಕರಣಸೂಪರತಿಶಾಸ್ತ್ರದೊಳಗೆ ಪರಿಣತನೆನಿಪ್ಪ ಸತ್ಕವಿಮಲ್ಲ ಣಾರ್ಯಗುರುವರನ ಕೃಪೆಯಿಂ ಪಡೆದು

ಬರೆದಂತೆ ಹೇಳುತ್ತಾನೆ. ಗ್ರಂಥಾವತಾರದಲ್ಲಿ ಭೋಗಮಲ್ಲೇಶ್ವರಸ್ತುತಿ ಇದೆ. ಬಳಿಕ ಕವಿ ಪಾರ್ವತಿ, ಗಣೇಶ, ಷಣ್ಮುಖ, ನಂದಿ, ಭೃಂಗಿ, ವೀರಭದ್ರ ಇವರುಗಳನ್ನು ಹೊಗಳಿ ಆಮೇಲೆ ತನ್ನ ಗುರು ಚೆನ್ನವೀರೇಶ, "ಗುಬ್ಬಿಯಮಲ್ಲಣಾಚಾರ್ಯಪೌತ್ರ, ಸಂಸ್ಕೃತಕರ್ಣಾಟಕಕವಿತಾ ವಿಶಾರದ, ಬಸವೇಶ್ವರಪುರಾಣಾರ್ಥಭೋಗಿ" ಯಾದ ಮಲ್ಲಣಾರ್ಯ, ಸೋಲೂರಚಿಕ್ಕಬಸವ ಇವರುಗಳನ್ನು ಸ್ತುತಿಸುತ್ತಾನೆ.

ಇವನ ಬಂಧವು ಪ್ರೌಢವಾಗಿದೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ಸಮುದ್ರ

ಕರಿಯ ವನವೋ ಹರಿಯ ತಲ್ಪವೋ ಭಾವಿಸಲ್ |
ಸಿರಿವೆಣ್ಣ ಸೂತಿಕಾಗೇಹವೋ ರನ್ನಂಗ |
ಳಿರಿಸಿದ ಕರಂಡವೋ ಮಕರಮೀನಾಳಿಕಕರ್ಕಾಟಕಂಗಳ ರಾಸಿಯ ||
ಸುರಿದ ಕಳನೋ ವಾಡಬಂ ಪೊರೆವ ಕೊಯಿಗುಱಿಯೊ |
ಸುರಪಗಾಗೋಡಿದಹಿತರು ಬಲಿದ ಜಲದುರ್ಗ |
ದಿರವೊ ಪೇಱನೆ ಮೆಱೆದುದರರೆ ಬಹುಬಂಧು ಭೂಪರಿವೃತ್ತವಾದ ಸಿಂಧು ||

ಮಳೆ

ಬೇಸಗೆಯ ಬಿಸಿಲುರಿಗೆ ಬಾಯೊಣಗಿ ಮೇಘವಂ |
ದಾಸಮುದ್ರೋದಕವನತಿತೃಷ್ಣೆಯಿಂ ಕೊಂಡು |
ದೋಸದೆ ಜಲೋದರದರೋಗವಾಗಲ್ಕೊಂದು ಮೊಱಗೆಂಬ ಮೊರೆಯನಿಡಲು ||
ಆಸುರದೆ ಕಾರೆಂಬ ವೈದ್ಯನಾಮಿಂಚೆಂಬ |
ಭಾಸುರದ ಶಸ್ತ್ರಮುಮನಲ್ಲಲ್ಲಿಗಿಡೆ ಪೊಳೆದು |
ಸೂಸುತಿಹ ರಕ್ತಕಣವೊಗುವ ನೀರೆನಲಿಂದ್ರಗೋಪದೊಳ್ಕಱೆ ಕಱಿದುವು ||

## ಮಾವಿನಹಣ್ಣು

ಚಂದಿರಗದಿರ್ಕಂಪನಬಾಲಾರುಣಾಧರದ |
ಮಂದರಾಗದ ರುಚಿಯನೆಳವೆಣ್ಣ ನಲ್ನೋಟ |
ದಿಂದಾದ ಸೊಗಸನಾಸತ್ಕವೀಶ್ವರರ ವಾಕ್ಯಾಮೃತದ ಮಾಧುರ್ಯದ ||
ಚಂದದಮರರ ಧೇನುವಿನ ಸುಧೆಯ ಸವಿಯನಿವ |
ನೊಂದುಗೂಡುತ ಚೈತ್ರನೆಂಬ ಪರಮೇಷ್ಠಿ ಸಿರಿ |
ಗಂದಗೆಂದೀಯುಪವನದೊಳಿಟ್ಟನೆನೆ ರಸಾಲದ ಪಕ್ವಫಲಮೆಸೆದುವು ||

## ಹಲಸಿನಹಣ್ಣು

ಮಿಸುನಿದಗಡುಗಳ ಮಿಗೆ ಸುರುಳ್ದು ಮೃದುಮಧುರತೆಯು |
ನೊಸೆದಿತ್ತು ಕಂಪೂಡಿಯದಱೊಳಗೆ ನೆಱೆಯಮೃತ |
ರಸಮನೊಯ್ಯನೆ ತೀವಿ ಸಲೆ ಚೈತ್ರನೆಂಬಜಂ ಪೊಸಪಟ್ಟಸಾಲೆಯೊಳಗೆ ||
ಮಸಗದಂತವನಿಡುತ್ತವಱ ಮೇಲ್ಪಳಸಿನೊಳ್ |
ಪಸುರ್ಮುಗುಳ್ವಟ್ಟೆಗಳ ಮದನನೃಪಗೆಂದು ಸೇ |
ರಿಸಿ ಬೈತ ಬೋನಗುಡಿಕೆಯತೆಱದೆ ಸಾಲ್ವಿಡಿದ ಪನಸಫಲತತಿ ಮೆಱೆದುವು ||

## ಮುತ್ತುಗ

ಧರೆ ಬಿರಿಯಲುರಗನ ಫಣಾಮಣಿಯ ದೀಪ್ತಿ ಏ |
ಸ್ಫುರಿಸಿದಪುದೋ ಬೇಸಗೆಯ ಬಿಸಿಲ ಬೇಗೆಗಾ |
ಧರೆ ಬೆಂದು ನಿಂದುರಿದಪುದೊ ಮೇಣು ಧರೆ ರತ್ನಗರ್ಭೆಯೆಂದೆಂಬ ಪೆಸರ ||
ಪಿರಿದಾಗಿ ಕನ್ನಡಿಸಿದಪುದೊ ಕಾಷ್ಠದೊಳಗ್ನಿ |
ಪರಿಜುವೆತ್ತುದೊ ಪಸಿಯ ಕಾಱ್ಕಿಚ್ಚೊ ಎಂದೆನಲ್ |
ದೊರೆವೆತ್ತು ರಂಜಿಸುವುದಾವನಾಂತರದೊಳಗೆ ಪೂತ ಮುತ್ತುಗದ ವೃಕ್ಷಂ ||

## ದುಂಬಿ

ಉತ್ತಮದ ಮಿಸುಪಿಂದ್ರನೀಲದ ಹೊಳೆವ ಮಣಿಗೆ |
ಕತ್ತುರಿಯುರುಳಿಗಳ್ಗೆ ಮುನ್ನವೀಜಗಮುಮಂ |
ಪೆತ್ತಜಂ ನಾಸಿಕಮನಾಱಡಿಯನೊಳ್ಗಱಿಗಳಿತ್ತನಲ್ಲದೊಡಂತಹ ||
ಚಿತ್ತರದ ಕಾಂತಿ ಪೊಸಕಂಪಿನೊಂದೇಱ್ಗೆಯಂ |
ಮತ್ತವೇಂ ಪಡೆವುವೇ ತಾವೆಂಬಮಾಱ್ಕೆಯಿಂ |
ಪೊತ್ತುಪರಿಮಳವನಾವನದೊಳಗೆ ಬಿಡದೆ ಸುಱಿಯುತ್ತಿರ್ಪುವರಸುದುಂಬಿ ||

---

## ಪದ್ಮಕವಿ. 1528.

ಇವನು ವರ್ಧಮಾನಚರಿತೆಯನ್ನು ಬರೆದಿದ್ದಾನೆ. ಈತನು ಜೈನ ಕವಿ ; ನಾಗಯ್ಯನ ಮಗನು. ಈ ಗ್ರಂಥವನ್ನು ಶಕ 1450 ಸರ್ವಧಾರಿಯಲ್ಲಿ, ಎಂದರೆ 1528ರಲ್ಲಿ ಬರೆದಂತೆ ಹೇಳುತ್ತಾನೆ.

ಇವನ ಗ್ರಂಥ

### ವರ್ಧಮಾನಚರಿತೆ

ಇದು ಸಾಂಗತ್ಯದಲ್ಲಿ ಬರೆದಿದೆ ; ಸಂಧಿ 12. ಇದರಲ್ಲಿ 24ನೆಯ ತೀರ್ಥಂಕರನಾದ ವರ್ಧಮಾನನ ಅಥವಾ ಮಹಾವೀರನ ಕಥೆ ಹೇಳಿದೆ

---

## ಮುರಿಗೆಯಶಾಂತವೀರ. ಸು. 1530

ಈತನು ಪ್ರಭುಲಿಂಗದಕಂದ, ವೈರಾಗ್ಯಷಟ್ಪದಿ, ಏಕೋನವಿಂಶತಿಪ್ರಬಂಧ ಇವುಗಳನ್ನು ಬರೆದಿದ್ದಾನೆ. ಇವನು ವೀರಶೈವಕವಿ ; ಮುರಿಗೆಮಠದ ಸ್ವಾಮಿಯಾಗಿದ್ದಂತೆ ತೋರುತ್ತದೆ. ಸಿದ್ಧಲಿಂಗನ ಕರುಣಶೇಷಂ ಸಿದ್ಧಿಸಿದ ನಿಜಬೋಳಬಸವನ ಪ್ರಸಾದಸೇವನೆಯಿಂದ ಬೆಳೆದಿರ್ದ, ಉದ್ದವಾದಾಗುರುವಿನಿಂ ಸಲೆ ಸಿದ್ಧಕಟ್ಟಗೆಹಳ್ಳಿದೇವನ ಶುದ್ಧಜ್ಞಾನದಿ ಬೆಳೆದ, ಮುರಿಗೆಯಶಾಂತವೀರದೇವ ಎಂಬ ಈತನ ಸ್ತುತಿರೂಪವಾದ ಪದ್ಯಭಾಗದಿಂದ ಇವನು ತೋಂಟದಸಿದ್ಧಲಿಂಗನ (ಸು. 1470) ಶಿಷ್ಯನಾದ ಬೋಳಬಸವನ ಅನುಗ್ರಹಕ್ಕೆ ಪಾತ್ರನಾಗಿದ್ದಂತೆಯೂ ಕಟ್ಟಗೆಹಳ್ಳಿದೇವನಿಂದ ಜ್ಞಾನವನ್ನು ಪಡೆದಂತೆಯೂ ತಿಳಿಯುತ್ತದೆ. ತೋಂಟದಸಿದ್ಧಲಿಂಗದೇವನ ಪ್ರಶಿಷ್ಯನಾದುದರಿಂದ ಇವನ ಕಾಲವು ಸುಮಾರು 1530 ಆಗಬಹುದು. ಈತನ ಸ್ತುತಿರೂಪವಾದ ಒಂದು ಷಟ್ಪದೀಗ್ರಂಥವಿದೆ.

ಇವನ ಗ್ರಂಥಗಳಲ್ಲಿ

### I. ಪ್ರಭುಲಿಂಗದಕಂದ

ಈ ಗ್ರಂಥದಲ್ಲಿ 53 ಕಂದಗಳಿವೆ. ಇವು ಪ್ರಾಯಿಕವಾಗಿ ರಾಜಲಿಂಗ ಪ್ರಭುವೇ ಎಂದು ಮುಗಿಯುತ್ತವೆ. ಈ ಗ್ರಂಥದಲ್ಲಿ ಯೋಗಶಾಸ್ತ್ರಕ್ರಮದಿಂದ ಶಿವಪೂಜೆ ನಿರೂಪಿತವಾಗಿದೆ. ಇದರಿಂದ ಒಂದೆರಡು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ಒಳಹೊಱಗೆಡಬಲದೊಳ್ವೇಣ್|ಕೆಳಗಂ ಮೇಲೆಸೆವ ಮುಂದೆ ಪಿಂದೆಲ್ಲೆಡೆಯೊಳ್|
ದಳಕುಳಕರಣಕದಂಬ| ಸ್ಥಳದೊಳ್ಥಳಥಳಿಪ ರಾಜಲಿಂಗಪ್ರಭುವೇ ||
ರವಿಗಂಗಾಪಿಂಗಲೆಯಾ | ಸವಿಗದಿರನ ಜಗುನೆಯಿಡಾಡೆಯನಳಕಸತಿಯು |
ಗೀವನಿಸುಷುಮ್ನೆಯ ಸಂಗಮ | ದವಗಡದುರುಗಿರಿಯ ರಾಜಲಿಂಗಪ್ರಭುವೇ ||

ಈ ಗ್ರಂಥಕ್ಕೆ ಪರ್ವತಶಿವಯೋಗಿ (ಸು. 1650) ಒಂದು ವ್ಯಾಖ್ಯಾನವನ್ನು ಬರೆದಿದ್ದಾನೆ.

## 2. ವೈರಾಗ್ಯಷಟ್ಪದಿ

ಇದರಲ್ಲಿ ನೀತಿವೇದಾಂತಬೋಧಕವಾದ 101 ವಾರ್ಧಕಷಟ್ಪದಿಗಳಿವೆ. ಇದರಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ.—

ವಿರತಿಯಂಕುರದೋಱು ಸುಜ್ಞಾನ ಮದವೇಱು |
ಸ್ಥಿರಚಿತ್ತ ಕಳಿಕೇಱು ಸತ್ಯಗುಣಗಳ ಬೀಱು |
ದುರಿತಪಂಕವು ತಾಱು ಸಂಶಯಂಗಳು ಹಾಱು ಲಿಂಗಕ್ಕೆ ಮನವ ಮಾಱು||
ದುರುಳಮಾಯೆಯ ಮೀಱು ತನುವಿನೊಳ್ ಕ್ರಿಯೆಯೂಱು |
ಶರಚರಿತೆಗಳ ಸಾಱು ಮುಕ್ತಿಗಂ ಬಾಯಾಱು |
ಧರೆಗೆ ಭಕ್ತಿಯ ತೋಱು ಕುಟಿಲಸಟೆಯಂ ತೂಱು ಚರಿಪ ಸುಜನೋಪಕಾರಿ ||
ನಿಂದ್ಯದನ್ನವನುಂಡು ಹಾಸ್ಯರಸವೀಂಟುತ್ತ |
ಜಿಂದದಜ್ಞಾನವಸನವ ಪೊದ್ದು ತ್ರಿಗುಣಂಗ |
ಳೊಂದುಗೂಡಿದ ವೀಳ್ಯಮಂ ಮೆದ್ದು ವ್ಯಸನಸಪ್ತಕದ ನೀಮುರ್ಚಕ್ಕುಳಿಸುತ ||
ಮುಂದೆ ಮುಮ್ಮಲವೆಂಬ ಸುರೆಯನತಿಹೊಟ್ಟೆಯೊಡೆ |
ವಂದದಿಂದೀಂಟಿ ಪಾಪದ ಶಿಲಾಸ್ತಂಭಕ್ಕೆ |
ಯೊಂದಿದಕ್ಕರಗಳಾಗುತ ಭವವನಾಳುವರ ಮೇಳಮಂ ಬಿಡು ಗಡಣುಗಾ ||
ಮಾಧವಗೆ ಹರಿನಾಮವೆನಗೆಯುಂ ಹರಿನಾಮ |
ಮಾಧವಗೆ ಜಲಶಯನವೆನಗೆಯುಂ ಜಲಶಯನ |
ಮಾಧವನ ಪಿರಿದೇನು ಎನ್ನ ಕಿಱಿದೇನೆನುತ ಕಪ್ಪೆ ವಿಷ್ಣುವ ಜಱೆವೊಲು ||
ಬಾಧಕರು ಹಸಿವು ತೃಷೆ ನಿದ್ರೆ ಜನನಂ ಮರಣ |
ವೀಧರಿತ್ರಿಯೊಳೆಮಗೆ ನಿಮಗೆ ಸರಿಯುದಱಿಂ |
ದಾದುದೇಂ ನಿಮಗೆ ದೇವತ್ವವೆಂದೆನುತ ಪೊಳೆವಾತುಗಳ ಸೊಱಿಹುತಿಹರು ||

### 3 ಏಕೋನವಿಂಶತಿಪ್ರಬಂಧ

ಇದರಲ್ಲಿ 19 ಪದ್ಯವಿರುವುದರಿಂದ ಈ ಹೆಸರು ಬಂದಂತೆ ತೋರುತ್ತದೆ. ಇದು ವೇದಾಂತಬೋಧಕವಾದ ಗ್ರಂಥ. ಇದರಿಂದ ಒಂದು ಪದ್ಯವನ್ನು ಉದಾಹರಿಸುತ್ತೇವೆ—

ಶ್ರವಣ ಕೀರ್ತನ ನಿಜಸ್ಮರಣ ಪದಸೇವನಂ ।
ವಿವಿದಾರ್ಚನಂ ವಂದನಂ ದಾಸ್ಯಮನುವಿನಿಂ ।
ತವೆ ಸಖ್ಯಮಾತ್ಮವಿನಿವೇದನಂ ಶಂಭುವಿನ ಭಕ್ತಿಯೊಂಬತ್ತುಕೆಲಸನು ॥
ವಿವರಿಸಲ್ ಮಂಡೆಮನಕಣ್ಗಳಿಂದೆರ್ದೆಯಿಂದೆ ।
ಸಪವಾತಿನಿಂ ಪಾದಕರಬಾಹುಯುಗಳದಿಂ ।
ದವತರಿಕುಮಿವು ನಮಸ್ಕಾರಾಂಗಮೆಂಟಾಗಿ ಸದ್ಭಕ್ತಿಸಂಪನ್ನರ ॥

ಈ ಗ್ರಂಥಕ್ಕೆ ಒಂದು ವ್ಯಾಖ್ಯಾನವೂ ಇದೆ.

---

### ಸಂಪಾದನೆಯ ಚೆನ್ನಂಜೆದೇವ. ಸು. 1530.

ಈತನು ಅಚರಣೆಯ ಸಂಬಂಧದ ವಚನ, ಬಸವಸ್ತೋತ್ರದ ವಚನ, ಮಿಶ್ರಸ್ತೋತ್ರದ ವಚನ ಇವುಗಳನ್ನು ಸೇರಿಸಿದುದಾಗಿ ತಿಳಿಯುತ್ತದೆ: ಎಂದರೆ ಈ ಗ್ರಂಥಗಳು ಏತತ್ಕೃತವಲ್ಲ ; ಇತರರ ಗ್ರಂಥಗಳಿಂದ ಆರಿಸಿ ಜೋಡಿಸಿದ ವಚನಗಳನ್ನು ಒಳಕೊಂಡಿವೆ.

ಇವನು ವೀರಶೈವಕವಿ. ಸಂಪಾದನೆಯ ಗುರುಲಿಂಗದೇವನ ಶೀಲವಂತಯ್ಯನ ತ್ರಿವಿಧಿಯ ಟೀಕೆಯಿಂದ ಈತನು ತೋಂಟದಸಿದ್ಧಲಿಂಗನ (ಸು. 1470) ಶಿಷ್ಯನಾದ ಬೋಳಬಸವನ ಶಿಷ್ಯನೆಂದು ತಿಳಿವುದರಿಂದ ಇವನ ಕಾಲವು ಸುಮಾರು 1530 ಆಗಬಹುದು.

ಇವನಿಂದ ಸಂಕಲಿತವಾದ ಗ್ರಂಥಗಳಲ್ಲಿ ಆಚರಣೆಯಸಂಬಂಧದವಚನವು 261 ವಚನಗಳನ್ನೂ ಬಸವಸ್ತೋತ್ರದ ವಚನವು 123 ವಚನಗಳನ್ನೂ ಮಿಶ್ರಸ್ತೋತ್ರದವಚನವು 108 ವಚನಗಳನ್ನೂ ಒಳಕೊಂಡಿವೆ.

ಇವನು ಸೇರಿಸಿರುವ ವಚನಗಳಲ್ಲಿ ಒಂದನ್ನು ಉದಾಹರಿಸುತ್ತೇವೆ—

ಜನ ಮೆಚ್ಚೆ ಶುದ್ಧನಲ್ಲದೆ ಮನ ಮೆಚ್ಚೆ ಶುದ್ಧನಲ್ಲವಯ್ಯಾ; ನುಡಿಯಲ್ಲಿ ಜಾಣನಲ್ಲದೆ ನಡೆಯಲ್ಲಿ ಜಾಣನಲ್ಲವಯ್ಯಾ; ವೇಷದಲ್ಲಿ ಅಧಿಕನಲ್ಲದೆ ಭಾಷೆಯಲ್ಲಿ ಅಧಿಕನಲ್ಲ

ವಯ್ಯಾ; ಧನ ದೊರಕದೆ ನಿಸ್ಪೃಹನಲ್ಲದೆ ಧನ ದೊರಕೆ ನಿಸ್ಪೃಹನಲ್ಲವಯ್ಯಾ; ಏಕಾಂತದ್ರೋಹಿ ಗುಪ್ತಪಾತಕಿ ಯುಕ್ತಿಶೂನ್ಯಂಗೆ ಸಕಳೇಶ್ವರದೇವ ಒಲಿ ಒಲಿ ಎಂದೊಡೆ ಎಂತೊಲಿವನಯ್ಯಾ.

---

## ಲಿಂಗಮಂತ್ರಿ. ಸು. 1530

ಈತನು ಕಬ್ಬಿಗರ ಕೈಪಿಡಿಯನ್ನು ಬರೆದಿದ್ದಾನೆ. ಇವನು ವೀರಶೈವಕವಿ; ವಿರೂಪಾಕ್ಷನ ಮಗನು, ನುಗ್ಗೆಹಳ್ಳಿಯ ರಾಯಭೂವರನ ಪ್ರಧಾನಿ. ಸಂಗೀತನಿಪುಣ, ಬಹುಲಿಪಿಜ್ಞ ಎಂದು ಹೇಳಿಕೊಂಡಿದ್ದಾನೆ.

ಹಾಸನದ 117ನೆಯ ಶಾಸನದಿಂದ (1573) ವಿಜಯನಗರದ ರಾಜನಾದ ವೀರಪ್ರತಾಪಪಾರ್ಶ್ವದೇವಮಹಾರಾಯನ (1419-1446) ಅಳಿಯನಾದ ಆತ್ರೇಯಗೋತ್ರದ ಆಪಸ್ತಂಬಸೂತ್ರದ ಶಾವಾಶ್ವಪ್ರವರದ ಯಜುಶ್ಶಾಖೆಯ ಸೋಮವಂಶದ ತಿರುಮಲರಾಜನಿಗೆ ನುಗ್ಗೆಹಳ್ಳಿಯ ರಾಯೊಡೆಯನೆಂಬ ಮಗನಿದ್ದಂತೆ ತಿಳಿಯುತ್ತದೆ. ಮತ್ತೊಂದು ಶಾಸನದಲ್ಲಿ[1] ನುಗ್ಗೆಹಳ್ಳಿಯ ರಾಯಣರಾಜನು ವಿಜಯನಗರದ ಅಚ್ಯುತರಾಯನ (1530-1542) ಸಾಮಂತನಾಗಿದ್ದನೆಂದು ಹೇಳಿದೆ. ಈತನೇ ಕವಿ ಹೇಳುವ ನುಗ್ಗೆಹಳ್ಳಿಯ ರಾಯಭೂವರನು. ಇವನ ಕಾಲವು ಸುಮಾರು 1530 ಆಗಬಹುದು. ಕವಿಯ ಕಾಲವೂ ಅದೇ.

ಕವಿ ತನ್ನ ಗುಣಾದಿಗಳನ್ನು ಈ ಪದ್ಯಭಾಗಗಳಲ್ಲಿ ಹೇಳಿಕೊಂಡಿದ್ದಾನೆ—

ಶಿವಚರಣಯುಗಸಮಾಕಲಿತಾಂತರಂಗ ಶಿವ|
ಕವಿನಿಕರಪಾದಪಂಕೇಜಾತಭೃಂಗ ಸ|
ದ್ವಿವಿಧಮೃದುಶಬ್ದಸಾಹಿತ್ಯಪೀಯೂಷಾಬ್ಧಿ ಲಲಿತಲಹರೀತರಂಗ ||
ಅವಿರಳಾನಂದಯೋಗಿವ್ರಾತಸಂಗ ದು|ಷ್ಕವಿನಿಚಯಹೃದಯಾಂಧಕಾರದೂರಪತಂಗ|
ನವಮದನರೂಪ ವಿರೂಪಾಲಿಂಗ.

ಧುರಧೀರನುಗ್ಗೆಹಳ್ಳಿಯರಾಯಭೂವರನ| ಪರಮಪ್ರಧಾನಸುಕಲಾಪ್ರವೀಣಂಕೀರ್ತಿ|
ಭರಿತದಿಗ್ವಳಯಂ ವಿರೂಪಾಕ್ಷಪಾದಾರವಿಂದಮಕರಂದಭೃಂಗಂ ||
ಸರಸಸಂಗೀತನಿಪುಣಂ ಬಹುಲಿಪಿಜ್ಞ ಭೂ |
ಸುರವರವಿರೂಪಾಕ್ಷಸುತ ಲಿಂಗಮಂತ್ರಿಪಂ.

---

1. *Madras Epigraqhical Report* for 1900, 28

ಭಿಕ್ಷಾಟನಚರಿತೆಯನ್ನು ಬರೆದಿರುವ ಗುರುಲಿಂಗವಿಭು ಇವನೇ ಆಗಿರಬಹುದೋ ಎಂಬ ಸಂಶಯವುಂಟಾಗುತ್ತದೆ. ಮಂತ್ರಿಯಾದುದರಿಂದ ವಿಭು ಎಂಬ ವಿಶೇಷಣವು ಯುಕ್ತವಾಗಿ ತೋರಬಹುದು. ಆದರೆ ಗುರು ಎಂಬ ಉಪಪದವಿಲ್ಲದಿರುವುದರಿಂದಲೂ ಭಿಕ್ಷಾಟನಚರಿತೆಯಲ್ಲಿ ಕವಿಯ ವಿಷಯವಾಗಿ ಆವ ಅಂಶಗಳೂ ಹೇಳಿಲ್ಲವಾದುದರಿಂದಲೂ ಆ ಕವಿ ಬೇರೊಬ್ಬನಾಗಿರಬಹುದೆಂದು ತೋರುತ್ತದೆ.

ಇವನ ಗ್ರಂಥ

ಕಬ್ಬಿಗರ ಕೈಪಿಡಿ

ಇದು ವಾರ್ಧಕಷಟ್ಪದಿಯಲ್ಲಿ ಬರೆದಿದೆ; ಪದ್ಯ 100. ಇದರಲ್ಲಿ ಮುಖ್ಯವಾಗಿ ಹಳಗನ್ನಡಪದಗಳ ಅರ್ಥವು ಹೇಳಿದೆ. ಇಲ್ಲಿ ಪ್ರತಿಪಾದಿತವಾದ ವಿಷಯವನ್ನು ಕವಿ ಈ ಪದ್ಯಭಾಗದಲ್ಲಿ ಹೇಳಿದ್ದಾನೆ—

ಮಿಸುಪ ಗೂಢಪದಪ್ರಯೋಗದೊಳ್ಪಂ ರಸಮು |
ನೊಸವರ್ಣಾಚ್ಛಗನ್ನಡದ ಚೆಲ್ವುಮಂ ತದ್ಭವದ |
ಬೆಸುಗೆಯಂ ದೇಶ್ಯಕ್ಕಮರ್ದ್ದ ಸೊಂಪಂ ತೊಳಪ ತತ್ಸಮದ ಬಿನ್ನಣವನು ||
ಉಸಿರೆಂದು ಕೋವಿದರ ಬೆಸಸಲಾನಿದಕೆ ಶೋ |
ಭಿಸುವ ಕಬ್ಬಿಗರಕೈಪಿಡಿಯೆಂದು ಪೆಸರನಿ |
ತ್ತೊಸೆದು ಪೇೞ್ದಪೆನು.

ಗ್ರಂಥಾವತಾರದಲ್ಲಿ ಪಂಪಾವಿರೂಪಾಕ್ಷಸ್ತುತಿಯಿದೆ. ಈ ಗ್ರಂಥದಿಂದ ಒಂದೆರಡು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ವಂಚನೆಗೆ ಮಾಜೆಂದು ಪೆಸರಕ್ಕು ವಂಶಮಂ |
ಬಂಚಮೆನಲಕ್ಕು ಗಾವಿಲನೆಂದು ಗ್ರಾಮಣಿ ಪ |
ಳಂಚೆಂದು ತಾಗೆಂದು ಸಂಘಟ್ಟನಾರ್ಥ ಪಾಗದಮೆನಲ್ ಪ್ರಾಕೃತಾಖ್ಯಂ ||
ಉಂಚಮೆಂದುದ್ದಮಪ್ಪುದು ಮೇಣಪೂರ್ವಮಂ |
ಪಂಚಮೆಂಬುದು ಅವಸೆಯೆನಲಮಾವಾಸ್ಯೆ ಗುಳ |
ವಂಚಿತಂ ಗುಡ ಪಕ್ಕರಕ್ಕೆಯಪ್ಪುದು ನಾಡಿ ನಾೞಿಯೆನೆ ಗೞಿಗೆಯಕ್ಕುಂ ||
ತುೞಿಲೆಂದು ಮೊೞ್ಗೆಂದು ಕುಂಬೆಂದುಮೆಱಗೆಂದು |
ಬೞಿಕ ಮಣಿಯೆನೆ ನಮಸ್ಕಾರಕ್ಕೆ ಪೆಸರಕ್ಕು |
ಮಿಳೆಯ ಪಿರಿಯರ್ ನೇರಿದರ್ ದಿಮ್ಮಿದರ್ ಗನಹರುೞಿ ಸೈದರೆನಿಸಿಕೊಳ್ಗುಂ ||

ತಳೆದಿರ್ಪರಾದ್ವಿಜರ್ ನೆಲದಮದ್ದುರ್ಣವೆಸರ |
ನುಱದರಸುಮಗನರಮಗಂಗೆ ಪೆಸರಾಪಸುಬೆ |
ವಳನೆಂದು ವೈಶ್ಯನುಂ ಕುಡಿಯೆನಲ್ಕೊಕ್ಕಲಿಗನೆಂದಿಳೆಗೆ ಸಿದ್ಧಾಂತವು ||

---

ವೀರಭದ್ರರಾಜ. ಸು. 1530

ಈತನು ವೀರಭದ್ರವಿಜಯುವನ್ನೂ, ಪಾರ್ವತೀವಲ್ಲಭಶತಕ, ಉಮಾಮಹೇಶ್ವರಶತಕ, ಪ್ರಾಣನಾಥಶತಕ, ಶ್ರೀಕಂಠಸೋಮೇಶ್ವರಶತಕ, ಕಂದಶತಕ ಎಂಬ 5 ಶತಕಗಳನ್ನೂ ಬರೆದಿದ್ದಾನೆ.

ಇವನು ವೀರಶೈವಕವಿ; ರಾಜವಂಶಕ್ಕೆ ಸೇರಿದವನು. ತನ್ನ ವಂಶಾವಳಿಯನ್ನು ಹೀಗೆ ಹೇಳಿಕೊಂಡಿದ್ದಾನೆ:—ಶ್ರೀಕಂಠವಂಶವಾರಿಧಿಚಂದ್ರನಾದ ಚಿಕ್ಕವಿರುಪರಾಜ; ಮಗ ಕಾಮನೃಪ, ಇವನ ಹೆಂಡತಿ ವೀರಮಾಂಬೆ; ಅವರ ಮಗ ವಿರೂಪಾಕ್ಷನೃಪ; ಮಗ ಕವಿ ವೀರಭದ್ರರಾಜ. ಈತನ ತಂದೆಯಾದ ವಿರುಪರಾಜನು 1519 ರಲ್ಲಿ ತ್ರಿಭುವನತಿಲಕವನ್ನು ಬರೆದುದಾಗಿ ಆ ಗ್ರಂಥದಿಂದ[1] ತಿಳಿವುದರಿಂದ ಇವನ ಕಾಲವು ಸುಮಾರು 1530 ಆಗಬಹುದು.

ಪೂರ್ವಕವಿಗಳನ್ನು

ಬಾಣನ ಬೆಡಂಗು ಕನ್ನಡ|ಜಾಣಂ ಹಂಪೆಯಹರೀಶ್ವರನ ಒಗೆ ಸುಕವಿ |
ಪ್ರಾಣಂ ಮಯೂರನೊಳ್ನುಡಿ | ಮಾಣದೆ ನೆಲಸಿಕೇ ಮತ್ಕೃತಿಯೊಳೊಳ್ಪಿಂದಂ||
ಘನಕವಿಕಾಳಿದಾಸನಡಿಗಳ್ಗೆ ಹಲಾಯುಧನಂಘ್ರಿಗಳ್ಗೆ ಭೋ |
ಜನ ಚರಣಕ್ಕೆ ಮಲ್ಹಣನ ಪಾದಪಯೋಜಕೆ ನಾಡೆ ಕೇಶಿರಾ |
ಜನ ಚರಣಕ್ಕೆಯುದ್ಭಟಮಹೀರಮಣಕ್ರಮಕೆಯ್ದೆ ಸಂತತಂ |
ವಿನಮಿತನಾಗಿ ಪೇೞ್ವೆನೊಲವಿಂ ಬುಧಸೇವ್ಯಮೆನಿಪ್ಪ ಕಾವ್ಯಮಂ ||

ಎಂಬ ಪದ್ಯಗಳಲ್ಲಿ ಸ್ಮರಿಸುತ್ತಾನೆ. ತನ್ನ ಗುಣಗಳನ್ನು ಈ ಪದ್ಯದಲ್ಲಿ ಹೇಳಿಕೊಂಡಿದ್ದಾನೆ—

ಮನಸಿಜಮಾನಭಂಜನಪದಾಂಬುಜವಲ್ಲದೆ ಮಿಕ್ಕ ದೇವರಂ !
ನೆನೆದಱಿಯಂ ಸಮಂತು ಪರಕಾಮಿನಿಯರ್ಕಳ ಸಂಗಮಂ ವಲಂ ||

---

1. 199ನೆಯ ಪುಟವನ್ನು ನೋಡಿ

ಕನಸಿನೊಳಾದೊಡಂ ಮಱೆದು ಕಂಡಱಿಯಂ ವಿರುಪೇಂದ್ರಸೂನುವೆಂ |
ದೆನಿಸುವ ವೀರಭದ್ರನೆನುತುರ್ವರೆಯೆಯ್ದೆ ಪೊಗೞ್ವದಾತನಂ ||

ಇವನ ಗ್ರಂಥಗಳಲ್ಲಿ

1 ವೀರಭದ್ರವಿಜಯ

ಇದು ಚಂಪೂಗ್ರಂಥ, ಇದರಲ್ಲಿ ವೀರೇಶನ ಚರಿತವು ಹೇಳಿದೆ: ವರ್ಣನಾಭಾಗವೇ ಹೆಚ್ಚಾಗಿದೆ. ಈ ಗ್ರಂಥದ ಉತ್ಕೃಷ್ಟತೆಯನ್ನು ಕವಿ ಈ ಪದ್ಯಗಳಲ್ಲಿ ಹೇಳಿದ್ದಾನೆ—

ಘನರಸದಿಂ ವಿಚಿತ್ರಪದದಿಂದೆ ನಭೋಂಗಣದಂತೆ ನಾಡೆ ರಂ |
ಜನೆವಡೆದಿರ್ಪ ಲಕ್ಷಣದಿನುನ್ನತಸತ್ಕಳೆಯಿಂದೆ ಪೂರ್ಣಚಂ ||
ದ್ರನ ಸಿರಿಯಂತನಂತಪರಿರಾಜದಲಂಕೃತಿಯಿಂ ಗುಣಂಗಳಿಂ |
ಮನಸಿಜವೈರಿಯಂತೆಸೆವುದೀಕೃತಿ ಬಿತ್ತ್ರಿಗರೊಲ್ದು ಭಾವಿಸಲ್ ||
ಗುರುಪದವಿಭಕ್ತಿಯಿಂ ಬಂ | ಧುರಲಿಂಗತ್ರಯದೆ ಸತ್ಕ್ರಿಯಾನ್ವಿತದಿಂದಂ |
ವರರೀತಿಭಾವದಿಂ ಶಂ | ಕರಭಕ್ತರತೆಱದಿನೆಸವುದೀಸತ್ಕಾವ್ಯಂ ||
ಇದು ಲಕ್ಕಣದಾಡುಂಬೊಲ | ನಿದು ಸಕ್ಕದದೇೞ್ಗೆಗಾಡಿ ನೆಲಸಿದ ನಾಡಿಂ |
ತಿದು ದೇಶೀಯದ ಬೀಡೆನಿ | ಪುದು ನವರಸಭರಿತನವ್ಯಕಾವ್ಯಂ ದಿವ್ಯಂ ||

ಗ್ರಂಥಾವತಾರದಲ್ಲಿ ವಿಶ್ವನಾಥಸ್ತುತಿ ಇದೆ. ಬಳಿಕ ಕವಿ ಪಾರ್ವತಿ, ವೀರಭದ್ರ, ನಂದಿ, ಭೃಂಗಿ, ಗಣೇಶ, ಷಣ್ಮುಖ, ಸರಸ್ವತಿ ಇವರುಗಳನ್ನು ಕ್ರಮವಾಗಿ ಸ್ತುತಿಸಿದ್ದಾನೆ. ಆಶ್ವಾಸಾಂತ್ಯದಲ್ಲಿ ಈ ಗದ್ಯವಿದೆ—

ಇದು ಸಮಸ್ತಬ್ರಹ್ಮಾಂಡಸಾರ್ವಭೌಮ ಸಕಲಸುರಮಕುಟಮಣಿವಿರಾಜಿತ ಪಾದಪದ್ಮ ಶ್ರೀಕಾಶೀಪುರಾಧೀಶ್ವರವಿಶ್ವನಾಥಪಾದಸಂಕೇಜಮಕರಂದಮಧುಕರಾಯಮಾನ ಶ್ರೀಕಂಠವಂಶಾರ್ಣವಪೂರ್ಣಚಂದ್ರನೆನಿಪ ಸತ್ಕವೀಶ್ವರ ವೀರಭದ್ರನೃಪಾಲವಿರಚಿತಮಪ್ಪ ಶ್ರೀವೀರಭದ್ರವಿಜಯಮಹಾಪ್ರಬಂಧದೊಳ್

ಇವನ ಬಂಧವು ಲಲಿತವಾಗಿಯೂ ಹೃದಯಂಗಮವಾಗಿಯೂ ಇದೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ—

ಸಮುದ್ರ

ಅನಿಮಿಷವೃಂದದಿಂ ಸುರನಿವಾಸದವೋಲ್ ಸಲೆ ವಿದ್ರುಮಂಗಳಿಂ |
ವನದವೋಲಖಸರಸ್ವತಿಯ ಮೇಳದಿನಬ್ಜಜನಂತೆ ಸಂತತಂ ||

ಜನನುತವಾಗಿ ತೋರ್ಪ ಕಮಲಾಸ್ಪದದಿಂ ವನಜಾಕ್ಷನಂತೆವೋಲ್ |
ವನನಿಧಿ ತಾಂ ಮನಂಗೊಳಿಸಿ ಕಣ್ಗೆಸೆದಿರ್ದುದಿಳಾತಳಾಗ್ರದೊಳ್ ||

ಗಂಗೆ

ಬಗೆಯಲೊಱಲ್ದಧೋಗತಿಗೆ ತಾನೆಡೆಯಾಗುತೆ ಸೇವಿಪರ್ಗೆಯೂ |
ರ್ಧ್ವಗತಿಯನೀಯುತುಂ ಬಹುಲಭಂಗಕೆ ತಾನೊಡಲಾಗಿ ತನ್ನ ಪೊ ||
ರ್ದುಗೆವಿಡಿದಿರ್ಪ ಮಾನವರ್ಗಭಂಗತೆಯಂ ನೆಱೆ ಮಾಡುತಿಂತು ಪೆ |
ರ್ಮೆಗೆ ನೆಲೆಯಾಗಿ ಕಾಶಿಗೆಣೆಯಾಗೆಸೆದಿರ್ಪಳಿದೇಂ ವಿಚಿತ್ರವೋ ||

ಮುತ್ತಿನ ಅಂಗಡಿ

ಗಗನಮದಾವಗಂ ಬಿಡದೆ ದೋಷದೊಳಾಚರಿಸಿರ್ಪ ಸೋಮನಿಂ |
ದಗಲದೆ ರಂಜಿಸಿರ್ಪುದದು ದೋಷವಿವರ್ಜಿತಸೋಮನಿಂದಮೀ ||
ನಗರಿಯುದೆಯ್ದೆ ರಂಜಿಪುದದಿಂತಿದೆ ಸುಸ್ಥಳಮೆಂದು ತಾರೆಗಳ್ |
ಮಿಗೆ ನೆಲಸಿರ್ಪ ಪಾಂಗೊ ಎನೆ ಮೌಕ್ತಿಕಪಣ್ಯಮನಂತಮೊಪ್ಪುಗುಂ ||

ಕಿರಾತಸ್ತ್ರೀಯರು

ನಡೆಗರಸಂಚೆಯಂ ಸರಕೆ ಕೋಕಿಲಮಂ ಬಗೆವೆತ್ತು ತೋರ್ಪ ಮೆ |
ಲ್ನುಡಿಗೆ ಶುಕಂಗಳಂ ಕುಚಯುಗಂಗಳ ಪೆರ್ಮೆಗೆ ಜಕ್ಕವಕ್ಕಿಯಂ ||
ಮುಡಿಗೆ ನವಿಲ್ಗಳಂದವನೆ ಪೋಲ್ತು ಕಿರಾತನಿತಂಬಿನೀಜನಂ |
ಬಿಡದೆ ವಿಜಾತಿಯೆಂಬುದದು ಸಾರ್ಥಕಮಾಗೆಸೆದಿರ್ಪುದಾವಗಂ ||

ಕರ್ಣಿಕಾರ

ಮಿಸುನಿಯ ತನಿವಿತ್ತುಗಳಂ | ಕುಸುಮಶರಂ ಬಿತ್ತಿ ಬೆಳೆದು ರಂಜಿಸುತಿರ್ಪಾ |
ಪೊಸಬೆಳೆಗಳಿವೆಂಬಿನೆಗಂ | ಕೊಸಗಿನ ಕಮ್ಮರಲ್ಗಳೆಸೆದುವಾನಂಗನದೊಳ್ ||

ಶಿವಸ್ತುತಿ

ಕುಲಗೋತ್ರಜಮಥರ್ಧಾಂಗಂ | ಕುಲಗೋತ್ರವಿಹೀನಮಾಗಿಯುಱದರ್ಧಾಂಗಂ |
ನೆಲಸಿತ್ತಾವಂಗಾಪು | ಷ್ಕಲರೂಪಂ ಕರುಣದಿಂದೆ ರಕ್ಷಿಪುದೆಮ್ಮಂ ||

ಇವನ 5 ಶತಕಗಳು ಶಿವಸ್ತುತಿರೂಪವಾಗಿಯೂ ವೀರಶೈವಸಿದ್ಧಾಂತಬೋಧಕವಾಗಿಯೂ ನೀತಿವೈರಾಗ್ಯಪ್ರತಿಪಾದಕವಾಗಿಯೂ ಇವೆ. ಇವುಗಳಲ್ಲಿ

**2 ಪಾರ್ವತೀವಲ್ಲಭಶತಕ**

ಇದರಲ್ಲಿ 101 ವೃತ್ತಗಳಿವೆ ; ಪ್ರತಿವೃತ್ತವೂ ಶ್ರೀಪಾರ್ವತೀವಲ್ಲಭಾ

ಎಂದು ಮುಗಿಯುತ್ತದೆ. ಈ ಶತಕದ ಉತ್ಕೃಷ್ಟತೆಯನ್ನು ಕವಿ ಈ ಪದ್ಯದಲ್ಲಿ ಹೇಳಿದ್ದಾನೆ-

ಪಿರಿದುಂ ವೃತ್ತರಸಾಮೃತಂಗಳನೊಳಿಲ್ದಾಂತಿರ್ದು ಸಲ್ಲಕ್ಷಣೋ |
ದರಮಾಗಿರ್ದು ಕಲಾಪ್ರಪೂರ್ಣತೆಯನಾದಂ ತಾಳ್ದು ಚಂದ್ರಂಬೊಲಾ ||
ದರದಿಂದೀಶತಕಂ ವಿರಾಜಿಪುದಱಿಂದೋರಂತೆ ನಿನ್ನುತ್ತಪಾ |
ಭರಣಾಧಿಕ್ಯಮದಾಗದಿರ್ಪುದೆ ಸದಾ ಶ್ರೀಪಾರ್ವತೀವಲ್ಲಭಾ ||

ಇದರಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ತನು ಮೇಘಾಕೃತಿ ಯೌವನಂ ಮಿಳಿರ್ವ ವಿದ್ಯುಲ್ಲೇಖೆ ಪುತ್ರರ್ಕಳಿಂ |
ದ್ರನ ಚಾಪಂ ಸಿರಿ ಮಂಜು ಬಂಧುನಿಚಯಂ ನೀರಕ್ಕರಂ ನಾಡೆ ಸ ||
ಜ್ಜನಮಾಕಾಶದರಲ್ ನಿಜಾಯು ಕನಸೆಂದಾವ್ರೊಂ ವಿಚಾರಿಪ್ಪನಾ |
ತನೆ ಮುಕ್ತ್ಯಂಗನೆಯಾಣ್ಮನಪ್ಪನೊಲವಿಂ ಶ್ರೀಪಾರ್ವತೀವಲ್ಲಭಾ ||
ಬಗೆಯೊಳ್ ನಿನ್ನ ಪದಾಬ್ಜಭಕ್ತಿವಧು ಬಂದಪ್ಪಲ್ ಮನುಷ್ಯಂಗೆ ಮೋ |
ಹಗುಣಂ ಪೋದುದು ಕಾಮಮಟ್ಟಿದುದು ಮಹಾಸಂಸಾರಮುಗ್ಗಿತ್ತು ನೆ ||
ಟ್ಟಗೆ ರಾಗಂ ಬಿಡದೋಡಿದತ್ತು ವಿಪರೀತಂಬೆತ್ತು ಲೋಕಂಗಳೊಳ್ |
ಸೊಗಸಿತ್ತೂರ್ಜಿತವೇದಸನ್ನುತಪದ ಶ್ರೀಪಾರ್ವತೀವಲ್ಲಭಾ ||
ಪಿರಿದುಂ ತನ್ನ ಕುಟುಂಬಚಿಂತೆಯೊಳಜಸ್ರಂ ಮಗ್ನರಾಗಿರ್ಪ ಮ |
ರ್ತ್ಯರ ಶಾಸ್ತ್ರಶ್ರವಣಂ ವಿವೇಕಮಧಿಕಾಚಾರಂ ವಿರಾಗಂ ಗುಣಂ ||
ಪರಮಜ್ಞಾನಮಿವೆಯ್ದೆ ರಂಧ್ರಘಟದೊಳ್ ತುಂಬಿರ್ದ ತೋಯಂಬೊಲ |
ಸ್ಥಿರಮಾಗಿರ್ಕುಮಜೇಯಮನ್ಮಥಹರ ಶ್ರೀಪಾರ್ವತೀವಲ್ಲಭಾ ||
ನಯಮಂ ನೀತಿಯನುನ್ನತಾಚರಣೆಯಂ ಸುಜ್ಞಾನಮಂ ಶಾಂತಿಯಂ |
ದಯೆಯಂ ದಾಂತಿಯನೆಯ್ದೆದಾನಗುಣಮಂ ಸದ್ಭಕ್ತಿಯಂ ಸೂಕ್ತಿಸಂ ||
ಚಯಮಂ ವಿದ್ಯೆಯನೆಲ್ಲಮಂ ಪಡೆವೊಡೀಲೋಕಂಗಳೊಳ್ ಸಜ್ಜನಾ |
ಳಿಯ ಸಂಗಂ ದೊರೆಕೊಳ್ಳದಪ್ಪುದೆ ಸದಾ ಶ್ರೀಪಾರ್ವತೀವಲ್ಲಭಾ ||

### 3 ಉಮಾಮಹೇಶ್ವರಶತಕ

ಇದರಲ್ಲಿ 101 ವೃತ್ತಗಳಿವೆ ; ಪ್ರತಿವೃತ್ತವೂ ಉಮಾಮಹೇಶ್ವರಾ ಎಂದು ಮುಗಿಯುತ್ತದೆ. ಇದರಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ—

ಕುಲವಿದು ಗೋತ್ರವಿಂತಿದು ಚರಿತ್ರವಿದೆಂಬುದನಿನ್ನೆಗಂ ರಸಾ |
ತಲದಿವಧಾತ್ರಿಯಲ್ಲಿ ನೆಱೆ ಕಂಡವರಿಲ್ಲೆಲೆದೇವ ನಿನ್ನ ನೀ ||
ಕುಲಯುತೆ ಗೋತ್ರಜಾತೆ ಮಿಗೆ ಕೈವಿಡಿದಿರ್ದುದಱಿಂದೆ ನೀಂ ಮಹಾ |
ಕುಲಪತಿಯೆಂಬುದಿಂದಱಿಯೆಬಂದುದಿದೀಗಳುಮಾಮಹೇಶ್ವರಾ ||
ಲಲಿತಮೃದೂಕ್ತಿಯಿಂದೆ ಗಿಳಿಯಂ ಮುಡಿಯಿಂದೆ ಮಯೂರನಂ ಜಲ |
ದ್ವಿಲಸಿತನೇತ್ರದಿಂದೆ ಮೃಗಿಯಂ ಮಧುರಸ್ವನದಿಂದೆ ಮತ್ತಕೋ ||
ಕಿಲಮನದಾವಗಂ ಬಿಡದೆ ಪೋಲ್ತನಗರಾಜಕುಮಾರಿ ನಿನ್ನ ತೋ |
ಳ್ವಲೆಗುಱೆ ಸಿಲ್ಕಿ ರಂಜಿಪುದು ಚೋದ್ಯಮೆ ನೋಡೆಯುಮಾಮಹೇಶ್ವರಾ ||
ಸುರುಚಿರಪುಣ್ಯದೊಬ್ಬುಳಿಯನಾಶ್ರಯಿಸಿರ್ಪನುದಕ್ರಿಯೇೞ್ಗೆಯೋ |
ಸುರಕುಜಮಂ ಸಮಂತಡರ್ದು ಪರ್ವಿದ ವಿದ್ರುಮವಲ್ಲಿಯೋ ಎನಲ್ ||
ಕರಮೆಸೆದತ್ತು ನಿನ್ನ ಧವಳಾಂಗಸುಸಂಗದೊಳೊಪ್ಪುತಿರ್ಪ ಶಾಂ |
ಕರಿಯ ಶರೀರರಾಗರುಚಿ ಕಣ್ಗೆನಿದೀಯುತುಮಾಮಹೇಶ್ವರಾ ||

4. ಪ್ರಾಣನಾಥಶತಕ

ಇದರಲ್ಲಿ 101 ವೃತ್ತಗಳಿವೆ; ಪ್ರತಿವೃತ್ತವೂ ಪಾರ್ವತೀಪ್ರಾಣನಾಥಾ ಎಂದು ಮುಗಿಯುತ್ತದೆ. ಇದರಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ಸೊದೆಯಂ ತ್ವದ್ಧ್ಯಾನಪೀಯೂಷಮನಜನೊಲವಿಂ ತೂಗಲಾಧ್ಯಾನಪೀಯೂ |
ಷದ ಪೆರ್ಚಂ ಕಾಣ್ಬುದೆಲ್ಲಾ ಮುನಿತತಿಯಮರ್ದಂ ಸೇವಿಪಂಗಕ್ಕುಮೇಗಂ ||
ತ್ರಿದಶಾಂಗಂ ಧ್ಯಾನಪೀಯೂಷಮನುಱೆ ಸವಿವಂಗಕ್ಕುಮಷ್ಟಾಂಗಮೆಯ್ದುಂ |
ತಿದು ಚಿತ್ರಂ ಪೆಂಪುದಾಳ್ದಿರ್ಪುದನಱಿತಿವೞೊಳ್ ಪಾರ್ವತೀಪ್ರಾಣನಾಥಾ ||
ತನುಗಾಪತ್ಕಾಗೆ ಸರ್ವೇಂದ್ರಿಯಮವು ಪಟುವಂ ನೀಗೆ ಮುನ್ನರ್ಜಿಸಿರ್ದ |
ರ್ಥನಿಕಾಯಂ ಪೋಗೆ ದೇಹಂ ವಲಿತಪಲಿತಕಿಂಬಾಗೆ ಬೆನ್ನೊಪ್ಪದಿಂದಂ ||
ಧನುವ್ವೋಲ್ ಮುಂ ಬಾಗೆ ನೋಡಲ್ ಶಿರಮದು ಭರದಿಂ ತೂಗೆ ಧರ್ಮಕ್ಕೆ ನಿಮ್ಮ |
ರ್ಚನೆಗಿಂಬುಂಟೇ ಮನುಷ್ಯರ್ಗೆಘಹರ ಗಿರಿಶಾ ಪಾರ್ವತೀಪ್ರಾಣನಾಥಾ ||

5. ಶ್ರೀಕಂಠಸೋಮೇಶ್ವರಶತಕ

ಇದರಲ್ಲಿ 101 ವೃತ್ತಗಳಿವೆ; ಪ್ರತಿವೃತ್ತವೂ ಶ್ರೀಕಂಠಸೋಮೇಶ್ವರಾ ಎಂದು ಮುಗಿಯುತ್ತದೆ. ಇದರಿಂದ ಒಂದೆರಡು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ಕನಕಾಪೇಕ್ಷೆಯಿನೊಲ್ದು ವಿಷ್ಣು ಪೊದೆದಂ ಪೀತಾಂಬರಕ್ಕೆಯ್ದೆ ತ |
ತ್ಕನಕಾಪೇಕ್ಷೆಯಿನಂತು ಪೊಂಬಸಿಱನಾದಂ ಬ್ರಹ್ಮನೆಂದಿಂತು ನೀಂ ||
ಕನಕಾಪೇಕ್ಷೆಯನಾಂತು ಧೂರ್ತಕುಸುಮಕ್ಕೊಲ್ದಿ ೃ ಬಱಿಕ್ಕಕ್ಕಟಾ |
ನಿನಗೆಂದುಂ ಮರುಳಾಟವೇ ಬಿಡದಲಾ ಶ್ರೀಕಂಠಸೋಮೇಶ್ವರಾ ||
ತಲೆ ನೀಡುಂ ಜಡಯುಕ್ತಮಾಗಿದೆ ಶರೀರಂ ನೋಡೆ ವಾತಕ್ಕೆ ತಾಂ |
ನೆಲೆಗೊಂಡಿರ್ದಬಲಾಂಗಮಾಯ್ತು ಪಸಿವಿಲ್ಲೆಂದುಂ ಜಲಾಪೇಕ್ಷೆಯು ||
ಜ್ವಲಿಸುತ್ತಿರ್ದವುದಾವಗಂ ನಿನಗೆ ನಿನ್ನಂ ಜಾಣಿಸುತ್ತಿರ್ಪರೀ |
ನೆಲದೊಳ್ ನಿರ್ಗದರಪ್ಪರಿಂತರಿದಲಾ ಶ್ರೀಕಂಠಸೋಮೇಶ್ವರಾ ||

6 ಕಂದಶತಕ.

ಇದರಲ್ಲಿ 115 ಕಂದಗಳಿವೆ ; ಪ್ರತಿಯೊಂದು ಕಂದವೂ ಅಂಬಿಕೆಯ ರಸಾ ಎಂದು ಮುಗಿಯುತ್ತದೆ. ಇದರಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ—

ಭವದೀಯಶರಕ್ಕಾತ್ಮೋ | ದ್ಭವನ ಶರಂ ಕಣ್ಣದಾಗಿ ಸೊಗಸುತ್ತಿದೆ ಮ |
ತ್ತವನಂ ನೀಂ ಗೆಲ್ದಂದಂ | ಭುವನದೊಳಿದು ಚಿತ್ರಮಲ್ತೆಯಂಬಿಕೆಯರಸಾ ||
ಮಡದಿಗೆ ಮೆಚ್ಚಿದವರ್ ಪೊಂ | ದೊಡವಂ ರತ್ನಂಗಳಂ ನವೀನಾಂಬರಮಂ |
ಕೊಡುವರ್ ನಿನ್ನಂಡದೊಳರೆ| ಯೊಡಲಂ ಕೊಟ್ಟವರ ಕಾಣೆನಂಬಿಕೆಯರಸಾ||
ಪಸುಪತಿಪಟ್ಟವನುಱೆ ಕ | ಟ್ಟಿಸಿಕೊಂಡಬಱಿಕ್ಕೆ ಪಸುವೆನಿಪ್ಪೆನ್ನಂ ರ |
ಕ್ಷಿಸದೊಡೆ ನಿನ್ನಾನಾಮಂ | ಸುಸುಳ್ವುದಲಾ ಭವಭಯಾರಿಯಂಬಿಕೆಯರಸಾ ||

---

ಚಾಟುವಿಠಲನಾಥ. ಸು 1530.

ಈತನು ಭಾಗವತ, ಭಾರತದಲ್ಲಿ ಸ್ವಲ್ಪಭಾಗ ಇವುಗಳನ್ನು ಬರೆದಿದ್ದಾನೆ. ಇವನು ಬ್ರಾಹ್ಮಣಕವಿ. “ಇದು ಸದಾನಂದಾಖ್ಯಯೋಗಿಯ ತೊದಲುನುಡಿ,” “ಗೋಪಿನಾಥನು ಮಂಗಳವನೀವನು ಸದಾನಂದಾಖ್ಯಮುನಿವರಗೆ”, “ಯೋಗೀಂದ್ರನಖಿಳೋದಿತಸದಾನಂದ ಮುದದೊಳಭಿವರ್ಣಿಸಿದಂ” ಎಂಬ ಪದ್ಯಭಾಗಗಳಿಂದ ಕವಿಯ ನಿಜವಾದ ಹೆಸರು ಸದಾನಂದಯೋಗಿ ಎಂದು ತಿಳಿಯುತ್ತದೆ. ಇವನ ಗ್ರಂಥಗಳಲ್ಲಿ ನಿತ್ಯಾತ್ಮ ಎಂಬ ಅಂಕಿತವು ಉಪಯೋಗಿಸಲ್ಪಟ್ಟಿದೆ. ಇವನ ಗುರು ಅಚ್ಯುತಾರಣ್ಯಯತಿ. ಈ ಗುರುವಿನ ಅನುಗ್ರಹದಿಂದ ಭಾಗವತವನ್ನು ಬರೆದಂತೆ ಕವಿ ಈ ಪದ್ಯಗಳಲ್ಲಿ ಸೂಚಿಸಿದ್ದಾನೆ—

ಸದಮಳಾಚ್ಯುತಕೃಷ್ಣರಾಯನ । ಹೃದಯವೆನಿಸುವ ಭಾಗವತಶಾ ।
ಸ್ತ್ರದ ಮಹಾಸತ್ಕೀರ್ತಿಲಕ್ಷ್ಮಿಯ ವಿಜಯಮಂದಿರವ ॥
ತುದಿಯ ಕಲಶಸ್ಥಾನವೆನಲೊ । ಪ್ಪಿದನು ಪಾಲಿಸುತೊಲಿದು ತನ್ನಯ ।
ಪದವಿತೊಲುವೆಯೊಳಚ್ಯುತಾರಣ್ಯಾಖ್ಯಯತಿರಾಯ ॥
ನಿರುಪಮಾಚ್ಯುತಕೃಷ್ಣರಾಯನ । ಪರಮತೇಜಃಪುಂಜವೇ ಚೇ ।
ತರಿಸಿ ಗುರುರೂಪಾಗಿ ಭಾಗವತಾಂತರಂಗವನು ॥
ಧರೆಗೆ ಕನ್ನಡವಾಗಿ ತೆಗೆದು । ದ್ಧರಿಸಿ ಕಡೆಗಾಣಿಸಿದನತ್ಯಾ ।
ಶ್ಚರಿಯವೆನಲು ಸದಾಚ್ಯುತಾರಣ್ಯಾಖ್ಯಯತಿರಾಯ ॥

ಕುಮಾರವ್ಯಾಸನ ಭಾರತದಲ್ಲಿ ಸೂಕ್ಷ್ಮವಾಗಿ ಹೇಳಿರುವ ಕೆಲವು ಅಂಶಗಳನ್ನು ಈತನು ಆಸ್ತೀಕ ಪೌಲೋಮಪರ್ವಗಳಾಗಿ ವಿಸ್ತರಿಸಿ ಬರೆದಿರುವುದರಿಂದ ಅವನ ಕಾಲಕ್ಕಿಂತ (ಸು. 1430) ಈಚೆಯವನು ಎಂದು ತಿಳಿಯಬಹುದಾಗಿದೆ. ಅಲ್ಲದೆ ಮೇಲಣ ಪದ್ಯಗಳಿಂದ ಈ ಕವಿ ವಿಜಯನಗರದ (ವಿಜಯಮಂದಿರ) ಕೃಷ್ಣರಾಯ (1509-1529), ಅಚ್ಯುತರಾಯ (1530-1542) ಇವರುಗಳ ಕಾಲದಲ್ಲಿ ಭಾಗವತವನ್ನು ಬರೆದಿರಬಹುದು ಎಂದು ಊಹಿಸಲು ಅವಕಾಶವಿದೆ. ಈ ಊಹೆಯ ಪ್ರಕಾರ ಕವಿಯ ಕಾಲವು ಸುಮಾರು 1530 ಆಗಬಹುದು. ಇವನಿಗೆ ನಿತ್ಯಾತ್ಮಶುಕಯೋಗಿ ಎಂಬ ಬಿರುದುಂಟು ಎಂದು ಹೇಳುತ್ತಾರೆ.

ಇವನ ಗ್ರಂಥಗಳಲ್ಲಿ

1. ಭಾಗವತ

ಇದು ಭಾಮಿನೀಷಟ್ಪದಿಯಲ್ಲಿ ಬರೆದಿದೆ; ಸಂಧಿ 280, ಪದ್ಯ 12235. ಇದರಲ್ಲಿ

ಭಾಗವತದರ್ಥವನು ಸಂಗ್ರಹ । ವಾಗಿ ಬಲ್ಲಂದದಲಿ ವಿಷಯವಿ ।
ಭಾಗವನು ತತ್ವಪ್ರಯೋಜನಜನಿತಸಿದ್ಧಿಯನು ॥
ರಾಗದಿಂದಱುಪುವೆನು.

ಎಂದು ಕವಿ ಹೇಳುತ್ತಾನೆ. ವರ್ಣನೀಯಯಾಂಶಗಳನ್ನು ಈ ಪದ್ಯದಲ್ಲಿ ಹೇಳಿದ್ದಾನೆ—

ಹರಿಗುಣಸ್ತುತಿ ಹರಿಪದಾಂಬುಜ । ಶರಣಜನಸಂಕೀರ್ತನಸ್ತುತಿ ।
ಹರಿಪದಾನತಭಕ್ತಿ ತತ್ಸಾಧನದ ವಿಸ್ತಾರ ॥

ಹರಿನಿಜಜ್ಞಾನೋಪಲಾಲಿತ | ಪರತರಾನಂದಾನುಭವವಿನಿ |
ತಿರದೆ ವಿಸ್ತರವೆನಲು ವರ್ಣಿಸತಕ್ಕುದಿದಱೊಳಗೆ ||

ಗ್ರಂಥಾವತಾರದಲ್ಲಿ ಗಣೇಶಸ್ತುತಿ ಇದೆ. ಬಳಿಕ ಕವಿ ಸರಸ್ವತಿ, ವೇದವ್ಯಾಸ, ವಿಷ್ಣು, ಶಿವ, ವಾಲ್ಮೀಕಿ, ಶುಕಯೋಗಿ ಇವರುಗಳನ್ನು ಹೊಗಳಿದ್ದಾನೆ. ದಶಮಸ್ಕಂಧದ ಆದಿಯಲ್ಲಿ ವಿಷ್ಣು ಶಿವ ಗಣೇಶ ಸರಸ್ವತಿಗಳ ಸ್ತುತಿಯೂ ಏಕಾದಶಸ್ಕಂಧದಆದಿಯಲ್ಲಿ ಗೋಪೀನಾಥ ಶಿವ ಬ್ರಹ್ಮಗಣೇಶ ಸರಸ್ವತಿಗಳ ಸ್ತುತಿಯೂ ಇವೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ಸಮುದ್ರದಲ್ಲಿ ಹುಟ್ಟಿದ ಲಕ್ಷ್ಮಿ

ಹೊಳೆವ ಕಣ್ಗಳ ಕಾಂತಿಗಳ ಮಂ | ಗಳಕಟಾಕ್ಷಚ್ಛವಿಯ ಘನಪರಿ |
ಮಳದ ನಾಸಾಪುಟದ ರೇಖಾವಳಿಯ ನುಣ್ಗುರುಳ ||
ಲಲಿತಹಾರದ ಪೀನಕುಚಯುಗ | ಕಲಶಭಾರದ ಬಡನಡುವಿನು |
ಜ್ವಲಸುನಾಭಿಯ ಕಾಂತಿಯಲಿ ಕಣ್ಗೊಳಿಸಿದಳು ತರಳೆ ||

ಚಾಣೂರ ಕೃಷ್ಣರ ಮಲ್ಲಯುದ್ಧ

ತಳವ ತಳದಲಿ ಹೊಯ್ದು ಭುಜಮಂ | ಡಲವನಾಸ್ಫೋಟಿಸಿ ಪರಸ್ಪರ |
ಕಲಿತಕರಜಾನೂರುಪಾದದ್ವಿತಯಬದ್ಧದಲಿ ||
ತಳಿಸಿ ತೊಡರುವ ಬೀಸಿ ಬಿಸುಡುವ | ನಿಲುವ ನಿಂದಡಿಯಿಂದ ಬಲಿಸುವ |
ಹಲವುಪರಿಯಲಿ ಹಳಚಿ ತಿವಿದಾಡಿದರು ಪಟುಭಟರು ||

ವನವಿಹಾರ

ಸರಸಿಜದ ಪರಿಮಳವನಂಗದ | ಪರಿಮಳದೊಳುತ್ಪಲದ ಕಾಂತಿಯ |
ನರಳುಗಂಗಳ ಕಾಂತಿಯಲಿ ಭೃಂಗಾವಳೀಪ್ರತತಿಯ ||
ಕುರುಳುಗಳ ಕಾಂತಿಯಲಿ ಮೃದುತರ | ಚರಣಬಿಂಬಾಧರದ ರುಚಿಯಲಿ |
ಹರಿಸಿದರು ಕೆಂದಳಿರ ಸಿರಿಯನು ಕಾಂತೆಯರು ಬನದ ||

ಕೃಷ್ಣಸ್ತ್ರೀಯರ ವಿರಹ

ಕಂಡೆಯೋ ನೀನೆಲೆನವಿಲೆ ನೀ | ರ್ಗೊಂಡ ಮುಗಿಲಂದದ ಮುಕುಂದನ |
ಖಂಡಸುಖಮಯಮೂರ್ತಿಯನು ನಿನ್ನೆಸೆವ ತಾಂಡವವ ||
ಕಂಡು ಮನ್ನಿಸಿದನೆ ಮನೋಜ್ಞಾ | ಖಂಡಕಾರುಣ್ಯೇಕ್ಷಣದಲು |
ದ್ದಂಡ ಮಹಿಮಂಗಾರು ಮರುಳಾಗದವರವನಿಯಲಿ ||

ಹಗೆಯೆ ನೀನೆಲೆಮುಂದಮಾರುತ | ಬಗೆಗೆ ಬಹಳವ್ಯಥೆಯ ಮಾಡುವೆ |
ಮಗಮಗಿಸುವಂಗದಲಿ ಮೇಣ್ದೇವಕೀಸುತನ ||
ಸೊಗಯಿಸುವ ದಿವ್ಯಾಂಘ್ರಿಯನು ಮಱೆ|ವೊಗುವ ಮನದರ್ಥಿಯಲಿ ಗುಹೆಯನು|
ಹೊಗುವೆಯೋ ತಮ್ಮಂತೆಯೆಂದರು ಕಮಲವದನೆಯರು ||

ಸನ್ಯಾಸಿ

ಕಡುಗುವರಿಗಳನಱುವರನು ದರಿ | ಗೆಡೆದು ಖಂಡಿಸಿ ಕಾಯಕರ್ಮದ |
ದಡಿವಲೆಯನಖಿಳೇಂದ್ರಿಯಂಗಳ ಕಾಲುಕಣ್ಣಿಗಳ ||
ತೊಡಕುವಲೆಯನು ಹಱಿದು ಭವವೆಂ| ಬಡವಿಯನು ಹೊಱವಂಟು ಮಾಯೆಯ|
ಕಡಲ ಕಟಿದ ಮಹಾತ್ಮನೇ ಸನ್ಯಾಸಿ ಕೇಳೆಂದ ||

ತತ್ವಜ್ಞಾನ

ಇನನು ನಾನಾಪಾತ್ರೆಯಲಿ ಬಹು | ತನುವ ಪಡೆದಂದದಲಿ ಸಾಕ್ಷಾ |
ಚ್ಚಿನುಮಯನು ಬಹುಬುದ್ಧಿಸಂಗದೊಳೇಕತೆಯ ಮಱಿಸಿ ||
ಘನಜಗನ್ಮಯನಾದುದನು ತಾ | ಮನದೊಳಗೆ ಭಾವಿಸುತ ತನ್ನಯ |
ತನುವಿಗೋಸುಗ ಪರರ ದ್ವೇಷಿಸದಿಹುದು ವರಯೋಗಿ ||

## 2. ಭಾರತ

ಇದು ಭಾಮಿನೀಷಟ್ಪದಿಯಲ್ಲಿ ಬರೆದಿದೆ. ನಮಗೆ ತಿಳಿದಮಟ್ಟಿಗೆ ಈತನು ಭಾರತದ ಆದಿಪರ್ವಕ್ಕೆ ಸೇರಿದ ಪೌಲೋಮ, ಆಸ್ತೀಕ ಎಂಬ ಪರ್ವಗಳನ್ನು ಬರೆದಿದ್ದಾನೆ. ಇತರಭಾಗಗಳನ್ನೂ ಬರೆದಿರಬಹುದು. ಪೌಲೋಮಪರ್ವ, ಸಂಧಿ 4, ಪದ್ಯ 145; ಆಸ್ತೀಕಪರ್ವ, ಸಂಧಿ 14, ಪದ್ಯ 660. ಗ್ರಂಥಾವತಾರದಲ್ಲಿ ವಿಷ್ಣುಸ್ತುತಿ ಇದೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ--

ನಾಗಾಲಯ

ಫಲಿತಕುಸುಮಿತಪಲ್ಲವಿತತರು | ಗಳಲಿ ಪುಷ್ಪಾಮೋದರಮ್ಯಾ |
ನಿಲನಿರಂತರವಿಜರಿತೋದ್ಯಾನದಲಿ ನಾಗರದ ||
ಲಲಿತವೀಚೀವಿತತಿ. ಮೃದೂ | ಚ್ಚಲಿತಜಲಚರನಿಕರಪರಿವಮಂ |
ಡಲಿತಪಾವನಭವನ ತಲೆದೂಗಿಸಿತು ಖಗಪತಿಯ ||

ಗರುಡನ ಯುದ್ಧ

ಕೈದುವಿನ ಮೞೆಗಳನು ಪಕ್ಷದೊ | ಳ್ಕೈದೆ ಹೊಱಬೀಸಿದನು ನಖದಲಿ |
ಕೊಯ್ದು ಬೀಸಾಡಿದನು ಗಜರಥತುರಗಪಙ್ತಿಗಳ ||
ಭೇದಿಸಿದನತಿಬಲರ ತುಂಡದೊ | ಳೂದಿದನು ಕೆಲಬಲದ ಸುಭಟರ |
ಹಾದಿಯಲಿ ಹರಹಿದನು ನೆರಹಿದನಂತಕನಪುರದಿ ||

ನಿತ್ಯಾತ್ಮ ಎಂಬ ಅಂಕಿತವುಳ್ಳ ಕೆಲವು ಹಾಡುಗಳಿವೆ. ಇವು ಏತ ಕ್ಕವಿಕೃತವಾಗಿರಬಹುದೋ ಏನೋ ತಿಳಿಯದು.

---

## ಇಮ್ಮಡಿ ತೋಂಟದಯ್ಯ. ಸು. 1530

ಈತನು ವಜ್ರಬಾಹುಚರಿತೆಯನ್ನು ಬರೆದಿದ್ದಾನೆ. ಇವನು ವೀರ ಶೈವಕವಿ; ಇವನ ತಂದೆ ತೋಂಟದ ಸಿದ್ಧಲಿಂಗಯತಿಯ ಭಕ್ತನಾದ ತೋಂಟಭೂಪಾಲನು; ತಾಯಿ ಸಂಗಮಾಂಬೆ. ತಾನು ಚಿಟ್ಟನಪುರಿಗೆ ಪ್ರಭು ಎಂದು ಹೇಳಿಕೊಂಡಿದ್ದಾನೆ. ತನ್ನ ತಂದೆ ತೋಂಟದಸಿದ್ಧಲಿಂಗಯತಿಯ (ಸು. 1470) ಭಕ್ತನೆಂದು ಹೇಳುವುದರಿಂದ ಅವನು ಆ ಯತಿಯ ಶಿಷ್ಯನಾ ಗಿದ್ದಿರಬಹುದೆಂದು ತೋರುತ್ತದೆ. ಹಾಗಿದ್ದ ಪಕ್ಷದಲ್ಲಿ ಕವಿಯ ಕಾಲವು ಸುಮಾರು 1530 ಆಗಬಹುದು.

ಪೂರ್ವಕವಿಗಳಲ್ಲಿ ಮಲ್ಲಣ, ಹರಿಹರ, ಪದ್ಮಪುರಾಣಕರ್ತೃವಾದ ಕೆರೆ ಯಪದ್ಮರಸ, "ಭಸಿತರುದ್ರಾಕ್ಷೆಗಳ ಮಹಾಮಹಿಮೆಯಂ ವಿರಚಿಸಿದ" ಸಿದ್ಧ ಲಿಂಗೇಶ್ವರ, "ವೀರಶೈವಾಗಮರಹಸ್ಯಮಂ ವಿರಚಿಸಿದ" ಮುತ್ತಿನಕಂತೆ ಯಾರ್ಯ ಇವರುಗಳನ್ನು ಸ್ತುತಿಸಿದ್ದಾನೆ.

ಇವನ ಗ್ರಂಥ

### ವಜ್ರಬಾಹುಚರಿತೆ

ಇದಕ್ಕೆ ತೋಂಟದಯ್ಯನ ಕಾವ್ಯ ಎಂಬ ಹೆಸರೂ ಇರುವಂತೆ ತೋರುತ್ತದೆ. ಇದು ವಾರ್ಧಕಷಟ್ಪದಿಯಲ್ಲಿ ಬರೆದಿದೆ; ನಮಗೆ ದೊರೆತ ಅಸಮಗ್ರಪ್ರತಿಯಲ್ಲಿ 5 ಸಂಧಿಗಳಿವೆ. ಈ ಗ್ರಂಥವು 'ವೀರಶೈವಸಂಸ್ಥಾ ಪನಾಚಾರ್ಯನೆನಿಸಿದ ಚಂದ್ರಸೇನಸುತ ವಜ್ರಬಾಹುವಿನ ಸದಮಲಾನಂದ ಸಚ್ಚಾರಿತ್ರಂ' ಎಂದು ಕವಿ ಹೇಳುತ್ತಾನೆ. ಈ ಕಾವ್ಯದ ಉತ್ಕೃಷ್ಟತೆ ಯನ್ನು ಈರೀತಿಯಾಗಿ ಹೇಳಿಕೊಂಡಿದ್ದಾನೆ—

ಅನುಖನಿಂ ವ್ಯಾಕರಣಮೆಂಬ ದುಗ್ಧಾಬ್ಧಿಯಂ |
ಮನಮೆಂಬ ಮಂತಿನಿಂ ಮಥಿಸಲೊಡನದರಿಂದೆ |
ಜನಿಸಿದ ಮದೀಯಸತ್ಕಾವ್ಯಚಿಂತಾರತ್ನಮದು ಸಕಲವಿಬುಧತತಿಗೆ ||
ಅನಿಶಮುಂ ಮನದೆ ಭಾವಿತಮಾದ ಸಕಲಾರ್ಥ |
ದನುಮಿತದ ಸಂಪದಂಗಳನೀಯುತಾದರದೆ |
ಘನಮಹಿಮಶಾಲಿ ಸುಮನೋಲೋಕದೊಳ್ ತೊಳಗಿ ಬೆಳಗುತಿಹುದಚ್ಚರಿಯೆನೆ ||
ಇನಿಯ ಮಾಂಬಣ್ಣ ಪೊಸರಸದಂತೆ ಶೋಭಿಸುವ |
ತನಿಗಂಪನಿಡಿದ ಮಲ್ಲಿಗೆಯ ಪೂಜೊಂಪದಂ |
ತನುಖನಿಂ ಹಿಗ್ಗಿ ತೊಟ್ಟಿಡುವ ಜೇಂಗೊಡದಂತೆ ಚಂದನದ ತಣ್ಪಿನಂತೆ |
ಮನವೊಸೆದು ಕಟ್ಟೆಕೈಸಿ ಕೂಡುವಂಗನೆಯ ಸ |
ದ್ವಿನಯಮೊಂದಿದ ದೈನ್ಯದೊಳ್ನುಡಿಗಳಿಂಪಿನಂ |
ತನುಗೊಳಿಸಿ ತೋರ್ಪುದೆನ್ನಯ ಕಾವ್ಯರಸವಿಳೆಯ ವಿಬುಧಸಂತತಿಗಾವಗಂ ||

ಗ್ರಂಥಾವತಾರದಲ್ಲಿ[1] ಅವಿರಳಲಿಂಗಸ್ತುತಿ ಇದೆ.

---

## ಅಭಿನವವಾದಿವಿದ್ಯಾನಂದ. 1533

ಕಾವ್ಯಸಾರವೆಂಬ ಗ್ರಂಥದ ಒಂದು ಪ್ರತಿಯ ಕೊನೆಯಲ್ಲಿ 'ವಿಜಯ ಸಂವತ್ಸರದ ಭಾದ್ರಪದಬಹುಳ 3 ರಲ್ಲಿ ಶ್ರೀಮದಭಿನವವಾದಿ ವಿದ್ಯಾನಂದ

---

1. ಈ ಗ್ರಂಥದ ಒಂದು ಪ್ರತಿಯಲ್ಲಿ 2 ನೆಯ ಸಂಧಿಯ ಆರಂಭದಲ್ಲಿ ಮೈಸೂರು ರಾಜನಾದ ದೇವರಾಜನ ಮಗನಾದ ದೇವರಾಜನಿಗೆ ದಕ್ಷಿಣಭುಜನೆನಿಸಿದ ಕಳಲೆಯ ಮಲ್ಲರಾಜನಿಗೆ ಐವರು ಮಕ್ಕಳು ಇದ್ದಂತೆಯೂ ಇವರಲ್ಲಿ ಷಣ್ಮುಖನೇ ರೂಪವೆತ್ತಂತೆ ಹುಟ್ಟಿದ ಕುಮಾರರಾಜನು ದೇವರಾಜನಿಗೆ ಸೇನಾನಿಯಾಗಿ ರಾಜ್ಯಗಳನ್ನು ಸಾಧಿಸಿಕೊಟ್ಟಂತೆಯೂ ಒಬ್ಬ ಸ್ತ್ರೀಯನ್ನು ಸಂಬೋಧಿಸಿ ಹೇಳಿದೆ. ಈ ಭಾಗವು ವಾರ್ಧಕಷಟ್ಪದಿಯಲ್ಲಿಯೇ ಬರೆದಿದೆ. ಇಮ್ಮಡಿ ತೋಂಟದಯ್ಯನಿಗೆ ಮೇಲೆ ಹೇಳಿರುವ ಕಾಲಕ್ಕೂ ಮೈಸೂರು ದೇವರಾಜನ (1659-1672) ಕಾಲಕ್ಕೂ ಹೊಂದುವುದಿಲ್ಲವಾದುದರಿಂದ ಈ ಭಾಗವು ಗ್ರಂಥಕ್ಕೆ ಸೇರಿದುದೋ ಅಲ್ಲವೋ ಎಂಬ ಸಂದೇಹವುಂಟಾಗುತ್ತದೆ. ಒಂದುವೇಳೆ ಬೇರೆಗ್ರಂಥದ ಭಾಗವಾಗಿದ್ದರೂ ಇರಬಹುದು. ಹಾಗಿಲ್ಲದೆ ಇದೇ ಗ್ರಂಥಕ್ಕೆ ಸೇರಿದುದೆಂದು ನಿಸ್ಸಂದೇಹವಾಗಿ ತಿಳಿದಪಕ್ಷದಲ್ಲಿ ಕವಿಯ ಕಾಲವು ಸುಮಾರು 1660 ಎಂದು ಹೇಳಬೇಕಾಗುತ್ತದೆ.

ಸ್ವಾಮಿಗಳು ಭಲ್ಲಾತಕೀಪುರವರಾಧೀಶ್ವರ ಬೈರಾಗಿಗೆ[2] ಬರಸಿಕೊಟ್ಟ ಕಾವ್ಯಸಾರಕ್ಕೆ ಮಂಗಳಮಹಾಶ್ರೀ' ಎಂದಿರುವುದರಿಂದ ಈ ಗ್ರಂಥವು ಅಭಿನವವಾದಿ ವಿದ್ಯಾನಂದನಿಂದ ಸಂಕಲಿತವಾಗಿರಬಹುದೆಂದು ಊಹಿಸಬಹುದಾಗಿದೆ.

ಈತನು ಜೈನಕವಿ. ಈ ಗ್ರಂಥದಲ್ಲಿ ಚಂದ್ರಶೇಖರನ (ಸು. 1430) ಗುರುಮೂರ್ತಿಶಂಕರಶತಕದಿಂದ ಪದ್ಯವನ್ನು ಅನುವಾದಮಾಡಿರುವುದರಿಂದ ಕವಿ 1430ಕ್ಕಿಂತ ಈಚೆಯುವನಾಗಿರಬೇಕು. ನಗರದ ತಾಲ್ಲೂಕಿನ 46ನೆಯ ಶಾಸನದಲ್ಲಿ (ಸು. 1580) ಒಬ್ಬವಾದಿವಿದ್ಯಾನಂದನನ್ನು ವಿಶೇಷವಾಗಿ ಸ್ತುತಿಸಿದೆ. ಈತನು ಉಪನ್ಯಾಸವನ್ನು ಮಾಡುವುದರಲ್ಲಿಯೂ ವಾದಿಗಳನ್ನು ಜಯಿಸುವುದರಲ್ಲಿಯೂ ಬಹಳಚತುರನೆಂದೂ; ನಂಜರಾಯಪಟ್ಟಣದ ನಂಜಿದೇವರಾಜ, ಸಾತವೇಂದ್ರರಾಜನಾದ ಕೇಸರಿವಿಕ್ರಮ, ಸಾಳ್ವಮಲ್ಲಿರಾಯ, ಗುರುನೃಪಾಲ, ಸಾಳುವದೇವರಾಯ, ನಗಿರಿರಾಜ್ಯದ ರಾಜರು, ಬಿಳಿಗೆಯ ನರಸಿಂಹರಾಜ, ಕಾರಕಳದ ಭೈರವರಾಜ, ನರಸಿಂಹಕುಮಾರ ಕೃಷ್ಣರಾಜ, ಇವರುಗಳ ಆಸ್ಥಾನದಲ್ಲಿಯೂ, ಶ್ರೀರಂಗಪಟ್ಟಣ, ಬಿದಿರೆ, ಕೊಪಣ, ಬೆಳುಗುಳ, ಗೇರಸೊಪ್ಪೆ ಈ ಸ್ಥಳಗಳಲ್ಲಿಯೂ ವಾದಿಗಳನ್ನು ಜಯಿಸಿ ಸ್ವಮತಸ್ಥಾಪನವನ್ನು ಮಾಡಿದನೆಂದೂ ಮೇಲೆಹೇಳಿದ ಸ್ಥಳಗಳಲ್ಲಿ ಧರ್ಮಕೆಲಸಗಳನ್ನೂ ಮಾಡಿದನೆಂದೂ ಆಶಾಸನದಲ್ಲಿ ಹೇಳಿದೆ. ಈ ರಾಜರುಗಳಲ್ಲಿ 1509ರಿಂದ 1529 ರವರೆಗೆ ಆಳಿದ ನರಸಿಂಹಕುಮಾರನಾದ ವಿಜಯನಗರದ ಕೃಷ್ಣದೇವರಾಯನನ್ನು ಹೇಳಿರುವುದರಿಂದ ಈ ವಿದ್ಯಾನಂದನು ಆ ರಾಜನ ಸಮಕಾಲದವನು ಎಂಬುದು ವ್ಯಕ್ತವಾಗಿದೆ. ಇವನೇ ಕವಿಯಾಗಿರಬಹುದೆಂದು ತೋರುತ್ತದೆ. ಹಾಗಿದ್ದಲ್ಲಿ ಗ್ರಂಥಾಂತ್ಯದಲ್ಲಿ ಕೊಟ್ಟಿರುವ ವಿಜಯಸಂವತ್ಸರವು 1533 ಆಗಬೇಕು. ಗೇರಸೊಪ್ಪೆಗೆ ಭಲ್ಲಾತಕೀಪುರವೆಂಬ ನಾಮಾಂತರವುಂಟು. ಕವಿ ಆ ಸ್ಥಳದವನಾಗಿರಬಹುದು. ಮೇಲಣ ಶಾಸನದಲ್ಲಿ ಇವನ ವಿಷಯವಾಗಿ ಈ ಅಂಶಗಳೂ ತಿಳಿಯುತ್ತವೆ—ದೇವರಾಯನ ಸೋದರದಳಿಯನೂ ಪದ್ಮಾಂಬಾಪುತ್ರನೂ ಆದ ಸಾಳುವಕೃಷ್ಣದೇವನು ಇವನನ್ನು ಗೌರವಿಸಿದನು. ಇವನ ಮಗ ವಿಶಾಲಕೀರ್ತಿ. ಅವನ ಮಗ ದೇವೇಂದ್ರಕೀರ್ತಿ; ಈತನು ಭೈರವೇಂದ್ರವಂಶದ ಪಾಂಡ್ಯನೃಪನಿಂದ ಪೂಜಿತನಾಗಿದ್ದನು. ಇವನ ಮಗ ವರ್ಧಮಾನ. ಇದೂ ಅಲ್ಲದೆ ಆ ಶಾಸನದ

2. ಇಲ್ಲಿ ಏನೋ ತಪ್ಪು ಬಿದ್ದಿರುವಂತೆ ತೋರುತ್ತದೆ.

ಅರ್ಣವವೇಷ್ಟಿತವಸುಧಾ | ಕರ್ಣೋಪಮಗುರುನೃಪಾಲನಾಸ್ಥಾನದೊಳೇಂ |
ಕರ್ಣಾಟದಕ್ಷ ಕೃತಿಯಂ | ವರ್ಣಿಸಿ ಜಸವಡೆದೆ ವಾದಿವಿದ್ಯಾನಂದಾ ||

ಎಂಬ ಪದ್ಯದಿಂದ ಈ ಕವಿ ಕನ್ನಡದಲ್ಲಿ ಒಂದು ಗ್ರಂಥವನ್ನು ಬರೆದಂತೆ ತಿಳಿಯುತ್ತದೆ. ಇದು ಕಾವ್ಯಸಾರವೇ ಆಗಿರಲಾರದು, ಬೇರೆ ಗ್ರಂಥವಾಗಿರಬೇಕು. ಹಿಂದೆ ವಿದ್ಯಾನಂದ ಎಂಬ ಹೆಸರುಳ್ಳ ಕೆಲರು ಜೈನಗುರುಗಳು ಪ್ರಸಿದ್ಧರಾಗಿದ್ದರು. ಅದುದರಿಂದ ಅಭಿನವವಾದಿವಿದ್ಯಾನಂದ ಎಂದು ಈ ಕವಿ ಹೆಸರಿಟ್ಟುಕೊಂಡಂತೆ ಕಾಣುತ್ತದೆ.

ಇವನ ಗ್ರಂಥ

## ಕಾವ್ಯಸಾರ

ಇದರಲ್ಲಿ ಕಾವ್ಯಗಳೊಳಗೆ ವರ್ಣಿಸುವ ಎಲ್ಲಾ ವಿಷಯಗಳಿಗೂ ಉದಾಹರಣವಾಗಿ ಪೂರ್ವಕವಿಗಳ ಗ್ರಂಥಗಳಿಂದ ಪದ್ಯಗಳನ್ನು ಉದ್ಧರಿಸಿ ಒಂದೊಂದುವಿಷಯವನ್ನು ಒಂದೊಂದು ಅಧ್ಯಾಯದಲ್ಲಿ ನಿರೂಪಿಸಿದ್ದಾನೆ. ಒಟ್ಟು ಅಧ್ಯಾಯ 45, ಪದ್ಯ 1143.

ಈ ಗ್ರಂಥವು ಮಲ್ಲಿಕಾರ್ಜುನನ (ಸು. 1245) ಸೂಕ್ತಿಸುಧಾರ್ಣವವನ್ನು[1] ಬಹಳಮಟ್ಟಿಗೆ ಹೋಲುತ್ತದೆ. ಆದರೆ ಅದರಲ್ಲಿ ಕವಿಗಳ ಅಥವಾ ಗ್ರಂಥಗಳ ಹೆಸರು ಹೇಳಿಲ್ಲ; ಇದರೊಳಗೆ ಗ್ರಂಥಗಳ ಹೆಸರು ಹೇಳಿರುವುದರಿಂದ ಅಭಿನವವಾದಿವಿದ್ಯಾನಂದನ ಹಿಂದೆ ಇದ್ದ ಕವಿಗಳನ್ನು ನಿರ್ಧರಿಸುವುದಕ್ಕೆ ಇದು ಬಹಳ ಉಪಕಾರಕವಾಗಿದೆ. ಇದರಲ್ಲಿ ಗುಣವರ್ಮ I (ಸು. 900), ಆದಿಪಂಪ(941), ನಾಗವರ್ಮ I (ಸು. 990), ರನ್ನ(993), ನಾಗಚಂದ್ರ(ಸು. 1100), ಉದಯಾದಿತ್ಯ (ಸು. 1150), ಹರೀಶ್ವರ (ಸು. 1165), ನೇಮಿಚಂದ್ರ(ಸು. 1170), ರುದ್ರಭಟ್ಟ (ಸು. 1180), ಅಗ್ಗಳ (1189), ವಾಣೀವಲ್ಲಭ (ಸು. 1195), ಪಾರ್ಶ್ವಪಂಡಿತ (1205), ಜನ್ನ (1209), ಆಂಡಯ್ಯ (ಸು. 1235), ಕಮಲಭವ(ಸು. 1235), ಗುಣವರ್ಮ II (ಸು. 1235), ಮಧುರ (ಸು. 1385), ಚಂದ್ರಶೇಖರ (ಸು. 1430), ಈ ಕವಿಗಳ ಗ್ರಂಥಗಳಿಂದ ಪದ್ಯಗಳು ಅನುವಾದಮಾಡಲ್ಪಟ್ಟಿವೆ. ಅಲ್ಲದೆ ಕೆಲವು ಚಾಟುಪದ್ಯಗಳೂ ಮುಕ್ತಕಗಳೂ ಇವೆ.

ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ:—

### ರಾಜವರ್ಣನೆ

ತಿಱುಕಲ್ಲಾಡುವಳಷ್ಟಶೈಲಕುಲಮಂ ದಿಗ್ದಂತಿದಂತಂಗಳೊಳ್ |

---

1. Vol. I, 300.

ನೆಱೆ ಕೈಯಿಂ ತೊನೆದಾಡುವಳ್ ಮುಗಿಲ ಪೂವಂ ಸೂಡುವಳ್ ತಾರೆಯಂ ||
ತಿಱೆವಳ್ ಮುತ್ತುಗಳೆಂದು ಚಂದ್ರರವಿಯಂ ಕಂಕೋಲೆಯೆಂದಿಕ್ಕುವಳ್ |
ನಿಱೆಯಂ ಸುತ್ತುವಳೆೀೞುವಾರ್ಧಿಚಯಮಂ ಶ್ರೀಕೀರ್ತಿ ರೇಚಾಂಕನಾ ||

ಚಾಟು

### ಪುರುಷ ವಿರಹವರ್ಣನೆ

ಅದನಿನ್ನೇವೊಗೞ್ವೆಂ ವಿನೋದಭವನಂ ಚಾತುರ್ಯಜನ್ಮಸ್ಥಳಂ |
ಮೃದುಮಾಧುರ್ಯವಚಸ್ಸುಧಾಂಬುಧಿಗೆ ಪೆರ್ಚಂ ಮಾೞ್ಪ ಚಂದ್ರೋದಯಂ ||
ಮದನಂ ಪೂಜಿಪ ಮಂತ್ರದೇವತೆಯೆನಿಪ್ಪಾನಲ್ಲಳಂ ಬಿಟ್ಟು ಹಾ |
ಬಿದಿರಂ ಕಬ್ಬಿನ ಪೋಲ್ಕೆಗೆಂದು ಸವಿವಂತಾಯ್ತೆನ್ನ ಪುಣ್ಯೋದಯಂ ||

ಮುಕ್ತಕ.

### ಸಮುದ್ರವರ್ಣನೆ

ಪವಳದ ಕೆಯ್ ಮುಗಿಲ್ಗಳಱವಟ್ಟಿಗೆ ನೀರ್ಗಳ ಸುತ್ತು ಮುತ್ತು ಪು |
ಟ್ಟುವ ಕಣಿ ಬೆಟ್ಟವಕ್ಕಿಗಳ ಗೂಡೆಳನೆ ಸಱ ತೊಟ್ಟಿಲುಗ್ರದಾ ||
ನವರೆಱವಟ್ಟು ಲಕ್ಷ್ಮಿಯ ತವರ್ಮನೆ ತಿಂಗಳ ಪೆತ್ತ ತಂದೆ ಬಾ |
ಡವಶಿಖಿಗಂ ನಿವಾಸಮುಸುರಾರಿಯ ಸೆಜ್ಜೆ ವಲಂ ಮಹಾರ್ಣವಂ ||

### ಶೌರ್ಯವರ್ಣನೆ

ಗರುಡನ ಮೂಗು ಕೊಂಕಿದೊಡೆ ತಿರ್ದಿದುದಿಲ್ಲ ಮುರಾರಿ ಚಂದ್ರನೊಳ್ |
ಪೊರೆದ ಕಳಂಕಮಂ ಕಳೆದುದಿಲ್ಲ ಮಹೇಶ್ವರನರ್ಕನೞ್ಕಱಂ ||
ದರುಣನ ಕಾಲ್ಗಳಂ ಪಡೆದನಿಲ್ಲಮದೆಂತೆನೆ ಪುಣ್ಯಹೀನನೇ |
ದೊರೆಗಳನಾಸೆಗೆಯ್ದೊಡಮಗಲ್ವುದೆ ಪೂರ್ವದ ಕರ್ಮಬಂಧನಂ ||

### ತಪೋವನವರ್ಣನೆ

ಪೊಕ್ಕು ಕುಟೀರಮಂ ಕೆದಱ ಪುಸ್ತಕಮಂ ಮಸಿಯಕ್ಕರಂಗಳಂ |
ನೆಕ್ಕಿ ಬಿಸುಟ್ಟು ಬೊಕ್ಕಣದ ಬೂದಿಯನುಃಪಿಸುತೂದಿ ಮೂಗಿನೊಳ್ ||
ಪೊಕ್ಕೊಡೆ ಸೀಂತು ಮಾಣ್ದಿರದೆ ಪಾಯ್ದುವಲಂಬಿಪ ಕೊಂಬನೇಱ ಪು |
ಬ್ಬಿಕ್ಕುವ ಮರ್ಕಟಂ ನಗದ ತಾಪಸರಂ ನಗಿಸಿತ್ತರಣ್ಯದೊಳ್ ||

### ವೈರಾಗ್ಯವರ್ಣನೆ

ನೆರೆವುದಗಲ್ವುದರ್ಕೆ ಜನನಂ ಮರಣಕ್ಕೆ ವಿನೂತಯೌವನಂ |
ಜರೆಗೆ ಧನಂ ದರಿದ್ರತೆಗೆ ನಲ್ಮೆ ವಿರಾಗಪಥಕ್ಕೆ ಸತ್ಸುಖೋ ||

ತ್ಕರಮುಸುಖಕ್ಕೆ ಕಾರಣಮಿದೆಂದಱಿದುಂ ಭವಸಿದ್ಧಪಂಜರೋ |
ದರಗತರೇಕೆ ಚಿಂತಿಸುವರೇಕೆ ಪಲುಂಬುವರೇಕೆ ನೋವರೋ[1] ||

---

## ಬೊಂಬೆಯುಲಕ್ಕ. 1538

ಇವನು ಹರಿಶ್ಚಂದ್ರಸಾಂಗತ್ಯವನ್ನು ಬರೆದಿದ್ದಾನೆ. ಈತನು ವೀರ ಶೈವಕವಿಯೆಂದು ತೋರುತ್ತದೆ. ಈ ಗ್ರಂಥವನ್ನು ಶಕ 1460 ನೆಯ ವಿಳಂಬಿಯಲ್ಲಿ ಎಂದರೆ 1538ರಲ್ಲಿ ರಚಿಸಿದಂತೆ ಹೇಳುತ್ತಾನೆ.

ಇವನ ಗ್ರಂಥ

### ಹರಿಶ್ಚಂದ್ರಸಾಂಗತ್ಯ

ಸ್ಥಲ 5, ಪದ್ಯ 570. ಇದರಲ್ಲಿ ಹರಿಶ್ಚಂದ್ರನ ಕಥೆ ಹೇಳಿದೆ. ಈ ಕಥೆ "ಸತ್ಯದ ನೆಲೆ ಮುಕ್ತಿಯ ಬೀಡು ಪುಣ್ಯದ ಕೀರ್ತಿಯ ತಲೆವನೆ" ಎಂದು ಕವಿ ಹೇಳುತ್ತಾನೆ. ಗ್ರಂಥಾವತಾರದಲ್ಲಿ ವಿರೂಪಾಕ್ಷಸ್ತುತಿಯೂ ಬಳಿಕ ಗಣೇಶ ಸರಸ್ವತಿಯರ ಸ್ತುತಿಯೂ ಇವೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ:—

### ಚಂದ್ರಮತಿ

ಅಡಕೆಗೆ ಹರಣವ ತೊಱೆವರು ಸತಿಯರು | ನುಡಿವರು ಸಕಲಬೋಧೆಗಳ |
ಬಿಡದೆ ಲೋಭಗಳನು ಮೆಱೆವರು ಅವಗುಣ | ಕಡೆಗಿನಿತಿಲ್ಲ ಚಂದ್ರಮತಿಗೆ ||

### ಹರಿಶ್ಚಂದ್ರನ ಉಕ್ತಿ

ಹೆತ್ತ ತಾಯನು ಮಾಱಿ ತೊತ್ತ ಕೊಂಬವನಂತೆ | ಮತ್ತಾದೇವಪೂಜೆಯನು |
ಇತ್ತು ನಾಯನು ಕೊಂಬ ಗಾದೆಯಂದದಿ ಜೀಯ | ಸತ್ಯವ ಬಿಡಲೊಲ್ಲೆನೆಂದ ||
ಪೊಡವಿ ನುಂಗುವರೆ ಬಯಲು ಬಡಿವರೆ ಎ | ನ್ನೊಡಲೊಳಗುಂಬಶನವು |
ಬಿಡದೆ ನಂಜಾಗಿ ಮುಸಿಯೆ ಇನ್ನು ಲೋಕದಿ| ತಡೆವವರಾರು ಹೇಟೆಂದ ||
ಬಚ್ಚಲುದಕ ತಿಳಿದಿರಲು ಮಜ್ಜನವುಂಟೆ | ಅಚ್ಚರಿನಾಯ ಹಾಲುಗಳು |
ಸಿಚ್ಚಯವಾದ ಊಟಕೆ ನಿಮ್ಮ ಯೌವನ | ಮಚ್ಚೇನು ಇನಕುಲಜರಿಗೆ ||

---

1. ಈ ನಾಲ್ಕು ಪದ್ಯಗಳಿಗೂ ಆಕರ ಹೇಳಿಲ್ಲ.

## ರಾಮರಸವಿರೂಪಾಕ್ಷ. 1538

ಈತನು ಹರಿಶ್ಚಂದ್ರಸಾಂಗತ್ಯವನ್ನು ಬರೆದಿದ್ದಾನೆ. ಇವನು ಬ್ರಾಹ್ಮಣಕವಿ. ತನ್ನ ವಿಷಯವನ್ನು ಈ ಪದ್ಯದಲ್ಲಿ ತಿಳಿಸಿದ್ದಾನೆ—

ವಸುಮತಿಯೊಳು ಪಂಚಾರುಷಯಪ್ರಥಮಶಾಖೆ | ಪೆಸರುಳ್ಳ ಶ್ರೀವತ್ಸಗೋತ್ರ |
ಹಸನಾಗಿ ದ್ವಿಜ ರಾಮರಸವಿರೂಪಾಕ್ಷ | ನೆಸಗಿದೀಕೃತಿಯ ಲಾಲಿಪುದು ||

ತನ್ನ ಗ್ರಂಥವನ್ನು ಶಕ 1460ರಲ್ಲಿ ಬರೆದಂತೆ ಈ ಪದ್ಯದಲ್ಲಿ ಹೇಳಿದ್ದಾನೆ:—

ಶಾಲಿವಾಹನ ಬಂದು ಬಳಿಯಿದಕಲಿಯೊಳ | ಗಾಳಿದ ಶಕವರ್ಷಗಳು |
ಏಳಿಟಿ ಇಮ್ಮಡಿತಾಳಿದ ಶತಕದ | ಮೇಲಾದ ಅಱುವತ್ತುವರುಷ ||

ಇವನ ಗ್ರಂಥ

### ಹರಿಶ್ಚಂದ್ರಸಾಂಗತ್ಯ

ಒಂದುಪ್ರತಿಯಲ್ಲಿ ಸಂಧಿ 13, ಪದ್ಯ 609 ಎಂದಿದೆ; ಮತ್ತೊಂದು ಅಸಮಗ್ರಪ್ರತಿಯಲ್ಲಿ 429 ಪದ್ಯವುಳ್ಳ 2 ಆಶ್ವಾಸಗಳೂ 3ನೆಯ ಆಶ್ವಾಸದಲ್ಲಿ 171 ಪದ್ಯಗಳೂ ಇವೆ. ಗ್ರಂಥಾವತಾರದಲ್ಲಿ ಹಂಪೆಯ ವಿರೂಪಾಕ್ಷಸ್ತುತಿ ಇದೆ.

---

## ಪುರಂದರದಾಸ. ಸು. 1540

ಈತನು ಕೀರ್ತನೆಗಳನ್ನು ಬರೆದಿದ್ದಾನೆ. ಇವನು ಬ್ರಾಹ್ಮಣಕವಿ; ಇವನ ಸ್ಥಳ ಪುರಂದರಗಡ. ಮೊದಲು ಐಶ್ವರ್ಯವಂತನಾಗಿಯೂ ಪರಮಲೋಭಿಯಾಗಿಯೂ ಇದ್ದು ಜ್ಞಾನೋದಯವಾದಮೇಲೆ ಹಣವನ್ನೆಲ್ಲ ದಾನಮಾಡಿ ಹಾಡುಗಳಿಂದ ದೇವರನ್ನು ಸ್ತುತಿಸುತ್ತ ಪಂಡರಿಪುರದಲ್ಲಿ ಭಿಕ್ಷಬೇಡಿಕೊಂಡು ಕಾಲವನ್ನು ಕಳೆದಂತೆ ತಿಳಿಯುತ್ತದೆ. ಮೊದಲು ಸ್ಮಾರ್ತಬ್ರಾಹ್ಮಣನಾಗಿದ್ದು ಅಮೇಲೆ ಮಾಧ್ವನಾದನೆಂದು ಹೇಳುತ್ತಾರೆ. ಇವನ ಕೆಲವು ಕೀರ್ತನೆಗಳಿಂದ ಈತನು 1538ರಲ್ಲಿ ವಿಜಯನಗರದಲ್ಲಿದ್ದಂತೆಯೂ 1564 ರಲ್ಲಿ ಸತ್ತಂತೆಯೂ ತಿಳಿಯುತ್ತದೆ ಎಂದು ಮೆ|| ಕಿಟ್ಟೆಲ್[1] ಬರೆದಿದ್ದಾರೆ. ವ್ಯಾಸರಾಯನಿಂದ (ಸು. 1525) ಈತನು ಉಪದೇಶವನ್ನು ಪಡೆ

1 *Nagavarma's Prosody,* Introduction 62 and 63

ದಂತೆ ಪ್ರತೀತಿಯೂ ಇದೆ. ಆದುದರಿಂದ ಇವನ ಕಾಲವು ಸುಮಾರು 1540 ಆಗಬಹುದು.

ಈತನ ಕೀರ್ತನೆಗಳು ವಿಷ್ಣುಸ್ತುತಿರೂಪವಾಗಿಯೂ ವೇದಾಂತ ಬೋಧಕವಾಗಿಯೂ ಇವೆ. ಇವು ಪ್ರಾಯಿಕವಾಗಿ ಕನ್ನಡನಾಡಿನಲ್ಲೆಲ್ಲಾ ಪ್ರಚಾರದಲ್ಲಿವೆ. ಈತನ ಹಾಡುಗಳಿಗೆ ಪುರಂದರವಿಠಲ ಎಂಬ ಅಂಕಿತವು ಗುರುತಾಗಿದೆ. ಇವುಗಳಲ್ಲಿ ಒಂದೆರಡನ್ನು ಉದಾಹರಿಸುತ್ತೇವೆ—

ರಾಗ ಪಂತುವರಾಳಿ—ಆದಿತಾಳ

ಪಲ್ಲವಿ|| ಮುತ್ತುಕೊಳ್ಳಿರೋ ಜನರು ಮುತ್ತುಕೊಳ್ಳಿರೋ ||
ಅನುಪಲ್ಲವಿ|| ಮುತ್ತು ಬಂದಿದೆ ಸಚ್ಚಿದಾನಂದಸ್ವರೂಪದಿವ್ಯಮುತ್ತು ||
ಜ್ಞಾನವೆಂಬ ದಾರದಲ್ಲಿ | ಪೋಣಿಸಿದ ದಿವ್ಯಮುತ್ತು |
ಧನವ ಕೊಟ್ಟು ಕೊಂಬುದಿದನು| ಘನವಾದ ಭಕ್ತಜನರು ||1||
ಕೆಟ್ಟಬಾರದು ಮೂಗಿಲಿ | ಇಟ್ಟು ಮೆಱೆಯಬಾರದು |
ಕಷ್ಟವಿಲ್ಲದೆ ಸೃಷ್ಟಿಗೊಡೆಯ | ಕೃಷ್ಣನೆಂಬ ಆಣಿಮುತ್ತು ||2||
ಹಿಡಿಯಲಿಕ್ಕೆ ಸಿಲುಕದು | ಬೆಲೆಯಕಡೆಯ ಕಾಣದು |
ಪಿಡಿಯಬಲ್ಲ ಪುರಂದರವಿಠಲ | ಒಡೆಯನೆಂಬ ದಿವ್ಯಮುತ್ತು ||3||

ರಾಗ ಮಧ್ಯಮಾವತಿ—ಅಟತಾಳ

ಪಲ್ಲವಿ|| ತನುವ ನೀರೊಳಗದ್ದಿ ಫಲವೇನು |
ಮನದಲ್ಲಿ ದೃಢಭಕ್ತಿಯಿಲ್ಲದ ಮನುಜಗೆ ||
ದಾನಧರ್ಮಂಗಳನು ಮಾಡುವುದೆ ಸ್ನಾನ | ಜ್ಞಾನತತ್ವಂಗಳ ತಿಳಿವುದೇ ಸ್ನಾನ |
ಹೀನಪಾಶಂಗಳ ಬಿಡುವುದೇ ಸ್ನಾನ| ಧ್ಯಾನದಿ ಮಾಧವನ ನಂಬುವುದೆ ಸ್ನಾನ||1||
ಗುರುಗಳ ಶ್ರೀಪಾದತೀರ್ಥವೇ ಸ್ನಾನ|ಹಿರಿಯರ ದರ್ಶನವ ಮಾಡುವುದೆ ಸ್ನಾನ |
ಕರೆದು ಅನ್ನವನಿಕ್ಕುವುದೊಂದುಸ್ನಾನ|ಸಿರಿಹರಿಯ ಚರಣವ ನಂಬುವುದೆ ಸ್ನಾನ||2||
ದುಷ್ಟರ ಸಂಗವ ಬಿಡುವುದೊಂದು ಸ್ನಾನ|ಕಷ್ಟಪಾಪಂಗಳನು ಹಱಿವುದೆ ಸ್ನಾನ|
ಸೃಷ್ಟಿಯೊಳಗೆ ಸಿರಿಪುರಂದರವಿಠಲನ | ಮುಟ್ಟಿ ಭಜಿಸಿ ಪುಣ್ಯಪಡೆವುದೇ ಸ್ನಾನ||3||

---

## ಎಮ್ಮೆಬಸವ. 1543

ಈತನು ಕಾಲಜ್ಞಾನವನ್ನು ಬರೆದಿದ್ದಾನೆ. ಇವನು ವೀರಶೈವಕವಿ. ಜಂಬುನಾಥದೇವರ ಅನುಗ್ರಹದಿಂದ ಇವನು ತ್ರಿಕಾಲಜ್ಞಾನಿಯಾದನೆಂದೂ

ವೀರಶೈವಾಗಮಜ್ಞನೆಂದೂ ಇವನಿಗೆ ಸಲಕರಾಜನ ಮಗನಾದ ತಿರುಮಲ ರಾಯನೆಂಬ ಪ್ರಭು 1543ರಲ್ಲಿ ಕೊಮರಕೆರೆ ಎಂಬ ಗ್ರಾಮವನ್ನು ಕೊಟ್ಟ ನೆಂದೂ ಈಚೆಗೆ ದೊರೆತ ಒಂದು ತಾಮ್ರಶಾಸನದಿಂದ ತಿಳಿಯುತ್ತದೆ[1]. ಹಂಪೆಯಬಳಿ ಇರುವ ಜಂಬುನಾಥಕೊಂಡ ಎಂಬ ಬೆಟ್ಟದಲ್ಲಿಯ ಜಂಬುನಾಥನು ಈತನ ಉಪಾಸ್ಯದೇವತೆ ಎಂದು ತಿಳಿಯುತ್ತದೆ. ಹಂಪೆಯೇ ಇವನ ಸ್ಥಳವಾಗಿರಬೇಕು.

ಈತನ ಕಾಲಜ್ಞಾನದಲ್ಲಿ ಇವನು "ನರಸಿಂಗರಾಯನ ಹಿರಿಯಕುಮಾರನು ಹೊಯ್ಯೊ ಡಂಗುರವ | ಅಯ್ಯ ಅರಸುತನಕಿನ್ನು ಕಡೆಗಾಲವಾದೀತು ಹೊಯ್ಯೊ ಡಂಗುರವ" ಎಂದು ಸಾರುತ್ತ ಬಗಲು ಊರನಾಳುವ ಕೃಷ್ಣರಾಯನು ಹಿಡಿತರಿಸಿ ಪಟ್ಟದಾನೆಯ ಮುಂದಕ್ಕೆ ಇವನನ್ನು ನೂಕಿಸೆ ಪಟ್ಟದಾನೆ ಶರಣೆಂದು ಮಸ್ತಕದಮೇಲಿರಿಸಿಕೊಂಡು ಮೂಡಲರಾಜಬೀದಿಯಲ್ಲಿ ಬಂದುದು; ಮನೆಯಲ್ಲಿರಿಸಿ ಬೀಗಮುದ್ರೆಯನ್ನು ಹಾಕಿದರೂ ಇವನು ತಪ್ಪಿಸಿಕೊಂಡು ಬಂದುದು ಇವೇ ಮೊದಲಾದ ಇವನ ಮಹಿಮೆಗಳೂ ಹೇಳಿವೆ.

ಇವನ ಗ್ರಂಥ

### ಕಾಲಜ್ಞಾನ

ಇದು ಹೊಯ್ಯೊ ಡಂಗುರವ, ಹಾಕೆಲೊ ಮುಂಡಿಗೆಯ, ಕಣಿಯಕೇಳಿರೊ, ಎಚ್ಚರಿಕೆ ಎಚ್ಚರಿಕೆ, ಹೇಗೆಮಾಡಿತೊ, ದಿಮ್ಮಿಸಾಲು, ಕುಕ್ಕುಕ್ಕೂವ್ವಾ, ರನ್ನದಕೋಲೆ ಎಂದು ಮುಗಿವ ಹಾಡುಗಳ ರೂಪವಾಗಿ ಮುಂದೆ ಬರುವ ಸಂಗತಿಗಳನ್ನು ತಿಳಿಸುವ ಗ್ರಂಥವಾಗಿದೆ.

---

### ಚೆನ್ನಬಸವಾಂಕ. ಸು. 1550

ಇತನು ಮಹಾದೇವಿಯಕ್ಕನ ಪುರಾಣವನ್ನು ಬರೆದಿದ್ದಾನೆ. ಇವನು ವೀರಶೈವಕವಿ; ಇವನ ಪಿತಾಮಹನು ಬಸವಾಂಕ, ಪಿತಾಮಹಿ ಗಂಗಾಂಬೆ; ತಂದೆ ರುದ್ರಕವಿ ನಾಗಭೂಷಣಾಚಾರ್ಯ; ಗುರು ವ್ಯಾಘ್ರಾಜಿನಾಂಬರದ ಕಂಥೆಯಚಿದಾನಂದಯತಿಪ ಬಸವರಾಜ. ಪ್ರೌಢದೇವನಿಗೆ ಹೇಮಕೂಟದ ವಿರಕ್ತರ ಗುಣವನರಿಪಿದ ಕರಸಲದ ನಾಗಿದೇವನನ್ನೂ (ಸು. 1430), ಮಲಬಸವಪುರಾಣಕರ್ತೃವಾದ ಶೃಂಗಿರಾಜನನ್ನೂ (ಸು. 1500) ಸ್ಮರಿಸುವುದರಿಂದ ಕವಿಯ ಕಾಲವು ಸುಮಾರು 1550 ಆಗಿರಬಹುದೆಂದು ಊಹಿಸುತ್ತೇವೆ.

---

1. *Mysore Archæological Report* for 1917, para 121. ಜಾಂಬೂನದಾದಿ ಕೋದಂಡಜಂಬುನಾಥಪದಾಬ್ಜವತಃ । ಪಾಪಕಾಲತಮೋದಂತಬರಿಜಾ ಸಾಯು ದೀಪಾತೇ ॥

ಪೂರ್ವಕವಿಗಳಲ್ಲಿ ಹರಿಯರಸ, ರಾಘವ, ಶೃಂಗಿರಾಜ, ಕೆರೆಯಪದ್ಮರಸ, ಕೇಶಿರಾಜ, ಭೀಮರಸ, ಕರಸ್ಥಲದ ನಾಗಿದೇವ ಇವರುಗಳನು ಸ್ಮರಿಸಿದ್ದಾನೆ.

ಇವನ ಗ್ರಂಥ

ಮಹಾದೇವಿಯಕ್ಕನ ಪುರಾಣ

ಇದು ನಾನಾಷಟ್ಪದಿಗಳಲ್ಲಿ ಬರೆದಿದೆ; ಕೆಲವು ಸಾಂಗತ್ಯಗಳೂ ಇವೆ; ಸ್ಥಲ 33, ಪದ್ಯ 1604. ಇದರಲ್ಲಿ ವೀರಶೈವಪುರಾತನರಲ್ಲಿ ಒಬ್ಬಳಾದ ಮಹಾದೇವಿಯಕ್ಕನ[1] ಚರಿತವು ಹೇಳಿದೆ. ಈ ಗ್ರಂಥದ ಉತ್ಕೃಷ್ಟತೆಯನ್ನು ಕವಿ ಈ ಪದ್ಯದಲ್ಲಿ ಹೇಳಿದ್ದಾನೆ—

ಶಿವಮಹತ್ವದ ಪೆಚ್ಚು | ಶಿವನ ನಿಷ್ಠೆಯ ಕೆಚ್ಚು |
ಶಿವನ ಸದ್ಭಕ್ತಿಸಾರಾಯದಚ್ಚು ||
ಶಿವದೂಷ್ಯರೆದೆಗಿಚ್ಚು | ಶಿವಯೋಗಿಗಳ ನಚ್ಚು |
ಶಿವಕಾವ್ಯವಿದು ಶರಣಜನದ ಮಚ್ಚು ||

ಗ್ರಂಥಾವತಾರದಲ್ಲಿ ಶಿವಸ್ತುತಿ ಇದೆ. ಬಳಿಕ ಕವಿ ನಂದಿ, ಭೃಂಗಿ, ವೀರಭದ್ರ ಇವರುಗಳನ್ನು ಸ್ತುತಿಸಿ ಸಿದ್ಧರಾಮನೇ ಮೊದಲಾದ ಪುರಾತನರನ್ನು ಸ್ಮರಿಸಿದ್ದಾನೆ. ತನ್ನ ಗುರು ಬಸವರಾಜನು—ಮಹಾದೇವಿಯಕ್ಕನ ಚರಿತೆಯನ್ನು ಹರೀಶ್ವರನು ರಘಟಾರೂಪದಿಂದ ಬರೆದಿದ್ದಾನೆ; ನೀನು ಅದನ್ನು ಷಟ್ಪದಿಯಾಗಿ ಬರೆ—ಎಂದು ಆಜ್ಞಾಪಿಸಲು ಈ ಗ್ರಂಥವನ್ನು ಬರೆದಂತೆ ಕವಿ ಹೇಳುತ್ತಾನೆ.

ಇವನ ಬಂಧವು ಹೃದಯಂಗಮವಾಗಿದೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ಸೂರ್ಯೋದಯ

ಬಿತ್ತು ಮೊಳೆತುದೊ ನೇಸಱಿನ ಪಗಲ್ದೀವಿಗೆಯ |

---

1 Vol. I, 154.

2 ಸಿದ್ಧರಾಮ, ಅಲ್ಲಯ್ಯ, ಬಿಬ್ಬಬಾಚರಸ, ಬಾಚರಸ, ಗುಪ್ತಮಂಚರಸ, ಕಾಳಿಮರಸ, ಚೆನ್ನಬಸವ, ಬಸವ, ನಾಗಕ್ಕ, ಸತ್ಯಕ್ಕ, ಚೋಳಿಯಕ್ಕ, ವೈಜಕ್ಕ, ಮಹಾದೇವಿಯಕ್ಕ, ನಿಂಬಿಯಕ್ಕ, ಕೋಲೂರಚೆನ್ನಕ್ಕ, ಆಜಗಣ್ಣಯ್ಯನ ಅಕ್ಕಮುಕ್ತಾಯಕ್ಕ.

ನೆತ್ತಿಸಿದನೋ ಸೂರ್ಯ ಶೌರ್ಯಕ್ಕೆ ಮೂಗುತಿಯು |
ಘುತ್ತೊ ಪೂರ್ವಾಂಗನೆಯ ಬೆಳಗೆಂಬ ಬಳ್ಳಿ ಚೆಂದಳಿರಿಡಿದು ಬೆಳ್ಳರಲನು ||
ಪೆತ್ತಿರವೊ ಗಗನಗಣಪನ ದಂತವೋ ಭಾನು |
ಕತ್ತಲೆಯ ನೆತ್ತಿಯಂ ಕುತ್ತಲೆಂದೆತ್ತಿದರಿ |
ಗತ್ತಿಯೊಪ್ಪುವ ಬಜ್ಜರದ ಗಾಜೆಯೋ ಎನಲ್ ರವಿಯುದಯ ಕಣ್ಗೆಸೆದುದು ||

ವನ

ಚೆಲುವಿಕೆಯ ಚೇತನ ಸುನಾದದ | ನಿಲಯ ಕಂಪಿನ ತಾನ ಕಂತಿನ |
ಕಲೆ ಸವಿಯ ಸಾಮ್ರಾಜ್ಯ ಮೋಹಿಗಳಱಿಕೆಯಾಸ್ಥಾನ ||
ಅಲರುಸರನಾಡುಂಬೊಲಂ ಖಗ | ಕುಲದ ಕಡವರ ಸುಖದ ಸುಧೆ ತಂ |
ಬೆಲರ ತವರೆಂದೆನಿಸಿ ರಾರಾಜಿಸುವುದಾವನವು ||
ಪರಪುಟ್ಟಂಗಳ ಬಳಗಂ ಚೂತಾಂ | ಕುರಶಾಖೆಯೊಳಿಟ್ಟಣಿಸಿಹುವಳಿಗಳ |
ನೆರವಿ ಸುಪುಷ್ಪಿತಶಾಖೆಯೊಳೊತ್ತರಿಸಿಹುವರಗಿಳಿಕುಳವು ||
ಪರಿಪಕ್ವಿತಫಳಶಾಖೆಯೊಳಂ ಕಿ | ಕ್ಕಿಱಿಗಿಱಿದಾಡುತ್ತಿರ್ಪುವೆನಲ್ಕೆ |
ಸಿರಿಸ್ವೈರಣೆಯುಳ್ಳರನಾಶ್ರಯಿಸಿರರಾರೀಧಾತ್ರಿಯಲಿ ||

ನೀತಿ

ಆವನಲ್ಲಿ ವಿಷಯವಿಕಳ | ವಾವನಲ್ಲಿ ಕೋಪಶಾಪ |
ವಾವನಲ್ಲಿ ಲೋಭಲಾಭ ಮಮತೆಯಂಡಲೆ ||
ಆವನಲ್ಲಿ ಮದದ ಮಸಕ | ವಾವನಲ್ಲಿ ಮಚ್ಚರಂಗ |
ಳಾವರಿಸುವುದಿಲ್ಲವಲ್ಲಿ ಸುಗತಿ ಭೂಪತಿ ||

ಮಹಾದೇವಿಯಕ್ಕನ ಸೌಂದರ್ಯ

ಇಂದೀವರಾಕ್ಷಿ ಚಂಪಕನಾಸಿಕಟ ಚದುರೆ |
ಕುಂದಕುಟ್ಮಲರದನೆ ಕುಮುದಕೋರಕಸುಕುಚೆ |
ಮಾಂದಳಿರ್ದುಟಿಯ ಮಾನಿನಿ ಮಲ್ಲಿಕಾಸ್ಮಿತೆ ಶಿರೀಷಸ್ರಗ್ಬಾಹುಯುಗಳೆ ||
ಅಂದವಟ್ಟೆಹ ಕೇತಕೀನಖಮಯೂಖೆಯರ |
ವಿಂದಮುಖಿ ಮಹದೇವಿಯೊಪ್ಪಿದಳ್ ಧಾತ್ರಿಯೊಳ್ |
ಕಂದರ್ಪನಂಬುಗಳಿನಂಬುರುಹಭವ ಚೆಲ್ವಪೆಣ್ಗೆ ೖದನೆಂಬಂದದಿ ||
ನವಕಾಂತಿ ರಸ ಮಂದಹಾಸ ಬೆಳ್ದೊರೆ ಲಸ |

ತ್ರಿವಳಿ ಕಲ್ಲೋಲ ಸುಳಿ ನಾಭಿ ಕಂಧರ ಕಂಬು |
ಜವಳಿವೊಲಿಗಳ್ ಸಲಿಲಕುಂಭಿಕುಂಭಗಳು ಜೆಮ್ಮಳಿಲದಿಂಟೆ ಘನಜಘನ ||
ಕುವಲಯಾಂಬಕಿಯೆಸೆವ ಕಣ್ಗಳೆಳವಿರ್ಽ ಮಿಱುಪ |
ಪವಳ ಚೆಂದುಟಿ ಚರಣ ಕೂರ್ಮ ರದನಂ ರತ್ನ |
ನಿವಹಮೆಂದೆನೆ ಮಹಾದೇವಿ ರಾಜಿಸಿದಳತಿಶೃಂಗಾರಶರಧಿಯಂತೆ ||
ಅತ್ತಿತ್ತ ಚಲಿಸುವ ಜನರ ದಿಟ್ಟಿಗಳ ತ | ನ್ನತ್ತಲೆಳೆವ ಮಿಂಚಿನಂತೆ |
ತತ್ತರುಣಿಯು ದಿಟ್ಟಿನೆಳಗೆಳೆವತ್ತು ತ | ನ್ನತ್ತೆಲ್ಲ ಜನರ ದಿಟ್ಟಿಗಳ ||

ಶಾಲಿವನ

ಬಿತ್ತುವಂಕುರದೋರ್ಪ ಪಚ್ಚೆಲೆ | ಗುತ್ತುಱಿನ ಗಱೆ ಮಿಳಿರ್ವ ಬಿಱುವಡೆ |
ಯೊತ್ತೆಸೆವ ಪೂದೋಱುವಿನಿವಾಲ್ದುಂಬುವನಲಪ್ಪ ||
ಬಿತ್ತುಬಲಿವರಿವಡೆವ ನಿಡುನಿಧಿ | ಯೊತ್ತರಿಪ ಸಾಳಿಯ ಪೊಲಂಗಳ್ |
ಬಿತ್ತರಂಬಡೆದಿಹುವು ಬಿತ್ತದ ಬೀಱ್ವೊಲಗಳಿಲ್ಲ ||

---

## ಕನಕದಾಸ. ಸು. 1550

ಈತನು ಮೋಹನತರಂಗಿಣಿ, ರಾಮಧಾನ್ಯಚರಿತ್ರೆ, ನಳಚರಿತ್ರೆ, ಹರಿಭಕ್ತಿಸಾರ ಈ ಗ್ರಂಥಗಳನ್ನು ಬರೆದಿದ್ದಾನೆ. ಅಲ್ಲದೆ ವಿಷ್ಣುಸ್ತುತಿರೂಪವಾದ ಹಲವು ಹಾಡುಗಳನ್ನೂ ಬರೆದಿದ್ದಾನೆ. ನೃಸಿಂಹಸ್ತವ ಎಂಬ ಒಂದು ಸಣ್ಣ ಸಾಂಗತ್ಯ ಗ್ರಂಥದಲ್ಲಿ (97 ಪದ್ಯ) ಮೊದಲು ಕಾಗಿನೆಲೆಯ ರಂಗನಮೇಲೆ ಮಂಗಳವೂ ಅನಂತರ ರಾಮಾನುಜಸ್ತುತಿಯೂ ಇರುವುದರಿಂದ ಇದೂ ಏತತ್ಕೃತವಾಗಿರಬಹುದೆಂದು ತೋರುತ್ತದೆ.

ಇವನು ಪ್ರಾಯಿಕವಾಗಿ ಕಾಗಿನೆಲೆಯ ಆದಿಕೇಶವದೇವರ ಅಂಕಿತದಲ್ಲಿ ತನ್ನ ಗ್ರಂಥಗಳನ್ನು ಬರೆದಿರುವುದರಿಂದ ಧಾರ್ವಾಡಜಿಲ್ಲೆಯ ಕಾಗಿನೆಲೆ ಈತನ ಸ್ಥಳವೆಂದು ತೋರುತ್ತದೆ. ಇವನು ಬೇಡರವನೆಂದೂ ಧಾರ್ವಾಡ ಜಿಲ್ಲೆಯ ಕೋಡತಾಲ್ಲೂಕು ಬಾಡ ಎಂಬ ಗ್ರಾಮದಲ್ಲಿ ಹುಟ್ಟಿ ಕಾಗಿನೆಲೆಯ ಆದಿಕೇಶವದೇವಸ್ಥಾನದಲ್ಲಿ ಸತ್ತನೆಂದೂ ಹೇಳುತ್ತಾರೆ. ರಾಮಾನುಜಗುರುವನ್ನೂ ತಾತಾಚಾರ್ಯನನ್ನೂ ಸ್ತುತಿಸಿರುವುದರಿಂದ ಶ್ರೀವೈಷ್ಣವರ ಶಿಷ್ಯನಾಗಿದ್ದಂತೆತೋರುತ್ತದೆ. 'ವಾಲ್ಮೀಕಿವ್ಯಾಸಪುರಾಣಂಗಳ ಕನ್ನಡಿಸಿದ ಕವಿವರರ'

ಸ್ತುತಿಸಿರುವುದರಿಂದ ಕುಮಾರವ್ಯಾಸ (ಸು. 1430) ಕುಮಾರವಾಲ್ಮೀಕಿ (ಸು. 1500) ಇವರುಗಳ ಕಾಲಕ್ಕೆ ಈಚೆಯವನು ಎಂಬುದು ಸ್ಪಷ್ಟವಾಗಿದೆ; ಸುಮಾರು 1550 ರಲ್ಲಿ ಇದ್ದಿರಬಹುದು. ಈತನು ಅಂಡೆ ಕುರುಬಜಾತಿಯವನೆಂದೂ ವ್ಯಾಸರಾಯನ (ಸು. 1525) ಸೇವೆಯನ್ನು ಮಾಡಿ ಜ್ಞಾನಿಯಾದನೆಂದೂ ಕೆಲವರು ಹೇಳುತ್ತಾರೆ.

ಇವನ ಗ್ರಂಥಗಳಲ್ಲಿ

1. ಮೋಹನತರಂಗಿಣಿ

ಇದು ಸಾಂಗತ್ಯದಲ್ಲಿ ಬರೆದಿದೆ; ಸಂಧಿ 42, ಪದ್ಯ 2705. ಇದಕ್ಕೆ ಕೃಷ್ಣಚರಿತೆ ಎಂಬ ಹೆಸರೂ ಉಂಟು. ಇದರಲ್ಲಿ ಮನ್ಮಥದಹನ, ಕಾಮೋತ್ಪತ್ತಿ, ಶಂಬರಾಸುರವಧೆ, ಅನಿರುದ್ಧನ ಲೀಲೆ, ಬಾಣಾಸುರವಿಜಯ ಮುಂತಾದ ವಿಷಯಗಳು ಹೇಳಿವೆ. ಈ ಗ್ರಂಥದ ಉತ್ಕೃಷ್ಟತೆಯನ್ನು ಕವಿ ಈ ಪದ್ಯಗಳಲ್ಲಿ ಹೇಳಿದ್ದಾನೆ—

ರಸಿಕರ ಕರ್ಣಯುಗ್ಮವ ಪೊಕ್ಕು ಮುದದಿ ಹೃ | ದ್ವಿಸಜವನಲರಿಚಿ ಮೈಗೆ |
ಎಸೆವ ಪುಳಕದೊಸಗೆಯನಿತ್ತು ಶಿರವ ತೂ | ಗಿಸುವುದೀವಚನಾರಚನ ||
ಹರಿಶರಣರ ಪೆರ್ಚು ಬುಧಜನರಿಗೆ ಮೆಚ್ಚು | ದುರಿತಾಟವಿಗೆ ಕಾಳ್ಗಿಚ್ಚು |
ವಿರಹಿಗಳಿಗೆ ಮಚ್ಚು ವೀರರ್ಗೆ ಪುಚ್ಚು ಕೇ | ಳ್ವರಿಗಿದು ತನಿಬೆಲ್ಲದಚ್ಚು ||

ಗ್ರಂಥಾವತಾರದಲ್ಲಿ ರಾಮಾನುಜಸ್ತುತಿಯೂ, ತಾತಾಚಾರ್ಯಸ್ತುತಿಯೂ ಇವೆ. ಬಳಿಕ ಕವಿ ಶಿವ, ಬ್ರಹ್ಮ, ಕಾಗಿನೆಲೆಯರಂಗ, ಕೃಷ್ಣ, ಲಕ್ಷ್ಮಿ, ಕಾಶೀವಿಶ್ವನಾಥ, ಪಾರ್ವತಿ, ಸರಸ್ವತಿ, ಗಣೇಶ, ಆಂಜನೇಯ, ಗರುಡ, ಆದಿಶೇಷ, ಅಷ್ಟದಿಕ್ಪಾಲಕಮನುಮುನಿಜನರು ಇವರುಗಳನ್ನು ಸ್ತುತಿಸಿ ಅನಂತರ ಬಲಿಪ್ರಹ್ಲಾದನಾರದವಿಭೀಷಣಧ್ರುವಪಾರ್ಥವಿದುರಾಕ್ರೂರಭೀಷ್ಮಶುಕಶೌನಕಪುಂಡರೀಕಾದ್ಯರನ್ನೂ ಸ್ಮರಿಸಿದ್ದಾನೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ದ್ವಾರಕೆ

ದಂಡ ಸನ್ಯಾಸಿವರ್ಗದಲುಂಟು ಪುನರಪಿ | ದಂಡ ಗೋಪಾಲರಲುಂಟು |
ದಂಡ ಪುಂಶ್ರೀಕ್ಷುವಾಟಿಯಲುಂಟು ಮಿಕ್ಕಿನ | ದಂಡ ದೇಶಂಗಳಲಿಲ್ಲ ||

ಸೂರ್ಯಾಸ್ತ

ಅಬ್ಬುಟ್ಟೆ ಖಳರ ಖಂಡಿಸಿ ರಕುತವ ಕೆಂ| ದೊಬ್ಬೆಯೊಳು ತೊಳೆದು ಚಕ್ರವನು

ಒಳಯೊಳು ಕೃಷ್ಣ ಬೈಚಿಡುವಂತೆ ಪಡುವೆಟ್ಟ|ಮುಳಯೊಳು ರವಿ ಮುಳುಗಿದನು||

**ಹಿಮವತ್ಪರ್ವತ**

ಜಡರಾವಣನಿಂದ ಲಘುವಾದುದಲ್ಲ ಪೆ | ಗ್ಗಡೆಗೋಲಾಗಿರ್ದುದಲ್ಲ |
ಮೃಡಕಾಮುಕವಾದುದಲ್ಲವೆಂದೆನೆ ರಘು | ವಡೆದಿರ್ದುದಾಕುಳಿರ್ವೆಟ್ಟ ||

**ಬಾಣನ ಶಿವಪೂಜೆ**

ಪಡೆದ ತಾಯಿಲ್ಲ ತಾಯುಳ್ಳರೆ ತಲೆ ಪೀಗೆ | ಜಡೆಗಟ್ಟಿಕೊಂಡು ಮಾಸಿಹುದೇ ||
ಮಡದಿಯರಿಲ್ಲ ಮಂಡೆಯು ಸಿಕ್ಕ ನೋಡುವ| ರೊಡೆಯ ಕೋ ಎನುತ ನೀರೆಳೆದ||

## 2. ರಾಮಧಾನ್ಯಚರಿತ್ರೆ

ಇದು ಭಾಮಿನೀಷಟ್ಪದಿಯಲ್ಲಿ ಬರೆದಿದೆ; ಪದ್ಯ 156. ಇದರಲ್ಲಿ ಕವಿ ರಾಮಧಾನ್ಯದ ಎಂದರೆ ರಾಗಿಯ ಉತ್ಕೃಷ್ಟತೆಯನ್ನು ಬಹಳ ಚಮತ್ಕಾರವಾಗಿ ನಿರೂಪಿಸಿದ್ದಾನೆ. ಈ ಧಾನ್ಯಕ್ಕೆ ನರೆದಲೆಗ ಎಂಬ ಹೆಸರೆಂದೂ ಇದಕ್ಕೆ ರಾಮದೇವರು ರಾಘವ ಎಂಬ ತಮ್ಮ ಹೆಸರನ್ನು ಇಟ್ಟುದರಿಂದ ರಾಗಿ ಎಂಬ ಹೆಸರು ಪ್ರಸಿದ್ಧಿಗೆ ಬಂದಿತೆಂದೂ ಈ ಗ್ರಂಥದಿಂದ ತಿಳಿಯುತ್ತದೆ.

ಕಥಾಸಾರ—ಶಾಂಡಿಲ್ಯಮುನಿ ಯುಧಿಷ್ಠಿರನಿಗೆ ರಾಮಕಥೆಯನ್ನು ಹೇಳುತ್ತಾನೆ. ರಾವಣವಧಾನಂತರ ಶ್ರೀರಾಮನು ಋಷಿಗಳ ಆಶ್ರಮಕ್ಕೆ ಬಂದು ಅವರು ಕೊಟ್ಟ ಭಕ್ಷ್ಯಗಳ ರುಚಿಯನ್ನು ನೋಡಿ ಅವರು ಉಪಯೋಗಿಸಿದ ಧಾನ್ಯಗಳನ್ನು ತರಿಸುವಂತೆ ಹೇಳಲು, ನರೆದಲೆಗ, ನೆಲ್ಲು, ಹಾರಕ, ಬರಗು, ಜೋಳ, ಕಂಬು, ಸಾಮೆ, ನವಣೆ, ಗೋಧಿ ಈ ನವಧಾನ್ಯಗಳನ್ನು ತಂದು ಸುರಿದರು. ಇವುಗಳಲ್ಲಿ ಆವುದು ಶ್ರೇಷ್ಠವೆಂದು ಕೇಳಲು ಒಬ್ಬೊಬ್ಬರು ಒಂದೊಂದನ್ನು ಹೊಗಳುತ್ತಾರೆ. ಆಗ ನರೆದಲೆಗನಿಗೂ ವ್ರೀಹಿಗೂ ವಾಗ್ವಾದವಾಗುತ್ತದೆ. ಶ್ರೀರಾಮನು ಅಯೋಧ್ಯೆಯಲ್ಲಿ ದೇವತೆಗಳನ್ನು ಕರೆಯಿಸಿ ಇವುಗಳ ವಿಚಾರಣೆಯನ್ನು ಮಾಡುವಂತೆ ಹೇಳಿ ಎರಡನ್ನೂ 6 ತಿಂಗಳು ಸೆರೆಯಲ್ಲಿಡಿಸಿ ಹೊರಟುಹೋದನು. ಬಳಿಕ ಗೌತಮನು ಅವುಗಳನ್ನು ಕರೆದುಕೊಂಡು ರಾಮಾಸ್ಥಾನಕ್ಕೆ ಹೋಗಲು ಇಂದ್ರನು ವಿಮರ್ಶೆಮಾಡಿ ನರೆದಲೆಗ ಸಾರಹೃದಯವೆಂದೂ ವ್ರೀಹಿ ನಿಸ್ಸಾರವೆಂದೂ ಹೇಳಿದನು. ಆಗ ಎಲ್ಲರೂ ನರೆದಲೆಗನಿಗೆ ಬಿರುದುಗಳನ್ನು ಕೊಟ್ಟರು. ಶ್ರೀರಾಮನು ಅದನ್ನು ಕರೆದು ರಾಘವ ಎಂಬ ತನ್ನ ಹೆಸರನ್ನು ಕೊಡಲು ವ್ರೀಹಿ ನಾಚಿಕೊಂಡು ಶಿರವ ಬಾಗಿಸಿತು.

ಗ್ರಂಥಾವತಾರದಲ್ಲಿ ಚೆನ್ನಿಗರಾಯನ ಸ್ತುತಿ ಇದೆ. ಈ ಗ್ರಂಥದಿಂದ ನರೆನಲೆಗನಿಗೂ ವ್ರೀಹಿಗೂ ನಡೆದ ವಾಗ್ವಾದರೂಪವಾದ ಕೆಲವು ಪದ್ಯಗಳನ್ನು ತೆಗೆದುಬರೆಯುತ್ತೇವೆ—

ವ್ರೀಹಿಯ ಮಾತು

ಕ್ಷಿತಿಯಮರರುಪನಯನದಲಿ ಸು | ವ್ರತಸುಭೋಜನಗಳಲಿ ಮಂತ್ರಾ |
ಕ್ಷತೆಗಳಲಿ ಶುಭಶೋಭನದಲಾರತಿಯ ಬೆಳಗುವಲಿ ||
ಕ್ರತುಗಳೆಡೆಯೊಳಗರಮನೆಗಳಲಿ | ಪ್ರತಿದಿನವು ರಂಜಿಸುತ ದೇವರಿ |
ಗತಿಶಯದ ನೈವೇದ್ಯವಾಗಿಹೆನೆಂದನಾವ್ರಿಹಿಗ ||
ಜನಪರಿಗೆ ಶಿಶುಗಳಿಗೆ ಬಾಂಧವ | ಜನರೆಡೆಗೆ ಬ್ರಾಹ್ಮರ ಸಮಾರಾ |
ಧನೆಗೆ ವಿದ್ಯಾರಂಭಕಲಿಸುವ ಸಕಲಭೂಸುರರ ||
ಮನೆಗಳಲಿ ಹರಿದಿವಸದಾವಾ | ಸನಗಳಲಿ ತಾ ಯೋಗ್ಯನಹುದೆಂ |
ದೆನಿಸಿಕೊಂಬೆನು ನೀನಯೋಗ್ಯನು ಭ್ರಷ್ಟ ಕೊಲಗೆಂದ ||
ಹೊಸಮನೆಯ ಪುಣ್ಯಾರ್ಜನೆಗೆ . | ... ಹಸುಮಕ್ಕಳಿಗೆ ಸೇಸೆಗೆ |
ವಸುಮತೀಶರ ಗರುಡಿಯಲಿ ಶಸ್ತ್ರಾಸ್ತ್ರದರ್ಶನೆಗೆ ||
ಎಸೆವ ವಿಪ್ರರ ಫಾಲದಲಿ ರಂ | ಜಿಸುತ ಗಂಧಾಕ್ಷತೆಯಹೆನು ಭಾ |
ವಿಸಲು ಲೋಕದೊಳಾರು ಸರಿ ತನಗೆಂದನಾವ್ರಿಹಿಗ ||

ನರೆದಲೆಗನ ಮಾತು

ಸತ್ವಹೀನರ ಬಡವರನು ಕ | ಣ್ಣೆತ್ತಿ ನೋಡೆ ಧನಾಢ್ಯರನು ಬೆಂ |
ಬತ್ತಿ ನಡೆವೆಯುಪೇಕ್ಷೆ ನಿನ್ನನು ಪೇಳಲೇನಡನು ||
ಹೆತ್ತ ಬಾಣತಿಯರಿಗೆ ರೋಗಿಗೆ | ಪಥ್ಯಪಾನದಿ ಹೆಣದ ಬಾಯಿಗೆ |
ತುತ್ತು ನೀನಹೆ ನಿನ್ನ ಜನ್ಮ ನಿರರ್ಥಕರವೆಂದ ||
ಮುಟಿದೆಗೆದು ಬೆಳೆಯಡಗಿ ಕ್ಷಾಮದ | ವಿಳಯಕಾಲದೊಳನ್ನವಿಲ್ಲದೆ |
ಯಳಿವ ಪ್ರಾಣಿಗಳಾದರಿಸಿ ಸಲಹುವೆನು ಜಗವಱಿಯೆ ||
ಎಲವೊ ನೀನೆಲ್ಲಿಹೆಯೊ ನಿನ್ನಯ | ಬಳಗವದು ತಾನೆಲ್ಲಿಹುದೊ ಈ |
ಹಲವುಧಾನ್ಯಗಳೆನಗೆ ಸರಿಯಲ್ಲೆಂದ ನರೆದಲೆಗ ||
ಸತ್ತವರ ಪ್ರತಿಬಿಂಬರೂಪನು | ವಿಸ್ತರಿಸಿ ಪಿತೃನಾಮಗಳ ನಿನ |
ಗಿತ್ತು ಮೂವರ ಪೆಸರಿನಲಿ ಕರೆಕರೆದು ದರ್ಭೆಯಲಿ ||

ನೆತ್ತಿನೆತ್ತಿಯ ಬಡಿದು ಕಡೆಯಲಿ | ತುತ್ತನಿಡುವರು ಶಿಶುಗಳಿಗೆ ನೀ |
ನೆತ್ತಿದೆಯಲಾ ತನುವ ಸುಡಬೇಕೆಂದ ನರೆದಲೆಗ ||

### 3 ನಳಚರಿತ್ರೆ

ಇದು ಭಾಮಿನೀಷಟ್ಪದಿಯಲ್ಲಿ ಬರೆದಿದೆ; ಸಂಧಿ 9, ಪದ್ಯ 481. ಯದ್ಯಪಿ ಈ ಗ್ರಂಥದಲ್ಲಿ ಕನಕದಾಸನ ಹೆಸರಿಲ್ಲವಾದರೂ, ಆತನ ಇತರ ಗ್ರಂಥಗಳಂತೆ ಆರಂಭದಲ್ಲಿ ಚೆನ್ನಿಗರಾಯಸ್ತುತಿಯೂ ಚೆನ್ನಿಗರಾಯನ ಅಂಕಿತವೂ ಇರುವುದರಿಂದ ತತ್ಕೃತವೆಂದೇ ತೋರುತ್ತದೆ. ಹಾಗೆಯೇ ಜನಗಳಲ್ಲಿ ಪ್ರತೀತಿಯೂ ಇದೆ. ರೋಮಶಮುನಿ ಧರ್ಮರಾಯನಿಗೆ ಹೇಳಿದ ನಳ ಮಹಾರಾಯನ ಚರಿತೆಯನ್ನು ಕವಿ ಕನ್ನಡಿಸಿದಂತೆ ಹೇಳುತ್ತಾನೆ. ಗ್ರಂಥಾವತಾರದಲ್ಲಿ ಚೆನ್ನಿಗರಾಯ, ಗಣೇಶ, ಸರಸ್ವತಿ ಇವರುಗಳ ಸ್ತುತಿ ಇದೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ---

#### ದಮಯಂತಿ

ನುಡಿಗೆ ಶುಕಪಿಕ ನಲಿಯೆ ಮಿಗೆ ಸೆಳೆ | ನಡು ಒಳುಕೆ ವೃತ್ತಸ್ತನಕೆ ಸೋ |
ರ್ಮುಡಿಯ ಭಾರಕೆ ಕೊರಳು ಕೊಂಕಲು ಮೆಲ್ಲಡಿಯನಿಡುತ |
ಕುಡಿತೆಗಂಗಳ ನೋಟ ಕಾಮುಗ | ಲೊಡೆದು ಮಿಂಚುವ ಮಿಂಚಿನಂದದಿ |
ನಡಗರದಿ ಬರುತಿರ್ದಳಂಗನೆ ಹೊಲಬಿನ ಬೀದಿಯಲಿ ||

#### ಕಾರ್ಕೋಟಕನು ಕಚ್ಚಿದಮೇಲೆ ನಳನ ರೂಪ.

ಡೊಡ್ಡಹೊಟ್ಟೆಯ ಕೂನುಬೆನ್ನಿನ | ಅಡ್ಡಮೋರೆಯ ಗಂಟುಮೂಗಿನ |
ಮೊಂಡುಕೈಕಾಲುಗಳ ಉದುರಿದ ರೋಮಮೀಸೆಗಳ ||
ಜಿಡ್ಡುದೇಹದ ಗುಜ್ಜುಗೊರಲಿನ | ಗಿಡ್ಡುರೂಪಿನ ಹಲಿಕುಗಡ್ಡದ |
ಹೆಡ್ಡನಾದ ಕುರೂಪಿತನದಲಿ ನೃಪತಿ ವಿಷದಿಂದ ||

#### ಸ್ತ್ರೀಗರ್ಹಣ

ಕಪಟವನು ಬಿಡರಾತ್ಮಬುದ್ಧಿಯೊ | ಳುಪಮೆಗಾಣದೆ ನುಡಿದು ಹೋಳಿವರು |
ಚಪಲಚಿತ್ತದಿ ಮನವ ವಂಚಿಸಿ ಮಾತನಾಡುವರು ||
ಗುಪಿತಕಳವಡರಾಪ್ತರೊಡವೆಯ | ನಪಹರಿಸಿ ಸಾಹಸದಿ ಮೆರೆವರು |
ನಿಪುಣೆಯರಿಗಿದು ಸಹಜಗುಣವಮರೇಂದ್ರ ಕೇಳೆಂದ ||

ಸಾವಿಗೆಣೆಸರು ಮನದಿ ಸತ್ಯವ | ಭಾವಿಸರು ಹುಸಿಯೊಲುಮೆದೋಱುವ |
ರಾವಪರಿಯಲಿ ಹೃದಯಗೊಡರನೃತಗಳನಾಡುವರು ||
ವಾವಿವರ್ತನವಿಲ್ಲ ಸತ್ಯಕೆ | ಪಾವಕನ ಮುಟ್ಟುವರು ಸತಿಯರ |
ಸಾವಪರಿಯಲಿ ನಂಬಬಹುದೈಯೆನುತ ಹೊಱವಂಟ ||

## 4 ಹರಿಭಕ್ತಿಸಾರ

ಇದು ಭಾಮಿನೀಷಟ್ಪದಿಯಲ್ಲಿ ಬರೆದಿದೆ; ಪದ್ಯ 110. ಪ್ರತಿಪದ್ಯವೂ 'ರಕ್ಷಿಸು ನಮ್ಮನನವರತ' ಎಂದು ಮುಗಿಯುತ್ತದೆ. ಇದು ನೀತಿ, ಭಕ್ತಿ, ವೈರಾಗ್ಯ ಇವುಗಳನ್ನು ಬೋಧಿಸುವ ಗ್ರಂಥ. ಬಾಲ್ಯಪಾಠಕ್ಕೆ ಇದನ್ನು ಉಪಯೋಗಿಸುವ ವಾಡಿಕೆ ನಮ್ಮಲ್ಲಿ ಪೂರ್ವದಿಂದಲೂ ಇದೆ. ಈ ಗ್ರಂಥವನ್ನು ಶ್ರೀಪುರದ ಆದಿಕೇಶವಮೂರ್ತಿಗೆ ಅಂಕಿತವಾಗಿ ಕವಿ ಬರೆವಿದ್ದಾನೆ. ಗ್ರಂಥಾವತಾರದಲ್ಲಿ ಸುರಪುರನಿಲಯ ಚೆನ್ನಿಗರಾಯನ ಸ್ತುತಿ ಇದೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ—

ದೀನ ನಾನು ಸಮಸ್ತಲೋಕಕೆ | ದಾನಿ ನೀನು ವಿಚಾರಿಸಲು ಮತಿ |
ಹೀನ ನಾನು ಮಹಾಮಹಿಮ ಕೈವಲ್ಯಪತಿ ನೀನು ||
ಏನ ಬಲ್ಲೆನು ನಾನು ನೆಱೆ ಸು| ಜ್ಞಾನಮೂರುತಿ ನೀನು ನಿನ್ನ ಸ |
ಮಾನರುಂಟೇ ದೇವ ರಕ್ಷಿಸು ನಮ್ಮನನವರತ ||
ಹೇಱಲೆನ್ನಳವಲ್ಲವೀಯಮ | ನಾಳುಗಳು ನೆಱೆಯುಂಗದೇಶವ |
ಥಾಳಿಮಾಡುವರಕಟಕಟ ಸೆಱೆಸೂಱೆಗಳ ಪಿಡಿದು ||
ಕಾಟಮಾಡುವರಿನ್ನು ತನುವಿದು | ಬಾಟಲರಿಯದು ಕೋಟೆಯವರಿಗೆ |
ಕೋಳುಹೋಗದಮುನ್ನ ರಕ್ಷಿಸು ನಮ್ಮನನವರತ ||
ಎತ್ತಿದೆನು ನಾನಾಶರೀರವ | ಹೊತ್ತುಹೊತ್ತಲಸಿದೆನು ಸಲೆ ಬೇ |
ಸತ್ತು ನಿನ್ನಯ ಪದವ ಕಾಣದೆ ತೊಟಲಿ ಬಟಲಿದೆನು ||
ಸತ್ತು ಹುಟ್ಟುವ ಹುಟ್ಟಿ ಹಿಂಗುವ | ಸುತ್ತುತೊಡಕನು ಮಾಣಿಸಲೆ ಪುರು |
ಷೋತ್ತಮನೆ ಮನವೊಲಿದು ರಕ್ಷಿಸು ನಮ್ಮನನವರತ ||
ಎಂಜಲೆಂಜಲು ಎಂಬರಾನುಡಿ | ಎಂಜಲಲ್ಲವೆ ವಾರಿ ಜಲಚರ |
ದೆಂಜಲಲ್ಲವೆ ಹಾಲು ಕಱುವಿನ ಎಂಜಲೆನಿಸಿರದೇ ||
ಎಂಜಲಿಲ್ಲಿಯದೆಲ್ಲಿಯುಂ ಪರ | ರೆಂಜಲಲ್ಲದೆ ಬೇಱೆ ಭಾವಿಸ |

ಲೆಂಜಲುಂಟೇ ದೇವ ರಕ್ಷಿಸು ನಮ್ಮನನವರತ ||

5 ಹಾಡುಗಳು

ಈತನ ಹಾಡುಗಳಲ್ಲಿ ಒಂದೆರಡನ್ನು ತೆಗೆದು ಬರೆಯುತ್ತೇವೆ—

ಪಲ್ಲವಿ|| ನಾರಾಯಣ ನಿಮ್ಮ ನಾಮಂಗಳಿರುತಿರೆ|ಬೇಱೊಂದುನಾಮವಿನ್ನೇಕಯ್ಯ||
ನೆಟ್ಟನೆ ದಾರಿಯು ಬಟ್ಟೆಯೊಳಿರುತಿರೆ । ಬೆಟ್ಟವ ಬಳಸುವುದೇಕಯ್ಯ ।
ಅಷ್ಟೈಶ್ವರ್ಯವು ಅಮೃತಾನ್ನವಿರುತಿರೆ । ಬಿಟ್ಟಿಕೂಱನೆ ತಿನಲೇಕಯ್ಯ ||1||
ಪರುಸದ ಪಾಳಂಗಳಿರುತಿರೆ ಬೀದಿಯ । ಜರಗನು ತೊಳೆಯಲಿನ್ನೇಕಯ್ಯ
ಹರಿವಾಣದಲ್ಲಿ ಅಮೃತಾನ್ನವಿರುತಿರೆ । ತಿರುಪಗೂಳ ತಿನಲೇಕಯ್ಯ ||2||
ಬೆಲ್ಲವು ಕರದೊಳಗಿರುತಿರೆ ಕಾಡು । ಗಲ್ಲನು ಕಡಿಯಲಿನ್ನೇಕಯ್ಯ ।
ಬಲ್ಲಿದ ಬಿಡದಾದಿಕೇಶವನಿರುತಿರೆ । ಎಲ್ಲಗೈವದ ಹಂಬಲೇಕಯ್ಯ ||3||

ಪಲ್ಲವಿ|| ನಾನು ನೀನು ಎನ್ನದಿರೊ ಹೀನಮಾನವ ನಿನ್ನ ।
ಸ್ಥಾನಸ್ಥಾನದಲ್ಲಿ ನೀನು ತಿಳಿದು ನೋಡೆಲೋ ||
ಅನ್ನದಿಂದಬಂದ ಕಾಮ ನಿನ್ನದೇನೆಲೋ|ಕರ್ಣದಲ್ಲಿಪೋಪ ಪ್ರಾಣ ನಿನ್ನದೇನೆಲೋ||
ಹೊನ್ನು ಹೆಣ್ಣು ಮಣ್ಣು ಮೂಱು ನಿನ್ನದೇನೆಲೋ | ಬಣ್ಣಗೆಟ್ಟು ಬಾಳ್ವ ಜೀವ ನಿನ್ನದೇನೆಲೋ ||2||
ಕೀಲುಜಿಗಿದ ನರದ ಬೊಂಬೆ ನಿನ್ನದೇನೆಲೋ | ಬಾಲ ಆದಿಕೇಶವರಾಯನ ಭಕ್ತನಾಗೆಲೋ ||3||

---

## ಸಾಳ್ವ. ಸು. 1550

ಈತನು ಭಾರತ, ರಸರತ್ನಾಕರ, ವೈದ್ಯಸಾಂಗತ್ಯ ಇವುಗಳನ್ನು ಬರೆದಿದ್ದಾನೆ. ಶಾರದಾವಿಲಾಸವೂ ಏತತ್ಕೃತವೆಂದೇ ತೋರುತ್ತದೆ.

ಇವನು ಜೈನಕವಿ; ಇವನ ತಂದೆ ಧರ್ಮಚಂದ್ರ,[1] ಗುರು ದೇಶಿಗಣದ ವಿಜಯಕೀರ್ತಿಯ ಮಗ ಶ್ರುತಕೀರ್ತಿ. ಇವನ ಭಾರತದಿಂದ ಇವನ ಪೋಷಕನ ವಿಷಯವಾಗಿ ಈ ಅಂಶಗಳು ತಿಳಿಯುತ್ತವೆ—

ತೌಳವಹೈವಕೊಂಕಣದೇಶದಧಿನಾಥನೂ ಲಕ್ಷ್ಮಿಯ ಪುತ್ರನೂ ಅಭಿನವನಿಂಬನೂ ಆದ ಮಹಾಮಂಡಲೇಶ್ವರಭೈರವರಾಯನು ನಗಿರನಗರದಲ್ಲಿ ಆಳುತ್ತಿದ್ದನು. ಇವನ ಮಹಿಷಿ ನಾಗಲಾಂಬಿಕೆ, ಮಗ ಸಂಗನೃಪ. ಭೈರವರಾಜನ ಕಾಲವಾದ

ಮೇಲೆ ಅವನ ತಮ್ಮ ಚಿಕ್ಕ ಭೈರವರಾಯನು ಆಳಿದನು. ಇವನ ಚಿಕ್ಕಮ್ಮನಾದ ಶಂಕರಾಂಬಿಕೆಗೂ ಚಂದ್ರವಂಶದ ಬೈಯನೃಪನಿಗೂ ಮಲಿದೇವಿ ಎಂಬ ಮಗಳೂ ವಸುದಾನಮೇರು ಎಂಬ ಮಗನೂ ಹುಟ್ಟಿದರು. ವಸುದಾನಮೇರು ಸಾಳ್ವಮಲ್ಲ ಎಂಬ ಹೆಸರಿನಿಂದ ಆಳಿದನು. ಇವನಿಗೆ ಕವಿಸರೋವರರಾಜಹಂಸ, ಜಿನಧರ್ಮಧ್ವಜ, ತ್ರಿಭುವನಕಾರಿತ್ರಿಣಯನ, ಸಂಯಕ್ತ್ವಚೂಡಾಮಣಿ, ಜಿನದೇವರಥಯಾತ್ರಾಪ್ರಭಾವಕ ಎಂಬ ಬಿರುದುಗಳಿದ್ದುವು. ಇವನೇ ಕವಿಸಾಳ್ವನ ಪೋಷಕನು. ಇವನಲ್ಲಿ ಸಾಳ್ವನು ಪಟ್ಟದ ಕವಿಯಾಗಿದ್ದನು. ಸಾಳ್ವಮಲ್ಲನ ಸಹೋದರಿಯಾದ ಮಲಿದೇವಿಗೂ ಮುಕ್ಕಣ್ಣಕಾದಂಬಕನೆಂಬ ಬಿರುದುಳ್ಳ ಶಾಂತದಂಡಾಧೀಶನಿಗೂ ಹುಟ್ಟಿದ ಸಾಳ್ವದೇವನು ಬಳಿಕ ಪಟ್ಟಕ್ಕೆ ಬಂದನು. ಸಾಳ್ವಮಲ್ಲ, ಸಾಳ್ವದೇವ ಇವರಿಬ್ಬರ ಇಷ್ಟಾನುಸಾರವಾಗಿಯೂ ಕವಿ ಭಾರತವನ್ನು ಭಾಮಿನೀಷಟ್ಪದಿಯಲ್ಲಿ ಬರೆದನು.

ಸುಮಾರು 1560 ರಲ್ಲಿ ಹುಟ್ಟಿದ ಸಾಗರದ 55ನೆಯ ಶಾಸನದಲ್ಲಿ ಮೇಲೆ ಹೇಳಿದ ದೊರೆಗಳ ವಿಷಯವು ಹೇಳಿದೆ. ಆದುದರಿಂದ ಕವಿಯ ಕಾಲವು 16ನೆಯ ಶತಮಾನದ ಮಧ್ಯಭಾಗವಾಗಿರಬಹುದೆಂದು ತೋರುತ್ತದೆ.[1]

ಇವನಿಗೆ ಸಾಜಕವಿ, ಕರ್ಣಾಟಲಕ್ಷಣದೋಜ ಎಂಬ ಬಿರುದುಗಳು ಇದ್ದಂತೆ ತೋರುತ್ತದೆ. ಪೂರ್ವಕವಿಗಳಲ್ಲಿ ರುದ್ರಭಟ್ಟ, ನಾಗವರ್ಮ, ಕವಿಕಾಮ ಇವರುಗಳನ್ನು ಸ್ಮರಿಸಿದ್ದಾನೆ.

ಇವನ ಗ್ರಂಥಗಳಲ್ಲಿ

### 1 ಭಾರತ

ಇದು ಸಾಳ್ವಭಾರತ ಎಂದು ಪ್ರಸಿದ್ಧವಾಗಿದೆ; ಭಾಮಿನೀಷಟ್ಪದಿಯಲ್ಲಿ ಬರೆದಿದೆ; ಪರ್ವಗಳು 16[2]. ಈ ಗ್ರಂಥಕ್ಕೆ ನೇಮಿಶ್ವರಚರಿತೆ

---

1. ಮೈಸೂರು ಶಾಸನದ ಇಲಾಖೆಯ 1916 ನೆಯ ವರ್ಷದ ರಿಪೋರ್ಟಿನ 69 ನೆಯ ಪುಟದಲ್ಲಿ 1522ರಲ್ಲಿ ಇದ್ದ ಒಬ್ಬ ತೌಳವದೇಶದ ದೇವರಾಯನ ಹೆಸರು ಹೇಳಿದೆ.

2. (1) ಆದಿಪರ್ವ, (2) ಅನ್ವಯಪರ್ವ, (3) ವಸುದೇವಪರ್ವ, (4) ಕೃಷ್ಣೋದಯಪರ್ವ, (5) ಕಂಸಮರ್ದನಪರ್ವ, (6) ಅಭ್ಯುದಯಪರ್ವ: ಈ ಪರ್ವವು ಉದ್ದಂಡಷಟ್ಪದಿಯಲ್ಲಿ ಬರೆದಿದೆ, (7) ಪ್ರದ್ಯುಮ್ನಪರ್ವ, (8) ಇಂದ್ರಪರ್ವ, (9) ಕಲ್ಯಾಣಪರ್ವ, (10) ಆರಣ್ಯಪರ್ವ, (11) ಉದ್ಯೋಗಪರ್ವ, (12) ಯುದ್ಧಪರ್ವ, (13) ಚಕ್ರಪರ್ವ, (14) ದೀಕ್ಷಾಪರ್ವ, (15) ಸಭಾಪರ್ವ, (16) ನಿರ್ವಾಣಪರ್ವ.

ಎಂಬ ಹೆಸರೂ ಉಂಟು. ಇದರಲ್ಲಿ ಹರಿವಂಶ, ಕುರುವಂಶ ಇವುಗಳ ಚರಿತ್ರವು ಹೇಳಿದೆ. ದೋಷಯುಕ್ತವಾದ ಇತರಭಾರತಕಥೆಯನ್ನು ಕೇಳದೆ ಈ ಜಿನಪಾವನಚರಿತ್ರವನ್ನು ಕೇಳಬೇಕೆಂದು ಕವಿ ಈ ಪದ್ಯದಲ್ಲಿ ಹೇಳುತ್ತಾನೆ—

ಕೊಲಿಸಿದಾತನೆ ದೇವ ಕೊಂದಗ್ಗಳಿಕೆಯಿಂದವೆ ಪುಣ್ಯಪುರುಷರು ।
ಪಲವು ಮಾತೇನೈವರೊಡಹುಟ್ಟಿದರು ಸನ್ನುತರು ॥
ಲಲನೆಯೊರ್ವಳನಾಳ್ದರೆಂಬೀಪೊಲೆನುಡಿಗೆ ಕಿವಿಗುಡದೆ ಸಜ್ಜನ ।
ರೊಲಿದು ಚಿತ್ತೈಸುವುದು ಜಿನಪಾವನಚರಿತ್ರವನು ॥

ಈ ಗ್ರಂಥದ ಉತ್ಕೃಷ್ಟತೆಯನ್ನು—

ನವರಸದ ನೆಲೆ ಮಧುರಭಾವದ । ತವದಲಂಕಾರಂಗಳಿಂದೊ ।
ಪ್ಪುವ ವಿಪುಲಲಲಿತಾಂಗವೃಗುಪದರಚನೆ ನೆಱೆ ವೆಱೆವ ॥
ವಿವಿಧಗುಣಗಣನಿಳಯ ಸೊಬಗಿನ । ಸವಿಯ ಸೈವೆಱೆಗಱೆವ ಮತ್ಕೃತಿ ।
ಯುವತಿ ಚದುರರ ಮನವನಿರ್ಕುಳಿಗೊಳ್ವುದಚ್ಚರಿಯೇ ॥

ಎಂಬ ಪದ್ಯದಲ್ಲಿ ಹೇಳಿ, ಇದು 'ಪಾಡುಗವಿತೆ' ಯಾದುದರಿಂದ ಇದರಲ್ಲಿ ಱಟಕುಳಪ್ರಾಸ, ಶಿಥಿಲತ್ವ ಮುಂತಾದ ಕೊರತೆಯನ್ನು ದೋಷವಾಗಿ ಭಾವಿಸಕೂಡದೆಂದು ಈಪದ್ಯದಲ್ಲಿ ಹೇಳಿದ್ದಾನೆ—

ಱಟಕುಳಕ್ಷಳಲತ್ವರೇಫ಼ೋ । ಜ್ವಲಱಕಾರಪ್ರಾಸಭೇದಂ ।
ಗಳ ಸ್ವರವ್ಯಂಜನವಿಭಕ್ತಿಸಮಾಸಶಿಥಿಲಗಳ ॥
ಪಱಿಯನೇನುಂ ಪಾಡುಗವಿತೆಗ । ಳೊಳು ವಿಚಾರಿಸಸಲ್ಲದೆಂಬ ।
ಗ್ಗಳದ ಪ್ರಱಿಗಬ್ಬಿಗರ ಪೇಱ್ಕೆಯತೆಱದಿ ವಿರಚಿಸಿದೆ ॥

ಗ್ರಂಥಾವತಾರದಲ್ಲಿ ನೇಮಿನಾಥಸ್ತುತಿ ಇದೆ. ಬಳಿಕ ಕವಿ ಸಿದ್ಧಾದಿಗಳು, ಗಣಧರರು, ಜಿನಧರ್ಮ, ಕೂಷ್ಮಾಂಡಿನಿ, ಸರ್ವಾಹ್ಣಯಕ್ಷ, ಸರಸ್ವತಿ, ಕೇವಲಿಗಳು ಅನುಬದ್ಧಕೇವಲಿಗಳು, ಶ್ರುತಕೇವಲಿಗಳು, ದಶಪೂರ್ವಧಾರಿಗಳು, ಏಕಾದಶಾಂಗಧಾರಿಗಳು, ಪ್ರಥಮಾಂಗಧಾರಿಗಳು ಇವರುಗಳನ್ನು ಸ್ಮರಿಸಿ ಅನಂತರ ಗೃಧ್ರಪಿಂಛನು ಮೊದಲುಗೊಂಡು ಪಾಲಕೀರ್ತಿ

ಯವರೆಗೆ ಗುರುಗಳನ್ನು ಸ್ತುತಿಸಿದ್ದಾನೆ.[1] ಈ ಗ್ರಂಥವನ್ನು ಅಭಯಸೂರಿಗಳ ಮಕ್ಕಳು 'ಆಗಮತ್ರಯವೇದಿ ಪ್ರತಿವಾದಿಗಜಕಂಠೀರವ' ಗುಮ್ಮಟಾರ್ಯರು ಅವಧಾರಿಸಿದರು ಎಂದು ಹೇಳುತ್ತಾನೆ.

ಇದರಿಂದ ಕೆಲವುಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ—

ವಸಂತ

ಏಱಿದುದು ತಂಬೆರಲು ಹಿಮ ಪೋಱಿ | ಮಾಱಿದುದು ಕಾಸಾರದೊಳು ಕಾ |
ಲೂಱಿದುವು ರಾಯಂಚೆ ಪದುಮಿನಿ ನಗೆಮೊಗದ ಮಧುವ ||
ತೂಱಿದುವು ಪರಪುಟ್ಟಗಳು ಸರ | ದೋಱಿದುವು ದರ್ಪಕಗೆ ದರ್ಪವು |
ಪೇಱಿದುದು ಜಾಱಿದುದು ಜಾತಿಯ ಪೂತ ಸೌಭಾಗ್ಯ ||
ಬಂದುವಾಮಾಮರನೆನುತ ನಲ | ವಿಂದ ರಾಗಿಸಿತಸುಕೆಯಸುಕೆಯ |
ದೊಂದುರಾಗಕೆ ಪುಳಕವಾಂತುದು ಸುರಯಿ ಸುರಯಿಗಳು ||
ಇಂದು ಪುಳಕವನಾಂತುವೆಂದೊಲ | ವಿಂದ ವಿಚಕಿಲವಲರ್ದುವೆನಲಾ |
ನಂದಮಂದಿರವಾಯ್ತು ನಂದನ ಕುಸುಮಸಮಯದಲಿ ||
ಗಿಳಿಗೆ ಭೋಜನಶಾಲೆ ಕೋಗಿಲೆ | ಗಳಿಗೆ ಜೇವಣಶಾಲೆ ಮಧುಪಾ |
ವಳಿಗೆ ಸನ್ಮಧುಪಾನಗೋಷ್ಠೀಶಾಲೆ ಮನಸಿಜಗೆ ||
ತೊಳಗುವಾಯುಧಶಾಲೆ ಮಂದಾ | ನಿಳಗೆ ನಾಟಕಶಾಲೆಯೆನೆ ಕಂ |
ಗೊಳಿಸಿದುದು ಮಧುಮಾಸದೋಲಗಶಾಲೆಯೆನೆ ಬನವು ||

ವರ್ಷಾಕಾಲ

ಮೀಱಿ ಮುಗಿಲಿದಿರೇಱೆ ಶಿಖಿ ಹರುಷವೇಱೆ ನನೆ |
ಯೋಱೆ ಕುಂದವ್ರಜಕೆ ಕಡದಲರ ಸಿರಿಯ ಸೊಂ |

---

1. ಗೃಧ್ರಪಿಂಛ, ಮಯೂರಪಿಂಛ, ಅರ್ಹದ್ಬಲಿ, ಪುಷ್ಪದಂತ, ಭೂತಬಲಿ, ಜಿನಚಂದ್ರ, ಕುಂಡಕುಂದಾಚಾರ್ಯ, ತತ್ವಾರ್ಥಸೂತ್ರಕಾರ ಉಮಾಸ್ವಾತಿ, ಸಮಂತಭದ್ರ, ಕವಿಪರಮೇಷ್ಠಿ, ಪೂಜ್ಯಪಾದ, ವೀರಸೇನ, ಜಿನಸೇನ, ನೇಮಿಚಂದ್ರ, ರಾಮಸೇನ, ಅಕಳಂಕದೇವ,, ಅನಂತವೀರ್ಯ, ವಿದ್ಯಾನಂದ, ಮಾಣಿಕ್ಯನಂದಿ, ಪ್ರಭೇಂದು, ರಾಮಚಂದ್ರ, ವಾಸವೇಂದ್ರ, ಗುಣಭದ್ರ, ಮಾಘನಂದಿ, ಚಾರುಕೀರ್ತಿ, ವಿಶಾಲಕೀರ್ತಿ, ವಿಜಯಕೀರ್ತಿಸುತಸ್ವಗುರು ಶ್ರುತಕೀರ್ತಿ, ಮಹಿಭೂಷಣ, ಪೋಲಾದಿದೇವ, ಮೇರುನಂದಿ, ಸಮಂತಭದ್ರ, ಪಾಲಕೀರ್ತಿ,

ಪೇೞೆ ರವಿರುಚಿ ತಣ್ಣಸೇೞೆ ಕೇತಕಿವನಂ ಸುೞಿಯೇೞೆ ಭಯವಂಜಿಗೆ ||
ಪೞೆ ಗೆಲವೆಣ್ಣಂಗಭವನ ಸಿಡುಡೋಳ್ವಲೆಯ |
ನೇೞೆ ವಿರಹಿವ್ರಾತಕಟಿಲೇೞೆ ಪೊಲನೆ ಪಸು |
ರೇೞೆ ಸುರಹೊನ್ನೆ ಮಲ್ಲಿಗೆ ಸುರಯಿ ಬೀತ ಸಿರಯೇೞೆ ಕಾರ್ಮುಕವೇೞುತ್ತೈ ||

## ರುಕ್ಮಿಣಿ

ಆಳಿ ತುಟಿಯದಂಭೋಜವೆಲರಲೆಯದೆಳವಳ್ಳಿ |
ಕಳಿ ನೆೞೆನ ಸಸಿಲೇಖೆ ಕೞಿಯದಿನಿವಣ್ಣಿನಿಸು |
ಬಳಸೆ ಕೈಗುತ್ತದಿನಿದಾರುವಾಸ್ವಾದಿಸದ ಸೊದೆಯ ತೀವಿದ ಪೊಂಗೊಡ||
ಪೊಳೆವ ಕೀಲಡೆಗೊಳಿಸದುರುಮಾಣಿಕಂ ವಿಂಧ |
ಗಳೆಯದೊಳ್ಮುತ್ತು ಮದನನ ಮೀಸಲೞಿಯದಿಂ |
ಬೆಳಸೆಸಿಸಿ ಸೊಗಯಿಸಳು ನವಯೌವನದ ಸೊಂಪುಸೆಂಪಿಸಿಂದಾಸುದತಿಯೈ ||
ಅವಳ ಮೊಗದೊಳು ಸಸಿಯನವಳ ಕಡೆಗಂಗಳೊಳು |
ನವಕುಸುಮಶರತತಿಯನವಳ ಪುರ್ವಿನೊಳೆಸ |
ಬ್ಬವಡಿಕ್ಸುಧನುವನವಳಳಕದೊಳ್ ಭ್ರಮರಸಂಕುಳವನವಳೊಳ್ನುಡಿಯೊಳು ||
ಸವಿವೀೞು ಗಿಳಿಪುವರಗಿಳಿಯನಾಜದುರಿನಿಂ |
ದವಳಿಂಚರದೊಳುಲಿವ ಕೋಗಿಲೆಯನಿರಿಸಿ ತಾ |
ನವಳಂಗದಲ್ಲಿ ನೆಲೆವನೆಗಟ್ಟೆ ಬಾಟಿಪನನುದಿನಂ ಕಂದರ್ಪನೈ ||

## ಶಿಶುಪಾಲಕೃತಕೃಷ್ಣನಿಂದೆ

ಶಿಶುವೆಂದು ಮೊಲೆಯೂಡಬಂದ ಪೂತನೆಯೊಡಲ |
ಬಿಸುನೆತ್ತರಂ ಪೀರ್ದ ಪಾತಕನೆ ಬಂದ ವಾ |
ಯಸದ ಕೊರಳೊತ್ತಿದೊಡೆ ಕತ್ತೆಯಂ ಪೊಯ್ದೊಡೈತಹ ಭಂಡಿಯನುಮುಱಿದೊಡೆ||
ಪೊಸಹಯವನೊಂದುಪೆಟ್ಟಿಂ ತಿವಿದು ಮಲ್ಲನು |
ಬ್ಬಸಗೊಳಿಸಿದೊಡೆ ಕಾಡ ಕೋಣನಂದದಲಿ ಸೊ |
ಕ್ಕಿಸಿಯ ಮುಳುಮತ್ತಿಗಳನೊಱಿಸಿದೊಡೆ ಸಂಗರಕೆ ವೀರನೇ ನೀನೆಂದನೈ ||

## ಬೇಡಿತಿಯರು

ಕಾರಿರುಳ ಕತ್ತಲೆಯ ತಿರುಳಿಂ | ವಾರಿರುಹಭವನೊಲಿದು ನಿರ್ಮಿಸಿ |
ನಾರಿಯರ ರೂಪುಗಳನಂಜನರಜದಿ ಪುಟವಿಟ್ಟು ||

ಕಾರ ಮಿಂಚುಮನವರ ಕಣ್ಣೊಳು । ಸೇರಿಸಿದನೆನೆ ಗಾಡಿಯುರು ಕಾಂ ।
ತಾರಚರಿಯುರು ಮೆಱೆದರಲ್ಲಿ ಪುಳಿಂದರೊಗ್ಗಿನಲಿ ॥

ದೇಹಾನಿತ್ಯತೆ

ಎನಿತು ಘನವಾದಡೆಯುಂ ತನುಗಪ । ಘನವೆಸರಸಿಟ್ಟ ಜನೆ ಸುಜನನು ।
ಜನಿತದೋಷದ ಗೊತ್ತು ಕುತ್ತದ ಬಿತ್ತು ಭಯದೊತ್ತು ॥

ನೆನೆಯಬಾರದ ಹೇಸಿಕೆಗೆ ತಾ । ಯ್ವನೆ ವಿಚಾರಿಸೆ ಜೀವಗದೆ ಸೆಱೆ ।
ವನೆಯದನೆ ಬಿಟ್ಟವನೆ ಸುಖಿ ನಿಜಜನಕ ಕೇಳೆಂದ ॥

2 ರಸರತ್ನಾಕರ

ಇದು ಮುಖ್ಯವಾಗಿ ರಸಪ್ರಕ್ರಿಯೆಯನ್ನು ಪ್ರತಿಪಾದಿಸುತ್ತದೆ; ಶೃಂಗಾರಪ್ರಪಂಚ, ರಸವಿವರಣ, ನಾಯಕನಾಯಿಕಾವಿವರಣ, ಭಾವಾಧಿಕರಣ ಎಂದು 4 ಆಶ್ವಾಸಗಳಾಗಿ ಭಾಗಿಸಲ್ಪಟ್ಟದೆ. ಪಂಪ, ರನ್ನ, ನೇಮಿಚಂದ್ರ ಮೊದಲಾದ ಕವಿಗಳ ಗ್ರಂಥಗಳಿಂದ ಪದ್ಯಗಳು ಉದಾಹರಿಸಲ್ಪಟ್ಟವೆ. ತಾನು ಅವಲಂಬಿಸಿದ ಪೂರ್ವಶಾಸ್ತ್ರಕಾರರನ್ನು ಕವಿ ಈ ಭಾಗಗಳಲ್ಲಿ ಹೇಳಿದ್ದಾನೆ—

ಆನಾರ್ಯರಿಂದೆ ತಿಳಿದಮ್ಮ । ತಾನಂದಿಯ ರುದ್ರಭಟ್ಟನಾತೆಱದಿಂ ವಿ ।
ದ್ಯಾನಾಥಹೇಮಚಂದ್ರರ । ಭೂನುತಮಾರ್ಗಾದಿಯಂದಮಂ ವಿರಚಿಸಿದೆಂ ॥

ಇಂತು ನಾಗವರ್ಮಕವಿಕಾವ್ಯಾದಿಗಳ ಮಾರ್ಗದಿಂ ರಸಭಾವಾದಿಗಳನೆಲ್ಲಾ ವಿದ್ವತ್ಸಭೆಗಮುಭಯಭಾಷೆಗಮಿಷ್ಟಮಪ್ಪಂತು ಕನ್ನಡಿಸಿದೆಂ.

ತನಗೆ ಹಿಂದೆ ಆರೂ ಹೀಗೆ ಕನ್ನಡದಲ್ಲಿ ವಿವರಿಸಿರಲಿಲ್ಲ ಎಂಬಂಶವನ್ನು ಈ ಪದ್ಯದಲ್ಲಿ ತಿಳಿಸುತ್ತಾನೆ—

ಇಂದುವರಮಾರುಮೀತೆಱ । ದಿಂದಂ ಕನ್ನಡದೊಳಾರ್ಯರಾ ಎಂಬಿನಮೊ ।
ಳ್ಪಿಂದೆ ವಿವರಿಸಿದುದಿಲ್ಲೆನೆ । ಚಂದದೆ ಬಚ್ಚಳಿಯೆ ರಚಿಸಿದಂ ಕವಿಸಾಳ್ವಂ ॥

ಗ್ರಂಥಾವತಾರದಲ್ಲಿ ಜಿನಸ್ತುತಿಯೂ ಸರಸ್ವತೀಸ್ತುತಿಯೂ ಇವೆ ಆಶ್ವಾಸಾಂತ್ಯದಲ್ಲಿ ಈ ಗದ್ಯವಿದೆ--

ಇದು ಶತೇಂದ್ರಮುನೀಂದ್ರವಂದಿತಾರ್ಹತ್ಪರಮೇಶ್ವರ ಪಾದಾರವಿಂದಾಮಂದಮಕರಂದಾನಂದಿತಭೃಂಗಾಯಮಾನ ಕವಿಸಾಳ್ವವಿರಚಿತಮಪ್ಪ ರಸರತ್ನಾಕರದೊಳ್.

ಈ ಗ್ರಂಥನಾಮವನ್ನು ಹೀಗೆ ವಿವರಿಸುತ್ತಾನೆ---

ಈಕೃತಿ ಕವಿಕೃತನುತಕವಿ | ತಿಲಕಾಂತೆಗೆ ತಾನೆ ನವರಸಂ ಸಲೆ ರಸರ |
ತ್ನಾಕರಂ.

ಈ ಗ್ರಂಥದಿಂದ ಕೆಲವು ಭಾಗಗಳನ್ನು ಉದ್ಧರಿಸಿ ಬರೆಯುತ್ತೇವೆ--

ಚಕ್ಷುಃಪ್ರೀತಿಯುದಿನಿಯನ | ನೀಕ್ಷಿಪುದು ಱೆ ನೆನೆವುದೇ ಮನಸ್ಸಂಗಂ ಲೋ |
ಲಾಕ್ಷಿ ಮನದಲ್ಲಿ ಸಂಕ | ಲ್ಪಾಕ್ಷೇಪದೆ ನೆನೆವುದದುವೆ ಸಂಕಲ್ಪಾಖ್ಯಂ ||
ನೆನೆದೊಱಗದದುವೆ ಜಾಗರ| ಮಿನಿಯನನು ಱೆ ಬಯಸಿ ಬಡಬಡಾಗಿರೆ ಕಾರ್ಶ್ಯಂ |
ವನಿತೆ ವಿಷಯಕ್ಕೆ ಮೈಗುಡ | ದನುವರತಿಯೆ ಲಜ್ಜೆ ವಿರಹವೞಿದುದೆ ಮಾನಂ ||

ಮೈನವಿರುಬ್ಬಿದುದೆ ಪುಳಕಂ; ಕಣ್ಬನಿ ತೋಱಿದುದೆ ಅಶ್ರು; ಬೆಮರ್ತುದೆ ಸ್ವೇದಂ; ಮರವಟ್ಟುದೆ ಸ್ತಂಭಂ; ಮೈಮಱೆದುದೆ ಲಯಂ; ಧ್ವನಿಪಲ್ಲಟಮೆ ಸ್ವರಭೇದಂ; ನಡುಗುವುದೆ ಕಂಪಂ; ಮತ್ತೊಂದುಬಣ್ಣಮಾದುದೆ ವೈವರ್ಣ್ಯಂ.

ಭಯದೆ ಭಯಾನಕರಸಮಾ | ರಯೆ ರಿಪುಸರ್ಪಾದಿ ಪೆಂಪಿನಾಲಂಬನಮಾ |
ಭಯಹೇತು ಗರ್ಜಿತಾದಿಯೆ | ನಯನೋದ್ದೀಪನವಿಭಾವಮಾರಸಕಕ್ಕುಂ ||
ಎರಡುಂ ವಿರುದ್ಧರಸಮೊಡ | ವೆರಸಿರೆ ತದನಂತರಸ್ಥಮೆಂದನ್ಯರಸಂ |
ಪರಿಪುಷ್ಟಮಾಗೆಯುಂ ಪ್ಯಥ| ಕರಣದೆ ನೋಣ್ ಸಮಮುಮಾಗೆಯುಂನಿರ್ದೋಷಂ||

## 3 ಶಾರದಾವಿಲಾಸ

ಇದು ಕಾವ್ಯಕ್ಕೆ ಜೀವವೆಂದು ಹೇಳುವ ಧ್ವನಿಯನ್ನು ಪ್ರತಿಪಾದಿಸುತ್ತದೆ. ಕನ್ನಡದಲ್ಲಿ ಧ್ವನಿವಿಷಯಕವಾದ ಗ್ರಂಥವು ನಮಗೆ ತಿಳಿದಮಟ್ಟಿಗೆ ಇದೊಂದೇ ಎಂದು ತೋರುತ್ತದೆ. ಈ ಗ್ರಂಥದ ಧ್ವನಿವ್ಯಂಗ್ಯವಿವರಣವೆಂಬ 2 ನೆಯ ಆಶ್ವಾಸವು ಮಾತ್ರ ನಮಗೆ ದೊರೆತಿದೆ. ಈ ಭಾಗದಲ್ಲಿ ಉದಾಹೃತವಾದ ಪದ್ಯಗಳಲ್ಲಿ "ಸಾಳ್ವಮಲ್ಲಭೂವರವರಕೀರ್ತಿಯಂ ಪದೆದು ಪಾಡುವ", "ನಿರುಪಮಸಾಳುವಮಲ್ಲನ ವರಗುಣಮಂ ಪೊಗೞ್ವೆನೆಂಬ ನಾವಂ", "ವರಸಾಳ್ವಮಲ್ಲನಿಂ ಸಂಗರದೊಳ್ ಜಯಲಕ್ಷ್ಮಿ ಚಾರುತರ ವಚದಿಂ ಸ್ವೀಕರಿಸಲ್ಪಟ್ಟಳ್", "ಸಾಳುವಮಲ್ಲಕರಸ್ಥಿತಂ ನಿಶಿತಕರಾಳಖಡ್ಗ ವೆಸೆದತ್ತತಿವೀರರ ಕಣ್ಗೆಯುದ್ಧದೊಳ್ಮುಪ್ಪೊಟಲ್ಗೆ ಮುಳಿದೀಶನ ಕೇಕರ ಕಾಂತಿ ನೀಳ್ದಪೊಲ್" ಎಂದು ದೊರೆವುದರಿಂದ ಈ ಗ್ರಂಥವನ್ನು ಸಾಳ್ವಕವಿ ತನ್ನ ಪೋಷಕನಾದ ಸಾಳ್ವಮಲ್ಲರಾಜನ ಖ್ಯಾತಿಗೋಸ್ಕರ ಬರೆದಂತೆ ಕಾಣುತ್ತದೆ. ಪ್ರಥಮಾಶ್ವಾಸವು ದೊರೆತಿದ್ದರೆ ಕವಿಯ ವಿಷಯವೂ ಅವನ

ಪೋಷಕನ ವಿಷಯವೂ ಸ್ಪಷ್ಟವಾಗುತ್ತಿದ್ದುವು. ಹಿಂದಣ ಗ್ರಂಥಗಳಲ್ಲಿ ಕಾವ್ಯಪ್ರಕಾಶಿಕೆ, ಸಾಹಿತ್ಯಸುಧಾರ್ಣವ ಇವುಗಳ ಹೆಸರನ್ನು ಕವಿ ಹೇಳಿದ್ದಾನೆ. ಈ ಗ್ರಂಥದಿಂದ ಕೆಲವು ಭಾಗವನ್ನು ಉದ್ಧರಿಸಿ ಬರೆಯುತ್ತೇವೆ—

ವಾಚಕ ಲಕ್ಷಕ ವ್ಯಂಜಕಮೆಂದು ಶಬ್ದಂ ಮೂದೆಱಂ. ಅವಕ್ಕೆ ವಿಷಯಮಪ್ಪದರ್ಥಂ ವಾಚ್ಯ ಲಕ್ಷ್ಯ ವ್ಯಂಗ್ಯಮೆಂದು ತ್ರಿವಿಧಂ. ಮಱೆಯಿಲ್ಲದೆ ಸಂಕೇತದಿಂದರ್ಥವನಱಿವುದು ವಾಚಕಂ. ಮುಖ್ಯಾರ್ಥಬಾಧೆಯಾಗೆ ತದ್ಯೋಗಮುಂಟಾಗೆ ರೂಢಿ. ಪ್ರಯೋಜನದತ್ತಣಿಂದರ್ಥಾಂತರಮಂ ತೋರ್ಪುದು ಲಕ್ಷಣಮೆನಿಕ್ಕುಂ; ವ್ಯಂಗ್ಯಸಹಿತಮಾದುದು ಪ್ರಯೋಜನಮೆನಿಕ್ಕುಂ. ರೂಢಿಗುದಾಹರಣೆ—ಪ್ರವೀಣನೆಂದು ಒಳ್ಳಿಯ ವೀಣೆಯುಳ್ಳವನ ಪೆಸರ್; ಅದಂ ಬಾಧಿಸಿ ಒಳ್ಳಿಯ ಪ್ರೌಢಂಗೆ ನಾಮವಾದುದು.

ಉಪಾದಾನಲಕ್ಷಣೆ:—ತನ್ನ ಪ್ರಸಿದ್ಧನಿಮಿತ್ತಂ ತನ್ನುಪಾದಾನದತ್ತಣಿಂ ಪರಾಕ್ಷೇಪಮಂ ಮಾೞ್ಪುದು ಉಪಾದಾನಲಕ್ಷಣೆಯೆನಿಕ್ಕುಂ. ಅದೆಂತೆಂದೊಡೆ—ಲಕ್ಷಸಬಳಂ ಬಂದುದೆಂಬಲ್ಲಿ ಅಚೇತನಮಪ್ಪ ಸಬಳಂಗಳ್ಗೆ ಗಮನವಿಲ್ಲಾಗಿ ಮುಖ್ಯಾರ್ಥಬಾಧೆಯಾಗೆ ಸಬಳಮಂ ಪಿಡಿದ ವೀರಭಟರ್ ಬಂದರೆಂಬುದರ್ಥಂ. ವ್ಯಂಜಕಮೆಂತೆಂದೊಡೆ—ಅನೇಕಾರ್ಥಮನುಳ್ಳ ಶಬ್ದಕ್ಕೆ ಸಂಯೋಗಾದಿಕಂಗಳಿಂದೇಕಾರ್ಥದೊಳ್ ನಿಯಮಮುಂಟಾಗೆ ಅರ್ಥಾಂತರಮಂ ತೋರ್ಪುದು ಶಬ್ದಮೂಲವ್ಯಂಜಕಮೆನಿಕುಂ. ಶಂಖಚಕ್ರಾಂಕಿತಹರಿಬಂದನೆಂಬಲ್ಲಿ ಹರಿಶಬ್ದಕ್ಕೆ ಸಿಂಹಾದ್ಯನೇಕಾರ್ಥಂಗಳುಂಟಾದೊಡಂ ಶಂಖಚಕ್ರಶಬ್ದಸಂಯೋಗದಿಂ ಕೃಷ್ಣನೆಂಬರ್ಥಮಾದುದು.

ಸುತಶೋಕವಹ್ನಿದಗ್ಧೋ । ನ್ನತಕಾಯಂ ಬಾಹ್ಯಕುಂಡಸಂಸ್ಥಿತಶಿಖಿ ತಾ ।
ನತಿಶೈತ್ಯಮೆಂದು ನಿಲ್ಲದೆ । ದ್ರುತಗತಿಯಿನಗಾಧಮಪ್ಪ ನದಿಯೊಳ್ ಬಿೞ್ದಂ ॥

ಇಲ್ಲಿ ವಸಿಷ್ಠಂ ಪುತ್ರಶೋಕದಿಂ ಬೆಂದು ಅಗ್ನಿಯಂ ಪೊಕ್ಕೊಡೆ ಬೇಯನೆಂಬ ವಾಕ್ಯಾರ್ಥರೂಪಮಪ್ಪ ವಸ್ತುಸ್ವಭಾವಮಂ ಶೋಕಂ ಬಾಹ್ಯಾಗ್ನಿಯಿಂದಧಿಕಮೆಂದು ವ್ಯತಿರೇಕಾಲಂಕಾರಮಂ ಧ್ವನಿಸಿತ್ತು.

## 4. ವೈದ್ಯಸಾಂಗತ್ಯ

ಈ ಗ್ರಂಥದೊಳಗೆ ಅಲ್ಲಲ್ಲಿ ಪದ್ಯಗಳು 'ವರಕವಿಸಾಳ್ವನ ಮತದಿ' ಎಂದು ಮುಗಿಯುತ್ತವೆ. ಇದರಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ಆನಂದಭೈರವೀರಸ

ವರಜಾಯಿಕಾಯಿ ಸೈಂಧವಮಿಂಗಿಲಿಕ ಶುಂಠಿ | ಮರಿಚ ಲವಂಗವು ನಾಭಿ |
ಉಱುವ ಕನಕಬೀಜ ಹಿಪ್ಪಲಿ ಸಮಭಾಗ| ಕರಿಯ ದುತ್ತೂರದ ರಸದಿ ||
ಅರೆವುದು ಮೂರುದಿವಸ ಗುಂಜೆಗಾತ್ರಕ್ಕೆ| ನೆಱೆ ಗುಳಿಗೆಯನು ಕಟ್ಟುವುದು|
ಪರಿವಿಡಿಯಿಂದೆಯಾನಂದಭೈರವಿಯೆಂಬ || ಉಱುವ ಪೆಸರ ಪಡೆದಿಹುದು ||

ಇದರ್ಕೆ ಅನುಪಾನಂ

ಇಂತು ಕಂಗೊಳಿಸುವಾನಂದಭೈರವಿಯನು ! ಸಂತಸದಿಂ ತ್ರಿಕಟುಕದಿ |
ಚಿಂತೆಯ ಬಿಟ್ಟುಕೊಳ್ಳಲು ವಾತವೆಂಭತ್ತು | ಭ್ರಾಂತುವೆತ್ತಿರದೋಡುವುವು ||
ಸಲೆ ಮೂಲಸಹಿತ ಹೂಲಿಯರಸದಿಂ ಕೊಳ್ಳೆ | ತೊಲಗುಗುಂ ಶ್ಲೇಷ್ಮದೋಷಗಳು |
ನೆಲೆಗೊಂಡ ಶೂಲೆಗೆ ಗದುಗಿನ ತಿರುಳಿಂದ| ಸಲೆ ಕೊಳ್ಳೆ ಕೆಟ್ಟು ಹೋಗುವುವು ||
ಎಲವದ ಹಗಿನದೊಳಜವೋದದಿಂ ಕೊಳ್ಳೆ | ನೆಲೆಗೆಡುವುವು ಗ್ರಹಣಿಗಳು |
ಸಲೆ ಜಾಯಿಕಾಯಿಜೇರಗೆದಧಿಯಿಂ ಕೊಳ್ಳೆ | ಯೆಳವುಗೆಡುವುದತಿಸಾರ ||

---

ದೊಡ್ಡಯ್ಯ. ಸು. 1550

ಈತನು ಚಂದ್ರಪ್ರಭಚರಿತೆಯನ್ನು ಬರೆದಿದ್ದಾನೆ. ಇವನು ಜೈನ ಕವಿ; ಅತ್ರೇಯಗೋತ್ರದವನು; ಇವನ ಗುರು ಪಂಡಿತಮುನಿ; ತಂದೆ ಹೊಯ್ಸಳದೇಶದ ಚಂಗನಾಡೊಳಗಣ ಪಿರಿಯರಾಜಪುರ (ಪಿರಿಯಪಟ್ಟಣ) ವೆಂಬ ರಾಜಧಾನಿಯಲ್ಲಿ ಆಳುತ್ತಿದ್ದ ಯದುಕುಲತಿಲಕ ವಿರುಪರಾಜೇಂದ್ರನ ಕರಣಿಕತಿಲಕನೂ ಜಿನಪುರಾಣಕಥಾಗಮನಿಪುಣನೂ ಆದ ದೇವಪ್ಪ. ಈ ದೊರೆಯನ್ನು ಕವಿ ವಿಶೇಷವಾಗಿ ಸ್ತುತಿಸಿದ್ದಾನೆ; ಜೈನಬ್ರಾಹ್ಮಣನಾದ ಪಂಡಿತಸಚಿವೇಂದ್ರನ ಮಗ ಬೊಮ್ಮರಸನು ಇವನಲ್ಲಿ ಪ್ರಧಾನಿಯಾಗಿದ್ದಂತೆ ತಿಳಿಯುತ್ತದೆ. ಪೂರ್ವಕವಿಗಳಲ್ಲಿ ಮಧುರನನ್ನು (ಸು. 1385) ಸ್ಮರಿಸಿರುವುದರಿಂದ ಕವಿ ಅವನಿಗಿಂತ ಈಚೆಯವನೆಂಬುದು ಸ್ಪಷ್ಟವಾಗಿದೆ; ಸುಮಾರು 1550 ರಲ್ಲಿ ಇದ್ದಿರಬಹುದೆಂದು ಊಹಿಸುತ್ತೇವೆ.

ಪೂರ್ವಕವಿಗಳನ್ನೂ ತತ್ಕೃತಗ್ರಂಥಗಳನ್ನೂ ಈ ಪದ್ಯಗಳಲ್ಲಿ ತಿಳಿಸಿದ್ದಾನೆ—

ಪ್ರಥಮಜಿನೇಂದ್ರಪುರಾಣವನುಸಿರಿದ | ಪೃಥುಕವಿ ಪಂಪರಾಜನನು |
ಪೃಥಿವಿಯೊಳಜಿತಜಿನರ ಚರಿತವ ಪೇಳ್ದ | ಪ್ರಥಿತರನ್ನನ ನುತಿಸುವೆನು ||

ಚಂದ್ರಪ್ರಭಪುರಾಣವ ಪೇಳ್ದ ವಿಜಯಕ | ವೀಂದ್ರನ ನವಮತೀರ್ಥಕರ |
ರುಂದ್ರಕಥೆಯನುಸಿರಿದ ಗುಣವರ್ಮಕ | ವೀಂದ್ರನನೊಲಿದು ನುತಿಪೆನು ||
ಶ್ರೀಮದನಂತತೀರ್ಥಕರ ಪುರಾಣವ | ಪ್ರೇಮದಿಂದುಸಿರ್ದ ಜನ್ನಗನ |
ರಾಮಣೀಯಕಧರ್ಮನಾಥಚರಿತವ ಪೇ | ಳ್ದ ಮಧುರನ ಬಲಗೊಂಬೆ ||
ಫುಲ್ಲಸರೋಜಲೋಚನರಾಘವೇಂದ್ರನ | ಮಲ್ಲಿನಾಥನ ಚರಿತವನು |
ಸೊಲ್ಲಿಸಿದಭಿನವಪಂಪಕವೀಂದ್ರನ | ಸಲ್ಲೀಲೆಯಿಂ ನುತಿಸುವೆನು ||
ವರಶಾಂತಿನಾಥನ ಪೊಗಳಿದ ಹೊನ್ನನ ಸ್ಮರಹರನೇಮಿಚರಿತವ |
ದುರಿತಾರಿವೀರೇಶನ ಚರಿತವ ಪೇಳ್ದ | ಗರುವ ಕಣ್ಣಪನ ನುತಿಪೆನು ||
ಬಾಣ ಪೇಳಿದ ಕಾದಂಬರೀಕಾವ್ಯವ | ಕ್ಷೋಣಿಯಳಿಕೆಯೊಳು ಸುತಿಸಿ |
ಮಾಣದೆ ಲೀಲಾವತಿಗೆ ಕಪ್ಪಿಡಿಸಿದ | ಜಾಣನೇಮಿಯ ಬಲಗೊಂಬೆ ||
ಭರತಯಾದವವಂಶಾಳಿಯ ಕೃತಿಯೊಳು | ವಿರಚಿಸಿ ಬಲುಕೀರ್ತಿವಡೆದ |
ವರಕವಿ ಬಂಧುವರ್ಮನ ನೆನೆದೀಸ | ಚ್ಚರಿತವ ನಾನುಸಿರುವೆನು ||

ತನ್ನ ಗುಣಾದಿಗಳನ್ನೂ ಕವಿತಾಚಾತುರಿಯನ್ನೂ ಈ ಪದ್ಯಗಳಲ್ಲಿ ಹೇಳಿದ್ದಾನೆ.—

ಲಲನೆಯರ ಮೊಗದ ಮೂಗುತಿಯಾಣಿಮಣಿಯಂತೆ |
ಸುಲಲಿತಾಂಗಿಯರ ಸುಕಣ್ಠರಲ ಕಂಠಿಕೆಯಂತೆ |
ಜಲಜನೇತ್ರೆಯರು ಸುಪ್ರೇಮದಿಂ ತಳಿಗೆಯೊಳಿರದಾಂತು ಸಲೆ ನೋಡುವ ||
ಪೊಳೆವ ಕನ್ನಡಿಯಂತೆ ಕಣ್ಗೊಳಿಪ ದೊಡ್ಡಯ್ಯ |
ನೊಲವಿನಿಂದಮೃತಲಕ್ಷ್ಮೀಕಾಂತಜಿನಪತಿಯ |
ಚಲನಪಂಕಜಭೃಂಗನೆನಿಸಿಯೊಪ್ಪಿದನು ಸದ್ವಿಪ್ರಕುಲರತ್ನದೀಪಂ ||
ರಸದಾಳಿಯ ರಸದಂತೆ ಮಿಸುಪ ರಸ | ಮೊಸರ್ವ ಮಾವಿನ ಪಣ್ಣಿನಂತೆ |
ಅಸಿಯಳ ನಳಿತೋಳ ತಕ್ಕೆಯಂದದೊಳು ಮೋ | ಹಿಸುವುದೆನ್ನೀಸವಿನುಡಿಯು ||

ಇವನ ಗ್ರಂಥ

## ಚಂದ್ರಪ್ರಭಚರಿತೆ

ಇದು ಸಾಂಗತ್ಯದಲ್ಲಿ ಬರೆದಿದೆ; ಸಂಧಿ 28, ಪದ್ಯ 4475; ಅಲ್ಲಲ್ಲಿ ಕೆಲವು ವೃತ್ತಗಳೂ ಷಟ್ಪದಿಗಳೂ ಸಹ ಇವೆ. ಇದರಲ್ಲಿ 8 ನೆಯ ತೀರ್ಥಕರನಾದ ಚಂದ್ರಪ್ರಭನ ಕಥೆ ಹೇಳಿದೆ. ಪೂರ್ವದಲ್ಲಿ ಕವಿಪರಮೇಷ್ಠಿ

ಯೂ ಗುಣಭದ್ರನೂ ಹೇಳಿರುವ ಕಥೆಯನ್ನು ತಾನು ಕನ್ನಡದಲ್ಲಿ ವಿವರಿಸುವುದಾಗಿ ಕವಿ ಹೇಳುತ್ತಾನೆ. ಈ ಗ್ರಂಥದ ಉತ್ಕೃಷ್ಟತೆಯನ್ನು ಈ ಪದ್ಯದಲ್ಲಿ ತಿಳಿಸಿದ್ದಾನೆ—

ಇದು ಪಂಡಿತಯತಿಹೃದಯಪಂಕಜಮಿತ್ರ । ಮಿದು ಭಾರತಿಯ ಭಾಳನೇತ್ರ ।
ಇದು ಭವ್ಯಚೇತೋರೋಲಂಬಶತಪತ್ರ । ಮಿದು ಚಂದ್ರಜಿನರ ಚರಿತ್ರ ॥

ಗ್ರಂಥಾವತಾರದಲ್ಲಿ ಚಂದ್ರನಾಥಸ್ತುತಿ ಇದೆ. ಬಳಿಕ ಕವಿ ಸಿದ್ಧಾದಿಗಳನ್ನು ಹೊಗಳಿ ಸಮಂತಭದ್ರನಿಂದ ದೇವಕೀರ್ತಿಯವರೆಗೆ ಗುರುಗಳನ್ನು ಸ್ಮರಿಸಿದ್ದಾನೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ—

ಮೇರು

ಜಲಜಜನಾಗಸಮೆಂಬ ಬಲ್ದಾವರೆ । ಯಲರನಿಳಿಗೆ ಮುಗುಚಿಡಲು ।
ನೆಲಸೋಂಕಿ ಕೆಂಗೊಳಿಸುವ ಕರ್ಣಿಕೆಯಂತೆ । ಕಲಧೌತಗಿರಿ ಕಣ್ಗೆಸೆದುದು ॥

ಕನಕಪ್ರಭೆಯೆಂಬ ಪಟ್ಟಣ

ಅರಸನ ಪಗೆವರುಪ್ಪರಿಗೆಯ ತುದಿಯೊಳು । ಪರಿದಾಡುವ ಪಾವುಗಳು ।
ಭರದಿ ಪೊಕ್ಕಪುವು ತನ್ನಯ ಪುತ್ತನೆಂದಿಂದು । ಚರಿಸುವನೆರಡುಮಾರ್ಗದೊಳು ॥

ಮೇಘ

ಸಿಡಿಲ್ಗಿಚ್ಚಿನ ಧೂಮವೋ ಸುರಗಂಗೆಯ। ತಡಿಯ ತಮಾಲಕಾನನವೋ ।

---

1. ಸಿದ್ಧರು, ಆಚಾರ್ಯರು, ಉಪಾಧ್ಯಾಯರು, ಸಾಧುಗಳು; ರತ್ನತ್ರಯ, ಸರಸ್ವತಿ, ಗಣಧರರು, ಜ್ವಾಲಾಮಾಲಿನಿ, ವಿಜಯಯಕ್ಷ, ಪಿರಿಯಪಟ್ಟಣದ ಅನಂತಜಿನನ ಚರಣಕಮಲಭೃಂಗ ಮಹಿಷೀಕುಂಭಾಪುರಾಧೀಶ್ವರಬ್ರಹ್ಮದೇವ; ಗಂಧಹಸ್ತಿಮಹಾಭಾಷ್ಯಕರ್ತೃ ಸಮಂತಭದ್ರ; ನಿರುಪಮಚತುರ್ವಿಂಶತಿಜಿನರೊಪ್ಪಿ। ಪ್ಪರ ಪುರಾಣವನೊಂದೊಂದ । ಭರದಿ ಸಪಾದಲಕ್ಷದಿ ಪೇಳಿದ ಕವಿಪರಮೇಷ್ಠಿ; ಕಾಳಿದಾಸನ ಮೇಘಸಂದೇಶಕಾವ್ಯವ । ಸೋಲಿಸಿ ನೇಮಿದೂತಿಯನು । ಪೇಳಿದ ಮತ್ತು ಪುರುಜಿನರಾಜನ ಪೂರ್ವಪುರಾಣವನುಸಿರ್ದು ಸರ್ವಜ್ಞನೆನಿಸಿದ ಜಿನಸೇನ; ಇಪ್ಪತ್ತುಮೂರುತೀರ್ಥಕರಪುರಾಣವ। ನೊಪ್ಪದಿ ಪೇಳಿ ಲೋಕದೊಳು। ಒಪ್ಪುವ ಗುಣಭದ್ರ; ವೀರಸೇನ; ಸದಮಲತತ್ವೌಷಧಶಬ್ದಶಾಸ್ತ್ರದಿ । ಹೃದಯಶರೀರವಾಕ್ಕಗಳ । ಪುದಿದ ಮಲವ ತೊಲಗಿಸಿ ಭವ್ಯರಸಲ । ಹಿದ ಪೂಜ್ಯಪಾದ; ಶ್ರುತಕೇವಲಿಗಳೆನಿಪ ಗೋವರ್ಧನನಂದಿವಿಷ್ಣುಭೂತಬಲಿಪುಷ್ಪದಂತಾಪರಾಜಿತರು; ಪಂಡಿತಾರ್ಯ, ಅಕಲಂಕ, ವಾದಿವಿದ್ಯಾನಂದ, ದೇವಕೀರ್ತಿ.

ಜಡೆದಲಕ್ಷ್ಮಿಯ ಪೀಲಿದಱಿಯೋ ಎಂದೆನೆ | ಕಡುರಯ್ಯಮಬ್ಬುಸಂದೋಹ ||
ಪೊಗೆಕಿಚ್ಚುನೀರುಗಾಳಿಗಳಿಂದ ಜನಿಸಿದ | ಮುಗಿಲಲ್ಲದಿರೆ ಬಿರಯಿಗಳ್ಗೆ |
ಒಗೆವ ಕಂಬನಿ ತಾಪ ವುಳಕ ಕಾಮಾಗ್ನಿಯೇ | ಱಗೆಯುಂಟೆ ಮುಗಿಲನೀಕ್ಷಿಸಲು||

ಸ್ತ್ರೀಸೌಂದರ್ಯ

ಗಿರಿವಜ್ರಮಧುಪಪಚಂಪಕಶಶಿಪನ್ನಗ | ಸರಸಿಜಚಂದ್ರಾತಪವು |
ಕರಿಕದಳಿಗಳೆರವಿಲ್ಲದೆ ಸತಿಯ ಸೌಂ | ದರತನುವಿನೊಳೆಸೆದಿಹುವು ||
ಚಿತ್ರಜರಾಯನ ಕೀರ್ತಿಲತೆಯ ಪೊಸ | ಬಿತ್ತುಗಳೋ ಥಳಥಳಿಪ |
ಮುತ್ತುಗಳೋ ಮೇಣೆನೆ ಸುಲಿಪಲ್ಗಳು | ವೃತ್ತಕುಚೆಗೆ ಮೆಱೆದಿಹುವು ||
ವರಚಂದನಹಿಮಶಿಶಿರವಚನೆ ರಮ್ಯ | ಶರದಿಂದುಸನ್ನಿಭವದನೆ |
ನಿರುಪಮಶೃಂಗಾರರಸವಾರ್ಕರೆ | ತರುಣಿ ಋತುಗಳಂತಿಹಳು ||

ಸಂಸಾರ

ತನು ಮುಗಿಲೊಡ್ಡು ಮೈವೆಳಗೆಳಮಿಂಚು ಜ | ವ್ವನ ಲಲಿತೇಂದ್ರಕಾರ್ಮುಕವು |
ಘನಸತ್ವ ಮೆಱೆಯಾಗಿ ಕೆಱೆದು ಕರಗೆ ಕಂಡು | ಮನವಿಕ್ಕದಾತನೆ ಚತುರ ||

ಸತ್ಪುರುಷರು

ಕರಗಿಸೆ ಕಾಸೆಯೊರೆಯೆ ತೇಯೆ ನವನೀತ | ವರದುಗ್ಧ ಕನಕ ಮಲಯಜ |
ಕರಮೆಸೆವಂತೆ ದುರ್ಜನರ ಬಾಧೆಗೆ ಸ | ತ್ಪುರುಷರು ಗುಣವ ಮೆಱೆವರು ||

---

## ಕುಮಾರ ಚೆನ್ನಬಸವ- ಸು. 1550

ಈತನು ಬಸವಪುರಾಣದ ಪುರಾತನರ ಚರಿತೆಯನ್ನು ಬರೆದಿದ್ದಾನೆ. ಅಲ್ಲದೆ ಸಾಸಲಭೈರವೇಂದ್ರಚರಿತೆ, ಶಂಭುಪೂಜಾವಿಧಿ, ವಿಭೂತಿಮಹಿಮೆ ಇವುಗಳನ್ನೂ ಬರೆದಿರುವುದಾಗಿ

ಇಂತು ಬಸವೇಶ್ವರಪುರಾಣದೊಳು ಸೂಚಿಸಿದ |
ಕಂತುಹರಶರಣಚರಿತೆಯ ಪದಂಗೊಳಿಸಿಯ |
ತ್ಯಂತವಾಕ್ಯವಿಲಾಸದಿಂದೆ ಸಾಸಲಭೈರವೇಂದ್ರಚಾರಿತ್ರವುಸುರಿ ||
ಸಂತಸದಿ ವೀರಮಾಹೇಶಸಂಗ್ರಹದಲ್ಲಿ| ಗ್ರಂಥರೂಪಾಗಿರ್ದ ಶಂಭುಪೂಜಾವಿಧಿಯ|
ನಂತಲ್ಲಿ ಭೂತಿಯಧ್ಯಾಯಾದಿಯಂ ಕುಮಾರೇಶ್ವರಂ ಕನ್ನಡಿಸಿದಂ ||

ಎಂಬ ಪದ್ಯದಿಂದ ತಿಳಿಯುತ್ತದೆ.

ಇವನು ವೀರಶೈವಕವಿ; "ಮುಕ್ತಿಮುನಿಸಿಂಹಾಸನಾಧಿಪತಿಯಸವಸುಚರಿತ್ರಾಸ್ಪಶಿಖಿಯಬಸವೇಶನ" ಕರಜಾತನು. ಮುಕ್ತಿಮುನಿನಾಥವಂಶಾಂಬರಾದಿತ್ಯ,ಪ್ರತಾಪಕೀರ್ತಿವಿರಾಜಿತ,ಶಿವಭಕ್ತಕಲ್ಪದ್ರುಮ ಎಂದು ಹೇಳಿಕೊಂಡಿದ್ದಾನೆ. ಇವನ ವಿಷಯವಾಗಿ ಚೆನ್ನಬಸವಪುರಾಣದಿಂದ (1584) ಈ ಅಂಶಗಳು ತಿಳಿಯುತ್ತವೆ—

ರುದ್ರಮುನಿಯ ಮಗನಾದ ಮುಕ್ತಿಮುನಿ ಸಿರಿಗಿರಿಯ ಸಿಂಹಾಸನಾಧಿಪತಿಯಾಗಿದ್ದನು. ಮಲೆರಾಜ್ಯದಲ್ಲಿ ಜೈನರು ವೀರೇಶನನ್ನು ಕಿತ್ತು ಬಿಸಾಡಿದರು ಎಂದು ಕೇಳಿ ಅಪರವಾದಿಗಳನ್ನು ಸಂಹರಿಸಲು ತನ್ನ ಶಿಷ್ಯನಾದ ದಿಗಂಬರಮುಕ್ತಿಮುನಿಯನ್ನು ಕಳುಹಲು ಆತನು ವೀರೇಶನನ್ನು ಪುನಃಪ್ರತಿಷ್ಠೆಮಾಡಿ ಬಾಳೆಯಹಳ್ಳಿಯ ಸಿಂಹಾಸನಾಧಿಪತಿಯಾಗಿದ್ದನು. ಅವನ ಕಾಲವಾದಮೇಲೆ ಕುಮಾರಚೆನ್ನಬಸವೇಶ್ವರನು ಪಟ್ಟಕ್ಕೆ ಬಂದು ಶರಣಸಂಕುಲವನ್ನು ಪಾಲಿಸುತ್ತ ದುಷ್ಟಪರವಾದಿಗಳನ್ನು ಸಂಹರಿಸುತ್ತ ಇದ್ದನು.

ಈತನ ಕಾಲವು ಬಸವಪುರಾಣದ ಕಾಲಕ್ಕೂ (1369) ಚೆನ್ನಬಸವಪುರಾಣದ ಕಾಲಕ್ಕೂ (1584) ಮಧ್ಯದಲ್ಲಿರಬೇಕು; ಸುಮಾರು 1550 ಆಗಿರಬಹುದೆಂದು ಊಹಿಸುತ್ತೇವೆ.

ಪೂರ್ವಕವಿಗಳನ್ನು ಈ ಪದ್ಯಭಾಗದಲ್ಲಿ ಸ್ಮರಿಸುತ್ತಾನೆ—ಕವಿಪುಂಗವರೆನಿಪ್ಪ ಬಾಣಮೋದಟಮಳಯರಾಜಶೃಂಗಾರಕವಿಹರೀಶ್ವರಪದ್ಮರಾಜಸೋಮೇಶಾದಿಗಳಿಗಾನೆಱಗುವೆಂ. ತನ್ನ ಗುಣಾದಿಗಳನ್ನು ಈ ಪದ್ಯಗಳಲ್ಲಿ ಹೇಳಿದ್ದಾನೆ—

ಇದು ಮುಕ್ತಿಮುನಿನಾಥವಂಶಾಂಬರಾದಿತ್ಯ |
ನಧಿಕಕೀರ್ತಿಪ್ರತಾಪಂ ಶಂಭುನಿಂದಕಸ |
ಮುದಯಸಮಿದಗ್ನಿ ಶಿವಭಕ್ತಕಲ್ಪದ್ರುಮ ಕುಮಾರಚೆನಬಸವೇಶ್ವರಂ ||
ಶಶಿಧರಾರ್ಚಕಜನಕೆ ಬಸವೇಶನಂದದೆ ಗಿ |
ರಿಶನಿಂದಕಗ್ಗೀ ವೀರೇಶನೆಂಬಂದದಿಂ |
ವಸುಧೆಯೊಳಗಿರ್ಪ ಶಿವಭಕ್ತನಿಚಯಕ್ಕದ್ವಿತೀಯಶಂಕರನಂದದಿಂ ||
ರಸವದ್ವಚೋಯುಕ್ತಕೋವಿದಸನೂಹಕ್ಕೆ |
ಜಸವೆತ್ತ ದಕ್ಷಿಣಾಮೂರ್ತಿಯಂದದೆ ವಿರಾ |

---

1 ಸಂಧಿ 62, ಪದ್ಯಗಳು 37-43

ಜಿಸುತಂ ಕುಮಾರಚೆನ್ನಬಸವೇಶ್ವರಂ ದಿಗಂತಂಗಳೊಳು ಕೀರ್ತಿವೆತ್ತಂ ||

ಇವನ ಗ್ರಂಥ

ಬಸವಪುರಾಣದ ಪುರಾತನರ ಚರಿತೆ

ಇದು ವಾರ್ಧಕಷಟ್ಪದಿಯಲ್ಲಿದೆ; ಸಂಧಿ 9, ಪದ್ಯ 350. ಇದರೊಳಗೆ ಬಸವಪುರಾಣದಲ್ಲಿ ಸಂಗ್ರಹವಾಗಿ ಸೂಚಿಸಿರುವ ಪುರಾತನರ ಚರಿತ್ರವು ಉಪಕಥೆಗಳೊಡನೆ ವಿಸ್ತರಿಸಿ ಹೇಳಿದೆ. ಗ್ರಂಥಾದಿಯಲ್ಲಿ ಈಶ್ವರಸ್ತುತಿ ಇದೆ. ಬಳಿಕ ಕವಿ ನಂದಿ ಭೃಂಗಿ ವೀರೇಶ್ವರಗಣಾಧಿಪಷಣ್ಮುಖರಿಗೆ ನಮಿಸುತ್ತಾನೆ. ಈಗ್ರಂಥದಿಂದ ಒಂದೆರಡು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ಶಿವಸ್ತುತಿ

ಸಿರಿಮುಡಿಯೊಳಾಗಸದೊಱೆಯ ತೆರೆಗಳುಕ್ಕುತಿರ |
ಉರಿಗಣ್ಣದೆಂತೊ ಪಣೆಯೊಳು ರಾಜಿಪುದು ದೇವ |
ಸರಸರವದಿಂ ಕಿವಿಗಳೊಳು ಫಣಿಗಳುಲಿಯುತಿರೆ ಪೇೞೆ ಶಿರದೊಳೆಂತಿರ್ಪುದದು ||
ಸ್ಮರದಹನಭಸ್ಮಾರ್ಧದಂಗದೊಳಗೆಮ್ಮವ್ವೆ |
ಹರುಷದಿಂದೆಂತಿರ್ಪಳಯ್ಯ ಎಂದಿಂತು ರುಚಿ|
ಕರವಚನಯುತಬಾಲಷಣ್ಮುಖನ ಜಾಣ್ಮಾತಿಗೊಲಿದ ಶಿವನೊಲ್ವನೆನಗಂ ||

ಕೈಲಾಸ

ಪೊಳೆವ ಕೆಂಜಡೆಮುಡಿಯ ಬಳಿಯ ಮೈಕಾಂತಿಯಂ |
ಕೆಳೆಗೊಂಡ ಶಿವಮೂರ್ತಿ ಬಡಬಾಗ್ನಿಯಂ ಮೇಲೆ |
ತಳೆದು ಜಗವೆಲ್ಲಮಂ ತುಂಬಿರ್ದ ಪಾಲ್ಗಡಲೆನಿಪ್ಪಂತೆ ಸಾಸಿರಪೆಡೆ ||
ಗಳ ರತ್ನಕಾಂತಿಯುಂ ಸೂಸುತಿಳೆಯುಂ ನೋಡ|
ಲೆಳಸಿ ಬಂದಿರ್ಪ ಶೇಷನ ನಿಲವೊ ಎಂಬಂತೆ |
ತಳಿರೊತ್ತಿದುಪವನವನುಳ್ಳ ರಜತಾದ್ರಿಯೋ ಎನಲೆನ್ನ ಮನದೊಳೆಸೆಗುಂ ||

ಇವನ ಇತರ ಗ್ರಂಥಗಳು ನಮಗೆ ದೊರೆತಿಲ್ಲ.

---

ಲಿಂಗ. ಸು. 1550

ಈತನು ಚೋಳರಾಜಸಾಂಗತ್ಯವನ್ನು ಬರೆದಿದ್ದಾನೆ. ಇವನು ವೀರಶೈವಕವಿ; ತಿಮ್ಮಣ್ಣಮಂತ್ರಿಯ ಮಗನು; ಕನ್ನಡದೇಶದೊಳೊಪ್ಪುವ ಕವಿಗಳಿಗುನ್ನತಗುಣಮಣಿ, ಹರಕವಿಗಳ ಪದಕಮಲಭ್ರಮರ ಎಂದು ಹೇ

ಳಿಕೊಂಡಿದ್ದಾನೆ. ನಮಗೆ ದೊರೆತ ಇವನ ಗ್ರಂಥದ ಪ್ರತಿ 1604ರಲ್ಲಿ ಬರೆದುದಾದುದರಿಂದ ಕವಿಯ ಕಾಲವು ಸುಮಾರು 1550 ಆಗಬಹುದೆಂದು ತೋರುತ್ತದೆ.

ಇವನ ಗ್ರಂಥ

ಚೋಳರಾಜಸಾಂಗತ್ಯ

ಸಂಧಿ 3, ಪದ್ಯ 561. ಇದರ ಕಥಾಗರ್ಭವು ಈ ಪದ್ಯದಲ್ಲಿ ಹೇಳಿದೆ:

ಜಡೆದಲೆಯನು ಕಂಡು ಮುಡಿದಲೆಯನು ಕೊಟ್ಟ | ಕಡುಗಲಿ ಚೋಳನೃಪಾಲ |
ಮೃಡಪದವಿಯ ನೆಱೆ ಪಡೆದ ಕಥೆಯನು | ಪೊಡವಿಯಱಿಯಲುಸಿರುವೆನು ||

ತನ್ನ ಗ್ರಂಥದ ಉತ್ಕೃಷ್ಟತೆಯನ್ನು ಹೀಗೆ ಹೇಳಿದ್ದಾನೆ—

ತಂಗಾಳಿಯ ತಂಪಿನನ್ವೊಲು ಮೋಹನ | ಸಿಂಗಾರವೆಣ್ಣಿನಂದದಲಿ |
ಲಿಂಗನ ಕೃತಿ ರಂಜಿಸುವುದು.
ಸವಿನುಡಿಗಳ ಸೊಂಪು ನವರಸಗಳ ಗುಂಪು | ಶಿವಕವಿಗಳ ಮನದೀಪು |
ಭುವನಜನರ ಹೆಂಪು ಲಿಂಗನ ಕೃತಿ.

ಈ ಗ್ರಂಥದಿಂದ ಒಂದು ಪದ್ಯವನ್ನು ತೆಗೆದು ಬರೆಯುತ್ತೇವೆ—

ನದಿ

ಕುಡಿಕೆಗೆ ಬಂದುದು ಮುನಿಯ ಕರಕೆ ಪೊಗ | ಉಡೆವರಮಾದುದಸುರಗೆ |
ತೊಡವಾದುದು ರಾಮನ ಸರಕೆನುತುಱೆ | ಕಡಲ ನಗುವುದಾನದಿಯು ||

---

## ಸಿರಿನಾಮಧೇಯ ಸು. 1550

ಈತನು ಮಲ್ಲೇಶ್ವರಶತಕವನ್ನು ಬರೆದಿದ್ದಾನೆ. ಇವನು ವೀರಶೈವಕವಿ ; ತೋಂಟದಸಿದ್ಧಲಿಂಗನನ್ನು (ಸು. 1470) ಸ್ತುತಿಸುವುದರಿಂದ ಆತನಿಗಿಂತ ಈಚೆಯವನು ಎಂಬುದು ವ್ಯಕ್ತವಾಗಿದೆ; ಸುಮಾರು 1550 ರಲ್ಲಿ ಇದ್ದಿರಬಹುದು. ಗ್ರಂಥಾಂತ್ಯಗದ್ಯದಲ್ಲಿ "ಸಿರಿನಾಮಧೇಯ ವೀರ ಮಾಹೇಶ್ವರ" ಎಂದು ತನ್ನನ್ನು ವಿಶೇಷಿಸಿ ಹೇಳಿಕೊಂಡಿದ್ದಾನೆ.

ಇವನ ಗ್ರಂಥ

ಮಲ್ಲೇಶ್ವರಶತಕ.

ಇದರಲ್ಲಿ 111 ವೃತ್ತಗಳಿವೆ. ಇವು ಪ್ರಾಯಿಕವಾಗಿ ಶ್ರೀಶೈಲಮಲ್ಲೇ

ಶ್ವರಾ ಎಂದು ಮುಗಿಯುತ್ತವೆ; ಕೆಲವು ಮಾತ್ರ ಗಿರಿಮಲ್ಲಿಕಾರ್ಜುನಾ ಎಂದು ಮುಗಿಯುತ್ತವೆ ಈ ಗ್ರಂಥವು ಈಶ್ವರಸ್ತುತಿರೂಪವಾಗಿಯೂ ವೀರ ಶೈವಸಿದ್ಧಾಂತಬೋಧಕವಾಗಿಯೂ ಇದೆ. ಇದರಲ್ಲಿ ಗುರು, ಲಿಂಗ, ಜಂ ಗಮ, ಪಾದೋದಕ, ವಿಭೂತಿ, ರುದ್ರಾಕ್ಷಿ, ಪಂಚಾಕ್ಷರಿ, ಪ್ರಸಾದ ಇವು ಗಳ ಮಹಿಮೆ ವರ್ಣಿತವಾಗಿರುವುದರಿಂದ ಇದಕ್ಕೆ ಅಷ್ಟಾವರಣಸ್ತವ ಎಂಬ ಹೆಸರೂ ಇರುವಂತೆ ತೋರುತ್ತದೆ ಇದರ ವಿಷಯವಾಗಿ ಕವಿ ಹೀಗೆ ಹೇಳುತ್ತಾನೆ—

ಇಂತಷ್ಟಾವರಣಸ್ತವಾಂಕಮನಿದಂ ಶ್ರೀಶೈಲಮಲ್ಲೇಶನಾ |
ಮಂ ತಳ್ತೊಪ್ಪುವ ಪಾಂಗಿನಿಂ ಸದಮಳಾರ್ಥಂ ರಂಜಿಪಂತೊಲ್ದು ಪೇ ||
ೞ್ವಂ ತತ್ತ್ವಾರ್ಥವಿದಂ ಶಿವೈಕ್ಯಪದಪಂಕೇಜಾತಭೃಂಗೋಪಮ |
ಸ್ವಾಂತಂ ತಾಂ ಸಿರಿನಾಮಧೇಯನನಘಂ ಸದ್ಭಕ್ತಿಯಿಂ ಯುಕ್ತಿಯಿಂ ||

ಗ್ರಂಥಾವತಾರದಲ್ಲಿ ಈಶ್ವರಸ್ತುತಿ ಇದೆ. ಬಳಿಕ ಕವಿ ಬಸವ, ಪ್ರಭುದೇವ, ಚೆನ್ನಬಸವ "ಚರಲಿಂಗಕ್ಕೆ ಷಡಂಗಲಿಂಗದಿರವಂ ಪಿಂಡಾದ ಶೂನ್ಯಾಂತಮೆಂದೊರೆದ" ತೋಂಟದಸಿದ್ಧ, ನೀಲಲೋಚನೆ ಇವರುಗಳನ್ನು ಹೊಗಳಿದ್ದಾನೆ. ಗ್ರಂಥಾಂತ್ಯದಲ್ಲಿ ಈ ಗದ್ಯವಿದೆ—

ಇತಿ ಶ್ರೀಮತ್ಪರಮಶಿವಶರಣಚರಣಚಾಮೀಕರಾರವಿಂದನಿಷ್ಯಂದಮಾನಮಕರಂದರ ಸಲಲಾಮಲಲಾಟತಟವಿರಾಜಿತಶ್ರೀಮತ್ಸಿರಿನಾಮಧೇಯವೀರಮಾಹೇಶ್ವರವಿರಚಿತಮಪ್ಪ ಶ್ರೀಶೈಲಮಲ್ಲೇಶ್ವರಾಂಕಿತ ವಿಲಸದಷ್ಟಾವರಣಸ್ತೋತ್ರಶತಕಂ.

ಇದರಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ.—

ಜಗದೊಳ್ ಜವ್ವನಮೈದಿ ನಾರಿ ತನುಜಾಕೋದ್ವಾಹಕೆಲ್ಲಂದದಿಂ |
ಬಗೆಗಾಣೆಂ ನಿಲಯಕ್ಕೆ ಬೀಯಮಿನಿತಿಲ್ಲಂ ನೋಂಪಿ ನಾಳ್ಪೈದುಗುಂ ||
ಜಗದೊಳ್ ನಿಮ್ಮನನೇಕಮಾಗಿ ನುಡಿವಂ ನಾಣಿಲ್ಲವೆಂಬಾಗಳೆಂ |
ತಗಜೇಶಾ ತಿಳಿವುಂಟೆ ನಿಮ್ಮ ನೆನೆಯಲ್ ಶ್ರೀಶೈಲಮಲ್ಲೇಶ್ವರಾ ||
ಶಿರದೊಳ್ ಬೆಳ್ಪವಿರುರ್ವೆ ಸುಕ್ಕಿರೆ ಮೊಗಂ ಬೆಳ್ ಬಾಗೆ ದಂತಂ ಕಟಿ |
ಲ್ದಿರೆ ಶೈಥಿಲ್ಯಮನಾನೆ ಮೈ ನಡುಗೆ ಕೈ ಸರ್ವೇಂದ್ರಿಯಂ ಶಕ್ತಿಗುಂ||
ದಿರೆ ದೋಷಂ ಬಿಡದೊತ್ತೆ ವೃದ್ಧತೆಯನಾಂತಿರ್ಪಲ್ಲಿ ನಿನ್ನಂಘ್ರಿಪಂ |
ಕರುಹಧ್ಯಾನಮದುಂಟೆ ಪೇೞೆನಗೆ ನೀಂ ಶ್ರೀಶೈಲಮಲ್ಲೇಶ್ವರಾ ||

ಬಿಡುವೆನೆ ದೇವ ನಿಮ್ಮ ಪದಮಂ ತಱಿಯಲ್ ಕೊಱೆಯುಲ್ ಸಮಂತು ಕೇಳ್ |
ಸುಡಿ ಜಡಿ ತಿಂದುತೇಗು ಪತಿ ನೀಂ ಸತಿಯೊಂ ಪೆಱತುಂಟೆ ಶಂಭು ನೀಂ ||
ಪಿಡಿ ಬಿಡು ಕೊಲ್ ಕರಂ ಪೊರೆ ವಲಂ ಚಲದಿಂ ಬಲದಿಂದೆ ನಿನ್ನನಾ |
ನೆಡೆವಿಡದೀಗಳೆನ್ನ ಮನದೊಳ್ ನೆರೆವೆಂ ಗಿರಿಮಲ್ಲಿಕಾರ್ಜುನಾ || 1

---

## ಉಜ್ಜೈನೀಶ- ಸು. 1550

ಈತನು ವೀರಶೈವಸಿದ್ಧಾಂತಶಿಖಾಮಣಿಗೂ ಮಗ್ಗೆಯಮಾಯಿದೇವನ ವಿಶೇಷಾರ್ಥಪ್ರಕಾಶಿಕೆಗೂ ಕನ್ನಡಟೀಕೆಯನ್ನು ಬರೆದಿದ್ದಾನೆ. ಇವನು ವೀರಶೈವಕವಿ, ಗೊರಕೋಡ ಮಲ್ಲಿಕಾರ್ಜುನಾಚಾರ್ಯನ ಶಿಷ್ಯನು. ಶ್ರೀಮದಭಿನ್ನಶಾಂತೇಶ್ವರಪ್ರಸಾದಪ್ರಾಪ್ತಪ್ರಸನ್ನಸ್ವಾಂತ, ಷಟ್ಸ್ಥಲಬ್ರಹ್ಮಜ್ಞಾನ ಶಿವಸಿದ್ಧಾಂತಶಿಕ್ಷಾಚಾರ್ಯ, ಶ್ರೀಮದಭಿನ್ನಪ್ರಸನ್ನಶಾಂತೇಶ್ವರಪರಾವತಾರ ಶ್ರೀಮದ್ಗೊರಕೋಡಮಲ್ಲಿಕಾರ್ಜುನಾಚಾರ್ಯಪ್ರಾಪ್ತಪ್ರಸಾದ ಎಂದು ತನ್ನನ್ನು ವಿಶೇಷಿಸಿ ಹೇಳಿಕೊಂಡಿದ್ದಾನೆ. ಇವನು ಮಗ್ಗೆಯ ಮಾಯಿದೇವನ(ಸು. 1430) ಕಾಲಕ್ಕೆ ಈಚೆಯವನು ಎಂಬುದಂತೂ ವ್ಯಕ್ತವಾಗಿಯೇ ಇದೆ;ಸುಮಾರು 1550 ರಲ್ಲಿ ಇದ್ದಿರಬಹುದು.

## ಶ್ರೀಧರಾಂಕ- ಸು. 1550.

ಈತನು ನೀಲಕಂಠನಾಗನಾಥಾಚಾರ್ಯನ ವೀರಮಾಹೇಶ್ವರಾಚಾರಸಂಗ್ರಹಕ್ಕೆ ಕನ್ನಡಟೀಕೆಯನ್ನು ಬರೆದಿದ್ದಾನೆ. ಇವನು ವೀರಶೈವಕವಿ. "ಪದವಾಕ್ಯಪ್ರಮಾಣಜ್ಞ, ವಿಬುಧಜನಕರ್ಣಾಮೃತಸ್ಯಂದಿ" ಎಂದು ತನ್ನನ್ನು ವಿಶೇಷಿಸಿ ಹೇಳಿಕೊಂಡಿದ್ದಾನೆ. ಈಟೀಕೆಯನ್ನು "ಷಟ್ಸ್ಥಲಬ್ರಹ್ಮವಾದಿ ವೀರಶೈವಾಗಮಸುಧಾರ್ಣವಪೂರ್ಣಚಂದ್ರ ಕರ್ಣಾಟದೇಶಜನಾಜ್ಞಾನನಿರ್ಹರಣಾರಾಧ್ಯವರ್ಯ ಗೊರಕೋಡಪುರವರಾಧೀಶ್ವರ ಬೊಪ್ಪಣದೇಶಿಕೇಂದ್ರತನೂಭವ" ಮಲ್ಲಿಕಾರ್ಜುನಾಚಾರ್ಯನ ಆಜ್ಞಾನುಸಾರವಾಗಿ ರಚಿಸಿದಂತೆ ಕವಿ ಹೇಳುತ್ತಾನೆ. ವೀರಶೈವಸಿದ್ಧಾಂತಶಿಖಾಮಣಿವ್ಯಾಖ್ಯಾಕಾರನಾದ ಉಜ್ಜೈನೀಶನು (ಸು. 1550) ಈ ಮಲ್ಲಿಕಾರ್ಜುನಾಚಾರ್ಯನ ಸಮಕಾಲದವನೆಂದು ತಿಳಿವುದರಿಂದ ಈ ಕವಿಯ ಕಾಲವೂ ಸುಮಾರು 1550 ಆಗಬಹುದು.

---

1 ಗುಬ್ಬಿ 29ನೆಯ ಶಾಸನದಲ್ಲಿ (1470) ಶ್ರೀಗಿರಿಮಲ್ಲಿಕಾರ್ಜುನಾ ಎಂದು ಮುಗಿವ 3 ಪದ್ಯಗಳು ಉಕ್ತವಾಗಿವೆ. ಅವು ಈ ಗ್ರಂಥಕ್ಕೆ ಸೇರಿದುವಲ್ಲ.

ತನ್ನ ಟೀಕೆಯ ಉತ್ಕೃಷ್ಟತೆಯನ್ನು ಈ ಪದ್ಯದಲ್ಲಿ ಹೇಳಿದ್ದಾನೆ—

ಇದು ಶಿವಭಕ್ತಚಾತಕಚಯಕ್ಕೆ ಮಹಾಭ್ರ ಶಿವೈಕ್ಯಚಂದ್ರಕಾಂ |
ತದ ಶಿವಹಕ್ಕೆ ಚಂದ್ರಿಕೆ ಮನೋಹರಭಾಕ್ತಿಕಪದ್ಮವೃಂದಸಂ ||
ಪದಕೆ ಖರಾಂಶು ಸಜ್ಜನಸುಚಿತ್ತವನಕ್ಕೆ ವಸಂತ ನಾಡೆ ಸೊಂ |
ಪೊದವಿದ ವೀರಶೈವಘನತಂತ್ರದ ದೀಪಿಕೆ ಭೂತಳಾಗ್ರದೊಳ್ ||

---

## ರಾಮಚಂದ್ರಗುರುಶಿಷ್ಯ ಸು. 1550

ಇವನು ಆದಿತ್ಯಪುರಾಣವನ್ನು ಬರೆದಿದ್ದಾನೆ. ಈತನು ತನ್ನ ಹೆಸರನ್ನು ಹೇಳಿಕೊಂಡಿಲ್ಲ. ಶೃಂಗೇರಿಯ ರಾಮಚಂದ್ರಗುರುವನ್ನು ಸ್ತುತಿಸಿರುವುದರಿಂದ ಆತನ ಶಿಷ್ಯನಾಗಿರಬಹುದೋ ಎಂದು ಇವನ ಹೆಸರನ್ನು ಹಾಗೆ ಮೇಲೆ ಬರೆದಿದ್ದೇವೆ. ಪೂರ್ವಕವಿಗಳಲ್ಲಿ ಕುಮಾರವ್ಯಾಸನನ್ನು (ಸು. 1430) ಸ್ಮರಿಸಿದ್ದಾನೆ. ಶೃಂಗೇರಿಯ ರಾಮಚಂದ್ರಭಾರತಿ 1508 ರಿಂದ 1560 ರ ವರೆಗೆ ಪಟ್ಟದಲ್ಲಿದ್ದಂತೆ ತಿಳಿವುದರಿಂದ ಕವಿಯ ಕಾಲವು ಸುಮಾರು 1550 ಆಗಿರಬಹುದೆಂದು ತೋರುತ್ತದೆ.

ಪೂರ್ವಕವಿಗಳಲ್ಲಿ ಹರೀಶ್ವರ,[1] ಉದ್ಭಟ, ಬಾಣ, ವ್ಯಾಸ, ಮಲುಹಣ, ಶುಕ, ಕಾಳಿದಾಸ, ಕುಮಾರವ್ಯಾಸ ಇವರುಗಳನ್ನು ಸ್ಮರಿಸಿದ್ದಾನೆ.

ಇವನ ಗ್ರಂಥ

### ಆದಿತ್ಯಪುರಾಣ.

ಇದು ಭಾಮಿನೀಷಟ್ಪದಿಯಲ್ಲಿ ಬರೆದಿದೆ; ಸಂಧಿ 48, ಪದ್ಯ 2668 ಇದು "ಶಿವಕಥಾಮೃತವೆಂಬ ಶಿವಕಾವ್ಯ" ವೆಂದೂ ಈ ಗ್ರಂಥಕ್ಕೆ ಕಾಶಿ ವಿಶ್ವನಾಥನೇ ನಾಯಕನೆಂದೂ ಮೊದಲು ಸೂರ್ಯನು ವೈವಸ್ವತನಿಗೂ ಆಮೇಲೆ ಸೂತನು ಋಷಿಗಳಿಗೂ ಹೇಳಿದ ಈಪುರಾಣವನ್ನು ತಾನು ಕನ್ನಡಿಸಿದನೆಂದೂ ಕವಿ ಹೇಳುತ್ತಾನೆ. ಶಬ್ದಮಣಿ ಮೊದಲಾದ ಶಾಸ್ತ್ರವು ಹೊದ್ದಿ

---

1 ಹರವಿರೂಪಾಕ್ಷನನು ನಾಮವ | ಬರೆದು ಬಲ್ಲಾಳಂಗೆ ಲೆಕ್ಕವ |
ನೊರೆದು ಭಾನುವ ನಿಲಿಸಿ ಧರೆಯನು ಸುಡುವ ಪಾವಕನ ||
ಒಱಸಿ ಪೌರಾತನಚರಿತ್ರವ |ನಱಹಿ ಜನ ಕಾಣ್ಬಂತೆ ಲಿಂಗವ |
ಬೆರಸಿದಗೆ ಹಂಪೆಯ ಹರೀಶ್ವರದೇವಗೆಱಗುವೆನು ||

ಕೆಯು ಸಾಹಿತ್ಯಕಲ್ಲದೆ ಹೃದ್ಯಷಟ್ಪದಿಹಾಡುಗಬ್ಬಗಳಿಂಗೆ ಬೇಡೆಂದು ಬರೆವೆ ಬೆಳ್ನುಡಿಯ ಬೆರಕೆಯಲಿ---ಎನ್ನುತ್ತಾನೆ. ತನ್ನ ಕಾವ್ಯದ ಉತ್ಕೃಷ್ಟತೆಯನ್ನು ಈ ಪದ್ಯದಲ್ಲಿ ಹೇಳಿದ್ದಾನೆ---

ಆಱುಕಾಲುಗಳಿಂದ ನಡೆವಳು | ಮೂಱುಹಜ್ಜೆಗಳಿಂದ ರಂಜಿಸಿ |
ಸಾಱಿ ಡಂಗುರಹೊಯ್ಸಿ ಕವಿಗಳಿಗಾನೆ ನೆರವೆಂದು ||
ತೋಱದುಕ್ತಿಯನಧಿಕವೇಗದಿ | ತೋಱಿ ಸೊಗಸನು ಬೀಱಿ ಸುಖವನು |
ಸೂಱೆಗೊಟ್ಟಳು ಕೇಳಿದವರಿಗೆ ಭಾರತೀರನ್ನೆ ||

ಗ್ರಂಥಾವತಾರದಲ್ಲಿ ಶಿವಸ್ತುತಿ ಇದೆ. ಬಳಿಕ ಕವಿ ಅನೇಕದೇವತೆಗಳು, ಋಷಿಗಳು ಮುಂತಾದವರನ್ನು[1] ಹೊಗಳಿದ್ದಾನೆ.

ಈ ಗ್ರಂಥದಿಂದ ಒಂದು ಪದ್ಯವನ್ನು ತೆಗೆದು ಬರೆಯುತ್ತೇವೆ---

ತನ್ನನಱಿವಡೆ ತಾನೆ ಸಾಧನ | ವಿನ್ನು ಬೇಱೊಂದಿಲ್ಲ ತಾನೇ |
ಪೂರ್ಣತೇಜಃಪುಂಜವಿಂತಂತೆಂಬ ಕುಱುಹಿಲ್ಲ ||
ತನ್ನ ತಾನೇ ಬೆಳಗಿ ತನ್ನೊಳು | ತನ್ನ ತಾನೇ ಥಳಥಳಿಸೆ ಹೊಳೆ |
ವುನ್ನತಜ್ಯೋತಿಸ್ವರೂಪವದೆಂದನಾದಿನಪ ||

---

## ಬಸವಾಂಕ ಸು. 1550

ಈತನು ಉದ್ಭಟದೇವಚರಿತೆಯನ್ನು ಬರೆದಿದ್ದಾನೆ. ಇವನು ವೀರ

---

1 ವರದಕರಿನಾಥ, ಶಂಕರನಾರಾಯಣ, ಧುಂಡಿರಾಜನೆಂಬ ಗಣಪತಿ, ಸರಸ್ವತಿ, ಶೃಂಗಪುರಗುರುವರ ರಾಮಚಂದ್ರ, ವಿಷ್ಣು, ಆದಿಬ್ರಹ್ಮ, ವೀರೇಶ, ಷಣ್ಮುಖ, ನಂದಿ, ಭೃಂಗಿ, ರೇಣುಕ, ವೀರೇಶವಲ್ಲಭೆ, ಅನ್ನಪೂರ್ಣಭವಾನಿ, ಕಾಶೀದೇವಿ, ಕಾಲಭೈರವ, ಕಾಶೀಲಿಂಗಗಳು, ಮಣಿಕರ್ಣಿಕಾದಿತೀರ್ಥಗಳು, ಗಣಕೋಟಿಗಳು, ಸನತ್ಕುಮಾರನಾರದಾದಿಮುನಿಗಳು, ವಾಲಖಿಲ್ಯರು, 18 ಪುರಾಣಗಳು (ಶಿವನ ಪೊಗಳಿದ 10, ವಿಷ್ಣುವ ಪೊಗಳಿದ 4, ಬ್ರಹ್ಮನ ಪೊಗಳಿದ 2, ಅರ್ಕನ ಪೊಗಳಿದ 1, ಅಗ್ನಿಯ ಪೊಗಳಿದ 1), ನವಗ್ರಹಗಳು, ಪಿತೃಗಳು, ವಿಶ್ವೇದೇವರು, ವಸುಗಳು, ಪುರಾತನನೂತನಶಿವಶರಣರು, ಬಾದರಾಯಣ, ಸೂತಪೌರಾಣಿಕ, ಶಿವಕಥೆಯನಾದಿತ್ಯಪುರಾಣವ ಪೇಳ್ದ ಸೂರ್ಯ, ಅವನ ಮಗ ವೈವಸ್ವತ.

ಶೈವಕವಿ; ಪೌರಾಣಾಚಾರ್ಯನ ಮಗನು; ಸುಮಾರು 1550 ರಲ್ಲಿ ಇದ್ದಿರಬಹುದು.

ಪೂರ್ವಕವಿಗಳನ್ನು ಈ ಪದ್ಯದಲ್ಲಿ ಸ್ಮರಿಸುತ್ತಾನೆ-

ಮಧುರೋಕ್ತಿಯೊಳಕ್ಷ್ಣಣನ ಬಾಣನ | ಬುಧತತಿಗಮರೋರ್ವೀಜನ ಭೋಜನ|
ವಿಧುಸಿಭಕೀರ್ತಿವಧೂದಿಕ್ಪರ್ಯಟನನ ಕವಿಭಲ್ಲಟನ ||
ವಿಧಿಯಿಂ ಧೀರನ ಚಾತುರ್ಯ.. | ...ಮಯೂರನ ಬಲಪಂದೆರೆವೆಂ |
ಸುಧೆಯಂ ಸೂಸುವ ವಾಗ್ಲಹರಿಯನೆನ್ನೀಕೃತಿಗೀಗೆಂದುಂ ||

ಹರೀಶ್ವರನು ಹಿಂದೆ ಹೇಳಿದ ಈ ಕಥೆಯನ್ನು ತಾನು ಬರೆಯಲು ಯತ್ನಿಸಿದಂತೆ ಈ ಪದ್ಯಭಾಗದಲ್ಲಿ ಹೇಳುತ್ತಾನೆ—

ಹಂಪೆಯ ಹರಿದೇವಾರ್ಯಂ ಚದುರಿಡಿ | ದಿಂಪಿಂದೊರೆದುದ್ಭಟದೇವನ ಕೃತಿ |
ಯಂ ಪೇಟ್ಟ್ವಪೆನೆಂದುಜ್ಜುಗಿಸಿದೆಂ.
ಸಂಪಗೆಯೆಲಜೋಂಪದ ಮುಂದಾವಲ್ಗಂಪಂ ಬೀಱುವವೋಲ್.

ಇವನ ಗ್ರಂಥ

## ಉದ್ಭಟದೇವಚರಿತೆ

ಇದು ವಾರ್ಧಕ,ಪರಿವರ್ಧಿನಿ ಈ ಷಟ್ಪದಿಗಳಲ್ಲಿ ಬರೆದಿದೆ; ಸಂಧಿ 7, ಪದ್ಯ 354. ಇದರಲ್ಲಿ ಗೂರ್ಜರದೇವನ ಅಥವಾ ಉದ್ಭಟನ ಕಥೆ[1] ಹೇಳಿದೆ. ಈ ಗ್ರಂಥದಿಂದಒಂದು ಪದ್ಯವನ್ನು ತೆಗೆದು ಬರೆಯುತ್ತೇವೆ-

ಪಟ್ಟಣದ ಅಗಳು

ಎಣಿಕೆಯನಾಂತುದು ತಳ್ಳಂಕಂಬಿಡ | ದಣಿಯುರಮೊಪ್ಪುವ ಗೋತ್ರಾವಳಿಯು |
ಲ್ಬಣಮಂ ಮಸುಳ್ದತ್ತೆಂತಲ್ಲದೆ ದೋಷಿಗೆಯಿದಿರಿರ್ದ್ದರ್ ? ||
ಮಣಿವುದು ರಿಂಗಣಗುಣಿವುದು ತನ್ನೊಳ | ಗಣಿತಂ ಭಂಗಮೆನುತೆ ಜಲಧಿಯನ |
ತ್ಯಣಕಂಗೆಯ್ದ್ವಾ....ಪುರಿನ ಹೇರಗಱಸೆದಿರ್ಕಂ ||

---

## ಗುರುಲಿಂಗವಿಭು ಸು. 1550

ಈತನು ಭಿಕ್ಷಾಟನಚರಿತೆಯನ್ನು ಬರೆದಿದ್ದಾನೆ. ಇವನು ವೀರಶೈವ

1. Vol. I, 272.

ಕವಿ. "ಕವಿರಾಯ" ಎಂದೂ "ಆಶುಮಧುರಂಚಿತ್ರವಿಸ್ತಾರವೆಂದೆಂಬ ನಾಲ್ಕು ಬಗೆಯ ವಿರಚಿಸಲುಬಲ್ಲ ವಸ್ತುಕಕವೀಂದ್ರರ ವರ್ಣಕಕವೀಶ್ವರರ ಕರ್ಣಾಭರಣ" ಎಂದೂ ಹೇಳಿಕೊಂಡಿರುವುದರಿಂದ ಈತನು ಪ್ರಸಿದ್ಧ ಕವಿಯಾಗಿದ್ದಿರಬೇಕು. ಇವನು ಸುಮಾರು 1550 ರಲ್ಲಿ ಇದ್ದಿರಬಹು ದೆಂದು ತೋರುತ್ತದೆ.[1]

ಇವನ ಗ್ರಂಥ

ಭಿಕ್ಷಾಟನಚರಿತೆ

ಇದು ವಾರ್ಧಕಷಟ್ಪದಿಯಲ್ಲಿ ಬರೆದಿದೆ ; ಸಂಧಿ 3, ಪದ್ಯ 155. ಶಿವನು ದ್ವಾರಾವತಿಗೆ ಹೋಗಿ ಭಿಕ್ಷಾಟನವನ್ನು ಮಾಡಿ ಭಿಕ್ಷಾಪಾತ್ರೆಯಾದ ಅಜಕಪಾಲವನ್ನು ತುಂಬುವಂತೆ ಕೃಷ್ಣನಿಗೆ ಹೇಳಲು ಆತನು ತನ್ನ ತಲೆಯ ರಕ್ತದಿಂದ ಅದನ್ನು ತುಂಬಲಾರದೆ ಭಾರತಯುದ್ಧವನ್ನುಂಟುಮಾಡಿ ಅಲ್ಲಿಯ ರಕ್ತಪ್ರವಾಹದಿಂದ ತುಂಬಿದನು--ಎಂಬುದೇ ಇದರ ಕಥಾಗರ್ಭ. ಈ ಕಥೆ ಹಿಂದೆ ಸೂತನು ನೈಮಿಶಾರಣ್ಯದಲ್ಲಿ ಸನಕಾದಿಮುನಿಗಳಿಗೆ ಹೇಳಿ ದುದು ಎಂದು ಕವಿ ಹೇಳುತ್ತಾನೆ. ಈ ಗ್ರಂಥದ ಉತ್ಕೃಷ್ಟತೆಯನ್ನು ಹೀಗೆಹೇಳಿದ್ದಾನೆ---

ಎಸೆದಿಹ ಸುರೇಖೆಯಿಂದಂ ಭಾವದಿಂ ರೂಪಿ |
ನೆಸಕದಿಂ ಕಂಗೊಳಿಪ ಪೊಸದೇಸಿಯಿಂದೆ ರಂ |
ಜಿಸುವಲಂಕಾರದಿಂ ಲಕ್ಷಣೋಚಿತಮಾದ ಸುಶಿರದಿಂ ಶುದ್ಧಾಂಗದಿಂ ||
ರಸರಚನವಿಭ್ರಮವಿಲಾಸದಿಂದಂ ಕೇಳ್ವ |
ರಸಿಕರ ಹೃದಯವೆಂಬ ರಂಗಮಧ್ಯದೊಳು ನ|
ರ್ತಿಸುವ ನಚ್ಚಣೆಯಂತೆ ಶಿವನ ಭಿಕ್ಷಾಟನದ ಕೃತಿ ಮೋಹನವನೀವುದು ||
ಈಮೋಹಕೃತಿ ರಸಿಕರಾಭರಣ ಭಾವುಕರ ಕೋವಿದರ ಮನವನೊಳಕೊಂ
ಡತಿಸೊಬಗ ಬೀಱುತಿಹುದು.
ಹೆಸರು ಹಾಲಯ್ಯನೆರೆದುಣ್ಬುದಂಬಿಲವೆಂದುವುಸಿರುವರ ಗಾದೆಯಂತಲ್ಲವೆನ್ನೀ
ಕೃತಿಯ ಹೆಸರು.

---

1. 216 ನೆಯ ಪುಟವನ್ನು ನೋಡಿ.

ಗ್ರಂಥಾವತಾರದಲ್ಲಿ ಕವಿ ನಂದಿಗಿರೀಶನನ್ನು ಸ್ತುತಿಸಿ ಬಳಿಕ ಬಸವ, ಚೆನ್ನಬಸವ, ಅಲ್ಲಮ, ರೇವಣಾರ್ಯ, ಮಡಿವಳಮಾಚ, ಸಿದ್ಧರಾಮ, ಮಾದಿರಾಜ ಇವರುಗಳನ್ನು ಸ್ಮರಿಸಿದ್ದಾನೆ. ಈ ಗ್ರಂಥಕ್ಕೆ ಒಂದು ಕನ್ನಡ ವ್ಯಾಖ್ಯಾನವಿದೆ. ಇವನ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ-

ಶಂಖ

ಹುಟ್ಟಿದೆಡೆಯೇನಲ್ಪವೇ ಶರಧಿ ತನ್ನೊಡನೆ |
ಹುಟ್ಟಿದವಳೇಂ ಬಡವೆಯೇ ಲಕ್ಷ್ಮಿ ಭಾವನಂ |
ನಿಟ್ಟಿಸುವೊಡೇಂ ಜಾವಳನೆ ಲೋಕರಕ್ಷಿ ಮಾಧವನೆಂಬುದಱಿದೆನ್ನನು ||
ದಿಟ್ಟತನದಿಂದೀಶ್ವರಾಲಯಂಗಳ ಮುಂದೆ|
ದುಷ್ಟತಮ್ಮಡಿ ಕಚ್ಚಿ ಕೊಲುತಿರ್ಪನೆಂದು ಮೊರೆ |
ಯಿಟ್ಟು ಕೂಗುವವೊಲಾಮುಂಜಾವದೊಳು ಪುರದೊಳೊದಱಿದುವು ಶಂಖಂಗಳು||

ಶಿವನಿಗೆ ಭಿಕ್ಷವ ನೀಡಿದ ಸ್ತ್ರೀಯರು

ನಕ್ಷತ್ರಮಂಟಪದೊಳೊರ್ವ ಗೋಪಾಲಸತಿ |
ನಕ್ಷತ್ರರಮಣನನುಜನ ತೊಡೆಯ ಮೇಲಿರ್ದು |
ನಕ್ಷತ್ರಮಂ ಪಿಡಿದು ನಕ್ಷತ್ರದಿಂ ಹಿಮವ ತುಂಬುತಿರಲಾಕ್ಷಣದೊಳು ||
ನಕ್ಷತ್ರರಿಪುಜನಕ ದನಿದೋಱೆ ಬಾಗಿಲೊಳು |
ನಕ್ಷತ್ರದಿಂ ಕೇಳುತೆದ್ದು ಭಿಕ್ಷವ ನೀಡಿ |
ನಕ್ಷತ್ರಪತಿಧರಗೆ ವಂದಿಸಿ ಮರಳಿ ಮನೆಯ ನಕ್ಷತ್ರಮಂ ಸಾರ್ದಳು ||
ಕರಿಯ ತಲೆನೆಱೆಗಣ್ಣೆಗಂಟು ಬೆನ್ನೊಳ್ ನಲಿಯೆ |
ಕರಿಸಾಲೆಯೊಮಡಿಯನುಟ್ಟು ಸಾಕಿಯದೊಂದು|
ಕರಿಯ ಕತ್ತುರಿಬೊಟ್ಟನಿಟ್ಟು ಮಿಂಚುವ ಕಣ್ಗೆ ಕರಿಯ ಕಾಡಿಗೆಯನೆಚ್ಚಿ ||
ಕರಿಯನೇಱಿಲಹಣ್ಣಾ ಪೋಲ್ವ ಮೈವೆಳಗಚ್ಚ |
ಕರಿಯ ಮುಗಿಲಂ ಜಱೆಯೆ ಕರಿಯಗೋವಳಿತಿ ಮದ |
ಕರಿದನುಜಹರಗೆ ಭಿಕ್ಷವ ನೀಡಿ ಮುಂಗಾರ ಸಿರಿಯಂತೆ ಕಣ್ಗೆಸೆದಳು ||

ಧರ್ಮೋಪದೇಶ

ಕೊಲ್ಲದಿಹುದೇ ಧರ್ಮ ಪರಧನ ಪರಸ್ತ್ರೀಯು |

ನೊಲ್ಲದಿಹುದೇ ಶೀಲವಧ್ಯಾತ್ಮವಿಷಯಮಂ |
ಬಲ್ಲುದೇ ಜ್ಞಾನವೀಶನೆ ದೇವನೆಂದಱಿವುದೇ ಸಕಲಶಾಸ್ತ್ರಂಗಳ ||
ಬಲ್ಲವಿಕೆ ಸತ್ಯವೆ ಚರಾಚರಕೆ ಮಾತೆ ತಾ |
ನಲ್ಲದಿಲ್ಲೆಂದು ನಡೆವುದೆ ಮಾರ್ಗ ಹಲವು ಮಾ |
ತೆಲ್ಲವೇಕೆಂದು ಶ್ರೀಗುರು ಶಿಷ್ಯನಂ ಬೋಧಿಸುತ್ತಿರ್ದನೊಂದೆಡೆಯೊಳು ||

---

## ಕಿಕ್ಕೇರಿಯಾರಾಧ್ಯ ನಂಜುಂಡ ಸು. 1550

ಈತನು ಭೈರವೇಶ್ವರಕಾವ್ಯವನ್ನು ಬರೆದಿದ್ದಾನೆ. ಇವನು ವೀರಶೈವಕವಿ; ಇವನ ಸ್ಥಳ ಕಿಕ್ಕೇರಿ. ಇವನ ಗ್ರಂಥಕ್ಕೆ ವಿವರಣರೂಪವಾಗಿ ಶಾಂತಲಿಂಗದೇಶಿಕನು 1672 ರಲ್ಲಿ ಭೈರವೇಶ್ವರಕಾವ್ಯಕಥಾಸೂತ್ರರತ್ನಾಕರ ಎಂಬ ಗ್ರಂಥವನ್ನು ಬರೆದಿದ್ದಾನೆ. ಕವಿಯ ಕಾಲವು ಸುಮಾರು 1550 ಆಗಿರಬಹುದು. ಪೂರ್ವಕವಿಗಳನ್ನು ಈ ಪದ್ಯದಲ್ಲಿ ಸ್ಮರಿಸುತ್ತಾನೆ-

ಬಾಣಮಯೂರನ ಜಾಣಗುಜ್ಜರನ ಬಿ | ನ್ನಾಣ ಮಲ್ಹಣನುಬ್ಬ ಮಲಯ |
ಕ್ಷೋಣೀಶನೇಱ್ಗೆ ಕಟ್ಟಾಣಿಹರೀಶನುಕ್ತಿ | ಕಾಣಿಪುದೀಕೃತಿಯೊಳಗೆ ||

ಮತ್ತೊಂದುಕಡೆ ಪಾಲ್ಕುರಿಕೆಸೋಮನ ಹೆಸರನ್ನೂ ಹೇಳಿದ್ದಾನೆ.

ಇವನ ಗ್ರಂಥ

### ಭೈರವೇಶ್ವರಕಾವ್ಯ

ಇದು ಸಾಂಗತ್ಯದಲ್ಲಿ ಬರೆದಿದೆ; ಸಂಧಿ 5 ಪದ್ಯ 127. ಇದರಲ್ಲಿ "ಸಾಸಲಪುರದ ಸೋಮೇಶನುನ್ನತಭೈರವೇಶನಿಗೊಲಿದು ಕೈಲಾಸಾವಾಸಕೊಯ್ದ ಕಥೆ" ಹೇಳಿದೆ. ಈ ಗ್ರಂಥದ ವಿಷಯವಾಗಿಯೂ ಕಥಾನಾಯಕನ ವಿಷಯವಾಗಿಯೂ ಭೈರವೇಶ್ವರಕಾವ್ಯಕಥಾಸೂತ್ರರತ್ನಾಕರದಲ್ಲಿ ಹೀಗೆ ಹೇಳಿದೆ—

ಬಸವಾದಿಗಳು 777 ಪುರಾತನರಾಗಿ ಮರ್ತ್ಯಕ್ಕವತರಿಸಿ ವೀರಶೈವಾಚಾರದಿಂದ ಅಷ್ಟಾವರಣಮೊದಲಾದ ಶಿವಾಚಾರವನುದ್ಧರಿಸಿ ಮರ್ತ್ಯದಲ್ಲಿ ನಿತ್ಯಾನಂದನಿಜಲಿಂಗೈಕ್ಯರಾಗಿರುತ್ತುಂ ಮರ್ತ್ಯಲೋಕದ ಮಣಿಹವಂ ಪೂರೈಸಿ ಕೈಲಾಸಕ್ಕೈದಿದರ್. ಬಳಿಕ ಶಿಲವಾದ ವೀರಶೈವಾಚಾರವನುದ್ಧರಿಸಲು ಶಿವನು ಕಾಲಸಂಹಾರನೆಂಬ ಗಣೇ

ಶ್ವರನನು ಆಂಧ್ರದೇಶದಲ್ಲಿ ಮೋಪೂರೆಂಬ ಪಟ್ಟಣದ ಅರಸು ಸಂಗಮರಾಜ ಹೆಂಡತಿ ಹೈಮಾವತಿ ಇವರಿಗೆ ಭೈರವರಾಜನೆಂಬ ಮಗನಾಗಿ ಹುಟ್ಟುವಂತೆ ನೇಮಿಸಿದನು. ಭೈರವರಾಜನು ಪ್ರಭುಡಾಚಾರ್ಯನೆಂಬ ಪೌರಾಣಿಕನಲ್ಲಿ ಪೂರ್ವಕಥೆಗಳನ್ನು ಕೇಳುತ್ತ ಶಿವಭಕ್ತಿನಿಷ್ಠಾಪರರಾರೆಂದು ಕೇಳಲು—ಮನುಮುನಿಯಕ್ಷರಾಕ್ಷಸರುಂ ಅಱುವತ್ತುಮೂಱು ಪುರಾತನರುಂ ಶೈವದಲ್ಲಿ ಮುಕ್ತಿಯಂ ಪಡೆದರ್; ದಶಗಣ, ತೇರಸಗಣ, ಷೋಡಶಗಣ, ಪ್ರಮಥಗಣ, ರುದ್ರಗಣ, ಅಮರಗಣ, ಭಕ್ತಗಣ ಮೊದಲಾದ 777 ಪುರಾತನರುಂ ನೂತನಪುರಾತನರುಂ 101 ವಿರಕ್ತರುಂ ವೀರಶೈವದಲ್ಲಿ ಶಿವನ ಕೃಪಾಪ್ರಸನ್ನತ್ವಮಂ ಪಡೆದರ್—ಎಂದುದಂ ಕೇಳ್ದು ಗಂಡಹೆಂಡಿರು ಭಕ್ತಿಯುಕ್ತರಾಗಿರಲು ಶಿವನು ಸ್ವಪ್ನದಲ್ಲಿ ಬಂದು "ನೀನು ಹೆಂಡತಿಯೊಡನೆ ಮಲ್ಲಿಪಟ್ಟಣಕ್ಕೆ ಪೋಗಿ ಅಲ್ಲಿ ಗುರುಕರುಣಮಂ ಪಡೆದು ಸಾಸಲಿಗೆ ಪೋಗಿ ಜಂಗಮಾರ್ಚನೆಯ ಮಾಡು; ನಿನಗೆ ನಿತ್ಯಾನಂದಸುಖವನೀವೆನು, ಎನ್ನ ಪೆಸರು ಸಾಸಲ ಸೋಮೇಶ್ವರ" ಎಂದನು. ಅದೇ ಮೇರೆಗೆ ಭೈರವರಾಜನು ಮಲ್ಲಿಪಟ್ಟಣಕ್ಕೆ ಪೋಗಿ ಅಲ್ಲಿಯ ದೊರೆಯಾದ ರಾಮರಾಜನಿಂ ಮನ್ನಣೆವಡೆದು ಹಾಲಸೋಮೇಶಗುರುವಿನ ರೂಪದಲ್ಲಿ ಬಂದ ಸಾಸಲಸೋಮೇಶನಿಂದ ದೀಕ್ಷೆವಡೆದು ಅನೇಕಪವಾಡಗಳನ್ನು ಮಾಡಿ ಕೊನೆಗೆ ಶಿವನಿಂದ ಕೈಲಾಸಕ್ಕೆ ಒಯ್ಯಲ್ಪಟ್ಟನು. ಚಿಕ್ಕಣಾರ್ಯ, ಸಾಸಲಶಂಭುನೃಪತಿ, ಕಿಕ್ಕೇರಿಯ ಮಲ್ಲಣಾರ್ಯ ಇವರು ಭೈರವರಾಜನ ಸಮಕಾಲದವರು. ಈ ಕಥೆಯನ್ನು ಕಿಕ್ಕೇರಿಯಾರಾಧ್ಯ ನಂಜುಂಡೇಶನೆಂಬ ಶಿವಕವೀಶ್ವರನು ವಸ್ತುಕವರ್ಣಕದಿಂದ ನವರಸಾರ್ಥ 18 ಶೃಂಗಾರಯುಕ್ತಮಾದ ಕರ್ಣಾಟಕಕಾವ್ಯಪ್ರಬಂಧಮಾಗಿ ಪೇಳಿದನು.

ಈ ಗ್ರಂಥದಉತ್ಕೃಷ್ಟತೆಯನ್ನು ಕವಿ ಈ ಪದ್ಯಗಳಲ್ಲಿ ಹೇಳಿದ್ದಾನೆ-

ಭಕ್ತಿಯ ತಾಣ ಸನ್ಮುಕ್ತಿಯ ಸದನ ವಿ | ರಕ್ತಿಯ ಸೀಮೆ ಮೋಹನದ |
ಸೂಕ್ತಿಯ ಸಿರಿ ಸರಸೋಕ್ತಿಯ ನೆಲೆಯಾಗಿ| ವ್ಯಕ್ತವಾಗಿರ್ಪುದೀಕಾವ್ಯ||
ಚದುರರ ಮಚ್ಚು ಮೇಣ್ ಬುಧರಚ್ಚು ಸತ್ಕಲಾ | ವಿದರ ವಿಲಾಸದ ಪೆರ್ಚು |
ಮುದದೊಳೋದುವರ ಭಾವದ ಕೆಚ್ಚು ನಂಜ ಪೇ|ೞಿದ ಕಾವ್ಯವಧಾರಣ್ಯಾಗಿಚ್ಚು||

ಗ್ರಂಥಾವತಾರದಲ್ಲಿ ಶಿವಸ್ತುತಿ ಇದೆ. ಬಳಿಕ ಕವಿ ಪಾರ್ವತಿ, ವೀರಭದ್ರ, ಗಣೇಶ, ಸರಸ್ವತಿ, ನಂದಿ, ಭೃಂಗಿ, ಸ್ಕಂದ ಇವರುಗಳನ್ನು ಹೊಗಳಿದ್ದಾನೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ-

ಶಾಲಿವನ

ಪಸುರಾಗಿ ಪೊಡೆಯಾಗಿ ಕುಸಿದು ಬಳ್ಕುತ ರಾಗ | ರಸದೀವಿ ಮೆಱೆವ ಶಾಲಿಗಳ |

ಮುಸುಱಿ ಪಾಲ್ದೆನೆಗಳ ಪೊಸರಸವೀಂಟಿ ರಾ | ಗಿಸುವ ಶುಕಾಳಿ ರಾಜಿಪುದು ||

ಉದ್ಯಾನವನ

ಪೂಗಂಪನುಂಡುಂಡು ರಾಗಿಪ ಭ್ರಮರಂಗಳ್ | ಕೇಗುವ ಸೋಗೆ ಸೊಕ್ಕೇಱಿ |
ಕೂಗುವ ಪಿಕ ಮಂದವೇಗದಂಚೆಗಳಿನಿಂ | ಬಾಗಿ ಕೇಳೀವನಮಿಹುದು ||

ಸಮುದ್ರ

ನೊರೆ ನರೆ ತೆರೆಗಳೆ ತೆರೆ ಕಂಪ ಕಂಪ ಸೀ | ಕರ ಬಾಯಿತುಂತುರಾವರ್ತ|
ದರಿಗಣ್ಣುಡುಗಿದಡಿ ಸರ ಘೋಷ ತನು ಮೆತ್ತ | ನಿರೆ ವೃದ್ಧನಂತಿರಂಭೋಧಿ ||

---

ಸುಕುಮಾರಭಾರತಿ ಸು. 1550

ಈತನು ಭಾರತವನ್ನು ಬರೆದಿದ್ದಾನೆ ; ಇದಕ್ಕೆ ಚಾಯಣ ಭಾರತ ಎಂಬ ಹೆಸರಿರುವಂತೆ ತೋರುವುದರಿಂದ ಇವನ ಹೆಸರು ಚಾಯಣ ಎಂದಿರಬಹುದು ; ಸುಕುಮಾರಭಾರತಿ ಎಂಬುದು ಬಿರುದಾಗಿರಬಹುದು. ಇವನು ಬ್ರಾಹ್ಮಣಕವಿ ; ಔಬಳದ ನರಸಿಂಹನನ್ನು ಸ್ತುತಿಸುವುದರಿಂದ ಆ ಪ್ರಾಂತದವನಾಗಿದ್ದರೂ ಇರಬಹುದು. ನಮಗೆ ದೊರೆತ ಪ್ರತಿ ಅಸಮಗ್ರವಾದುದರಿಂದ ಕವಿಯ ವಿಷಯವಾಗಿ ಇನ್ನೇನೂ ಹೇಳಲಾರೆವು. ಇವನ ಕಾಲವು ಸುಮಾರು 1550 ಆಗಿರಬಹುದೆಂದು ಊಹಿಸುತ್ತೇವೆ.

ಇವನ ಗ್ರಂಥ

ಭಾರತ

ಇದು ವಾರ್ಧಕಷಟ್ಪದಿಯಲ್ಲಿದೆ ; ನಮಗೆ ದೊರೆತ ಅಸಮಗ್ರಪ್ರತಿಯಲ್ಲಿ 2 ಆಶ್ವಾಸಗಳು ಮಾತ್ರ ಇವೆ. ಗ್ರಂಥಾವತಾರದಲ್ಲಿ ಔಬಳನರಸಿಂಹಸ್ತುತಿ ಇದೆ. ಬಳಿಕ ಕವಿ ಗಣೇಶನನ್ನೂ ವ್ಯಾಸನನ್ನೂ ಸ್ತುತಿಸಿದ್ದಾನೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ--

ವಿಷ್ಣುಸ್ತುತಿ

ಶ್ರೀಯುನನವರತ ವಕ್ಷೋಭಾಗದೊಳ್ ವಚ |
ಶ್ರೀಯನೆಂದುಂ ವದನವಾರಿರುಹದೊಳ್ ಜಯ|
ಶ್ರೀಯನಾಗಳು ಭುಜದೊಳೊಪ್ಪೆ ಧರಿಸಿರ್ಪ..ದಾಬಳದ ನರಸಿಂಹನು ||
ಶ್ರೀಯುಮಂ ವರವಚಶ್ರೀಯುಮಂ ನುತಜಯ |

ಶ್ರೀಯುಮಂ ಕೊಟ್ಟಖಿಳಲೋಕಧವಳಿತಯಶ |
ಶ್ರೀಯುಮಂ ಪಾಂಡವಗ್ಗಿ ೯ತ್ತವೋಲಿತ್ತು ಸಲಹುಗೆ ಸಕಲಸಜ್ಜನರನು ||

ಭಾರತಮಹಿಮೆ

ಶ್ರೀಮದಾಗಮಪಯೋರಾಶಿಯಂ ವ್ಯಾಸಂ ಮ |
ನೋಮಂದರದೆ ಕಡೆದು ಪಡೆದಿರ್ದ ಭಾರತಕ |
ಥಾಮೃತವನೀವಿಮಲವಾಕ್ಯಕಲಶದೊಳು ಸುಕುವರಾರಭಾರತಿ ತೀವಿದ ||
ಈಮಹಾಸುಧೆಯನೀಂಟಿದ ಪತಿತನಾದೊಡಂ |
ಧೀಮಾನುಗಳಿಗೆ ಮುರಹರಚರಣತತ್ಪರ |
ಶ್ರೀಮಾನುಗಳಿಗೆ ಸರಿಯಪ್ಪನದುಕಾರಣದಿನೊರೆವೆನಾಸತ್ಕೃತಿಯನು ||

---

## ರಾಮೇಂದ್ರ ಸು- 1550

ಈತನು ಸೌಂದರ್ಯಕಥಾರತ್ನವನ್ನು ಬರೆದಿದ್ದಾನೆ. ಇವನು ರಾಜವಂಶಕ್ಕೆ ಸೇರಿದವನಂತೆ ಕಾಣುತ್ತಾನೆ; ಇವನ ಪಿತಾಮಹನು ಚೆನ್ನಪನೃಪ, ತಂದೆ ರಾಮಭೂಪತಿ. ಕಾಕೊಳಲಧಿಪ ಎಂಬುದರಿಂದ ಇವನು ಆವೂರಿಗೆ ದೊರೆಯಾಗಿದ್ದಂತೆ ತೋರುತ್ತದೆ. ಕಾಕೊಳಲ ಸೋಮೇಶ್ವರನ ಭೃತ್ಯ ಎಂದು ಹೇಳಿಕೊಂಡಿದ್ದಾನೆ. “ರಾಘವಾಂಕಾದಿಗಳು ಪ್ರಾಸ ತೆಗಿಟ್ಟ ಅರಳಲಗಳು ದುಷ್ಟ” ಎಂಬ ಪದ್ಯಭಾಗದಲ್ಲಿ ರಾಘವಾಂಕನ ಹೆಸರನ್ನು ಹೇಳಿದ್ದಾನೆ. ಇವನ ಕಾಲವು ಸುಮಾರು 1550 ಆಗಿರಬಹುದು.

ಇವನ ಗ್ರಂಥ

### ಸೌಂದರ್ಯಕಥಾರತ್ನ

ಇದು ತ್ರಿಪದಿಯಲ್ಲಿ ಬರೆದಿದೆ; ನಮಗೆ ದೊರೆತ ಅಸಮಗ್ರಪ್ರತಿಯಲ್ಲಿ 34 ಸಂಧಿಗಳೂ 1932 ಪದ್ಯಗಳೂ ಇವೆ. ಈ ಗ್ರಂಥದಲ್ಲಿ ಬತ್ತೀಸಪುತ್ತಳಿಯ ಕಥೆ ಹೇಳಿದೆ. ಅಲ್ಲಲ್ಲಿ ಕೆಲವು ಕಂದವೃತ್ತಗಳೂ ಇವೆ. ಕ್ಷೇಮೇಂದ್ರನು ಪೂರ್ವದಲ್ಲಿ ಹೇಳಿದ ಕಥೆಯನ್ನು ತಾನು ಕನ್ನಡಿಸಿದಂತೆ

ಕ್ಷೇಮೇಂದ್ರ ಪೇಳಿದ ಪೂರ್ವಕಥೆಯ | ಪ್ರೇಮದಿಂ ಕಾಕೊಳಲಧಿಪ |

ಪ್ರೇಮದಿಂ ಕಾಕೊಳಲಧಿಪ ರಾಮೇಂದ್ರ |
ಭೂಮೀಶ್ವರನೊರೆದನು ||

ಎಂಬ ಪದ್ಯದಲ್ಲಿ ಹೇಳಿದ್ದಾನೆ. ಆರಂಭದಲ್ಲಿ ಕಾಕೊಳಲ ಸೋಮೇಶ್ವರ ದೇವರ ಸ್ತುತಿ ಇದೆ. ಈ ಗ್ರಂಥದಿಂದ ಒಂದು ಪದ್ಯವನ್ನು ತೆಗೆದು ಬರೆಯುತ್ತೇವೆ--

ಕಾಕೊಳಲ ಸೋಮನಾಥಸ್ತುತಿ

ಶ್ರೀಮದಶೇಷಪಂಕಜಭವಾಂಡಗಳೆಲ್ಲಕೆ ಸೌಖ್ಯಗರ್ಭವೇ |
ದಾಮಮೆನಲ್ಕೆ ಕಲ್ಪಿಸಿದೆ ವಿಷ್ಣುಪಿತಾಮಹಶಕ್ರವಂದ್ಯ ಚಿ ||
ನ್ನಾಮವಿಶೇಷ ಕಾಕೊಳಲದಿವ್ಯನಿವಾಸದ ಸೋಮನಾಥ ನೀಂ |
ರಾಮನೃಪಾಲನಿಷ್ಟವೆನಿಪೀಕೃತಿಗೀವುದು ಯುಕ್ತಿಯೋಜ್ಗಯಂ ||

---

ಬಸವ. ಸು- 1550

ಈತನು ಚಿಕ್ಕಯ್ಯನಸಾಂಗತ್ಯವನ್ನು ಬರೆದ್ದಾನೆ. ಇವನು ವೀರ ಶೈವಕವಿ. ಇವನಿಗೆ ಚೆನ್ನಬಸವ ಎಂಬ ಹೆಸರೂ ಇದ್ದಂತೆ ತಿಳಿಯುತ್ತದೆ. ಇವನ ಗುರು ಕುಪ್ಪಸಗಂತೆಯ ಗಂಗಾಧರಪ್ರಭು. ಕವಿಯ ಕಾಲವು ಸುಮಾರು 1550 ಆಗಿರಬಹುದೆಂದು ತೋರುತ್ತದೆ.

ಇವನ ಗ್ರಂಥ

ಚಿಕ್ಕಯ್ಯನ ಸಾಂಗತ್ಯ

ಸಂಧಿ 4, ಪದ್ಯ 830. ಇದಕ್ಕೆ ಭಕ್ತಿಮೋಹನಸಾರ ಎಂಬ ಹೆಸರೂ ಉಂಟು. ಇದರ ಕಥಾಗರ್ಭವನ್ನು ಕವಿ ಈ ಪದ್ಯಗಳಲ್ಲಿ ಸೂಚಿಸಿದ್ದಾನೆ-

ಈಕೃತಿ ಜೋರಚಿಕ್ಕಯ್ಯನು ಬಸವನ | ತಾ ಕೊಲ್ವೆನೆಂದೈತಂದು |
ವ್ಯಾಕುಲರಹಿತನಾಗಿಯೆ ಮುಕುತಿಯ ಪಡೆ | ದಾಕಥೆಯನು ಬಣ್ಣಿಪುದು ||
ಪೃಥ್ವಿಗುತ್ತರದಲ್ಲಿ ಜೋರಚಿಕ್ಕಯ್ಯನು | ಶಿತಿಕಂಠನ ಭಕ್ತನಾಗಿ |
ಸತಿಯ ಕಣ್ಬೇಟಕ್ಕೆ ಸಿಕ್ಕದೆ ಸಿರವಿತ್ತ | ಕಥೆಯಸಜ್ಜನರು ಲಾಲಿಪುದು ||

ಈ ಗ್ರಂಥದ ಉತ್ಕೃಷ್ಟತೆಯನ್ನು ಕವಿ ಹೀಗೆ ಹೇಳಿದ್ದಾನೆ---

ಬಲ್ಲರಿಗೀಕೃತಿ ಬೆಲ್ಲದ ಮೂಲೆಯು | ನೆಲ್ಲಿ ಸವಿಯೆ ಮಧುರಸವು |

ವಸುಧೆಯೊಳ್ ಕವಿ ಚೆನ್ನಬಸವನ ಕೃತಿ ಬಲ್ಲ | ರಸಿಕರ ಕರ್ಣಾಮೃತವ ||

ಗ್ರಂಥಾವತಾರದಲ್ಲಿ ಶಿವಸ್ತುತಿ ಇದೆ. ಬಳಿಕ ಕವಿ ಪಾರ್ವತಿ, ಗಣೇಶ, ವೀರಭದ್ರ, ಸರಸ್ವತಿ ಇವರುಗಳನ್ನು ಸ್ತುತಿಸಿದ್ದಾನೆ. ಈ ಗ್ರಂಥದಿಂದ ಒಂದೆರಡು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ಸ್ತ್ರೀವರ್ಣನೆ

ನಳಿನಚಂಪಕವಟ್ಟ ಪಲಬಾಳೆಬಾವನ್ನ | ವೆಳಲತೆಕುಮುದಕೇತಕಿಯು |
ಅಳಿಪಿಕಕೊಳಹಂಸೆ ತಳಿತಿರ್ಪವಸದಂತೆ | ಎಳೆಯಳೊರ್ವಳು ರಾಜಿಸಿದಳು ||
ಅಂಬರಗತ್ತಲೆ ತುಂಬಿದ ಸಸಿಕಳೆ | ಬಿಂಬಕೆ ಕುಮುದಗಳರಳೆ |
ಅಂಬುಜ ಮುಗಿದು ರಂಜಿಸುವಿರುಳಂದದಿ | ಸಂಭ್ರಮಿಸಿದಳೊರ್ವ ತರುಣಿ ||

---

## ಗಂಗಾಧರ ಸು. 1550

ಇವನು ರಟ್ಟನ ಜಾತಕವನ್ನು ಬರೆದಿದ್ದಾನೆ. ಈತನು ಬ್ರಾಹ್ಮಣ ಕವಿ; ಶ್ರೀವತ್ಸಗೋತ್ರದವನು ; ಕೊಮ್ಮಣಾರ್ಯನ ಮಗನು ; ನರಸಿಂಹನ ತಮ್ಮನು. ಇವನಿಗೆ ಕವಿತಾಮನೋಹರ ಎಂಬ ಬಿರುದು ಇದ್ದಂತೆ ತಿಳಿಯುತ್ತದೆ. ಕೆಲವುಕಡೆ ಉಭಯಕವಿತಾರತ್ನ, ಉಭಯಕವಿತಾಭರಣ, ಉಭಯಕವಿತಾರಮಣ ಎಂದು ತನ್ನನ್ನು ವಿಶೇಷಿಸಿ ಹೇಳಿಕೊಂಡಿದ್ದಾನೆ. ಇವನು ಸುಮಾರು 1550ರಲ್ಲಿ ಇದ್ದಿರಬಹುದೆಂದು ಊಹಿಸುತ್ತೇವೆ.

ಇವನ ಗ್ರಂಥ

ರಟ್ಟನ ಜಾತಕ

ಇದು ಜ್ಯೋತಿಷಗ್ರಂಥ; ಕಂದವೃತ್ತಗಳಲ್ಲಿ ಬರೆದಿದೆ; 120 ಪದ್ಯಗಳಿವೆ. ಇದರಲ್ಲಿ ಪ್ರಶ್ನಭಾಗ, ಗ್ರಹಗಳಿಗೆ ಷಡ್ಬಲ, ಜಾರಪುತ್ರಲಕ್ಷಣ ಆಯುರ್ದಾಯ ಮುಂತಾದ ವಿಷಯಗಳು ಹೇಳಿವೆ. ಆರಂಭದಲ್ಲಿ ದೇವತಾಸ್ತುತಿ ಏನೂ ಇಲ್ಲ. ವೈದ್ಯ ಜ್ಯೋತಿಷಗ್ರಂಥಗಳೊಳಗೆ ಅಪಶಬ್ದಗಳನ್ನು ನೋಡಕೂಡದು ಎಂದು—

ಪುನರುಕ್ತಮಿದಪಶಬ್ದಮಿ | ದೆನಲಾಗದು ವೈದ್ಯಜೋಯಿಸಂಗಳೊಳೆತ್ತಂ |
ಜನಕತಿಹಿತಮಂ ಪ್ರತಿಬೋ | ಧನೆಯಂ ಕೈಕೊಳ್ವುದೆಂದರಾಮುನಿಮುಖ್ಯರ್ ||

ಎಂಬ ಆದಿಪದ್ಯದಲ್ಲಿ ಹೇಳಿದ್ದಾನೆ. ತನ್ನ ಗ್ರಂಥದ ವಿಷಯವಾಗಿ ಹೀಗೆ ಹೇಳುತ್ತಾನೆ—

ಮೃದುಮಧುರಂ ಗಂಭೀರಂ | ಸದಳಂಕಾರಪ್ರಸಂಗದಿಂ ಸುಭಗಾರ್ಥಂ |
ಸದಮಳವಿವಾಕೃತಿಯೆಂದತಿ | ವಿದಗ್ಧದೈವಜ್ಞರಱಿದು ಪೇೞ್ವರೆ ಮನದೊಳ್ ||

ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ:—

ಗುರುಭೃಗುಜರ್ ಬ್ರಾಹ್ಮಣರಂ |ಬುರುಹಪ್ರಿಯಭೌಮರರಸುಮುಕ್ಕಳ್ ಚಂದ್ರಂ |
ಪರದಂ ಬುಧನೊಕ್ಕಲಿಗಂ | ಸರಸಿಜಹಿತಸೂನು ಮಿಶ್ರಜಾತಿಯನಾಳ್ಗುಂ ||
ಧರಣಿಜಶಶಾಂಕರವಿಸುತ | ರಿರುಳೊಳ್ ದಿನಪೇಂದ್ರಮಂತ್ರಿಶುಕ್ರರ್ ಪಗಲೊಳ್ |
ನಿರುತಂ ಬಲ್ಲಿದರಿಂದುಜ | ನಿರುಳುಂ ಪಗಲುಂ ಸಮಂತು ಬಲ್ಲಿದನೆಂಬರ್ ||
ನರಶುಕ್ಲಮಧಿಕಮಾದೊಡೆ | ಪುರುಷಂ ಸ್ತ್ರೀಯರುಣಮಧಿಕಮಾದೊಡೆ ಪೆಣ್ಣಂ|
ಎರಡುಂ ಸಮವಾಗಿಯೆ ತಾಂ | ಬೆರಸಲೊಡಂ ಪೇಡಿ ಗರ್ಭದೊಳ್ ಸಂಭವಿಕುಂ||
ದುರಿತಯುತೇಂದು ಮೇಷ್ ಗ್ರಹಣಕಾಲದ ಚಂದ್ರನಕೂಡೆ ಲಗ್ನದೊಳ್ |
ಧರಣಿಜನಷ್ಟಮಾಲಯದೊಳಿರ್ದೊಡೆ ಪುಟ್ಟಿದ ಕೂಸು ತನ್ನ ತಾ ||
ಯ್ವೆರಸಳಿಗುಂ ದಿನಾಧಿಪತಿ ತದ್ವಿಧದಂತಿರೆ ಕೂಸು ತಂದೆಯುಂ |
ಬೆರಸಿರೆ ಶಸ್ತ್ರದಿಂ....ದುಡಿಗುಂ ಕವಿತಾಮನೋಹರಾ ||

---

## ಸದಾಶಿವಯೋಗಿ 1554

ಈತನು ರಾಮನಾಥವಿಲಾಸವನ್ನು ಬರೆದಿದ್ದಾನೆ. ಇವನು ವೀರ ಶೈವಕವಿ; ಇವನ ಪ್ರಪಿತಾಮಹನು ಶೃಂಗಾರದ ಸೋಮಣಾರ್ಯ, ಪಿತಾಮಹನು ಗಂಗಾಧರ, ತಂದೆ ಸಾಮವೇದಿಗುರು. ಸಾಮವೇದಿಗುರುಹಸ್ತಾಂಭೋಜಸಂಭೂತನೆಂದು ಹೇಳಿಕೊಂಡಿರುವುದರಿಂದ ತಂದೆಯೇ ಇವನಿಗೆ ಗುರುವಾಗಿದ್ದಂತೆ ತೋರುತ್ತದೆ. ಶಾಂತನೃಪಾಖ್ಯಶೈವಕವಿರಾಜಸಭ್ಯೋನ್ನತನಾಗಿದ್ದಂತೆ ಹೇಳಿಕೊಂಡಿದ್ದಾನೆ; ಈ ಶಾಂತನೃಪನಾರೋ ತಿಳಿಯದು. ಕಥಾನಾಯಕನಾದ ರಾಮನಾಥನ ಅಥವಾ ರಾಮಣಾರ್ಯನ ವಂಶೋದ್ಭವನಾದ ಪ್ರಭುದೇಶಿಕನು ಕವಿಯ ಸಮಕಾಲದವನಾಗಿದ್ದಂತೆ ತಿಳಿಯುತ್ತದೆ. ಆತನ ವಂಶಪರಂಪರೆಯನ್ನು ಹೀಗೆ ಹೇಳುತ್ತಾನೆ:—

ರಾಮಣಾರ್ಯ; ತದ್ವಂಶೋದ್ಭವ ಪರ್ವತಾಚಾರ್ಯ ; ಅವನ ಮಗ ಮಲ್ಲಿಕಾರ್ಜುನಾಚಾರ್ಯ ; ಅವನ ಮಗ ಲಿಂಗಣಾರ್ಯ ; ಅವನ ಮಗ “ ಕ್ರಿಯಾದಿಚರ್ಯಾಕ್ರಮತ್ರಿಲಿಂಗಾರ್ಥಪ್ರಕಾಶಿಕೆಯೆಂಬುತ್ತಮಸಂಗ್ರಹದತಿವಿಸ್ತಾರಮಂ ತ್ರಿಚರಲ್ಲಿಂಗಪೂಜಾ

ಖ್ಯಮಯಮಂ ಶಿವಯೋಗಕಲ್ಪತರುವಂ ಯಥಾರ್ಥವಿಜ್ಞಾನಮೆಂಬ ಸಂಗ್ರಹಮಂ ಮೋಕ್ಷದರ್ಶನಮಂ ತತ್ಸಂಗ್ರಹೋತ್ಕರಮಂ ಪಂಚವಿಧತ್ವದಿಂ ಶ್ರೀಸಾರಸಿದ್ಧಾಂತಮಂ" ರಚಿಸಿದ ಆದಿಶಿವಾಗಮಾರ್ಥಸಂದೇಶಿಕನೆಂದು ಕೀರ್ತಿವಡೆದ ಪ್ರಭುದೇಶಿಕ.

ಈ ವರ್ಣನೆಯಿಂದ ಪ್ರಭುದೇಶಿಕನು ದೊಡ್ಡ ಪಂಡಿತನಾಗಿದ್ದಂತೆ ತಿಳಿಯಬಹುದಾಗಿದೆ. ಇವನೂ ಕವಿಯ ಗುರುವಾಗಿದ್ದಂತೆ ತಿಳಿಯುತ್ತದೆ. ತನ್ನ ಗ್ರಂಥವನ್ನು (ರಸಾದ್ರ್ಯಬ್ಧೀಂದು) ಶಕವರ್ಷ 1455 ನೆಯ ಆನಂದ ಸಂವತ್ಸರದಲ್ಲಿ—ಎಂದರೆ 1554 ರಲ್ಲಿ ರಚಿಸಿದಂತೆ ಕವಿ ಹೇಳುತ್ತಾನೆ.

ಇವನಿಗೆ ನವಬಾಣಕವಿ, ವಿಚಿತ್ರವಿದ್ವತ್ಕವಿಕುಲಸಾರ್ವಭೌಮ ಎಂಬ ಬಿರುದುಗಳಿದ್ದಂತೆ ತೋರುತ್ತದೆ.

ಪೂರ್ವಕವಿಗಳನ್ನು ಈಪದ್ಯದಲ್ಲಿ ಸ್ಮರಿಸಿದ್ದಾನೆ—

ಸೋಮೇಶ್ವರಂ ಸಕಳದೇವಬುಧಂ ಹರೀಶಂ |
ಭೀಮಂ ಹಲಾಯುಧನನಾಮಯಕಾಳಿದಾಸಂ ||
ಕ್ಷೇಮೇಂದ್ರನೀಶಕವಿರಾಘವಪಂಡಿತಾದಿ |
ಶ್ರೀಮನ್ಮಹಾಕವಿಗಳೊಲ್ದೆನಗೊಳ್ಪನೀವರ್ ||

ಇವನ ಗ್ರಂಥ

## ರಾಮನಾಥವಿಲಾಸ.

ಇದಕ್ಕೆ ರಾಮನಾಥಗುರುಚರಿತೆ ಎಂಬ ಹೆಸರೂ ಉಂಟು. ಇದ ಚಂಪೂರೂಪವಾಗಿದೆ; ಉಲ್ಲಾಸ 16. ಅಲ್ಲಲ್ಲಿ ಷಟ್ಪದಿಗಳೂ ಇವೆ. ಗ್ರಂಥ ಸಂಖ್ಯೆ 4300 ಇದರಲ್ಲಿ

ಹೊಯಿಸಳದೇಶದೊಳ್ ಮುದ್ರಾಪುರದೊಳ್ ಶ್ರೀರಾಮೇಶ್ವರಲಿಂಗಮೂರ್ತಿಯಿಂ ವೀರಶೈವದೀಕ್ಷೆಯಂ ಪಡೆದು ಅದಂ ಪುಸಿಯೆಂದು ತಿಳಿದು ಶಂಕೆಯಂ ಮಾಡಿದ ಶೈವರ್ಗೆ ಆ ರಾಮೇಶ್ವರಲಿಂಗಮಂ ಸಾಕ್ಷಿಯಂ ನುಡಿಯಿಸಿ ಮೆಱೆದು ಭೂಲೋಕದೊಳ್ ವೀರಶೈವಮತಮೆ ವೇದಾಗಮಶಾಸ್ತ್ರಪುರಾಣಂಗಳೊಳ್ ಉತ್ತರಮೆಂಬುದಂ ಪ್ರಾಚುರ್ಯಂಗೆಯ್ದ ರಾಮನಾಥಾಚಾರ್ಯರ ಚರಿತ್ರವು ಹೇಳಲ್ಪಟ್ಟಿದೆ.

ಈ ಗ್ರಂಥದ ಉತ್ಕೃಷ್ಟತೆಯನ್ನು ಕವಿ ಈ ಪದ್ಯಗಳಲ್ಲಿ ನಿರೂಪಿಸಿದ್ದಾನೆ—

ನವಭಾವಂ ನವರೀತಿಗಳ್ ಗುಣಗಣಂ ಗಾಂಭೀರ್ಯಸಾರಾರ್ಥಗಾ |
ರವಮಾಧುರ್ಯಪದಪ್ರಯೋಗಫಣಿತಿವ್ಯಂಗ್ಯಂ ಕಲಾಪ್ರೌಢಿಮಾ ||
ರ್ದವತತ್ಸಂಧಿಸಮಾಸಚಿತ್ರರಚನಾಸೌಕರ್ಯಸುಂದರ್ಭಸೌ |
ಷ್ಠವಚಾತುರ್ಯಜಮತ್ಕೃತಿಪ್ರಥಿತಮಿಾಮತ್ಕಾವ್ಯಮುದ್ಯದ್ಯಶಂ ||
ಗತಿಲೀಲಾವತಿ ಸುಪ್ರಯೋಗತರವೃತ್ತಿನ್ಯಾಸೆ ಯುಕ್ತಾರ್ಥಸಂ |
ಗತಿಸಂಪನ್ನಕುಮಾರಸಂಭವೆ ಲಸತ್ಸಂಗೀತರತ್ನಾಕರೆ ||
ಸ್ತುತಿಚಿಂತಾಮಣಿವರ್ಧಮಾನಕಿರಣಾವಲ್ಯುಲ್ಲಸತ್ಕಂದಳೀ |
ಶ್ರುತನಾನಾಕೃತಿ ಮತ್ಕೃತಿ ಪ್ರಥಿತಮಾಯ್ತೀವರ್ಣಿಸೆಂ ಧಾತ್ರಿಯೊಳ್ ||
ಇಂದುಜ್ಯೋತ್ಸ್ನಾರವಿಂದಸ್ಫಟಿಕಶುಚಿಯಶಃಸ್ಯಂದನಂ ವ್ಯಂಗ್ಯತುಂದಂ |
ಛಂದಃಸ್ಪಂದಾತ್ಮಮಂದಪ್ರಕೃತಿಕೃತಿಮಹಾಮಂದಮಾಲಾಮರಂದಂ ||
ಒಂದುಂ ಕುಂದಿಲ್ಲದಂದಂದಳೆದ ಕೃತಿ ಮನೋನಂದನಂ ಸ್ವರ್ಥಸ್ಯಂದಂ |
ಕಂನಂ ಮುದ್ವಲ್ಲಿಕಂದಂ ನೆಱೆದುಮನಸಿಯೊಳ್ ವಂದಿಕೇಕೀಂದ್ರಕಂದಂ ||

ಗ್ರಂಥಾವತಾರದಲ್ಲಿ ಕವಿ ರಾಮನಾಥಾಚಾರ್ಯನನ್ನು ಸ್ತುತಿಸಿದ್ದಾನೆ. ಬಳಿಕ ಪಂಡಿತಾರಾಧ್ಯರನ್ನು ಸ್ತುತಿಸಿ ರಾಮನಾಥಾಚಾರ್ಯವಂಶೋದ್ಭವನಾದ ಪ್ರಭುದೇಶಿಕನನ್ನು ಹೊಗಳಿದ್ದಾನೆ. ರಾಮನಾಥಾಚಾರ್ಯನ ಕಾಲದಲ್ಲಿ ಕೀರ್ತಿಚಂದ್ರರಾಜ ಎಂಬ ಒಬ್ಬ ದೊರೆ ಇದ್ದಂತೆ ತಿಳಿಯುತ್ತದೆ. ಉಲ್ಲಾಸಗಳ ಕೊನೆಯಲ್ಲಿ ಈ ಗದ್ಯವಿದೆ-

ಇದು ಶ್ರೀಮದಖಿಳಭುವನಭವನಾಂತರ್ಗತಾನಂತವಿಮಲತರವಿಚಿತ್ರವಿದ್ವತ್ಕವಿಕುಲಸಾರ್ವಭೌಮ ಸರ್ವಜ್ಞಸದಾಶಿವಯೋಗೀಶ್ವರವಿರಚಿತಮಾದ ರಾಮನಾಥವಿಲಾಸಮೆಂಬ ಮಹಾಪ್ರಬಂಧದೊಳ್.[1]

ಈಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ-

ಚಂಪಕ

ರಸಹೀನಂ ಕಠಿನಂ ಸುಗಂಧರಹಿತಂ ಸಂತಪ್ತರೂಪಂ ಪರೀ |
ಕ್ಷಿಸಲೆಂತುಂ ಬಹುವರ್ಣಸಂಕರನಿಜವ್ಯಾಪಾರಿಯೆಂದುರ್ವಿಯೊಳ್ ||

1 ನಮಗೆ ದೊರೆತ ಪ್ರತಿಯ ಅಂತ್ಯದಲ್ಲಿ ಗ್ರಂಥವು ಹುಟ್ಟಿದ ಮೂರನೆಯ ವರ್ಷದಲ್ಲಿಯೇ, ಎಂದರೆ 1555ರಲ್ಲಿ, ಅದನ್ನು ಬ್ರಹ್ಮ ಎಂಬವನು ಪ್ರತಿಮಾಡಿದಂತೆ ಹೇಳಿದೆ.

ರಸಯುಕ್ತಂ ಮೃದುಳಂ ಸುಗಂಧನಿಧಿ ತಾಪಾಸ್ಯಂ ಸ್ವಕೀಯೈಕವ |
ರ್ಣಸಮುದ್ಭಾಸಿತಚಂಪಕಂ ಪೞಿದುವಾಪೊನ್ನಂ ತದುದ್ಯಾನದೊಳ್ ||

ಕರಡಿ

ತಲೆವಾಗುತ್ತಡಿಯಿಟ್ಟು ತೂಂಕಡಿಸುತುಂ ತೂಗುತ್ತೆ ತೇಗುತ್ತುಮಿ |
ರ್ಕೆಲನಂ ನೋಡುತೆ ಜೇನ್ಗಳಿರ್ಪೆಡೆಗಳಂ ಕಾಣುತ್ತವಂ ಕೊಂಡು ಬಂ ||
ದೊಲವಿಂದಂ ಬೆಳ್ವಣ್ಗಳೊಳ್ ಕಲಸುತಿರ್ಪಾಪೂರ್ತಿ ಯುಪ್ಪನ್ನೆಗಂ |
ಪೊಱುತಾನಂದಿಸುತಿರ್ಪ ಪೆರ್ಗರಡಿವಿಂತಿರ್ದತ್ತು ತನ್ನಿಚ್ಚೆಯಿಂ ||

ಕೋಡಗ

ಒಲ್ದೊನೆಯೊಂದನೇಱಿ ಕುಳಿತಳ್ಕದೆ ನಟ್ಟಿದಿರಲ್ಲಿ ಪೆಣ್ಗಳಂ |
ಪಲ್ಗಿಱಿದೇಡಿಸುತ್ತೆ ಕಿಱುಕೆಱೆನುತುಂ ಬಱಿಯುಂ ಒರುಂಟಿ ಪು ||
ರ್ಚಲ್ಗಿಸಿ ಕಣ್ಗಳಂ ಮುಗಿದು ಝುಮ್ಮೆಸಲರ್ಚುತೆ ಪೆಣ್ಗಳಿಟ್ಟ ಕಿ |
ರ್ಗಲ್ಗಳನೊಂದಿನಿತ್ತೊಲೆದು ತಪ್ಪುತೆ ಕಾಡಿದುದೊಂದು ಕೋಡಗಂ ||

ಸೌಂದರ್ಯ

ನಳನಳಿಕೆಯ ಗರಗರಿಕೆಯ | ಕಳಕಳಿಕೆಯ ಗರುವಿಕೆಯ ವಿಡಾಯದ ಗಮಕದ |
ಜಳಬಳಿಕೆಯ ಚೆಲ್ವಿಕೆಯೊ | ಬ್ಬುಳಿಯೆಳೆಯುಳ ಸೊಬಗು ನೋಡಲತ್ಯಾಶ್ಚರ್ಯಂ ||

---

## ರತ್ನಾಕರವರ್ಣಿ- 1557-

ಈತನು ತ್ರಿಲೋಕಶತಕ, ಅಪರಾಜಿತೇಶ್ವರಶತಕ, ಭರತೇಶ್ವರಚರಿತೆ, ಹಾಡುಗಳು ಇವುಗಳನ್ನು ಬರೆದಿದ್ದಾನೆ. ರತ್ನಾಕರಾಧೀಶ್ವರಶತಕವನ್ನೂ ಈತನೇ ಬರೆದನೆಂದು ಪ್ರತೀತಿಯಿದೆ. ಆದರೆ ಆಶತಕವು ಹಂಸರಾಜನೆಂಬ ಬೇರೆ ಒಬ್ಬ ಕವಿಯಿಂದ ರಚಿತವಾದಂತೆ ಆಗ್ರಂಥದಿಂದ ತಿಳಿಯುತ್ತದೆ. ಅಲ್ಲದೆ ರತ್ನಾಕರವರ್ಣಿಯ ಗ್ರಂಥಗಳಲ್ಲಿ ದೊರೆವ ಅಪರಾಜಿತೇಶ್ವರಮಂದರಸ್ವಾಮಿಗಳ ಸ್ತುತಿಯೂ ಚಿದಂಬರಪುರುಷ, ನಿರಂಜನಸಿದ್ಧ ಎಂಬ ಅಂಕಿತಗಳೂ ಆಶತಕದಲ್ಲಿ ಇಲ್ಲವಾದುದರಿಂದ ಅದು ಅನ್ಯಕವಿಕೃತವೆಂಬುದು ದೃಢವಾಗುತ್ತದೆ.

ಇವನು ಜೈನಕವಿ. ಇವನಿಗೆ ರತ್ನಾಕರಸಿದ್ಧ, ರತ್ನಾಕರ ಅಣ್ಣಗಳು ಎಂಬ ಹೆಸರೂ ನಿರಂಜನಸಿದ್ಧ ಎಂಬ ಬಿರುದೂ ಇದ್ದಂತೆ ತಿಳಿಯುತ್ತದೆ.

ತನ್ನನ್ನು 'ಕ್ಷತ್ರಿಯವಂಶಜನೆಂದು ಕರ್ಣಾಟಕಕ್ಷೇತ್ರಗಳಣ್ಣಗಳೆಂದ್ರ ಧಾತ್ರಿ ನುಡಿವುದು' ಎಂದು ಹೇಳುತ್ತಾನೆ. 'ಜನನಮರಣವುಳ್ಳ ಜನಕರ ನಾಮವ ಪೇಳ್ವುರುರ್ವಿಯೊಳು; ಶ್ರೀಮಂದರಸ್ವಾಮಿ ನನ್ನಯ್ಯನೆಂದಾನು ಸುಖವಡೆದಿಹೆನು' ಎನ್ನುತ್ತಾನೆ. ಇವನ ಸ್ಥಳ ವೇಣುಪುರ (ಮೂಡ ಬಿದಿರೆ), ದೀಕ್ಷಾಗುರು ದೇಶಿಗಣಾಗ್ರಣಿ ಚಾರುಕೀರ್ತಿಯೋಗಿ, ಮೋಕ್ಷ ಗುರು ಹಂಸನಾಥ. ಈ ಹಂಸನಾಥನ ಆಜ್ಞೆಯಿಂದ ಭರತೇಶ್ವರಚರಿತೆ ಯನ್ನು ಬರೆದಂತೆ ಹೇಳುತ್ತಾನೆ.

ಈ ಗ್ರಂಥವನ್ನು ಬರೆದುದಕ್ಕಾಗಿ ಅನೇಕರು ಸಂತೋಷಿಸಿದರು; ಆದರೆ ನಾಲ್ಕೆಂಟುಮಂದಿ ಪ್ರೋಕರು ಬಿಡು ಹೊಸಕವಿತೆಯನು ಎಂದು ಜರೆದು ಹೊಟ್ಟೆಗಿಚ್ಚಿನಿಂದ ಹಿಂಸಿಸಿದರು; ಮಯ್ಯೊಳಗಿದ್ದಾತ್ಮನ ಬತ್ತಲೆಮಾಡಿ ನಾ । ನೊಯ್ಯನೀಕ್ಷಿಸಿದರೆ ತಾವು। ಮಯ್ಯ ಬತ್ತಲೆಮಾಡಿ ಮನವ ಕತ್ತಲೆಮಾಡಿ। ಹುಯ್ಯಲಿಡುತ ಸುತ್ತುತಲಿಹರು; ಏನೇ ನುಹೇಳಿದರೂ ಕೇಳದೆ ತಮಗೆ ಕೀರ್ತಿಹಾನಿಯಾಯ್ತೆಂದು ಬೈದರು; ನಾನು ಸುಮ್ಮ ನಿದ್ದೆನು; ಬುಧರು ರಾಜರುಗಳೇ ಅವರನ್ನು ನೂಕಿಸಿದರು—ಎಂದು ಅಸೂಯಾಪರ ರಿಂದ ತನಗುಂಟಾದ ಕಷ್ಟವನ್ನು ತಿಳಿಸಿದ್ದಾನೆ.

ತ್ರಿಲೋಕಶತಕವನ್ನು 'ಮುಣಿಶೈಲಂಗತಿಯಿಂದುಶಾಲಿಶಕಕಾಲಂ ಸಂದಿರಲ್ ತೌಳವಾಂಗಣದೊಳ್ ವೇಣುಪುರಾಂಕದೊಳ್ ಸೃಜಿಸಿದಂ ರತ್ನಾಕರಾರ್ಯಂ' ಎಂಬುದರಿಂದ ಆ ಗ್ರಂಥವನ್ನು ಶಕ 1479 ರಲ್ಲಿ, ಎಂದರೆ 1557 ರಲ್ಲಿ, ಬರೆದಂತೆ ತಿಳಿಯುತ್ತದೆ. ಭರತೇಶ್ವರಚರಿತೆಯ ಕೊನೆ ಯಲ್ಲಿ ಗ್ರಂಥವು ಪೂರ್ತಿಯಾದಮೇಲೆ ಕೆಲವು ಪದ್ಯಗಳಲ್ಲಿ ಆವನೋ ಒಬ್ಬನು ಶಕ 1582 ಶಾರ್ವರಿಯಲ್ಲಿ-ಎಂದರೆ 1660 ರಲ್ಲಿ-ಪ್ರತಿಮಾಡಿ ದಂತೆ (ಲಿಖಿಯಿಸಿದಂ) ಹೇಳಿರುವುದನ್ನು ನೋಡಿ ಇದೇ ಗ್ರಂಥರಚನಾಕಾ ಲವೆಂದು ಕೆಲವರು ಭ್ರಮಿಸಿರುವಂತೆ ತೋರುತ್ತದೆ. ಸುಮಾರು 10,000 ಪದ್ಯಗಳುಳ್ಳ ಈ ದೊಡ್ಡ ಗ್ರಂಥವನ್ನು ಕವಿ 9 ತಿಂಗಳಲ್ಲಿ ರಚಿಸಿದಂತೆ "ವೃಷಭಮಾಸದಿತೊಡಗಿತು ಕುಂಭಮಾಸದಿ ಕೃತಿ ಪೂರ್ಣವಾಯ್ತು" ಎಂಬ ಪದ್ಯಭಾಗದಿಂದ ತಿಳಿಯುತ್ತದೆ. ಆದರೆ ಕವಿ ವರ್ಷದ ಹೆಸರನ್ನು ಹೇಳಿ ಲ್ಲವಾದುದರಿಂದ ಗ್ರಂಥರಚನಾಕಾಲವು ವ್ಯಕ್ತವಾಗುವುದಿಲ್ಲ.

ದೇವಚಂದ್ರನ ರಾಜಾವಳೀ ಕಥೆಯಲ್ಲಿ (1838) ಈ ಕವಿಯ ವಿಷ ಯವಾಗಿ ಹೀಗೆ ಬರೆದಿದೆ:—

ತುಳುವದೇಶದ ಮೂಡಬಿದರೆಯೊಳ್ ಸೂರ್ಯವಂಶದರಸುಗಳನ್ವಯದೊಳ್ ದೇವರಾಜನ ಪುತ್ರಂಗೆ ಕಡಲಾದಿಪರಮೇಶನ ಪೆಸರಿಡೆ ಬಾಲಕಾಲದೊಳ್ ಕಾವ್ಯಾಲಂಕಾರಲಕ್ಷಣಶಾಸ್ತ್ರದೊಳತಿನಿಪುಣನಾಗಿ ಸಾತತ್ರ್ಯಯಕ್ಕೆ ಕೇಶವವರ್ಯರು ರಚಿಸಿದ ವ್ಯಾಖ್ಯಾನಂಗಳಂ ಕುಂದಕುಂದಾರ್ಯೋಕ್ತ ಅಧ್ಯಾತ್ಮಸಿದ್ಧಾಂತಕ್ಕೆ ಪ್ರಭೇಂದುಗಳು ಮಾಡಿದ ಟೀಕಂ ಸಮಾಧಿಶತಕ ಏಕಸಪ್ತತಿ ಸ್ವರೂಪಸಂಬೋಧನೆ ಮೊದಲಾದನೇಕಪರಮಾಗಮಂಗಳಂ ಹೃದ್ಗತಮಾಗೆ ತಿಳಿದು ಕವೀಶ್ವರನಾಗಿ ಆ ದೇಶದರಸು ಸೋಮವಂಶದ ಭೈರಸ ಒಡೆಯರ ಸಭೆಯೊಳ್ ಶೃಂಗಾರಕವಿಯೆಂಬ ಪೆಸರಾಂತು ವಿದ್ವಾಂಸರ್ಗಧಿಕನಾಗಿ ಯೋಗರತ್ನಾಕರಶಾಸ್ತ್ರಾಭ್ಯಾಸದಿಂ ದಶವಾಯುಗಳಂ ಸಾಧಿಸಿರ್ದು ರತ್ನಾಕರನೆಂಬಭಿಧಾನದಿಂ ಪೂರ್ವವಯಸ್ಸಿನೊಳ್ ಭೈರಸಒಡೆಯರ ಪುತ್ರಿ ಮೋಹಿಸೆ ಸೌಧಾಗ್ರಮನೇಱಿ ವಾಯುಧಾರಣೆಯಂ ಮಾಡಿ ದಶವಾಯುಗಳಂ ಸಾಧಿಸಿ ಯೋಗಾಭ್ಯಾಸದೊಳ್ ಪ್ರೌಢನಾಗಿರ್ದುದಱಿಂದಾಕೆಯೊಳತ್ಯಾಸಕ್ತನಾಗಿ ಆಕೆಯಂ ಕೂಡಲು ಸೌಧಾಗ್ರದ ಮೇಖಲೆಯನೇಱಿ ವಾಯುಧಾರಣೆಯಿಂ ಗವಾಕ್ಷದಿಂದೈದುತ್ತೆ ಅವಳೊಳನೇಹಂ ಮಾಡುತ್ತಿರಲ್ ಅರಸನಱಿದು ಪಿಡಿಯಲುದ್ಯೋಗಿಸಲ್ ಆ ರಾತ್ರಿಯೊಳ್ ಪೋಗಿ ನಿಜಗುರುವಪ್ಪ ಮಹೇಂದ್ರಕೀರ್ತಿಗಳಿಂದ ಅಣುವ್ರತದೀಕ್ಷೆಗೊಂಡು ಆಗಮಂಗಳೊಳತಿನಿಪುಣನಾಗಿ ಅಧ್ಯಾತ್ಮದೊಳಹರ್ನಿಶಂ ಕೂಡಿರೆ, ವಿಜಯಕೀರ್ತಿಗಳೆಂಬ ಪಟ್ಟಾಚಾರ್ಯರ ಶಿಷ್ಯರಾದ ವಿಜಯಣ್ಣಗಳು ದ್ವಾದಶಾನುಪ್ರೇಕ್ಷೆಗಳಂ ಕನ್ನಡದಿಂ ಸಂಗೀತಮಾಗಿ ವೃತ್ತವಚನದಿಂ ಮಾಡಿ ಆನೆಯಮೇಲೆ ಪ್ರಭಾವನೆಯಂ ಮಾಡಿಸಲೀರತ್ನಾಕರಾರ್ಯಂ ಭರತೇಶ್ವರಚರಿತಮಂ 84 ಸಂಧಿಯಂ ಮಾಡಿ ಮಾತಂಗನನೇಱಿಸಿ ಮೆಱೆಯಿಸವೇಱ್ಕೆಂಬುದುಂ ಪಟ್ಟಾಚಾರ್ಯರು ಇದಱೊಳೆರಡುಮೂಱುವಾಕ್ಯಂ ಪುರಾಣಕ್ಕೆ ವಿರೋಧಮಪ್ಪುದಱಿಂದಾಗದೆಂಬುದುಂ ಅದೆ ಸಂವಾದಮಾಗಿ ಚರ್ಚಿಸಿದೊಡೆ ತನ್ನ ತಿರಸ್ಕರಿಸಿ 700 ಶ್ರಾವಕರ ಗೃಹದೊಳ್ ಚರಿಗೆಯಂ ಮಾಡದಿರಲು ನಿಜಾನುಜೆಯಿಂದಾಹಾರಮಂ ಕೊಳ್ಳುತ್ತೆ ಕೋಪಮುದಯಿಸಿ ಆತ್ಮಜ್ಞಾನಿಗೆ ಜಾತಿಕುಲಮಾವುದಾದೊಡಂ ಸಮಮೆಂದು ಲಿಂಗಮಂ ಕಟ್ಟಿಕೊಂಡು ವೀರಶೈವಶಾಸ್ತ್ರಂಗಳಂ ಬಸವಪುರಾಣಂ ಮೊದಲಾಗಿ ಮಾಡಿ ಕೆಲವು ದಿನದಿಂ ಮೇಲೆ ಉಪಶಮವಂ ತಾಳ್ದು ಸನ್ಮಾರ್ಗದೊಳ್ ನಂಬಿ ನಡೆದಂ. ರತ್ನಾಕರಶತಕಂ, ಅಪರಾಜಿತಶತಕಂ, ತ್ರಿಲೋಕಶತಕಂ, ಅಧ್ಯಾತ್ಮಗೀತಂಗಳ್ 2000 ಗ್ರಂಥದಷ್ಟು ಪೇೞಿದಂ. ಶಕವರುಷ 1479 ಸಂದಿರ್ದುದು.

ರಾಜಒಡೆಯರ ಕಾಲವಾದಮೇಲೆ ಚಾಮರಾಜನ ಕಾಲದಲ್ಲಿ ಸಭೆಯಲ್ಲಿ ರತ್ನಾಕರಾರ್ಯ ವಿರಚಿತ ಭರತೇಶ್ವರಚರಿತೆ 84 ಸಂಧಿಯನೋದಿದರು.

ಇವನ ಗ್ರಂಥಗಳಲ್ಲಿ

### 1. ತ್ರಿಲೋಕಶತಕ

ಇದು ಕಂದದಲ್ಲಿ ಬರೆದಿದೆ; ನಮಗೆ ದೊರೆತ ಎರಡು ಪ್ರತಿಗಳಲ್ಲಿ ಪದ್ಯಸಂಖ್ಯೆ ವ್ಯತ್ಯಾಸವಾಗಿದೆ, ಒಂದರಲ್ಲಿ 113, ಮತ್ತೊಂದರಲ್ಲಿ 128; ಕೊನೆಯಲ್ಲಿ 'ಸಪಾದಶತಕಸ್ಯ ಭದ್ರಂಭೂಯಾತ್' ಎಂಬ ವಾಕ್ಯವಿರುವುದರಿಂದ ಎರಡನೆಯ ಸಂಖ್ಯೆಯೇ ಸರಿ ಎಂದು ತೋರುತ್ತದೆ. ಈ ಗ್ರಂಥದಲ್ಲಿ ಜೈನಮತಾನುಸಾರವಾಗಿ ಪ್ರಪಂಚದ ಸ್ಥಿತಿ ಹೇಳಿದೆ. ಗ್ರಂಥವು ನರಕ, ಭವನಲೋಕ, ನರಲೋಕ, ವ್ಯಂತರಲೋಕ, ಜ್ಯೋತಿರ್ಲೋಕ, ಸ್ವರ್ಗಲೋಕ, ಭೋಗಭೂಮಿ, ನಿಗೋದ, ಸಿದ್ಧಲೋಕ ಇತ್ಯಾದಿ ವಿಭಾಗಗಳನ್ನು ಒಳಕೊಂಡಿದೆ. ಗ್ರಂಥಾವತಾರದಲ್ಲಿ ಅಪರಾಜಿತೇಶ್ವರಸ್ತುತಿ ಇದೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ಲೋಕದ ಆಕಾರ

ಅಡಿ ಪಕ್ಕಳವೆಂಬಂದಂ । ನಡು ಝಲ್ಲರಿಯಂತೆ ಮೇಲೆ ಮದ್ದಳೆಯಂ ನೇ ।
ರ್ಪಡಿಸಿರಿಸಿದಂತೆ ಮೊದಲಿಂ । ಕಡೆಮುಟ್ಟಲ್ ನೋಡೆ ಲೋಕದಾಕೃತಿಯೆಸೆಗುಂ ॥

ನರಕ

ಲೋಹದ ಪೆಣ್ಬುತ್ತಳಿಯಂ । ಕಾಹೇಱಿಸಿ ಕಾಸಿ ತಂದು ಪರಸತಿಯಿವಳೊಳ್ ।
ಮೋಹಿಸುತಪ್ಪೆನುತುಂ ಪಿಡಿ । ದಾಹಾದರದಱಿಕೆಯವಗೇ ತಂದಪ್ಪಿಸುವರ್ ॥
ಮೊರೆಯಿಡುವರ್ ಗೋಳಿಡುವರ್ । ದರದರನೆಳೆಯಲ್ಕೆ ಹಲ್ಲ ಕಿರಿವರ್ ಮೊರೆವರ್ ।
ಕಿಱಿಕಿಱಿದಾಗಿರೆ ಮೆಯ್ಯಂ । ಕೊಱೆವಾಗಳ್ ಪುಯ್ಯಲಿಡುವರೇಱುವರ್ ಬೀಱುವರ್ ॥

ಚಿದಂಬರಪುರುಷರು

ತುಂಬಿದ ಚಿದ್ಗುಣಮಂಬರ । ಮೆಂಬಂದದ ಬಯಲ ರೂಪು ಪುರುಷಾಕಾರಮು ।
ಮೆಂಬಿವು ಮೂಱುಂಟವಗೇ ಚಿ । ದಂಬರಪುರುಷರ್ಕಳೆಂದು ಸಾರ್ಥಕನಾಮಂ ॥

ಪಲ್ಯ

ಸಾಗರಮಂ ಸುಜ್ಞಾನದಿ । ಭಾಗಿಸಿ ದಶಕೋಟಿಬಾರಿ ಕೋಟಿಯನಿಟ್ಟಾ ।
ಭಾಗೆಗಳೆಲ್ಲಱೊಳೊಂದೇ । ಭಾಗೆಯ ಕೈಕೊಂಡೊಡೊಂದುಪಲ್ಯಮೆನಿಕ್ಕುಂ ॥

### 2 ಅಪರಾಜಿತೇಶ್ವರಶತಕ.

ಇದು ವೃತ್ತದಲ್ಲಿ ಬರೆದಿದೆ; 127 ಪದ್ಯಗಳಿವೆ; ಪ್ರತಿಪದ್ಯವೂ ಅಪ

ರಾಜಿತೇಶ್ವರಾ ಎಂದು ಮುಗಿಯುತ್ತದೆ. ಇದರಲ್ಲಿ ನೀತಿ, ವೈರಾಗ್ಯ, ಆತ್ಮ ವಿಚಾರ ಈ ಅಂಶಗಳು ಪ್ರತಿಪಾದಿತವಾಗಿವೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ:—

ನುಡಿ ಕಿಱಿದಪ್ಪುದಾಟದೊಳರೋಚಕಮಪ್ಪುದು ಶಾಸ್ತ್ರಗೋಷ್ಠಿಯೊಳ್ |
ಸಿಡಿಮಿಡಿಯಪ್ಪುದಂತೆ ಬಹಿರಂಗದ ನೋಟಕೆ ಕಣ್ಗೆ ಕೊಳ್ಳವಾ ||
ಕಡುಪಿನ ಕಾಲ್ಗಳಾಟವಡಕಕ್ಕೊಳಗಪ್ಪುದು ಬುದ್ಧಿ ಮುಕ್ತಿಯಂ |
ತುಡುಕುತುಮಿರ್ಪುದಲ್ತೆ ಪರಮಾತ್ಮರತಂಗಪರಾಜಿತೇಶ್ವರಾ ||
ಸೊರ್ಕಿ ಶರೀರನಾರಿಧನವೆನ್ನವಿವೆಂದನವಿಲ್ಲಿ ಕರ್ಮಸಂ |
ಸಿರ್ಕೆ ವಿವೇಕಿಗಳ್ ನುಡಿದ ಧರ್ಮಮನೊಲ್ಲದೆ ಕೂಱ ಕೊರ್ಬಿನೊಳ್ ||
ಕರ್ಕಶವೃತ್ತಿಯೊಳ್ ನಡೆಸ ಕಾಮುಕರಂತಕನೊಯ್ವ ಕಾಲದೊಳ್ |
ಮರ್ಕಟನಂತೆ ಪಲ್ಗಿರಿವರೇತಱ ಬಾಳಪರಾಜಿತೇಶ್ವರಾ ||
ನೋಡುವ ನೋಡಿ ಲಾಲಿಸುವ ಲಾಲಿಸುತಾತ್ಮಸುಖಕ್ಕೆ ವಿಸ್ಮಯಂ |
ಮಾಡುವ ಮಾಡಿ ಮೆಚ್ಚುವ ನಿಜಾತ್ಮನೊಳಾಗಳೆ ಮೆಚ್ಚುತೈಕ್ಯದಿಂ ||
ಕೂಡುವ ಕೂಡಿ ಮೆಯ್ಮಱೆವ ತನ್ಮಯನಾಗುತೆ ತಾನೆ ತನ್ನೊಳೋ |
ಲಾಡುವ ಯೋಗಿಯೇ ಅಮೃತಭಾಗಿಯಲಾ ಅಪರಾಜಿತೇಶ್ವರಾ ||
ಇಂಗಡಲೊಳ್ ಮುೞುಂಗಿದವೊಲಿರ್ಪುದು ಮೇಘವಡಂಗಿದಷ್ಟವೆ |
ಳ್ದಿಂಗಳ ಕಾಂತಿಯೊಳ್ ಬೆರಸಿದಂತೆವೊಲಿರ್ಪುದು ಸಿದ್ಧರಾಶಿಯೊಳ್ ||
ಸಂಗತವಾದವೊಲ್ ಮೆಱೆವುದಾತ್ಮನೊಳಾತ್ಮನನಾತ್ಮನಿಂದೆ ಕಂ |
ಚಂಗಱವಂದದಿಂ ನುಡಿಯಲೆನ್ನಳವೇ ಅಪರಾಜಿತೇಶ್ವರಾ ||

## 3. ಭರತೇಶ್ವರಚರಿತೆ

ಇದು ಸಾಂಗತ್ಯದಲ್ಲಿ ಬರೆದಿದೆ; ಸಂಧಿ 80, ಪದ್ಯ 9969. ಇದಕ್ಕೆ ಭರತೇಶವೈಭವ, ಭರತೇಶಸಂಗತಿ ಎಂಬ ಹೆಸರುಗಳೂ ಉಂಟು. ಇದರಲ್ಲಿ ಪ್ರಥಮತೀರ್ಥಂಕರನಾದ ಪುರುಪರಮೇಶ್ವರನ ಹಿರಿಯಕುಮಾರ ಭರತನು 'ಗಣನೆಯಿಲ್ಲದ ರಾಜ್ಯಸುಖದೊಳೋಲಾಡಿ ಧಾ । ರಿಣಿ ಮೆಚ್ಚೆ ಜಿನಯೋಗಿಯಾಗಿ । ಕ್ಷಣಕೆ ಕರ್ಮವ ಸುಟ್ಟು ಜಿನನಾದ' ವೈಭವವು ಹೇಳಿದೆ. ಗ್ರಂಥಾವತಾರದಲ್ಲಿ ಆದಿನಾಥನ ಸ್ತುತಿ ಇದೆ. ಬಳಿಕ ಕವಿ ನವ ಕೋಟಿ ಮುನಿಗಳು, ಹಂಸನಾಥಗುರು, ಸರಸ್ವತಿ ಇವರುಗಳನ್ನು ಸ್ತುತಿ

ಪಿದ್ದಾನೆ. ಸಂಧಿಗಳ ಆದಿಯಲ್ಲಿ ನಿರಂಜನಸಿದ್ಧ ಎಂಬ ಅಂಕಿತವೂ ಅಂತಳಿನಲ್ಲಿ ಅಪರಾಜಿತೇಶ್ವರಮಂದರಸ್ವಾಮಿಗಳ ಸ್ತುತಿಯೂ ಚಿದಂಬರಪುರುಷ ಎಂಬ ಅಂಕಿತವೂ ಇವೆ.

ಕಾವ್ಯಗಳಲ್ಲಿ ಓದುಗಬ್ಬ, ಹಾಡುಗಬ್ಬ ಎಂದು ಎರಡು ಬಗೆ, ಅವುಗಳಲ್ಲಿ ಹಾಡುಗಬ್ಬಕ್ಕೆ ಚಿಟಿಕುಳ ಮುಂತಾದ ನಿಯಮಗಳು ಬೇಕಿಲ್ಲವೆಂದೂ,

ಶೃಂಗಾರಕಾಗಿ ಕಷ್ಟರ ಕಥೆಗೇಳ್ದು ಜ | ನಂಗಳು ಕೆಡಬೇಡವೆಂದು |
ಅಂಗಸುಖಿಯು ಮೋಕ್ಷಸುಖಿಯು ಕಾವ್ಯವನಿಸ್ಸು | ಶೃಂಗಾರದಲ್ಲಿ ಹೇಳುದೆನು ||

ಎಂದೂ ಕವಿ ಹೇಳುತ್ತಾನೆ. ಈ ಗ್ರಂಥದಲ್ಲಿ ತತ್ತ್ವೋಪದೇಶದ ಪ್ರಸ್ತಾವದಲ್ಲಿ ಕೆಲವು ಜೈನಗ್ರಂಥಗಳ ಹೆಸರುಗಳು ಹೇಳಿವೆ. ಇವೆಲ್ಲಾ ಪ್ರಾಯಿಕವಾಗಿ ತಿಳಿದುವುಗಳೇ[1]

ಈ ಗ್ರಂಥವು ಬಹಳದೊಡ್ಡದು; 9 ತಿಂಗಳಲ್ಲಿ ಇದನ್ನು ಪೂರೈಸಿದ ಕವಿಯ ಶಕ್ತಿ ಶ್ಲಾಘಿಸತಕ್ಕುದಾಗಿದೆ. ಇದರಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

### ನರ್ತನ

ನೋಟದೊಳಗೆ ಕೊಂದರೊಮ್ಮೆ ನೋಟಕರನು | ನಾಟಿಸಿ ನಸುನಗೆಯಿಂದ |
ಲೂಟಿಮಾಡಿದರು ಮೈಯೊಲೆದಾಟದಿಂದೆದೆ | ಗೋಟೆಯ ಕೊಂಡರೇನೆಂಬೆ ||
ಸುಳಿದು ಸುತ್ತುವಳು ನಾಟ್ಯದೊಳು ಸಮ್ಮೋಹನ|ಜಳಧಿಯಸುಳಿಯೊ ಎಂಬಂತೆ|
ಬಳಕೆಡಕೊಳೆದು ಹರಿವಳೆಳವಿಸಿಲಲ್ಲಿ | ಯೆಳನಾಗ ಹರಿವಂತೆ ಮುಳಿದು ||

### ಸಂಗೀತ

ಒಳಗುಣ್ಮಿದಾನಂದರಸ ತನ್ನ ತನುತುಂಬಿ | ತುಳುಕಿ ಹೊಱಗೆ ಸೂಸುವಂತೆ |
ತೆಳುವಸುಱಿಂದ ಬಾಯ್ದೆಱೆಯೊಳು ಸುಸ್ವರ | ಮೊಳೆದು ಮೋಹಿಸುತಿದ್ದುದಾಗ||

---

1. ಕುಂಡಕುಂದಾಚಾರ್ಯಕೃತ ಪ್ರಾಭೃತ, ಅನುಪ್ರೇಕ್ಷೆ; ಅಮೃತಚಂದ್ರಸೂರಿಕೃತ ಸಮಯಸಾರಾಂಕನಾಟಕ; ಪ್ರಭಾಕರಭಟ್ಟಕೃತ ಕಥೆ; ಪದ್ಮನಂದಿಕೃತ ಸ್ವರೂಪಸಂಬೋಧನೆ; ಪೂಜ್ಯಪಾದಕೃತಸಮಾಧಿಶತಕ; ಜ್ಞಾನವರ್ಣನೆ, ಯೋಗರತ್ನಾಕರ, ಸುಕಲಾನಿಧಿ, ರತ್ನಪರೀಕ್ಷೆ, ಆರಾಧನಸಾರ, ಸಿದ್ಧಾಂತಸಾರ, ಇಷ್ಟೋಪದೇಶ, ಅಧ್ಯಾತ್ಮನಾಟಕ, ಅಷ್ಟಸಹಸ್ರಿ, ನಿಯಮಸಾರ, ಅಧ್ಯಾತ್ಮಸಾರ. ಅಲ್ಲದೆ–ನೆರಪಿ ಹೊತ್ತಗೆಗಳ ಹೊಱೆಗಟ್ಟಿ ಭವಸೇನ | ಗುರುಗಳಂತವರಾಡುತಿಹರು | ಎಂಬ ಪದ್ಯಭಾಗದಲ್ಲಿ ಸುಮ್ಮನೆ ಪುಸ್ತಕಗಳನ್ನು ಶೇಖರಿಸಿದ್ದ ಒಬ್ಬ ಭವಸೇನಗುರುವನ್ನು ಹೇಳುತ್ತಾನೆ.

ಸುಱಿನಾಭಿಯೊಳುಹುಟ್ಟಿ ಮೇಲ್ಲೆದೆಯೊಳುಬೆಳೆ|ದೊಳುಗೊರಲೊಳುಪಾಲ್ರಿಯುವಡೆದು|
ಎಳೆಯೆಳ ಬ್ರಹ್ಮರಂಧ್ರವನೇಱಿ ಬಾಯ್ದೆಱೆ | ಗೞಿದು ನೋಹಿಸಿದುದಾಳಾಪ||
ಉಕ್ಕಂದವಾಗಿ ತುಂಬಿದ ಗಾನರಸವನು | ದಿಕ್ಕುದಿಕ್ಕಿಗೆ ಚಿಮ್ಮುವಂತೆ |
ಚೊಕ್ಕಚೊಕ್ಕನೆ ತಾನಗಳ ತಂದು ಕೊರಳಲಿ | ಜಕ್ಕುಲಿಸಿದರು ಜಾಣೆಯರು ||
ಚೀಱದೆ ಬತ್ತದೆ ಜಾತಿಯ ಕಟ್ಟಣೆ | ಜಾಱವೆಯೊಡಲ ದಂಡಿಸದೆ |
ಏಱಿಳಿಱಿಯಲಹುದಹುದು ಲೇಸೆನೆ ಸವಿ | ದೋಱಿ ಹಾಡಿದರು ಗಾಯಕರು ||

ತತ್ತ್ವೋಪದೇಶ

ಹೆಣ್ಣ ಸೋಂಕದವನ್ನ ಪುಟವೇಱುತಿಹುದದು| ಹೆಣ್ಣ ತೋಳ್ವಲೆಗೆ ಬಿದ್ದಾಗ |
ಪೊಣ್ಣಪೊಣ್ಣನೆ ಹಾಱುವೆರಳೆ ನೋಸದಿ ಕಾಲು | ಕಣ್ಣಿಗೆ ಸಿಲುಕಿದಂತಿಹುದು ||
ಹೆಣ್ಣ ಹಿಡಿದಮೇಲೆ ಮಣ್ಣ ಹಿಡಿಯಬೇಕು | ಹೊನ್ನ ಹಿಡಿಯಬೇಕು ಸಹಜ |
ಹೆಣ್ಣು ಹೊನ್ನು ಮಣ್ಣುವಿಡಿದಾತ್ಮರೆಲ್ಲರು | ಮಣ್ಣುಹಿಡಿದ ಲೋಹದಂತೆ ||
ತರ್ಕಶಾಸ್ತ್ರವನೋದಿ ತಗರು ತಗರಿನಂತೆ | ನೂಕಿರ್ಕೊಂಡು ಹೋಪೆದಾಡಬಹುದು |
ಅರ್ಕನಂತೆಸೆವಾತ್ಮಯೋಗವಿಂತಿಹುದೆಂದು | ಬೇರ್ಕೆಯ್ದು ವಚನಿಸಲರಿದು ||
ನಳಿತೋಳಳೆನೆ ತೆಕ್ಕೆಯೂದಂತೆ ಪೊಂಗೊಡ | ಮೊಲೆಯೊಂದಡೆವೆಸೋಂಕಿದಂತೆ |
ತಳಿರ್ದುಟಿಯೆನಲು ಚುಂಬಿಸಿದಂತೆ ನಲಿವರುಂ | ಟೆಱುವರಾರಧ್ಯಾತ್ಮರಸಕೆ ||
ನಱುಗಬ್ಬಿನೊಳಗಣ ರಸವ ಕಾಣದೆ ಪಶು | ಹೊಱಗಣೆಲೆಯ ಸವಿವಂತೆ |
ಅಱಿದೊಳಗಾತ್ಮಸುಖವನುಣ್ಣಲಱಿಯದೆ | ಹೊಱಗೆಳಸುವರಂಗಸುಖಕೆ ||
ಪಸುರೆಲೆಗಳ ಬಿಟ್ಟು ತನಿಗಬ್ಬಿನೊಳಗಣ | ರಸವ ಕೊಂಬಾನೆಗಳಂತೆ |
ಹಸಗೆಟ್ಟು ತನುಸುಖಕೊಲಿಯದೆ ಕೆಲರು ಭೇ | ದಿಸಿ ನಿಜಸುಖವ ಭೋಗಿಪರು ||

4 ಹಾಡುಗಳು

ಇವು ಅಣ್ಣಗಳ ಪದಗಳು ಅಥವಾ ರತ್ನಾಕರಣ್ಣಗಳ ಪದಜಾತಿ ಎಂಬ ಹೆಸರಿನಿಂದ ಪ್ರಸಿದ್ಧವಾಗಿವೆ; ನೀತಿಯನ್ನೂ ತತ್ತ್ವವನ್ನೂ ಬೋಧಿಸುತ್ತವೆ. ಒಂದು ಹಾಡನ್ನು ಉದ್ಧರಿಸಿ ಬರೆಯುತ್ತೇವೆ—

ಭೈರವಿರಾಗ

ತಾನುಣ್ಣದೆ ಪರರಿಗಿಕ್ಕದೆ ಹೊನ್ನ ಕಾದಿರ್ದ | ದೀನನ ಸಿರಿಯಿದ್ದು ಫಲವೇನು||
ಸ್ನಾನಕ್ಕೆ ಪಾನಕ್ಕೆ ಸಲ್ಲದ ಕೊಳೆನೀರು | ಕಾನನತುಂಬಿದ್ದು ಫಲವೇನು ||
ಏನೆಂದು ತನ್ನ ಶುದ್ಧಾತ್ಮನನಱಿಯದೆ | ನಾನಾಶಾಸ್ತ್ರವನೋದಿ ಫಲವೇನು |
ಹೀನನಿಧಿಯ ಕಾಣದಡವಿಯೊಳಗೆದಗೆ | ದಾನೋವನುಂಡಲ್ಲಿ ಫಲವೇನು ||

## ನೇಮಣ್ಣ. 1559

ಇವನು ಜ್ಞಾನಭಾಸ್ಕರಚರಿತೆಯನ್ನು ಬರೆದಿದ್ದಾನೆ. ಈತನು ಜೈನ ಕವಿ; ಸಮುಡೊಳ್ಳಿಪುರದ ಆದಿಜಿನಾಲಯದ ಗುರುವೆನಿಸಿದ ಜಿನಸೇನನ ಶಿಷ್ಯನಾದ ಶೀಲಾಬ್ಧಿಯ ಶಿಷ್ಯನು; ತುಳುರಾಜ್ಯದೊಳಗಣ ಬಿಸುರೆಯ ಹಿರಿಯ ಬಸ್ತಿಯನುದ್ಧರಿಸಿದ ಶ್ರಾವಕರೊಳು ಜಿನದೀಕ್ಷೆಯನ್ನು ಧರಿಸಿದಂತೆ ಹೇಳುತ್ತಾನೆ. ಗ್ರಂಥನಿರ್ಮಾಣಕಾಲವು ಶಕ 1482 ಸಿದ್ಧಾರ್ಥಿ-ಎಂದರೆ 1559-ಎಂದು ಗ್ರಂಥದ ಕೊನೆಯಲ್ಲಿ ಉಕ್ತವಾಗಿದೆ.

ಇವನ ಗ್ರಂಥ

### ಜ್ಞಾನಭಾಸ್ಕರಚರಿತೆ.

ಇದು ಸಾಂಗತ್ಯದಲ್ಲಿ ಬರೆದಿದೆ; ಪದ್ಯ 133. ಇದರಲ್ಲಿ ಅಧ್ಯಾತ್ಮಶಾಸ್ತ್ರಪಠನವೂ ಧ್ಯಾನವೂ ಮೋಕ್ಷಕ್ಕೆ ಮುಖ್ಯಸಾಧನಗಳೆಂದೂ ಕಾಯಕ್ಲೇಶವೂ ಬಾಹ್ಯವೇಷವೂ ಅಷ್ಟು ಪ್ರಯೋಜನಕಾರಿಯಲ್ಲವೆಂದೂ ಪ್ರತಿಪಾದಿಸಿದೆ. ಗ್ರಂಥಾವತಾರದಲ್ಲಿ ನಿಜಾತ್ಮನ ವಂದನೆಯೂ ಗುಣಸ್ಮರಣವೂ ಇವೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ—

ದುರಿತವೆಂದೆಂಬ ಮಹಾಂಧಕಾರಕೆ ಜ್ಞಾನ | ದುರುರವಿಕಿರಣದುದಯವು |
ಪರಮಾತ್ಮನೆಂಬುದಯಾದ್ರಿಯೊಳುದಯಿಸೆ | ನಿರುಪಮಸುಖನಹುದಾಗ ||
ತನುವೆಂಬ ಕೆಸರೊಳು ಲೋಕವ ಬೆಳಗುವ | ಚಿನ್ಮಯರತ್ನವುಂಟದನು |
ತನುವ ಬತ್ತಿಸಿಯಾರತ್ನವ ತೆಗೆವಂತೆ | ಜಿನಮಾರ್ಗದ ತಪಶ್ಚರಣ ||
ಒಳಗೆ ಕತ್ತಲೆ ಮತ್ತೆ ಹೊರಗೆ ಬತ್ತಲೆಯವ | ರೆಳೆಗೆ ಗುರುಗಳು ಜಡರಿಗೆ ||
ಒಳಗೆ ಸಂಯಕ್ತ್ವದೊಡನೆ ಭೋಗವಿದ್ದರು | ಒಱಲದ ಗುರು ಜ್ಞಾನಿಗಳಿಗೆ ||
ಹದಿನಾಲ್ಕುಸೊನ್ನೆಯ ಬರೆದೊಂದನಿಕ್ಕಿದ | ಪದು ಕೋಟಿಕೋಟಿಗಳಹುದು |
ಅದಱೊಳಗೇನುಲೆಕ್ಕಗಳಿಲ್ಲದಿದ್ದರೆ | ಯದುನಿರಕ್ಷರಿಕರ್ಗೆ ಚಂದ ||
ವ್ರತಗುಣಶೀಲತಪಸು ಶಾಸ್ತ್ರಗಳೆಲ್ಲ | ಕ್ಷಿತಿಯೊಳು ಸೊನ್ನೆಗಳಂತೆ |
ಅತಿಶಯದಾತ್ಮಭಾವನೆ ಲೆಕ್ಕದಂತೆಯೆಂ | ದತಿಸುಜ್ಞಾನಿಗಳು ಪೇಳುವರು ||

---

## ವಿರಕ್ತತೋಂಟದಾರ್ಯ, ಸು. 1560

ಈತನು ಸಿದ್ಧೇಶ್ವರಪುರಾಣ, ಪಾಲ್ಕುರಿಕೆಸೋಮೇಶ್ವರಪುರಾಣ, ಕರ್ನಾಟಕಶಬ್ದಮಂಜರಿ, ಮನೋವಿಜಯತಾತ್ಪರ್ಯ, ಮುಗ್ಗೆಯಮಾಯಿದೇವ

ಶತಕತ್ರಯಟೀಕೆ ಈ ಗ್ರಂಥಗಳನ್ನು ಬರೆದಿದ್ದಾನೆ. ತನ್ನ ಪಾಲ್ಕುರಿಕೆ ಸೋಮೇಶ್ವರಪುರಾಣದಲ್ಲಿ ಚಿದಾನಂದಸಿಂಧು ಎಂಬ ಚಂಪೂಗ್ರಂಥವನ್ನೂ ಬರೆದಂತೆ ಹೇಳುತ್ತಾನೆ. ಇದು ನಮಗೆ ದೊರೆತಿಲ್ಲ. ಈತನು ಸಿದ್ಧಲಿಂಗೇಶ್ವರ ಶತಕ, ಪಾಲ್ಕುರಿಕೆಸೋಮನಾಥನ ಪಂಚಗದ್ಯಗಳ ಟೀಕೆ ಇವುಗಳನ್ನೂ ಬರೆದಿರುವುದಾಗಿ ಹೇಳುತ್ತಾರೆ.

ಇವನು ವೀರಶೈವಕವಿ; ಬಿಜ್ಜಾವರಪುರಾಧೀಶ ತೋಂಟದಸಿದ್ಧಲಿಂಗ ಭೂಪಾಲಕನಿಂ ಪೂಜಿತನಾದ ಕಾವೇರೀಹೇಮಾವತಿಗಳ ಮಧ್ಯದೇಶದೊಳಗಿರುವ ನಂದಿಯಪುರದ ಸಿಂಹಾಸನಾಧಿಪ ಚೆನ್ನನಂಜೇಶನ ಕರಜಾತನಾದ ಪರ್ವತೇಂದ್ರನ ಕರಜಾತನು; ಷಟ್ಸ್ಥಲಾಚಾರ್ಯನೆಂದೆನಿಪ ಬೋಳಬಸವೇಶ್ವರನ ಕರುಣದಿಂ ಷಟ್ಸ್ಥಲಬ್ರಹ್ಮಮಂ ತಿಳಿದ ಗುಳೂರ ಸಿದ್ಧವೀರೇಶ್ವರನ ದಯಾಪಾತ್ರನು. "ಗುರುನಿರಂಜನಲಿಂಗಪದಕಮಲ ಸೌರಭಾಸಕ್ತಷಟ್ಪದ, ಷಟ್ಸ್ಥಲಾಚಾರಸಂಪನ್ನ, ಶೈವಪಂಚಾಕ್ಷರೀಮಂತ್ರಹೃದಯ, ಅಖಿಲಶಾಸ್ತ್ರಾರ್ಥಕೋವಿದ" ಎಂದು ತನ್ನನ್ನು ವಿಶೇಷಿಸಿ ಹೇಳಿಕೊಂಡಿದ್ದಾನೆ. ಈತನಿಗೆ ತೋಂಟದಸಿದ್ಧಲಿಂಗದೇಶಿಕ ಎಂಬ ಹೆಸರೂ ಉಂಟು. ಇವನ ಗುರುವಿನ ಗುರುವಾದ ಬೋಳಬಸವನು ತೋಂಟದ ಸಿದ್ಧಲಿಂಗನ (ಸು. 1470) ಶಿಷ್ಯನೆಂದು ತಿಳಿವುದರಿಂದ ಕವಿಯ ಕಾಲವು ಸುಮಾರು 1560 ಆಗಬಹುದು. ಇವನ ಎಲ್ಲಾ ಗ್ರಂಥಗಳಲ್ಲಿಯೂ ಸಿರಂಜನಲಿಂಗ ಎಂಬ ಅಂಕಿತವು ಉಪಯೋಗಿಸಲ್ಪಟ್ಟಿದೆ.

ಪೂರ್ವಕವಿಗಳಲ್ಲಿ ಪಾಲ್ಕುರಿಕೆ ಸೋಮ, ಪದ್ಮರಸ, ಹರಿದೇವ, ಮಗ್ಗೆಯಮಾಯಿದೇವ, ಬಾಣ, ಕಾಳಿದಾಸ, ಮಳೆಯರಾಜ, ಭೋಜ ಇವರುಗಳನ್ನು ಸ್ಮರಿಸಿದ್ದಾನೆ

ಇವನ ಗ್ರಂಥಗಳಲ್ಲಿ

### 1 ಸಿದ್ಧೇಶ್ವರಪುರಾಣ

ಇದು ವಾರ್ಧಕಷಟ್ಪದಿಯಲ್ಲಿ ಬರೆದಿದೆ; ಸಂಧಿ 25, ಪದ್ಯ 1535. ಇದರಲ್ಲಿ "ನಿರಂಜನಗಣೇಶ್ವರನ ಅಪರಾವತಾರವಾದ" ತೋಂಟದಸಿದ್ಧಲಿಂಗಯತಿಯ ಚರಿತವು ವರ್ಣಿತವಾಗಿದೆ. ಈ ಗ್ರಂಥದ ಉತ್ಕೃಷ್ಟತೆಯನ್ನು ಕವಿ ಹೀಗೆ ನಿರೂಪಿಸಿದಾನೆ—

ಮಲ್ಲಿಗೆಯರಲ್ದೊಂಗಲುಱಿ ತಳಿರ್ತು ಚಿಗುರ್ತ ಕಂ |
ಕೆಲ್ಲಿ ತಾವರೆಗೊಳಂ ಮಾವಿನೆಳಗೊಂಬೇಱಿ |
ಪಲ್ಲವವ ಕರ್ದುಕಿ ತಣಿಗೊಂಡು ನಲವಿಂ ಕೂಗುತಿರ್ಪ ಪೆಣ್ಗೋಗಿಲೆಗಳ ||

ಮೆಲ್ಲುಲಿ ಸುಗಾನರಸದಿಂಪು ಪೊಸಜವ್ವನದ |
ಚೆಲ್ಲೆಗಂಗಳ ಕಾಂತೆಯರ ಲಲ್ಲೆವಾತುಗಳಿ |
ವೆಲ್ಲ ಸರಿಯಲ್ಲೆಂದು ಸೋಲಿಸಿ ವಿರಾಜಿಸುತ್ತಿರ್ಪುದೀಕಾವ್ಯದ ರಸಂ ||

ಲಿಂಗತ್ರಯದೊಳಿ ಕಾಲಂಗಳಂ ಮೂಱನಱಿ |
ದಂಗವಿಸಿ ಸಕಲಕ್ರಿಯಾವಿಭಕ್ತಿಗಳಿಂದೆ |
ಸಾಂಗವಹ ಶಿವನಾಮಸಂಹಿತಾಭಾವದಿಂ ಸದ್ಗುಣಾಲಂಕಾರದಿಂ ||

ಸಿಂಗದಾನಂದರಸದಿಂದುಕ್ಕಿಯವ್ಯಯಪ |
ದಂಗಳಿಂದಿರ್ಪಮಲವೀರಮಾಹೇಶ್ವರನ |
ಪಾಂಗುವಡೆದೀಕೃತಿ ವಿರಾಜಿಸುತ್ತಿರ್ಪುದು ಜಗಂಗಳೊಳ್ ಚೆಲ್ವಿಸಿಂದೆ ||

ಗ್ರಂಥಾವತಾರದಲ್ಲಿ ನಿರಂಜನಲಿಂಗಸ್ತುತಿ ಇದೆ. ಬಳಿಕ ಕವಿ ಪಾರ್ವತಿ, ವೀರಭದ್ರ, ಷಣ್ಮುಖ, ಗಣೇಶ ಇವರನ್ನು ಹೊಗಳಿ ಅನಂತರ ಬಸವನಿಂದ ಗೂಳೂರಸಿದ್ಧವೀರೇಶನವರೆಗೆ[2] ಗುರುಗಳನ್ನು ಸ್ಮರಿಸಿದ್ದಾನೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

## ಕೈಲಾಸ

ಅದಱೊತ್ತಿನಲ್ಲಿ ಶಂಕರನ ಬೆಳ್ನಗೆ ಪರ್ಬಿ |
ದುದೊ ಶರತ್ಕಾಲದಿಂದುವಿನ ರುಚಿಯೊಟ್ಟೈಸಿ |
ದುದೊ ವಿಯನ್ನದಿಯಂಬು ಗಟ್ಟಿಯಾದುದೊ ಪಾರಿಜಾತದ್ರುಮಂ ಪೂತುದೋ ||
ಸುಧೆ ಬಲಿದು ಪೆಪ್ಪಾದುದೋ ಹಿಮಂ ರಾಶಿಯಾ |
ದುದೊ ಎಸಲ್ ಪ್ರಜ್ವಲಿಸಿ ತೋಱುತಿರ್ದುದು ಪಂಚ |
ವದನನ ನಿವಾಸ ಪುಣ್ಯದ ಕೋಶವೆನಿಪ ಕೈಲಾಸಂ ಕಲಾವಿಲಾಸಂ ||

---

1. 97ನೆಯ ಪುಟವನ್ನು ನೋಡಿ. 2 ಬಸವ, ಚೆನ್ನಬಸವ, ಅಲ್ಲಮ, ಸಿದ್ಧರಾಮ, ಘಟ್ಟಿವಾಳ, ಮಹಾದೇವಿ, ದಸರ, ಮೋಳಿಗೆಯಮಾರ, ಮುಸುಟಿಯುಜವುಂಡ, ಸಪ್ಪೆಯಯತೀಶ, ತೋಂಟದಾರ್ಯರ ಶಿಷ್ಯ ಬೋಳಬಸವ, ಗುಳೂರಸಿದ್ಧವಿರೇಶ.

ಬಾಳೆ

ತನುವಿನೊಳ್ ಪೊರೆಯೇಱಿ ಸಂತಸಂಗೊಂಡುಬ್ಬಿ |
ಯನವರತ ತಲೆವಾಗಿ ಸತ್ಫಲಂಗಳನೆ ಸ |
ಜ್ಜನವಿತತಿಗೀವುವಕ್ಕೈದೆ ರಂಭಾಹ್ವಯಂ ಸಲ್ವುದಲ್ಲದೆ ಭಾವಿಸೆ ||
ಕನಸುಗಾಣದರ ಪುರಮಂ ಪೊಕ್ಕು ವೇಸಿಯೆಂ |
ದೆನಿಸಿಯಮೃತಾಂಗಿ ತಾನೆಂದು ಗರ್ವಿಸುತಿರ್ಪ |
ವನಿತೆಗೇಕೀಪೆಸರೆನುತ್ತಿಲ್ಲರಾಡೆ ಬಾಳೆಗಳು ಕಣ್ಗೆಸೆದಿರ್ದುವು ||

ಚಾತಕ

ನಲಿದು ಮೇಲಕೆ ನೆಗೆದಮದ್ದುರ್ಣೇಹದೆ ನೋಡಿ |
ಸಲೆ ಪಕ್ಕದಿಂ ಪೊಯ್ದು ಚರಣತಳದಿಂದೊದೆದು |
ತಲೆಯೆತ್ತಿ ಪೊಳೆದು ಪಾಱುತ್ತೆ ಬೆನ್ನೊಳು ಬೀಱುವಂಬುಧಾರೆಗಳ ಕೊಡಪಿ ||
ಗೆಲವಾಂತು ಚಂಚುಪುಟದಿಂ ಕೆದಱ ಬಾಯಿಟ್ಟು |
ಜಲಕಣಂಗಳ ನುಂಗಿ ಕೊರಲ ಸಸಿನಂಗೆಯ್ದು |
ತೊಲವಿನಿಂದೀಂಟಿ ಬಲ್ಲರಿಯೊಳೆಸೆದುದು ಚಾತಕಮದೊಂದತಿಪ್ರೀತಿಯಿಂ ||

ವಂಚಕರು

ನಿರುತದಿಂ ಕಳ್ಳಹೊನ್ನಿಗೆ ದೊಡ್ಡ ಮುದ್ರೆಯಂ |
ವಿರಚಿಸಲದಂ ಸರ್ವರೊಲ್ಲೆನೆಂದೆಂಬರಾ |
ಪರಿಯಂತೆ ಹುಸಿ ಕಳವು ಠಕ್ಕು ಕೊಱಚಾಟಮತಿಮಿಥ್ಯಾವಿಕಾರವೇಪ ||
ಪರಿಪರಿಯ ದುರ್ಗುಣಂಗಳ ತನ್ನೊಳಿಟ್ಟು ಬಂ |
ಧುರಭಸಿತರುದ್ರಾಕ್ಷಿಯಂ ಧರಿಸಿಕೊಂಡು ಶಿವ |
ಶರಣರೆಡೆಗೈದಲಾತನ ಮುಖವ ನೋಡಲಾತಂ ಸಲ್ಲನವರೊಂದಿಗೆ ||

ತೋಂಟದ ಸಿದ್ಧಲಿಂಗಯತಿಗೆ ಉಪ್ಪವಡಗೀತ ಅಥವಾ ಸುಪ್ರಭಾತ

ದುರಿತಮೆಂದೆಂಬ ಕುಮುದಂ ಕೊಱಗಿ ಮೋಹಮೆಂ |
ಬುರುತಮಂ ಪರೆದು ಮಾಯೆಯೆನಿಪ್ಪ ಜಾರೆಯೋ |
ಸರಿಸಿ ಕಡೆಗಂ ಜಾಱಿ ದುರ್ವಿಷಯವೆನಿಸುವ ಚಕೋರಿಗಳ ಬದಱ ಹೃದಯ||
ಸರಸಿಜವರಲಿ ಪ್ರಣವಕುಕ್ಕುಟಂ ದನಿದೋಱ |

ವರಭಕ್ತಿರಾಗವೆಂದೆಂಬ ಮೂಡಣಕೆಂಪು ।
ಕರಮೆಸೆಯೆ ಚಿತ್ಸೂರ್ಯನುದಿಸಿದಂ ಪರಮಸದ್ಗುರುವೆ ನೀನುಪ್ಪವಡಿಸಾ ॥

2 ಪಾಲ್ಕುರಿಕೆ ಸೋಮೇಶ್ವರ ಪುರಾಣ

ಇದೂ ವಾರ್ಧಕಷಟ್ಪದಿಯಲ್ಲಿ ಬರೆದಿದೆ; ಸಂಧಿ 15, ಪದ್ಯ 1456. ಇದರಲ್ಲಿ ಭೃಂಗಿಯ ಅಪರಾವತಾರವಾದ ಪಾಲ್ಕುರಿಕೆ ಸೋಮೇಶ್ವರನ ಚರಿತವು[1] ವರ್ಣಿಸಿದೆ. ಈ ಗ್ರಂಥವನ್ನು ಗೂಳೂರಸಿದ್ಧವೀರೇಶ್ವರನ ಆಜ್ಞಾನುಸಾರವಾಗಿ ಬರೆದಂತೆ ಕವಿ ಹೇಳುತ್ತಾನೆ. ಗ್ರಂಥಾವತಾರದಲ್ಲಿ ನಿರಂಜನಲಿಂಗಸ್ತುತಿ ಇದೆ. ಬಳಿಕ ಕವಿ ಪಾರ್ವತಿ, ವೀರಭದ್ರ ಇವರನ್ನು ಸ್ತುತಿಸಿ ಅನಂತರ ಬಸವನಿಂದ ಗೂಳೂರಸಿದ್ಧವೀರೇಶ್ವರನವರೆಗೆ[2] ಗುರುಗಳನ್ನು ಹೊಗಳಿದ್ದಾನೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದರಿಸಿ ಬರೆಯುತ್ತೇವೆ—

ತೆಂಗು

ಪಿಂಗದೆ ವಿಬುಧರೆಸಿಸಿ ಗುರುಪತ್ನಿಗಳುಪಿ ಲೋ ।
ಕಂಗಳೊಳ್ ಕ್ಷಯರೋಗಿಯಾಚನಂಗದ ರುಚಿಯು ।
ನಂಗವಿಪರೇ ನಿರ್ಜರತ್ವವೆಂತಪ್ಪುದೆಂದವನಿಸತಿ ತಾನೊಲವಿಸಿಂ ॥
ಕಂಗೊಳಿಪ ದಿವ್ಯರುಚಿಯಮೃತಮಂ ಪೊನ್ನಕಳ ।
ಸಂಗಳೊಳ್ ತುಂಬಿ ಪಲಕೈಗಳಿಂ ಸುರಗೇಯು ।
ತ್ತುಂಗತರದಿಂದೆತ್ತಿಕೊಡುತಿರ್ದಪಳೊ ಎನಲ್ ತೆಂಗುಗಳ್ ಶೋಭಿಸಿದುವು ॥

ಕಾಂಗು

ದೆಸೆದೆಸೆಗೆ ಪೊಸಕಂಪು ಪಸರಿಸಲ್ ಮಕರಂದ ।
ರಸವೊಸರುತಿರೆ ನಾಡೆ ನಸುವಿರಿದೊಡೆದು ಪೊಜ್ಜ ।
ಪೊಸತಾದ ಪೊಂಬಾಳೆ ಮಿಾನಂತಿರೆಸೆಯೆ ನಳನಳಿಸುತಾಗಸಮನೆಯ್ದಿ ॥
ಒಸೆದಳ್ಳಿಱಿಯುತುಂ ಬೆಳೆದಮರಂ ಕಣೆಯಂತೆ ।

1. Vol. I, 229.

2 ಬಸವ, ಚೆನ್ನಬಸವ, ಪ್ರಭುದೇವ, ಮಹಾದೇವಿಯಕ್ಕ, ಪಂಡಿತಾರಾಧ್ಯ, ಶಿವಲೆಂಕಮಂಚಣ್ಣ, ಶ್ರೀಪತಿಪಂಡಿತ, ಮಗ್ಗೆಯ ಮಾಯಿದೇವ, ಸಪ್ಪೆಯಾರ್ಯ, ತೋಂಟದಸಿದ್ಧಲಿಂಗದೇಶಿಕನ ಶಿಷ್ಯ ಬೋಳಬಸವಾರ್ಯ, ಗೂಳೂರ ಸಿದ್ಧವೀರಾಚಾರ್ಯ.

ನಿಸದದಿಂದೊಪ್ಪೆ ಮದನಂಗೆ ವನದೇವಿ ಸ೦ |
ತಸದಿಂ ಪಿಡಿದ ಮಿಾನಟಿಕ್ಕೆಯದ ಪಾಂಗಿನಿಂ ಕೌಂಗುಗಳ್ ಕಣ್ಗೆಸೆದುವು ||

ವಾದ

ಸಡಗರದೆ ಕರ್ಮದಿಂ ದೇಹಮಂ ತೊಟ್ಟೆನಂ |
ಬೊಡೆ ನಿಜದಿನಾಕರ್ಮಮಂ ನೀನದೇತಱಿಂ |
ದೊಡರಿಸಿದೆಯಾಕರ್ಮಮಂ ದೇಹದಿಂದೆ ಮಾಡಿದೆನೆನಲ್ಕಾದೇಹಮಂ ||
ಪಡೆವುದಕ್ಕಾವ ದೇಹದೆ ಕರ್ಮಮಂ ಮೊದಲ್ |
ತೊಡರ್ದು ಮಾಡಿದೆ ಬಗೆಯೆ ಬೀಜವೃಕ್ಷನ್ಯಾಯ |
ದೆಡೆಯಾದುದುಸಿರಲಳವಲ್ಲುತ್ತ ಬೀಜಂ ತನ್ನ ತಾಂ ಬಿತ್ತಿಕೊಳುತಿರ್ಪುದೇ ||
(ಜಗವಿದು) ನಿರುತದಿಂ ಕಾರ್ಯಮಾದುದಱಿಂದದರ್ಕೀಯಿ |
ಶ್ವರನೆ ಕಾರಣಮೆಂದು ಪೇೞ್ಗಂ ಜ್ವಲನನೆಯ್ದೆ |
ಪಿರಿದುಮಿರ್ದೆಡೆಯೊಳಲ್ಲದೆ ಧೂಮಮಿರದು ಮತ್ತಾಧೂಮಮುಂಟಾಗಿಹ ||
ಉರುತರಸ್ಥಾನದೊಳ್ ಶಿಖಿಯುಂಟೆನಿಪ್ಪುದೇ |
ಪರಮಸಮ್ಮತಮೆನಿಸುಗುಂ ಜಗಮದುಂಟಾದ |
ತೆಱದಿನೀಶ್ವರನುಂಟೆನಿಪ್ಪುದೇ ಸಿದ್ಧಮೆಲೆವಾದಿ ಕೇಳನುರಾಗದಿಂ ||

## 3 ಕರ್ಣಾಟಕಶಬ್ದಮಂಜರಿ

ಇದು ವಾರ್ಧಕಷಟ್ಪದಿಯಲ್ಲಿ ಬರೆದಿದೆ; ಪದ್ಯ 120. ಹಳಗನ್ನಡಪದಗಳಿಗೆ ಅರ್ಥವನ್ನು ತಿಳಿಸುವ ನಿಘಂಟುರೂಪವಾದ ಗ್ರಂಥವು. "ಅಚ್ಚಗನ್ನಡ ಗೂಢಪದ ತತ್ಸಮಂ ತದ್ಭವಗಳೆಂಬ ಶಬ್ದನಾಮಗಳನೋರಂತೆ ವಿರಚಿಸಿದೆನೆಲ್ಲಾ ಕವೀಶ್ವರರುದಾಹರಣಸನ್ಮಾರ್ಗವಿಡಿದು" ಎಂದು ಕವಿ ಹೇಳುತ್ತಾನೆ. ಗ್ರಂಥಾವತಾರದಲ್ಲಿ ನಿರಂಜನಲಿಂಗಸ್ತುತಿ ಇದೆ. ಈ ಗ್ರಂಥದಿಂದ ಒಂದು ಪದ್ಯವನ್ನು ತೆಗೆದು ಬರೆಯುತ್ತೇವೆ—

ತುಱುವಳರ್ ಗೋವರ್ಕಳೆನೆ ಗೊಲ್ಲರಕ್ಕುಮಾ |
ತುಱುವಳ್ತಿಯರು ಗೊಲ್ಲತಿಯರೆನಲ್ ಗೋಪಿಯರು |
ತುಱುವಿಂಡು ತುಱುಮುಂದೆಯೆಕ್ಕು ಗೋಸಮುದಾಯುವಾಕಳೆಂದಕ್ಕು ಕಂದು ||
ಕಱುವಕ್ಕು ವತ್ಸದೊಳು ಹೋರಿಯಿಡೆಯೆಂದೆನ |
ಲ್ಕಱು ಗೋಮಯವದೆಂದು ಯರಣವೆಸರದು ಸೋಡೆ |

ಕಱುವಿನ ಸಗಣಮಕ್ಕುಮಾಂಗೊಳಲೆನಲ್ಕೆಯೂವಿನ ಕೊಳಗು ತಾನೆಸಿಕ್ಕುಂ ||

4 ಮನೋವಿಜಯತಾತ್ಪರ್ಯ

ಇದು ಗುರುಬಸವನ (ಸು. 1430) ಮನೋವಿಜಯಕಾವ್ಯದ ವ್ಯಾಖ್ಯಾನವು. ಇದಕ್ಕೆ ಚಂದ್ರಿಕೆ ಎಂದು ಹೆಸರು.

5 ಮಗ್ಗೆಯಮಾಯಿದೇವಶತಕತ್ರಯಟೀಕೆ

ಇದು ಮಗ್ಗೆಯಮಾಯಿದೇವನಿಂದ (ಸು. 1430) ರಚಿತವಾದ ಐಪುರೀಶ್ವರಶತಕ, ಶಿವಾಧವಶತಕ, ಶಿವಾವಲ್ಲಭಶತಕ ಎಂಬ ಮೂರು ಶತಕಗಳ ವ್ಯಾಖ್ಯಾನವು. ಗ್ರಂಥಾರಂಭದಲ್ಲಿ ಕವಿ ಹೀಗೆ ಹೇಳುತ್ತಾನೆ—

ತೋಂಟದಸಿದ್ಧಲಿಂಗದೇವನೆನಾಂ ಮಗ್ಗೆಯಮಾಯಿದೇವಪ್ರಭುವಿನಿಂ ನಿರ್ಮಿತಮಪ್ಪ ವೀರಶೈವಮಾರ್ಗಪ್ರತಿಪಾದಕಮಪ್ಪ ಶತಕತ್ರಯಮಹಾಪ್ರಬಂಧಮಂ ಸಮಸ್ತಶಿವಗಣಂಗಳಱಿದಾಚರಿಸಿ ನಿತ್ಯಮುಕ್ತರಾಗಲೆಂದು ಶಬ್ದಾರ್ಥಂಗಳನೆಲ್ಲರಂಱಿತೆ ಕನ್ನಡಿಸಿ ವ್ಯಾಖ್ಯಾನಮಂ ಮಾಡಿದಪೆಂ.

ಗ್ರಂಥಾಂತ್ಯದಲ್ಲಿ ಈ ಗದ್ಯವಿದೆ—

ಇದು ಸಮಸ್ತಶಿವಯೋಗಿಜನಮನೋಸಿಲಯಶ್ರೀಮನ್ನಿರಂಜನಲಿಂಗಚರಣಸರಸಿರುಹಸೌರಭಾಸಕ್ತಮತ್ತಮಧುಕರಾಯಮಾನ ಷಟ್ಸ್ಥಲ ಲಿಂಗಾಂಗಸಂಯೋಗಸನ್ಮಾರ್ಗಸಿದ್ಧಾಂತಸ್ಥಾಪನಾಚಾರ್ಯ ಪರಮಸುಜ್ಞಾನಸತ್ಕ್ರಿಯಾಯುಕ್ತ ಭಕ್ತಿಭರಿತಾಂತರಂಗ ಪ್ರಣವಪೂರ್ವಕಪಂಚಾಕ್ಷರೀಮಂತ್ರೋಚ್ಚಾರಿತಮಂಜುಳಭಾಷಾವಿಲಾಸನಪ್ಪ ತೋಂಟದಸಿದ್ಧಲಿಂಗನೇಶಿಕನಿಂ ವಿರಚಿತಮಪ್ಪ ಶ್ರೀಮದ್ವೀರಶೈವಾಚಾರಸಾರೋದ್ಧಾರಪ್ರತಿಪಾದಕಶತಕತ್ರಯಮಹಾವ್ಯಾಖ್ಯಾನದೊಳ್

---

ಬಾಹುಬಲಿ- ಸು. 1560

ಈತನು ನಾಗಕುಮಾರಕಥೆಯನ್ನು ಬರೆದಿದ್ದಾನೆ. ಇವನು ಜೈನಕವಿ; ಇವನವಿಷಯವಾಗಿ ಈ ಗ್ರಂಥದಿಂದ ಈ ಅಂಶಗಳು ತಿಳಿಯುತ್ತವೆ—

ಕರ್ನಾಟದೇಶದಲ್ಲಿ ಕುಂದಾದ್ರಿಗೆ ದಕ್ಷಿಣದಲ್ಲಿರುವ ದಕ್ಷಿಣವಾರಾಣಸಿಯೆಂಬ ಶೃಂಗೇರಿ ಇವನ ಸ್ಥಲ. ಇವನ ತಂದೆ ವಣಿಜಶಿರೋಮಣಿ ಸಣ್ಣಣ್ಣ; ತಾಯಿ ಬೊಮ್ಮಲದೇವಿ. ಶೃಂಗೇರಿಯ ಅಧಿಪತಿ ಶಾರದಾಮುಖತಿಳ ನರಸಿಂಹಯತಿರಾಯನು ಸರ್ವತೋಭದ್ರವೆಂಬ ದೇಗುಲವನ್ನು ನಿರ್ವತಿಸಿ ಅಲ್ಲಿ ಇದ್ದನು. ಆ ನರಸಿಂಹಭ

ರತಿಯ ಧ್ಯಾನಕ್ಕೆ ರಕ್ಷಕನೆನಿಸಿ ಕೆಲವನೆಸಿಂಹಾಸನದೊಳು ಅರಿರಾಯರಗಂಡರದಾವಣಿ ತೆಂಕಣರಾಯ ಜಿನಭಕ್ತ ಭೈರವೇಂದ್ರನು ಆಳುತ್ತಿದ್ದನು. ರಾಜನ ಸಭೆಯಲ್ಲಿ ಲಲಿತ ಕೀರ್ತಿ ಪುರಾಣದ ಕಥೆಯನ್ನು ಹೇಳುತ್ತಿರುವಾಗ ಶ್ರೀಪಂಚಮಿಾಕಥೆಯ ಪ್ರಸ್ತಾವ ಬರಲು ಕವಿಯ ಮೊಗವನ್ನು ನೋಡಿ ಇದನ್ನು ಚರಿತೆಯಮಾಡು ಎನಲು ಕವಿ ಅರ ಸನ ಮತ್ತು ಲಲಿತಕೀರ್ತಿಯ ಆಜ್ಞಾನುಸಾರವಾಗಿ ಶ್ರೀಪಂಚಮಿಾಕಥೆಯನ್ನು ವಿಸ್ತ ರಿಸಿ ಹೇಳಿದನು.

ಬಾಹುಬಲಿ ಈ ಗ್ರಂಥವನ್ನು ಪೂರ್ತಿಯಾಗಿ ಬರೆಯಲಿಲ್ಲ. ಗ್ರಂಥ ಪೂರ್ತಿ ಯಾಗುವುದರೊಳಗೆ ಅವನು ಮೃತನಾಗಲು ಮತ್ತೊಬ್ಬಕವಿ ಗ್ರಂಥವನ್ನು ಪೂರೈಸಿ ದಂತೆ ಗ್ರಂಥಾಂತ್ಯದಲ್ಲಿರುವ

ಧರಣಿಯೊಳೀಕೃತಿಯ ದೋರ್ಬಲಿಕವಿ ತಾನು | ವಿರಚಿಸಿ ತುದಿಯೊಳಂತರಿಸೆ |
ತರಳನಹುದು ನಾನು ನಾಯಕಾತಿಶಯಬಿ | ತ್ತರಿಸಿದೆನಿದು ಪೂರ್ತಿಯಾಗೆ ||
ಇದು ಪುಣ್ಯಕಥೆಯಂತರಿಸಿತೆಂದಾನು ಪೇಳುದೆನು

ಎಂಬ ಭಾಗದಿಂದ ತಿಳಿಯುತ್ತದೆ. ಆಶ್ವಾಸಗಳ ಕೊನೆಯಲ್ಲಿರುವ ಗದ್ಯಗಳಲ್ಲಿ ಬಾಹುಬಲಿ ಕೃತ ಎಂದಿದೆ; ಗ್ರಂಥಾಂತ್ಯದ ಗದ್ಯದಲ್ಲಿಮಾತ್ರ ವರ್ಧಮಾನಕೃತ ಎಂದಿದೆ. ಮೇಲೆ ಉದಾಹರಿಸಿರುವ ಭಾಗದಿಂದಲೂ ಗ್ರಂಥಾಂತ್ಯಗದ್ಯದಿಂದಲೂ ಗ್ರಂಥಪೂರ್ತಿಮಾಡಿ ದವನು ವರ್ಧಮಾನನೆಂದೂ ಇವನು ಬಹುಶಃ ಬಾಹುಬಲಿಯ ಮಗನಾಗಿರಬೇಕು ದೆಂದೂ ಇವನು ಬರೆದ ಭಾಗವು ನಾಯಕಾತಿಶಯವೆಂದೂ ತಿಳಿಯುತ್ತದೆ.

ಮೇ|| ಪಾಠಕರು[1] ನಾಗಕುಮಾರಕಥೆಯನ್ನು ಬಾಹುಬಲಿ ಶಕ 1507 ತಾರ ಣದಲ್ಲಿ—ಎಂದರೆ 1584 ರಲ್ಲಿ ಮುಗಿಸಿದನು ಎಂದು ಹೇಳುತ್ತಾರೆ. ಅವರು ಅವು ದೋ ಒಂದು ಓಲೆಯಪ್ರತಿಯನ್ನು ನೋಡಿ ಹೀಗೆ ಹೇಳಿರಬಹುದು. ಗ್ರಂಥಪೂರ್ತಿ ವರ್ಧಮಾನನಿಂದ ಆಗಿರುವುದರಿಂದ ಈ ಕಾಲವು ವರ್ಧಮಾನನದಾಗಬಹುದು. ಬಾ ಹುಬಲಿ ಈ ಕಾಲಕ್ಕೆ ಸ್ವಲ್ಪಹಿಂದೆ ಇದ್ದಿರಬೇಕು; ಸುಮಾರು 1560 ರಲ್ಲಿ ಇದ್ದಿರ ಬಹುದು. ಇವನು ಹೇಳುವ ಶೃಂಗೇರಿಯ ನರಸಿಂಹಭಾರತಿ 1557 ರಿಂದ 1573 ರ ವರೆಗೆ ಪಟ್ಟದಲ್ಲಿದ್ದ ಸ್ವಾಮಿಯಾಗಿರಬೇಕು

ಇವನಿಗೆ ಕವಿರಾಜಹಂಸ, ಸಂಗೀತಸುಧಾಬ್ಧಿಚಂದ್ರಮ ಎಂಬ

1 *Indian Antiquary*, 1911, 16.

ಬಿರುದುಗಳಿದ್ದಂತೆ ತಿಳಿಯುತ್ತದೆ. ಪೂರ್ವಕವಿಗಳನ್ನು ಈ ಪದ್ಯಗಳಲ್ಲಿ ಸ್ತುತಿಸಿದ್ದಾನೆ—

ಭೇದಿಸಿ ಸತ್ಕಥೆಯನು ಕನ್ನಡಕೆ ತಾ | ನಾದಿಗನೆನಿಸಿ ಲೋಕದೊಳು |
ಆದಿತೀರ್ಥೇಶಕಥೆಯ ವಿಸ್ತಾರವ ಮಾಡಿ | ದಾದಿಹಂಪನ ಪೊಗಳುವೆನು ||
ವಿಬುಧಜನಸ್ತುತಶ್ರೀವೀರದೋರನ | ಸಭೆಗೆ ಮಂಗಳಲಕ್ಷ್ಮಿಯೆನಿಪ ||
ಶುಭಗುಣಚರಿತೆ ಕಂತಿಕೆಯರ ಪೊಗಳ್ವೆ ನಾ | ನಭಿನವವಾಗ್ದೇವಿಯರ ||
ಚಂದ್ರಜಿನನ ಕಥಾರಸವಾರ್ಧಿವರ್ಧನ | ಚಂದ್ರನೆನಿಸಿದಗ್ಗಳನ |
ರುಂದ್ರಕಲೆಗಳೆನ್ನೊಳು ತೋರ್ಕೆ ನಿಜಯಶ | ಶ್ಚಂದ್ರಿಕೆ ಪಸರಿಸೆ ಜಗವ |
ಸುಡಿಸಿ ಕಾದಂಬರಿಯನು ಲೀಲಾವತಿ | ಗಿಡಿಸಿ ಕಪ್ಪನು ಕೀರ್ತಿ ಜಗವ |
ಎಡೆಗೊಂಡ ನೇಮಿಚಂದ್ರನ ಚಮತ್ಕೃತಿ ಬಂ | ದೆಡೆಗೊಳ್ಳುದೆನ್ನ ಚಿತ್ತದೊಳು ||
ಜನ್ನನೊದವು ಗುಣವರ್ಮನ ಚಾತುರ್ಯ | ರನ್ನನ ಗುಣ ಪೊನ್ನನಿಂಪು |
ಎನ್ನಯ ಮತಿಮಣಿದರ್ಪಣವನು ಪ್ರ | ಸನ್ನಾಕೃತಿಯು ಕೈದಿಸುಗೆ |
ಜ್ಯೋತಿಷವಿದ್ಯೆಗೆ ಮೊದಲಿಗ ಸಲೆ ವಾದಿ | ವ್ರಾತಭಯಂಕರನೆನಿಪ |
ಖ್ಯಾತಿಗೆ ನೆಲೆಯಾದ ಶ್ರೀಧರಾಚಾರ್ಯರ | ಪ್ರೀತಿ ಮಿಗೆ ಬಲಗೊಂಬೆ ||

ಇವನ ಗ್ರಂಥ

## ನಾಗಕುಮಾರಕಥೆ.

ಇದು ಸಾಂಗತ್ಯದಲ್ಲಿ ಬರೆದಿದೆ; ಆಶ್ವಾಸ 8, ಸಂಧಿ 32, ಪದ್ಯ 3600, ಗ್ರಂಥಪ್ರಮಾಣ 6000. ಅಲ್ಲಲ್ಲಿ ಕೆಲವು ವಚನಗಳೂ ಇವೆ. ಇದರಲ್ಲಿ ಹಣ ಹೊನ್ನು ತೃಣವೆಂದು ಬಗೆದು ಕರ್ಮವ ಕೆಡಿಸಿ ಒಂದುಪವಾಸಫಲದಿಂದ ಮೋಕ್ಷಸಂಪದವ ಪಡೆದ ಮಹಾತ್ಮನಾದ ನಾಗಕುಮಾರನ ಕಥೆ ಹೇಳಿದೆ. ಇದರ ಉತ್ಕೃಷ್ಟತೆಯನ್ನು ಕವಿ ಈ ಭಾಗದಲ್ಲಿ ಹೇಳಿದ್ದಾನೆ—

ಇದು ಮಹಾಪುಣ್ಯಪುರುಷನ ಚರಿತ್ರ ಮ | ತ್ತಿದು ಭವವಾರ್ಧಿಗೆ ಛೈತ್ರ |
ಇದು ಪುಣ್ಯಸಸ್ಯಂಗಳಿಗೆ ಸುಕ್ಷೇತ್ರ ತಾ | ನಿದು ಕರ್ಮಭೂಜಲವಿತ್ರ ||
ಪೊಸದೇಸಿಯ ನೆಲೆವೀಡು ರಸಿಕರ ಕರ್ಣರಸಾಯನ

ಗ್ರಂಥಾದಿಯಲ್ಲಿ ನೇಮಿಜಿನಸ್ತುತಿ ಇದೆ. ಬಳಿಕ ಕವಿ ಸಿದ್ಧಾದಿಗಳು, ಪರಮಪುರಾಣಕಥೆಗಳ ವಿಸ್ತರಿಸಿದ ಎರಡನೆಯ ಗಣಧರನೆನಿಪ ಕವಿಪರ, ಮೇಷ್ಠಿ, ಕುಮುದೇಂದು, ಶ್ರೀಧರಾಚಾರ್ಯ, ಅಕಳಂಕ, ಪೂಜ್ಯಪಾದ

ತನ್ನ ಪರಮಗುರು ಲಲಿತಕೀರ್ತಿ, ಗುರು ಶಾಂತಕೀರ್ತಿ, ಸರಸ್ವತಿ, ಪದ್ಮಾವತಿ, ಕೂಷ್ಮಾಂಡಿನಿ, ಸರ್ವಾಹ್ಣಯಕ್ಷ ಇವರುಗಳನ್ನು ಕ್ರಮವಾಗಿ ಸ್ಮರಿಸಿದ್ದಾನೆ. ಆಶ್ವಾಸಗಳ ಅಂತ್ಯದಲ್ಲಿ---

ಇದು ವಿದಿತವಿವಿಧಪ್ರಬಂಧವನವಿಹಾರಪರಿಣತ ಜಿನವದನಕುಲಶೈಲೋಜ್ಜ್ವಯೋದ್ಭೂತಪ್ರವಚನಗಂಗಾತಟೋಪರಂಜತ್ಪುಂಜಾಯಮಾನಾನೂನಪುಣ್ಯೈಕತಪ್ರಿಯ ವಿಬುಧಜನಸ್ತುತ್ಯಸತ್ಕೃಜಿತಪ್ರಕರ ಕವಿರಾಜಹಂಸಬಾಹುಬಲಿಕವಿವಿರಚಿತಮಪ್ಪ ನಾಗಕುಮಾರಚರಿತಪುರಾಣದೊಳ್'

ಎಂಬ ಗದ್ಯವಿದೆ. ಗ್ರಂಥಾಂತ್ಯಗದ್ಯದಲ್ಲಿಮಾತ್ರ ಬಾಹುಬಲಿಕವಿ ಎಂಬ ಸ್ಥಾನದಲ್ಲಿ ವರ್ಧಮಾನಕವಿ ಎಂದಿದೆ.

ಕರ್ಣಾಟದೇಶದಲ್ಲಿ ಕುಂದಾದ್ರಿಯಬಳಿ ಇರುವ ಸರೋವರದ ದಕ್ಷಿಣತೀರದ ಪಾರ್ಶ್ವಜಿನಬಸ್ತಿಯ ಮುಂದಣ ಕಂಭದಮೇಲಿರುವ ಬ್ರಹ್ಮದೇವನು ಈ ಕೃತಿಗೆ ನಿರ್ವಿಘ್ನದಾಯಕನು ಎನ್ನುತ್ತಾನೆ.

ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ--

ಕವಿ

ಚಿಪ್ಪಿನೊಳಿಹ ಮುತ್ತು ವಸ್ತುಕ ವರ್ಣಕ | ಚಿಪ್ಪ ಕಳೆದು ಸರಗೆಯ್ದ |
ಸುಪ್ಪಾಣಿಮುತ್ತಿನ ಹಾರವೆಂದೆನಿಪೊಂ | ದೊಪ್ಪದೋಱದೊಡವ ಕವಿಯೇ ||

ಸ್ತ್ರೀವರ್ಣನೆ

ಚಿತ್ತ ಜರತಿದೇವಿಯರಾಡುವ ಪೊನ್ನ | ನೆತ್ತದ ಹಲಗೆಯೊ ಮೇಣು |
ಎತ್ತಿ ಬಿಚ್ಚಿದ ಜೀಸಣಿಗೆಯೊ ತಾನೆನಿ | ಸಿತ್ತು ನುಣ್ಬೆನ್ನು ಮಾನಿನಿಯ ||
ಉಡದೆ ತೊಡದೆ ಸೋಲಿಪ ಕಡುಚೆಲ್ವನು | ಮಡಗಿದ ಬಿದಿ ತನ್ನೊಳಿಂದು |
ಮಡದಿಮಣಿಯ ನುಣ್ಬೆನ್ನುಱಿದವಯವ | ದೊಡನೆ ಸೆಣಸಿ ಮಲೆತಿಹುದು ||
ಮೊಗಚಂದಿರನಿಗೊಪ್ಪಂಪೆತ್ತ ವಟಫಲ | ಮೊಗಲಕ್ಷ್ಮಿಗೆ ರನ್ನದೊಡವು |
ಮೊಗರಸವಾರ್ಧಿಗೆ ವಿದ್ರುಮಲತೆಯೆನೆ | ಸೊಗಯಿಪುದವಳ ಜೆಂದುಟಿಯು ||
ಚಂದಿರ ಪಾಲ್ಗಡಲಿಂ ಬರ್ಪಂದೊಡ | ವಂದ ಮುತ್ತುಗಳೊ ಮೇಣಮೃತ |
ಬಿಂದುಗಳ್ ಕಲಿನವಾಂತುವೊ ತಾವೆನಿಸಿಹು | ವಿಂದುಮುಖಿಯ ರದನಗಳು ||
ಮೊಗನಾವರೆಗೆ ಮೋಹಿಸಿ ಬಂದು ಸಂಪಗೆ | ಮುಗುಳೆಂಬವಳ ನಾಸಿಕವ |
ಮಿಗೆ ಕಂಡು ಪೆಱಸಾರ್ದ ಮಱಿದುಂಬಿಗಳೆನೆ|ಸೊಗಯಿಸಿಹುವು ಪಜ್ಜೆಗುರುಳು||

## ಮುರಿಗೆದೇಶಿಕೇಂದ್ರ ಸು. 1560

ಈತನು ರಾಜೇಂದ್ರವಿಜಯವನ್ನು ಬರೆದಿದ್ದಾನೆ. ಇವನು ವೀರಶೈವಕವಿ; ಮುರಿಗೆಯಮಠದ ಸ್ವಾಮಿಯಾಗಿದ್ದಂತೆ ತೋರುತ್ತದೆ. ಈತನು ತನ್ನ ಗ್ರಂಥದಲ್ಲಿ ಹೆಸರನ್ನು ಹೇಳಿಕೊಂಡಿಲ್ಲ. ರಾಜೇಂದ್ರವಿಜಯಂ "ಪ್ರಭುರಾಜಂ ಮುರಿಗೆದೇಶಿಕೇಂದ್ರನಾಗಿ ಬಂದು ನಿರೂಪಿಸಿದುದು" ಎಂಬ ಒಂದು ಹಳೆಯ ಓಲೆಯ ಪ್ರತಿಯಲ್ಲಿರುವ ಲೇಖಕನ ಉಕ್ತಿಯಿಂದ ಈತನ ಹೆಸರು ಗೊತ್ತಾಯಿತು. ಇವನು ಪ್ರಭುಲಿಂಗದಕಂದ ಮುಂತಾದ ಗ್ರಂಥಗಳನ್ನು ಬರೆದಿರುವ ಮುರಿಗೆಯಶಾಂತವೀರನೇ (ಸು. 1530) ಆಗಿರಬಹುದೋ ಎಂಬ ಸಂದೇಹವುಂಟಾಗಬಹುದು. ಆದರೆ ಹಾಗೆ ನಾಮನಿರ್ದೇಶವಿಲ್ಲದೆ ಇರುವುದರಿಂದ ಕವಿ ಅವನಿಗಿಂತ ಈಚೆಯವನಾಗಿ ಸುಮಾರು 1560 ರಲ್ಲಿ ಇದ್ದಿರಬಹುದೆಂದು ಊಹಿಸುತ್ತೇವೆ.

ಇವನ ಗ್ರಂಥ

### ರಾಜೇಂದ್ರವಿಜಯ

ಇದು ಚಂಪೂರೂಪವಾಗಿದೆ ; ಪ್ರಕರಣ 9, ಪದ್ಯ 753. ಇದಕ್ಕೆ ಹಮ್ಮಿರಕಾವ್ಯ, ಮನುರಾಜನ ಕಾವ್ಯ ಎಂಬ ಹೆಸರುಗಳೂ ಉಂಟು. ಇದರಲ್ಲಿ ಮಲಪ್ರಹಾರಿಯ ತೀರದಲ್ಲಿರುವ ಹಮ್ಮಿರಪುರ ಅಥವಾ ಪಟ್ಟಶಿಲಾಪುರ (ಪಟ್ಟದಕಲ್ಲು) ಎಂಬ ನಗರಕ್ಕೆ ದೊರೆಯಾದ ತ್ರೈಲೋಕ್ಯಚೂಡಾಮಣಿಯ ಮಗ ಹಮ್ಮಿರನ ಚರಿತವು ಹೇಳಿದೆ. ಕಥಾನಾಯಕನಿಗೆ ರಾಜೇಂದ್ರ, ಮನುರಾಜ, ಅನಿಮಿಷೇಂದ್ರ ಎಂಬ ಹೆಸರುಗಳೂ ಉಂಟು. ಪೂರ್ವದಲ್ಲಿ ಚೆನ್ನಬಸವನು ಶರಣರಿಗೂ, ಪ್ರಭುರಾಜನು ಗೊಗ್ಗಯ್ಯ, ಸಿದ್ಧರಾಮ, ಬಸವ ಇವರುಗಳಿಗೂ ಹೇಳಿದ ಈ ಕಥೆಯನ್ನು ಕಾವ್ಯವಾಗಿ ಬರೆದಂತೆ ಕವಿ ಹೇಳುತ್ತಾನೆ. ಕಥಾನಾಯಕನ ಮತ್ತು ಬಿಜ್ಜಳನ ಪರಂಪರೆ ಹೀಗೆ ಹೇಳಿದೆ—

ನವನಂದರುಂ ದಶಗುಪ್ತರುಂ ವಿಂಶತಿಮೌರಿಗಳುಂ ಸಪ್ತವಿಂಶತಿರಾಜೇಂದ್ರರುಂ ವಿಂಶತಿಚಾಳೋಕ್ಯಚಕ್ರವರ್ತಿಗಳವರನ್ವಯೋದ್ಧರಣ ತ್ರೈಲೋಕ್ಯಚೂಡಾಮಣಿರಾಜಸಂತಾನಮನುರಾಜಂ.

ಗೋಹಿಲರಾಜನಣುಗಂ ವೀರಬಿಜ್ಜಳಂ ತತ್ಕುಮಾರಕಂ ಹೆಮ್ಮಾಡಿರಾಯಂ ತದಾತ್ಮಜಂ ಪೆರ್ಮಾಡಿರಾಯಂ ತನ್ನಂದನಂ ಚಾಳೋಕ್ಯಂ ತತ್ಪುತ್ರಂ ಬಿಜ್ಜಳಂ.

ತನ್ನ ಗ್ರಂಥದ ಉತ್ಕೃಷ್ಟತೆಯನ್ನು ಕವಿ ಹೀಗೆ ಹೇಳಿಕೊಂಡಿದಾನೆ:

ರಸಭಾವಚಿತ್ರವರ್ಣಿತ | ದಸಮಾಯತತಂತ್ರದೃಷ್ಟಿನೀತಿವಿಶಾಲೋ |
ಲ್ಲಸದುತ್ಪ್ರೇಕ್ಷಾರ್ಥಂಗಳ | ಪಸರಂ ಹಮ್ಮಿರವೀರಕಾವ್ಯಂ ಭವ್ಯಂ ||
ಪದಿನೆಂಟುದೋಷದೂರಂ | ಪದಿನೆಂಟುಂ ವರ್ಣಮಿಳಿತನವರಸಭರಿತಂ |
ಸದಮಳಯುಕ್ತಿಗೆ ಯತ್ನಂ | ಪದಬಂಧದ ಮಂತ್ರಶಕ್ತಿ ಕೃತಿರತಿರತ್ನಂ ||

ಗ್ರಂಥಾವತಾರದಲ್ಲಿ ಶಿವಸ್ತುತಿ ಇದೆ. ಬಳಿಕ ಕವಿ ವೃಷೇಂದ್ರ, ಭೃಂಗಿ, ವೀರಭದ್ರ, ಷಣ್ಮುಖ, ಬಸವ, ಚೆನ್ನಬಸವ, ಪ್ರಭುದೇವ, ನೀಲಾಂಬಿಕೆ ಇವರುಗಳನ್ನು ಹೊಗಳಿದ್ದಾನೆ. ಪ್ರಕರಣಗಳ ಕೊನೆಯಲ್ಲಿ ಈ ಗದ್ಯವಿದೆ—

ಇದು ಮಧುಭಂಜನಾರ್ಜುನೋದರಪುರಂದರಪುರೋಗಮನಾನಾಸುರೋರಗನಿಕರನವೀನಸುರುಚಿರಪ್ರಚುರಾನರ್ಘಮಣಿಗಣಖಚಿತರಚನೋತ್ತುಂಗಶೃಂಗಾರಸಾರಕೋಟಿಕೋಟೀರಸ್ಫಾರರುಚಿಕದಂಬಪ್ರತಿಬಿಂಬಿತವಿಮಳವಿಳಸಿತನಖಮುಕುರರಾಜಿರಾಜಿತಸ್ಫುರಣಚರಣಾರವಿಂದಚಂದ್ರಶೇಖರಪರಮಶಿವಶರಣ ರಾಜೇಂದ್ರಹಮ್ಮಿರವಿಕ್ರಮಾತುಳಪ್ರಬಂಧದೊಳ್.

ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ಸಮುದ್ರ

ವರನಿಧಿಪಂಚಕಮುಂ ಸು | ಸ್ಥಿರದಿಂದಂ ತಳೆದುಮುೞಿದ ನಾಲ್ಕಂ ಬಯಸೀ |
ಶ್ವರನಱನೂರ್ಗಂ ದಾೞಿಯ | ನಿರದೆಯ್ದುವತೆಱದೊಳಬ್ಧಿ ಮೊರೆದುದು ಪೆಂಪಿಂ ||

ನಾಡು

ಓಡೆಂಬುದು ಪೇಡೆಂಬುದು | ಕಾಡೆಂಬುದು ಭಾಂಡಶಕಲಪಕ್ಕಣದವದೊಳ್ |
ಕೂಡಿದ ನುಡಿಯಲ್ಲದೆಯಾ | ನಾಡೊಳಗಿಲ್ಲದಱ ಸೊಬಗು ಕಡುಚೋದ್ಯತರಂ ||

ನಕ್ಷತ್ರ

ಗಗನಾರವಿಂದವೃಂದವೊ | ಮಿಗೆ ಗಗನದ ಬಹುಳಲೋಚನೌಘವೊ ಗಗನಾ |
ಪಗೆಯ ಜಲಕಣಕದಂಬವೊ | ಮುಗುಳಾದುದೊ ಗಗನಮೆಂಬ ಕಡಬದ ಮರನೇಂ||

ಶ್ರೀವೈಷ್ಣವರು

ಅಣೆಯುರದ ತೊಳಚಿಗೊರಪಿನ | ಮಣಿದೊಡವಿನ ಹೆಡಗೆವಾಗುದಡಿದೋತ್ರದವರು |
ಕ್ಷೀಣಿಯೆ ಱೆಯಗುಱುಪಿನಗ್ಗದ | ಪಣೆಗೋಡಿನ ಹಂಡಹುಂಡಮುಟ್ಟಿಗರೆಸೆದರ್ ||

ಶಂಭು

ಪಲಬಗೆಯಿಂ ಸೆಱೆವೋದರೆನ್ನ ಕುಲದೊಳ್ ಪುಟ್ಟಿರ್ದವರ್ ಬಿಟ್ಟು ತಾಯ್ |
ನೆಲೆಗೆಟ್ಟಳ್ ಕಡುಸುಟ್ಟು ಕೆಟ್ಟನಳಿಯಂ ಬಾಯಿಕ್ಕಿ ಕೂಗಿಕ್ಕುವಾ |
ತಲೆಮೂಗಿಲ್ಲದ ಬಂಧುಸಂತತಿಯುಱೆ ನೈಕುಂಠಂಗೆ ನಂಟಾಗಿಯುಂ |
ಸಲೆ ಕೆಟ್ಟಂ ಪೊರೆ ಶಂಭು ಎಂಬ ತೆಱದಿಂ ಶಂಖಾರವಂ ರಾಜಿಕುಂ ||

ಹಮ್ಮೀರ

ನತರಾಗದಹಿತರಾಜ | ಗತಿಭೀಕರಪುಂಡರೀಕನಿಳಯಮುನೀಶಂ |
ನತರಾಗದ ಹಿತರಾಜ | ಗತಿಭಾಸುರಪುಂಡರೀಕನಿಕರಮುನೀಶಂ ||
ರಾಜಕಳಾಲಂಕಾರಂ | ನೈಜೇಂದ್ರಿಯಸರಸಧವಳವರ್ಣಿತಮೋಹಂ |
ಭ್ರಾಜಿತಮತಿಹಿತಪದಸಂ | ಯೋಜಿತಸಿದ್ಧಾಂತಸಾರಕೌಮುದಿರಾಗಂ ||

ಚತುರ್ವಿಧಾರ್ಥಂ ||

ಪಿಶುವ

ಪೊಗರಿಂಪುನುಣ್ಪುಪೆಂಪಿನ | ಸೊಗಸಿನ ರಸಭಾವಚಿತ್ರಸದಲಂಕಾರಾ |
ದಿಗೆ ಸಲ್ವ ಚೆಲ್ವ ಕಾವ್ಯದ | ಬಗೆಯಱಿಯದ ಪುಚ್ಚುಗುನ್ನಿ ಕೂಗಿದೊಡಕ್ಕೇ ||

---

ಮಹಾಂತಸ್ವಾಮಿ ಸು 1560.

ಈತನು ಮುರಿಗೆಯ ಶಾಂತವೀರನ (ಸು. 1530) ಸ್ತುತಿರೂಪವಾದ ಒಂದು ಷಟ್ಪದೀಗ್ರಂಥವನ್ನು ಬರೆದಿದ್ದಾನೆ. ಇದಕ್ಕೆ ನಾಂದ್ಯ ಎಂಬ ಹೆಸರು ಹೇಳಿದೆ. ಇವನು ವೀರಶೈವಕವಿ ; ಇವನಿಗೆ ಮಹಾಂತಯ್ಯ, ಮುರಿಗೆಯಸ್ವಾಮಿ ಎಂಬ ಹೆಸರುಗಳೂ ಹೇಳಿವೆ. ಇವನು ಮುರಿಗೆಯಶಾಂತವೀರನ ಕಾಲವಾದಮೇಲೆ ಆ ಮಠಕ್ಕೆ ಸ್ವಾಮಿಯಾಗಿದ್ದಂತೆ ತೋರುವುದರಿಂದ ಇವನ ಕಾಲವು ಸುಮಾರು 1560 ಆಗಿರಬಹುದೆಂದು ಊಹಿಸುತ್ತೇವೆ.

ಈತನ ನಾಂದ್ಯವು ಭಾಮಿನೀಷಟ್ಪದಿಯಲ್ಲಿ ಬರೆದಿದೆ ; ಪದ್ಯ 25. ಇವು ಸಂಧಿಗಳ ಮೊದಲನೆಯ ನಾಂದೀಪದ್ಯಗಳಾಗಿರಬಹುದೋ ಏನೋ ತಿಳಿಯದು. ಒಂದು ಪದ್ಯವನ್ನು ಉದಾಹರಿಸುತ್ತೇವೆ—

ಸಿದ್ಧಲಿಂಗನ ಕರುಣಶೇಷಂ | ಸಿದ್ಧಿಸಿದ ನಿಜಬೋಳಬಸವನ |
ಶುದ್ಧವಾದ ಪ್ರಸಾದಸೇವನೆಯಿಂದ ಬೆಳೆದಿರ್ದ ||
ಉದ್ಧವಾದಾಗುರುವಿನಿಂ ಸಲೆ | ಸಿದ್ಧಕಟ್ಟಿಗೆಹಳ್ಳಿದೇವನ |
ಶುದ್ಧಜ್ಞಾನದಿ ಬೆಳೆದ ಮುರಿಗೆಯದೇವ ಪಾಲಿಪುದು ||

" ಮುರಿಗೆಯ ಸ್ವಾಮಿಗಳು ನಿರೂಪಿಸಿದ ನಾಂದ್ಯ " ಎಂದು ನಾನಾ ಷಟ್ಪದಿಗಳಲ್ಲಿ ಬರೆದಿರುವ ಶಿವಸ್ತುತಿರೂಪವಾದ 24 ಪದ್ಯಗಳುಳ್ಳ ಒಂದು ಗ್ರಂಥವಿದೆ. ಇದೂ ಏತತ್ಕವಿಕೃತವಾಗಿರಬಹುದು. ಇದರಿಂದ ಒಂದು ಪದ್ಯವನ್ನು ತೆಗೆದು ಬರೆಯುತ್ತೇವೆ—

ಬೊಮ್ಮಂ ತಿಮ್ಮಂ ಹಮ್ಮಿನದೇವಂ | ತಮ್ಮಂ ಪುಟ್ಟಿಸಿದಭವನ ಬರವಂ |
ಗಮ್ಮನೆ ಪಡೆನುಡಿ ಪುಟ್ಟಂ ಪೊರೆಯಂ ಕೇಡಂ ಮಾಡುವರಾ ||
ಜೊಮ್ಮಂ ತಿಮ್ಮಂ ದಮ್ಮಂ ದಕ್ಷಂ | ಕಮ್ಮಂಗಣೆಯಂ ಮೊದಲಾದುಗ್ಗಡ |
ಹೆಮ್ಮೆಯದೇವರ್ ಜಿಮ್ಮಉಲಿಲಿದರ್ ನಿಮ್ಮಿಂದನಮಾಕ್ಸಾ ||

---

## ಕಂಪಿ ನಂಜಯ್ಯ. ಸು. 1560

ಈತನು ಮುರಿಗೆಯಶಾಂತವೀರನ (ಸು 1530) ಸ್ತುತಿರೂಪವಾದ ನಾಂದ್ಯವೆಂಬ ಒಂದು ಷಟ್ಪದೀಗ್ರಂಥವನ್ನು ಬರೆದಿದ್ದಾನೆ. ಇದು ವಾರ್ಧಕ ಷಟ್ಪದಿಯಲ್ಲಿ ಬರೆದಿದೆ; ಪದ್ಯ 24. ಇದಕ್ಕೆ ಮುರಿಗೆಯಸ್ವಾಮಿಗಳ ಸ್ತೋತ್ರದ ನಾಂದ್ಯ ಎಂಬ ಹೆಸರು ಹೇಳಿದೆ. ಈತನು ವೀರಶೈವಕವಿ; ಮುರಿಗೆಯ ಶಾಂತವೀರನ ಶಿಷ್ಯನಾಗಿದ್ದಂತೆ ತೋರುತ್ತದೆ,

---

## ಚೆನ್ನಮಲ್ಲಿಕಾರ್ಜುನ. ಸು 1560

ಈತನು ಶಿವಮಹಿಮಾಶತಕ, ಗುರುಸ್ತೋತ್ರದ ಟೀಕೆ ಇವುಗಳನ್ನು ಬರೆದಿದ್ದಾನೆ. ಇವನು ವೀರಶೈವಕವಿ. "ಶ್ರೀವೀರಮಾಹೇಶ್ವರಾಂಘ್ರಿಸರೋಜಾತಮಕರಂದಪಾನಮುದಿತೇಂದಿಂದಿರ, ವಿದ್ವತ್ಕವಿ, ಸ್ವಯಶೋಜಿತಮಲ್ಲಿಕಾರ್ಜುನ, ಪರಿಹೃತಪರಮತ" ಎಂದು ತನ್ನನ್ನು ವಿಶೇಷಿಸಿ ಹೇಳಿಕೊಂಡಿದ್ದಾನೆ. ಇವನ ಗುರು ಶಾಂತಲಿಂಗ. ಇವನು ಸುಮಾರು 1560 ರಲ್ಲಿ ಇದ್ದಿರಬಹುದೆಂದು ತೋರುತ್ತದೆ.

ಇವನ ಗ್ರಂಥಗಳಲ್ಲಿ

### 1 ಶಿವಮಹಿಮಾಶತಕ

ಇದರಲ್ಲಿ 113 ವೃತ್ತಗಳೂ 2 ಕಂದಗಳೂ ಇವೆ; ಪ್ರತಿವೃತ್ತವೂ ಶ್ರೀಚೆನ್ನಮಲ್ಲೇಶ್ವರ ಎಂದು ಮುಗಿಯುತ್ತದೆ. ಇದು ಶಿವಪಾರಮ್ಯವನ್ನು

ಪ್ರತಿಪಾದಿಸುವ ಗ್ರಂಥ. ಇದಕ್ಕೆ ಚೆನ್ನಮಲ್ಲೇಶ್ವರಶತಕ ಎಂಬ ಹೆಸರೂ ಉಂಟು. ಇದು ಶ್ರುತಿಸೂಕ್ತಿರತ್ನಮಾಲಾಸ್ತುತಿ, ವೇದಾಂತಸಾರಾರ್ಥದಿಂ ದೆಸೆದಿರ್ಪ ಶತಕಂ ಎಂದು ಕವಿ ಹೇಳುತ್ತಾನೆ. ಅಲ್ಲದೆ ಇದರ ವಿಷಯ ವಾಗಿ ಹೀಗೆ ಬರೆದಿದ್ದಾನೆ--

ಶಿವಮಹಿಮಾಶತಕಂ ವೈ | ಷ್ಣವವಾಗದ್ವೈತಿಕರ್ಮಿಗಳ ಹೃಚ್ಛಲ್ಯಂ |
ಪ್ರವರಶಿವಭಕ್ತಪರಿಷ | ದ್ಭವನದೊಳಿದು ಬೆಳಪ ರತ್ನದೀಪಿಕೆಯೆನಿಕುಂ ||

ಗ್ರಂಥಾವತಾರದಲ್ಲಿ ಶಿವಸ್ತುತಿ ಇದೆ. ಈ ಶತಕದಿಂದ ಕೆಲವು ಪದ್ಯ ಗಳನ್ನು ತೆಗೆದು ಬರೆಯುತ್ತೇವೆ---

ಹರಿಯಂ ಕಣ್ಣ್ರನೆ ಕಂದಿಸುತ್ತೆ ವಿಧಿಯಂ ನಿತ್ರಾಣೆಯಂ ಮಾಡಿ ದಿ |
ಗ್ವರರಂ ಬೆಂಬಿಡದಟ್ಟಿ ಮುಟ್ಟೆ ಸುಡುತುಂ ಚಂದ್ರಾರ್ಕಮುಖ್ಯಾಮರಾ |
ಸುರರಂ ತುತ್ತುತೆ ಬರ್ಪ ಘೋರವಿಷಮಂ ಕಂಠಾಗ್ರದೊಳ್ ತಾಳ್ದ ಶಂ |
ಕರ ನೀನೊಪ್ಪಿರೆ ಬೇಱೆದೇವರೊಳರೇ ಶ್ರೀಚೆನ್ನಮಲ್ಲೇಶ್ವರಾ ||
ಕೆಲಬರ್ ಕರ್ಮವೆ ಕರ್ತೃವೆಂದು ನುಡಿವರ್ ಕಳ್ದಿರ್ಪ ಕಳ್ಳಂಗೆ ಸಂ |
ಕಲೆಯಂ ಬಂಧಿಸುತಿರ್ಪುದೇಂ ಕಳವೊ ಆಜ್ಞಾಕರ್ತೃ ಬೇಱೊರ್ವನೋ ||
ಫಲಮಂ ಕರ್ಮಿಗೆ ಜಾಡ್ಯಕರ್ಮಮದು ತಾನೇನೀವುದೇ ದೇವ ನಿ |
ನ್ನೊಲವಿಂದಲ್ಲದೆ ತತ್ಫಲಂ ಲಭಿಪುದೇ ಶ್ರೀಚೆನ್ನಮಲ್ಲೇಶ್ವರಾ ||
ಅನಲಂ ತಮ್ಮಯ ದೇವರೆಂದು ಭಜಿಪರ್ ನಿಚ್ಚಂ ದ್ವಿಜರ್ಕಳ್ ನಿಕೇ |
ತನಮಂ ತಾನದು ದಳ್ಳಿಸುತ್ತೆ ಸುಡಲಯ್ಯೋ ಕೆಟ್ಟೆವೆಂದಂತದಂ ||
ಕನಲುತ್ತಾಗಳೆ ಕೂಡೆ ನಂದಿಸುತೆ ದೈವದ್ರೋಹಮಂ ಮಾಳ್ಪರಾ |
ಬಿನುಗರ್ಗೆತ್ತಣ ಭಕ್ತಿಭಾವನಿಯಮಂ ಶ್ರೀಚೆನ್ನಮಲ್ಲೇಶ್ವರಾ ||

## 2 ಗುರುಸ್ತೋತ್ರದ ಟೀಕೆ

ಮೂಲಗ್ರಂಥವಾದ ಗುರುಸ್ತೋತ್ರವು ಶೀಲವಂತಯ್ಯನಿಂದ (ಸು. 1160) ರಚಿತವಾದುದು. ಇದಕ್ಕೆ ಆತ್ಮಲಿಂಗಪ್ರಣವಸಂಯೋಗಸ್ಥಲದ ತ್ರಿವಿಧ ಎಂದೂ ಹೆಸರುಂಟು.[1] ಈ ಟೀಕೆಯನ್ನು "ಗುರುಶಾಂತಲಿಂಗನಡಿ ದಾವರೆಯ ಶಿರಸಾವಹಿಸಿಯುಸಿರ್ದೆಂ" ಎಂದು ಕವಿ ಹೇಳುತ್ತಾನೆ. ಈ ಶಾಂತಲಿಂಗನನ್ನು ಹೀಗೆ ಸ್ತುತಿಸಿದ್ದಾನೆ---

1 Vol. I, 158.

ಅಂದಿನ ಹರಗುರುವಾಕ್ಯದಿ । ಹೊಂದಿದ ಶಿವಯೋಗಸಾರವಾತುಲತಂತ್ರಂ ।
ಕಂದಪದಗ್ರಂಥಶ್ರುತಿವ್ರ । ತ್ರಂಗಳ ಗುರುಶಾಂತಲಿಂಗ ತಾನಱಿದಿರ್ಕುಂ ॥

ಕೊನೆಯಲ್ಲಿ ಈ ತ್ರಿಪದಿ ಇದೆ--

ಎಲ್ಲಾ ಪುರಾತನರ ಮೆಲ್ಲಡಿಯ ನಿಜಹೃದಯ ।
ದಲ್ಲಿ ತಳೆದಗಲದಿರು ಮಗನೆ ಎಂದು ಚೆನ್ನ ।
ಮಲ್ಲನನು ಸಲಹಿದಿರಿ ಗುರುವೆ ॥

---

ಶಾಂತೇಶ. 1561

ಈತನು ತೋಂಟದಸಿದ್ಧೇಶ್ವರನ ಪುರಾಣವನ್ನು ಬರೆದಿದ್ದಾನೆ. ಇವನು ವೀರಶೈವಕವಿ; ಅಮರಗುಂಡದ ಮಲ್ಲಿಕಾರ್ಜುನನಾಜ್ಞೆಯಿಂ ಶೂಲವ ನಡರಿದ ಗುರುಭಕ್ತನನ್ವಯದೆ ಹುಟ್ಟಿ ವಾತೂಲಕ್ಕೆ ಟೀಕಂ ಬರೆದು ಗಣಭಾಷ್ಯರತ್ನಮಾಲೆಯಂ ರಚಿಸಿದ ಗುಬ್ಬಿಯ ಮಲ್ಲಣ್ಣನ(ಸು. 1475) ಪೌತ್ರನಾದ ಸಂಸ್ಕೃತಕರ್ಣಾಟಾದಿಶಾಸ್ತ್ರಜ್ಞನಾದ ಬಸವಪೌರಾಣದ ಮಲ್ಲಣಾರ್ಯನ (1513) ಮಗನು. ಈ ಮಲ್ಲಣ್ಣನು "ವಿಮಲಗುರು ತೋಂಟದಾರ್ಯನ (ಸು. 1470) ಪದಕಮಲಷಟ್ಚರಣ" ಎಂದು ಕವಿ ಹೇಳುತ್ತಾನೆ. ಈ ಮಲ್ಲಣ್ಣನಿಗೆ ಗುರುಭಕ್ತ ಎಂಬ ಮಗನು ಇದ್ದನೆಂದೂ ಇವನ ಮಗನೇ ಬಸವಪೌರಾಣದ ಮಲ್ಲಣಾರ್ಯನೆಂದೂ ವೀರಶೈವಾಮೃತಪುರಾಣದಿಂದ (1530) ತಿಳಿಯುತ್ತದೆ. ಶಾಂತೇಶನಿಗೆ ಶಾಂತದೇಶಿಕ ಎಂಬ ಹೆಸರೂ ಉಂಟು. ಇವನ ಗುರು ಗಣೇಶ್ವರ. ತನ್ನ ಗ್ರಂಥವನ್ನು "ಪಚ್ಚೆಯಕಂತೆಯಾರ್ಯನ ಕರಕಮಲದೊಳ್ ಜನಿಸಿ ತೋಂಟದಸಿದ್ಧಲಿಂಗನಂಘ್ರಿಯನರ್ಚಿಸುತ್ತಂ" ಉಪದೇಶವನ್ನು ಪಡೆದ ಚಂದ್ರಶೇಖರಗುರುವಿನ ಇಷ್ಟಾನುಸಾರವಾಗಿ, ಗುಮ್ಮಳಾಪುರದ ಶಾಂತೇಶನಂಘ್ರಿಯನ್ನು ನೆನೆದು, ಶಕ 1483 ರೌದ್ರಿಯಲ್ಲಿ--ಎಂದರೆ 1561 ರಲ್ಲಿ--ಬರೆದಂತೆ ಹೇಳುತ್ತಾನೆ.

ಪೂರ್ವಕವಿಗಳಲ್ಲಿ " ನಿರುತದಿಂ ಚೌಷಷ್ಟಿಶೀಲದಿ ತಾನಾಚರಿಸಿ ಬಸವೇಶ್ವರನ ಕೊಂಡಾಡಿ ಶಿವನಂ ಸ್ತುತಿಸಿದ " ಪಾಲ್ಕುರಿಕೆಸೋಮನನ್ನು ಹೊಗಳಿದ್ದಾನೆ.

ಇವನ ಗ್ರಂಥ

ತೋಂಟದ ಸಿದ್ಧೇಶ್ವರನ ಪುರಾಣ

ಇದು ಭಾಮಿನೀಷಟ್ಪದಿಯಲ್ಲಿ ಬರೆದಿದೆ; ಸಂಧಿ 7, ಪದ್ಯ 000. ಇದರಲ್ಲಿ ತೋಂಟದಸಿದ್ಧಲಿಂಗಯತಿಯ ಚರಿತವು ಹೇಳಿದೆ. ಈ ಯತಿ ಹರದನಹಳ್ಳಿಯ ಗೋಸಲಚೆನ್ನಬಸವೇಶ್ವರನ ಶಿಷ್ಯನು; ಶಿವಗಂಗೆಗೆ ಬಂದು ಕಗ್ಗೆರೆಯ ಸಮೀಪದಲ್ಲಿರುವ ನಾಗಿಣೀನದಿಯ ತೀರದಲ್ಲಿ ತೋಂಟದೊಳಗೆ ಶಿವಯೋಗದಲ್ಲಿದ್ದನು; ಶಿಷ್ಯನಾದ ಚಂದ್ರಶೇಖರನಿಗೆ ಭುವನಕೋಶ ಧರ್ಮಾಧರ್ಮವಿಚಾರ, ಶಿವನ ಪಂಚವಿಂಶತಿಲೀಲೆಗಳು, ಷಟ್ಸ್ಥಲಕ್ರಮ, ಮುಂತಾದ ವಿಷಯಗಳನ್ನು ಬೋಧಿಸಿದನು. ಚಂದ್ರಶೇಖರನು ತಾನು ಕೇಳಿದ ಬೋಧೆಯನ್ನು ಸಾಂಗವಾಗಿ ಕಾವ್ಯದಲ್ಲಿ ಹೇಳಬೇಕೆಂದು ಬೆಸಸಲು ಕವಿ ಅದೇಮೇರೆಗೆ ಬರೆದಂತೆ ಹೇಳುತ್ತಾನೆ.

ಗ್ರಂಥಾವತಾರದಲ್ಲಿ "ಶಂಕರಗುರುಕುಲಾಂಬುಧಿಪೂರ್ಣಹಿಮಕರ"ನಾದ ಸಿದ್ಧೇಶನ ಸ್ತುತಿ ಇದೆ. ಬಳಿಕ ಕವಿ ಶಿವ, ಪಾರ್ವತಿ, ಪ್ರಭುದೇವ, ಬಸವ, ಚೆನ್ನಬಸವ, ಷಣ್ಮುಖ, ವೀರಭದ್ರ, ಭೃಂಗಿ ಇವರುಗಳನ್ನು ಪರಿವಿಡಿಯಿಂದ ಸ್ತುತಿಸಿದ್ದಾನೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ವಸಂತ

ಶುಕಪಿಕಾಳಿಯ ರಾವ ಕರ್ಣಕೆ | ಸುಕರದಿಂ ತಂಗಾಳಿ ಗಾತ್ರಕೆ |
ಸಕಲಮಂಜುಳದಾಮ್ರಪಲ್ಲವರಾಗ ನೇತ್ರಕ್ಕೆ ||
ಪ್ರಕಟಫಲರುಚಿ ಜಿಹ್ವೆಗಂ ನಾ | ಸಿಕಕೆ ಕುಸುಮಾಮೋದವೆಸೆಯಲ್ |
ಮಕರಕೇತನಸಖನೆನಿಪ್ಪ ವಸಂತನೆಯ್ತಂದಂ ||

ವನ

ತಿಳಿಗೊಳಂಗಳ ನಡುವೆ ಮೂಡಿದ | ನಳಿನಕೈರವಕೆಱಗಿ ಝುಂಕರಿ |
ಪಳಿಗಳಿಂದಂ ಜಕ್ಕವಕ್ಕಿಯ ತೆಕ್ಕೆಯಿಂ ಮತ್ತೆ ||
ಬಳಸಿ ತೋಱುವ ಮಾಮರಂಗಳೊ | ಳೆಳಸಿ ಕೂಗುವ ಪಿಕನಿಕರದಿಂ |
ಗಿಳಿಯ ಸವಿನುಡಿಯಿಂದ ವನವಂತಲ್ಲಿ ರಾಜಿಪುದು ||

ಕೈಲಾಸ

ನೆಟ್ಟನಘಮಂ ಸುಟ್ಟ ಶರಣರ | ಕೊಟ್ಟ ದುರಿತಘರಟ್ಟ ಪುಣ್ಯದ |
ಬಟ್ಟ ಸುಖಮಂ ಬಿಟ್ಟ ಸುಜನ | ಗಟ್ಟ ಕರುವಿಟ್ಟ ||

ದಿಟ್ಟಕೀರ್ತಿಯ ಪಟ್ಟ ಪೂಜ್ಯದ । ತಿಟ್ಟ ಬೆಳ್ಪಿನ ಬಟ್ಟಮುತ್ತಳ ।
ಪಟ್ಟ ಹರ್ಷದ ಘಟ್ಟ ಬೆಳ್ಳಿಯಬೆಟ್ಟ ರಂಜಿಪುದು ॥

ಯಮಕ

ರಾಜರಾಜಹಿತಾಹಿತಾಹಿತ । ಬೀಜಬೀಜಸುರಾಸುರಾಸುರ ।
ಭೂಜಭೂಜನತಾನತಾನತ ಭೂಧ್ರಭೂಧರಗಿರಿ ॥
ಮೂಜಮೂಜಸಮಾಸಮಾಸಮ । ಸ್ಯೈಜಸ್ಯೈಜಗುಣಾಗುಣಾಗುಣ ।
ಗೋಜಗೋಜಸಖಾಸಖಾಸಖ ಶರಣು ದೇಶಿಕನೇ ॥

ನಿರೋಷ್ಠ

ಜಯ ಚರಾಚರರಕ್ಷ ದೃತಗರ । ಜಯ ಜಟಾತಟೀಸಿತಸಿತಕರ ।
ಜಯ ಜನಾರ್ದನನೇತ್ರಚರಣನಿರಾಜಿತಂಗಗತ ॥
ಜಯ ಜಿತಾಂತಕ ಜನನಕೃಂತಕ । ಜಯ ಧನೇಶಸಹಾಯ ಹರಿಹಯ ।
ಜಯ ನತಾಧಿಕಶಾಂತಿದಾಯಕ ಶಾಂತ ನಿಶ್ಚಿಂತ ॥

ಶಿವಸ್ತುತಿ

ಎಲೆಶಿವನೆ ನಿನ್ನೆಡದ ಕಣ್ಣೇ । ಶಿಲೆಯ ಕರಗಿಸುತಿರ್ಪುದನಿಶಂ ।
ಒಲಿದ ನಯನವೆ ಕಲ್ಲೊಳುಷ್ಣವನೈದಿಸುತ್ತಿರ್ಕುಂ ॥
ಜ್ವಲನನಯನವೆ ಕಾಮಕಾಲರ । ದ್ಯಲಘುಖಳರಂ ದಹಿಪುದೆನುತಂ ।
ಚಲಿಸದೆಂತಗರಾಜನಿತ್ತನೊ ದೇಹಿಯಂ ನಿನಗೆ ॥

---

## ಎಳಮಲೆಯಗುರುಶಾಂತದೇವ ಸು. 1565

ಈತನು ಶರಣಸ್ತೋತ್ರದ ವಚನ, ಲಿಂಗವಿಕಳಾವಸ್ಥೆಯ ವಚನ; ಷಟ್ಸ್ಥಲಸ್ತೋತ್ರದ ವಚನ, ಅಷ್ಟಾವರಣಸ್ತೋತ್ರದ ವಚನ ಇವುಗಳನ್ನು ಸೇರಿಸಿದುದಾಗಿ ತಿಳಿಯುತ್ತದೆ: ಎಂದರೆ ಈ ಗ್ರಂಥಗಳು ಏತತ್ಕೃತವಲ್ಲ; ಇತರರ ಗ್ರಂಥಗಳಿಂದ ಆರಿಸಿ ಜೋಡಿಸಿದ ವಚನಗಳನ್ನು ಒಳಕೊಂಡಿವೆ.

ಇವನು ವೀರಶೈವಕವಿ; ಸಂಪಾದನೆಯಚೆನ್ನಂಜೆದೇವನ (ಸು. 530) ಶಿಷ್ಯನು. ಇವನ ಕಾಲವು ಸುಮಾರು 565 ಆಗಬಹುದು.

ಇವನಿಂದ ಸಂಕಲಿತವಾದ ಗ್ರಂಥಗಳಲ್ಲಿ ಶರಣಸ್ತೋತ್ರದವಚನವೂ ಲಿಂಗವಿಕಳಾವಸ್ಥೆಯವಚನವೂ 110 ವಚನಗಳನ್ನು ಒಳಕೊಂಡಿವೆ; ಉ

ಳಿದುವುಗಳ ವಚನಸಂಖ್ಯೆ ವ್ಯಕ್ತವಾಗಿ ಹೇಳಿಲ್ಲ. ಅಷ್ಟಾವರಣಸ್ತೋತ್ರದ ವಚನದಲ್ಲಿ ಗುರು, ಲಿಂಗ, ಜಂಗಮ, ವಿಭೂತಿ, ರುದ್ರಾಕ್ಷಿ, ಮಂತ್ರ, ಪಾದೋದಕ, ಪ್ರಸಾದ ಇವುಗಳ ಮಹತ್ತ್ವವು ನಿರೂಪಿತವಾಗಿದೆ.

---

## ಶ್ರುತಕೀರ್ತಿ 1567

ಈತನು ವಿಜಯಕುಮಾರಿಯ ಚರಿತೆಯನ್ನು ಬರೆದಿದ್ದಾನೆ. ಇವನು ಜೈನಕವಿ; ಇವನ ಪಿತಾಮಹನು ಕನಕಗಿರಿಯ ವಿಜಯಕೀರ್ತಿ, ತಂದೆ ಅಕಲಂಕ. ಇವನಿಗೆ ಶ್ರುತಕೀರ್ತಿಯೆಂಬ ಹೆಸರಲ್ಲದೆ ರಾಮಚಂದ್ರ, ಚಂದನವರ್ಣಿ ಎಂಬ ಹೆಸರುಗಳೂ ಇದ್ದಂತೆ ಈ ಕೆಳಗಣ ಪದ್ಯದಿಂದ ತಿಳಿಯುತ್ತದೆ—

ಸಂದ ಸಂಸಾರದೊಳಗೆ ರಾಮಚಂದ್ರನು । ಚಂದನವರ್ಣಿ ಮಧ್ಯದೊಳು ।
ಸಂದುದು ಕಡೆಯೊಳು ಶ್ರುತಕೀರ್ತಿದೇವರಿ | ನ್ನೆಂದೆಂಬ ನಾಮ ಲೋಕದೊಳು ॥
ಈತೆರದೊಳು ಮೂರುನಾಮದ ತಳೆದ ಮು | ತ್ತಾತನೊಲಿದು ಕೇಳಿದನು ।

ಈ ಗ್ರಂಥವನ್ನು ಶಕ 1488 ಪ್ರಭವದಲ್ಲಿ ಆರಂಭಿಸಿ ವಿಭವದಲ್ಲಿ (1567) ಮುಗಿಸಿದಂತೆ ಹೇಳುತ್ತಾನೆ.

ಇವನ ಗ್ರಂಥ

### ವಿಜಯಕುಮಾರಿಯ ಚರಿತೆ

ಇದು ಸಾಂಗತ್ಯದಲ್ಲಿ ಬರೆದಿದೆ; ಪದ್ಯ 1312. ಇದರಲ್ಲಿ "ವಿಜಿತೇಂದ್ರಿಯಳಾಗಿ ಕಾಮನ ಗೆಲಿದ" ವಿಜಯಕುಮಾರಿಯ ಕಥೆ ಹೇಳಿದೆ. ಆರ್ಯಭಾಷೆಯಲ್ಲಿದ್ದ ಈ ಕಥೆಯನ್ನು ಕನ್ನಡಭಾಷೆಯಲ್ಲಿ ಬರೆ ಎಂದು ಜೈನೋತ್ತಮರು ಪ್ರಾರ್ಥಿಸಲು ಬರೆದಂತೆ ಕವಿ ಹೇಳುತ್ತಾನೆ. ಗ್ರಂಥಾವತಾರದಲ್ಲಿ ಜಿನಸ್ತುತಿ ಇದೆ. ಬಳಿಕ ಕವಿ ಸಿದ್ಧಾದಿಗಳು, ಸರಸ್ವತಿ, ಗಣಧರರು ಇವರುಗಳನ್ನು ಹೊಗಳಿ ಅನಂತರ ಭದ್ರಬಾಹುವಿನಿಂದ ಶ್ರುತಕೀರ್ತಿಯವರೆಗೆ[1] ಜೈನಗುರುಗಳನ್ನು ಸ್ಮರಿಸಿದ್ದಾನೆ. ಈ ಗ್ರಂಥದಿಂದ ಪೂಜ್ಯಪಾದ ಸ್ತುತಿರೂಪವಾದ ಒಂದು ಪದ್ಯವನ್ನು ತೆಗೆದು ಬರೆಯುತ್ತೇವೆ—

---

1 ಭದ್ರಬಾಹು, ಗುಣಭದ್ರ, ಸಮಂತಭದ್ರ, ಇಂದ್ರನಂದಿ, ಮಹಾನಂದಿ, ಸಿಂಹಣಂದಿ, ವೀರಣಂದಿ, ವೀರಸೇನ, ನಯಸೇನ, ವೀರಾಚಾರ್ಯ, ಚಂದ್ರಪ್ರಭ, ಶುಭಚಂದ್ರ, ನೇಮಿಚಂದ್ರ, ಪೂಜ್ಯಪಾದ, ಕೊಂಡಕುಂದ, ಕವಿಪರಮೇಷ್ಠಿ, ಚಾರುಕೀರ್ತಿಪಂಡಿತ, ಅಕಲಂಕ, ಚಂದ್ರಪ್ರಭ, ವಿದ್ಯಾನಂದ, ಪ್ರಭೇಂದು, ಶ್ರುತಕೀರ್ತಿ,

ತನುದೋಷಕೆ ವೈದ್ಯ ವಚನದೋಷಕೆ ಶಬ್ದ | ಮನದೋಷಕೆ ತತ್ವವನು |
ಜನಕಱುಹಿದ ಶ್ರೀಪೂಜ್ಯಪಾದರ ಪಾದ | ವನಜಕ್ಕೆ ನಾನೆಱಗುವೆನು ||

---

## ರಂಗಾಚಾರ್ಯ ಸು. 1570.

ಈತನು ಶ್ರೀರಂಗಮಾಹಾತ್ಮ್ಯವನ್ನು ಬರೆದಿದ್ದಾನೆ. ಇವನು ಶ್ರೀವೈಷ್ಣವಕವಿ ; ಕೌಂಡಿನ್ಯಗೋತ್ರದವನು ; ಹೊಮ್ಮಗ್ರಾಮನಿವಾಸಿ ; ಕಂದಾಡೆಯಾಚಾರ್ಯನ ಶಿಷ್ಯನು ; ತಿರುಮಲಾಚಾರ್ಯನ ತಮ್ಮ; ಅಪ್ರಮೇಯದೇವರ ಭಕ್ತ. ನಮಗೆ ದೊರೆತ ಈ ಗ್ರಂಥದ ಪ್ರತಿ 1663ರಲ್ಲಿ ಬರೆದುದಾದುದರಿಂದ ಕವಿ ಸುಮಾರು 1570ರಲ್ಲಿ ಇದ್ದಿರಬಹುದೆಂದುಊಹಿಸುತ್ತೇವೆ.

ಇವನ ಗ್ರಂಥ

### ಶ್ರೀರಂಗಮಾಹಾತ್ಮ್ಯ

ಇದು ಗದ್ಯರೂಪವಾಗಿದೆ ; ಪರಿಚ್ಛೇದ 10. ಗ್ರಂಥಾರಂಭದಲ್ಲಿ—ಸಕಲಪುರಾಣಸಾರಭೂತವಾದ ಮಹೇಶ್ವರನಾರದಸಂವಾದವಾದ ಪನ್ನೆರಡುಸಾವಿರಸಂಹಿತೆಗಳುಳ್ಳ ಬ್ರಹ್ಮಾಂಡಪುರಾಣದಲ್ಲಿ ದಶಾಧ್ಯಾಯಪರಿಮಿತವಾದ ಶ್ರೀರಂಗಮಾಹಾತ್ಮ್ಯ—ಎಂದಿದೆ. ಇದನ್ನು ಕವಿ "ಸರ್ವಜನರ್ಗೆ ಸುಲಭವಾಗಿ ತಿಳಿವಂತೆ ಕರ್ಣಾಟಕಭಾಷಾರಚನೆಯಿಂ" ನಿರೂಪಿಸಿದನು. ಗ್ರಂಥಾಂತ್ಯದಲ್ಲಿ ಈ ಗದ್ಯವಿದೆ—

ಸ್ವಸ್ತಿ ಸಮಸ್ತವಿಬುಧನಿವಹಮೌಳಿರಚಿತನಾನಾವಿಧೋಪಲಪ್ರಭಾವ್ರಾತರಂಜಿತಪದಕಮಲನಿಹಿತಾಂತಃಕರಣೇನ ಅಪ್ರಮೇಯಕೃಪಾಕಟಾಕ್ಷವೀಕ್ಷಣ....ರಂಗನಾಮಕೇನ ವಿರಚಿತಶ್ರೀರಂಗಮಾಹಾತ್ಮ್ಯಂ ಸಂಪೂರ್ಣಂ.

---

## ಚೆನ್ನರಾಜ ಸು. 1570

ಇವನು ವೈದ್ಯಸಾರಸಂಗ್ರಹವನ್ನು ಬರೆದಿದ್ದಾನೆ. ಈತನು ಎಳಂದೂರು (ಬಾಲಚಂದ್ರಪುರದ) ದೊರೆ; ಹದಿನಾಡುರಾಜರಲ್ಲಿ ಒಬ್ಬನು. ಇವನ ಕುಲದೈವವು ಎಳಂದೂರುಗೌರೀಶ್ವರ. ಇವನ ಕಾಲವು ಸುಮಾರು 1570 ಆಗುತ್ತದೆ.

ಇವನ ಗ್ರಂಥ

### ವೈದ್ಯಸಾರಸಂಗ್ರಹ

ಇದರಲ್ಲಿ ಹಲವುವಿಧವಾದ ಚಿಕಿತ್ಸೆಗಳು ಹೇಳಿವೆ; ಪ್ರಕರಣ 12. ಸಂಸ್ಕೃತಶ್ಲೋಕಗಳನ್ನು ಉದಾಹರಿಸಿ ಅವುಗಳಿಗೆ ಟೀಕೆಯನ್ನು ಬರೆದು

ಕವಿ ವಿಷಯಗಳನ್ನು ಹೇಳಿದ್ದಾನೆ. ಪ್ರಕರಣಗಳ ಅಂತ್ಯದಲ್ಲಿ ಈ ಗದ್ಯ ವಿದೆ—

ಇತಿ ಶ್ರೀಮತ್ಕರ್ಣಾಟದೇಶಾಂತರ್ಗತಹೊಸನಾಡದೇಶಮಧ್ಯೋಲ್ಲಸತ್ಕಾವೇರೀ ದಕ್ಷಿಣಭಾಗಸ್ಥಿತಬಾಲಚಂದ್ರಪುರಸ್ಥಗೌರೀಶ್ವರಕೃಪಾಲಬ್ಧವಿಭವ ಬಾಲಚಂದ್ರಪುರಾಧೀಶ್ವರ ಚೆನ್ನರಾಜಭೂಪಾಲವಿರಚಿತಮಪ್ಪ ಸರ್ವಲೋಕೋಪಕಾರಕ ಕರ್ಣಾಟಭಾಷಾವಿಶದೀಕೃತ ವೈದ್ಯಸಾರಸಂಗ್ರಹೇ.

ಈ ಗ್ರಂಥದ ಮತ್ತೊಂದು ಪ್ರತಿಯಲ್ಲಿ—

ಇತಿ ಶ್ರೀಕರ್ಣಾಟಕದೇಶಮಧ್ಯೋಲ್ಲಸತ್ಸ್ವರ್ಣನದೀತೀರವಿಲಸಿತಬಾಲಚಂದ್ರ ಪುರಸ್ಥಿತ ಸರ್ವವಿದ್ಯಾವಿಶಾರದ ನಾರಸಿಂಹಶಾಸ್ತ್ರಿವರ್ಯವಿರಚಿತ ಸರ್ವಲೋಕೋಪಕಾರಕ ಕರ್ಣಾಟಕಭಾಷಾವಿಶದೀಕೃತ ವೈದ್ಯಸಾರಸಂಗ್ರಹೇ

ಎಂಬ ಗದ್ಯವಿರುವುದರಿಂದ ನಾರಸಿಂಹಶಾಸ್ತ್ರಿ ಈ ಗ್ರಂಥವನ್ನು ಬರೆದು ತನ್ನ ಪೋಷಕನಾದ ಚೆನ್ನರಾಜನ ಹೆಸರಿನಲ್ಲಿ ಪ್ರಕಟಿಸಿರಬಹುದೆಂದು ತೋರುತ್ತದೆ. ಈಗ್ರಂಥಕ್ಕೆ ನಾರಸಿಂಹಭಟ್ಟರಸಂಹಿತೆ ಎಂಬ ಹೆಸರೂ ಉಂಟು.

---

## ವಾದಿರಾಜ ಸು. 1570

ಈತನು ವೈಕುಂಠವರ್ಣನೆ, ಸ್ವಪ್ನಗದ್ಯ, ಲಕ್ಷ್ಮಿಯ ಶೋಭಾನೆ, ಕೀರ್ತನೆಗಳು, ಭಾರತತಾತ್ಪರ್ಯನಿರ್ಣಯಟೀಕೆ ಇವುಗಳನ್ನು ಬರೆದಿದ್ದಾನೆ.

ಇವನು ಮಾಧ್ವಕವಿ; ಉಡುಪಿಕ್ಷೇತ್ರಕ್ಕೆ ಸಂಬಂಧಪಟ್ಟ ಸೋದೆ ಮಠದ ಸ್ವಾಮಿಯಾಗಿದ್ದನು. ಸೋದೆಯಲ್ಲಿ ಈತನ ಬೃಂದಾವನವಿದೆ. ಇವನು ವ್ಯಾಸರಾಯನಲ್ಲಿ(ಸು. 1525) ಓದಿದಂತೆಯೂ 1607ರಲ್ಲಿ ಗತಿಸಿದಂತೆಯೂ ತಿಳಿಯುತ್ತದೆ. ಅನೇಕವಾದಿಗಳನ್ನು ವಾದದಲ್ಲಿ ಜಯಿಸಿದುದರಿಂದ ಈತನಿಗೆ ಈಹೆಸರು ಬಂದಂತೆ ಪ್ರತೀತಿಯಿದೆ. ಈತನ ಗ್ರಂಥಗಳಲ್ಲಿ ಹಯವದನ ಎಂಬ ಅಂಕಿತವು ಉಪಯೋಗಿಸಿದೆ.

ಇವನ ಗ್ರಂಥಗಳಲ್ಲಿ

### 1. ವೈಕುಂಠವರ್ಣನೆ

ಇದು ಸಾಂಗತ್ಯ, ಹಾಡು ಇವುಗಳನ್ನು ಒಳಕೊಂಡಿದೆ; ಸಂಧಿ 4. ಇದಕ್ಕೆ ತತ್ವಸಾರದ ಸೊಬಗಿನಸೋನೆ ಎಂಬ ಹೆಸರೂ ಉಂಟು. ಇದರಲ್ಲಿ ಪ್ರತಿಪಾದಿತವಾದ ವಿಷಯವು ಈಪದ್ಯಗಳಲ್ಲಿ ಹೇಳಿದೆ—

ತತ್ವಸಾರದ ಸೊಬಗು ಧರೆಯೊಳು | ವಿಸ್ತರಿಸಬೇಕೆಂದು ಮುನಿಕುಲ |
ರತ್ನ ಶ್ರೀಗುರುವಾದಿರಾಜನು ಶ್ರುತಿಪುರಾಣಗಳ ||
ಮೊತ್ತವನು ನೆಱೆ ಮಥಿಸಿ ಪೇಲಣ | ಮುಕ್ತಿಸೃಷ್ಟಿಸ್ಥಿತಿಲಯಂಗಳ |
ಸರ್ಥಿಯಲಿ ಬಣ್ಣಿಸಿದ ಕಥೆಯನು ಕೇಳಿ ಸಜ್ಜನರು ||
ಕನ್ನಡಿಯೊಳು ತೋರ್ಪಂತೆ ಪೂರ್ಣಪ್ರಜ್ಞರ ಮತ | ದುನ್ನತದ ತತ್ವಸಾರವನು |
ಕನ್ನಡದಿ ಬಣ್ಣಿಸಿದ ವಾದಿರಾಜಮುನಿ ||

ಆರಂಭದಲ್ಲಿ ವಿಷ್ಣು, ವೇದವ್ಯಾಸ, ಸರಸ್ವತಿ, ಆನಂದತೀರ್ಥ ಇವರುಗಳ ಸ್ತುತಿ ಇದೆ. ಅಲ್ಲಲ್ಲಿ ಸಂಸ್ಕೃತಶ್ಲೋಕಗಳನ್ನು ಉದಾಹರಿಸಿ ಅವುಗಳ ಅರ್ಥವು ಹಾಡಿನರೂಪವಾಗಿ ಹೇಳಿದೆ. ಈಗ್ರಂಥದಿಂದ ವಿಷ್ಣುಸ್ತುತಿರೂಪವಾದ ಸ್ವಲ್ಪಭಾಗವನ್ನು ತೆಗೆದು ಬರೆಯುತ್ತೇವೆ---

ಇಂದ್ರನ ರಾಜ್ಯವ ತಂದನ ಶುಭಗುಣ | ಸಾಂದ್ರನ ಸುರಸಭಾಚಂದ್ರನ |
ನಂದನ ಕಂದನ ವಂದ್ಯನ ನಿತ್ಯಾ | ನಂದನ ತುತಿಸೆ ಮುಕುಂದನ ||
ಶೌರಿಯ ನೆನೆವೆನುದಾರಿಯ ಕುಜನರ | ವೈರಿಯ ಮಂದರೋದ್ಧಾರಿಯ |
ಹರಿಯ ದುರಿತನಿವಾರಿಯ ಸುಜನೋಪ | ಕಾರಿಯ ಮುಕುತಿಗೆ ದಾರಿಯ ||
ಇಷ್ಟನ ದುರಿತಘರಟ್ಟನ ಜಗಕತಿ | ದಿಟ್ಟನ ಸತತಸಂತುಷ್ಟನ |
ಶಿಷ್ಟನ ಶುಭಗುಣಪುಷ್ಟನ ತುತಿಪೆನು | ಕೃಷ್ಣನ ಶ್ರುತಿಗಿಂಬ ಕೊಟ್ಟನ ||

## 2. ಸ್ವಪ್ನಗದ್ಯ

ಇದಕ್ಕೆ ಗದ್ಯ ಎಂಬ ಹೆಸರಿದ್ದರೂ ಇದರಲ್ಲಿ 45 ಭಾಮಿನೀಷಟ್ಪದಿಗಳಿವೆ. ಇವುಗಳನ್ನು 9 ಹಾಡುಗಳಾಗಿ ಭಾಗಿಸಿರುವಂತೆ ತೋರುತ್ತದೆ. "ಇಂತು ಸ್ವಪ್ನಾವಸ್ಥೆಯಲಿ ವರಕಾಂತ ಗುರುವಾದಿರಾಜಗೆ ನಿಂತು ಪೇಱಿದ ಪದಗಳಿವು" ಎಂಬುದರಿಂದ ಇದನ್ನು ದೇವರು ಕವಿಗೆ ಸ್ವಪ್ನದಲ್ಲಿ ಹೇಳಿದಂತೆ ತಿಳಿಯುತ್ತದೆ. ಇದರಿಂದ ಒಂದೆರಡು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ---

ಇಷ್ಟದೇವರ ಮಧ್ಯದಲಿ ಮನ | ಮುಟ್ಟಿ ನನ್ನನೆ ಭಜಿಸು ದಿವಿಜರು |
ಶಿಷ್ಟಜನರಿಗೆ ಗುರುಗಳೆಂದವರಂಘ್ರಿಗಭಿನಮಿಸು ||
ನಷ್ಟವಾಗದವೋಲು ನಿನ್ನನು | ಘಟ್ಟಿಯಾಗಿಯೆ ರಕ್ಷಿಸುವೆ ನಾ |
ದೃಷ್ಟಿಗೋಚರನಹೆನು ಮುಕ್ತಿಯ ಕೊಟ್ಟು ಸಲಹುವೆನು ||
ನಾನು ಸುಜ್ಞನು ಜೀವನಜ್ಞನು | ನಾನು ಮುಕ್ತನು ಜೀವ ಬದ್ಧನು |

ನಾನು ಪಾತಕಹೀನ ಜೀವನು ಪಾಪಭರಿತನಲ್ಲೈ ||
ನಾನು ಜನ್ಮವಿದೂರ ನಾನಾ | ಯೋನಿಯಲಿ ಜನಿಸುವನು ಜೀವನು |
ಮಾಣು ಛಲವನು ನಿನ್ನ ಜನಕನ ಹೆಸರ ಹೇಳಿನ್ನು ||

3. ಲಕ್ಷ್ಮಿಯ ಶೋಭಾನೆ.

ಇದರಲ್ಲಿ 112 ಪದಗಳಿವೆ; ಒಂದೆರಡನ್ನು ಉದಾಹರಿಸುತ್ತೇವೆ---

ಪೊಳೆವ ಕಾಂಚೀದಾಮ ಉಲಿವ ಕಿಂಕಿಣಿಗಳು | ನಲಿವ ಕಾಲಂದಿಗೆ ಗಲುಕೆನಲು |
ನಳನಳಿಸುವ ಮುದ್ದುಮುಖದ ಚೆಲುವ ಲಕ್ಷ್ಮಿ | ಸಲಹಲಿ ನಮ್ಮ ವಧೂವರರ ||
ಆನೆಯ ಮಾನದಲಿ ಅಡಗಿಸಿಕೊಂಬರುಂಟೆ | ಅನೇಕಕೋಟಿಯುಜಾಂಡವ |
ಅಣುರೋಮಕೂಪದಲಿ ಆಳಿವ ಶ್ರೀಹರಿಯ | ಜನನೀಜಠರವು ಒಳಗೊಂಬುದೇ ||

4. ಭಾರತತಾತ್ಪರ್ಯನಿರ್ಣಯಟೀಕೆ

ಇದು ಮಧ್ವಗುರುರಚಿತವಾದ ಭಾರತತಾತ್ಪರ್ಯನಿರ್ಣಯಕ್ಕೆ ಕನ್ನಡ ವ್ಯಾಖ್ಯಾನ.

5. ಕೀರ್ತನೆಗಳು

ಇವು ವಿಷ್ಣುಸ್ತುತಿರೂಪವಾಗಿಯೂ ವೇದಾಂತಬೋಧಕವಾಗಿಯೂ ಇವೆ. ಒಂದನ್ನು ತೆಗೆದು ಬರೆಯುತ್ತೇವೆ—

ರಾಗ ಮೋಹನ, ಚಾಪುತಾಳ.

ಪಲ್ಲವಿ || ಹಣವೇ ನಿನ್ನಯ ಗುಣ ಏನು ಬಣ್ಣಿಪೆನೋ ||
ಅನುಪಲ್ಲವಿ || ಹಣವಿಲ್ಲದವನೊಬ್ಬ ಹೆಣವೆ ಸರಿ ಕಂಡೆಯಾ ||
ಬೆಲೆಯಾಗದನೆಲ್ಲ ಬೆಲೆಯ ಮಾಡಿಸುವೆ |
ಎಲ್ಲಾವಸ್ತುಗಳಿಸಿದ್ದಲ್ಲೆ ತರಿಸುವೆ |
ಕುಲಕೆಟ್ಟವರ ಸತ್ಕುಲಕೆಸೇರಿಸುವೆ|ಹೊಲೆಯನಾದರುತಂದು ಒಳಗೆ ಕೂರಿಸುವೆ||1||
ಅಂಗನೆಯರ ಸಂಗತಿಯ ಮಾಡಿಸುವೆ |
ಶೃಂಗಾರಾಭರಣಂಗಳ ಬೇಗ ತರಿಸುವೆ |
ಮಂಗನಾದರು ಅನಂಗನೆಂದೆನಿಸುವೆ | ಕಂಗಳಿಲ್ಲದವನಿಗೆ ಮಗಳ ಕೊಡಿಸುವೆ ||2||
ಚರಣಕ್ಕೆ ಬಂದಂಥ ದುರಿತಬಿಡಿಸುವೆ |
ಸರ್ವರಿಗೆ ಶ್ರೇಷ್ಠ ನರನ ಮಾಡಿಸುವೆ |
ಅರಿಯದ ಶುಂಠನ ಅರಿತನೆನಿಸುವೆ | ಸಿರಿಹಯವದನನ ಸ್ಮರಣೆಮರೆಸುವೆ ||3||

---

ದೊಡ್ಡಣಾಂಕ. 1578

ಈತನು ಚಂದ್ರಪ್ರಭಷಟ್ಪದಿಯನ್ನು ಬರೆದಿದ್ದಾನೆ. ಇವನು ಜೈನ ಕವಿ; ಹೊಯಿಸಳದೇಶದಲ್ಲಿಯ ನಿಟ್ಟೂರ ಆದಿಸೆಟ್ಟಿಯ ಮಗನಾದ ಬೆಟ್ಟದ

ಗುಮ್ಮಿಸೆಟ್ಟಿಯ ಮಗನು. ಈ ಗ್ರಂಥವನ್ನು ಶಕ 1500 ನೆಯ ಬಹುಧಾನ್ಯಸಂವತ್ಸರದಲ್ಲಿ—ಎಂದರೆ 1578 ರಲ್ಲಿ ಬರೆದಂತೆ

ಅಂದವಡೆದ ಶಕಾಬ್ದ ಸಾವಿರ | ದಿಂದ ಮುಂದೈನೂರನೆಯ ಸಲೆ |
ಸಂದ ಬಹುಧಾನ್ಯಾಖ್ಯವತ್ಸರಭಾದ್ರಪದಮಾಸ ||
ನಿಂದ ಶುದ್ಧಚತುರ್ದಶಿಯೊಳಾ | ಚಂದ್ರನಾಥನ ಕಥೆ ಸಮಾಪ್ತಿಗೆ |
ಬಂದುದೆನಲಾಪುಣ್ಯದಿಂದ ನಿರಂತರವುಮಾಗೆ ||

ಎಂಬ ಪದ್ಯದಲ್ಲಿ ಹೇಳುತ್ತಾನೆ

ಇವನ ಗ್ರಂಥ

ಚಂದ್ರಪ್ರಭಷಟ್ಪದಿ

ಇದು ಭಾಮಿನೀಷಟ್ಪದಿಯಲ್ಲಿ ಬರೆದಿದೆ. ಇದರಲ್ಲಿ 8 ನೆಯ ತೀರ್ಥಂಕರನಾದ ಚಂದ್ರಪ್ರಭನ ಚರಿತವು ಹೇಳಿದೆ

---

ಪರ್ವತದೇವ. 1578

ಇವನು ನನ್ನಯ್ಯಗಳ ಚಾರಿತ್ರವನ್ನು ಬರೆದಿದ್ದಾನೆ. ಈತನು ವೀರಶೈವಕವಿ; ಉತ್ತರದೇಶದ ದಿವ್ಯನಗರದಲ್ಲಿರುವ ಒಂಟೆತ್ತಿನಮಠದ ಸ್ವಾಮಿಯಾದ ವಿರೂಪಾಕ್ಷನ ಶಿಷ್ಯನು. ತನ್ನ ಗ್ರಂಥವನ್ನು ಶಕ 1499ನೆಯ ಈಶ್ವರಸಂವತ್ಸರದ ಫಾಲ್ಗುಣದಲ್ಲಿ, ಎಂದರೆ 1578 ರಲ್ಲಿ, ಬರೆದಂತೆ ಹೇಳುತ್ತಾನೆ.

ಇವನ ಗ್ರಂಥ

ನನ್ನಯ್ಯಗಳ ಚಾರಿತ್ರ

ಇದು ಸಾಂಗತ್ಯದಲ್ಲಿ ಬರೆದಿದೆ; ಸಂಧಿ 13 ಪದ್ಯ 1550. ಇದರಲ್ಲಿ ಬಸವನ ಸಮಕಾಲದವನಾದ ನನ್ನಯ್ಯನೆಂಬ ಶಿವಭಕ್ತನ ಚರಿತವು ಹೇಳಿದೆ. ಈ ಗ್ರಂಥವು ಭಕ್ತಿಯೋಗರ, ಕೈಲಾಸಸೋಪಾನ, ಪುಣ್ಯಜ್ಞಾನದುದಯ, ಮುಕ್ತಿಯ ಪದ ಎಂದು ಕವಿ ಹೇಳುತ್ತಾನೆ. ನಮಗೆ ದೊರೆತ ಪ್ರತಿಯಲ್ಲಿ ಮೊದಲೋಲೆ ಇರಲಿಲ್ಲ; 2 ನೆಯ ಓಲೆಯ ಆರಂಭದಲ್ಲಿ ಗಣಪತಿ, ವೀರಭದ್ರ, ಪಾರ್ವತಿ, ಸರಸ್ವತಿ ಇವರುಗಳ ಸ್ತುತಿ ಇದೆ ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ---

ಸಮುದ್ರ

ನೆಲೆಯ ನೋಡುವರಿಗಸಾಧ್ಯದ ಗುಣದಿಂದ | ಕುಲವ ನೋಡಲು ಕಾಣಗೊಡದೆ |
ಬಲಾನಿಂದಲ್ಗ್ನಿಯ ಎ ದರಿಸಿದಕಾರಣ | ಸಲೆಶಿವನನು ಪೋಲ್ವನೆಂದು ||

ಹರಗೆಳವೆಱೆಯು ದೈತ್ಯರಿಗೆ ಸಿರಿಬಲವ| ಸುರರಿಗೆ ಸುಧೆಯನಿಂದ್ರಂಗೆ |
ಪರಮೈಶ್ವರ್ಯವನಿತ್ತುವುದಾರಿಗ | ಳರಸನಂತೊಪ್ಪಿತು ಕಡಲು ||

ಉದ್ಯಾನ

ನುಡಿವರಗಿಳಿ ಕೂಗುವ ಸೊಕ್ಕುಕೋಗಿಲೆ | ಬಿಡದೆ ನಲಿವ ಸೋಗೆನವಿಲು |
ಒಡನೊಡನುಲಿವ ಪರಸಮೃಗದಿಂದಲಿ | ಕಡುಚೆಲುವೆಸೆದುದು ಬನದ ||

ಸಂಗೀತ

ಹೆಂಗಳನಗಲಿದನಗೆ ವಿರಹದಿಂದ | ಲಂಗಜಗೀಡಾದವಗೆ |
ಸಂಗಡವಾಗಿ ದುಃಖವ ಮಾಣಿಸುವುದೊಂದು | ಸಂಗೀತರಸಕೆಣೆಯುಂಟೇ ||

ವೈರಾಗ್ಯ

ಜಲದೊಳಗಣ ಮೀನು ಚಾಯ ಸವಿಗೆ ಹೋಗಿ| ಬಲೆಗಾಱಿನ ಗಾಣದಲ್ಲಿ |
ಸಿಲುಕಿದಂದದಿ ಹೊನ್ನುಹೆಣ್ಣುಮಣ್ಣಿಗೆ ಸಿಲುಕಿ | ಬಲುಕೇಡಕೆಡುವರು ನರರು||

---

## ಅದೃಶ್ಯಕವಿ ಸು. 1580.

ಈತನು ಪ್ರೌಢರಾಯನಕಾವ್ಯವನ್ನು ಬರೆದಿದ್ದಾನೆ. ಇವನು ವೀರಶೈವಕವಿ; ತನ್ನ ಪರಂಪರೆಯನ್ನು ಹೀಗೆ ಹೇಳಿಕೊಂಡಿದ್ದಾನೆ—ಮಳೆಯ ಮಲ್ಲೇಶ; ಅವನ ಶಿಷ್ಯ ಬಿಜಾಪುರದಪ್ರಾಂತದಲ್ಲಿ ತೊರೆಸಾಲಪರಗಣೆಯ ಕೊಲ್ಲಾಪುರಕೆ ದೇಶಾಯಿ ನಾಡೆರೆಯ ಹಕ್ಕರಿಯಕುಲದಗ್ರಗೃಹವೆನಿಪ ಶಂಕರ; ಮಗ ಅಣ್ಣೇಂದ್ರ; ಮಗ ಅದೃಶ್ಯಕವಿ. ಗುಬ್ಬಿಯಮಲ್ಲಣಾರ್ಯನ ವೀರಶೈವಾಮೃತಪುರಾಣದಿಂದ(1530) ಮಳೆಯಮಲ್ಲೇಶನು ಮಲ್ಲಣಾರ್ಯನಿಗೆ ಸ್ವಲ್ಪ ಹಿಂದೆ ಇದ್ದಹಾಗೆ ತಿಳಿಯುತ್ತದೆ. ಇವನ ಕಾಲವು ಸುಮಾರು 1500 ಆಗಬಹುದು. ಇವನಿಂದ 3ನೆಯ ತಲೆಯವನಾದ ಕವಿಯ ಕಾಲವು ಸುಮಾರು 1580 ಆಗಬಹುದು. ಕವಿಗೆ ಅದ್ರೀಶಪ್ಪ ಎಂಬ ಹೆಸರೂ ಇದ್ದಂತೆ ತೋರುತ್ತದೆ.

ಇವನ ಗ್ರಂಥ

### ಪ್ರೌಢರಾಯನಕಾವ್ಯ.

ಇದು ವಾರ್ಧಕಷಟ್ಪದಿಯಲ್ಲಿ ಬರೆದಿದೆ; ಸಂಧಿ 21, ಪದ್ಯ 1113. ವಿದ್ಯಾನಗರದಲ್ಲಿ ಆಳುತ್ತಿದ್ದ ಪ್ರೌಢರಾಯನಿಗೆ(1419-1446)ಅವನಮಂತ್ರಿಯಾದ ಜಕ್ಕಣಾಚಾರ್ಯನು ಹೇಳಿದ ಶಿವಶರಣರ ಕಥೆಯ ಸಾರವನ್ನು ತಾನು ಈಗ್ರಂಥರೂಪವಾಗಿ ಬರೆದಂತೆ ಕವಿ ಹೇಳುತ್ತಾನೆ. ಪ್ರೌಢರಾಯನ ಕಾಲದಲ್ಲಿ ನಡೆದುದಾಗಿ ಕವಿ ಹೇಳುವ ಕೆಲವು ಅಂಶಗಳನ್ನು ಕೆಳಗೆ ಬರೆಯುತ್ತೇವೆ:

ಪ್ರೌಢರಾಯನ ಒಳಿ ಕಂದಾಳಪೆದ್ದಯಾಚಾರ್ಯನೆಂಬವನು ಭಾರತವನ್ನು ಓದಿ ಮೆರೆವಣಿಗೆಯ ಮಾಡಿಸಿದನು. ಅದ ನೋಡಿ ಜಕ್ಕಣಾಚಾರ್ಯನು ಕುಮಾರಬಂಕನಾಥಗುರುವಿನ ಪಾದುಕೆಯನ್ನು ನೆಲೆಗೊಳಿಸಿ ಪ್ರಭುದೇವರ ವಚನಗಳಿಗೆ ಏಕೋತ್ತರಶತಸ್ಥಲದ ಸೂತ್ರಗಳ ವ್ಯಾಖ್ಯಾನವನ್ನು ಮಾಡುತ್ತ 101 ವಿರಕ್ತರು ಕರತಲದನಾಗಯ್ಯ, ಕಲ್ಮಠದಪ್ರಭುದೇವ, ವೀರಣ್ಣೊಡೆಯ, ಚಾಮರಸ ಮುಂತಾದವರು ಸೇರಿ ಏಕೋತ್ತರಶತಸ್ಥಲನನು ರಾತ್ರಿ ಮೆರೆಯಿಸಿದರು. ಮುಕುಂದಪೆದ್ದಿಗೂ ಜಕ್ಕಣನಿಗೂ ವಾಗ್ವಾದವಾಗಿ ಚಾಮರಸನು ದಿನಕ್ಕೆ 11 ಪದ್ಯದಂತೆ ಪ್ರಭುಲಿಂಗಲೀಲೆಯನ್ನು ಬರೆದು ರಾಜನಲ್ಲಿ ಓದಲು ಅದಕ್ಕೆ ಜಕ್ಕಣಾಚಾರ್ಯನು ಅರ್ಥವನ್ನು ಹೇಳಲು ದೊರೆ ಸಂತೋಷಿಸಿ ಅವನಿಗೆ ಆಭರಣಾದಿಗಳನ್ನೂ 5 ಗ್ರಾಮಗಳನ್ನೂ ಉಮ್ಮಳಿಯ ಕೊಟ್ಟನು. ಹಾಗೆಯೇ ಚಾಮರಸನಿಗೆ ಮರ್ಯಾದೆಮಾಡಿಸಿ ಅವನನ್ನೇ ಮಂತ್ರಿಯಾಗಿ ಮಾಡಿಸಿ ಜಕ್ಕಣಾರ್ಯನು ಬಯಲಾದನು.

ಗ್ರಂಥಾವತಾರದಲ್ಲಿ ಶಿವಸ್ತುತಿ ಇದೆ. ಬಳಿಕ ಕವಿ ಪಾರ್ವತಿ, ಗಂಗೆ, ಗಣೇಶ, ಷಣ್ಮುಖ, ವೀರಭದ್ರ ಇವರುಗಳನ್ನು ಸ್ತುತಿಸಿ ಪ್ರಭುದೇವನಿಂದ ಸತ್ಯಣ್ಣನವರೆಗೆ ಪುರಾತನರನ್ನು[1] ಸ್ಮರಿಸಿದ್ದಾನೆ. ಆಮೇಲೆ ಸರಸ್ವತಿಯನ್ನು ಹೊಗಳಿ ಕಥೆಯನ್ನು ಆರಂಭಿಸಿದ್ದಾನೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

### ಸಮುದ್ರ

ಕುಂಭಜನ ತುತ್ತಿಗೊಳಗಾದೆಂ ಪರಶುರಾಮನು |
ನಂಬಿಂಗೆ ಗುಱಿಯಾದೆ ಭಂಗವಾಯಿತ್ತೆನ್ನು |
ತಂಬುನಿಧಿಯುಱುವಂತೆ ಸಿಡಿವ ಹನಿ ಕಂಬನಿಯು ನವತೆರೆಯು ಒಡಲ ದುಃಖ ||
ಅಂಬುಜಾಂಬಕನಳಿಯನಂಬುಜಜ ನೊಮ್ಮಗನು |
ಅಂಬುಜಾರಿಯುಮಣುಗನೆಂಬ ಉಲ್ಲಾಸತೆರೆ |
ಮುಂಬರಿಯೆ ಹರ್ಷರಸದಿಂದ ನಗುವಂತೆ ಶಾಸಿರ್ವಗೆಯೊಳೊಪ್ಪುತಿಹುದು ||

---

1. ಪ್ರಭುದೇವ, ಬಸವ, ಸಂಗಮನಾಥ, ಮಳೆಯಮಲ್ಲೇಶ, ಚೆನ್ನಬಸವ, ಮಡಿವಾಳದೇವಯ್ಯ, ಮಂಚಣ್ಣ, ಮನುದಾರಿ, ಹೊಡೆಹುಲ್ಲ ಬಂಕಯ್ಯ, ಮೋಳಿಗೆಯ ಮಾರಯ್ಯ, ಕೋಲಶಾಂತಯ್ಯ, ರೇಚಯ್ಯ, ಅಪ್ಪಣ್ಣ, ಸತ್ಯಣ್ಣ.

ಯುದ್ಧ

ಇತ್ತರದ ಬಲವು ಬಲ್ಗತ್ತಿಗಳ ಕಿತ್ತು ಭಟ |
ರೊತ್ತಿ ಜಡಿಯುತ್ತಲಗನೆತ್ತಿ ನೆತ್ತಿಗೆ ಹೊಯ್ವು |
ಮತ್ತಿ ಹೊಸನೆತ್ತರೊಸರುತ್ತಿರಡುಸೈನ್ಯದೊಳು ಕತ್ತರಿಸಿ ಕೆಡಹುತ್ತಲಿ ||
ಮುತ್ತಿ ಮೂದಲಿಸುತ್ತ ಮುನಿಮುನಿದು ಓಡುತ್ತ |
ತತ್ತರಿಸಿ ಬೀಳುತ್ತ ಪೊತ್ತು ತೃಣಪಾಷಾಣ |
ಪುತ್ತವನು ಪತ್ತುತ್ತ ಪಲ್ಗಿರಿದು ಚೀಱುತ್ತಲಿತ್ತಂಡನೀತೆಱನೊಳು ||

ಸೂಳೆಗೇರಿ

ಸಿಂಗರದ ತಾಣ ಸೊಬಗಿನ ಸಂತೆಯತಿಕುಟಿಲ |
ದಂಗಡಿ ದಶಾವಸ್ಥೆಗಳ ನಂಜಿನಾಗರವು |
ಕಂಗಳತಿಹಬ್ಬ ಕಾವನ ಸುಗ್ಗಿಯಾಪೊಲಂ ಭಂಗಿಭಾವನೊಳೆ ಬೆಳೆವಾ ||
ಇಂಗಿತದ ಬೀಡು ಬೇಟದ ತೋಟ ಮೋಹದ ತ |
ರಂಗ ತವಕದ ಗೊತ್ತು ಬೆಡಗಿನುದ್ಭವಭೂಮಿ |
ಯಂಗಜನ ಅವಸರಸರಂಗಳಂತಿಹ ಸೂಳೆವೆಂಗಳಾಕೇರಿಯೆಸೆಗು ||

ಸ್ತ್ರೀಯರು

ಅರೆಬಿರಿದ ಸಂಪಗೆಯಲನಾಸಿಕದ ಬೆದ | ರ್ನೇರಳೆಗಂಗಳನಂಗಧರ್ಮ ದಂತಿಹ ಪುರ್ಬ|
ಮಱಿದುಂಬಿಗುರುಳ ಮಣಿಖಚಿತಕನ್ನಡಿಕದಪು ಕಳಿಕುಲಿಶವದನರದದ ||
ತುಱುಗೆವೆಯ ತೆಳ್ದುಟಿಯ ಅರ್ಧೇಂದುನಿಟಿಲ ಬಹು |
ಸಿರಿಕರ್ಣ ಕಂಬುಗಳ ಕಲಶಕುಚ ನಳಿತೋಳು |
ಹರಿಮಧ್ಯ ಗಿರಿಜಘನ ಬಾಳೆನೊಡೆ ಬಡಬಾಸೆಯೆಳೆವೆಣ್ಗಳೆಸೆದಿರ್ದರು ||

---

## ವಿರೂಪಾಕ್ಷಪಂಡಿತ 1584

ಈತನು ಚೆನ್ನಬಸವಪುರಾಣವನ್ನು ಬರೆದಿದ್ದಾನೆ. ಇವನು ವೀರಶೈವಕವಿ. ತನ್ನ ಗುರುಪರಂಪರೆಯನ್ನು ಹೀಗೆ ಹೇಳಿದ್ದಾನೆ:—

ಶಿವನೇ ಮಲ್ಲೇಶನೆಂಬ ಅಭಿಧಾನದಿಂದ ಭೂಮಿಯಲ್ಲಿ ಅವತರಿಸಿದನು. ಇವನು ಸಕಲದೇಶಗಳನ್ನೂ ಸಂಚರಿಸಿ 700 ಖಲಿಂದರರಿಗೆ ಗುರುವಾಗಿ ಮುಖ್ಯಕ್ಕೆ (ಮೆಕ್ಕಾ) ಹೋಗಿ ಮಹಿಮೆಯನ್ನು ತೋರಿ ತುರುಕಾಣ್ಯದಲ್ಲಿ ಪ್ರಾಪ್ತವಾಗಿದ್ದ ಅನಾವೃಷ್ಟಿ

ಯನ್ನು ಪವಾಡದಿಂದ ನಿವಾರಣೆಮಾಡಿ ಸುರಿತಾಳನಿಂದ ಪೂಜೆಯನ್ನು ಕೈಕೊಂಡು ಘನತರವಾದ ಕೀರ್ತಿಯನ್ನೂ ಮಳೆಯಮಲ್ಲೇಶ ಎಂಬ ಹೆಸರನ್ನೂ ಪಡೆದನು. ಇವನ ಸಂಪ್ರದಾಯದಲ್ಲಿ ಷಟ್ಸ್ಥಲಾಬ್ಧಿವರ್ಧನಪೂರ್ಣಸೋಮನಾದ ಸಿದ್ಧವೀರೇಶನು ಪ್ರಖ್ಯಾತನಾಗಿ ವಿದ್ಯಾನಗರಿಯ ಹಿರಿಯಮಠದಲ್ಲಿ ಗುರುವಾಗಿದ್ದನು. ಇವನ ಶಿಷ್ಯ ಕವಿ ವಿರೂಪಾಕ್ಷಪಂಡಿತ.

ಸಕಲಾಗಮಪುರಾಣಕೋವಿದಂ, ಸರಸಕರ್ಣಾಟಾದಿಭಾಷಾವಿಶಾರದಂ, ವರಕವಿಪ್ರಕರಮಾನಸರಾಜಹಂಸಂ,ಅಸುಹೃತ್ಕವಿಪ್ರತತಿ ವಾರ್ಧಿವಡಬಂ, ಪರಕವಿಯ ನಾಲಗೆಕಿವಿಮನಂಗಳಂ ಸೆಳೆವವಂ ಎಂದು ತನ್ನನ್ನು ವಿಶೇಷಿಸಿ ಹೇಳಿಕೊಂಡಿದ್ದಾನೆ. ತನ್ನ ಗ್ರಂಥವನ್ನು ಶಕ 1507 ನೆಯ ತಾರಣವರ್ಷದಲ್ಲಿ-ಎಂದರೆ 1584 ರಲ್ಲಿ-ಬರೆದಂತೆ ಹೇಳುತ್ತಾನೆ.

ಪೂರ್ವಕವಿಗಳನ್ನು ಈ ಪದ್ಯದಲ್ಲಿ ಸ್ಮರಿಸಿದ್ದಾನೆ:-

ಸರಸಕವಿ ಬಾಣನು ಮಯೂರ ಭವಭೂತಿ ಸ |
ದ್ವರಕಾಳಿದಾಸ ಮಲುಹಣ ಮಳೆಯರಾಜನತಿ |
ಬಿರುದಂಕ ಕವಿರಾಘವಾಂಕ ಹಂಪೆಯಹರೀಶ್ವರ ಹಲಾಯುಧನುದ್ಭಟ ||
ಗುರುಪಂಡಿತೇಶ ಪಾಲ್ಕುರಿಕೆಯಾರಾಧ್ಯ ಭೀ |
ಮರಸ ಮಗ್ಗೆಯಮಾಯಿದೇವ ಚಾಮರಸ ಶಂ |
ಕರ ಕೆಱೆಯಪದ್ಮರಸರಾದಿಶಿವಕವಿಗಳಂ ಬಲಗೊಂಡು ಕೃತಿವೇೞ್ವೆನು ||

ಇವನ ಗ್ರಂಥ

ಚೆನ್ನಬಸವಪುರಾಣ

ಇದು ವಾರ್ಧಕಷಟ್ಪದಿಯಲ್ಲಿ ಬರೆದಿದೆ; ಕಾಂಡ 5, ಸಂಧಿ 63, ಪದ್ಯ 2898. ಇದರಲ್ಲಿ ಬಸವನ ಸೋದರಿ ನಾಗಲಾಂಬಿಕೆಯ ಪುತ್ರನಾದ ಚೆನ್ನಬಸವನ ಚರಿತೆ[1] ವರ್ಣಿತವಾಗಿದೆ; ಅಲ್ಲದೆ ಶಿವನ ಲೀಲೆಗಳು, ಸೋಮಸೂರ್ಯಾನ್ವಯ, ಹರಶರಣರ ಚರಿತೆ, ದೀಕ್ಷಾವಿಧಾನ, ಷಟ್ಸ್ಥಲ, ಕಾಲಜ್ಞಾನ ಈ ವಿಷಯಗಳೂ ನಿರೂಪಿಸಲ್ಪಟ್ಟಿವೆ.

"ಕರ್ಣಾಟಕವ್ಯಾಕರಣ ಛಂದಸ್ಸಲಂಕಾರಶಬ್ದಂಗಳ ಅನುಗೊಳಿಸಿ ವರ್ಣಕಕ್ಕಿಲ್ಲ ಲಕ್ಷಣವೆಂಬ ಜನರ ನಾಣ್ನುಡಿಯನಲ್ಲೆನಿಸಿ ಪೇೞ್ದಂ ವಿನೂ

1 Vol. I. 145.

ತನಕಾವ್ಯಮುಂ ಜಗತ್ಸೇವ್ಯಮುಂ" ಎಂದು ಕವಿ ಹೇಳುತ್ತಾನೆ. ಇದರಿಂದ ಇವನ ಕಾಲಕ್ಕೆ ಹಿಂದೆಯೇ ಷಟ್ಪದೀರೂಪವಾದ ಗ್ರಂಥವನ್ನು ಆವ ನಿರ್ಬಂಧವೂ ಇಲ್ಲದೆ ಲಕ್ಷಣವಿರುದ್ಧವಾಗಿ ಬರೆಯುತ್ತಿದ್ದಂತೆ ತೋರುತ್ತದೆ. ತನ್ನ ಕಾವ್ಯದ ವಿಷಯವಾಗಿ

ಕೆಳದೇಪೋದೊಡೊಂದಱಯೆನಿನಿಸಾದೊಡಂ |
ಕೇಳಿದೊಡೆ ಸಾಕವರ ಕಿವಿಯುಮುಂ ಮನಮುಮಂ |
ಕೋಳಹಿಡಿದೊಡನೆ ನಿರ್ಮಲಿನನವರಸಮಹಾದುಗ್ಧವಾರಾಶಿಯೊಳಗೆ ||

ಎಂದೂ ಆಱಯಿಸದೆ ಬಿಡದೆನ್ನ ಕೃತಿ |
ನುತಿವಡೆದ ಪದಿನೆಂಟುವರ್ಣನೆಗಳಿಂ ಸಮಾ |
ಶ್ರಿತನವರಸಾದ್ಯಲಂಕಾರಂಗಳಿಂ ವಿಬುಧ |
ತತಿ ಬಣ್ಣಿಪಂತುಸಿರುವೀಕಾವ್ಯಮತಿಸೇವ್ಯಮಾದುದು ||

ಎಂದೂ ಹೇಳಿದಾನೆ

ಗ್ರಂಥಾವತಾರದಲ್ಲಿ ಪಂಪಾವಿರೂಪಾಕ್ಷಸ್ತುತಿ ಇದೆ. ಬಳಿಕ ಕವಿ ನಂದಿ ಭೃಂಗಿ ವೀರಭದ್ರ, ಷಣ್ಮುಖ ಇವರುಗಳನ್ನು ಹೊಗಳಿ ಅನಂತರ ಪ್ರಭುದೇವನಿಂದ ಕಿನ್ನರಿಯಬೊಮ್ಮಯ್ಯನವರೆಗೆ[1] ಪುರಾತನರನ್ನು ಸ್ಮರಿಸಿದ್ದಾನೆ.

ಈ ಗ್ರಂಥವು ಕವಿಯ ಕಾಲಕ್ಕೆ ಹಿಂದೆ ಇದ್ದ ವೀರಶೈವಪುರಾತನರ ಮತ್ತು ಕವಿಗಳ ಕಾಲವನ್ನು ನಿರ್ಣಯಿಸುವುದಕ್ಕೆ ಬಹಳಮಟ್ಟಿಗೆ ಉಪಕಾರಕವಾಗಿದೆ ಅಲ್ಲದೆ ಚರಿತ್ರೆಗೆ ಸಬಂಧಪಟ್ಟ ಕೆಲವಂಶಗಳೂ ಇದರಲ್ಲಿ ಹೇಳಿವೆ:-

ಶಕ 800 ನೆಯ ವಿಳಂಬಿಯಲ್ಲಿ (878) ಹೊಯ್ಸಳನಿಗೆ ಪಟ್ಟವಾಯಿತು. ಕುಮ್ಮಟದ ಕಂಪಿಲನೂ ಅವನ ಮಗ ರಾಮನಾಥನೂ ತುರುಕರೊಂದಿಗೆ ಕಾದಿ ಮಡಿ

1. ಪ್ರಭುದೇವ, ಬಸವ, ಚೆನ್ನಬಸವ, ಸಿದ್ಧರಾಮ, ಮಹದೇವಿಯಕ್ಕ, ಮಡಿವಳಮಾಚ, ಮರುಳುಶಂಕರದೇವ, ಶಂಕರದಾಸಿಮಯ್ಯ, ಸಕಳೇಶಮಾದಿರಾಜ, ಸಾನಂದಮುನಿ, ಕೇಶಿರಾಜ, ಮುಸಿರಾಜ, ಕರಿಕಾಲಚೋಳ, ಕಾಶಿರಾಜ, ಕರುಳಕೇತಯ, ಕಾಚಿರಾಜ, ಕಿನ್ನರಿಯ ಬೊಮ್ಮಯ್ಯ.

ದರು. ಶಕ 1258ನೆಯ ಧಾತುವಿನಲ್ಲಿ (1336) ಹರಿಹರನಿಗೆ ಪಟ್ಟವಾಯಿತು; ಇವನ ವಂಶದವರು 13ತಲೆಯವರೆಗೆ 155 ವರ್ಷ ಆಳಿದರು. ಹರಿಹರಬುಕ್ಕರ ಅಂಶದಿಂದ ಇಂದ್ರನು ಪ್ರೌಢದೇವನಾಗಿ ಹುಟ್ಟಿದನು; ಅವನ ಜತೆಯಲ್ಲಿ 101 ಗಣೇಶ್ವರರು ವಿರಕ್ತರಾಗಿ ಹುಟ್ಟಿದರು. ಕರಸ್ಥಳದ ವೀರಣ್ಣೊಡೆಯನು ಪ್ರೌಢದೇವರಾಯನ ಅಳಿಯನಾದನು. ಪ್ರೌಢದೇವನ ಅಂಶದಿಂದ ವಿರೂಪಾಕ್ಷನು ಆಳಿದನು; ಅವನನೆಬ್ಬಟ್ಟಿ ನರಸಣರಾಯನು ಆ ನಗರಿಯಂ ಗೆಲವಿನಿಂ ತೆಗೆದುಕೊಳಲು ಅವನ ಸುತನಾಳ್ದಂ; ಆ ಪಟ್ಟಕೆ ಅಚ್ಯುತನೆ ಕಡೆ; ಬಳಿಕ ಅವರ ಅಳಿಯಂದಿರು ಆಳಿದರು. ಇವರು ತುರುಕರೊಡನೆ ಕಾದಿ ಮಡಿಯಲು ತುರುಕರು ದೇವಸ್ಥಾನಗಳನ್ನೂ ವಿಗ್ರಹಗಳನ್ನೂ ಒಡೆದು ಹಾಳುಮಾಡಿದರು. ಅಳಿಯ ರಾಮರಾಯನ ಅನುಜನು ಬೇರೆಕಡೆ ಹೋಗಿ ನೆಲಸಿದನು. ಕಲಿ 4683 ನೆಯ ಸ್ವಭಾನುವಿನಲ್ಲಿ (1584) ವೀರವಸಂತರಾಯನು ಕರ್ಣಾಟದೇಶಕ್ಕೆ ಬಂದು ಆಳುವನು. ವೀರಶೈವಮತಕ್ಕೆ ಪ್ರೋತ್ಸಾಹಕರಾಗಿದ್ದ ಕೆಲವರು ಪ್ರಭುಗಳು—ನಂಜರಾಯ, ಕೆಂಚಸೋಮಣ್ಣನಾಯಕ, ಯಳಂದೂರರಸ ಚೆನ್ನೊಡೆಯ, ಬರಗಿಯ ದೇವಿನಾಯಕ, ಬುಕ್ಕಣ್ಣೊಡೆಯ, ಸಿದ್ಧಮಲಿನಾಯಕ, ಸಂಕಣ್ಣನಾಯಕ, ಜಂಬೂರದಾನಿವಾಸದ ದೊರೆಗಳು, ಕೇತಸಾಗರದ ಚಿಕ್ಕಣ್ಣಸೆಟ್ಟಿ, ಬಿಜ್ಜಾವರದ ಪ್ರಭು ಚಿಕ್ಕಣಗೌಡ, ಸುಕುಟೂರ ತಮ್ಮಣ್ಣಗೌಡ, ತಗಡೂರ ಪ್ರಭು, ತಳಕಾಡ ಚಂದ್ರಶೇಖರ, ಭೋಗವಾಡಿಯ ಲಿಂಗರಾಯ, ಉಡುವಂಕನಾಡ ಪ್ರಭು.

ಇವನ ಬಂಧವು ಲಲಿತವಾಗಿಯೂ ಹೃದಯಂಗಮವಾಗಿಯೂ ಇದೆ ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ:—

ವಸಂತ

ಸಲೆ ಸುಜಾತಿಯ ಸಿರಿಯುಡಂಗಿತು ವಿಜಾತಿಗತಿ |
ನಲವಾದುದುನ್ಮಧುಪಕುಲಕೆ ಸುಮನಃಕುಲದ |
ಕೆಳೆಯಾದುದಂಗಭವನೇ ತನ್ನ ತಾಯ್ವನೆಗೆ ಕೇಡನೆಣಿಸುವನೆದೆಯೊಳು ||
ನೆಲೆಗೆ ಸಂದುದು ಪಾದರೀವಿಭವಮಾದುದಾ |
ಗಳೆ ತಪೋಹೀನತೆಯದೆಲ್ಲಿಯುಂ ಚಿತ್ರಮಿದು |
ಕಲಿಕಾಲಮೋ ಚೈತ್ರಕಾಲಮೋ ಪೇಳೆನಲು ಸುರಭಿಸಮಯಂ ಬಂದುದು ||

ಮಲ್ಲಿಗೆ

ತಂಬೆಲರ ಕೊಬ್ಬು ಬನಬನದ ಸೌಭಾಗ್ಯಮೆಳ |
ದುಂಬಿಗಳ ಸಂಗೀತಶಾಲೆ ಚೈತ್ರನ ಜಸದ |
ಮುಂಜೆಳಸು ಮೆಚ್ಚಿದರ ಮನಮೆಚ್ಚ ಗಲ್ಪರೆದೆಗಿಚ್ಚು ರತಿದೇವಿಯೊಲವು ||
ಶಂಬರಾರಿಯ ಸರಳ ಸಂತಾನಮುರಲ ಕುಲ |
ಕಂ ಬೈತಲೆಯ ಜೊಕ್ಕ ಮುತ್ತೆನಿಪ ಮಲ್ಲಗೆಗ |
ಳೀಂ ಬಿರಿದುವೋ ವಿರಹಿಯೆದೆ ಬಿರಿವವೋ ಚಿಕ್ಕೆಯಿಂದಾವಸಂತದ ಮೊದಲೊಳು ||

ಕಬ್ಬು

ತುಂಡುತುಂಡಾಗಿ ಕತ್ತರಿಸಿ ಗಾಣದೊಳರೆದು |
ಹಿಂಡಿ ರಸಮಂ ತೆಗೆದು ಕಾಸಿ ಕಾಲ್ಬುಟ್ಟುತದಿಂ |
ಖಂಡಶರ್ಕರೆಯಾದೆವೇಗೈದೊಡಂ ಸುಗುಣಮಂ ಬಿಡದ ಸುಜನರಂತೆ ||
ದಿಂಡುರುಳ್ಚಿದೆವಾಳ್ದಗಿದಿರಾದರಂ ಸುಕೋ !
ದಂಡರೂಪಿಂ ಸ್ವಾಮಿಹಿತಕಿನ್ನು ತಮ್ಮೊಳು |
ದ್ದಂಡತೆಯ ಬಿರುದೆತ್ತಿತೆನೆ ಸೋಗೆವಸುಂಕಬ್ಬಿನ ಕೊಬ್ಬು ಕಣ್ಗೆಸೆದುದು ||

ಕತ್ತಲೆ

ಧರೆಯೊಳಗೆ ಕರಿದು ಕೃಷ್ಣಂ ಕೃಷ್ಣನಿಂ ಕಾಳಿ |
ಕರಿದು ತತ್ಕೃಷ್ಣನಿಂ ಕಾಳಿಯಿಂ ನೀಲಗಿರಿ |
ಕರಿದು ತತ್ಕೃಷ್ಣನಿಂ ಕಾಳಿಯಿಂ ನೀಲಗಿರಿಯಿಂ ಕರಿದು ಕಾಳಮೇಘಂ ||
ಪರಿಕಿಸಲ್ ಕೃಷ್ಣನಿಂ ಕಾಳಿಯಿಂದಂ ನೀಲ |
ಗಿರಿಯಿಸಾಕಾಳಮೇಘದಿನಂಧಕಾರಮೇ |
ಕರಿದೆನಿಸಿ ಪಿರಿದೆನಿಸಿ ಪಸರಿಸಿದುದೆಲ್ಲಿಯುಂ ತಿಮಿರಮತಿನಿಬಿಡಮಾಗೆ ||

ಸೂರ್ಯಾಸ್ತ

ದಿಸಪನಪರಾಂಗನಾಸಂಗಿಯಾದಂದಮಂ |
ನೆನೆದು ಪದ್ಮಿನಿಯುದರಮುಗಿದು ಕಪ್ಪಾಯ್ತೊ ಮೇಣ್ |
ಮನಸಿಜಂ ವಿಟರಸಿಡೆ ಕತ್ತುರಿಯ ಗುಂಡನಬ್ಜದ ಕೋವಿಯೊಳ್ ಜಡಿದನೋ ||
ದಿನಲಕ್ಷ್ಮಿ ವಿಧುಗಂಜಿಯಂಬುಜಕರಂಡದೊಳ್ |
ತನಗುಳ್ಳ ನೀಲಮಂ ಬೈತು ಪೋದಳೊ ಎನಲ್ |
ವನಜಗಳು ಮುಗಿಯೆ ಗರ್ಭದಿ ಸಿಲ್ಕಿದಿಂದಿಂದಿರಂ ಕರಂ ಚೆಲ್ವಾದುದು ||

ಸ್ತ್ರೀಯರು

ನುಡಿವ ಕನ್ನಡಿ ನೋಡುವುತ್ಪಲಂ ಪೂಗಳಂ |
ಮುಡಿವ ಕಾಳಾಹಿ ಚಲಿಸದೆ ನಿಂದ ಮಱಿದುಂಬಿ |
ನಡೆವ ಪೊಂಬಾಱೆಯುರಲದ ಮೊಗ್ಗೆ ತಳರದೊಳ್ದಿರೆ ಪರಿಯದೆಳೆಯ ಸಾವು ||
ಕುಡಿವರಿಯದಿರ್ಪ ಲತೆ ಕಾಯದ ಸುಮಂ ಸಿಂಹ |
ಕಡಗದಾನೆಯ ಕುಂಭಮೆಂಬಿವವಯವಮಾಗೆ |
ಬಿಡದೆ ಮೂಲೋಕಮೋಹಿಸಿಯರಾಗಿರಿತನುಜೆಯೆಡಬಲದೊಳಿಟ್ಟಣಿಸಿದರ್ ||

---

## ಹುಚ್ಚಣ್ಣ 1587

ಇವನು ಗುಬ್ಬಿಯಮಲ್ಲಣ್ಣನ (ಸು. 1475) ಗಣಭಾಷ್ಯರತ್ನಮಾಲೆಯನ್ನು ಶಕ 1509 ನೆಯ ವ್ಯಯಸಂವತ್ಸರದಲ್ಲಿ (1587)ಪ್ರತಿಮಾಡಿದಂತೆ ಈ ಪದ್ಯದಲ್ಲಿ ಹೇಳಿದ್ದಾನೆ —

ಧರಣಿಯೊಳು ಶಾಲಿವಾಹನಶಕಾಬ್ದಂ ಶೂನ್ಯ |
ಸುರಸರಣಿಬಾಣಶಶಿಸಂಖ್ಯಾಗತಂ ಸಂದ |
ಕರನೆಸೆವ ವ್ಯಯವತ್ಸರದ ಮಾಘಶುದ್ಧದ್ವಾದಶಿಭಾನುವಾರದಲ್ಲಿ ||
ಗೆರೆಗೊಡನಹಳ್ಳಿಯುದ್ದಂಡಯ್ಯನಾಮಗಂ |
ಸುರುಚಿರದ ಗಣಭಾಷ್ಯರತ್ನಮಾಲೆಯನೊಲಿದು |
ಗುರುಭಕ್ತ ಹುಚ್ಚಣ್ಣ ಬರೆದನು.

ಅಲ್ಲದೆ ತಾನು ಗುರುಶಾಂತನ ಉಪದೇಶದಿಂದ ಸುಜ್ಞಾನಿಯಾದಂತೆ ಈ ಪದ್ಯದಲ್ಲಿ ಹೇಳುತ್ತಾನೆ—

ಕ್ಷಿತಿಯೊಳಗೆ ಪರುಷಮಂ ಲೋಹ ಸೋಂಕಲ್ ಸ್ವರ್ಣ |
ಮತಿಶಯದೊಳಪ್ಪುದಲ್ಲದೆ ಪರುಷಮಾಗದ |
ಪ್ರತಿಮಗುರು ಸುಜ್ಞಾನಮೂರ್ತಿದೇವರ ಹಸ್ತಕಮಲ ಪರುಷಂ ಸೋಂಕಲು ||
ಏತತಸುಜ್ಞಾನಿಯಾಗುತ್ತೆ ಶಿವಶರಣಸಂ |
ತತಿಗೆ ಬೇಡಿತನಿತ್ತು ಶಿವಶಾಸ್ತ್ರಗೋಷ್ಠಿಯೊಳ್ |
ಸತತಪರಮಾನಂದದಿಂದಿರ್ಪ ಗುರುಶಾಂತಶಿಷ್ಯನೇಂ ಕೃತಪುಣ್ಯನೋ ||

ಈತನು ವೀರಶೈವನು; ಗೆರೆಗೊಡನಹಳ್ಳಿಯ ಉದ್ದಂಡಯ್ಯನ ಮಗನು; ಗುರುಶಾಂತದೇವರ ಶಿಷ್ಯನು; ಐಶ್ವರ್ಯವಂತನಾಗಿಯೂ ಶಿವಶಾಸ್ತ್ರ ಗೋಷ್ಠೀ ಪ್ರವಣನಾಗಿಯೂ ಇದ್ದಂತೆ ತಿಳಿಯುತ್ತದೆ. ಮೇಗಣ ಪದ್ಯಗಳನ್ನು ನೋಡಿದರೆ ಇವನು ಕವಿಯಾಗಿದ್ದಂತೆ ತೋರುತ್ತದೆ. ಅವ ಗ್ರಂಥಗಳನ್ನು ಬರೆದಿದ್ದಾನೆಯೋ ತಿಳಿಯದು.

---

## ಇಮ್ಮಡಿಮುರಿಗೆಯಸ್ವಾಮಿ ಸು. 1590

ಈತನು ಶಿವಲಿಂಗನಾಂದ್ಯವನ್ನು ಬರೆದಿದ್ದಾನೆ. ಇವನು ವೀರಶೈವ ಕವಿ; ಮಹಾಂತಸ್ವಾಮಿಯ (ಸು. 1560) ಕಾಲವಾದಮೇಲೆ ಮುರಿಗೆಯ ಮಠದ ಪಟ್ಟಕ್ಕೆ ಬಂದಂತೆ ತೋರುತ್ತದೆ. ಇವನ ಕಾಲವು ಸುಮಾರು 1590 ಆಗಬಹುದು.

ಇವನ ನಾಂದ್ಯದಲ್ಲಿ 25 ಪದ್ಯಗಳಿವೆ; ಭಾಮಿನೀಷಟ್ಪದಿ 11, ವಾರ್ಧಕ 14. ಇವು ಸಂಧಿಗಳ ಆದಿಯ ನಾಂದೀಪದ್ಯಗಳಾಗಿರಬಹುದು. ಒಂದೆರಡನ್ನು ಉದಾಹರಿಸುತ್ತೇವೆ—

ಮುಡಿಯ ಗಂಗೆಯ ಮಡುವಿನರುಗಿನ | ಕಡುಚೆಲುವಸೋಮನನು ನಿರೀಕ್ಷಿಸಿ |
ಯೊಡನೆ ತಾವರೆಯಂಕುರವದೆಂದಿರದೆ ಒಬ್ಬಿಕ್ಕೈಯ ||
ಕಡುತವಕದಿಂ ನೀಡಿಯುದಯೊಳ | ಗಡಗಿದಾವೊಲನೋಡಿಯಾಲದ |
ಬುಡದೊಳಿರೆ ಕಂಡಂಜುವಣುಗನ | ನಗುವ ಮೃಡನೆ ಜಯಾ ||
ಮುಡಿಯೊಳಿರ್ಪವಳಾರು ಪೇಳೆನೆ | ಮಡದಿ ಜಲ ಮೊಗವೇನು ತಾವರೆ |
ಕುಡಿತೆಗಂಗಳಿವೇನು ಮೀಂಗಳು ಪುರ್ಬುಗಳಿವೇನು ||
ತಡೆಯದುಸಿರ್ವೆ ತೆರೆಗಳಾ ಬಲು | ಮುಡಿಯದೇನಳಿವಿಂಡು ಮೊಲೆಗಳ |
ಪೊಡರದೇನೆಣೆವಕ್ಕಿಯೆಂದಗಸುತೆಯ ನೆರೆದಭವಾ ||

---

## ಮಲ್ಲಿಕಾರ್ಜುನಕವಿ. 1593

ಇವನು ಶಂಕರಕವಿಕೃತ ಬಸವಪುರಾಣ. ಗುರುರಾಜಕೃತಪಂಡಿತಾರಾಧ್ಯಚಾರಿತ್ರ ಇವಕ್ಕೆ ಕನ್ನಡವ್ಯಾಖ್ಯಾನವನ್ನು ಬರೆದಿದ್ದಾನೆ. ಈತನ

ವೀರಶೈವಕವಿ. ಚಿಕ್ಕಭೂಪಾಲನ ಮಗನಾದ ಬಿಜ್ಜವರಪುರಾಧೀಶ್ವರ ಇಮ್ಮಡಿ ಚಿಕ್ಕಭೂಪಾಲನು ತನಗೆ ಪೋಷಕನೆಂದು ಹೇಳಿಕೊಂಡಿದ್ದಾನೆ. ಈ ಇಮ್ಮಡಿ ಚಿಕ್ಕಭೂಪಾಲನಿಗೆ ವಂಕಿಣಿನಾರಾಯಣ, ಸಮರನಿಶ್ಶಂಕ, ನೂತನಭೋಜರಾಜ, ತಲಾಘರಾಯರಾವುತವೇಶ್ಯಾಭುಜಂಗ ಎಂಬ ಬಿರುದುಗಳು ಹೇಳಿವೆ. ಮದ್ದಗಿರಿ 21ನೆಯ ಶಾಸನದಿಂದ ಇವನ ಕಾಲವು 1593 ಎಂದು ತಿಳಿಯುತ್ತದೆ. ಕವಿಯ ಕಾಲವು ಇದೇ ಆಗಿರಬೇಕು. ಕವಿಜನಕುಮುದಶಶಾಂಕ ಎಂದು ಕವಿ ತನ್ನನ್ನು ವಿಶೇಷಿಸಿ ಹೇಳಿಕೊಂಡಿದ್ದಾನೆ.

### ಗುರುರಾಜಕೃತ ಪಂಡಿತಾರಾಧ್ಯಚಾರಿತ್ರಕ್ಕೆ ಕನ್ನಡವ್ಯಾಖ್ಯಾನ

ಇದು ಗುರುರಾಜನಿಂದ (ಸು. 1430) ರಚಿತವಾದ ಸಂಸ್ಕೃತಪಂಡಿತಾರಾಧ್ಯಚಾರಿತ್ರಕ್ಕೆ ಕನ್ನಡಟೀಕೆ. ಗ್ರಂಥದ ಕೊನೆಯಲ್ಲಿ ಈ ಗದ್ಯವಿದೆ--

ಇದು ಶ್ರೀಮದಮೃತೇಶ್ವರಕರುಣಾಕಟಾಕ್ಷವೀಕ್ಷಣಪ್ರಸಾದಲಬ್ಧಸಾರಸಾರಸ್ವತಸಾಮ್ರಾಜ್ಯಸಂಪೂಜ್ಯ ಸಕಲಕಲಾಕಲಾಪ ನೂತನಭೋಜರಾಜ... ......... ಚೋಳಂಭೇರಮಂಡಲಿಕರಗಂಡ ಗಂಡಭೇರುಂಡ ತಲಾಘರಾಯರಾವುತವೇಶ್ಯಾಭುಜಂಗ ಬಿಜ್ಜವರಪುರವರಾಧೀಶ್ವರ ಚಿಕ್ಕಭೂರಮಣಗರ್ಭಕಲಶಾಂಬುರಾಶಿರಾಕಾನಿಶಾನಾಯಕ ಸೋಮಾಂಬಿಕಾಹೃದಯನಂದನವನಹರಿಚಂದನ ಶ್ರೀಮದಿಮ್ಮಡಿಚಿಕ್ಕಭೂಪಾಲಕೃಪಾಲಾಲಿತ ಕವಿಜನಕುಮುದಶಶಾಂಕ ಶ್ರೀವತ್ಸಾಲಂಕೃತಮಲ್ಲಿಕಾರ್ಜುನಸುಧೀವಿರಚಿತಂ.

### ಶಂಕರಕವಿಕೃತ ಬಸವಪುರಾಣಕ್ಕೆ ಕನ್ನಡವ್ಯಾಖ್ಯಾನ

ಇದು ಶಂಕರಾರಾಧ್ಯ ರಚಿತವಾದ ಸಂಸ್ಕೃತಬಸವಪುರಾಣಕ್ಕೆ ಕನ್ನಡ ಟೀಕೆ. ಗ್ರಂಥಾಂತ್ಯದಲ್ಲಿ ಈ ಗದ್ಯವಿದೆ—

ಇದು ಶ್ರೀಮದಮೃತೇಶ್ವರಚರಣಾರವಿಂದಮಕರಂದಾಸ್ವಾದಾಮಂದನಂದದಿಂದಿಂದಿರಾಯಮಾಣವಿಶುದ್ಧಾಂತಃಕರಣ ವಂಕಿಣಿನಾರಾಯಣಾಂಕ ಸಮರನಿಶ್ಶಂಕ ಚಿಕ್ಕಭೂಪಾಲಗರ್ಭಾಬ್ಧಿಚಂದ್ರೋದಯ ಸೋಮಾಂಬಿಕಾಗರ್ಭಶುಕ್ತಿಮುಕ್ತಾಫಲ ಸತತಸಂತರ್ಪಿತನಿರವಧಿಕವೀರಮಾಹೇಶ್ವರವಾಂಛಿತಾರ್ಥಸಾರ್ಥ ಶ್ರೀಮದ್ಬಿಜ್ಜವರಪುರವರಾಧೀಶ್ವರ ಶ್ರೀಮದಿಮ್ಮಡಿಚಿಕ್ಕಭೂಪಾಲಕೃಪಾಲಾಲಿತ ಮಲ್ಲಿಕಾರ್ಜುನಕವೀಶ್ವರವಿರಚಿತಂ.

---

## ಪದ್ಮರಸ. 1599

ಈತನು ಶೃಂಗಾರಕಥೆಯನ್ನು ಬರೆದಿದ್ದಾನೆ. ಇವನು ಜೈನಕವಿ ತನ್ನ ಪರಂಪರೆಯನ್ನು ಹೀಗೆ ಹೇಳಿಕೊಂಡಿದ್ದಾನೆ—ಅಖಿಲಶಾಸ್ತ್ರ ವಿಶಾರದ

ಮಹಾವಾದಿಮದೇಭಮೃಗೇಂದ್ರ ತರ್ಕಶಬ್ದಾಗಮಜ್ಞ ಜೈನಸಂಹಿತಾಕರ್ತೃ ವಾದ ಶ್ರೀವತ್ಸಗೋತ್ರದ ಬ್ರಹ್ಮಸೂರಿಪಂಡಿತನು ರಾಜಪೂಜಿತನಾಗಿ ಪ್ರಸಿದ್ಧಿ ಪಡೆದಿದ್ದನು. ಅವನ ಸಂತತಿಯಲ್ಲಿ ವೈದ್ಯಮಂತ್ರದೈವಜ್ಞಶಾಸ್ತ್ರಗಳಲ್ಲಿ ಕೋವಿದನಾದ ಪದ್ಮಣೋಪಾಧ್ಯಾಯನು ಜನಿಸಿದನು. ಇವನ ಮಗನೇ ಕವಿ ಪದ್ಮರಸ. ಇವನ ಗುರು ಭಟ್ಟಾಕಲಂಕ. ಈ ಗ್ರಂಥವನ್ನು ಕೆಲಸೂರ ಚಂದ್ರನಾಥಬಸ್ತಿಯಲ್ಲಿ ಮುಗಿಸಿ ಶಕ 1521 ನೆಯ ವಿಳಂಬಿಸಂವತ್ಸರದಲ್ಲಿ, ಎಂದರೆ 1599 ರಲ್ಲಿ, ಲಿಖಿಸಿದಂತೆ ಕವಿ ಹೇಳುತ್ತಾನೆ. ಕೆಲಸೂರಿಗೆ ಛತ್ರತ್ರಯಪುರ ಎಂಬ ಹೆಸರನ್ನೂ ಹೇಳಿದ್ದಾನೆ. ಇದು ಕವಿಯ ಸ್ಥಳವಾಗಿರಬಹುದು.

ಕವಿ ಜೈನನಾಗಿದ್ದರೂ ಗ್ರಂಥಾದಿಯಲ್ಲಿ ಶಿವಸ್ತುತಿಮಾಡಿರುವುದನ್ನು ನೋಡಿದರೆ ಈ ಗ್ರಂಥವನ್ನು ಅನ್ಯರಿಗೋಸ್ಕರ ಬರೆದಂತೆ ತೋರುತ್ತದೆ. ಈ ಕೃತಿಯ ವಿಷಯದಲ್ಲಿ

ಅಸಱು ಪರಿಹಾರವಾಗೆ ಪೇೞಿಸೆ ಪಾಪ | ನಾಶವೆಂದುಸಿರಿತಿಲ್ಲಿದನು ||
ಇದು ಪುಣ್ಯಸಾರಸತ್ಕಥೆಯಲ್ಲವದಱಿಂದಾರೈದು ಪೇೞ್ದುದಿಲ್ಲ ||
ನೆನೆದರೆ ಭಾವ ಬಾರದೆ ಬಿಟ್ಟುದಿಲ್ಲ ರ | ಸನೆಗೆ ವಚನಗಳೊದಗನೆ |
ಅನುಮಾನಿಸಿದುದಿಲ್ಲ ಸತ್ಕಾವ್ಯವಲ್ಲೆಂದು | ಮನಮೊಲ್ದು ಸಂಪೂರ್ಣವೆಂದೆ ||

ಎಂದು ಕವಿ ಹೇಳುತ್ತಾನೆ. ಅಲ್ಲದೆ ಲಕ್ಷಣಬದ್ಧವಾಗಿರಬೇಕೆಂಬ ನಿಯಮವು ವಸ್ತುಕಗ್ರಂಥಗಳಿಗೆ ಅನ್ವಯಿಸುವಂತೆ ವರ್ಣಕಗ್ರಂಥಗಳಿಗೆ ಅನ್ವಯಿಸುವುದಿಲ್ಲ ಎಂಬಂಶವನ್ನು

ವಸ್ತುಕದೊಳಗೆ ಲಕ್ಷಣಲಕ್ಷಿತಗಳ ವಿ | ನ್ಯಸ್ತವಲ್ಲದೆ ಪೇೞಿತಿಲ್ಲ |
ಶಸ್ತವಾಗಿರಲರಿಯವು ವರ್ಣಕದೊಳು ದೋ | ಷಸ್ತೋಮಗಳ ನೋಡಬೇಡ ||

ಎಂಬ ಪದ್ಯದಲ್ಲಿ ಹೇಳಿದ್ದಾನೆ. ಪೂರ್ವಗ್ರಂಥಗಳಲ್ಲಿ ಮದನತಿಲಕ, ಮಲ್ಲಿಕಾರ್ಜುನವಿಜಯ, ಭರತೇಶ್ವರಚರಿತೆ, ಕುಮಾರರಾಮನಕಥೆ ಇವುಗಳ ಹೆಸರನ್ನು ಹೇಳಿದ್ದಾನೆ.

ಇವನ ಗ್ರಂಥ

### ಶೃಂಗಾರಕಥೆ.

ಇದು ಸಾಂಗತ್ಯದಲ್ಲಿ ಬರೆದಿದೆ; ಸಂಧಿ 5, ಪದ್ಯ 533. ಇದರಲ್ಲಿ ಕರ್ಣಾಟದೇಶದ ಸುಖನಿಲಯಪುರದ ದೊರೆ ರತ್ನಭೂಷಣನಿಗೂ ಗುಣ

ಭೂಷಣೆಗೂ ಹುಟ್ಟಿದ ಸುಕುಮಾರನ ಕಥೆ ಹೇಳಿದೆ. ಗ್ರಂಥದಲ್ಲಿ ಕಥಾಭಾಗವು ಬಹಳಕಡಮೆ; ಶೃಂಗಾರರಸಪ್ರಧಾನವಾದ ವರ್ಣನೆಯೇ ವಿಶೇಷವಾಗಿದೆ. ಆರಂಭದಲ್ಲಿ ಸದಾಶಿವಸ್ತುತಿ ಇದೆ. ಬಳಿಕ ಕವಿ ಸರಸ್ವತಿ, ಗಣೇಶ ಇವರುಗಳನ್ನು ಸ್ಮರಿಸಿದ್ದಾನೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ಸಮುದ್ರ

ಸುಳಿ ನಾಭಿ ಝುಷ ನೇತ್ರ ತೆರೆ ಪುಬ್ರುರಗ ಬಾಸೆ | ಗಳ ಶಂಖ ಕೂರ್ಮ ಮೇಗಾಲು ||
ಪುಳಿನದೊಟ್ಟಿಲೆ ಪೊಳಿವಾಳಿಂಗೆ ಸಾಮ್ಯ | ಲಲನೆಯಂತೆಸೆದುದಾವಾರ್ಧಿ ||

ಸ್ತ್ರೀವರ್ಣನೆ

ಕುಂಭಕುಚದ ಕಂಬುಕಂಠದ ಕೇಕಿದು | ಱಂಬಿಸಂಭೋಜಾತಮುಖದ |
ಪೊಂಬಾಳೆತೊಡೆಯ ಕಾಮಂಬಗತಿಯ ಪಕ್ವ | ಬಿಂಬಾಧರೆಯರಿರುತಿಹರು ||
ಲೋಕದೊಳಗೆ ಹಲಲಿಪಿಯುಂಟವಱವ | ಱಾಕಾರವೆಲ್ಲ ವಿಕಾರ |
ಈಕರ್ಣಾಟಶ್ರೀಕಾರದಿರವ ಪೋ | ಲ್ತಾಕೆಯ ಕರ್ಣವೆಸೆದುದು ||

ವಿರಹ

ಮಲಯಜಲೇಪ ಮನ್ಮಥಶಾಪ ತಾವರೆ | ಯೆಲೆಯ ವೀಜನ ಮಹಾಜ್ವಲನ |
ತಳಿವ ಪರಾಗ ಜೀವನತ್ಯಾಗ ವೀಣೆಯ | ಲಲಿತಸುಸ್ವರ ಬಹುವೈರ ||
ಮರುಗ ಮಹೋರಗ ಕಸ್ತುರಿ ದಳ್ಳುರಿ | ಸುರಗಿ ಸುರಗಿ ವಾಲ ವ್ಯಾಲ |
ಸರಸಿಜ ವಿಷರಜ ತಾಂಬೂಲವೆದೆಶೂಲ | ದಿರವಾದುವಾವಿರಹದೊಳು ||

ಸೂಳೆಗೇರಿ

ಪಾಪದ ಗಡಿ ದುಃಖದ ಸೀಮೆ ಬಹುವಿಧ | ದಾಪತ್ತಿನ ಪುರ ತೇಜ |
ಪೋಪ ಮಹಾಲಯವೆಂಬಪಕೀರ್ತಿಯ ತಾ | ಪೊತ್ತು ಮೆಱೆವುದಾಕೇರಿ ||
ಗದಕಿನಾಲಯ ಠಕ್ಕಿನ ಬೀಡನೃತದ | ಸದನ ವ್ಯಸಿಕದ ಭವನವು |
ಚದುರಿನ ಪೇಟೆ ವ್ಯಾಧಿಯ ತವರ್ಮನೆಯೆಂ | ದೆದೆಗೊಂಡುದಾಸೂಳೆಗೇರಿ ||

---

ವರ್ಧಮಾನ. ಸು. 1600

ಈತನು ನಗರದ 46 ನೆಯ ಶಾಸನವನ್ನು ಬರೆದಂತೆ ಆ ಶಾಸನದ ಕೊನೆಯಲ್ಲಿರುವ

ದೇವೇಂದ್ರಕೀರ್ತಿಮುನಿರಾಜತನೂಭವೇನ ಶ್ರೀವರ್ಧಮಾನಸುಖಿನಾ ಗದಿತಾನಿ ಭಾಂತಿ |
ಪದ್ಯಾನಿ ಸದ್ಗುಣಯುತಾನಿ ಮಹೋಜ್ವಲಾನಿ ವಿದ್ವತ್ಕವೀಂದ್ರಗಲಕರ್ಣವಿಭೂಷಣಾನಿ ||

ಎಂಬ ಪದ್ಯದಿಂದ ತಿಳಿಯುತ್ತದೆ. ಈ ಶಾಸನದಲ್ಲಿ ಕನ್ನಡ, ಸಂಸ್ಕೃತ ಈ ಎರಡು ಭಾಷೆಗಳಲ್ಲಿಯೂ ಪದ್ಯಗಳಿವೆ. ಅವು ಅಭಿನವವಾದಿವಿದ್ಯಾನಂದನನ್ನು (1533)[1] ಸ್ತುತಿಸಿ ಅವನ ಪರಂಪರೆಯನ್ನು ಹೇಳುತ್ತವೆ. ಕವಿ ತನ್ನ ಪರಂಪರೆಯನ್ನು ಹೀಗೆಹೇಳಿಕೊಂಡಿದ್ದಾನೆ:—ವಿಜಯನಗರದ ಕೃಷ್ಣದೇವರಾಜನ (1509-1529) ಸಭೆಯಲ್ಲಿ ವಾದಿಗಳನ್ನು ಜಯಿಸಿದ (ಅಭಿನವ) ವಾದಿವಿದ್ಯಾನಂದ; ಮಗ ವಿಶಾಲಕೀರ್ತಿ; ಮಗ ಭೈರವೇಂದ್ರವಂಶದ ಪಾಂಡ್ಯನೃಪನಿಂದ ಪೂಜಿತನಾದ ದೇವೇಂದ್ರಕೀರ್ತಿ; ಮಗ ಕವಿವರ್ಧಮಾನ. ಇವನ ಕಾಲವು ಸುಮಾರು 1600 ಆಗಬಹುದು. ಶಾಸನದ ಕಾಲವೂ ಅದೇ[2]. ಇದರಿಂದ ಕೆಲವು ಪದ್ಯಗಳನ್ನು ತೆಗೆದುಬರೆಯುತ್ತೇವೆ:—

ವಿದ್ಯಾನಂದಸ್ತುತಿ

ವಿದ್ಯಾನಂದಸ್ವಾಮ್ಯನ | ವದ್ಯೋಪನ್ಯಾಸಮುದ್ರೆ ಕವಿಗಳ ಮನದೊಳ್ |
ಸದ್ಯಸ್ಸುಖಕರಬಾಣನ | ಗದ್ಯಾತ್ಮಕಕಾವ್ಯದಂತೆ ರಂಜಿಸಿ ತೋರ್ಕುಂ ||
ನಗರೀರಾಜ್ಯದ ರಾಜರ |ಮಿಗಿಲೆನಿಸುವ ಸಭೆಗಳಲ್ಲಿ ವಿಬುಧವ್ರಾತ |
ಕ್ಕಗಣಿತವಾಕ್ಯಾಮೃತಮಂ | ಸೊಗಸಿಂದೀಂಟಿಸಿದೆ ವಾದಿವಿದ್ಯಾನಂದಾ ||
ಕಾರಕಳನಗರದಾಣ್ಮನ | ಭೈರವಭೂಪಾಲಮೌಲಿಯಾಸ್ಥಾನದೊಳೇಂ |
ಸಾರತರಜೈನಧರ್ಮಮ | ನೋರಂತಿರೆ ಬೆಳಗಿ ಮೆಱೆದೆ ವಿದ್ಯಾನಂದಾ ||
ನರಪತಿಮಣಿಮಕುಟಾರ್ಚಿತ | ನರಸಿಂಹಕುಮಾರಕೃಷ್ಣರಾಯನ ಸಭೆಯೊಳ್ |
ಪರಮತದ ವಾದಿವೃಂದಮ | ನೊಱಸಿದೆ ವಾಗ್ಬಲದೆ ವಾದಿವಿದ್ಯಾನಂದಾ ||

---

## ತಿರುಮಲಭಟ್ಟ ಸು. 1600

ಈತನು ಶಿವಗೀತೆಯನ್ನು ಬರೆದಿದ್ದಾನೆ. ಇವನು ಬ್ರಾಹ್ಮಣಕವಿ; ಉಭಯಸತ್ಕವಿಶಿರೋವರಮಣಿ ಎಂದು ತನ್ನನ್ನು ವಿಶೇಷಿಸಿ ಹೇಳಿಕೊಂಡಿ

1 Page 227. 2. ಮೆ|| ರೈಸ್ ಸುಮಾರು 1530 ಎಂದು ಹೇಳಿದ್ದಾರೆ.

ದ್ದಾನೆ. ಇವನ ತಂದೆ ವಿಷ್ಣುಸೂರಿ; ಪೋಷಕ ಕೆಳದಿಯ ದೊರೆಯಾದ ವೆಂಕಟಪ್ಪನಾಯಕ. ಈತನ ಆಜ್ಞಾನುಸಾರವಾಗಿ ಈ ಗ್ರಂಥವನ್ನುಬರೆದಂತೆ ಹೇಳುತ್ತಾನೆ.[1] ಈ ರಾಜನು 1582 ರಿಂದ 1629ರ ವರೆಗೆ ಆಳಿದಂತೆ ತಿಳವುದರಿಂದ ಕವಿಯ ಕಾಲವು ಸುಮಾರು 1600 ಆಗಬಹುದು.[2]

ಇವನ ಗ್ರಂಥ

## ಶಿವಗೀತೆ

ಇದು ವಾರ್ಧಕಷಟ್ಪದಿಯಲ್ಲಿ ಬರೆದಿದೆ; ಸಂಧಿ 16, ಪದ್ಯ 377. ಈ ಗ್ರಂಥವು ಪದ್ಮಪುರಾಣದ ಉತ್ತರಖಂಡದಲ್ಲಿರುವ ಶಿವಗೀತೆಯ ಭಾಷಾಂತರವು. ಇದನ್ನು "ಸಕಲವಿದ್ವತ್ತಿಲಕ ಹರಿಹರಾರಾಧ್ಯವರವಾಜಪೇಯಾಂಧ್ರಕೃತ ಸರಸಶಿವಗೀತಾನುರಂಜಕವೆನಿಪ್ಪ ಟೀಕೆಗಳ ನೆಱೆನೋಡಿ ಪೇೞ್ದಿಂ" ಎಂದು ಕವಿ ಹೇಳುತ್ತಾನೆ. ತನ್ನ ರಚನಾಕ್ರಮವನ್ನು

ಒಳಗಮೃತದಂತೆ ರಸತಿರುಳಿರ್ದೊಡಂ ಶುಕಾ |
ವಳಿ ಹೊಱಗೆ ಬಿಱುಸಾದ ಕರಟವುಂ ಸಿಂಪೆಯುಂ |
ಬಳಸಿರ್ದ ತೆಂಗಾಯ ಮುಟ್ಟಲೊಲ್ಲದೆ ಮಿಕ್ಕ ಫಲತತಿಯನಱಸುವಂತೆ ||
ವಿಳಸದರ್ಥಗಳಿರ್ದೊಡಂ ಕಠಿನವಾದ ಕೃತಿ |
ಗಳ ನೋಡರತಿರಸಿಕರದಱಿಂದ ಮೃದುಪದಂ |
ಗಳನಿಟ್ಟು ಋಜುಮಾರ್ಗದಿಂ ಸಕಲರಱಿವಂತೆ ವಿರಚಿಸುವೆನೀಕೃತಿಯನು ||

ಎಂಬ ಪದ್ಯದಲ್ಲಿ ತಿಳಿಸಿ ಪಿಶುನರನ್ನು

ಕಂಡಸಕ್ಕರೆಯ ಸೋದಿಸಿ ಬಾಯೊಳಿಕ್ಕಲದ |
ನುಂಡು ಸವಿಯಱಿಯದರು ಕೆಲರು ಕೆಲಱಿತೊಡಂ |

---

1. ಕೆಳದಿನೃಪವಿಜಯದಲ್ಲಿ—ವೆಂಕಟಪ್ಪನಾಯಕನು ಕವಿ ತಿರುಮಲಭಟ್ಟರಿಂದ ಪದ್ಮಪುರಾಣದ ಉತ್ತರಖಂಡದೊಳ್ ಪದಿನೆಂಟಧ್ಯಾಯಮನುಳ್ಳ ಶಿವಗೀತೆಯಂ ವಾರ್ಧಕಷಟ್ಪದಿಯಲ್ಲಿ ಬರೆಯಿಸಿದಂ—ಎಂದು ಹೇಳಿದೆ. 2. 1631ರಲ್ಲಿ ಹುಟ್ಟಿದ ಸಾಗರದ 41 ನೆಯ ಶಾಸನದಲ್ಲಿ ವೆಂಕಟಪ್ಪನಾಯಕನ ಮಮ್ಮಗನಾದ ವೀರಭದ್ರನಾಯಕನು ತಿರುಮಲಭಟ್ಟನ ಮಗನಾದ ಶಂಭುಲಿಂಗಭಟ್ಟನಿಗೆ ಭೂದಾನಮಾಡಿದಂತೆ ಹೇಳಿದೆ. ಈ ತಿರುಮಲಭಟ್ಟನು ಶಿವಗೀತಾಕರ್ತೃವಾಗಿರಬಹುದು.

ಕೊಂಡಾಡರಕಟ ಕೇಣದೆ ಕೆಲರಿದುಪ್ಪೆಂದು ಮಂಡೆಯಂ ಕೊಡಹುತಿಹರು ||

ಎಂಬ ಪದ್ಯಾರ್ಥದಲ್ಲಿ ದೂಷಿಸಿ ಈ ಗ್ರಂಥವು ಭಗವದ್ಗೀತೆಗಿಂತ ಶ್ರೇಷ್ಠವೆಂದು ಈ ಪದ್ಯದಲ್ಲಿ ಹೇಳುತ್ತಾನೆ—

ದ್ವಾಪರಾಂತ್ಯದೊಳಖಿಳಬಂಧುಗುರುಸೋದರರ |
ಕೋಪದಿಂ ಕೊಲ್ಲಬೇಕೆಂದು ಸಂಗರವ ಪೊ |
ಕ್ಕಾಪಾರ್ಥಗವನ ಕುದುರೆಗಳ ವೂಡಲ್ ಬಂದ ನಂದಗೋಪನ ತನಯನು ||
ತಾ ಪೇಳ್ದನೊಲಿದು ಭಗವದ್ಗೀತೆಯಂ ದಿಟವು |
ದೀಪರಮಶಿವ ಪುಣ್ಯದೇಶಕಾಲದೊಳು ಭುವ |
ನೋಪಕಾರಕ್ಕೆ ನರನಾದ ಹರಿಗೊರೆದ ಶಿವಗೀತೆಗೇಂ ದೊರೆಯೆ ಸರಿಯೇ ||

ಕವಿ ತನ್ನ ಪೋಷಕನ ವಿಷಯವಾಗಿ ಹೀಗೆ ಬರೆದಿದ್ದಾನೆ—

ಕೆಳದಿರಾಜರ ರಾಜಧಾನಿಯಾದ ಇಕ್ಕೇರಿಯಲ್ಲಿ ಸದಾಶಿವರಾಯನಾಯಕನ್ನು ಆಳಿದನು. ಅವನ ಮಗ ಸಂಕಭೂಪ; ಅವನ ಮಗ ವೆಂಕಟನೃಪ. ಇವನು ವಿಜಯಾಪುರದ ಪಾತುಖಾನನನ್ನು ಸೋಲಿಸಿದನು; ತುಳುವದೊರೆಗಳನು ಕಿಂಕರರೆನಿಸಿದನು. ಗೀತಗೋವಿಂದದಿಂ ನಾಲ್ಮಡಿಯೆನಿಪ ಗೀತಗೌರೀವರವನೆನ್ನಿಂದ ಪೇಳಿಸಿದನು. ಅಘೋರೇಶ್ವರನ ಮುಂದಣ ಮಹಾಮಂಟಪದ್ವಯವ ರಥಾದಿಗಳ ಮಾಡಿಸಿದನು. ಶೃಂಗೇರಿ ಚಿರಕಾಲದಿಂ ನಿರ್ನಾಮವಾಗಿರಲು ಅದಂ ಮೊದಲಿಂದ ನೂರ್ಮಡಿಯ ಭಾಗ್ಯದಿಂ ಬಾಳಿಸಿದನು. ಇವನ ಮಗ ಯುವರಾಜಭದ್ರಭೂಪ. ವೆಂಕಟನೃಪಂ ಶಿವಗೀತೆಯರ್ಥಮನುದ್ದಂಡಷಟ್ಪದಿಗಳಿಂ ಕನ್ನಡಿಸಬೇಕೆಂದು ನೇಮಿಸಿದನು.

ಗ್ರಂಥಾವತಾರದಲ್ಲಿ ವಿಷ್ಣುಸ್ತುತಿಯಿದೆ. ಬಳಿಕ ಕವಿ ಈಶ್ವರ, ಸರಸ್ವತಿ, ವೆಂಕಟಾದ್ರಿನಾಯಕ ಇವರುಗಳನ್ನು ಹೊಗಳಿದ್ದಾನೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ—

ನಂದಿ

ಎಸೆವ ರತ್ನಗಳ ಪಳ್ಳಣದಿಂದ ಮೆಱೆವನಂ |
ಸಸಿಯ ಕದಿರುಗಳ ತೊಂಗಲುಗಳಿವೆ ಎಂಬಂತೆ |
ಪಸರಿಸಿದ ನೀಳ್ದ ಸಮಕಟ್ಟುಗಳ ಝಲ್ಲಿಗಳ ತಂಡದೆ ಮನಂಗೊಳಿಪನಂ ||
ಮಿಸುಪಕಿಱುಗೆಜ್ಜೆಗಳ ಬಲ್ಲುಲಿಗಳಿಂ ಪತ್ತು |

ದೆಸೆಗಳಂ ಶಿವಿ ನಲಿದೆಸೆವನಂ ಬಸವನಂ ।
ಮುಸಕದಿಂದೇಱಿಕೊಂಡಿರ್ದ ತಿಸುಳಿಯ ಕಂಡನಂದು ನೆಲವಣುಗಿಯರಸಂ ॥

ಜನನ

ನಿಟ್ಟೆಲುಗಳಟ್ಟೆಗಳ ಘಟ್ಟಣೆಗೆ ಪಿಟ್ಟಾಗಿ ।
ಪೊಟ್ಟೆಯೊಳವಟ್ಟೆಯಂ ಬಿಟ್ಟು ಪೊಱಮಟ್ಟು ನು ।
ಣ್ಪೆಟ್ಟ ನೆಣನಾತೆಱದೆ ದಿಟ್ಟೆಯಂ ಕಟ್ಟಿ ಮುಸುಕಿಟ್ಟಿಹ ಜರಾಯುವಿಂದಂ ॥
ಕಟ್ಟುಗ್ರಶೋಕವಳವಟ್ಟು ಕಂಗೆಟ್ಟು ಮತಿ ।
ಗೆಟ್ಟಧೋಮುಖನಾಗಿ ನೆಟ್ಟನೆ ನೆಲಕೆ ಬೀೞ್ವ ।
ಕಟ್ಟಳೆಯನೇನೆಂಬೆ ನಟ್ಟ ಸುಜ್ಞಾನದಿಂ ಪುಟ್ಟನಱಿವವನೆ ಚದುರಂ ॥

ಆತ್ಮ

ಘಟಮನೆಲ್ಲಲ್ಲಿಗಂ ಕೊಂಡೊಯ್ಯಲದಱಲ್ಲಿ ।
ಘಟಿಸಿದಾಕಾಶಮಾವಗಮಿರ್ಪ ಕಾರಣದೆ ।
ಘಟದೊಡನೆ ಪೂರ್ವಪ್ರದೇಶದಾಕಾಶವೇ ಪೋಯ್ತೆಂದು ತಿಳಿವತೆಱದಿಂ ॥
ಪಟುಕರ್ಮವಶದಿನೀಲಿಂಗದೇಹಂ ಮಹೋ ।
ತ್ಕಟದೇಹಮಂ ಬಿಟ್ಟು ಲೋಕಾಂತರಕೆ ಪೋಗ ।
ಲಟನವಿಲ್ಲದ ಪೂರ್ಣನಾದಾತ್ಮನುಂ ಪೋದನೆಂಬುದುಪಚಾರಮಾತ್ರಂ ॥

---

## ತಿಮ್ಮ. ಸು. 1600

ಈತನು ನವರಸಾಲಂಕಾರವನ್ನು ಬರೆದಿದ್ದಾನೆ. ಇವನು ಬ್ರಾಹ್ಮಣ ಕವಿಯೆಂದು ತೋರುತ್ತದೆ; ರಾಯಣನ ಮಗನು. ಇವನಿಗೆ ಕವಿಕುಲ ಚಕ್ರವರ್ತಿ, ಕವಿಭಾಳಲೋಚನ, ರಸಿಕಬ್ರಹ್ಮ, ಉಭಯಕವಿಶರಭಭೇ ರುಂಡ ಎಂಬ ಬಿರುದುಗಳಿದ್ದಂತೆ ತೋರುತ್ತದೆ. ಸಾಳ್ವನ (ಸು. 1550) ರಸರತ್ನಾಕರದಿಂದ ಸೂತ್ರಗಳನ್ನೂ ವಾಕ್ಯಗಳನ್ನೂ ಉದಾಹರಿಸುವುದ ರಿಂದ ಈತನು ಅವನ ಕಾಲಕ್ಕೆ ಈಚೆಯವನು ಎಂಬುದು ಸ್ಪಷ್ಟವಾಗಿದೆ; ಸುಮಾರು 1600 ರಲ್ಲಿ ಇದ್ದಿರಬಹುದು. ತನಗೆ ಹಿಂದೆ ಇದ್ದ ಲಕ್ಷಣಕಾರ ರಲ್ಲಿ ಕವಿಕಾಮ, ನಾಗವರ್ಮ, ಸಾಳ್ವ, ವಿದ್ಯಾನಾಥ, ಹೇಮಚಂದ್ರ, ಅಪ್ಪ

ತಾನನ್ದಿ ಇವರುಗಳನ್ನು ತನ್ನ ಗ್ರಂಥದಲ್ಲಿ ಅನುಸರಿಸಿರುವಂತೆ ಹೇಳುತ್ತಾನೆ.

ಇವನ ಗ್ರಂಥ

ನವರಸಾಲಂಕಾರ.

ಇದು ಚಂಪೂರೂಪವಾಗಿದೆ. ಇದರಲ್ಲಿ ಮುಖ್ಯವಾಗಿ ರಸಪ್ರಕ್ರಿಯೆ ಪ್ರತಿಪಾದಿತವಾಗಿದೆ; ನಾಯಕನಾಯಿಕಾಲಕ್ಷಣವೂ ವ್ಯಭಿಚಾರಿಭಾವಾದಿಗಳೂ ಹೇಳಿವೆ. ಕವಿಕಾಮನ ಮತ, ನಾಗವರ್ಮನ ಮತ ಎಂದು ಆ ಕವಿಗಳ ಗ್ರಂಥಗಳಿಂದಲೂ, ಸಾಳ್ವನ ರಸರತ್ನಾಕರದಿಂದಲೂ ಸೂತ್ರಗಳು ಅನುವಾದಮಾಡಲ್ಪಟ್ಟಿವೆ. ಉದಾಹರಣಪದ್ಯಗಳೆಲ್ಲಾ ಪಂಪ, ಪೊನ್ನ, ನಾಗಚಂದ್ರ, ನೇಮಿಚಂದ್ರ ಮೊದಲಾದ ಪೂರ್ವಕವಿಗಳ ಗ್ರಂಥಗಳಿಂದ ತೆಗೆದಿವೆ.

ಈ ಗ್ರಂಥದಿಂದ ಕೆಲವುಭಾಗಗಳನ್ನು ತೆಗೆದು ಬರೆಯುತ್ತೇವೆ---

ಒದವಿದ ಚಿತ್ತದಿಂ ತೋ | ರ್ಪುದು ಭಾವಂ ಭಾವದಿಂದೆ ರಸಮುದಯಿಸುಗುಂ |
ವದನಮುದಂ ಪ್ರಕಟಿಪುದಾ | ವದನದೆ ರಸಮಿಂತಿದೆಂದು ತಿಳಿಗೆ ರಸಜ್ಞರ್ ||

ಇನಿಯನ ವಾರ್ತೆಗಳಂ ತಾ | ಮಿನಿ ಪೆಱರಿಂ ಕೇಳ್ದು ಕೇಳ್ದು ತದ್ಭಾವನೆಯಿಂ |
ತನಗಾಗಿಸಿಕೊಂಡಿರ್ಪೊಡೆ | ಜನಮಿಂ ಮೊಟ್ಟಾಯಿತಾಭಿಧಾನಮನಾಳ್ಗುಂ ||

ಪರಿಹಾಸವಿವಿಧಕೇಳೀ | ಪರಿಚಿತಮತಿ ವಿಪ್ರವಂಶಸಂಭೂತಂ ನೋ |
ಡೆ ರಸಾದ್ರ್ರವಾಣಿ ಸಾಧು | ಸ್ವರೂಪನೆನಿಪಂ ವಿದೂಷಕಾಖ್ಯೆಯನಾಳ್ಗುಂ ||

ವಿಭಾವಾನುಭಾವಸಂಚಾರಿಸಾತ್ವಿಕಂಗಳಿಂ ಉತ್ಸಾಹಸ್ಥಾಯಿ ಪುಷ್ಟಮಾಗೆ ವೀರರಸಂ; ಆ ವೀರರಸದಲ್ಲಿ ದಾನವೀರವೆಂದುಂ, ದಯಾವೀರವೆಂದುಂ, ಯುದ್ಧವೀರವೆಂದುಂ ಮೂಱುಭೇದಂ; ಆ ವೀರದೊಂದೊಂದಱೊಳಗೆ ವಾಗ್ವೀರವೆಂದುಂ, ರೂಪವೀರವೆಂದುಂ, ಕ್ರಿಯಾವೀರವೆಂದುಂ ತ್ರಿವಿಧಂ; ಅಂತು ವೀರರಸವೊಂಬತ್ತುತೆಱಂ.

---

## ಉತ್ತರದೇಶದ ಬಸವಲಿಂಗದೇವ ಸು. 1600

ಈತನು ಬಸವೇಶ್ವರಪುರಾಣದ ಕಥಾಸಾಗರ, ಭೈರವೇಶ್ವರಕಾವ್ಯದ ಕಥಾಸಾಗರ, ಉಚಿತಕಥೆಗಳು ಇವುಗಳನ್ನು ಬರೆದಿದ್ದಾನೆ. ಇವನು ವೀರಶೈವಕವಿ; ಷಟ್ಸ್ಥಲ ಚಕ್ರವರ್ತಿ ಚೆನ್ನಬಸವೇಶ್ವರದೇವರ ಕಾರುಣ್ಯದಶಿಶು ಎಂದು ಹೇಳಿಕೊಂಡಿದ್ದಾನೆ. ಇವನ ಕಾಲವು ಭೈರವೇಶ್ವರಕಾವ್ಯವನ್ನು ಬರೆದ ಕಿಕ್ಕೇರಿಯಾರಾಧ್ಯನಂಜುಂಡನ(ಸು.1550) ಕಾಲಕ್ಕಿಂತ ಈಚೆ

ಎಂಬುದು ವ್ಯಕ್ತವಾಗಿಯೇ ಇದೆ. ಸುಮಾರು 1600 ರಲ್ಲಿ ಇವನು ಇದ್ದಿರಬಹುದು.

ಇವನ ಬಸವೇಶ್ವರಪುರಾಣದ ಕಥಾಸಾಗರದಲ್ಲಿ 464 ಕಥೆಗಳಿವೆ. ಈ ಗ್ರಂಥದ ವಿಷಯವಾಗಿ ಕವಿ ಹೀಗೆ ಬರೆದಿದ್ದಾನೆ—

ಬಸವೇಶ್ವರಪುರಾಣದ ಕಥೆಗಳನು ಭಕ್ತಮಾಹೇಶ್ವರರು ಸುಲಭದಲಿ ತಿಳಿವಂತೆ ಕಲ್ಪಿತಕಥೆಗಳಲ್ಲದೆ ಸಕಲಶಿವಪುರಾಣಸಮ್ಮತವಾಗಿ ಕಥಾಸಾಗರವೆಂಬ ಪೆಸರಿಟ್ಟು ಬಸವಾದಿಪ್ರಮಥರ ಕರುಣದಿಂ ಮಾಡಿದೆವು.

ಅಲ್ಲದೆ ಅಷ್ಟಾದಶಪುರಾಣಗಳು, ಭಾರತ, ರಾಮಾಯಣ, ವೀರಶೈವಾಮೃತಪುರಾಣ (1530), ಆರಾಧ್ಯಚಾರಿತ್ರ, ಗಣಾಡಂಬರ, ಸಿಂಗಿರಾಜನಕೃತಿ, ಶಿವತತ್ವಚಿಂತಾಮಣಿ, ಹರೀಶ್ವರದೇವರ ರಗಳೆ, ಸಿದ್ಧರಾಮೇಶ್ವರಚಾರಿತ್ರ, ಶೂನ್ಯಸಂಪಾದನೆ ಮುಂತಾದ ಗ್ರಂಥಗಳನ್ನು ನೋಡಿ ಈ ಕಥೆಗಳನ್ನು ಬರೆದಂತೆ ಹೇಳುತ್ತಾನೆ.

ಭೈರವೇಶ್ವರಕಾವ್ಯದ ಕಥಾಸಾಗರದಲ್ಲಿ 316 ಕಥೆಗಳಿವೆ. ಉಚಿತ ಕಥೆಗಳ ಸಂಖ್ಯೆ 74.

---

## ಸಿದ್ಧಲಿಂಗಶಿವಯೋಗಿ ಸು. 1600

ಈತನು ಭೈರವೇಶ್ವರಪುರಾಣವನ್ನು ಬರೆದಿದ್ದಾನೆ. ಇವನು ವೀರಶೈವಕವಿ; ಇವನ ಗುರು ಚೆನ್ನವೃಷೇಂದ್ರ. ಹಿಂದೆ ನಂಜಯನು ವರ್ಣಕವಾಗಿ ಹೇಳಿದ್ದ ಈ ಕಥೆಯನ್ನು ತಾನು ವಸ್ತುಕವಾಗಿ ರಚಿಸಿದಂತೆ ಹೇಳುತ್ತಾನೆ. ಇವನು ಹೇಳುವ ನಂಜಯನು ಭೈರವೇಶ್ವರಕಾವ್ಯವನ್ನು ಸುಮಾರು 1550ರಲ್ಲಿ ಸಾಂಗತ್ಯದಲ್ಲಿ ಬರೆದಿರುವ ಕಿಕ್ಕೇರಿಯಾರಾಧ್ಯನಂಜುಂಡನಾಗಿರಬೇಕು. ಆದುದರಿಂದ ಕವಿ ಅವನ ಕಾಲಕ್ಕಿಂತ ಈಚೆಯವನು; ಸುಮಾರು 1600ರಲ್ಲಿ ಇದ್ದಿರಬಹುದು.

ಪೂರ್ವಕವಿಗಳಲ್ಲಿ ಹರಿಹರ, ರಾಘವಾಂಕ, ಶಂಕರ, ಮಾಯಿದೇವ, ಮಯೂರ, ಬಾಣ, ಮಲಯರಾಜ, ಭೀಮಕವಿ ಇವರುಗಳನ್ನು ಸ್ಮರಿಸಿದ್ದಾನೆ.

ನರರನ್ನೂ ಸುರರನ್ನೂ ಸ್ತುತಿಸಿ ನರಕಭಾಜನನಾಗುವುದಿಲ್ಲ, ಗಣಂಗಳನ್ನು ನಾಲಗೆ ದಣಿವಂತೆ ಕೀರ್ತಿಸುವೆನು ಎಂದು ಈ ಪದ್ಯದಲ್ಲಿ ಹೇಳುತ್ತಾನೆ—

ಗಣಂಗಳೇಳ್ಗೆಯಂ
ರಸನೆ ದಣಿವಂತೆ ಕೀರ್ತಿಸಿ । ಬೆಸೆದವರ ಕೃಪಾಬ್ಧಿಯಲ್ಲಿ ಮುಳುಗುವೆನಲ್ಲದೆ ।
ಪಶುನರರ ಸುರರ ಕೀರ್ತಿಸಿ ॥ ವಸವಲ್ಲದ ನಿರಯದಲ್ಲಿ ಮುಳುಗಲ್ಕಾಅಂ ॥

## ಇವನ ಗ್ರಂಥ

### ಭೈರವೇಶ್ವರಪುರಾಣ

ಇದಕ್ಕೆ ರಾಜೇಂದ್ರವಿಜಯಪುರಾಣ ಎಂಬ ನಾಮಾಂತರವೂಉಂಟು. ಇದು ಚಂಪೂರೂಪವಾಗಿದೆ. ನಮಗೆ ದೊರೆತ ಅಸಮಗ್ರಪ್ರತಿಯಲ್ಲಿ 20 ಆಶ್ವಾಸಗಳೂ(ಪದ್ಯ 1350) 21ನೆಯ ಆಶ್ವಾಸದಲ್ಲಿ ಸ್ವಲ್ಪಭಾಗವೂ ಇವೆ. ಈ ಗ್ರಂಥದಲ್ಲಿ ಭೈರವರಾಜನೆಂಬ ಶಿವಭಕ್ತನ ಕಥೆ[1] ಹೇಳಿದೆ. ಗ್ರಂಥಾವತಾರದಲ್ಲಿ ಶಿವಸ್ತುತಿ ಇದೆ. ಬಳಿಕ ಕವಿ ಪಾರ್ವತಿ, ಗಣೇಶ, ಸುಬ್ರಹ್ಮಣ್ಯ, ವೀರಭದ್ರ, ಬಸವ, ಚೆನ್ನಬಸವ,ಅಲ್ಲಮಪ್ರಭು, ಸಿದ್ಧಲಿಂಗ,ಮುರಿಗಾಚಾರ್ಯ, ಸ್ವಗುರುಚೆನ್ನವೃಷೇಂದ್ರ, ಮಹದೇವಿಯಕ್ಕ, ನೀಲಾಂಬಿಕೆ ಇವರುಗಳನ್ನು ಕ್ರಮವಾಗಿ ಸ್ತುತಿಸಿದ್ದಾನೆ. ಆಶ್ವಾಸಗಳ ಅಂತ್ಯದಲ್ಲಿ ಈ ಗದ್ಯವಿದೆ—

ಇದು ವಿಧುಪಂಕಜೋದ್ಭವಸುರೇಶ್ವರಮುಖ್ಯಸುರನರೋರಗಶೃಂಗಾರಾತಿಶಯಾನೇಕಮಕುಟತಟಘಟಿತನಿತ್ಯನಿರ್ಮಳ ನಿರ್ವಿಕಲ್ಪಸತ್ಯಸ್ವಯಂಪ್ರಕಾಶಾದ್ವಿತೀಯಪರಮೇಷ್ಠಿಲಿಂಗಚರಣಾರವಿಂದದ್ವಂದ್ವಶಿರಶ್ಶೇಖರ ಸಮ್ಯಗ್ಜ್ಞಾನಸಂಪನ್ನ ಸಿದ್ಧಲಿಂಗ ಶಿವಯೋಗಿವಿರಚಿತ ಶ್ರೀಮದ್ರಾಜೇಂದ್ರವಿಜಯಮಹಾಪುರಾಣದೊಳ್

ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ-

### ಮೇರು

ನೆಱೆದುದು ರತ್ನಸಾನು ರಜತಾಚಲರೋಹಣಶೈಲಮಧ್ಯದೊಳ್ ।
ಸುರನದಿಗಿಟ್ಟ ಪಾವಟಿಗೆಯೋ ಹರಿನಾಲ್ಮೊಗರೊಳ್ ವಿಘಾತಮಂ ॥
ಪರಿಹರಿಸಲ್ಕೆ ಮೂಡಿದುರುಲಿಂಗಮೊ ಎಂದೆನೆ ಸತ್ಪ್ರಕಾಶದಿಂ ।
ಪರಮತಪೋಧನರ್ ನೆಗಟ್ದ ಸತ್ಪದಿಂ ಪರಸಿದ್ಧರೇಳ್ಗೆಯಿಂ ॥

### ಬೇಡನು

ಶರ ಮಿಂಚು ಗುಡುಗೆ ರಾವಂ । ಕರಿ ಜಡದಮುದಾಗೆ ನುಮೌಕ್ತಿಕಂ ಕರಕಂಗಳ್ ।

---

1. 266 ನೆಯ ಪುಟವನ್ನು ನೋಡಿ

ಸುರಿವಾಕಣ್ಣೀರ್ ಸರಿಯಾ | ಗಿರೆ ಶಬರಂ ಚಂಡವಾರುತಂಗೆಣೆಯಾದಂ ||

**ಶಂಖ**

ತಾಯಂ ಕುಂಭೋದ್ಭವಂ ತಾಂ ಕುಡಿದನೞಿದಬಾವಾರ್ಭಕಂ ವಾರ್ಷ್ಣೆಯಕ್ಕಂ |
ಕಾಯಂ ಬೆಳ್ಪಾಯ್ತು ಮತ್ಸೋದರನು ರುಜೆಯುತಂ ಗಂಡರಿಲ್ಲಾದರೇವೆಂ ||
ಬಾಯಂ ಕಚ್ಚುತ್ತಿವೞ್ ತಮ್ಮಡಿ ಪರವಧುವಂ ಬಾಧಿಪಂ ಭಾಳನೇತ್ರಾ |
ಸಾಯಲ್ಕಾಱೆಂ ಕೃಪಾಸಾಗರನೆ ಮೊರೆಯೊ ಎಂಬಂತೆ ಕೂಗಿತ್ತು ಶಂಖಂ ||

ಜೈನವೀರಶೈವವಾದ

ಜಱೆವುದು ಮತವೇ ದೈವವ | ಧರೆಗೀಜಿನನಿಂದಲಧಿಕದೈವಗಳೊಳವೇ |
ಹರನಾದೊಡೆ ಸಂಸಾರಿಯೆ | ಅರುಹಂ ಸಂಸಾರರಹಿತನಿವಗವ ಸರಿಯೇ ||
ಎನೆ ಕೋಪ ಕೊನರೆ ಕೇಳಿಲೊ | ಜಿನ ಪೆಣ್ಣುೞಿದನಿತಕಾಯ್ತೆ ದೇವತ್ವಂ ಭೀ |
ಷ್ಮನುಹನುಮರುೞಿಯರೇ ವಧು | ವನು ಶಿವಗವರೆಣೆಯೆ ಮರುಳೆ ತಿಳಿಯದೆ ನುಡಿವೈ ||
ಗೆಲ್ಲಂ ನಮಗೆಲ್ಲಂ ಜಿನ | ನಲ್ಲದೆ ಶಿವನಿಲ್ಲವೆಂದು ವಾದಿಸೆ ಜೈನರ್ !
ಕಲ್ಲಯನೆಂಬಾಶರಣಂ | ಹಲ್ಲಂ ಮುಱಿವಲ್ಲಿ ಜಿನ್ನನೆಲ್ಲರ್ವನೊ ಪೇೞ್ ||

---

## ಸಂಪಾದನೆಯಸಿದ ವೀರಣಾಚಾರ್ಯ ಸು. 1600

**ಈತನು** ಆಚರಣೆಯಸಂಬಂಧದ ವಚನ, ಲಿಂಗಸ್ತೋತ್ರದ ವಚನ, ಮಿಶ್ರಸ್ತೋತ್ರ, ಸರ್ವಜ್ಞಮೂರ್ತಿಯ ತ್ರಿವಿಧಿ, ಪಾದಸ್ತೋತ್ರ ಇವುಗಳನ್ನು ಸೇರಿಸಿದುದಾಗಿ ತಿಳಿಯುತ್ತದೆ: ಎಂದರೆ ಈ ಗ್ರಂಥಗಳು ಏತತ್ಕೃತವಲ್ಲ; ಇತರಗ್ರಂಥಗಳಿಂದ ಆರಿಸಿ ಜೋಡಿಸಿದ ವಚನಗಳನ್ನೂ ಪದಗಳನ್ನೂ ಒಳಕೊಂಡಿವೆ.

ಇವನು ವೀರಶೈವಕವಿ; ಸಂಸ್ಕೃತದಲ್ಲಿ ಈತನು ಬರೆದಿರುವ ಅನಾದಿ ವೀರಶೈವಾಚಾರಸಂಗ್ರಹದಲ್ಲಿ ಇವನಿಗೆ ವೀರಮಾಹೇಶ್ವರಾಚಾರ್ಯವರ್ಯ, ವೀ

---

1 "ಪ್ರಸನ್ನಶಂಕರಲಿಂಗ" ಎಂದು ಮುಗಿವ 120 ಕಂದಗಳುಳ್ಳ ಒಂದು ಗ್ರಂಥವು ಏತತ್ಕೃತವೆಂದು ಕೆಲವರು ಪ್ರಕಟಿಸಿದ್ದಾರೆ. ಆವ ಆಧಾರದಿಂದಲೋ ತಿಳಿಯದು. ಈ ಗ್ರಂಥದಲ್ಲಿ ಬೇರೆ ಈ ಕವಿಯ ಹೆಸರು ಹೇಳಿಲ್ಲ. ಅಲ್ಲದೆ ನಾವುನೋಡಿದ ಈ ಗ್ರಂಥದ ಓಲೆಯ ಪ್ರತಿಗಳಲ್ಲಿ ಗ್ರಂಥಕ್ಕೆ ಶಂಕರದೇವರ ಕಂದ ಎಂಬ ಹೆಸರು ಹೇಳಿದೆ. ಆದುದರಿಂದ ಈ ಗ್ರಂಥವು ಶಂಕರಶತಕವನ್ನು ಬರೆದ ಶಂಕರದೇವನಿಂದ ರಚಿತವಾಗಿರಬಹುದೆಂದು ನಮಗೆ ತೋರುತ್ತದೆ.

ರಶೈವಷಟ್ಸ್ಥಲಮಾರ್ಗಸ್ಥಾಪನಾಗ್ರಗಣ್ಯ ಎಂಬ ವಿಶೇಷಣಗಳು ಹೇಳಿವೆ. ಇವನು ಎಳಮಲೆಯಗುರುಶಾಂತದೇವನ(ಸು. 1565) ಶಿಷ್ಯನೆಂದು ತಿಳಿವುದರಿಂದ ಇವನ ಕಾಲವು ಸುಮಾರು 1600 ಆಗಬಹುದು. ಸಂಪಾದನೆಯ ಪರ್ವತೇಶ್ವರನ ಚತುರಾಚಾರ್ಯಪುರಾಣದಲ್ಲಿ (1698) ಈತನು "ಜಙಿದು ಶೈವವ ವೀರಶೈವವಂ ಸ್ಥಾಪಿಸಿದಂ" ಎಂದು ಹೇಳಿದೆ

ಇವನಿಂದ ಸಂಕಲಿತವಾದ ಗ್ರಂಥಗಳೊಳಗೆ ಆಚರಣೆಯಸಂಬಂಧದ ವಚನವು 275 ವಚನಗಳನ್ನೂ ಲಿಂಗಸ್ತೋತ್ರದ ವಚನವು 108 ವಚನಗಳನ್ನೂ ಒಳಕೊಂಡಿವೆ, ಮಿಶ್ರಸ್ತೋತ್ರದಲ್ಲಿ ಸಾಂಗತ್ಯದಲ್ಲಿ ಬರೆದ 111 ಪದ್ಯಗಳಿವೆ. ಸರ್ವಜ್ಞಮೂರ್ತಿಯ ತ್ರಿವಿಧಿಯಲ್ಲಿ ಆ ಕವಿಯ ಗ್ರಂಥದಿಂದ ತ್ರಿಪದಿಗಳು ಆರಿಸಲ್ಪಟ್ಟಿವೆ. ಈ ಸರ್ವಜ್ಞಮೂರ್ತಿ ಅಂಬಲೂರಲ್ಲಿ ಹುಟ್ಟಿದ ಸರ್ವಜ್ಞನೇ ಆಗಿದ್ದರೂ ಇರಬಹುದು. ಈತನ ಪಾದಸ್ತೋತ್ರವು ನಮಗೆ ದೊರೆತಿಲ್ಲ. ಮಿಶ್ರಸ್ತೋತ್ರದ ಆರಂಭದಲ್ಲಿ ಈ ಪದ್ಯವಿದೆ—

ನಂದಿಕೇಶ್ವರಭೃಂಗಿ ಸ್ಕಂದಮುಖ್ಯಾಮರರು | ಬಂದೆನ್ನಹೃತ್ಕಮಲದೊಳು |
ನಿಂದು ನಿಮ್ಮಯ ಭೃತ್ಯನೆಂದು ಕೃತಿಯೊಳು ತ | ಪ್ಪೊಂದಿಲ್ಲವೆನೆ ನಡಸುವುದು ||

---

## ಸಂಗನಬಸವೇಶ್ವರ ಸು 1600

ಈತನು ರಥೋದ್ಧರಣವಾಕ್ಯವನ್ನು ಬರೆದಿದ್ದಾನೆ. ಇವನು ವೀರಶೈವಕವಿ. ತನಗೆ ಹಿಂದೆ ಈ ಆಗಮಗಳನ್ನು ಜಕ್ಕಣಾಚಾರ್ಯ, ಮಾಯಿದೇವಪ್ರಭು, ಕೆರೆಯಪದ್ಮರಸ, ಗುಬ್ಬಿಯಮಲ್ಲಣಾರ್ಯ, ಪಾಲ್ಕುರಿಕೆಸೋಮ, ಸೋಮಶಂಭು ಮೊದಲಾದವರು ಸಂಗ್ರಹಿಸಿದರು ಎಂದು ಹೇಳುತ್ತಾನೆ. ಇದರಿಂದ ಕವಿ ಗುಬ್ಬಿಯಮಲ್ಲಣಾರ್ಯನ (1530) ಕಾಲಕ್ಕಿಂತ ಈಚೆಯವನು ಎಂಬುದು ವ್ಯಕ್ತವಾಗುತ್ತದೆ; ಸುಮಾರು 1600ರಲ್ಲಿ ಇದ್ದಿರಬಹುದು.

ತನ್ನ ಗ್ರಂಥದವಿಷಯವಾಗಿ ಹೀಗೆ ಬರೆದಿದ್ದಾನೆ—

ಪೂರ್ವಪುರಾತನರ ಪ್ರಸಾದವಾಕ್ಯದಿಂದಾದ ಉದ್ಧರಣೆಪಟಲವನು ರಥೋದ್ಧರಣವಾಕ್ಯವನು ಶ್ರುತಿಸ್ಮೃತ್ಯುಪನಿಷದಾಗಮಪುರಾಣವಚನಾರ್ಥಂಗಳಿಂ ವೃತ್ತಂಗಳಿಂ ತಾತ್ಪರ್ಯಕದಿಂ ಕೆಲವು ಗ್ರಂಥಂಗಳಿಂ ನಿರೂಪಿಸಿದೆವು.

ಈ ಗ್ರಂಥವು ವೇದಾಂತಬೋಧಕವಾಗಿದೆ. ದೇಹವನ್ನು ರಥಕ್ಕೆ ಹೋಲಿಸಿರುವಂತೆ ತೋರುತ್ತದೆ. ಇದರಿಂದ ಸ್ವಲ್ಪಭಾಗವನ್ನು ತೆಗೆದು ಬರೆಯುತ್ತೇವೆ—

ಪಲ್ಲವಿ|| ಗುರುರಾಯನೊಲಿದವ್ಮೇಲಮ್ಮ |
ಎನ್ನ ಶರೀರದಯಾತ್ರೆಯ ಮಾಡುವೆನಮ್ಮ ||
ಗಾಲಿನಾಲ್ಕಱ ತೇರಿಗಮ್ಮ | ಮೇಲೆ ಕೀಲಕುಂಡಲಿಯೆಂಬ ಕೀಲಿಟ್ಟೆನಮ್ಮ |
ಮೇಲೇಱುನೆಲೆಗಳಮ್ಮ | ಆದಕೆ ಬಾಲಸರ್ಪವೂರ್ಧ್ವಮಿಣಿಯು ಕಾಣಮ್ಮ ||

---

## ಪ್ರಧಾನಿ ತಿರುಮಲಾರ್ಯ ಸು. 1600

ಈತನು ಕರ್ಣವೃತ್ತಾಂತಕಥೆಯನ್ನು ಬರೆದಿದ್ದಾನೆ. ಇವನು ಶ್ರೀವೈಷ್ಣವಕವಿ. ಮೈಸೂರುದೊರೆಯಾದ ರಾಜಒಡೆಯರಲ್ಲಿ(1578-1617) ಪ್ರಧಾನಿಯಾಗಿದ್ದನೆಂದೂ ಇವನ ಮಗನ ದೌಹಿತ್ರನೇ ಚಿಕ್ಕದೇವರಾಜನಲ್ಲಿ (1672-1704) ಮಂತ್ರಿಯಾಗಿದ್ದ ತಿರುಮಲಾರ್ಯನೆಂದೂ ಕೆಲವರು ಹೇಳುತ್ತಾರೆ. ಇದು ನಿಜವಾಗಿದ್ದಲ್ಲಿ ಈತನ ಕಾಲವು ಸುಮಾರು 1600 ಆಗಬಹುದು.

ಇವನ ಗ್ರಂಥ

### ಕರ್ಣವೃತ್ತಾಂತಕಥೆ

ಇದು ಸಾಂಗತ್ಯದಲ್ಲಿ ಬರೆದಿದೆ; ಸಂಧಿ 4 ಎಂದು ಮೆ|| ರೈಸ್ ಬರೆದಿದ್ದಾರೆ; ಅಚ್ಚಾಗಿರುವ ಅಸಮಗ್ರಪ್ರತಿಯಲ್ಲಿ 11 ಸಂಧಿಗಳೂ(366 ಪದ್ಯಗಳು) 12 ನೆಯ ಸಂಧಿಯಲ್ಲಿ 14 ಪದ್ಯಗಳೂ ಇವೆ. ಇದರಲ್ಲಿ ಮಹಾಭಾರತ ಶಾಂತಿಪರ್ವದ ಆದಿಭಾಗದಲ್ಲಿ ಹೇಳಿರುವ ಕರ್ಣವೃತ್ತಾಂತವು ನಿರೂಪಿಸಿದೆ.

ಗ್ರಂಥಾವತಾರದಲ್ಲಿ ಪಶ್ಚಿಮರಂಗನಾಥಸ್ತುತಿಯೂ ಲಕ್ಷ್ಮೀ ಸ್ತುತಿಯೂ ಇವೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ:—

#### ವಿಷ್ಣುಸ್ತುತಿ

ಜಳಧಿಸುತೆಯ ಮೆಯ್ಯ ಪೊಗರ ಕುಂದಣದೊಂದು| ಕಳೆಯೊಳೆಸೆವ ನೀಲಮಣಿಯ|
ಪೞನುಡಿನೆಂಡಿರ ತೊಂಡಿಲನೆನ್ನೆದೆ | ಪಳಿಕುಭರಣಿಯೊಳಿಡುವೆನು ||
ಪೊಳೆವ ಪಣೆಯ ಪೊಗರುಗುವ ನುಣ್ಗಲ್ಲದ | ಪೊಳೆವ ನಗೆಯಮೊನೆವಲ್ಲ |
ತಳಿರುದುಟಿಯ ತಾವರೆಗಣ್ಣಿನ ಮೊಗ | ಕೆಳಸಿ ಮುಂಬರಿದು ಮುದ್ದಿಪೆನು ||

ಅಡಿಯ ಕೆಂಪಿಗೆ ನುಣ್ಗೊಡೆಯ ಬಿಣ್ಪಿಗೆ ಪೊ |ನ್ನುಡೆಯ ಪೆಂಪಿಗೆ ಪೂದಳೆದ |
ಪೊಡೆಯತಣ್ಪಿಗೆ ಮೊಗದೆಡೆಯ ಸೊಂಪಿಗೆ ಸಿರಿ|ಮುಡಿಯ ಕಂಪಿಗೆ ಮೋಹಿಸುವೆನು||

ಧರ್ಮರಾಜನ ಉಕ್ತಿ

ನಡೆನುಡಿನೆನೆಹುಗಳೊಳು ಪರಹಿಂಸೆಯು | ನೊಡಬಡದಿರವಿಗೀಡುಂಟೇ |
ತಡಸಿದಾಪತ್ತಿನೊಳಾದರು ಪುಸಿಮಾತ | ನುಡಿಯದುದಕೆ ಸರಿಯುಂಟೇ ||
ಪುಟ್ಟುಪೊಂದುಗಳ ಪೋರಟೆ ಪೊದ್ದದು ಪಾಪ| ಮುಟ್ಟದು ಮೋಹ ಮುಸುಕದು|
ನೆಟ್ಟನೆ ವೈರಾಗ್ಯಮಿರೆಯಿಹಪರಸೌಖ್ಯ | ಬಿಟ್ಟಿತಪ್ಪದು ತಪ್ಪದಿದು ||

ಅರ್ಜುನನ ಉಕ್ತಿ

ಧನವಿಲ್ಲದಿರೆ ಧೈರ್ಯಕೆಟ್ಟು ತಲ್ಲಣ ಹುಟ್ಟಿ|ಮನಕುಂದಿ ಮತಿ ಮಸುಳುವುದು|
ತನಿವೇಸಗೆಯೊಳು ತೊಱೆನೀರಂತೆ ನಿ | ರ್ಧನರ ಗೆಯ್ಮೆಗಳಡಗುವುವು ||

ಭೀಮನ ಉಕ್ತಿ

ಪರಿಕಿಸೆ ಸನ್ಯಾಸವೆಂಬುದು ಜಗದೊಳು | ಪರಿಪರಿಯೊಳು ಭಂಗವಡೆದು |
ಪುರುಳುಗೆಟ್ಟೊಡಲ ಪೊರೆಯಲಱಿಯದವರ | ಪರಮನಾಸ್ತಿಕವಾದವೈಸೆ ||

---

ಸೋಮನಾಥಕವಿ ಸು 1600.

ಈತನು ಅಕ್ರೂರಚರಿತ್ರೆಯನ್ನು ಬರೆದಿದ್ದಾನೆ. ಇವನು ಬ್ರಾಹ್ಮಣ ಕವಿ. ಪೂರ್ವಕವಿಗಳಲ್ಲಿಕುಮಾರವ್ಯಾಸನನ್ನು (ಸು 1430) ಸ್ತುತಿಸಿರುವುದರಿಂದ ಇವನಕಾಲವು ಸುಮಾರು 1600 ಆಗಿರಬಹುದೆಂದು ತೋರುತ್ತದೆ.

ಇವನ ಗ್ರಂಥ

ಅಕ್ರೂರಚರಿತ್ರೆ

ಇದು ಭಾಮಿನೀಷಟ್ಪದಿಯಲ್ಲಿ ಬರೆದಿದೆ; ಸಂಧಿ 9, ಪದ್ಯ 501. ಇದರಲ್ಲಿ ಶ್ರೀಯರಸನು ಅಕ್ರೂರನಿಗೆ ತನ್ನ ನಿಜವನ್ನು ತೋರಿಸಿದ ಕಥೆ ಹೇಳಿದೆ. ಇದರಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ---

ಗೊಲ್ಲರು

ಕಗಡುಗಣ್ಣೆಯ ಮುರಿವ ಕಡೆಗೋ ' ಲುಗಳ ತಿದ್ದುವ ದಾವಣಿಯ ಗೂಂ |
ಟಗಳ ಕೆತ್ತುವ ಮೂಗುನೇಣಿನ ಹುರಿಯ ಪಿಡಿದುಡಿವ ||
ಮೊಗವಡವ ಮಾಡುವ ಮನೆಯ ಹ | ಟ್ಟಿಗಳ ಕುಱಿತೆವರುಗಳ ತಿದ್ದುವ |
ಬಗೆಯಲೊಪ್ಪುವ ಗೋವಳರನಕ್ರೂರನೀಕ್ಷಿಸಿದ ||

### ಕೋತಿ

ಮರಮರಕೆ ಲಂಘಿಸುವ ಬೆರಳಲಿ | ತಲೆಯ ತುಱಿಸುತ ಕಳವಳಿಸಿ ಪ |
ಲ್ಕಿರಿದು ಮಱಿಗಳನೆತ್ತಿ ಮುದ್ದಿಸಿ ಪರಸಿ ತೂಪಿರಿವ |
ತರುಣಿಯರನೇಡಿಸುವ ಪಣ್ಗಳ | ತಱಿದು ದೆಸೆದೆಸೆಗಿಡುವ ಕಪಿಗಳ |
ನೆರವಿಯಂ ನೆಱೆ ಕಂಡು ದನುಜಾರಾತಿ ನಗುತಿರ್ದ ||

### ಸ್ತ್ರೀವರ್ಣನೆ

ನುಡಿಗೆ ಬೆದಱುವ ಅಧರ ವೇಣಿಗೆ | ನಡುಗುತಿಹ ಮುಖ ಮುಖಕೆ ಪದತಳ |
ನಡೆಗೆ ತೊಡೆ ನಡುವಿಂಗೆ ದಂತಿ ರವಕ್ಕೆ ಕುಚಯುಗ್ಮ ||
ಇಡಿದ ತೋಳಿಗೆ ನಯನ ನಾಸಿಕ | ದೆಡೆಗೆ ಕುಂತಳ ನಖಕೆ ತನು ನಡು |
ನಡುಗುತಿಹ ಭೀತಿಯಲಿ ಬಂದಳು ಹರಿದು ಹರಿಯೆಡೆಗೆ ||

### ನೀತಿ

ಸಿರಿಗೆ ಹಿಗ್ಗದೆ ಬಡತನಕೆ ಜ | ರ್ಝರಿತನಾಗದೆ ಪರರು ಕೀರ್ತಿಸೆ |
ಬೆಱೆತಿರದೆ ನಿಂದಿಸಿದವರನುಱೆ ಮರಳಿ ನಿಂದಿಸದೆ ||
ಹಿರಿಯರಲಿ ಗರ್ವಿಸದೆ ತನುವನು ಸಿರಿದು ವಿಶ್ವಾಸಿಸದೆ ಸತ್ವವ |
ತೊಱೆಯದಿಹ ಸತ್ಪುರುಷನೆನ್ನವನಾತ ಕೇಳೆಂದ ||
ಹಗೆ ಹಸುಳೆಯೆಂದುಱುಹಲಾಗದು | ಹಗೆ ಶರಣುಹೊಗೆ ನಂಬಲಾಗದು |
ಹಗೆ ಹಿತವವನುಕರಿಸಿ ಮನ್ನಿಸೆ ಹಿಗ್ಗಿ ನ್ಯನುಱೆಮ ||
ಹಗೆಯಲೆಚ್ಚಱುಗುಂದಲಾಗದು | ಹಗೆಯ ಹಿತವರ ನುಡಿಸಲಾಗದು |
ಹಗೆ ತನಗೆ ಮರಣಾಂತವೆಲೆಯಕ್ರೂರ ಕೇಳೆಂದ ||
ಹಗೆಯನುರಗನ ಜಾರವನಿತೆಯ | ನಗಡುಮಕ್ಕಳ ನಳಿವ ರೋಗವ |
ಜಗಳವಾಡುವ ನೆರೆಯ ಮನ್ನಿಸಲಱಿಯದವನಿಪರ ||
ತಗರ ನೆರಪಿಯ ಸೋರುತಿಹ ಮಾ | ಳಿಗೆಯ ನಂಬಿದ ಮೂರ್ಖನಿಕರಕೆ |
ವಿಗಡ ತಪ್ಪದು ಕೆಲವುದಿನಕಕ್ರೂರ ಕೇಳೆಂದ ||

---

### ಶೃಂಗಾರಕವಿ ಹಂಸರಾಜ ಸು. 1600

ಈತನು ರತ್ನಾಕರಾಧೀಶ್ವರಶತಕವನ್ನು ಬರೆದಿದ್ದಾನೆ. ಇವನು ಜೈನಕವಿ. ಶೃಂಗಾರಕವಿ ಎಂದು ಹೇಳಿಕೊಳ್ಳುವುದರಿಂದ ವೈರಾಗ್ಯಪ್ರಧಾನವಾದ ಈ ಗ್ರಂಥವಲ್ಲದೆ ಬೇರೆ ಗ್ರಂಥಗಳನ್ನೂ ಬರೆದಿರಬಹುದು. ಪೂರ್ವ

ಕವಿಗಳಲ್ಲಿ ಮಧುರನನ್ನು[1] (ಸು. 1385) ಸ್ಮರಿಸುವುದರಿಂದ ಕವಿ 1385 ಕ್ಕಿಂತ ಈಚೆಯವನೆಂಬುದು ವ್ಯಕ್ತವಾಗಿದೆ. ತನ್ನ ಗುರು ದೇವೇಂದ್ರಕೀರ್ತಿ ಎಂದು ಹೇಳುತ್ತಾನೆ. ಶ್ರವಣಬೆಳ್ಗೊಳದ ಜೈನಮಠದಲ್ಲಿರುವ ಪ್ರಮೇಯ ಕಮಲಮಾರ್ತಂಡದ ಒಂದುಪ್ರತಿಯ ಅಂತ್ಯದಲ್ಲಿ ಆಪುಸ್ತಕವನ್ನು ಶಕ 1538 ಆನಂದವರ್ಷದಲ್ಲಿ-ಎಂದರೆ 1614ರಲ್ಲಿ-ಬರೆದಂತೆಯೂ ಆಕಾಲದಲ್ಲಿ " ಶ್ರೀಮೂಲಸಂಘಸರಸ್ವತೀಗಚ್ಛಕುಂದಕುಂದಾನ್ವಯ ಶ್ರೀಮದ್ರಾಯರಾಜ ಗುರುವಸುಂಧರಾಚಾರ್ಯ ಮಹಾವಾದವಾದೀಶ್ವರ ರಾಯವಾದಿಪಿತಾಮಹ ಸಕ ಲವಿದ್ಯಾಸಾರ್ವಭೌಮಾದ್ಯನೇಕಾನ್ವರ್ಥಬಿರುದಾವಲೀವಿರಾಜಮಾನ" ನಾದ ಒಬ್ಬ ದೇವೇಂದ್ರಕೀರ್ತಿ ಇದ್ದಂತೆ ಹೇಳಿದೆ. ಇವನೇ ಕವಿಯ ಗುರುವಾ ಗಿದ್ದಿರಬಹುದು. ಹಾಗಿದ್ದ ಪಕ್ಷದಲ್ಲಿ ಕವಿಯ ಕಾಲವು ಸುಮಾರು 1600 ಆಗಬಹುದು. ಈ ಶತಕವನ್ನು ರತ್ನಾಕರವರ್ಣಿ[2] ಬರೆದುದಾಗಿ ಪ್ರತೀತಿ ಯಿದೆ. ಆದರೆ ಇವನ ಗುರು ಚಾರುಕೀರ್ತಿಯೆಂದೂ ಹಂಸರಾಜನ ಗುರು ದೇವೇಂದ್ರಕೀರ್ತಿಯೆಂದೂ ತಿಳಿವುದರಿಂದ ಈ ಶತಕವು ತತ್ಕವಿಕೃತ ವಲ್ಲವೆಂದು ತೋರುತ್ತದೆ.

ಪೂರ್ವಕವಿಗಳಲ್ಲಿ ಅಗ್ಗಳ, ನೇಮಿಚಂದ್ರ, ರನ್ನ, ಕುಮುದೇಂದು, ಮ.ಧುರ, ಜಿನಾಚಾರ್ಯ ಇವರುಗಳನ್ನು ಸ್ಮರಿಸಿದ್ದಾನೆ.

ಇವನ ಗ್ರಂಥ

ರತ್ನಾಕರಾಧೀಶ್ವರಶತಕ

ಇದರಲ್ಲಿ 125 ವೃತ್ತಗಳಿವೆ. ಪ್ರತಿಪದ್ಯವೂ ರತ್ನಾಕರಾಧೀಶ್ವರ ಎಂದು ಮುಗಿಯುತ್ತದೆ. ಕೊನೆಯಲ್ಲಿರುವ

ವೈರಾಗ್ಯನೀತಿಯಾತ್ಮವಿ | ಚಾರಂ ತಾಂ ಬಗೆದು ನೋಡೆ ರಾಜಿಸುಗುಂ ಶೃಂ |
ಗಾರಕವಿಹಂಸರಾಜಂ | ಪೂರಿಸಿದ ಸಪಾದಶತಕರತ್ನಾಕರದೊಳ್ ||

ಎಂಬ ಕಂದದಲ್ಲಿ ಈ ಗ್ರಂಥದಲ್ಲಿ ಪ್ರತಿಪಾದಿತವಾದ ವಿಷಯಗಳು ಹೇಳಿವೆ. ಗ್ರಂಥಾಂತ್ಯದಲ್ಲಿ ಈ ಗದ್ಯವಿದೆ---

ಶ್ರೀಮದ್ದೇವೇಂದ್ರಕೀರ್ತಿಯೋಗೀಶ್ವರಪಾದಾಂಭೋಜಭೃಂಗಾಯಮಾನ ಶೃಂ ಗಾರಕವಿಹಂಸರಾಜವಿರಚಿತಮಪ್ಪ ರತ್ನಾಕರಾಧೀಶ್ವರಸಪಾದಶತಕಂ ಸಂಪೂರ್ಣಂ.

---

1. ಈಗ ಅಚ್ಚಾಗಿರುವ ಈ ಗ್ರಂಥದಲ್ಲಿ ಮಧುರನ ಹೆಸರು ದೊರೆವುದಿಲ್ಲ. ನಾವು ನೋಡಿದ ಕೆಲವು ಓಲೆಯ ಪ್ರತಿಗಳಲ್ಲಿ ಆ ಹೆಸರು ಹೇಳಿದೆ.

2. 274 ನೆಯ ಪುಟವನ್ನು ನೋಡಿ.

ಇದರಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ—

ಶಾಸ್ತ್ರಂ ಬಂದೊಡೆ ಶಾಂತಿ ಸ್ವೈರಣೆ ನಿಗರ್ವಂ ನೀತಿ ಮೆಲ್ಪಾತು ಮು |
ಕ್ತಿಸ್ತ್ರೀಚಿಂತೆ ನಿಜಾತ್ಮಚಿಂತೆ ನಿಲವೇಳ್ಕುಂತಲ್ಲದಾಶಾಸ್ತ್ರದಿಂ ||
ದುಸ್ತ್ರೀಚಿಂತನೆ ದುರ್ಮುಖಂ ಕಲಹಮುದ್ಗರ್ವಂ ಮನಂಗೊಂಡೊಡಾ |
ಶಾಸ್ತ್ರಂ ಶಸ್ತ್ರಮೆ ಶಾಸ್ತ್ರಿ ಶಸ್ತ್ರಿಕನಲಾ ರತ್ನಾಕರಾಧೀಶ್ವರಾ ||

ಪುಣ್ಯಂಗೆಯ್ಯದೆ ಪೂರ್ವದೊಳ್ ಒಱಱದೆ ತಾನೀಗಳ್ ಮನಂ ನೋಯೆ ಲಾ |
ವಣ್ಯಕ್ಕಾಭರಣಕ್ಕೆ ಭೋಗಕೆನಸುಂ ರಾಗಕ್ಕೆ ಚಾಗಕ್ಕೆ ಕಾ ||
ರುಣ್ಯಕ್ಕಗ್ಗದ ಲಕ್ಷ್ಮಿಗಂ ಬಯಸಿ ಬಾಯಂ ಬಿಟ್ಟು ಕಾಂಕ್ಷಾನುಹಾ |
ರಣ್ಯಾಂಬೊಕ್ಕಕಟೇಕೆ ಚಿಂತಿಸುವರೋ ರತ್ನಾಕರಾಧೀಶ್ವರಾ ||

ಅಱಿವಿಂದೀಕ್ಷಿಸಲಕ್ಕುಮಾತ್ಮನಿರವಂ ದೇಹಂಬೊಲೀಕಣ್ಗೆ ತಾಂ |
ಗುಱಿಯಾಗಂ ಶಿಲೆಯೊಳ್ ಸುವರ್ಣಮರಲೊಳ್ ಸೌರಭ್ಯಮಾಕ್ಷೀರದೊಳ್ ||
ನಱುನೆಯ್ ಕಾಷ್ಠದೊಳಗ್ನಿಯಿರ್ಪತೆಱದಿಂದೀಮೆಯ್ಯೊಳೊಂದಿರ್ಪನೆಂ |
ದಱಿದಭ್ಯಾಸಿಸೆ ಕಾಣ್ಬುಮೆಂಬಱಿಪಿದೈ ರತ್ನಾಕರಾಧೀಶ್ವರಾ ||

ನರರೊಳ್ ಪುಟ್ಟಿ ನರೇಂದ್ರನಾದ ದಿನದೊಳ್ ಸದ್ಧರ್ಮಮಂ ಸನ್ಮುನೀ |
ಶ್ವರರಂ ಭವ್ಯರನೊಲ್ದು ಮನ್ನಿಸಿಯನಾಥರ್ಗಾಶ್ರಿತರ್ಗೀಯುತುಂ ||
ಪರಿವಾರಪ್ರಜೆಗಳ್ಗೆ ತಾಯತೆಱದಿಂದೋವುತ್ತುಮಿರ್ಪಂ ಧರಾ |
ವರನಿಂದಾಬರ್ದಿಲಕ್ಕೆ ನಾಳಿನವನೈ ರತ್ನಾಕರಾಧೀಶ್ವರಾ ||

---

## ದೇವೋತ್ತಮ, ಸು. 1600

ಈತನು ನಾನಾರ್ಥರತ್ನಾಕರವನ್ನು ಬರೆದಿದ್ದಾನೆ. ಇವನು ಜೈನ ಕವಿ; ದ್ವಿಜವಂಶಾರ್ಣವಪೂರ್ಣಚಂದ್ರನೆನಿಪೀದೇವೋತ್ತಮಂ ಎಂದು ಹೇಳಿಕೊಂಡಿದ್ದಾನೆ. ತನಗೆ ಹಿಂದೆ ಇದ್ದ ನಿಘಂಟುಕಾರರನ್ನು ಈ ಪದ್ಯ ಭಾಗದಲ್ಲಿ ಹೇಳಿದ್ದಾನೆ--

ನಿಜಗೋಪಾಲಧನಂಜಯಾಭಿನವಮಾಹಂ ಭಾಗುರೀನಾಗವ |
ರ್ಮಜಯಂತಾಮರಶಬ್ದಮಂಜರಿಬಲಾದ್ಯುಕ್ತಾಭಿಧಾನಾರ್ಥಮಂ ||

ಇಲ್ಲಿ ಹೇಳಿರುವ ಶಬ್ದಮಂಜರಿಯೆಂಬುದು ವಿರಕ್ತತೋಂಟದಾರ್ಯ ನಿಂದ (ಸು. 1560) ರಚಿತವಾದ ಕರ್ಣಾಟಕಶಬ್ದಮಂಜರಿಯಾಗಿರಬಹು

ದೋ ಏನೋ ತಿಳಿಯದು. ಕವಿಯ ಕಾಲವು ಸುಮಾರು 1600 ಆಗಿರಬಹುದೆಂದು ಊಹಿಸುತ್ತೇವೆ.

ಇವನ ಗ್ರಂಥ

ನಾನಾರ್ಥರತ್ನಾಕರ

ಇದರಲ್ಲಿ ಸಂಸ್ಕೃತಶಬ್ದಗಳ ನಾನಾರ್ಥಗಳು ಹೇಳಿವೆ; 169 ವೃತ್ತಗಳಿವೆ. ಇದರ ಉತ್ಕೃಷ್ಟತೆಯನ್ನು ಕವಿ ಈ ಪದ್ಯದಲ್ಲಿಹೇಳಿದ್ದಾನೆ--

ಜಗದೊಳ್ ಜಾಣರ ಮೆಚ್ಚು ಸತ್ಕವಿಸಮೂಹಕ್ಕೈದೆ ತಾಯ್ನಾಡು ವಾ |
ಗ್ಮಿಗಳಾನಂದರಸಾಧಿವಾಸ ಗಮಕಿಸ್ತೋಮಕ್ಕೆ ಸುಪ್ರೀತಿ ವಾ ||
ದಿಗಳಾವಾಸನಿಧಾನ ದುರ್ಜನಮನೋಂಭೋಜಾತಶುಭ್ರಾಂಶುವೆಂ |
ಬ ಗುಣವ್ರಾತದೆ ಪೆಂಪುವೆತ್ತು ಮೆಱೆಗುಂ ನಾನಾರ್ಥರತ್ನಾಕರಂ ||

ಗ್ರಂಥಾವತಾರದಲ್ಲಿ ಜಿನಸ್ತುತಿಯೂ ಸರಸ್ವತೀಸ್ತುತಿಯೂ ಇವೆ. ಇದರಿಂದ ಒಂದೆರಡು ಪದ್ಯಗಳನ್ನು ತೆಗೆದುಬರೆಯುತ್ತೇವೆ-

ಕಾಲದೊಳಂಬುಜಾಸನನೊಳುತ್ತಮನೊಳ್ ಕವಿಯೊಳ್ ವಿಧಾನದೊಳ್ |
ಮೇಳನೊಳಂ ವಿಚಕ್ಷಣನೊಳಂ ಶ್ರುತಿಯೊಳ್ ವಿಧಿಶಬ್ದಮಕ್ಕು ಶುಂ ||
ಡಾಲಕರಾಗ್ರದೊಳ್ ಶ್ರವಣಕುಂಡಲದೊಳ್ ವನಜಾತಮಧ್ಯದೊಳ್ |
ಬಾಲೆಯೊಳಾಹವಂಗಳೊಳೆ ತೀರ್ಥದೊಳಂ ನಿಜಕರ್ಣಿಕಾಹ್ವಯಂ ||
ನೋವುಂ ಬಲ್ಲತನಂ ವಿಚಾರಿಸುವುದಿಂತುಂ ವೇದನಾವಾಚಕಂ |
ಸಾವುಂ ನಿಂದೆಭಗಂಗಳೆಂಬಿನಿತು ಸಂಬಾಧಾಹ್ವಯಂ ಮೋಹಮೂ ||
ರ್ಛಾವೇಗಂ ಕಡುಮೂರ್ಖನಜ್ಞತೆಗಳುಂ ದುರ್ಮೋಹಮಕ್ಕುಂ ಧನಂ |
ಜೀವಂ ಶಬ್ದನಿರೂಪಣಂ ವಿಮಲಯೋಗಂ ತಾವಿವರ್ಥಾಂಕಿತಂ ||

---

## ಕವಿವಿಟ್ಠಲ ಸು. 1600

ಈತನು ಅಮರಕೋಶಕ್ಕೆ ಕನ್ನಡವ್ಯಾಖ್ಯಾನವನ್ನು ಬರೆದಿದ್ದಾನೆ. ಇವನು ಬ್ರಾಹ್ಮಣಕವಿ; ವಾದಿಮೃಗೇಂದ್ರನಾದ ರಾಮಭಟ್ಟನ ಪೌತ್ರನು; ಸಾಹಿತ್ಯವನಚೈತ್ರನಾದ ದೇವರನ ಪುತ್ರನು[1]. ಇವನನ್ನು ಅಮರಸಿಂಹನ

1 ಪೌತ್ರೋ ವಾದಿಮೃಗೇಂದ್ರಸ್ಯ ರಾಮಭಟ್ಟವಿಪಶ್ಚಿತಃ |
ಸಾಹಿತ್ಯವನಚೈತ್ರಸ್ಯ ದೇವರಸ್ಯ ತನೂಭವಃ || ಕವಿವಿಟ್ಠಲಸಂಜ್ಞೋಹಂ

ಮತ್ತು ಸರಸ್ವತಿಯ ಅಪರಾವತಾರವೆಂದು ಸ್ತುತಿಸಿರುವುದರಿಂದ[1] ಇವನು ಪ್ರಸಿದ್ಧಕವಿಯಾಗಿದ್ದಂತೆ ತೋರುತ್ತದೆ. ಇನ್ನಾವ ಗ್ರಂಥಗಳನ್ನು ಬರೆದಿದ್ದಾನೆಯೋ ತಿಳಿಯದು.

ಈತನ ಅಮರಕೋಶಟೀಕೆಯನ್ನು ಶಾಲ್ಯದ ಕೃಷ್ಣರಾಜನು (1769) 1775 ರಲ್ಲಿ ಪ್ರತಿಮಾಡಿಸಂತೆ ಆ ಟೀಕೆಯ ಒಂದುಪ್ರತಿಯ ಕೊನೆಯಲ್ಲಿರುವ

ಏಟ್ಟಲವಿದ್ವನ್ನಿರ್ಮಿತಟೀಕಾ ಲಿಖಿತಾಮರಾಖ್ಯಕೋಶಸ್ಯ |
ಕೃಷ್ಣಕ್ಷಿತಿಪತಿನೇಯಂ ಮನ್ಮಥಸಂವತ್ಸರೇ ಶಿವಂ ನಭಸಿ ||

ಎಂಬ ಪದ್ಯದಿಂದ ತಿಳಿವುದರಿಂದ ಇವನು ಶಾಲ್ಯದಕೃಷ್ಣರಾಜನಿಗಿಂತ ಹಿಂದೆ ಇದ್ದವನೆಂಬುದು ವ್ಯಕ್ತವಾಗುತ್ತದೆ; ಸುಮಾರು 1600ರಲ್ಲಿ ಇದ್ದಿರಬಹುದೆಂದು ತೋರುತ್ತದೆ.

---

## ಪಾಯಣ್ಣವ್ರತಿ. ಸು. 1600

ಇವನು ಸಂಯಕ್ತ್ವಕೌಮುದಿಯನ್ನು ಬರೆದಿದ್ದಾನೆ. ಈತನು ಜೈನಕವಿ; ಇವನ ಸ್ಥಳ ಪೆನಗೊಂಡೆದೇಶದಲ್ಲಿಯ ನಂದಿಯಪುರ, ತಂದೆ ಗುಣಮಣಿಮ್ಮ ಬಣಜಿಗಸೆಟ್ಟಿ, ತಾಯಿ ಕೆಂಚಮ. ಇವನು ಭವ್ಯರಿಗೆ ಧರ್ಮಕಥೆಯನ್ನು ಓದಿ ಹೇಳುವ ಉಪಾಧ್ಯಾಯನಾಗಿದ್ದನು. ಬಾಲ್ಯದಲ್ಲಿಯೇ ಭಾರತಿಯ ವರದಿಂದ ಕವಿಯಾಗಿ ಹೆಂಗಳ ಮೋಹದ ಜಾಲಕ್ಕೆ ಸಿಲ್ಕದೆ 55 ವರ್ಷವಿದ್ದು ಆ ಮೇಲೆ ಸೇನಗಣದ ಲಕ್ಷ್ಮೀಸೇನಮುನಿಯಿಂದ ದೀಕ್ಷೆಯನ್ನು ಪಡೆದಂತೆಯೂ ಪಾರ್ಶ್ವನಾಥನ ಬಸದಿಯಲ್ಲಿ ದೀಕ್ಷೆಯನ್ನು ಪಡೆದುದರಿಂದ ಪಾರ್ಶ್ವವರ್ಣಿ ಎಂಬ ಹೆಸರಾದಂತೆಯೂ ಹೇಳುತ್ತಾನೆ. ಈತನಿಗೆ ಪಾಯಣ್ಣವ್ರತಿ ಎಂಬ ಹೆಸರೂ ಉಂಟು. ಒಬ್ಬ ಪಾಯಣಮುನಿ ಸನತ್ಕುಮಾರಚರಿತೆಯನ್ನು 1606 ರಲ್ಲಿ ಬರೆದಿದ್ದಾನೆ. ಆದರೆ ಅವನು ಶ್ರೀರಂಗ

---

1 ಜಿಹ್ವಾಪಲ್ಲವಸಂಸ್ತರೇಷು ಸುಧಿಯಾಂ ದಂತಪ್ರಭಾಚಂದನೈಃ |
ಬಿಂಬೋಷ್ಠವ್ಯಜನೇನ ಚೋಪಚರಿತೋ ಯದ್ವಿಪ್ರಲಂಭಜ್ವರಃ ||
ಜಾನೀಮೋಮರಸಿಂಹಮೇವ ತಮಿಮಂ ? ಸಂಯಾಂಜತೀ ಸಾಂಪ್ರತಂ |
ವಾಣೀ ಸಂದತಿ ಏಟ್ಟಲಸ್ಯ ವಪುಷಾ ಭೂಯೋವತೀರ್ಣಾ ಭುವಿ ||

ಪಟ್ಟಣದವನೆಂದು ತಿಳಿವುದರಿಂದ ಏತತ್ಕವಿಭಿನ್ನನೆಂದು ತೋರುತ್ತದೆ. ಇವನ ಕಾಲವು ಸುಮಾರು 1600 ಆಗಿರಬಹುದು.

ಇವನ ಗ್ರಂಥ

ಸಂಯಕ್ತ್ವಕೌಮುದಿ

ಇದು ಸಾಂಗತ್ಯದಲ್ಲಿ ಬರೆದಿದೆ; ಸಂಧಿ 18, ಪದ್ಯ 1989. ದಾನ, ಪೂಜೆ, ಶೀಲ, ಉಪವಾಸ, ಈ ನಾಲ್ಕು ಮುಕ್ತಿಪಥ; ಇವೇ ಸಂಯಕ್ತ್ವ; ಈ ಸಂಯಕ್ತ್ವದಿಂದ ಸದ್ಗತಿಯನ್ನು ಪಡೆದವರ ಕಥೆಗಳನ್ನು ಕವಿ ಈ ಗ್ರಂಥದಲ್ಲಿ ವಿವರಿಸಿದ್ದಾನೆ. ಈ ಗ್ರಂಥದ ವಿಷಯವಾಗಿ ಹೀಗೆ ಹೇಳಿದ್ದಾನೆ.-

ಇದು ಭವ್ಯಜನಚಿತ್ತಕುವಲಯಚಂದ್ರಮ | ಇದು ಸಜ್ಜನರ ಕರ್ಣಾಭರಣ |
ಇದು ಮುಕ್ತಿಸತಿಯ ಠಾವೆನಿಸುವ ವಿತರಣ | ಇದು ಕೇಳ್ದರ ಪಾಪಹರಣ ||
ನಾರಿಕೇಳದ ಫಲದಂತೆ ಈಕವಿತೆಯು | ತೋರಿದು ರಮ್ಯ ಕೆಲರಿಗೆ |
ಸಾರಕದಳಿಪಣ್ಣಿನಂತೆ ಗೂಢಾರ್ಥವು | ತೋರಿ ತೋರದೆಯಿರಬೇಕು ||

ಗ್ರಂಥಾವತಾರದಲ್ಲಿ ಸುಪಾರ್ಶ್ವಸ್ತುತಿ ಇದೆ. ಬಳಿಕ ಕವಿ ಸಿದ್ಧಾದಿಗಳು, ಭುಜಬಲಿ, ಗಣಧರರು, ಸರಸ್ವತಿ, ಶಾಸನದೇವಿಯರು ಇವರುಗಳನ್ನು ಸ್ತುತಿಸಿದ್ದಾನೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ಸ್ತ್ರೀಯರು

ನಡು ಸಿಂಹ ಧನು ಪುರ್ಬು ಕುಚ ಕುಂಭ ಮೀನಾಕ್ಷಿ| ಮಡದಿ ಮಕರಪತ್ರದಿಂದ|
ಸಡಗರದಿಂ ನಿಡುಹಸ್ತದಿಂದಲಿ ಕನ್ನೆ | ಬೆಡಗಿಂದೊಪ್ಪಿದಳ್ ರಾಸಿಯಂತೆ ||
ಹರಿಯ ಅಂಗವು ಕಪ್ಪು ಹರನ ಕೊರಳು ಕಪ್ಪು | ಉರಗನ ಹೆಡೆಯೊಳು ಕಪ್ಪು |
ವರವಾಣಿಹಸ್ತದ ವೀಣೆ ತಾ ಕಡುಕಪ್ಪು | ಕಪ್ಪಿಂದ ಕೊರತೆಯೇನಮ್ಮ ||
ಹೆಣ್ಣಿಗಾಗಿ ಕರಿ ತುರುಗಳ ಕಾದನು | ಹೆಣ್ಣಿನಿಂದಜನು ಕೆಟ್ಟ |
ಹೆಣ್ಣಿನ ಮೋಹದಿ ಹರನರೆಹೆಣ್ಣಾದ | ಹೆಣ್ಣಿಗಾದನು ಕೋಟಿ ಸುರಪ ||

ನೀತಿ

ಮಕ್ಕಳನೋದಿಸಿ ಚಿಕ್ಕಂದು ಪರದರು | ಗಕ್ಕನೆ ಕುಲವಿದ್ಯೆಗಳನು |
ಅಕ್ಕರಿಂ ಕಲಿಸದೆ ಮುದ್ದಿಸಿದರೆ ಮುಂದೆ | ಸೊಕ್ಕಿಯಿರಾತೆರದಿ ಕೆಡುವರು ||
ಸಿರಿ ಸಂಜೆಗೆಂಪು ಸೋದರರೆಲ್ಲ ಮಂಜಿನ | ನೆರವಿ ಸ್ತ್ರೀಯರು ದೇಶಕೋಶ|
ಮರುತನಿದಿರುದೀಪ ಯವ್ವನ ಸುರಧನು | ಮಿಂಚು ಭಾವಿಸಲು ಬಂಧುಗಳು ||

## ಅಣ್ಣಾಜಿ. ಸು. 1600

ಈತನು ಸೌಂದರವಿಳಾಸವನ್ನು ಬರೆದಿದ್ದಾನೆ. ಇವನು ವೀರಶೈವ ಕವಿ; ಇವನ ಪಿತಾಮಹನು ವೀರೇಂದ್ರನು, ತಂದೆ ಅಯ್ಯಣ್ಣಭೂಪನು. "ಅಣ್ಣಾಜಿರಾಜೇಂದ್ರನು" ಎಂದು ಹೇಳಿಕೊಂಡಿರುವುದರಿಂದಲೂ ತಂದೆಯ ಹೆಸರಿನಿಂದಲೂ ಈತನು ಆವುದೋ ಒಂದು ರಾಜವಂಶಕ್ಕೆ ಸೇರಿದವನೆಂದು ತೋರುತ್ತದೆ. ಶಂಕರೇಶನ ಅನುಗ್ರಹದಿಂದಲೂ ಆಜ್ಞೆಯಿಂದಲೂ ತನ್ನ ಗ್ರಂಥವನ್ನು ಬರೆದುದಾಗಿ ಹೇಳುತ್ತಾನೆ. ಈ ಶಂಕರೇಶನು ಆರೋ ತಿಳಿಯದು. ಪೂರ್ವಕವಿಗಳ ಗೋಷ್ಠಿಯಲ್ಲಿ ಇವನು ಪಾಲ್ಕುರಿಕೆಸೋಮನ ಜತೆಯಲ್ಲಿ ಹೇಳಿರುವ ಮಲುಹಣನು ಗುಬ್ಬಿಯ ಮಲ್ಲಣಾರ್ಯ (1530) ನಾಗಿರಬಹುದೆಂದು ತೋರುತ್ತದೆ. ಹಾಗಿದ್ದಪಕ್ಷದಲ್ಲಿ ಈತನ ಕಾಲವು ಸುಮಾರು 1600 ಆಗಬಹುದು.

ಪೂರ್ವಕವಿಗಳನ್ನು ಈ ಪದ್ಯಗಳಲ್ಲಿ ಸ್ಮರಿಸಿದ್ದಾನೆ—

ಕೆಱೆಯಪದ್ಮರಸ ಹಂಪೆಯ ಹರೀಶ್ವರನು ಪಾ |
ಲ್ಕುಱಿಕೆಸೋಮಾರಾಧ್ಯ ಮಲುಹಣನು ಮೊದಲಾಗಿ |
ಹರನ ಕವಿತಾಸ್ತೋತ್ರಸೂತ್ರದಿಂ ನಟಿಸಿಯಾನಂದಿಸಿದ ಶಂಕರೇಶ ||
ಹರುಷದಿಂದೆನಗೆ ತಮ್ಮಯ ಕರುಣಶರಧಿಯೊಳು |
ತೆರೆ ಮಸಗೆ ಸಿಡಿದ ಸೀಕರಬಿಂದುವಂತದಂ |
ಧರಿಸೆನಲು ಶಿರದೊಳಾಂತಾನದಱ ಮಹಿಮೆಯಿಂದೀಕೃತಿಯನೊಲಿದು ಪೇೞ್ದಂ ||
ಬಾಣ ಮಾಯೂರ ಭವಭೂತಿ ಶ್ರೀಹರ್ಷ ಕ |
ರ್ಬ್ಬಾಣಿ ಕವಿಯಾಧನಂಜಯ ದಂಡಿ ಶಾರದೆಯ |
ಪ್ರಾಣಕವಿ ಕಾಳಿದಾಸನು ರುದ್ರಭಟ್ಟನಗ್ಗಳ ನೇಮಿಚಂದ್ರ ಕಂತಿ ||
ಕ್ಷೋಣಿಯೊಳು ಕವಿರಾಜಮಕುಟಮಣಿ ಶ್ರೀನಾಥ |
ಮೊಣದಿವರೆಲ್ಲರಂ ಬಲನಂದು ಕೃತಿವೇೞ್ದ.

ತನ್ನ ಗುಣಾದಿಗಳನ್ನು ಈ ಪದ್ಯಗಳಲ್ಲಿ ಹೇಳಿಕೊಂಡಿದ್ದಾನೆ—

ಧೀರನತ್ಯಧಿಕವಿತರಣಗುಣದಿ ಮೆಱೆವ ಮಂ |
ದಾರ ಮದವತಿಯರ ಮುಖೇಂದುಮಂಡಲದಮೃತ |
ಚಾರುಕರಣದ ರುಚಿಯ ಸೇವಿಪ ಚಕೋರ ಲಲನಾಜನಕಪೋಲಮುಗದಿ ||
ಸಾರತರಮಾದ ಮೃಗಮದದ ಮಕರಿಕೆ ಚಿತ್ರ |

ವಾರಣದ ಕುಂಭದಂತಿಡಿಕಿಱಿದ ಕುಚದ ಮಣಿ |
ಹಾರ ಪೊಸಜವ್ವನೆಯ ನೊಸಲೊಳೊಪ್ಪುವ ತಿಲಕನಣ್ಣಾಜಿರಾಜೇಂದ್ರನು ||
ಪೊಸದೇಸಿವಡೆದು ನವರಸ ತುಂಬಿ ತುಳುಕಿ ರಂ |
ಜಿಸುವ ಕೃತಿಯೆನಿಪ ಸುರಕುಜಕುಸುಮಸೌರಭವ |
ಹಸಿದುಂಬ ಮಧುಕರಂ ಸುಕವಿನೆರವಿಯ ತಮನ ಕಡಿದು ಕಲಕುವ ಭಾಸ್ಕರಂ||
ಕುಸುಮಸರನೆಸೆಯೆ ಕಂದುವಳೆಂದು ಕೈಗಾಯ್ದ |
ಪೊಸಜವ್ವನದ ಕೋಮಲಾಂಗಿಯುಳ ಪ್ರಾಣೇಶ |
ರಸಿಕರಾಜೇಂದ್ರನಣ್ಣಾಜಿಯಹುದೆಂದೆನ್ನ ಸುಕವೀಂದ್ರರೆಂಬರಂತೆ ||

ಇವನ ಗ್ರಂಥ

### ಸೌಂದರವಿಳಾಸ

ಇದು ವಾರ್ಧಕಷಟ್ಪದಿಯಲ್ಲಿ ಬರೆದಿದೆ. ಇದರಲ್ಲಿ ಅರುವತ್ತುಮೂ ವರೊಳಗೆ ಒಬ್ಬನಾದ ಸೌಂದರೇಶ ಅಥವಾ ನಂಬಿಯಣ್ಣ ಎಂಬ ಶಿವಭಕ್ತನ ಚರಿತವು ಹೇಳಿದೆ. ಈ ಗ್ರಂಥರಚನೆಗೆ ಕಾರಣವನ್ನೂ ಗ್ರಂಥದ ಉತ್ಕೃಷ್ಟ ತೆಯನ್ನೂ ಕವಿ ಈ ಪದ್ಯಗಳಲ್ಲಿ ಹೇಳಿದ್ದಾನೆ:—

ವೀರೇಂದ್ರನಣುಗನಯ್ಯಣಭೂಪನವನ ಸುತು |
ಮಾರನಣ್ಣಾಜಿ ಸೌಂದರವಿಳಾಸವನು ಶೃಂ |
ಗಾರ ಮೊದಲಾದ ನವರಸದುಪಮೆಯುತ್ಪ್ರೇಕ್ಷೆ ಚಿತ್ರಾರ್ಥಭಾವದಿಂದೆ ||
ಸೇರಿಸುವುದೆಂದು ಶಂಕರನಿರೂಪಣೆಯಾಗೆ |
ಸಾರತರವಾದ ಮಧುರೋಕ್ತಿಮೃದುಪದದ ಗಂ |
ಭೀರವಚನಾರಚನೆಯಿಂದೆ ವಿಸ್ತರಿಸಿದೆನು ಸುಕವೀಂದ್ರರಹುದೆನ್ನಲು ||
ಸಿರಿಯ ನೆಲೆವನೆ ಕುಸುಮಶರನು ರತಿ ನೆಲಸಿ ಪುರ |
ಹರನೊಡನೆ ಸೆಣಸುವಂಕದ ಕಣನು ಭಾರತಿಯ |
ಸರಸಕವಿತೆಯ ವಿಲಾಸದ ತಾಣ ಚಕ್ರಿಯಾವಾಸ ಮೋಹದ ಸುಗ್ಗಿಯು ||
ಹರನ ಗಿರಿಜೆಯ ಭೋಗಮಂಟಪವು ಸುರಪತಿಯ |
ವರವಿಭವಸಾಲೆ ಶಂಕರ ಭೋಗಮೋಕ್ಷಗಳ |
ಕರೆದೀವ ಠಾವಿದೆಂಬುದ ತಿಳಿದು ಲಾಲಿಸುವುದೀ ಸೌಂದರವಿಳಾಸವ ||

ಗ್ರಂಥಾವತಾರದಲ್ಲಿ ಈಶ್ವರ, ಪಾರ್ವತಿ ಇವರುಗಳ ಸ್ತುತಿ ಇದೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

## ಸಮುದ್ರ

ಘುಳುಘುಳಿಸುತೇಱುವ ಬೊಬ್ಬುಳಿಗಳಿಂ ಸುೞಿಗಳಿಂ ।
ನಳನಳಿಸಿ ರಾಜಿಸುವ ಕಮಲದಿಂ ಕುಮುದದಿಂ ।
ತಳತಳಿಸಿ ಹೊಳೆಯುತಿಹ ತೆರೆಗಳಿಂ ನೊರೆಗಳಿಂ ಕಮಠಶೈವಾಲದಿಂದೆ ॥
ತುಳುಕಿ ಪರಿದೊಲೆದೊಲೆದು ಸಂಚರಿಪ ಮೀನಂಗಳಿಂ ।
ಬಳಸಿ ಪರ್ಬಿದ ಪವಳಲತೆಗಳಿಂ ಶಂಖದಿಂ ।
ದೆಳಲತೆಯ ಕುಡಿಗವಲ ಸೊಂಪಿನಿಂ ಗುಂಪಿನಿಂ ಕಡಲು ಕಣ್ಗೆಸೆದಿರ್ದುದು ॥

## ಪರವೆಯ ಸೌಂದರ್ಯ

ನನೆಯ ಸೂಡಿದ ಕಲ್ಪಲತೆಯೊ ಮಧುಕರನೆಱಗಿ ।
ಜೆನುಗಿ ಸವಿಯುದ ಪರಾಗದ ಪುತ್ಥಳಿಯೊ ಮೇಣು ।
ಮುನಿ ಕುಡಿಯದಿಹ ಸಾಗರವೊ ಚಕೋರನ ಚಂಚು ಸೋಂಕದಿಹ ಪೂರ್ಣಶಶಿಯೋ ॥
ಮನಸಿಜನ ಪೊಸಮಸೆಯ ಖಂಡೆಯವೊ ಕಂತುವಿನ ।
ಘನಪ್ರತಾಪದ ಜಸವೊ ಸ್ತ್ರೀರತ್ನವೋ ಎನಿಸಿ ।
ವನಿತೆಯಿರ್ದಳು ಪರವೆ ಬಿಂದುಗಳೆಯದಿಹಾಣಿಮುತ್ತೆನಲು ಥಳಥಳಿಸುತೆ ॥

## ಚಿನವರದರು (ಸರಾಫರು)

ನಂದಿಯುಂಡಿಗೆ ರಾಮಟಂಕೆ ಶಿವರಾಯ ತಾ ।
ನೊಂದೆಸೆಯ ಸಣ್ಣಗೆರೆಯಿಕ್ಕೇರಿ ಮಾಸನೊಳೆ ।
ಚಂದಿರನಹಣ ಜಳಕೆ ಮುಂಬೆಟ್ಟು ಅಚ್ಯುತನ ಹೊನ್ನ ರಾಸಿಗಳ ತಮ್ಮ ॥
ಮುಂದಿಟ್ಟು ಮಚ್ಚಗಳ ಪಿಡಿದೊರೆದು ಬಣ್ಣಗಳ ।
ಬಂಧಿಸುವ ನಿಲುಕಡೆಗೆ ಮೇಣದುಂಡೆಯೊಳೊತ್ತಿ ।
ಸಂದ ಕ್ರಯವಿಷ್ಟೆಂದು ನೋಡಿ ತೂಕವ ಮಾಳ್ಪ ಚಿನವರದರೊಪ್ಪಿರ್ದರು ॥

## ಮಿಠಾಯಿಯಂಗಡಿ

ಕರಜಿಗೆಯಕಾಯಿಯತಿರಸವುದ್ದಿನೊಡೆಯು ಹಿಮ ।
ಕರನಂತೆ ರಾಜಿಸುವ ಇಡ್ಡಲಿಗೆಯೆಳ್ಳುಂಡೆ ।
ತರಣಿಮಂಡಲದಂತೆಯೆಸೆವ ಒಬ್ಬಟ್ಟು ಗಾರಗೆಯ ಚಕ್ಕುಲಿ ಸೇವಗೆ ॥
ಹೊರೆಯಪೇಣಿಯು ಮನೋಹರದುಂಡೆಯರಗುಸ ।
ಕ್ಕರೆಬುರುಡೆ ಹಾಲುಂಡಲಿಗೆಯು ಸ್ವಾದಿಸಲಮೃತ ।
ಸರಳಿನಿಂ ನಿರ್ಮಿಸಿದ ಲತೆಯಂತೆ ಜೆಲ್ಲಬಿಯು ಅಂಗಡಿಗಳೆಸೆದಿರ್ದುವು ॥

ಊಟ

ಕಟ್ಟೋಗರಗಳು ಕಲಸೋಗರವು ಪಾಯಸವು ।
ನಿಟ್ಟಿಸಲು ಗೋಮೇಧಿಕದ ಸಾರವೆಂದೆನಿಸಿ ।
ಬಟ್ಟಬಟ್ಟಲೊಳು ತುಂಬೆಸೆವ ಸದ್ಯೋಘೃತವು ಹೆರೆದುಪ್ಪವಕ್ಕದುಪ್ಪ ॥
ಮುಟ್ಟಿ ಬೊಟ್ಟಿಡುವಂತೆ ಕಾಸಿರ್ದ ಚಿನಿಪಾಲು ।
ತೊಟ್ಟಿನೊಳಿ ಪಸುರಡಗದಿರ್ದ ಉಪ್ಪಿನಕಾಯಿ ।
ಕಟ್ಟಳೆಯ ಲವಣಾಮ್ಲದಿಂದಾದ ಶಾಕ ಮುಂತಾದ ಊಟವ ತಂದರು ॥

ಡೊಂಬರು

ಗಣೆಯ ತುದಿಯಲ್ಲಿ ಶಸ್ತ್ರವನಿಟ್ಟು ಪ್ರಂಗುಟದ ।
ಕೊನೆಯೊಳು ಪುಟವೆದ್ದು ಲಾಗುಲವಣೆಯ ಕೊಂಡು ।
ಮಿಣೆಯ ಹುರಿಗಳಮೇಲೆ ಮರಗಾಲ ಕಟ್ಟಿ ದುವ್ವಾಳಿಸುತ ಡೊಂಬಿತಿಯರು ॥
ಮಣಿದು ಹಂಗರಣಮನೆ ಕೊಂಡುವ್ವೊಳುಯ್ಯುಗಿದಲಗ ।
ಪಣೆಯಲ್ಲಿ ಗುಂಪಿಯನ್ನಿಡೊಳಟ್ಟು ಖೋಯೆನುತೆ ।
ತ್ರಿಣಯನಾಪರರೂಪನೇ ನೋಡು ನೋಡೆಂದು ಡೋಳ ಬಡಿದರು ಡೊಂಬರು ॥

---

## ವಾರಂತೆಸೋಮಣ್ಣ ಸು. 1600

ಈತನು ಪಂಚೀಕರಣದ ಪದಗಳನ್ನು ಬರೆದಿದ್ದಾನೆ. ಇವನು ವೀರಶೈವಕವಿ. ಒಂದು ಹಾಡಿನ ಕೊನೆಯಲ್ಲಿರುವ "ಲೋಕದೊಳಧಿಕ ಭಾಗುಳಿಯ ಸೋಮಶೇಖರಭೂಪನ ಭಕ್ತಿಯ ಸವಿಯ| ಸ್ವೀಕರಿಸಿ ಕೆಂಪುಗಂಬಳಿಯ ಪಿನಾಕಿ ಬಸವಲಿಂಗನೆಸಗಿದ ಪರಿಯ ನೋಡನೋಡಲು ಬಯಲಾಯ್ತು" ಎಂಬ ನುಡಿಯಲ್ಲಿ ಭಾಗುಳಿಯ ಸೋಮಶೇಖರಭೂಪ, ಕೆಂಪುಗಂಬಳಿಯ ಬಸವಲಿಂಗ ಇವರುಗಳ ಹೆಸರುಗಳು ಹೇಳಿವೆ. ಇವರು ಕವಿಯ ಸಮಕಾಲದವರಾಗಿರಬಹುದೋ ಏನೋ ತಿಳಿಯದು. ಕವಿಯ ಕಾಲವು ಸುಮಾರು 1600 ಆಗಿರಬಹುದೆಂದು ಊಹಿಸುತ್ತೇವೆ.

ಇವನ ಗ್ರಂಥ

### ಪಂಚೀಕರಣದ ಪದಗಳು

ಇವು ಕೆಲವು ಷಟ್ಪದಿಗಳನ್ನೂ ಹಾಡುಗಳನ್ನೂ ಒಳಕೊಂಡಿವೆ; ಪಂ

ಚಭೂತಗಳ ಸೇರುವೆಯನ್ನು ನಿರೂಪಿಸುತ್ತವೆ. ಈ ಗ್ರಂಥದಿಂದ ಒಂದೆರಡು ಪದ್ಯಗಳನ್ನು ಉದಾಹರಿಸುತ್ತೇವೆ—

ತವೆ ಸಭವೇ ತಾಂ ಜ್ಞಾನಾಸ್ಪದವಾ | ಪವನನೊಳೆಯ್ದಲ್ ಮನವಾಯ್ತಗ್ನಿಯ |
ನವಗಾಹಿಸಿ ಬುದ್ಧಿಯದಾಯ್ತಂಬುವನೊಂದಲ್ ಚಿತ್ತವದು ||
ಅವನಿಯ ಬೆರಸಲಹಂಕೃತಿಯಾಯ್ತಿಂ | ತಿವು ತಾಂ ಜ್ಞಾನಾದ್ಯಂತಃಕರಣಂ |
ವಿವಸಲಂಬರದಂಶದಿನುದಿಸಿಪ್ಪುವು ನಿಶ್ಚಯದಿಂದ ||
ಮರುತಾಂಶಂ ನಭಕೆಯ್ದೆ ಸಮಾನಂ | ಮರುತಂ ತಾಂ ವ್ಯಾನಂ ಮರುತಾಂಶಂ |
ಬೆರಸಿರೆ ಶಿಖಿಯೊಳುದಾನಂ ಜಲದೊಳ್ ಕೂಡಲಪಾನವದು ||
ಧರೆಯೊಳಗೊಂದಲ್ ಪ್ರಾಣಂ ಜನಿತಂ | ಮರುತಾಂಶದ ಮಾರುತಪಂಚಕಗಳು |
ಪಾಕಿಸಲುದಿಸಿದುವೆಂದುಸಿರುವರಧ್ಯಾತ್ಮಿಗಳನವರತಂ ||

ಈ ಪದಗಳಿಗೆ ಒಂದು ಕನ್ನಡವ್ಯಾಖ್ಯಾನವೂ ಇದೆ.

---

## ಮಲ್ಲಿಕಾರ್ಜುನರಾಯ ಸು. 1600

ಇವನು ಚೋರಕಥೆಯನ್ನು ಬರೆದಿದ್ದಾನೆ. ಈತನು ವೀರಶೈವಕವಿ. ಪೂರ್ವಕವಿಗಳಲ್ಲಿ ಮಲುಹಣ, ಮಯೂರ, ಕಾಳಿದಾಸ, ಹಂಪೆಯಹರೀಶ, ರಾಘವಾಂಕ ಇವರುಗಳನ್ನು ಸ್ಮರಿಸಿದ್ದಾನೆ. ಇವನ ಕಾಲವು ಸುಮಾರು 1600 ಆಗಿರಬಹುದು.

ಇವನ ಗ್ರಂಥ

### ಚೋರಕಥೆ

ಇದು ತ್ರಿಪದಿಯಲ್ಲಿ ಬರೆದಿದೆ; ಸಂಧಿ 6, ಪದ್ಯ 770. ಇದರಲ್ಲಿ ರತ್ನಾಪುರಿಯನ್ನು ಆಳುತ್ತಿದ್ದ ವಜ್ರಮಕುಟರಾಯನ ಇಬ್ಬರು ಮಕ್ಕಳು ಚೋರರಾದ ಕಥೆ ಹೇಳಿದೆ. ಗ್ರಂಥಾವತಾರದಲ್ಲಿ ಈಶ್ವರಸ್ತುತಿಯೂ ಕೃಷ್ಣಸ್ತುತಿಯೂ ಇವೆ.

---

## ಶೃಂಗಾರಕವಿ ಸು. 1600

ಈತನು ಕರ್ಣಾಟಕಸಂಜೀವನವೆಂಬ ನಿಘಂಟುವನ್ನು ಬರೆದಿದ್ದಾನೆ. ಇವನು ಜೈನಕವಿ; ರಸಿವಾಳಿಗೆ ಪ್ರಭುವಾದ ಬೊಮ್ಮರಸನಾಯ

ಕನ ಮಗನು. "ಕಳೆಯಾಣ್ಮ ಶೃಂಗಾರಕವಿಗೆ ಪೆರರುಕ್ತಿಯಿಂ ಕಳಲೊಲ್ಲ ದುಸಿರ್ವ ಚಲಂ" ಎಂದು ಹೇಳಿಕೊಂಡಿದ್ದಾನೆ. ಇವನ ಹೆಸರನ್ನು ನೋಡಿದರೆ ಈತನು ಈ ನಿಘಂಟುವಲ್ಲದೆ ಕಾವ್ಯಗಳನ್ನೂ ಬರೆದಿರಬೇಕೆಂದು ತೋರುತ್ತದೆ. ರತ್ನಾಕರಾಧೀಶ್ವರಶತಕವನ್ನು ಬರೆದಿರುವ ಹಂಸರಾಜನಿಗೆ ಶೃಂಗಾರಕವಿ ಎಂಬ ಬಿರುದುಂಟು. ಅವನೂ ಜೈನಕವಿ. ಅವನೇ ಈ ಗ್ರಂಥವನ್ನೂ ಬರೆದಿರಬಹುದೋ ಎಂಬ ಸಂದೇಹವು ಹುಟ್ಟಬಹುದು. ಆದರೆ ಪ್ರಕೃತಗ್ರಂಥದಲ್ಲಿ ಹಂಸರಾಜ ಎಂಬ ಹೆಸರು ಉಕ್ತವಾಗಿಲ್ಲ. ಕವಿ ಸುಮಾರು 1600 ರಲ್ಲಿ ಇದ್ದಿರಬಹುದೆಂದು ಊಹಿಸುತ್ತೇವೆ. ಕೇಶಿರಾಜನು ಶಬ್ದಮಣಿದರ್ಪಣದಲ್ಲಿ ಹೇಳುವಂತೆ ಈ ಕವಿ ಱೞ ಕುಳಕ್ಷಳಗಳ ವಿಷಯದಲ್ಲಿ ಪ್ರಾಸನಿಯಮವನ್ನು ಅನುಸರಿಸಬೇಕು; ಅವುಗಳನ್ನು ಬೆರಸಲಾಗದು; ಇದು ಪಂಪರಾಜಾದಿಕರ್ಣಾಟಕಕವಿರಾಯರ ಮತ ಎಂದು

ಆದೇಶಮೆಂದು ಸಹಜತೆಯೆಂದು ಱೞಕುಳದ |
ಭೇದವೆರಡಕ್ಕುಮಾಕ್ಷಳನೊಂದೆಬಗೆಯಿಂತು |
ಮೂಡೆಱವೆ ಕರ್ಣಾಟಕಾವ್ಯಕೆ ಳಕಾರ ಮೂಱುವೞಿಲ್ಲಿ ಱೞ ಱೞನೇ||
ಪಾದನೂದೊಡೆ ಕುಳಂಕ್ಷಳನೆಡು ಬೆರಸೆ ಪ್ರಾ |
ಪ್ಯೋದಯಂ ಕ್ಷಳಕುಳನ ನಿಯಮಕ್ಕೆ ಱೞಸ ಸಂ |
ಪಾದಿಸಿದೊಡಶುಭಮಿದು ಪಂಪರಾಜಾದಿಕರ್ಣಾಟಕವಿರಾಯರ ಮತಂ ||

ಎಂಬ ಪದ್ಯದಲ್ಲಿ ಹೇಳುತ್ತಾನೆ.

ಇವನ ಗ್ರಂಥ

### ಕರ್ಣಾಟಕಸಂಜೀವನ

ಇದು ಕನ್ನಡನಿಘಂಟು; ವಾರ್ಧಕಷಟ್ಪದಿಯಲ್ಲಿ ಬರೆದಿದೆ; 35 ಪದ್ಯಗಳಿವೆ. ಇದರಲ್ಲಿ ಱೞಕುಳಕ್ಷಳಗಳನ್ನುಳ್ಳ ಕನ್ನಡನುಡಿಗಳೂ ಅವುಗಳ ಅರ್ಥವೂ ಹೇಳಿವೆ. "ಕನ್ನಡದೊಳೊರೆವೊಡಿದು ಲಕ್ಷಣಕೆ ಜೀವನಂ" ಆದುದರಿಂದ ಕವಿ ಗ್ರಂಥಕ್ಕೆ ಈ ಹೆಸರನ್ನು ಕೊಟ್ಟಿದ್ದಾನೆ.

ಗ್ರಂಥಾವತಾರದಲ್ಲಿ ಜಿನಸ್ತುತಿ ಇದೆ. ಈ ಗ್ರಂಥದಿಂದ ಒಂದೆರಡು ಪದ್ಯಗಳನ್ನು ತೆಗೆದುಬರೆಯುತ್ತೇವೆ-

ಆವರ್ತಗಮನಾಂಕುರದೊಳೆ ಸುೞಿಯೆನಿಸುಗುಂ |
ಜೀವಿಸ ಬಿಡಲ್ಪಡುವುದಕೇ ಬೞಿಗುಂಕುವೆಸ |

ರಾವುಜದ ಮುಟ್ಟಿನೊಳ್ ಲಾಳವಿಂಡಿಗೆಯೊಳಂ ಬಲ್ಲಿಂದಗುಱಿಮುಕ್ಕುಂ ||
ಸೇವಕಂ ದಾಸಿಯುಂ ತೊಟ್ಟಿಕ್ಕುಮಾಱಿಯೆನ |
ಲಾವಂಚನೆಯೊಳನೇಕಗ್ರಾಹಿಕದೊಳಕ್ಕು |
ಮಾವಳಿಯೊಳಂ ಸಖಿಯೊಳಂ ಕ್ಷಳನೆನಿಪ್ಪುದದು ನೆಱೆಲೆಸಲ್ ಛಾಯೆ ಬಿಂಬಂ ||
ಬಾಱೆನಲ್ ಬಾಱಿವ್ವಲ್ಲಿ ಱಿಱಿನಾಯುಧಂಗಳಂ |
ಪೇಱಿ ಕುಳನಗುಱಿಯೊಳ್ ಸೂರಣದದಂಟಿನೊಳ್ |
ತಾಱಿಮರದಲ್ಲಿ ತಱಿನೆ ಱಿಱಿಂ ತಾಳ್ವಲ್ಲಿ ಕುಳನಗುಟ್ಟುದೆಂಬರ್ಥದೊಳ್ ||
ಆಱೆಂದು ಬರೆ ಱಿಱಿಂ ಭಟರ ಪೆಸರೊಳ್ ಕುಳಂ |
ಕೇಱಿ ಪಜ್ಜೆಗೆ ಱಿಱಿಂ ಕ್ರೀಡೆಯೊಳ್ ಕ್ಷಳ ಱಿಱಿಕೆ |
ನಾಱ ನುಡಿ ತುಂಬುಕಳ್ಳನೊಳುಂಟು ನಾಱವಾಸಗೆ ಕುಳಂ ಲತೆಯೊಳ್‌ಕ್ಷಳಂ ||

---

## ಶಾಂತರಸ. ಸು. 1600

ಈತನು ಯೋಗರತ್ನಾಕರವನ್ನು ಬರೆದಿದ್ದಾನೆ. ಇವನು ಜೈನಕವಿ; ಇವನ ಗ್ರಂಥದಿಂದ ಇವನ ವಿಷಯವಾಗಿ ಇನ್ನೇನೂ ತಿಳಿವುದಿಲ್ಲ. ಇವನು ಸುಮಾರು 1600 ರಲ್ಲಿ ಇದ್ದಿರಬಹುದೆಂದು ತೋರುತ್ತದೆ.

ಇವನ ಗ್ರಂಥ

### ಯೋಗಾರತ್ನಾಕರ

ಇದು ಕಂದದಲ್ಲಿ ಬರೆದಿದೆ; 8 ಅಂಗಗಳಾಗಿ ಭಾಗಿಸಲ್ಪಟ್ಟಿದೆ. ಇದರಲ್ಲಿ ಜೈನಮತಾನುಸಾರವಾಗಿ ಯಮ, ನಿಯಮ ಮುಂತಾದ 8 ಯೋಗಾಂಗಗಳು ವಿವರಿಸಲ್ಪಟ್ಟಿವೆ. ಗ್ರಂಥಕ್ಕೆ ಅಷ್ಟಾಂಗಎಂಬ ನಾಮಾಂತರವೂ ಇರುವಂತೆ ತೋರುತ್ತದೆ. ಎಲ್ಲರಿಗೂ ತಿಳಿವುದಕ್ಕಾಗಿ ಕನ್ನಡದಲ್ಲಿ ಈ ಗ್ರಂಥವನ್ನು ರಚಿಸಿದಂತೆ ಕವಿ ಈ ಪದ್ಯದಲ್ಲಿ ಹೇಳಿದ್ದಾನೆ—

ಜಿನಮತಮನಖಿಳಮುನಿಜನ | ವಿನುತಮನಧ್ಯಾತ್ಮಗ್ರಂಥಮಂ ಕನ್ನಡದಿಂ |
ಜನಕೆಲ್ಲಮಱಿಯೆ ಪೇಱ್ದಂ | ಮನಕೀಪ್ಸಿತಮೆನಿಪ ಯೋಗರತ್ನಾಕರಮಂ ||

ಗ್ರಂಥಾವತಾರದಲ್ಲಿ ನೇಮಿಜಿನಸ್ತುತಿ ಇದೆ. ಬಳಿಕ ಕವಿ ಸಿದ್ಧಾದಿಗಳನ್ನೂ ಸರಸ್ವತಿಯನ್ನೂ ಸ್ಮರಿಸಿದ್ದಾನೆ. ಗ್ರಂಥಾಂತ್ಯದಲ್ಲಿ ಈ ಪದ್ಯವಿದೆ:

ಯಮನಿಯಮಾದಿಯನಿಂತೀ | ಕ್ರಮದಿಂದಂ ತಿಳಿಯೆ ಪೇಱ್ದನಷ್ಟಾಂಗಮುಮಂ |
ಸಮನಂದು ತಿಳಿದು ನೆಗಱಲ್ | ಭ್ರಮೆಪೋಕುಂ ಯೋಗ ನಿಲ್ಕು ಮತಿ ಪಿರಿದಕ್ಕುಂ ||

ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ—

ಮುನಿಯದೆ ಮುನಿಯಿಸದಾರುಮ | ನಿನಿಸುಂ ಸಮತೆಯೊಳೆ ನಡೆಯುತಿರೆ ಮುನಿ ಯೆನಿಕುಂ |
ಮುನಿವ ಮುನಿಯಿಸುವಸಮತೆಯು|ಮಿನಿಸಿಲ್ಲದೊಡಾಗದಂತು ಯೋಗಮಮೋಘಂ||
ಮನಮಿರೆ ನೊಸಲೊಳ್ ಕಣ್ಗಳ | ವೆನಸುಂ ನಾಸಾಗ್ರದಲ್ಲಿ ಕಿವಿ ಕೇಳವೆನಲ್ |
ತನು ತೊನೆಯದೆ ನಟ್ಟಂತಿರ | ಲೆನಸುಂ ನಿಂದಂದು ಸಹಜಯೋಗಮುದಕ್ಕುಂ ||
ಧ್ಯಾನಮದು ನೆನೆದ ನೆನಪಿಯೆ | ತಾನದು ದೃಢಮಾಗೆ ಧಾರಣಂ ಧಾರಣೆಯಿಂ |
ತಾನೆ ನಿಜಮಾಗೆ ನಿಂದೆಡೆ | ಯೇನದುವೆ ಸಮಾಧಿಯೆಂಬ ಪೆಸರಂ ಪಡೆಗುಂ ||
ವರವಜ್ರಾಸನದಿಂದಂ | ನಿರತಂ ಪೆಱಗಿರಿಸಿ ಕೈಗಳಂ ಮುಗಿದಿನಿಸಂ |
ಗರುಡನವೊಲಿರ್ದು ಬಸಿಱಿಂ | ತಿರಿಪಲ್ ಗುಲ್ಮಾದಿದೋಷಮಂ ಪರಿಹರಿಕುಂ ||

---

## ಬ್ರಹ್ಮಕವಿ. ಸು. 1600

ಈತನು ವಜ್ರಕುಮಾರಚರಿತೆಯನ್ನು ಬರೆದಿದ್ದಾನೆ. ಇವನು ಜೈನ ಕವಿ; ಇವನ ಸ್ಥಳ ಪಾಂಡ್ಯವಂಶದ ವಿರುಪನೃಪನ ಮಗ ಚೆನ್ನನೃಪನು ಆಳುತ್ತಿದ್ದ ಕುಂತಳದೇಶದೊಳಗಣ ಪುರಹರಕ್ಷೇತ್ರಪುರ; ತಂದೆ ನೇಮಣ್ಣ; ತಾಯಿ ಬೊಮ್ಮರಸಿ; ಗುರು ಗುಣಭದ್ರಾಚಾರ್ಯ; ಕುಲದೈವ ಶಾಂತಿಜಿನೇಶ್ವರ; ಮಗ ಗುಮ್ಮಣ್ಣ. ಇವನ ಕಾಲವು ಸುಮಾರು 1600 ಆಗಿರಬಹುದೆಂದು ಊಹಿಸುತ್ತೇವೆ.

ಪೂರ್ವಕವಿಗಳಲ್ಲಿ ನಯಸೇನ, ಅಭಿನವಪಂಪ, ಗುಣವರ್ಮ, ಪೊನ್ನ, ಜನ್ನ ಇವರುಗಳನ್ನು ಸ್ಮರಿಸಿದ್ದಾನೆ.

ಇವನ ಗ್ರಂಥ

### ವಜ್ರಕುಮಾರಚರಿತೆ.

ಇದು ಸಾಂಗತ್ಯದಲ್ಲಿ ಬರೆದಿದೆ; ಅಲ್ಲಲ್ಲಿ ಕೆಲವು ಕಂದವೃತ್ತಗಳೂ ಇವೆ. ನಮಗೆ ದೊರೆತ ಅಸಮಗ್ರಪ್ರತಿಯಲ್ಲಿ 3 ಸಂಧಿಗಳಿವೆ.

ಕಥಾಸಾರ—ರಾಜಪುರೋಹಿತನಾದ ಸೋಮದತ್ತನೆಂಬ ಬ್ರಾಹ್ಮಣನು ವೈರಾಗ್ಯದಿಂದ ಜಿನದೀಕ್ಷೆಯನ್ನು ಹೊಂದಿ ಸನ್ಯಾಸವನ್ನು ಪರಿಗ್ರಹಿಸಲು, ಈ ಸಂಗತಿಯನ್ನು ತಿಳಿದು ಅವನ ಪತ್ನಿ ಯಜ್ಞದತ್ತೆ ಪುತ್ರಸಹಿತೆಯಾಗಿ ಬಂದು ಪತಿಯನು

ಪುನಃ ಗೃಹಸ್ಥನನ್ನಾಗಿ ಮಾಡಬೇಕೆಂದು ಪ್ರಯತ್ನಿಸಿ ಸಾಧ್ಯವಾಗದಿರಲು ಬಾಲನಾದ ಪುತ್ರನನ್ನು ಪತಿಯಬಳಿ ಬಿಟ್ಟು ಹೊರಟುಹೋದಳು. ಅಂತರಿಕ್ಷದಲ್ಲಿ ಸಂಚರಿಸುತ್ತಿದ್ದ ಒಬ್ಬ ಖಚರನು ಈ ಬಾಲನನ್ನು ವಿಮಾನದಲ್ಲಿ ಕುಳ್ಳಿರಿಸಿಕೊಂಡು ಹೋಗಿ ತನ್ನ ಪ್ರಭುವಾದ ಭಾಸ್ಕರನಿಗೆ ಕೊಡಲು, ಆತನೂ ಅವನ ಹೆಂಡತಿ ಮಣಿಮಾಲೆಯೂ ಬಾಲನನ್ನು ಪ್ರೀತಿಯಿಂದ ಸಲಹಿ ಅವನಿಗೆ ಸಂಭ್ರಮದೊಡನೆ ವಿವಾಹವನ್ನು ಬೆಳೆಯಿಸಿದರು. ಇವನೇ ವಜ್ರಕುಮಾರನು.

ಧರ್ಮಾಮೃತದ[1] ಪದ್ಧತಿಯನ್ನು ಅನುಸರಿಸಿ ಈ ಕಥೆಯನ್ನು ತನ್ನ ಮಗ ಗುಮ್ಮಣ್ಣನಿಗೋಸ್ಕರ ಬರೆದಂತೆ ಕವಿ ಹೇಳುತ್ತಾನೆ.

ಗ್ರಂಥಾವತಾರದಲ್ಲಿ ಶಾಂತಿಜಿನಸ್ತುತಿ ಇದೆ. ಬಳಿಕ ಕವಿ ಸಿದ್ಧಾದಿಗಳು, ಸರಸ್ವತಿ, ವೃಷಭಸೇನಾದಿಗಣಧರರು ಇವರುಗಳನ್ನು ಸ್ಮರಿಸಿ ತರುವಾಯ ಕೊಂಡಕುಂದನು ಮೊದಲಾಗಿ ಶಾಂತಿಕೀರ್ತಿಯವರೆಗೆ[2] ಗುರುಗಳನ್ನು ಕ್ರಮವಾಗಿ ಸ್ತುತಿಸಿದ್ದಾನೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ---

ಚಂದ್ರ

ತಾರಾಗಣದ ತೊತ್ತು ಚೋರಜಾರರ ಮಿತ್ತು | ನೀರಜತತಿಗೆ ವಿಪತ್ತು |
ವಾರಧಿಜಯದೊತ್ತು ಕೌಮುದಿಗಳ ಬಿತ್ತು | ಧಾರಣಿಗಿಂದುದಯಿಸಿತು ||

ಬೇಡಿತಿಯರು

ಕರಿಯರು ಕಾಯದಶೋಕೆದಳಿರನುಟ್ಟು | ಗುರುಗಂಜಿಸರ ಕೊಗಲೊಳಗೆ |
ಕರಿನೇಣುಮುತ್ತ ಮುಡಿಗೆ ಕಟ್ಟಿ ಸಂಜೆಯ | ಸಿರಿಯಂತಿಹರು ಶಬರಿಯರು ||

ಹಿಮಗಾಲ

ಕರೆಸುವು ತಾವರೆ ತು.. ಬಿರಿದೊಸೆದುವು | ಕೊರಗಿ ನುಡಿಯವು ಪಿಕಾಳಿ ||
ಸ್ಮರನ ಬಾಣಗಳ ಖಂಡಿಸಿದನು ಹಿಮನೃಪ | ಸುರಿದು ತುಷಾರಮಾರ್ಗಣದಿಂ ||

ಅಹಿಚ್ಛತ್ರಪುರ

ಪತ್ತನದೊಳಗಣ ಪರದರು ಧನದನ | ವಿತ್ತನ ಜಱಿದು ನಗುವರು |
ಮಿತ್ರನುಮಾಪತಿ ತಿರಿದುಣ್ಬ ಸಂಪತ್ತಿ | ಯೊತ್ತಿನಲ್ಲಿರ್ದೇನುಫಲವು ||

---

1 Vol. I, 97. 2 ಪೃಥಿವಿಯ ಮೆಟ್ಟದೆ ನಡೆವ ಚತುರಂಗುಲಚಾರಣ ಕೊಂಡಕುಂದ, ಸ್ವಗುರು ಗುಣಭದ್ರ, ಚಾರುಕೀರ್ತಿ ಪಂಡಿತ, ವಿದ್ಯಾನಂದ, ಲಕ್ಷ್ಮೀಸೇನ ಯತಿ, ಕಾಣೂರ್ಗಣದ ಭಾನುಮುನಿ, ಪಾಲ್ಯಕೀರ್ತಿ, ಶಾಂತಿಕೀರ್ತಿ.

ಪಾಂಚಾಲದೇಶ

ಕೊಡೆಯೆಂಬ ಮಾತಿಲ್ಲ ತಡೆಯೆಂಬ ನುಡಿಯಿಲ್ಲ । ಕಡಿಯೆಂಬುದಿಲ್ಲ ನಾಡೊಳಗೆ ।
ಕಡಿಹ ಕಬ್ಬಿನೊಳುಂಟು ತಡೆಸದಟ್ಟಡಿಯೊಳು|ಕೊಡೆಯುಂಟು ಹೊಂಬಾಳೆಯಲಿ||

---

## ವೀರಭದ್ರರಾಜ ಸು. 1600

ಈತನು ಪಾಲಕಾಪ್ಯಕೃತಹಸ್ತ್ಯಾಯುರ್ವೇದಕ್ಕೆ ಕನ್ನಡಟೀಕೆಯನ್ನು ಬರೆದಿದ್ದಾನೆ. ಇವನು ರಾಜವಂಶಕ್ಕೆ ಸೇರಿದವನು. ಇವನ ತಂದೆ ನೃಸಿಂಹರಾಜ, ತಾಯಿ ವೀರಾಂಬೆ.[1] ನಮಗೆ ದೊರೆತ ಪ್ರತಿ ಅಸಮಗ್ರ. ಇದರಿಂದ ಕವಿಯವಿಷಯವಾಗಿ ಇನ್ನೇನೂ ತಿಳಿವುದಿಲ್ಲ. ಈತನು ಸುಮಾರು 1600 ರಲ್ಲಿ ಇದ್ದಿರಬಹುದು.

ಇವನ ಗ್ರಂಥ

### ಪಾಲಕಾಪ್ಯಕೃತಹಸ್ತ್ಯಾಯುರ್ವೇದಟೀಕೆ

ಮೂಲಗ್ರಂಥವು ಅಂಗದೇಶಕ್ಕೆ ಅಧಿಪತಿಯಾಗಿ ಚಂಪಾಪಟ್ಟಣದಲ್ಲಿದ್ದ ರೋಮಪಾದರಾಯನಿಗೆ ಪಾಲಕಾಪ್ಯಋಷಿ ಹೇಳಿದುದು. ಟೀಕಾಕಾರನ ಬಂಧವನ್ನು ತೋರಿಸುವುದಕ್ಕಾಗಿ ಸ್ವಲ್ಪ ಭಾಗವನ್ನು ತೆಗೆದು ಬರೆಯುತ್ತೇವೆ —

ಆರು ಕೆಲವರು ಚಿಕಿತ್ಸೆಮಾತ್ರನನೆ ಪಠಿಸಿ ಅನುವಾಸನ ನಿರೂಹ ಉತ್ತರಬಸ್ತಿ ಸ್ನೇಹವಿಧಿ ವಿರೇಕವಿಧಿಶಿರೋವಿರೇಚನ ಉಪಚಾರಂಗಳನಱಿಯದೆ ವೈದ್ಯಮಂ ಮಾಡುವವರು ಹೇಡಿ ಹುಯ್ಯಲ ಹೊಕ್ಕಂತೆ. ವಾತದಿಂದ ಹುಟ್ಟಿದ ವ್ಯಾಧಿಗಳಿವು,ಪಿತ್ತಸಂಬಂಧವ್ಯಾಧಿಗಳಿವು, ಶ್ಲೇಷ್ಮಸಂಬಂಧವ್ಯಾಧಿಗಳಿವು, ರಕ್ತಸಂಬಂಧವ್ಯಾಧಿಗಳಿವು, ಸಂಕರದಿಂದ ಹುಟ್ಟಿದ ವ್ಯಾಧಿಗಳಿವು, ಎಂಬ ಭೇದಗಳನಱಿಯದೆ ಮಾಡುವ ವೈದ್ಯ ಭ್ರಷ್ಟಹುದು. ಉತ್ತರಸ್ಥಾನವನಱಿದು ಪಠಿಸದೆ ಇದ್ದ ವೈದ್ಯನ ಕೈಯ ಔಷಧವಂ ಮಾಡಿಸಬಾರದು. ನಾಲ್ಕು ಸ್ಥಾನವನು ಬಲ್ಲಾತನಿಂದ ಚಿಕಿತ್ಸೆಯಂ ಮಾಡಿಸುವುದು.

---

1 ತತ್ರಾಭೂತ್ ಕ್ಷಿತಿಪಾಲಮಸ್ತಕಮಣಿರ್ಭೂಪೋ ನೃಸಿಂಹಾಭಿಧಃ || ತಸ್ಯಾಸೀನ್ಮಹಿಷೀ······ವೀರಾಭಿಧಾ ಪ್ರೇಯಸೀ ‖ ತದ್ವೀರ್ಯಪ್ರಭವೋ ರಾಜಾ ವೀರಭದ್ರಃ ಪ್ರತಾಪವಾನ್ । ಅಕಾರ್ಷೀದ್ಗಜಶಾಸ್ತ್ರಸ್ಯ ಟೀಕಾಂ ಲೌಕಿಕಭಾಷಯಾ ||

ಚಿಕಿತ್ಸೆಯೆನು ಪರಿಸದೆ ಪರಿಚಾರವ ಪರಿಸಿದವರು ಯೋಗ್ಯರಲ್ಲ. ಇನ್ನಾರು ಕೆಲವರು ಪರಿಚಾರವನು ಪರಿಣದೆ ಇದ್ದವರು ಆನೆಗಳ ಸಾಧ್ಯಾಸಾಧ್ಯವನಱಿಯರು. ರೋಗಗಳನಱಿಯದೆ ಔಷಧವಂ ಮಾಡಿದಡೆ ಆನೆಗಳಿಗೆ ವ್ಯಾಧಿ ಹೆಚ್ಚುವುದು. ಪರಿಚಾರದಲ್ಲಿ ಕುಶಲನಾಗಿ ಚಿಕಿತ್ಸಾಪರನಾಗಿ ಕರ್ಮಜ್ಞನಾಗಿ ಕುಲೀನನಾಗಿದ್ದ ವೈದ್ಯನು ಪೂಜ್ಯನು. ನಾನಾಪ್ರಕಾರದಲು ನಾಲ್ಕುಸ್ಥಾನವನು ಅಱಿತು ಆಲಸ್ಯವಿಲ್ಲದೆ ವೈದ್ಯವಂ ಮಾಡುವಾತನು ಉತ್ತಮೋತ್ತಮನೆಂದು ಪಾಲಕಾಪ್ಯನು ಅಂಗರಾಯಂಗೆ ಹೇಱುವನು.

---

## ಬಸವೇಶ ಸು. 1600

ಈತನು ಪದ್ಯೈಕೋತ್ತರಶತಸ್ಥಲವನ್ನು ಬರೆದಿದ್ದಾನೆ. ಇವನು ವೀರಶೈವಕವಿ; ಸುಮಾರು 1600 ರಲ್ಲಿ ಇದ್ದಿರಬಹುದೆಂದು ಊಹಿಸುತ್ತೇವೆ.

ಇವನ ಗ್ರಂಥ

### ಪದ್ಯೈಕೋತ್ತರಶತಸ್ಥಲ

ಇದು ವಾರ್ಧಕಷಟ್ಪದಿಯಲ್ಲಿ ಬರೆದಿದೆ; ಪದ್ಯ 112. ಪದ್ಯರೂಪವಾಗಿರುವುದರಿಂದ ಗ್ರಂಥಕ್ಕೆ ಪದ ಎಂಬ ಉಪಪದವು ಸೇರಿದೆ. ಈ ಏಕೋತ್ತರಶತಸ್ಥಲವನ್ನು ಮೊದಲು ಶಿವನು ಪಾರ್ವತಿಗೂ ಬಳಿಕ ಬಸವನು ಚೆನ್ನಬಸವಾದಿಗಳಿಗೂ ಹೇಳಿದಂತೆಯೂ ಅದನ್ನೇ ಕವಿ ಸದ್ಭಕ್ತಜನಕರಿವಂತೆ ನಿರೂಪಿಸುವಂತೆಯೂ ಹೇಳುತ್ತಾನೆ. ಗ್ರಂಥದಲ್ಲಿ ಪ್ರತಿಪಾದಿತವಾದ ವಿಷಯವು ಈ ಪದ್ಯದಲ್ಲಿ ಸೂಚಿಸಿದೆ—

ವೀರಶೈವಾಂಬುರಾಶಿಯೊಳೊಗೆದ ವ್ರತನಿಯಮ |
ಸಾರರತ್ನಂಗಳೊಳನರ್ಘ್ಯಮಣಿನೂಱೊಂದ |
ನಾರೈದು ತೆಗೆದು ಪರಿವಿಡಿದೋರಣಂಗೊಳಿಸಿ ಸಾರದನುಭವಸೂತ್ರದಿಂ ||
ಹಾರವಿಸಿ ಹರುಷದಿಂ ಪವಣಿಸಿದ ಹಾರವ ವಿ |
ಕಾರವಱಿದಿರ್ದ ಶರಣಗೇ ತೊಡಲಿತ್ತನುವು |
ದಾರಬಸವೇಶ ನಂಬಿದ ಶರಣಸಹವಾಸರಾರೈದು ಚಿತ್ತವಿಪುದು ||

ಈ ಗ್ರಂಥದಿಂದ ಒಂದು ಪದ್ಯವನ್ನು ಉದ್ಧರಿಸಿ ಬರೆಯುತ್ತೇವೆ—

ಕ್ಷಮೆದಮೆಗಳನವರತ ದೇಹದೊಳಗಾವರಿಸಿ |
ಭ್ರಮೆಯುಡುಗಿ ಹಮ್ಮುಡುಗಿ ಮೃಡನ ಶರಣಾಳಿಯೊಳು |

ನಮಿತಭಯರತಸರೂಪು ಪಿದೂರ್ರುಪುವೆಂಬುಭಯಸಂದುಸಂದಱಿದು ನಿಂದು ||
ಅಮರಪದಮೊದಲಾದ ಧರ್ಮಕಾಮ್ಯಾರ್ಥಗಳ |
ಕ್ರಮವ ಬಯಸದೆ ಹರನ ಶರಣಜನಕನವರತ |
ಸುಮನತರದಿಂ ಸೇವೆಗೆಯ್ಯಲುಪು ನಿರುಪಾಧಿಸ್ಥಲಕೆ ಮಾಟಮದೆನಿಸಿತು ||

## ಮಲ್ಲಿಕಾರ್ಜುನ, ಸು. 1600

ಇವನು ಸಹಸ್ರಗಣನಾಮವನ್ನು ಬರೆದಿದ್ದಾನೆ. ಈತನು ವೀರಶೈವಕವಿ. ಹಿಂದೆ ಪಾಲ್ಕುರಿಕೆ ಸೋಮನು ವಿರಚಿಸಿದ ಸಹಸ್ರಗಣನಾಮವನ್ನು [1] ತಾನು ವಿಸ್ತರಿಸಿದಂತೆ ಈ ಭಾಗದಲ್ಲಿ ಹೇಳುತ್ತಾನೆ—

ಶ್ರೀಮತ್ಪಾಲ್ಕುರಿಕೆ ಸೋಮನಾಥ ಪ್ರಭುದೇವೇಶ್ವರಭಕ್ತಪಾಲ |
ಸಹಸ್ರಗಣನಾಮವ ವಿರಚಿಸಿದ ಸತ್ಯಶೀಲ ||
ಶ್ರೀಮಲ್ಲಿಕಾರ್ಜುನಾರ್ಯಂ | ಧೀಮಂತಂ ಪಾಪರಹಿತಗಣಸಂಕುಳಮಂ |
ಪ್ರೇಮದಿ ತುತಿಪೆಂ ಸಾಸಿರ | ನಾಮದ ಜಪವೆಂದು ಪೊಗಱ್ದು ವಿಸ್ತರಿಸಿದಪೆಂ ||

ಇವನಕಾಲವು ಸುಮಾರು 1600 ಆಗಬಹುದು.

ಇವನ ಗ್ರಂಥ

### ಸಹಸ್ರಗಣನಾಮ

ಇದರಲ್ಲಿ ಪ್ರಮಥಗಣ, ರುದ್ರಗಣ, ಭಕ್ತಗಣ, ಯೋಗಾಚಾರ್ಯರು, ತ್ರಿಷಷ್ಟಿಗಣ, ತೇರಸಗಣ, ಅಮರಗಣ, ದಶಗಣ ಇವರ ನಾಮಗಳು ಹೇಳಿವೆ.

ಮಲ್ಲಿಕಾರ್ಜುನಜಪ ಎಂಬ ಒಂದು ಗ್ರಂಥವಿದೆ. ಇದೂ ಏತತ್ಕವಿಕೃತವಾಗಿರಬಹುದೋ ಏನೋ ತಿಳಿಯದು. ಈ ಗ್ರಂಥವು ಗದ್ಯರೂಪವಾಗಿದೆ; ಜಪಮಾಡುವ ಕ್ರಮವನ್ನು ಬೋಧಿಸುತ್ತದೆ; ಶ್ರೀಗುರುವೆ ಪರಂಜ್ಯೋತಿಸ್ವರೂಪನೆ ಎಂದು ಆರಂಭಿಸುತ್ತದೆ. ಬಸವ, ಪ್ರಭುದೇವ, ಬಿಜ್ಜಳರಾಯ, ಚೋರ ಚಿಕ್ಕಯ್ಯ ಇವರುಗಳ ಹೆಸರುಗಳು ಹೇಳಿವೆ. ಇದರಿಂದ ಸ್ವಲ್ಪಭಾಗವನ್ನು ತೆಗೆದು ಬರೆಯುತ್ತೇವೆ—

ಜಪವೆಂಬುದು—ಸೂಲದಮೇಲಣ ಅನ್ನ ಮೆಟ್ಟಿಯೂರಲಿಬಹುದು (?); ಗಗನವ ಮುಟ್ಟಿ ಹಿಡಿಯಲಿಬಹುದು; ವಾಯುವ ಕಟ್ಟಡೆ ಕಟ್ಟುಗ್ರದ ಅಲಗ ನುಂಗಿ ಧರಿ

1 Page 23.

ಸಲಿಬಹುದು; ನೀರಿನೊಳು ಚರಿಸುವ ಹಂಸಗನು ಭೂಮಿಯಮೇಲೆ ಚರಿಸುವ ಅಂದವನು ಮಾಡಲಿಬಹುದು; ಅಂತರದಲಿ ಚರಿಸುವ ಸೂರ್ಯನ ಭೂಮಿಯಮೇಲೆ ಚರಿಸುವ ಅಂದವನು ಕಾಣಲಿಬಹುದು; ಅಸಧೂಮ್ರಪುಷ್ಪವನು ಅಱಿಸಿ ಕಾಣಬಹುದು; ಜೀವನಿಲ್ಲದ ಹೆಣವ ಮಾತನಾಡಿಸಬಹುದು; ಜಪನ ಮಾಡುವುದು ಮಹಾಕಷ್ಟ ಗುಹೇಶ್ವರಾ.

ಜಪವಮಾಡಿದಬಳಿಕ ಹುಸಿಯನುಡಿಯಬೇಕು; ಕಳವು ಕನ್ನವ ಬಿಡಬೇಕು; ಪರಸ್ತ್ರೀಯರ ಪ್ರತ್ಯಕ್ಷಮಾತೃಸ್ಥಾನವೆನ್ನಬೇಕು; ಕುಟಿಲಕುಹಕಲಟಮಟವ್ಯಾಪಾರಂಗಳ ಬಿಡಬೇಕು; ಮೂಲ್ಯವ ಹೇಱಿ ಲಾಭಕ್ಕೆ ತಪ್ಪದಿರಬೇಕು.

---

## ಗಣದಾಸಿವೀರಣ್ಣ ಸು. 1600

ಈತನು ವಚನಗಳನ್ನು ಬರೆದಿದ್ದಾನೆ. ಇವನು ವೀರಶೈವಕವಿ. ಇವನ ಕಾಲವು ಸುಮಾರು 1600 ಆಗಿರಬಹುದೆಂದು ಊಹಿಸುತ್ತೇವೆ. ಇವನ ವಚನಗಳಲ್ಲಿ ನಮ್ಮ ಶಾಂತಕೂಡಲಸಂಗಮದೇವ ಎಂಬ ಅಂಕಿತವಿದೆ. ಒಂದು ವಚನದ ಭಾಗವನ್ನು ಉದಾಹರಿಸುತ್ತೇವೆ---

ತನುಂಧಕಾರತೊಡವಿಲ್ಲದ ನಿರ್ಮಲದ ಆಕಾಶದಂತೆ ಎಲೆಯಿಲ್ಲದ ವೃಕ್ಷದಂತೆ ಱೆಕ್ಕೆಯಿಲ್ಲದ ಪಕ್ಷಿಯಂತೆ ಗಾಳಿಯಿಲ್ಲದ ದೀಪದಂತೆ ನೊರೆತೆರೆಬುದ್ಬುದಾಕಾರವಿಲ್ಲದ ಸಮುದ್ರದಂತೆ ಸಹಜಜ್ಞಾನವು ಇದೆಂದು ಎನ್ನೊಳಗೆ ತೋಱಿದ ನಮ್ಮ ಶಾಂತಕೂಡಲಸಂಗಮದೇವ.

---

## ಚೆನ್ನಕವಿ ಸು. 1600

ಈತನು ನಾನಾರ್ಥಕಂದವನ್ನು [1] ಬರೆದಿದ್ದಾನೆ. ಇವನು ಬ್ರಾಹ್ಮಣಕವಿ; ಭಾರದ್ವಾಜಗೋತ್ರದವನು; ದ್ರಾವಿಡನು. ಈತನು ಸುಮಾರು 1600 ರಲ್ಲಿ ಇದ್ದಿರಬಹುದೆಂದು ತೋರುತ್ತದೆ.

---

1. ಅಚ್ಚಾಗಿರುವ ಪುಸ್ತಕದಲ್ಲಿ "ರಾಮಚರಿತ್ರಂಗಳನೀಧಾರಿಣಿಗೆ ತೋರ್ಪ" ಎಂದಿರುವುದರಿಂದ ಈ ಕವಿ ಒಂದು ರಾಮಚರಿತೆಯನ್ನು ಬರೆದಿರುವಂತೆ ತೋರಬಹುದು. ಆದರೆ ನಾವು ನೋಡಿದ ಓಲೆಯ ಪ್ರತಿಯಲ್ಲಿ "ನಾಮಚಾರಿತ್ರ" ಎಂಬ ಪಾಠವೂ ವ್ಯಾಖ್ಯಾನದಲ್ಲಿ 'ನಾಮ' ಎಂಬುದಕ್ಕೆ 'ಶಬ್ದ' ಎಂಬ ಅರ್ಥವೂ ಇವೆ. ಇದೇ ಸರಿ ಎಂದು ತೋರುತ್ತದೆ.

ಇವನ ಗ್ರಂಥ

ನಾನಾರ್ಥಕಂದ

ಇದು ಸಂಸ್ಕೃತಶಬ್ದಗಳ ನಾನಾರ್ಥಗಳನ್ನು ತಿಳಿಸುವ ನಿಘಂಟು; ಇದರಲ್ಲಿ 160 ಕಂದಗಳಿವೆ ಗ್ರಂಥಾವತಾರದಲ್ಲಿ ಚೆನ್ನಿಗರಾಯನ ಸ್ತುತಿ ಇದೆ. ಬಳಿಕ ಕವಿ ಗಣೇಶ, ಬ್ರಹ್ಮ, ಈಶ್ವರ, ಸರಸ್ವತಿ ಇವರುಗಳನ್ನು ಹೊಗಳಿದ್ದಾನೆ. ಈ ಗ್ರಂಥದಿಂದ ಒಂದೆರಡು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ಮತ್ತಗಜಂ ಮರ ಸರ್ಪಂ | ಕತ್ತಲೆಯುದಕಾಗ್ನಿ ಸೀಸಮುಖ್ಯಂ ಶಂಖಂ |
ಬಿತ್ತರಮಾಗಿಸ ಪೆಸರೊಂ | ಬತ್ತುಂ ನಾಗಾಭಿಧಾನಮೆನಿಕುಂ ಜಗದೊಳ್ ||
ಅರಗಗ್ನಿ ಕೀಲು ಗಿರಿ ಮ | ತ್ಸರವೈದುಂ ಕೀಲಕಾಖ್ಯ ಗಜದಂತಾಗ್ರಂ |
ವರಪುತ್ತಳಿ ಮುಕುರ ಮನೋ | ಹರ ನಾಲ್ಕಭಿಧಾನ ಜಗಕೆ ಪ್ರತಿಮಾಶಬ್ದಂ||

ಈ ಗ್ರಂಥಕ್ಕೆ ಒಂದು ಪುರಾತನವ್ಯಾಖ್ಯಾನವೂ ದೊರೆಯುತ್ತದೆ.

---

## ವಿರೂಪಾಕ್ಷ ಸು. 1600

ಈತನು ಲಿಂಗಾರ್ಚನರಗಳೆಯನ್ನು ಬರೆದಿದ್ದಾನೆ. ಇವನು ವೀರ ಶೈವಕವಿ; ಸುಮಾರು 1600 ರಲ್ಲಿ ಇದ್ದಿರಬಹುದು.

ಇವನ ಗ್ರಂಥವು ಲಲಿತರಗಳೆಯಲ್ಲಿ ಬರೆದಿದೆ. ಆರಂಭದಲ್ಲಿ ಈ ವೃತ್ತವಿದೆ—

.............. ............... |
......ನಿಶರಣಂ ನಿಜದೈಕ್ಯದ ಸದ್ಗುಣಾದಿಭೇ ||
ದಂಗಳ ಲಿಂಗಷಡ್ವಿಧಕ್ರಮಂಗಳ ನಿಶ್ಚಯಾನೇಕಮಪ್ಪ ಮಾ |
ರ್ಗಂಗಳನೆಂದು ಸದ್ಗುರುವೆ ಲಿಂ....... ರಚಿಸ್ಕಂಬು ||

## 17ನೆಯ ಶತಮಾನದ ಕವಿಗಳು

### ಭಟ್ಟಾಕಳಂಕದೇವ. 1604

ಈತನು ಕರ್ಣಾಟಕಶಬ್ದಾನುಶಾಸನವನ್ನು ಬರೆದಿದ್ದಾನೆ. ಇವನು ಜೈನಕವಿ; ಇವನ ಗುರು

ಮೂಲಸಂಘ ದೇಶೀಯಗಣ ಪುಸ್ತಕಗಚ್ಛ ಕುಂಡಕುಂದಾನ್ವಯವಿರಾಜಮಾನ ಶ್ರೀಮದ್ರಾಯರಾಜಗುರುಮಂಡಲಾಚಾರ್ಯ ಮಹಾವಾದವಾದೀಶ್ವರ ರಾಯವಾದಿ ಪಿತಾಮಹ ಸಕಲವಿದ್ವಜ್ಜನಚಕ್ರವರ್ತಿ ಬಲ್ಲಾಳರಾಯಜೀವರಕ್ಷಾಪಾಲಕೇತ್ಯಾದ್ಯನೇಕಾನ್ವರ್ಥಬಿರುದಾವಲೀವಿರಾಜಮಾನ ಶ್ರೀಮಚ್ಚಾರುಕೀರ್ತಿಪಂಡಿತದೇವಾಚಾರ್ಯ ಶಿಷ್ಯಪರಂಪರಾಯಾತ ಶ್ರೀಸಂಗೀತಪುರಸಿಂಹಾಸನಪಟ್ಟಾಚಾರ್ಯಶ್ರೀಮದಕಲಂಕದೇವನು.

ಈ ಗ್ರಂಥವನ್ನು ಶಕ 1526 ನೆಯ ಶೋಭಕೃತ್ಸಂವತ್ಸರದಲ್ಲಿ, ಎಂದರೆ 1604ರಲ್ಲಿ ಬರೆದಂತೆ ಹೇಳುತ್ತಾನೆ. ಮದರಾಸ್ ಪ್ರಾಚ್ಯಕೋಶಾಲಯದಲ್ಲಿರುವ ಬಿಳಿಗಿಯತಾಲ್ಲೂಕಿನ ಒಂದು ಶಾಸನದ (1592) ಪ್ರತಿಯಿಂದ ಈತನ ಗುರುಪರಂಪರೆಯೇ ಮುಂತಾದ ವಿಷಯಗಳನ್ನು ಕುರಿತು ಈ ಅಂಶಗಳು ತಿಳಿಯುತ್ತವೆ:—

ಕರ್ಣಾಟಸಿಂಹಾಸನಾಧೀಶ್ವರ ಬಲ್ಲಾಳರಾಯಜೀವರಕ್ಷಾಪಾಲಕನಾದ ಚಾರುಕೀರ್ತಿಪಂಡಿತನು ಹೀಗೆ ಕೀರ್ತಿಯನ್ನು ಪಡೆದನು—

ತಿಂಬೆಂ ರಾಯನನೆಂದು ನೆ | ಲಂ ಬಾಯ್ದೆರೆವಂತೆ ತನ್ನ ಮಂತ್ರಜಪವಿಧಿಯಿನದಂ |
ಕುಂಬಳಕಾಯಿಂ ಪೂಟ್ಟಿದ | ಶಂಬಡೆದೆಸಕಕ್ಕೆ ಪಂಡಿತಾರ್ಯನೆ ನೋಂತಂ||1

ಇವನ ಶಿಷ್ಯಪರಂಪರೆಯಲ್ಲಿ ಶ್ರುತಕೀರ್ತಿ ತನ್ನ ಶಿಷ್ಯನಾದ ಅಗ್ಗಳನಿಂದ ಚಂದ್ರಪ್ರಭಪುರಾಣವನ್ನು ಹೇಳಿಸಿದನು. ಶ್ರುತಕೀರ್ತಿಯ ಶಿಷ್ಯನಾದ ವಿಜಯಕೀರ್ತಿ ವೈದಿಕಮತದವನಾಗಿದ್ದ ಅಭಯಚಂದ್ರಸೂರಿಯನ್ನು ಜೈನನನ್ನಾಗಿಮಾಡಿದನು; ಸಂಗೀತಪು

---

1. ವಿಷ್ಣುವರ್ಧನನು ವೈಷ್ಣವನಾದಮೇಲೆ ಜೈನರಿಗೆ ಹಿಂಸೆಯನ್ನು ಉಂಟುಮಾಡಲು ನೆಲವು ದೊಡ್ಡದಾಗಿ ಬಾಯಿಬಿಟ್ಟು ಊರುಗಳೂ ಪ್ರಾಣಿಗಳೂ ನಾಶವಾಗುತ್ತಿರಲು ಉಪಾಯಾಂತರವಿಲ್ಲದೆ ದೊರೆ ಬಂದು ಪ್ರಾರ್ಥಿಸಿಕೊಳ್ಳಲು ಚಾರುಕೀರ್ತಿಪಂಡಿತನು ಕುಂಬಳಕಾಯಿಗಳನ್ನು ಮಂತ್ರಿಸಿಹಾಕಿ ಆ ಬಿಲವನ್ನು ಮುಚ್ಚಿದನು—ಎಂದು ಜೈನರಲ್ಲಿ ಇತಿಹಾಸವಿದೆ.

ರಾಧಿಪನಾದ ಇಂದ್ರಭೂಪಾಲನಿಗೆ ಸಾಮ್ರಾಜ್ಯಪ್ರದನಾದನು. ಇವನ ಶಿಷ್ಯ ಶ್ರುತಕೀರ್ತಿ ತನ್ನ ಶಿಷ್ಯನಾದ ಸಂಗಮಭೂಪನನ್ನು ಪ್ರತಿಷ್ಠಿಸಿದನು. ಇವನ ಶಿಷ್ಯ ವಿಜಯಕೀರ್ತಿ ತನ್ನ ಶಿಷ್ಯನಾದ ದೇವರಾಯಭೂಪಾಲನಿಗೆ ಪಶ್ಚಿಮಸಮುದ್ರನಿಕಟದೊಳ್ ಭಟಕಳಮೆಂಬ ಪಟ್ಟಣವನು ಕಟ್ಟಿಸಿದನು. ಇವನ ಶಿಷ್ಯರಾದ ಅಕಳಂಕಚಂದ್ರಪ್ರಭರು ಶ್ವೇತಪುರದೊಳ್ ತಿಮ್ಮಭೂಪಾಲ ನರಸಭೂಪಾಲರೆಂಬ ಶಿಷ್ಯರಿಗೆ ಪರಮಧರ್ಮರಹಸ್ಯೋಪದೇಶವನ್ನು ಮಾಡಿದರು. ಅಕಳಂಕನ ಶಿಷ್ಯ ವಿಜಯಕೀರ್ತಿ. ಇವನ ಶಿಷ್ಯ ಅಕಳಂಕದೇವ. ಇವನ ಶಿಷ್ಯ ಭಟ್ಟಾಕಳಂಕ. ಇವನು ಉದ್ದಾಮಪಂಡಿತನಾಗಿ ವಿಜಯನಗರದ ಶ್ರೀರಂಗರಾಜನ (1573–1584) ಕಾಲದಲ್ಲಿದ್ದಂತೆ ಈ ಪದ್ಯಗಳಲ್ಲಿ ಹೇಳಿದೆ—

ಆತನ ಶಿಷ್ಯಂ ಸಕಲಕ | ಲಾತತವೈದುಷ್ಯನಖಿಲಗುಣಿಗಣಭೂಷ್ಯಂ |
ಸಾತಿಶಯಚರಿತಪೋಷ್ಯ | ಖ್ಯಾತಂ ಭಟ್ಟಾಕಲಂಕನನುಪಮಭಾಷ್ಯಂ ||
ಶ್ರೀರಂಗರಾಜನೃಪತಿ | ಪ್ರೇರಣೆಯಿಂ ವಿಜಯಮುನಿಪನುಪದೇಶನದಿಂ |
ಸಾರತ್ರಿತಯಮುಮನಲಂ | ಕಾರತ್ರಿತಯಮುಮನೋದಿ ಜಸಮಂ ಪಡೆದಂ ||
ಪರಶಬ್ದಾಗಮತರ್ಕನಾಟಕಮಹಾಲಂಕಾರಸತ್ಸಂಹಿತಾ |
ಭರತಜ್ಯೋತಿಷಮಂತ್ರತಂತ್ರವಿಧಿಶಿಲ್ಪನ್ಯಾಯವೇದಸ್ಮೃತಿ ||
ಸ್ಫುರದಧ್ಯಾತ್ಮಪುರಾಣವೈದ್ಯಗಣಿತಧ್ಯಾನಾದಿಶಾಸ್ತ್ರಾಬ್ಧಿಜಂ |
ದಿರನೆಂದುರ್ವರೆಗೆ ಕೂರ್ತು ಕೀರ್ತಿಸುವರೀ ಭಟ್ಟಾಕಲಂಕಾರ್ಯನಂ ||

ಇವನ ಸಮಕಾಲದವರು ಫಣಿಂದ್ರ, ಅಕಲಂಕದೇವ; ಶಿಷ್ಯ ಭಟ್ಟಾಕಲಂಕ ಈ ಭಟ್ಟಾಕಲಂಕನು ಫಣಿಪೇಂದ್ರಸಂಪೂಜಿತಪದಕಮಲನಾಗಿ ಪೆನಗೊಂಡೆಯವೆಂಕಟಪತಿರಾಯನ (1586-1615) ಆಳಿಕೆಯಲ್ಲಿ ಇದ್ದನು. ಇವನೇ ಕವಿ. ಮೇಲಣ ಶಾಸನವನ್ನು ಶಕ 1515ನೆಯ ನಂದನದಲ್ಲಿ (1592) ಇವನೇ ಬರೆಯಿಸಿದಂತೆ ತಿಳಿಯುತ್ತದೆ.

ದೇವಚಂದ್ರನ ರಾಜಾವಳೀಕಥೆಯಲ್ಲಿ (1838) ಇವನ ವಿಷಯವಾಗಿ ಹೀಗೆ ಹೇಳಿದೆ--

ಸುಧಾಪುರದೊಳ್ ಭಟ್ಟಾಕಲಂಕಸ್ವಾಮಿಗಳ್ ಶಾಸ್ತ್ರಂಗಳೆಲ್ಲಮಂ ಕಲ್ತುಮಹಾವಿದ್ವಾಂಸರೆನಿಸಿ ಪ್ರಾಕೃತ, ಸಂಸ್ಕೃತ, ಮಾಗಧಿ ಮೊದಲಾದ ಷಡ್ಭಾಷಾಕವಿಗಳಾಗಿ ಕರ್ಣಾಟಕವ್ಯಾಕರಣಮುಂ ರಚಿಸಿ ಕೀರ್ತಿಯಂ ಪಡೆದರ್.

ತನ್ನ ಗ್ರಂಥದಲ್ಲಿ ಪಂಪ, ಪೊನ್ನ, ರನ್ನ, ನಾಗಚಂದ್ರ, ನೇಮಿ

ಚಂದ್ರ, ರುದ್ರಭಟ್ಟ, ಅಗ್ಗಳ, ಆಂಡಯ್ಯ, ಮಧುರ ಮುಂತಾದ ಕವಿಗಳ ಕಾವ್ಯಗಳಿಂದ ಪದ್ಯಗಳನ್ನು ಉದಾಹರಿಸಿದ್ದಾನೆ.

ತಾನು ಕನ್ನಡ ಸಂಸ್ಕೃತ ಈ ಎರಡುಭಾಷೆಗಳ ವ್ಯಾಕರಣದಲ್ಲಿಯೂ ಪ್ರವೀಣನೆಂದೂ ರಾಜರ ಸಭೆಗಳಲ್ಲಿ ಜೈನಮತವನ್ನು ಹಲವುಬಾರಿ ಸ್ಥಾಪಿಸಿದೆನೆಂದೂ ಈ ಪದ್ಯದಲ್ಲಿ ಹೇಳಿಕೊಂಡಿದ್ದಾನೆ-

ಯೋ ನಾನಾಮತತರ್ಕಕರ್ಕಶನುತಿವ್ಯಾಖ್ಯಾನಮುದ್ರಾಪಟುಃ ।
ಯಃ ಪ್ರಾಭಾವಯದಾರ್ಹತಂ ನಿಜಮತಂ ಭೂಭೃತ್ಸಭೇನೇಕಧಾ ।
ಯಃ ಕರ್ಣಾಟಕಸಂಸ್ಕೃತೋಭಯವಿಧಂ ಶಬ್ದಾಬ್ಧಿಮುತ್ತೀರ್ಣವಾನ್ ।
ಸೋಯಂ ಸಾಧುಜನಪ್ರಿಯೋ ವಿಜಯತೇ ಭಟ್ಟಾಕಲಂಕೋ ಭುವಿ ॥

ಇವನ ಗ್ರಂಥ

## ಕರ್ಣಾಟಕಶಬ್ದಾನುಶಾಸನ

ಇದು ಕನ್ನಡಭಾಷೆಯ ವ್ಯಾಕರಣಗ್ರಂಥವು. ಇದರಲ್ಲಿ 4 ಪಾದಗಳಿವೆ; ಸೂತ್ರಗಳು 592 ಈ ಸೂತ್ರಗಳಿಗೆ ಭಾಷಾಮಂಜರಿಯೆಂಬ ವೃತ್ತಿಯೂ ಮಂಜರೀಮಕರಂದವೆಂಬ ವ್ಯಾಖ್ಯಾನವೂ ಇವೆ. ಸೂತ್ರ, ವೃತ್ತಿ, ವ್ಯಾಖ್ಯಾನ ಈ ಮೂರೂ ಸಂಸ್ಕೃತಭಾಷೆಯಲ್ಲಿ ಬರೆದಿವೆ. ಪೂರ್ವಕವಿಗಳ ಕನ್ನಡ ಗ್ರಂಥಗಳಿಂದ ಉದಾಹರಣೆಗಳು ಕೊಟ್ಟಿವೆ. ಇದು ನಾಗವರ್ಮನ ಕರ್ಣಾಟಕಭಾಷಾಭೂಷಣಕ್ಕಿಂತಲೂ ವಿಸ್ತಾರವಾಗಿಯೂ ಪ್ರೌಢವ್ಯಾಖ್ಯಾನಸಮೇತವಾಗಿಯೂ ಇದೆ; ಶಬ್ದಮಣಿದರ್ಪಣಕ್ಕಿಂತಲೂ ಹೆಚ್ಚು ವಿಷಯಗಳನ್ನು ಒಳಕೊಂಡಿದೆ. ಕನ್ನಡಭಾಷೆಗೆ ಇದು ಅತ್ಯುತ್ತಮವ್ಯಾಕರಣಗ್ರಂಥವೆಂದು ಹೇಳಬಹುದು.

ಗ್ರಂಥಾವತಾರದಲ್ಲಿ ವರ್ಧಮಾನಸ್ತುತಿರೂಪವಾದ ಈ ಶ್ಲೋಕವಿದೆ:

ನಮಃ ಶ್ರೀವರ್ಧಮಾನಾಯ ವಿಶ್ವವಿದ್ಯಾವಭಾಸಿನೇ ।
ಸರ್ವಭಾಷಾಮಯೀ ಭಾಷಾ ಪ್ರವೃತ್ತಾ ಯನ್ಮುಖಾಂಬುಜಾತ್ ॥

ಮಂಜರೀಮಕರಂದದಿಂದ ಕನ್ನಡಭಾಷೆಯ ಪ್ರಶಂಸಾರೂಪವಾದ ಸ್ವಲ್ಪಭಾಗವನ್ನು ತೆಗೆದು ಬರೆಯುತ್ತೇವೆ—

ನಚೈಷಾ ಭಾಷಾ ಶಾಸ್ತ್ರಾನುಪಯೋಗಿನೀ; ತತ್ತ್ವಾರ್ಥಮಹಾಶಾಸ್ತ್ರವ್ಯಾಖ್ಯಾನಸ್ಯ ಷಣ್ಣವತಿಸಹಸ್ರಪ್ರಮಿತಗ್ರಂಥಸಂದರ್ಭರೂಪಸ್ಯ ಚೂಡಾಮಣ್ಯಭಿಧಾನಸ್ಯ ಮಹಾ

ಶಾಸ್ತ್ರಸ್ಯ, ಅನ್ಯೇಷಾಂ ಚ ಶಬ್ದಾಗಮಯುಕ್ತ್ಯಾಗಮಪರಮಾಗಮವಿಷಯಾಣಾಂ ತಥಾ ಕಾವ್ಯನಾಟಕಾಲಂಕಾರಕಲಾಶಾಸ್ತ್ರವಿಷಯಾಣಾಂ ಚ ಬಹೂನಾಂ ಗ್ರಂಥಾನಾಮಪಿ ಭಾಷಾಕೃತಾನಾಂ ಉಪಲಭ್ಯಮಾನತ್ವಾತ್. ಅತ ಏವ ಮಹಾಜನಪರಿಗ್ರಾಹ್ಯಾ, ಏತದ್ಗ್ರಂಥಕರ್ತೄಣಾಮೇವ ಮಹಾಜನತ್ವಾತ್. [1]

---

## ಹರೀಶ್ವರ. 1606

ಈತನು ಪ್ರಭುದೇವರಪುರಾಣವನ್ನು ಬರೆದಿದ್ದಾನೆ. ಇವನು ವೀರಶೈವಕವಿ; ತನ್ನ ಪರಂಪರೆಯನ್ನು ಹೀಗೆ ಹೇಳಿಕೊಂಡಿದ್ದಾನೆ.—ಯಳಂದೂರು ಸಿಂಹಾಸನಾಧೀಶ್ವರನಾದ ಹರೀಶ್ವರದೇವ; ಮಗ ಪ್ರಭುದೇವ; ಮಗ ತೋಂಟದಾಚಾರ್ಯ; ಮಗ ಕವಿ ಹರೀಶ್ವರ. ಇವನಿಗೆ ಹರಿದೇವ ಎಂಬ ಹೆಸರೂ ಉಂಟು. ಇವನ ಗುರು ಆಗಮಜ್ಞನಾದ ವೃಷಭಪುರದ ಸಿದ್ಧವೀರ. ಪೂರ್ವಕವಿಗಳಲ್ಲಿ ಗುಬ್ಬಿಯಮಲ್ಲಣ್ಣನನ್ನು ಸ್ಮರಿಸುತ್ತಾನೆ. ಈತನು ಗಣಭಾಷ್ಯರತ್ನಮಾಲಾಕರ್ತೃವೋ (ಸು. 1475)ಅಥವಾ ವೀರಶೈವಾಮೃತಪುರಾಣಕರ್ತೃವೋ ( 1530 ) ವ್ಯಕ್ತವಾಗುವುದಿಲ್ಲ ಕವಿ ಅವರಿಬ್ಬರ ಕಾಲಕ್ಕೂ ಈಚೆಯವನಾಗಿರಬಹುದು. ತನ್ನ ಗ್ರಂಥವನ್ನು ವಿಶ್ವಾವಸು ಜ್ಯೇಷ್ಠ ಶುದ್ಧ ಪಾಡ್ಯದಲ್ಲಿ ಆರಂಭಿಸಿ ಪರಾಭವ ಜ್ಯೇಷ್ಠ ಬಹುಳ ದಶಮಿಯಲ್ಲಿ ಮುಗಿಸಿದಂತೆ ಹೇಳುತ್ತಾನೆ. ಈ ಪರಾಭವವು ಕ್ರಿಸ್ತಶಕ1606 ಆಗಿರಬಹುದೆಂದು ನಮಗೆ ತೋರುತ್ತದೆ.

ಪೂರ್ವಕವಿಗಳಲ್ಲಿ ಕೆರೆಯಪದ್ಮರಸ, ಪಾಲ್ಕುರಿಕೆಸೋಮೇಶ್ವರ, ಪಂಡಿತದೇವ, ಗುಬ್ಬಿಯಮಲ್ಹಣ, ಜಕ್ಕಣಾರ್ಯ, ಚಾಮರಸ, ಭೀಮ, ನೀಲಕಂಠಾಚಾರ್ಯ, ಉದ್ಭಟರಾಜ, ಭೋಜ, ಬಾಣ, ಮಯೂರ, ಭಲ್ಲಟ, ಭವಭೂತಿ, ಮಲ್ಹಣ,ಬಿಲ್ಹಣ, ಹಂಪೆಯಹರಿದೇವ ಇವರುಗಳನ್ನು ಸ್ಮರಿಸಿದ್ದಾನೆ.

ಇವನ ಗ್ರಂಥ

### ಪ್ರಭುದೇವರಪುರಾಣ

ಇದು ನಾನಾಷಟ್ಪದಿಗಳಲ್ಲಿ ಬರೆದಿದೆ. ಸಂಧಿ 9, ಪದ್ಯ 1479. ಇದ

---

1 ಪ್ರಥಮ ಸಂಪುಟದ ಅವತರಣಿಕೆಯನ್ನು ನೋಡಿ.

ರಲ್ಲಿ ಶಬ್ದಚಿತ್ರವು ವಿಶೇಷವಾಗಿದೆ. ಈ ಗ್ರಂಥಕ್ಕೆ ಪ್ರಾಸರತ್ನಾಕರ ಎಂಬ ಹೆಸರೂ ಉಂಟು. ಇದರಲ್ಲಿ ಪ್ರಭುದೇವನ ಅಥವಾ ಅಲ್ಲಮನ ಚರಿತವು ಹೇಳಿದೆ. ಇದನ್ನು ತನ್ನ ಗುರು ಸಿದ್ಧವೀರನ ಆಜ್ಞಾನುಸಾರವಾಗಿ ಬರೆದಂತೆ ಕವಿ ಹೇಳುತ್ತಾನೆ. ಗ್ರಂಥಾವತಾರದಲ್ಲಿ ಶಿವಸ್ತುತಿಯಿದೆ. ಬಳಿಕ ಕವಿ ಪಾರ್ವತಿ, ಗಣೇಶ, ಷಣ್ಮುಖ, ನಂದಿ, ಭೃಂಗಿ, ವೀರಭದ್ರ, ಬಸವ, ಸಿದ್ಧರಾಮ, ತೋಂಟದಸಿದ್ಧ, ಕೊಟ್ಟೂರುಬಸವ, ಸ್ವಗುರು ಸಿದ್ಧವೀರ ಇವರುಗಳನ್ನು ಹೊಗಳಿದ್ದಾನೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ—

ಬೆಳುವಲನಾಡು

ಮಡಿಯೆಂಬ ನುಡಿ ವ್ರೀಹಿಲಲಿತಕ್ಷೇತ್ರಂಗಳೊಳು |
ಜಡಿಯೆಂಬ ನುಡಿ ಮೇಘದುತ್ಪಾತವರ್ಷದೊಳ್ |
ಪೊಡೆಯೆಂಬ ನುಡಿ ಕಟುಖಿತಕ್ಷೆನೆಯೊಳಂ ಕಡಿಯೆಂಬ ನುಡಿ ತುಂದದೊಳ್‌ಭಾವಿಸೆ ||
ಪಿಡಿಯೆಂಬ ನುಡಿ ತಳೋದರಿಯರುರುಮಧ್ಯದೊಳು |
ಮುಡಿ ಯೆಂಬ ನುಡಿ ಮೋಹನಾಂಗಿಯರ ಧಮ್ಮಿಲ್ಲ |
ದೆಡೆಯೊಳಲ್ಲದೆ ಮತ್ತೆ ಕೆಡೆನುಡಿಗಳಿಲ್ಲ ಬೆಳುವಲನಾಡನೇವೊಗಳ್ವನು ||

ಕೊಳ

ರಾಜಹಂಸೆಗಳು ಮರಿಗಳ ಪಕ್ಕದೊಳಗಿಟ್ಟು |
ನೈಜದಿಂ ಕಾಸಾರಕೊಯ್ದು ನಾಳಿಕೆತಂತು |
ವ್ರೋಜೆಯಿಂ ಸರಪಣೆಯಹೂಡಿ ಸರಸಿರುಹಪತ್ರವ ತೊಟ್ಟಿಲಾಗಿ ರಚಿಸಿ ||
ತೇಜದಿಂದೆಸೆವ ಶಿಶುಗಳನಲ್ಲಿ ಪಟ್ಟಿರಿಸಿ |
ರಾಜಕರಗಳು ಸೋಂಕುವಂತೆ ನಸುಮುಸುಕಿಟ್ಟು |
ಭ್ರಾಜಿಸುವಸಲ್ಲಾಪದಿಂದ ಜೋಜೋ ಎಂದುತೂಗಿ ತೊನೆವುವು ವನದೊಳು ||

ಕವಿಯ ಗುರು ಸಿದ್ಧವೀರನ ಕೀರ್ತಿ.

ಆತನ ಸುಕೀರ್ತ್ಯಂಗನೆಯು ಬಿಳಿದನುಟ್ಟು ವಿ |
ಖ್ಯಾತಹಾರಂ ಹೀರಕೊಡಿಗೆಗಳ ತೊಟ್ಟುಸಿತ |
ಜಾತಿಮಲ್ಲಿಗೆ ಕುಂದಕುಸುಮಗಳ ತುಱುಬಿ ಬೆಳ್ದಾವರೆಯ ಕರದಿ ಪಿಡಿದು ||
ಶಾತಗರ್ಭೋದರನ ವಾಹನೈರಾವಣದ |

ಪೂತಗಮನವ ಚರಣದೊಳ್ ತೋಱಿ ನಸುನಗುತ |
ಪಾತಾಳಸ್ವರ್ಗಂದುವುಡುಲೋಕದಿಗ್ದಿಸೆಗಳೊಳಗೆ ಚರಿಸುವಳೇಗಳು ॥

---

## ಪಾಯಣವ್ರತಿ. 1606

ಈತನು ಸನತ್ಕುಮಾರಚರಿತೆಯನ್ನು ಬರೆದಿದ್ದಾನೆ. ಇವನು ಜೈನ ಕವಿ. ಶ್ರೀರಂಗಪಟ್ಟಣದ ಆದಿಜಿನೇಶನ ಚರಣಸನ್ನಿಧಿಯಲ್ಲಿ ಈ ಗ್ರಂಥ ವನ್ನು ಶಕ 1528 ಪರಾಭವದಲ್ಲಿ-ಎಂದರೆ 1606 ರಲ್ಲಿ-ಮುಗಿಸಿದಂತೆ ಹೇಳುವುದರಿಂದ ಈತನ ಸ್ಥಳ ಶ್ರೀರಂಗಪಟ್ಟಣವೆಂದು ತೋರುತ್ತದೆ.

ಇವನ ಗ್ರಂಥ

### ಸನತ್ಕುಮಾರಚರಿತೆ

ಇದು ಸಾಂಗತ್ಯದಲ್ಲಿ ಬರೆದಿದೆ.

---

## ಬಸವಲಿಂಗ. 1611

ಈತನು ಶಿವಾಧಿಕ್ಯಪುರಾಣವನ್ನು ಬರೆದಿದ್ದಾನೆ. ಇವನು ವೀರಶೈವಕವಿ. ಇವನ ಗುರು "ಸಾರಂಗಸಿಂಹಾಸನಕೆ ಬಂದು ಘನಲಿಂಗಪದವನಂಗವಿಸಿ ನಿಂದು ಮಂಗಳವಾಡರಾಷ್ಟ್ರದೊಳು ಮೂಱುಸಿಂಹಾಸನದ ಡಾಮರವನೆಬ್ಬಟ್ಟಿ ಭೂರಿವೃಷ್ಟಿಯ ಕಱೆದು ಬಗೆವೆತ್ತ" ಚೆನ್ನಮಲ್ಲೇಶ. ಶಾಂತದೇಶಿಗರ ಕರುಣದಿಂ ಗ್ರಂಥವನ್ನು ಬರೆದಂತೆ ಹೇಳುತ್ತಾನೆ. ಅಲ್ಲದೆ ಚೆನ್ನವೀರೇಶದೇಶಿಕರು ಕೃತಿಯನುಸುರೆನೆ ನಿರೂಪವ ಕೊಂಡು ಬರೆದೆನು ಎನ್ನುತ್ತಾನೆ.

ಈ ಗ್ರಂಥವನ್ನು ಶಕ "ದ್ಯುತಿಪಂಚಶತವತ್ಸರದಮೇಲೆ ಅಷ್ಟಾದಶವರುಷವೆನೆ ವಿರೋಧಿಕೃತುವೆಂಬ ಸಂವತ್ಸರ"ದಲ್ಲಿ ಬರೆದಂತೆ ಹೇಳಿದೆ. ಆದರೆ ವಿರೋಧಿಕೃತು ಶಕ 1518 ಆಗುವುದಿಲ್ಲ, ಶಕ 1533 ಆಗುತ್ತದೆ. ಇಲ್ಲಿ ಏನಾದರೂ ತಪ್ಪು ಬಿದ್ದಿರಬಹುದೆಂದು ತೋರುತ್ತದೆ. ಶಕ 1533 ರನ್ನು ಇಟ್ಟುಕೊಂಡರೆ ಗ್ರಂಥದ ಕಾಲವು 1611 ಆಗುತ್ತದೆ.

ಪೂರ್ವಕವಿಗಳಲ್ಲಿ ಶಿವಲೆಂಕಮಂಚಣ್ಣ, ಮಲುಹಣ, ಮಲ್ಲಿಕಾರ್ಜುನಪಂಡಿತ, ಕೇಶಿರಾಜಯ್ಯ, ಶ್ರೀಪತೀಶ್ವರ, ಬಾಣ, ಮಯೂರ, ಓಹಿಲ, ಉದ್ಭಟದೇವ, ಪಾಲ್ಕುರಿಕೆ ಸೋಮೇಶ್ವರ, ಪದ್ಮರಾಜ, ಮಾಯಿದೇವ ಇವರುಗಳನ್ನು ಸ್ಮರಿಸಿದ್ದಾನೆ.

ಇವನ ಗ್ರಂಥ

## ಶಿವಾಧಿಕ್ಯಪುರಾಣ

ಇದು ವಾರ್ಧಕಷಟ್ಪದಿಯಲ್ಲಿ ಬರೆದಿದೆ; ಸಂಧಿ 11, ಪದ್ಯ 965; ಕೆಲವು ಕಂದವೃತ್ತವಚನಗಳೂ ಇವೆ; ಒಟ್ಟು 1400; ಇನ್ನೊಂದು ಪ್ರತಿಯಲ್ಲಿ 1621 ಎಂದಿದೆ. ಇದಕ್ಕೆ ಬಳ್ಳಿಗಾವಿಮಾಹಾತ್ಮ್ಯ, ಸಮಯಾಚಾರಮತದ ಪೌರಾಣ ಎಂಬ ಹೆಸರುಗಳೂ ಉಂಟು.

ಕಥಾಗರ್ಭ—ಬೆಳುವಲದೇಶದ ಬಳ್ಳಿಗಾವಿಪುರದಲ್ಲಿ ಅರಿರಾಯಶರಭಭೇರುಂಡ ಎಂಬ ಬಿರುದುಳ್ಳ ಭುಜಂಗರಾಯನೆಂಬ ಅರಸನಿದ್ದನು. ಅವನ ರಾಣಿ ನಾಗಪದ್ಮಲದೇವಿ. ಅದೇ ಊರಲ್ಲಿ ಶಿವಭಕ್ತಶಂಭುಭಟ್ಟನಿಗೂ ಸೋಮಲಾಂಬಿಕೆಗೂ ಪುತ್ರನಾದ ವಿಶ್ವಾಚಾರ್ಯನೆಂಬ ಶಿವಭಕ್ತನಿದ್ದನು. ಈತನು ಹೊಲೆಯನಾದ ಶಿವದೇವನ ಮನೆಗೆ ಹೋಗಿ ಊಟಮಾಡಿದನೆಂದು ವಿಪ್ರವಾದಿಗಳು ಆಕ್ಷೇಪಿಸಲು ವಿಶ್ವಾಚಾರ್ಯನು ಅವರನ್ನು ವಾದದಲ್ಲಿ ಭಂಗಿಸಿ ಬ್ರಹ್ಮವಿಷ್ಣ್ವಾದಿಗಳನ್ನು ತೃಣೀಕರಿಸಿದನು. ಅವರು ಅರಸಿಗೆ ಮೊರೆಯಿಡಲು ಅರಸು ಕೋಪೋದ್ರೇಕದಿಂದ ವಿಶ್ವಾಚಾರ್ಯನನ್ನು ಕರಸಲು ಆತನು ಸಭೆಯಲ್ಲಿ ವೇದಾಗಮಪುರಾಣಶಾಸ್ತ್ರಶ್ರುತಿಸ್ಮೃತೀತಿಹಾಸಾದ್ಯುಪನಿಷದ್ವಾಕ್ಯಗಳಿಂದ ಹರಿಯನ್ನು ತೃಣೀಕರಿಸಿ ಶಿವಾಧಿಕ್ಯವನ್ನು ಸ್ಥಾಪಿಸಿ ದೊರೆಯನ್ನು ಶಿವಭಕ್ತನನ್ನಾಗಿ ಮಾಡಿಕೊಂಡನು. ಒಡನೆ ಶಂಭು ಪ್ರಸನ್ನನಾಗಲು ದೊರೆ ಸಹಿತ ತಾನು ತನ್ನ ತಂದೆತಾಯಿಗಳು ಎಲ್ಲರೂ ಪುಷ್ಪಕವನ್ನೇರಿ ಕೈಲಾಸಕ್ಕೆ ಹೋದರು.

ಈ ಗ್ರಂಥದ ಉತ್ಕೃಷ್ಟತೆಯನ್ನು ಕವಿ ಹೀಗೆ ಹೇಳಿದ್ದಾನೆ—

ಪರಮಭಕ್ತರ ಪೆರ್ಚು ಪರವಾದಿಗೆದೆಗಿಚ್ಚು ಶರಣಷಟ್ಸ್ಥಲಬ್ರಹ್ಮಿಗಳ ಮೆಚ್ಚು ಪರಶಿವನ ಮಹಿಮೆಯಚ್ಚು.

ಗ್ರಂಥಾವತಾರದಲ್ಲಿ ಶಿವಸ್ತುತಿ ಇದೆ. ಬಳಿಕ ಕವಿ ಪಾರ್ವತಿ, ನಂದಿ ಭೃಂಗಿ, ವೀರಭದ್ರ, ಸ್ಕಂದ, ಗಣೇಶ ಇವರುಗಳನ್ನು ಸ್ತುತಿಸಿ ಬಸವನಿಂದ

ಶಿವದಾಸಮ್ಮನವರೆಗೆ[1] ಪುರಾತನರನ್ನು ಸ್ಮರಿಸಿದ್ದಾನೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ—

ಸಮುದ್ರ

ಉಮೆವರನ ಮಸ್ತಕದೊಳನವರತ ನೆಲಸಿರ್ಪ |
ಹಿಮಕರನು ತನ್ನ ತನುಜನು ವಿಶ್ವವಱಿಯಲ್ಕೆ |
ರಮೆ ಕುವರಿ ರಾಜಿವಾಂಬಕನೆನ್ನ ಸುತೆಯೞ್ಮನಮರಮುನಿಮುನಿದನುಜರ ||
ಕ್ರಮಗೆಡಿಸಿ ಕಂಜಬಾಣಗಳಿಂದ ವಿರಹದಲಿ |
ಭ್ರಮೆಗೊಳಿಸಿ ಭಂಗಬಡಿಸುವ ಮಾರ ನೊಮ್ಮಗನು |
ನಮಗಿಂದಲಧಿಕರಾರೆಂದು ಗಹಗಹಿಸುತ್ತ ಶರಧಿ ಸಲೆ ನಲಿಯುತಿಹುದು ||

ಸೋಮಲಾಂಬಿಕೆಯ ಪುತ್ರಾಪೇಕ್ಷೆ.

ಹಸುಗಱುವ ಮಱಿಸಿ ಕಱೆದೆನೊ ಪಾಲುಣ್ಣೆಯನು |
ಶಿಶುಬಾಲರಿಗೆ ಬೇಡಲಿಲ್ಲೆಂದು ಕಳುಹಿದೆನೊ |
ಅಸಮಾಕ್ಷದೈವವನು ಭಜಿಸಲೊಲ್ಲದೆ ನುಗ್ಗುನುಸಿಗಳಿಗೆ ಶಿರಮಣಿದೆನೋ ||
ಅಸನವೆಸನಕೆ ಹರಿದು ಕುದಿಯುತಿರ್ದೆನೊ ಮುನ್ನ |
ಹಸಿದೆನೆಂಬವರಿಗನ್ನವ ನೀಡದಾದೆನೋ |
ಪಸುಗ್ರಾಸವನು ಕಳೆದ ಪಾತಕಿಯು ತಾನೆಂದು ಬೆಸಸಿದಳು ರಮಣನೊಡನೆ ||

ರಾತ್ರಿ

ರಮಣನಗಲಿದನೆಂದು ರೋದನಿಸಿ ಮುಖ ಬಱಲಿ |
ಕಮಲ ನೆಱೆ ನೊಂದು ಜೀವಿಸಲಾಱದಂತಿಹುವು |
ಕುಮುದಿನಿಯು ಹಾಸ್ಯಗೈಯುತ್ತ ಗಹಗಹಿಸುತ್ತ ವಿಕಸನವನೈದುತಿಹುವು ||
ಹಿಮಕರನು ರಾತ್ರಿವನಿತೆಯ ಮದುವೆಯಾಗೆ ತ |

---

1 ಬಸವ, ಚೆನ್ನಬಸವ, ಅಲ್ಲಮ, ಸಿದ್ಧರಾಮ, ಮಡಿವಳಮಾಚ, ಸೊಡ್ಡಳ ಬಾಚ, ಮರುಳುಶಂಕರ, ಬೊಂಪಿದೇವ, ಅಪ್ಪಣ್ಣ, ರೇವಣಾರ್ಯ, ಮಾದಯ್ಯ, ಮಾರಯ್ಯ, ಮಾಯಿದೇವ, ನಾಗಾಂಬಿಕೆ, ಮಹದೇವಿ, ನಿಜದೇವಿ, ತಿಲಕವ್ವೆ, ಜಗದವ್ವೆ, ವೀರಚೋಳವ್ವೆ, ಸುಗ್ಗಲದೇವಿ, ಚಂಗುಳೆವೀರಸಂಗವ್ವೆ, ಶಿವದೇವಿ, ಲಿಂಗಮ್ಮ, ಅಕ್ಕಮ್ಮ, ಶಿವದಾಸಮ್ಮ.

ತ್ಸಮಯದೊಳು ನಿರ್ಜರರು ಕಱೆದ ಪುಷ್ಪದ ಮಱೆಯು |
ಕ್ರಮದಂತೆ ಗಗನಮಂಡಲದೊಳಗೆ ತಾರೆಗಳು ತಮತಮಗೆ ರಾಜಿಸಿದುವು ||

---

## ಪಂಚಬಾಣ. 1614

ಈತನು ಭುಜಬಲಿಚರಿತೆಯನ್ನು ಬರೆದಿದ್ದಾನೆ; ಇವನು ಬರೆದ ಕೆಲವು ಹಾಡುಗಳೂ ದೊರೆಯುತ್ತವೆ. ಈತನು ಜೈನಕವಿ; ಇವನ ಸ್ಥಳ ಬೆಳುಗೊಳ; ತಂದೆ ಮತ್ತು ವಿದ್ಯಾಗುರು ಸ್ಥಾನಿಕಚೆನ್ನಪ್ಪಯ್ಯ; ಅಣ್ಣಂದಿರು ಬೊಮ್ಮಪ್ಪ, "ಕನ್ನಡಜಾಣನೆನಿಸಿದ" ದೆಪ್ಪಯ್ಯ. ಗ್ರಂಥದ ಕೊನೆಯ ಸಂಧಿಯಲ್ಲಿ, ಶಾಂತವರ್ಣಿ ಗುಮ್ಮಟೇಶ್ವರನಿಗೆ ಶಕ 1535 ಪರೀಧಾವಿಯಲ್ಲಿ, ಎಂದರೆ 1612 ರಲ್ಲಿ, ಮಸ್ತಕಾಭಿಷೇಕವನ್ನು ಮಾಡಿಸಿದಂತೆ ಹೇಳುತ್ತಾನೆ. ಈ ಶಾಂತವರ್ಣಿ ಕವಿಯ ಸಮಕಾಲದವನೆಂದು ಆ ಸಂಧಿಯಿಂದಲೇ ವ್ಯಕ್ತವಾಗುತ್ತದೆ. ನಮಗೆ ದೊರೆತ ಈ ಗ್ರಂಥದ ಪ್ರತಿಯ ಕೊನೆಯಲ್ಲಿ "ಆನಂದ ಸಂವತ್ಸರದ ಮಾರ್ಗಶಿರ ಶು|| ೫ ಬುಧವಾರ ಬೆಳುಗುಳದ ಸ್ಥಾನಿಕ ಚೆನ್ನಪ್ಪಯ್ಯನ ಮಗ ಕವಿ ಪಂಚಬಾಣನು ಕವಿತ್ವವ ಹೇಳಿ ತನ್ನ ಸ್ವಹಸ್ತದಲ್ಲಿ ಬರೆದ ಪುಸ್ತಕಕ್ಕೆ ಮಂಗಳಮಹಾಶ್ರೀ" ಎಂದಿದೆ. ಈ ಆನಂದಸಂವತ್ಸರವು 1614 ಆಗಿರಬೇಕು.

ಕವಿ ತನ್ನನ್ನು "ಜಿನಪದಭಕ್ತಕುಲಕಮಲಾದಿತ್ಯ, ಮಚ್ಚರಿಪ ವಾಗ್ಮಿಗಳೆದೆದಲ್ಲಣ, ಚದುರಸತ್ಕವಿ" ಎಂದು ವಿಶೇಷಿಸಿ ಹೇಳಿಕೊಂಡಿದ್ದಾನೆ.

ಇವನ ಗ್ರಂಥಗಳಲ್ಲಿ

### I ಭುಜಬಲಿಚರಿತೆ

ಇದು ಸಾಂಗತ್ಯದಲ್ಲಿ ಬರೆದಿದೆ; ಸಂಧಿ 22, ಪದ್ಯ 2815. ಇದಾದ ಮೇಲೆ 109 ಪದ್ಯಗಳುಳ್ಳ ಮತ್ತೊಂದು ಸಂಧಿ ಇದೆ. ಇದರಲ್ಲಿ ಕವಿ ತನ್ನ ಕಾಲದಲ್ಲಿ ಶಾಂತವರ್ಣಿ ನಡಸಿದ ಗುಮ್ಮಟೇಶ್ವರನ ಮಸ್ತಕಾಭಿಷೇಕವನ್ನು ವರ್ಣಿಸಿದ್ದಾನೆ. ಇದರ ಕೊನೆಯಲ್ಲಿ ಸಂಧಿ 23 ಎಂದು ಹೇಳದೆ ಸಂಧಿ I ಎಂದಿರುವುದರಿಂದ ಇದು ಗ್ರಂಥಕ್ಕೆ ಸೇರಿದುದಲ್ಲವೆಂದು ತೋರುತ್ತದೆ. ತನ್ನ ಗ್ರಂಥವನ್ನು "ಎನ್ನೊಡತಿ ಅನಂತಮತಿಯಮ್ಮನ ಕೃಪೆಯಿಂ ಪೇೞಿದೆನು

ಎಂದು ಹೇಳುತ್ತಾನೆ. ಇದರಲ್ಲಿ ಭುಜಬಲಿ ಎಂಬ ನಾಮಾಂತರವುಳ್ಳ ಗುಮ್ಮಟೇಶ್ವರನ ಕಥೆ ಹೇಳಿದೆ.

ಕಥಾಸಾರ—ಆದಿತೀರ್ಥಕರನಾದ ಋಷಭನಿಗೆ ಭರತ, ಭುಜಬಲಿ ಎಂಬ ಇಬ್ಬರು ಮಕ್ಕಳು ಹುಟ್ಟಿದರು. ಇವರಲ್ಲಿ ಪರಸ್ಪರ ವೈಮನಸ್ಯವುಂಟಾಗಿ ಇಬ್ಬರೂ ಯುದ್ಧಕ್ಕೆ ನಿಲ್ಲಲು, ಭುಜಬಲಿ ಅಣ್ಣನಾದ ಭರತನನ್ನು ಜಯಿಸಿ, ಅನಂತರ ವೈರಾಗ್ಯ ಹುಟ್ಟಿ ದೀಕ್ಷೆಯನ್ನು ವಹಿಸಿದನು. ಬಹಳಕಾಲದಮೇಲೆ ಚಾಮುಂಡರಾಯನು ಬೆಳುಗುಳದಲ್ಲಿ ಗುಮ್ಮಟೇಶ್ವರಬಿಂಬವನ್ನು ಪ್ರತಿಷ್ಠಿಸಿ ಮಸ್ತಕಾಭಿಷೇಕವನ್ನು ಮಾಡಿಸಿ ಬೆಳುಗುಳವೆಂಬ ಪುರವನ್ನು ಕಟ್ಟಿಸಿ ದೇವರಿಗೆ ಅನೇಕಗ್ರಾಮಗಳನ್ನು ಉಂಬಳಿಯಾಗಿ ಕೊಟ್ಟನು.

ತನ್ನ ಕೃತಿಯ ಉತ್ಕೃಷ್ಟತೆಯನ್ನು ಕವಿ ಈ ಪದ್ಯಗಳಲ್ಲಿ ನಿರೂಪಿಸಿದ್ದಾನೆ---

ತಂಗಾಳಿಯ ತಂಪ ತರುಣಿಯಧರದಿಂಪ | ತಿಂಗಳ ಬೆಳಗಿನ ಸೊಂಪ |<br>
ಕಂಗೊಳಿಪುದು ಪಂಚಬಾಣನ ಕೃತಿ ಸುಜ | ನಂಗಳಿಗತಿಹರುಷವನು ||<br>
ಪೆಸರು ಪಾಲೊಡೆಯನು ಎಱೆದುಂಬುದಂಬಿಲ | ದೆಸಕನಲ್ಲವು ಪಂಚಬಾಣ |<br>
ನೆಸಗುವ ಕೃತಿ ಪೊಸರದವೊಲಿಹುದು.

ಗ್ರಂಥಾವತಾರದಲ್ಲಿ ಗುಮ್ಮಟಸ್ತುತಿ ಇದೆ. ಬಳಿಕ ಕವಿ ಚತುರ್ವಿಂಶತಿ ತೀರ್ಥಕರರು[1], ಸಿದ್ಧಾದಿಗಳು[2], ಸರಸ್ವತಿ, ಯಕ್ಷಾಧಿಪ ಬೆಟ್ಟದಬ್ರಹ್ಮ, ಪದ್ಮಾವತಿ ಇವರುಗಳನ್ನು ಸ್ಮರಿಸಿ ಆಮೇಲೆ ಕೊಂಡಕುಂದ, ಪೂಜ್ಯಪಾದ, ಶ್ರುತಕೀರ್ತಿ, ಚಾರುಕೀರ್ತಿಪಂಡಿತ, ತನ್ನ ಮನೆದೇವಿ ಪಾತಾಳಯಕ್ಷನ

---

1. (1) ಋಷಭ, (2) ಅಜಿತ, (3) ಶಂಭವ, (4) ಅಭಿನಂದನ, (5) ಸುಮತಿ, (6) ಪದ್ಮಪ್ರಭ, (7) ಸುಪಾರ್ಶ್ವ, (8) ಚಂದ್ರಪ್ರಭ, (9) ಪುಷ್ಪದಂತ, (10) ಶೀತಲ, (11) ಶ್ರೇಯಾಂಸ, (12) ವಾಸುಪೂಜ್ಯ, (13) ವಿಮಲ, (14) ಅನಂತ, (15) ಧರ್ಮ, (16) ಶಾಂತಿ, (17) ಕುಂಥು, (18) ಅರ, (19) ಮಲ್ಲಿನಾಥ, (20) ಮುನಿಸುವ್ರತ, (21) ನಿಮಿ, (22) ನೇಮಿ, (23) ಪಾರ್ಶ್ವ, (24) ವರ್ಧಮಾನ ಅಥವಾ ಮಹಾವೀರ.

2. 16ನೆಯ ಪುಟವನ್ನು ನೋಡಿ.

ರಮಣಿ ಅನಂತಮತಿಯುಮ್ಮ ಇವರುಗಳನ್ನು ಕ್ರಮವಾಗಿ ಸ್ತುತಿಸಿದ್ದಾನೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ಸರಸ್ಸು

ಜೋಡುವಕ್ಕಿಯ ನಾಡು ಜೊನ್ನವಕ್ಕಿಯ ಬೀಡು| ಆಡುಂಬೊಲನಂಚೆಕೊಂಚೆಗಳ|
ಪಾಡುವಳಿಗಳಿಕ್ಕೆ ಸುಳಿಗಾಳಿಬಾಳೆಗಳ | ಬೀಡೆನೆ ಸರಸಿಯೊಪ್ಪಿದುದು ||

ಉದ್ಯಾನ

ಅಲ್ಲಲ್ಲಿ ಕನಗೋನರಲ್ಲಲ್ಲಿ ನುಣ್ದಳಿ | ರಲ್ಲಲ್ಲಿ ಮೊಗ್ಗೆ ಬಲ್ನನೆಯು |
ಅಲ್ಲಲ್ಲಿ ಬಲುಗಾಯಿ ಪಣ್ಣು ತಣ್ಪಿನಗ | ಳೆಲ್ಲಿಯು ಬನವೊಳೊಪ್ಪಿದುವು ||

ದೇಹಾನಿತ್ಯತೆ

ಪಾಪದ ಬಿತ್ತು ಪರಾಭವದತಿಬೆಳೆ | ಕೋಪದ ಪೊಟ್ಟೆ ಕುತ್ತದದ್ರಿ |
ಪಾಪಿಕೃತಾಂತಗೆತ್ತಿದ ತುತ್ತು ತನುವೆಂದು | ಚಾಪಲಮತಿ ನೆಱೆಯುಱಿಯು ||

ನಕ್ಷತ್ರ

ಹಟಿಗಾಲದಂಬರವಿಳೆಗೆಯ್ದಿಯವನಿಯು | ಮುಟುಗಿಪುದೆಂಗಂಜಿಯುಜನು !
ಎಳಸಿ ಮಾಡಿಸಿ ಬೆಳ್ಳಿಮೊಳೆವೆಟ್ಟಿದನೊ ಎನೆ | ಪೊಳೆದುವಾಭಗಣವಭ್ರದೊಳು[1] ||

ತಾಳಿದಗಳು

ಜೀರಗೆಯುದ್ದಕ್ಕಿ ಮೆಂತೆಯ ಕರಿಬೇವು | ಕಾರೆಳ್ಳು ಮೆಣಸು ಸಾಸವೆಯೂ |
ಹಾರದಿ ಹುರಿದ ಸಂಬರವಿಟ್ಟು ಕಾಯ್ಗೂಡಿ | ಘೋರನೆ ತಳಿದು ತುಪ್ಪದೊಳು ||
ಒಗ್ಗರಿಸಿಯೆ ಅಟ್ಟಬಾಳೆ ಬದನೆ ತೊಂಡೆ | ಹೆಗ್ಗುಂಬಳ ಪೀರೆ ಹಲಸು |
ನುಗ್ಗೆ ಮುಗ್ಗೆಯ ಹಲವು ಬಗೆಯ ತಾಳಿದಗಳ | ಹಿಗ್ಗುತ ಬಡಿಸಿದರಂದು ||

ಚಿನ್ನವರದರು

ತ್ರಾಸ ಪಿಡಿಯುದೆ ತೂಕದ ನೆಲೆಯನು ಚಿನ್ನ | ಕೀಸದೆ ಬಣ್ಣಲೆಕ್ಕವನು |
ಲೇಸಾಗಿ ತಿಳಿಯೆ ಪೇಟಿನ ಚಿನ್ನವರದರು | ಕೌಶಲತೆಯೊಳೊಪ್ಪಿಹರು||

ಹೊಯ್ಸಳನಾಡು

ಬೀಡು ಸ್ಮರನ ರನ್ನವೀಡು ಶ್ರೀವೆಣ್ಣಿನ | ಗಾಡಿ ಶೃಂಗಾರದೇಟುಗೆಯ |
ಮೂಡಿಗೆ ಸದ್ಧರ್ಮಶಾಸ್ತ್ರದ ಹೊಯ್ಸಳ | ನಾಡು ಮೋಹಿಸಿತೇನನೆಂಬೆ ||

---

1 ಜೈಮಿನಿಭಾರತದಲ್ಲಿಯೂ ಈ ಉಲ್ಲೇಖವಿದೆ.

ಜಡತೆ ಜಲದಿಯಹಿತತ್ವ ಗಾರುಡದಲ್ಲಿ | ಹಿಡಿತ ಚಾಮರಛತ್ರದಲ್ಲಿ |
ಮಡಿ ವಸ್ತ್ರದಿ ಧರ್ಮಚ್ಯುತಿ ಬಾಣದಿ.... | ನಡುವೆಯೇನಿಲ್ಲ ನಾಡೊಳಗೆ||

2 ಹಾಡುಗಳು

ಇವು ಗುಮ್ಮಟೇಶ್ವರ, ತ್ಯಾಗದಬ್ರಹ್ಮ, ಬೆಟ್ಟದಬ್ರಹ್ಮ, ಕಂಬದ ಯಕ್ಷಿ ಇವರುಗಳ ಸ್ತುತಿರೂಪವಾಗಿವೆ. ಇವುಗಳಲ್ಲಿ ಒಂದನ್ನು ಉದ್ಧರಿಸಿ ಬರೆಯುತ್ತೇವೆ—

ಪಲ್ಲವಿ|| ಎಂದೆಂದೂ ಪಾಲಿಸೋ ನೀಯೆನ್ನ | ತಂದೆ ಗುಮ್ಮಟನಾಥ ತ್ರಿಜಗವಿನೂತ||
ಮನುಕುಲಾಂಬುಜಮಿತ್ರ ಮಂಗಲವೆತ್ತಸುಗಾತ್ರ | ಮುನಿಜನನವವಸಂತ |
ಚಂದನಸಿತಘನ | ಇಂದುವಿಂದ ಶಾಂತ| ಸಂಸಾರವನಧಿಗಟಿದ ನಿಶ್ಚಿಂತ ||1||
ದುರಿತಗೋಧೂಮಘರಟ್ಟ ದುರ್ಮಾರ್ಗತ್ರಿಪುರಸುಟ್ಟ | ಪರಮಭವ್ಯರಬಂಧು |
ಶಾಶ್ವತಸೌಖ್ಯವರವೀವಕರುಣಾಸಿಂಧು | ನಿರ್ಮಲಬೋಧಧರನೆಸುಮನಸಂದು ||2||
ಭೂತಳಕುನ್ನತವೆಂದು | ಬೆಳ್ಗುಳಾದ್ರಿಯಲ್ಲಿ ನಿಂದು | ? ಸಂಶಯಜಸವತೊಟ್ಟು |
ಪಂಚಬಾಣನಿಗೋತುಮತಿಯನೆಕೊಟ್ಟು | ಚಕ್ರಿಯಧರೆಖ್ಯಾತಿಸಗೆಲಿದದಿಟ್ಟು ||3||

---

## ಚಾಮರಾಜ, 1617-1637

ಈತನು ವಾಲ್ಮೀಕಿರಾಮಾಯಣಟೀಕೆಯನ್ನೂ ಬ್ರಹ್ಮೋತ್ತರಖಂಡ ಟೀಕೆಯನ್ನೂ ಬರೆದಿದ್ದಾನೆ. ಇವನು ಮೈಸೂರುರಾಜರಲ್ಲಿ ಒಬ್ಬನು. ಗ್ರಂಥಾಂತ್ಯಗದ್ಯಗಳಲ್ಲಿ "ನರಸರಾಜಗರ್ಭದುಗ್ಧಸಿಂಧುಸುಧಾಕರ, ನರಸರಾಜ ಭೂವರತನೂಭವ" ಎಂದು ಹೇಳಿಕೊಂಡಿರುವುದರಿಂದ ಈತನು 1617ರಿಂದ 1637 ರ ವರೆಗೆ ಆಳಿದ ಚಾಮರಾಜನೆಂದು ವ್ಯಕ್ತವಾಗುತ್ತದೆ. ಈತನ ತಂದೆಯಾದ ನರಸರಾಜನು ರಾಜನೃಪನ ಮಗನು. ರಾಮಾಯಣಟೀಕೆಯಲ್ಲಿ "ತಿಮ್ಮರಾಜತನೂಜ" ಎಂಬ ವಿಶೇಷಣವು ನರಸರಾಜನಿಗೆ ಉಕ್ತವಾಗಿರುವುದನ್ನು ನೋಡಿದರೆ ರಾಜನೃಪನ ನಿಜವಾದ ಹೆಸರು ತಿಮ್ಮರಾಜ ಎಂದು ತೋರುತ್ತದೆ. ಆದರೆ ನಮಗೆ ತಿಳಿದಮಟ್ಟಿಗೆ ಶಾಸನಗಳಲ್ಲಿಯಾಗಲಿ ಗ್ರಂಥಗಳಲ್ಲಿಯಾಗಲಿ ಈ ಹೆಸರು ಹೇಳಿಲ್ಲ.

ಈ ಕವಿಗೆ ಬಿರುದೆಂತೆಂಬರಗಂಡ, ಗಜಬೇಂಟೆಕಾರ, ಚೌಷಷ್ಟಿ ಕಲಾಪ್ರವೀಣ ಎಂಬ ಬಿರುದುಗಳು ಇದ್ದಂತೆ ತಿಳಿಯುತ್ತದೆ.

ಇವನ ಗ್ರಂಥಗಳಲ್ಲಿ

### I ವಾಲ್ಮೀಕಿರಾಮಾಯಣಟೀಕೆ

ಇದು ವಾಲ್ಮೀಕಿರಾಮಾಯಣಕ್ಕೆ ಗದ್ಯರೂಪವಾದ ಕನ್ನಡವ್ಯಾಖ್ಯಾನ. ಇದಕ್ಕೆ ಚಾಮರಾಜೋಕ್ತಿವಿಲಾಸ ಎಂದು ಹೆಸರು. ಗ್ರಂಥಾದಿಯಲ್ಲಿ ವಿಷ್ವಕ್ಸೇನಸ್ತುತಿಯೂ ಗಣೇಶಸ್ತುತಿಯೂ ಇವೆ. ಬಳಿಕ ಕವಿ ಗ್ರಂಥವನ್ನು ಹೀಗೆ ಆರಂಭಿಸಿದ್ದಾನೆ—

ಶ್ರೀಮದಶರಣ್ಯಶರಣ್ಯನಹ ಆರ್ತತ್ರಾಣಪರಾಯಣನಹ ಅಂಬುಜಾಕ್ಷನಹ ಯೋಗಿಧ್ಯೇಯಪಾದಾರವಿಂದನಹ ಅವಾಙ್ಮಾನಸಗೋಚರನಹ ಶ್ರೀಲಕ್ಷ್ಮೀಕುಚಕಲಶ ಕುಂಕುಮಾಂಕಿತವಕ್ಷಸ್ಥಲನಹ ಶ್ರೀಮನ್ನಾರಾಯಣನ ಶ್ರೀಚರಣಾರವಿಂದಂಗಳಲ್ಲಿ ನಿರತಿಶಯಭಕ್ತಿಯುಕ್ತನಾದ ವಾಲ್ಮೀಕಿಮುನೀಶ್ವರನಿಂದ ಪ್ರಣೀತಮಾದ ಶ್ಲೋಕೈಕಶ್ರವಣಾತಾವನ್ಮಾತ್ರದಿಂದ ಸಮಸ್ತಕಲಿಕಲ್ಮಷಾಪನೋದನಪಟುತರಮಾದ ಧರ್ಮಾರ್ಥಕಾಮಮೋಕ್ಷಗಳೆಂಬ ಚತುರ್ವಿಧಪುರುಷಾರ್ಥಸಾಧನಮಾದ ಪಂಚಮವೇದವೆನಿಸಿಕೊಳ್ಳುವ ಶ್ರೀಮದ್ರಾಮಾಯಣದಲ್ಲಿ ಆದಿಕಾಲವೃತ್ತಾಂತವದೆಂತೆನೆ.

ಕಾಂಡಗಳ ಅಂತ್ಯದಲ್ಲಿ ಈ ಗದ್ಯವಿದೆ--

ಇಂತು ಉತ್ತಮಕ್ಷತ್ರಿಯಕುಲೋದ್ಭವ ಬಿರುದೆಂತೆಂಬರಗಂಡ ಗಜಬೇಂಟೆಕಾಱ ಸಮಸ್ತಶತ್ರುಸಂಘಜೀಮೂತಜಂಝಾಮಾರುತ ಪ್ರತ್ಯರ್ಥಿಪೃಥ್ವೀಪತಿವನದಾವಾನಲ ಸಮಸ್ತವಿದ್ವಜ್ಜನಸಮುದಾಯಕಲ್ಪಭೂಜಾತ ಆಶ್ರಿತಜನಸುರಧೇನು ಕಾಮಿನೀಜನ ನೂತನಪಂಚಬಾಣ ಚೌಷಷ್ಟಿಕಲಾಪ್ರವೀಣ ಮಹಿಷಾಸುರಪುರವರಾಧೀಶ ಚಾಮರಾಜವಂಶೋದ್ಧಾರಕ ತಿಮ್ಮರಾಜತನೂಜನರಸರಾಜಗರ್ಭದುಗ್ಧಸಿಂಧುಸುಧಾಕರ ಶ್ರೀಲಕ್ಷ್ಮೀಕಾಂತಪಾದಾರವಿಂದದ್ವಂದ್ವಸಿಷ್ಯಂಪಾವಮಂದಮಕರಂದಬಿಂದುಸಂದೋಹಾ ಸ್ವಾವನನಿರ್ಮಲೀಕೃತಾಂತಃಕರಣ ತ್ರಿಣಯನೇಶ್ವರಸದ್ಭಕ್ತಿಯುಕ್ತ ಮಹಾಬಲಾಚಲಾವಾಸಶ್ರೀಚಾಮುಂಡಿಕಾಂಬಾಸದ್ಭಕ್ತಿಮಂಡಿತರಾದ ಶ್ರೀಚಾಮರಾಜಒಡೆಯರವರಿಂದ ಲೋಕೋಪಕಾರಾರ್ಥವಾಗಿ ಬುಧಜನಸಮ್ಮತಿಯಿಂದ ಕರ್ಣಾಟಕಭಾಷಾವಚನರಚನೆಯಾದ ಶ್ರೀಚಾಮರಾಜೋಕ್ತಿವಿಲಾಸವೆಂಬ ಕನ್ನಡರಾಮಾಯಣದಲ್ಲಿ.

ಗ್ರಂಥಾರಂಭದಲ್ಲಿರುವ ಕೆಲವು ಶ್ಲೋಕಗಳಿಂದ[1] ಈ ಟೀಕೆಯನ್ನು

---

1 ವಾಲ್ಮೀಕಿಮುನಿನಾ ಪ್ರೋಕ್ತಶ್ರೀಮದ್ರಾಮಾಯಣಸ್ಯ ಚ |
ಕರ್ಣಾಟಭಾಷಯಾ ಟೀಕಾಂ ಕಾರಯಿಷ್ಯನ್ ನೃಪೋತ್ತಮಃ ||
ಲೋಕಾನಾಮುಪಕಾರಾಯ ವಿರೂಪಾಕ್ಷೇಣ ಧೀಮತಾ |
ವಿದುಷಾ ಕೃತವಾನ್ ಸಮ್ಯಕ್ ಪ್ರತಿಜ್ಞಾಂ ಚಾಮಭೂಪತಿಃ ||

ಚಾಮರಾಜನು ತನ್ನ ಅಂಕಿತದಲ್ಲಿ ವಿರೂಪಾಕ್ಷನೆಂಬ ವಿದ್ವಾಂಸನಿಂದ ಬರೆಯಿಸಿದಂತೆ ತೋರುತ್ತದೆ.

2 ಬ್ರಹ್ಮೋತ್ತರಖಂಡಟೀಕೆ

ಇದು ಸ್ಕಾಂದಪುರಾಣದಲ್ಲಿಯ ಬಹ್ಮೋತ್ತರಖಂಡಕ್ಕೆ ಗದ್ಯರೂಪವಾದ ಕನ್ನಡವ್ಯಾಖ್ಯಾನ; ಅಧ್ಯಾಯ 32. ಇದಕ್ಕೆ ಮಣಿಪ್ರಕಾಶ ಎಂದು ಹೆಸರು ಗ್ರಂಥಾಂತ್ಯದಲ್ಲಿ ಈ ಗದ್ಯವಿದೆ:—

ರಾಜಾಧಿರಾಜ ರಾಜಪರಮೇಶ್ವರ ಶ್ರೀಚಾಮುಂಡೀಶ್ವರೀವರಪ್ರಸಾದನಾದ ಮಹಿಶೂರಪುರವರಾಧೀಶ್ವರನಾದ ಶ್ರೀ ನರಸರಾಜಭೂವರತನೂಭವನಾದ ಚಾಮರಾಜ ಭೂಪಾಲನಿಂದ ವಿರಚಿತಮಪ್ಪ ಬ್ರಹ್ಮೋತ್ತರಖಂಡಮಣಿಪ್ರಕಾಶದಲ್ಲಿ.

---

## ಜಕ್ಕಭೂಪಾಲ. ಸು. 1620

ಈತನು ಭಾರತಕಥಾಸಂಗ್ರಹವನ್ನು ಬರೆದಿದ್ದಾನೆ. ಇವನು ರಾಜವಂಶಕ್ಕೆ ಸೇರಿದವನು; ಜುಂಜರಾಜನ ಮಗನು. ಇವನಿಗೆ ಜಕ್ಕಣ್ಣನಾಯಕ ಎಂಬ ಹೆಸರೂ ಇದ್ದಂತೆ ತಿಳಿಯುತ್ತದೆ. ಇವನ ಕಾಲವು ಸುಮಾರು 1620 ಆಗಿರಬಹುದೆಂದು ಊಹಿಸುತ್ತೇವೆ.

ಇವನ ಗ್ರಂಥ

ಭಾರತಕಥಾಸಂಗ್ರಹ.

ಇದು ಗದ್ಯರೂಪವಾಗಿದೆ. "ಸರ್ವತ್ರ ಜನಕ್ಕೆ ಸುಲಭವಾಗಿ ತಿಳಿವಂತೆ ಕರ್ಣಾಟಕವಚನರಚನೆಯಿಂ ಪಂಚಮಶ್ರುತಿಯಾದ ಶ್ರೀಮಹಾಭಾರತವನು" ವಿವರಿಸಿದಂತೆ ಕವಿ ಹೇಳುತ್ತಾನೆ. ಈ ಗ್ರಂಥದ ಒಂದು ಪ್ರತಿಯ ಆರಂಭದಲ್ಲಿ "ಭಾರತಕಥೆಯಷ್ಟನು ಸಹ ವ್ಯಾಖ್ಯಾನಿಸಿದ ಜಕಣನಾಯಕನ ಬೊಲ್ಲಿ" ಎಂದಿದೆ.

---

## ಶಂಕರದೇವ. ಸು. 1620

ಇವನು ಶಂಕರಶತಕವನ್ನು ಬರೆದಿದ್ದಾನೆ. ಪ್ರಸನ್ನಶಂಕರಲಿಂಗ ಎಂದು ಮುಗಿವ 120 ಕಂದಗಳುಳ್ಳ ಒಂದು ಗ್ರಂಥವಿದೆ. ಇದಕ್ಕೆ "ಶಂಕರದೇವರ ಕಂದ" ಎಂದು ಹೆಸರು. ಇದೂ ಏತತ್ಕವಿರಚಿತವಾಗಿರಬಹುದು.

ಈತನು ವೀರಶೈವಕವಿ; ಸುಮಾರು 1620 ರಲ್ಲಿ ಇದ್ದಿರಬಹುದೆಂದು ತೋರುತ್ತದೆ.

ಇವನ ಗ್ರಂಥಗಳಲ್ಲಿ

1. ಶಂಕರಶತಕ

ಇದು ವೃತ್ತರೂಪವಾಗಿದೆ; ಪ್ರತಿಪದ್ಯವೂ ಗುರುಶಂಕರೇಶ್ವರ ಎಂದು ಮುಗಿಯುತ್ತದೆ. ಇದಕ್ಕೆ ಗುರುಶಂಕರೇಶ್ವರಶತಕ ಎಂಬ ಹೆಸರೂ ಉಂಟು. ಇದು ವೀರಶೈವವೇದಾಂತವನ್ನು ಬೋಧಿಸುತ್ತದೆ. ಇದರಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ--

ಮನದಧಿಕಾರವಾಗಿ ಕೆಲಸಾರಿತು ಭಕ್ತಿವಸಂತಕಾಲ ಸಂ |
ಜನಿಸಿತು ಲಿಂಗಮೋಹಲತೆಯುಂಕುರಿಸಿತ್ತು ನಿಜಾನುಭಾವಪೂ ||
ವಿನತರು ಹೂತುಕಾತುದು ಶುಭೋದಯವಾದುದು ಭಾಪು ಭಾಗ್ಯವೇ |
ದಿನದಿನಕಂ ಮಹಾಸುದಿನವಾಯ್ತೆನಗಂ ಗುರುಶಂಕರೇಶ್ವರಾ ||
ಮರದ ಮೊದಲ್ಗೆ ನೀರೆಱೆವರಲ್ಲದೆ ಶಾಖೆಗೆ ಬೇಱೆ ಕಟ್ಟೆಯಂ |
ವಿರಚಿಸಿ ಮತ್ತೆ ನೀರೆಱೆವರೇ ತನುರೂಪದ ಕೂಪದಿಂ ಚರಾ ||
ಚರಜಗವೆಲ್ಲಮಂ ತಳೆದ ದೇವರ ಪೂಜಿಸುವರ್ಗೆ ಮಿಕ್ಕ ನಿ |
ರ್ಜರರನದೇಕೆ ಪೂಜಿಸುವ ಕೋಟಲೆ ಪೇೞಿರೆ ಗುರುಶಂಕರೇಶ್ವರಾ ||
ಕಾಮದ ಗಾಳಿ ಬೀಸಿ ನೆಱೆ ಕೋಪದ ಮೋಡ ಮುಸುಂಕಿ ಲಾಭಲೋ |
ಭಾಮಿಷಮಿಂಚು ಸಂಚರಿಸಿ ಮೋಹದ ಪೆರ್ಮೞೆ ಪೊಯ್ದು ಮಾೞಿ ನಾ |
ನಾಮದಧಾರೆಕಲ್ಕೞೆದು ಮತ್ಸರಮೇಘರವಂ ತೊಡರ್ದುದ |
ಯ್ಯೋ ಎನಗೆ ಜೀವಹಂಸೆಗೆರವಿಲ್ಲ ಕಣಾ ಗುರುಶಂಕರೇಶ್ವರಾ ||

2 ಶಂಕರದೇವರ ಕಂದ

ಇದು ಭಕ್ತಿರಸಪ್ರಧಾನವಾಗಿದೆ. ಪ್ರತಿಪದ್ಯವೂ ಪ್ರಸನ್ನಶಂಕರಲಿಂಗ ಎಂದು ಮುಗಿಯುತ್ತದೆ. ಇದರಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ--

ಉಂಡಂತಾದುದು ಸುಖವೆಡೆ | ಗೊಂಡಂತಾದುದು ಮನಕ್ಕೆ ದಿವ್ಯಾಮೃತಮಂ |
ಕೊಂಡಂತಾದುದು ನಿಮ್ಮಂ | ಕಂಡಾಕ್ಷಣದೊಳ್ ಪ್ರಸನ್ನಶಂಕರಲಿಂಗಾ ||
ಕನೆದಪ್ಪುತೆ ಬಿಗಿದಪ್ಪುತೆ | ನೆಗೆದಾಡುತೆ ಕೊಬ್ಬಿ ಕೊನರಿ ಕುಡಿವರಿಯುತ್ತುಂ |
ಕರ್ಗಿ ಚಿಂತೆ ಹೊಮ್ಮುತೆ ರಮಿಸುವೆ | ನಗಲದೆ ನಿಮ್ಮಂ ಪ್ರಸನ್ನಶಂಕರಲಿಂಗಾ ||

ಪುಳಕದ ಜಳಕದೊಳಂಗಂ|ಮುಳುಕಿ ಮನಂ ಕುಳುಕಿ ತೂಗಿ ತೊನೆದಾಡುತ್ತುಂ |
ಇಱಿವ ಸುಖಾನಂದಾಶ್ರುವ | ನೆಳಸುವೆ ಸತತಂ ಪ್ರಸನ್ನಶಂಕರಲಿಂಗಾ ||
ನುಬಿಸಿ ಚುಂಬಿಸಿ ಪದಯುಗ | ಮಂ ಬಿಗಿಬಿಗಿದಪ್ಪಿ ಸೆಪ್ಪಸಿಟ್ಟಂತೆ ಮನಂ |
ತುಂಬಿಪ ತೊಱೆಯುನ್ನೊಲಿಹ ಸುಖ|ಮಂ ಬಯಸುವೆನಾಂ ಪ್ರಸನ್ನಶಂಕರಲಿಂಗಾ ||

ಷಡಕ್ಷರರಗಳೆ, ಭಕ್ತಿಬಿನ್ನಹದರಗಳೆ, ವೀರಶೈವರಗಳೆ, ಮೈದುನ ರಾಮನರಗಳೆಎಂಬ ಗ್ರಂಥಗಳಕೊನೆಯಲ್ಲಿ ಪ್ರಸನ್ನಶಂಕರಲಿಂಗ ಎಂದು ಮುಗಿವ ಕಂದಗಳು ದೊರೆವುದರಿಂದ ಈ ಗ್ರಂಥಗಳೂ ಏತತ್ಕವಿಕೃತವಾಗಿ ರಬಹುದೆಂದು ತೋರುತ್ತದೆ.

## ಷಡಕ್ಷರರಗಳೆ

ಇದರಲ್ಲಿ 71 ನುಡಿಗಳಿವೆ ; ಒಂದೊಂದೂ ಓಂನಮಶ್ಶಿವಾಯ ಎಂದು ಮುಗಿಯುತ್ತದೆ. ಒಂದೆರಡು ನುಡಿಗಳನ್ನು ಉದಾಹರಿಸುತ್ತೇವೆ:—

ಹುಲಿಗೆ ಹುಲ್ಲೆ ಸಿಲ್ಕಿದಂತೆ ಘೋರತರವಿಕಾರವಾರ್ಧಿ |
ಯೊಳಗೆ ಬಿದ್ದೆನಯ್ಯ ಶಂಕರಾಯ ಓಂನಮಶ್ಶಿವಾಯ ||
ತನುವಿಕಾರವೆನ್ನ ತಿಂದು ತೇಗಿ ನಿಮ್ಮ ಮುಂದೆ ಕೂಗಿ |
ತೊನೆಯಲೀಯದಯ್ಯ ಶಂಕರಾಯ ಓಂನಮಶ್ಶಿವಾಯ ||
ತ್ರಿದಶಚಾಪದಂತೆ ಕೆಡುವ ಹೊನ್ನ ಹೆಣ್ಣ ಮಣ್ಣ ನಚ್ಚಿ |
ಮದಡನಾದೆನಯ್ಯ ಶಂಕರಾಯ ಓಂನಮಶ್ಶಿವಾಯ ||

## ಭಕ್ತಿಬಿನ್ನಹದರಗಳೆ.

ಇದರಲ್ಲಿ 138 ನುಡಿಗಳಿವೆ. ಎರಡನ್ನು ಉದಾಹರಿಸುತ್ತೇವೆ--

ಹೊನ್ನೆಂಬ ಹೊಲೆಹೊದ್ದಿ ಹುಸಿಯು ಹಸರವ ಹರಹಿ |
ಅನ್ನಿಗರ ಮೆಚ್ಚಿಸುವ ವೇಷವಿದ್ಯವ ಹರಹಿ ||
ಸುರತರುವ ಕಡಿದು ಎಲವದಮರಕೆ ನೀರೆಱೆದು |
ನೊರೆವಾಲ ಚೆಲ್ಲಿ ತಾಟಿಯ ಬಯಸಿ ಬಾಯ್ದೆಱೆಗು ||

## ವೀರಶೈವರಗಳೆ.

ಇದರಲ್ಲಿಯೂ 138 ನುಡಿಗಳಿವೆ. ಒಂದನ್ನು ಉದಾಹರಿಸುತ್ತೇವೆ:-

ತನ್ನ ನೆನೆವವರ್ಗ್ಗೆ ತನ್ನನಿತ್ತು ಪರಮಭಕ್ತಿಸುಖದ |
ರನ್ನದೊಡಿಗೆಯಂ ಸಮಂತು ತೊಡಿಸುತಿರ್ಪ ವೀರಶೈವ||

## ಮೈದುನರಾಮನರಗಳೆ.

ಇದು ಮೈದುನರಾಮನ[1] ಚರಿತೆಯನ್ನು ಹೇಳುತ್ತದೆ. ಇದರಲ್ಲಿ 15] ನುಡಿಗಳಿವೆ. ಒಂದನ್ನು ಉದಾಹರಿಸುತ್ತೇವೆ--

ಶ್ರೀಮದುತ್ತರದೇಶಭಾಗದೊಳಗತಿಶಯದಿ |
ಭೀಮರಥಿಯೆಂಬ ನಗರಂ ಧರೆಗೆ ಮೆಱೆವಿಹುದು ||

---

## ವೆಂಕಟಶರ್ಮ 1622.

ರುದ್ರಭಟ್ಟನ(ಸು. 1180) ಜಗನ್ನಾಥವಿಜಯದ ಒಂದು ಪ್ರತಿಯ ಅಂತ್ಯದಲ್ಲಿ ಆ ಪ್ರತಿಯನ್ನು ಈತನು ದುಂದುಭಿವರ್ಷದಲ್ಲಿ ಬರೆದುದಾಗಿ ಹೇಳುವುದಲ್ಲದೆ ತನ್ನ ವಿಷಯವಾಗಿಯೂ ಆ ಗ್ರಂಥದವಿಷಯವಾಗಿಯೂ ಹಲವುಪದ್ಯಗಳನ್ನು ಬರೆದಿದ್ದಾನೆ. ಈ ಪದ್ಯಗಳನ್ನು ನೋಡಿದರೆ ಇವನು ಕವಿಯಾಗಿದ್ದನೆಂದು ಹೇಳಬಹುದಾಗಿದೆ. ಈತನು ಗುಮ್ಮಳಾಪುರದವನು ; ಕುತ್ಸಗೋತ್ರದವನು; ಆಪಸ್ತಂಬಸೂತ್ರದವನು ; ಬೃಹಚ್ಚರಣ ಬ್ರಾಹ್ಮಣನು. ಇವನು ಹೇಳುವ ದುಂದುಭಿವರ್ಷವು 1622 ಆಗಿರಬಹುದೆಂದು ಊಹಿಸುತ್ತೇವೆ. ಇವನ ಪದ್ಯಗಳಲ್ಲಿ ಕೆಲವನ್ನು ಉದ್ಧರಿಸಿ ಬರೆಯುತ್ತೇವೆ--

ದುಂದುಭಿಸಂವತ್ಸರದೊಳ | ಗಂದಂಬೆತ್ತೆಸೆವ ಮಾರ್ಗಶಿರಮಾಸದೊಳಿಂ |
ಪೊಂದಿದ ಶುಕ್ಲದ್ವಾದಶಿ | ಯಂದೀಸುಕರಪ್ರಬಂಧಮಂ ಲಿಖಿಸಿದೆನಾಂ ||
ವರರುದ್ರಭಟ್ಟನಿಂದಂ | ವಿರಚಿತಮಾದೀಪ್ರಬಂಧಮಂ ಸಂತಸದಿಂ |
ಬರೆದಂ ವೆಂಕಟಶರ್ಮಂ | ಧರೆಯೊಳ್ ರಾಜಿಸೆ ಸಮಸ್ತವಿದ್ವಜ್ಜನದಿಂ ||
ಸುಮನೋರಾಜಿವಿರಾಜಿತಂ ಕುವಲಯಾನಂದಪ್ರಭಾಭಾವಿತಂ |
ಕಮಲಾಕ್ಷಪ್ರತಿಪಾದಿತಂ ಕವಿಜನಾನಂದಪ್ರದಂ ಚೋದಿತಂ ||
ಪ್ರಮದಾಲಂಕರಣೋದಿತಂ ಹರಿಪದೈಕಧ್ಯಾನಸಂಭಾವಿತಂ |
ಕ್ರಮದಿಂದೆನ್ನಯ ಪುಸ್ತಕಂ ಸರಸಿವೋಲ್ ವ್ಯೋಮಂಬೊಲುದ್ಭಾಸಿತಂ ||
ವಿಲಸದ್ಭೂಭ್ರಮಧ್ಯಮಧ್ಯಾಭ್ರದೊಳೊಗೆದ ತನುಂ ಕಾಣೆಸಲ್ ಕಾಣಿಪರ್ಕಂ |
ಶುಲಸಚ್ಛಂದ್ರಾತಪಂಗಳ್ ಕುಡೆ ಸುಧೆಯೊಗೆದಾನಂದಮಂ ನಿರ್ಮಳಾಂತ ||
ಸ್ಥಳದೊಳ್ ತೋರ್ಪಾತ್ಮಶೋಭಾಕಲಿತಜನಿತಚಿತ್ಸೌಖ್ಯದಿಂ ನಿತ್ಯಯೋಗಂ |
ನೆಲೆಯಾಗಲ್ ಕೌತುಕಂದಾಳ್ದೆಸೆದೆ ತವ ಕೃಪಾನುಜ್ಞೆಯಿಂ ದೇಶಿಕಾರ್ಯಾ ||

---

1 Vol. I, 154

## ಸೋಸಲೆ ರೇವಣಾಚಾರ್ಯ ಸು.1623

ಈತನು ಮಹಿಮ್ನಸ್ತವ, ವೀರಶೈವಸಿದ್ಧಾಂತಶಿಖಾಮಣಿ, ಶಿವಾಧಿಕ್ಯ ಶಿಖಾಮಣಿ, ಸದ್ಗುರುರಗಳೆ ಇವುಗಳಿಗೆ ಕನ್ನಡವ್ಯಾಖ್ಯಾನವನ್ನೂ ಶಾರೀರ ಪ್ರಕಾಶಿಕೆ, ಅಂತಃಕರಣಪ್ರಕಾಶಿಕೆ, ಸ್ವಸ್ವರೂಪಪ್ರಕಾಶಿಕೆ, ಪರಮಾತ್ಮಪ್ರಕಾಶಿಕೆ, ನಿಜದೀಪ್ತಿಪ್ರಕಾಶಿಕೆ ಎಂಬ ಗ್ರಂಥಗಳನ್ನೂ ಬರೆದಿದ್ದಾನೆ. ಇವನು ವೀರಶೈವಕವಿ ; ತನ್ನ ಪರಂಪರೆಯನ್ನು ಹೀಗೆ ಹೇಳಿಕೊಂಡಿದ್ದಾನೆ:-ರೇಣುಕಾಚಾರ್ಯವಂಶೋದ್ಭವ ವಿಶ್ವನಾಥ ; ಅವನ ಮಗ ವಾರಾಣಸೀಶ; ಅವನ ಮಕ್ಕಳು ವೀರಾರ್ಯ, ಸರ್ವೇಶ್ವರ ; ಸರ್ವೇಶ್ವರನ ಮಗ ವೀರಣ; ಅವನ ಮಗ ರೇವಣಾರ್ಯ ; ಅವನ ಮಗ ಕವಿ ರೇವಣಾಚಾರ್ಯ ಅಥವಾ ರೇಣುಕಾಚಾರ್ಯ. ತನ್ನನ್ನು

ಶ್ರೀಮದ್ವೇದವೇದಶಿರಶ್ಶಿವಾಗಮಪುಣ್ಯಪುರಾಣಪ್ರಭೃತಿಪ್ರಭೂತಪ್ರಥಿತಪ್ರಮಥಸಂಗೀತಗೀತವಿಗ್ಯಾನವದ್ಯ ಶ್ರೀವೀರಶೈವಷಟ್ಸ್ಥಲ ಶಿವಯೋಗಶಿವಾದ್ವೈತಸತ್ಪದ ಪ್ರತಿಷ್ಠಾಪನಾಚಾರ್ಯವರ್ಯ

ಎಂದು ವಿಶೇಷಿಸಿ ಹೇಳಿಕೊಂಡಿದ್ದಾನೆ. ಮಹಿಮ್ನಸ್ತವಟೀಕೆಯನ್ನು ಚಿಕನಾಯಕಪುರದ ಅರಸಾದ ಮುದಿನಾಯಕನ ಸಂತೋಷಾರ್ಥವಾಗಿ ಸೋಮಶೇಖರಯೋಗಿ ತನ್ನಿಂದ ಮಾಡಿಸಿದಂತೆ ಹೇಳುತ್ತಾನೆ.[1] ಈ ಮುದಿನಾಯಕನು 1623 ಯಲ್ಲಿ ಇದ್ದಂತೆ ಚಿಕ್ಕನಾಯಕನಹಳ್ಳಿ 1 ನೆಯ ಶಾಸನದಿಂದ ತಿಳಿಯುತ್ತದೆ. ಕವಿಯ ಕಾಲವೂ ಅದೇ.

ಇವನ ಮಹಿಮ್ನಸ್ತವಟೀಕೆಗೆ ಮಹಿಮ್ನಃಪ್ರದೀಪಿಕಾ ಎಂದು ಹೆಸರು ಈ ಟೀಕೆಯ ಅಂತ್ಯಭಾಗದಲ್ಲಿ "ಶಶಿಕಲೆಯೆಂಬ ಸರ್ವಲಘುವೃತ್ತ" ಎಂಬ ಹೆಸರಿನಿಂದ ಒಂದು ವೃತ್ತವಿದೆ. ಇದು ಟೀಕಾಕಾರನಿಂದ ರಚಿತವಾಗಿರಬಹುದು. ಇದನ್ನು ಇದ್ದಹಾಗೆ ಕೆಳಗೆ ಬರೆಯುತ್ತೇವೆ--

ಹರಿಹರಹರಿಕರಿಹರಿಸಖದೃಗವ ಹರಿಸುರವರಹರಿಹರಿನತಚರಣ |
ಹರಿಸುತಹರಹರ ಹರಿವರಕಟಕನೆ ನರಹರಿ ಹರಹರಹಂವರಮುಕುಟ ||
ಭವಭವಹರಹರ ಗಣಗಣಪತಿಪಿತ ಪಶುಪಪರಮಶಿವಪದಪದವಚನ |
ವೃಷಭಗಭಗಪದನಗಗುರು ನಿಗಮಗಗುಹಪಿತ? ಇಹರಸುರಹರಯಮಹರ ||

---

1 ಚಿಕನಾಯಕಪೂಷ್ಕರ್ತುರ್ಮುದಿನಾಯಕಭೂಭುಜಃ । ಮುದೇ ಟೀಕಾ ಕಾರಿತೇಯಂ ಸೋಮಶೇಖರಯೋಗಿನಾ ||

ಇವನು ಬರೆದ ವೀರಶೈವಸಿದ್ಧಾಂತಶಿಖಾಮಣಿಟೀಕೆಗೆ ಸಿದ್ಧಾರ್ಥ ಸಂಬೋಧಿನಿ ಎಂದು ಹೆಸರು. ಇದನ್ನು ಭೋಗಮಲ್ಲೇಶನ ಶಿಷ್ಯನಾದ ಸಿದ್ಧವೃಷೇಶ್ವರನ ಅಜ್ಞಾನುಸಾರವಾಗಿ ಬರೆದಂತೆ ಹೇಳುತ್ತಾನೆ. ಶಿವಾಧಿಕ್ಯ ಶಿಖಾಮಣಿಟೀಕೆಯನ್ನು ಕಳಲೆಕೆಂಪನಂಜಾರ್ಯ, ನಮಸ್ಕಾರಪುರೀಸಿದ್ಧ ನಂಜಾರ್ಯ, ಸುತ್ತೂರುಸಿಂಹಾಸನದ ಗುರುನಂಜಾರ್ಯನ ಶಿಷ್ಯ ಚೆನ್ನಬಸವ ಈ ಮೂವರುಗಳ ಇಷ್ಟಾನುಸಾರವಾಗಿ ಬರೆದಂತೆ ಹೇಳುತ್ತಾನೆ. ಮುದಿಗೆರೆ ರಘುವಪ್ಪನಾಯಕನೂ ಈ ಗ್ರಂಥರಚನೆಗೆ ಕಾರಣಭೂತನೆಂಬ ಅಂಶವು ಈಗ್ರಂಥದ ಈ ಭಾಗದಿಂದ ತಿಳಿಯುತ್ತದೆ.—

ಮುದಿಗೆರೆ ರಘುವಪ್ಪನಾಯಕರು ಸೋಸಲೆರೇವಣಾರಾಧ್ಯರನು ಕರೆಯಿಸಿ ಸಭೆಯಲ್ಲಿ ಸಮಸ್ತವೈಷ್ಣವರೊಡನೆ ಕೂಡಿ ಮಾಡಿದ ಪ್ರಶ್ನೆ:—ಮೊದಲು ಪಾಲ್ಕುರಿಕೆ ಸೋಮಾರಾಧ್ಯರು ಚಕ್ರಪಾಣಿರಂಗನಾಥನನು ವಾದದಲ್ಲಿ ಜಯಿಸಿ ಶಂಕಾಪರಿಹಾರವಿಲ್ಲದೆ ಶಿವನೇ ಘನವೆಂದು ಸೋಮನಾಥಭಾಷ್ಯವಂ ಮಾಡಿದರು. ಕೆರೆಯಪದ್ಮರಸರು ತ್ರಿಭುವನತಾತನನು ವಾದದಲಿ ಜಯಿಸಿ ಶಂಕಾಪರಿಹಾರವಿಲ್ಲದೆ ಶಿವನೇ ಘನವೆಂದು ಸಾನಂದಚರಿತೆಯಂ ಮಾಡಿದರು. ಈಗ ನೀವು ಸಮಸ್ತದರ್ಶನದವರೊಡನೆ ಕೂಡಿದ ಎನ್ನ ಶಂಕಾಪರಿಹಾರವನು ಮಾಡಿ ವಾದದಲ್ಲಿ ಜಯಿಸಿ ಎಂದು ಪ್ರಶ್ನೆಯ ಮಾಡಲಾಗಿ—ಸೋಸಲೆ ರೇವಣಾರಾಧ್ಯರು ಹಿಂಡಿನುರುಳನೆನಿಸಿ ಗುಪ್ತಗಣೇಶ್ವರನಾದ ರೇವಣಸಿದ್ಧೇಶ್ವರನು ವೈಷ್ಣವಚೋಳನನು ಜಯಿಸಿ ವೈಷ್ಣವಕೋಳಾಹಳವೆಂಬ ಹನ್ನೆರಡುಸಾವಿರಗ್ರಂಥವನು ಬರೆದರು. ಅದರ ಸಾರವನು ತೆಗೆದು ಶಿವಾಧಿಕ್ಯಶಿಖಾಮಣಿಯನು ಮಾಡುತ್ತೇನೆ ಎಂದರು.

ಬಳಿಕ ಈ ಗ್ರಂಥಗಳ ಹೆಸರುಗಳು ಹೇಳಿವೆ:—ರಾಜಮಹೇಂದ್ರದಲ್ಲಿ ಈಶಾನಗುರುಗಳು ಸಂಸ್ಕೃತಕಾವ್ಯವಾಗಿ ಹೇಳಿದ ಸಿದ್ಧೇಶ್ವರಚಾರಿತ್ರ, ಹರಿಹರದೇವರು ಹೇಳಿದ ರೇವಣಸಿದ್ಧೇಶ್ವರರಗಳೆ, ಚತುರ್ಮುಖಬೊಮ್ಮರಸರು ಹೇಳಿದ ಸಿದ್ಧೇಶ್ವರಪುರಾಣ.

ಶಾರೀರಪ್ರಕಾಶಿಕೆ ಮೊದಲಾದ 5 ಗ್ರಂಥಗಳು ವೀರಶೈವವೇದಾಂತವನ್ನು ಬೋಧಿಸುತ್ತವೆ. ಇವು ಒಂದೇ ಗ್ರಂಥದ 5 ಭಾಗಗಳಾಗಿರಬಹುದು. ಆರಂಭದಲ್ಲಿ ಈ ಶ್ಲೋಕವಿದೆ—

ಗುರುಂ ವೀರೇಶ್ವರಂ ನತ್ವಾ ರೇವಣಾಸಿದ್ಧಯೋಗಿನಂ |
ಸ್ತುತ್ವಾ ತನ್ನಾಮತಃ ಕುರ್ವೇ ಶ್ರೀಶಾರೀರಪ್ರಕಾಶಿಕಾಂ ||

ನಿಜದೀಪ್ತಿಪ್ರಕಾಶಿಕೆಯ ಅಂತ್ಯದಲ್ಲಿ ಈ ಪದ್ಯವಿದೆ—

ಭ್ರಾಂತಿನಿರಸನವ ಮಾಡಿದ | ಚಿಂತೆಯೊಳೇ ಚಿಂತಿಸುತ್ತಿರುತ್ತಿಹ ಶಾಂತರ್ |
ಅಂತಿಂತೆನ್ನದೆ ನಿಜಗುರು | ಶಾಂತನ ನೆರೆದೆಲ್ಲ ಪರಮಸುಖಿಯಾಗಿರ್ಪರ್ ||

---

## ಸಿದ್ಧನಂಜಯತಿ 1623

ಈತನು ಚೋಳರೇಣುಕಾಚಾರ್ಯನ ಶಿವಾಧಿಕ್ಯಶಿಖಾಮಣಿಗೆ ಕನ್ನಡ ಟೀಕೆಯನ್ನು ಬರೆದಿದ್ದಾನೆ. ಇವನು ವೀರಶೈವಕವಿ, ನಮಸ್ಕಾರಪುರೀ ಸಿಂಹಾಸನದ ಶಿವನಂಕಾರದೇವನ ಶಿಷ್ಯನು. ಕಳಲೆಕೆಂಪನಂಜಾರ್ಯನಪ್ರಾರ್ಥನಾನುಸಾರವಾಗಿ ಈ ಟೀಕೆಯನ್ನು ಬರೆದಂತೆ ಹೇಳುತ್ತಾನೆ. ಇವನ ಟೀಕೆಗೆ ವೀರಭದ್ರೀಯ ಎಂದು ಹೆಸರು. ಇವನು ಸೋಸಲೆರೇವಣಾಚಾರ್ಯನ (1623) ಸಮಕಾಲದವನು. [1]

---

## ರಾಮಚಂದ್ರ ಸು. 1625

ಈತನು ಅಶ್ವಶಾಸ್ತ್ರವನ್ನು ಬರೆದಿದ್ದಾನೆ. ಇವನು ಬ್ರಾಹ್ಮಣಕವಿಯೆಂದು ತೋರುತ್ತದೆ. "ಬಿರುದೆಂತೆಂಬರಗಂಡ ಕಠಾರಿಯಸಾಳ್ವ ವೈರಿಗಜಗಂಡಭೇರುಂಡ ಚಾಮುಂಡಿಕಾವರಪ್ರಸಾದನಾದ ಮಹಿಸೂರು ನರಸರಾಜೇಂದ್ರನಂದನ ಚಾಮರಾಜಭೂವರನ" ಪ್ರೋತ್ಸಾಹದಿಂದ ಈ ಗ್ರಂಥವನ್ನು ಬರೆದಂತೆ ಹೇಳುತ್ತಾನೆ. ಈ ಚಾಮರಾಜನು 1617 ರಿಂದ 1637 ರವರೆಗೆ ಆಳಿದುದಾಗಿ ತಿಳಿವುದರಿಂದ ಕವಿಯ ಕಾಲವು ಸುಮಾರು 1625 ಆಗಬಹುದು.

ಇವನ ಗ್ರಂಥ

### ಅಶ್ವಶಾಸ್ತ್ರ

ಇದು ಶಾಲಿಹೋತ್ರನ ಅಶ್ವಶಾಸ್ತ್ರಕ್ಕೆ ವಾಕ್ಯರೂಪವಾದ ಕನ್ನಡ ಭಾಷಾಂತರ; ಅಧ್ಯಾಯ 18. "ಶಾಲಿಹೋತ್ರನುಹೇಳಿದ ಶಾಸ್ತ್ರಕ್ರಮದಿಂದ ಬಾಲಕರರಿವಂತೆ ಸಾಂಗೋಪಾಂಗವಾಗಿ ಕನ್ನಡಿಸಿದೆನು" ಎಂದು ಕವಿ ಹೇಳುತ್ತಾನೆ. ಇದರಲ್ಲಿ ಕುದುರೆಗಳ ವಯಸ್ಸು, ಹಲ್ಲು, ಸುಳಿ, ವ್ಯಾಧಿಗಳಿಗೆ

---

1. 366ನೆಯ ಪುಟವನ್ನು ನೋಡಿ.

ಚಿಕಿತ್ಸೆ ಮುಂತಾದ ವಿಷಯಗಳು ಹೇಳಿವೆ. ಈ ಗ್ರಂಥವು ಲಾಲಿತ್ಯಾದಿಗುಣ ಗಳಿಂದ ಕೂಡಿ ಚಾಮರಾಜನ ಯಶೋರೂಪವಾಗಿದೆ ಎಂದು ಕವಿ ಈಪದ್ಯ ಗಳಲ್ಲಿ ಹೇಳುತ್ತಾನೆ—

ಲೀಲಾಮಾತ್ರದೆ ರಾಮಚಂದ್ರಕವಿ ನಾನೀವಾಜಿಶಾಸ್ತ್ರಾರ್ಥಮಂ |
ಮೇಲಾರ್ಕೈದು ಸುವಾಕ್ಯರೂಪಮನಿರಲ್ಕಾಚಂದ್ರತಾರಾಂಬರಂ ||
ಲಾಲಿತ್ಯಾನ್ವಿತಸುಪ್ರಯೋಗರಚನಾವ್ಯಾಪಾರವಾಗೀಜಗ |
ಜ್ಜಾಲಕ್ಕೆಲ್ಲ ಹಿತಾರ್ಥಮಾಗುಸಿರಿದೆಂ ಕರ್ಣಾಟಭಾಷೋಕ್ತಿಯಿಂ ||
ಮೈಶೂರಾಧಿಪಚಾಮರಾಜನ ಯಶಸ್ಸಂಪೂರ್ಣಚಂದ್ರಂ ನೆಗ |
ೞ್ದೀಸಾಕ್ಷಾದ್ಧಯಶಾಸ್ತ್ರರೂಪಮನೆ ತಾಳ್ದಿಲ್ಲಾಗಳುಂ ಭೂಮಿಯೊಳ್ ||
ದೇಶಾಧೀಶಚಕೋರಜಾಲದ ಮನಕ್ಕಾನಂದಮಂ ಕೊಟ್ಟು ಸ |
ದ್ಧೀಶಾಲಿಪ್ರಕರಕ್ಕೆ ಹರ್ಷಚಯಮಂ ಪ್ರಖ್ಯಾತಮಾಗೊಪ್ಪುಗುಂ ||

ಅಧ್ಯಾಯಗಳ ಅಂತ್ಯದಲ್ಲಿ ಈಗದ್ಯವಿದೆ—

ಇದು ಸಮಸ್ತಜಗದ್ವಿಖ್ಯಾತಮಪ್ಪ ಬಿರುದೆಂತೆಂಬರಗಂಡ ಕಟಾರಿಯಸಾಳ್ವ ವೈರಿಗಜಗಂಡಭೇರುಂಡ ಚಾಮುಂಡೀ ವರಪ್ರಸಾದನಾದ ಮೈಶೂರನರಸರಾಜೇಂದ್ರನಂ ದನಚಾಮರಾಜಭೂವರಪ್ರೋತ್ಸಾಹಿತನಾದ ರಾಮಚಂದ್ರಕವಿವಿರಚಿತಮಪ್ಪ ಅಶ್ವ ಶಾಸ್ತ್ರದೊಳ್.

ಈ ಗ್ರಂಥದಿಂದ ಸ್ವಲ್ಪಭಾಗವನ್ನು ತೆಗೆದು ಬರೆಯುತ್ತೇವೆ—

ಐದುವರ್ಷದ ಕುದುರೆಗೆ ಪರಾಕ್ರಮವು ಮಣಿತವು ಸಾಧಿಸಿ ತಿದ್ದಿದ ಕುಣಿ ತವು ಕಾಲ ಬೇಗವು ಉಂಟಹುದು. ೫ ಧಾರೆಗಳಿಂದ ತಿದ್ದುವಡೆವುದು. 5 ಧಾರೆ ಗಳು ಆವುವೆಂದಡೆ—ಆಸ್ಕಂದಿತ, ಧೌರಿತಕ, ರೇಚಿತ, ವಲ್ಗಿತ, ಪ್ಲುತ. ಕುದುರೆಯ ಕೊರಳನು ಎಡಬಲಕೆ ತಿರುಗಿಸಿ ನಡೆಯಿಸುವುದು ಅಸ್ಕಂದಿತವೆನಿಸಿಕೊಂಬುದು. ಮೇಲಣ ರಾವುತನ ಭಾರವನು ಸಡ್ಡೆಮಾಡದೆ ಇದ್ದ ಸತ್ವದಿಂದ ಹಾಱುತ ನಡೆಯಲದು ಧೌರಿತ ಕವೆನಿಸಿಕೊಂಬುದು. ನೆಟ್ಟಗೆ ನಿಲ್ಲದೆ ಓಡುವುದು ರೇಚಿತವೆನಿಸಿಕೊಂಬುದು. ಅಡ್ಡಲಾಗಿ ಮಣಿತವ ತೋಱಿಸುವುದು ವಲ್ಗಿತವೆನಿಸಿಕೊಂಬುದು. ಕುಪ್ಪಳಿಸಿ ಕುಪ್ಪಳಿಸಿ ಹಾಱಿ ಯೋಡುವುದು ಪ್ಲುತವೆನಿಸಿಕೊಂಬುದು.

---

## ಪದ್ಮಣಪಂಡಿತ. 1627

ಈತನು ಹಯಸಾರಸಮುಚ್ಚಯವನ್ನು ಬರೆದಿದ್ದಾನೆ. ಇವನು ಜೈನಕವಿ; ಇವನ ತಂದೆ ಕನಕಪುರದ ದೇಪರಸನು; ತಾಯಿ ಗುಮ್ಮಾಂಬೆ.

ಅಧ್ಯಾಯಾಂತ್ಯಗದ್ಯಗಳಿಂದ ಈ ಗ್ರಂಥವು ಮೈಸೂರು ದೊರೆಯಾದ ಚಾಮರಾಜನ (1617-1637) ಆಜ್ಞಾನುಸಾರವಾಗಿ ಹುಟ್ಟಿದಂತೆಯೂ ಈ ಕಾರಣದಿಂದ ಇದಕ್ಕೆ ಚಾಮರಾಜೀಯ ಎಂಬ ಹೆಸರು ಬಂದಂತೆಯೂ ತಿಳಿಯುತ್ತದೆ. ಈ ಗ್ರಂಥವನ್ನು ಕವಿ ಶಕ 1549 (ನವಜಲಧಿಬಾಣಚಂದ್ರ) ಪ್ರಭವದಲ್ಲಿ-ಎಂದರೆ 1627 ರಲ್ಲಿ-ಮುಗಿಸಿದಂತೆ ಹೇಳುತ್ತಾನೆ. ತನ್ನ ಗುಣಾದಿಗಳನ್ನು ಈ ಪದ್ಯಗಳಲ್ಲಿ ಹೇಳಿಕೊಂಡಿದ್ದಾನೆ-

ವರವಿದ್ವಜ್ಜನಮಂಡನ| ಕರ ಪದ್ಮಣಪಂಡಿತಾರ್ಯ ವೈದ್ಯಸುವಂಶಾಂ |
ಬರಸೂರ್ಯನಶ್ವಶಾಸ್ತ್ರಮ | ನೊರೆದಂ ಕರ್ಣಾಟಕಂದಪದ್ಯಗಳಿಂದಂ ||
ಆದೇಪರಸಸುತಂ ಸ್ಯಾ | ದ್ವಾದಮತಾಚಾರನವಮಲಗುಣನಿಧಿಯಾಯು !
ವೇದಬುಧನಮಲಜಿನಪತಿ | ಪಾದಾಚಾರ್ಾಸಕ್ತಪದ್ಮಣಂ ಭಿಷಗಗ್ರ್ಯಂ ||

ಇವನ ಗ್ರಂಥ

### ಹಯಸಾರಸಮುಚ್ಚಯ

ಇದು ಕಂದದಲ್ಲಿ ಬರೆದಿದೆ; ಅಧ್ಯಾಯ 20, ಗ್ರಂಥಸಂಖ್ಯೆ 8000 ಇದರಲ್ಲಿ ಕುದುರೆಗಳ ಆಕೃತಿ, ಲಿಂಗ, ಭೇಷಜ ಇವು ನಿರೂಪಿಸಲ್ಪಟ್ಟಿವೆ. ಗ್ರಂಥಾವತಾರದಲ್ಲಿ ಜಿನಸ್ತುತಿ ಇದೆ. ಅಧ್ಯಾಯಾಂತ್ಯದಲ್ಲಿ ಈ ಗದ್ಯವಿದೆ--

ಇದು ಶ್ರೀಮದ್ರಾಜಾಧಿರಾಜ ರಾಜಕುಲತಿಲಕ ರಾಜಶಿಖಾಮಣಿ ಶ್ರೀಮಚ್ಚಾಮರಾಜಭೂಪಾಲಕಾರಿತ ಹಯಸಾರಸಮುಚ್ಚಯಾಭಿಧಾನ ಚಾಮರಾಜೀಯ ಗ್ರಂಥಮೆಂಬ ಹಯಶಾಸ್ತ್ರದೊಳ್.

ಈ ಗ್ರಂಥದಿಂದ ಒಂದು ಪದ್ಯವನ್ನು ತೆಗೆದು ಬರೆಯುತ್ತೇವೆ--

ಜಿನಸ್ತುತಿ

ಶ್ರೀಮದ್ಗೀರ್ವಾಣಚಕ್ರೇಶ್ವರಮಕುಟತಟಪ್ರೋಲ್ಲಸತ್ಪದ್ಮರಾಗೋ |
ದ್ದಾಮಪ್ರೋದ್ಭಾಸಮಾನಾರುಣಚರಣಸರೋಜಂ ಸುನಾಸೀರವೈರಿ ||
ಸ್ತೋಮಾಬ್ಧಕ್ರೂರಜಂಝಾನಿಲನಗಣಿತಸದ್ಭಕ್ತವಾರಾಶಿಚಂದ್ರಂ |
ಶ್ಯಾಮಾಂಗಜ್ಯೋತಿ ಲಕ್ಷ್ಮೀರಮಣನೆಮಗೆ ಸಂಸಿದ್ಧಿಯಂ ಮಾಳ್ಕೆ ದೇವಂ ||

---

### ಸೂರ್ಯ. ಸು 1640

ಇವನು ಕವಿಕಂಠಹಾರವನ್ನು ಬರೆದಿದ್ದಾನೆ. ಈತನು ಬ್ರಾಹ್ಮಣ ಕವಿ; ಸೂರ್ಯಭಕ್ತನಾದ ಕರಣಿಕತಿಮ್ಮಮಂತ್ರಿಯ ಮಗನು. ಬೇಲೂರ

ದೊರೆಯಾದ ವೆಂಕಟಾದ್ರಿರಾಜನ ಪೌತ್ರನೂ ಧವಳಾಂಕಭೀಮ ಎಂಬ ಬಿರುದುಳ್ಳ ಕೃಷ್ಣರಾಜನ ಪುತ್ರನೂ ಆದ ವೆಂಕಟಾದ್ರಿರಾಜನ ಆಜ್ಞಾನುಸಾರವಾಗಿ ಈಗ್ರಂಥವನ್ನು ರಚಿಸಿದಂತೆ ಹೇಳುವುದರಿಂದ ಕವಿ ಈ ದೊರೆಯ ಆಶ್ರಿತನಾಗಿದ್ದಂತೆ ತಿಳಿಯುತ್ತದೆ. ಈ ದೊರೆ 1626 ರಿಂದ 1643 ರವರೆಗೆ ಆಳಿದಂತೆ ಶಾಸನಗಳಿಂದ[1] ತಿಳಿವುದರಿಂದ ಕವಿಯ ಕಾಲವು ಸುಮಾರು 1640 ಆಗಬಹುದು. "ಉಭಯಭಾಷಾಕವಿತಾನೂತನಪದರಚನಾವಿಖ್ಯಾತ" ಎಂದು ಕವಿ ತನ್ನನ್ನು ವಿಶೇಷಿಸಿ ಹೇಳಿಕೊಂಡಿದ್ದಾನೆ.

ಇವನ ಗ್ರಂಥ

### ಕವಿಕಂಠಹಾರ

ಇದು ಕನ್ನಡನಿಘಂಟು ; ಇದರಲ್ಲಿ 271 ಕಂದಗಳಿವೆ. ಹಿಂದಣವರು ಹೇಳಿರುವ ಶಬ್ದಗಳನ್ನು ಸರಗೊಳಿಸಿ ಈನಿಘಂಟುವನ್ನು ರಚಿಸಿದಂತೆ ಕವಿ ಈಪದ್ಯದಲ್ಲಿ ಹೇಳುತ್ತಾನೆ—

ಹರುಷಮಿಗೆ ಮುನ್ನಮಾದಿಮ| ಗೊರೆದೊಳ್ಕರ್ಣಾಟಶಬ್ದಮಣಿಸಿಚಯಮುಮಂ |
ಸರಗೊಳಿಸಿ ಪೇೞ್ದಿಸಿದು ತಾಂ | ಪರಿಕಿಸೆ ಕವಿಕಂಠಹಾರಮೆನಿಕುಂ ಪೆಸರಿಂ ||

ಗ್ರಂಥಾವತಾರದಲ್ಲಿ ಶಿವಸ್ತುತಿ ಇದೆ. ಬಳಿಕ ಕವಿ ರಾಮ, ಗಣಪತಿ ಇವರುಗಳನ್ನು ಸ್ತುತಿಸಿದ್ದಾನೆ. ಈಗ್ರಂಥದಿಂದ ಸ್ವಲ್ಪ ಭಾಗವನ್ನು ತೆಗೆದು ಬರೆಯುತ್ತೇವೆ:-

### ಬೇಲೂರು

ನಾಡಿಪುದೊಂದು ಪರಿಕಿಸಿ | ನೋಡಲ್ ಕಾಶ್ಮೀರದೇಶಕಯ್ವಡಿಯೆನೆ ತಾಂ |
ಗಾಡಿವಡೆದಿಹುದು ಗೀರ್ವಾಧು | ಗಾಡುಂಬೊಲನೆನೆ ಸುದೇಶ ಪೊಯ್ಸಳದೇಶಂ ||
ಆದೇಶದೊಳಗೆ ನರಹರಿ | ಯಾದೇಶದಿನೊಪ್ಪುತಿಪುದತಿವೈಭವದಿಂ |
ಮೇದಿನಿಗಚ್ಚರಿಯೆಂದೆನೆ | ಸಾಧುಜನಪ್ರವರವಿನುತವೇಲಾನಗರಂ ||

### ನಿಘಂಟು

ಕಂದೆಂದುಂ ಕಱೆಯೆಂದುಂ | ಸಂದೆಗಮಿಲ್ಲವು ಕಳಂಕ ಜೊನ್ನಂ ಜ್ಯೋತ್ಸ್ನಂ |
ಸಂದುದು ತಾರಗೆಯುಡುಲೆನ | ಲಿಂದುಡುಸಂತತಿಗೆ ನಾಮವಿವು ಬುಧರಿಂದಂ ||
ನೆಱೆದುದು ಸಮಗ್ರಮಕ್ಕುಂ | ಕೋಱಿಡೆಂದುಂ ಸ್ಥಾಣುವಕ್ಕು ತವಲಾಯಿಯೆ ಕ |
ಪ್ಪುವಳಿಕು ಜಗದಿ ವಿಸಟಂ | ಒರಿದುದೆನಲ್ ಸ್ವೈರಗಮನಮಕ್ಕುಂ ಬುಧರಿಂ ||

---

1. 1638 ರಲ್ಲಿ ಬರೆದ ಬೇಲೂರು 128 ನೆಯ ಶಾಸನವೇ ಮುಂತಾದುವು.

## ಚಂದ್ರಮ 1646

ಇವನು ಕಾರ್ಕಳದ ಗೊಮ್ಮಟೇಶ್ವರಚರಿತೆಯನ್ನು ಬರೆದಿದ್ದಾನೆ. ಈತನು ಜೈನಕವಿ; ಇವನ ವಿದ್ಯಾಗುರು ಶ್ರುತಸಾಗರ; ವ್ರತಗುರು ಮಹೇಂದ್ರಕೀರ್ತಿ. ಅರಿರಾಯರಗಂಡರದಾವಣಿಯೆಂಬ ಬಿರುದಾಂತ ಭೈರವನೃಪನ ಕರುಣಸಹಾಯದಿಂದ ಲಲಿತಕೀರ್ತಿಯ ಆಜ್ಞಾನುಸಾರವಾಗಿ ಈ ಗ್ರಂಥವನ್ನು ಬರೆದಂತೆ ಹೇಳುವುದರಿಂದ ಕವಿ ತುಳುವದೇಶದವನೆಂದೂ ಭೈರವರಾಯನ ಆಶ್ರಿತನೆಂದೂ ತಿಳಿಯುತ್ತದೆ. ಈ ಗ್ರಂಥದ ಕೊನೆಯ ಸಂಧಿಯಲ್ಲಿ ಅರಿರಾಯರಗಂಡರದಾವಣಿ ಇಮ್ಮಡಿಭೈರವರಾಯನು ತನ್ನ ತಂದೆ ಭೈರವರಾಯನಿಗೆ ಪುಣ್ಯಖ್ಯಾತಿಗಳಾಗಲೆಂದು ಕುಲಗುರು ಲಲಿತಕೀರ್ತಿಯ ಉಪದೇಶದಿಂದ ಮಹೇಂದ್ರಕೀರ್ತಿಯನ್ನು ಮುಂದಿರಿಸಿಕೊಂಡು ಗೊಮ್ಮಟೇಶ್ವರನಿಗೆ ಶಕ 1568 ಪಾರ್ಥಿವದಲ್ಲಿ-ಎಂದರೆ 1646ರಲ್ಲಿ-ಅಭಿಷೇಕ ಪೂಜಾದಿಗಳನ್ನು ಮಾಡಿಸಿದನೆಂದು ಕವಿ ಹೇಳುತ್ತಾನೆ. ಇವನೂ ಆಕಾಲದವನೆಂದು ತೋರುತ್ತದೆ. ತನ್ನ ವಿಷಯವಾಗಿ ಹೀಗೆ ಹೇಳಿಕೊಂಡಿದ್ದಾನೆ---

ಜಿನಮತವಾರ್ಧಿವರ್ಧನ ಚಂದ್ರಮ ಭವ್ಯ । ಹೃತ್ಕುವಲಯಚಂದ್ರಮನು ।
ಅನುಪಮವಿಬುಧಚಕೋರಚಂದ್ರಮನೆಂದು । ಜನರೊಬ್ಬ ಬಣ್ಣಿಪರವನ ॥

ಇವನ ಗ್ರಂಥ

### ಕಾರ್ಕಳದ ಗೊಮ್ಮಟೇಶ್ವರಚರಿತೆ

ಇದು ಸಾಂಗತ್ಯದಲ್ಲಿ ಬರೆದಿದೆ; ಸಂಧಿ 17, ಪದ್ಯ 2185.[1] ಇದರಲ್ಲಿ ಬಾಹುಬಲಿಯ ಅಥವಾ ಗೊಮ್ಮಟೇಶ್ವರನ ಚರಿತ್ರವೂ ಕಾರ್ಕಳದಲ್ಲಿ ಆತನ ವಿಗ್ರಹವನ್ನು ಪ್ರತಿಷ್ಠೆಮಾಡಿದ ವಿಷಯವೂ ಹೇಳಲ್ಪಟ್ಟವೆ.

ಅರಿರಾಯರಗಂಡರದಾವಣಿ ಎಂಬ ಬಿರುದುಳ್ಳಉತ್ತರಮಥುರಾನಾಥನಾದ ಪಾಂಡ್ಯನೃಪನು ತೌಳವದೇಶದ ಕಾರಕಳದಲ್ಲಿ ಲಲಿತಕೀರ್ತಿಯ ಉಪದೇಶದಿಂದ ಗೊಮ್ಮಟೇಶ್ವರನ ವಿಗ್ರಹವನ್ನು ಮಾಡಿಸಿ ಅದನ್ನು ಇಪ್ಪತ್ತುಚಕ್ರಗಳುಳ್ಳ ಭಂಡಿಯಮೇಲಿಟ್ಟು ಒಂದು ತಿಂಗಳವರೆಗೂ ಬೆಟ್ಟದಮೇಲಕ್ಕೆ ಎಳೆಯಿಸಿ ಸಾಗಿಸಿ ಶಕ 1353 ವಿರೋಧಿಕೃತುವಿನಲ್ಲಿ, ಎಂದರೆ 1431ರಲ್ಲಿ, ಪ್ರತಿಷ್ಠೆಮಾಡಿಸಿದನು—ಎಂದು ಹೇಳಿ ತನ್ನ ಪೋಷಕನಾದ ದೊರೆಯವಿಷಯವಾಗಿ ಕವಿ ಹೀಗೆ ಬರೆದಿದ್ದಾನೆ:—

---

1 ಮತ್ತೊಂದು ಪ್ರತಿಯಲ್ಲಿ ಪದ್ಯಸಂಖ್ಯೆ 2318 ಎಂದಿದೆ.

ಆ ಪಾಂಡ್ಯರಾಜನ ವಂಶದಲ್ಲಿ ವೀರನರಸಿಂಹಬಂಗರಾಜೇಂದ್ರನು ಹುಟ್ಟಿದನು; ಅವನ ಹೆಂಡತಿ ಗುಮ್ಮಟಾಂಬೆ; ಮಗ ಇಮ್ಮಡಿಭೈರವರಾಯ. ಇವನ ಹೆಂಡತಿ ಮಲ್ಲಿದೇವಿ; ಮಕ್ಕಳು ಭುವನೈಕವೀರ ಪಾಂಡ್ಯೇಂದ್ರ, ಚಂದ್ರಶೇಖರ, ಅರಿರಾಯರಗಂಡರದಾವಣಿ ಇಮ್ಮಡಿಭೈರವರಾಯ. ಪಟ್ಟಿಪೊಂಬುಚ್ಚಪುರವರಾಧೀಶ್ವರನಾದ ಈ ಇಮ್ಮಡಿಭೈರವರಾಯನು 1646ರಲ್ಲಿ ಗೊಮ್ಮಟೇಶ್ವರನಿಗೆ ಪುನಃ ಪ್ರತಿಷ್ಠೆ, ಪೂಜೆ, ಅಭಿಷೇಕ ಮುಂತಾದುವನ್ನು ಮಾಡಿಸಿದನು.

ಗ್ರಂಥಾವತಾರದಲ್ಲಿ ನೇಮಿಜಿನಸ್ತುತಿ ಇದೆ. ಬಳಿಕ ಕವಿ ಬಾಹುಬಲಿ, ಚಂದ್ರನಾಥ, ಸಿದ್ಧಾದಿಗಳು, ಯಕ್ಷಯಕ್ಷಿಯರು, ಬೆಟ್ಟದಬ್ರಹ್ಮ, ಭೈರವರಾಯನ ಕುಲದೇವತೆಯಾದ ಪೊಂಬುಚ್ಚದಪದ್ಮಾಂಬೆ, ಸರಸ್ವತಿ ಇವರುಗಳನ್ನು ಹೊಗಳಿ ಮಹೇಂದ್ರಕೀರ್ತಿಯಿಂದ ಶ್ರುತಸಾಗರನವರೆಗೆ[1] ಗುರುಗಳನ್ನು ಸ್ಮರಿಸಿದ್ದಾನೆ. ಸಂಧಿಗಳ ಕೊನೆಯಲ್ಲಿ

ಇದು ಶ್ರುತಸಾಗರಮುನಿರಾಯನ ಶಿಷ್ಯ | ಚದುರಚಂದ್ರಮ ವಿರಚಿಸಿದ |
ಮದನಾರಿಗುಮ್ಮಟಚರಿತೆಯೊಳ್

ಎಂದಿದೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ದುರ್ಜನರು

ಗೋಪಿನ ಮೊಲೆಯ ಪಾಲನು ಬಿಟ್ಟು ರಕ್ತವ | ಸೇವಿಪ ಜಿಗುಳೆಗಳಂತೆ |
ಭಾವರಸವ ಬಿಟ್ಟು ದೋಷವನಱಸುವ | ಗಾವಿಲರಿಗೆ ಗತಿಯುಂಟೇ ||

ತೆಂಗು

ತಲೆಯೊಳಮೃತಕುಂಭಗಳ ಪೊತ್ತು ತಮ್ಮನು | ಸಲಹಿದವರ ಸಂತತಿಯ |
ಸಲಹಬೇಕೆಂದು ಸಜ್ಜನಕುಲವನು ಪೋಲ್ತು | ನೆಲದೊಳು ತೆಂಗುಗಳಿಹುವು ||

ಊಟ

ಚುಪ್ಪದೊಳಗೆ ಹದವಱಿದು ಕಾಳಿಸಿ ಕಮ್ಮ | ನಪ್ಪ ಹಪ್ಪಳಸಂಡಗೆಗಳ |
ಒಪ್ಪದೊಳಗೆಯಿಕ್ಕಿ ಪಳಿದ್ಯವ ಬಡಿಸಲು | ಚಪ್ಪರಿದುಣುತಿರ್ದರಾಗ ||

---

1 ಮಹೇಂದ್ರಕೀರ್ತಿ, ಪನಸೋಗೆಯ ಸಿಂಹಾಸನಾಧೀಶ ದೇವಕೀರ್ತಿ, ಶಿಷ್ಯ ಮಲಧಾರಿಲಲಿತಕೀರ್ತಿ, ತದ್ವಂಶಜ ಅಭಿನವಲಲಿತಕೀರ್ತಿ, ವಿದ್ಯಾನಂದ, ಶ್ರುತಸಾಗರ, ಕಾಣೂರ್ಗಣದ ಭಾನುಕೀರ್ತಿ, ಬಲ್ಲಾಳರಾಯಜೀವರಕ್ಷಕ ಚಾರುಕೀರ್ತಿ, ವೀರಸೇನ, ಲಲಿತವರ್ಣಿ.

ನರ್ತಕಿ

ಮೊಗದೊಳು ಹಾವ ವಿಲಾಸ ನೇತ್ರಂಗಳೊ | ಳೊಗೆದುದು ಭಾವ ಚಿತ್ರದೊಳು |
ಸೊಗಸುವ ಭ್ರೂಮಧ್ಯದೊಳಗೆ ವಿಭ್ರಮಗಳು | ಮಿಗೆ ರಂಜಿಸಿತು ನರ್ತಕಿಯಾ ||

ಗೊಮ್ಮಟೇಶ್ವರ

ಕುರುಳ್ಗಳು ಮನಸಿಜಮೃಗವ ಪಿಡಿಯಲಿಕ್ಕಿ | ದುರುಳ್ಗಳೆಂಬಂತಾಜಿನನ |
ಸಿರದೊಳಗೊಪ್ಪಿದುವಾಸಿರಿಮೊಗದಾ | ವರೆಗೆಱಗುವ ತುಂಬಿಯಂತೆ ||

---

## ಭಾರತಿ ನಂಜ. 1648

ಇವನು ಕಂಠೀರವನರಸರಾಜವಿಜಯವನ್ನು ಬರೆದಿದ್ದಾನೆ. ಈ ಗ್ರಂಥದ ಒಂದು ಪ್ರತಿಯ ಕೊನೆಯಲ್ಲಿರುವ

ಸ್ವಸ್ತಿಶ್ರೀವಿಜಯಾಭ್ಯುದಯ ಶಾಲಿವಾಹನಶಕ1570ಸಂದ ಸರ್ವಧಾರಿಸಂವತ್ಸರದ ಜ್ಯೇಷ್ಠ ಶುದ್ಧ 11 ಚಂದ್ರವಾರದಲ್ಲಿ ಶ್ರೀಮನ್ಮಹಾದೇವದೇವೋತ್ತಮನಾದ ಶ್ರೀ ಲಕ್ಷ್ಮೀನರಸಿಂಹನು ಕಂಠೀರವನರಸರಾಜೇಂದ್ರನಿಗೆ ಆಯುರಾರೋಗ್ಯೈಶ್ವರ್ಯಾಭಿವೃದ್ಧಿ ಅಷ್ಟಪುತ್ರಬಹುಧನವನು ಕೊಟ್ಟು ರಕ್ಷಿಸಲಿ ಎಂದು ರಂಗನಾಥಸ್ವಾಮಿಯ ಕೃಪೆಯಿಂದ ಶ್ರೀನಿವಾಸಪಂಡಿತರ ಮಗ ಗೋವಿಂದವೈದ್ಯನು ಕಂಠೀರವವಿಜಯವನು ವಿರಚಿಸಿ ಆಚಂದ್ರಾರ್ಕ ವರಿಯಂತ ಭೂಮಿಯೊಳಿರಲಿ ಎಂದು ಭಾರತಿನಂಜನ ಮುಖವಾಗಿ ವಾಚಿಸಿ ರಾಜಾಸ್ಥಾನದಲಿ ವಿಸ್ತಾರಪಡಿಸಿದುದು.

ಎಂಬ ಗದ್ಯದಿಂದ ಗ್ರಂಥವು 1648ರಲ್ಲಿ ಹುಟ್ಟಿತೆಂದೂ ಗ್ರಂಥಕರ್ತನು ಗೋವಿಂದವೈದ್ಯನೆಂದೂ ವ್ಯಕ್ತವಾಗುತ್ತದೆ. ಮೈಸೂರುರಾಜರಲ್ಲಿ ಪ್ರಸಿದ್ಧನಾದ ಕಂಠೀರವನರಸರಾಜನ (1638-1659) ದಿಗ್ವಿಜಯವು ಈ ಗ್ರಂಥದಲ್ಲಿ ವರ್ಣಿತವಾಗಿದೆ. ದಳವಾಯಿ ನಂಜರಾಜೇಂದ್ರನು "ತನ್ನೊಡೆಯನ ಶೌರ್ಯದೇಳಿಗೆಯ" ಚರಿತೆಯಾಗಿ ರಚಿಸು ಎಂದು ಹೇಳಲು ಅವನ ಇಷ್ಟಾನುಸಾರವಾಗಿ ಈ ಗ್ರಂಥವನ್ನು ರಚಿಸಿದಂತೆ ಕವಿ ಹೇಳುತ್ತಾನೆ; "ಛಂದಸ್ಸು ಗಣ ಲಕ್ಷ್ಯಲಕ್ಷಣಗಳ ಮುದದಿಂದ ತಿಳಿದು ಇಂದುಧರನ ಕೃಪೆಯಲಿ ಪೇಳಿದೆ" ಎನ್ನುತ್ತಾನೆ.

ಪೂರ್ವಕವಿಗಳಲ್ಲಿ ವಾಲ್ಮೀಕಿವ್ಯಾಸರನ್ನು ಸ್ಮರಿಸಿದ್ದಾನೆ.

ಇವನ ಗ್ರಂಥ

## ಕಂಠೀರವನರಸರಾಜವಿಜಯ

ಇದು ಸಾಂಗತ್ಯದಲ್ಲಿ ಬರೆದಿದೆ; ಸಂಧಿ 26, ಪದ್ಯ 2870. ಇದರಲ್ಲಿ "ತರುಣೀಜನನೇತ್ರೋತ್ಪಲಚಂದ್ರನ ಸರಸವಿದ್ಯಾವಿಶಾರದನ ನರಸರಾಜೇಂದ್ರನ ಚರಿತೆ" ಹೇಳಿದೆ. "ಈ ಮಹಿಮನ ಸುಚರಿತ್ರಶೌರ್ಯಗಳ ಸುತ್ರಾಮಭೋಗವ ಧರ್ಮದಿರವ ನೇಮದಿ ಮಾಂಗಲ್ಯಕೃತಿಯಾಗಿ ಪೇಳ್ವೆನು" ಎಂದು ಕವಿ ಹೇಳುತ್ತಾನೆ. ಈ ಗ್ರಂಥದ ಉತ್ಕೃಷ್ಟತೆ ಈ ಪದ್ಯದಲ್ಲಿ ಹೇಳಿದೆ:—

ಸೊಕ್ಕುಜವ್ವನೆಯು ತಕ್ಕೆಯಸವಿಯುಂದದಿ । ಸಕ್ಕರೆಚಿಲುಪಾಲಿನಂತೆ ।
ಅಕ್ಕಱಿಂದಲಿ ಕೇಳುವರಿಗತಿಹರುಷವ । ಮಿಕ್ಕೆಸಗುವುದೀಕಾವ್ಯ ॥

ಗ್ರಂಥಾವತಾರದಲ್ಲಿ ಪಶ್ಚಿಮರಂಗಧಾಮಸ್ತುತಿ ಇದೆ. ಬಳಿಕ ಕವಿ ಲಕ್ಷ್ಮೀನರಸಿಂಹ, ಲಕ್ಷ್ಮೀಕಾಂತ, ಮೈಸೂರು ತ್ರಿಣಯನ, ಚೆನ್ನನಂಜುಂಡ, ಗಣೇಶ, ಸರಸ್ವತಿ, ಬೆಟ್ಟದಚಾಮುಂಡಿ ಇವರುಗಳನ್ನು ಕ್ರಮವಾಗಿ ಹೊಗಳಿದ್ದಾನೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ:—

### ಕಬ್ಬು

ಅಲರುವಿಲ್ ಪುಷ್ಪಬಾಣಗಳತಿಮೃದುವವ । ಕಳುಕರು ಜನರೆಂದು ಚಂದ್ರ ।
ಅಳಿಯನ ಬಿಲ್ಗೆ ಬೆಳಸಿದಂತೆ ಧವಳೇಕ್ಷು । ಗಳ ಗದ್ದೆರಾಜಿಸುತಿಹುವು ॥

### ತೆಂಗು

ಗಂಗೆಯ ಧರಿಸಿ ಭಸಿತವಿಟ್ಟು ಫಣದೊಳು । ಹಿಂಗದೆ ಮುಕ್ಕಣ್ಣನಾಂತು ।
ಅಂಗಜಹರನಂತೆಯಾರಾಮದೊಳಗಾ । ತೆಂಗಿನಮರಗಳೊಪ್ಪಿಹುವು ॥

### ಅಂಗಡಿ

ಬಿಳಿಮುತ್ತು ಕೆನ್ನೀರಮುತ್ತು ಕಟ್ಟಾಣಿಮು । ತ್ತಳವಟ್ಟ ಮೂಗುತಿಮುತ್ತು ।
ತೊಳಗುವ ಕಂಠಮಾಲೆಯ ಕ್ಷೀರಮುತ್ತಿನ । ಮಟ್ಟಿಗೆಗಳೆಸೆದುವರ್ಥಿಯಲಿ ॥

### ಭೋಜನ

ಸಣ್ಣ ಸೇವಗೆ ಹಾಲುಂಡೆ ಜೇನ್ಗೂಡ ಶುಭ್ರ । ವಣ್ಣದುದ್ದಿನ ಸವಿಗಡುಬು ।
ಬಣ್ಣಿಸೆ ಹೂರಣಗಡುಬು ಭೂಪಗೆ ಮುದ್ದು । ವೆಣ್ಣುಗಳೆಡೆಮಾಡಿದರು ॥
ಚಿಲುಪಾಲು ತಂಬಾಲು ಕೆನೆವೆಗಸಿದ ಪಾಲು । ಸುಲಲಿತಬಟ್ಟವಾಲುಗಳ ।
ಸಲೆ ಕಟ್ಟು ಮೊಸರ್ಗಳ ಘಟ್ಟಿಮಜ್ಜಿಗೆಗಳ । ಲಲನೆಯರುಣಬಡಿಸಿದರು ॥

ಮೈಸೂರು

ಧರೆಯಮೇಲಣ ವೈರಿನೃಪರ ದಂಡಿಸಿ ತಂದ | ವರವಸ್ತುಚಯವೆಸೆದಿರಲು |
ಮೆಱೆವುದು ಮಹಿಸೂರೆಂದೆಂಬ ನಾಮವೊಂ | ದುರುತರಧ್ವನ್ಯರ್ಥವಾಗಿ ||

ಮೈಸೂರು ದೇಶ

ಕಟ್ಟೆಂಬ ನುಡಿ ಮಾಲೆಗಾತಿಯರೊಳು ನೆಱೆ | ಪಟ್ಟೆಂಬ ನುಡಿಟಂಕದೊಳಗೆ |
ಕುಟ್ಟೆಂಬ ನುಡಿ ಪ್ರೇಹಿಯೊಳಗಲ್ಲದೆ ಬೇಱೆ | ದಿಟ್ಟಿಸಲಾನಾಡೊಳಿಲ್ಲ ||

---

ಭಾಸ್ಕರ ಸು. 1650

ಈತನು ಬೇಹಾರಗಣಿತವನ್ನು ಬರೆದಿದ್ದಾನೆ. ಇವನು ಬ್ರಾಹ್ಮಣ ಕವಿಯೆಂದು ತೋರುತ್ತದೆ. ಇವನ ತಂದೆ ಶ್ರೀವರದೇವ, ತಾಯಿ ಲಕ್ಷ್ಮೀದೇವಿ. ಇವನಿಗೆ ಬಾಳಕಿರಾಜ ಎಂಬ ಹೆಸರೂ ಉಂಟು. "ಸರಸಂ ಸತ್ಕವಿವಲ್ಲಭಂ" ಎಂದು ಹೇಳಿಕೊಂಡಿದ್ದಾನೆ. ಲೆಕ್ಕದಲ್ಲಿ ಪರಿಣತಿಯೂ ಕವಿತಾಶಕ್ತಿಯೂ ತನಗಿರುವುದನ್ನು ತೋರಿಸಲು ಈ ಗ್ರಂಥವನ್ನು ಬರೆದಂತೆ ಹೇಳುತ್ತಾನೆ. ಈತನಿಗೆ ಶಾರದೆಗುವರ, ಗಣಿತವಿಳಾಸ ಎಂಬ ಬಿರುದುಗಳಿದ್ದಂತೆ ತೋರುತ್ತದೆ.

ಉದಾಹರಣಪದ್ಯಗಳಲ್ಲಿ ಒಂದುಕಡೆ ರಂಗಪುರವನ್ನುಹೇಳಿ ಮತ್ತೊಂದುಕಡೆ ಚಾಮರಾಜನು ಶಕ 1559 ರಲ್ಲಿ ಎಂದರೆ 1637ರಲ್ಲಿ ಮೃತನಾದನು ಎಂಬಂಶವನ್ನು ತಿಳಿಸಿ ಏಳೆಂಟುಕಡೆ ಒಬ್ಬ ನರಸಭೂಪನನ್ನು ಹೇಳಿದ್ದಾನೆ. ಈ ರಂಗಪುರವು ಶ್ರೀರಂಗಪಟ್ಟಣವಾಗಿರಬೇಕು; ಈ ಚಾಮರಾಜನು 1637 ರಲ್ಲಿ ಗತಿಸಿದ ರಾಜಒಡೆಯರ ಮಮ್ಮಗನಾದ ಚಾಮರಾಜನೇ ಆಗಿರಬೇಕು; ನರಸಭೂಪನು ಚಾಮರಾಜನ ತರುವಾಯ ಆಳಿದ ಕಂಠೀರವನರಸರಾಜನೇ ಆಗಿರಬೇಕು. ಈ ದೊರೆಯ ಆಳಿಕೆಯಲ್ಲಿ (1638–1659)ಕವಿ ಇದ್ದಂತೆ ತೋರುವುದರಿಂದ ಅವನ ಕಾಲವು ಸುಮಾರು1650 ಆಗಬಹುದು. ಇನ್ನು ಕೆಲವುಕಡೆ ಒಬ್ಬ ದೇವರಾಜನ ಹೆಸರು ದೊರೆಯುತ್ತದೆ. ಇವನಾರೋ ತಿಳಿಯದು.

ಇವನ ಗ್ರಂಥದಲ್ಲಿ ಅಲ್ಲಲ್ಲಿ ಪದ್ಮನಾಭೋಕ್ತಿಯಿಂ, ಅಬ್ಜನ ಮತದಿಂ, ಪದುಮಂ ಪೇಳ್ದಂ; ನಾಗರಾಜೋಕ್ತಿಯಿಂದಂ, ಸೌಂದರನಾಗನಿಷ್ಟದಿಂ, ನಾಗನನುಮತದಿಂ ಎಂದು ಹೇಳಿದೆ. ಪದ್ಮ, ನಾಗ ಎಂಬ ಹೆಸರುಗಳು ಪೂರ್ವಗ್ರಂಥಕಾರರುಗಳಿಗೆ ಅನ್ವಯಿಸಬಹುದೆಂದು ತೋರುತ್ತದೆ.

ಇವನ ಗ್ರಂಥ

## ಬೇಹಾರಗಣಿತ

ಇದು ಪ್ರಾಯಿಕವಾಗಿ ಕಂದದಲ್ಲಿ ಬರೆದಿದೆ; ಅಲ್ಲಲ್ಲಿ ಕೆಲವು ಸಾಂಗತ್ಯಗಳೂ ಷಟ್ಪದಿಗಳೂ ಇವೆ. ಗ್ರಂಥವು 8 ಅಧಿಕಾರಗಳಾಗಿ ಭಾಗಿಸಲ್ಪಟ್ಟಿದೆ; ಸೂತ್ರ, ಟೀಕೆ, ಉದಾಹರಣ ಇವುಗಳನ್ನು ಒಳಕೊಂಡಿದೆ. ಇದರಲ್ಲಿ ಚಕ್ರಬಡ್ಡಿಯ ಸೂತ್ರ, ಪದಪಿನ ಸೂತ್ರ, ಪದಕದ ಸೂತ್ರ, ಮಟ್ಟದ ಸೂತ್ರ, ದೇವಗತಿಸಂಯೋಗದ ಸೂತ್ರ, ಬಿರುದಿನ ಲೆಕ್ಕ, ಅಡುಗೂಲಿ ಸೂತ್ರ, ಟಂಕಸಾಲೆಯಲ್ಲಿ ಕಟ್ಟುವ ಇಚ್ಛಾವರ್ಣಕ್ಕೆ ಸೂತ್ರ ಇವೇ ಮೊದಲಾದ ವಿಷಯಗಳು ಹೇಳಿವೆ. ಗ್ರಂಥಾವತಾರದಲ್ಲಿ ಈಶ್ವರಸ್ತುತಿ ಇದೆ ಈ ಗ್ರಂಥದಿಂದ ಕೆಲವು ಸೂತ್ರಗಳನ್ನು ತೆಗೆದು ಬರೆಯುತ್ತೇವೆ---

ತುರಗ ಹಡಗೇಳರಿಂದ್ಯೈ | ತರೆ ವಾರಿಧಿಯೊಳುಪಚಾರಮೆನಲೆಲ್ಲಗಂ ||
ಸರಿಸರಿಯಂ ಕುಡೆ ತುರಗಂ | ಸರಿಯಾದುವು ಕಡೆಗೆ ಹಡಗಿನಶ್ವವ್ರಜವೇಂ ||

ಇದು ೭ ಹಡಗಿಗೆ ಕುದುರೆ ನಿಂತಮಾರ್ಗ ೬೮೬ ೧೫ ೬೨೯೬ ೫೭ ೬೧೧೩೬ ೨೨೫ ೬೪೪೯೬ ಕಡೆಗೆ ಎಲ್ಲಕ್ಕು ಸರಿಯಾಗಿ ನಿಂತ ಕುದುರೆ ೧೨೮ ೬೧೨೮೬ ೧೨೮೬ ೧೨೮೬ ೧೨೮ ೬೧೨೮೬ ೧೨೮೬ ಇದು ಸರಿ.

ದ್ವಾದಶಜಿನಚೈತ್ಯಾಲಯಂಗಳವುಂನೆ | ದ್ವಾದಶತಾವರೆಗೊಳನು ||
ವೇದಜ್ಞ ಮಿಗೆ ದ್ವಿಗುಣಸಂಖ್ಯೆ ಪೂಜೆಗೆ | ಯಾದುದ ಪೇಳು ಲೆಕ್ಕಿಗನೇ ||
ತಂದ ಪುಷ್ಪ ೪೦೯೫, ಅರ್ಚನೆಯ ಪುಷ್ಪ ೪೦೯೬ ಸರಿ.

ಟೀಕು.

| | | | | | | | | | | | | |
|---|---|---|---|---|---|---|---|---|---|---|---|---|
| ೧ | ೧ | ೧ | ೧ | ೧ | ೧ | ೧ | ೧ | ೧ | ೧ | ೧ | ೧ | ಇವು ಚೈತ್ಯಾಲಯಂಗಳು. |
| ೨ | ೨ | ೨ | ೨ | ೨ | ೨ | ೨ | ೨ | ೨ | ೨ | ೨ | ೨ | ಇವು ಪುಷ್ಪದ್ವಿಗುಣವಾದುದು. |

ಗುಣಿಸುವ ವಿವರ || ಈ ಎರಡುಲೆಕ್ಕ ಸ್ಥಾಪಿಸಿ ಇದ್ದ ರಾಶಿ ೧೨ನೂ ಅಡಲು ಗುಣಿಸೆ ೪೦೯೬. ಇದು ಅರ್ಚನಾಪುಷ್ಪ || ಇನ್ನು ತಂದ ಪುಷ್ಪವ ಅಱುವುದಕ್ಕೆ ಗುಣಿಸುವ ವಿವರ || ಪ್ರಥಮರಾಶಿಯ ಮೇಗಣ ಒಂದನು ಕೆಳಗಣ ಎರಡನೂ ಬಿಟ್ಟು ಬಿಡುವುದು || ಮುಂದಣ ಎರಡನೆಯ ರಾಶಿ ೨ಕ್ಕೆ ಮೇಗಣ ಚೈತ್ಯಾಲಯ ೧ನೂ ಕೂಡಲು ಮೂಱು || ಇದನು ಮೂಱನೆಯ ರಾಶಿಯ ಕೆಳಗಣ ೨ಱಿಂ ಗುಣಿಸೆ ೬|| ಇದಕ್ಕೆ ಮೇಗಣ ಚೈತ್ಯಾಲಯ ೧ ಕೂಡಲು ೭|| ಇನ್ನು ನಾಲ್ಕನೆಯ ರಾಶಿಯ ೨ಱಿಂ ಗುಣಿಸೆ ೧೪|| ಈ ಮೇಲಣ ಚೈತ್ಯಾಲಯ ೧ ಕೂಡಲು ೧೫|| ಇದನು

ಮುಂದಕ್ಕು ಇದೇ ಮೇರೆಗೆ ಗುಣಿಸಲು ೪೦೯೫|| ಇದೀಗ ತಂದ ಪುಷ್ಪ ಸರಿ|| ಈ ಮೇರೆಯಲ್ಲಿ ಎಷ್ಟು ದೇವಸ್ಥಾನಕ್ಕೆ ಹೇಳಿಯುದರೂ ಈ ನ್ಯಾಯದಮೇಲೆ ಗುಣಿಸಿ ಹೇಳುವುದು ||

ಪತಿ ಸತಿಯು ಮುನಿದು ಪೋಗಲ್ | ಸತತಂ ಗಾವುದವ ಸಪ್ತದಿವಸಾಂತರದಿಂ ||

ಪತಿ ಗಾವುದರೆಯನನುದಿನ| ಗತಿ ನಡೆಯಲ್ ಸತಿಯನೆಂದು ಪತಿಯೈದುಗುಮೋ||

ದಿ ೧ಕ್ಕಂ ಸತಿ ನಡೆವ ೧ ಮುಂಚಿತ್ತಾಯಿತು ದಿನ ೭ ದಿನ ೧ಕ್ಕಂ ಪತಿ ನಡೆವ ಗಾವುದ ಇನ್ನು ಎಷ್ಟು ದಿನಕ್ಕೆ ಕೂಡುವನೆಂದೊಡೆ| ಲಬ್ಧಸಂಯೋಗದ ದಿನ ೧೪ ಸಮಗಾವುದ ೨೧ ೬೨೧

||ಟೀಕು|| ದಿ ೭ನೂ ಸಮಗತಿಯ ೧ ಱಿಂ ಗುಣಿಸಲು ೭ ಇದನು ಪ್ರತಿಯ ನಿಟ್ಟು ಗಾವುದಗಳ |೩| ಇದನು ಮುಂದಿರ್ದ ೬೭ನೂ ಸಮಚ್ಛೇದಂಮಾಡಲು ೩/೨ ೧೪/೨ ಈ ೧೪ನೂ ೩ಱಿಂ ಭಾಗಿಸಲು ಸಮಾನಯೋಜನಮುಕ್ಕುಂ|| ಆ ಸಮಾನಯೋಜನ ೨೧ಱೊಳಗೆ ೭ ಕಳೆಯಲು ೧೪ ಸಂಯೋಗದದಿನಮುಕ್ಕುಂ ||

---

## ಶಾಂತವೀರದೇಶಿಕ ಸು. 1650

ಈತನು ಶಿವಲಿಂಗಚಾರಿತ್ರ, ಶಿವಗಣಚಾರಿತ್ರ ಇವುಗಳನ್ನು ಬರೆದಿದ್ದಾನೆ. ಇವನು ವೀರಶೈವಕವಿ; ತನ್ನ ಪರಂಪರೆಯನ್ನು ಹೀಗೆ ಹೇಳಿದ್ದಾನೆ:ಶಿವಲಿಂಗಾರ್ಯ, ಮಗ ವೀರೇಶಾರ್ಯ, ಮಗ ಚೆನ್ನವೀರೇಶ್ವರ, ಮಗ ಕವಿ ಶಾಂತವೀರದೇಶಿಕ. ಪೂರ್ವಕವಿಗಳಲ್ಲಿ ಗುಬ್ಬಿಯಮಲ್ಲಣಾರ್ಯನನ್ನು(1530) ಸ್ಮರಿಸುವುದರಿಂದ ಕವಿ ಅವನ ಕಾಲಕ್ಕೆ ಈಚೆಯವನೆಂಬುದು ವ್ಯಕ್ತವಾಗಿದೆ. ತನ್ನ ತಂದೆ ಚಾಮರಾಜೇಂದ್ರನ ಸಭೆಯಲ್ಲಿ ರಾಮದೀಕ್ಷಿತನನ್ನು ವಾದದಲ್ಲಿ ಜಯಿಸಿದಂತೆ

ಚಾಮರಾಜೇಂದ್ರನ ಸಭೆಯೊಳು ತರ್ಕಿಸುವ | ರಾಮದೀಕ್ಷಿತನ ಭಂಜಿಸಿದ |

ಶ್ರೀಮದ್ವೀರಣಾರಾಧ್ಯತನುಜ ಗುಣ | ಧಾಮ ಚೆನ್ನಾರ್ಯ.

ಎಂಬ ಪದ್ಯದಲ್ಲಿ ಹೇಳುತ್ತಾನೆ. ಈ ದೊರೆ 1617 ರಿಂದ 1637ರ ವರೆಗೆ ಆಳಿದ ಮೈಸೂರು ಚಾಮರಾಜನಾಗಿರಬೇಕು. ಆದುದರಿಂದ ಕವಿಯ ಕಾಲವು ಸುಮಾರು 1650 ಆಗಬಹುದು. ಕವಿ "ಆನಂದಾಗಮವೇದಶಂಕರಪುರಾಣಾರ್ಥಜ್ಞಸತ್ಕೋವಿದಂ, ನಾನಾಕಾವ್ಯವಿಚಾರಪೂರಕವಿತಾಕರ್ಣಾಟಚಕ್ರೇಶ್ವರಂ" ಎಂದು ತನ್ನನ್ನು ವಿಶೇಷಿಸಿ ಹೇಳಿಕೊಂಡಿದ್ದಾನೆ.

ಪೂರ್ವಕವಿಗಳನ್ನು ಈ ಪದ್ಯಗಳಲ್ಲಿ ಸ್ಮರಿಸಿದ್ದಾನೆ—

ರಾಘವ ಹಂಪೆಯುಶ್ರೀಹರಿದೇವಂ । ಶ್ರೀಗುರುಗುಬ್ಬಿಯಮಲ್ಲಮಹೇಶಂ ।
ಬೀಗುವ ಮಲ್ಲಣಮುಖ್ಯಕವೀಂದ್ರರ್ । ಈಗೆನಗೀವುದು ಮಂಗಳಮತಿಯಂ ॥
ಮಲ್ಲಣಾರಾಧ್ಯ ಕೆಱೆಯಪದ್ಮರಸ ಭಾವ । ದಲ್ಲಣ ಸೋಮಾರ್ಯಮುಖ್ಯ ।
ಫುಲ್ಲಶರಾರಿಯ ಸತ್ಕವಿಗಳ ಪಾದ । ಪಲ್ಲವಕಾನು ವಂದಿಪೆನು ॥

ಇವನ ಗ್ರಂಥಗಳಲ್ಲಿ

## 1. ಶಿವಲಿಂಗ ಚಾರಿತ್ರ.

ಇದು ಚಂಪೂಗ್ರಂಥ; ಆಶ್ವಾಸ 3, ಪದ್ಯ 124. ಇದರಲ್ಲಿ ಪಂಡಿತಾರಾಧ್ಯವಂಶೋದ್ಭವನಾದ ಶಿವಲಿಂಗಾರ್ಯನ ಚರಿತ್ರವು ಹೇಳಿದೆ.

ಇವನು ಕವಿಯ ಪ್ರಪಿತಾಮಹನು; ಇವನ ಸ್ಥಳ ಪೆನುಗೊಂಡೆಯದೇಶದ ಅಪ್ಪೆಯಕೆರೆ. ಇವನ ಮಗ ವೀರಣಾರಾಧ್ಯನು ಪದಿನಾಡ ಶಿವಪೂಜೆಯನೃಪನಿಂದಲೂ ಬೆಂಗಳೂರು ಕೆಂಪೆಗೌಡನಿಂದಲೂ ಮರ್ಯಾದೆಯನ್ನು ಹೊಂದಿದನು. ಇವನ ಮಗ ಚೆನ್ನವೀರಾರ್ಯನು ಮೈಸೂರು ರಾಜಮಹೇದ್ರನಿಂದ ಪೂಜಿತನಾಗಿ ಹುಲ್ಲಹಳ್ಳಿಯ ಬಸವರಾಜನ ಮಗನಾದ ವೀರನಿಂದಲೂ ಹುಣಿಸನಹಾಳು ನಂಜರಾಜನಿಂದಲೂ ಸನ್ಮಾನಿತನಾಗಿದ್ದನು; ಕೊಡನಾಲತ್ತೂರಲ್ಲಿ ಒಂದು ಮಠವನ್ನು ಕಟ್ಟಿಸಿದನು.

ಗ್ರಂಥಾವತಾರದಲ್ಲಿ ಶಾಂತವೀರೇಶಸ್ತುತಿ ಇದೆ. ಬಳಿಕ ಕವಿ ಪಾರ್ವತಿ, ವೀರೇಶ, ಗಣೇಶ, ಷಣ್ಮುಖ, ನಂದಿ, ಭೃಂಗಿ, ಬಸವ, ಮಾಚಯ್ಯ, ಕಿನ್ನರಬೊಮ್ಮಯ್ಯ, ಚೆನ್ನಬಸವ ಇವರುಗಳನ್ನು ಸ್ತುತಿಸಿದ್ದಾನೆ. ಆಶ್ವಾಸಾಂತ್ಯದಲ್ಲಿ-ಇತಿ ಶ್ರೀ ಪಂಡಿತಾರಾಧ್ಯವಂಶೋದ್ಭೂತನಪ್ಪ ಶಿವಲಿಂಗಾಚಾರ್ಯಚಾರಿತ್ರದೊಳ್-ಎಂದಿದೆ. ಈ ಗ್ರಂಥದಿಂದ ಒಂದೆರಡು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

### ಹೇಮಾಚಲ

ವಸುಧಾಕಾಮಿನಿ ವಸ್ತುವಂ ಗಟಿಯಿಸಿ ತಂದೀಶಾರ್ಪಣಾರ್ಕ್ಕೆಂದು ಸಂ ।
ತಸದಿಂದೊಟ್ಟಿದ ರಾಸಿಯೋ ಧರೆಗಿದೇ ಸನ್ಮಧ್ಯವೆಂದಬ್ಜಜಂ ॥
ಪೊಸಮಾಣಿಕ್ಯದ ಕಂಭಮಂ ನಿಲಸಿದೋಲ್ ಹೇಮಾಚಲಂ ಕಣ್ಗೆ ಬೆ ।
ಳ್ಕಸಪುಟ್ಟಿಲ್ಕೊಲವಾಂತುಪೊಪ್ಪಿಪುದದಂ ಸಂಕೀರ್ತಿಸಲ್ ಶಕ್ಯಮೇ ॥

ದೇಶವರ್ಣನೆ

ದೇವನಿಕೇತನ ಹೂವಿನ ತೋಟಂ | ತಾವರೆ ತೀವಿದ ಪೂರ್ಣತಟಾಕಂ |
ಆವೆಡೆ ನೋಡಲ್ ಭಕ್ತರ ಕೂಟಂ | ಪಾವನವೆತ್ತಿಹುದಾ ಜಗನಾಟಂ ||

ಕಾಡು

ಧರೆವೆಣ್ಣ ಬಿಸಿಲುಬೇಗೆಯ | ಪರಿಹರಿಪೆನೆನುತ್ತೆ ಕರದೊಳಾಂತಿಹ ಕೊಡೆವೋಲ್ |
ಹರಿಗಿಂಬುಗೊಡೆಪ ನಾನಾ | ತರುಗಳ್ ಕಿಷ್ಕಿಂಧವಾಗಿ ರಾರಾಜಿಸುಗುಂ ||

2. ಶಿವಗಣಚಾರಿತ್ರ.

ಇದು ಸಾಂಗತ್ಯದಲ್ಲಿ ಬರೆದಿದೆ; ಸಂಧಿ 42, ಪದ್ಯ 2740. ಇದರಲ್ಲಿ ಶಿವಗಣಗಳ ಮಹಿಮೆ ವರ್ಣಿತವಾಗಿದೆ. ಈ ಗ್ರಂಥದ ಉತ್ಕೃಷ್ಟತೆಯನ್ನು ಕವಿ ಈ ಪದ್ಯದಲ್ಲಿ ಹೇಳಿದ್ದಾನೆ—

ಕನ್ನಡಿಯಂತೆ ಕಲ್ಪದ್ರುಮದಂತೆ ಬಾ | ವನ್ನದ ಪರಿಮಳದಂತೆ |
ಚೆನ್ನಾದುದೀಕಾವ್ಯವೆಂದು ರಸಿಕರಭಿ | ವರ್ಣಿಸುವರು ತವತಮಗೆ ||

ಗ್ರಂಥಾವತಾರದಲ್ಲಿ ಶಾಂತವೀರೇಶ್ವರಸ್ತುತಿ ಇದೆ. ಬಳಿಕ ಕವಿ ತೋಂಟದ ಸಿದ್ಧಲಿಂಗ, ಹೋಳಿನಹಂಪೆಯಾರ್ಯ, ಕಟ್ಟಿಗೆಯ ಸಂಗಯ್ಯ, ಕೊಟ್ಟೂರು ಬಸವೇಶ, ಚಾಮರಾಜನ ಸಭೆಯಲ್ಲಿ ರಾಮದೀಕ್ಷಿತನನ್ನು ವಾದದಲ್ಲಿ ಸೋಲಿಸಿದ ತನ್ನ ತಂದೆ ಚೆನ್ನಾರ್ಯ ಇವರುಗಳನ್ನು ಹೊಗಳಿದ್ದಾನೆ.

---

ದೇವರಾಚಾರ್ಯ. ಸು. 1650

ಈತನು ಚಿಕ್ಕುಪಾಧ್ಯಾಯನ (1672) ದೊಡ್ಡಪ್ಪನು. ಇವನನ್ನು ಚಿಕ್ಕುಪಾಧ್ಯಾಯನು ತನ್ನ ಶ್ರೀರಂಗಮಾಹಾತ್ಮ್ಯದ ಆದಿಭಾಗದಲ್ಲಿ ಕವಿ ಎಂದೂ ಕರ್ಣಾಟಭಾಷಾಚತುರಂ ಎಂದೂ ವಿಶೇಷಿಸಿ ಹೇಳಿದ್ದಾನೆ. ಇವನು ಆವ ಗ್ರಂಥಗಳನ್ನು ಬರೆದಿದ್ದಾನೆಯೋ ತಿಳಿಯದು.

---

ಸಿದ್ಧನಂಜೇಶ. ಸು. 1650

ಈತನು ರಾಘವಾಂಕಚಾರಿತ್ರ, ಗುರುರಾಜಚಾರಿತ್ರ ಇವುಗಳನ್ನು ಬರೆದಿದ್ದಾನೆ. ಅಲ್ಲದೆ ತೋಂಟದ ಸಿದ್ಧದೇಶಿಕನ ಭಾವರತ್ನಾಭರಣ, ಬಸವ

ಶತಕ ಎಂಬ ಗ್ರಂಥಗಳನ್ನೂ ಬರೆದಿರುವಂತೆ ಗುರುರಾಜಚಾರಿತ್ರದಲ್ಲಿಯ

ಭೂವಿನುತಕವಿರಾಘವಾಂಕಚಾರಿತ್ರಮುಂ|ಪಾವನಾತ್ಮಕತೋಂಟದಾಸಿದ್ಧದೇಶಿಕನ|
ಭಾವರತ್ನಾಭರಣಮಂ ಬಸವಶತಕಗಳ ವಸ್ತುಕದಿ ವರ್ಣಕದೊಳು ||
ಭಾವಜ್ಞಾಸತ್ಕೃವಿಗಳಹುದೆನಲು ಪೇಳ್ದು ಬಳಿ |
ಕೀವಿಮಲಗುರುರಾಜಚಾರಿತ್ರವನ್ನೊರೆದ |
ನಾವೀರವಸಾಹೇಶ್ವರರ ಬಗೆಗೆ ಬರ್ಪಂತೆ ನಂಜೇಶನೇಂ ಧನ್ಯನೋ ||

ಎಂಬ ಪದ್ಯದಿಂದ ತಿಳಿಯುತ್ತದೆ. ಆದರೆ ಈ ಗ್ರಂಥಗಳು ನಮಗೆ ದೊರೆತಿಲ್ಲ. ಇವನು ವೀರಶೈವಕವಿ. ತನ್ನ ಗುರುಪರಂಪರೆಯನ್ನು ಹೀಗೆ ಹೇಳಿದ್ದಾನೆ:-

ನೀಲಗುಂದದ ಸಿಂಹಾಸನಾಧೀಶ ಪಂಚವಣ್ಣಿಗೆಯ ಅನ್ನದಾನೇಶ್ವರ; ಅವನ ಶಿಷ್ಯ ಕುರುವತ್ತಿಪುರದ ಸಿಂಹಾಸನಾಧೀಶನಂಜೇಶ; ಅವನ ಶಿಷ್ಯ ಹೂಲಿಪೂವಲ್ಲಿಯಪುರದ ಸಿಂಹಾಸನಾಧೀಶ ಸಿದ್ಧನಂಜೇಶ್ವರ; ಅವನ ಶಿಷ್ಯ ನವನಂದಿಮಂಡಲದ ನಂದ್ಯಾಲಪುರದ ಸಿಂಹಾಸನಾಧೀಶ ಕವಿ ಸಿದ್ಧನಂಜೇಶ. ಈತನಿಗೆ ಚಿಕ್ಕನಂಜೇಶ ಎಂಬ ಹೆಸರೂ ಇದ್ದಂತೆ ತೋರುತ್ತದೆ ತನ್ನ ಗುರುವಾದ ಸಿದ್ಧನಂಜೇಶ್ವರನನ್ನು "ಆಚಾರ್ಯರೇವಣಾಸಿದ್ಧೇಶ ಮರುಳುಸಿದ್ಧಾಚಾರ್ಯ ರಾಮಿದೇವಾಚಾರ್ಯ ಗುರುಪಂಡಿತಾಚಾರ್ಯ ಚೌಕಮಧ್ಯದಿ ನಿಂದ ಪಂಚವಣ್ಣಿಗೆಸಿದ್ಧನಂಜೇಶ್ವರ" ಎಂದು ಚತುರಾಚಾರ್ಯರಿಗೆ ಸಮಾನನೆಂಬ ಭಾವದಿಂದ ಸ್ತುತಿಸಿದ್ದಾನೆ. ಆತನಿಗೆ ಮುತ್ತಿನಕಂತೆಯ ಗುರುಸಿದ್ಧನಂಜೇಶ ಎಂಬ ಹೆಸರೂ ಇದ್ದಂತೆ ತಿಳಿಯುತ್ತದೆ. ಅವನಿಗೆ ಅನೇಕಜನ ಶಿಷ್ಯರು ಇದ್ದರೆಂದೂ[1] ಅವನನ್ನು "ಭೂಪತಿಪ್ರಜಯವಡಿಗೆಳಗಿಕ ಪ್ಪವ ತೆತ್ತು ಓಲೈಸಿದುದು'' ಎಂದೂ ಕವಿ ಹೇಳುತ್ತಾನೆ

ಗುರುರಾಜಚಾರಿತ್ರದಲ್ಲಿ ಬಸವಪೌರಾಣದ ಪುಲ್ಲಣಾರ್ಯನಿಂದ ರಚಿತವಾದ ವೀರಶೈವಾಮೃತಪುರಾಣದಿಂದ (1530) ಕೆಲವು ವಿಷಯಗಳನ್ನು

---

1. ಸಿದ್ಧಭದ್ರೇಶ, ನಂಜಯ್ಯ, ಚೆನ್ನವೀರಯ್ಯ, ವಿಜಯಪುರದ ನಂಜಯ್ಯ, ಪಾಲುಬೋಳಸಿದ್ಧರಾಮಯ್ಯ, ಭೂಪನೆಣ್ಬೆಯ ಮಠದ ಮುತ್ತಿನಕಂತೆಯಯ್ಯ, ಬೀಳಲಿಗೆಸಿದ್ಧರಾಮಯ್ಯ, ಗುರುನಂಜಯ್ಯ, ರಾಯಬಾಗಿಯ ನಂಜಯ್ಯ, ಸೇಡುಬಳದ ನಂಜಯ್ಯ, ಬಾಡದ ನಂಜಯ್ಯ, ಗಸ್ತಿದ ರಾಚವಟ್ಟಿಯಯ್ಯ, ಗುಮ್ಮಗೊಳದ ನಂಜಯ್ಯ, ಅನ್ನದಾನಯ್ಯ, ಕಲ್ಲೂರಸುಲಭಕಲ್ಲಯ್ಯ, ಗುಂಡಿಹಳ್ಳಿಯ ಚೆನ್ನಮಲ್ಲಿಕಾರ್ಜುನದೇವ, ಮುತ್ತಿನಕಂತೆರಾಚವಟ್ಟಿದೇವ, ಜೈನಾಪುರದ ನಂಜಯ್ಯ, ಪುರಾಣದರಾಚವಟ್ಟಿಯದೇವ, ಪಂಚವಣ್ಣಿಗೆವಿರೂಪಾಕ್ಷಯ್ಯ, ಮುತ್ತಿನಕಂತೆಸಿದ್ಧಮಲ್ಲಯ್ಯ, ಗಿಡ್ಡಮುತ್ತಿನಕಂತೆಯಯ್ಯ, ಸೊನ್ನಲಾಪುರದ ಅನ್ನದಾನಯ್ಯ. ಇವರೆಲ್ಲಾ ಕವಿಯ ಸಮಕಾಲದವರಾಗಿರಬೇಕು.

ಕವಿ ಸಂಗ್ರಹಿಸಿದಂತೆ ಹೇಳುವುದರಿಂದ ಇವನು 1530ರಿಂದ ಈಚೆಯವನು ಎಂಬುದು ಸ್ಪಷ್ಟವಾಗಿದೆ. ಸುಮಾರು 1600 ರಲ್ಲಿದ್ದ ಸಂಪಾದನೆಯ ಸಿದ್ಧವೀರಾಚಾರ್ಯನ ಹೆಸರನ್ನು ರಾಘವಾಂಕಚಾರಿತ್ರದ ಅಂತ್ಯಭಾಗದಲ್ಲಿ ಹೇಳಿರುವುದರಿಂದ ಅವನ ಕಾಲಕ್ಕೂ ಈಚೆಯವನಾಗಿರಬೇಕು; ಸುಮಾರು 1650 ರಲ್ಲಿ ಇದ್ದಿರಬಹುದು.

ಪೂರ್ವಕವಿಗಳಲ್ಲಿ ಹರಿದೇವ, ಕೆರೆಯ ಪದ್ಮರಸ, ರಾಘವಾಂಕ, ಪಾಲ್ಕುರಿಕೆಸೋಮೇಶ್ವರ, ಭೀಮಕವಿ, ಲಕ್ಕಣ್ಣದಂಡೇಶ, ಜಕ್ಕಣಾಚಾರ್ಯ ಚಾಮರಸ, ಮಗ್ಗೆಯಾಚಾರ್ಯ, ಕಲ್ಲಮಠದಾಚಾರ್ಯ, ಸಿಂಗಿರಾಜ, ಬಸವಪೌರಾಣದ ಮಲ್ಲಣಾರ್ಯ (1530) ಇವರುಗಳನ್ನು ಸ್ಮರಿಸಿದ್ದಾನೆ. ಅಲ್ಲದೆ ಪದ್ಧತಿಯ ಪ್ರಕಾರ ಬಾಣ, ಕಾಳಿದಾಸ, ಮಳಯರಾಜ, ಮಲುಹಣ, ಹಲಾಯುಧ, ಗುಜ್ಜರ, ಭೋಜ, ದಂಡಿ, ಮಯೂರ ಇವರುಗಳನೂ, ಸ್ತುತಿಸಿದ್ದಾನೆ.

ಇವನ ಗ್ರಂಥಗಳಲ್ಲಿ

1 ರಾಘವಾಂಕಚಾರಿತ್ರ

ಇದು ವಾರ್ಧಕಷಟ್ಪದಿಯಲ್ಲಿ ಬರೆದಿದೆ; ಸಂಧಿ 19, ಪದ್ಯ 1521. ಇದರಲ್ಲಿ ರಾಘವಾಂಕಕವಿಯ (ಸು. 1165) ಚರಿತ್ರವು[1] ಹೇಳಿದೆ. ಈ ಗ್ರಂಥರಚನೆಗೆ, "ಸುಶಾಂತಬಂಧುರ ಸಂಸ್ಕೃತಪ್ರಾಕೃತೋಭಯಕವಿತ್ವಾಯಿಲರ ಶಿರೋಮಣಿಯೆನಿಪ ನಂದೀಶಕವಿಯ ಕೃಪೆಯಿಂ ಪ್ರಕಟಮಂ ಮಾಡಿದೆಂ', "ಕರ್ಣಾಟಕಕವಿತ್ವಕೋವಿದ ಪಂಚವಣ್ಣಿಗೆಯಸಿದ್ಧನಂಜೇಶಾಂಘ್ರಿಕಮಲಮಧುಪ ರಾಚವಟ್ಟಯಾರಾಧ್ಯನ ಕೃಪೆಯಿಂ ಗ್ರಂಥ ಪೂರ್ಣವಾಯಿತು'' ಎಂಬ ಪದ್ಯಭಾಗಗಳಿಂದ ನಂದೀಶಕವಿಯೂ ರಾಚವಟ್ಟಯಾರಾಧ್ಯನೂ ಸಹಾಯಕರಾಗಿದ್ದಂತೆ ತಿಳಿಯುತ್ತದೆ. ಈ ಕಾವ್ಯದ ಉತ್ಕೃಷ್ಟತೆಯನ್ನು ಕವಿ ಹೀಗೆ ಹೇಳಿದ್ದಾನೆ—

ಇದುವೆ ರಸಿಕರ ರಸಾಯನ ಕಬ್ಬಿಗರ ಕಬ್ಬ |
ಇದು ಪ್ರೇಮದಿಂ ಕೇಳ್ವ ಜನದ ಕರ್ಣಾಭರಣ |
ಇದುವೆ ಸೊಬಗರ ಸೊಬಗು ಕೋವಿದರ ಕೊರಲ ಹಾರಂ ಗಮಕಿಗಳ ಗಮಕವು||

---

1 Vol. I, 180.

ಇಸುವೆ ಭಾವದ ಪಕ್ಕೆಯಿದುವೆ ನವರಸದಿಕ್ಕೆ |
ಯಿದು ಸದಾಚಾರಸುಖಸದನ ಮೋಹನದ ಧನ |
ವಿದನೋದಿ ಕೇಳಿ ಲಾಲಿಸದರಾರ್ ಧರೆಯೊಳಗೆ ದಿವ್ಯಕಾವ್ಯಾಮೃತವನು ||

ಗ್ರಂಥಾವತಾರದಲ್ಲಿ ನಂಜೇಶ್ವರಸ್ತುತಿ ಇದೆ. ಬಳಿಕ ಕವಿ ಭೃಂಗಿ ವೀರಭದ್ರರನ್ನು ಸ್ತುತಿಸಿ ಅನಂತರ ಬಸವನೇ ಮೊದಲಾದ ಪುರಾತನರನ್ನೂ[1] ಕರತಳದ ನಾಗಿದೇವನೇ ಮೊದಲಾದ ವಿರಕ್ತರನ್ನೂ[2] ಹೊಗಳಿದ್ದಾನೆ. ಕೊನೆಯ ಸಂಧಿಯಲ್ಲಿಯೂ ಕೆಲವರು ವೀರಶೈವಗುರುಗಳನ್ನೂ ಕವಿಗಳನ್ನೂ ಸ್ತುತಿಸಿದ್ದಾನೆ. ಇವರೆಲ್ಲಾ ಪ್ರಾಯಿಕವಾಗಿ ಕವಿಯ ಕಾಲಕ್ಕೆ ಹಿಂದೆ ಇದ್ದವರು ಎಂದು ತಿಳಿಯುತ್ತದೆ. ಈ ಹೆಸರುಗಳಲ್ಲಿ ಕೆಲವನ್ನು ಇಲ್ಲಿ ಬರೆಯುತ್ತೇವೆ:—

ಜಿಗುನಿ ಮರುಳಾರ್ಯ; "ಬಸವಾದಿಗಳ ವಚನಮಂ ಜಂಗಮಕೆ ಮುದದಿಯಾಖ್ಯಾನಮಂ ಪೇಳ್ದ" ಗುಮ್ಮಳಾಪುರದ ಸಿದ್ಧಲಿಂಗಾಚಾರ್ಯ; "ಕಲಿಯುಗದೆರಡನೆಯ ಈಶ್ವರನೆನಿಸಿ ಮೆಱೆದ" ಕೊಟ್ಟೂರು ಬಸವಗುರು; ಚರಚಕ್ರವರ್ತಿ ಜಡೆಯ ಶಿವಲಿಂಗದೇವಾರ್ಯ; "ಶಿವತತ್ವಗಳ ಲೇಖ್ಯಮಂ ಮಾಳ್ಪ" ಲೇಖ್ಯದ ಕರಿಯ ಸಿದ್ಧಬಸವೇಶ; "ಬಸವಾರಾಧ್ಯನೆರಡನೆಯಮೂರ್ತಿ ಫಲಾಹಾರಸಿಯಮವಾಂತುರು ಮಹಿಮನೊಪ್ಪತ್ತೀಶನಹ" ಚೆನ್ನಬಸವೇಶ; "ವೀರಮಾಹೇಶ್ವರಾವಳಿಗೆ ಗುರುಬಸವ ಮುಖ್ಯ ಪುರಾತನರೊರೆದ ವಚನಗಳ ಬೋಧಿಸುವ" ಗೂಳೂರು ಸಿದ್ಧವೀರೇಶ್ವರ; "ತೋಂಟದಾರ್ಯರ ಕೃಪೆಯ ಪಡೆದು ಮೆಱೆದ" ಸಪ್ಪೆಯರಾಮಯತಿಪ; ಶಿವಶಂಕರೇಶ; ಆಚಾರ್ಯವರದಹರತಾಳನಂಜೇಶ; ವಿಮಲಾಚಾರ್ಯ; ಸಂಪಾದನೆಯ ಸಿದ್ಧವಿರೇಶ್ವರಾಚಾರ್ಯ; ಮಲ್ಲಿಕಾರ್ಜುನದೇವ; ಸಿಂಗಳದ ಸಿದ್ಧಬಸವ; ಚೆನ್ನವೀರೇಶ; ನಂದೀಶ್ವರ; ಓದುವ ಅನ್ನದಾನೀಶ್ವರ; ಪರಮಾನಂದದೇವ; ನಂದೀಶಕವಿ; ರಾಜಪ್ರಿಯಾರಾಧ್ಯ.

---

1. ಬಸವ, ಸಿದ್ಧರಾಮ, ಪಂಡಿತಾರಾಧ್ಯ, ರೇವಣ, ರಾಮಿದೇವ, ಮರುಳುಸಿದ್ಧ, ಮಹಾದೇವಿಯಕ್ಕ, ಮಡಿವಳ, ಕಿನ್ನರ, ಪಡಿಹಾರಿ, ಮುದ್ದಯ್ಯ, ಘಟ್ಟಿವಾಳ, ಮೋಳಿಗಯ್ಯ, ಸಿದ್ಧ, ಬುದ್ಧ, ಸೊಡ್ಡಳ, ನೀಲಲೋಚನೆ. 2. ಕರತಳದನಾಗಿದೇವ, ವೀರಣಾಚಾರ್ಯ, ಮಹಾನಿರ್ವಾಣಿ ಬೋಳೇಶ, ಬತ್ತಲೇಶ್ವರ, ಮಕ್ಕಳಾಟಿಕ, ಹೇಟಿಕ, ಮಿಡಿವಿಲ್ಲ, ಶುದ್ಧಪ್ರಸಾದಿಮಹಾದೇವಯ್ಯ, ಶಿವಮಂತ್ರವಾಣಿಪೂವಡಿಗ.

ಇವನ ಬಂಧವು ಧಾರಾಳವಾಗಿದೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ.—

ರಾಘವಾಂಕನ ಸ್ತುತಿ

ಸುರಸಭಾವನಯುತಂ ಕವಿತೆಯೊಳು ಹೃದಯದೊಳು |
ಸುರಸಭಾವನಯುತಂ ಮನನದೊಳು ಯಕ್ಷ್ಮತನು ||
ಸುರಸಭಾವನಯುತಂ ತಾನಲ್ಲದಿಲ್ಲೆನುತೆ ಸತ್ಪಂಡಿತರು ತುತಿಸಲು ||
ಹರಿಹರಮಹೋದಯಂ ಶುಶ್ರೂಷೆಗೆಯ್ವ ನರ |
ಹರಿಹರಮಹೋದಯಂ ಕಾಕತಿಪಸಭೆಯಲ್ಲಿ |
ಹರಿಹರಮಹೋದಯಂ ಶರಣಾಗತಗ್ಗೆನಿಸಿ ಮೆಱೆದನಾರಾಘವಾಂಕಂ ||

ಚಂದ್ರೋದಯ

ಕಂದುಗೊರಲಂ ತನ್ನ ಚೆಲುವ ನಿಟ್ಟಿಸುವಡೆ ಪು |
ರಂದರಂ ಪಿಡಿದ ಮಾಣಿಕಗನ್ನಡಿಯೊ ಪ್ರಾಚಿ |
ಯೆಂದೆಂಬ ಪೆಣ್ಣ ಬೈತಲೆವಣಿಯೊ ಸುರಗಜದ ತಲೆಗೆ ಪೂಸಲು ಕಲಸಿದ ||
ಸಿಂದೂರಪಿಂಡವೋ ಚಕ್ರಯುಗವಿರಹಾಗ್ನಿ |
ಯೊಂದುರುಳಿಯೋ ಸ್ಮರನ ಕೆಂಬರಲ ಚೆಂಡೊ ತಾ ||
ನೆಂದೆಂಬಭಿಪ್ರಾಯಮಂ ಬೀಱಿದುದು ಚಂದ್ರಬಿಂಬವುದಯಾಚಲದೊಳು ||

ಸೂರ್ಯೋದಯ

ಪಾಱಿತ್ತು ಭ್ರಮರ ಶತಪತ್ರದಿಂ ವಿರಹಾಗ್ನಿ |
ಯಾಱಿತ್ತು ಚಕ್ರಕ್ಕೆ ಜೊನ್ನವಕ್ಕಿಗೆ ದುಗುಡ |
ಹೇಱಿತ್ತು ಚಂದ್ರಕಳೆ ಜಾಱಿತ್ತು ಕುಮುದಕಱಿಲ್ತೋಱಿತ್ತು ತಮಕೆ ಕೇಡು ||
ಸಾರಿತ್ತುವುಡುಕಾಂತಿ ತಾಱಿತ್ತು ಕಮಲದೊಲ |
ವಿಱಿತ್ತು ಮುಂಗೋಳಿ ಚೀಱಿತ್ತುವೆಲರ್ ತಂಪ |
ಬೀಱಿತ್ತು ಮೂಡಕೆಂಪೇಱಿತ್ತು ರವಿಯುದಿಸಲುಜ್ಜುಗಂಗೆಯ್ವಾಗಲು ||

ಏಳುಬಗೆಯ ಷಟ್ಪದಿ (ಒಂದೇ ಅನುಪೂರ್ವಿಯಲ್ಲಿ ಬರೆದಿದೆ)

ವಾರ್ಧಕ

ಶರವಣಜಜನಕಗೆರಸುರುಚಿರಗರಧರಪುರ |
ಹರಹರವರದಕರರುಚಿರುಚುರುಚಿಗನುರಣರು |

ಗರಿಮರುತರತರಮಣಡಮರುಗಲಲಿತಭಸಿತ ವಿಷದನಿಜಲಸದಪಘನ ||
ಶರಣಜನದಿವಿಜತರುನರಕರಿವರಹರಹರ |
ಣರುಡುರುತರಶರಭರಣರಿಪುರುಧಿರವಿರತ |
ಪರಿರಸಪರಿಕರಕರಣದುರಿತಚಯಹರಸುಖಿಜಯಜಯಮಹಿಮಶರನಿಧಿ || 1 ||

ಶರ

ಶರವಣಜಜನಕ | ಗರಸುರುಚಿರಗರ |
ಧರಪುರಹರಹರವರದಕರ ||
ಶರಣಜನದಿವಿಜ | ತರುನರಕರಿವರ |
ಹರಹರಣರುಡುರುತರಶರಭ || 2 ||

ಕುಸುಮ

ಶರವಣಜಜನಕಗರ | ಸುರುಚಿರಗರಧರಪುರ |
ಹರಹರವರದಕರರುಷಿರುಜುರುಚಿಗ ||
ಶರಣಜನದಿವಿಜತರು | ನರಕರಿವರಹರಹರ |
ಣರುಡುರುತರಶರಭರಣರಿಪುರುಧಿರ || 3 ||

ಭೋಗ

ಶರವಣಜಜನಕಗರಸುರು | ಚಿರಗರಧರಪುರಹರಹರ |
ವರದಕರರುಷಿರುಜುರುಚಿಗಮರಣರುಗರಿಮ ||
ಶರಣಜನದಿವಿಜತರುನರ | ಕರಿವರಹರಹರಣರುಡುರು |
ತರಶರಭರಣರಿಪುರುಧಿರವಿರತಪರಿರಸ || 4 ||

ಭಾಮಿನಿ.

ಶರವಣಜಜನಕಗರಸುರುಚಿರ | ಗರಧರಪುರಹರಹರವರದಕ |
ರರುಷಿರುಜುರುಚಿಗಮರಣರುಗರಿಮರುತರತರಮಣ ||
ಶರಣಜನದಿವಿಜತರುನರಕರಿ | ವರಹರಹರಣರುಡುರುತರಶರ |
ಭರಣರಿಪುರುಧಿರವಿರತಪರಿರಸಪರಿಕರಕರಣ || 5 ||

ಪರಿವರ್ಧಿನಿ.

ಶರವಣಜಜನಕಗರಸುರುಚಿರಗರ | ಧರಪುರಹರಹರವರದಕರರುಷಿರು |
ಜುರುಚಿಗಮರಣರುಗರಿಮರುತರತರಮಣಡಮರುಗಲಲಿತ ||

---

1. ಈ ಪಾದದಲ್ಲಿ ಒಂದು ಮಾತ್ರೆ ಕಡಮೆಯಾಗಿದೆ.

ಶರಣಜನದಿವಿಜತರುಪರಕರಿವರ | ಹರಹರಣರುಡುರುತರಶರಭರಣಾರಿ !
ಪುರುಧಿಳವಿರತಪರಿಳಸಪರಿಕರಕರಣದುರಿತಜಯಹರ ‖ 6 ‖

## ಉದ್ದಂಡ.

1ನೆಯ ಪದ್ಯದಂತೆಯೇ ಇದೆ.

## 2 ಗುರುರಾಜಚಾರಿತ್ರ.

ಇದೂ ವಾರ್ಧಕಷಟ್ಪದಿಯಲ್ಲಿ ಬರೆದಿದೆ; ಸಂಧಿ 16, ಪದ್ಯ 1277. ಇದರಲ್ಲಿ ಪ್ರತಿಪಾದಿತವಾದ ವಿಷಯಗಳು ಈ ಪದ್ಯದಲ್ಲಿ ಹೇಳಿವೆ—

ಬರೆವೆನಾಚಾರ್ಯರುದ್ಭವವನಾಪರಮಪ|ದ್ಗುರುವಂಶಮಂ ಶಿವನ ಪಂಚವಿಂಶತಿಲೀಲೆ |
ಹರಪೂಜೆಯಂ ಪಂಡಿತಾರಾಧ್ಯರೊರೆದ ಗಣಸಾಹಸ್ರನಾಮಂಗಳಂ ||
ಧರೆಯಲ್ಲಿ ಮತ್ತೆ ಶಿವಕೃಪೆವಡೆದ ನೂತನರ | ಹರಪುರಾತನರ ಕಥೆಗಳ ಸಿದ್ಧನಂಜೇಶ |
ಗುರುನಿರೂಪದೊಳೊಲಿದು ಗುರುರಾಜಚಾರಿತ್ರನೆಂಬ ಬಾಧತ ಬಗೆ ಬಯಸಲು ||

ಈ ವಿಷಯಗಳನ್ನು ತನ್ನ ಗುರುವಾದ ಪಂಚವಣ್ಣಿಗೆಯಸಿದ್ಧನಂಜೇಶನು ಅವನ ಹೆಂಡತಿ ಚೆನ್ನವೀರಾಂಬೆಗೆ ಹೇಳಿದಂತೆಯೂ, ಅವುಗಳನ್ನೇ ತಾನು ವಿಸ್ತರಿಸಿ ಅವನ ಆಜ್ಞಾನುಸಾರವಾಗಿ ಬರೆದಂತೆಯೂ ಕವಿ ಹೇಳುತ್ತಾನೆ. ಗ್ರಂಥಾವತಾರದಲ್ಲಿ ಸಿದ್ಧನಂಜೇಶ,ಬಸವ ಇವರುಗಳ ಸ್ತುತಿಇದೆ. ಸಂಧಿಗಳ ಅಂತ್ಯದಲ್ಲಿ ಈ ಪದ್ಯವಿದೆ—

ಧಾತ್ರಿಗುತ್ತಮವೆನಿಪ ಪೂವಲ್ಲಿಪುರಕಧಿಪ | ಚಿತ್ರಗುರುಪಂಚವಣ್ಣಿಗೆಸಿದ್ಧನಂಜೇಶ |
ಪುತ್ರ ಸತ್ಕವಿಕುಲಸ್ತೋತ್ರ ಶ್ರೀಶೈಲನೈರುತ್ಯಭಾಗದೊಳೊಪ್ಪುವ ||
ಕ್ಷೇತ್ರನವನಂದಿಮಂಡಲದಸಿಂಹಾಸನಕೆ | ಛತ್ರ ಶಿವಕವಿಸಿದ್ಧನಂಜೇಶಕೃತದಿವ್ಯ |
ಸ್ತೋತ್ರ ಗುರುರಾಜಚಾರಿತ್ರದೊಳು.

ಈ ಗ್ರಂಥವು ಅನೇಕವೀರಶೈವಗುರುಗಳ ಮತ್ತು ಕವಿಗಳ ಚರಿತ್ರವನ್ನು ಒಳಕೊಂಡಿರುವುದರಿಂದ ನಮಗೆ ಬಹಳಮಟ್ಟಿಗೆ ಸಹಕಾರಿಯಾಯಿತು. ಇದರಿಂದ ಅನೇಕ ಸ್ಥಳಗಳಲ್ಲಿ ಅನುವಾದಮಾಡಿ ಕವಿಚರಿತೆಯಲ್ಲಿ ಸೇರಿಸಿದ್ದೇವೆ. ಕೆಲವು ಕವಿಗಳ ಕಾಲವನ್ನು ನಿರ್ಣಯಿಸುವುದಕ್ಕೂ ಈ ಗ್ರಂಥವು ಪ್ರಯೋಜನಕಾರಿಯಾಯಿತು. ಇದರಲ್ಲಿ ಅನೇಕಪುರಾ

ತನರ[1] ಮತ್ತು ನೂತನರ[2] ಹೆಸರುಗಳು ಹೇಳಿವೆ. ವೀರಶೈವಪಂಚಾಚಾರ್ಯರಲ್ಲಿ ಕೊನೆಯವನಾದ ವಿಶ್ವೇಶ್ವರಾಚಾರ್ಯನ ಶಿಷ್ಯಪರಂಪರೆಯನ್ನೂ ಅದಕ್ಕೆ ಸಂಬಂಧಪಟ್ಟ ಕೆಲವು ವಿಶೇಷ ಸಂಗತಿಗಳನ್ನೂ ಕವಿ ಈರೀತಿಯಾಗಿ ಹೇಳಿದ್ದಾನೆ:—

ಈಶ್ವರನೇ ಕಳಶವಾಚಾರ್ಯವಿಶ್ವೇಶ್ವರನಾಗಿ ಧರೆಯಂ ಪಾಲಿಸಿದನು. ಅವನ ಶಿಷ್ಯ ಸದಾಶಿವಾಚಾರ್ಯ; ಇವನಿಗೆ ಪಂಚವಣ್ಣಿಗೆಸ್ವಾಮಿ ಎಂಬ ಹೆಸರೂ ಉಂಟು. ಇವನ ಶಿಷ್ಯ ಬಯಲಪಂಚವಣ್ಣಿಗೆಯಾರ್ಯ. ಇವನ ಶಿಷ್ಯ ಸತ್ಯಶಿವಯೋಗಿ; ಈತನಿಗೆ "ಘೋರತರವಿಷವ ತಂದೀಯೆಯುಂಬುದನುಂಡು ತೇಗೆ" ಸಿದ್ಧನಂಜ ಎಂಬ ಹೆಸರು ಬಂದಿತು. ಇವನ ಶಿಷ್ಯ ಸಿದ್ಧಮಲ್ಲೇಶ; ಈತನು ಗಜಪತಿಮಹೇಂದ್ರರಾಜನಿಗೆ ಶೈವೋಪದೇಶವನಿತ್ತು ಶಿಷ್ಯನನ್ನು ಮಾಡಿಕೊಂಡನು, ಗೋಕೇಶ್ವರದಲ್ಲಿ ನೆಲಸಿ ಸಿಂಹಾಸನಾಧೀಶನೆನಿಸಿದನು ಪೊಡವಿಡಿಯುಪುರದಲ್ಲಿ ಆಳುತ್ತಿದ್ದ ಹರಿರಾಯನೆಂಬ ವೈಷ್ಣವ ನರಪತಿ ಮಹೇಂದ್ರರಾಜನ ಮಗಳನ್ನು ಮದುವೆಯಾದನು. ಮಹೇಂದ್ರರಾಜನು ಮಗಳನ್ನು ಹರಿರಾಯನಲ್ಲಿ ಬಿಡುವುದಕ್ಕೆ ಬಂದಾಗ ತನ್ನ ಗುರು ಸಿದ್ಧಮಲ್ಲೇಶನನ್ನು

1. 382 ನೆಯ ಪುಟದಲ್ಲಿ ಇಲ್ಲದ ಹೆಸರುಗಳು—ಶ್ರೀಪತಿಪಂಡಿತ, ಮಾದಿರಾಜ, ಧೂರ್ಜಟಿಕೇಶಿ, ಚೆನ್ನಬಸವ, ಕೇಶಿರಾಜ, ವೀರನಾಚಯ್ಯ, ಉದ್ಭಟಯ್ಯ, ಚಾಕಿದೇವ, ಮೌನದಮಾರಯ್ಯ, ಅಮರಗುಂಡದ ಮಲ್ಲಿಕಾರ್ಜುನ, ಶಿವನಾಗಮಯ್ಯ, ಗುಂಡಬ್ರಹ್ಮಯ್ಯ, ಉರಿಲಿಂಗಪೆದ್ದಯ್ಯ, ಬೆಟ್ಟದೇವರಸ, ಗೋವಿಂದಭಟ್ಟಾರ, ಗೌಳ ಭಟ್ಟಾರಕ, ವಿಜಯಾಪುರದಸೋಮಿದೇವಯ್ಯ, ವೀರಸಂಗಯ್ಯ, ಸಿಂಗಿಜೊಪ್ಪಯ್ಯ, ಮೈದುನರಾಮ, ಸಾಹಿತ್ಯಬ್ರಹ್ಮ, ಹಂಪೆದೇವಯ್ಯ, ವಚ್ಚಿಪುರದ ಶಂಕರದೇವ, ಭಾಸ್ಕರದೇವ, ಕೊಲ್ಲಿಪಾಕಿಯ ಮಾರಿತಂದೆ, ಸಿಲವಿಗೆಯ ಶಾಂತಮಲ್ಲಯ್ಯ, ವೈದ್ಯ ಸಂಗಯ್ಯ, ಶಿವಲೆಂಕೆಮಂಚಣ್ಣ, ಹಡಪದಅಪ್ಪಣ್ಣ, ಎಡೆಮಠದನಾಗಯ್ಯ, ನನ್ನಯ್ಯ, ಅಗ್ಗಣಿಯಹಂಪಯ್ಯ, ಮಲುಹಣಯ್ಯ, ನಿಜಗುಣಯ್ಯ, ಉರಿಲಿಂಗದೇವಯ್ಯ, ಮುಕ್ತಾಯಕ್ಕ, ಹೇರೂರುಹಣ್ಣ, ಮಲುಹಣೆ, ನಿಂಬಕ್ಕ.

2. ಭಂಡಾರಿಸೋವಣ್ಣ, ವರದಾನಿರಾಮಯ್ಯ, ಸಾಸಲಭೈರವ, ರಾಮಣಯ್ಯ, ನಾಗರಸ, ಸೊಪ್ಪಿನ ಬಸವಣ್ಣ, ಏಕೋರಾಮ, ಬಿಟ್ಟಮುಂಡೆಯಪ್ರಭು, ಸೋಲೂರ ಚಿಕ್ಕಬಸವ, ಬಯಲಪ್ರಭುದೇವ, ಏಳಮಲೆಯಸಿದ್ಧನಂಜೇಶ, ರಾಮಗಿರಿ ಪರ್ವತಯ್ಯ, ಚಂದ್ರಗುಂಡದ ವಿರೂಪಾಕ್ಷಯ್ಯ, ಮಾಗಡಿಯ ಕರಿಯಬಸವ, ಲಕ್ಷ್ಮಿಭಕ್ತ, ತೋಂಟದಸಿದ್ಧಲಿಂಗ, ಎಮ್ಮೆಬಸವರಾಜ, ದೇವಲಾಪುರದ ಸಪ್ಪೆಯಯ್ಯ, ಹುಚ್ಚರಾಚಯ್ಯ, ಬಸವಪುರಾಣದ ಸಿದ್ಧಮಲ್ಲೇಶ, ಮಳೆಯಮಲ್ಲೇಶ, ಬಿಜ್ಜಾವರದ ಭೋಳಬಸವೇಶ, ಶ್ರೀರಂಗಪಟ್ಟಣದ ಹೋಳಿನ ದೊಡ್ಡ ಸಂಪಯ್ಯ ಇತ್ಯಾದಿ.

ಕರೆದುಕೊಂಡು ಬಂದನು. ಆ ಗುರುವನ್ನು ಭೂತಾವಿಷ್ಟವಾದ ಒಂದುಮನೆಯಲ್ಲಿ ಇಳಿಸಿದರು. ಭೂತವು ಅವನಿಗೆ ನಮಸ್ಕರಿಸಿ ಓಡಿಹೋಗಲು ಹರಿರಾಯನು ಸಂತುಷ್ಟನಾಗಿ ಆ ಮನೆಯನ್ನೇ ಮಠವನ್ನು ಮಾಡಿ ಮೌಕ್ತಿಕಾವಳಿಗಳಿಂದ ತೆತ್ತಿಸಿದ ಕಂತೆಯನ್ನು ಗುರುವಿಗೆ ಹೊದಿಯಿಸಿ ಪಟ್ಟವನ್ನು ಕಟ್ಟಲು ಆತನಿಗೆ ಮುತ್ತಿನಕಂತೆಯಯ್ಯ ಎಂಬ ಹೆಸರಾಯಿತು. ಇವನ ಶಿಷ್ಯರು ಅಲ್ಲಲ್ಲಿ ಮಠಗಳನ್ನು ಕಟ್ಟಿಕೊಂಡರು. ಅವರಲ್ಲಿ ಒಬ್ಬಮಾಹೇಶ್ವರನು ಚಿನ್ನದಿಂದ ಸನೆದ ಕಂತೆಯನ್ನು ಧರಿಸಲು ಅವನ ಶಿಷ್ಯರು ಚಿನ್ನದ ಕಂತೆಯ ಅಂಶವೆಂಬರು. ಹೀಗೆಯೇ ಕಬ್ಬುನದ ಕಂತೆಯ ವರ್ಗ, ಪಟ್ಟಗಂತೆಯವರ್ಗ, ಪಚ್ಚೆಯ ಕಂತೆಯ ವರ್ಗ, ಗೋಣಿಯ ಕಂತೆಯ ವರ್ಗ, ಜಾಳಿಗೆಗಂತೆಯ ವರ್ಗ, ಕುಪ್ಪಸಗಂತೆಯ ವರ್ಗ, ಹುಲಿಯಚರ್ಮದ ಕಂತೆಯ ವರ್ಗ, ಮುತ್ತಿನಪೆಂಡೆಯದ ವರ್ಗ, ಎಂಬ ಪಂಗಡಗಳಾದುವು. ಶಿವಗಂಗೆಯ ಬೆಟ್ಟದ ಮೇಲಣಗವಿಯಲ್ಲಿ ಒಬ್ಬಯ್ಯನು ನೆಲಸಲು ಅವನ ಶಿಷ್ಯರು ಮೇಗಣಗವಿಯಬಗೆಯೆಂಬರು. ಆ ಸಂಪ್ರದಾಯದ ಮಾಹೇಶ್ವರನೊಬ್ಬನು ಮಖ್ಯಕ್ಕೆ ಹೋಗಿ ಖಾಜಿಯೊಡನೆ ಚದುರಂಗವಾಡುತ್ತಿರುವಾಗ ಕೈನೀಡಿ ಎತ್ತಲು, ಇನೇನೆಂದು ಖಾಜಿ ಕೇಳಲು, ಮುಳುಗಿಹೋಗುತ್ತಿದ್ದ ನಿನ್ನ ಹಡಗನ್ನೆತ್ತಿದೆನೆಂದು ನೆನೆದಿದ್ದ ತನ್ನ ಅಂಗಿಯನ್ನು ತೋರಿದನು. ಬರಗಾಲದಲ್ಲಿ ಮಳೆಯನ್ನು ಬರಿಸಿದುದರಿಂದ ಇವನಿಗೆ ಮಳೆಯಮಲ್ಲೇಶ ಎಂಬ ಹೆಸರಾಯಿತು. ಇವನ ಶಿಷ್ಯರು ಮಳೆಯಬಗೆಯವರು. ಕಂಬಾಳಮರುಳನು ಕಕುದ್ಗಿರಿಯ ಗಂಗಾಧರೇಶ್ವರನ ತೀರ್ಥಕುಂಡಾಗ್ರದಲ್ಲಿ ಪವಾಡದಿಂದ ಕಲ್ಲಕಂಬವನ್ನು ಬರಿಸಿ ನಿಲಿಸಲು ಅವನಿಗೆ ಕಂಬಾಳಮರುಳಸಿದ್ಧೇಶಗುರು ಎಂದು ಹೆಸರಾಯಿತು. ಇವನ ಶಿಷ್ಯರು ಕಂಬಾಳಬಗೆಯವರು. ಹೀಗೆ ಹಲವು ಬಗೆಗಳಾದುವು. ವೀರಶೈವರಲ್ಲಿ ಘನಲಿಂಗಚರ, ಅತೀತಿಚರ, ಉದಾಸಿನ್ಯವೈರಾಗ್ಯಚರ, ಷಟ್ಸ್ಥಲವಿರಕ್ತಿಮೂರ್ತಿ ಎಂದು ನಾಲ್ಕು ಪರ್ಯಾಯ.

ಈಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ:—

ಅಂಗಡಿಬೀದಿ

ಸರವ ತಿದ್ದಿಡುವ ಸರವಂದಿಗರ ಗಂದಿಗರ |
ಹಿರಿದು ತೈಲವ ತೆಗೆವ ಗಾಣಿಗರ ಸೇಣಿಗರ |
ಇರದೆ ದವಸವನಳೆವ ಅವಟಿಗ ಕೋವಟಿಗ ದೀವಟಿಗ ಕಲ್ಲಕುಟಿಗ ||
ಹರದರಂ ಮೆಚ್ಚಿಸುವ ನರ್ತಕರ ವರ್ತಕರ |
ಕರಸ್ಣಾಗಳ ನೆಯ್ವ ಜೇಡರಾ ಲಾಡರಾ |

ಪರಿಮಳದ ಪೂವಿನಾ ಮಾಲೆಗಾಱರ ನೀಲಿಗಾಱರಾ ಪಸರವೆಸೆಗುಂ ||

ನೀತಿ

ಒಂದುವಂ ಬಯಸದಿರು ಬಂದುದತಿಗಳೆಯದಿರು |
ಕುಂದುನಿಂದ್ಯಕ್ಕಳುಕು ಸಂದು ಸುಖದುಃಖ ಬರೆ |
ಕಂದರ್ಪಹರನಾಜ್ಞೆಯೆಂದು ನಿಶ್ಚೈಸೆಡರು ಬಂದೊಡೆದೆಗುಂದದಿಹುದು ||
ಎಂದೆಂದು ಶಿವನಡಿಯ ನೋಡಿ ಜಾನಿಸು ಭಿಕ್ಷೆ |
ವೆಂದೊಡಿಲ್ಲೆನ್ನದಿರು ಮುಂದೆ ವಂದಿಸಿ ಬಱಿಕ |
ಹಿಂದೆ ಬಿಟ್ಟಾಡದಿರು ತಂದೆಗುರುದೈವಗಳ ಕಂದಿಸದಿರೆಂದನಾರ್ಯಂ ||
ಬೇಡದಿರು ನರರ ಕೊಂಡಾಡದಿರು ಹಿಂಸೆಯಂ |
ಮಾಡದಿರು ಪಾಪಕೆಡೆಯಾಡದಿರು ಕುಚಿತರೊಡ |
ನಾಡದಿರು ಕಾಮದೊಳು ನೋಡದಿರು ಪರಸತಿಯ ಕೂಡದಿರು ಕನಸಿನಲ್ಲಿ ||
ಕೇಡೆಣಿಸದಿರು ಪೆಱರಿಗಾಡದಿರು ನಿಷ್ಠುರವ |
ಪೀಡಿಸದಿರನ್ಯರಂ ರೂಢಿಸದಿರಪಜಯದಿ |
ಕೂಡಿಸದಿರನ್ಯಾಯದೊಡವೆಯಂ ಸದ್ಗತಿಯು ನಿನಗೆಂದನಾಚಾರ್ಯನು ||
ಬಿಡು ಪುಸಿಯು ಕಳವು ಪಾರದ್ವಾರಮೆಂಬಿವಂ |
ಕೊಡು ಯಥಾಶಕ್ತಿಯಿಂ ಸತ್ಪಾತ್ರಗಳನಱಿತು |
ನಡೆ ಸದಾಚಾರಯುತರೊಪ್ಪವಂದದೊಳು ಗುರುಹಿರಿಯರೊಳು ಹದಿರು ಬೇಡ ||
ಹಿಡಿ ವ್ರತಾಚಾರದೊಳು ಭಿನ್ನದೋಱದೆ ಸುಜನ |
ರೊಡನಾಡು ಭೂತದಯವಿರಲಿ ವಿಶ್ವಾಸದಿಂ |
ತೊಡು ಭಸಿತರುದ್ರಾಕ್ಷೆಗಳನಿದೇ ಮೋಕ್ಷಪದವೆಂದನಾದೇಶಿಕೇಂದ್ರ ||

---

## ನಂದೀಶಕವಿ. ಸು. 1650.

ಸಿದ್ಧನಂಜೇಶನು (ಸು. 1650) ತನ್ನ ರಾಘವಾಂಕಚಾರಿತ್ರವನ್ನು ಈತನ ಕೃಪೆಯಿಂದ ಪ್ರಕಟಮಾಡಿದಂತೆ

ರಾಘವಾಂಕನ ಕೃತಿಯನು ಸುಶಾಂತಬಂಧುರಸಂಸ್ಕೃತಪ್ರಾಕೃತೋಭಯಕವಿ ತ್ವಾಯಿಲರ ಶಿರೋಮಣಿಯೆನಿಪ ನಂದೀಶಕವಿಯ ಕೃಪೆಯಿಂ ಪ್ರಕಟಮಂ ಮಾಡಿದೆಂ

ಎಂಬ ಪದ್ಯಭಾಗದಲ್ಲಿ ಹೇಳುತ್ತಾನೆ. ಇದರಿಂದ ನಂದೀಶನು ಸಂಸ್ಕೃತ,

ಕನ್ನಡ ಎರಡು ಭಾಷೆಗಳಲ್ಲಿಯೂ ದೊಡ್ಡ ಕವಿಯಾಗಿದ್ದಂತೆ ತಿಳಿಯುತ್ತದೆ. ಕನ್ನಡದಲ್ಲಿ ಅವ ಗ್ರಂಥಗಳನ್ನು ಬರೆದಿದ್ದಾನೆಯೋ ತಿಳಿಯದು.

---

## ರಾಚವಟ್ಟೆಯಾರಾಧ್ಯ. ಸು. 1650.

ಈತನನ್ನು ಸಿದ್ಧನಂಜೇಶನು (ಸು. 1650) ಕರ್ಣಾಟಕಕವಿತ್ವಕೋವಿದನೆಂದೂ ಇವನ ಕೃಪೆಯಿಂದ ತನ್ನ ರಾಘವಾಂಕಚಾರಿತ್ರವು ಪೂರ್ತಿಯಾಯಿತೆಂದೂ ಈ ಪದ್ಯಭಾಗದಲ್ಲಿ ಹೇಳುತ್ತಾನೆ—

ಕರ್ಣಾಟಕಕವಿತ್ವಕೋವಿದ ಪಂಚವರ್ಣ್ಣಿಗೆಯ ಸಿದ್ಧನಂಜೇಶಾಂಘ್ರಿಕಮಲ ಮಧುಪ ರಾಚವಟ್ಟೆಯಾರಾಧ್ಯನ ಕೃಪೆಯಿಂ ಗ್ರಂಥ ಪೂರ್ಣವಾಯಿತು.

ಈತನೂ ಸಿದ್ಧನಂಜೇಶನ ಶಿಷ್ಯನೆಂದು ಇದರಿಂದ ತಿಳಿಯುತ್ತದೆ, ಅವ ಗ್ರಂಥವನ್ನು ಬರೆದಿರಬಹುದೋ ತಿಳಿಯದು.

---

## ಸಹಜಾನಂದ. ಸು. 1650.

ಈತನು ಭಕ್ತಿರಸಾಯನವನ್ನು ಬರೆದಿದ್ದಾನೆ. ಇವನು ಬ್ರಾಹ್ಮಣ ಕವಿ. ಇವನ ಗುರು ಪರಮಹಂಸಪರಿವ್ರಾಜಕಾಚಾರ್ಯ ಸಚ್ಚಿನಾನಂದ. ಅನುಭವಾಮೃತವನ್ನು ಬರೆದ ರಂಗನಾಥನ ಗುರುವಾದ ಸಹಜಾನಂದನು ಇವನೇ ಎಂದು ತೋರುತ್ತದೆ. ಈ ಸಚ್ಚಿದಾನಂದನು ಶೃಂಗೇರಿಯಲ್ಲಿ 1622 ರಿಂದ 1663 ರವರೆಗೆ ಸ್ವಾಮಿಯಾಗಿದ್ದ ಸಚ್ಚಿದಾನಂದಭಾರತಿಯಾಗಿದ್ದರೂ ಇರಬಹುದು. ಹೀಗಿದ್ದ ಪಕ್ಷದಲ್ಲಿ ಕವಿಯ ಕಾಲವು ಸುಮಾರು 1650 ಆಗಬಹುದು.

ಇವನ ಗ್ರಂಥ

### ಭಕ್ತಿರಸಾಯನ

ಇದು ಭಾಮಿನೀಷಟ್ಪದಿಯಲ್ಲಿ ಬರೆದಿದೆ; ಪದ್ಯ 108. ಪ್ರತಿಪದ್ಯವೂ "ರಕ್ಷಿಸು ಭುವನಸಂಕುಲವ" ಎಂದು ಮುಗಿಯುತ್ತದೆ. ಈ ಗ್ರಂಥವು ಶಿವಸ್ತುತಿರೂಪವಾಗಿಯೂ ನೀತಿಬೋಧಕವಾಗಿಯೂ ಇದೆ. ಗ್ರಂಥಾವತಾರದಲ್ಲಿ ಶಿವಸ್ತುತಿ ಇದೆ. ಕೊನೆಯಲ್ಲಿ ಈ ಗದ್ಯವಿದೆ:—

ಇತಿ ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯ ಶ್ರೀಸಚ್ಚಿದಾನಂದಗುರುವರ್ಯ ಚರಣಪಂಕಜಭ್ರಮರಾಯಮಾಣ ಸಹಜಾನಂದವಿರಚಿತ ಭಕ್ತಿರಸಾಯನವೆಂಬ ಗ್ರಂಥ ಅಷ್ಟಶತೋತ್ತರ ಸಂಪೂರ್ಣ.

ಇದರಿಂದ ಒಂದೆರಡು ಪದ್ಯಗಳನ್ನು ತೆಗೆದು ಬರೆಯುತ್ತೇವೆ:—

ನಿಂದಿಸುತ ಸರ್ವರನು ತನುತವು | ಗಿಂದು ಸರಿಯೇ ಎನುತ ಕೊನರುತ |
ಬಂದು ಸುಜನರ ಜಱೆದು ಕರ್ಕಶಗೊಳುವ ದುರಿತಕ್ಕೆ ||
ಇಂದು ಸತಿಸುತರೊಳಗೆ ಬಾಧೆಯ | ನೊಂದಿ ಕಡೆಯಲಿ ನರಕಕೂಪದೊ |
ಳಂದು ಬೀಳ್ವದೆ ಸಾಕ್ಷಿ ರಕ್ಷಿಸು ಭುವನಸಂಕುಲವ ||
ಕ್ರೋಧದಲಿ ಸರ್ವರೊಳು ತರ್ಕಿಸಿ | ಭೇದಗರ್ವವ ಬೆಳಸಿ ದುಃಖವು |
ಹೋದಧಿಗೆ ಗುಱಿಯಾಯ್ತು ದುರ್ಗುಣದೋಷರಾಶಿಯೊಳು ||
ಹಾದಿ ತಪ್ಪಿತು ನಿಮ್ಮ ಭಕ್ತಿಗೆ | ಭೇದಬುದ್ಧಿಯ ಕಳೆದು ನಿಜಸುಖ |
ದಾದಿಸದ್ಗುಣವಿತ್ತು ರಕ್ಷಿಸು ಭುವನಸಂಕುಲವ ||

---

## ಶಾಂತಮಲ್ಲ. ಸು. 1650.

ಈತನು ಅನುಭವಮುದ್ರೆ, ಗುರುರಗಳೆಯ ಟೀಕೆ ಇವುಗಳನ್ನು ಬರೆದಿದ್ದಾನೆ. ಇವನು ವೀರಶೈವಕವಿ. "ತೋಂಟದಸಿದ್ಧಲಿಂಗಪ್ರಭುವಿನ ಸಾಂಪ್ರದಾಯವಿಡಿದೊಪ್ಪುವ ಅನುಭಾವಿಗಳ ವಾಕ್ಯಾಮೃತವ ಸ್ವೀಕರಿಸಿದ ಶಾಂತಮಲ್ಲಸ್ವಾಮಿಗಳು" ಎಂಬುದರಿಂದ ಈತನು ತೋಂಟದಸಿದ್ಧಲಿಂಗನ (ಸು. 1470) ಕಾಲಕ್ಕೆ ಬಹಳ ಈಚೆಯವನು ಎಂದು ತಿಳಿಯುತ್ತದೆ; ಸುಮಾರು 1650ರಲ್ಲಿ ಇದ್ದಿರಬಹುದು.

ಇವನ ಗ್ರಂಥಗಳಲ್ಲಿ

### I ಅನುಭವಮುದ್ರೆ

ಇದು ಸಾಂಗತ್ಯದಲ್ಲಿ ಬರೆದಿದೆ; ಸ್ಥಳ 29. ಇದರಲ್ಲಿ ವೀರಶೈವಸಿದ್ಧಾಂತವು ನಿರೂಪಿಸಲ್ಪಟ್ಟಿದೆ. ಇದನ್ನು ಮೊದಲು ಪ್ರಭುದೇವನು ತನ್ನ ಶಿಷ್ಯನಾದ ಪ್ರಭುದೇವನಿಗೆ ಹೇಳಿದಂದೆ ತಿಳಯುತ್ತದೆ. ಆರಂಭದಲ್ಲಿ

ಷಡ್ವಿಧಲಿಂಗಸ್ವರೂಪನಪ್ಪ ಪ್ರಭುದೇವರು ..ಷಟ್ಸ್ಥಳವೆಂಬ ಸಾಮ್ರಾಜ್ಯವ ನಾಳುತ್ತ ಸಕಲವೀರಮಾಹೇಶ್ವರಾವೃತವಾದ ಸುಜ್ಞಾನಸಭಾಮಂಟಪದಲ್ಲಿ ಮೂರ್ತಿಗೊಂಡು ತಮ್ಮ ನಿಜಶಿಷ್ಯರಪ್ಪ ಪ್ರಭುದೇವರಿಗೆ ತಂದೆ ಗಳಿಸಿದ ಧನ ಸುತಗೆಂಬಂತೆ

ತಮ್ಮ ಜ್ಞಾನಭಂಡಾರವೆನಿಸುವ ಅನುಭವಮುದ್ರೆಯ ಪ್ರಸಾದಿಸಿದರು. ಇದು ಬಂದ ಪಾರಂಪರಿಯನು ಶಾಂತಮಲ್ಲನು ಬಿನ್ನಹಂಮಾಡುತ್ತಿದ್ದಾನು. ಸಕಲವೀರಮಾಹೇಶ್ವರರು ಅವಧರಿಪುದು

ಎಂದೂ ಅಂತ್ಯದಲ್ಲಿ

ಶ್ರೀಮತ್ಸಚ್ಚಿದಾನಂದನಿತ್ಯಪರಿಪೂರ್ಣಲಕ್ಷಣಲಕ್ಷಿತಸ್ವಯಂಪ್ರಕಾಶ ಪರಬ್ರಹ್ಮಸ್ವರೂಪನಪ್ಪ ಸದ್ಗುರುಸ್ವಾಮಿ ಪ್ರಭುದೇವರು ತಮ್ಮ ನಿಜಶಿಷ್ಯರಪ್ಪ ಪ್ರಭುದೇವರಿಗೆ ನಿರೂಪಿಸಿದ ಅನುಭವಮುದ್ರೆಯೊಳ್

ಎಂದೂ ಇದೆ. ಇದರಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ:—

ಗಾಳಿಗೆ ದೀಪವು ಕೆಡುವವೋಲಟಪಿಯು | ಜ್ವಾಲೆಯು ಗಾಳಿಗೆ ಕೆಡುವುದೆ |
ಜಾಲಿಶರಜ್ವರ ಸಂಗದಿ ಕೆಡುವಂತೆ| ಶೂಲಿಯ ಭಕ್ತರು ಕೆಡುವರೆ ||
ಬತ್ತಲೆಪೋಪವನಿಗೆ ಚೋರರ ಭಯ | ವೆತ್ತಣದೆಂಬ ದೃಷ್ಟಾಂತವೆ |
ಚಿತ್ತವ ಜಯಿಸಿದ ಭಕ್ತಗೆ ಸ್ತ್ರೀಸುತ | ವಿತ್ತವ ಗೆಲಲೇನುಚೋದ್ಯವು ||
ಬೆಳಗಿದ ಕನ್ನಡಿಯೊಳು ಮುಖಬಿಂಬವು | ತಿಳಿನೀರೊಳು ಬಾನುಮಂಡಲ |
ಬೆಳಗುವಂತೆ ನಿಷ್ಠಾಪಿಯು ಮನಸೊಳು | ತೊಳಗಿ ಬೆಳಗಿ ಶಿವಕಳೆ ತೋರ್ಕು ||

2 ಗುರುರಗಳೆಯ ಟೀಕೆ

ಇದರ ಆರಂಭದಲ್ಲಿ ಕವಿ ಹೀಗೆ ಹೇಳುತ್ತಾನೆ—

ಷಟ್ಸ್ಥಲಜ್ಞಾನಸಾರಾಮೃತದಾಯಕ ತೋಂಟದಸಿದ್ಧಲಿಂಗಪ್ರಭುವಿನ ಸಾಂಪ್ರದಾಯವಿಡಿದೊಪ್ಪುವ ಅನುಭಾವಿಗಳ ವಾಕ್ಯಾಮೃತವ ಸ್ವೀಕರಿಸಿದ ಶಾಂತಮಲ್ಲಸ್ವಾಮಿಗಳು ಕ್ರಿಯಾಸಾಧನಮುಕ್ತಿಸೋಪಾನವಪ್ಪ ಮುನ್ನುಳ್ಳ ಗುರುಸ್ಥಲವನು ಪವಣಿಸುತಿರ್ದಪೆಂ.

---

## ದೇವರಸ. ಸು. 1650.

ಈತನು ಗುರುದತ್ತಚರಿತೆಯನ್ನು ಬರೆದಿದ್ದಾನೆ. ಇವನು ಜೈನಕವಿ; ಕರ್ಣಾಟದೇಶದಲ್ಲಿರುವ ಪೂಗತಟಾಕವೆಂಬ ಪಟ್ಟಣದಲ್ಲಿ ಪ್ರಸಿದ್ಧನಾಗಿದ್ದ ಜೈನಬ್ರಾಹ್ಮಣನಾದ ದೇವರಸನ ಮಗನು ಈ ಪಟ್ಟಣದ ಸಮೀಪದಲ್ಲಿರುವ ಪರ್ವತದಲ್ಲಿ ಪಾರ್ಶ್ವಜಿನಾಲಯವಿದೆಯೆಂದೂ ಆ ಪರ್ವತದಲ್ಲಿ ಪೂಜ್ಯಪಾದನು ಸಿದ್ಧರಸವನ್ನು ರಚಿಸಿ ಕೀರ್ತಿವಡೆದನೆಂದೂ ಕವಿ ಹೇಳುತ್ತಾನೆ.

ಪೂರ್ವಕವಿಗಳಲ್ಲಿ ಭಟ್ಟಾಕಳಂಕನನ್ನು (1604) ಸ್ಮರಿಸುವುದರಿಂದ ಕವಿ ಅವನಿಗಿಂತ ಈಚೆಯವನೆಂಬುದು ಸ್ಪಷ್ಟವಾಗಿದೆ. ಎಷ್ಟು ಈಚೆಯವನೋ ತಿಳಿಯದು; ಸುಮಾರು 1650 ರಲ್ಲಿ ಇದ್ದಿರಬಹುದೆಂದು ಊಹಿಸುತ್ತೇವೆ.

ಪೂರ್ವಕವಿಗಳಲ್ಲಿ ಪೂಜ್ಯಪಾದ, ಗುಣಭದ್ರ, ವಿಜಯ, ಅಕಳಂಕ, ನಾಗಚಂದ್ರ, ಅಗ್ಗಳ, ಕಾಮ, ಭಟ್ಟಾಕಳಂಕ, ಶಾಂತಿವರ್ಮ ಇವರುಗಳನ್ನು ಸ್ಮರಿಸಿದ್ದಾನೆ.[1]

ಇವನ ಗ್ರಂಥ

### ಗುರುದತ್ತಚರಿತೆ.

ಇದು ಸಾಂಗತ್ಯದಲ್ಲಿ ಬರೆದಿದೆ; ಪದ್ಯ 813. ಆರಂಭದಲ್ಲಿ ಕವಿ ಚತುರ್ವಿಂಶತಿಜಿನರನ್ನು ಸ್ತುತಿಸಿ, ಬಳಿಕ ಸಿದ್ಧಾದಿಗಳು, ಸರಸ್ವತಿ, ಸರ್ವಾಹ್ಣಯಕ್ಷ, ಕೂಷ್ಮಾಂಡಿನಿ ಇವರುಗಳನ್ನು ಸ್ಮರಿಸಿ ಅನಂತರ

ಉತ್ತುಂಗಗುಣಗಣಾಭರಣನೆನಿಪ ಗುರು | ದತ್ತನವಮಲಚರಿತೆಯನು |
ಚಿತ್ತಶುದ್ಧಿಯೊಳು ಬಿತ್ತರಿಪೆನು.

ಎಂದು ಕಥೆಯನ್ನು ಆರಂಭಿಸಿದ್ದಾನೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

#### ದೇಶವರ್ಣನೆ

ಸಿರಿಯುರವನೆ ಭಾರತಿಯು ನೆಲೆವೀಡುರು | ತರಸೌಖ್ಯದ ಜನ್ಮಭೂಮಿ |
ಪರಮಸುಧರ್ಮದ ಪೇಟೆಯೆಂದೆನೆ ಕಣ್ಗೆ | ಕರವೊಪ್ಪಿದುದಾದೇಶ ||

#### ಶಾಲಿವನ

ಶಾಲಿಯ ತನಿಗಂಪನುಣಲೆಯ್ದಿದ ಭೃಂಗ | ಜಾಲಶಿಶುಗಳಾತೆನೆಯ |
ಮೇಲೊಪ್ಪಿದುವನಂಗನ ಪಸುಗಾವಿನ | ನೀಲದ ಮಿಂಟೆಯೆಂಬಂತೆ ||

#### ಉದ್ಯಾನ

ಅಲರುಣಿಗಳ ಭೋಜನಶಾಲೆ ಗಿಳಿಯೋದು | ಗಲಿಪ ಮಂಟಪ ಪಿಕತತಿಯ |
ಸಲೆ ಜನ್ಮಭೂಮಿಯೆಂದೆನೆ ಕಣ್ಗೆ ರಂಜನೆ | ದಳೆದೊಪ್ಪಿತಾಬಹಿರ್ವನವು ||
ತಂಗಾಳಿಯೊಲಿದಾಡುವಂಗಳ ನವಿಲ್ಗಳ | ಜಂಗುಳಿಗಳ ನಾಟ್ಯಶಾಲೆ |
ಅಂಗಜಾತನ ವನದುರ್ಗವೆಂದೆನಲತಿ | ಸಿಂಗರದೋಂಟವೊಪ್ಪಿದುದು ||

---

1. ಮತ್ತೊಂದು ಪ್ರತಿಯಲ್ಲಿ ಹೊನ್ನ, ಪಂಪ, ನೇಮಿ, ಗುಣವರ್ಮ, ಕುಮುದೇಂದು ಇವರ ಹೆಸರುಗಳೂ ಹೇಳಿವೆ.

## ತಿರುಮಾಲೆವೈದ್ಯ ಸು. 1650

ಈತನು ಉತ್ತರರಾಮಾಯಣವನ್ನು ಬರೆದಿದ್ದಾನೆ. ಇವನು ಬ್ರಾಹ್ಮಣಕವಿ; ಗವಿಯಣನ ಮಗನು. ರಾಮಾಯಣದ ಉತ್ತರಕಾಂಡವನ್ನು ಮಾತ್ರ ಕನ್ನಡಿಸಿರುವುದರಿಂದ ತೊರವೆಯರಾಮಾಯಣವನ್ನು ರಚಿಸಿದ ಕುಮಾರವಾಲ್ಮೀಕಿ (ಸು. 1500) ಕನ್ನಡಿಸದೆ ಬಿಟ್ಟ ಈ ಕಾಂಡವನ್ನು ಅವನ ಕಾಲಕ್ಕೆ ಈಚೆ ಈತನು ಬರೆದಿರಬಹುದು ಎಂದು ತೋರುತ್ತದೆ. ಇವನ ಕಾಲವು ಸುಮಾರು 1650 ಆಗಿರಬಹುದು. ಪೂರ್ವಕವಿಗಳಲ್ಲಿ ಆದಿಕವಿ ವಾಲ್ಮೀಕಿಯನ್ನು ಸ್ತುತಿಸಿದ್ದಾನೆ.

ಇವನ ಗ್ರಂಥ

### ಉತ್ತರ ರಾಮಾಯಣ

ಇದು ಭಾಮಿನೀಷಟ್ಪದಿಯಲ್ಲಿ ಬರೆದಿದೆ; ಸಂಧಿ 20, ಪದ್ಯ 1019. ಇದು ವಾಲ್ಮೀಕಿರಾಮಾಯಣದ ಉತ್ತರಕಾಂಡದ ಭಾಷಾಂತರವು. ಗ್ರಂಥಾವತಾರದಲ್ಲಿ ರಾಮನ ಸ್ತುತಿ ಇದೆ. ಬಳಿಕ ಕವಿ ಶಿವ, ಗಣಪತಿ, ಸರಸ್ವತಿ ಇವರುಗಳನ್ನು ಹೊಗಳಿದ್ದಾನೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ವಸಂತ

ಸುತ್ತಿ ಮಲಯಾಚಲನಿತಂಬದೊ | ಳುತ್ತಮದ ಚಂದನವನಂಗಳ ನು |
ಗ್ಗೊತ್ತಿ ಕಪ್ಪುರವಾಳಿಗೆಗಳ ಧೂಳಿಗಳ ತನಿಗೆದಱಿ ||
ಕತ್ತುರಿಯ ಕೆಸಱಿಡಿದ ಚೋಳೀ | ವೃತ್ತಕುಚಗಳೊಳದ್ದು ಮನಸಿಜ |
ಮತ್ತವಾರಣದಂತೆ ತೆಂಕಣಗಾಳಿ ತೀಡಿದುದು ||
ಜಾತಿಗಳು ಮಧುಪಪ್ರಸಂಗದ | ಭೀತಿಗೊಲ್ಲದೆ ಬೀತುವಂದು ಕು |
ಜಾತಿಗಳು ಪಲ್ಲವಿಸಿದುವು ಮಧುಸಂಗಸೌಖ್ಯದಲಿ ||
ಪೂತೊಱಗಿದುವು ನಕುಳವಬಲಾ | ಜಾತವೆಂಜಲಿಸಿದ ಮದದ್ರವ |
ಘಾತದಲಿ ಮನಗುಡದ ಮಾನವರಾವು ಹೆಂಗಳಿಗೆ ||

ಚಂದ್ರೋದಯ

ಮತ್ತೆ ಕತ್ತಲೆಯೆಂಬ ದಂತಿಯ | ನೆತ್ತಿಯೊಡನೊಡೆದುಚ್ಚಳಿಪ ಪೆ |
ರ್ಮುತ್ತೊ ತಾರಾಮೌಕ್ತಿಕವ್ರಜಜನ್ಮಶುಕ್ತಿಕೆಯೋ ||

ಬಿತ್ತರದ ಕೌಮುದಿಯ ಬೆಳಗಿನ । ಬಿತ್ತೊ ತಾನೆನೆ ಪೂರ್ವಪರ್ವತ ।
ದುತ್ತಮಾಂಗವನಡರಿದನು ವಿಧುವಧಿಕತೇಜದಲಿ ॥

ಸುಮಾಲಿವಿಷ್ಣುಯುದ್ಧ

ನೀಲಶೈಲದಮೇಲೆ ಕೆಱಿದುದೊ । ನೀಲಘನಘಟೆ ಮಱಿಯೆನೆನೆ ಹರಿ ।
ನೀಲರುಚಿಸುರುಚಿರಶುಭಾಂಗನಮೇಲೆ ಮುಸುಕಿದುವು ॥
ಕಾಲರಕ್ಕಸನೆಚ್ಚ ನಿಶಿತಕ । ರಾಳಕಾಳಾಯುಸಶರಾಳಿ ತ ।
ಮಾಲಕೆಱಿಗುವ ಪಱಿಮೆವಱಿಗಳ ಸಾಲನನುಕರಿಸಿ ॥

ಕುಬೇರನನ್ನು ಕುರಿತು ರಾವಣನ ಉಕ್ತಿ

ಅಂಜುವೆವು ನಿಮಗಾವಕಟ ಮೃ । ತ್ಯುಂಜಯನ ಸಖರೆಂದು ನೀತಿಯ ।
ರಂಜಕರು ಗಡ ನೀವು ದುರ್ಮಾರ್ಗಿಗಳು ನಾವು ಗಡ ॥
ಭಂಜಿಪರು ಸುರರೆನುತೆಮಗೆ ಮನ । ವಂಜುವುದು ನೀವವರದೆಸೆ ದಿಟ ।
ಪಂಜರೆಮಗಿನ್ನೆಂದೆನುತ ಖಳಸುಬ್ಬಿ ಬೊಬ್ಬಿಱಿದ ॥

---

## ಗೋವಿಂದ. ಸು. 1650

ಇವನು ನಂದಿಮಾಹಾತ್ಮ್ಯವನ್ನು ಬರೆದಿದ್ದಾನೆ. ಈತನು ಬ್ರಾಹ್ಮಣಕವಿ; ವಿಶ್ವಾಮಿತ್ರಗೋತ್ರದವನು; ಭೀಮರಥಿಯ ತೀರದಲ್ಲಿರುವ ಬೇಡಬುಯ್ಯರದ ಕರಣಿಕ ಜೋತಿಯ ಮಗನು. ಮದನಗೋಪಾಲನ ಕರುಣದಿಂದ ಗ್ರಂಥವನ್ನು ಬರೆದಂತೆ ಹೇಳುತ್ತಾನೆ. ಪೂರ್ವಕವಿಗಳಲ್ಲಿ ಕುಮಾರವ್ಯಾಸ (ಶುಕರೂಪ) ನನ್ನು (ಸು. 1430) ಸ್ತುತಿಸಿರುವುದರಿಂದ ಅವನಿಗಿಂತ ಈಚೆಯವನೆಂಬುದು ವ್ಯಕ್ತವಾಗಿದೆ. ಸುಮಾರು 1650 ರಲ್ಲಿ ಇದ್ದಿರಬಹುದೆಂದು ಊಹಿಸುತ್ತೇವೆ. ಪೂರ್ವಕವಿಗಳನ್ನು ಈ ಪದ್ಯದಲ್ಲಿ ಸ್ಮರಿಸಿದ್ದಾನೆ---

ಜನಮಿತ್ರಕಾಳಿದಾಸನ ಕಲಾನಿಧಿಮಯೂ ।
ರನ ಮಂಗಳಚರಿತ್ರಮಲ್ಹಣನ ಸೌಮ್ಯಬಾ ।
ಣನ ಚತುರಸಂಜೀವರತ್ನಭೋಜನ ಕವೀಶ್ವರಕೇಶಿರಾಜನೊಲ್ದ ॥
ಘನಶಬ್ದಶೌರಿಪಂಪನ ಭೋಗಿಭಲ್ಲಟನ । ವಿನುತಸತ್ಕೇತುಶುಕರೂಪನಡಿದಾವರೆಯ ।
ನೆನೆದುಪಕ್ರಮಿಸೆ ಕೃತಿಗವರೆೞ್ ನವಗ್ರಹಂ ಬಲವಂದು ಪೆಂಪೀಯುವೇ

ಇವನ ಗ್ರಂಥ

## ನಂದಿಮಾಹಾತ್ಮ್ಯ

ಇದು ವಾರ್ಧಕಷಟ್ಪದಿಯಲ್ಲಿ ಬರೆದಿದೆ. ನಮಗೆ ದೊರೆತ ಅಸಮ ಗ್ರಪ್ರತಿಯಲ್ಲಿ 23 ಸಂಧಿಗಳಿವೆ. ಒಟ್ಟು 50 ಸಂಧಿಗಳಿವೆ ಎಂದು ಕಾವ್ಯ ಕಲಾನಿಧಿಯ ಸಂಪಾದಕರು ಬರೆದಿದ್ದಾರೆ. ಇದರಲ್ಲಿ ನಂದಿಗೆ ಗಣನಾಥ ನಾದ ಕೂಷ್ಮಾಂಡನು ಶೈವಕ್ಷೇತ್ರಗಳ ಮಹಿಮೆಯನ್ನು ನಿರೂಪಿಸಿದಂ ತೆಯೂ ನಂದಿ ಪಾರ್ವತಿಗೆ ಸಂದೇಹವನ್ನು ಉಂಟುಮಾಡಿದ ತನ್ನ ಶಿವಸಾ ರೂಪ್ಯವನ್ನು ಶಿವನ ಅನುಗ್ರಹದಿಂದ ನೀಗಿ ಮುನ್ನಿನಾಕೃತಿಯನ್ನು ಪಡೆ ದಂತೆಯೂ ಹೇಳಿದೆ. ಗ್ರಂಥಾವತಾರದಲ್ಲಿ ನಂದೀಶಸ್ತುತಿ ಇದೆ. ಬಳಿಕ ಕವಿ ನಾರಾಯಣ, ಪಾರ್ವತಿ, ವೀರಭದ್ರ, ಷಣ್ಮುಖ, ನಂದಿ, ಭೃಂಗಿ, ಗಣ ಪತಿ, ಸರಸ್ವತಿ ಇವರುಗಳನ್ನು ಸ್ತುತಿಸಿದ್ದಾನೆ. ತನ್ನ ಕೃತಿಯ ಉತ್ಕೃಷ ತೆಯನ್ನು ಈ ಪದ್ಯಗಳಲ್ಲಿ ಹೇಳಿಕೊಂಡಿದ್ದಾನೆ—

ವರಹಂಸೆಯಂತೆ ಮೃದುಪದಗತಿಗಳಿಂದ ಭಾ |
ಸುರರಾಜಶುಕನಂತೆ ಮಧುರೋಕ್ತಿಯಿಂದ ಭೂ |
ವರಗೇಹದಂತೆ ಬಹುಭಾವನಾಚಿತ್ರಬಂಧಗಳಿಂದ ಮಧುವಿನಂತೆ ||

ನಿರತಸುಮನೋಲ್ಲಾಸದಿಂದ ಸತ್ಫಲದಂತೆ |
ಪರಮನವರಸದಿಂದ ಪ್ರಭುವಿನಂತಧಿಕಾರ್ಥ |
ಭರಿತದಿಂದೆನ್ನ ಕೃತಿ ಕ್ಷಿತಿಗಲಂಕೃತಿಯಾಗಿ ರಾಜಿಪುದು ಸೋಜಿಗಮೆನೆ ||

ಎಳನೀರೊಳ್ಬೆದೆ ತವರಾಜ ಬೆರೆದಂದದಿಂ |
ಸುಲಿದ ರಸಗಂಧಿವಾಳೆಯೊಳು ಜೇನ್ದಳಿದಂತೆ |
ಲಲಿತಮಾಧುರ್ಯದ್ರಾಕ್ಷಾಫಲಪ್ರಚಯಮಂ ರಸದಾಳಿರಸಮೊಳೊಸೆದು ||

ಇಬಿಹಿದಂತೊಲ್ದು ಜನಿವಾಲ್ಗೆನೆಗೆ ಸದ್ಘೃತಂ |
ಗಲಸಿದಂದದೊಳೆನ್ನ ಕೃತಿರಸಂ ನಾಡೆ ಸವಿ |
ಗೊಳಿಸುವುದು ನಿರ್ಮತ್ಸರದೊಳಾಲಿಸುವ ರಸಿಕವೃಂದಕಾನಂದನಾಗಿ ||

ಇವನ ಬಂಧವು ಪ್ರೌಢವಾಗಿದೆ. ಈ ಗ್ರಂಥದಿಂದ ಕೆಲವು ಪದ್ಯ ಗಳನ್ನು ತೆಗೆದು ಬರೆಯುತ್ತೇವೆ—

## ಕವಿಗಳ ಮಾಹಾತ್ಮ್ಯ

ತನುವಿಲ್ಲದಲ್ಲಿ ಪ್ರಾಣಪ್ರತಿಷ್ಠೆಯಂ ಕಟ್ಟಿ |
ಯನುಗೊಳಿಸದಾಧಾರಸಂಸ್ಥಾಪನೆಯ ಭಿತ್ತಿಯೊಂ |
ದಿನಿಸಿಲ್ಲದತಿಚಿತ್ರಮಂ ರೂಪುನೋಡಿದೆಡೆಯೊಳ್ ಪಲವಲಂಕಾರವಂ ||
ಮನೆಯಿಲ್ಲದರ್ಥಸಂಚಿತವನುಂ ಮೇರೆಯಿರ |
ದನುಪಮಕ್ರಿಯೆಗಳಂ ನಡೆಯಿಪ ಕವೀಶ್ವರರ |
ಘನತೆಯಂ ಬಣ್ಣಿಸುವರಾರಾನೆ ಹೋದುದೇ ಬೀದಿಯಲ್ಲವೆ ಜಗದೊಳು ||

## ಸಮುದ್ರ

ನಿಱಿವಿಡಿದು ನಿಮಿರ್ದ ಪೆರ್ದೆರೆಗಳಿಂ ನೆಗೆವ ತುಂ |
ತುಱುಗಳಿಂದೇೞ್ವ ಪೆರ್ಮೊರೆಗಳಿಂ ಸೆಳೆದೆೞೆವ |
ಹರಿಗಳಿಂದೊತ್ತರಿಪ ಮುೞುಗಳಿಂ ದವಿದಿರ್ದ ಗಿರಿಗಳಿಂ ದಿಕ್ತಟದೊಳು ||
ತುಱುಗಿರ್ದ ಪವಳದಂಕುರಗಳಿಂದಿಡಿದ ಜಲ |
ಚರಗಳಿಂ ರತ್ನಪ್ರಕರಗಳಿಂ ಸಂಚರಿಪ |
ತರಿಗಳಿಂ ಮುಗಿಲ ಮೊಗ್ಗರಗಳಿಂ ನೆರೆವ ಬಳ್ಳಿಯುಱುಗಳಿಂದೆಸೆದುದಬ್ಧಿ ||
ಒಡಲೊಳಡಗಿದ ವಡಬನಸ್ತಮಿಸಿದಿನ ಪವಳ |
ಗುಡಿ ಸಂಜೆಗೆಂಪು ತೆರೆವೊಯ್ಲಿನಿಂ ಚಿಪ್ಪೊಡೆದು |
ಸಿಡಿವ ಮುಕ್ತಾಪ್ರಚಯ ತಾರೆ ಬಳಸಿದ ಘನಸ್ತೋಮ ತಮ ಫೇನಪಿಂಡಂ ||
ಉಡುರಾಜಮಂಡಲಂ ಶಂಖವರ್ಣಂ ಪೊಗ |
ವಡೆದ ಕೌಮುದಿಯಾಗೆ ರಾತ್ರಿಲಕ್ಷ್ಮಿಯ ಭಾವ |
ಮಡಸಿ ಕಣ್ಗೆಸೆದುದು ಮಹಾರ್ಣವಮದಚ್ಚರಿಯ ಪೆಚ್ಚುಗೆಯನೆಚ್ಚಱಿಸುತ ||

## ಮೇರು

ಪರಮೇಷ್ಠಿಯೆಂಬ ಪೆಗ್ಗಡೆಯಂ ವಿಲಾಸದಿಂ |
ವಿಱಿಪ ಧ್ರುವನೆಂಬ ಕೊಲ್ಲಟಿಗನೆಲ್ಲಾ ಜಗಂ |
ಬೆರಸಿಟ್ಟು ನೋಡಲೆದಾಡಲೆಂದಿರಿಸಿರ್ದ ನಿಡುಮಿಸುನಿಗೞೆಯೊ ತಿಳಿಯೆ ||
ಸುರರೆಂಬ ಬೊಂಬೆಗಳಜಂ ಕುಣಿಸಲಾಗಿಸಿದ |
ವರಸುವರ್ಣದ ಕಂಬಸೂತ್ರಮೆನೆ ಚಿತ್ರಮಾ |
ಯ್ತುರುಮೇರುಗಿರಿ ಲೋಕದಾಲೋಕನಕ್ಕೆ ಹದವರಿ ನಿರ್ಜರೌಘದ ಸಿರಿ ||

### ಕೈಲಾಸ

ತಳತಳಿಸುವೆಳಮುತ್ತುಗಳ ರಾಶಿಯೋ ಸಮು |
ಜ್ಜ್ವಳಿಪ ಸತ್ಕುಲಿಶಸೊಟ್ಟಿಲೊ ವಿಸ್ಫುರ್ಜಿ ಮಂದ್ಯೈಸಿ |
ಬಳೆದು ಬೆಳ್ವೆಳಿಪ ಬೆಳ್ದಿಂಗಳೊಬ್ಬುಳಿಯೊ ಲೋಕದೊಳು ಪಬಿಗದ ಪುಣ್ಯದ ||
ಗೆಳಸೊ ಪೀಯೂಷ ಭಾಸ್ಕರರಶ್ಮಿಯಿಂದ ಕಾ |
ಯ್ದೊಳುಗಟ್ಟಿಗೊಂಡ ಬಗೆಯೋ ಶಾರದಾಭ್ರಸಂ |
ಕುಳವೆನುತೆ ಏದಿದು ಮುದ್ದೆಯನಾಗಿಸಿದನಜನೆನಲ್ ಬೆಳ್ಳಿವೆಟ್ಟೆಸೆದುದು ||

### ಸ್ತ್ರೀಯರು

ರಸವೆ ರಂಜಿಸುವಂತೆ ಚೆಲ್ವೆ ಚೈತನ್ಯವಾಂ |
ತೆಸೆವಂತೆ ಚೋದ್ಯಮೇ ಹೃದ್ಯಮಪ್ಪಂತೆ ಭಾ |
ವಿಸಲಲಂಕಾರಮಾಕಾರಮಾಂತಂತೆ ಕಲರುತಿಯೆ ಮಾತಾಡುವಂತೆ ||
ಒಸೆದು ಚಾತುರ್ಯಮೇ ಚಾರುತನವೆತ್ತು ಶೋ |
ಭಿಸುವಂತೆ ಕಲೆಯೆ ಕಾಲ್ದಳೆದು ನಡೆವಂತೆ ಸವಿ |
ಯೊಸೆದು ಸೊಲಿಡುವಂತೆ ವನಿತೆಯರ್ ನಡೆತಂದರುಪವನಕೆ ವಹಿಲದಿಂದ ||

---

## ಪರ್ವತಶಿವಯೋಗಿ. ಸು. 1650

ಈತನು ಬಸವೇಶ್ವರದೇವರ ವಚನಸಾರಾರ್ಥ, ಮುರಿಗೆಯ ಶಾಂತ ವೀರೇಶನ ಪ್ರಭುಲಿಂಗಕಂದದ ಟೀಕೆ, ಕರಸ್ಥಲದ ನಾಗಲಿಂಗತ್ರಿಪದಿಯ ಟೀಕೆ, ಗುರುಸ್ತೋತ್ರತ್ರಿಪದಿಯ ಟೀಕೆ, ಚೆನ್ನಬಸವನ ಕರಣಹಸುಗೆಯ ಟೀಕೆ, ಚೆನ್ನಬಸವನ ಮಿಶ್ರಾರ್ಪಣದ ಟೀಕೆ ಇವುಗಳನ್ನು ಬರೆದಿದ್ದಾನೆ.

ಇವನು ವೀರಶೈವಕವಿ; "ಸಿದ್ಧಲಿಂಗಾಖ್ಯಸ್ವಾಮಿಗಳ ಜ್ಞಾನೋಪದೇಶ ಪಾತ್ರನು, ಬಾಲೇಂದುಪುರದ ಹರೀಶ್ವರಶಾಂತವೀರೇಶ್ವರಕರಸರಸಿಜಜಾತನು" ಎಂದು ಹೇಳಿಕೊಂಡಿದ್ದಾನೆ. ಮುರಿಗೆಯ ಶಾಂತವೀರೇಶನ(ಸು 1530) ಗ್ರಂಥಕ್ಕೆ ಇವನು ಟೀಕೆಯನ್ನು ಬರೆದಿರುವುದರಿಂದ ಅವನ ಕಾಲಕ್ಕಿಂತ ಈಚೆಯವನು ಎಂಬುದು ಸ್ಪಷ್ಟವಾಗಿದೆ. ಇವನ ಕಾಲವು ಸುಮಾರು 1650 ಆಗಬಹುದೆಂದು ತೋರುತ್ತದೆ.

ಇವನ ಟೀಕೆಗಳಲ್ಲಿ

## ಮುರಿಗೆಯಶಾಂತವೀರೇಶನ ಪ್ರಭುಲಿಂಗಕಂದದ ಟೀಕೆ.

ಇದರಿಂದ ಒಂದುಕಂದದ ಟೀಕೆಯನ್ನು ತೆಗೆದು ಬರೆಯುತ್ತೇವೆ---

ರವಿಗಂಗಾಪಿಂಗಳೆಯಾ | ಸವಿಗದಿರನ ಜಗುನೆಯಿಡೆಯನಲಕಸತಿಯ |
ಗ್ಗವನಿಸುಷುಮ್ನೆಯ ಸಂಗಮ|ದವಗಡದುರುಗಿರಿಯ ರಾಜಲಿಂಗಪ್ರಭುವೇ ||

ಟೀಕೆ|| ರವಿ, ಸೂರ್ಯನು. ಗಂಗಾ, ಗಂಗೆಗಳು ಸಂಬಂಧವಾಗಿರ್ದಂಥ. ಪಿಂಗಲೆಯ, ಪಿಂಗಳಾನಾಡಿಯ. ಸವಿಗದಿರನ, ಚಂದ್ರನ ಸಂಬಂಧವಾದ. ಜಗುನೆಯ, ಯಮುನಾನದಿಗಳನುಳ್ಳ. ಈಡೆಯ, ಎಡದನಾಡಿಯ. ಅನಲ, ಅಗ್ನಿ. ಕಸತಿಯರ್ಗೆ, ಸರಸ್ವತಿಯೆಂಬ ನದಿಗಳಿಗೆ. ಅವನಿ, ಸ್ಥಾನವಾದಂಥ ಸುಷುಮ್ನೆಯ, ಸುಷುಮ್ನಾನಾಡಿಗಳ. ಸಂಗಮದ, ಕೂಡಲಸಂಗಮವೆಂಬಂಥ. ಅವಗಡದ, ದುರ್ಘಟವಾದಂಥ. ಉರು, ವಿಶಾಲವಾದ. ಗಿರಿಯ, ಕೈಲಾಸಗಿರಿಯನುಳ್ಳ ಶೃಂಗಾಟಚಕ್ರದಲ್ಲಿ. ಭ್ರುಕುಟಿ ಭ್ರೂಮಧ್ಯ ಕೂರ್ಚ ಶೃಂಗಾಟಕಚತುಃಪಥವೆಂದರೆ, ಪರ್ಯಾಯನಾಮಂಗಳು. ರಾಜ, ಪ್ರಕಾಶಿಸುತಿರ್ದಂಥ. ಲಿಂಗಪ್ರಭುವೆ, ಎಲೆ ಇಷ್ಟಲಿಂಗದೇವನೆ. ಪಾಲಿಪುದು, ರಕ್ಷಿಸುವುದು.

ಕೊನೆಯಲ್ಲಿ ಈ ಗದ್ಯವಿದೆ--

ಶ್ರೀಮತ್ಸರ್ವಜ್ಞತ್ವಾದಿಷಟ್ಶಕ್ತಿಷಡಂಗಸಂಯೋಗಷಟ್ಸ್ಥಲಬ್ರಹ್ಮಜ್ಞಾನವಾರಂಗತ ವರ್ಣಾಶ್ರಮಾತೀತ ವೀರಮಾಹೇಶ್ವರಾಚಾರ್ಯ ಸಿದ್ಧಲಿಂಗಾಖ್ಯಸ್ವಾಮಿಗಳ ಜ್ಞಾನೋಪದೇಶಪಾತ್ರನಾದ ಬಾಲೇಂದುಪುರದ ಹರೀಶ್ವರಶಾಂತವೀರೇಶ್ವರಕರಸರಸಿಜಜಾತ ಶ್ರೀವೀರಮಾಹೇಶ್ವರಪರ್ವತಶಿವಯೋಗಿ ವಿರಚಿತಾ.

## ಕರಸ್ಥಲದ ನಾಗಲಿಂಗತ್ರಿಪದಿಯ ಟೀಕೆ.

ಇದರಿಂದ ಒಂದು ತ್ರಿಪದಿಯ ಟೀಕೆಯನ್ನು ತೆಗೆದು ಬರೆಯುತ್ತೇವೆ-

ಎಂಟುಮೊನೆಯಮೇಲೆಯೇಱಿ ದುರ್ಗವ ಮೂಱ |
ದಾಂಟಿ ಅರಣ್ಯವ ಸುಡುತಲಿ | ದಾಂಟಿ ಅರಣ್ಯವ ಸುಡುತಲಿ ನರಿನಾಯ |
ಬೆಂಟೆಯನಾಡಿ ಮೆಱೆದುದು ||

ಟೀಕೆ|| ಎಂಟುಮೊನೆಯಮೇಲೆ, ಅಷ್ಟಾವರಣಾಷ್ಟವಧಾನದಲ್ಲಿ. ಏಱಿ, ಕ್ರಿಯಾಜ್ಞಾನಾಚರಣೆಯಿಂದಾರೋಹಿಸಿ ದುರ್ಗವ ಮೂಱ ದಾಂಟಿ, ತನುತ್ರಯಮಲತ್ರಯಂಗಳೆಂಬ ಗಿರಿಗಡಹುಗಳನು ದೀಕ್ಷಾತ್ರಯಂಗಳಿಂ ನಷ್ಟವಮಾಡಿ. ಲಿಂಗತ್ರಯಂಗಳ ಸಂಬಂಧಿಸಿ ತ್ರಿವಿದಪದಾರ್ಥವನು ಗುರುಲಿಂಗಜಂಗಮಕ್ಕೆ ಸಮರ್ಪಿಸಿ ಪ್ರಸಾದತ್ರಯವ ಮಾಡಿ ಲಂಘಿಸಿ ಎಂಬುದರ್ಥ. ಅರಣ್ಯವ, ಭವಾಟವಿಯನು. ಸುಡುತಲಿ,

ಸಮರಸಜ್ಞಾನಾಚರಣೆಯಿಂ ದಹಿಸುತಲಿ. ನರಿ, ಮನವೆಂಬಸೃಗಾಲನನು. ನಾಯಿ, ಪಂಚೇಂದ್ರಿಯಂಗಳೆಂಬ ಕುಕ್ಕುರಂಗಳನು. ಬೇಂಟೆಯನಾಡಿ, ಸಂಹರಿಸಿ. ಮೆಱೆವುದು, ವಿಡಂಬಿಸಿದುದು.

ಪ್ರವೃತ್ತಿಯೞಿದು ನಿವೃತ್ತಿಯಿಂ ಶರಣನಾಚರಿಸಿ ವಿನೋದಿಸುತಿರ್ದನೆಂಬುದು ತಾತ್ಪರ್ಯ.

ಕೊನೆಯ ಗದ್ಯದಲ್ಲಿ "ಸರ್ವಜ್ಞತ್ವಾದಿಷಟ್ಛಕ್ತಿ'' ಎಂಬುದಕ್ಕೆ ಪ್ರತಿಯಾಗಿ "ಸ್ಥೂಲಸೂಕ್ಷ್ಮಕ್ಕೆ ಕಾರಣ" ಎಂದಿದೆ.

---

## ಮರಿರಾಜವಟ್ಟೇಶ. ಸು. 165 )

ಈತನು ಪ್ರಭುನಟನತಾರಾವಳಿಯನ್ನು ಬರೆದಿದ್ದಾನೆ. ಇವನು ವೀರಶೈವಕವಿ; 'ಪ್ರಸನ್ನದೇಶಿಕನ ಕುಮಾರ' ಎಂದು ಹೇಳಿಕೊಂಡಿದ್ದಾನೆ. 'ಗರುಣಿಯ ಬಸವೇಶಂ ಪ್ರಭು । ಗುರುನುತಿಯಂ ಮಾಳ್ಪುದೆಂದು ಕರೆದೆ ನಗಱಿಪಲ್ ‖ ವಿರಚಿಸಿದೆಂ' ಎನ್ನುತ್ತಾನೆ. ಈ ಗರುಣಿ ಬಸವೇಶನಾರೋ ತಿಳಿಯದು. ಸಿದ್ಧನಂಜೇಶನು (ಸು. 1650) ರಾಜವಟ್ಟ್ಯಾರಾಧ್ಯನೆಂಬ ಒಬ್ಬ ಕವಿಯ ಕೃಪೆಯಿಂದ ತನ್ನ ರಾಘವಾಂಕಚಾರಿತ್ರವು ಪೂರ್ತಿಯಾಯಿತು ಎಂದು ಹೇಳುತ್ತಾನೆ. ಈ ಕವಿಗೂ ಅವನಿಗೂ ಸಂಬಂಧವೇನಾದರೂ ಇರಬಹುದೋ ಏನೋ ತಿಳಿಯದು. ಇವನ ಕಾಲವು ಸುಮಾರು 1650 ಆಗಿರಬಹುದೆಂದು ಊಹಿಸುತ್ತೇವೆ.

ಇವನ ಗ್ರಂಥ

### ಪ್ರಭುನಟನತಾರಾವಳಿ.

ಇದು ಹಾಡಿನರೂಪವಾಗಿದೆ; 27 ನುಡಿಗಳಿವೆ; ಕೊನೆಯಲ್ಲಿ ಮಾತ್ರ 2 ಕಂದಗಳಿವೆ. ಈ ಗ್ರಂಥವನ್ನು ಕವಿ 'ಪ್ರಭುದೇವನು ನಟಿಸಿದ ಶೃಂಗಾರದ ನುತಿ' ಎನ್ನುತ್ತಾನೆ. ಇದರಲ್ಲಿ ಮುಖ್ಯವಾಗಿ ಪ್ರಭುದೇವನು ಬನವಸೆಯ ಮಧುಕೇಶ್ವರನ ಮುಂದೆ ಒಂದು ಮದ್ದಳೆಯನ್ನು ಹೆಗಲೊಳಾಂತು ನರ್ತಿಸಲು ಮಾಯೆಗೆ ತಿಳಿದು ಅವನನ್ನು ಕರಸಿ ತನ್ನ ಮದ್ದಳೆಗನನ್ನಾಗಿ ಮಾಡಿಕೊಳ್ಳಲು ಅವನು ಅವಳ ನರ್ತನಕ್ಕೆ ಮದ್ದಳೆಬಾರಿಸಿದಾಗ ಅವಳು ಮೋಹಿತಳಾದ ವಿಷಯವು ಹೇಳಿದೆ. ಈ ಗ್ರಂಥದಿಂದ ಒಂದು ನುಡಿಯನ್ನು ತೆಗೆದು ಬರೆಯುತ್ತೇವೆ--

ಹರನಾಗ ಪ್ರಭುವ ಕರೆದೀಮರ್ತ್ಯಲೋಕದಿ | ಕರವೂರ ಸುಜ್ಞಾನಿನಿರಹಂಕಾರರು ನಿನ್ನ | ಚರಣಕಮಲಗಳನು ಹಾರಿಕೊಂಡಿರ್ಪರು | ನಿರುತದಿಂದವಗೆ ಪ್ರಸನ್ನನಾಗುತೆ ನೀನು | ದೊರೆಪಟ್ಟಗಳನಾಳಿ ಮುಕ್ತಿಮಾರ್ಗವ ಪೇಳು | ಶರಣಜಾಲವ ಕೂಡಿ ಮಾಯೆಯನೀಡಾಡಿ |ಪರಮಪಾವನರೂಪಗೊಗ್ಗಯ್ಯನೆಂದೆಂಬ | ಶರಣನು ಕುಸುಮಸೋಪವನು ರಕ್ಷಿಪನಲ್ಲಿ |ಗಿರದೆ ನೀಪೋಗಿಯನುಮಿಷನ ಲಿಂಗಾಂಗವ| ಬೆರಸಿ ನಿನ್ನೊಳಗಿಂಬಿಡುತ್ತೆಯಜಗಣ್ಣಗೆ | ಹರಭಕ್ತಿಮುಕ್ತಾಯಮ್ಮಗೆ ಮೋಕ್ಷವನು ಕೊಟ್ಟು | ಗುರುಸಿದ್ಧರಾಮಗೆ ನಿಜವಿತ್ತು ಕಲ್ಯಾಣ | ಪುರದ ಬಸವಾದಿಗಳ ಗಣವ ಕಾಣುತೆ ಬೇಗ | ಗುರುಚೆನ್ನಬಸವೇಶನಿಂದಮುಪದೇಶವ | ಸ್ಥಿರವಾಗಿ ಕೊಡಿಸಿ ಬೊಂತಲದೇವಿಯಕ್ಕಗೆ | ಮರುಳುಶಂಕರದೇವರಿವರನುಸಲಹಿ ಹಿಮ| ಗಿರಿಯ ನೋಡುತ್ತ ಶ್ರೀಶೈಲಕ್ಕೆ ಪೋಗಿ ನಿ|ನ್ನಿರವನು ಗೋರಕ್ಷಗರುಹಿ ಮುನಿತತಿಯ | ಸಬರನ ಸಲಹುತೆ ಬೇಗ | ಕಲ್ಯಾಣಕೆ ಹರುಷದಿಂದಲಿ ನೀ ಪೋಗ | ಲೀಕ್ಷಿಸುತೆಯುವರ ಬಸವೇಶನಾಗ | ಆದಿರ್ದಂದು ಕರಗಳ ಮುಗಿಯೆ ಪೂಗ | ಆಂತಿಹ ಶೂನ್ಯಹರಿಸೀಠವೆಸೆಯೆ ರಾಗ | ವೆರಸಿ ನೀನ ಗುರುವಾಗಿ ಮೂರ್ತಿಗೊಳ್ಳೆನಲೊಪ್ಪಿದ ವಿರಾಗ ||

---

ರುದ್ರ. ಸು. 1650

ಈತನು ಕರಸ್ಥಲದ ನಾಗಯ್ಯನ ಚರಿತೆಯನ್ನು ಬರೆದಿದ್ದಾನೆ. ಇವನು ವೀರಶೈವಕವಿ; ಕಥಾನಾಯಕನ ಕಾಲವು ಸುಮಾರು 1430 ಆದುದರಿಂದ ಕವಿ ಆ ಕಾಲಕ್ಕೆ ಈಚೆ ಇದ್ದಿರಬೇಕು. ಶ್ರೀರಂಗಪಟ್ಟಣವನ್ನು ವರ್ಣಿಸಿರುವುದರಿಂದ ಆ ಸ್ಥಳದವನಾಗಿದ್ದರೂ ಇರಬಹುದು. ನಮಗೆ ದೊರೆತ ಈ ಗ್ರಂಥದ ಪ್ರತಿ 1749 ರಲ್ಲಿ ಬರೆದುದಾದುದರಿಂದ ಕವಿ ಈ ಕಾಲಕ್ಕೆ ಹಿಂದೆ ಇದ್ದಿರಬೇಕು; ಸುಮಾರು 1650 ರಲ್ಲಿ ಇದ್ದಿರಬಹುದೆಂದು ತೋರುತ್ತದೆ. ಪೂರ್ವಕವಿಗಳಲ್ಲಿ ಬಾಣ, ಹರಿದೇವ, ರಾಘವಾಂಕ, ಕಾಳಿದಾಸ, ಶಂಕರ ಇವರುಗಳನ್ನು ಸ್ಮರಿಸಿದಾನೆ.

ಇವನ ಗ್ರಂಥ

ಕರಸ್ಥಲದ ನಾಗಯ್ಯನಚರಿತೆ

ಇದು ಸಾಂಗತ್ಯದಲ್ಲಿ ಬರೆದಿದೆ; ಅಲ್ಲಲ್ಲಿ ಕೆಲವು ಷಟ್ಪದಿಗಳೂ ಇವೆ; ಸಂಧಿ 11, ಪದ್ಯ 952. ಇದರಲ್ಲಿ ಕರಸ್ಥಲದ ನಾಗಿದೇವನ[1] ಚರಿತವು

---

1. 69 ನೆಯ ಪುಟವನ್ನು ನೋಡಿ.

ಹೇಳಿದೆ.1 ಗ್ರಂಥಾವತಾರದಲ್ಲಿ ಶಿವಸ್ತುತಿ ಇದೆ.ಬಳಿಕ ಕವಿ ಸರಸ್ವತಿ,ಗಣೇಶ ವೀರಭದ್ರ ಇವರುಗಳನ್ನು ಸ್ತುತಿಸಿದ್ದಾನೆ. ಈ ಗ್ರಂಥದಿಂದ ಕೆಲವು ಪದ್ಯ ಗಳನ್ನು ತೆಗೆದು ಬರೆಯುತ್ತೇವೆ—

ಸೂರ್ಯೋದಯ

ಬಿರಿಯಲು ರಾಜೀವ ಹರಿಯಲು ತಾರಗೆ | ಮೊರೆಯಲು ಶುಕಪಿಕವಿಂಡು |
ಧರೆಯೊಳು ಧವಳವು ಮೆಱೆಯಲು ಮೋಹಿಪ | ಪರಿಯಲಿ ತರಣಿ ತೋಱಿದನು ||

ಉದ್ಯಾನ

ಧರೆಯೊಳು ದ್ರಾಕ್ಷಿಯು ಸರಿಯಿಲ್ಲವೆಂದಿರೆ | ನೆರೆದು ಸೋಲಿಸಲು ಖರ್ಜೂರ |
ಸ್ಥಿರವಾಗಿ ಸ್ವಾದವ ವಿರಚಿಸೆನಲು ಕೇಳಿ | ಹರುಷದಿ ನಗಲು ದಾಳಿಂಬ ||
ಬುಡವನಿಬ್ಬಗಿಮಾಡಿಯೊಡೆದು ಬೆಳಲಕಾಯಿ | ಪೊಡವಿಯೊಳಿದಿರಿಲ್ಲವೆನಲು |
ಸಡಗರ ಸಾಕೆಂದು ನುಡಿವ ಹಿಪ್ಪಲಿ ನಾಚಿ | ಯೊಡಲೆಲ್ಲ ಮುಳ್ಳಾದೋಱಿದುವು||

ಸ್ತ್ರೀವರ್ಣನೆ

ಪವಳವೊ ಮಧುರಸಕವಳದ ಘುಟಿಕೆಯೊ | ಸವಿಸುಧೆರತ್ನಾಧರವೋ |
ನವರತ್ನಚೀಲವೊ ಕಪ್ಪುರದ ಕರಡಿಗೆಯೊ | ಯುವತಿಯ ಬಂದುಗೆವಾಯೋ ||
ಪಾಶವೊ ಇನಿಯಗೇ ಬೀಸುವ ಬಲೆಗಳೊ | ಮೋಸದ ಲತೆಯ ತೋಳುಗಳೋ |
ಕೇಸದ ಕೇದಗೆ ಭಾಸುರಗಱಿಗಳೊ | ಲೇಸಾದ ನಖವೊ ವ್ಯಗ್ರಗಳೋ ||

---

## ವರಹರಿ, ಸು 1650

ಈತನು ಪ್ರಹ್ಲಾದಚರಿತ್ರೆಯನ್ನು ಬರೆದಿದ್ದಾನೆ. ಇವನು ಬ್ರಾಹ್ಮಣಕವಿಯೆಂದು ತೋರುತ್ತದೆ. ಕಾವೇರೀತೀರದಲ್ಲಿರುವ ಬಲ್ಲಳಪುರದ ಪ್ರಭುವೆಂದೂ ವೀರವೈಷ್ಣವಸಂಗಪಗಳ ಕುಮಾರನೆಂದೂ “ ಪೊಸರ ಸಾಲಂಕಾರ ಜಾಣ್ನುಡಿ | ಯೆಸೆವ ಪದಬಂಧಗಳ ಶಬ್ದದ ಗಸಣಿಯಱಿತವನಲ್ಲ” ಎಂದೂ ಹೇಳಿಕೊಂಡಿದ್ದಾನೆ. ನೀನೇ ನನ್ನ ನಾಲಗೆಯಲ್ಲಿದ್ದು ನುಡಿಸಬೇಕೆಂದು ಗರುಡಗಿರಿವಾಸನನ್ನು ಪ್ರಾರ್ಥಿಸುವುದರಿಂದ ಈತನ ಊರಾದ ಬಲ್ಲಳಪುರಕ್ಕೆ ಸಮೀಪದಲ್ಲಿಯೇ ಗರುಡಗಿರಿ ಇದ್ದಿರಬಹುದು. ಇವನು ಸುಮಾರು 1650 ರಲ್ಲಿ ಇದ್ದಿರಬಹುದೆಂದು ಊಹಿಸುತ್ತೇವೆ.

---

1. ಇವನ ಸ್ಥಳ ಬೊಮ್ಮೂರು ಎಂದು ಹೇಳಿದೆ. ಇದು ಶ್ರೀರಂಗಪಟ್ಟಣದ ದಕ್ಷಿಣಕ್ಕೆ ಇರುವ ಬೊಮ್ಮೂರಾಗಿರಬಹುದೋ ಏನೋ ತಿಳಿಯದು.

ಈತನ ಗ್ರಂಥ

## ಪ್ರಹ್ಲಾದಚರಿತ್ರೆ.

ಇದು ಭಾಮಿನೀಷಟ್ಪದಿಯಲ್ಲಿ ಬರೆದಿದೆ; ಸಂಧಿ 17, ಪದ್ಯ 1111[1]. ಇದರಲ್ಲಿ ಶುಕನು ಪರೀಕ್ಷಿತನಿಗೆ ಹೇಳಿದ ಭಾಗವತದೊಳಗಣ ಪ್ರಹ್ಲಾದಚರಿತವು ವರ್ಣಿತವಾಗಿದೆ. ಗ್ರಂಥದ ಉತ್ಕೃಷ್ಟತೆಯನ್ನು ಕವಿ ಈರೀತಿಯಾಗಿ ಹೇಳಿದ್ದಾನೆ-

ಹೊಸಕುಸುಮಪರಿಮಳವನಳಿ ಭುಂ | ಜಿಸುವವೊಲು ಜೀಮೂತನಾದಗ |
ಳಿಸೆಯೆ ಶಿಖಿ ಕುಣಿವವೊಲು ನೈದಿಲ ಮುಗುಳು ಚಂದ್ರಮನ ||
ಮುಸುಡನೀಕ್ಷಿಸುವಂತೆ ಬೆಲ್ಲದ | ರಸವ ಡಗೆಸತ್ತಿದವ ಸವಿವವೊ |
ಲೆಸೆವುದೀಹರಿಭಕ್ತಿಸಾರದ ಸುಖವು ಕೇಳ್ದರಿಗೆ ||

ಗ್ರಂಥಾವತಾರದಲ್ಲಿ ನರಸಿಂಹಸ್ತುತಿ ಇದೆ. ಬಳಿಕ ಕವಿ ಗಣಪತಿ, ಸರಸ್ವತಿ, ಲಕ್ಷ್ಮೀನಾರಾಯಣ, ನಂಜುಂಡ ಇವರುಗಳನ್ನು ಸ್ತುತಿಸಿದ್ದಾನೆ. ಗ್ರಂಥಾಂತ್ಯದಲ್ಲಿ ಕೆಲವು ಪ್ರತಿಗಳಲ್ಲಿ ಈ ಗದ್ಯವಿದೆ-

ಇದು ವಿನಮದರವಿಂದಭವಪುರಂದರಾದಿಬೃಂದಾರಕಬೃಂದಬಂಧುರಮೌಳಿಘಟಿತಮಣಿಪ್ರಭಾನೀರಾಜಿತಶ್ರೀಮುಕುಂದಚರಣಾರವಿಂದಸೇವಾಪ್ರಭಾವಸಮಾಸಾದಿತಕವಿತಾವೈಭವ ಶ್ರೀನರಹರಿಕವಿವಿರಚಿತಕರ್ಣಾಟಕಪ್ರಹ್ಲಾದಚರಿತ್ರೆಯೊಳ್.

ಈಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ-

### ಹಿರಣ್ಯಕಶಿಪುಪ್ರಹ್ಲಾದರ ಸಂವಾದ

ಆದೊಡೆಲೆಪ್ರಹ್ಲಾದ ಕೇಳ್ಳೈ | ಬೂದಿ ಮುಚ್ಚಿದ ಕೇಡವಾಮಧು |
ಸೂದನನ ನಂಬದಿರು ತಿಮಿರದ ರವಿಯ ಸಖತನದ ||
ಗಾದೆಯಹುದಂತ್ಯದಲಿ ನಮ್ಮೊಳು | ವಾದಿಸದೆ ಬಿಡು ಬೇಗದಲಿ ಲ |
ಕ್ಷ್ಮೀಧವನನೆಂದಸುರ ಬೋಧಿಸಿದನು ಕುಮಾರಂಗೆ ||
ಅಱಸುತಿಹ ಲತೆ ಕಾಲ ತೊಡಕಲು | ಹಱಿದು ಬಿಸುಡುವರುಂಟೆ ಸಿರಿ ಒರ |
ಲಱದಱದು ಪದದೊದೆದು ನೂಕುವರುಂಟೆ ಹಸಿದಿರಲು ||
ಕರೆದು ಕ್ಷೀರಾನ್ನವನು ಬಡಿಸಲು ಹೊಱಗೆ ಸೂಸುವರುಂಟೆ ಸಿರಿಧರ |
ಸ್ಮರಣೆ ಬಾಯಿಗೆ ಬರಲು ನಾನದನೆಂತು ಬಿಡಲೆಂದ ||

---

1 ಒಂದು ಓಲೆಯ ಪ್ರತಿಯಲ್ಲಿ ಸಂಧಿ 16, ಪದ್ಯ 1114 ಎಂದಿದೆ.

## ಶೈಶವ

ಹಿಡಿದು ಬಿಸಿಬಿಸಿನೀರನೆಱೆಯಲು । ನುಡಿಯಲಱ್ರೆಯನೆ ತನ್ನೊಳಗೆ ಕಂ ।
ಗೆಡುತ ನಸುಸೊಪ್ಪಾಗಿ ಬೀಱುತ ಹಸದಱಲು ಮೊಲೆಯು ॥
ಕೊಡದೆ ದೃಷ್ಟಿಯು ಮಂತ್ರಿಸುತ ಕ । ಪ್ಪಿಡುತ ನೆಟ್ಟೆಯ ಮುಱಹಿ ತೂಪಿರಿ ।
ದೊಡನೆ ತೊಟ್ಟಿಲ ತೂಗುತಿಹರೀಮರುಳುನರರೆಂದ ॥
ನಿಚ್ಚ ಮಲದೊಳು ಹೊರಳಿ ಮುಗ್ಗುಲೊ । ಳುಚ್ಚೆಹೊಯ್ದರುವೆಗಳ ಬಲುಬಲು ।
ಗೂಚ್ಚೆನಾತವ ಸೈರಿಸದೆ ಕೊಕ್ಕರಿಸಿ ಕೈಕಾಲ ॥
ಬೆಚ್ಚಿ ಬೆದಱುತ ಹಸಿದು ಚರಣವ । ಕಚ್ಚಿ ಹೀರುತ ಬೇವುದೀಪರಿ ।
ಹುಚ್ಚರೈ ಸಂಸಾರಸುಖವೆಂದೆಂಬರಕಟೆಂದ ॥

## ಯೌವನ

ಮೇಲೆ ಪ್ರಾಯಕನಾಗಿ ಕಱುನ । ಕೋಲ ಗಾಯಕೆ ತಲ್ಲಣಿಸಿ ಪರ ।
ರಾಲಯಂಗಳ ಹೊಕ್ಕು ಬವಣೆಗೆ ಬಂದು ನಾರಿಯರ ॥
ವೇಳಗಳನೇ ಕಾದು ಹೊಟ್ಟೆಗೆ । ಕೂಟ ಕಾಣದೆ ಹಸಿದು ಚಿಂತಿಸಿ ।
ಗೋಳಡುತಲಿಹನಿರುಳುಹಗಲೆವ್ವನದೊಳಿಂತೆಂದ ॥

## ವಾರ್ಧಕ್ಯ

ಉದುರಿ ಹಲು ಬೆನ್ನುಱಗಿ ಕೈಕಾ । ಲುಡುಗಿ ಪುಸ್ತಕ ನಡುಗಿ ರೋಗದ ।
ಸದಮುದದ ಬಲೆಯೊಳಗೆ ಬಿದ್ದತಿಕೆಮ್ಮಿ ಕೆಕ್ಕರಿಸಿ ॥
ಎದೆಯೊಡೆದು ಕಂಗೆಟ್ಟು ಗೋಳಿ । ಟ್ಟೊದಱುತೀಪರಿ ನರನು ವೃದ್ಧಾ ।
ಪ್ಯದೊಳು ಬಿದ್ದಿಹನಕಟ ಸುಡುಸುಡು ಬದುಕು ಬೇಡೆಂದ ॥

## ಅವಸಾನಕಾಲ

ಇತ್ತ ರೋಗದವಸ್ಥೆ ಒಟ್ಟಿಕಿ । ನ್ನತ್ತ ಸಾಲಿಗರುಱುಬೆ ಸತಿಸುತ ।
ಮಿತ್ರರುಗಳೇನುಂಟು ಧನ ಹೇಟ್ಟೆಂಬ ನಿಷ್ಠುರತೆ ॥
ಎತ್ತಿ ನಾರ್ವೇರುಗಳ ಕುಡಿಸುವ । ರುತ್ತರದ ಬೊಬ್ಬಾಟ ಯಮನವ ।
ರೊತ್ತರದ ಬಲುಭೀತಿ ಮರಣಕೆ ಸಮತೆಗೊಡದೆಂದ ॥
ಬಿದ್ದು ನಾಲಗೆ ಬಾಯ ಬಸಳೆಗ । ಳೆದ್ದು ನಡೆನುಡಿಯುಡುಗಿ ಮಱವೆಯು ।
ಹೊದ್ದಿ ನೆಟ್ಟಿ ಮುಕ್ಕುರಿಕಿ ಕರಚರಣಗಳ ನರ ಸೇದಿ ॥

ಒದ್ದುಕೊಂಡತಿಮೊರೆದು ಹಲುಗಡಿ | ದದ್ದು ಕಣ್ಣುಗಳುಸಿರು ಭೋರಿ |
ಟ್ಟೆದ್ದುಕೇಟುತಲಿಹನು ನರನೀಪರಿಯ ಮರಣದಲಿ ||

ಸ್ತ್ರೀಯರು

ಮನುಮತನ ಮನೆಗಣೆಗಳೋ ಮುಸಿ | ಜನದ ಚಿತ್ತಾಂಬುಧಿಯ ಕಲಕಲು |
ಜನಿಸಿದಾನೆಗಳೋ ವಿಚಾರಿಸಲರಿದು ಯೋಗಿಗಳ ||
ಮನವನೊಡೆಹೊಯ್ವಸಿಗಳೋ ಸುರ | ವನಿತೆಯರುಗಳೊ ವಿಟರ ಭಾಗ್ಯದ |
ವನವೊ ವರ್ಣಿಸಬಲ್ಲ ಕವಿಯಾರರಸ ಕೇಳೆಂದ ||

---

## ವೆಂಕಕವಿ. ಸು. 1650.

ಈತನು ವೆಂಕಟೇಶ್ವರಪ್ರಬಂಧವನ್ನು ಬರೆದಿದ್ದಾನೆ. ಇವನು ಬ್ರಾಹ್ಮಣಕವಿ; ಸಿಂಗಪಭಟ್ಟನ ಮಗನು. "ಹರಿ ಕೋಟೆಬೆಟ್ಟದೊಳ್ ನಿಂದಂ ಕೋಟೆರಾಯಾಖ್ಯೆಯಿಂ" ಎಂದು ಆಶ್ವಾಸಗಳ ಅಂತ್ಯದಲ್ಲಿರುವುದರಿಂದಲೂ ಬೆಟ್ಟದಕೋಟೆರಾಯನ ಸ್ತುತಿ ಅಲ್ಲಲ್ಲಿರುವುದರಿಂದಲೂ ಕವಿ ಬೆಟ್ಟದಕೋಟೆಯವನೆಂದೂ ಗ್ರಂಥವು ಅಲ್ಲಿಯ ದೇವರವಿಷಯವಾದುದೆಂದೂ ತೋರುತ್ತದೆ. ಗುಂಡಲಪೇಟೆ ತಾಲ್ಲೂಕಿನಲ್ಲಿರುವ ಹಿಮವದ್ಗೋಪಾಲಸ್ವಾಮಿಬೆಟ್ಟದ ಪ್ರಾಂತಕ್ಕೆ ಬೆಟ್ಟದಕೋಟೆಯೆಂದು ಪೂರ್ವದ ಹೆಸರು. ಕವಿಯ ಕಾಲವು ಸುಮಾರು 1650 ಆಗಿರಬಹುದೆಂದು ತೋರುತ್ತದೆ. ತನ್ನ ಕವಿತೆಯವಿಷಯವಾಗಿ ಹೀಗೆ ಹೇಳಿಕೊಂಡಿದ್ದಾನೆ—

ಧೀಮಂತಂ ಕವಿವೆಂಕನಾತನ ವಚಃಪ್ರೌಢಿಪ್ರಭಾವಂ ಮಹಾ |
ಭೂಮಿಭೃತ್ಸಭೆಯಲ್ಲಿ ನೂತ್ನಕವಿತಾವಿಖ್ಯಾತಿ ವಿದ್ವಾಂಸರಿಂ ||
ಮಾಮಾಸ್ತೋತ್ರತೆವೆತ್ತು ಲೋಕದೆ ನೆಗಳ್ತಿತ್ತಾ ಸುಧಾಧಾರೆವೋಲ್ |

ಈತನ ಗ್ರಂಥ

### ವೆಂಕಟೇಶ್ವರಪ್ರಬಂಧ.

ಇದು ಚಂಪೂರೂಪವಾಗಿದೆ; ಬೆಟ್ಟದಕೋಟೆಯ ವೆಂಕಟೇಶ್ವರಸ್ವಾಮಿಯ ವಿಷಯವಾದ ಗ್ರಂಥವು. ನಮಗೆ ದೊರೆತ ಪ್ರತಿ ಅಸಮಗ್ರ. ಈ ಗ್ರಂಥದ ಉತ್ಕೃಷ್ಟತೆಯನ್ನು ಕವಿ ಹೀಗೆ ಹೇಳಿದ್ದಾನೆ—

ಈಕೃತಿ ಧಾತ್ರಿಗಲಂಕೃತಿ | ಮಾಕವಿಗಳ ಮನದ ಗೆಲವಿನಾಕಾರಂ ತಾಂ |
ಲೋಕದ ಸಂತೋಷಂ ಸುವಿ | ವೇಕಿಗಳಿಷ್ಟಾರ್ಥಸಿದ್ಧಿ ಧರಣೀತಳದೊಳ್ ||

ಆಶ್ವಾಸಗಳ ಕೊನೆಯಲ್ಲಿ ಈ ಗದ್ಯವಿದೆ--

ಇದು ಸಕಲಸುರನಿಕರಮಕುಟಘಟಿತಮಣಿಗಣಕಿರಣಪಟಲದೀಪಿತಚರಣಕಮಲಲಕ್ಷ್ಮೀವಲ್ಲಭಪಾದಭಕ್ತಿಯುಕ್ತ ಸುಕವಿವೆಂಕರಚಿತವೆಂಕಟೇಶಪ್ರಬಂಧದೊಳ್.

ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ—

ಪಟ್ಟಣ.

ಶ್ರೀಕರಗೋಪುರಮತಿಶೋ | ಭಾಕರಗೋತ್ರಾಂಗನಾಂಘ್ರಿನೂಪುರಮೆನೆ ಚಾ |
ಮೀಕರಮಯಕೋಟಾವೃತ | ದಾಕೃತಿಪುರಮೆಸೆದುದಿಂದ್ರಪುರಮಂ ನಗುತುಂ ||

ಉದ್ಯಾನ

ವನಲಕ್ಷ್ಮೀರಮಣೀಯನಾಭಿಯೊ ಸಮಂತುದ್ಯಾನಮೆಂದೆಂಬ ಮಾ |
ನಿನಿ ತಾಂ ನಕ್ಕೊಡೆ ತೋರ್ಪ ಬಾಯ್ದೆಱೆಯೊ ವೇಣಾರಾಮರಾಮಾವಿಲೋ ||
ಕನಲೀಲಾಸ್ಪದಮಾದ ದರ್ಪಣವೊ ಪೇೞಿಂದೆಂಬಿನಂ ರಾಜಿಕುಂ |
ಘನಕಾಸಾರಮದೂರ್ಮಿಪುಷ್ಪಲತಿಕಾಸಾರಂ ಸ್ಫುರತ್ಕೇಸರಂ ||
ವಿಕಚವನೇರುಹಾವಳಿಗೆ ಹಾವಳಿಗೆಯ್ವಳಿರಾಜಿ ರಾಜಿಪಾ |
ಸುಕಲಿತದಾಡಿಮೀಫಲಮನುರ್ಬುತೆ ದಾಡೆಗಳುಳ್ಳ ಚಂಚುವಿಂ ||
ಸುಕರಸುಪಕ್ಷವತ್ಫಲದ ಸತ್ಕದಳೀವನಕೈದಿ ಭುಂಜಿಪಾ |
ಶುಕತತಿ ಪಾಡುತುಂ ಗಱಿಪುತುಂ ಮದನಾ ಕಲಿಯಾಗಿರೆಂಬುವೈ ||
ತೊಳಗುವ ಪೂಗೊಳಂ ಕೊಳದೊಳಾಡುವ ಹಂಸೆ ಹಂಸೆಯಾ |
ಕಳರುತಿರಂಜನಂ ಜನಮನೋಹರಕೃತ್ಸುಮರಾಜಿ ರಾಜಿಸಿ ||
ಪಳಿಕುಳಝುಂಕೃತಂ ಕೃತಕಶೈಲಮಣಿದ್ಯುತಿಶೋಭಿ ಶೋಭನಂ |
ಗಳಮಯುಮಾಗಿ ಮಾಗಿದ ಫಲಾಳಿ ವಿಜೃಂಭಿಸೆ ತೋರ್ಪುದಾವನಂ [1]||

ಕಾಡು.

ಶುಂಡಾದಂಡಮನೆತ್ತಿಯೊರ್ಮೆ ಪಱಿಯುತ್ತುಂ ಪ್ರೋಚ್ಚಲಾತಾಡನೋ |
ದ್ದಂಡಾರಾವಕೆ ಬೆರ್ಚುತುಂ ಸರಸಿಯೊಳ್ ಪೊಕ್ಕಬ್ಜಷಂಡಂಗಳಂ ||

---

1 ಈ 3 ಪದ್ಯಗಳು ಅಶ್ವಾಸವು ಮುಗಿದಮೇಲೆ ಒಂದು ಬಿಡುಓಲೆಯಲ್ಲಿ ಬರೆದಿವೆ, ಈ ಗ್ರಂಥಕ್ಕೆ ಸೇರಿದುವೋ ಅಲ್ಲವೋ ಎಂದು ಸಂದೇಹವಾಗಿದೆ.

ಕಂಡಾಘ್ರಾಣಿಸಿ ಕಿಱ್ರುಕಿಱ್ರು ಬಿಸುಡುತ್ತುಂ ತಾಯೊಡಲ್ಗೋಂಕಿನಿಂ |
ದಿಂಡೆವ್ವಾಡುತೆ ಹಸ್ತಿಪೋತತತಿಯಿಂ ನೋಡೆ ಕಾಂತಾರದೊಳ್ ||
ಘನರೋಷಾಗ್ನಿಯ ಕೊರ್ವ ಪರ್ವೆ ಮುಸುಗುಟ್ಟುತ್ತುಂ ಮಹೀರಂಗಮಂ |
ಕೊನೆಗಾಲಿಂ ಕೆರೆಯುತ್ತೆ ಕೊಂಬಿಡುತೆ ಕಿಗ್ಗಣ್ಣಿಕ್ಕುತುಂ ಶೃಂಗತಾ ||
ಡನಸಾಶ್ಚರ್ಯಖಣತ್ಕೃತಿಧ್ವನಿಯಗುರ್ವಾಗಲ್ ಕೆರಳ್ದದ್ರಿಗಳ್ |
ಕಿನಿಸಿಂ ತಾಂಗುವವೋಲ್ ಪಳಂಚಿದುವು ಕೋಣಂಗಳ್ ವನೀಮಧ್ಯದೊಳ್ ||

---

## ನಾಗರಸ. ಸು. 1650.

ಈತನು ಭಗವದ್ಗೀತೆಯನ್ನು ಬರೆದಿದ್ದಾನೆ. ಇವನು ಬ್ರಾಹ್ಮಣಕವಿ; ಕಾಶ್ಯಪಗೋತ್ರದವನು; ವಿಶ್ವೇಶ್ವರನ ಮಗನು; ಶಂಕರಗುರುವಿನ ಶಿಷ್ಯನು. 'ಪಂಡರಿವರದವಿಟ್ಠಲರಾಯ ರಕ್ಷಿಪುದು' ಎಂಬುದರಿಂದ ಈತನು ಪಂಡರಾಪುರದ ವಿಟ್ಠಲದೇವರ ಭಕ್ತನೆಂದು ತೋರುತ್ತದೆ; ಆ ಪ್ರಾಂತದವನಾಗಿದ್ದರೂ ಇರಬಹುದು. ಇವನು ಸುಮಾರು 1650 ರಲ್ಲಿ ಇದ್ದಿರಬಹುದೆಂದು ಊಹಿಸುತ್ತೇವೆ.

ಇವನ ಗ್ರಂಥ

### ಭಗವದ್ಗೀತೆ.

ಇದು ಭಾಮಿನೀಷಟ್ಪದಿಯಲ್ಲಿ ಬರೆದಿದೆ; ಅಧ್ಯಾಯ 19, ಪದ್ಯ 737. ಭಗದ್ಗೀತೆಯ ಪ್ರತಿಶ್ಲೋಕದ ಅರ್ಥವನ್ನೂ ಒಂದೊಂದು ಷಟ್ಪದಿಯಲ್ಲಿ ವಿವರಿಸಿರುವಂತೆ "ಗೀತೆಯರ್ಥವನೈದೆ ಪದಕೊಂದೊಂದು ಗ್ರಂಥವ ಸಾಧಕರು ತಿಳಿವಂತೆ ಕನ್ನಡದಿಂದೆ ರಚಿಸಿದೆನು" ಎಂಬ ಪದ್ಯಭಾಗದಲ್ಲಿ ಹೇಳಿದ್ದಾನೆ. ಗ್ರಂಥಾವತಾರದಲ್ಲಿ ರಾಮನ ಸ್ತುತಿಯೂ, ಪಂಡರಿವರದವಿಟ್ಠಲರಾಯನ ಸ್ತುತಿಯೂ ಇವೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ಹಟಿಯ ವಸ್ತ್ರಂಗಳನುಟಿದು ಹೊಸ | ಕೆಲವುವಸ್ತ್ರಂಗಳನು ಹೊವೆನಂ |
ತಿಳಿಯ ಭೋಗದದೃಷ್ಟ ತೀರಲು ಜೀವನೀತನುವ ||
ಕಟಚಿ ಹೊಸತಾದನ್ಯವಹ ತನುಗಳನು ತಾನೈದುತ್ತಿಹನು ನಿಜ |

ತಿಳಿಯೆ ದೇಹಭ್ರಮಣೆ ಕೆಡುವುದು ಪಾರ್ಥ ಕೇಳೆಂದ ॥ 1
ನಿತ್ಯನಾತ್ಮನು ಸರ್ವಗತನ । ತ್ಯುತ್ತಮನು ತಾನಚಲನದಟಿ'ಂ ।
ಸುಸ್ಥಿರನು ತಾನಾದಕಾರಣ ಕಡಿವೊಡಳವಲ್ಲ ॥
ಮತ್ತೆ ಸುಡಲಳವಲ್ಲ ನೀರಿನ । ಲೊತ್ತಿ ನನೆಯಿಸಬಾರದೊಣಗಿಸಿ ।
ಸತ್ವಗುಂದಿಸಬಾರದೈ ಕಲಿಪಾರ್ಥ ಕೇಳೆಂದ ॥ 2
ಆವುದಾವುದನುತ್ತಮರು ನಿ । ತ್ಯಾವಳಿಯೊಳಾಚರಿಪರದನೇ ।
ತಾವು ಬಿಡದಾಚರಿಸುವರು ಮಾನವರು ಮುದದಿಂದ ॥
ಆವನುತ್ತಮಪುರುಷ ತಾ ಬಟಿ' । ಕಾವ ಮತದಲಿ ನಡೆಯುತಿಹನದ ।
ಭಾವಿಸುತ ಮನುಜರುಗಳನುವರ್ತಿಸುತಲಿಹರೆಂದ ॥ 3
ತಂದೆ ನೀನು ಚರಾಚರಂಗಳಿ । ಗಿಂದು ಲೋಕಕೆ ಪೂಜ್ಯಗುರುವರ ।
ಬಂಧು ನೀ ತ್ರೈಲೋಕ್ಯದೊಳಗಪ್ರತಿಮನಹ ನಿನಗೆ ॥
ಇಂದು ಸಮನಿಲ್ಲಾಗ್ಯನೆಚಿ ನಿ । ನ್ನಿಂದಧಿಕನಿನ್ನಾವನುಂಟು ಮು ।
ಕುಂದ ನಿನ್ನಿಂ ಪಿರಿದು ಮತ್ತೊಂದಿಲ್ಲ ಕೇಳೆಂದ ॥

---

## ಹಿರಿಯೂರುರಂಗ. ಸು. 1650

ಈತನು ಪಂಪಾವಿರೂಪಾಕ್ಷಶತಕವನ್ನು ಬರೆದಿದ್ದಾನೆ. ಇವನು ಬ್ರಾಹ್ಮಣಕವಿಯೆಂದು ತೋರುತ್ತದೆ. 'ವರದಹಿರಿಯಪುರೀಶಪದತಾಮರಸಮಧುಕರ' ಎಂದು ಹೇಳಿಕೊಂಡಿದ್ದಾನೆ 'ವರಕವೀಶ್ವರರಂಗನಾತ್ಮಜ' ಎಂಬುದರಿಂದ ಇವನ ತಂದೆಯೂ ಕವಿಯಾಗಿದ್ದಂತೆ ತಿಳಿಯುತ್ತದೆ. ಕವಿಯ ಕಾಲವು ಸುಮಾರು 1650 ಆಗಿರಬಹುದು. ಇವನು ಅಂಬಿಕಾ

---

1 ವಾಸಾಂಸಿ ಜೀರ್ಣಾನಿ ಯಥಾ ವಿಹಾಯ ನವಾನಿ ಗೃಹ್ಣಾತಿ ನರೋಽಪರಾಣಿ ।
ತಥಾ ಶರೀರಾಣಿ ವಿಹಾಯ ಜೀರ್ಣಾನ್ಯನ್ಯಾನಿ ಸಂಯಾತಿ ನವಾನಿ ದೇಹೀ ॥
2 ಅಚ್ಛೇದ್ಯೋಽಯಮದಾಹ್ಯೋಽಯಮಕ್ಲೇದ್ಯೋಽಶೋಷ್ಯ ಏವ ಚ ।
ನಿತ್ಯಸ್ಸರ್ವಗತಸ್ಥಾಣುರಚಲೋಽಯಂ ಸನಾತನಃ ॥
3 ಯದ್ಯದಾಚರತಿ ಶ್ರೇಷ್ಠಸ್ತತ್ತದೇವೇತರೋ ಜನಃ ।
ಸ ಯತ್ಪ್ರಮಾಣಂ ಕುರುತೇ ಲೋಕಸ್ತದನುವರ್ತತೇ ॥
4 ಪಿತಾಸಿ ಲೋಕಸ್ಯ ಚರಾಚರಸ್ಯ ತ್ವಮಸ್ಯ ಪೂಜ್ಯಶ್ಚ ಗುರುರ್ಗರೀಯಾನ್ ॥
ನ ತ್ವತ್ಸಮೋಽಸ್ತ್ಯಭ್ಯಧಿಕಃ ಕುತೋಽನ್ಯೋ ಲೋಕತ್ರಯೇಽಪ್ಯಪ್ರತಿಮಪ್ರಭಾವ ॥

ವಿಜಯುವನ್ನು ಬರೆದ ಬಬ್ಬೂರುರಂಗನ (ಸು. 1750) ಪೂರ್ವಿಕನಾಗಿ ರಬಹುದೋ ಏನೋ ತಿಳಿಯದು.

ಇವನ ಗ್ರಂಥ

ಪಂಪಾವಿರೂಪಾಕ್ಷ ಶತಕ

ಇದು ಭಾಮಿನೀಷಟ್ಪದಿಯಲ್ಲಿ ಬರೆದಿದೆ; ಪದ್ಯ 108, ಪ್ರತಿಪದ್ಯವೂ ಪಂಪಾವಿರೂಪಾಕ್ಷ ಎಂದು ಮುಗಿಯುತ್ತದೆ; ಪಂಪಾವಿರೂಪಾಕ್ಷಸ್ತುತಿರೂಪಭಕ್ತಿಪ್ರಧಾನವಾದ ಗ್ರಂಥ. ಕೊನೆಯ ಕೆಲವು ಪದ್ಯಗಳಲ್ಲಿ ಅನುಪ್ರಾಸಾದಿಶಬ್ದಚಿತ್ರಗಳು ಉಪಯೋಗಿಸಿವೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ಕಂಡೆನೆನ್ನಯ ಕಲ್ಪತರುವನ|ಖಂಡಿತೈಶ್ವರ್ಯವನು ಸುಧೆಯನು |
ಕಂಡೆ ಪರಮಾನಂದವಾರ್ಧಿಯ ನೆನ್ನ ದೃಷ್ಟಿಯಲಿ ||
ಕಂಡೆ ಚಿಂತಾಮಣಿಯ ಪರಮನ | ಕಂಡೆನಾಭವಭವದ ಪಾಪವ |
ಖಂಡಿಸುವ ಶಿವಕರನನೆಲೆಪಂಪಾವಿರೂಪಾಕ್ಷ ||

ಬಲಿದ ಭಕ್ತಿಯೊಳಾನು ನಿಮ್ಮನು | ನಲಿದು ಪೂಜಿಪೆನೆಂದೊಡೀಮನ
ಹಲವುಕಡೆಗೆಳಸುತ ದುರಾಶಾಪಾಶದೊಳು ಸಿಲುಕಿ ||
ಕಲಕುತಿದೆ ಮತಿ ನಿಲುಕದಿದೆಯೆನ | ಗೊಲಿದು ನಿಶ್ಚಲಚಿತ್ತವನು ನೆಲೆ |
ಗೊಳಿಸಿ ರಕ್ಷಿಪುದೆನ್ನನೆಲೆಪಂಪಾವಿರೂಪಾಕ್ಷ ||

---

ತಿಮ್ಮರಸ ಸು. 1650

ಈತನು ಮಾರ್ಕಂಡೇಯರಾಮಾಯಣವನ್ನು ಬರೆದಿದ್ದಾನೆ. ಇವನು ಬ್ರಾಹ್ಮಣಕವಿ; ಭಾರದ್ವಾಜಗೋತ್ರದವನು, ಆಶ್ವಲಾಯನಸೂತ್ರದವನು, ಋಗ್ವೇದಿ, ಕನ್ನಡಿಗವಂಶದವನು; ಇವನ ತಂದೆ ಪಾಲ್ಕುರಿಕೆಯ ಕರಣಿಕಬುಳ್ಳರಪ್ಪ. ತನ್ನ ಗ್ರಂಥವನ್ನು ಯದುಗಿರಿ (ಮೇಲುಗೋಟೆ) ನಾರಾಯಣದೇವರ ಅಂಕಿತದಲ್ಲಿ ಬರೆದಿದ್ದಾನೆ. 'ಕವಿಬಾದರಾಯಣನ ಪಾದಾಂಭೋಜಮಕರಂದಭ್ರಮರ' ಎಂದು ಹೇಳಿಕೊಂಡಿದ್ದಾನೆ. ಇವನು ಸುಮಾರು 1650 ರಲ್ಲಿ ಇದ್ದಿರಬಹುದೆಂದು ಊಹಿಸುತ್ತೇವೆ.

ತನ್ನ ಕವಿತಾಚಾತುರಿಯನ್ನು ಹೀಗೆ ಹೇಳಿಕೊಂಡಿದ್ದಾನೆ-

ಭರಿತಲಾವಣ್ಯಾಂಗದಂತೆ ಬಂಧಂ ಸುಧಾ |
ಕರನಂತಿರಮೃತಬಂಧುರಕಲಾಲಕ್ಷಣಂ |
ಸುರುಚಿರಾಲಂಕಾರಗೀರ್ವಾಣಗಾನದಂತಂಗಭವನಂತೆ ಭಾವಂ ||
ಪರಿಮಳದಿ ಬರ್ಪ ತಣ್ಣೆಲರ ದಟ್ಟಡಿಯಂತೆ |
ಪರಿಯಾಯಮಾರ್ಗಂ ಸುಜನರಂತೆ ಶಬ್ದವಿ |
ಸ್ತರ . . . . . . . . . . ಶ್ರುತಿಜಮತ್ಕೃತಿ ಧರಾತಳದೊಳು ||

ಕಾಂತೆಯಕ್ಕಱ ನೇಹದಂತೆ ತಂಗಾಳಿಯಂತೆಸೆವ ನೆಱೆದಿಂಗಳಂತೆ ಕಾಲೋಚಿತದಸಂತುಷ್ಟಿಯಂತೆ ಸಕ್ಕರೆಜೇನುವೆರಸಿದ ಸವಿಯಂತೆನ್ನ ಮೆಲ್ನುಡಿಗಳು.

ಇವನ ಗ್ರಂಥ.

## ಮಾರ್ಕಂಡೇಯ ರಾಮಾಯಣ.

ಇದು ವಾರ್ಧಕಷಟ್ಪದಿಯಲ್ಲಿ ಬರೆದಿದೆ. ನಮಗೆ ದೊರೆತ ಅಸಮಗ್ರಪ್ರತಿಯಲ್ಲಿ ಸಂಧಿ 30, ಸುಮಾರು 1500 ಪದ್ಯಗಳು ಇವೆ. ಇದರೊಳಗೆ ಯುಧಿಷ್ಠಿರನಿಗೆ ಮಾರ್ಕಂಡೇಯನು ಹೇಳಿದ ರಾಮಾಯಣದ ಕಥೆಯನ್ನು ಕವಿ ಕನ್ನಡದಲ್ಲಿ ಹೇಳಿದ್ದಾನೆ. ಗ್ರಂಥಾವತಾರದಲ್ಲಿ ಗಣೇಶಸ್ತುತಿ ಇದೆ. ಬಳಿಕ ಕವಿ ಯದುಗಿರಿನಾರಾಯಣ, ಯದುಗಿರಿನರಸಿಂಹ, ಬ್ರಹ್ಮ, ಸರಸ್ವತಿ, ಈಶ್ವರ, ಆಂಜನೇಯ, ವಾಲ್ಮೀಕಿ ಇವರುಗಳನ್ನು ಸ್ತುತಿಸಿದ್ದಾನೆ. ಗ್ರಂಥದಲ್ಲಿ ಯಮಕ, ಪ್ರಾಸ, ವರ್ಣಾವೃತ್ತಿ ಇವುಗಳನ್ನು ವಿಶೇಷವಾಗಿ ಉಪಯೋಗಿಸಿದ್ದಾನೆ. ಇದರಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ-

### ಕಾಡು.

ಸೋಮಸಂಚಾರಮಿರ್ದುಂ ನಭಸ್ಥಳಮಲ್ತು |
ಸೋಮೋದ್ಭವಸ್ಥಾನಮೆನಿಸಿ ಮಾನಸಮಲ್ತು |
ಸೋಮಕ್ಷಯಂ ತಾನೆನಿಸಿ ರಾಹುವಲ್ತು ಭುವನಂ ನೋಡೆ ಭುವನಮಲ್ತು ||
ಸೋಮಾಶ್ರಯಮದಾಗಿ ಸೋಮಧರನಲ್ತೆನಿಸಿ |
ಸೋಮನುತ್ತಮಶಾಂತಿಗುಣ ತನ್ನೊಳೊಪ್ಪಿರ್ಪ |
ಸೋಮನಲ್ತೆಂದೆನಿಸಿ ಸೋಮಾಭಿರಾಮದಿಂ ಕಾನನಂ ಕಣ್ಗೆಸೆದುದು ||

### ಹಲಸು

ಉಸಿರದೋರಂತೆ ಪುರುಷಾರ್ಥಮಂ ಮಾಡಿ ಸಂ ।
ತಸಗೈವ ಸತ್ಪುರುಷರಂತೆ ಬಹಿರಂಗದೊಳ್ ।
ಪಸರಿಸಿದ ಮೃದುಕಂಟಕಂಗಳಿಂ ಹೃದಯದೊಳ್ ತವೆ ತೀವಿ ಕಟ್ಟೆನಿದಿನ ॥
ಮಿಸುನಿಯೊರೆಯುರುಳಿಗಳನಾಂತು ಮಘಮಘಿಸುತೆ ।
ಣ್ದೆಸೆಗಳಂ ಪಕ್ವಫಲಭಾರದಿಂ ಜಡಿದು ಶೋ ।
ಭಿಸುವ ಮಂಜುಳಬಕ್ಕೆವಲಸುಗಳ ಸಾಲು ಕಣ್ಗೆಸೆದಿರ್ದುವಾಬನದೊಳು ॥

### ದಾಳಿಂಬ

ಪೊಡವಿಧರದಿಂ ಪುಟ್ಟಿದೆವು ಮುನ್ನ ಕಾಠಿನ್ಯ ।
ವಡೆದು ಕಲ್ಲೆನಿಸಿಕೊಂಡೆವು ಸಾಣೆಯಿಂದೊಡಲ ।
ಕಡುಶಿಥಿಲಗೈದು ರಂಧ್ರಿಸಿದರೆಂದವನೀರುಹಂಗಳುದರದೊಳು ಜನಿಸಿ ॥
ಕಡುಚೆಲ್ವನಿಂ ಕಾಂತಿವೆತ್ತು ರಸ ತೀವಿ ಕೆಂ ।
ಪಿಡಿದು ಮೃದುವೆನಿಸಿ ಕಟ್ಟೆನಿದಾಗಿಯುಂ ಪಲ್ಗೆ ।
ಪಡಿಗೈವರೆಂದು ಬಾಯ್ವಿಡುವಂತೆ ಪಣ್ತೊಡಿದ ದಾಡಿಮಂ ರಂಜಿಸಿದುವು ।

### ತುಂಗಭದ್ರೆ

ಸುಟಿವ ಸುತ್ತುವ ಪತ್ತುವೆತ್ತುವೊತ್ತುವ ಧಳಂ ।
ಧಳರೆನಲು ಪೊಯ್ವ ಮೇಲ್ವಾಯ್ವ ಸೋಂಕುವ ಸೂಂಕು ।
ತೊಳವರಿವ ಕೂಡುವಗಲುವ ಸೆಳೆವ ಪೊಳೆವ ತಗುಳುವ ಜಗುಳುವಾಳುವೇಳ್ವ ॥
ಲಳಿಮಸಗಿ ಪರಿವ ಭೋರ್ಗರೆವ ಘುಳುಘುಳಿಪ ಬೊ ।
ಬ್ಬುಳಿಕೆಗಳ ಪೆರ್ದೆರೆಯ ಮಱಿದೆರೆಯ ತುಂತುಱಿನ ।
ಬೆಳ್ನೊರೆಯ ಭೀಕರದ ಸೀಕರದ ವರತುಂಗಭದ್ರೆ ಕಣ್ಗೊಳಿಸಿರ್ದಳು ॥
ನರೆದೆರೆಗಳಿರ್ದು ಜವ್ವನೆ ಜಡಪ್ರಕೃತಿಯಿ ।
ರ್ದುರುತರದ ಸತ್ವಗುಣಸಂಪನ್ನೆ ತನ್ನೊಳೊ ।
ಪ್ಪಿಗೆ ನಿಂದೆ ಭುವನವಿಖ್ಯಾತೆ ಪಾವನೆ ಪರರ ಕೈಬಾಯ್ಗೆ ಬಂದಿಳೆಯೊಳು ॥
ಪರಪೀಡನಂ ತನ್ನೊಳಿರ್ದು ಪಾಪವಿದೂರೆ ।
ಪರಿಕಿಸಲ್ ವಿಷಮೆನಿಸಿಯಮೃತಸ್ವರೂಪೆಯು ।
ಜ್ವರಿಯೆನೆ ಮನಂಗೊಳಿಸುತಿರ್ದಳನುಪಮತುಂಗಭದ್ರೆ ಮುಕ್ತಿಯ ಸುಮುದ್ರೆ ॥

ಋಷ್ಯಮೂಕಪರ್ವತ

ಸಮಚರಣದಿಂ ತ್ರಿಪದಿಯಿಂದೆ ಚೌಪದದಿ ಸು |
ಕ್ರಮಷಟ್ಪದಿಗಳಿಂದೆ ಪಲವುದಂಡಕಗಳಿಂ |
ಸಮುಚಿತಧ್ವನಿಗಳಿಂ ವರಪದಾರ್ಥಂಗಳಿಂ ಸರಸಕಾವ್ಯಂಗಳಂತೆ ||
ಸುಮತಿದೂರ್ವಾಸನ.ಋಷಿಶೃಂಗರಮ್ಮುಖದಿಂ |
ವಿಮಲತಾಪಸವೃಂದದಂತೆ ನಿರ್ಝರಘೋಷ |
ದಿ ಮನಂಗೊಳಿಸುತಿರ್ದುದಾತ್ರಿವಿಷ್ಟಪದಂತೆ ಋಷ್ಯಮೂಕಾದ್ರಿ ಚೆಲ್ವಿಂ ||

ಕಿಷ್ಕಿಂಧಗಿರಿ

ಹರನಂತೆ ಚಕ್ಷುಶ್ರವಾನೀಕಭೂಷಣಂ | ಹರನಂತೆ ಸಂತತಶಿವಾಶೋಭಿತಾಂಗನುಂ|
ಹರನಂತೆ ನೀಲಕಂಠವಿರಾಜಮಾನನುಂ ಹರನಂತೆ ಸೋಮಧರನುಂ ||
ಹರನಂತೆ ಗುಹನಂದಿಭೂತಗಣಪರಿವೃತಂ | ಹರನಂತೆ ಗಂಗಾತರಂಗಾವತಂಸನುಂ |
ಹರನಂತೆ ಶಾಬರಚರಿತ್ರದಿಂ ಕಿಷ್ಕಿಂಧಗಿರಿ ಮನಂಗೊಳಿಸಿರ್ದುದು ||

ರಾಮಲಕ್ಷ್ಮಣರು

ಬೆಂಗಡೆಯೊಳಮರಿಚಿದ ಡೊಣೆಗಳಿಂ ಕಣೆಗಳಿಂ |
ರಂಗುವಡೆದೆಸೆವ ಕಾರ್ಮುಕಗಳಿಂ ಮುಖಿಗಳಿಂ |
ಸಂಗಳಿಸಿದಮಳತೇಜಂಗಳಿಂ ಕಂಗಳಿಂ ಪಜ್ಜಳಿಪ ಕಾಂತಿಯಿಂದ ||
ಮುಂಗೈಯೊಳೆಸೆವ ಬಿಲ್ಗೊಡೆಗಳಿಂ ಜಡೆಗಳಿಂ |
ಹಿಂಗದೊಪ್ಪುವ ರಾಜತೇಜದಿಂ ಸಾಜದಿಂ |
ಪೊಂಗುವುರುತರದ ಲಾವಣ್ಯದಿಂ ಪುಣ್ಯದಿಂ ಕಂಗೊಳಿಸಿದರ್ ಕುವರರು ||

---

ಅಚ್ಯುತದಾಸ. ಸು. 1650

ಈತನು ತುಲಸೀಮಾಹಾತ್ಮ್ಯವನ್ನು ಬರೆದಿದ್ದಾನೆ. ಇವನು ಬ್ರಾಹ್ಮಣಕವಿ ಎಂದು ತೋರುತ್ತದೆ. ತನ್ನ ಹೆಸರನ್ನು ವ್ಯಕ್ತವಾಗಿ ಹೇಳಿಕೊಂಡಿಲ್ಲ. ' ತೊಲಸಿಯ ಖ್ಯಾತಿಯನು ಬಲ್ಲಂತೆ ಹೊಗಳಿದನಚ್ಯುತನದಾಸ ಎಂದಿರುವುದರಿಂದ ಈ ಹೆಸರನ್ನೇ ಮೇಲೆ ಕೊಟ್ಟಿದ್ದೇವೆ. “ ಶಾಸ್ತ್ರವರಿಯೆ, ಕಾವ್ಯದ ನೀತಿಯರಿಯೆ, ಅಜ್ಞರಿಗಜ್ಞ ” ಎಂದು ಹೇಳಿಕೊಂಡಿದ್ದಾನೆ. ಇವನ ಕಾಲವು ಸುಮಾರು 1650 ಆಗಿರಬಹುದೆಂದು ತೋರುತ್ತದೆ.

ಇವನ ಗ್ರಂಥ

### ತುಲಸೀಮಾಹಾತ್ಮ್ಯ

ಇದು ಭಾಮಿನೀಷಟ್ಪದಿಯಲ್ಲಿ ಬರೆದಿದೆ. ನಮಗೆ ದೊರೆತ ಅಸಮ ಗ್ರಪ್ರತಿಯಲ್ಲಿ 66 ಪದ್ಯಗಳಿವೆ. ಈ ಗ್ರಂಥದಿಂದ ಒಂದು ಪದ್ಯವನ್ನುದ್ಧರಿಸಿ ಬರೆಯುತ್ತೇವೆ–

ಕೇಳಿದಳು ಬಿನ್ನಹವನಾಸಿರಿ | ಲೋಲಮಾಧವರಾಣಿ ಸಭೆಯಲಿ |
ಸೂಳುಗಂಕಣಕಡಗಹಸ್ತದಲಭಯವನು ಕೊಡುತ ||
ಮೇಲೆ ನಾನನತರಿಸಿ ಭಜಿಸುವ | ಲೋಲಮತಿಗಳ ಲೋಚನಾಗ್ರಕೆ |
ಸಾಲುಗಿಡುವಾಗಿಹೆನು ಪೂಜಿಪುದೆಂದಳಾತುಳಸಿ ||

---

## ಯೋಗೀಂದ್ರ. ಸು. 1650

ಈತನು ಉತ್ತರರಾಮಾಯಣವನ್ನು ಬರೆದಿದ್ದಾನೆ. ಇವನು ಬ್ರಾಹ್ಮಣಕವಿ; ಸುಮಾರು 1650 ರಲ್ಲಿ ಇದ್ದಿರಬಹುದೆಂದು ಊಹಿಸುತ್ತೇವೆ.

ಇವನ ಗ್ರಂಥ

### ಉತ್ತರರಾಮಾಯಣ

ಇದು ಕುಸುಮಷಟ್ಪದಿಯಲ್ಲಿ ಬರೆದಿದೆ; ಸಂಧಿ 48. ಇದರಿಂದ ಒಂದು ಪದ್ಯವನ್ನು ತೆಗೆದು ಬರೆಯುತ್ತೇವೆ--

ಉತ್ತಮವೆನಿಪ್ಪುದಿಂ | ತುತ್ತಮಶ್ಲೋಕಚಾ |
ರಿತ್ರವಿದು ವಾಲ್ಮೀಕಿಮುನಿಪನಿಂದ ||
ವಿಸ್ತೀರ್ಣವಾಯ್ತುದನೆ | ಮತ್ತೆ ಯೋಗೀಂದ್ರಾಖ್ಯ |
ಸುತ್ತಮರು ಮೆಚ್ಚೆ ಕನ್ನಡದಲೊರೆದ ||

---

## ಸೋಮನಾಥ. ಸು. 1650

ಈತನು ರುಕ್ಮಾಂಗದಚರಿತೆಯನ್ನು ಬರೆದಿದ್ದಾನೆ. ಇವನು ಬ್ರಾಹ್ಮಣಕವಿ; 'ಮಧ್ವ ಮುನಿಗೆ ವಂದಿಸುವೆ ; ಎಂಬುದರಿಂದ ಮಾಧ್ವನಾಗಿರಬಹುದು. "ಕನ್ನಡಕವಿಕುಮುದವನಶುಭೋದಯ ಪೂರ್ಣಸೋಮ"

ಎಂದು ತನ್ನನ್ನು ವಿಶೇಷಿಸಿ ಹೇಳಿಕೊಂಡಿದ್ದಾನೆ. ಇವನ ಕಾಲವು ಸುಮಾರು 1650 ಆಗಿರಬಹುದೆಂದು ತೋರುತ್ತದೆ.

ಇವನ ಗ್ರಂಥ.

## ರುಕ್ಮಾಂಗದ ಚರಿತೆ.

ಇದು ಸಾಂಗತ್ಯದಲ್ಲಿ ಬರೆದಿದೆ; ಸಂಧಿ 9, ಪದ್ಯ 1154. ಇದರಲ್ಲಿ ಮಾಂಧಾತುವಿಗೆ ವಸಿಷ್ಠನು ಬೋಧಿಸಿದ ಹರಿವಾಸರದ ಮಾಹಾತ್ಮ್ಯವನ್ನು ಕವಿ ಕನ್ನಡದಲ್ಲಿ ಹೇಳಿದ್ದಾನೆ. ಕಥಾಗರ್ಭವನ್ನು
ರುಕ್ಮಾಂಗದನು

ಮಾಡುವ ಹರಿದಿನವ್ರತನಿಯಮವು ತಾ | ಖೋಡಿ ಹೊದ್ದದ ಮಾಟ್ಕಿಯಲಿ |
ನಾಡಱಿಯಲು ಪೆತ್ತ ಮಗನ ಶಿರವ ಚೆಂ | ಡಾಡಿದ ಕಥೆಯ ಬಣ್ಣಿಸುವೆ ||

ಎಂಬ ಭಾಗದಲ್ಲಿ ಸೂಚಿಸಿದ್ದಾನೆ. ಗ್ರಂಥಾರಂಭದಲ್ಲಿ ತೊರವೆಯ ನರಸಿಂಹನ ಸ್ತುತಿ ಇದೆ. ಬಳಿಕ ಕವಿ ಈಶ್ವರ, ಗಣೇಶ, ಸರಸ್ವತಿ, ರಾಮ, ಬಲರಾಮ, ಕೃಷ್ಣ, ಪರಶುರಾಮ, ವ್ಯಾಸ ಇವರುಗಳನ್ನು ಸ್ತುತಿಸಿದ್ದಾನೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ:—

### ಕೊಳ

ಉಲಿವ ಕೋಗಿಲೆಗಳೊಪ್ಪುವ ಗಿಳಿವಿಂಡುಗಳ್ | ಸುಳಿದಾಡುತಿಹ ಹಂಸೆಗಳು |
ಒಲಿದು ನರ್ತಿಪ ಕೇಕಿ ಚಲಿಸದೊಪ್ಪುವ ಕೋಕ | ಕೊಳನ ಸಂಭ್ರಮವೊಪ್ಪುತಿಹುದು ||

### ಸೂಳೆಗೇರಿ

ದಾರಿಯೆಡಹುಗಲ್ಲು ನೀರೊಳಗಣ ನಕ್ರ | ವಾರವೆಗಳ ಮುಳ್ಳಿನಂತೆ |
ವಾರಾಂಗನೆಯರ ಕೇರಿಕೇರಿಗಳು ಮ | ಹಾರಭಸದೊಳೊಪ್ಪುತಿಹುವು ||

### ಕೈಲಾಸ

ಸಿರದ ಜಡೆಯ ಶೋಭೆ ತರಣಿಸಸಿಯ ತೇಜ | ದರಹಾಸರುಚಿ ದೇಹಕಾಂತಿ |
ಗಿರಿಜೆಯಪಾಂಗದೀಧಿತಿ ಗಿರಿಜೇಶನ | ಗಿರಿಯ ಮುಸುಕಿದಂತಿಹುದು ||

ಊಟ

ನೆಲ್ಲಿಯಕಾಯಿ ಮಾಗಳಿಬೇರೆಳವಪ್ಪ | ಬೆಲ್ಲವತ್ತದಕಾಯಿ ಕಟುಲೆ |
ಜಳ್ಳಿಯಕಾಯುರನೂವಲ ಪಾಪಟೆ | ಯೆಲ್ಲವನು ಬಡಿಸಿದರು ||

ವಿಷಯಾಸಕ್ತಿ

ನರೆ ತುಂಬಿ ದಂತ ಸಡಿಲವಾಗಿ ತನು ತಗ್ಗಿ | ಹಿರಿಯರೆಂದೆನಿಸಿ ಕಾತರಿಸಿ |
ತರುಣಿಯರೊಳು ಸುಖಪಡುವೆನೆಂಬುದು ಲೋಕ | ಪರಿಹಾಸಕಲ್ಲವೆ ದಿಟದಿ ||

---

## ಆದಿಯಪ್ಪ. ಸು. 1650

ಈತನು ಧನ್ಯಕುಮಾರಚರಿತೆಯನ್ನು ಬರೆದಿದ್ದಾನೆ. ಇವನು ಜೈನಕವಿ; ಇವನ ತಂದೆ ಶ್ರುತಯತಿಶಿಷ್ಯನಾದ ಮುನಿಯಣ್ಣ, ತಾಯಿ ದೇವರಸಿ, ಅಣ್ಣಂದಿರು ಬ್ರಹ್ಮ, ಚಂದ್ರ, ವಿಜಯಪ್ಪ. ತುಳುದೇಶದ ಗೇರುಸೊಪ್ಪೆಯ ದೊರೆ ಭೈರವರಾಯನ ಗುರುವಾದ ವೀರಸೇನನ ಆಜ್ಞಾನುಸಾರವಾಗಿ ಈ ಗ್ರಂಥವನ್ನು ಬರೆದಂತೆ ಹೇಳುತ್ತಾನೆ. ಚಂದ್ರಕೀರ್ತಿಯ ಮಗನಾದ ಪ್ರಭೇಂದುಮುನಿ ಕವಿಯ ಗುರುವಾಗಿದ್ದಂತೆ ತೋರುತ್ತದೆ. ಈ ಕವಿ ಸುಮಾರು 1650 ರಲ್ಲಿ ಇದ್ದಿರಬಹುದು.

ಇವನ ಗ್ರಂಥ

### ಧನ್ಯಕುಮಾರಚರಿತೆ

ಇದು ಸಾಂಗತ್ಯದಲ್ಲಿ ಬರೆದಿದೆ; ಒಟ್ಟು ಸುಮಾರು 410 ಪದ್ಯಗಳಿವೆ; ಅಲ್ಲಲ್ಲಿ ಕೆಲವು ವೃತ್ತಗಳೂ ಇವೆ.

ಕಥೆಯ ಸಾರಾಂಶ—ಅವಂತಿಯನಾಡಿನ ಭೋಗಾವತಿಯೆಂಬ ಪುರವನ್ನು ಆಳುತ್ತಿದ್ದ ಪಶುಪಾಲನೆಂಬ ದೊರೆಗೂ ಅವನ ಹೆಂಡತಿ ಪದ್ಮಾಕ್ಷಿಗೂ ಅಕೃತಪುಣ್ಯನೆಂಬ ಒಬ್ಬ ಮಗನು ಹುಟ್ಟಿದನು. ಇವನು ಹುಟ್ಟಿದಂದಿನಿಂದ ತಾಯಿತಂದೆಗಳಿಗೆ ಮಹಾದಾರಿದ್ರ್ಯವು ಪ್ರಾಪ್ತವಾಗಿ ತಂದೆ ಸಾಯಲು ಅಕೃತಪುಣ್ಯನು ಭಿಕ್ಷಾಟನಮಾಡಿಕೊಂಡು ಜೀವಿಸುತ್ತಿದ್ದನು. ಬಂಧುಗಳ ಅನಾದರಣೆಯನ್ನು ಸಹಿಸಲಾರದೆ ಮತ್ತೊಂದೂರಿಗೆ ಹೋಗಿ ಬಲಭದ್ರನೆಂಬ ವೈಶ್ಯನ ಮನೆಯಲ್ಲಿ ಸೇವಕನಾಗಿರಲು, ಆ ವೈಶ್ಯನ ಮಕ್ಕಳು ಇವನಿಗೆ ಅನುಚಿತಕಾರ್ಯಗಳನ್ನು ಮಾಡುವಂತೆ ಹಿಂಸೆಪಡಿಸಿದುದರಿಂದ ಈ ಹಿಂಸೆಯನ್ನು ತಡೆಯಲಾರದೆ ಸಮೀಪದಲ್ಲಿದ್ದ ಋಷ್ಯಾಶ್ರಮಕ್ಕೆ ಹೋಗಿ ಮುನಿ

ಸೇವಾನಿರತನಾಗಿದ್ದು ಮೃತನಾದನು. ಬಳಿಕ ಆದೇಬಲಭದ್ರನಿಗೆ ಧನ್ಯಕುಮಾರನೆಂಬ ಮಗನಾಗಿ ಜನಿಸಿ ಅಸಾಧಾರಣವಾದ ಐಶ್ವರ್ಯವನ್ನೂ ಖ್ಯಾತಿಯನ್ನೂ ಪಡೆದು ತನ್ನ ವಂಶವನ್ನು ಉದ್ಧರಿಸಿದನು.

ಗ್ರಂಥಾವತಾರದಲ್ಲಿ ಜಿನಸ್ತುತಿ ಇದೆ. ಬಳಿಕ ಕವಿ ಸಿದ್ಧಾದಿಗಳು, ಪಂಡಿತಮುನಿ, ದೇಸಿಯಗಣದ ಚಂದ್ರಕೀರ್ತಿಯ ಮಗನಾದ ಪ್ರಭೇಂದು ಮುನಿ ಇವರುಗಳನ್ನು ಹೊಗಳಿದ್ದಾನೆ.

ಈಗ್ರಂಥದಿಂದ ಒಂದೆರಡುಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ-

ಮೂಕುತಿ

ಅರುಣೋದಯಕೆ ಮೂಕುತಿಮುತ್ತು ಕೆಂಪಾಗಿ | ಅರಲುಗಣ್ಣಾಲಿಕಪ್ಪಿಂದ |
ಕರಿದೊಂದುಕಡೆಯ ತೋಱಿಲು ಮುಗ್ಧೆಯೊರ್ವಳು | ಗುರುಗಂಜಿಯೆಂದು ಬಿಸುಟಳು||

ಸೂಳೆಗೇರಿ

ವಿನಯವೊಬ್ಬನಕೂಡೆ ನಯನವೊಬ್ಬನಕೂಡೆ | ಮನವೊಬ್ಬನೊಳಿರುತಿಪುದು |
ಧನವಿತ್ತಡವನೆ ಮನ್ಮಥನೆಂಬೀವೇಶ್ಯಾ | ಜನದ ಕೇರಿಯ ಪೊಱನುಟ್ಟ ||

ಸಜ್ಜನರು

ಕರಗೆ ಚಿನ್ನದ ಕಾಂತಿಯುರೆಯೆ ಚಂದನಗಂಧ | ಪರಿಮಳ ಪಿರಿದಾಗುವಂತೆ |
ಧರೆಯೊಳು ಸುಜನರು ಕೆಲರು ದುಃಖವ ಮಾಡೆ | ವರಗುಣಗಳನು ತಪ್ಪುವರೇ ||

---

## ಮಾಧವದೇವ. ಸು. 1650

ಈತನು ನರಪಿಂಗಲಿಯನ್ನು ಬರೆದಿದ್ದಾನೆ. ಇವನು ಜೈನಕವಿ; ಇವನಿಗೆ ಅರ್ಹದ್ದಾಸ ಎಂಬ ಹೆಸರೂ ಇದ್ದಂತೆ ತೋರುತ್ತದೆ. ತನ್ನ ವಿಷಯವನ್ನು ಈ ಪದ್ಯಗಳಲ್ಲಿ ಹೇಳಿಕೊಂಡಿದ್ದಾನೆ.—

ಪರಮಜಿನೇಂದ್ರನ ಪಾದಾಂ | ಬುರುಹಾಂಕಿತನರ್ಥಿಯಿಂದ ಮಾಧವದೇವಂ |
ಧರೆಗಱಿವಂತುಟು ನರಪಿಂ | ಗಲಿಯುಂ ತಾಂ ಪೇೞ್ದ ಪೊಚ್ಚಪೊಸಗನ್ನಡದಿಂ ||
ಯಂತ್ರದೊಳಂ ಮಂತ್ರದೊಳಂ | ತಂತ್ರದೊಳಂ ಗೇಯರಸಸಭಾಮಂಡಲದೊಳ್!
ಸಂತತ ಶಕುನವಿಚಾರಮ | ನೆಂತುಂ ನೆಱೆ ಪೇೞಬಲ್ಲ ಮಾಧವದೇವಂ ||

ಇವನು ಸುಮಾರು 1650 ರಲ್ಲಿ ಇದ್ದಿರಬಹುದೆಂದು ತೋರುತ್ತದೆ.

ಇವನ ಗ್ರಂಥ.

ನರಪಿಂಗಲಿ

ಇದು ಕಂದದಲ್ಲಿ ಬರೆದಿದೆ. ಇದರಲ್ಲಿ ಶಕುನಶಾಸ್ತ್ರಕ್ಕೆ ಸಂಬಂಧಪಟ್ಟ ವಿಷಯಗಳು ಹೇಳಿವೆ. ಇದರಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ-

ಕಾಗೆಯ ಗೂಗೆಯ ಶಕುನವು | ನೇಗೆಯ್ದುಂ ನೋಡಬೇಕ ನೋಽಂತರನೊಳ್ |
ಮೂಗಂಬಧಿರಂಗಱಿಯಲ್ | ಬೇಗಂ ಬರ್ಪಂತೆ ಪೇೞ್ದ ನರಪಿಂಗಲಿಯುಂ ||
ಶಾರೆತಿಥಿವಾರವೇಳೆಯ | ನೋಽಂತಿರೆ ನೋಡಬೇಡ ಕೋಟಲೆಯಿಂದಂ |
ಮಾರುತಗತಿಪದಮೆಂತೆನೆ | ಸಾರಮಿದಂ ನೋಡಿಕೊಳ್ಳಿ ನರಪಿಂಗಲಿಯೊಳ್ ||
ಉತ್ತಮನೆ ಬಂದು ನುಡಿದೊಡೆ|ಯುತ್ತಮ ಮಧ್ಯಮನೆ ಬಂದು ನುಡಿದೊಡೆ ಮಧ್ಯಂ|
ಮತ್ತೆ ಕನಿಷ್ಠಂ ನುಡಿದೊಡೆ | ಮೃತ್ಯುವೆ ಪ್ರತ್ಯಕ್ಷವಾಗಿ ನುಡಿದಂತಕ್ಕುಂ ||

---

**ಗುಣಚಂದ್ರ.** ಸು. 650

ಈತನು ಛಂದಸ್ಸಾರವನ್ನು ಬರೆದಿದ್ದಾನೆ. ಇವನು ಜೈನಕವಿ. ಇವನ ವಿಷಯವಾಗಿ ಈ ಗ್ರಂಥದಿಂದ ಇನ್ನಾವ ಅಂಶವೂ ತಿಳಿವುದಿಲ್ಲ. ಕೇದಾರಭಟ್ಟನ ವೃತ್ತರತ್ನಾಕರವನ್ನು ಬಹಳ ಮಟ್ಟಿಗೆ ಅನುಸರಿಸಿದ್ದಾನೆ. ಇವನು ಸುಮಾರು 1650 ರಲ್ಲಿ ಇದ್ದಿರಬಹುದು.

ಇವನ ಗ್ರಂಥ.

ಛಂದಸ್ಸಾರ

ಇದು (1) ಸಂಜ್ಞಾಪ್ರಕರಣ, (2) ಮಾತ್ರಾಛಂದೋಲಕ್ಷಣ, (3) ಸಮವೃತ್ತ ಪ್ರಕರಣ, (4) ಸಂಕೀರ್ಣ ಪ್ರಕರಣ, (5) ತಾಳವೃತ್ತಾದಿ ಎಂಬ 5 ಅಧ್ಯಾಯಗಳಾಗಿ ಭಾಗಿಸಲ್ಪಟ್ಟಿದೆ. ಸಂಕೀರ್ಣಪ್ರಕರಣದಲ್ಲಿ ದಂಡಕ, ಷೋಡಶಮಾತ್ರಾದ್ವಿಪಾದ, ಷೋಡಶಮಾತ್ರಾಚತುಷ್ಪಾದ, ಪಾದಪಾದಭಿನ್ನಮಾತ್ರದ್ವಿಪಾದಿ, ಅರ್ಧಸಮವೃತ್ತ, ವಿಷಮವೃತ್ತ, ಪ್ರಸ್ತಾರ, ನಷ್ಟ, ಉದ್ದಿಷ್ಟ, ಲಗಕ್ರಿಯೆ, ಸಂಖ್ಯಾನ ಈ ಅಂಶಗಳು ಹೇಳಿವೆ. ಆರಂಭದಲ್ಲಿ ಜಿನಸ್ತುತಿಯಿದೆ. ಅಧ್ಯಾಯಗಳ ಕೊನೆಯಲ್ಲಿ ಈ ಗದ್ಯವಿದೆ—

ಇತಿ ಶ್ರೀಮದನುಪಮನಿತ್ಯನಿರಂಜನಪರಮಾತ್ಮಾರ್ಹದಾರಾಧನಾಪರಮಾನಂದಬಂಧುರ ಗುಣಚಂದ್ರವಿರಚಿತಛಂದಸ್ಸಾರದೊಳ್.

ಈ ಗ್ರಂಥದಿಂದ ಕೆಲವುಭಾಗವನ್ನು ತೆಗೆದು ಬರೆಯುತ್ತೇವೆ—

### ಜಿನಸ್ತುತಿ

ಸುತ್ರಾಮಾದಿಸುಪರ್ವರಾಜಮಕುಟೀಕೋಟೀಘಟೀಪ್ರಜ್ವಲ |
ದ್ರತ್ನಾಂಶೂಜ್ವಯನಿಮ್ನಗಾಪ್ರವಿಲಸತ್ಪಾದಾಂಬುಜಾತದ್ವಯಂ ||
ಭೈತ್ರಂ ಸಂಸ್ಕೃತಿಸಾಗರಪ್ರವಹದೊಳ್ ಭಕ್ತಂಗೆ ಕಲ್ಪಾಂಘ್ರಿಪಂ |
ನೇತ್ರಾಳಿವ್ರಜಕೀಗೆ ಸಾರಸುಖಮಂ ಸಂತಾಪವಿಚ್ಛೇದಕಂ ||

### ಯತಿ

ಗಣನಿಯಮದಿಂದ ಯತಿಯಂ|ಗಣಿಸುವರಾಗಣವು ಕೆಡಲು ಯತಿಯುಂ ಕೆಡುಗುಂ||
ಗಣಯುತಿಯಿಲ್ಲದ ಕವಿತೆಯು | ತಣಿಪುವುದೇ ವಿಬುಧತತಿಯ ನಿಯಮಸ್ಥಳದೊಳ್||

### ಪಥ್ಯಾ

ದಳಗಳೊಳಾದ್ಯಂ ಪಾದಂ | ಪೊಳೆಯಲ್ ತ್ರ್ಯಂಶಾಢ್ಯಮಾಗಿ ಪಥ್ಯಾಖ್ಯಂ |
ಅಳವಟ್ಟಿತರಾಂಘ್ರಿಗಳೊಳು | ತಿಳಿ ಗಣಗಳ ನಿಯಮವಿಲ್ಲ ಬುಧನುತದಿಂ ||

### ತಾಳ

ಧ್ರುವತಾಳ ಮಟ್ಟತಾಳಂ | ತಿವುಡಂ ರೂಪಕಮುಮಷ್ಟ ಝಂಪೆಯುಮೇಕಂ |
ಕೀವುಗುವಿಂತೇಳುವಿಧಂ | ಸೇವಿಸುವರ ವೃತ್ತಬಂಧರಚನೆಗಳಿಂದಂ ||

### ತ್ರಿವುಡೆ

ಪ್ರಾಸಗಳು ಮೂಜಾಗಿ ಲೇಸಿನಿಂ ಬರುತಿರಲು |
ಮಾಸದೇ ಮಾತ್ರೆಗಳ ತ್ರಿವುಡೆ ತಾನೊಗೆಗುಂ ||

---

## ಧರಣಿಪಂಡಿತ. ಸು. 1650

ಈತನು ವರಾಂಗನೃಪಚರಿತೆ, ಬಿಜ್ಜಳರಾಯಚರಿತೆ ಇವುಗಳನ್ನು ಬರೆದಿದ್ದಾನೆ. ಇವನು ಜೈನಕವಿ; ಭಾರದ್ವಾಜಗೋತ್ರದವನು; ವಿಷ್ಣುವರ್ಧನಪುರದ "ವರಕುಲಾಗತವೈದ್ಯವಿದ್ಯಾಪರಿಣತನು ಪರವೈದ್ಯಕರಿಹರಿ" ಯಾದ ಧರಣಿಪಂಡಿತನ ಪೌತ್ರನು; ಪದ್ಮಣಪಂಡಿತನ ಪುತ್ರನು. "ವಿಷ್ಣುವರ್ಧನಪುರದ ಪಾರ್ಶ್ವಜಿನೇಂದ್ರಚಂದ್ರನ ಚರಣವಾರಿಜಭೃಂಗ" ಎಂದು ಹೇಳಿಕೊಂಡಿದ್ದಾನೆ

ಈತನು ಸುಮಾರು 1650 ರಲ್ಲಿ ಇದ್ದಿರಬಹುದೆಂದು ಊಹಿಸುತ್ತೇವೆ. ಪೂರ್ವಕವಿಗಳನ್ನು ಈ ಪದ್ಯದಲ್ಲಿ ಸ್ಮರಿಸಿದ್ದಾನೆ—

ವಿನುತಕವಿವರನೇಮಿಚಂದ್ರನು । ಘನಕವೀಶ್ವರನೆನಿಪ ಹೊನ್ನನು ।
ಸನುನಯದ ಕವಿ ರನ್ನ ಕರ್ಣಾನಂದರಸಕವಿತಾ ॥
ಧನಿಕ ಹಂಪನು ನಾಗವರ್ಮ । ದ್ಘನುಪಮಿತಕವಿಗಳನು ನುತಿಸುವೆ ।
ಮನಕೆ ಬಂಪಂತೆನಗೆ ಕವಿತಾವರವ ಕೊಡಲೆಂದು ॥

ಇವನ ಗ್ರಂಥಗಳಲ್ಲಿ

## 1. ವರಾಂಗನೃಪ ಚರಿತೆ

ಇದು ಭಾಮಿನೀಷಟ್ಪದಿಯಲ್ಲಿದೆ. ನಮಗೆ ದೊರೆತ ಅಸಮಗ್ರಪ್ರತಿಯಲ್ಲಿ 8 ಆಶ್ವಾಸಗಳಿವೆ. ಪೂರ್ವದ ಮುನೀಶ್ವರರು ಹೇಳಿದ ಈ ಕಥೆಯನ್ನು ತಾನು ಕನ್ನಡದಲ್ಲಿ ರಚಿಸಿದಂತೆ ಕವಿ ಹೇಳುತ್ತಾನೆ. ಗ್ರಂಥಾವತಾರದಲ್ಲಿ ಪಾರ್ಶ್ವಜಿನನನ್ನು ಸ್ತುತಿಸಿದ್ದಾನೆ. ಬಳಿಕ ಸಿದ್ಧಾದಿಗಳು, ಸರಸ್ವತಿ, ಗಣಧರರು, ಪದ್ಮಾವತಿ ಇವರುಗಳನ್ನು ಸ್ತುತಿಸಿ ಅನಂತರ ಕೊಂಡಕುಂದನಿಂದ ಅಕಲಂಕನವರೆಗೆ [1] ಗುರುಗಳನ್ನು ಹೊಗಳಿದ್ದಾನೆ.

## 2 ಬಿಜ್ಜಳರಾಯ ಚರಿತೆ

ಇದು ಸಾಂಗತ್ಯದಲ್ಲಿ ಬರೆದಿದೆ; ಸಂಧಿ 12, ಪದ್ಯ 1239[2]. ಇದರಲ್ಲಿ ಕಲ್ಯಾಣಪುರದ ದೊರೆಯಾದ "ಜೈನಶಾಸನವಾರ್ಧಿವರ್ಧನಚಂದ್ರಮ ಜೈನವಂಶಾನ್ವಯತಿಲಕ ಜೈನಮಾರ್ಗಾನಂದಪರನೆಂದೆನಿಸುವ" ಬಿಜ್ಜಳರಾಯನ ಕಥೆ ಹೇಳಿದೆ. ಹಿಂದೆ ವಿಜಯಮ್ಮ ತನ್ನ ತಾಯಿಗೆ ಹೇಳಿದ ಈ ಕಥೆಯನ್ನು ಕವಿ ವಿಸ್ತರಿಸಿ ಬರೆದಂತೆ ಹೇಳುತ್ತಾನೆ.

ಬಸವನ ವಿಷಯವಾಗಿ ಕವಿ ಹೀಗೆ ಬರೆದಿದ್ದಾನೆ:—

ಬಿಜ್ಜಳರಾಯನು ತನ್ನ ಜೋಯಿಸನಾದ ಮಾದಿರಾಜನ ಮಗಳು ಪದ್ಮಿನಿಯನ್ನು ಮದುವೆಯಾಗಿ ಅವಳ ಅಣ್ಣನಾದ ಬಸವನಿಗೆ ಸೇನಾಪತಿತ್ವವನ್ನು ಕೊಟ್ಟನು. ಅವನು

---

1 ಕೊಂಡಕುಂದ, ಕವಿಪರಮೇಷ್ಠಿ, ಕುಮಾರಸೇನ, ಪೂಜ್ಯಪಾದ, ಜಿನಸೇನ, ವರ್ಧಮಾನಯತಿ, ವೀರಸೇನ, ಸಮಂತಭದ್ರ, ಅಕಲಂಕ.

2. ಇನ್ನೊಂದುಪ್ರತಿಯಲ್ಲಿ ಪದ್ಯಸಂಖ್ಯೆ 1371 ಎಂದಿದೆ.

ಒಂದಾನೊಂದು ಕಾಲದಲ್ಲಿ ಇದಿರುಬೀಳಲು ದೊರೆ ಅವನನ್ನು ಸೋಲಿಸಿದಾಗ ಅವನು ಮಡುವಿನಲ್ಲಿ ಬಿದ್ದನು. ದೊರೆ ಅವನನ್ನು ಹೊರಕ್ಕೆ ತೆಗೆಯಿಸಿ ಅವನ ಅಪರಾಧವನ್ನು ಕ್ಷಮಿಸಿ ಪುನಃ ಪದವಿಯನ್ನು ಕೊಟ್ಟನು. ತಾನು ಕಳುಹಿಸಿದ ವಿಷದಮಾವಿನಹಣ್ಣನ್ನು ಮೂಸಿ ಬಿಜ್ಜಳನು ಸಾಯಲು ಬಸವನು ಹೆದರಿ ಓಡಿಹೋಗಿ ಕೆಡಲತಡಿಯ ವೃಷಭಪುರದಲ್ಲಿಯ ಒಂದು ಭಾವಿಯಲ್ಲಿ ಮುಳುಗಿ ಸತ್ತನು. "ಉಳಿವೆನೆಂದು ಪೊಕ್ಕು ಸತ್ತುದಱಿಂ" ಆ ಊರಿಗೆ ಉಳಿವೆ ಎಂದು ಹೆಸರಾಯ್ತು[1].

ಈ ಗ್ರಂಥದ ಸರಸರಚನೆಯನ್ನು ಕುರಿತು ಹೀಗೆ ಬರೆದಿದ್ದಾನೆ-

ಮೊದಲು ಪದವನಿಟ್ಟು ಮುಂದಕೆ ಪ್ರಾಸಿನ | ಹದನ ಕಾಣದೆ ಹುಡುಕಾಡಿ |
ಹೊದಕುಳಿಗೊಂಡು ಪೇಱಿದ ಸಂಗತಿಯಲ್ಲ | ಚದುರರು ಕೇಳಿ ಮುದ್ದಿಪರು ||
ಅಜ್ಜಗನ್ನಡದೆ ಸಿಸುಗಳಱುವಂದದಿ | ಪೊಜ್ಜಮುತ್ತಿನೊಳು ಪವಳವ |
ಮೆಚ್ಚುವಂದದಿ ಸರಗೊಳಿಸಿದೆ ಬಲ್ಲವರು | ನಿಚ್ಚ ಧರಿಸಿಯಿಱಿಕೈಯದೆ ||

ಗ್ರಂಥಾವತಾರದಲ್ಲಿ ಆದಿಜಿನಸ್ತುತಿ ಇದೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ--

ಬಿಜ್ಜಳ

ಸತ್ಯದ ಜಲನಿಧಿ ಯುಕ್ತಿಯ ಸುರನಗ | ಬತ್ತೀಸಾಯುಧವಿದ್ಯಾಚಾರ್ಯ |
ಮತ್ತಗಜತುರಗಸಾಧಕ ಸರ್ವಜ್ಞ | ಚಿತ್ತಜರೂಪ ಬಿಜ್ಜಳನು ||

ವೀರಶೈವಮತಹೇಳನ

ಹೊಳೆಯುನೆನೆಸಿಸುವಂತೆಯೆಲುಮಾಲೆ ಕೊರಲೊಳು|ಹುಲಿದೊಗಲನುಟ್ಟು ಮೈಯೊಳ್ |
ಬಲುರುಂಡಮಾಲೆಯ ಧರಿಸಿದ ಶಿವನನು | ಕುಲಜರು ಪೂಜೆಗೈಯುವರೇ ||
ಸತ್ತ ಹೆಣನ ಮುಟ್ಟಿ ಮನೆಗಳೊಳಗೆ ಹೂಱಿ | ಮತ್ತದಱ ಹಡಕೆಯನು |
ನಿತ್ಯದಿ ಕುಡಿದು ಹೇಸದೆ ಕೊಱ ತಿಂಬುದು | ಎತ್ತಲಿಪ್ಪುದು ಹೊಲಗೇರಿ ||
ಬಡವರ ತಿರುಕರ ನೀಚಕುಲದವರ | ತಡೆಯುಸೆಯಾಕ್ಷಣ ಕರಸಿ |
ಒಡವೆಗಳನು ಕೊಟ್ಟು ಕೊರಲಿಗೆ ಲಿಂಗವ | ಜಡಜನಗೆಲ್ಲಾ ಕಟ್ಟಿಸಿದ ||
ಕುಂಟರು ಕುರುಡರು ಗಂಟೆಯಚೋರರು | ಕೊಂಟರು ಕೊನ್ನರು ತುಡುಗರು |
ಗಂಟುಕಳ್ಳರು ಕೂಡಿ ಹಣವಿನಾಸೆಗೆ ತಮ್ಮ | ಕಂಠದಿ ಲಿಂಗಕಟ್ಟಿದರು ||

1. Vol, I. 143.

ಸತ್ತಾಗ ಹೆತ್ತಾಗ ಸೂತಕವಾದಾಗ | ಮತ್ತೆ ಸ್ನಾನವ ಮಾಡಬೇಡಿ |
ಒತ್ತಿನೊಲೆಯ ಭಸ್ಮವ ಪಣೆಯೊಳಗಿಡಿ ನಿಮಗೆ | ಹತ್ತಿದ ಕರ್ಮ ಹಱಿವುದು ||

---

## ನೂತನನಾಗಚಂದ್ರ ಸು. 1650.

ಈತನು ಜಿನಮುನಿತನಯ ಎಂಬ ಗ್ರಂಥವನ್ನು ಬರೆದಿದ್ದಾನೆ ಇವನು ಜೈನಕವಿ. ರಾಮಚಂದ್ರಚರಿತಪುರಾಣ, ಮಲ್ಲಿನಾಥಪುರಾಣ ಇವುಗಳನ್ನು ಬರೆದ ಪ್ರಸಿದ್ಧನಾದ ನಾಗಚಂದ್ರಕವಿಗೆ ತಾನು ಎರಡನೆಯವನು ಎಂಬ ಭಾವದಿಂದ "ನೂತನನಾಗಚಂದ್ರ" ಅಥವಾ "ಅಭಿನವನಾಗಚಂದ್ರ" ಎಂದು ಹೆಸರಿಟ್ಟುಕೊಂಡಂತೆ ಕಾಣುತ್ತದೆ. ಅಚ್ಚಾಗಿರುವ ಒಂದು ಪುಸ್ತಕದಲ್ಲಿ ಕವಿನೂತನನಾಗಚಂದ್ರ ಎಂಬುದನ್ನು ಕವಿವಿನುತನಾಗಚಂದ್ರ ಎಂದು ತಿದ್ದಿದ್ದಾರೆ. ಇದರಿಂದ ಪ್ರಸಿದ್ಧನಾದ ನಾಗಚಂದ್ರನೇ ಈ ಗ್ರಂಥವನ್ನು ಬರೆದಿರಬಹುದು ಎಂಬ ಭ್ರಮೆಗೆ ಅವಕಾಶವಾಯಿತು. ನಾಗಚಂದ್ರನ ಶೈಲಿಗೂ ಇವನ ಶೈಲಿಗೂ ಸಂಬಂಧವೇ ಇಲ್ಲ. ಇವನು ಆಧುನಿಕಕವಿ; ಸುಮಾರು 1650 ರಲ್ಲಿ ಇದ್ದಿರಬಹುದು.

ಈತನ ಗ್ರಂಥ--

### ಜಿನಮುನಿತನಯ

ಇದು ಕಂದದಲ್ಲಿ ಬರೆದಿದೆ; 106 ಪದ್ಯಗಳಿವೆ. ಪ್ರತಿಪದ್ಯವೂ 'ಜಿನಮುನಿತನಯಾ' ಎಂದು ಮುಗಿವುದರಿಂದ ಗ್ರಂಥಕ್ಕೆ ಈ ಹೆಸರು ಬಂದಿದೆ. ಇದು ಜಿನಧರ್ಮಬೋಧಕವಾಗಿಯೂ ನೀತಿಬೋಧಕವಾಗಿಯೂ ಇದೆ. ಗ್ರಂಥಾವತಾರದಲ್ಲಿ ಜಿನಸ್ತುತಿ ಇದೆ. ಇದರಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ--

ಭಾವಿಸುತಿರ್ಪಾಪಸುರ್ಪ್ಪೞು | ಭಾವನೆಯಿಂ ಕೂಡಿ ತಾನೆ ಕಡದುಱುವಾಯ್ತೆನೆ |
ಭಾವನೆಯಿಂದಪ್ಪುದು ಯು | ದ್ಧ್ಯಾವಂ ತದ್ಭವತಿಯಲ್ತೆ ಜಿನಮುನಿತನಯಾ ||
ಕನು ಕುಸಿಯದೆ ತಲೆ ಸರೆಯದೆ | ನೆನಸುಱಿಯದೆ ಧೈರ್ಯಶಕ್ತಿ ಕುಂದದಮುನ್ನಂ |
ಜಿನುಮಯನನುಪಮಗುಣಮಂ| ನೆನೆವುದು ತಾಂ ತನ್ನನಱಿತು ಜಿನಮುನಿತನಯಾ||
ಮತಿಗೆಡಿಸುವ ಗತಿಗೆಡಿಸುವ | ಧೃತಿಗೆಡಿಸುವ ಬಲ್ಪುಗೆಡಿಸುವಂತಹ ಕಳ್ಳಂ |
ಕ್ಷಿತಿಯೊಳ್ ಕುಡಿವರ್ ಕುಡಿಯು | ಲ್ಲತಿಧನಮಂ ಕಳೆವರೇಕೆ ಜಿನಮುನಿತನಯಾ||

ಆಳುಂ ಪೆಂಡಿರ್ ಸುತರುಂ | ಮೇಳದವರ್ ನಂಟರಿಷ್ಟರೊಡಹುಟ್ಟಿದರುಂ |
ಕಾಲಾಳುವಶ್ವಚಯಮುಂ | ಜಾಳಿಸುವುವೆ ಜವನ ಮುಳಿಸ ಜಿನಮುನಿತನಯಾ ||
ಕಾಲೊಳ್ ಮುಳ್ಳಿರವೆನಿತುಂ | ಕೀಲಿಸಿದೊಡೆ ನೊಂದ ನೋವ ತಿಳಿಯುತ್ತುಂ ದು |
ಶ್ಶೀಲರ್ ನಿರ್ದಯದಿಂದಂ | ಕೊಲುವರ್ ತಮ್ಮಂತೆಯುಳ್ತ್ತೆ ಜಿನಮುನಿತನಯಾ ||

---

## ಸಿಂಹರಾಜ. ಸು. 1650

ಈತನು ಚಿನ್ಮಯಚಿಂತಾಮಣಿ ಎಂಬ ಗ್ರಂಥವನ್ನು ಬರೆದಿದ್ದಾನೆ. ಈ ಗ್ರಂಥವು ಕಲ್ಯಾಣಕೀರ್ತಿಕೃತವೆಂದು ಕೆಲವರು ಹೇಳುತ್ತಾರೆ. ನಮಗೆ ದೊರೆತ ಒಂದು ಪ್ರತಿಯಲ್ಲಿರುವ 99 ನೆಯದಾದ

ಪರಮಜಿನಪಾದಭಕ್ತಂ | ನಿಗುತಂ ಹುಲಿಗೆಱೆಯ ಸಿಂಹರಾಜಂ ಪೇಟ್ದಂ |
ವರನೀತಿಯನಾದರದಿಂ | ಪರಮಪರಂಜ್ಯೋತಿಗಳ್ಗೆ ಬುದ್ಧಿಯನಿನಿಸಂ ||

ಎಂಬ ಪದ್ಯದಿಂದ ಗ್ರಂಥಕರ್ತನು ಸಿಂಹರಾಜನೆಂದೂ ಪುಲಿಗೆರೆಯವನೆಂದೂ ಜೈನನೆಂದೂ ತಿಳಿಯುತ್ತದೆ. ಇವನ ಕಾಲವು ಸುಮಾರು 1650 ಆಗಿರಬಹುದೆಂದು ಊಹಿಸುತ್ತೇವೆ.

ಇವನ ಗ್ರಂಥ

### ಚಿನ್ಮಯಚಿಂತಾಮಣಿ.

ಇದು ಕಂದದಲ್ಲಿ ಬರೆದಿದೆ; ಪದ್ಯ 100. ಇದಕ್ಕೆ ಹರದನೀತಿ ಎಂಬ ಹೆಸರೂ ಉಂಟು. ಚಂಪಕಾಪುರದ ಚಂದ್ರಕೀರ್ತಿ ಎಂಬ ವರ್ತಕನು ಸೂರಸೇನನೆಂಬ ತನ್ನ ಮಗನಿಗೆ ಉಪದೇಶಿಸಿದ ನೀತಿ ಇದರಲ್ಲಿ ಉಕ್ತವಾಗಿದೆ. ಇದರಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ—

ಕಯ್ವಾರದವರನೊಲ್ಲದೆ | ಬಯ್ವವರಂ ಶೂನ್ಯಹೃದಯರಂ ನಿರ್ದಯರಂ |
ಮುಯ್ವಾಂತು ಕೂಡಿ ನಡೆಯಲ್ | ನಾಯ್ವಾಲಂಬಿಡಿದು ತೊಱೆಯನೀಸುವ ಮಾರ್ಗಂ ||

ಎರಡುಂ ಮೂಱಿಂ ಬರಿಸಂ | ಕೆಱೆತುಂಬಿದ ಮಣ್ಣನಿಕ್ಕಿ ಬೆಳೆವುದು ಮತ್ತಂ |
ಮರುಳಾಗಿ ಕೈಯ ನೋಡದೆ | ನೆರಪಿಯ ನಡುಪಿರ್ದ ಕೈಯ ಬೆಳಸಾದವುದೇ ||
ಅಲ್ಲದ ಸತಿಯೊಡನಾಟಂ | ತಲ್ಲಣಿಸುವ ಭಯದ ಬಟ್ಟೆ ಕಳ್ಳರ ಸಂಗಂ |
ಬಲ್ಲಿದರೊಡನೆ ವಿರೋಧಂ | ಕೊಲ್ಲದೆ ಮಾಣ್ದಪುದೆ ಸುಕವಿಕರ್ಣಾಭರಣಾ ||

---

## ಚಂದ್ರಮ. ಸು. 1650.

ಇವನು ಲೋಕಸ್ವರೂಪವನ್ನು ಬರೆದಿದ್ದಾನೆ. ಈತನು ಜೈನಕವಿ; ಚಂದ್ರಕೀರ್ತಿಯೋಗೀಶ್ವರನ ಶಿಷ್ಯನು; ತುಳುಮಧುರೆಯ ಅಳಿಯರಪುರದವನೆಂದು

ತುಳುಮಧುರೆಯೆನಿಪ ದೇಶದೊ | ಳಳಿಯರಪುರದಲ್ಲಿ ನಿಂದ ವಿಜಯಜಿನೇಂದ್ರಂ |
ಗೊಲಿದೆಚ್ಚರಿ ಪೇಳ್ದ ಕಂದಗ | ಳಿಳಿಯೊಳ್ ವರ್ತಿಸಲಿ ಮೇರುವಿರ್ಪನ್ನೆವರಂ ||

ಎಂಬ ಪದ್ಯದಿಂದ ತಿಳಿಯುತ್ತದೆ. ಇವನು ಗಣಿತಸಾರ ಎಂಬ ಗ್ರಂಥವನ್ನೂ ಬರೆದಿದ್ದಾನೆಂದು ಹೇಳುತ್ತಾರೆ, ಇದು ನಮಗೆ ದೊರೆತಿಲ್ಲ. ಇವನ ಕಾಲವು ಸುಮಾರು 1650 ಆಗಬಹುದು.

ಇವನ ಗ್ರಂಥ

### ಲೋಕಸ್ವರೂಪ.

ಇದು ಕಂದರೂಪವಾಗಿದೆ; ಪದ್ಯ 140. ಇದರಲ್ಲಿ ಮೂರುಲೋಕಗಳ ಸ್ಥಿತಿ ವರ್ಣಿತವಾಗಿದೆ. ಸಂಸ್ಕೃತದಲ್ಲಿದ್ದುದನ್ನು ಕನ್ನಡಿಸಿದಂತೆ ಕವಿ ಈ ಪದ್ಯದಲ್ಲಿ ಹೇಳುತ್ತಾನೆ---

ಇದು ಜಿನರ್ ಜನಿರೂಪಿತ | ಸದಮಳಸ್ಯಾದ್ವಾದವೆಂಬ ಪರಮಾಗಮದಿಂ |
ದೊದವಿಸಿ ಕನ್ನಡದಿಂದಂ | ಮೃದುಮಾರ್ಗದೆ ಪೇಳ್ದೆ ಮೂಱುಲೋಕಸ್ಥಿತಿಯಂ||

ಗ್ರಂಥಾವತಾರದಲ್ಲಿ ಜಿನಸ್ತುತಿ ಇದೆ. ಇದರಿಂದ ಒಂದೆರಡು ಪದ್ಯಗಳನ್ನು ತೆಗೆದು ಬರೆಯುತ್ತೇವೆ--

ಅರೆಮುರಜದ ಮೇಲೊಂದಂ | ನೆಱೆ ಮುರಜಮನಿರಿಸಿದಂತೆ ತೋರ್ಪುದು ಲೋಕಂ ||
ಎರಡೇೞುರಜ್ಜುವೂರ್ಧ್ವೋ | ತ್ತರದಕ್ಷಿಣದೇೞುರಜ್ಜು ಘನಗೊಂಡಿರ್ಕುಂ ||
ಅರೆಮುರಜಮಧೋಲೋಕಂ | ನೆಱೆಮುರಜಮದೂರ್ಧ್ವಲೋಕಮದಱಾದಿಯೊಳಂ ||
ಇರುವುದು ಮಧ್ಯಮಲೋಕಂ | ಅರೆಮುರಜದೊಳೇೞುಭೂಮಿರಜ್ಜ್ವಂತರಿತಂ |
ಜಂಬೂದ್ವೀಪದ ಮಧ್ಯದಿ|ಕಂಭದ ನಟ್ಟಂತೆ ಮೇರುಗಿರಿಯಿರ್ಪುದದುಂ |
ತೊಂಬತ್ತೊಂಬತ್ತುಸಾಸಿರ | ದಿಂಬಿನಯೋಜನಗಳುದ್ದ ಘಾತಸಹಸ್ರಂ ||

## ಗಂಗ. ಸು. 1650.

ಇವನು ಕುಮಟರಾಮನಕಥೆಯನ್ನು ಬರೆದಿದ್ದಾನೆ. ಈತನು ವಾಂಚಾಳದವನು; ಕನ್ನಡಕವಿಜಾಣ, ಚಿನ್ನಭುಜಂಗನ ಭೃತ್ಯ ಎಂದು ಹೇಳಿಕೊಂಡಿದ್ದಾನೆ. ತಗಡೂರುಕಟ್ಟೆಯಲ್ಲಿರುವ ಗಣೇಶನನ್ನು ಸ್ಮರಿಸುತ್ತಾನೆ; ಅಲ್ಲದೆ ಇವನ ಗ್ರಂಥದಲ್ಲಿ ಅಲ್ಲಲ್ಲಿ ಜಟಂಗಿರಾಮೇಶ್ವರನ ಅಂಕಿತವು ದೊರೆಯುತ್ತದೆ. ಇವನ ಕಾಲವು ಸುಮಾರು 1650 ಆಗಿರಬಹುದು. ಪೂರ್ವಕವಿಗಳಲ್ಲಿ ಭಾಗುರಿ, ಅಗ್ಗಳ, ಹಲಾಯುಧ, ರಾಘವ, ವಾಲ್ಮೀಕಿ, ನಾಗವರ್ಮ ಇವರುಗಳನ್ನು ಸ್ಮರಿಸಿದ್ದಾನೆ. ತನ್ನ ಕವಿತಾಚಾತುರಿಯನ್ನು ಈ ಪದ್ಯದಲ್ಲಿ ತಿಳಿಸಿದ್ದಾನೆ—

ಸಕ್ಕರೆ ಸವಿಯಂತೆ ಮಧುರಮಾವಿನಹಣ್ಣು । ಉಕ್ಕುವ ತನಿರಸದಂತೆ ।
ಮಕ್ಕಳ ನಸುನಗೆಯಂತೆ ಗಂಗನ ಮಾತು । ಸತ್ಕವಿಗಳು ಲಾಲಿಪುದು ॥

ಇವನ ಗ್ರಂಥ

### ಕುಮಟರಾಮನಕಥೆ

ಇದು ಸಾಂಗತ್ಯದಲ್ಲಿ ಬರೆದಿದೆ; ಪದ್ಯ 3128. ಇದರಲ್ಲಿ ಕುಮಾರರಾಮನಕಥೆ ಹೇಳಿದೆ. ಕಥಾಗರ್ಭವನ್ನು ಕವಿ ಈಪದ್ಯದಲ್ಲಿ ಸೂಚಿಸಿದ್ದಾನೆ:

ಮುತ್ತಿನ ಚೆಂಡನಾಡಲು ರಾಮನಾಥಗೆ । ಮೃತ್ಯುವಾದಳು ಪಾಪಿ ರತ್ನಿ ।
ಮತ್ತೆ ಪ್ರಧಾನಿಗಳರಿಸಿ ಕೊಲ್ಲದೆ ಕಾದ । ಚಿತ್ರದ ಕಥೆಯ ಹೇಳುವೆನು 1 ॥

ಗ್ರಂಥಾವತಾರದಲ್ಲಿ ಗಣೇಶಸ್ತುತಿ ಇದೆ. ಬಳಿಕ ಕವಿ ಗರಳಪುರದ ನಂಜುಂಡ, ಬ್ರಹ್ಮ, ಸರಸ್ವತಿ, ನಾರದ ಇವರುಗಳನ್ನು ಸ್ತುತಿಸಿದ್ದಾನೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ರತ್ನಿಯನ್ನುಕುರಿತು ಕುಮಾರರಾಮನ ಉಕ್ತಿ

ಅಂಜೆನು ಪುಲಿಸಿಂಹಶಾರ್ದೂಲರಣಕೆ ನಾ । ನಂಜೆನು ಹರನ ಕರುಣದಲಿ ।
ಅಂಜುವೆನು ಪರಸತಿಯರಿಗೆ ನಾ । ಕುಂಜರಗಮನೆ ಚಿಕ್ಕಮ್ಮಾ ॥
ತಂದೆಯ ರಾಣಿ ನಿನಗೆ ನಾನು ಕಂದನು । ಚಂದವಲ್ಲವೆ ನಿನಗಿದು ಗುಣವೆ ।
ಬೆಂದ ವಿಷಯಕೊಳಗಾದರೆ ನರಕವು । ಮುಂದೆ ತಪ್ಪದು ಕಾಣಮ್ಮಾ ॥

---

1 204 ನೆಯ ಪುಟವನ್ನು ನೋಡಿ.

ತುರುಕರ ರಾಜಿಕದಲ್ಲಿ ಜನರು ದೇಶವನ್ನು ಬಿಡುವುದು.

ನಡೆವ ದಂಡನು ಕಂಡು ಗಡಿಯ ನಾಯಕರೆಲ್ಲಾ | ಮಡಕೆಯನಿಂಬುಮಾಡುವರು|
ಅಡಗಿದ್ದ ತೆಲುಗರು ಗಿಡವ ಹೊಕ್ಕರು ತಾವು| ತಡೆಯದೋಡಿದರು ಕೊಂಕಣರು ||
ಕುಱಿಯ ಹಿಂಡುಗಳನು ತೆರಳಿಸಿಕೊಳ್ಳುತ್ತ | ಮಱಿಗಳ ಹೆಗಲೊಳು ಹೊತ್ತು |
ಮಱುಗುತ್ತ ಹೆಂಡಿರ ಕೈಯಲಿ ಹಿಡಿಕೊಂಡು | ಕುಱುಬರ ಗೂಳೆಯ ನಡೆಯೆ ||
ಓದುವ ಹಲಗೆಕಡಿತಬಳಹದ ಹೊಱೆ | ವೇದಪುಸ್ತಕಪೇಟಿಕೆಯ |
ಓದಿಸುವಣ್ಣಗಳೊಡಗೊಂಡು ಬಂದರು | ಸಾಧಿಸಿ ಗೂಳೆಯ ನಡೆಯೆ ||
ಅಡೆಗಲ್ಲು ತಿದಿ ಮುಟ್ಟು ಹಿಡಿವ ಇಕ್ಕಟಿ ಕೈಯ | ಬಿಡದೆ ಕೆತ್ತುವ ಬಾಚಿಗಳು |
ಎಡದಕೈಯಲಿ ಉಳಿಹಿಡಿದ ಪಂಚಾಳರು | ನಡೆದರು ಗೂಳೆಯದೊಳಗೆ ||

ಕುಮಾರರಾಮನ ಹೆಂಡತಿಯ ಉಕ್ತಿ

ಗಂಡನೆ ಗತಿ ಮತಿ ಗಂಡನೆ ಕುಲದೈವ | ಗಂಡನೆ ಪ್ರಾಣಕ್ಕೊಡೆಯ |
ಗಂಡರಗಂಡ ಉದ್ದಂಡರಾಮನ ಬಿಟ್ಟು | ಮುಂಡೆಗೂಚುಂಬವಳಲ್ಲ ||

---

ಗುರುಪ್ರಸಾದ. ಸು. 1650

ಈತನು ಸುಯೋಗಚಾರಿತ್ರವನ್ನು ಬರೆದಿದ್ದಾನೆ. ಇವನು ಬ್ರಾಹ್ಮಣ ಕವಿ; ಮಾಧ್ವನೆಂದು ತೋರುತ್ತದೆ. ಇವನ ಕಾಲವು ಸುಮಾರು 1650 ಆಗಿರಬಹುದೆಂದು ಊಹಿಸುತ್ತೇವೆ.

ಇವನ ಗ್ರಂಥ

ಸುಯೋಗಚಾರಿತ್ರ

ಇದು ವಾರ್ಧಕಷಟ್ಪದಿಯಲ್ಲಿ ಬರೆದಿದೆ; ಸಂಧಿ 11, ಪದ್ಯ 775. ಇದಕ್ಕೆ ವೈರಾಗ್ಯಪುರಾಣ ಎಂಬ ಹೆಸರೂ ಉಂಟು. ಇದರಲ್ಲಿ ಯೌವನಾಶ್ವ, ಪ್ರಭಾವತಿ ಇವರ ಮಗನಾದ ಸುಯೋಗನಿಗೆ ಭಾರದ್ವಾಜನು ವೈರಾಗ್ಯಸ್ಥಿತಿಯನ್ನು ಬೋಧಿಸಿದ ಕಥೆ ಹೇಳಿದೆ. ಆರಂಭದಲ್ಲಿ ಮುಖ್ಯಪ್ರಾಣದೇವರ ಸ್ತುತಿಯೂ ಅಲ್ಲಲ್ಲಿ ತಿರುಪತಿ ಶ್ರೀನಿವಾಸನ ಅಂಕಿತವೂ ಇವೆ. ಗ್ರಂಥಾಂತ್ಯದಲ್ಲಿ ಈ ಗದ್ಯವಿದೆ—

ಇತಿ ಶ್ರೀವೈರಾಗ್ಯಪುರಾಣೇ ಸೂತಶೌನಕಸಂವಾದೇ ಶ್ರೀಮದ್ಗುರುಪ್ರಸಾದವಿರಚಿತೇ ಸುಯೋಗಚಾರಿತ್ರೇ.

ಈಗ್ರಂಥದಿಂದ ಬಂದೆರಡುಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ—

ಸೂರ್ಯೋದಯ

ಮೂಡಣದ್ರಿಯ ಕೆಂಪು ತೋಱೆ ತಾರಗೆ ಪರಿಯೆ |
ಗೂಢಮಾಗಿರ್ದ ಕಮಲಂ ಬಿರಿಯೆಯುಳಿ ಸರಿಯೆ |
ಕೂಡಿಸಿದ ತಂಬೆಲರ ಚಳಿ ಮುಱಿಯೆ ತಾಮ್ರಚೂಡಂ ಕರೆಯೆ ರಜನಿ ಪರೆಯೆ ||
ಗಾಢದಲಿ ಚಕ್ರವಾಕಂ ಮೆಱೆಯೆ ಮಿಗೆ ಸಿರಿಯ |
ಕೂಡಿ ದೇಗುಲವಾದ್ಯ ಮೊರೆಯೆ ಕಿವಿ ಕಿಕ್ಕಿಱಿಯೆ |
ಮೂಡಿದನು ರವಿ ಹಕ್ಕಿಯುಲಿದು ಮೊಱೆಯೊಳು ಬೆರೆಯೆ ನೈದಿಲೆಯ ಸೊಂಪು ಪಱಿಯೆ||

ದೇವರ ದರ್ಶನ

ದಾರಿದ್ರನಿಗೆ ಧನವು ಬಯಸೆ ಬಂದಂತೆ ಬಲು |
ನೀರಡಸಿದವಗೆ ಗಂಗೋದಕವು ದೊರೆತಂತೆ |
ಕುರುಡನಿಗೆ ಕಣ್ಗಳವು ಬಂದತೆಱನಂತೆ ಕುಮತಿಗೆ ಗುರುವು ಸಿಲುಕಿದಂತೆ ||
ಭರದಿಂದ ಬಿಸಿಲಿನೊಳು ಬಟಲಿದವನಿಗೆ ನೆಟಿಲು |
ದೊರೆತಂತೆ ಪರಮಪತಿತಗೆ ಮುಕುತಿಯಾದಂತೆ |
ನೀರೊಳಗೆ ಮುಳುಗಿ ಸಾವನಿಗೆ ನಾವೆಯು ಸಿಲುಕಿದಂತೆನಗೆಮೊಲಿದೆ ಸ್ವಾಮಿ ||

---

ವೀರಜನಪತಿ. ಸು 1650

ಈತನು ವಿಕ್ರಮವಿಲಾಸವನ್ನು ಬರೆದಿದ್ದಾನೆ. ಇವನು ವೀರಶೈವ ಕವಿ; ಇವನ ತಂದೆ ಬೆಳಗೋಡಹುಟ್ಟ ಭೂಪಾಲಚಂದ್ರನ ಕುಲತಿಲಕನಾದ ಹಾಲೇಂದ್ರ, ತಾಯಿ ಮಲ್ಲಾಂಬಿಕೆ. ಇವನು ಸುಮಾರು 1650 ರಲ್ಲಿ ಇದ್ದಿರಬಹುದೆಂದು ತೋರುತ್ತದೆ. ಪೂರ್ವಕವಿಗಳನ್ನು ಈಪದ್ಯದಲ್ಲಿ ಸ್ಮರಿಸಿದ್ದಾನೆ—

ಕವಿಕಾಳಿದಾಸ ಮಯೂರನುದ್ಭಟ ಬಾಣ | ಕವಿಮಲುಹಣ ಭವಭೂತಿ |
ಭುವನವಿನುತರಪ್ಪ ಶಿವಕವಿಗಳ ನೋಂತು | ವಿವರಿಪೆ ನಾಸೀಕೃತಿಯ ||

ಇವನ ಗ್ರಂಥ

## ವಿಕ್ರಮವಿಲಾಸ

ಇದು ಸಾಂಗತ್ಯದಲ್ಲಿ ಬರೆದಿದೆ; ಸಂಧಿ 23, ಪದ್ಯ 1621. ಇದರಲ್ಲಿ ನೀಲಕಂಠನ ಸದ್ಭಕ್ತನಾದ ಉಜ್ಜಯನೀರಾಜಚಂದ್ರಗುಪ್ತಕುಮಾರ ವಿಕ್ರಮನ ಕಥೆ ಹೇಳಿದೆ. ಗ್ರಂಥಾದಿಯಲ್ಲಿ ವಿರೂಪಾಕ್ಷಸ್ತುತಿ ಇದೆ. ಬಳಿಕ ಕವಿ ಪಾರ್ವತಿ, ಗಣೇಶ, ವೀರೇಶ, ಭದ್ರಕಾಳಿ, ವಾಣಿ ಇವರುಗಳನ್ನು ಸ್ತುತಿಸಿದ್ದಾನೆ. ಸಂಧಿಗಳ ಕೊನೆಯಲ್ಲಿ ಬೆಳಗೋಡರಸವೀರಭದ್ರೇಶನ ಅಂಕಿತವಿದೆ. ಈಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿಬರೆಯುತ್ತೇವೆ:

### ಚಂದ್ರ

ಗರಳದೊಡನೆ ಹುಟ್ಟಲು ಕಱೆಯಾದುದೊ | ವಿರಹಿಜನದ ನಿಟ್ಟುಸುರ |
ಉರಿ ತಾಗಿ ಕಂದಿತೊ ಎನಲು ಕಳಂಕ ಗೋ | ಚರಿಸಿತು ಚಂದ್ರನೆಡೆಯೊಳು ||
ಸ್ಮರನಡ್ಡಣವೊ ರತಿಯ ಮುತ್ತಿನ ಬೊಟ್ಟೊ | ಸುರಪನ ವಜ್ರದರ್ಪಣವೋ |
ವಿರಹಿಗಳೆದೆಗಿಚ್ಚಿನುರಿಯೊ ಎಂದೆನಲಂ | ಬರವ ಬೆಳಗಿದ ಶಶಾಂಕ ||
ಮಾರನ ಬೇಳ್ವೆಯ ಬೂದಿಯೊ ಮನ್ಮಥ | ವೀರನು ಬೀಸಿದ ಬಲೆಯೋ ||
ನೀರಜಶರನ ಕಠಾರಿಯ ಹೊಳಹೆನೆ | ಬೀಱಿದ ಶಶಿ ಚಂದ್ರಿಕೆಯ ||

### ಸಮುದ್ರ

ಬೆಳಗುವ ಚಂದ್ರ ತನ್ನೊಳು ಪುಟ್ಟಿಯೆದೆಗಪ್ಪು | ದಳೆದಿರಲಂಬುಧಿ ನೋಡಿ |
ತೊಳೆವೆನೆಂದಾಗಸಕೇಱೊಲು ತೆರೆಗಳು | ಚ್ಚಳಿಪುವು ಗಗನಮಂಡಲಕೆ ||

### ಸಿಂಧುನದಿ

ಸೆಳವು ತಿರುಹು ಮಡು ನೆಲೆಗಾಣದಿಹ ತಾಣ | ಸುೞಿ ಮುಱಿದೆತ್ತುವ ಮಲಹು |
ಮಱಿಲ ದಿಣ್ಣೆಗಳನೋಸರಿಸುತಿತ್ತಡಿಗಳ | ನಲೆಯುತ ತಟ್ಟಿ ರಂಜಿಸಿತು ||

### ಆರಾಮ

ತನುವೆಂಬ ಕುಲುಮೆ ತಂಬೆಲರಿನ ತಿದಿ ಕೆಂ | ಗೊನರಗ್ನಿಯಲಿ ನನೆಸರಳ |
ಮೊನೆಮಾಡಿ ಚೈತ್ರಕಾರುಕ ಮದನನಿಗೀವ | ಮನೆಯೆನಲೊಪ್ಪಿತಾರಾಮ ||

### ಸ್ತ್ರೀವರ್ಣನೆ

ತಿಲಕಕುಸುಮವೊ ಚೆಂದುಟಿತೊಂಡೆವಣ್ಣನು | ಮೇಲಿಱುವೆಳಗಿಳಿಗೊಕ್ಕೋ |
ಅಳಿವಗೆಯಾಗದ ಸಂಪಗೆಯರೆಬಿರಿ | ದಲರೊ ಕೋಮಲೆಯ ನಾಸಿಕವೋ ||

---

## ಪೆಮ್ಮಿಸೆಟ್ಟಿ ಸು. 1650

ಈತನು ಗುರುಭಕ್ತಾಂಡಾರ ಚರಿತ್ರೆಯನ್ನು ಬರೆದಿದ್ದಾನೆ. ಇವನು ವೀರಶೈವಕವಿ; ಮುರುಳುಸಿದ್ಧೇಶನ ಕರಜಾತನು. ಇವನಿಗೆ ಪ್ರಾಸಭೂಷಣ ಎಂಬ ಹೆಸರೂ ಉಂಟು; "ಶಿವಕವಿಗೆ ಪ್ರಾಸವೇ ಭೂಷಣಗಳಾಗಿ ಕೈಕೊಂಡೆನೆನ್ನ ಪೆಸರನು'' ಎನ್ನುತ್ತಾನೆ. ಈ ಹೆಸರಿಗೆ ಅನುಗುಣವಾಗಿ ಇವನ ಗ್ರಂಥವು ಪ್ರಾಸದಿಂದ ತುಂಬಿದೆ. ಇವನು ಸುಮಾರು 1650 ರಲ್ಲಿ ಇದ್ದಿರಬಹುದು. ಪೂರ್ವಕವಿಗಳಲ್ಲಿ ಬಾಣ, ಉದ್ಭಟ, ಮಲುಹಣ್ಣ, ಹಲಾಯುಧ, ಕಾಳಿದಾಸ, ಕೇಶಿರಾಜ, ಭೋಜ, ರಾಮಯ್ಯ ಇವರುಗಳನ್ನು ಸ್ಮರಿಸಿದ್ದಾನೆ.

ಇವನ ಗ್ರಂಥ

### ಗುರುಭಕ್ತಾಂಡಾರಚರಿತ್ರೆ.

ಇದು ಉದ್ದಂಡಷಟ್ಪದಿಯಲ್ಲಿ ಬರೆದಿದೆ; ಸಂಧಿ 3, ಪದ್ಯ 273. ಇದರಲ್ಲಿ ಗುರುಭಕ್ತಾಂಡಾರೆಂಬ ಶಿವಭಕ್ತನ ಚರಿತ್ರವು ಹೇಳಿದೆ. ಪಾಲ್ಕುರಿಕೆ ಸೋಮೇಶ್ವರನು ಆಂಧ್ರಭಾಷೆಯೊಳಗೆ ದ್ವಿಪದಿಯಲ್ಲಿ ಬರೆದಿರುವ ಗುರುಭಕ್ತಾಂಡಾರ ಚರಿತ್ರೆಯನ್ನು ಕನ್ನಡಿಸು ಎಂದು "ಬಸವಣ್ಣ ನೆನೆಹಿನೊಳ್ ಬಂದು ಭಸಿತವನಿಟ್ಟು ಮತಿಗೊಡಲು'' ತಾನು ಈ ಗ್ರಂಥವನ್ನು ಬರೆದಂತೆ ಹೇಳುತ್ತಾನೆ.

ಗ್ರಂಥಾವತಾರದಲ್ಲಿ ಮುರುಳುಸಿದ್ಧೇಶನ ಸ್ತುತಿ ಇದೆ. ಗ್ರಂಥಾಂತ್ಯದಲ್ಲಿ ಈ ಗದ್ಯವಿದೆ---

ಇದು ಶ್ರೀಮತ್ಪಂಚಾಕ್ಷರೀಪಂಚಮುಖದ ಪಂಚಾಚಾರಪರಿಪೂರ್ಣಪರಮಜ್ಞಾನಪರಂಜ್ಯೋತಿಪರಮಪ್ರಕಾಶಪರಮಕಲೆಯ ಪ್ರಣವೋಂಕಾರಪ್ರಾಣಲಿಂಗಪ್ರತಿಷ್ಠಾಪಾಲಕಪ್ರಸಿದ್ಧಾವತಾರ ಪರಮಯೋಗೀಶ್ವರಪರಮಗುರುಮುರುಳುಸಿದ್ಧೇಶ್ವರನ ಕಾರುಣ್ಯಪ್ರಸಾದಿ ಶಿವಕವಿ ಪೆಮ್ಮಿಸೆಟ್ಟಿಯರು ಶಿವಶರಣರ ಶ್ರೀಪಾದರೇಣುವಂ ಧರಿಸಿದ ಬಲದಿಂದೆ ಪ್ರಾಸಭೂಷಣನೆಂಬ ಪೆಸರ್ವೆತ್ತು ಪೇಳ್ದ ಗುರುಭಕ್ತಾಂಡಾರಚರಿತ್ರೆ.

ಈ ಗ್ರಂಥದಿಂದ ಕವಿಯ ವಿಷಯವಾದ ಎರಡು ಪದ್ಯಗಳನ್ನು ತೆಗೆದು ಬರೆಯುತ್ತೇವೆ---

ಪೊಡವಿಯೊಳ್ ಜಡಿವ ಗಿರಿ ದಡದಲ್ಲಿ ನುಡಿವವರ |
ನೊಡನೊಡನೆ ನುಡಿವಂತೆ ಮೃಡನು ಎನ್ನೊಡನಿರ್ದು |

ನುಡಿಸಿದರೆ ನುಡಿದೆನಾಂ ಬೆಡಗುಗಳ ಗಡಣದಿಂ ಕಡುಸೊಬಗುವಡೆದ ಕೃತಿಯ ||
ವೃಡಶರಣರಡಿಗೆಱಗಿ ಸಡಗರದೊಳೊಡರಿಸುವೆ |
ಬಿಡದೆ ತಪ್ಪಡಸಿಬಂದೊಡೆ ಕಲಿಸಿ ನಡೆಗೊಳಿಸಿ |
ವೃಡಭಕ್ತಿಗೊಡಲಿತ್ತು ಪಡೆದರ್ಥ ಕೆಡದರ್ಥಕೆಡೆವೆತ್ತ ದೃಢಚಿತ್ತರು ||
ಶ್ರುತಿಯ ಸೊಬಗುಗಳ ಸಂಗತಿಯ ಸಾರದ ಮಹೋ |
ನ್ನತಿಯನುಪಮಾನಂದರತಿಯ ರಂಜಕದ ಗಿರಿ |
ಸುತೆಯ ನಿಜಪತಿಯ ಘನನುತಿಯ ಚದುರತೆಯ ಪದಗತಿಯ ಸತ್ಕೃತಿಯ ಕಥೆಯ ||
ಕ್ಷಿತಿಯೊಳಗೆ ಮೆಱೆವಂತುಟತಿಮುದದೊಳೆನ್ನ ಬಡ |
ಮತಿಗೆ ತಕ್ಕಂತೆ ನಾಂ ನುತಿಸುವೆನು ನೆಱೆ ಕೇಳಿ |
ಸಿತಗಳನ ಕವಿಗಳಪ್ರತಿಯೆನಿಸುತಿರ್ದ ವಸುಮತಿಯೊಳಗೆ ಗತಿಗೊಳಿವುದು ||

---

## ದೊಡ್ಡ ಷಡಕ್ಷರಿಸ್ವಾಮಿ ಸು. 650

ಈತನು ವಚನಗಳನ್ನು ಬರೆದಿದ್ದಾನೆ. ಇವನು ವೀರಶೈವಕವಿ; ನಂಜನಗೂಡು ನಂಜುಂಡೇಶ್ವರನನ್ನು ಸ್ತುತಿಸುತ್ತಾನೆ; ಆ ಸ್ಥಳದವನಾಗಿರಬಹುದೋ ಏನೋ ತಿಳಿಯದು. ಇವನು ಸುಮಾರು 1650 ರಲ್ಲಿ ಇದ್ದಿರಬಹುದೆಂದು ಊಹಿಸುತ್ತೇವೆ.

ಇವನ ಗ್ರಂಥ

### ವಚನಗಳು

ವಚನಗಳು ಎಂಬ ಹೆಸರಿದ್ದರೂ ಈ ಗ್ರಂಥವು ಹಾಡಿನ ರೂಪವಾಗಿರುವ ಷಟ್ಪದಿಯಲ್ಲಿ ಬರೆದಿದೆ; ಪ್ರಾಯಿಕವಾಗಿ ನಂಜನಗೂಡು ನಂಜುಂಡೇಶ್ವರ, ಪಾರ್ವತಿ ಇವರುಗಳ ಸ್ತುತಿರೂಪವಾಗಿದೆ. ಕೆಲವು ಪದಗಳು ಶಿವಪೂಜಾಪದ್ಧತಿಯನ್ನು ವಿವರಿಸುತ್ತವೆ. ಒಂದೆರಡು ಪದ್ಯಗಳನ್ನು ಉದಾಹರಿಸುತ್ತೇವೆ—

ವರಗಿರಿಜಾನನಸರಸಿರುಹಾರ್ಕನೆ | ಕರುಣಾರಸಮಯನಿರುಪಮಮಹಿಮನೆ |
ನಿರಘಚರಿತ್ರನೆ ಕಪಿಲಾಕ್ಷೇತ್ರದ ಗರಳಪುರಾಧಿಪನೆ ||
ಗರುವನೆ ಘನಗಂಭೀರನೆ ಧೀರನೆ | ಶರಣಾಗತಜನಪಾಲನೆ ಲೋಲನೆ |
ನರಸುರವಂದ್ಯನೆ ಪರತರನಂಜುಂಡೇಶ ಕೃಪಾಕರನೆ ||

ತೊಳಗುವ ಫಣಿಕುಂಡಲಮಣಿಕಿರಣದ | ತೆಳುಗದಪಿನ ನಗೆಮೊಗದತಿಸೊಬಗನೆ |
ಎಳಸಿತಚಂಪಕನಾಸಿಕಕುಡಿವುರ್ದಿನ ಸೊಗಸೊಪ್ಪುವನೆ ||
ಥಳಥಳಿಸುವ ಸಿತಭಸಿತಲಲಾಟನೆ | ಸೆಳೆಮಿಂಚೆನೆ ಮಿಸುಗುವ ಜಡೆಮುಡಿಯೊಳು |
ಪೊಱಿವೆಣ್ಣಾಳ್ವನೆ ರತಿಪತಿಕೋಟಿಯ ಪಱಿವತಿಸೌಂದರನೆ ||
ಪರಮಪವಿತ್ರೆಗೆ ನಿರಘಚರಿತ್ರೆಗೆ | ಸುರರಿಪುಶಮನೆಗೆ ಕರಿರಿಪುಗಮನೆಗೆ |
ಶರಣಾಗತರಕ್ಷೆಗೆ ನಿರಪೇಕ್ಷೆಗೆ ಸರಸಿರುಹಾಂಬಕೆಗೆ ||
ಪರತರಶಕ್ತಿಗೆ ವರನಿಗಮೋಕ್ತಿಗೆ | ಸುರುಚಿವಿಶಾಲೆಗೆ ಶುಭಗುಣಶೀಲೆಗೆ |
ತರುಣಾರುಣರುಚಿಕಾಂತೆಗೆ ಶಾಂತೆಗೆ ನಮಿಸುವೆ ಪಾರ್ವತಿಗೆ ||

---

## ಚೆನ್ನವೀರಣ್ಣೊಡೆಯ. ಸು. 1650

ಈತನು ಚೆನ್ನಬಸವನ ಮಿಶ್ರಷಟ್ಸ್ಥಲದವಚನಗಳನ್ನು ಸೇರಿಸಿದ್ದಾನೆ. ಇವನು ವೀರಶೈವಕವಿ; ಸುಮಾರು 1650 ರಲ್ಲಿ ಇದ್ದಿರಬಹುದೆಂದುತೋರುತ್ತದೆ.

ಇವನಿಂದ ಸಂಕಲಿತವಾದ ಗ್ರಂಥ

ಚೆನ್ನಬಸವನ ಮಿಶ್ರಷಟ್ಸ್ಥಲದವಚನ.

ಇದರಲ್ಲಿ 250 ವಚನಗಳವೆ; ಒಂದೊಂದೂ ಪ್ರಾಯಿಕವಾಗಿ ಕೂಡಲಚೆನ್ನಸಂಗಮದೇವ ಎಂದು ಮುಗಿಯುತ್ತದೆ. ಒಂದು ವಚನವನ್ನು ಉದಾಹರಿಸುತ್ತೇವೆ—

ವೃಕ್ಷಾಶ್ರಮದಲ್ಲಿದ್ದು ಭಿಕ್ಷಾಪರಿಣಾಮಿಯಾಗಿದ್ದರೇನು ? ಉಟ್ಟುದನುಱಿದು ಬತ್ತಲೆಯಿದ್ದರೇನು ? ಕಾಲರಹಿತನಾದರೇನು ? ಕರ್ಮರಹಿತನಾದರೇನು ? ಕೂಡಲಚೆನ್ನಸಂಗಮನ ಅನುಭಾವವಱಿಯದವರು ಏಸುಕಾಲವಿದ್ದರೇನು ವ್ಯರ್ಥ ಕಾಣಿರೋ.

---

## ವೀರಣಾರಾಧ್ಯ. ಸು. 650

ಈತನು ದಶಗ್ರಂಥಿಗೆ ಕನ್ನಡವ್ಯಾಖ್ಯಾನವನ್ನು ಬರೆದಿದ್ದಾನೆ. ಇವನು ವೀರಶೈವಕವಿ; ವಿಶ್ವನಾಥಾಚಾರ್ಯನ ಮಗನು. ಮೂಲವು ಇವನ ತಂದೆಯಿಂದ ರಚಿತವಾದುದು. ಇವನ ವ್ಯಾಖ್ಯಾನಕ್ಕೆ ಶಿವಜ್ಞಾನಪ್ರದೀಪಿಕೆ ಎಂದು ಹೆಸರು. ಇವನು ಸುಮಾರು 650 ರಲ್ಲಿ ಇದ್ದಿರಬಹುದು. ವ್ಯಾ

ಖ್ಯಾನದ ಪೀಠಿಕೆಯಲ್ಲಿ ಕೆಲವು ಕಂದಗಳಿವೆ. ಇವು ಪಿತೃಕೃತವಾಗಿರಬಹುದೆಂದು ತೋರುತ್ತದೆ. ಇವುಗಳಲ್ಲಿ ಕೆಲವನ್ನು ತೆಗೆದು ಬರೆಯುತ್ತೇವೆ--

ತ್ರಿಪದಾರ್ಥಜ್ಞಾನಿ ಶಿವೋ | ಕ್ತಪರಮದೀಕ್ಷಾದಿಕರ್ಮಕರ್ಮಠನನಘಂ |
ಸುಪಥನೆನಿಸುವ ಸದಾಚಾ | ರಪರಂ ಶಿವಯೋಗಿವಿಶ್ವನಾಥಾಚಾರ್ಯಂ ||
ಸಾಸನೆಯುಂ ಕೋಟಿಸಬ್ಧಿಗ | ಳೈಸಂ ಪಲೆ ತುಂಬುವಂತೆ ಸಕಲಾಗಮದೊಳ್ |
ಲೇಸೆನಿಸಿದರ್ಥವೆಲ್ಲವ | ನೋಸರಿಸದೆ ಪೇೞ್ದನೀದಶಗ್ರಂಥಿಕೆಯೊಳ್ ||
ಆಪರಮದಶಗ್ರಂಥಿಗೆ | ದೀಪಿಕೆಯುಂ ಬರೆದನಧಿಕಸುಗುಣಂ ಸಕಲೋ |
ರ್ವೀಪಾತ್ರಸ್ನೇಹಯುತಂ | ವ್ಯಾಪಿತಮೋಹಾರಿ ವಿಶ್ವನಾಥಾರ್ಯಸುತಂ ||

---

## ಹಲಗ, ಸು. 650

ಈತನು ಹರಿಶ್ಚಂದ್ರಸಾಂಗತ್ಯವನ್ನು ಬರೆದಿದ್ದಾನೆ. ಇವನು ವೀರಶೈವಕವಿ; ಇವನ ತಂದೆ ಚಪ್ಪನ್ನದೇಶದೊಳ್ ಕೈಲಾಸವೆನಿಸಿರ್ಪ ಗುಮ್ಮಳಾಪುರದ ತೋಪಿನ ವೀರಗಣಾಚಾರಿ. ಮತ್ತೊಂದುಕಡೆ "ತೋಪಿನವೀರಣಾತ್ಮಜ ಕವಿ ಹಲಗ" ಎಂದಿದೆ. ಇವನು ಸುಮಾರು 1650 ರಲ್ಲಿ ಇದ್ದಿರಬಹುದೆಂದು ಊಹಿಸುತ್ತೇವೆ.

ಪೂರ್ವಕವಿಗಳಲ್ಲಿ ಬಾಣ, ಮಯೂರ, ಕಾಳಿದಾಸ, ಉದ್ಭಟ, ಹಂಪೆಯಹರಿದೇವ ಇವರುಗಳನ್ನು ಸ್ಮರಿಸಿದ್ದಾನೆ.

ಇವನ ಗ್ರಂಥ

### ಹರಿಶ್ಚಂದ್ರಸಾಂಗತ್ಯ

ಸಂಧಿ 7, ಪದ್ಯ 1001. "ಬಾಸೆಗೆ ತಪ್ಪದ ಹರಿಶ್ಚಂದ್ರರಾಯಗೆ ಈಶ್ವರನೊಲಿದ ಕೃತಿಯನು ಪೇೞುವೆನು" ಎಂದು ಕವಿ ಹೇಳುತ್ತಾನೆ. ಗ್ರಂಥಾವತಾರದಲ್ಲಿ ವಿರೂಪಾಕ್ಷಸ್ತುತಿ ಇದೆ. ಬಳಿಕ ಕವಿ ಗಣೇಶ, ಸರಸ್ವತಿ, ಷಣ್ಮುಖ, ನಂದಿ ಇವರುಗಳನ್ನು ಹೊಗಳಿ ಬಸವನೇ ಮೊದಲಾದ ಪುರಾತನರನ್ನು[1] ಸ್ಮರಿಸಿದ್ದಾನೆ. ಇವನ ಗ್ರಂಥದಿಂದ ಒಂದೆರಡು ಪದ್ಯಗಳನ್ನು ತೆಗೆದು ಬರೆಯುತ್ತೇವೆ--

---

1 ಬಸವ, ಮಡಿವಾಳ, ಚೆನ್ನಬಸವ, ದಸರಿಯಮದೇವ, ಶಂಕರದಾಸ, ಸುಂಕದಬಂಕಣ್ಣ, ಲೆಂಕಮಂಚಣ್ಣ, ಕಲಕೇತ, ಏಕಾದಿನಾಥ, ಕಕ್ಕಯ್ಯ, ಚಿಕ್ಕಯ್ಯ, ರಕ್ಕಸಬ್ರಹ್ಮಯ್ಯ, ಆದಯ್ಯ, ಚನ್ನಯ್ಯ, ಹೊನ್ನಯ್ಯ, ಕಿನ್ನರಬ್ರಹ್ಮಯ್ಯ, ಸೊನ್ನಲಿಗೆಸಿದ್ಧರಾಮ, ತನ್ನ ಶಿರವ ಗುರುವಿಗರಿದಿತ್ತ ನನ್ನಯ್ಯ, ಸಿಂಧುಬಲ್ಲಾಳ, ಸಿರಿಯಾಳ, ಮಳೆಯರಾಜ.

ವನ

ವಸುಧೆಗೆ ಹೊಸಬಿಲ್ಲು ಎಸೆವರೆ ಹೊನ್ನಂಬು | ಮಸೆದಲಗಿನ ಈಟಿ ಸುರಗಿ |
ಎಸೆವ ಮುಕ್ಕಣ್ಣ ಡೆಂಕಣಿಯ ಗುಂಡುಗಳಿಂದ | ಪೊಸವನ ರಾಜಿಸುತಿಹುದು ||

ಬೇಡರು

ಉಟ್ಟ ಕಾಗಿನ ದಟ್ಟಿ ಮೆಟ್ಟಿದ ಎಕ್ಕಡ | ಇಟ್ಟ ಕೊಲ್ಲುವ ಬಡಿಕೋಲು |
ಇಟ್ಟಿ ಸಬಳ ಬಿಲ್ಲಂಬು ಸುರಗಿಸಹ | ದಿಟ್ಟಶಬರರೊದಗಿದರು ||

ಹೊಲತಿಯರ ಮಾತು.

ಹೊಲೆಯಿಂದ ಜನಿಸಿದ ಮಾನವರಲ್ಲದೆ | ಹೊಲೆಯಿಲ್ಲದಾರು ಹುಟ್ಟಿದರು |
ಹೊಲಸಿನೊಳಗೆ ನವಮಾಸ ಬೆಳೆದು ಬಂದು | ಕುಲಕೆ ಹಾರುವರೆ ಬಲ್ಲವರು ||

---

## ಮಲ್ಲು. ಸು. 1650

ಈತನು ಪ್ರಸಾದಸಾಂಗತ್ಯವನ್ನು ಬರೆದಿದ್ದಾನೆ. ಇವನು ವೀರಶೈವ ಕವಿ. ಇವನಿಗೆ ಮಲ್ಲಿಕಾರ್ಜುನ ಎಂಬ ಹೆಸರೂ ಉಂಟು. "ಕಡೆ ಮೊದಲಕ್ಷರವಡಿಪ್ರಾಸುಗಳೆಂಬ ಅಡಿವಜ್ಜೆಯ ಬೆಂಬಟೆಯ ಗೊಡವೆಯನ ಱಿಯೆ ಬಲ್ಲುದ ಮೃಡಶರಣರ ಕರುಣದಿ ಪೇೞ್ದೆ" ಎನ್ನುತ್ತಾನೆ. ಇವನ ಕಾಲವು ಸುಮಾರು 1650 ಆಗಿರಬಹುದೆಂದು ತೋರುತ್ತದೆ.

ಇವನ ಗ್ರಂಥ

### ಪ್ರಸಾದಸಾಂಗತ್ಯ

ನಮಗೆ ದೊರೆತ ಅಸಮಗ್ರಪ್ರತಿಯಲ್ಲಿ 180 ಪದ್ಯಗಳಿವೆ. ಈ ಗ್ರಂಥದಲ್ಲಿ 'ಶರಣರು ಪಿಡಿದ ಪ್ರಸಾದಮಾಹಾತ್ಮ್ಯವ ವಿರಚಿಸುವೆನು' ಎಂದು ಕವಿ ಹೇಳುತ್ತಾನೆ.

ಕಥಾಸಾರ—ಬೆಜವಾಡಿಯಲ್ಲಿ ಒಬ್ಬಗೌಡನ ಮನೆಯಲ್ಲಿ ಶಾಪದಿಂದ ಹಂದಿಯಾಗಿದ್ದ ಒಬ್ಬಗಂಧರ್ವನು ಜಂಗಮಪ್ರಸಾದವನ್ನು ತಿಂದುದರಿಂದ ಪೂರ್ವದೇಹವನ್ನು ಪಡೆದು ಕೈಲಾಸಕ್ಕೆ ಹೋದನು. ಮತ್ತೊಬ್ಬಗೌಡನ ಮನೆಗೆ ಒಬ್ಬ ಜಂಗಮಯ್ಯನು ಬಂದು ಹಿಟ್ಟನ್ನು ಎಂಜಲುಮಾಡಿ ಬಿಟ್ಟುಹೋಗಲು ಗೌಡನ ಹೆಂಡತಿ ರೇಗಿ ಗಂಡನನ್ನು ಬೈದು ಊರಹೆಂಗಸರನ್ನೆಲ್ಲಾ ಕರೆದು ರಚ್ಚೆಮಾಡುತ್ತಾಳೆ. ಕವಿ ಇದನ್ನೆಲ್ಲಾ ಹಾಸ್ಯರಸಪ್ರಧಾನವಾಗಿ ಹಳ್ಳಿಯವರ ಮಾತಿನಲ್ಲಿ ಬರೆದಿದ್ದಾನೆ.

ಆರಂಭದಲ್ಲಿ ಕವಿ ಗುರುಲಿಂಗಜಂಗಮಕ್ಕೆ ವಂದಿಸುತ್ತಾನೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ಬಾಱೆಯಕಾಯಂಗೆ ಕೈಯ ಬೆರಳಭಾವ | ಜೋಲುದುಟಿಯ ಮೆಳ್ಳೆಗಣ್ಣು |
ಹೇಱು ಮಾಡಿದಹಾಗೆ ಮೂಗು ಸೊಲಗೆಯಂತೆ | ಜೋಲುವ ಮೊಲೆ ಹನಿಗಣ್ಣು ||
ಹೊಱಹಲ್ಲು ಉಱುಗುಮುಖವು ಬಾಗಿದ ಬೆನ್ನು | ತಱಟುದಲೆಯು ಮೂಟಿಗಿವಿಯು |
ಪಱಹೊಟ್ಟೆ ಮೊಱಗಿವಿ ಬಾಯ ಬಾನೆಯ ಜೆಲ್ವೆ | ಒಱಲಿ ಹೇಱಿದಳು ಊರೊಳಗೆ ||

ಮತ್ತೊಬ್ಬನ ಕೂಡಿ ಹತ್ತುತಿಂಗಳು ಇದ್ದೆ | ಸತ್ತನು ನನ್ನ ಕಾಟದಲಿ |
ಬತ್ತದೋಗರಹಾಲುದೋಸೆಗಳನು ಮೆದ್ದು | ಅತ್ತತ್ತ ಅವಗೆ ಬೇಸತ್ತೆ ||
ಅಂಬಲಿಯಲ್ಲದೆ ಉಂಬರೆ ಕೂೞಿಲ್ಲ | ಕಂಬಳಿಗಳ ಹೊದ್ದಿಹೆವು |
ತಿಂಬರೆ ಬಾಯಿಗೊಂದೆಲೆಯಡಕೆಕಾಣೆವು | ತೊಂಬರೆ ಬದುಕು ಕೇಳ್ ನಮಗೆ ||

---

## ಚೆನ್ನಣ. ಸು. 1650

ಈತನು ವೀರೇಶ್ವರಚರಿತೆಯನ್ನು ಬರೆದಿದ್ದಾನೆ. ಇವನು ವೀರಶೈವ ಕವಿ; ತನ್ನ ಪರಂಪರೆಯನ್ನು ಹೀಗೆ ಹೇಳುತ್ತಾನೆ: ವೀರಶೈವಾಚಾರ್ಯ ಮಾಹೇಶಮಾದರಸ, ಮಗ ರಾಮೇಶಗುರು, ಮಗ ಸೋಮೇಶ್ವರ, ಮಗ ಚೆನ್ನಣಕವಿ. "ಸುವಿವೇಕಿ ರಸಿಕರದೇವ ಚೆನ್ನಣಸತ್ಕವಿರಾಯ"ಎಂದು ತನ್ನನ್ನು ವಿಶೇಷಿಸಿ ಹೇಳಿಕೊಂಡಿದ್ದಾನೆ. ಇವನು ಸುಮಾರು 1650 ರಲ್ಲಿ ಇದ್ದಿರಬಹುದು.

ಇವನ ಗ್ರಂಥ

### ವೀರೇಶ್ವರಚರಿತೆ.

ಇದು ಸಾಂಗತ್ಯದಲ್ಲಿ ಬರೆದಿದೆ. ನಮಗೆ ದೊರೆತ ಅಸಮಗ್ರಪ್ರತಿಯಲ್ಲಿ 3 ಸಂಧಿಗಳಿವೆ. ಕಥಾಗರ್ಭವನ್ನು ಈ ಪದ್ಯದಲ್ಲಿ ಸೂಚಿಸಿದ್ದಾನೆ-

ಹರವಿರಹಿತಯಾಗವ ಮಾಡೆ ದಕ್ಷನು | ಪುರಮಥನನು ಕೋಪಿಸಲು |
ವರವೀರಭದ್ರನು ಗೆದ್ದ ಕಥನವ ಎ | ಸ್ತರಿಪೆನು ಸುಜನರಾಲಿಪುದು ||

## ವೀರಣಾರ್ಯ. ಸು. 1650

ಈತನು ಪ್ರಸಾದಚಾರಿತ್ರವನ್ನು ಬರೆದಿದ್ದಾನೆ. ಇವನು ವೀರಶೈವ ಕವಿ; ತನ್ನ ವಂಶಪರಂಪರೆಯನ್ನು ಹೀಗೆ ಹೇಳುತ್ತಾನೆ—ಕೊಲ್ಲಿಪಾಕಿಯ ಸೋಮೇಶ್ವರ, ಮಗ ರೇಣುಕ, ಮಗ ದೇವಣಾರಾಧ್ಯ, ಇವನ ತಮ್ಮ ಶಾಂತೇಶ್ವರ, ಇವನ ಮಗ ಕವಿ ವೀರಣಾರ್ಯ. ಇವನ ಕಾಲವು ಸುಮಾರು 1650 ಆಗಿರಬಹುದು. ಪೂರ್ವಕವಿಗಳಲ್ಲಿ ಹರಿಹರ, ರಾಘವಾಂಕ, ಪದ್ಮರಸ, ಉದ್ಭಟ, ಸೋಮನಾಥ ಇವರುಗಳನ್ನು ಸ್ತುತಿಸಿದ್ದಾನೆ.

ಇವನ ಗ್ರಂಥ

### ಪ್ರಸಾದಚಾರಿತ್ರ

ಇದು ಸಾಂಗತ್ಯದಲ್ಲಿ ಬರೆದಿದೆ. ಇದರಲ್ಲಿ ಪ್ರತಿಪಾದಿತವಾದ ವಿಷಯವನ್ನು ಕವಿ ಈ ಪದ್ಯದಲ್ಲಿ ಸೂಚಿಸಿದ್ದಾನೆ.—

ಈಮಹಾಕೃತಿಯಾವುದೆನೆ ಚರಲಿಂಗದು | ದ್ದಾಮಪ್ರಸಾದ ಶಂಕರಗೆ |
ಪ್ರೇಮದೆ ಕುಡಬಹುದೆಂದು ವೇದಾಗಮ | ಸ್ತೋಮ ರಾಜಿಪ ಚಾರುಚರಿತೆ ||

---

## ಕವಿಮಾದಣ್ಣ. ಸು. 1650

ಇವನು ನನ್ನಯ್ಯಗಳ ಚಾರಿತ್ರವನ್ನು ಬರೆದಿದ್ದಾನೆ. ಈತನು ವೀರಶೈವಕವಿ; ಭಾರದ್ವಾಜ ಗೋತ್ರದವನು. ಇವನ ಗುರು ರಾಮನಾಥ, ತಂದೆ ಅಲ್ಲಪ, ತಾಯಿ ಮಲ್ಲಿಯಕ್ಕ, ಸ್ಥಳ ವಾಮತಿರಪುರ. ಇವನು ಸುಮಾರು 1650ರಲ್ಲಿ ಇದ್ದಿರಬಹುದೆಂದು ತೋರುತ್ತದೆ.

ಇವನ ಗ್ರಂಥ

### ನನ್ನಯ್ಯಗಳ ಚಾರಿತ್ರ

ಇದು ಚಂಪೂರೂಪವಾಗಿದೆ ; ಸಂಧಿ 5. ಇದರಲ್ಲಿ ಬಸವನ ಸಮಕಾಲದವನಾದ ನನ್ನಯ್ಯ ಎಂಬ ಶಿವಭಕ್ತನ ಚರಿತವು ಹೇಳಿದೆ.

ಕಥಾಸಾರ—ಒಡ್ಡಿಯದೇಶದ ಕರ್ಣಿಕಾಪುರವಾಸಿಯಾದ ನನ್ನಯ್ಯನು ತನ್ನ ಗುರುವಾದ ಸುಜ್ಞಾನಿಯ ತಲೆ ಹೋಯಿತೆಂದು ಭ್ರಮಿಸಿ ತನ್ನ ತಲೆಯನ್ನು ಕತ್ತರಿಸಿಕೊಳ್ಳುವುದಕ್ಕೆ ಪ್ರಯತ್ನಿಸಿದಾಗ ಇವನ ಗುರುಭಕ್ತಿಗೆ ಮೆಚ್ಚಿ ಶಿವನು ಇವನನ್ನು ಕೈಲಾಸಕ್ಕೊಯ್ದನು.

ತನ್ನ ಗ್ರಂಥದವಿಷಯವಾಗಿ ಕವಿ ಹೀಗೆ ಹೇಳುತ್ತಾನೆ—

ಗುರುಚರಣಭಕ್ತಿಸುಸ್ಥಿರ | ಸಿರಿಯಿದು ಗುರುಭಕ್ತಿವನಧಿವರ್ಧನರಜನೀ |
ಕರವಿದು ದುಃಖತಿತಮಭಾ | ಸ್ಕರನಿದು ನಿರಯಾದ್ರಿಕುಲಿಶಧರನೀಚರಿತಂ ||
ಕೊಳನಂ ಹಂಸೆಯು ನೈದಿಲ | ನಳಿನವ ಶುಕಪಿಕನಯಿಯೂರಕತಿಯುಂ ಮಂದಾ |
ನಿಲನಂ ನೆಲಸಂ ವರ್ಣಿಪ | ಗಲಭೆಯ ಕೃತಿಯಲ್ಲವಿಶಾಶರಣಚರಿತ್ರಂ ||

ಗ್ರಂಥಾವತಾರದಲ್ಲಿ ಸ್ವಗುರುರಾಮನಾಥಸ್ತುತಿ ಇದೆ. ಬಳಿಕ ಕವಿ ಮುದ್ರಾಪುರದ ಪ್ರಸನ್ನರಾಮೇಶ್ವರ, ಪಾರ್ವತಿ, ಗಣಪತಿ, ಸುಬ್ರಹ್ಮಣ್ಯ, ಸರಸ್ವತಿ ಇವರುಗಳನ್ನು ಸ್ಮರಿಸಿ ಅನಂತರ ಬಸವನೇ ಮೊದಲಾದ ಪುರಾತನರನ್ನು[1] ಸ್ತುತಿಸಿದ್ದಾನೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ಸಮುದ್ರ

ಗಿರಿಶಂಗೊಲ್ದು ವಿಭೂಷಣಕ್ಕೆ ಶಶಿಯುಂ ದೈತ್ಯಾರಿಗಂ ಪ್ರೇಮದಿಂ |
ಸಿರಿಯುಂ ಕೌಸ್ತುಭಮುಂ ಸುರರ್ಗೆ ಸುಧೆಯುಂ ದೇವೇಂದ್ರಗೈಶ್ವರ್ಯಮುಂ ||
ಹರುಷಂ ಕೈಮಿಗಲಿತ್ತುದೊಂದು ಘನದಿಂ ಮತ್ತಂ ಧರಾಚಕ್ರದೊಂ |
ದಿರವುಂ ತನ್ನೊಳಗೆಂಬ ತೇಜದೊಸವಿಂದೊಪ್ಪಿತ್ತು ರತ್ನಾಕರಂ ||

ಜೂಜು

ಡಾಳಿಸಿ ಹಾಸಂಗಿಗಳಂ | ಹೇಱಿದ ದಾಯವನೆ ಹಾಯ್ಕಿ ಹೆಚ್ಚಿಸಿ ಗುಣಮುಂ |
ಸೋಲದೆ ಸಮವೆನಲಾಡುವ | ಲೀಲೆಯು ನೆತ್ತದಲಿ ಜೂಜುಗಾಱರ್ ಮೆಱೆವರ್ ||

ಶರಣಭಕ್ತಿ

ಪುರವುಂ ವನಮುಂ ಲತೆಯುಂ | ತರುಣಿಯರಂ ಗಿರಿಯ ಕರಿಯ ಶರಧಿಯ ಪೊಗೞು |
ತ್ತಿರದೆ ಶಿವಶರಣರೆಲ್ಲರ | ಚರಣವ ನೆನೆ ಮನವೆ ಬೇಡಿಕೊಂಬೆಂ ನಿನ್ನಂ ||

ಬ್ರಹ್ಮರಾಕ್ಷಸ

ಏಱುವ ರೋಮ ಕಾರಿರುಳ ಕಾಱುವ ಕಾಯವತೀವಭೀತಿಯಂ ||
ಬೀಱುವ ಕೋರೆದಾಡೆಗಳು ಕೆಂಪಡರ್ದಕ್ಷಿಗಳುಬ್ಬಿದಾನನಂ ||
ತೋರಿತುಮಿಾಸೆ ಜುಂಜುದಲೆಯುಂಜಿಸುತಿರ್ಪ ಕರಾಸಿಯುಗ್ರದಾ |
ಕಾರದ ಬ್ರಹ್ಮರಾಕ್ಷಸನು ಕಾನನದಲ್ಲಿರೆ ಕಂಡೆನುರ್ವಿಪಾ ||

---

[1] ಬಸವ, ಅಲ್ಲಮ, ಅಕ್ಕ, ಮಡಿವಾಳ, ಚೆನ್ನಬಸವ, ಸಿದ್ಧರಾಮ, ಮುಸುಟೆಯಚೌಡ, ಉದ್ಭಟ, ಹಲಾಯುಧ, ಕೇಶಿರಾಜ, ದಾಸ.

### ಮಹಾದೇವ. ಸು. 1650

ಈತನು ಹೇರೂರುಹೆಣ್ಣಿನಸಾಂಗತ್ಯವನ್ನು ಬರೆದಿದ್ದಾನೆ. ಇವನು ವೀರಶೈವಕವಿ; ಸುಮಾರು 1650ರಲ್ಲಿ ಇದ್ದಿರಬಹುದು.

ಇವನ ಗ್ರಂಥ

ಹೇರೂರುಹೆಣ್ಣಿನಸಾಂಗತ್ಯ

ಸಂಧಿ 3, ಪದ್ಯ 456. ಇದರ ಕಥಾಗರ್ಭವನ್ನು ಕವಿ ಈಪದ್ಯ ದಲ್ಲಿ ಸೂಚಿಸಿದ್ದಾನೆ.—

ಹೇರೂರ ಹೆಣ್ಣು ಜೈನನ ಕಂಡು ಮನಹೇಸಿ । ಮಾರಮರ್ದನನಿಳಿಗೈದಿ ।
ನಾರಿ ಗಂಡಾಗಿ ಧಾರುಣಿಯೊಳು ಮೆಱೆದ ವಿ । ಚಾರ ವನೊಲಿದು ಬಣ್ಣಿಸುವೆ ॥

ತನ್ನ ಗ್ರಂಥದ ವಿಷಯವಾಗಿ ಹೀಗೆ ಹೇಳಿದ್ದಾನೆ—

ಗುರುತಾಯಿತಂದೆಗೋತ್ರವ ಕೊಂದ ಕಥೆಯಲ್ಲ । ನರರ ಹೊಗಳುವ ಮತವಲ್ಲ ।
ಪರಧನಪರಸತಿಗೆಳಸಿದ ನುಡಿಯಲ್ಲ । ಹರನ ಸಂಗತಿಯು ಕೇಳುವುದು ॥

ಸಿರಿಯಾಳಸೆಟ್ಟಿಯ ಸಾಂಗತ್ಯವೂ ಏತತ್ಕವಿಕೃತವಾಗಿರಬಹುದು. ಇದರಲ್ಲಿ ಸಿರಿಯಾಳನೆಂಬ ಶಿವಭಕ್ತನಕಥೆಹೇಳಿದೆ. ಸಂಧಿ 2, ಪದ್ಯ 354.

---

### ನರಸಿಂಹ. ಸು. 1650

ಈತನು ಮದನಮೋಹಿನಿಯಕಥೆಯನ್ನು ಬರೆದಿದ್ದಾನೆ. ಇವನು ಬ್ರಾಹ್ಮಣಕವಿಯೆಂದು ತೋರುತ್ತದೆ. "ಮೇಲುಗೋಟೆಯ ನರಸಿಂಹನ ಕೃಪೆಯಿಂದ ಪೇಳುದೆನೀಕೃತಿಯನು" ಎಂದು ಹೇಳುತ್ತಾನೆ. ಇವನ ಕಾಲವು ಸುಮಾರು 1650 ಆಗಿರಬಹುದೆಂದು ಊಹಿಸುತ್ತೇವೆ. ಪೂರ್ವ ಕವಿಗಳನ್ನು ಈ ಪದ್ಯದಲ್ಲಿ ಸ್ಮರಿಸುತ್ತಾನೆ—

ವ್ಯಾಸ ವಾಲ್ಮೀಕಿ ಹರೀಶ ಬಾಣನು ಕಾಳಿ । ದಾಸ ಮಯೂರನು ಮಲುಹಣ ।
ಈಶಭಕ್ತನು ರಾಘವಾಂಕನ ಬಲಗೊಂಡು । ಲೇಸಾಗಿ ಪೇಳ್ದೆನೀಕೃತಿಯನು ॥

ಇವನ ಗ್ರಂಥ

ಮದನಮೋಹಿನಿಯಕಥೆ

ಇದು ಸಾಂಗತ್ಯದಲ್ಲಿ ಬರೆದಿದೆ; ಸಂಧಿ 11, ಪದ್ಯ 860.

ಕಥಾಗರ್ಭ—ಮಾಳವದೇಶದಲ್ಲಿಯ ಚಂಪಕಪುರದ ದೊರೆಯಾದ ಚಂದ್ರಶೇಖ ರರಾಜನ ಮಗ ಜಯಸೇನನು ತನ್ನ ಚಿಕ್ಕಮ್ಮನ ದ್ವೇಷಕ್ಕೆ ಗುರಿಯಾಗಿ ತಂದೆಯ ಅಪ್ಪ

ಣೆಯಿಂದ ಅನೇಕ ಸಾಹಸ ಕಾರ್ಯಗಳನ್ನು ಮಾಡಿ ಮದನಮೋಹಿನಿಯನ್ನು ಮದುವೆಯಾದನು.

ಈ ಗ್ರಂಥದ ಉತ್ಕೃಷ್ಟತೆಯನ್ನು ಕವಿ ಈ ಪದ್ಯದಲ್ಲಿ ಹೇಳಿದ್ದಾನೆ—

ಸಕ್ಕರೆಯಂತೆ ಜೇನ್ಗೊಡದಂತೆ ಚಿಲುಪಾಲು| ಸೊಕ್ಕುಜವ್ವನೆಯ ಸೊಬಗಿನಂತೆ|
ಚಿಕ್ಕಮಾವಿನ ಹಣ್ಣ ತಕ್ಕೆಯಗಲಿಕೂಡು | ವಕ್ಕಣಿಂತಿಹುದು ಈಕೃತಿಯೆಂದ ||

ಗ್ರಂಥಾವತಾರದಲ್ಲಿ ಈಶ್ವರಸ್ತುತಿಯಿದೆ. ಬಳಿಕ ಕವಿ ನರಸಿಂಹ, ಬ್ರಹ್ಮ, ಪಾರ್ವತಿ, ಲಕ್ಷ್ಮಿ, ಸರಸ್ವತಿ, ಗಣೇಶ, ನಂಜುಂಡಲಿಂಗ ಇವರುಗಳನ್ನು ಸ್ತುತಿಸಿದ್ದಾನೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ—

### ಚಂದ್ರೋದಯ

ಹೆಚ್ಚಿತು ತಮ ಚಕ್ರವಾಕದ ಬೆಸುಗೆಯು | ಬಿಚ್ಚಿತು ನೈದಿಲು ನಲವೇಱೆ |
ಮುಚ್ಚಿತು ಮುಖವ ರಾಜೀವ ಚಂದ್ರಮನಂದು | ಕಿಚ್ಚನಿಕ್ಕಿದ ವಿರಹಿಗಳ್ಗೆ ||

### ಸ್ತ್ರೀಗರ್ಹಣ

ಕಡಲಡಿಯನು ಕಾಣಬಹುದಾಕಾಶದ | ಎಡೆದೆಱಕನು ಕಾಣಬಹುದೊಮ್ಮೆ |
ಪೊಡವಿಯ ವಿಸ್ತರವನು ಕಾಣಬಹುದೀಗ | ಮಡದಿಯ ಮನ ಕಾಣಬಾರದು ||

### ನೀತಿ

ಸೋರುವ ಮನೆ ಸೊರಹುವ ಬಂಟ ದುರ್ಜನ | ನಾರಿ ಕಾಳೋರಗನಿಹ ಗೃಹ |
ಹೋರುವ ನೆರೆ ಹೊಲಬಱಿಯದ ದಾರಿಯು | ದೂರದಿಂ ವರ್ಜಿಸಬೇಕೆಂದ ||
ತಂದೆಯ ಮಾತ ಮಿಱಿದ ಮಗ ಗುರುವನು | ನಿಂದಿಪ್ಪ ಶಿಷ್ಯನೊಡೆಯನನು |
ಹಿಂದೆ ಜಱಿವ ಬಂಟ ಪತಿಯ ಮಿಱಿದ ಸತಿ | ಗೆಂದೆಂದು ನರಕತಪ್ಪದು ದೇವ ||
ಸತ್ಯದೊಳಗೆ ನಡೆವಗೆ ಬರಲರಿಯದು | ಮೃತ್ಯುಭಯವು ಮರ್ತ್ಯರೊಳಗೆಲ್ಲ |
ಸತ್ಯವೆ ಜನನಿ ಜನಕ ಬಂಧುಜನವೆಂದು | ಚಿತ್ತದೊಳಗೆ ತಿಳಿದಿಹುದೆಂದ ||

### ದೇವತಾಸ್ತುತಿ

ಮಾವನ ಮಗನ ರಾಣಿಯ ಹಿಡಿದೆಳೆದನ | ಮಾವಗೆ ನಿಜವ ತೋಱಿಸಿದನ |
ಮಾವನ ಕೊಂದು ಮಾವಗೆ ಭಾವನಾದನ | ತಾವರೆಯಡಿಗೆಱಗುವೆ ನಾನು ||
ಶಿವನ ವೈರಿಯ ಸುತನನು ಕಾದ ದೇವನೆ | ಶಿವನ ಮೇಲುಪ್ಪವಡಿಸಿದನೆ |
ಶಿವನ ವೈರಿಯ ಬೆನ್ನಲಿ ಬಹ ವಸ್ತುವೆ | ಶಿವನೆ ನೀ ಸಲಹು ಮೂಜಗವನು ||

---

ವೆಂಕಯಾರ್ಯ ಸು. 1650

ಈತನು ಕೃಷ್ಣಲೀಲಾಭ್ಯುದಯವನ್ನು ಬರೆದಿದ್ದಾನೆ. ಇವನು ಮಾಧ್ವಕವಿ; ಇವನ ಪಿತಾಮಹನು ಜಾಮದಗ್ನ್ಯವತ್ಸಗೋತ್ರದ ಅಳಗಾರ್ಯ, ತಂದೆ ವೆಂಕಾರ್ಯ, ತಾಯಿ ಶೇಷಾಂಬೆ, ಸಹೋದರ ನಾರಾಯಣಾರ್ಯ, ಸ್ಥಳ ಪೆನುಗೊಂಡೆದೇಶದ ಕಡಗತೂರು. ತಾನು ಹರಿದಾಸನೆಂದು ಹೇಳಿಕೊಂಡಿದ್ದಾನೆ. ತನ್ನ ಗ್ರಂಥವನ್ನು ತಿರುಪತಿವೆಂಕಟರಮಣಸ್ವಾಮಿಯ ಅಂಕಿತದಲ್ಲಿ ಬರೆದಿದ್ದಾನೆ. ಇವನ ಕಾಲವು ಸುಮಾರು1 650 ಆಗಿರಬಹುದೆಂದು ಊಹಿಸುತ್ತೇವೆ.

ಇವನ ಗ್ರಂಥ

ಕೃಷ್ಣಲೀಲಾಭ್ಯುದಯ

ಇದು ಭಾಮಿನೀಷಟ್ಪದಿಯಲ್ಲಿ ಬರೆದಿದೆ. ಸಂಧಿ 51, ಪದ್ಯ 2543 ಇದರಲ್ಲಿ ಭಾಗವತದಶಮಸ್ಕಂಧದ ಕಥೆ ಹೇಳಿದೆ.

---

ಸಿದ್ಧಮಲ್ಲೇಶ. ಸು. 1650

ಇವನು ವೀರಸಂಗಯ್ಯನ ಚರಿತೆಯನ್ನು ಬರೆದಿದ್ದಾನೆ. ಈತನು ವೀರಶೈವಕವಿ ; ಗುರುವೀರಭದ್ರನ ಕರಜಾತ ಎಂದು ಹೇಳಿಕೊಂಡಿದ್ದಾನೆ. ಇವನು ಸುಮಾರು 1650 ರಲ್ಲಿ ಇದ್ದಿರಬಹುದು.

ಇವನ ಗ್ರಂಥ

ವೀರಸಂಗಯ್ಯನಚರಿತೆ

ಇದು ಸಾಂಗತ್ಯದಲ್ಲಿ ಬರೆದಿದೆ; ಸಂಧಿ 5, ಪದ್ಯ 487. ಇದರಲ್ಲಿ ವೀರಸಂಗಯ್ಯನೆಂಬ ಶಿವಭಕ್ತನ ಚರಿತೆ ಹೇಳಿದೆ.

ಕಥಾಗರ್ಭ—ಬಿದುರೆಕೋಟೆಯ ಕಾಮಣ್ಣ ಸೋಮಲದೇವಿಯರ ಮಗನಾದ ಇವನಿಗೆ ಮದುವೆಮಾಡಲು ನಿಶ್ಚಯಿಸಿದ್ದ ಚಂದ್ರಿಣಿಯನ್ನು ಕೊಮಾರಪಟ್ಟಣದರಸು ಮಾಧವರಾಯನ ಮಗನಾದ ಭಾಸ್ಕರನು ತನಗೆ ಕೊಡಬೇಕೆಂದು ಪೀಡಿಸಲು ಅವನನ್ನು ಓಡಿಸಿ ವೀರಸಂಗಯ್ಯನಿಗೆ ಕೊಟ್ಟರು. ಇವನು ಪತ್ನಿಯೊಡನೆ ಹೋಗುತ್ತಿದ್ದಾಗ ಭಾಸ್ಕರನು ವೀರಶೈವವೇಷದಿಂದ ಬಂದು ಇವನನ್ನು ಇರಿಯಲು, ಇವನು ನಮಸ್ಕರಿಸಿ ಶಿವನನ್ನು ಮೆಚ್ಚಿಸಿ ಎಲ್ಲರೊಡನೆ ಕೈಲಾಸಕ್ಕೆ ಹೋದನು.

---

## ವಂಜಣಾರ್ಯ. ಸು. 1650

ಈತನು ನೀತಿರತ್ನಾಭರಣವನ್ನು ಬರೆದಿದ್ದಾನೆ. ಇವನು ವೀರಶೈವಕವಿ; ಹರವಿಹಳ್ಳಿಯ ಗುರು ಚೌಡೇಶ್ವರನ ಮೊಮ್ಮಗನು. "ಪರಮ. ಗುರು ಸಿದ್ಧಶಾಂತೇಶ್ವರನು ರಚಿಸೆನೆ ಪೇೞ್ದಿಂ" ಎಂದು ಹೇಳುತ್ತಾನೆ ಇವನ ಕಾಲವು ಸುಮಾರು 1650 ಆಗಿರಬಹುದು.

ಇವನ ಗ್ರಂಥ

### ನೀತಿರತ್ನಾಭರಣ

ಇದು ಕಂದದಲ್ಲಿ ಬರೆದಿದೆ; ಪದ್ಯ 169.

---

## ಶೇಷ ಸು. 1650

ಇವನು ರುಕ್ಮಾಂಗದಚರಿತ್ರೆಯನ್ನು ಬರೆದಿದ್ದಾನೆ. ಈತನು ರಾಜವಂಶಕ್ಕೆ ಸೇರಿದವನಂತೆ ಕಾಣುತ್ತಾನೆ. ತನ್ನ ತಂದೆ ತಿಪ್ಪೇಂದ್ರ, ಅಣ್ಣ ರಾಘವಭೂವರ ಎಂದು ಈ ಪದ್ಯದಲ್ಲಿ ಹೇಳಿದ್ದಾನೆ—

ತಿಪ್ಪೇಂದ್ರತನಯ ರಾಘವಭೂವರನನುಜ | ನಪ್ರತಿಮವರದ ಶೇಷ |
ಒಪ್ಪುವ ರುಕುಮಾಂಗದಚರಿತೆಯ ಲೋಕ | ಕಪ್ರತಿಯೆನೆ ವಿರಚಿಸಿದ ||

ಇವನು ಸುಮಾರು 1650 ರಲ್ಲಿ ಇದ್ದಿರಬಹುದೆಂದು ತೋರುತ್ತದೆ.

ಇವನ ಗ್ರಂಥ

### ರುಕ್ಮಾಂಗದಚರಿತ್ರೆ

ಇದು ಸಾಂಗತ್ಯದಲ್ಲಿ ಬರೆದಿದೆ; ಸಂಧಿ 7, ಪದ್ಯ 313.

---

## ಮುರುಳಸಿದ್ಧೇಶ ಸು. 1650

ಈತನು ಗುರುಲಿಂಗಜಂಗಮಚಾರಿತ್ರವನ್ನು ಬರೆದಿದ್ದಾನೆ. ಇವನು ವೀರಶೈವಕವಿ; 'ಶರಣುಪುರಾಧೀಶ್ವರ ಗುರುಮೂರ್ತಿಯ ಕರಜಾತ' ಎಂದು ಹೇಳಿಕೊಂಡಿದ್ದಾನೆ. ಇವನ ಕಾಲವು ಸುಮಾರು 1650 ಆಗಿಬಹುದು.

ಇವನ ಗ್ರಂಥ

## ಗುರುಲಿಂಗಜಂಗಮಚಾರಿತ್ರ.

ಇದು ಸಾಂಗತ್ಯದಲ್ಲಿ ಬರೆದಿದೆ; ಸಂಧಿ 5, ಪದ್ಯ 937. ಇದಕ್ಕೆ ಮಹತ್ರಿನಕಾವ್ಯ ಎಂಬ ಹೆಸರೂ ಇರುವಂತೆ ತೋರುತ್ತದೆ.

---

## ನೇಮಿವ್ರತಿ ಸು. 1650

ಈತನು ಸುವಿಚಾರಚರಿತೆಯನ್ನು ಬರೆದಿದ್ದಾನೆ. ಇವನು ಜೈನಕವಿ; ಬ್ರಹ್ಮಚಾರಿಯೆಂದು ಹೇಳಿಕೊಂಡಿದ್ದಾನೆ; ಸುಮಾರು 1650ರಲ್ಲಿ ಇದ್ದಿರಬಹುದೆಂದು ಊಹಿಸುತ್ತೇವೆ.

ಇವನ ಗ್ರಂಥ

### ಸುವಿಚಾರಚರಿತೆ

ಇದು ಸಾಂಗತ್ಯದಲ್ಲಿ ಬರೆದಿದೆ; ಸಂಧಿ 10, ಪದ್ಯ 1265. ಇದರಲ್ಲಿ ಚತುರ್ಗತಿಗಳ ದುಃಖಗಳು, ಶ್ರಾವಕರ 11 ನೆಲೆಗಳು, ಮೋಕ್ಷಸ್ವರೂಪ ಈಯಂಶಗಳು ಹೇಳಿವೆ. ಗ್ರಂಥಾವತಾರದಲ್ಲಿ ನೇಮಿಜಿನಸ್ತುತಿ ಇದೆ. ಬಳಿಕ ಕವಿ ಸಿದ್ಧಾದಿಗಳು, ವೃಷಭಸೇನಾದಿ ಗೌತಮಗಣಧರರು, ಕೊಂಡಕುಂದ, ನೇಮಿಚಂದ್ರ, ಗುಣಭದ್ರ ಇವರುಗಳನ್ನು ಸ್ತುತಿಸಿದ್ದಾನೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ರವಿಯ ಮಂಡಲಕೆ ಜಲಾರ್ಘ್ಯ ಸಂಕ್ರಾಂತಿಯೊ | ಳವಿವೇಕಿಗಳ್ಗೆ ದಾನವನು |
ರವಿಶಶಿಗಳ ಗ್ರಹಣದೊಳು ಸ್ನಾನವ ಮಾಡು | ವವಿಚಾರವಿವು ಲೋಕಮೂಢ ||
ತ್ರಾಸುಗಟ್ಟಳೆಮಚ್ಚಸರಗಳೊಳೊಂದೊಂದು | ವೀಸವೀಸ ಹೆಚ್ಚುಕುಂದು |
ಲೇಸಹುದೆನಗೆಂದು ಮಾಡಿದಡದು ಮುಂದೆ | ಮೋಸ ಒಹುದು ಮೂಲಧನಕೆ ||
ಅನ್ನಕ್ಕೆ ಬಗೆಯಿಲ್ಲದವನಿಗನ್ನದ ಚಿಂತೆ | ಯನ್ನವಾದದಱಿಂದಮೇಲೆ |
ಹೊನ್ನಿನ ಚಿಂತೆ ಹೊನ್ನುಗಳು ತಾನಾದರೆ | ಕನ್ನಿಕೆಯರ ಚಿಂತೆಯಹುದು ||
ನೆನೆದ ಕನ್ನಿಕೆಯಾದಬಳಿಕ ಮಕ್ಕಳ ಚಿಂತೆ | ತನಗವರಾದರವರಿಗೆ |
ಮನೆಯು ಚಿಂತೆಯು ಮದುವೆಯ ಚಿಂತೆಮೊದಲಾದ |ಘನಚಿಂತೆ ತಾನತಿಕಾಂಕ್ಷೆ ||
ವಚನದಿಂದಲೆ ಪುಣ್ಯ ವಚನದಿಂದಲೆ ಪಾಪ | ವಚನದಿಂದಲೆ ಮಿತ್ರ ವೈರಿ|
ವಚನದಿಂದಲೆ ಸರ್ವಭೋಗಗಳೆಲ್ಲ ಸು | ವಚನದಿಂದಲೆ ಸ್ವರ್ಗ ತನಗೆ ||
ಹಣತೆಯೊಳುರಿವ ದೀವಿಗೆಯ ಪ್ರಕಾಶದೊಂ | ದೆಣಿಕೆ ಸಂಸಾರಸುಖಗಳು |
ಗಣಿತವಿಲ್ಲದ ಲೋಕಗಳ ಬೆಳಗುವುದೊಂದು | ಮಣಿದೀಪದಂತೆ ಮೋಕ್ಷಗಳು

## ಚೆನ್ನಪ್ಪ ಸು. 1650

ಈತನು ಒಂದು ಕಾಲಜ್ಞಾನವನ್ನು ಬರೆದಿದ್ದಾನೆ. ಇವನು ವೀರಶೈವಕವಿ; ಸುಮಾರು 1650ರಲ್ಲಿ ಇದ್ದಿರಬಹುದು.

ಇವನ ಗ್ರಂಥ

### ಕಾಲಜ್ಞಾನ

ಇದರಲ್ಲಿ ಸುಮಾರು 285 ಹಾಡುಗಳಿವೆ. ಆರಂಭದಲ್ಲಿ

ಮುಂದೆ ಚೆನ್ನಬಸವೇಶ್ವರರು ನಿರೂಪಿಸಿದಂಥ ಕಾಲಜ್ಞಾನದ ಸೂಚನೆಯ ಪೇಳುತಿರ್ದೆನದೆಂತೆನೆ

ಎಂದಿದೆ. ಕೊನೆಯಲ್ಲಿ

ಭಾನುಕೋಟಿಪ್ರಕಾಶ ಪರಶಿವ | ತಾನು ತನ್ನೊಳಗಿದ್ದ ಕಾರಣ |
ದೇವಕವಿ ಚೆನ್ನಪ್ಪ ಪೇಳ್ದ ಕಾಲಜ್ಞಾನವನು

ಎಂದಿದೆ.

---

## ಮಂಚಯ್ಯ ಸು. 1650

ಈತನು ಭಕ್ತಿರಸಸೋನೆಯನ್ನು ಬರೆದಿದ್ದಾನೆ. ಇವನು ವೀರಶೈವಕವಿ. ಇವನ ಕಾಲವು ಸುಮಾರು 1650 ಆಗಿರಬಹುದು.

ಇವನ ಗ್ರಂಥ

### ಭಕ್ತಿರಸಸೋನೆ

ಇದು ಸಾಂಗತ್ಯದಲ್ಲಿ ಬರೆದಿದೆ.

---

## ಅನ್ನದಾನಿಮಲ್ಲಿಕಾರ್ಜುನಾಚಾರ್ಯ ಸು. 1650

ಇವನು ತಾತ್ಪರ್ಯಸಂಗ್ರಹಟೀಕೆಯನ್ನು ಬರೆದಿದ್ದಾನೆ. ಈತನು ವೀರಶೈವಕವಿ; ವೀರೇಶನ ಪೌತ್ರನು, ಸೋಮನಾಥಾಚಾರ್ಯನ ಪುತ್ರನು. ಇವನ ಕಾಲವು ಸುಮಾರು 1650 ಆಗಿರಬಹುದೆಂದು ತೋರುತ್ತದೆ. ಟೀಕೆಯ ಕೊನೆಯಲ್ಲಿ ಈ ಗದ್ಯವಿದೆ—

ಶ್ರೀಮದನವದ್ಯವಿದ್ಯಾವಿದ್ಯೋತಮಾನಾಂತಃಕರಣ ಶ್ರೀಪಂಡಿತಾರಾಧ್ಯವಂಶವಾರಿಧಿಸುಧಾಕರ ಶ್ರೀವೀರೇಶಸುತಸೋಮನಾಥಾಚಾರ್ಯತನೂದ್ಭವ ಸಕಲವೀರಶೈವಾ

ಚಾರಸದುಪದೇಶಕೃತಜನೋದ್ಧಾರ ಗೌರೀಪತಿಪಾದಪಂಕೇರುಹಷಟ್ಪದೀಕೃತಮಾನಸ ಶ್ರೀಮಚಿಕ್ಕಲವಂತಕೊಪ್ಪಾಧಿನಾಥ ಶ್ರೀಮದಸ್ಮದಾಸಿನುಲ್ಲಿಕಾರ್ಜುನಾಚಾರ್ಯವರ್ಯ ವಿರಚಿತೇ ತಾತ್ಪರ್ಯಸಂಗ್ರಹಕರ್ಣಾಟಭಾಷಾವಿವರಣೇ.

---

## ಸಾಸಲಯ್ಯ. 1654

ಈತನು ಯಳಂದೂರು ತಾಲ್ಲೂಕು 1ನೆಯ ಶಾಸನವನ್ನು ಬರೆದುದಾಗಿ ಆ ಶಾಸನದಲ್ಲಿಯ

ಬರೆದಂ ಬೊಮ್ಮಣಪಂಡಿತ | ವರತನಯುಂ ರಸಿಕಪಂಡಿತಂ ಪೇಳ್ದಿಸಿದಂ |
ಸರಸಕವಿ ಸಾಸಲಯ್ಯಂ | ಬರೆಯಿಸಿದಂ ಮುದ್ದಭೂಪನೆನೆ ಮೆಚ್ಚದರಾರ್ ||

ಎಂಬ ಪದ್ಯದಿಂದ ತಿಳಿಯುತ್ತದೆ. ಈ ಶಾಸನವು ಶಕ 1576 ಜಯಸಂವತ್ಸರದಲ್ಲಿ-ಎಂದರೆ 1654ರಲ್ಲಿ ಬರೆದುದು. ಇದರಲ್ಲಿ ಹದಿನಾಡ ದೊರೆಯಾದ ಮುದ್ದರಾಜನು ಯಳಂದೂರ ಗೌರೀಶ್ವರದೇವರಿಗೆ ಭೂಮಿಯನ್ನು ಬಿಟ್ಟಂತೆ ಹೇಳಿದೆ. ಈ ರಾಜನ ಪರಂಪರೆಯನ್ನು ಕವಿ ಈರೀತಿಯಾಗಿ ಹೇಳಿದ್ದಾನೆ: ಪದಿನಾಡದೊರೆ ಸಿಂಗೆದೇಪಭೂಪ; ಇವನ ಮಗ ರಾಮನೃಪ; ಇವನ ತಮ್ಮ ಚೆನ್ನನೃಪ; ಇವನ ಮಕ್ಕಳು ತಿರುಮಲರಾಜ, ನಂಜರಾಜ; ತಿರುಮಲರಾಜನ ಮಗ ಮುದ್ದರಾಜ. ಸಾಸಲಯ್ಯನು ವೀರಶೈವಕವಿಯೆಂದು ತೋರುತ್ತದೆ.

ಈ ಶಾಸನದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ:-

### ಶಿವಸ್ತುತಿ

ಶ್ರೀಗೌರೀಕುಚಕುಂಕುಮ | ರಾಗಾಂಕಿತವಕ್ಷನೆಸೆವ ಗೌರೀನಾಥಂ |
ಈಗೆ ಸುಖೋದಯಮಂ ಕರು | ಣಾಗಾರಂ ಮುದ್ದಭೂಮಿಪಂಗತಿಮುದದಿಂ ||

### ಯಳಂದೂರು

ನಳಿನಜನಖಿಳಪುರಂಗಳ | ನಳವಡೆ ಸೃಜಿಸಲ್ ಕಳಂಕಮಾದುವೆನುತ್ತುಂ |
ಇಳೆಯೊಳ್ ಪೊಸತೀಪುರಮಂ | ದೆಳೆಯಿಂದೂರೆಂಬ ಪೆಸರನಾಗಳ್ ಕರೆದಂ ||

### ಮುದ್ದರಾಜ

ಎನೆವಾಭೂಪನ ಸೂನು ಸತ್ಯನಿಧಿ ಸದ್ಧರ್ಮಾನ್ವಿತಂ ಸಂತತಂ |
ಕುಸಲಂಬೆತ್ತು ಚೆಯೆಯಾಳುತಿರ್ದು ಪದಿನಾಡಾಖ್ಯಾತಭೂಭಾಗಮಂ ||
ಕುಸುಮಾಸ್ತ್ರಾರಿಪದಾಂಬುಜಾತನವಭೃಂಗಂ ಯಾಚಕಾಧಾರನೇಂ |
ವಸುಧಾಚಕ್ರದೊಳೊಲ್ದು ರಾಜಿಸಿದನೋ ಮುದ್ದೇಂದ್ರಭೂಪಾಲಕಂ ||

## ಷಡಕ್ಷರದೇವ. 1655.

ಈತನು ರಾಜಶೇಖರವಿಲಾಸ, ಬಸವರಾಜವಿಜಯ, ಶಬರಶಂಕರ ವಿಲಾಸ ಈ ಗ್ರಂಥಗಳನ್ನು ಬರೆದಿದ್ದಾನೆ. ವೀರಭದ್ರದಂಡಕವನ್ನೂ ಬರೆದಿದ್ದಾನೆಂದು ಹೇಳುತ್ತಾರೆ.

ಈತನು ವೀರಶೈವಕವಿ. ಇವನು ಹುಟ್ಟಿದ ಸ್ಥಳ ಮಳವಳ್ಳಿ ತಾಲ್ಲೂಕಿನಲ್ಲಿರುವ ದನುಗೂರು ಎಂದು ಹೇಳುತ್ತಾರೆ. ತನ್ನ ಗುರುಪರಂಪರೆಯನ್ನು ಹೀಗೆ ಹೇಳಿದ್ದಾನೆ:—ರೇವಣಸಿದ್ಧ; ಮಗ ರುದ್ರಮುನಿ; ಅವನ ವಂಶೋದ್ಭವ ಉದ್ದಾನ; ಶಿಷ್ಯ ಅನ್ನದಾನೀಶ; ಶಿಷ್ಯ ರೇವಣಸಿದ್ಧ-ಈತನು ದನುಗೂರುಮಠದ ಸ್ವಾಮಿಯಾಗಿದ್ದನು; ಶಿಷ್ಯ ಚಿಕವೀರದೇಶಿಕ; ಶಿಷ್ಯ ಕವಿ ಷಡಕ್ಷರದೇವ. ಈತನು ಆಮೇಲೆ ಯಳಂದೂರು ಮಠಕ್ಕೆ ಸ್ವಾಮಿಯಾಗಿ ಅಲ್ಲಿಯೇ ಸಮಾಧಿಯನ್ನು ಪಡೆದನು.

ಹದಿನಾಡ ದೊರೆಯಾದ ಮುದ್ದುರಾಜನು ತನ್ನ ಹೆಂಡತಿಯ ತವರುಮನೆಯ ಗುರುವಾಗಿದ್ದ ಈ ಷಡಕ್ಷರದೇವನನ್ನು ಕರಸಿ ತನ್ನ ಹೆಂಡತಿಯ ತವರೂರಾದ ಯಳಂದೂರಿನಲ್ಲಿ ಮಠವನ್ನು ಕಟ್ಟಿಸಿಕೊಟ್ಟು ನಿಲ್ಲಿಸಿದಂತೆ ಕೆಲವರು ಬರೆದಿದ್ದಾರೆ. ಆದರೆ ದೇವಚಂದ್ರನು ತನ್ನ ರಾಜಾವಳೀಕಥೆಯಲ್ಲಿ (1838) ಹೀಗೆ ಬರೆದಿದ್ದಾನೆ—ಷಡಕ್ಷರಿ ಚಿಕದೇವರಾಜನ ತಾಯಿಯಾದ ಎಳನಂದೂರು ಅಮೃತಾಂಬೆಯ ತವರುಮನೆಗೆ ಗುರುವಾದ ಆರಾಧ್ಯರ ಪುತ್ರನು. ಅಂತಃಪುರಜನಪ್ರೇರಣೆಯಿಂ ಇವನಂ ಬರಿಸೆ ಈತಂ ಲೀಲಾವತಿ, ಕಾದಂಬರಿ ಮೊದಲಾದ ಅನೇಕವಸ್ತುಕಕಾವ್ಯದೊಳ್ ನಿಪುಣನೆನಿಸಿ ಕವಿಶೇಖರನಾದುದರಿಂ ರಾಜಶೇಖರಮೆಂಬ ಪೊಸತೊಂದುಕೃತಿಯಂ ಮಾಡಿ ಮೆಚ್ಚಿಸಿ ಕೆಲಕೆಲವುಮತಂಗಳಂ ಮಾನ್ಯಮಂ ಬಿಡಿಸಿ ಪದ್ಮುಪವಾಡನೆಂದು ಅಮೃತಂಗಳಂ ತೋಱಿಸಿದಂ.

ರಾಜಶೇಖರವಿಲಾಸವನ್ನು ಶಕ 1579 ಜಯಸಂವತ್ಸರದಲ್ಲಿ-ಎಂದರೆ. 1655ರಲ್ಲಿಯೂ, ಬಸವರಾಜವಿಜಯವನ್ನು ಶಕ 1597 ನಳವರ್ಷದಲ್ಲಿ--ಎಂದರೆ 1677 ರಲ್ಲಿಯೂ[1] ಬರೆದಂತೆ ಆ ಗ್ರಂಥಗಳಿಂದ ತಿಳಿಯುತ್ತದೆ. ಇವನಿಗೆ ಉಭಯಕವಿತಾವಿಶಾರದ ಎಂಬ ಬಿರುದಿದ್ದಂತೆ ತೋರುತ್ತದೆ.

---

1. ಇಲ್ಲಿ ವರ್ಷಸಂಖ್ಯೆ ತಪ್ಪಾಗಿದೆ. ಜಯ ಶಕ 1577 ಆಗುತ್ತದೆ; ನಳ ಶಕ 1599 ಆಗುತ್ತದೆ.

ಹನ್ನೊಂದು ವರುಷದ ಪ್ರಾಯದಲ್ಲಿಯೇ ತನಗೆ ಕವಿತಾಶಕ್ತಿ ಉಂಟಾಯಿತೆಂದೂ "ಸಕ್ಕದಗಬ್ಬಮಂ ಮಿಸುಪ ಕನ್ನಡಗಬ್ಬಮನೊಲ್ದು ಕೋವಿದರ್ ಬೆಕ್ಕಸಮುಣ್ಮನಂತೆ ಪೊಗಟುತ್ತಿರೆ ಮೊಕ್ಕಳವಾಗಿ ಸರ್ವರಸಮೊಪ್ಪಿರೆ ಪೇೞ್ದಂ" ಎಂದೂ ಹೇಳುತ್ತಾನೆ.

ಪೂರ್ವಕವಿಗಳಲ್ಲಿ ಮಲ್ಹಣ, ಭೋಜ, ಹರೀಶ್ವರ, ರಾಘವಾಂಕ, ಪದ್ಮರಸ, ಕೇಶಿರಾಜ, ಸೋಮನಾಥ, ಭೀಮಕವಿ, ಶಂಕರ, ಮಾಯಿದೇವ, ಚಕ್ರಣಾರ್ಯ, ನಿಜಗುಣಯೋಗಿ, ತೋಂಟದಸಿದ್ಧಲಿಂಗಯತಿ, ಮಲ್ಲಣಾರ್ಯ ಇವರುಗಳನ್ನು ಸ್ಮರಿಸಿದ್ದಾನೆ.

ತನ್ನ ಕವಿತೆಯನ್ನು ನೋಡಿ ವಿದ್ವಾಂಸರು

ಇಂಗಡಲೊಡನಾಡಿದೊ ನೆಱೆ | ದಿಂಗಳ ಸೋದರನೊ ಸುದತಿಯಧರಾಮೃತದಿಂ|
ಪಿಂಗಿದು ಗುರುವೊ ಸುಧಾರಸ | ಮಂ ಗೆಲ್ವಂಕದನೊ ಭದನ್ತಚಸ್ಸಮುದಯನೋ||

ಎಂದು ಕೊಂಡಾಡಿದರು ಎಂದು ಹೇಳುತ್ತಾನೆ. ಈತನು ಆಧುನಿಕಕವಿಯಾದರೂ ಇವನ ಶೈಲಿ ನಿರರ್ಗಳವಾಗಿಯೂ ಮನೋಹರವಾಗಿಯೂ ಇರುವುದಲ್ಲದೆ ಇವನ ವರ್ಣನೆಗಳು ಚಮತ್ಕಾರವಾಗಿಯೂ ಇವೆ. ಮುಖ್ಯವಾಗಿ ಇವನ ಕಂದಗಳು ಬಹಳ ರಮಣೀಯವಾಗಿವೆ.

ಇವನ ಗ್ರಂಥಗಳಲ್ಲಿ

1 ರಾಜಶೇಖರವಿಲಾಸ

ಇದು ಚಂಪೂರೂಪವಾಗಿದೆ; ಆಶ್ವಾಸ 14.

ಸತ್ಯೇಂದ್ರಚೋಳನ ಮಗನಾದ ರಾಜಶೇಖರನ ವೀಧೀವಿಹಾರದಲ್ಲಿ ತಿರುಕೊಳವಿನಾಚಿಯ ಮಗು ಸಾಯಲು ರಾಜನು ಮಗನಿಗೆ ಮರಣಾಂತದಂಡನೆಯನ್ನು ವಿಧಿಸಿ ತಾನೂ ಮೃತಿಹೊಂದಿದನು; ಮಂತ್ರಿ ಮೊದಲಾದವರೂ ಸತ್ತರು; ಶಿವನು ಪ್ರಸನ್ನನಾಗಿ ಎಲ್ಲರಿಗೂ ಮುಕ್ತಿಯನ್ನು ಕೊಟ್ಟನು

ಎಂಬುದೇ ಕಥಾಸಾರ. ತಮಿಳಿನಲ್ಲಿ ಪಿಳ್ಳೈನೈನಾರ್ ಹೇಳಿದ್ದ ಈ ಕಥೆಯನ್ನು ಮಲ್ಲಣಾರ್ಯನು ಕನ್ನಡದಲ್ಲಿ ಭಾವಚಿಂತಾರತ್ನವೆಂಬ ವರ್ಣಕ ಗ್ರಂಥವಾಗಿ ಮಾಡಿದನು; ಅದನ್ನೇ ಹರೀಶ್ವರನ ಕವಿತಾಮಾರ್ಗವನ್ನು ಅನುಸರಿಸಿ ತಾನು ವಸ್ತುಕರೂಪವಾಗಿ ರಚಿಸಿದಂತೆಯೂ ಒಂದು ವರ್ಷದಲ್ಲಿ ಮುಗಿಸಿದಂತೆಯೂ ಕವಿ ಹೇಳುತ್ತಾನೆ. ಈ ಕಾವ್ಯದ ಉತ್ಕೃಷ್ಟತೆಯನ್ನು ಈ ಪದ್ಯಗಳಲ್ಲಿ ತಿಳಿಸಿದ್ದಾನೆ:—

ನುತರಸಸಂಪದಂ ಪದಮುದರ್ಥಸಮನ್ವಿತಮರ್ಥಮಾರ್ಯಸ |
ಮ್ಮತಗುಣರಂಜಿತಂ ಗುಣಮುದಾತ್ತನವಸ್ಥಿತಿವೃತ್ತಿ ವೃತ್ತಿನಿ ||
ರ್ಮಿತಸರಸಾನುಭಾವಮುರುಭಾವಮುದಂಚಿತರೀತಿ ರೀತಿ ವಿ |
ಶ್ರುತಸದಲಂಕೃತಿ ಸ್ಫುರದಲಂಕೃತಿ ರಂಜಿಪುದೀಪ್ರಬಂಧದೊಳ್ ||
ವಿತತಪುರಾತನಕವಿಕೃತ | ಕೃತಿಭೂಷಣಭೂಷಿತಾಂಗಿ ಭಾರತಿ ಭುವನ |
ಸ್ತುತಕಾಂತಿಗುಣಮಿಳಿತಮ | ತ್ಕೃತಿನವಸೀಮಂತರತ್ನಮಂ ತಳೆದೆಸೆವಳ್ ||
ಇದು ಪೊಸತಿಂಪು ನೋಡಿದು ನವೀನಮನೂನಮೃದೂಕ್ತಿಭಾವಮಿಂ |
ತಿದು ನವಮಿಂತಿದಲ್ತೆ ಸದಲಂಕೃತಿ ನವ್ಯಮುದಾತ್ತವೃತ್ತಿ ತಾ ||
ನಿದು ವಿಗೆ ನೂತ್ನಮೆಂದಖಿಳಕಾವ್ಯಕಳಾವಿದರೊಲ್ದು ಕೇಳ್ದು ಮೆ |
ಚ್ಚದೆ ನುತಿಗೆಯ್ಯದಿರ್ಪರೆ ಷಡಕ್ಷರದೇವಕೃತಪ್ರಬಂಧಮಂ ||

ಗ್ರಂಥಾವತಾರದಲ್ಲಿ ಶಿವಸ್ತುತಿ ಇದೆ. ಬಳಿಕ ಕವಿ ಪಾರ್ವತಿ, ಸ್ವಗುರು ಚಿಕವೀರದೇಶಿಕ, ಗಣೇಶ, ಷಣ್ಮುಖ, ನಂದಿ, ವೀರಭದ್ರ, ಬಸವ, ಚೆನ್ನಬಸವ, ಪ್ರಭುದೇವ, ಸಿದ್ಧಲಿಂಗಯತಿ, ನಿಜಗುಣಯೋಗಿ, ರೇಣುಕ ರಾಮಪಂಡಿತಮರುಳಾರ್ಯರೆಂಬ ಚತುರಾಚಾರ್ಯರು ಇವರುಗಳನ್ನು ಪರಿಪಿ ಡಿಯಿಂದ ಹೊಗಳಿದಾನೆ. ಆಶ್ವಾಸಗಳ ಅಂತ್ಯದಲ್ಲಿ ಈ ಗದ್ಯವಿದೆ—

ಇದು ವಿನಮದಮರವರಮಕುಟತಟಘಟಿತನುತಗೆಣಮಹಾಪ್ರಭಾಪಟಲಪರಿವೃತಪಶಿವಶ್ರೀಪಾದನಖಚಂದ್ರಸಾಂದ್ರರುಚಿರುಂದ್ರಚಂದ್ರಿಕಾಚಂಚಚ್ಚಕೋರಾಯಮಾನ ಸರಸಜನಮಾನಿತೋಭಯಕವಿತಾವಿಶಾರದ ಶ್ರೀಷಡಕ್ಷರದೇವವಿರಚಿತಮಪ್ಪ ರಾಜಶೇಖರವಿಳಾಸವಿಪುಳಪ್ರಬಂಧದೊಳ್.

ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ:—

ಸೂರ್ಯಾಸ್ತ

ನಳಿನದಳಂಗಳಲ್ಲಿ ಪುಳಿನಸ್ಥಳದಲ್ಲಿ ಲತಾವಿತಾನದೊಳ್ |
ತಿಳಿಗೊಳದಲ್ಲಿ ತನ್ನ ಮನದನ್ನಳನೊಲ್ದಱಸುತ್ತೆ ಸುತ್ತಿ ಕ ||
ಣ್ಗೊಳಲಿ ಕಱಂಗಿ ಕಂಪಿಸಿ ಪಲುಂಬಿ ಬಱಲ್ದು ತೊಱಲ್ದುಱಲ್ದು ಮೇಣ್ |
ಕಳವಳಿಸಿತ್ತು ಕಾಂತೆಯನಗಲ್ದೆಣೆವಕ್ಕಿ ನಿಶಾಪ್ರವೇಶದೊಳ್ ||

ಬೆಳುದಿಂಗಳು

ವಿಸುಪ ನಿಶಾನಿತಂಬಿನಿಗೆ ಬೆಳ್ಪುಡೆಗೂಡುದು ಭಾನುರೋಚಿಯಿಂ |

ಬಸವಳಿದೀಧರಾಂಗನೆಗೆ ಚಂದನಲೇಪನಮಾದುದಂಬುಜ ||
ಪ್ರಸರದಗಲ್ಕೆಯಿಂ ನೆಗೆದ ತುಂಬಿಗೆ ಮಲ್ಲಿಗೆಮಾಲೆಯಾದುದಾ |
ಪಸಿದ ಚಕೋರಿಗಳ್ಗೆ ಸುಧೆಯಾದುದು ಕಾಂತಿ ಸುಧಾಮಯೂಖನಾ ||

ಮಾಗಿ

ಗೆಜ್ಜೆಗೆದಳ್ ಬಿದಿರ್ದು ಕೊಕ್ಕಿಂ| ದಿಜ್ಜಿದಿಱುದೆಳವಿಸಿಲನೆಳಸಿ ಸೇಡುಂಗೊಂಡೇಂ|
ತುಜ್ಜುಗಿರ್ದುವೊ ತುದಿಗೋಡೊಳ್ | ಮಱ್ ಬೆಱ್ತಿರೆ ನೋಡಿ ಬಾಡುತುಂ ವಿಹಗಂಗಳ್ ||

ವರ್ಷಾಕಾಲ

ಅಲರ್ದುದು ಕಾಡಮಲ್ಲಿಗೆ ಮುಗುಳ್ತುದು ಜಾದಿ ಕದಂಬಕುಟ್ಮಳಂ |
ಬಲಿದುದು ಪೂದೊಡಂಬೆಯನೊಡರ್ಚಿತು ಕೇತಕಿ ಕೇಕಿ ನರ್ತ್ತನಿಂ ||
ನಲಿದುದು ಹಂಸೆ ಪಾಱಲನುಗೆಯ್ದುದು ಚಾದಗೆ ರಾಗಮಾಂತುದು |
ಜ್ವಲತೆಯನಪ್ಪುಕೆಯ್ದುದು ವಿಯೋಗಿಗಳಂಗದೊಳಂಗಜಾನಲಂ ||

ವಸಂತ

ಮಾವಿನೊಳೇಱ್ ಮಲ್ಲಿಗೆಗೆ ಪಾಱ್ ಸುರಂದದೊಳೞ್ದು ಜಾಱ್ ಕೆಂ |
ದಾವರೆಗೋಡಿ ಕೇಸರದೊಳಾಡಿ ಕರಂ ಮಧುವೀಂಟಿ ಪಾಡಿ ಮೆ ||
ಲ್ಲಾವರಮೆತ್ತಿ ಮಾಧವಿಯನೊತ್ತಿ ಮಹೋತ್ಸವದಿಂದೆ ಸುತ್ತಿ ಭೃಂ |
ಗಾವಳಿ ಧೂಳಿಯುಕ್ತಕುಸುಮಾಳಿಯೊಳಾಂತುದು ಚಾರುಕೇಳಿಯಂ ||

ಕೊಳ

ಕುವಳಯಕುಟ್ಮಳಾವಳಿಯ ಪೆರ್ಗಱೆಯುಂ ನೆಗೆದೆೞ್ ಲಾಗಿಸು |
ತ್ತೆ ವನಜನಲ್ಲರೀನಿಬಿಡಕಂಟಕಸೂಚಿನಿಬದ್ಧಯಂತ್ರದೊಳ್ ||
ತವೆ ನುಸುಳ್ದೆೞ್ ಪಾಸೆವೆಳೆಯೊಳ್ ಪರಿದಾಡಿ ತರಂಗಸಂಘಸಂ |
ಭವರವವಾದ್ಯಕಾಡಿದುದು ಕೊಡೆ ಝಷಂ ಪೊಸಡೊಂಬನೆಂಬಿನಂ ||

ಶಾಲಿವನ

ತೂಗುತೆ ತೊನೆಯುತೆ ಒಳ್ಕುತೆ | ಬಾಗುತೆ ಕಂಪಿಡುತೆ ಕನಕರುಚಿದಾಳುತ್ತುಂ |
ರಾಗಿಸುತೆ ರಂಜಿಸುತೆ ಸೊಂ | ಪಾಗಿರ್ದುವು ಕಣ್ಗೆ ಗಂಧಶಾಲಿವನಂಗಳ್ ||

ದುರ್ಜನನು

ಪರಪರಿವಾದಮಂ ನೆಗೞ್ವುದೇ ಜಪಮನ್ಯಮನಃಪ್ರಸೂನಮಂ |

ಕೊರಗಿಪುದೇ ಶಿಪಂ ಪೆಱರ ಜೀವಿತಮಂ ಪಱಿದಿಕ್ಕುವಂದವೋ ||
ಪರತರಶೀಲಮೂದಲಿಸಿ ಲೋಗರಮರ್ಮಮನೆಯ್ದೆ ಭೇದಿಪೊಂ |
ದಿನವೆ ಪೊಸಬ್ಬ ಜಾಣನೆನೆ ದುರ್ಜನತಾಪಸನೇಂ ಕೃತಾರ್ಥನೋ ||

## ೨. ಬಸವರಾಜವಿಜಯ

ಇದೂ ಚಂಪೂಗ್ರಂಥ; ಆಶ್ವಾಸ 42. ಇದಕ್ಕೆ ವೃಷಭೇಂದ್ರವಿಜಯ ಎಂಬ ಹೆಸರು ರೂಢಿಯಾಗಿದೆ. ಇದರಲ್ಲಿ ಬಸವನ ಚರಿತ್ರವು[1] ವರ್ಣಿತವಾಗಿದೆ. ಈ ಚರಿತ್ರವನ್ನು ಮೊದಲು ಪಾಲ್ಕುರಿಕೆಸೋಮನಾಥನು ತೆಲುಗಿನಲ್ಲಿ ಬರೆದನು; ಅದನ್ನು ಭೀಮಕವಿ ಕನ್ನಡದಲ್ಲಿ ವರ್ಣಕಗ್ರಂಥವಾಗಿ ಮಾಡಿದನು; ಶಂಕರಕವಿ ಸಂಸ್ಕೃತಕ್ಕೆ ಪರಿವರ್ತಿಸಿದನು; ಆ ಕಥೆಯನ್ನೇ ತಾನು ಕನ್ನಡದಲ್ಲಿ ಚಂಪೂರೂಪವಾಗಿ ರಚಿಸಿದಂತೆ ಕವಿ ಹೇಳುತ್ತಾನೆ. ಈ ಕಾವ್ಯದ ಉತ್ಕೃಷ್ಟತೆಯನ್ನು ಈ ಪದ್ಯದಲ್ಲಿ ತಿಳಿಸಿದ್ದಾನೆ:—

ಸರಸತರಂ ಪ್ರಸನ್ನವದನಂ ಬುಧಜನ [illegible] ತಪ[illegible]ವೃತ್ತಿ |
ಸ್ಫುರಿತಮುದಾತ್ತಶಬ್ದಗುಣಮಪ್ಪ್ರತಿ[illegible]ಷ್ಠತಂ ಸುಭಾ |
ವರುಚಿನಿರಸ್ತವೈರಿ[illegible]ಸಂ ಶಿವತತ್ವ [illegible] ಮುಖ ದಾಯಿ ಬಂ |
ಧುರಬಸವೇಶನಂಘ್ರಿಸೇವ್ಯ[illegible]ನವಕಾವ್ಯ ವಿಳಾಸಕಳಾಗ್ರಗೂಳ್ ||

ಗ್ರಂಥಾವತಾರದಲ್ಲಿ ಶಿವಸ್ತುತಿ ಇದೆ. ಬಳಿಕ ಕವಿ ಪಾರ್ವತಿ, ಗಣೇಶ, ಷಣ್ಮುಖ, ವೀರಭದ್ರ ಇವರುಗಳನ್ನು ಹೊಗಳಿ ಅನಂತರ ಬಸವನೇ ಮೊದಲಾದ ಗುರುಗಳನ್ನು ಸ್ತುತಿಸಿದ್ದಾನೆ[2]. ಆಶ್ವಾಸಗಳ ಕೊನೆಯಲ್ಲಿ ಈ ಗದ್ಯವಿದೆ:—

ಇದು ವಿನಮದಖಿಲಸುರಾಸುರೇಂದ್ರಮಕುಟತಟಘಟಿತಮಣಿಗಣಾಗಣಿತರುಚಿನಿಚಯತರುಣಾರುಣಾತಪಪರಿಲಸಿತಪರಮ ಶಿವಲಿಂಗಪಾದಾರವಿಂದಪರಾಗಭಸಿತಭಾಸುರಲಲಾಟಪಟ್ಟ ಸರಸಜನಮಾನಿತೋಭಯಕವಿತಾವಿಶಾರದ ಶ್ರೀಷಡಕ್ಷರದೇವಭಕ್ತಿವಿರಚಿತ ಶ್ರೀಮದ್ಬಸವರಾಜವಿಜಯಮಹಾ ಪುರಾಣದೊಳ್.

ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ:—

---

1. Vol. I, 142.

2 ಬಸವ, ಚೆನ್ನಬಸವ, ಪ್ರಭುದೇವ, ರೇಣುಕ, ಚತುರಾಚಾರ್ಯರು, ಪಂಡಿತತ್ರಯ, ಸಿದ್ಧರಾಮ, ಮಾದೇವಿ, ಭೃಂಗಿ, ತೋಂಟದಗುರು, ಅರವತ್ತುಮೂವರು, ಪುರಾತನರು.

## ಕೈಲಾಸ

ಸಸಿಗದಿರಂ ಕೆಟಿಲ್ಲಿ ಶಶಿಕಾಂತದ ಕಾಂತಿಯನೀಟಿದ್ದುಕೊಂಡು ಬೆ ।
ಳ್ಪಸದಳಮಾದ ಶಾರದೆಯ ಮೆಯ್ಪೊಳಗಂ ತೆಗೆದಿಂಗಡಲ್ಗೆ ರಂ ॥
ಜಿಸುವ ಸಿತದ್ಯುತಿಪ್ರಸರಮಂ ಕವರ್ದೊಂದನೆಮಾಡಿ ಬೊಮ್ಮನೊ ।
ಲ್ದಸಗಿದ ಶೈಲಮೋ ಎನಿಸಿ ಪಜ್ಜಳಿಸಿರ್ದುದು ತಾರಭೂಧರಂ ॥

## ಮಾವಿನ ಮರ

ಅಳಿಕುಳಮಿಂದ್ರನೀಲಮಣಿರಾಜಿ ಪಸುರ್ಮಿಡಿ ಪಚ್ಚೆ ಪಲ್ಲವಾ ।
ವಳಿ ಪವಳಂಗಳೊಬ್ಬುಳಿ ಮಡಲ್ತೆಳಮಲ್ಲಿಗೆಯುಚ್ಚವೊಗ್ಗಿ ಪ ॥
ಜ್ಜಳಿಸುವ ಮುತ್ತು ಕೆಂಬೊಗರನಾಟ್ಟಿ ಪಳಂ ಪೊಸರನ್ನಸೂಗೆ ಮಂ ।
ಜುಳತಗಪಂಚರತ್ನಗೃಹಮಾದುದು ಕಾಮನೃಪಂಗೆ ಮಾಮರಂ ॥

## ಗಂಗಾಂಬಿಕೆ

ಕುಂದುವ ಮೊಲ್ಲೆಯ ಮುಗುಳಂ । ಕುಂದದ ಮುಗುಳೆಂದು ನುಡಿವುದನುಚಿತಮಿ
ಳೆಯೊಳ್ ।
ಕುಂದದ ಕಂದದ ದಶನಂ । ಕುಂದದ ಮುಗುಳಲ್ತೆ ತನ್ಮೃದುಸ್ಮಿತಲತೆಯಾ ॥

## ಚಂದ್ರ

ಮಿಸುಗುವ ಸಂಜೆಗೆಂಪು ತಳಿರಂತಿರೆ ತಾರಗೆ ಪುಷ್ಪದಂತೆ ರಂ ।
ಜಿಸೆ ಪೊಸಮುರ್ಬಿದಕ್ಕೆ ಆಗಿದಾ ಜಡಿಯಂತಿರೆ ತಾರಕೋದ್ಧವಂ ॥
ಬಸದೃಶಪೃಕ್ಷದೊಳ್ ಪವಳವಣ್ಣಮನಾಮ್ಲದಿನಿವಣ್ಣೆದೆಂಬ ಪೆಂ ।
ಪಸದಳಮಾಗೆ ತಾಂ ಕ್ರಮದೆ ಕಾಣಿಸುತಿರ್ದುದು ಚಂದ್ರಮಂಡಲಂ ॥

## ಸೋಳೆ

ಕ್ಷಣರುಚಿ ಜಲಲಿಪಿ ಮುಗಿಲೊ। ಡ್ಡಣೆಯ ನೆಬಿಲ್ ಕರಕಮಿಂದ್ರಚಾಪಂ ಸಂಧ್ಯಾ।
ರುಣರುಚಿ ಚಿರಮಾದೊಡಮಿಾ । ಗಣಿಕಾಸಂಪ್ರೀತಿಯೊರ್ಮೆ ಚಿರಮಾದಪುದೇ ॥

## ಭಕ್ತಿ

ಶರನಿಧಿ ಜಾನುದಘ್ನಮುರಿವಗ್ನಿ ಹಿಮಂ ಘನಮೃತ್ಯು ತೊಟ್ಟು ಭೀ ।
ಕರತರಮೇಘವಹ್ನಿ ಕುಸುಮಂ ಗರಳಂ ಸುಧೆ ಕರ್ಮಪಾಶಮಂ ॥
ಬುರುಹಗುಣಂ ಸರೋಜಭವದುರ್ಲಿಪಿ ವಾರ್ಲಿಪಿ ಕಾಯಜಂ ತೃಣಾಂ ।
ಕುರಮಣಿಮಾದಿಸಿದ್ಧಿಯಣುವಪ್ಪುದು ಭಕ್ತಿರತಂಗೆ ಲೋಕದೊಳ್ ॥

## 3. ಶಬರಶಂಕರವಿಲಾಸ

ಇದೂ ಚಂಪೂರೂಪವಾಗಿದೆ; ಆಶ್ವಾಸ ೫. ಈ ಗ್ರಂಥವನ್ನು ರಚಿಸುವುದಕ್ಕೆ ಮುಂಚೆ ರಾಜಶೇಖರವಿಲಾಸ ಬಸವರಾಜವಿಜಯಗಳನ್ನು ಕನ್ನಡದಲ್ಲಿಯೂ ಕವಿಕರ್ಣರಸಾಯನವನ್ನು ಸಂಸ್ಕೃತದಲ್ಲಿಯೂ ಬರೆದಂತೆ ಕವಿ ಹೇಳುತ್ತಾನೆ. ಇದರಲ್ಲಿ ಶಿವನ 15ನೆಯ ಲೀಲೆಯಾದ ಶಬರಲೀಲೆ ವರ್ಣಿಸಲ್ಪಟ್ಟಿದೆ. ಈ ಕಾವ್ಯದ ಉತ್ಕೃಷ್ಟತೆಯನ್ನು ಕವಿ ಈ ಪದ್ಯಗಳಲ್ಲಿ ಹೇಳಿದ್ದಾನೆ:--

ಜೇಂಗೊಡದಂತೆ ಝೇಂಕರಿಪ ತುಂಬಿಗಳಿಂಚರದಂತೆ ಪೆಂಪನಾ |
ಟಿ್ದಂಗದಲಂತೆ ಪಣ್ತೊಸೆನ ಮಾಮರದಂತೆ ಪಯೋಜದಂತೆ ಬೆ ||
ಳ್ದಿಂಗಳ ಸೊಂಪಿನಂತೆ ಸುಸಿಲಾಸೆಯ ಸಲ್ಲಳ ಸೋಟದಂತೆ ಚಿ |
ತ್ತಂಗೊಳಲಾಪುರ್ದೀಕೃತಿ ಷಡಕ್ಷರದೇವಕೃತಂ ರಸಜ್ಞರಾ ||

ಇದು ಪೊಸರೀತಿ ನೆ ಟ್ಟಿದು ನವೀನಮಲಂಕೃತಿ ನವ್ಯಭಾವಮಿಂ |
ತಿದು ನವವೃತ್ತಿ ಲೇಸಿದು ರಸಸ್ಥಿತಿ ನೂತ್ನಮಿದಲ್ತೆ ನೂತನಂ ||
ಪದರಚನಾವಿಲಾಸಮಿದು ಕಬ್ಬಮಪೂರ್ವಮಿದೆಂದು ಕಬ್ಬಿಗರ್ |
ಪದೆದೊಲವಿಂದೆ ಕೀರ್ತಿಸೆ ನಿಮಿರ್ಪುದಪೂರ್ವನೀಸುಭಗಪ್ರಬಂಧಮುಂ ||

ಗ್ರಂಥಾವತಾರದಲ್ಲಿ ಶಿವಸ್ತುತಿ ಇದೆ. ಬಳಿಕ ಕವಿ ಪಾರ್ವತಿ, ವೃಷಭೇಶ್ವರ, ಪುರಾತನರು, ಷಣ್ಮುಖ, ವೀರಭದ್ರ, ನಂದಿ, ಭೃಂಗಿ, ರೇಣುಕ, ದಾರುಕ, ಗಣೇಶ, ಚತುರಾಚಾರ್ಯರು ಇವರುಗಳನ್ನು ಸ್ಮರಿಸಿದ್ದಾನೆ. ಆಶಾಸಗಳ ಅಂತ್ಯದಲ್ಲಿ ಈ ಗದ್ಯವಿದೆ:--

ಇದು ನಿಖಿಳಸುರಾಸುರೇಂದ್ರವರದ ನಿಖಿಳಭುವನೈಕವಲ್ಲಭ ಕರುಣಾಕರ ಪರಮಶಿವಲಿಂಗಕರುಣಪತಂಗಸಂಗತಹೃದಯಾರವಿಂದಬಂಧುರ ಸರಸಜನಮಾನಿತೋಭಯಕವಿತಾವಿಚಕ್ಷಣ ಶ್ರೀಷಡಕ್ಷರದೇವವಿರಚಿತಮಾದ ಶಬರಶಂಕರವಿಳಾಸವಿಪುಳಪ್ರಬಂಧದೊಳ್.

ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ:--

ಗಿಳಿ

ಶಸಿವಣ್ಣಂ ಮನವಾಱೆ ನೋಡಿ ಒಟಿವಂದೊಲ್ದಪ್ಪಿ ಪಕ್ಕಂಗಳಿಂ |
ದನಿದೋಱುತ್ತೊಲವೆತ್ತು ಚಂಚುಪುಟದಿಂದಂ ಮೆಲ್ಪಿನಿಂ ಸೀಳ್ದು ಸೀ ||

ಯೆನೆ ಸೋವಾರ್ತವಸಧಾರೆಯುಂ ಸವಿದು ಚೀತ್ಕಾರಸ್ವನಂ ಪೊಣ್ಮೆ ತ |
ನ್ನಿನಿಯಳ್ಗಂ ಕರೆದಿತ್ತುದಂ ತಣಿಪುಗುಂ ಕೀರಾಳಿ ಮಾಕಂದದೊಳ್ ||

ಕೊಳ

ಸ್ಫುರಿತಶಿಳೀಮುಖಮುತ್ಪಳ | ಸರಕ್ತಕಂಜಾತಯುತಮುಪಾತ್ತಕಬಂಧಂ |
ಶರಭಂಗಾನ್ವಿತಮಿರದನು | ಕರಿಸಿದುದಾಬನದ ತಿಳಿಗೊಳಂ ಕೊಳುಗುಳಮಂ ||

ಜಿಂಕೆ

ನಡುಗುವ ಕಾಲ್ಗಳುಬ್ಬರಿಪ ಕಿಬ್ಬರಿಗಳ್ ಪೊಡೆವಳ್ಳಿ ಬಾಯ್ಗಳಿಂ |
ಕಡೆಗುಗುತಿರ್ಪ ದೂರ್ವೆ ಬೆದರ್ದೀಕ್ಷಿಪ ನೀಳ್ದಲಗಣ್ ಪೊದಟ್ದು ಸುಯ್ ||
ಬಿಡದಿರೆ ನೀಳ್ದ ಕೋಡಲುಗೆ ಬತ್ತಿದ ಬಾಯ್ವೆರಸಲ್ಲಿ ಭೀತಿ ಕೆ |
ಯ್ಗುಡೆ ಕಡುವೇಗದಿಂದೆ ಕೊಣಕಿಟ್ಟುದು ವನ್ಯಮೃಗೀಕದಂಬಕಂ ||

ಹಂದಿ

ಕುಸಿದ ಸಿರಂ ಕೆಲಕ್ಕೊಲೆದ ಬಲ್ಮುಸುಡುರ್ಬಿದ ಮೆಯ್ಯ ರೋಮಮಾ |
ರ್ಪೆಸೆವ ಮನಂ ಮರಲ್ದ ಕಿವಿ ಮಿಳ್ಳಿರಿದಾಡುವ ಬಾಲಮುರ್ವೆ ಪೊ ||
ಯ್ವುಸಿರೊಡನೆಟ್ದು ಬೆಳ್ ಬಲಿದ ಗೋಣ್ ಕಿಡಿಪಾಱುವ ಪಾಡೆ ತಳ್ತಗು |
ರ್ವಿಸಿ ಮಲೆದುರ್ಕಿ ಗರ್ಜಿಸಿ ಕರಂ ಪರಿತಂದುದು ಪಂದಿ ಕಾಯ್ಪಿನಿಂ ||

ಶಿವಾರ್ಜುನರ ಯುದ್ಧ

ಪಿಡಿಯೆ ಕರಾಗ್ರಮಂ ಬಿಡಿಸುತೌಂಕೆ ಬಿದಿರ್ಚುತೆ ಕಟ್ಕಿಗೆಯ್ಗೆ ಮೆ |
ಯ್ಗೊಡಪಿ ತೆರಳ್ಚುತಪ್ಪಳಿಸೆ ಸಿಲ್ಕದೆ ಲಂಘಿಪ ಸಂಚಿನಿಂದೆ ಪೊ ||
ಯ್ದೊಡೆ ಪೊಳೆವಾರ್ಪಿನಿಂದೆಱಗೆ ಚಿಮ್ಮುವ ಬಾಹುಗಳಿಂದೆ ಕಂಠಮಂ |
ತೊಡರೆ ಕುನುಂಗಿ ಪೈಸರಿಪ ಬಿನ್ನಣಮೊಪ್ಪೆ ಕಡಂಗಿ ಕಾದಿದರ್ ||

ಸೀಚ

ಪಿರಿದಾಯಾಸದೆ ಗುಣಮಂ | ದೊರೆಕೊಳಿಸಿದೊಡಂ ಖಲಂಗೆ ಗುಣಮಂ ಪಶ್ಚಾ |
ತ್ಕರಿಸಿ ಗುಣಿಯುಂ ವಿಭೇದಿಪ | ಪರಿತೀಕ್ಷ್ಣಮುಖಂಗೆ ಸೂಚಿಯಂತಿರೆ ಸಹಜಂ ||

---

## ರಂಗರಾಜ ಸು. 1660.

ಈತನು ಸಾತ್ವಿಕಬ್ರಹ್ಮವಿದ್ಯಾವಿಲಾಸವನ್ನು ಬರೆದಿದ್ದಾನೆ. ಇವನು ಶ್ರೀವೈಷ್ಣವಕವಿ; ಮೈಸೂರು ದೊರೆಯಾದ ಚಿಕ್ಕದೇವರಾಜನಲ್ಲಿ (1672-

1704) ಮಂತ್ರಿಯಾಗಿದ್ದ ಚಿಕ್ಕುಪಾಧ್ಯಾಯನ (1672) ತಂದೆ. ಚಿಕ್ಕುಪಾಧ್ಯಾಯನು ತನ್ನ ಶ್ರೀರಂಗಮಾಹಾತ್ಮ್ಯದ ಆದಿಭಾಗದಲ್ಲಿ ಈತನನ್ನು ಕವಿಕ್ಷ್ಮಾಪಾಲಕ ಎಂದು ಹೊಗಳಿದ್ದಾನೆ.

ಇವನ ಗ್ರಂಥ

ಸಾತ್ವಿಕಬ್ರಹ್ಮವಿದ್ಯಾವಿಲಾಸ

ಇದು ಗದ್ಯರೂಪವಾಗಿದೆ; ವಿಶಿಷ್ಟಾದ್ವೈತಸಿದ್ಧಾಂತವನ್ನು ಬೋಧಿಸುತ್ತದೆ. ಇದನ್ನೇ ಚಿಕ್ಕುಪಾಧ್ಯಾಯನು ಚಂಪೂಗ್ರಂಥವಾಗಿ ಬರೆದಿದ್ದಾನೆ. ಆರಂಭದಲ್ಲಿ ಈ ಶ್ಲೋಕವಿದೆ-

ವ್ಯತನೋದ್ರಂಗರಾಜಾರ್ಯಃ ಕುದೃಷ್ಟೀಭಪರಾಂಕುಶಂ ।
ಸಾತ್ವಿಕಬ್ರಹ್ಮವಿದ್ಯಾದಿವಿಲಾಸಂ ನಾಮ ವಿಶ್ರುತಂ ॥

"ಗುರುತತಿಗೆಱಗಿ ಬರೆವೆನು ಕನ್ನಡದಿಂದಂ"ಎಂದು ಹೇಳಿ ಗ್ರಂಥವನ್ನು ಆರಂಭಿಸಿದ್ದಾನೆ.

---

ರಾಯಸದ ಲಕ್ಷ್ಮೀಪತಿ. 1662

ರನ್ನನ (993) ಅಜಿತನಾಥಪುರಾಣದ ಒಂದುಪ್ರತಿಯ ಕೊನೆಯಲ್ಲಿ ಆ ಪ್ರತಿಯನ್ನು ಮೈಸೂರು ಚಿಕ್ಕದೇವರಾಜನಿಗಾಗಿ ಈತನು ಶಕ 1585 ಶೋಭಕೃದ್ವರ್ಷದಲ್ಲಿ, ಎಂದರೆ 1662 ರಲ್ಲಿ, ಬರೆದಂತೆ ಹೇಳುತ್ತಾನೆ. ಅಲ್ಲದೆ ಮೂರು ನಾಲ್ಕು ಕಂದಪದ್ಯಗಳನ್ನು ಬರೆದಿದ್ದಾನೆ. ಇವುಗಳನ್ನು ನೋಡಿದರೆ ಈತನು ಕವಿಯಾಗಿದ್ದಂತೆ ತೋರುತ್ತದೆ. ಈ ಪದ್ಯಗಳಲ್ಲಿ ಒಂದನ್ನು ಕೆಳಗೆ ಬರೆಯುತ್ತೇವೆ-

ಕರವೇಗದೊಳತಿಚಿಂತಾ | ಭರದಿಂದಾಲಸ್ಯದಿಂದಹಂಕಾರದೊಳಂ |
ಬರೆದ ಲಿಪಿಯಲ್ಲಿ ತಪ್ಪಿರ|ಲಱಿದರ್ತಿದ್ದುವುದು ಕ್ಷಮಿಪುದೆನ್ನವಗುಣಮಂ ||

---

ಮುಮ್ಮಡಿ ತಮ್ಮ. ಸು. 1665

ಇವನು ಶಂಕರಸಂಹಿತೆಯನ್ನೂ ಒಂದು ಯಕ್ಷಗಾನವನ್ನೂ ಬರೆದಿದ್ದಾನೆ. ಸಂಸ್ಕೃತದಲ್ಲಿಯೂ ತೆಲುಗಿನಲ್ಲಿಯೂ ಕೆಲವು ಗ್ರಂಥಗಳನ್ನು ಬರೆದಿರುವಂತೆ ತಿಳಿಯುತ್ತದೆ. ಈತನು ವೀರಶೈವಕವಿ; ರಾಜವಂಶಕ್ಕೆ ಸೇರಿದವನು. ತನ್ನ ಪರಂಪರೆಯನ್ನು ಹೀಗೆ ಹೇಳಿಕೊಂಡಿದ್ದಾನೆ-

ಸುಜ್ಞಾನಮೂರ್ತಿದೇಶಿಕನ ಕರುಣೆಯಿಂದೆಸೆವ ಸುಗಟೂರವಂಶದ ದೇವಯ

ರಾಜನ ಮಗ ತಮ್ಮಪ್ಪರಾಜ ; ಅವನ ಮಗ "ನಿಡುಜಡೆಯೊಳೊಗೆದು ಪೆನುಗೊಂಡೆ ಗೈತಂದ ವಿಗಡತುರುಕರನಿಱಿದು ಕರ್ಣಾಟಕಾಧಿಪನ ಮೆಚ್ಚಿಸಿ ಅವನಿಂ ಗಂಡಪೆಂಡೆಯುವ ಚಿಕರಾಯ ಪದ್ದು ಮೊದಲಾದ ವಿಖ್ಯಾತಬಿರುದುಗಳಾಂತು ಶಿವಕರುಣದಿಂದಲಂಧಕಗೆ ಕಣ್ಣಿತ್ತ" ಚಿಕ್ಕತಮ್ಮೇಂದ್ರ ; ಇವನ ಹೆಂಡತಿ ವೀರಮಾಂಬಿಕೆ ; ಮಗ ಇಮ್ಮಡಿ ತಮ್ಮಭೂಪಾಲ ; ಈತನು ಶತ್ರುರಾಜರನ್ನು ಓಡಿಸಿ ಕಪ್ಪವಾಂತನು, ಕರ್ಣಾಟಕಾಧಿಪತಿಯ ದ್ರೋಹಿಗಳ ಹರಿಸಿ ಪರಮಾಪ್ತನಾದನು, ಕನಕವೃಷವೀರಭದ್ರಧ್ವಜಗಳಂ ಪಡೆದನು ; ಇವನ ಹೆಂಡತಿ ವೆಂಕಟಾಂಬೆ ; ಮಗ ಕವಿ ಮುಮ್ಮಡಿತಮ್ಮ.

ತನ್ನ ತಂದೆತಾಯಿಗಳು ಸುಜ್ಞಾನಮೂರ್ತೀಶಕರಜಾತರೆಂದೂ ತಾನು ತ್ರಿವಿಧ ಕವೀಶ್ವರನೆಂದೂ ಹೇಳಿಕೊಂಡಿದ್ದಾನೆ. ತನ್ನನ್ನು ನೋಡಿ ಮಾಹೇಶ್ವರರೂ ಬುಧರೂ ಶೈವವರಕವಿಗಳೂ "ಎಲೆರಾಜನೇ! ನಿನ್ನೊಳು ತ್ರಿವಿಧಲಿಂಗಾಂಗಸಮರಸತೆ, ಗುರುಲಿಂಗಜಂಗಮಭಜನೆ, ಶಬ್ದತರ್ಕವೇದಾಂತಪಾಂಡಿತ್ಯ, ಕರ್ಣಾಟಕಾಂಧ್ರಸಂಸ್ಕೃತಕವಿತೆ ನೆಲೆಗೊಂಡಿವೆ. ನೀನು ತೆಲುಗಿನಲ್ಲಿ 'ಶೈಶವಕ್ರೀಡೆಯೊಳ್' ರಾಜೇಂದ್ರಚೋಳಚರಿತೆಯನ್ನೂ, 'ಮೊಳೆವಿಾಸೆಯೊಗೆವಂದು' ಕುಮಾರಾರ್ಜುನೀಯವನ್ನೂ, 'ತುಂಬುಜವ್ವನದೆ' ಸೌಂದರೇಶಚರಿತೆಯನ್ನೂ ರಚಿಸಿದೆ. ಬಳಿಕ 'ಆಶುವಾಗಿ' ಕನ್ನಡದಲ್ಲಿ ಯಕ್ಷಗಾನರೂಪದಿಂದ ನಂ......ನ್ನೂ[1] 'ವಯೋವಿಶೇಷದೆ' ಸಂಸ್ಕೃತದಲ್ಲಿ ಕೌಮುದೀವ್ಯಾಖ್ಯಾನ, ರಸಿಕಮನೋರಂಜನ ಇವುಗಳನ್ನೂ ಬರೆದೆ. ಶಿವದರ್ಪಣ ಎಂಬ ಮಹಾಗ್ರಂಥವನ್ನು ಬ್ರಾಹ್ಮಣರಿಂದ ಬರಸಿದೆ. ಶಂಕರಸಂಹಿತೆಯನ್ನು ಕರ್ಣಾಟಕಭಾಷೆಯಲ್ಲಿ ರಚಿಸಿ ನಮ್ಮನ್ನು ಆನಂದಪಡಿಸು. ಕಾಳಿದಾಸನ ವಿಭಕ್ತಿ, ವಾಲ್ಮೀಕಿಯ ವಿವರ, ಪಾಲ್ಕುರಿಕೆ ಸೋಮನ......[1] ವ್ಯಾಸನ ವಿಸ್ತಾರ, ಹೊನ್ನನ ಸುವರ್ಣರೇಖೆ, ಮಾಯಿದೇವನ ವಿಚಿತ್ರ, ಮಾಘನ ಧ್ವನಿ, ಮಳೆಯರಾಜನ ಧಾರಾಶುದ್ಧಿ, ಮನಸಿಜನ ಅಲಂಕಾರ, ಇಷ್ಟೂ ಈಶನ ಕೃಪೆಯಿಂದ ನಿನ್ನಲ್ಲಿವೆ" ಎಂದು ಹೇಳಲು ಈ ಗ್ರಂಥವನ್ನು ಬರೆದಂತೆ ಹೇಳುತ್ತಾನೆ.

ಕವಿಯ ತಾತನಾದ ಚಿಕ್ಕರಾಯ ಎಂಬ ಬಿರುದನ್ನು ಪಡೆದ ಚಿಕ್ಕತಮ್ಮೇಂದ್ರನು 1632 ರ ವರೆಗೆ ಆಳಿದಂತೆ ತಿಳಿವುದರಿಂದ[2] ಕವಿಯ ಕಾಲವು ಸುಮಾರು 1665 ಆಗಬಹುದು.

---

1. ಈ ಸ್ಥಳಗಳಲ್ಲಿ ಗ್ರಂಥವು ತ್ರುಟಿತವಾಗಿದೆ.

2 *Mysore II, 75*

ಪೂರ್ವಕವಿಗಳಲ್ಲಿ ಸೋಮ, ಭೀಮ, ಶಿವಭದ್ರ, ರುದ್ರ, ಮಲ್ಲಣ, ಬಿಲ್ಲಣ, ಮಯೂರ, ಚೋರ, ಮಳೆಯರಾಜ, ಭೋಜ, ವಲ್ಮೀಕಭೂತಿ (ವಾಲ್ಮೀಕಿ), ಭವಭೂತಿ ಇವರುಗಳನ್ನು ಸ್ಮರಿಸಿದ್ದಾನೆ. ಇನ್ನು ಕೆಲವರ ಹೆಸರುಗಳು ಹಿಂದೆಯೇ ಸೂಚಿಸಿವೆ.

ಇವನ ಗ್ರಂಥಗಳಲ್ಲಿ

## ಶಂಕರಸಂಹಿತೆ

ಇದು ವಾರ್ಧಕಷಟ್ಪದಿಯಲ್ಲಿ ಬರೆದಿದೆ. ನಮಗೆ ದೊರೆತ ಅಸಮ ಗ್ರಪ್ರತಿಯಲ್ಲಿ ಕಾಂಡ 7, ಸಂಧಿ 80, ಪದ್ಯ 4100 ಇವೆ. "ಆದಿಮಧ್ಯಾಂತವೆಲ್ಲಂ ನೋಡೆ ಶಂಕರನನಲ್ಲದನ್ಯವನೆಣಿಸದೀನಿಷ್ಕಳಂಕಶಂಕರಸಂಹಿತೆ" ಎಂದೂ "ಇದಱೊಳ್ ವರ್ಣನೀಯನಾಗೌರೀಶಸುತನಹ ಸ್ಕಂದಂ" ಎಂದೂ ಕವಿ ಹೇಳುತ್ತಾನೆ. ಇದರಲ್ಲಿ ಕುಮಾರೋತ್ಪತ್ತಿ, ತಾರಕಾದಿವಧ, ದಕ್ಷಾಧ್ವರಧ್ವಂಸ, ಭಿಕ್ಷಾಟನ, ವಿಭೂತಿರುದ್ರಾಕ್ಷಪಂಚಾಕ್ಷರೀಮಹಿಮೆ ಸೋಮವಾರವ್ರತವೇ ಮುಂತಾದ ವ್ರತಗಳ ಮಹಿಮೆ ಇವುಗಳೆಲ್ಲಾ ಪ್ರತಿಪಾದಿತವಾಗಿವೆ. ಕವಿವರರಿಂದ ಕವಿತ್ವವನ್ನು ಗೋಪ್ಯವಾಗಿ ಹೇಳಿಸಿ ನಾನು ಹೇಳಿದೆನು ಎಂಬವರಂತೆ ಅಲ್ಲ; ನಾನೇ ಸ್ವಂತವಾಗಿ ಈ ಗ್ರಂಥವನ್ನು ರಚಿಸಿದೆನು- ಎಂದು ಕವಿ ಹೇಳುತ್ತಾನೆ. ಗ್ರಂಥಾವತಾರದಲ್ಲಿ ಶಿವಸ್ತುತಿ ಇದೆ. ಬಳಿಕ ಕವಿ ಪಾರ್ವತಿ, ಗಣೇಶ, ಸುಬ್ರಹ್ಮಣ್ಯ, ವೀರಭದ್ರ, ಸರಸ್ವತಿ ಇವರುಗಳನ್ನು ಹೊಗಳಿದ್ದಾನೆ. ಕಾಂಡಗಳ ಅಂತ್ಯದಲ್ಲಿ

ಸುಜ್ಞಾನಮೂರ್ತೀಶಕರಜಾತರಾದ ಸುಗಟೂರ ಚಿಕ್ಕತಮ್ಮೇಂದ್ರಪುತ್ರನಿರ್ಮಾಡಿತಮ್ಮಗಂ ವೆಂಕಟಾಂಬೆಗೊಗೆದ ಸರಸಂ ತ್ರಿವಿಧಕವೀಶ್ವರನು ಮುಮ್ಮಡಿತಮ್ಮನುರುಭಕ್ತಮಾಹೇಶ್ವರರ ಕೃಪೆಯೊಳೊರೆದ ಶಂಕರಸಂಹಿತೆ

ಎಂದಿದೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

### ಸ್ಕಂದನವಿವಾಹ

ಪಿಡಿಯಿಂದ ಲಾಜೆಗಳ್ ಬಿಡದೆ ಚೆಲ್ಲುತ್ತಿರ |
ಲ್ಕೊಡನೊಡನೆ ಮೌನಿಗಳ್ ಜಡೆ ಜಡಿದು ಸಡಿಲುತ್ತ |
ಲಡಿಗಳೊಳ್ ತೊಡರುತಿರೆ ಪಿಡಿದು ದಂಡಗಳೆತ್ತಿ ನಡುದೋತ್ರಮುಡಿ ಜಾಱಲು ||
ಎಡದ ಕೈಯಿಂದದಂ ಸಡಗರದೊಳಮರಿಸುತೆ |

ವುಡಿಸಿದೇಣಾಜಿನದೆ ಬಡಿದುಕೊಳುತಾಗಳಾ !
ಗಡಣ ಸಂತಸದಿಂದೆ ಮೃಡಸುತಗೆ ಹರಕೆಯಂ ಕೊಡುತೆ ಕುಣಿಕುಣಿದರೊಸೆದು ||

### ಸೂರ್ಯಾಸ್ತ

ಅನಿತಱೊಳೆ ರಾಗದೊಡಗೂಡಿ ಪಶ್ಚಿಮಶರಧಿ |
ಗಿನನಿೞಿದ ಭಾವಮದು ಚೆಲ್ವಾದುದೆಂತೆನಲ್ |
ಮನವೊಲಿದು ನಭಮೆಂಬ ಗರುಡಿಯೊಳ್ ಕೆಂಧೂಳನನುಗೊಳಿಸಿ ನಲವಿನಿಂದೆ ||
ಘನಸಾಧನೆಯ ಮಾಡಿದಾಬೞಿಲ್ಕೆಯ ಕಳೆಯ |
ಲನುಪಿನಿಂದಂಬರವನುೞಿದು ಮಜ್ಜನಗೈವೆ |
ನೆನುತೆ ಪೋದಂತಾದುದಾಸಮಯದೊಳ್ ತಪ್ಪಂ ಮುಸುಕಿತ್ತು ದಿಕ್ತಟಗಳಂ ||

### ನಕ್ಷತ್ರ

ಆಕಾಶವೆಂಬಾಸೆಯಮರಾವತಿಯೊಳಿರ್ದ |
ನೇಕಪಮನಂಡಲೆವುದೆಂದು ಮುನಿಸಂ ತಳೆಯು |
ತಾಕುಲಿಶಧರನದಱ ಮಸ್ತಕಂಬೊಯ್ಯೆ ಕೆದಱಿದ ಮುತ್ತುಗಳ ಮೊತ್ತವೋ ||
ಆಕಾಶಕೇಶ ನಾಟ್ಯಮುಮನೆಸಗಲ್ಕೆ ಗಂ |
ಗಾಕಾಂತೆ ಶಿರದೊಳ್ ತುಳುಂಕೆ ಜಲಬಿಂದುಗಳ |
ನೇಕವಿಧದಿಂ ನೆಗೆದುವೆನೆ ತಾರಕಾಳಿ ಸೊಗಸಿರ್ದುದಾಗಸದೊಳಿಡಿದು ||

### ಶಿವಸ್ತುತಿ

ಕಳೆಯಾಣ್ಮನಂ ಜಡೆಗಳೊಳಗಿಡುತ್ತಲ್ಲಿ ನಿ !
ರ್ಮಳಗಂಗೆಯಂ ನಲಿದು ತಳೆಯುತುಂ ನಾಡೆ ಶೀ |
ತಳವಾದ ಗಿರಿವರಂಗಳಿಯನೆನಿಸಾತನ ಮಗಳಮದುವೆಯಾಗುತ್ತಲುಂ ||
ಜಳದವ ನಿರಾಕರಿಪ ಗಳದಿಂದೆ ನಿಜಭಕ್ತ |
ಕುಳಕೀಪ್ಸಿತದ ವರಂಗಳನಿತ್ತು ಹರಿನೇತ್ರ |
ಜಳಜಪದನಾಗುತಲನಿಳಭುಕ್ಚಯಾಭರಣಗಳನಾಂತ ಶಿವನೆ ಶರಣು ||

ಇವನ ಯಕ್ಷಗಾನವು ನಮಗೆ ದೊರೆತಿಲ್ಲ.

---

ಸಂಪಾದನೆಯ ಗುರುಲಿಂಗದೇವ. ಸು. 1670

ಈತನು ಶೀಲವಂತಯ್ಯನ ತ್ರಿವಿಧಿಗೆ[1] ವ್ಯಾಖ್ಯಾನವನ್ನು ಬರೆದಿದ್ದಾನೆ.

1. Vol. I,158.

ಇವನು ವೀರಶೈವಕವಿ; ತನ್ನ ಗುರುಪರಂಪರೆಯನ್ನು ಹೀಗೆ ಹೇಳಿಕೊಂಡಿದ್ದಾನೆ—

ಶ್ರೀಮತ್ಸಚ್ಚಿದಾನಂದನಿತ್ಯಪರಿಪೂರ್ಣನಿರಂಜನಪರಂಜ್ಯೋತಿಸ್ವರೂಪರಾದ ತೋಂಟದಸಿದ್ಧಲಿಂಗಪ್ರಭುವೆಂಬಾಚಾರ್ಯರು ; ಅವರ ನಿಜದಙ್ರಿವಿನಾಚರಣೆಯನುಭವಿಯೆ ಬೋಳಬಸವೇಶ್ವರನು ; ಅವರ ನಿಜದಙ್ರಿವಿನಾಚರಣೆಯನುಭವಿಯೆ ಹರತಾಳ ಚೆನ್ನಂಜಿದೇವರು ; ಅವರನುಭವದ ಅಖಂಡತೇಜೋವಿಗ್ರಹವೆ ಎಳಮಲೆಯ ಗುರುಶಾಂತದೇವರು ; ಅವರ ಭಕ್ತಿಜ್ಞಾನವೈರಾಗ್ಯದ ಸಮರಸಾನಂದಾನುಭಾವಿಯೆ ಸಂಪಾದನೆಯ ಸಿದ್ಧವೀರಣಾಚಾರ್ಯರು; ಅವರಂಗಲಿಂಗದನುಭಾವದಾಚರಣೆಯ ನಿಜದ ನಿಙಿಗೆ ವಿಡಿದು ಸ್ವಲೀಲಾನಂದದಲ್ಲಾಚರಿಸಿದವರೇ ಸಂಪಾದನೆಯ ಬೋಳಬಸವದೇವರು ; ಅವರ ಲಿಂಗಾಂಗಸಂಗಸಮರಸದಙ್ರಿಹಿನ ಪ್ರಸಾದಪರಿಪೂರಿತಹೃದಯರಾದ ಸಂಪಾದನೆಯ ಗುರುಲಿಂಗದೇವರು ಲಿಂಗಾಂಗಪ್ರಣವಸಂಯೋಗವೆಂಬ ಶಾಸ್ತ್ರದ ಗರ್ಭಗರ್ಭೀಕೃತಮಾಗಿರ್ದ ಮಂತ್ರಾರ್ಥವನು ಕರ್ಣಾಟಭಾಷೆಯಿಂದ ಟೀಕಿಸಿದರು.

ಈ ಪರಂಪರೆಯಪ್ರಕಾರ ಕವಿ ತೋಂಟದಸಿದ್ಧಲಿಂಗನಿಂದ (ಸು. 1470) 7ನೆಯವನಾಗುತ್ತಾನೆ. ಇವನ ಕಾಲವು ಸುಮಾರು 1670 ಆಗಬಹುದು. 1698 ರಲ್ಲಿ ಚತುರಾಚಾರ್ಯಪುರಾಣವನ್ನು ಬರೆದ ಸಂಪಾದನೆಯ ಪರ್ವತೇಶ್ವರನೂ ತೋಂಟದಸಿದ್ಧಲಿಂಗನ ಶಿಷ್ಯಪರಂಪರೆಯಲ್ಲಿ ತಾನು 7ನೆಯವನೆಂದು ಹೇಳಿಕೊಂಡಿದ್ದಾನೆ.

---

## ಶಾಂತಲಿಂಗದೇಶಿಕ. 1672

ಈತನು ಭೈರವೇಶ್ವರಕಾವ್ಯದ ಕಥಾಸೂತ್ರರತ್ನಾಕರವನ್ನು ಬರೆದಿದ್ದಾನೆ. ಇವನು ವೀರಶೈವಕವಿ. "ಭಕ್ತಿಜ್ಞಾನವೈರಾಗ್ಯವೇ ರೂಪುವೆತ್ತ ಷಟ್ಸ್ಥಲಾಚಾರ್ಯವಿರಕ್ತನಮಶ್ಶಿವಾಯದೇವರೆಂಬ ಸದ್ಗುರುಮೂರ್ತಿಯಲ್ಲಿ ಅವರ ಮಹಾನುಭಾವವಾಕ್ಯಪ್ರಸನ್ನಪ್ರಸಾದಾಮೃತಮಂ ಸ್ವೀಕರಿಸಿ ತೃಪ್ತನಾದ ಶಾಂತಲಿಂಗದೇಶಿಕನು" ಎಂಬುದರಿಂದ ಈತನ ಗುರು ವಿರಕ್ತನಮಶ್ಶಿವಾಯದೇವನೆಂದು ತಿಳಿಯುತ್ತದೆ. ಆತನ ಆಜ್ಞಾನುಸಾರವಾಗಿ ಈ ಗ್ರಂಥವನ್ನು ಶಕ 1594 ಪರೀಧಾವಿಯಲ್ಲಿ-ಎಂದರೆ 1672 ರಲ್ಲಿ-ಬರೆದಂತೆ ಹೇಳುತ್ತಾನೆ.

ಇವನ ಗ್ರಂಥ

## ಭೈರವೇಶ್ವರಕಾವ್ಯದ ಕಥಾಸೂತ್ರರತ್ನಾಕರ

**ಇದು ಗದ್ಯಗ್ರಂಥ; ಇದರಲ್ಲಿ 81 ಕಥೆಗಳೂ 618 ವಾಕ್ಯಗಳೂ ಇವೆ.**

ಕಿಕ್ಕೇರಿಯಾರಾಧ್ಯನಂಜುಂಡೇಶನೆಂಬ ಶಿವಕವೀಶ್ವರನು ಪೇಳಿದ ಭೈರವೇಶ್ವರ ಕಾವ್ಯದಲ್ಲ ಸೂಚನೆಯಾಗಿರ್ದ ಕಥೆಗಳನ್ನು ವಿಶಾಲವಾಗಿ ಬರೆದು ಸಂಗ್ರಹಿಸು ಎಂದು ವಿರಕ್ತನಮ್ಮಿ ವಾಯದೇವರು ನಿರೂಪಿಸೆ " ಆವರ ನಿರೂಪವಿಡಿದು...ಲಕ್ಷಣಶುದ್ಧ ವಾಗಿ ಪೇಟಿಲ್ಪಟ್ಟ ವೀರಮಾಹೇಶ್ವರಸಿದ್ಧಾಂತ, ವೀರಮಾಹೇಶ್ವರತಂತ್ರ, ವೀರಮಾಹೇಶ್ವರಾಚಾರಸಂಗ್ರಹ, ಸೋಮನಾಥಭಾಷ್ಯ, ವಿವೇಕಚಿಂತಾಮಣಿ, ವೀರಶೈವಸುಧಾರ್ಣವ, ಗಣಭಾಷ್ಯರತ್ನಮಾಲೆ, ಬಸವೇಶ್ವರಪುರಾಣ, ಗಿರಿಜೆಯಕಲ್ಯಾಣ, ವೀರಶೈವಾಮೃತಪುರಾಣ, ಆರಾಧ್ಯಚಾರಿತ್ರ, ನನ್ನಿಯ್ಯನ ಕಾವ್ಯ, ಬಸವಚಾರಿತ್ರ, ಸಿಂಗಿರಾಜನ ಕೃತಿ, ಸಮಸ್ತಸಾಂಗತ್ಯಚಾರಿತ್ರಕಥೆಗಳಿಗೆ ಮಾತೃಸ್ಥಾನವಾಗಿರ್ಪ ಬಸವಾದಿಪುರಾತನರು ನಿರೂಪಿಸಿದ ಶೂನ್ಯಸಂಪಾದನೆ ಮೊದಲಾದ ವಚನಾಮೃತಸಾರದಲ್ಲಿ ಪೇಟುತ್ತಿರ್ದ ಕಥೆಗಳಂ ನೋಡಿ ಪುರಾತನರ ವಚನದ ಮೇಲ್ಪಂತಿವಿಡಿದು ಕಾವ್ಯದ ಕಥಾಸಂಗ್ರಹಕ್ಕೆ ಬೇಕಾದುವಂ ತೆಗೆದುಕೊಂಡು ಸಂಗ್ರಹಿಸಿದೆನು '' ಎಂದು ಕವಿ ಹೇಳುತ್ತಾನೆ.

ಈ ಗ್ರಂಥವು ಯದ್ಯಪಿ ಮುಖ್ಯವಾಗಿ ಭೈರವೇಶ್ವರಕಾವ್ಯಕ್ಕೆ ವಿವರಣ ರೂಪವಾಗಿದ್ದರೂ ಅನೇಕವೀರಶೈವಕವಿಗಳ ಮತ್ತು ಅವರ ಗ್ರಂಥಗಳ ವಿಷಯವಾದ ಇತಿಹಾಸಗಳನ್ನು ಒಳಕೊಂಡಿರುವುದರಿಂದ ಬಹಳ ಪ್ರಯೋಜನಕಾರಿಯಾಗಿದೆ. ಇವನ ಕಾಲವು ತಿಳಿದಿರುವುದರಿಂದ ಇದರಲ್ಲಿ ಹೇಳಿರುವ ಕವಿಗಳ ಮತ್ತು ಗ್ರಂಥಗಳ ಕಾಲವು ಇದಕ್ಕಿಂತ ಹಿಂದಣದು ಎಂದು ಸ್ಥೂಲವಾಗಿ ನಿಶ್ಚಯಿಸಲು ಸಹಕಾರಿಯಾಗಿದೆ. ಕರ್ಣಾಟಕಕವಿಚರಿತೆಯ ಪ್ರಥಮಸಂಪುಟದಲ್ಲಿ ವೀರಶೈವಕವಿಗಳ ಚರಿತವನ್ನು ಬರೆವಾಗ ಹಲವು ಕಡೆ ಈ ಗ್ರಂಥದಿಂದ ಕೆಲವು ಭಾಗಗಳನ್ನು ಉದ್ಧರಿಸಿ ಬರೆದಿದ್ದೇವೆ. ಈ ಸಂಪುಟದಲ್ಲಿಯೂ ಹಾಗೆಯೇ ಮಾಡಿದ್ದೇವೆ.

---

## ಚಿಕ್ಕದೇವರಾಜ. 1672–1704

ಈತನು ಚಿಕದೇವರಾಜಬಿನ್ನಪ, ಗೀತಗೋಪಾಲ, ಭಾಗವತ, ಶೇಷಧರ್ಮ, ಭಾರತ ಈ ಗ್ರಂಥಗಳನ್ನು ಬರೆದಿದ್ದಾನೆ.

ಇವನು ಮೈಸೂರು ರಾಜರಲ್ಲಿ ಬಹಳ ಪ್ರಖ್ಯಾತನಾದ ದೊರೆ; 1672 ರಿಂದ 1704 ರವರೆಗೆ ಆಳಿದನು. ಇವನ ತಂದೆ ದೊಡ್ಡದೇವರಾಜ, ತಾಯಿ

ಅಮೃತಾಂಬೆ. ಇವನು ಬಹಳ ಪರಾಕ್ರಮಶಾಲಿಯಾಗಿಯೂ ವಿದ್ವತ್ಪ್ರಭುವಾಗಿಯೂ ಇದ್ದನು. ಸ್ವತಃ ಹಲವು ಸಂಸ್ಕೃತ ಕರ್ಣಾಟಕ ಗ್ರಂಥಗಳನ್ನು ಬರೆದಿರುವುದಲ್ಲದೆ ಅನೇಕ ವಿದ್ವಾಂಸರಿಗೆ ಪ್ರೋತ್ಸಾಹಕನಾಗಿಯೂ ಇದ್ದನು. ಇವನ ಪ್ರೋತ್ಸಾಹದಿಂದಲೇ ತಿರುಮಲಾರ್ಯ, ಸಿಂಗರಾರ್ಯ, ಚಿಕ್ಕುಪಾಧ್ಯಾಯ, ಶೃಂಗಾರಮ್ಮ, ಹೊನ್ನಮ್ಮ, ವೇಣುಗೋಪಾಲವರಪ್ರಸಾದ, ತಿಮ್ಮಕವಿ, ಮಲ್ಲಿಕಾರ್ಜುನ, ಚಿದಾನಂದಕವಿ, ಮಲ್ಲರಸ ಮುಂತಾದ ಕವಿಗಳು ಕನ್ನಡದಲ್ಲಿ ಉದ್ಗ್ರಂಥಗಳನ್ನು ಬರೆದು ಆ ಭಾಷೆಗೆ ಉನ್ನತಿಯನ್ನುಂಟುಮಾಡಿದರು. ಈತನ ಪರಾಕ್ರಮಸೂಚಕವಾದ ಈ ಯಂಶಗಳು ಚಿಕದೇವರಾಜಬಿನ್ನಪದಲ್ಲಿ ಹೇಳಿವೆ—

ಉತ್ತರದೇಶದೊಳುದ್ವೃತ್ತಚರಿತ್ರನೆನಿಸಿ ಡಿಳ್ಳಿಯನಾಡನನಿತುಮಂ ಜಳ್ಳುಗೆಯ್ದು ವಿಜಯಾಪುರದರಸಂ ಜಯಿಸಿ ಅವರ ನಾಡುಬೀಡುಗಳಂ ಕೊಂಡು ಗೋಲಕೊಂಡೆಯವನಂ ಬಂಡುಗೆಯ್ದು ಕನ್ನಡನಾಡಂ ಪೊಕ್ಕ ಶಿವಾಜಿಯಂ ಆಜಿರಂಗದೊಳೋಜೆಗೆಡಿಸಿ, ಅವನ ಸೇನಾನಿಗಳೊಳ್ ಜೈತಜಿಕಾಟಕರನಂ ಘೋಟಕಖುರಪುಟಂಗಳಿಂ ತೊತ್ತುಳಿಮುಳಿಸಿ, ಮತ್ತಮಾದಾದಜಿಕಾಕಡೆಯೆನಿಪನ ಅಣಲಂ ಕೊಯ್ದು ಆಪಂದಲೆಯಂ ಮಂದಿಯೊಳ್ ಮೆಱೆಯಿಸಿ, ಆರಭಸದಿಂ ಶಂಭೋಜಿಯಂ ಭಯಾರ್ಣವದೊಳ್ ಮುಳುಂಗಿಸಿ, ಅವಂಗೆ ನೆರವಾಗಿ ಬಂದ ಎಕ್ಕೋಜಿಯ ಒನ್ಮವಂ ಸಾಕುಮಾಡಿ, ಅವನ ಮಹಾಪ್ರಧಾನನೆನಿಸುವ ಎಸವಂತರಾವುವ ನಾಸಾಚ್ಛೇದನಂಗೆಯ್ದು, ಮತ್ತಮಾಶಂಭೋಜಿಗೆ ಕಪ್ಪವಿತ್ತು ಪೆಂಪುಗೆಯ್ದ ಗೋಲಕೊಂಡೆವಿಜಯಾಪುರದವರಂ ಕೇಣಂಗೊಂಡು, ಅವರನಂಡಲೆವುದರ್ಕೆ ಡಿಳ್ಳಿಯಾಳ್ವ ಮಹಾಪಾದುಶಾಹನೆನಿಸುವ ಅವರಂಗಶಾಹನಂ ಬರಿಸಿ ಅವನಿಂದವರಿರ್ವರ ದೇಶಕೋಶಂಗಳಂ ಕವರ್ದು ಕೈಸೆಱೆಗೊಂಡು, ಮತ್ತಮಾ ಮರಾಟರಾಟೋಪಮಂ ನಂಬಿ ಮುಂಬರಿದು ಪೊಣರ್ದ ಮೊಱಸ ತಿಗುಳ ಕೊಡಗ ಮಲೆಯಾಳನಾಡ ಮನ್ನೆಯರಂ ಬನ್ನಂಬಡಿಸಿ, ಈತೆಱದೊಳೆಣ್ದೆಸೆಯಂ ಗೆಲ್ದು ಸುಖಸಂಕಥಾವಿನೋದದಿಂದಿರ್ದಂ.

ಪೂರ್ವದಿಗ್ವಿಜಯಯಾತ್ರಾವಿತ್ರಾಸಿತ ಚೇದಮಂಗಲೋಪಾಂತಕಾಂತಾರೋಪಗೂಢವ್ಯೂಹಸೇನಾಭಿಗುಪ್ತಪಾಂಡ್ಯಸೇನಾಧಿಪ ಸಂಗರಕಿರೀಟವೆಂಕಟಕೃಷ್ಣಶಿಬಿರಸರ್ವಸ್ವಹರಣಸಮಸಮಯಸಮಾಕ್ರಾಂತ ಮಳಲಿಪರಮತ್ತಿಶಾಲೆಯಚೇದಿಮಂಗಲ ಕೊಂಗುಧಾರಾಪುರಾದಿಪಾಂಡ್ಯನೃಪದುರ್ಗಮದುರ್ಗಸ್ತೋಮಮಂ ; ಗಂಭೀರೋದ್ಧತಪರಿಘಾವರಣಭೀಷಣಶತಘ್ನೀಶತಸಂಕುಲಮತ್ತಮಾವಳಿಸೇನಾವರ್ಗ ವರ್ಜಿತಧರ್ಮ

ಪುರೀಪ್ರಸಭಾಕ್ರಮಣಶ್ರವಣನಿರ್ಜನೀಕೃತಕೆಂಗೇರಿವಾಮಲೂರುಬೇವೂರುಹಳ್ಳಿಬೈರನೆತ್ತ ಕುನ್ನತ್ತೂರ್ಮುಖ್ಯದುರ್ಗವರ್ಗನಿರಾಯಾಸಾಕ್ರಮಣನಿವೃತ್ತನಿಜಸೈನಿಕಸಮೂಹಂ; ದಕ್ಷಿಣದಿಗ್ವಿಜಯಯಾತ್ರಾವಿತ್ರಾಸಿತಪಲಾಯಿತಪಾಂಡ್ಯಬಲಾನುಧಾವನಶ್ರಾಂತನಿಜಬಲವಿಶ್ರಾಂತಿಸಾಧ್ಯನೀಕೃತಜಲಧಿವೇಲಾತಮಾಲಾರಣ್ಯಂ; ಪಶ್ಚಿಮದಿಗ್ವಿಜಯಪ್ರಸಾಧನಭೇರೀರವಾಕರ್ಣನಸಂಭ್ರಾಂತದುರ್ದಾಂತಹುಶಾನಖಾನಸನಾಥಕೆಳದಿನೃಪಸಮರ್ಪಿತಸರ್ವಸ್ವನಿರ್ವಾಪಿತಕೋಪಂ; ಉತ್ತರದಿಗ್ವಿಜಯಸಮಯಾಭಿಯಾತಕುತುಪಶಾಹವಾಹಿನೀವಿಮರ್ದನಕ್ಷಣಾಕ್ರಾಂತಕಂದಿಕೆರೆಚಿಕ್ಕನಾಯಕನಹಳ್ಳಿಹೊನ್ನವಳ್ಳಿಸಾರತವಳ್ಳಿತುರುಗೆರೆಪ್ರಮುಖದುರ್ಗ್ರಹಪ್ರಾಕಾರವಾರಂ; ಜಡಕನದುರ್ಗಹಠಾದ್ಗ್ರಹಣವೇಳಾನಿಖಾತಸುರಂಗಮುಖಾನಲೋತ್ಕ್ಷಿಪ್ತಗಂಡೋಪಲಪಾತನಿರ್ಧೂತಬಿಜ್ಜಿನರಮದ್ದಗಿರಿಚೆನ್ನರಾಯದುರ್ಗವೀರಣದುರ್ಗಾದ್ಯಸಂಖ್ಯದುರ್ಗವರ್ಗಾಕ್ರಮಣಾವಸರಾವನತಸಾಮಂತನೃಪಾಲಮೌಳಿಮಣಿಘೃಣಿನೀರಾಜಿತಪದರಾಜೀವಂ; ಸಾಹಜಿಮುಖಮರಾಟನೃಪರಾಜಧಾನೀಕೃತಾಭಂಗುರಬೆಂಗಳೂರ್ಹರಣನಿಷ್ಪ್ರಾಣಿತ ಶಂಭುಜಿಸಾಹಜಿಸಂತಜಿಹರಜಿಪ್ರಮುಖಮಹಾರಾಷ್ಟ್ರನೃಪಾಲಜಾಲಂ; ಶ್ರೀಮದಪ್ರತಿಮವೀರನರಪತಿ ಶ್ರೀಚಿಕದೇವಮಹಾರಾಜಂ.

ರಸಿಕಜನಕರ್ಣರಸಾಯನೀಕೃತಸಂಗೀತವಿಸ್ತರಂ, ಸಾಹಿತ್ಯವಿದ್ಯಾನಿಕಷಪ್ರಸ್ತರಂ ಎಂಬುದರಿಂದ ಈತನಿಗೆ ಸಂಗೀತ, ಸಾಹಿತ್ಯ ಎರಡರಲ್ಲಿಯೂ ಪಾಂಡಿತ್ಯವುಂಟೆಂಬುದು ತಿಳಿಯುತ್ತದೆ. ಇವನು ಮೇಲುಗೋಟೆಯ ನಾರಾಯಣಸ್ವಾಮಿಯ ಭಕ್ತನು. ಇವನ ವಿಷಯವಾಗಿ ಚಿಕದೇವರಾಜವಿಜಯ, ಚಿಕದೇವರಾಜವಂಶಾವಳಿ, ಚಿಕದೇವರಾಜಯಶೋಭೂಷಣ, ಚಿಕದೇವರಾಜವಂಶಪ್ರಭಾವ ಮುಂತಾದ ಗ್ರಂಥಗಳು ಹುಟ್ಟಿವೆ.

ಇವನ ಗ್ರಂಥಗಳಲ್ಲಿ

### 1 ಚಿಕದೇವರಾಜಬಿನ್ನಪ.

ಇದು ಗದ್ಯಗ್ರಂಥ; ಮೇಲುಗೋಟೆಯ ನಾರಾಯಣಸ್ವಾಮಿಯಲ್ಲಿ ಕವಿ ಅರಿಕೆಮಾಡಿದ 30 ಬಿನ್ನಪಗಳನ್ನು ಒಳಕೊಂಡಿದೆ. ಇದರಲ್ಲಿ ವಿಶಿಷ್ಟಾದ್ವೈತಮತದ ಸಾರವು ನಿರೂಪಿಸಲ್ಪಟ್ಟಿದೆ. ಈ ಗ್ರಂಥದವಿಷಯವಾಗಿ ಕವಿ ಹೀಗೆ ಹೇಳುತ್ತಾನೆ:—

ಪ್ರಜೆಗಳ್ಗೆ ಪರಗತಿಯಂ ಸಂಪಾದಿಸವೇಳ್ಪುದೆಂದಾರಯ್ದು

ಮಾಂ ಹಿ ಪಾರ್ಥ ವ್ಯಪಾಶ್ರಿತ್ಯ ಯೇಪಿ ಸ್ಯುಃ ಪಾಪಯೋನಯಃ |
ಸ್ತ್ರಿಯೋ ವೈಶ್ಯಾಸ್ತಥಾ ಶೂದ್ರಾಸ್ತೇಪಿ ಯಾಂತಿ ಪರಾಂ ಗತಿಂ ||

ಎಂದು ಗೀತೆಯೊಳ್ ಶ್ರೀಕೃಷ್ಣಂ ತಾನೇ ನಿರೂಪಿಸಿದತೆಱನೊಳ್ ಪಿಂತಣ್ಗೆನಿತಾನುಂ ಪಾಪಿಗಳಾದೊಡಂ ಆವಜಾತಿಯೊಳ್ ಪುಟ್ಟಿದೋಡಮಾಗಳುಂ ತತ್ವಜ್ಞಾನದಿಂ ತನ್ನೊಳ್ ಭಕ್ತಿಗೆಯ್ದು ನಂಬಿದವರ್ಗೆ ಮುಕ್ತಿ ತಪ್ಪದೆಂದೆಣಿಸಿ ಅಕ್ಕರಮನಱಿಯದೊಕ್ಕಲಿಗರ್ಗಂ ಪೆಣ್ಗಳ್ಗಂ ಸಕ್ಕದದಿಂ ತತ್ವಜ್ಞಾನಮುಪ್ಪದರಿದು ಎಂದು ಎಲ್ಲರುಮಱಿವಂತೆ ಕನ್ನಡಮಾತಿನೊಳಂ ಮೆಲ್ನುಡಿಗಳಿಂದೆ ಅಖಿಲತತ್ವಾರ್ಥಂಗಳಂ ಸಂಗತಿಗೊಳಿಸಿ ತಾಂ ತನ್ನ ಕುಲದೇವತೆಯಪ್ಪ ಯಾದವಗಿರಿನಾರಾಯಣನಡಿದಾವರೆಗಳ್ಗೆ ಬಿನ್ನಪಂಗೆಯ್ವ ನೆವದೊಳ್ ಮೂವತ್ತು ಬಿನ್ನಪಂಗಳಂ ಪವಣ್ಗೆಯ್ದಂ.

ಗ್ರಂಥಾವತಾರದಲ್ಲಿ ಯದುಗಿರಿನಾರಾಯಣನ ಸ್ತುತಿ ಇದೆ. ಅಮೇಲೆ ಪದ್ಯರೂಪವಾಗಿಯೂ ಗದ್ಯರೂಪವಾಗಿಯೂ ಕವಿಯ ಪರಾಕ್ರಮಾದಿಗಳು ವರ್ಣಿತವಾಗಿವೆ. ಒಂದೊಂದು ಬಿನ್ನಪದ ಆದಿಯಲ್ಲಿಯೂ ಒಂದೊಂದು ಕಂದವಿದೆ; ಉಳಿದಭಾಗವೆಲ್ಲಾ ಗದ್ಯರೂಪವಾಗಿದೆ. ಗದ್ಯವು ಹಳಗನ್ನಡದಲ್ಲಿ ಪ್ರೌಢಶೈಲಿಯಲ್ಲಿ ಬರೆದಿದೆ. ಈ ಗ್ರಂಥದಿಂದ ಸ್ವಲ್ಪಭಾಗವನ್ನು ತೆಗೆದು ಬರೆಯುತ್ತೇವೆ:—

1 ಚಿಕದೇವರಾಜ

ಆನಂದೈಕರಸಂ ಸಮಸ್ತಜಗದಾನಂದಂಗೆ ಚಕ್ರಾಯುಧಂ |
ಸೇನಾಚಕ್ರವಿಮರ್ದಿತಾಹಿತಮಹೀಚಕ್ರಂಗೆ ವೈಕುಂಠನ ||
ನ್ಯೂನೋಪಾಯವಿಕುಂಠಿತಾರಿಧರಣೀಭೃದ್ದುರ್ಗವರ್ಗಂಗೆ ಲ |
ಕ್ಷ್ಮೀನಾರಾಯಣನೀವನಕ್ಕೆ ಚಿಕದೇವೇಂದ್ರಂಗೆ ಸಾಮ್ರಾಜ್ಯಮಂ |

ಒಂದುದೆಸೆಯೊಳ್ ತುರುಕರೊಂದುಕಡೆಯೊಳ್ ಮೊಱಸ |
ರೊಂದೆಸೆಯೊಳಾರೆಯರ ಬಿಂದಮುಳಮಿಂ ಬೇ ||
ಱೊಂದುಬಱಿಯೊಳ್ ತಿಗುಳರೊಂದಿರಮಿನೊಳ್ ಕೊಡಗ |
ರೊಂದುಕೆಲದೊಳ್ ಮಲೆವರೊಂದುನೆರೆದೆಲ್ಲರ್ ||
ಸಂದಣಿಸಿ ಕಾಳೆಗಕೆ ಮುಂದುವರಿವನ್ನಮದ |
ಟಿಂದವರ ತಟ್ಟುಗಳ ಪಂದಲೆಗಳಂ ದಿ |
ಗ್ಬಲಿಂದಬಲಿಯಿತ್ತು ನಲಮಿಂದೆ ಚಿಕದೇವನೃಪ |

ನಂದಮಿಗೆ ಪೆರ್ಚೆಸಮನೊಂದಿ ಸೊಗವಾಱ್ಗಂ ||

### ಒಂಬತ್ತನೆಯ ಬಿನ್ನಪದಲ್ಲಿ ಸ್ವಲ್ಪಭಾಗ

ಸಕಲಲೋಕನಿಯಾಮಕಾ ! ನೀನೀಸಂಸಾರದೊಳೋರೊರ್ವಂಗೆ ಪಟ್ಟಾಭಿಷೇಕಾದಿಸುಖಮಂ ಓರೊರ್ವಂಗೆ ಶಿರಶ್ಛೇದನಾದಿದುಃಖಮನೆಸಗುವುದಱಿಂ ವಿಷಮನೆಂದುಂ, ಕರ್ಮಾನುಗುಣಮಾದ ಫಲಮನೀವುದಱಿಂ ಕರ್ಮಕ್ಕೆ ಪರತಂತ್ರನೆಂದುಂ, ಪಾಪಿಗಳ್ ಪಡುವ ದುಃಖಮಂ ಪರಿಹರಿಸದೆ ನೋಡುತಿರ್ಪುದಱಿಂ ನಿರ್ದಯನೆಂದುಂ ಸ್ವಲ್ಪಬುದ್ಧಿಗಳ್ಗೆ ತೋರ್ಕುಂ. ಇದಱ ನೆಲೆಯುಂ ವಿಚಾರಿಸೆ ನೀನಾಳ್ದನಾದುದಱಿಂ ನಿನ್ನಾಳ್ಗಳೆನಿಪ ಜೀವರನಿಬರೊಳಂ ಸಮಬುದ್ಧಿಯಿಂದೆಲ್ಲರುಂ ನಿನ್ನ ಮನಂಬರ್ಪಂತೆ ಊೞಿಗಮನೆಸಗಿ ಬರ್ದುಂಕವೇೞ್ಪುದೆಂದೆಣಿಸಿ ಇಂತಿಂತುನಡೆವರ್ಗೆ ಮೋಕ್ಷಮೆಂದುಂ ಇಂತಿಂತು ನಡೆವರ್ಗೆ ಇಹಪರಸೌಖ್ಯಮೆಂದುಂ ಮಿತಿಮಾಡಿ ಆಮಿತಿಯೊಳಾರಾವತೆಱದೊಳ್ ನಡೆವರ್ ಅವರವರ್ಗೆ ಆಮಿತಿಮಾಡಿದ ಫಲಮಂ ತಪ್ಪದೆ ಕುಡುವುದಱಿಂ ನೀಂ ಸರ್ವಸಮಂ, ನಿನಗೊರ್ವರೊಳಂ ವೈಷಮ್ಯಮಿಲ್ಲ. ಇಂತು ಅವರವರ ಕರ್ಮಾನುಗುಣಮಾಗಿ ಫಲಂಗಳನಿತ್ತುಂ ನೀಂ ಸ್ವತಂತ್ರನಲ್ಲದೆ ಪರತಂತ್ರನಲ್ತು. ಪಾಪಿಗಳ್ಗೆ ಪಾಪಾನುಗುಣಮಾದ ದುಃಖಮನೀಯುತುಂ ಅಜಾಮಿಳಂ ಮೊದಲಾದ ಓರೊರ್ವರೊಳ್ ಮಿತಿಮೀಱಿ ದಯೆಗೆಯ್ದುದಱಿಂ ಪರಮದಯಾಳುವೆನಿಸುವೈ.

### 2. ಭಾಗವತ

ಇದು ಸಂಸ್ಕೃತಭಾಗವತಕ್ಕೆ ಗದ್ಯರೂಪವಾದ ಟೀಕೆ. ಇದಕ್ಕೆ ಚಿಕದೇವರಾಜಸೂಕ್ತಿವಿಲಾಸ ಎಂದು ಹೆಸರು.

### 3. ಭಾರತ

ಉತ್ತರಪರ್ವಗಳಿಗೆ ಮಾತ್ರ, ಎಂದರೆ ಶಾಂತಿಪರ್ವದಿಂದ ಕನ್ನಡ ಟೀಕೆಯನ್ನು ಬರೆದಿರುವಂತೆ ತೋರುತ್ತದೆ.

### 4. ಶೇಷಧರ್ಮ

ಇದೂ ಸಂಸ್ಕೃತಕ್ಕೆ ಗದ್ಯರೂಪವಾದ ಕನ್ನಡಟೀಕೆ.

### 5. ಗೀತಗೋಪಾಲ

ಇದು ಜಯದೇವನ ಗೀತಗೋವಿಂದದಹಾಗೆ ಕೀರ್ತನೆಗಳನ್ನು ಒಳಕೊಂಡಿದೆ. ಇದರಲ್ಲಿ ಪೂರ್ವಭಾಗ, ಉತ್ತರಭಾಗ ಎಂದು ಎರಡುಭಾಗಗಳಿವೆ. ಪ್ರತಿ ಭಾಗದಲ್ಲಿಯೂ 7 ಖಂಡಗಳೂ ಪ್ರತಿಖಂಡದಲ್ಲಿಯೂ

7 ಪದಗಳೂ ಅಥವಾ ಹಾಡುಗಳೂ ಇವೆ. ಈ ಕಾರಣದಿಂದ ಪ್ರತಿಖಂಡಕ್ಕೂ ಕವಿ ಸಪ್ತಪದಿ ಎಂಬ ಹೆಸರನ್ನು ಕೊಟ್ಟಿದ್ದಾನೆ. ಒಂದೊಂದು ಸಪ್ತಪದಿಯಲ್ಲಿಯೂ ಹೇಳಿರುವ ವಿಷಯದ ಸಾರಾಂಶವು ಆಯಾಸಪ್ತಪದಿಯ ಆದಿಯಲ್ಲಿ ವಚನರೂಪವಾಗಿ ಕೊಟ್ಟಿದೆ. ಈ ಗ್ರಂಥವನ್ನು ಬರೆವುದಕ್ಕೆ ಕಾರಣವು ಹೀಗೆ ಹೇಳಿದೆ—

ಹರಿಸಂಕೀರ್ತನಮೊಂದೇ | ಪರಗತಿಗನುಕೂಲಮೆಂದು ನಿರವಿಸಿ ನೆಗಟ್ದಂ ||
ಪಾಲಂ ಬಯಸಿದ ರೋಗಿಗೆ | ಪಾಲಿಂದೌಷಧಮನೀವ ವೈದ್ಯನತೆಱದಿಂ |
ದೀಲೋಗರೊಲ್ವ ಗೀತದ | ಮೂಲದೊಳೇ ಮುಕ್ತಿಗತಿಯ ಮೊಗದೋಱಿಸಿದಂ ||

ಈ ಗ್ರಂಥದ "ಎರಡುಂಭಾಗದೊಳ್ ಶ್ರೀಮನ್ನಾರಾಯಣನ ಗುಣಾನುಭವಮಾದ ನಿತ್ಯಫಲಮಂ ಅವನಡಿದಾವರೆಯೊಳ್ ನಂಬುಗೆಯೆಂಬ ತದುಪಾಯಮುಮಂ" ನಿರೂಪಿಸಿದ್ದಾನೆ. ಚಿಕದೇವರಾಯನ ಪರಾಕ್ರಮಾದಿಗುಣಗಳನ್ನು ವರ್ಣಿಸುವ ಭಾಗವು ಬಿನ್ನಪದಲ್ಲಿರುವುದಕ್ಕಿಂತಲೂ ಇಲ್ಲಿ ಸ್ವಲ್ಪ ಹೆಚ್ಚಾಗಿದೆ. ಈ ಸಂದರ್ಭದಲ್ಲಿ ತಿರುಮಲಾರ್ಯನ ಅಪ್ರತಿಮವೀರಚರಿತ, ಚಿಕದೇವರಾಜವಿಜಯ ಈ ಗ್ರಂಥಗಳಲ್ಲಿಯ ಪದ್ಯಗಳು ಪ್ರಕೃತಗ್ರಂಥದಲ್ಲಿ ಬಹಳಮಟ್ಟಿಗೆ ದೊರೆವುದರಿಂದ ತಿರುಮಲಾರ್ಯನೇ ಈ ಗ್ರಂಥವನ್ನು ಬರೆದು ತನ್ನ ಸ್ವಾಮಿಯ ಹೆಸರಿನಲ್ಲಿ ಪ್ರಸಿದ್ಧಿಪಡಿಸಿರಬಹುದು ಎಂಬ ಸಂದೇಹಕ್ಕೆ ಅವಕಾಶವಿದೆ.

ಗ್ರಂಥಾವತಾರದಲ್ಲಿ ಗೋಪಾಲಸ್ತುತಿ ಇದೆ. ಈ ಗ್ರಂಥದಿಂದ ಸ್ವಲ್ಪ ಭಾಗವನ್ನು ತೆಗೆದು ಬರೆಯುತ್ತೇವೆ—

ಚಿಕದೇವರಾಯನ ಸ್ತುತಿ

ಚದುರಂ ಚಾಗಿಯಲಂಪುಗಾಱನೆಱೆಯಂ ಸಂಗೀತಸಾಹಿತ್ಯಕೋ |
ವಿದನುತ್ಸಾಹಿ ವಿವೇಕಶಾಲಿ ನಯಶೀಲಂ ನೇಮಗಾಱಂ ಕಲಾ ||
ವಿದನೊಳ್ಪಾತುಗನೋಜೆಗಾಱನುಚಿತಜ್ಞಂ ಭಾವುಕಂ ಭಾಮಿನೀ |
ಹೃದಯಗ್ರಾಹಿ ದಯಾಪಯೋಧಿ ಚಿಕದೇವೇಂದ್ರಂ ಮಹೀಚಂದ್ರಮಂ ||

ರಾಗ ಖಾಬಿ, ರೂಪಕತಾಳ

ಪಲ್ಲವಿ || ನಂಬು ನೆಂಬು ನಂಬು ನೆಱೆ ನಂಬು |
ನಂಬು ಶ್ರೀಕೃಷ್ಣಪದಾಂಬುಜಂಗಳ | ಹಂಬಲಿಸದಿರು ಹಲವನು ||
ಕರಣದೋಷಂಗಳ ಕಳೆವನು | ಕಲ್ಮಷವನೆಲ್ಲ ತೊಳೆವನು |

ಪಿರಿಯರ ಸಂಗತಿಗೆಟುಕಿವನು । ಪೆತ್ತೆನೆಂದೇಟುಗೆದಳೆವನು ॥ 1 ॥
ಪಿಂತಣ ತಪ್ಪ ಮಱೆವನು ಬೇಡಿದುದನೆಲ್ಲ ಕಱೆವನು ।
ಅಂತರಂಗದೊಳು ಮೆಱಿವನು । ಅನಂದರಸವನೆಱೆವನು ॥ 2 ॥
ಕರ್ಮದ ಬೇರ ಕಡಿವನು । ಕಾಲನ ಬಾಯ ಒಡಿವನು ।
ನಿರ್ಮಲಮತಿಯ ಕೊಡುವನು । ನೆವವಿಲ್ಲದಕ್ಕಱವಡುವನು ॥ 3 ॥
ಪುರುಳುಗೊಳಿಸಿ ಪೊರೆವನು । ಪೊಸಪೊಸಬೇಟದಿ ಬೆರೆವನು ।
ಎರೆಹೊರೆಯಿಲ್ಲದಿರುವನು । ಎಟುಕಿದ ದಾರಿಗೆ ಬರುವನು ॥ 4 ॥
ಚಿಕದೇವರಾಯನ ದೇವನು । ಸೇವಕಜನರ ಜೀವನು ।
ಸಕಲವಿಧದೊಳು ಕಾವನು । ಸರ್ವಾಭೀಷ್ಟವನೀವನು ॥ 5 ॥

---

## ತಿರುಮಲಾರ್ಯ. 1645-1706

ಈತನು ಅಪ್ರತಿಮವೀರಚರಿತ, ಚಿಕದೇವರಾಜವಿಜಯ, ಚಿಕದೇವರಾಜವಂಶಾವಳಿ, ಚಿಕದೇವರಾಜಶತಕ ಈ ಗ್ರಂಥಗಳನ್ನು ಬರೆದಿದ್ದಾನೆ. ಅಲ್ಲದೆ ಮೈಸೂರು ದೊರೆಯಾದ ಚಿಕ್ಕದೇವರಾಜನ (1672-1704) ಹೆಸರಿನಲ್ಲಿ ಹುಟ್ಟಿರುವ ಗೀತಗೋಪಾಲ, ಚಿಕದೇವರಾಜಬಿನ್ನಪ ಮುಂತಾದ ಗ್ರಂಥಗಳನ್ನೂ ಈತನೇ ರಚಿಸಿದುದಾಗಿ ಪ್ರತೀತಿಯಿದೆ. ಚಿಕದೇವರಾಜಶತಕವು ನಮಗೆ ಗೊರೆತಿಲ್ಲ.

ಇವನು ಶ್ರೀವೈಷ್ಣವಕವಿ ಕೌಶಿಕಗೋತ್ರದವನು; ಇವನ ತಂದೆ ಚಿಕ್ಕದೇವರಾಜನ ತಂದೆಯಾದ ದೊಡ್ಡದೇವರಾಜನ (1659-1672) ಪೌರಾಣಿಕನಾದ ಅಳಸಿಂಗರಾರ್ಯನು, ತಾಯಿ ಸಿಂಗಮ್ಮನು. ಈತನು ಶ್ರೀರಂಗಪಟ್ಟಣದಲ್ಲಿ 1645 ರಲ್ಲಿ ಜನಿಸಿದನು, 1706 ರಲ್ಲಿ ಮೃತನಾದಂತೆ ಹೇಳುತ್ತಾರೆ; ಚಿಕ್ಕದೇವರಾಜನೊಡನೆ ಬೆಳೆದು ಮಿತ್ರನಾಗಿ ವಿದ್ಯಾಭ್ಯಾಸವನ್ನು ಮಾಡಿ ಆಸ್ಥಾನಪಂಡಿತನಾಗಿದ್ದು ಕೊನೆಗೆ ಆ ದೊರೆಯ ಮಂತ್ರಿಯಾದನು; ಕೆಲವು ಕಾಲ, ಮಧುರೆಯ ನಾಯಕನ ಹೆಂಡತಿ ಮಂಗಮ್ಮನ ಬಳಿಯಲ್ಲಿಯೂ ಮಂತ್ರಿಯಾಗಿದ್ದಂತೆ ತಿಳಿಯುತ್ತದೆ. ಇವನಿಗೆ ತಿರುಮಲಯ್ಯಂಗಾರ್ ಎಂಬ ಹೆಸರೂ ಉಂಟು. "ಅವನೊಲ್ಮೆ ಪುಮಾಕೃತಿವೆತ್ತವೊಲೆಸೆವ ಸುಕೃತಿ

ತಿರುಮಲೆಯಾರ್ಯಂ" ಎಂಬುದರಿಂದ ಈತನು ಚಿಕ್ಕದೇವರಾಜನ ವಿಶೇಷ ಪ್ರೀತಿಗೆ ಪಾತ್ರನಾಗಿದ್ದಂತೆ ತಿಳಿಯುತ್ತದೆ.

ಪೂರ್ವಕವಿಗಳಲ್ಲಿ ವಾಲ್ಮೀಕಿ, ವ್ಯಾಸ, ಶುಕ ಇವರುಗಳನ್ನು ಸ್ಮರಿಸಿದ್ದಾನೆ. ಇವನ ತಮ್ಮನಾದ ಸಿಂಗರಾರ್ಯನು ತನ್ನ ಮಿತ್ರವಿಂದಾಗೋವಿಂದದಲ್ಲಿ ಈತನ ಪಾಂಡಿತ್ಯವನ್ನು ಹೀಗೆ ಸ್ತುತಿಸಿದ್ದಾನೆ—

ಫಣಿಪತಿಭಾಷ್ಯದಾಗರುಡಿಯೊಳ್ ಪದಚಾರಿಗೆರೂಢಿಗೆಯ್ದುಣಂ ।
ಕಣಚರಣೋಕ್ತಿಜೈಮಿನಿಯುವಾಣಿಗಳಿಂ ಮಿಗೆ ತಾಳ್ದಿಜಾಣ್ಮೆಯುಂ ॥
ಪ್ರಣುತಿಸೆ ಭಾವುಕರ್ ತಿರುಮಲಾರ್ಯಸರಸ್ವತಿ ಸಾಚಿಟ ಚಿತ್ತಮಂ ।
ತಣಿಯದೆ ರಂಗನಾಥನೊಳೆ ನರ್ತಿಸುಗುಂ ಶ್ರುತಿಮೌಳಿರಂಗದೊಳ್ ॥
ಪಿರಿದುಂ ಪ್ರೌಢತ್ವಮಂ ಪೆರ್ಗಳಿಕೆ ಕವಿವರರ್ ಕಬ್ಬದೊಳ್ ಶಾಸ್ತ್ರದೊಳ್ ಮೇಣ್ ।
ಕರಮಾಸಾಹಿತ್ಯದೊಳ್ ಬಿತ್ತರಿಪೊಡೆ ಠವನುಂ ತಿರ್ಮಲಾರ್ಯಂಗೆ ಸಲ್ಗುಂ ॥
ತರಳೆನ್ಯೋತಂಗಳೇನಾಡವೆ ವಿಧುಮಣಿಯೊಳ್ ನೈದಿಲೊಳ್ ವೃತ್ತಮಂ ತಾಂ ।
ಕರಗಿಪ್ಪಂ ಬಿರ್ಮಮಂ ಚಂದಿರನೆ ಉಟಿದವರ್ಗೆಂತೊಸಗ್ಗಂ ಮುಲಗ್ಗಂ ॥

ದೇವಚಂದ್ರನ ರಾಜಾವಳೀಕಥೆಯಲ್ಲಿ (1838) ಚಿಕ್ಕದೇವರಾಜ, ಅವನ ಕಾಲದಲ್ಲಿದ್ದ ಕೆಲರು ಪಂಡಿತರು ಇವರುಗಳ ವಿಷಯವಾಗಿ ಹೀಗೆ ಬರೆದಿದೆ—

ಚಿಕದೇವರಾಜರಸಂ ಕೋವಿದಶಿಖಾಮಣಿಯೆನಿಸಿದಂ ; ತಿರುಮಲಾರ್ಯಂ ವಿದ್ಯಾವಿಶಾರದನೆನಿಸಿದಂ ; ವಿಶಾಲಾಕ್ಷಂ ಸಾಹಿತ್ಯಭಾರತಿಯೆನಿಸಿದಂ ; ಷಡಕ್ಷರಿ ಕವಿಶೇಖರನೆನಿಸಿದಂ.

ಇವನ ಗ್ರಂಥಗಳಲ್ಲಿ

### 1 ಚಿಕದೇವರಾಜವಿಜಯ

ಇದು ಚಂಪೂರೂಪವಾಗಿದೆ; ಅಲ್ಲಲ್ಲಿ ಕೆಲವು ತ್ರಿಪದಿಗಳೂ ಸಾಂಗತ್ಯಗಳೂ ಹಾಡುಗಳೂ ಇವೆ. ಮುದ್ರಿತವಾಗಿರುವ ಪುಸ್ತಕದಲ್ಲಿ 6 ಆಶ್ವಾಸಗಳಿವೆ. ಗ್ರಂಥ ಅಸಮಗ್ರ. ಇದರಲ್ಲಿ ಮೈಸೂರು ಮಹಾರಾಜರುಗಳ ಚರಿತ್ರವು ಚಿಕ್ಕದೇವರಾಜನವರೆಗೆ ಹೇಳಿದೆ.

ತನ್ನ ಗ್ರಂಥದ ಉತ್ಕೃಷ್ಟತೆಯನ್ನು ಕವಿ ಈ ಪದ್ಯಗಳಲ್ಲಿ ಹೇಳಿಕೊಂಡಿದ್ದಾನೆ—

ಸುಱಿದು ಕುರುಳ್ಗಳೊಳ್ ತೊಳಗಿ ನುಣ್ಬಣಿಯೊಳ್ ಕುಡಿಗೊಂಡು ಪುರ್ಬಿನೊಳ್ |
ಪೊಳೆದೆಸಟ್ಗಿಣ್ಗಳೊಳ್ ಮುಗುಳ್ದು ಮೆಲ್ನಗೆಯೊಳ್ ಪೂಗತೇಱಿ ಗಲ್ಲದೊಳ್ ||
ಬಳೆದು ಕುಚಂಗಳೊಳ್ ನವೆದು ನಲ್ನಡುವೊಳ್ ಕಡುರಯ್ಯವಾಗಿ ಕ |
ಣ್ಗೊಳಿಪುದು ನಲ್ಲಳಾಕೃತಿಯುಮಿಸಾಕೃತಿಯುಂ ಪವಣೊಂದಿಸಂದದಿಂ ||
ಕಂದಂ ಕವಿಕೋಕಿಲಮಾ | ಕಂದಂ ಕೋಮಳವಿಕಾಸಿಸತ್ಕೃತಿಕಲ್ಪಲತಾ |
ಕಂದಂ ವಿಸ್ಮಯರಸದು | ಕ್ಕಂದಂ ಚಿಕದೇವರಾಯಚಂದನ ಚಂದಂ ||

ಗ್ರಂಥಾವತಾರದಲ್ಲಿ ವಿಷ್ಣುಸ್ತುತಿ ಇದೆ. ಬಳಿಕ ಕವಿ ಲಕ್ಷ್ಮಿ, ಸುದರ್ಶನ, ಪಾಂಚಜನ್ಯ, ಸೂರಿಗಳು, ದಿವ್ಯಸೂರಿಗಳು ಇವರುಗಳನ್ನು ಸ್ತುತಿಸಿ, ಸತ್ಕವಿಸ್ತುತಿ ದುಷ್ಕವಿನಿಂದೆಗಳನ್ನು ಮಾಡಿ ಗ್ರಂಥವನ್ನು ಆರಂಭಿಸಿದ್ದಾನೆ.

ಆಶ್ವಾಸಗಳ ಅಂತ್ಯದಲ್ಲಿ ಈ ಗದ್ಯವಿದೆ—

ಇದು ಯದುಗಿರಿಶಿಖರಾಭರಣಶ್ರೀಮನ್ನಾರಾಯಣಚರಣಪರಿಚರಣಪರಾಯಣ ಶರಣಾಗತರಕ್ಷಣವಿಚಕ್ಷಣ ಸಕಲಕಲಾಪ್ರವೀಣ ಬಿರುದೆಂತೆಂಬರಗಂಡ ಲೋಕೈಕವೀರ ಭೂರಿತುರುಷ್ಕಶುಷ್ಕವನದಾವಾನಲ ಮರಾಟರ್ಘೋಟಮೇಘಘಟಾವಿಘಟನನಿರಾಘಾಟ ಪ್ರಳಯಕಾಲಜಂಝಾನಿಲ ಪಾಂಡ್ಯಮಂಡಲಾಧಿಪವೇತಂಡವಿಲುಂಠನಕಂಠೀರವ ಮಲೆಪನೃಪಮದಮರ್ದನ ಶ್ರೀಮನ್ಮಹಾರಾಜಾಧಿರಾಜ ರಾಜಪರಮೇಶ್ವರಪ್ರೌಢಪ್ರತಾಪನಪ್ರತಿಮವೀರನರಪತಿ ಶ್ರೀಚಿಕದೇವಮಹಾರಾಜಕೃಪಾಪರಿಪಾಲಿತ ಶ್ರೀತಿರುಮಲೆಯಾರ್ಯವಿರಚಿತಮಪ್ಪ ಚಿಕದೇವರಾಜವಿಜಯಮಹಾಪ್ರಬಂಧದೊಳ್.

ಈ ಗ್ರಂಥವು ಕಾವ್ಯಸರಣಿಯಲ್ಲಿ ಮೈಸೂರುಚರಿತ್ರೆಯನ್ನು ತಿಳಿಸುವುದರಿಂದ ಮೈಸೂರುಚರಿತ್ರವನ್ನು ಬರೆವವರಿಗೆ ಸಹಾಯಕವಾಗಿದೆ; ಬಂಧವೂ ಪ್ರೌಢವಾಗಿದೆ. ಇದರಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ—

### ಕವಿಗಳ ಮಹಿಮೆ

ಕಡುಪಿಂ ಕೂರಾನೆ ಕಾಱಿಕ್ಕಿಚ್ಚಡವಿಬಱಸಿಡಿಲ್ಬಳ್ಳಿಮಿಂಚೆಂಬಿವೆಲ್ಲಂ |
ಪಡೆಗುಂ ನೋಟ್ಪರ್ಗೆ ಮೇಣಬ್ಬೆಗದೊದವನವೇ ಮತ್ತಮೊಳ್ಗಬ್ಬದೊಳ್ ಬಂ ||
ದೊಡನೊಪ್ಪಂ ಪೆತ್ತುಮಾಱ್ಕಂ ಸಹೃದಯಹೃದಯಾಹ್ಲಾದಮಂ ನಾಡೆಯೆಂತಾ|
ದೊಡಮಳ್ಕೇಂ ಕಬ್ಬಿಗರ್ ತಾಮಘಟಿತಘಟನಾನೂತನಬ್ರಹ್ಮರಲ್ತೇ ||

## ಚಂದ್ರ

ಇದು ಕಣ್ಣಾ ಪುರುಷೋತ್ತಮಂಗಿದು ವತಂಸಂ ವ್ಯೋಮಕೇಶಂಗೆ ತಾ |
ನಿದು ಜೀವಾತು ಮನೋಭವಂಗಿದು ನಟಾಚಾರ್ಯಂ ಸಮುದ್ರೋರ್ಮಿಗ ||
ಳ್ಗಿದೆಯಾಪ್ಯಾಯನವಾಸಮಸ್ತಸುರಬೃಂದಕ್ಕೆಂಬಿನಂ ಕೀರ್ತಿಸಂ |
ಪದಮಂ ಪೆತ್ತೆಸೆದಿರ್ಕುಮಾಯುತಖಿಲಗ್ಲಾನಂದಮಂ ಚಂದ್ರಮಂ ||
ಮಿಗೆ ಪರಿವಜ್ಜವೊಚ್ಚ ಪೊಸಜೊನ್ನದ ಬಲ್ಸರಿ ಹೇಮಗರ್ಭನೊ |
ಲ್ದುಗಿಸುವ ಪಾದ್ಯದೋಜೆಯನೊಡಂಬಡೆ ತಾರೆಗಳರ್ಚಿಪೊಳ್ಳರ ||
ಲ್ಗೊಗರಿಡಿದೊಪ್ಪೆ ಚಂದ್ರನೆಸೆದತ್ತುದಯಾವನಿಭೃತ್ತ್ರಿವಿಕ್ರಮಂ |
ನೆಗಪಿದ ಪಾದದುಂಗುಟದ ಬಟ್ಟುಗುರೆಂಬಿನಮಂಬರಾಗ್ರದೊಳ್ ||

## ಸಂಜೆಗೆಂಪು

ಅಗಸಮೆಂಬಶೋಕೆ ತಳಿರಾಂತುದೊ ಕೆಂಗುಡಿ ತಳ್ತುದೋ ನಭ |
ಸ್ಸಾಗರದೊಳ್ ವಿಹಾಯಸರಮಾಪತಿ ಪೊನ್ನುಡೆಯುಟ್ಟನೋ ವಿಯ ||
ನ್ನಾಗಮದಭ್ರಗೈರಿಕರಜಂಗಳೊಳಟ್ಟಿದೊ ತಾನಿದೆಂಬಿನಂ |
ಬೈಗಿನ ಸಂಜೆಗೆಂಪು ಬಳೆದತ್ತೊಡನೊಂದಿ ಮನೋಜನೋಜದೊಳ್ ||

## ದೊಡ್ಡದೇವರಾಜ

ಬಿನಯದ ಬಿತ್ತು ಬಿನ್ನಣದ ಪೆರ್ಮೊಳೆ ಬಿಜ್ಜೆಯ ಬೇರ್ ವಿವೇಕದೊ |
ಳ್ಪೊಗೆನರನುಗೆಯ್ತುದೊತ್ತರದ ದಾಂಗುಡಿ ನಲ್ಮೆಯ ಮೆಲ್ದಳಿರ್ ಜನಾ ||
ನುನಯದ ಮೊಗ್ಗು ನನ್ನಿಯಲರಾರ್ಪಿನ ಕಾಯನುವಾತುವಣ್ಣು ಬಿ |
ಣ್ಪೊಗೆನೆಯೆನೆ ದೊಡ್ಡದೇವನೆಸೆದಂ ಗುಣಸಾಂದ್ರನುಪೇಂದ್ರವೈಭವಂ ||

## 2 ಚಿಕದೇವರಾಜವಂಶಾವಳಿ

ಇದು ಗದ್ಯರೂಪವಾಗಿದೆ; ಒಂದು ಕಡೆಯಲ್ಲಿ ಮಾತ್ರ 5 ಕಂದಗಳವೆ. ಗ್ರಂಥ ಅಸಮಗ್ರ. ಇದರಲ್ಲಿಯೂ ಮೈಸೂರು ಮಹಾರಾಜರುಗಳ ಚರಿತ್ರವು ಹೇಳಿದೆ. ಇದರ ಬಂಧವು ಪ್ರೌಢವಾಗಿದೆ. ಇದರಿಂದ ಸ್ವಲ್ಪ ಭಾಗವನ್ನು ತೆಗೆದು ಬರೆಯುತ್ತೇವೆ—

## ವಿಷ್ಣುಸ್ತುತಿ

ಕಡುನೇಹದೆ ಮೂಜಗಮಂ | ಪೊಡೆಯೊಡೆಯೊಳ್ ಪೊತ್ತು ಪೊರೆವ ಪೊಸಬಗೆಯೆ
ಱಿಯಾ |
ತಡೆದೆಮ್ಮನೇಕುಪೇಕ್ಷಿಪೆ | ಕುಡು ಕೂರ್ಪರ ಕೂರ್ಪ ನಿನ್ನ ಚೆನ್ನಡಿಯೊಲವಂ ||
ನಿಟ್ಟಿಸದಿರೆ ನೀಂ ದಯೆಯಿಂ | ಪುಟ್ಟಿದು ಜಗಮೆಂತುಪೇಱ ವೆತ್ತಪುದದಱಿಂ |
ಕಟ್ಟೞಕದಿಂದಮೆಮ್ಮಂ | ದಿಟ್ಟಿಸಿ ಕಾಪಿಟ್ಟು ಮೆಱೆವುದೊಡೆತನದಧಟಂ ||

## ವಿಜಯನಗರದ ಚರಿತ್ರೆ

ಅತ್ತಲುತ್ತರದೇಶದೊಳ್ ತುಂಗಭದ್ರಾತೀರದೊಳ್ ವಿದ್ಯಾನಗರಿಯನಾಳ್ದ ಹರಿಹರಬುಕ್ಕರ್ ಮೊದಲಾದ ಕುಱುಂಬರಾಯರ ಅನಂತರದೊಳರಸುಗೆಯ್ದ ತುಳವಕುಳದೀಶ್ವರನರಸವೀರನರಸಿಂಗಕೃಷ್ಣಾಚ್ಯುತರೆಂಬ ರಾಯರ್ಕೈವರ ತಱುವಾಯಿಂ ಮುದನೊಳಿಳೆಯಂ ಪೊರೆದ ಸದಾಶಿವರಾಯಂಗೆ ಸೇನಾನಿಯೆನಿಸಿದ ಆಂಧ್ರಕುಲದ ರಾಮರಾಜಂ ನಿಜರಾಜಂಗೆ ದ್ರವಿಡಾಂಧ್ರಕರ್ಣಾಟಸಾಮ್ರಾಜ್ಯಮಂ ಸಾರ್ಚಿ ಪತಿಕಾರ್ಯದೊಳರ್ಪಿತಪ್ರಾಣನೆನಿಸಿ ಒಮ್ಮೆಯುತ್ತರದಿಗ್ವಿಜಯದೊಳುದ್ವೃತ್ತಯವನಸೇನಾಚಕ್ರಮನೊಕ್ಕಲಿಕ್ಕಿ ಯಶಶ್ಶೇಷನಪ್ಪಿನಂ, ಅವನನುಜಂ ಎಱೆತಿಮ್ಮರಾಜಂ ಅಂದಿನಾಜಿಯೊಳಱಿದುೞಿದರನೊಡಗೊಂಡು ಊರ್ಗೆ ನಡೆತಂದಾಳ್ದನ ಸಿರಿಗೆಳಸಿಯವನಂಭಂಗಿಸಿ ತಾನೆ ರಾಯನೆನಿಸಿರ್ದ ೞಗಜ್ಜದಿಂದಾವಿದ್ಯಾನಗರಂ ಕಿಱಿದುಂದಿನಕ್ಕೆ ತುರುಷ್ಕರಿಂದೞಿಯಲೊಡಂ ಅಲ್ಲಿಂ ಪೆನಗೊಂಡೆಗೆಯ್ತಂದು ಒಂದೆರಟ್ಟಿರಿಸಮಿರ್ದು ಪೊಂದಿಪೋಪಾಗಳ್ ತನ್ನ ಮೂವರ್ ಕುವರರೊಳ್ ಮೊದಲಿಗನಾದ ಶ್ರೀರಂಗರಾಜನಂ ಪೆನಗೊಂಡೆಯೊಳಿಟ್ಟಾತಂಗೆ ತೆಲುಂಗನಾಡೊಡೆತನಮಂ ಎರಡನೆಯ ರಾಮರಾಯನಂ ಶ್ರೀರಂಗಪಟ್ಟಣದೊಳಿರಿಸಿಯವಂಗೆ ಕರ್ಣಾಟದೇಶಾಧಿಪತ್ಯಮಂ ಮೂಱನೆಯ ವೆಂಕಟಪತಿರಾಯನಂ ಚಂದ್ರಗಿರಿಯೊಳಿಟ್ಟು ಆತಂಗೆ ತುಂಡೀರಚೋಳಪಾಂಡ್ಯಮಂಡಲೇಶ್ವರ್ಯ ಮನಿತ್ತಂ.

## 3 ಅಪ್ರತಿಮವೀರಚರಿತ.

ಇದು ಅಲಂಕಾರಗ್ರಂಥ, 4 ಪ್ರಕರಣಗಳಾಗಿ ಭಾಗಿಸಲ್ಪಟ್ಟಿದೆ. ಒಂದನೆಯ ಪ್ರಕರಣದಲ್ಲಿ ಕಾವ್ಯಲಕ್ಷಣ, ಶಬ್ದಗುಣ, ಅರ್ಥಗುಣ ಇವುಗಳನ್ನೂ, ಎರಡನೆಯದರಲ್ಲಿ ರೀತಿ, ಶಯ್ಯೆ, ಪಾಕ, ವೃತ್ತಿ, ಅನುಪ್ರಾಸವೇ ಮೊದಲಾದ ಶಬ್ದಾಲಂಕಾರ ಇವುಗಳನ್ನೂ, ಮೂರನೆಯದರಲ್ಲಿ ಉಪಮೆಯೇ ಮೊದಲಾದ ನೂರು ಅರ್ಥಾಲಂಕಾರಗಳನ್ನೂ, ನಾಲ್ಕನೆಯದರಲ್ಲಿ ರಸಾಲಂಕಾರಗಳನ್ನೂ ನಿರೂಪಿಸಿದ್ದಾನೆ. ಈ ಗ್ರಂಥವನ್ನು ಚಿಕ ದೇವರಾಜನ

ಆಜ್ಞಾನುಸಾರವಾಗಿ ಬರೆದಂತೆ ಹೇಳುತ್ತಾನೆ. ಇದರಲ್ಲಿ ಚಂದ್ರಾಲೋಕ, ವಾಮನವೃತ್ತಿ, ಕಾವ್ಯಪ್ರಕಾಶ ಮೊದಲಾದ ಸಂಸ್ಕೃತಗ್ರಂಥಗಳಿಂದ ಲಕ್ಷಣಗಳನ್ನು ತೆಗೆದುಕೊಂಡು ಅವಕ್ಕೆ ಕನ್ನಡದಲ್ಲಿ ವೃತ್ತಿಯನ್ನು ಬರೆದು ಸ್ವನಿರ್ಮಿತವಾದ ಉದಾಹರಣಪದ್ಯಗಳನ್ನು ಕೊಟ್ಟಿದ್ದಾನೆ. ಈ ಯುದಾಹರಣಪದ್ಯಗಳೆಲ್ಲಾ ಚಿಕ್ಕದೇವರಾಜನ ಸ್ತುತಿರೂಪವಾಗಿವೆ. ಇವುಗಳಲ್ಲಿ ಹಲವು ಚಿಕ್ಕದೇವರಾಜವಿಜಯದಿಂದ ಅನುವಾದವಾಡಲ್ಪಟ್ಟಿವೆ. ಅಪ್ರತಿಮವೀರ ಎಂಬುದು ಚಿಕ್ಕದೇವರಾಜನ ಬಿರುದುಗಳಲ್ಲಿ ಒಂದು.

ಗ್ರಂಥಾವತಾರದಲ್ಲಿ ವಿಷ್ಣುಸ್ತುತಿ ಇದೆ. ಬಳಿಕ ಕವಿ, ಚಂದ್ರವಂಶದಲ್ಲಿ ಕೃಷ್ಣನು ಅವತರಿಸಿದನು; ಆ ಕೃಷ್ಣವಂಶೋದ್ಭವನಾದ ದೊಡ್ಡದೇವರಾಜನಿಗೆ ಯಾದವಗಿರಿಯ ನಾರಾಯಣಸ್ವಾಮಿಯೇ ಚಿಕ್ಕದೇವರಾಜನೆಂಬ ಹೆಸರಿನಿಂದ ಪುತ್ರನಾದನು; ಈ ರಾಜನು, ಗೋಲಕೊಂಡ, ವಿಜಯಾಪುರ ಈ ಸಂಸ್ಥಾನಗಳ ಸೇನೆಗಳನ್ನೂ ಮರಾಟರನ್ನೂ ಇತರರಾಜರನ್ನೂ ಜಯಿಸಿ ವಿದ್ವತ್ಪಕ್ಷಪಾತಿಯಾಗಿ ತನ್ನಲ್ಲಿ ವಿಶೇಷಾಭಿಮಾನವನ್ನಿಟ್ಟಿದ್ದನೆಂದು ಹೇಳಿ, ಗ್ರಂಥವನ್ನು ಆರಂಭಿಸಿದ್ದಾನೆ. ಪ್ರಕರಣಗಳ ಕೊನೆಯಲ್ಲಿ ಈ ಗದ್ಯವಿದೆ—

ಇದು ಶ್ರೀಮನ್ಮಹಾರಾಜಾಧಿರಾಜ ರಾಜಪರಮೇಶ್ವರ ಪ್ರೌಢಪ್ರತಾಪಾಪ್ರತಿಮವೀರನರಪತಿ ಶ್ರೀಚಿಕದೇವಮಹಾರಾಜಕೃಪಾಪರಿಪಾಲಿತ ಶ್ರೀತಿರುಮಲಾರ್ಯವಿರಚಿತಮಪ್ಪ ಶ್ರೀಮದಪ್ರತಿಮವೀರಚರಿತಮೆಂಬಲಂಕಾರಗ್ರಂಥದೊಳ್.

ಈ ಗ್ರಂಥದಿಂದ ಕೆಲವು ಭಾಗವನ್ನು ತೆಗೆದು ಬರೆಯುತ್ತೇವೆ—

ಭಾರತೀವೃತ್ತಿ. ಅದ್ಭುತರಸ

ವಸುಮತಿ ಪೆತ್ತುದೋ ದೆಸೆಗಳೀಂದುವೊ ನೇಸಱುಗುಳ್ದುದೋ ಕಡಲ್ ।
ಮಸಗಿ ನೆಗಟ್ಟಿತೋ ಮುಗಿಲುದಿರ್ಚಿತೊ ಪೊೞ್ತು ಪೊದಟ್ಟಿ ಸಾರ್ಚಿತೋ ॥
ಪೊಸಯಿಸಿಯಾಗಸಂ ನೆಲಕುರುಳ್ಚಿತೊ ಪೆರ್ಚಿತು ಪೆರ್ಚಿತೆಂಬಿನಂ ।
ಪಸರಿಸುವಾಮರಾಟಭಟರಂ ಸದೆದಂ ಚಿಕದೇವಭೂವರಂ ॥

ಉಕ್ತವಸ್ತೂತ್ಪ್ರೇಕ್ಷೆ

ಪದಪಿಂ ಮೆಯ್ಪೆತ್ತ ಚಂದ್ರಾನ್ವಯದ ಮಹಿಮೆಯೋ ಗಂಡುರೂಪಾಂತ ಭೂಲೋ ।
ಕದ ಪೆಂಪೋ ಬೇಱೆ ವೇಷಂದಳೆದ ಯದುಕುಲೋತ್ಸಾಹಮೋ ತಳ್ತ ಕರ್ಣಾ ॥

ಟದ ಸೊಂಪೋ ಬಿಣ್ಪುವೆತ್ತೊಪ್ಪುವ ಸಕಲಜನಾನಂದವೋ ಎಂಬಿನಂ ಸಂ ।
ಮದದಿಂ ಶ್ರೀಚಿಕ್ಕದೇವಂ ತಳೆದೆಸೆದನಿಳಾಚಕ್ರಮಂ ವಿಕ್ರಮಾಂಕಂ ||

ಅತದ್ಗುಣಾಲಂಕಾರ

ಪತಿಚಿಸವರೊಡನಾಡುವ । ರಾತಿಚಿಮವರಪ್ಪರೆಂಬುದಿದು ನಾಟ್ಟುಡಿ ಕೇಳ್ ।
ಭೀತರೆರ್ದೆವೊಕ್ಕು ನೀಂ ನಿ । ರ್ಭೀತಿಯೊಳಿರ್ಪಂದಮೆಂತು ಚಿಕದೇವೇಂದ್ರಾ ||

ಸಂದಿಗ್ಧಸಂಕರ

ಸಮದೃಷ್ಟಿಯೆನಿಸೆ ಶಂಕರ । ನಮರೇಂದ್ರಂ ಗೋತ್ರವೈರಮಂ ಕಳೆದಿರೆ ಚಂ ।
ದ್ರಮನವಮಲನೆನಿಸೆ ನಿನ್ನೊಳ್ । ಸಮನೆನಿಸಲ್ಕಾರ್ಪರಂದು ಚಿಕದೇವೇಂದ್ರಾ ||

---

ಚಿಕ್ಕುಪಾಧ್ಯಾಯ. 1672

ಈತನು ನಮಗೆ ತಿಳಿದಮಟ್ಟಿಗೆ (1) ಅಕ್ಷರಮಾಲಿಕಾಸಾಂಗತ್ಯ, (2) ಅಮರುಕಶತಕ, (3) ಕಮಲಾಚಲಮಾಹಾತ್ಮ್ಯ, (4) ಕಾಮಂದಕ ಟೀಕೆ, (5) ಚಿಕ್ಕದೇವರಾಜಶೃಂಗಾರಪದಗಳು, (6) ಚಿತ್ರಶತಕಸಾಂಗತ್ಯ, (7) ತಿರುವಾಯ್ಮೊಳಿ ಟೀಕೆ, (8) ದಿವ್ಯಸೂರಿಚರಿತ್ರೆ, (9) ನೀತಿಶತಕದ ಸಾಂಗತ್ಯ, (10) ಪಶ್ಚಿಮರಂಗಮಾಹಾತ್ಮ್ಯ, (11) ಪಶ್ಚಿಮರಂಗಸಾಂಗತ್ಯ, (12) ಪುರುಷವಿರಹದಸಾಂಗತ್ಯ. (13) ಯದುಗಿರಿಮಾಹಾತ್ಮ್ಯ, (14) ಯಾದವಗಿರಿಮಾಹಾತ್ಮ್ಯ, (15) ರಂಗಧಾಮಸ್ತುತಿಸಾಂಗತ್ಯ, (16) ರಂಗಸ್ವಾಮಿಯ ಶೃಂಗಾರಸೂತ್ರೋದಾಹರಣೆ, (17) ರುಕ್ಮಾಂಗದಚರಿತೆ, (18) ವಿಷ್ಣುಪುರಾಣ (ಚಂಪು), (19) ವಿಷ್ಣುಪುರಾಣ (ಗದ್ಯ), (20) ವೆಂಕಟಗಿರಿ ಮಾಹಾತ್ಮ್ಯ, (21) ವೈದ್ಯಾಮೃತ ಟೀಕೆ, (22) ಶುಕಸಪ್ತತಿ, (23) ಶೃಂಗಾರಶತಕದ ಸಾಂಗತ್ಯ, (24) ಶೃಂಗಾರಸೂತ್ರೋದಾಹರಣೆ, (25) ಶೇಷಧರ್ಮ, (26) ಶ್ರೀರಂಗಮಾಹಾತ್ಮ್ಯ, (27) ಸಾತ್ವಿಕಬ್ರಹ್ಮವಿದ್ಯಾವಿಲಾಸ, (28) ಹಸ್ತಿಗಿರಿಮಾಹಾತ್ಮ್ಯ, ಈ ಗ್ರಂಥಗಳನ್ನು ಬರೆದಿದ್ದಾನೆ. ಅಲ್ಲದೆ ಅರ್ಥಪಂಚಕ, ತತ್ವತ್ರಯ, ರಂಗನಾಯಕ ರಂಗನಾಯಕೀಸ್ತುತಿ, ಶೃಂಗಾರದ ಹಾಡುಗಳು, ಈ ಗ್ರಂಥಗಳನ್ನೂ ಬರೆದಿರುವಂತೆ ತೋರುತ್ತದೆ.

ಇವನು ಶ್ರೀವೈಷ್ಣವಕವಿ; ಯಜುರ್ವೇದಿ; ಪೌರುಕುತ್ಸಗೋತ್ರದವನು; ಆಪಸ್ತಂಬಸೂತ್ರದವನು; ಇವನ ಕುಲದೇವತೆ ಕಾಂಚೀವರದರಾಜ;

ಇವನ ಸ್ಥಳ ತ್ರಿಕದಂಬಪುರ ಅಥವಾ ತೆರಕಣಾಂಬಿ. ತನ್ನ ಪರಂಪರೆಯನ್ನು ಹೀಗೆ ಹೇಳಿಕೊಂಡಿದ್ದಾನೆ---ಅಲ್ಲಾಳನಾಥ; ಮಗ ಆರ್ಯ; ಮಗ ವರದಕವಿ; ಮಗ ಕರ್ಣಾಟಭಾಷಾಚತುರ ದೇವರಾಚಾರ್ಯಕವಿ; ಇವನ ತಮ್ಮ ಕವಿಕ್ಷ್ಮಾಪಾಲಕ ರಂಗಾರ್ಯಪಂಡಿತ; ಇವನ ಹೆಂಡತಿ ನಾಚ್ಚಾರಮ್ಮ' ಮಕ್ಕಳು ಯಮಳರು ಲಕ್ಷ್ಮೀಪತಿದೇವರಾಜರು; ಈ ಲಕ್ಷ್ಮೀಪತಿಯೆಂಬವನೇ ಚಿಕ್ಕುಪಾಧ್ಯಾಯಕವಿ. ಇವನಿಗೆ ಇಬ್ಬರು ಹೆಂಡಿರು. ಇವನು ಮೈಸೂರುರಾಜನಾದ ಚಿಕ್ಕದೇವರಾಜನಲ್ಲಿ (1672-1704) ಕರಣಿಕಾಗ್ರೇಸರನಾಗಿಯೂ ಮಂತ್ರಿಯಾಗಿಯೂ ಇದ್ದನು. ಅಷ್ಟೈಶ್ವರ್ಯಾಷ್ಟಪುತ್ರಬಹುಧನಸಂಪನ್ನನಾಗಿ ಯಾಚಕಜನಸುರಧೇನುವಾಗಿ ಸ್ವಜನಪರಜನಲೋಕಜನಚಿಂತಾಮಣಿಯಾಗಿ ಚಿಕ್ಕದೇವಮಹಾರಾಜೇಂದ್ರದತ್ತಸಕಲತಂತ್ರಸ್ವತಂತ್ರನಾಗಿ ಅಧೀತಸಕಲವೇದಶಾಸ್ತ್ರಪುರಾಣಮುಖ್ಯನಾನಾವಿಧವಿದ್ಯನಾಗಿ ಕವಿತಾವಾಕ್ಪತಿಯಾಗಿ ಹರಿಭಕ್ತಿರಸಾಸ್ವಾದನಪರನಾಗಿ ಇದ್ದನು. ಇವನನ್ನು ಆಶ್ರಯಿಸಿದ ಅನೇಕರು ದೊಡ್ಡ ಪದವಿಯನ್ನು ಪಡೆದಂತೆ ತಿಳಿಯುತ್ತದೆ. "ಪಟ್ಟೋರಾಭಿಧಾನಸತ್ಕುಲದೀಪ" ಎಂದು ಹೇಳಿಕೊಂಡಿದ್ದಾನೆ. ಯದುಗಿರಿ ಮಾಹಾತ್ಮ್ಯದಲ್ಲಿ ಕಡಾಂಬಿಸಿಂಗರಾಚಾರ್ಯನನ್ನೂ ಯಾದವಗಿರಿ ಮಾಹಾತ್ಮ್ಯದಲ್ಲಿ ಕಡಾಂಬಿ ಲಕ್ಷ್ಮಣಾಚಾರ್ಯನನ್ನೂ ಸ್ತುತಿಸಿದ್ದಾನೆ. ಇವರು ಇವನ ಗುರುವಂಶದವರಾಗಿರಬಹುದು.

ಹಸ್ತಿಗಿರಿಮಾಹಾತ್ಮ್ಯವನ್ನು ಶಕ 1601 ನೆಯ ಕಾಳಯುಕ್ತಿಯಲ್ಲಿಯೂ(1679),ಕಮಲಾಚಲಮಾಹಾತ್ಮ್ಯವನ್ನು ಶಕ 1603 ನೆಯ ರೌದ್ರಿಯಲ್ಲಿಯೂ (1680), ರುಕ್ಮಾಂಗದಚರಿತೆಯನ್ನು ಶಕ 1604 ನೆಯ ದುರ್ಮತಿಯಲ್ಲಿಯೂ (1681) ವಿಷ್ಣುಪುರಾಣವನ್ನು ಶಕ 1613 ನೆಯ ಪ್ರಮೋದದಲ್ಲಿಯೂ (1691) ಬರೆದಂತೆ ತಿಳಿಯುತ್ತದೆ. ನಮಗೆ ದೊರೆತ ದಿವ್ಯಸೂರಿಚರಿತೆಯ ಒಂದು ಪ್ರತಿಯ ಕೊನೆಯಲ್ಲಿ ಚಿಕ್ಕದೇವರಾಯನ ಮಹಿಷಿಯಾದ ಗೌರಮ್ಮಣ್ಣಿಯ ಆಜ್ಞಾನುಸಾರವಾಗಿತಿಮ್ಮಯ್ಯಂಗಾರ್ಯನಿಂದ ವಿರೋಧಿಕೃತುವರ್ಷದಲ್ಲಿ (1672) ಪ್ರತಿಮಾಡಲ್ಪಟ್ಟಿತೆಂದು ಹೇಳಿರುವುದರಿಂದ ಈ ಗ್ರಂಥವು ಆ ವರ್ಷದಲ್ಲಿಯೋ ಅಥವಾ ಅದಕ್ಕೆ ಹಿಂದೆಯೋ ರಚಿತವಾಗಿರಬೇಕು. ಈ ವರ್ಷವನ್ನೇ ಕವಿಯ ಕಾಲವಾಗಿ ಮೇಲೆ ಕೊಟ್ಟಿದ್ದೇವೆ.

ಪೂರ್ವಕವಿಗಳಲ್ಲಿ ವ್ಯಾಸ, ವಾಲ್ಮೀಕಿ, ಶುಕ, ರುದ್ರಭಟ್ಟ, ಮಾಘ,

ಬಾಣ, ಚಂದ್ರ, ಭೋಜ ಇವರುಗಳನ್ನು ಕವಿ ಸ್ಮರಿಸಿದ್ದಾನೆ. ತನ್ನ ಗುಣಾದಿಗಳನ್ನೂ ಪಾಂಡಿತ್ಯವನ್ನೂ ಈ ಪದ್ಯಗಳಲ್ಲಿ ಹೇಳಿದ್ದಾನೆ---

ಚತುರೋಪಾಯಸಮರ್ಥನತ್ಯಧಿಕಶಾಸ್ತ್ರಜ್ಞಾನಿ ವಿದ್ಯಾಸನುಂ ।
ಚಿತಗಾತ್ರಂ ಕವಿತಾವಿಧಾನನಿಪುಣಂ ಸಾಹಿತ್ಯದೊಳ್ ನೂತ್ನಗೀ ॥
ಷ್ಪತಿ ಮಾತ್ಸರ್ಯವಿವರ್ಜಿತಂ ಕೃತಬುಧಕ್ಷೇಮಂ ಕೃತಜ್ಞಂ ಪರೇಂ ।
ಗಿತರೀತಿಜ್ಞನುದಾರಕೀರ್ತಿ ಪತಿಕಾರ್ಯೈಕಪ್ರಧಾನೋತ್ತಮಂ ॥
ಅಗಣಿತಶಾಸ್ತ್ರನುಂ ಗಣಿತಶಾಸ್ತ್ರವಿಶಾರದನಾಗಿಯುಂ ಬುಧರ್ ।
ಪೊಗೞಲನೇಕವಾಕ್ಯಕುಶಲಜ್ಞನುಮಾಗಿಯುಮೇಕವಾಕ್ಯನುಂ ॥
ಮಿಗೆ ನಯಶೀಲನುಂ ವಿನಯಶೀಲನುಮಾಗಿಯುಮೇಂ ವಿಚಿತ್ರಮೋ ।
ಜಗದೊಳೆ ಚಿಕ್ಕುಪಾಧ್ಯಮಣಿಯ ಪ್ರತಿಮಂ ಪ್ರತಿವಂತನಾಗಿಯುಂ ॥

ಇವನು ಬರೆದಿರುವ ಹಲವುಗ್ರಂಥಗಳ ಆದಿಭಾಗದಲ್ಲಿ ತನ್ನ ಪೋಷಕನಾದ ಚಿಕ್ಕದೇವರಾಯನ ವಂಶಾವಳಿಯನ್ನೂ ವಿಜಯಗಳನ್ನೂ ವಿಸ್ತಾರವಾಗಿ ಹೇಳಿದ್ದಾನೆ. ಇವುಗಳನ್ನು ಸಂಗ್ರಹಿಸಿ ಇಲ್ಲಿ ಬರೆಯುತ್ತೇವೆ-

ಶ್ರೀಮನ್ನಾರಾಯಣನ ನಾಭೀಕಮಲದಲ್ಲಿ ಬ್ರಹ್ಮನು ಹುಟ್ಟಿದನು ; ಅವನಿಂದ ಅತ್ರಿ, ಅತ್ರಿಯ ನೇತ್ರದಿಂದ ಚಂದ್ರನು, ಅವನ ಮಗ ಬುಧ, ಅವನ ಮಗ ಪುರೂರವ, ಅವನ ಮಗ ಆಯು, ಅವನ ಮಗ ನಹುಷ, ಅವನ ಮಗ ಯಯಾತಿ, ಅವನ ಮಗ ಯದುರಾಜ. ಅವನ ವಂಶದಲ್ಲಿ ಶೂರನು ಹುಟ್ಟಿದನು, ಅವನ ಮಗ ವಸುದೇವ, ಅವನ ಮಗ ಕೃಷ್ಣ ಈತನು ತನ್ನ ದ್ವಾರಾವತೀಪುರವು ಸಮುದ್ರದಲ್ಲಿ ಮುಳುಗಿಹೋಗುವಕಾಲದಲ್ಲಿ ತನ್ನ ಅನುಜಾತೆಯಾದ ಚಾಮುಂಡಿಯನ್ನು ಕುರಿತು "ನಮ್ಮ ಕುಲದೈವವು ಯದುಶೈಲದಲ್ಲಿ (ಮೇಲುಗೋಟೆ) ಇರುವುದು. ನೀನು ನನ್ನ ವಂಶದ ದೊರೆಗಳನ್ನು ಆ ಪರ್ವತದ ದಕ್ಷಿಣಭಾಗದಲ್ಲಿ ನಿಲ್ಲಿಸಿ ಅವರಿಗೆ ಇಷ್ಟಾರ್ಥವನ್ನು ಕೊಡು" ಎಂದು ಹೇಳಲು, ಅವಳು ಆ ವಂಶೋದ್ಭವರಾದ ಕೆಲವರನ್ನು ಕರೆದುಕೊಂಡು ಬಂದು ಯದುಗಿರಿಯ ದಕ್ಷಿಣಭಾಗದಲ್ಲಿ ನಿಲ್ಲಿಸಿ ತಾನು ಅಲ್ಲಿಯ ಒಂದು ಬೆಟ್ಟದಮೇಲೆ ನೆಲಸಿ ಅವರನ್ನು ಕಾಪಾಡುತ್ತ ಇದ್ದಳು. ಹೀಗೆ ಕೃಷ್ಣನ ಅಜ್ಞೆಯಿಂದ ಬಂದ ಯಾದವರು ತಮ್ಮ ಕುಲದೇವತೆಯಾದ ಶ್ರೀಮನ್ನಾರಾಯಣನ ಸೇವಾಧುರಂಧರರಾಗಿ ಕಾವೇರಿಯ ದಕ್ಷಿಣದಲ್ಲಿರುವ ಮಹಿಷಪುರದಲ್ಲಿ ನೆಲಸಿ ಚಾಮುಂಡಿಕಾನುಗ್ರಹಪಾತ್ರರಾಗಿ ಆಳುತ್ತಿದ್ದರು. ಅವರ ವಂಶದಲ್ಲಿ ಬೆಟ್ಟದಚಾಮರಾಜನು

ಹುಟ್ಟಿದನು; ಅವನ ಮಕ್ಕಳು ತಿಮ್ಮರಾಜ, ಕೃಷ್ಣರಾಜ, ಚಾಮರಾಜ. ಈ ತಿಮ್ಮರಾಜನು 'ಬಿರುದೆಂತೆಂಬ ಅವನಿಪರ ಗಂಡ' ಎಂಬ ಬಿರುದನ್ನು ಹೊಂದಿ ಬಹಳ ಪ್ರಖ್ಯಾತನಾಗಿದ್ದನು. ಅವನ ತಮ್ಮ ಚಾಮರಾಜನು ಬಹಳಪರಾಕ್ರಮಶಾಲಿ; ಎರದಿಮ್ಮರಾಜನ ಮಗ ರಾಮರಾಜನ ದಳವಾಯಿಯಾದ ರೇಮಟಿ ವೆಂಕಟನನ್ನು ಯುದ್ಧದಲ್ಲಿ ಸೋಲಿಸಿದನು. ಇವನಿಗೆ ಒಂದಾವೃತ್ತಿ ಸಿಡಿಲು ಹೊಡೆದು ಚಾಮುಂಡಿಯ ಕೃಪೆಯಿಂದ ಪ್ರಾಣಕ್ಕೆ ಅಪಾಯವಿಲ್ಲದೆ ತಲೆಯ ಕೂದಲುಮಾತ್ರ ಹೋಯಿತು. ಇದರಿಂದ ಇವನಿಗೆ ಬೋಳಚಾಮರಾಜ ಎಂಬ ಹೆಸರಾಯಿತು. ಇವನ ಮಕ್ಕಳು ರಾಜನೃಪ, ಬೆಟ್ಟದಚಾಮರಾಜ, ದೇವರಾಜ, ಚೆನ್ನರಾಜ. ಈರಾಜನೃಪನು ತನಗೆ ಇದಿರಾರೂ ಇಲ್ಲ ಎಂದು ಉದ್ಧತನಾಗಿ ಯುದ್ಧಕ್ಕೆ ಬಂದ ಕಾರುಗಹಳ್ಳಿಯ ದೊರೆಯನ್ನು ಸೋಲಿಸಿ ತನ್ನ ಕುದುರೆಯ ಚಾಟಿಯಿಂದ ಅವನ ನಾಸಾಚ್ಛೇದವನ್ನು ಮಾಡಿದನು; ತಿರುಮಲರಾಜನನ್ನು ಉಪಾಯದಿಂದ ಗೆದ್ದು ಓಡಿಸಿ ಶ್ರೀರಂಗಪಟ್ಟಣವನ್ನು ತನ್ನ ವಶಮಾಡಿಕೊಂಡನು; ಅಲ್ಲದೆ ಅನೇಕಶತ್ರುರಾಜರನ್ನು ಸೋಲಿಸಿ ಅವರ ರಾಜ್ಯವನ್ನು ಸ್ವಾಧೀನಮಾಡಿಕೊಂಡು ಉನ್ನತಿಯನ್ನು ಪಡೆದನು; ತಿರುಪತಿಯ ಶ್ರೀನಿವಾಸದೇವರ ಆಜ್ಞೆಯಿಂದ ತನ್ನಲ್ಲಿಗೆ ಬಂದ ಒಬ್ಬ ಕುರುಡಸ್ತ್ರೀಗೆ ಒಂದು ಕಣ್ಣನ್ನು ಕೊಟ್ಟು ಮಹಿಮೆಯನ್ನು ಮೆರೆದನು; ಅಂತ್ಯಕಾಲದಲ್ಲಿ ಮೇಲುಗೋಟೆಯ ನಾರಾಯಣಸ್ವಾಮಿಯ ದೇವಾಲಯದಲ್ಲಿ ಹುಮೂರೂಥನಾಗಿ ಒಂದಂತೆ ಎಲ್ಲರಿಗೂ ಕಾಣಿಸಿಕೊಂಡು ದೇವರ ಪಾದದಲ್ಲಿ ಐಕ್ಯವಾದನು. ಇವನ ಮಕ್ಕಳು ನರಸರಾಜ, ಇಮ್ಮಡಿರಾಜ. ಇಮ್ಮಡಿರಾಜನು ಬೇಲೂರು, ಬೆಂಗಳೂರು ಈ ಸ್ಥಳಗಳ ಪ್ರಭುಗಳಿಗೆ ಭೀತಿಯನ್ನು ಉಂಟುಮಾಡಿದನು. ನರಸರಾಜನ ಮಗನಾದ ಚಾಮರಾಜನು ಜಗದೇವ, ಮದ್ದೂರವಿಟ್ಟಣ್ಣ, ತಲಕಾಡಸೋಮನೃಪ, ಬೈರಭೂಪ ಇವರುಗಳನ್ನು ಸೋಲಿಸಿದನು. ರಾಜನೃಪನ ತಮ್ಮನಾದ ಬೆಟ್ಟದಚಾಮರಾಜನ ಮಗ ಕಂಠೀರವನರಸರಾಜನು ರಣಧೂಲ, ಕಲೂರಪ್ರತಾಪ, ಮಾಗಡಿಯದೊರೆ, ಹೊಸೂರಪ್ರಭು, ಪಿರಿಯಪಟ್ಟಣದದೊರೆ, ಮಧುರೆರಾಜ, ತುರುಷ್ಕರು ಇವರುಗಳನ್ನು ಸೋಲಿಸಿದನು. ರಾಜನೃಪನ ಮತ್ತೊಬ್ಬ ತಮ್ಮನಾದ ದೇವರಾಜನಿಗೆ ನಾಲ್ವರು ಮಕ್ಕಳು—ದೊಡ್ಡದೇವರಾಜ, ದೇವರಾಜ, ಚಿಕ್ಕದೇವರಾಜ, ಮರಿದೇವರಾಜ. ದೊಡ್ಡದೇವರಾಜನ ಅನಂತರ ಅವನ ತಮ್ಮ ದೇವರಾಜನು ಆಳಿದನು. ಇವನು ಕೆಳದಿಯದೊರೆ, ಕೆಂಪೆಗೌಡ, ಪಾಂಡ್ಯರು, ಕೊಂಗರು, ತುರುಷ್ಕರು ಇವರುಗಳನ್ನು ಅಡಗಿಸಿದನು. ದೊಡ್ಡದೇವರಾಜನ ಮಕ್ಕಳು

ಚಿಕ್ಕದೇವರಾಜ, ಕಂಠೀರವರಾಜ. ದೇವರಾಜನು ಆದಬಳಿಕ ದೊಡ್ಡದೇವರಾಜನ ಮಗ ಚಿಕ್ಕದೇವರಾಜನು ಪಟ್ಟಕ್ಕೆ ಬಂದನು.

ಈ ಚಿಕ್ಕದೇವರಾಜನು ಪೂರ್ವದಿಕ್ಕಿನಲ್ಲಿ ಚೊಕ್ಕಲಿಂಗನನ್ನು ಸೋಲಿಸಿ ಅವನ ಆನೆಕುದುರೆಗಳನ್ನು ಹಿಡಿದುಕೊಂಡು ಪರಮತ್ತಿ, ಮುಳಲಿ, ಮುಟ್ಟಾಂಜಟ್ಟಿ, ಶಾದಮಂಗಲ, ಅರಿಯಲೂರು, ತೊರೆಯೂರು, ಅನಂತಗಿರಿ ಕುಂತೂರು. ಅಂದೂರು, ಅಕ್ಕಾರಡ್ಡಿಯವಿರೋಧಕೋಟೆ ಇವುಗಳನ್ನೂ, ಪಶ್ಚಿಮದಲ್ಲಿ ಇಕ್ಕೇರಿಸೊತೆಯನ್ನು ಸೋಲಿಸಿ ಅರಕಲಗೂಡು, ಅಂಗಡಿ, ನುಗಿಹಳ್ಳಿ, ಸಕಲೇಶಪುರ, ಬೇಲೂರು ಇವುಗಳನ್ನೂ, ಉತ್ತರದಲ್ಲಿ ಹೊನ್ನವಳ್ಳಿ, ಕಂಡಿಕೆರೆ, ಭೂತಿಪುರ, ಹಂದನಕೆರೆ, ಜಡಕನಗಿರಿ, ತುಮಕೂರು, ಮದ್ದಗಿರಿದುರ್ಗ, ಚೆನ್ನರಾಯದುರ್ಗ, ಮಿಡಿಗೇಸಿ, ಹೊಳವನಹಳ್ಳಿ ಇವುಗಳನ್ನೂ, ದಕ್ಷಿಣದಲ್ಲಿ ತೊದೆನಾಡನ್ನೂ ಸ್ವಾಧೀನಪಡಿಸಿಕೊಂಡನು. ಕೌಂಡಿನೀತೀರದಲ್ಲಿ ತಂದೆಯ ಬೃಂದಾವನದಬಳಿ ಪರವಾಸುದೇವದೇವಸ್ಥಾನವನ್ನು ಕಟ್ಟಿಸಿದನು.

ಈ ಕವಿ ಪದ್ಯರೂಪವಾಗಿಯೂ ಗದ್ಯರೂಪವಾಗಿಯೂ ಅನೇಕಗ್ರಂಥಗಳನ್ನು ಬರೆದಿದ್ದಾನೆ. ಕನ್ನಡದಲ್ಲಿ ಈತನಷ್ಟು ಗ್ರಂಥಗಳನ್ನು ಮತ್ತಾವ ಕವಿಯೂ ಬರೆದಿಲ್ಲವೆಂದು ತೋರುತ್ತದೆ. ಇವುಗಳಲ್ಲಿ ಹಲವನ್ನು ಚಿಕ್ಕದೇವರಾಜನ ಆಜ್ಞಾನುಸಾರವಾಗಿ ಬರೆದಂತೆ ಹೇಳುತ್ತಾನೆ.

ಇವನ ಗ್ರಂಥಗಳಲ್ಲಿ

1 ಕಮಲಾಚಲಮಾಹಾತ್ಮ್ಯ

ಇದು ಚಂಪೂರೂಪವಾಗಿದೆ; ಆಶ್ವಾಸ 16; ಕಂದ 2591, ವೃತ್ತ 1161, ವಚನ 279, ಒಟ್ಟು 4031. ಇದರಲ್ಲಿ ಭವಿಷ್ಯೋತ್ತರಪುರಾಣದ ತೀರ್ಥಕಾಂಡದಲ್ಲಿ ಹೇಳಿರುವ ಕಮಲಾಚಲದ ಅಥವಾ ಹಿಮವದ್ಗೋಪಾಲಸ್ವಾಮಿಬೆಟ್ಟದ ಮಾಹಾತ್ಮ್ಯವು ವರ್ಣಿತವಾಗಿದೆ. ಈ ಕಾವ್ಯದ ಉತ್ಕೃಷ್ಟತೆಯನ್ನು ಕವಿ ಈ ಪದ್ಯಗಳಲ್ಲಿ ಹೇಳಿದ್ದಾನೆ—

ಇನಿವಾಲಂ ಕೆನೆಗಟ್ಟಿ ಕಾಸಿ ಸವಿದಂತಿಂಪಾಗಿ ಕರ್ಪೂರದ ಜ |
ವ್ವನೆಯುಂ ಸೋಂಕಿದಮಾಟಕ್ಕೆ ರನ್ನದೊಡವಂ ತೊಟ್ಟಂತೆ ಸೈತಾಗಿ ಚಂ ||
ದನದಣ್ಪಂ ಪಡೆದಂತೆ ಚೂತಲತೆಯಂ ಕಂಡಂತೆ ಬೆಳ್ದಿಂಗಳೊಳ್ |
ವಿನಯಂಬೆತ್ತಿಸೆವಂತೆ ಕನ್ನಡಿಸುವೆಂ ಕಂಜಾದ್ರಿಮಾಹಾತ್ಮ್ಯಮಂ ||
ರಸಭಾವಂ ಪಿರಿದಾಗೆ ಬಂಧದೆಸಕಂ ಸೈತಾಗೆ ಶಬ್ದಾರ್ಥದೊ |
ಳ್ಪೆಸಕೃದ್ವೈಭವಮಾಗೆ ನುಣ್ಣುಡಿಗಳೊಪ್ಪಂಬೆತ್ತು ಚೆಲ್ವಾಗೆ ಸಂ ||

ಧಿಸಮಾಸಂ ಪೊಸತಾಗೆ ಕನ್ನಡದೊಳಾಕಂಜಾದ್ರಿಮಾಹಾತ್ಮ್ಯಮಂ ।
ರಸಿಕರ್ ಮೆಚ್ಚಿ ಪೊಗಳ್ವಿನಂ ವಿರಚಿಕುಂ ಸನ್ಮಂತ್ರಿಲಕ್ಷ್ಮೀವರಂ ||

ಗ್ರಂಥಾವತಾರದಲ್ಲಿ ಕೃಷ್ಣಸ್ತುತಿ ಇದೆ. ಬಳಿಕ ಕವಿ ಲಕ್ಷ್ಮಿ, ಭೂದೇವಿ, ನೀಳೆ, ಅನಂತ, ಗರುಡ, ವಿಷ್ವಕ್ಸೇನ, ದಿವ್ಯಸೂರಿಗಳು, ರಾಮಾನುಜ ಇವರುಗಳನ್ನು ಕ್ರಮವಾಗಿ ಸ್ತುತಿಸಿದ್ದಾನೆ. ಆಶ್ವಾಸಗಳ ಅಂತ್ಯದಲ್ಲಿ ಈ ಗದ್ಯವಿದೆ—

ಇದು ಸತತನತಶತಧೃತಿಶಿತಿಗಳಶತಮುಖಮುಖಸುರವಿತತಿವಿತತಕೋಟೀರಕೋಟಿತಟಘಟಿತಮಂಜುಮಾಣಿಕ್ಯಪ್ರಭಾಪುಂಜರಂಜಿತಕಂಜಗಿರಿಗೋಪಾಲಚರಣಸರಸಿಜಸುರುಚಿರನಖಮಯೂಖನಿಸ್ತಂದ್ರಸಾಂದ್ರಚಂದ್ರಿಕಾಲೋಲಚಕೋರ ರಾಜಾಧಿರಾಜ ರಾಜಪರಮೇಶ್ವರಾಪ್ರತಿಮಪ್ರೌಢಪ್ರತಾಪ ಬಿರುದೆಂತೆಂಬರಗಂಡ ಯಾದವಕುಲಾಂಬರದ್ಯುಮಣಿ ಯಶೋವಿಮಲಸುಮನಸ್ಸಮುದಯಸುರಭಿತಪರಿದಂತ ವೀರಶ್ರೀನರಪತಿ ಚಿಕ್ಕದೇವರಾಜರಾಜಿತಸುರಭೂಜಸಮಾಶ್ರಯನಿರತ ಶ್ರೀಚಿಕ್ಕುಪಾಧ್ಯಾಯವಿರಚಿತಕಮಲಾಚಲಮಾಹಾತ್ಮ್ಯದೊಳ್.

ಇವನ ಬಂಧವು ಲಲಿತವಾಗಿದೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ—

### ವರ್ಷಾಕಾಲ

ಚಾರುತರಹಂಸಗಮನಕೆ । ಭೇರಿರವಂ ಕೇಕಿನಾಟ್ಯಘಕ್ಕಾನಿನದಂ ।
ನೀರದನೃಪಾಲಘನವಾ । ದ್ಯಾರಾವಂ ಮೊಳಗಿತೊಡನೆ ಮೇಘಧ್ವಾನಂ ||
ಕಡುಕೂರ್ಪಿಂದುದಬಿಂದುಸಂಕುಲಮನಾದಂ ಚಂಚುವಿಂ ನುಂಗಿದ |
ತ್ತೊಡನೊಲ್ದಂಘ್ರಿಗಳಿಂದೆ ಮೋದಿದುದು ನೀಡುಂ ಚುಂಬನಂಗೆಯ್ದುದೋ ||
ಗುಂಡಿಸಿತ್ತೋಕುಳಿಯಾಡಿದತ್ತು ಕದುಂಕಿತ್ತಾನಂದದಿಂ ಪಕ್ಷದಿಂ |
ಜಡಿಯುತ್ತುಂ ಬಿದಿರ್ದತ್ತು ತೇಂಕಿದುದು ಮುತ್ಸಂಭ್ರಾಂತಕಂ ಚಾತಕಂ ||

### ವಸಂತ

ಬರೆ ಮಧು ಜಾತಿ ಕೆಟ್ಟುದು ಕುಜಾಳಿ ಕೊನತರ್ದುದು ಲಜ್ಜೆ ಪೋಯ್ತು ನಿ ।
ರ್ಭರಮದಮುಣ್ಮಿದತ್ತು ಕಡುನಿದ್ರೆ ತಳಿರ್ತುದು ಪ್ರೀತಿ ಪೆರ್ಚಿದ ||
ತ್ತುರುವಿರಹಂ ಚಿಗುರ್ತುದಜಿವ್ರೋಡಿತು ಕಾಮುಕರುರ್ಬು ಪರ್ಬಿದ |
ತ್ತುರವಣಿಸಿತ್ತು ಮಿತ್ರಕರಬಾಧೆ ಜಡೋನ್ನನಮಾಯ್ತು ಳಾತಳಂ ||

ಶರತ್ಕಾಲ

ತೀಂಗಳ ಸಿಂಗರವಿಂಗಡ | ಲಂಗಜರನು ಜನನವಾದ ಮಿಗೆ ಜೀವಂಜೀ |
ವಂಗಳ ಪೆಣ್ಗಳ ಕಣ್ಗಳ | ಮಂಗಳಪದಮೆಯ್ದಿತಿಳಿಗೆ ಶರದಂ ಭರದಿಂ ||

ರಸದಾಳಿ

ಪೊಡೆಯೊಳಿನಿದಾಂತು ಪಲಗ|ಣ್ಬಡೆದಮೃತದ ಸೋನೆಗಱಿಯುತಿರ್ದೋಡನೆಮ್ಮಂ |
ಪಡೆದವರೆ ಕಡಿವರೆಂಬಾ | ರಡಿಯಿಂ ರಸದಾಳಿ ಬೆಳ್ಪುಗೊಂಡೆಸೆದಿರ್ಕುಂ ||

ಮಂದಮಾರುತ

ಎಳಮಾವಿನ ಕೆಂದುಗೊಂಬಿನ | ಒಱಗೊಂಡೆಳದಳಿರ ಸೋಂಕ ಪೂಗಳ ಸೊವಡಿಂ |
ಗಳಪಿ ಮಱಿಯಂಚೆದುಪ್ಪುಟ|ತ ಱಿವಾವಸದಲ್ಲಿ ತಂಬೆಲರ್ ಸೊಗಯಿಸುಗುಂ||

ಸ್ತ್ರೀವರ್ಣನೆ

ತರಳಂ ನೇತ್ರ ಮರೋಜಯುಗ್ಮಭರಮುದ್ವೃತ್ತಂ ಚಲಂ ಭ್ರೂಯುಗಂ |
ಸ್ಫುರದೋಷ್ಠಂ ಕಡುರಾಗಭೂಮಿ ದಲಿವೆಲ್ಲಂ ಮಾಟ್ಕೆ ಚಿತ್ರಾತಿಶಯಂ ||
ಚಿರಮಧ್ಯಸ್ಥತೆಯಿಂ ಸ್ಮರಂ ಬರೆದ ಸೌಭಾಗ್ಯಾಕ್ಷರಶ್ರೇಣಿಯಂ |
ತಿರುತಿರ್ಪಾ ವರರೋಮರಾಜಿ ಸಮೆದತ್ತಿನ್ನೇತಱಂ ತಾಪಮಂ ||

ಸಂಸಾರ

ಮನಸಿಜನೆಂಬ ಧೀವರನುದಾರಭವಾಂಬುಧಿಯಲ್ಲಿ ಮಾನಿನೀ |
ಜನವರಸಂಜ್ಞೆವೆತ್ತ ಬಲೆಯಂ ಪಿಡಿದೊಯ್ಯನೆ ಬೀಸಿ ಮತ್ತಮಾ ||
ವನಿತೆಯರಿಂಪುತುಳ್ಕುವ ದುರಾಮಿಷಕುಣ್ಮುವ ಮರ್ತ್ಯರೆಂಬ ಮ |
ತ್ಸ್ಯನಿಕರಮಂ ಕಡಂಗೆ ತೆಗೆದಟ್ಟಿಪನೊಲ್ದನುರಾಗವಹ್ನಿಯೊಳ್ ||

ಕೃಷ್ಣಸ್ತುತಿ

ಗೋಪರ ಪೆಣ್ಗಳ್ ಬಂಚಡ |.ಗಾವರಕುಱಿ ಸೋಲ್ತು ಬಳಸಿ ನಿಲೆಯುವರ್ಗಂ||
ಣಾವರೆಗೆ ಪಲವುಪರಿಜಂ | ತೀವಿಸಿದಲರಿಸನ ತಂದೆ ಮಿಗೆ ಕಾಯೆಮ್ಮಂ ||

ಹಸ್ತಿಗಿರಿಯ ಮಾಹಾತ್ಮ್ಯ

ಇದೂ ಚಂಪೂರೂಪವಾಗಿದೆ; ಆಶ್ವಾಸ 18, ಪದ್ಯ 1172. ಇದರಲ್ಲಿ

ಬ್ರಹ್ಮಾಂಡಪುರಾಣದ ತೀರ್ಥಕಾಂಡದೊಳಗೆ ಉಕ್ತವಾದ ಹಸ್ತಿಗಿರಿಯ ಅಥವಾ ಕಾಂಚಿಯ ಮಾಹಾತ್ಮ್ಯವು ಹೇಳಿದೆ. ಈ ಕಾವ್ಯದ ಉತ್ಕೃಷ್ಟತೆಯನ್ನು ಕವಿ

ಅಳಿ ಮುಸುಕದ ಸುಮಲತೆಯಂ | ತೆಳವರೆಯದ ಕನ್ನೆಯುಂತಿರಿನಿವಾಲಂತು |
ಜ್ವಳಿಪತಿಳಿಜೊನ್ನದಂತೆರ್ದೆ | ಗೊಳೆ ಪೇಳ್ವೆಂ ಹಸ್ತಿಗಿರಿಯ ಮಾಹಾತ್ಮ್ಯಮನಾಂ ||

ಎಂಬ ಪದ್ಯದಲ್ಲಿ ತಿಳಿಸಿದ್ದಾನೆ. ಗ್ರಂಥಾವತಾರದಲ್ಲಿ ವರದರಾಜ ಸ್ತುತಿ ಇದೆ. ಬಳಿಕ ಕವಿ ಲಕ್ಷ್ಮಿ, ಭೂದೇವಿ, ನೀಳಾದೇವಿ, ಅನಂತ, ಗರುಡ, ವಿಷ್ವಕ್ಸೇನ, ದಿವ್ಯಸೂರಿಗಳು, ರಾಮಾನುಜ ಇವರುಗಳನ್ನು ಪರಿಪಿಡಿಯಿಂದ ಸ್ತುತಿಸಿದ್ದಾನೆ. ಆಶ್ವಾಸಗಳ ಕೊನೆಯಲ್ಲಿ

ಇದು.........ಕರಿಧರಣೀಧರಶಿಖರಸುಂದಿರವರದರಾಜಚರಣರಾಜೀವಮಕರಂದಬೃಂದಾಸ್ವಾದನಮುದಿತದ್ವಿರೇಫಾಯಮಾನ.........ಚಿಕ್ಕದೇವಮಹಾರಾಜೇಂದ್ರಸಾಂದ್ರಕೃಪಾಪಾಲಿತಸರ್ವತಂತ್ರಸ್ವತಂತ್ರ ಶ್ರೀಚಿಕ್ಕುಪಾಧ್ಯಾಯವಿರಚಿತಮಪ್ಪ ಹಸ್ತಿಗಿರಿ ಮಾಹಾತ್ಮ್ಯದೊಳ್

ಎಂಬ ಗದ್ಯವಿದೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ಕನ್ನಡದನಾಡು

ಗಾಡಿಯ ಸೀಮೆ ಚೆಲ್ವಿಗೆವ ತಾಣಮಲಂಪಿನ ಸಂತೆ ಪೆಂಪು ಸಾ |
ರ್ದಾಡುವ ಭೂಮಿ ಸೌಖ್ಯದೆಡೆ ಪುಣ್ಯದ ಗೊತ್ತು ವಿನೋದದಾಗರಂ ||
ಮೋಡಿಯ ಮಂಟಪಂ ಸಿರಿಯ ಪೆರ್ಚುಗೆಗೊಳ್ಮನೆ ಮುಕ್ತಿಕಾಂತೆ ಕೈ |
ಗೂಡುವ ಬೀಡು ಕನ್ನಡದನಾಡು ವಿರಾಜಿಪುದೆಂತು ಬಣ್ಣಿಪೆಂ ||

ವಿಷ್ಣುದರ್ಶನಮಾಡಿದ ಬ್ರಹ್ಮನ ಭಕ್ತ್ಯತಿಶಯ.

ಓಡುವನಾಡುವಂ ಬಟ್ಟಿಕೆ ಸುತ್ತುವನಳ್ಕುವನೊರ್ಮೆ ಹರ್ಷದಿಂ |
ನೋಡುವನೊಲ್ದು ಬೇಡುವನನನ್ಯಮನಂ ಮಿಗೆ ಬೀಳುತೆಟ್ಟು ಮುಂ ||
ಡಾಡುವನಪ್ಪುವಂ ತಡಪಿ ತಕ್ಕೆಯೊಳಿಟ್ಟು ಬೆಮರ್ತು ಮುದ್ದಿಪಂ |
ಪಾಡುವನೆಯ್ದುವಂ ನಲಿದು ತತ್ಪದದೊಳ್ ತನುವಂ ಸಮರ್ಪಿಪಂ ||

## ಸತ್ಕವಿ

ನಸುಬಿರಿದ ಪೂಗಳಿಂದಂ | ಪೊಸತೆನೆ ಸರಮಂ ನೆಗಳ್ಚಿದಂತೆ ಸುಕವಿಗಳ್ |
ರಸಮೊಸರ್ವ ಕಬ್ಬಮಂ ವಿರ | ಚಿಸಿ ವಾಕ್ಪರಿಣತರ ಮನಮನಿಟ್ಟುಕೊಳ್ಗುಂ ||

## ಸೂಳೆಗೇರಿ

ಪುಸಿಯ ತವರ್ಮನೆ ತೌಳಿಯ | ಪಸರಂ ವಂಚನೆಯ ಬೀಡು ಕಪಟದ ನಿಳಯಂ |
ಪಿಸುಣಾಟದಿಕ್ಕೆಯೆನೆ ರಂ | ಜಿಸುತಿರ್ದುದು ಸೂಳೆಗೇರಿ ವಿಟತತಿಯಿಂದಂ ||

## ರಾಮಾನುಜಸ್ತುತಿ

ನೀರಂಧ್ರಪ್ರತಿಭಾವಿಭಾಸುರಕಳಾಪೂರ್ಣಾದ್ವಿಜೇಂದ್ರಂ ನಿರ |
ಸ್ತಾರಿವ್ರಾತಮನೋರಥಂ ಹರಿಪದಾಸಕ್ತಂ ಲಸನ್ಮೂರ್ತಿ ದು ||
ರ್ವಾರರಾಕೀರ್ಣತಮೋಪಹಂ ಕುವಲಯಕ್ಷೇಮಂಕರಪ್ರಕ್ರಿಯಂ |
ಶ್ರೀರಾಮಾನುಜಚಂದ್ರನೀಗೆಮಗೆ ನಿರ್ದೋಷಾಮೃತೌತ್ಕಂಠ್ಯಮಂ ||

## ಚಿಕ್ಕದೇವರಾಜನ ಕೀರ್ತಿ

ವ್ಯೋಮಗಲಕ್ಷ್ಮಂ ಮೊಗನುಂಬರಾಪಗೆ ಕರಂ ಕೈಲಾಸಮಾಲಾನಮಾ |
ಭಗಣಂ ಬಿಂದುಗಣಂ ಸುಧಾಬ್ಧಿ ಪದಪಾಶಂ ಸಾಂದ್ರಚಂದ್ರಾತಪಂ ||
ಬಗೆವಂದುಜ್ವಲಕಾಯಮಾಗಿರೆ ಯಶೋಮತ್ತೇಭವಿಕ್ರೀಡಿತಂ |
ನೆಗಟ್ದಿತ್ತುಜ್ಜರಿ ದೇವಭೂವರಸುತಶ್ರೀಚಿಕ್ಕದೇವೇಂದ್ರನಾ ||

## 3 ರುಕ್ಮಾಂಗದಚರಿತೆ

ಇದೂ ಚಂಪೂಗ್ರಂಥ; ಆಶ್ವಾಸ 10, ಪದ್ಯ 2286. ಇದರಲ್ಲಿ ನಾರದೀಯ ಪುರಾಣೋಕ್ತವಾದ ರುಕ್ಮಾಂಗದಚರಿತೆ ಹೇಳಿದೆ. ಇದು ಏಕಾದಶೀವ್ರತದ ಮಹಿಮೆಯನ್ನು ಬೋಧಿಸುತ್ತದೆ. ಗ್ರಂಥಾವತಾರದಲ್ಲಿ ವಿಷ್ಣುಸ್ತುತಿ ಇದೆ. ಬಳಿಕ ಕವಿ ಲಕ್ಷ್ಮಿ, ಭೂದೇವಿ, ನೀಳಾದೇವಿ, ಅನಂತ, ಗರುಡ, ವಿಷ್ವಕ್ಸೇನ, ಶಂಖ, ಚಕ್ರ, ಕೌಮೋದಕಿ, ಪದ್ಮ, ಶಾರ್ಙ್ಗ, ನಂದಕ, 12 ಆಳ್ವಾರುಗಳು, ರಾಮಾನುಜ, ನಾರದಭೀಷ್ಮಶೌನಕ ಬಲಿ ಪ್ರಹ್ಲಾದ ದಾಲ್ಭ್ಯ ಪರಾಶರರುಕ್ಮಾಂಗದಪುಂಡರೀಕ ವ್ಯಾಸಾಂಬರೀಷಾರ್ಜುನಾದಿ ಮಹಾ ವೈಷ್ಣವರು ಇವರುಗಳನ್ನು ಸ್ಮರಿಸಿದ್ದಾನೆ. ಆಶ್ವಾಸಗಳ ಕೊನೆಯಲ್ಲಿ

ಇದು... .........ಶ್ರೀಮತ್ಕರಿವರದರಾಜಸುರುಚಿರಚರಣಸರಸಿಜಪರಮಭಕ್ತಿರ

ಸಪರಿಲುಳಿತಾಂತರಂಗ....................ಚಿಕ್ಕದೇವಮಹಾರಾಜರಾಜಿತದಯಾಭಾಜನ ಶ್ರೀಚಿಕ್ಕುಪಾಧ್ಯಾಯವಿರಚಿತ ರುಕ್ಮಾಂಗದಚರಿತ್ರದೊಳ್

ಎಂಬ ಗದ್ಯವಿದೆ. ಈ ಗ್ರಂಥದ ಬಂಧವು ಪ್ರೌಢವಾಗಿದೆ. ಇದರಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ---

ಮೈಸೂರು

ವೀರದ ಮಂದಿರಂ ಬಿನಯದಂಗಡಿಯೊಳ್ಪಿನ ಪೇಟೆ ನವ್ಯಶ್ರೀಂ |
ಗಾರದ ಸಾಗರಂ ಜಸದ ಚಾವಡಿಯೋಜೆಯ ಬೀಡು ಭಾಗ್ಯದೊಂ ||
ದಾರವೆ ಸರ್ವಪುಣ್ಯದ ತವರ್ಮನೆಯೈಸಿರಿಯಾಗರಂ ಮಹೀ |
ಶೂರಪುರಂ ವಿರಾಜಿಸಿತು ಭೂರಮಣೀಲಸದಂಘ್ರಿನೂಪುರಂ ||

ಕಾವೇರಿ

ಸತತಂ ಮಜ್ಜದಶೇಷಮಾನವಗೆ ಮುಕ್ತಿಶ್ರೀಯ ಸಂಮ್ಮೇಳನೋ |
ನ್ನತಿಯಂ ಪೊರ್ದಿಪ ಸಂಶ್ರಿತಪ್ರಜೆಗಳಂ ಸೌಭಾಗ್ಯಸಂಪತ್ತಿನಿ ||
ರ್ಜಿತವೇವೇಂದ್ರರನಾಗಿಸುತ್ತೆ ವಿಲಸಚ್ಛ್ರೀರಂಗರಾಟ್ಕೇಕರ |
ದ್ಯುತಿಪೂತೋದಕಪೂರಿತಾಶಯೆ ಮಹಾಕಾವೇರಿ ಕಣ್ಗೊಪ್ಪುಗುಂ ||

ಹಿಮಂತ

ಕಮಲಂ ಕುಮುದಂಬೆತ್ತುದು | ಕುಮುದಂ ವಿಗತಪ್ರಭಾಕಮಲಮುಕ್ತಂ ಸ |
ತ್ಕ್ರಮಮುಂ ವಿಕ್ರಮಮಾವಿ | ಕ್ರಮಮುಂ ಸತ್ಕ್ರಮಮೆನಿಸಿದುದಾಹಿ
ಮದಿನದೊಳ್ ||

ವರ್ಷಾಕಾಲ

ಜಲಜಾಪ್ತದೀಪ್ತಬಡಬಾ | ನಲರ ಚಿಚಾಜ್ವಲ್ಯಮಾನಗಗನಾಂಬುಧಿಯೊಳ್ |
ಚಲದನಿಲಧೂತಭಂಗಾ | ವಲಿಯಂತೆ ಪಯೋದಪಾಳಿ ಕರಮೊಸೆದಿರ್ಕುಂ ||

ನೀಳಾದೇವಿ

ನೀಲೆಯನಂಗೀಕೃತವರ | ಲೀಲೆಯನಬ್ಜಾತನಾಭಮಹಿಮೋದನ್ವ |
ದ್ವೇಲೆಯನಭಿನವಮುಕುರಕ | ಪೋಲೆಯನಾಂ ನುತಿಸಿ ಪಡೆವೆನೀಪ್ಸಿತಫಲಮಂ ||

### ಚಿಕ್ಕದೇವರಾಜನಸ್ತುತಿ

ಚರದಶ್ವಾಳಿಖುರಾಹತಿಸ್ಫುಟಿತಪೃಥ್ವೀರಂಧ್ರನಿರ್ಯನ್ಮಹಾ |
ಗರಭೃದ್ವರ್ಯಫಣಾಮಣಿವ್ರಜಮಯೂಖಾಂಕೂರದಿಂ ದಿಙ್ನಭಂ ||
ಬವೆಗಂ ಪರ್ವೆ ನಿಜಪ್ರತಾಪಲತೆ ತಾಳ್ದತ್ಯುಗ್ರರುಕ್ಪ್ರಸ್ಸವಂ |
ಸುರಭೂಭೃತ್ಫಲಮಂ ಕವೀಂದ್ರವಿನುತಶ್ರೀಚಿಕ್ಕದೇವೇಂದ್ರನ ||
ಸಿರಿಯಿರೆ ಬಿಜ್ಜೆಯಿಲ್ಲ ಸಿರಿಬಿಜ್ಜೆಗಳೆಸೆ[illegible]ಡವಿಲ್ಲ ವಿಕ್ರಮಂ |
ವರರೊಳುದಾರಭಾವಮದು ಸಾರ್ದೊಡೆ ತವಿಲ್ಕಳವಿಸೆ[illegible]ಷಂ ಶ್ರೀ ಕೋ ||
ದ್ಧರಣತೆಯಿಲ್ಲಜಸಿ ಪೊರ್ದ ಕೃಶಾನ್ವಿತತೆನೆತ್ತು ತಾನೆ ವಿ |
ಸ್ಫುರಿಸಿತು ಚಿಕ್ಕದೇವನೃಪನೊಳ್ ಪರಸ್ಪರ[illegible] ||

### 4 ವಿಷ್ಣುಪುರಾಣ,

ಇದೂ ಚಂಪೂರೂಪವಾಗಿದೆ; ಅಂಶ 6, ಆಶ್ವಾಸ 32, ಪದ್ಯ 6255. ಗ್ರಂಥಾವತಾರದಲ್ಲಿ ಪಶ್ಚಿಮರಂಗನಾಥಸ್ತುತಿ ಇದೆ. ಬಳಿಕ ಕವಿ ರಂಗನಾಯಕಿ, ಭೂದೇವಿ, ನೀಲಾದೇವಿ, ಅನಂತ, ಗರುಡ, ವಿಷ್ವಕ್ಸೇನ, ರಾಮಾನುಜ, ಶಂಖ, ಚಕ್ರ, ನಂದಕ, ಶಾರ್ಙ್ಗ, ಗದೆ, ಸರಸ್ವತಿ, ಪರಾಶರ ಇವರುಗಳನ್ನು ಪರಿವಿಡಿಯಿಂದ ಹೊಗಳಿದ್ದಾನೆ. ಆಶ್ವಾಸಾಂತ್ಯದಲ್ಲಿ

ಇದು ............... ನಾರಾಯಣಪದಪಾರಸಮರಂದನಿತ್ಯಾಭಿಷಿಕ್ತ..... ......ಚಿಕ್ಕದೇವಮಹಾರಾಜಕರುಣಾಕಟಾಕ್ಷರುಚಿಸಾಂದ್ರಚಂದ್ರಿಕಾಲೋಲಚಕೋರ ಸಚಿವತಿಲಕ ಶ್ರೀಚಿಕ್ಕುಪಾಧ್ಯಾಯವಿರಚಿತಮಪ್ಪ ಶ್ರೀವಿಷ್ಣುಪುರಾಣಾಖ್ಯಮಹಾಪ್ರಬಂಧದೊಳ್

ಎಂಬ ಗದ್ಯವಿದೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ--

### ವಸಂತ

ಕೊನರ್ಗಳ ಗೊಂಚಲಂ ಕರ್ದುಕಿ ಚಂಚುವಿನಿಂದೆ ಸಿಡಿಲ್ದು ಸೋರ್ವ ನ |
ಲ್ಪೊನೆಗಳನೀಂಟಿ ಕಂಠಮುರಲುತ್ತಿರೆ ಪಾಂಥಧೃತಿಕ್ಷಮಾಧ್ರಭೇ ||
ದನಕುಲಿಶಸ್ವನಂ ವಿರಹಿಹಂಸಘನಧ್ವನಿಯೆಂಬಿನಂ ಕುಕಿ |
ಲ್ವನುಪಮಕೋಕಿಲಾಳಿಕಲನಿಸ್ವನವೊಪ್ಪಿತು ಚೈತ್ರಮಾಸದೊಳ್ ||

ಉದ್ಯಾನ

ಎಳೆಲತೆ ತೀವಿ ತೋರ್ಪ ಪೊಸಮಲ್ಲಿಗೆ ಮಲ್ಲಿಗೆಸೌಸವಕ್ಕೆ ಮಂ ।
ಡಳಿಸುವ ತುಂಬಿ ತುಂಬಿಗಳನೊಯ್ವೆಲರಾಳಿ ಗಾಳಿಯಿಂ ॥
ಬಳಸಿದ ತಣ್ಗೊಳಂ ಕೊಳದೊಳುಳ್ಳಲರ್ವಂಬುಜನುಂಬುಜಂಗಳಂ ।
ಕಳರವದಿಂ ಕರ್ಮರ್ಗಂಕುವರಸಂಚೆಗಳೊಪ್ಪುಗುವಾವನಾಂತದೊಳ್ ॥

ಕಬ್ಬು

ನಳಿನಶರಂ ಸುಧೆಯುಂ ಪೊಂ । ಗೊಳವಿಗಳೊಳ್ ತೀವಿ ಬೆಳ್ಳಿಯಿಂ ಬಿಗಿದು ಶುಕಂ ।
ಗಳ ಕಾಪನಿಟ್ಟವೋಲ್ ಕ । ಣ್ಗೊಳಿಕುಂ ಪುಂಡ್ರೇಕ್ಷುದಂಡತತಿ ಗರ್ದೆಗಳೊಳ್ ॥

ಚಕ್ರ

ಪರತರಪುಣ್ಯಜನೋತ್ಸವ । ಪರವಾಗಿ ಸುದರ್ಶನಂ ಸದಾ ಹರಿಕರಭಾ ।
ಸುರವಾಗಿ ಚಕ್ರಮೆನಿಸಿದ । ಸರಸರಥಾಂಗಂ ಪ್ರಸನ್ನಮಕ್ಕೆಮಗೆಂದುಂ ॥

ಅನಂತ

ನವನೀಲೋತ್ಪಲರಾಜಿ । ಚ್ಛವಿರಂಜಿತಫೇನರಾಶಿಯೆನೆ ಶುಚಿತರಮಾ ।
ಧವತನುಕಾಂತಿಸ್ನಿಗ್ಧಂ । ಸವಿಲಾಸಮನಂತನೀಗೆ ಮುದ್ವಾಂಛಿತಮಂ ॥

5 ಇದೇ ವಿಷ್ಣುಪುರಾಣವನ್ನು ಕವಿ ಗದ್ಯರೂಪವಾಗಿಯೂ ಬರೆದಿದ್ದಾನೆ.

6 ದಿವ್ಯಸೂರಿಚರಿತೆ

ಇದೂ ಚಂಪೂಗ್ರಂಥ; ಆಶ್ವಾಸ 14, ಗದ್ಯಪದ್ಯಸಹ 828. ಇದರಲ್ಲಿ ವಿಷ್ಣುಭಕ್ತರಾದ ಪನ್ನಿರ್ವರು ಆಳ್ವಾರುಗಳ ಚರಿತೆ ಹೇಳಿದೆ. ದ್ರಾವಿಡಭಾಷೆಯಲ್ಲಿದ್ದ ಈ ಚರಿತೆಯನ್ನು ಚಿಕ್ಕದೇವರಾಜನ ಇಷ್ಟಾನುಸಾರವಾಗಿ ಕನ್ನಡಿಸಿದಂತೆ ಕವಿ ಹೇಳುತ್ತಾನೆ. ಈ ಗ್ರಂಥದ ಉತ್ಕೃಷ್ಟತೆಯನ್ನು ಈ ಪದ್ಯದಲ್ಲಿ ಹೇಳಿದ್ದಾನೆ—

ಚೆಂದಳಿಜೊಂಪಸಂತೆ ಪೊಸಮಲ್ಲಿಗೆವೂವಿನ ಕಂಪಿನಂತೆ ಮಾ ।
ಕಂದದ ಗುಂಪಿನಂತೆ ವಿಕಚಾಂಬುಜರಾಜಿಯಲಂಪಿನಂತೆ ಶ್ರೀ ॥
ನಚದದಣ್ಪಿನಂತೆ ಮಲಯಾನಿಲನೊಪ್ಪುವ ತಣ್ಪಿನಂತೆ ಸೈ ।
ಪಿಂದೆ ರಸಜ್ಞಚಿತ್ತಕತಿಮೋದಮನೀಕೃತಿಯೊಪ್ಪುದಾವಗಂ ॥

ಗ್ರಂಥಾವತಾರದಲ್ಲಿ ರಂಗನಾಥಸ್ತುತಿ ಇದೆ. ಬಳಿಕ ಕವಿ ರಂಗ ನಾಯಕಿ; ಶಂಖ, ಚಕ್ರ, ಗದೆ, ಖಡ್ಗ, ಶಾರ್ಙ್ಗ, ಕೌಸ್ತುಭ, ವೈಜಯಂತಿ, ಅನಂತ, ಗರುಡ, ವಿಷ್ವಕ್ಸೇನ, ಪನ್ನಿರ್ವರು ಆಳ್ವಾರುಗಳು[1], ಭಾಷ್ಯಕಾರ ಇವರುಗಳನ್ನು ಪರಿವಿಡಿಯಿಂದ ಸ್ತುತಿಸಿದ್ದಾನೆ. ಆಶ್ವಾಸಗಳ ಕೊನೆಯಲ್ಲಿ ಈ ಗದ್ಯವಿದೆ---

ಇದು ......ರಂಗವಿಭುಚರಣಯುಗಳನಖಮಯೂಖಸುಧಾಪೂರಪರಿಹಾರಮದಮರಾಳೀಕೃತ.......... ...ಶ್ರೀಚಿಕದೇವರಾಯಮಹಾರಾಜಪ್ರಸಾದಪರಿಪೂರ್ಣಸಚಿವನಿಚಯತಿಲಕ ಶ್ರೀಚಿಕುಪಾಧ್ಯಾಯವಿರಚಿತಮಪ್ಪ ದಿವ್ಯಸೂರಿಚರಿತ್ರಮಹಾಪ್ರಬಂಧದೊಳ್.

ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ---

ಲಕ್ಷ್ಮೀಸ್ತುತಿ

ಅಪಳಪಾಂಗಕಾಂತಿ ಮುನಿಚಿತ್ತಮರಾಳಕೆ ದುಗ್ಧವಾಯ್ತು ಮ |
ತ್ತಾವಳ ದಂತಶೋಭೆ ಹರಿನೇತ್ರಚಕೋರಕೆ ಜೊನ್ನಮಾದುದಿಂ ||
ತಾವಳೊಡಲ್ವೊಗರ್ ಭಜಕಚಕ್ರಕೆ ಪೊಂಬಿಸಿಲಂತೆ ತೋರ್ಕುಮಾ |
ಪಾವನಮೂರ್ತಿ ರಂಗವಿಭುವಲ್ಲಭೆಯೀಗೆಮಗಿಷ್ಟಸಿದ್ಧಿಯಂ ||

ಚಕ್ರ

ಸುರರಿಪುವಿಚ್ಛಿನ್ನಗಳ | ಚ್ಛುರಿತಮಹಾರಕ್ತಧಾರೆಯಿಂ ತೋರ್ದುದಿತಾಂ |
ಬುರುಹಸಖಬಿಂಬರುಚಿವಿ | ಸ್ಫುರಿತಂ ಕುಡುಗೆಮಗೆ ವಿಷ್ಣುಚಕ್ರಂ ನಲವಂ ||

ದುರ್ಜನನಿಂದೆ

ಸುರನದಿಯೊಳ್ ಮುಳುಂಗಿಸಿಯೊಡಲ್ಗೆ ಸುಗಂಧಮನೆಣ್ಪುಗೆಯ್ದು ಭೂ |
ಸುರಮಣಿಭೂಷಣಂದುಡಿಸಿ ಪಾಲೆಱೆದೋಯ್ಯನೆ ಸಂತವಿಟ್ಟು ಮೇಣ್ ||
ಉರುಚತುರಂತಯಾನದೊಳಮರ್ಚಿದೊಡಂ ಮಲದಾಸೆ ಪೋಗಿ ಕು |
ಕ್ಕುರಮಿರದೊಳ್ಪುದಂ ಬಿಡುವುದೇ ಕಡುನೇಹದೆ ಬೇಡಿಕೊಂಡೊಡಂ ||

---

1 ಪೊಯ್ಗೈಯಾಳ್ವಾರು, ಪೂದತ್ತಾಳ್ವಾರು, ಪೇಯಾಳ್ವಾರು, ತಿರುಮಳಿಶೈಯಾಳ್ವಾರು, ನಮ್ಮಾಳ್ವಾರು, ಮಧುರಕವಿಯಾಳ್ವಾರು, ಕುಲಶೇಖರಾಳ್ವಾರು, ಪೆರಿಯಾಳ್ವಾರು, ಗೋದಾದೇವಿ, ಭಕ್ತಾಂಘ್ರಿರೇಣು, ತಿರುಪ್ಪಾಣಾಳ್ವಾರು, ತಿರುಮಂಗೈಯಾಳ್ವಾರು.

ಗೋದಾದೇವಿಯುಮದುವೆಗಾಗಿ ಸಿಂಗರಿಸಿದ ಶ್ರೀರಂಗ.

ಮಿಳಿರ್ವ ಪತಾಕೆ ರತ್ನಮಯತೋರಣಮೋಳಿ ಚಲಧ್ವಜಾಳಿ ಪೊಂ |
ಗಳಸದ ಸೌಧರಾಜಿ ಮಣಿಸಂಕತಮಂಜುಳರಂಗವಲ್ಲಿಯು ||
ಜ್ವಳಮೃಗನಾಭಿಸಾರಣೆ ಸುಧೂಪದ ಧೂಸದಲಂಪು ಕಾಂಚನೋ |
ಜ್ವಲತರಮಂಡಪಂ ಮೆಱೆಯುಳಿಲ್ಲೆಡೆಯುಲ್ಲಿಯುವೊಪ್ಪಿತಾಪುರಂ ||

7 ಸಾತ್ವಿಕಬ್ರಹ್ಮವಿದ್ಯಾವಿಲಾಸ

ಇದೂ ಚಂಪೂಗ್ರಂಥ; ಆಶ್ವಾಸ 9. "ಗುರುಶಿಷ್ಯೋಕ್ತಿಪ್ರತ್ಯುತ್ತರ ಪದ್ಧತಿವಿಡಿದು ವೈಷ್ಣವಾಚಾರ್ಯರ್ ಆಮ್ನಾಯಸ್ಮೃತಿಶಾಸ್ತ್ರಪುರಾಣವಾಕ್ಯಾರ್ಥಿಗಳಿಂ ಸಾತ್ವಿಕಬ್ರಹ್ಮವಿದ್ಯಾವಿಲಾಸಮೆಂದು ಸಕಲವೇದಾರ್ಥಸಾರಮಂ ಸಂಸ್ಕೃತದೊಳ್ ಸಂಗ್ರಹಿಸಿರ್ಪರ್". ಇದನ್ನು ಕವಿ ಕನ್ನಡಿಸಿದಂತೆ ಹೇಳುತ್ತಾನೆ. ಇದು ವಿಶಿಷ್ಟಾದ್ವೈತಮತವನ್ನು ಸಪ್ರಮಾಣವಾಗಿ ಪ್ರತಿಪಾದಿಸುವ ಗ್ರಂಥ. ಗ್ರಂಥಾವತಾರದಲ್ಲಿ ವಿಷ್ಣುಸ್ತುತಿ ಇದೆ. ಬಳಿಕ ಕವಿ ಲಕ್ಷ್ಮಿ, ಭೂದೇವಿ, ನೀಳಾದೇವಿ, ಅನಂತ, ಗರುಡ, ವಿಷ್ವಕ್ಸೇನ, ಶಠಕೋಪ, ರಾಮಾನುಜ ಇವರುಗಳನ್ನು ಸ್ತುತಿಸಿದ್ದಾನೆ. ಆಶ್ವಾಸಗಳ ಅಂತ್ಯದಲ್ಲಿ ಈ ಗದ್ಯವಿದೆ—

ಇದು............ಶ್ರೀಮದ ವರದರಾಜರಾಜದಂಘ್ರಿರಾಜೀವಪೂಜಾಪರಿಚಯಸದಯಹೃದಯ............ಶ್ರೀಚಿಕ್ಕದೇವರಾಜನಿಜದಯಾರಸವಿಸರವಿಸ್ಮೃಮರತಾಸಂವರ್ಧಿತಧರ್ಮಸಂತಾನ ಶ್ರೀಚಿಕ್ಕುಪಾಧ್ಯಾಯಮಂತ್ರಿಮಣಿವಿರಚಿತ ಸಾತ್ವಿಕಬ್ರಹ್ಮವಿದ್ಯಾವಿಲಾಸದೊಳ್.

ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ಕ್ಷೀರಸಮುದ್ರ

ಪರಮುಕ್ತಿಪ್ರಮದಾಕಟಾಕ್ಷರುಚಿ ನೀಳೋರ್ವೀರಮಾಸ್ಮೇರಬಂ |
ಧುರದಾಮಂ ಪರಮಾತ್ಮಪಾದನಖಶೀತಾಂಶುಪ್ರಭಾಸಾರಮೆ ||
ಲ್ತಾರದಿಂ ಸುತ್ತಿಡಿದಂತೆಯೂರ್ಮಿಕೆಗಳುಂ ಡಿಂಡೀರಪಿಂಡಂಗಳುಂ |
ಸ್ಫುರಿಪೊಳ್ಮುತ್ತುಗಳುಂ ಪೊದಱಿರೆ ಪಯಃಪಾಥೋಧಿ ಕಣ್ಗೊಪ್ಪುಗುಂ ||

### ಕಾವೇರಿ

ತತಕೃಷ್ಣವೇಣಿಯುರಲೀ | ಕೃತಪುಷ್ಕರೆ ವಿಧೃತತುಂಗಭದ್ರೆ ಮಹಾಗೋ |
ಮತಿ ಜಿತಭಾನುಜೆ ಸಹ್ಯಜೆ | ಸತತಂ ನದಿಗಳ ವಿಳಾಸಮುಂ ತಳೆದಿರ್ಕುಂ ||

### ಪರಬ್ರಹ್ಮ

ವರಕೃಷಿವಾಚಕಶಬ್ದವೆ | ಧರಣೀವಾಚಕಮೆನಿಕ್ಕುಮೆಸೆವ ಣಕಾರಂ |
ಪರಿಕಿಸೆ ನಿರ್ವೃತಿಕಾರಣ | ಮೆರಡೊಂದಿರೆ ಕೃಷ್ಣಶಬ್ದಮದೆ ಪರಬೊಮ್ಮಂ ||
ಒಗೆದೂರ್ಣನಾಭಿ ಪುಟ್ಟಿಸಿ | ವಿಗೆ ತಾನೇ ಕೊಳ್ವತೆಱವೆ ಹರಿಯುನಿತಂ ನೆ |
ಟ್ಟಗೆ ಸೃಜಿಸಿ ಕಟ್ಟಕಡೆಯೊಳ್ | ಜಗಮನಿತಂ ತನ್ನೊಳೊಸೆದು ಲೀನಂಗೈಗುಂ ||

### ಪ್ರಣವ

ಶ್ರೀವರನಕಾರರೂಪಂ | ಶ್ರೀವಧುವೆ ಉಕಾರರೂಪೆಯೆನಿಕುಂ ಬುಧರಿಂ |
ಭಾವಿಸೆ ಮಕಾರಮುಕ್ಕಂ | ಜೀವಾತ್ಮಂ ಪಂಚವಿಂಶತಿವರ್ಣಂ ಪುರುಷಂ ||

### 8 ಅರ್ಥಪಂಚಕ

ಇದೂ ಚಂಪೂರೂಪವಾಗಿದೆ; ಏತತ್ಕವಿಕೃತವಾಗಿರಬಹುದು ಎಂದು ತೋರುತ್ತದೆ. ಇದರಲ್ಲಿ ಸ್ವಸ್ವರೂಪ, ಪರಸ್ವರೂಪ, ಉಪಾಯಸ್ವರೂಪ, ಪುರುಷಾರ್ಥಸ್ವರೂಪ, ವಿರೋಧಿಸ್ವರೂಪ ಎಂಬ 5 ವಿಷಯಗಳು ನಿರೂಪಿಸಲ್ಪಟ್ಟಿವೆ. ಇದು ದ್ರಾವಿಡಭಾಷೆಯಲ್ಲಿರುವ ಗ್ರಂಥದ ಭಾಷಾಂತರವು. ಗ್ರಂಥಾವತಾರದಲ್ಲಿ ವರದರಾಜಸ್ತುತಿ ಇದೆ. ಈ ಗ್ರಂಥದಿಂದ ಒಂದೆರಡುಪದ್ಯಗಳನ್ನು ತೆಗೆದು ಬರೆಯುತ್ತೇವೆ—

### ದೇವರು

ಸಿರಿವೆರಸು ಯೋಗಿಮುಖಭ | ಕ್ತರ ಹೃದಯೋತ್ಫುಲ್ಲಕಮಲದಹರಾಕಾಶಂ |
ಪರವತಿಯಾಗಿ ದಿವ್ಯ | ತ್ಸುರುಚಿರವಿಗ್ರಹಮನೋಕನಚ್ಯುತನೆಸೆಗುಂ ||

### ಮುಕ್ತರು

ಸ್ಫುರಿಪ ಪರಬ್ರಹ್ಮಾನಂ | ದರಸಾನ್ವಿತರಾಗಿ ಹರಿಯನಿನಿತೆಡೆವಿಡದಾರ್|
ಪರಮಸ್ಥಾನದೊಳಿರ್ಪರ | ವರನೆ ಬುಧರ್ ಮುಕ್ತರೆಂದು ಸೊಲ್ಲಿಪರಿಳೆಯೊಳ್ ||

### ಬದ್ಧರು

ಪರದಾರಪರದ್ರವ್ಯನಿ | ಕರಾಪಹಾರಮನೊಡರ್ಚಿ ಸಂಸಾರಮನಾರ್ |
ಪೊರೆವರ್ ಭಗವದ್ವಿಮುಖರ | ವರನೆ ಬುಧರ್ ಬದ್ಧರೆಂದು ಸೊಲ್ಲಿಸುತಿರ್ಪರ್ ||

## 9 ಯಾದವಗಿರಿಮಾಹಾತ್ಮ್ಯ

ಇದು ಸಾಂಗತ್ಯದಲ್ಲಿ ಬರೆದಿದೆ; ಸಂಧಿ 12, ಪದ್ಯ 1219. ನಾರದೀಯಪುರಾಣೋಕ್ತವಾದ ಯಾದವಗಿರಿಯ ಅಥವಾ ಮೇಲುಗೋಟೆಯ ಮಹಿಮೆ ಇದರಲ್ಲಿ ಹೇಳಿದೆ. ಗ್ರಂಥಾರಂಭದಲ್ಲಿ ಯಾದವಗಿರಿನಾಥನ ಸ್ತುತಿ ಇದೆ. ಬಳಿಕ ಕವಿ ಲಕ್ಷ್ಮಿ, ರಾಮಾನುಜ, ಕಡಾಂಬಿಲಕ್ಷ್ಮಣಾಚಾರ್ಯ, ನಾರದ, ಗರುಡ, ವಿಷ್ವಕ್ಸೇನ ಇವರುಗಳನ್ನು ಹೊಗಳಿದ್ದಾನೆ. ಸಂಧಿಗಳ ಕೊನೆಯಲ್ಲಿ ಈ ಪದ್ಯವಿದೆ---

ಇದು ಯದುಗಿರಿಪತಿಪದಪದ್ಮಮಧುಭೃಂಗ | ಚದುರ ಶ್ರೀಚಿಕದೇವನೃಪನ |
ಸದಮಲಾಮಾತ್ಯ ಲಕ್ಷ್ಮೀಶ ಪೇಳ್ದ ಕೃತಿ | ಮುದವೀವುದೊಲಿದು ಕೇಳ್ವರಿಗೆ||

ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ---

ಗಿಳಿ

ತೆನೆವಾಲ ಸವಿಯಬೇಕೆಂದುಲಿಗುಂದದೆ | ಮನದಲಿದ್ದೈತಂದೆಱಗಿ |
ತನಿಸೊಕ್ಕಿ ಸವಿದು ಮೆಲ್ನುಡಿಗಲಿಯುತ್ತಲಿರ್ಪ | ವನುದಿನ ರಾಜಕೀರಗಳು ||

ಪಾಮರಿಯರು

ತಳಿರಡಿಯೆಸೆವಲರ್ಗಣ್ಣ ಪೆಣ್ಗೆಳೆನುಡಿ | ಯುಳಿಗುರುಳೆಳವೆಱೆನೊಸಲ |
ಕೊಳಗುವ ತೊಂಡೆವಾಯ್ದೆಱೆಯ ಪಾಮರಿಯರು | ಗಿಳಿಗಳ ಸೋವುತಲಿಹರು ||

ನರ್ತಕಿ

ಸೆಳೆಮಿಂಚಿನಂತೆ ಪೊಳೆದು ತೋಳ ಥಾಳ ಕಂ | ಗೊಳಿಸೆ ಮೈಸಿರಿ ಸಿರಿವೀಱೆ |
ಅಲರಂಬನ ಪೊನ್ನ ಪುತ್ತಳಿಯೆನೆ ಲಾಸ್ಯ | ದಳವ ತೋಱಿದಳು ಜಾಣ್ಮೆಯಲಿ ||

ಸಮುದ್ರ

ತೆರೆಗಳೆ ಘನ ಮಾನ್ಗಳೆ ಮಿಂಚು ನೆಗೆವ ಶೀ | ಕರ ಮಱೆಮುತ್ತಾಲಿವರಲು |
ಸ್ಫುರಿಪ ಬಾಡಬ ಸಿಡಿಲಾಗೆ ಮೇಘಾಗಮ | ದಿರವ ಪೋಲ್ತುದು ಜಲನಿಧಿಯು ||

ಚಿಕ್ಕದೇವರಾಯನ ಪ್ರತಾಪ

ಬೆಡಗಿನ ಕೀರ್ತಿಯೆನಿಪ ಪಾಲ್ಗಡಲಿ | ತ್ತಡಿಯೊಳು ಬೆಳೆದು ಪರ್ವಿರ್ಪ |
ಕಡುಸೊಬಗಿನ ವಿದ್ರುಮವಲ್ಲಿಯೆನೆ ಸೊಂ | ಪಿಡಿದುದು ನೃಪನ ಪ್ರತಾಪ ||

## 10 ಯದುಗಿರಿ ಮಾಹಾತ್ಮ್ಯ

ಇದೂ ಮೇಲುಗೋಟೆ ಮಹಿಮೆಯನ್ನು ನಿರೂಪಿಸುತ್ತದೆ; ಅದರ್ಕೆ ಗದ್ಯರೂಪವಾಗಿದೆ. ಗ್ರಂಥಾದಿಯಲ್ಲಿ ಕವಿ ಕಡಾಂಬಿಸಿಂಗರಾಚಾರ್ಯನನ್ನು

ಸ್ತುತಿಸಿದ್ದಾನೆ. ಅಧ್ಯಾಯಗಳ ಕೊನೆಯಲ್ಲಿ—ಕರ್ಣಾಟಕವಚನರಚನಾಭಿಧಾನವಾದ ಯದುಗಿರಿಮಾಹಾತ್ಮ್ಯದೊಳ್'-ಎಂದಿದೆ.

11 ವೆಂಕಟಗಿರಿಮಾಹಾತ್ಮ್ಯ

ಇದೂ ಗದ್ಯರೂಪವಾಗಿದೆ; ಆಶ್ವಾಸ 10. ಬ್ರಹ್ಮಾಂಡಪುರಾಣದ ಪುಣ್ಯಕ್ಷೇತ್ರಮಾಹಾತ್ಮ್ಯಖಂಡದಲ್ಲಿ ನಾರದನು ಭೃಗುಋಷಿಗೆ ಹೇಳಿದ ತಿರುಪತಿಯ ಮಹಿಮೆಯನ್ನು ಕವಿ ಕನ್ನಡಿಸಿದ್ದಾನೆ.

12 ಶ್ರೀರಂಗಮಾಹಾತ್ಮ್ಯ

ಇದೂ ಗದ್ಯರೂಪವಾಗಿದೆ; ಅಧ್ಯಾಯ 10. ಇದರಲ್ಲಿ "ಸಕಲಪುರಾಣಸಾರಭೂತವಾದ ಮಹೇಶ್ವರನಾರದಸಂವಾದವಾದ 12000 ಸಂಹಿತೆಗಳುಳ್ಳ ಬ್ರಹ್ಮಾಂಡಪುರಾಣದಲ್ಲಿ ದಶಾಧ್ಯಾಯಪರಿಮಿತವಾದ ಶ್ರೀರಂಗಕ್ಷೇತ್ರದ ಮಾಹಾತ್ಮ್ಯವು" ಹೇಳಿದೆ. ಗ್ರಂಥಾರಂಭದಲ್ಲಿ ರಂಗೇಶಸ್ತುತಿಯಿದೆ. ಬಳಿಕ ಕವಿ ವರದರಾಜ, ಲಕ್ಷ್ಮಿ, 12 ಆಳ್ವಾರುಗಳು, ಭಾಷ್ಯಕಾರ ಇವರುಗಳನ್ನು ಸ್ತುತಿಸಿ ಚಿಕ್ಕದೇವರಾಜನ ಮತ್ತು ತನ್ನ ವಂಶಾವಳಿಯನ್ನು ಹೇಳಿ ಕಥೆಯನ್ನು ಆರಂಭಿಸಿದ್ದಾನೆ. ಗ್ರಂಥದ ಕೊನೆಯಲ್ಲಿ ಈ ಗದ್ಯವಿದೆ—

ಇದು ಸಕಲನೃಪಮಕುಟಮಣಿಗಣರುಚಿರುಚಿರಪದಪಮಳಪದಯುಗನಾದ ಚಿಕದೇವಮಹಾರಾಜೇಂದ್ರಪ್ರೇರಿತ ಕರಿವರದಚರಣಸರಸಿಜಮಧುಕರಾಯಮಾನಾನೂನಕರ್ಣಾಟಕಭಾಷಾಚತುರ ಚಿಕುಪಾಧ್ಯಾಯವಿರಚಿತಮಪ್ಪ ಶ್ರೀರಂಗಮಾಹಾತ್ಮ್ಯದೊಳ್.

ಈ ಗ್ರಂಥದಿಂದ ಚಿಕ್ಕದೇವರಾಯನ ಸ್ತುತಿರೂಪವಾದ ಒಂದು ಪದ್ಯವನ್ನು ತೆಗೆದು ಬರೆಯುತ್ತೇವೆ—

ಸತತಂ ಶ್ರೀಚಿಕ್ಕದೇವೋರ್ವಿಪನೆಸಗುವ ದಾನಾಂಬುವಿಂ ಕೀರ್ತಿವಲ್ಲೀ |
ತತಿ ಭೂಲೋಕಂಗಳಂ ವ್ಯಾಪಿಸಿ ಸುರನಗಮಂ ಪತ್ತಿಯಾವ್ಯೋಮಮಂ ಸ್ಫೋ |
ನ್ನತಿಯಿಂದಂ ಪರ್ಬಿ ತಾರಾಮುಕುಳನಿಕರಮಂ ಲಕ್ಷ್ಮಮತ್ತದ್ವಿರೇಫಾಂ|
ಚಿತಚಂದ್ರಚ್ಛಂದ್ರಪುಷ್ಪಸ್ತಬಕಮನಿರದಾಂತೇಂ ಜಗದ್ವ್ಯಾಪ್ತಮಾಯ್ತೋ ||

13 ಶೇಷಧರ್ಮ

ಇದೂ ಗದ್ಯರೂಪವಾಗಿದೆ; ಅಧ್ಯಾಯ 25. ಹರಿವಂಶಕಲಿತವಾದ ಆಶ್ವಮೇಧಿಕಪರ್ವದಲ್ಲಿ ಉಕ್ತವಾದ ಶೇಷಧರ್ಮವನ್ನು ಕವಿ ಚಿಕ್ಕದೇವರಾಜನ ಸಂತೋಷಾರ್ಥವಾಗಿ ಕನ್ನಡಿಸಿದಂತೆ ಹೇಳುತ್ತಾನೆ. ಗ್ರಂಥಾರಂಭದಲ್ಲಿ ವಿಷ್ಣುಸ್ತುತಿ ಇದೆ.

## 14 ಕಾಮಂದಕನೀತಿ

ಇದು ಸಂಸ್ಕೃತಕಾಮಂದಕನೀತಿಗೆ ಗದ್ಯರೂಪವಾದ ಕನ್ನಡಟೀಕೆ; ಆಶ್ವಾಸ 8. ಈ ಟೀಕೆಗೆ ಉಪಾಧ್ಯಾಯನಿರಪೇಕ್ಷಾ ಎಂದು ಹೆಸರು. ಗ್ರಂಥಾದಿಯಲ್ಲಿ ವಿಷ್ಣುಸ್ತುತಿ ಇದೆ. ಬಳಿಕ ಕವಿ ಲಕ್ಷ್ಮಿ, ರಾಮಾನುಜ ಇವರುಗಳನ್ನು ಸ್ಮರಿಸಿದ್ದಾನೆ. ಆಶ್ವಾಸಗಳ ಕೊನೆಯಲ್ಲಿ ಈ ಗದ್ಯವಿದೆ—

ಇದು ಸತತನತಶತಧೃತಿಶಿತಿಗಳಶತಮುಖಮುಖಸುರವಿತತಿವಿಶಕಕೋಟೀರಕೋಟೀತಟಘಟಿತಜಟುಲಹರಿನ್ನೀಲಮಣಿಸ್ತೋಮಾಭಿರಾಮಧಾಮರೋಲಂಬಜಾಲವೇಲ್ಲಿತಕಂದಳದರವಿಂದಾಮಂದಸುಂದರಮಂಗಳರಂಗನಾಥಚರಣಸುರುಚಿರನಖಮಯೂಖನಿಸ್ತಂದ್ರಸಾಂದ್ರಚಂದ್ರಿಕಾಲೋಲಲೀಲಾಚಕೋರ ಯಶೋವಿಮಲಸುಮಸಮುದಯಸುರಭಿಹರಿದಂತಾಪ್ರತಿಮಪ್ರತಾಪಪ್ರಚುರಪ್ರಭಾಪಲ್ಲವಸಮುಲ್ಲಸಿತಸಕಲವಿಬುಧನಿಕರಸುಕರಮನೋರಥಪ್ರದಫಲಲಲಿತಚಿಕದೇವರಾಜರಾಜಿತಾನಲ್ಪಕಲ್ಪತರುಸಮಾಶ್ರಿತ ಲಕ್ಷ್ಮೀಪತಿಶರ್ಮ್ಯಾಭಿಧಾನ ಚಿಕುಪಾಧ್ಯಾಯಸಚಿವಶಿರೋಮಣಿವಿರಚಿತಮಪ್ಪ ಕಾಮಂದಕನೀತಿಯೊಳ್

ಈ ಗ್ರಂಥದಿಂದ ಚಿಕ್ಕದೇವರಾಯನ ಖಡ್ಗವನ್ನು ವರ್ಣಿಸುವ ಒಂದು ಪದ್ಯವನ್ನು ತೆಗೆದು ಬರೆಯುತ್ತೇವೆ—

ನಂದಕಮುರುಕೀರ್ತಿಲತಾ । ಕಂದಕಮತಿದರ್ಪಿತಾರಿಭೂಭೃದ್ವನಿತಾ ।
ಕ್ರಂದಕಮಾಶ್ರಿತವಿಬುಧಾ । ನಂದಕಮೀಖಡ್ಗಿಮವನಿಸಂಕ್ರಂದನನಾ ॥

## 15 ಶುಕಸಪ್ತತಿ

ಇದೂ ಗದ್ಯರೂಪವಾಗಿದೆ; ಗ್ರಂಥಸಂಖ್ಯೆ 7000. ಇದು ಸಂಸ್ಕೃತ ಶುಕಸಪ್ತತಿಯ ಭಾಷಾಂತರವು. ಗ್ರಂಥಾದಿಯಲ್ಲಿ ವರದರಾಜಸ್ತುತಿ ಇದೆ. ಬಳಿಕ ಕವಿ ಲಕ್ಷ್ಮಿ, ವಿಷ್ವಕ್ಸೇನ, ಅನಂತ, ಗರುಡ, ಶಂಖ, ಚಕ್ರ, 12 ಆಳ್ವಾರುಗಳು, ರಾಮಾನುಜ, ಉಭಯವೇದಾಂತಂಗಳನಾನತಜನಕುಪದೇಶಂಗೈವ ಕಡಾಂಬಿ ಸಿಂಗರಾಚಾರ್ಯ ಇವರುಗಳನ್ನು ಸ್ಮರಿಸಿದ್ದಾನೆ. ಆಮೇಲೆ ಈ ಪದ್ಯವನ್ನು ಹೇಳಿ ಕಥೆಯನ್ನು ಆರಂಭಿಸಿದ್ದಾನೆ —

ಶುಕಸಪ್ತತಿಯಂ ಪದೆದಾ । ಸುಕವಿತ್ವಧುರೀಣ ಚಿಕ್ಕುಪಾಧ್ಯಾಯಸುಧೀ ।
ಮುಕುಳಿಂ ಕನ್ನಡದಿಂದಾ । ಧೈಕದಂಬಂ ಮೆಚ್ಚೆ ಪೇಟಬುದ್ಧ್ಯೋಗಿಸಿದಂ ॥

ಗ್ರಂಥಾಂತ್ಯದಲ್ಲಿ ಈ ಗದ್ಯವಿದೆ—

ಇದು...........ಯಾದವಗಿರಿನಾರಾಯಣಪಾದಸೇವಾಧುರೀಣ.......
ಚಿಕದೇವಮಹಾರಾಜಕೃಪಾಲಬ್ಧಸರ್ವಸ್ವತಂತ್ರ ಶ್ರೀಚಿಕುಪಾಧ್ಯಾಯವಿರಚಿತಮಪ್ಪ
ಶುಕಸಪ್ತತಿಯೊಳ್.

## 16 ಪಶ್ಚಿಮರಂಗಮಾಹಾತ್ಮ್ಯ

ಇದು ಸಾಂಗತ್ಯದಲ್ಲಿ ಬರೆದಿದೆ; ಸಂಧಿ 5, ಪದ್ಯ 317. ಇದರಲ್ಲಿ ಬ್ರಹ್ಮಾಂಡಪುರಾಣದೊಳಗೆ ಶಂಕರನಾರದಸಂವಾದರೂಪವಾದ ಶ್ರೀರಂಗ ಪಟ್ಟಣದ ಮಾಹಾತ್ಮ್ಯವು ಹೇಳಿದೆ. ಗ್ರಂಥಾದಿಯಲ್ಲಿ ವರದರಾಜಸ್ತುತಿ ಇದೆ. ಬಳಿಕ ಕವಿ ರಂಗನಾಯಕಿ, ಅನಂತ, ಗರುಡ, ವಿಷ್ವಕ್ಸೇನ 12, ಆಳ್ವಾರು ಗಳು, ರಾಮಾನುಜ, ಕಡಾಂಬಿ ಸಿಂಗರಾಚಾರ್ಯ ಇವರುಗಳನ್ನು ಸ್ಮರಿಸಿ ದ್ದಾನೆ. ಈ ಗ್ರಂಥದಿಂದ ಒಂದು ಪದ್ಯವನ್ನು ತೆಗೆದು ಬರೆಯುತ್ತೇವೆ—

### ವಿಷ್ಣುಸ್ತುತಿ

ಸರ್ವಗ ಸರ್ವೋತ್ಕೃಷ್ಟ ಸರ್ವಾತ್ಮಕ | ಸರ್ವಾರಾಧ್ಯನೆಂದೆಸಿಸಿ |
ಸರ್ವಸುಲಭನೆಂದೆನಿಸಿ ತೋರ್ಪನವನೀತ | ಸೊರ್ವನೆ ಸಕಲಜೀವರಿಗೆ ||

## 17 ಶೃಂಗಾರಶತಕದ ಸಾಂಗತ್ಯ

ಪದ್ಯ 102. ಇದರಲ್ಲಿ "ಕೃಷ್ಣನ ರೂಪವನೀಕ್ಷಿಸಿದ ಸ್ತ್ರೀಯರ ಸರಸಸಲ್ಲಾಪದಿರವನೊರೆದಪೆನು" ಎಂದು ಕವಿ ಹೇಳುತ್ತಾನೆ. ಇದ ರಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ವಿರಹದಿಂದಒಳೆಗೆ ಕತ್ತುರಿ ದತ್ತುರಿ | ವರಚಂದನವಿಂಧನವು |
ಉರ:ವೀಣೆಯುದು ಸಾಣೆ ಕಪ್ಪುರ ಕಾಟ್ಪುರ | ದಿರವಾಂತಿದೆ ಕೃಷ್ಣ ಸಲಹೋ ||
ಕುರುಳಬೆಡಂಗಿಯ ಕುಂಕುಮಗಂಧಿಯು | ಸರಸಯುತೆಯ ಸೌಖ್ಯವತಿಯು |
ಎರಳೆಗಣ್ಣೆ ಚುಯುಳ ಎಳಮೆವೆತ್ತಸೆವಳ | ಪರಿಯ ಕೃಷ್ಣನೆ ಬಲ್ಲನೈಸೆ ||
ಕೂಡು ಕುಮುದನೇತ್ರೆ ನೋಡು ನಲ್ನುಡಿಗಾತಿ | ಯಾಡಿಚಿದಪ್ಪೆನ್ನಸಿಯಳೆ |
ಪೋಡಿಯನುಳಿ ಮೋಹನಾಂಗಿ ಪಿಂಬ ಕೃಷ್ಣ | ನಾಡಿಸಿಸಂತಾಪದಿಪರೇ ||

## 18 ರಂಗಧಾಮಸ್ತುತಿ ಸಾಂಗತ್ಯ

ಪದ್ಯ 102. ಇದು ಶ್ರೀರಂಗನಾಥನ ಸ್ತುತಿರೂಪವಾಗಿದೆ; ಪಾದಾದಿಕೇ ಶಾಂತವರ್ಣನೆಯನ್ನು ಒಳಕೊಂಡಿದೆ. ಇದರಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ—

ರಂಗ ನಿನ್ನಯ ರಂಗುವಡೆದ ಜಂಘೆಯ ಚೆಲ್ವು | ಮುಂಗುಡಿವರಿದು ಮುದದೊಳು|
ಹಿಂಗದೆ ಹಿಗ್ಗಿರಿದಾಗಿ ನಿನ್ನಯ ಹೃದ | ಯಾಂಗಣದೊಳಗಿರುತಿರ್ಕೆ ||
ಬೀವಿನುಡಿಗೆಯುಟ್ಟು ಜಾಯ ಬೀಗವನಿಟ್ಟು | ಕಾವಿಕಪ್ಪರೆಕಂಠೆಯೊಂತು |
ದೇವತಾಂಶಗಳಿಂ ಮುಕ್ತಿವಡೆವೆನೆಂಬ | ಗಾವಿಲರ್ಗೇಂ ಗತಿ ರಂಗ ||
ಪಂದಲೆವಜ್ಜನ ಪಸಿದೊವಲ್ಲಳಿದವ | ತಂದುಗೊರಲನ ಮೂಲೆಗನ |
ಸೌಂದರ್ಯಶಾಲಿರಂಗಗೆ ಸಾಟಿಯೆಂಬಾ | ಮಂದಭಾಗ್ಯರ ಮಾತು ನಿಜವೇ ||
ಸಿರಿ ಮಂಜಿನ ಪರಿ ಯೌವನ ಸುರಚಾಪ | ದಿರವಾಯು ನೀರ ಬೊಬ್ಬುಳಿಕೆ |
ತರುಣಿಮಕ್ಕಳು ಮೇಘದೊಡ್ಡಣೆಯೆಂಬೀ | ಯರುಹಿವಿತ್ತು ಪೊರೆ ರಂಗಧಾಮ ||

## 19 ಪಶ್ಚಿಮರಂಗಸಾಂಗತ್ಯ

ಪದ್ಯ 101. ಇದು ಶ್ರೀರಂಗಪಟ್ಟಣದ ರಂಗನಾಥದೇವರ ಸ್ತುತಿರೂಪವಾಗಿದೆ; ಕವಿ "ಶ್ರೀಪತಿಯ ಸ್ತುತಿಯ ಸಾಂಗತ್ಯಶತಕವಿದು ಬುಧರ್ಗೆ ಸುಶ್ರಾವ್ಯ" ಎನ್ನುತ್ತಾನೆ. ಇದರಿಂದ ಒಂದೆರಡು ಪದ್ಯಗಳನ್ನು ತೆಗೆದು ಬರೆಯುತ್ತೇವೆ---

ಮಡುವಿನೊಳಗೆ ನೆಗಳೊಡನೊಡಸಂಘ್ರಿಯ | ನಡಸಿ ನುಂಗಲು ... ಗದೊಡೆಯ |
ಕಡೆಹಾಯಿಸೆನೆ ಕಾದ ಹರಿಯಲ್ಲದಿಲ್ಲೆಂದು | ಮುಡಿಗಿಕ್ಕಿದಪೆನಾಂಪರೊಳರೇ ||
ಜಗನ್ಮಯನನು ಪ್ರದಕ್ಷಿಣಮಾಡುವುದೆಂತು | ಸೊಗಸಾದ ಸರ್ವತೋಮುಖಗೆ |
ಮಿಗೆ ವಂದನೆಗೈವುದಾವ ದಿಕ್ಕಿನಲಿ ನು | ಮ್ಮಗೆ ನೀನೆ ಗತಿಯೆಂಬುದುಚಿತ ||

## 20 ಅಕ್ಷರಮಾಲಿಕಾಸಾಂಗತ್ಯ

ಪದ್ಯ 10?. ಇದು ರಂಗನಾಥದೇವರಮೇಲೆ ಅಕಾರಾದಿಯಾಗಿ ಕ್ಷಕಾರಪರ್ಯಂತ ಅಕ್ಷರಮೊದಲಾಗಿಯೂ ಗುಣಿತದಿಂದಲೂ ಕಲ್ಪಿಸಿ ಸ್ತುತಿಯಾಗಿ ಹೇಳಿದ ಸಾಂಗತ್ಯ; ಕವಿ "ನಾಮಸಂಕೀರ್ತನವಕ್ಷರವಾದಿಯಾದೀ ಮಹಾಗುಣಿತದಿಂದೊರೆದ ಮನೋಹರಸಾಂಗತ್ಯ" ಎನ್ನುತ್ತಾನೆ[1]. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ---

ಅನಘನನಪ್ರಮೇಯನನಪ್ರತಿಮನ | ನನಿಮಿಷಾಧಿಪನನಚ್ಯುತನ |
ಅನುಪಮಗುಣನನಭೇದ್ಯವಿಕ್ರಮನನಾ | ನನುಸರಿಸುವೆನನವರತ ||

---

1 ಈ ಸಾಂಗತ್ಯದ ಹಿಂದೆ ಒಂದು ಪ್ರತಿಯಲ್ಲಿ ಕೇಶವನಾಮ ಎಂಬ ನಾಮದ ಸಾಂಗತ್ಯವಿದೆ, ಪದ್ಯಗಳು 26 ಅದರಮೇಲೆ ಇದು ಆರಂಭಿಸುತ್ತದೆ. ಈ ನಾಮದ ಸಾಂಗತ್ಯವೂ ಚಿಕ್ಕುಪಾಧ್ಯಾಯಕೃತವಾಗಿರಬಹುದು.

ಶವರನೆನಿಪ ದಶಕಂಠಾಸುರನ ಕಂ | ಠರವ ದಿಕ್ಪತಿಯ ಕಂಠಣೆಸೆ |
ಶವಣಿಗೆಯ್ದವನ ಕಂಠವ ಲುಂಠಿಸಿದ ಕಂಠೀ | ರವಮೂರ್ತಿಗಾನೆಱಗುವೆನು||

ಗುಣಿತ

ಚಾರಿವರಿದು ಚಿಂತಿಸಿ ಚೀಱುತಱುಚುತ | ಚೂರಿಸದಿಚ್ಚೆ ಚೈತನ್ಯ |
ಚೋರತ್ವವೆತ್ತಿದೆಯೆನೆ ಚೌದಂತನ ಕಾದು | ದಾರ ಚಂಡಚಕ್ರಧರ ಜಯತು ||
ಟಾಕಿನ ಜಟಿ 1 ಟೀಕಮೋಟುಚಾಟೂರಿಸಿ | ಟೇಕವೆನಿಸಿ ನೇಟೈಸಿ |
ಟೋಕಿಸಿ ಟೌಕಿಸಿ ಟಂಕಿಪ ಟಕ್ಕರ | ದೇಕೆ ಪುಟ್ಟಿಪರೋ ಶ್ರೀಹರಿಯೋ ||

21 ರಂಗಧಾಮಪುರುಷವಿರಹದ ಸಾಂಗತ್ಯ

ಪದ್ಯ 102. ಇದು ರಂಗನಾಥದೇವರ ವಿರಹಸೂಚಕವಾಗಿ ವ್ಯಂಗ್ಯೋಕ್ತಿಯಿಂದ ರಚಿತವಾಗಿದೆ. ಇದರಿಂದ ಒಂದೆರಡು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ---

ನಳಿತೋಳ ನಲ್ಲಳ ಬೆರಳಬೆಡಂಗಿಸು | ತೊಳಪ ಸೆಳ್ಳುಗುರಿನಸಿಯುಳ |
ಬೆಳುನಗೆವೆತ್ತಿನ್ನ ರಂಗ ಬಾರೆಂಬ ಕೋ | ಮಳೆಯ ಕೋರಿಕೆಯೆಂದಾದಪುದೋ||

ಕರವ ಗಲ್ಲದೊಳಿಟ್ಟು ಕಡುಬೇವಸವಟ್ಟು | ಪರಿಯಿಸಿ ಕಣ್ಣೀರ ಪೊನಲ |
ಮಱುಗಿ ರಂಗ ಎಂಬ ಮಾನಿನಿರನ್ನೆಯ | ಬಱಸೆಳೆದಪ್ಪುವುದೆಂದೋ ||

22 ರಂಗಧಾಮನೀತಿಶತಕದ ಸಾಂಗತ್ಯ

ಪದ್ಯ 101. ಇದು ರಂಗನಾಥದೇವರ ಸ್ತುತಿರೂಪವಾಗಿ ನೀತಿಯನ್ನು ಬೋಧಿಸುತ್ತದೆ. ಇದರಿಂದ ಒಂದೆರಡು ಪದ್ಯಗಳನ್ನು ತೆಗೆದು ಬರೆಯುತ್ತೇವೆ---

ಪರಧನಕೆಳಸದೆ ಪರಸತಿಗೊಗ್ಗದೆ | ದುರಿತತತಿಯ ದೂರೀಕರಿಸಿ |
ಬಱುಬನೆಂದೆನಿಸಿ ತಾ ಬಲ್ಲವನಪ್ಪುದು | ಸಿರಿರಂಗ ನಿನ್ನೊಲವಲ್ತೇ ||

ನಿರ್ಮಳನೆನಿಸಿ ನೀತಿಯ ಮಿಾಱದೆ ದು | ಷ್ಕರ್ಮಕೆಱಗದೆ ಕೇಡಿಗರ |
ಪೆರ್ಮೆಗೆ ಪೆರ್ಚಾದಂಗೆಡರ್ಬರೆ ಮುಂಗೈದ | ಕರ್ಮವದಲ್ತೆ ರಂಗೇಶ ||

ಸಿರಿಗೆಯುದಾರತೆ ವಿದ್ಯಾಪರಿಣತಿ | ಗುಱ ವಿನಯವು ಬಾಳ್ಕೆಯೆಡೆಗೆ |
ಪರಹಿತಮೆಂಬುದು ಪಶ್ಚಿಮರಂಗೇಶ | ಪರಮಾಭರಣಮೆನಿಸದೇ ||

---

1. ಜಟಿ.

## 23 ಚಿತ್ರಶತಕಸಾಂಗತ್ಯ

ಇದರಲ್ಲಿ ಕನ್ನಡಭಾಷೆಯವಿಷಯವಾಗಿ ಕೆಲವು ಚಮತ್ಕಾರೋಕ್ತಿಗಳಿವೆ; ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ---

ಮೂಱಡಿನೆಲಕಾಗಿಯೆಳೆಬಾನಳೆದು ಮುಗಿ | ಲ್ವೇರಗೈಸಿರಿಯಿಹಾಯು ಕೊಡವೆ |
ಕೂರನೆನಿಸಿ ಚುಕ್ಕಿಗುವರರನೆಱ್ಬದ | ಕಾಗೊತಲಸೆ ಎನ್ನ ಸಲಹು ||
ಹುರಿಯೋಡ ಸಿರಿವಂತಿಗೆಯೊಂದೆಂಬುದು | ನರನ ಪಾರುವನೆಂನೆಂಬುದು |
ಮರಗೆತ್ತುವಸನೋಜನೆಂದೆಂಬುದೇನ | ಚ್ಚರಿ ರಂಗ ಕನ್ನಡದೊಳ್ಪು ||
ಸರಸನನರಸನೆಂಬುದು ಪೂರ್ಣಗೃಹವನು | ತರವುನೆಯೆಂದುಸುರುವುದು |
ನರಪಶುವೂರನವರವುಗನೆಂಬುದೇ | ನೊರೆ ರಂಗ ಕನ್ನಡವೊಳ್ಪ ||
ಮುಳ್ಳಿಂಗೆ ಮೊನೆಯುಂಟೆ ಎಳ್ಳಿಂಗೆಣ್ಣೆಯುದುಂಟೆ | ಕಳ್ಳಿಂಗೆ ಮೈಮಱಹುಂಟೇ |
ಜಳ್ಳಿಂಗೆ ಬೆಳೆಯುಂಟೆ ಜಡಕೆ ನೆನಹುಮುಂಟೆ | ಒಳ್ಳಿತೀಗುಟ್ಟಲಿ ರಂಗ ||
ಮುತ್ತಿರೆ ನರೆಯೊಂಬ...... | ಕತ್ತಿಯು ಕಂಡು ಗೇಣೆಂಬ |
ಪತ್ತಿಯು ನೂಲೆಂಬ ಕನ್ನಡದೊಳು ರಂಗ | ಮುತ್ತಿನಮಾತು ಪಾಸಟಿಯೇ ||
ಮಾರಿಗಿಗ್ಗೈಯೆಂಬ ನಾರಿಗೆ ಕೊಪ್ಪೆಂಬ | ಸಾರಿಗೆ ಹಾಸಂಗಿಯೆಂಬ |
ಕೇರಿಗೆ ಹೊಲಕೆಂಬ ಕನ್ನಡಮಾತಿನ | ದಾರಿ ಬೇಱತ್ತೆ ರಂಗೇಶ ||
ತೊಡರಾಭರಣವೆಂಬರ್ ಪಿಡಿ ಕರಿಣಿಯುನೆಂಬರ್ | ತಡೆಯೆಂಬರುರಗಮಂತ್ರವನು |
ಸುಡಿಯೆಂಬರು ಸಿಂದೆಯು ಕನ್ನಡದೊಂದು | ಬೆಡಗದು ಬೇಱೆ ರಂಗೇಶ ||

## 24 ರಂಗಸ್ವಾಮಿಯ ಶೃಂಗಾರಸೂತ್ರೋದಾಹರಣೆ

ಇದರಲ್ಲಿ ರಂಗಸ್ವಾಮಿಯಮೇಲೆ ಶೃಂಗಾರವಿಷಯವಾಗಿ ಹೇಳಿದ ಸೂತ್ರಪದಗಳಿವೆ. ಹಾಡುಗಳಲ್ಲಿ ಚಿಕ್ಕದೇವರಾಯನ ಮತ್ತು ರಂಗನಾಥನ ಅಂಕಿತಗಳಿವೆ. ಸೂತ್ರಗಳು ಕಂದರೂಪವಾಗಿವೆ. ಈ ಗ್ರಂಥದಿಂದ ಕೆಲವು ಸೂತ್ರಗಳನ್ನು ತೆಗೆದು ಬರೆಯುತ್ತೇವೆ---

ಕ್ರಮದಿಂ ದ್ವಾದಶವರ್ಷ | ಪ್ರಮಾಣದೊಳ್ ಮುಗ್ಧೆ ಮಧ್ಯೆ ತದ್ದ್ವಿಗುಣದಿನಾ |
ಸಮಕಟ್ಟಿಂದಂ ತ್ರಿಗುಣ | ಪ್ರಮಿತಾಬ್ದದೊಳಂ ಪ್ರಗಲ್ಭೆಯೆನೆ ಪೆಸರ್ವಡೆಗುಂ ||
ನಯನರತಿ ಚಿಂತೆ ಸಂಕ | ಲ್ಪಯುತಂ ಜಾಗರತೆ ಕಾರ್ಶ್ಯಮರತಿಯು ಮಾನಂ |
ಪ್ರಿಯೆಯ ವಿಮೋಹಂ ಮೂರ್ಛೆ | ಶ್ರಯಮರಣಮಿವಿಂತವಸ್ಥೆ ದಶವಿಧಮಕ್ಕುಂ ||

25 ರಂಗನಾಯಕಶತಕಶಾಯಕೀಸ್ತುತಿಸಾಂಗತ್ಯ

ಇದರಲ್ಲಿ 49 ಪದ್ಯಗಳಿವೆ. ಇದೂ ಏತತ್ಕವಿಕೃತವಾಗಿರಬಹುದೆಂದು ತೋರುತ್ತದೆ. ಇದರೊಳಗಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ—

ಪಟುನುಡಿಮಡದಿಯ ಸಿರಿಮುಡಿಯೆಡೆಯೊಳು | ತೊಳಗುವ ತೊಂಡಿಲಮಣಿಯ |
ಜಲಧಿಸುತೆಯ ಕೊರಲ್ವಚ್ಚವನೆನ್ನದೇ | ಯೊಳಗಾವಗಮೊಂತಿಹೆನು ||

ಪೊಳೆವ ಜಡೆಯ ಪೊಗರೊಗುವ ನುಣ್ಗಲ್ಲದ | ಮೊಳೆವ ಮೊಗ್ಗೆಯ ಮೊನೆವಲ್ಲ |
ತಳಿರ ತುಟಿಯ ತಾವರೆಗಣ್ಣಿನ ಮೊಗ | ಕೆಳಸಿ ಮುಂಬರಿದು ಮುದ್ದಿಪೆನು ||

ಅಡಿಯ ಕೆಂಪಿಗೆ ನುಣ್ದೊಡೆಯ ಬಣ್ಪಿಗೆ ಪೊ | ನ್ನುಡೆಯ ಪೆಂಪಿಗೆ ಪೂಡಳಿದ |
ಪೊಡೆಯ ಕೆಂಪಿಗೆ ಮೊಗದೆಡೆಯ ಸೊಂಪಿಗೆ ಸಿರಿ | ಮುಡಿಯ ಕಂಪಿಗೆ ಮೋಹಿ
ಸುವೆನು ||

ಜಲಧಿಸುತೆಯ ಪ್ಯೆಯ ಪೊಗರ ಕುಂದಣದೊಂದು | ಕಳೆಯೊಳಿಸೆವ ನೀಲಮಣಿಯ |
ಪಟುನುಡಿವೆಂಡಿರ ತೊಂಡಿಲನೆನ್ನದೇ | ವಳಿಕುಭರಣೆಯೊಳಿಡುವೆನು ||

ಜಲನೆಪ್ಪಲ್ಲದ ಮಿಂಚುವಳ್ಳಿಯನೊಳಕೊಂಡ | ಕಳೆವೆತ್ತ ಕಾರ್ಮುಗಿಲಂತೆ |
ಜಲನಿಧಿಸುತೆಯ ಸೇರುವೆಯೊಳಿಂದೊಪ್ಪುವ | ನಳಿನಾಕ್ಷಗೆ ನಮಿಸುವೆನು ||

ಜಡೆನು ಜಾಣನು ಒಡೆಪನು ಬಲ್ಲಿದನಾ | ಳೊಡೆಯನೆಂಬೀಭೇದಗಳ |
ಕುಡುವುರ್ವಿನ ಕುಣಿಹದೊಳಿಸಗುವ ಸಿರಿ | ಮಡದಿಯ ಮಹಿಮೆಗೊಕ್ಕಿಹೆನು ||

ಪೊಂಗುವಿಂಗಡಲಿನುತ್ತುಂಗತರಂಗದ | ಪಾಂಗಿನಪಾಂಗವೀಕ್ಷಣೆಗೆ |
ಮಂಗಳದೇವತೆಗೆಱಗುವೆ ಪಶ್ಚಿಮ | ರಂಗನಾಚ್ಚಾರಮ್ಮನಿಗೆ ||

26 ಶೃಂಗಾರದ ಹಾಡುಗಳು

ಇದರಲ್ಲಿ 6 ಹಾಡುಗಳಿವೆ; ಚಿಕ್ಕದೇವರಾಜನ ಸ್ತುತಿರೂಪವಾಗಿವೆ.

27 ತಿರುವಾಯ್ಮೊಳಿಟೀಕೆ

ಇದು ನಮ್ಮಾಳ್ವಾರೆಂಬ ಶಠಕೋಪಯೋಗಿಯಿಂದ ರಚಿತವಾದ ತಿರುವಾಯ್ಮೊಳಿಯೆಂಬ ದ್ರಾವಿಡಪ್ರಬಂಧದ ವ್ಯಾಖ್ಯಾನ. ಕೊನೆಯಲ್ಲಿ ಈ ಪದ್ಯವಿದೆ—

ಅರವಿಂದಾಂಬಕಭಕ್ತಾ | ಗ್ರೇಸರಂ ಚಿಕದೇವನಸಚಿವಚಿಕುಪಾಧ್ಯಾಯಂ |
ತಿರುವಾಯಿಮೊಳಿಗೆ ಟೀಕಂ | ವಿರಚಿಸಿದಂ ವಿಶದಮಾಗೆ ಕನ್ನಡದಿಂದಂ ||

ಈ ಗ್ರಂಥದಿಂದ ಒಂದು ಪದ್ಯದ ಟೀಕೆಯನ್ನು ತೆಗೆದು ಬರೆಯುತ್ತೇವೆ—

ಪ್ರಥಮದಶಕದಲ್ಲಿ ಪರತ್ವಮಂ ಪೇಟುತ್ತಲಿದ್ದಾರೆ. ಪ್ರಥಮದಶಕದ ಪ್ರಥಮಗಾಥೆಯಲ್ಲಿ ಆಳ್ವಾರ್ ಸಮಸ್ತಕಲ್ಯಾಣಗುಣಾಕರನಾದ ಮಹೋಪಕಾರಕನಾದ ನಿತ್ಯಸೂರಿನಿರ್ವಾಹಕನಾದ ದಿವ್ಯಮಂಗಳವಿಗ್ರಹಯುಕ್ತನಾದ ಸ್ವಾಮಿಯ ಪಾದಾರವಿಂದಮನಾಶ್ರಯಿಸು ಎಂದು ತನ್ನ ಮನಮಂ ನಿಯೋಗಿಸುತ್ತಲಿದ್ದಾರೆ. ಉಯರ್[1]. ಇತರಾನಂದಾತಿಶಯಮಸತ್ಕಲ್ಪಮಪ್ಪಂತತಿಶಯಿತಮಾದಾನಂದಮುಳ್ಳವನಾವನೋ, ಅಜ್ಞಾನಂ ಪೋಪಂತೆ ಪ್ರೀತಿರೂಪಮಾಗಿರ್ಪ ಜ್ಞಾನಮಂ ಕೊಟ್ಟು ಕೃಪೆಯಂ ಮಾಡಿದವನಾವನೋ, ವಿಸ್ಮೃತಿಯಿಲ್ಲದಿರ್ಪ ನಿತ್ಯಸೂರಿಗಳ್ಗೆ ಸ್ವಾಮಿಯಾಗಿರ್ಪವನಾವನೋ, ಆತನ ಆಶ್ರಿತದುಃಖನಿವರ್ತಕಮಾದ ಜ್ಯೋತಿರ್ಮಯಮಾದ ಚರಣಾರವಿಂದಂಗಳನು ನಮಸ್ಕರಿಸಿ ಎಲೆಮನವೆ ಸ್ವರೂಪಸತ್ತೆಯಂ ಪೊರ್ದು—ಎಂದು ಪೇಟ್ದಾರ್.

ಈತನ ಉಳಿದ ಗ್ರಂಥಗಳು ನಮಗೆ ದೊರೆತಿಲ್ಲ.

ನಮಗೆ ದೊರೆತ ಸಾಂಗತ್ಯರೂಪವಾದ ಮದನಮೋಹಿನಿಯಕಥೆಯ ಒಂದು ಪ್ರತಿಯ ಕೊನೆಯಲ್ಲಿ

ತೆರಕಣಾಂಬಿಯ ರಂಗಪಂಡಿತರಾತ್ಮಜ | ನೊರೆದ ಮದನಮೋಹಿನಿಯಕಥೆ |
ಭಕ್ತವತ್ಸಲೆ ಮಹಾಲಕ್ಷ್ಮಿಯ ಸೇವಕ | ಲಕ್ಷ್ಮೀಪತಿ ಪೇಟಿದನಿದ ||

ಎಂದಿರುವುದರಿಂದ ಈ ಗ್ರಂಥವೂ ಏತತ್ಕವಿಕೃತವೆಂದು ತೋರುತ್ತದೆ. ಇದರಲ್ಲಿ ಸಂಧಿ 11 ಪದ್ಯಗಳು 887 ಇವೆ.

---

## ರಂಗನಾಥ. ಸು. 1675

ಈತನು ಅನುಭವಾಮೃತವನ್ನು ಬರೆದಿದ್ದಾನೆ. ಇವನು ಬ್ರಾಹ್ಮಣಕವಿಯೆಂದು ತೋರುತ್ತದೆ. ಇವನ ತಂದೆ ಸಹವಾಸಿವಂಶದ ಮಹಲಿಂಗದೇವ; ಗುರು ಪರಮಹಂಸಪರಿವ್ರಾಜಕಾಚಾರ್ಯ ಸಹಜಾನಂದ. ಇವನಿಗೆ ರಂಗಾವಧೂತ ಎಂಬ ಹೆಸರೂ ಉಂಟು. ತನ್ನ ಗ್ರಂಥವನ್ನು ಶ್ರೀಗಿರಿಯ

---

1. ಉಯರ್ವಱವುಯರ್ನಲಮುಡೈಯವನ್ ಯವನವನ್ |
ಮಯರ್ವಱ ಮದಿನಲಮರುಳಿನನ್ ಯವನವನ್ |
ಅಯರ್ವಱುಮಮರರ್ಗಳದಿಪತಿ ಯವನವನ್ |
ತುಯರಱುಶುಡರಡಿ ತೊಱುದೆೞ್ ಮನನೇ ||
ಮೇಲೆ ಈ ಪದ್ಯದ ಆದಿಪದವನ್ನು ಮಾತ್ರ ಹೇಳಿ ವ್ಯಾಖ್ಯಾನವು ಬರೆದಿದೆ.

ಮಲ್ಲಿಕಾರ್ಜುನದೇವರ ಅಂಕಿತದಲ್ಲಿ ಬರೆದಿದ್ದಾನೆ. ಇವನ ಗುರು ಭಕ್ತಿರಸಾಯನಕರ್ತೃವಾದ ಸಹಜಾನಂದನೇ (ಸು. 1650) ಆಗಿರಬಹುಗೆಂದು ತೋರುತ್ತದೆ. ಹಾಗಿದ್ದಪಕ್ಷದಲ್ಲಿ ಕವಿಯ ಕಾಲವು ಸುಮಾರು 1675 ಆಗಬಹುದು.

ಇವನ ಗ್ರಂಥ

## ಅನುಭವಾಮೃತ

ಇದು ಭಾಮಿನೀಷಟ್ಪದಿಯಲ್ಲಿ ಬರೆದಿದೆ; ಅಧ್ಯಾಯ 11, ಪದ್ಯ 801. ಇದರಲ್ಲಿ "ಅಖಿಳವೇದಾಂತಾರ್ಥವನು ಸಂಗ್ರಹಿಸಿ ಪೇಳುವೆ ಸಕಲರಿಗೆ ತಿಳಿವಂತೆ" ಎಂದು ಕವಿ ಹೇಳುತ್ತಾನೆ; ಪ್ರತಿಪಾದಿತವಾದ ವಿಷಯಗಳು ಅಧಿಕಾರನಿರ್ಣಯ, ವೈರಾಗ್ಯ, ತ್ವಂಪದನಿರ್ಣಯ, ತತ್ಪದನಿರ್ಣಯ, ಅಸಿಪದನಿರ್ಣಯ, ಸಪ್ತಭೂಮಿಕೆಗಳು, ಪರಮಾತ್ಮಪದನಿರ್ಣಯ, ಮಾಯಾಮಿಥ್ಯಾತ್ವ, ಜೀವತ್ರಯ, ಜೀವನ್ಮುಕ್ತಿ, ನಿರ್ಗುಣಾರಾಧನೆ. ಈ ವಿಷಯಗಳನ್ನು ಮೊದಲು ವೇದವ್ಯಾಸನು ಶುಕನಿಗೆ ಬೋಧಿಸಿದಂತೆ ಹೇಳಿದೆ. ಗ್ರಂಥಾವತಾರದಲ್ಲಿ ಶ್ರೀಗಿರಿಯ ಮಲ್ಲಿಕಾರ್ಜುನನ ಸ್ತುತಿ ಇದೆ. ಅಧ್ಯಾಯಗಳ ಕೊನೆಯಲ್ಲಿ ಈ ಗದ್ಯವಿದೆ—

ಇತಿ ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯಸಹಜಾನಂದಗುರುವರ್ಯಪದಕಮಲಭೃಂಗಾಯಮಾನ ಸಹವಾಸಿಮುಹಲಿಂಗರಂಗವಿರಚಿತಮಪ್ಪ ಅನುಭವಾಮೃತ ಗ್ರಂಥದಲ್ಲಿ.

ಚಿದಾನಂದಾವಧೂತನು (ಸು 1750) ಈ ಗ್ರಂಥವನ್ನು ಬಹಳ ಮಟ್ಟಿಗೆ ಅನುಸರಿಸಿ ತನ್ನ ಜ್ಞಾನಸಿಂಧುವನ್ನು ಬರೆದಂತೆ ತೋರುತ್ತದೆ.

ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ:-

### ನೀತಿ

ಸತ್ಯಶೌಚಾಚಾರನಿರತರು | ಚಿತ್ತದಲಿ ನಿರ್ಮಲರು ನಿಸ್ಪೃಹ |
ವೃತ್ತಿಯಲಿ ವರ್ತಿಸುವರಾಶಾಪಾಶವರ್ಜಿತರು ||
ಉತ್ತಮೋತ್ತಮರಾದ ಗುರುಪದ | ಭಕ್ತಿಯುಕ್ತರು ಭವದ ಬೇರನು |
ಕಿತ್ತು ಬಿಸುಡುವ ನಿಪುಣರೇ ತತ್ವಾಧಿಕಾರಿಗಳು ||
ಮೊದಲೆ ಮರ್ಕಟ ಮೇಲೆ ಮದ್ಯದ | ಮದವಿದೆಯು ಹಿಡಿದಿರಲು ವೃಶ್ಚಿಕ |

ಕುಡಿಯಕಾಲನು ಕಚ್ಚಿದರೆ ಕುಣಿದಾಡುವಂಬವಲಿ ||
ಅಧಿಕಧನಸಂಪತ್ತುಯೌವನ | ವೊದಗಿರಲು ವನಿತಾದಿವಿಷಯಮಾ |
ಸ್ಪದವೆನಿಸಿಯೊಡಲಳಿಯಿಡುವಗಧ್ಯಾತ್ಮವೇಕೆಂಥ ||
ಮೀನು ನೀರೊಳಗಿದ್ದೊಡೇನೈ | ಧ್ಯಾನವನು ಬಕ ಮಾಡಲೇನದು |
ಕಾನನವನಾಶ್ರಯಿಸಿ ಮರ್ಕಟವಿದ್ದೊಡೇನಲ್ಲಿ ||
ಮೌನದಲಿ ಕೋಗಿಲೆಯಿರಲ್ಕದ | ಕೇನುಫಲ ಸುಜ್ಞಾನವಿಲ್ಲದೆ |
ಮೌನ ಮೊದಲಾದವಳೊಳೇನೆಲೆ ಮಗನೆ ಕೇಳೆಂದ ||
ತನ್ನ ಹಿತವನು ತಿಳಿಯಲಳಿಯದ | ಕುನ್ನಿ ಬಳಿಯೇ ಬಾಮುಸಿ ಬಯಲಿಗೆ |
ಹೊನ್ನುಹೆಣ್ಣೆಂಡೆಂಬ ಗಂಟಲ ಗಾಳದಲಿ ಸಿಲುಕಿ ||
ಬನ್ನಬಡುವನು ಭವಭವದಿ ಬಹು | ಜನ್ಮಜರೆಮರಣಾದಿದುಃಖದಿ |
ಹಣ್ಣೆನುತ ಕಿಚ್ಚಿನಲಿ ಬೀಳುವ ಶಲಭದಂದದಲಿ ||
ಒಡವೆಯುಳ್ಳೊಡೆ ಮಡದಿಮಕ್ಕಳು | ಕಡುನುಮತೆಯನು ಮಾಳ್ಪರಾತಗೆ |
ಬಡತನಗಳಡಸಿದೊಡೆ ಮೆಲ್ಲನೆ ಸಡಿಲತೊಡಗುವರು ||
ಬಿಡದು ಕಳು ಹಾಲಿರಲು ತಾಯನು | ಕಡೆಗೆ ಹೋಹುದು ಬತ್ತಿದೊಡೆ ಹಾ |
ಕೆಡುವಕಾಲಕ್ಕಾರಿಗಾರೈ ಮಗನೆ ಹೇಳೆಂದ ||

ಕನ್ನಡಭಾಷೆ

ಸುಲಿದ ಬಾಳೆಯ ಹಣ್ಣಿನಂದದಿ | ಕಳೆದ ಸಿಗುರಿನ ಕಬ್ಬಿನಂದದಿ |
ಅಳಿದ ಉಷ್ಣದ ಹಾಲಿನಂದದಿ ಸುಲಭವಾಗಿರ್ದ ||
ಲಲಿತವಹ ಕನ್ನಡದ ನುಡಿಯಲಿ | ತಿಳಿದು ತನ್ನೊಳು ತನ್ನ ಮೋಕ್ಷದ |
ಗಳಿಸಿಕೊಂಡೊಡೆ ಸಾಲದೇ ಸಂಸ್ಕೃತದೊಳಿನ್ನೇನು ||

---

## ತಿಮ್ಮಕವಿ. 1677

ಈತನು ಯಾದವಗಿರಿಮಾಹಾತ್ಮ್ಯ, ವೆಂಕಟಗಿರಿಮಾಹಾತ್ಮ್ಯ, ಪಶ್ಚಿಮರಂಗಮಾಹಾತ್ಮ್ಯ ಇವುಗಳನ್ನು ಬರೆದಿದ್ದಾನೆ. ಇವನು ಬ್ರಾಹ್ಮಣಕವಿ, ಜಾಮದಗ್ನ್ಯಗೋತ್ರದವನು; ಶ್ರೀವೇಣುಗೋಪಾಲಪಾದವನೇಜಾತಭೃಂಗಂ ಎಂದು ಹೇಳಿಕೊಂಡಿದ್ದಾನೆ; ಮೈಸೂರು ದೊರೆಯಾದ ಚಿಕ್ಕದೇವರಾಜನ (1672—1704) ಆಶ್ರಿತನು. ಆತನ ಅಜ್ಞಾನುಸಾರವಾಗಿ ಅವನ

ಮಂತ್ರಿ ಚಿಕ್ಕುಪಾಧ್ಯಾಯನ ಪ್ರೇರಣೆಯಿಂದ ಈ ಗ್ರಂಥಗಳನ್ನು ಬರೆದಂತೆ ಹೇಳುತ್ತಾನೆ. ಇವುಗಳಲ್ಲಿ ಯಾದವಗಿರಿಮಾಹಾತ್ಮ್ಯವನ್ನು ಶಕ 1599ನೆಯ ನಳವರ್ಷದಲ್ಲಿಯೂ (1677) ವೆಂಕಟಗಿರಿಮಾಹಾತ್ಮ್ಯವನ್ನು ಶಕ 1601 ನೆಯ ಕಾಳಯುಕ್ತಿ ವರ್ಷದಲ್ಲಿಯೂ (1679) ಬರೆದಂತೆ ಆಗ್ರಂಥಗಳಿಂದ ತಿಳಿಯುತ್ತದೆ. ಪೂರ್ವಕವಿಗಳಲ್ಲಿ ವಾಲ್ಮೀಕಿ, ವ್ಯಾಸ, ಶುಕ, ಕಾಳಿದಾಸ, ಬಾಣ, ರುದ್ರ, ಜಯದೇವ ಇವರುಗಳನ್ನು ಸ್ಮರಿಸಿದ್ದಾನೆ.

ಇವನ ಗ್ರಂಥಗಳಲ್ಲಿ

I ಯಾದವಗಿರಿ ಮಾಹಾತ್ಮ್ಯ.

ಇದು ಚಂಪೂರೂಪವಾಗಿದೆ; ಆಶ್ವಾಸ 16. ಇದರಲ್ಲಿ ನಾರದೀಯ ಪುರಾಣಕಥಿತವಾದ ಯಾದವಗಿರಿಯ ಅಥವಾ ಮೇಲುಗೋಟೆಯ ಮಾಹಾತ್ಮ್ಯವು ಹೇಳಿದೆ. ಮೊದಲು 4 ಆಶ್ವಾಸಗಳಲ್ಲಿ ಚಿಕ್ಕದೇವರಾಜನ ವಂಶಾವಳಿಯೂ ದಿಗ್ವಿಜಯಗಳೂ ವಿಸ್ತಾರವಾಗಿ ವರ್ಣಿತವಾಗಿವೆ; 5 ನೆಯ ಆಶ್ವಾಸದಿಂದ ಕಥೆ ಆರಂಭವಾಗಿದೆ.

ಇವನ ಇತರಗ್ರಂಥಗಳಲ್ಲಿಯೂ ಈ ದೊರೆಯ ವಂಶಾವಳಿ ಮುಂತಾದ ವಿಷಯಗಳು ಹೇಳಿವೆ. ಈ ಅಂಶಗಳನ್ನು ಕ್ರೋಡೀಕರಿಸಿ ಸಂಗ್ರಹವಾಗಿ ಇಲ್ಲಿ ತಿಳಿಸುತ್ತೇವೆ—

ಯಾದವರೊಳ್ ಕೆಲರ್ ಕೃಷ್ಣನ ಅನುಮತಿಯಿಂ ನಿಜಸಂತತಿದೇವತೆಯಾದ ಯಾದವಗಿರಿನಾರಾಯಣನ ಪಾಚಾರವಿಂದದರ್ಶನಾರ್ಥಮೈತಂದು ಸೇವಿಸಿ ತದನುಜ್ಞೆವೆತ್ತು ಕರ್ಣಾಟದೇಶಭೂಸತಿವದನಸರೋಜದಂತೆಸೆವ ಮಹಿಷಪುರವರದೊಳ್ ಸಾಮ್ರಾಜ್ಯಸಂಪನ್ನರಾಗಿ ಚಾಮುಂಡಿಕಾಪ್ರಸಾದಲಬ್ಧೈಶ್ವರ್ಯರಾಗಿರ್ದರ್. ಅವರ ಪರಂಪರೆಯೊಳ್ ಬೆಟ್ಟದಚಾಮರಾಜ; ಮಕ್ಕಳು ತಿಮ್ಮರಾಜ, ಕೃಷ್ಣರಾಜ, ಚಾಮರಾಜ. ಈ ತಿಮ್ಮರಾಜನು ಬಿಳುದೆಂತೆಂಬರಗಂಡ ಎಂಬ ಬಿರುದನ್ನು ಪಡೆದನು. ಚಾಮರಾಜನಿಗೆ ಸಿಡಿಲೊರ್ಮೆ ಕ್ರಾಗಿಯಾತನ ಮುಡಿಯಂ ಕೊಂಡೊಯ್ದುದರಿಂದ ಬೋಳಚಾಮರಾಜ ಎಂಬ ಹೆಸರು ಬಂದಿತು. ಇವನು ರಾಮರಾಜನ ಸೇನಾನಿಯಾದ ರೇಮಟಿ ವೆಂಕಟನನ್ನು ಸೋಲಿಸಿದನು. ಇವನ ಮಕ್ಕಳು ರಾಜನೃಪ, ಬೆಟ್ಟದಚಾಮರಾಜ, ದೇವರಾಜ, ಚೆನ್ನರಾಜ. ರಾಜನೃಪನು ಕಶಾಪ್ರಹಾರದಿಂದ ಕಾರುಗಹಳ್ಳಿಯ ಪ್ರಭುವಿನ ಮೂಗನ್ನು ಛೇದಿಸಿದನು; ಅಂಧಕಿಗೆ ನೇತ್ರಮನೊಂದಂ ಕೊಟ್ಟನು; ತಿರುಮಲ

ರಾಜನಿಂದ ಶ್ರೀರಂಗಪಟ್ಟಣವನ್ನು ಸ್ವಾಧೀನಪಡಿಸಿಕೊಂಡನು; ಯದುಗಿರಿನಾರಾಯಣ ದೇವಸ್ಥಾನದಲ್ಲಿ ಮುಕ್ತಿಗೆ ಸಂದನು. ದೇವರಾಜನ ಮಕ್ಕಳು ದೊಡ್ಡದೇವರಾಜ, ಚಿಕ್ಕದೇವರಾಜ,ದೇವರಾಜ, ಮರಿದೇವರಾಜ. ದೊಡ್ಡದೇವರಾಜನ ಪಟ್ಟಮಹಿಷಿ ಅಮೃತಾಂಬೆ; ಮಕ್ಕಳು ಚಿಕ್ಕದೇವರಾಜ, ಕಂಠೀರವರಾಜ. ದೊಡ್ಡದೇವರಾಜನು 14ವರ್ಷ ಆಳಿದನು; ಬಳಿಕ ಚಿಕ್ಕದೇವರಾಜನು ಪಟ್ಟಕ್ಕೆ ಬಂದನು. ಈತನು ಮಧುರಾಪುರಿಯ ಚೊಕ್ಕಲಿಂಗನಾಯಕ, ಶಾಂದಮಂಗಲದ ರಾಮಚಂದ್ರನಾಯಕ, ವೇಲಾಪುರದ ವೆಂಕಟನಾಯಕ, ಜಡಕನದುರ್ಗದ ನರಸನಾಯಕ ಇವರುಗಳನ್ನು ಜಯಿಸಿದನು; ಅಂದೂರು, ಕುಂತೂರುದುರ್ಗ, ಮದ್ದಗಿರಿ, ಬೇಲೂರು, ಅನಂತಗಿರಿ, ಮುಟ್ಪಾಂಜಟ್ಟಿ, ವ್ಮಳಲಿ, ಪರಮತ್ತಿ, ಅರಕಲಗೂಡು, ಜಡಕನದುರ್ಗ ಇವುಗಳನ್ನು ಕೈವಶಮಾಡಿಕೊಂಡನು.

ಗ್ರಂಥಾವತಾರದಲ್ಲಿ ಯದುಗಿರಿನಾರಾಯಣನ ಸ್ತುತಿ ಇದೆ. ಬಳಿಕ ಕವಿ ಯದುಗಿರಿನಾಯಕಿ, ರಂಗನಾಥ, ರಂಗನಾಯಕಿ, ಸರಸ್ವತಿ, ಶಂಖ, ಚಕ್ರ, ಗದೆ, ಶಾರ್ಙ್ಗ, ನಂದಕ, ಅನಂತ, ಗರುಡ, ವಿಷ್ವಕ್ಸೇನ, 12 ಆಳ್ವಾರುಗಳು, ರಾಮಾನುಜ, ಕಡಾಂಬಿಲಕ್ಷ್ಮಣಾಚಾರ್ಯ ಇವರುಗಳನ್ನು ಪರಿವಿಡಿಯಿಂದ ಸ್ತುತಿಸಿದ್ದಾನೆ. ಆಶ್ವಾಸಗಳ ಅಂತ್ಯದಲ್ಲಿ ಈ ಗದ್ಯವಿದೆ—

ಇದು ವಿನಮದಮರವರಸರಸಿಜಭವಭವಮುಖಸುರಸಮುದಯಸುರುಚಿರಮಕುಟನಿಕರಖಚಿತಮಣಿನಿಚಯರುಚಿಕಲಿತಯದುಗಿರಿಸದನನಾರಾಯಣಮೃದುಪದಲಲಿತಜಲರುಹಜನಿತಮಕರಂದರಸಾಸ್ವಾದನನಿರತಮಧುಕರಾಯಮಾನ ಬಿರುದೆಂತೆಂಬರಗಂಡ ಯದುಕುಲಶರಧಿರಾಕಾಸುಧಾಕರನಾದ ಚಿಕ್ಕದೇವಮಹಾರಾಯನ ಕರುಣಾಕಟಾಕ್ಷಾವಲೋಕನಮುದಿತ ಚಿಕ್ಕುಪಾಧ್ಯಾಯಪ್ರಣೀತ ಕವಿತಿಮ್ಮವಿರಚಿತಕರ್ಣಾಟಕವಚನರಚನೆಯ ಯಾದವಗಿರಿಮಹಾತ್ಮ್ಯದೊಳ್

ಇವನ ಬಂಧವು ಧಾರಾಳವಾಗಿಯೂ ಮನೋಹರವಾಗಿಯೂ ಇದೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇನೆ—

ಮೇರು

ಬಳಸಿ ಬರುತ್ತುಮಿರ್ಪ ಹಿಮದೀಧಿತಿ ದೀಪಿಕೆ ಚಾರುತಾರಕಾ |
ವಳಿಯೆ ವಿಕಾಸಮಾದ ಕುಸುಮವ್ರಜವೊಪ್ಪುವ ಜಾಹ್ನವೀನದೀ ||
ಜಳಮಭಿಷೇಕವಾರಿ ಘನರಾವಮೆ ಘಂಟೆಯದಾಗೆ ದೇವಸಂ |

ಕುಳಮಿರದರ್ಚಿಸಿಟ್ಟ ಘನಲಿಂಗಮೆನಲ್ ಕನಕಾದ್ರಿ ರಂಜಿಕುಂ ||

ಸಾಯಂಕಾಲ

ಪುಳಿನದ ತಾಣದಲ್ಲಿ ಸರಸೀರುಹಪತ್ರನಿಕಾಯದಲ್ಲಿ ತ |
ಣ್ಗೊಳದೆಡೆಯಲ್ಲಿ ಕುಂಜತಳದಲ್ಲಿ ಲತಾವಳಿಯಲ್ಲಿ ಕಾಣದಂ |
ತಳಿಲುತೊಳಲ್ದು ಸುತ್ತಿ ಪರಿದಾಡಿ ಪಲುಂಬಿ ಪೊರಳ್ದು ಕಂದಿಯು |
ಮ್ಮಳಿಸಿತದೊಂದಗಲ್ದ ಪೊಣರ್ವಕ್ಕಿ ನಿಜಾಂಗನೆಯಂ ನಿಶಾದಿಯೊಳ್ ||

ಚಂದ್ರಕಳಂಕ

ವರವಸುಪೂರ್ಣವಾದ ಶಶಿಮಂಡಲಮಂಜುಳರೌಪ್ಯಕುಂಭಮಂ |
ಪರಿಯದೆ ಪತ್ತಿ ಕಾದ್ಕರಿವಾವ್ತ ನಭೋಂಬುಧಿಜಾತಶೀತಭಾ |
ಸುರಕರಪುಂಡರೀಕಕೆಱಗಿರ್ಪಳಿ ಸೋಮಸುರೇಭಗಂಡದೊಳ್ |
ಸುರಿವ ಮದಾಂಬುಧಾರೆಯೆನೆ ಕಣ್ಗೊಳಿಸಿರ್ದುದು ಚಂದ್ರಲಾಂಛನಂ ||

ಪ್ರಾತಃಕಾಲ

ಮಿಸುನಿಯ ಕರಡಗೆಯೊಳ್ ಬಿಂ | ಬಿಸುತಿರ್ಪಮರೇಂದ್ರನೀಲಸರಮಂ ಭರದಿಂ |
ಬಿಸಜಿನಿ ಪತಿಗೀವಂತೆವೊ | ಲೆಸೆಗುಂ ವಿಕಚಾಬ್ಜದಿಂದೆ ನೆಗೆವಳಿವಿಸರಂ ||

ಸೂಳೆಗೇರಿ

ನೋಟದ ಪೇಟೆಯುತ್ಸವದ ಬೀಡು ಬೆಡಂಗಿನ ತಾಣಮಾಪಗಂ |
ಬೇಟದ ಮಂದಿರಂ ಗಮಕದಂಗಣವೊಳ್ಪಿನ ಸಜ್ಜೆ ವಶ್ಯಮಂ ||
ಪಾಟಿಪ ಶಾಲೆ ಮೆಲ್ನಗೆಯ ಚಾವಡಿ ಠೌಳಿಯ ಗೊತ್ತು ಮೋಹದು |
ರ್ಬಾಟದ ಬೀದಿ ತಾನೆನೆ ವಿರಾಜಿಸಿತಾಗಣಿಕಾಂಗನಾಲಯಂ ||

ಚಿಕ್ಕದೇವರಾಯನ ಕೀರ್ತಿ

ಪರಿಪಂಥಿಕ್ಷಿತಿರಾಡ್ಯಶೋರುಚಿರಕರ್ಪೂರಂಗಳಂ ತಂದಿಳಾ |
ವರವಂದ್ಯಂ ಚಿಕದೇವಭೂಪತಿಗೆ ತತ್ಕೀರ್ತಿಜ್ವಲತ್ಕಾಂತಿ ವಿ ||
ಸ್ಫುರಿಸಲ್ ಪೊತ್ತಿಸಿ ತತ್ಪ್ರತಾಪಶಿಖಿಯೊಳ್ ನೀರಾಂಜನಪ್ರಾಯಮಾ |
ಗಿರೆಯುದ್ಯೋಗಿಸಿ ಮಂಗಳಾರತಿಯನೆತ್ತುತ್ತಿರ್ದಪಳ್ ಸಂತತಂ ||

ಶಾರ್ಙ್ಗ

ಚಾಪಂ ಶಮಿತಾರಿವ್ರಜ | ಕೋಪಂ ವಿಸ್ಫಾರ್ಯಮಾಣವೈಕುಂಠಮಹಾ |
ಟೋಪಂ ಸಂಹೃತನತಜನ | ತಾಪಂ ಶಾರ್ಙ್ಗಾಖ್ಯಮೆಮಗೆ ಕುಡುಗತಿಮುದಮಂ ||

## 2 ಪಶ್ಚಿಮರಂಗಮಾಹಾತ್ಮ್ಯ

ಇದೂ ಚಂಪೂರೂಪವಾಗಿದೆ; ಆಶ್ವಾಸ 5. ಇದರಲ್ಲಿ ಶಿವನು ನಾರದನಿಗೆ ಹೇಳಿದ ಗೌತಮಕ್ಷೇತ್ರದ ಅಥವಾ ಶ್ರೀರಂಗಪಟ್ಟಣದ ಮಾಹಾತ್ಮ್ಯವು ಹೇಳಿದೆ. ಗ್ರಂಥಾವತಾರದಲ್ಲಿ ಪಶ್ಚಿಮರಂಗಸ್ತುತಿ ಇದೆ. ಬಳಿಕ ಕವಿ ಪಶ್ಚಿಮರಂಗನಾಯಕಿ, ಭಾಷ್ಯಕಾರ, ಶುಕ ಇವರುಗಳನ್ನು ಹೊಗಳಿದ್ದಾನೆ. ಆಶ್ವಾಸಗಳ ಕೊನೆಯಲ್ಲಿ ಈ ಗದ್ಯವಿದೆ—

ಇದು......................ಶ್ರೀವೀರಚಿಕ್ಕದೇವಮಹಾರಾಜಕೃಪಾರಸಾಶ್ರಯ ಸಚಿವಾಗ್ರಣಿ ಚಿಕುಪಾಧ್ಯಾಯನಿರೂಪಣದಿಂ ಕವಿತಿಮ್ಮಪ್ರಣೀತಮಾದ ಕರ್ಣಾಟಕಭಾಷಾಲಸಿತ ಪಶ್ಚಿಮರಂಗಮಾಹಾತ್ಮ್ಯದೊಳ್.

ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ಸಮುದ್ರ

ತೆರೆವೊಯ್ಲಿಂದೊಡೆಯುತ್ತುಮಿರ್ಪ ಘನಶುಕ್ತಿವ್ರಾತದಿಂದೇಳ್ವಿ ಭಾ |
ಸುರಮುಕ್ತಾನಿಚಯಂ ಸುಮಾಂಜಲಿ ತದೀಯಧ್ವಾನಮೇ ಮಂಜುವಾ|
ದ್ಯರವಂ ವೀಚಿಯೆ ನೀಳ್ದ ನಲ್ದೆರ ಮಹಾವರ್ತಾಭಮಂ ಲಸದ್ದೀಪಮಾ |
ಗಿರೆ ವಾರಾಶಿ ತರಂಗಿಣೀನಟಿಯ ರಂಗಸ್ಥಾನದಂತೊಪ್ಪುಗುಂ ||

ಚಾಮುಂಡಿಯಬೆಟ್ಟ.

ಪಿರಿದುಂ ಖಗಸ್ವನಂ ಮೇ | ಘರವಂ ನವಧಾತು ಮಿಂಚು ನಿರ್ಝರಜಲಶೀ |
ಕರತತಿ ಮಳೆಯೆನೆ ಕಾರಂ| ತಿರೆ ಮಿಗೆ ಚಾಮುಂಡಿಯಿರ್ಪ ಗಿರಿ ಕಣ್ಗೊಳಿಕುಂ||

ರಂಗನಾಥಸ್ತುತಿ

ಸುರಮಾನವತಿರ್ಯಕ್‌ಸ್ಥಾ | ವರಾತ್ಮಕಮೆನಿಪ್ಪ ವಿಶ್ವಮೆಲ್ಲಂ ನಿನಗಿಂ |
ದಿರೆಯಾಣ್ಮ ಶರೀರಂ ನೀಂ | ಶರೀರಿಯೆನಿಸಿರ್ಪೆ ಮತ್ತಮದುಕಾರಣದಿಂ ||

ಭಾಷ್ಯಕಾರ

ಅರಿಷಡ್ವರ್ಗಮನೊತ್ತಿ ನೂಂಕಿ ತಗುಳ್ದಾಶಾಬಂಧಮಂ ದುರ್ಗುಣೋ |
ತ್ಕರಮಂ ಭಂಗಿಸಿ ಕಿಲ್ಬಿಷಪ್ರತತಿಯಂ ಓಡಾಡಿಯಾತ್ಮಾಂಘ್ರಿಪಂ ||
ಕರುಹೋಪಾಸನತತ್ಪರರ್ಗ್ಗೆ ನಿಜಭಕ್ತಿಜ್ಞಾನವೈರಾಗ್ಯಮಂ |
ಪಿರಿದುಂ ಬೋಧಿಪ ಭಾಷ್ಯಕಾರರಡಿಗಾಂ ಸಾಷ್ಟಾಂಗದಿಂ ವಂದಿಪೆಂ ||

## 3 ವೆಂಕಟಗಿರಿ ಮಾಹಾತ್ಮ್ಯ

ಇದೂ ಚಂಪೂರೂಪವಾಗಿದೆ; ಆಶ್ವಾಸ 10, ಕಂದ 190, ವೃತ್ತ 285, ವಚನ 31, ಒಟ್ಟು 502. ಇದರಲ್ಲಿ ಬ್ರಹ್ಮಾಂಡಪುರಾಣದೊಳಗೆ

ಭೃಗುನಾರದಸಂವಾದರೂಪವಾಗಿ ಕಥಿತವಾದವೆಂಕಟಗಿರಿಯ ಅಥವಾ ತಿರುಪತಿಯ ಮಾಹಾತ್ಮ್ಯವು ಹೇಳಿಗೆ. ಈ ಕಾವ್ಯದ ಉತ್ಕೃಷ್ಟತೆಯನ್ನು ಕವಿ ಈ ಪದ್ಯದಲ್ಲಿ ಹೇಳಿದ್ದಾನೆ.—

ಸರಸಿಜದಂತೆ ಸಾರಗುಣಮರ್ಣವದಂತೆ ರಸಾದ್ರ್ರಮರ್ಕನಂ ।
ತಿರೆ ಘನಮಾರ್ಗಶೋಭಿ ಲಲನಾಜನದಂತಿರೆ ಭಾವಜಾತಿಬಂ ॥
ಧುರಮಮರಾಗದಂತೆ ವಿಬುಧಾವಳಿಮಂಡಿತಮಬ್ಜಬಿಂಬದಂ ।
ತಿರೆ ಸುಕರಪ್ರಸಿದ್ಧಮೆನಿಕುಂ ಕೃತಿಯಿಂತಿದು ನೋಡೆ ಮತ್ಕೃತಂ ॥

ಗ್ರಂಥಾವತಾರದಲ್ಲಿ ವೆಂಕಟೇಶಸ್ತುತಿ ಇದೆ. ಬಳಿಕ ಕವಿ ಲಕ್ಷ್ಮಿ, ಸರೋಭೂತಮಹದಭ್ಕ್ತಿಸಾರಶಠಕೋಪಮಧುರಕವಿಕುಲಶೇಖರಭಟ್ಟನಾಥಗೋದಾಭಕ್ತಾಂಘ್ರಿರೇಣುಮುನಿವಾಹನಪರಕಾಲರೆಂಬ 12 ಆಳ್ವಾರುಗಳು, ರಾಮಾನುಜ, ಸರಸ್ವತಿ ಇವರುಗಳನ್ನು ಹೊಗಳಿದ್ದಾನೆ. ಆಶ್ವಾಸಗಳ ಅಂತ್ಯದಲ್ಲಿ ಈ ಗದ್ಯವಿದೆ—

ಇದು........ ............... ...... ಮಹಿಷಪುರವರಪರಿವಿಷ್ಟರಾಧ್ಯಕ್ಷ ಶ್ರೀಮದ್ವೀರಚಿಕ್ಕದೇವಮಹಾರಾಯಪ್ರಸಾದೈಕಾಶ್ರಯ ಚತುರಮತಿಸಚಿವಕುಲಲಲಾಮ ಶ್ರೀಚಿಕ್ಕುಪಾಧ್ಯಾಯನಿರೂಪಣದಿಂ ಕವಿತಿಮ್ಮಪ್ರಣೀತಮಪ್ಪ ವೆಂಕಟಾಚಲಮಾಹಾತ್ಮ್ಯದೊಳ್.

ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ—

ವಸಂತ

ತಳಿರ್ವೇಳಮಾವು ಸಣ್ಣಾನನೆಯೇಱುವ ಪಾಟಲಿ ಕುಟ್ಮಳಾಳಿಯಂ ।
ತಳೆವದಿಮುರ್ತ್ತೆ ಪಲ್ಲವಿಪಶೋಕೆ ಸುಮಂಗಳನಾಂಪ ಚಂಪಕಾ ॥
ವಳಿ ಮೊನೆಮೊಗ್ಗೆಯಂ ಧರಿಪ ಮಲ್ಲಿಗೆ ಕೂಗುವ ಕೋಕಿಲವ್ರಜಂ ।
ಕಳರವದಿಂಪನಾಳ್ವ ಗಿಳಿಯೊಪ್ಪಿದುದಾಮಧುಮಾಸದೇಟ್ಗೆಯೊಳ್ ॥

ಅಶೋಕ

ಅಸುಗೆ ತಳಿರ್ತುಱಿ ವಿರಹಿ। ಪ್ರಸರಾಸುಗೆ ಮುಳಿಗುಮೆಂದು ಮುಳಿದೊಡೆಯೆ ಸತೀ।
ವಿಸರದೆಡದಂಘ್ರಿಯಾವಕ । ರಸಮುಮರ್ದಂಟಿದವೊಲೆಸೆಗುಮದಱಿಳದಳಿರ್ಗಳ್॥

ಅಂಜನಾದೇವಿ

ತಳಿರಡಿ ಬಾಟಿಯಿಂ ಜಱಿವ ನುಣ್ದೊಡೆ ತೆಳ್ಪಸಿಱಿಂಪುವೆತ್ತ ಪೊಂ ।

ಜೆಳೆನಡು ನಿಮ್ನನಾಭಿ ನಳಿತೋಳ್ ಕಳಶಸ್ತನಮಂಬುಜಾತಕೋ ||
ಮಳತರಪಾಣಿ ಕಂಬುಗಳಮಿಂದುಮುಖಂ ಸುಲಿಪಲ್ ಪ್ರವಾಳಮಂ |
ಜುಳಲಸಿತಾಧರಂ ಚಪಲಲೋಚನನೊಪ್ಪಿರೆ ಕಣ್ಗೆ ತೋಱಿದಳ್ ||

ಹನುಮತ್ಕೃತಸೂರ್ಯಬಿಂಬಗ್ರಹಣ

ಕೆಂಬೊಗರಾಂತ ಪಣ್ಣಿದು ದಲೆಂಬ ಮಹಾಮತಿ ಪುಟ್ಟಿ ಮೆಲ್ವೆನೆಂ |
ದಂಬುಜಬಂಧುವಂ ಪಿಡಿಯಲುದ್ವೃತೆ ವೆಂಕಟಶೈಲದಗ್ರದಿಂ ||
ಮುಂಬರಿದೆಟ್ಟಿ ಲಂಘಿಸಿ ಮಹೋದಯಪರ್ವತಕೆಯ್ದಿ ಹಸ್ತದಿಂ |
ದಂ ಬಳುವೇಗದಲ್ಲಿ ಕಡುಕೆಯ್ದಿನಬಿಂಬಮನುಣ್ಮೆ ಸೋಂಕಿದಂ ||

ರಾಜನೃಪನ ಕೀರ್ತಿ

ಕ್ಷೀರಾಂಭೋನಿಧಿಯಾಯ್ತು ವಿಷ್ಣುಗಭವಂಗಾರೌಪ್ಯಭೂಮಿಧ್ರಮಾ |
ಯ್ತಾರಾಜೀವಭವಂಗೆ ಹಂಸಮೆನಿಸಿತ್ತಿಂದ್ರಂಗೆ ತಾನೊಳ್ಪಿನಿಂ ||
ಸಾರ್ಕೈರಾವತಮರ್ಥಿಭೃಂಗತರುಮಲ್ಲೀದಾಮುದಂತಾಯ್ತು ಸ |
ರ್ವಾರಾತಿಪ್ರಭುಚಕ್ರಕಾಯ್ತು ತಿಳಿಜೊನ್ನಂ ತದ್ಯಶಂ ಪೃಥ್ವಿಯೊಳ್ ||

ದುರ್ಜನ

ಓಿದುಂ ಪರಾತ್ಮಗುಣನುತಿ | ವಿರಹಿತನೀಕ್ಷಿಸೆ ಪರಾತ್ಮಗುಣನುತಿಪರನೀ |
ಧರೆಯೊಳ್ ಸಹೃದಯಜನದಂ | ತಿರೆ ದುರ್ಜನವಿತತಿಯೆಸೆಗುಮಚ್ಚರಿಯಲ್ತೇ ||

---

ಮಲ್ಲಿಕಾರ್ಜುನ. 1678.

ಈತನು ಶ್ರೀರಂಗಮಾಹಾತ್ಮ್ಯವನ್ನು ಬರೆದಿದ್ದಾನೆ. ಇವನು ಬ್ರಾಹ್ಮಣಕವಿ; ಮೈಸೂರು ರಾಜನಾದ ಚಿಕ್ಕದೇವರಾಜನ (1672-1704) ಆಶ್ರಿತನು. ದೊರೆಯ ಆಜ್ಞಾನುಸಾರವಾಗಿ ಅವನ ಮಂತ್ರಿಯಾದ ಚಿಕ್ಕುಪಾಧ್ಯಾಯನು ಪ್ರೇರಿಸಲು ಈ ಗ್ರಂಥವನ್ನು ಶಕ 1600 ನೆಯ ಪಿಂಗಳ ವರ್ಷದಲ್ಲಿ —ಎಂದರೆ 1678 ರಲ್ಲಿ ಬರೆದಂತೆ ಹೇಳುತ್ತಾನೆ.

ಇವನ ಗ್ರಂಥ

ಶ್ರೀರಂಗಮಾಹಾತ್ಮ್ಯ.

ಇದು ಚಂಪೂರೂಪವಾಗಿದೆ; ಆಶ್ವಾಸ 12. ಇದರಲ್ಲಿ ಬ್ರಹ್ಮಾಂಡ

ಪುರಾಣದೊಳಗೆ ಶಿವನಾರದಸಂವಾದರೂಪವಾಗಿ ಹೇಳಿರುವ ಶ್ರೀರಂಗ ಕ್ಷೇತ್ರದ ಮಾಹಾತ್ಮ್ಯವು ವರ್ಣಿತವಾಗಿದೆ. ಮೊದಲೆರಡಾಶ್ವಾಸಗಳಲ್ಲಿ ಕರ್ನಾಟದೇಶದ ವರ್ಣನೆಯೂ ಚಿಕ್ಕದೇವರಾಜವಂಶಾವಳಿಯೂ ಇವೆ. 3 ನೆಯ ಆಶ್ವಾಸದಿಂದ ಕಥೆ ಪ್ರಾರಂಭವಾಗಿದೆ. ಈ ಗ್ರಂಥದ ಉತ್ಕೃಷ್ಟತೆಯನ್ನು ಕವಿ ಈ ಪದ್ಯದಲ್ಲಿ ಹೇಳಿದ್ದಾನೆ.—

ಚತುರರ ನಾಲಗೆಗಿಂಪಂ | ಮತಿವಂತರ ಬಗೆಗೆ ಪೊಚ್ಚಪೊಸವೇಟಮನೀ |
ಕೃತಿ ಮಾಳ್ಕುಮೆನ್ನದೊಡದೇಂ | ನತಿಶಯಮಾಕವಿಗೆ ಕವಿತೆಗಾಕಲ್ಪನೆಗಂ ||

ಗ್ರಂಥಾವತಾರದಲ್ಲಿ ವಿಷ್ಣುಸ್ತುತಿ ಇದೆ. ಬಳಿಕ ಕವಿ ಲಕ್ಷ್ಮಿ, ಬ್ರಹ್ಮ, ಸರಸ್ವತಿ, ಅನಂತ, ಗರುಡ, ವಿಷ್ವಕ್ಸೇನ, ರಾಮಾನುಜ, 12 ಆಳ್ವಾರುಗಳು ಇವರುಗಳನ್ನು ಕ್ರಮವಾಗಿ ಸ್ತುತಿಸಿದ್ದಾನೆ. ಆಶ್ವಾಸಗಳ ಅಂತ್ಯದಲ್ಲಿ ಈ ಗದ್ಯವಿದೆ—

ಇದು ಸಮಸ್ತಸಹೃದಯಹೃದಯಾಹ್ಲಾದಕಾರಿ ಶ್ರೀಮದ್ರಂಗನಾಥಚರಣಾರವಿಂದನಿಷ್ಯಂದಬಂಧುರಮಕರಂದಪಾನಾಸಕ್ತಮಿಳಿಂದಕಲ್ಪಸಂಕಲ್ಪ ಶ್ರೀಮದ್ರಾಜಾಧಿರಾಜರಾಜಪರಮೇಶ್ವರಾಪ್ರತಿಮಪ್ರೌಢಪ್ರತಾಪ ಶ್ರೀಚಿಕ್ಕದೇವರಾಜಕೃಪಾಕಟಾಕ್ಷನಿರೀಕ್ಷಣಾಮೋದಿತ ತದೀಯಕಾರ್ಯಧುರಂಧರಚಿಕುಪಾಧ್ಯಾಯಮಂತ್ರಿಪ್ರೇರಿತ ಮಲ್ಲಿಕಾರ್ಜುನಕವಿಪ್ರಣೀತಶ್ರೀರಂಗಮಾಹಾತ್ಮ್ಯದೊಳ್.

ಇವನ ಬಂಧವು ಲಲಿತವಾಗಿದೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ—

### ಕಳಮಕ್ಷೇತ್ರ

ಮಡನಾಯಿಂ ಪಾಯ್ದು ಪಾಯ್ದುರ್ವುಕತೆ ಜಲಜಲನೇೞ್ದುರ್ವ ನೀರುಂಡು ಪೆಂಪಂ|
ಪಡೆದೊಳ್ಪಿಂ ನೋಡೆ ನಿಟ್ಟಂ ಪೊಸಬಗೆಯೆಸಕಂಬೆತ್ತು ಮುಂಡಾಡೆ ಬಾಯಂ ||
ಬಿಡುವಂತಾಮೇಲೆ ದುಂಡಾಂತೊನುವಮುದಿರ್ನ ಜೊಲ್ಲೆಂದೆನಲ್ ಮೆಲ್ಲಿತಾಗಿಂ |
ಪಿಡಿದೊಂದೇಪಾಂಗಿನಿಂದುಣ್ಮಿದ ತೆನೆ ಕಳಮಕ್ಷೇತ್ರದೊಳ್ ರಂಜಿಸಿರ್ಕುಂ ||

### ಸೂರ್ಯಾಸ್ತ

ಗಗನಮದಾಂಧದಂತಿ ಸುರದೀರ್ಘಿಕೆಯಿಂದೊಗೆದಂಬುಜಾತಮಂ|
ಕೈನೆಮು ಕರಾಗ್ರದಿಂ ನೆಗಪಿ ಕೇಸರಮೆಣ್ಸೆಗುರ್ವಿ ಪರ್ವಲೊ ||

ಯ್ಯಗೆ ಕಡುಪಿಂದೆ ಪಿಂತಣೆಡೆಗಿಟ್ಟೊಡೆ ತೊಟ್ಟನೆ ಬೀಳ್ವವೋಲ್ ಕರಂ |
ನೆಗಟ್ದಪರಾಂಬುರಾಶಿಗಿೞಿದಂ ರವಿ ಸಾರವಿಹೀನರಶ್ಮಿಯಿಂ ||

ಶರತ್ಕಾಲ

ಬೆಳಗಿ ಮನೋಹರಂಗೊಳಲೊಡರ್ಚಿದ ಕನ್ನಡಿಯಂತೆ ದಿಙ್ಮುಖಂ |
ಕಳಕಳಿಸಲ್ಕೆ ಪಜ್ಜಳಿಸುವಿಂಗಡಲಂತೆ ಪಳಚ್ಚನಾಗಸಂ ||
ಪೊಳೆಯೆ ಮರಲ್ದು ಸಂದ ನೊರೆಯಂತೆ ಬೆಳತ್ತುದು ಬಳಾಹಕವ್ರಜಂ |
ಸುೞಿಸುೞಿದುಣ್ಮೆ ಪೊಣ್ಮೆ ಶರದಾಗಮಮೊಯ್ಯನೆ ತೀವಿತೊಳ್ಪಿನಿಂ ||

ಚಂದ್ರಿಕೆ

ಇಂಗಡಲಾಲವಾಲಮಮೃತಂ ತವೆ ಬಿತ್ತಿದ ಬೀಜಮಾಗಸಂ |
ಸಂಗಡಿಸುರ್ಬಿ ಪರ್ಬಿದ ಲತಾತತಿ ತಾರಗೆಗಳ್ ಸುಮಂಗಳು ||
ತ್ತುಂಗಮೃಗಾಂಕನೊಪ್ಪುವ ಫಲಂ ನಲವಿಂ ನಿಡುಗಾಡಿವೆತ್ತ ಬೆ |
ಳ್ದಿಂಗಳೊಸದ್ದು ಸೂಸಿ ಸುರಿವಾತತಸಾರಮೆನಲ್ಕೆ ರಂಜಿಕುಂ ||

ಮಂದಮಾರುತ

ತರುಣಿಯರಂಗದೊಳ್ ಪುದಿದ ತಂಪಿನ ಗಂಧದೊಳಿಂಪುವೆತ್ತು ಸಂ |
ಚರಿಸಿ ತಳಿರ್ತ ಪೊಚ್ಚಪೊಸತಾದೆಳವಳ್ಳಿಯ ದಿವ್ಯಪುಷ್ಪದೋ ||
ವರಿಗಳೊಳಾಪಿ ಪಿಂತೆ ಸವಿಯುಣ್ಮುವ ಮಾವಿನ ಗುಚ್ಚುಗೊಂಬಿನೊಳ್ |
ಪಿರಿದು ನುಸುಳ್ದು ಮೆಲ್ಲನೆ ಸಮೀರಣನೆಯ್ದಿದುದಾವನಾಂತಮಂ ||

ಕವಿಗಳು

ಕುಟಿಲಾಕುಟಿಲಕ್ರಿಯೆಯಂ | ಘಟಿಯಿಪರಶುಭಾತಿಸುಭಮನಹಿತಹಿತಗ್ಗಳಂ |
ಸಟೆದಿಟಮೆನಲ್ಕೆ ಧರೆಯೊಳ್ | ಘಟನಾಘಟನಾತಿಶಕ್ತರಲ್ಲವೆ ಕವಿಗಳ್ ||

---

## ಬಸವಲಿಂಗಕವಿ 1679

ಈತನು ಕೊಟ್ಟೂರುಬಸವೇಶ್ವರಪುರಾಣವನ್ನು ಬರೆದಿದ್ದಾನೆ. ಇವನು ವೀರಶೈವಕವಿ. ಇವನ ತಾತನು ಕರಣಿಕಾಗ್ರಣಿಭೀಮರಸವಂಶೋದ್ಭವನಾದ ಬಸವಣ್ಣದಂಡನಾಥ, ತಂದೆ ಗುರುನಾಮಧೇಯ, ದೊಡ್ಡಪ್ಪ ಕವಿಕಲ್ಲಮಾಂಕ, ಗುರು ಶಿವಗಂಗೆಯ ಮೇಲಣಗವಿಯ ಸಿಂಹಾಸನಾಧಿಪತಿ ಮಲೆ

ಯಶಾಂತೇಶ್ವರ. ಈ ಶಾಂತೇಶ್ವರನ ಮತ್ತು ಷಡಕ್ಷರದೇವನ ಅನುಗ್ರಹ ದಿಂದ ತನ್ನ ಗ್ರಂಥವನ್ನುಬರೆದಂತೆ ಹೇಳುವುದರಿಂದ ಕವಿ ಷಡಕ್ಷರದೇವನ ಸಮಕಾಲದವನು ಎಂದು ತಿಳಿಯುತ್ತದೆ. ತನ್ನ ಗ್ರಂಥವನ್ನು ಶಕ 1600 ನೆಯ ಕಾಲಯುಕ್ತಿವರ್ಷದಲ್ಲಿ-ಎಂದರೆ 1679ರಲ್ಲಿ ಬರೆದಂತೆ ಹೇಳುತ್ತಾನೆ.

ಪೂರ್ವಕವಿಗಳಲ್ಲಿ ಬಾಣ, ಕಾಳಿದಾಸ, ಪಾಲ್ಕುರಿಕೆ ಸೋಮ,, ಭೀಮ, ಹರೀಶ, ಪಂಡಿತೇಂದ್ರ, ತೋಂಟದಸಿದ್ಧಲಿಂಗ, ಸಿದ್ಧನಂಜೇಶ ಷಡಕ್ಷರದೇವ ಇವರುಗಳನ್ನು ಸ್ಮರಿಸಿದ್ದಾನೆ.

ಇವನ ಗ್ರಂಥ

## ಕೊಟ್ಟೂರು ಬಸವೇಶ್ವರಪುರಾಣ

ಇದು ವಾರ್ಧಕಷಟ್ಪದಿಯಲ್ಲಿ ಬರೆದಿದೆ; ಸಂಧಿ 19. ಇದರಲ್ಲಿ ಕೊಟ್ಟೂರು ಬಸವೇಶ್ವರ ಎಂಬ ಶಿವಭಕ್ತನ ಚರಿತೆ ಹೇಳಿದೆ.

ಕಥಾಸಾರ--ಇವನು ಶಿವನ ಆಜ್ಞೆಯಿಂದ ಭೂಮಿಯಲ್ಲಿ ಅವತರಿಸಿ ಸದ್ಗುರು ಕರುಣಮಂ ಪಡೆದು ಬ್ರಾಹ್ಮಣರಿಗೆ ಮೃಡನ ಮಹಿಮೆಯನರಿಪಿ ಲಿಂಗತ್ರಯಾರಾಧನಾರ್ಥಂ ಶಿಖಾಪುರದಲ್ಲಿ ನೆಲಸಿ ಅಗಣಿತಮಹಿಮೆಗಳ ನೆರೆದು ಅಕುಬನಂಗೆ ನಿಜಮಂ ತೋರಿಸಿ ಮೋಳಿಗಯ್ಯ ಮೊದಲಾದವರನ್ನು ಶಿವಲೋಕಕ್ಕೆ ಕಳುಹಿ ಕೋಲಶಾಂತೇಶಂಗೆ ತಾನು ನೆಲಸಿದ ಕ್ಷೇತ್ರದ ಮಹಿಮೆಯನೊರೆದು ಲಿಂಗದಲ್ಲಿ ನಿಜಸಮಾಧಿಯನಾಂತನು.

ಪೂರ್ವದಲ್ಲಿ ಇದೇ ಕಥೆಯನ್ನು ಬಸವಲಿಂಗ, ಸಿದ್ಧನಂಜೇಶ, ಗರುಣಿಯಮಹೇಶ, ಬಸವರಾಜ ಇವರುಗಳು ವರ್ಣಕವಾಗಿ ಬರೆದಿರುವುದನ್ನು ನೋಡಿ ಕವಿ ಈ ಗ್ರಂಥವನ್ನು ಬರೆದಂತೆ ತಿಳಿಯುತ್ತದೆ.

ಗ್ರಂಥಾವತಾರದಲ್ಲಿ ಶಿವಸ್ತುತಿಯಿದೆ. ಬಳಿಕ ಕವಿ ಪಾರ್ವತಿ, ಗಣಪತಿ, ಸುಬ್ರಹ್ಮಣ್ಯ, ನಂದಿ, ಭೃಂಗಿ, ವೀರಭದ್ರ, ಅಲ್ಲಮ, ಬಸವ, ಚೆನ್ನಬಸವ, ಮಡಿವಳಮಾಚ, ನೀಲಾಂಬೆ, ಗಂಗಾಂಬೆ ಇವರುಗಳನ್ನು ಸ್ತುತಿಸಿದ್ದಾನೆ. ಈ ಗ್ರಂಥದಿಂದ ಕೆಲವುಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ:

### ತೋಂಟದಸಿದ್ಧಲಿಂಗನ ಸ್ತುತಿ.

ಶರಣಜನಪರಿಭವಲತಾಳಿಯಂ ಕಿಬ್ಬಿತ್ತು ದು |
ಸ್ಮರಕುಜನಕುಜವಿತಾನಂಗಳಂ ತಱಿದು ದು |

ಸ್ತುರದುರಾಶಾವಾರಿಭರಿತಕಾಸಾರವಮಂ ಕೆಡಿಸಿಯಸ್ಮೃತಫಲಂಗಳಂ ||
ಶರಮೆ ನಾಶಂಗೈದು ವಿಷಯಕುಸುಮಂಗಳಂ |
ಕ.ರಿಸದಂತೆಸಗಿ ತೋಂಟದ ರಾಯ ನೆನಿಸಿದ |
ಚ್ಚರಿಯ ಚರಿತಂ ಸಿದ್ಧಲಿಂಗೇಶನೆಮಗೀಗೆ ಸುರುಚಿರೇಪ್ಸಿತಾರ್ಥಫಲಮಂ ||

ವಸಂತ

ಕೋಗಿಲೆಗಳನುರಾಗದಿಕ್ಕೆ ನುಡಿವಕ್ಕಿಗಳ |
ಭೋಗದಾಲಯಮಳಿವಿತಾನಂಗಳತುಳಸುಖ |
ಸಾಗರಂ ರಾಯಂಚೆಗಳ ಸಮುಂಚಿತಸೌಖ್ಯಶಾಲೆ ಚಂದಿರನ ಚೆಲ್ವು ||
ಪೂಗಣೆಯನುರುಜಯಶ್ರೀವಿಲಾಸಂ ವಿರಹಿ |
ಪೂಗದ ಮನೋಗದಂ ತಂಬೆಲರ ಸೈಪು ಚೈ |
ತ್ರಾಗಮಂ ಮದನನುದ್ಯೋಗಮಂ ಪದೆದುರ್ವಿಸುತ್ತಗುರ್ವಿಂ ಬಂದುದು ||

ಸೂರ್ಯಾಸ್ತ

ಇನನಪಜಯಂಬಡೆದನರಿರಾಜನೇಟಿಗೆಯಿಂ |
ಮನೆವಾಟಗೈವುದನುಚಿತವೆಂದು ನೊಂದು ಕಮ |
ಲಿನಿ ತುಂಬಿಯೆಂಬವಿಷದುರುಳಿಯಂ ನೊಣೆದು ಪರವಶದೆ ಕಣ್ಮುಚ್ಚಿದಳೆನೆ ||
ವನಜಂಗಳಳಿವೆರಸಿ ಮುಗಿದುವರಸನ ಬರವಿ |
ಗನುನಯದೆ ಕಳೆಯೇರಿ ನಲಿವಂತೆ ಕುಮುದಂಗ |
ಳನುರಾಗಮಾಂತು ವಿಕಸಿತಮಾಗಿ ಕಾಂತಿವೆತ್ತಿರ್ದುವಾಕಾಲದಲ್ಲಿ ||

ಸ್ತ್ರೀವರ್ಣನೆ

ಚೆಂದುಟಿಯ ಚೆಂಬೊನ್ನ ಬೊಂಬೆ ವಿಸಟಂಬರಿವ |
ಕಂದರ್ಪನಲಗು ಕಂತುವಿನ ಕೈಪಿಡಿ ಜವ್ವ |
ನಂದಳೆದ ಸಿಂಗರದ ಸಿರಿ ಸೊಬಗಿನಾಗರಂ ಭೋಗಿಗಳ ಭಾಗಧೇಯಂ ||
ಸಂದಣಿಪ ಸಂತಸದ ಬೀಡು ಬಿನದದ ನಾಡು |
ಕುಂದಿಲ್ಲದೈಸಿರಿಯ ಗೊತ್ತುಮೋಹದ ಬಿತ್ತು |
ವೆಂದೆನಿಸಿ ಪೆಂಪುವೆತ್ತಿರ್ದಳಾನಾರಿ ಕೋವಿದಜನಮನೋವಿಹಾರಿ ||

## ಸಿಂಗರಾರ್ಯ. ಸು. 1680

ಈತನು ಮಿತ್ರವಿಂದಾಗೋವಿಂದವನ್ನು ಬರೆದಿದ್ದಾನೆ. ಅಲ್ಲದೆ ಈ ಗ್ರಂಥದಲ್ಲಿರುವ

ರಂಜಿಪುದು ರಸಿಕರಂ ಕಾ | ವ್ಯಂ ಜಾಣಿಂದಾರ ರಾಘವಾಭ್ಯುದಯಾಖ್ಯಂ |
ಕಂಜಾಕ್ಷನ ಸಂಕೀರ್ತಿಸು | ತುಂ ಜಸಮುಂ ಪಡೆವ ಗೀತರಂಗೇಶ್ವರಮುಂ ||

ಎಂಬ ಪದ್ಯದಿಂದ ರಾಘವಾಭ್ಯುದಯ, ಗೀತರಂಗೇಶ್ವರ ಎಂಬ ಗ್ರಂಥಗಳನ್ನೂ ಬರೆದಿರುವಂತೆ ತಿಳಿಯುತ್ತದೆ. ಆದರೆ ಇವು ನಮಗೆ ದೊರೆತಿಲ್ಲ.

ಇವನ ಶ್ರೀವೈಷ್ಣವಕವಿ; ಕೌಶಿಕ ಗೋತ್ರದವನು; ಸೌಮ್ಯನೃಸಿಂಹಸೂರಿಯ ಅಥವಾ ಅಳಸಿಂಗರಾರ್ಯನ ಮಗನು; ತಿರುಮಲಾರ್ಯನ[1] ತಮ್ಮನು. ಚಿಕ್ಕದೇವರಾಜನ (1672-1704) "ಕಡುನೇಹಕ್ಕೆ ನೆಲೆವನೆಯುಮಶೇಷಕಲಾನಿಧಿಯುಮೆನಿಸಿ ನೆಗಟ್ದ ತಿರುಮಲಾರ್ಯನ (ತನ್ನ ಅಣ್ಣನ) ಕೃಪೆಯಿಂ ಪಲವುಂ ಬಿಜ್ಜೆಗಳಿಂ ನೆರವಣಿಗೆಗೊಂಡು ಜಸಮಂ" ಪಡೆದಂತೆ ಹೇಳುತ್ತಾನೆ. ಚಿಕ್ಕದೇವರಾಜನಲ್ಲಿ ಈತನೂ ಆಸ್ಥಾನಪಂಡಿತನಾಗಿದ್ದಂತೆ ತೋರುತ್ತದೆ. ಇವನ ಕಾಲವು ಸುಮಾರು 1680 ಆಗಬಹುದು.

ಇವನ ಗ್ರಂಥ

### ಮಿತ್ರವಿಂದಾಗೋವಿಂದ.

ಇದು ನಾಟಕವು; 4 ಅಂಕಗಳಾಗಿ ಭಾಗಿಸಲ್ಪಟ್ಟಿದೆ. ಕನ್ನಡದಲ್ಲಿ ಈಗ ದೊರೆತಿರುವುದು ಇದೊಂದೇ ನಾಟಕವು. ಇದು ರತ್ನಾವಳಿಯೆಂಬ ಸಂಸ್ಕೃತನಾಟಕೆಯ ಭಾಷಾಂತರವು. ಕವಿ ಮಾತೃಕೆಯಲ್ಲಿ ನಾಯಕನಾಗಿರುವ ರಾಜನಿಗೆ ಪ್ರತಿಯಾಗಿ ಕೃಷ್ಣನನ್ನು ನಾಯಕನನ್ನಾಗಿಮಾಡಿ ಮಿಕ್ಕ ಪಾತ್ರಗಳಿಗೂ ಉಚಿತವಾದ ನಾಮಾಂತರಗಳನ್ನು ಕಲ್ಪಿಸಿದ್ದಾನೆ. ಮಾತೃಕೆಗೂ ಇದಕ್ಕೂ ಒಂದೆರಡು ಕಡೆ ಮಾತ್ರ ಸ್ವಲ್ಪ ವ್ಯತ್ಯಾಸವಿದೆ. ಈ ಗ್ರಂಥದ ಉತ್ಕೃಷ್ಟತೆಯನ್ನು ಕವಿ ಈ ಪದ್ಯಗಳಲ್ಲಿ ಹೇಳಿದ್ದಾನೆ:—

ಕಳೆಯಿಂದಂ ಪೊಳೆವಚ್ಚಬಣ್ಣದೊದವಿಂ ಸದ್ವೃತ್ತಸಂಪತ್ತಿಯಿಂ |
ಬೆಳಗಿಂದಂದದೆ ನುಣ್ಪಿನಿಂದೆರ್ಗೆವರ್ಪುದ್ಯದ್ಗುಣಶ್ಲೇಷದಿಂ ||

1. 461 ನೆಯ ಪುಟವನ್ನು ನೋಡಿ

ಲಳಿತಾಲಂಕ್ರಿಯೆಗಾಢ್ಯಮಾಗಿ ಸೊಗಸಿಂ ಕಂಠಕ್ಕೆ ಕರ್ಣಕ್ಕೆ ಸೈ |
ತಳವಟ್ಟಿರ್ಪುವು ಸಿಂಗರಾರ್ಯರುಸಿರ್ದೀ ಶ್ರೀಸೂಕ್ತಿಮುಕ್ತಾಳಿಗಳ್ ||
ಅಂದಂಬೆತ್ತ ಪದಕ್ರಮಂಗಳಿನನೇಕಾಲಂಕ್ರಿಯಾಭಿಖ್ಯೆಯಿಂ |
ಚಂದಂ ಮುಂಬರಿವೊಂದುಭಾವತತಿಯಿಂ ಚಂಚದ್ರಸಸ್ಫೂರ್ತಿಯಿಂ ||
ಒಂದೇರೀತಿಯೊಳೊಂದಿ ಬರ್ಪ ದಸಿಯಿಂದಾಹ್ಲಾದಮಂ ಮಾಳ್ಕುಮಾ |
ನೆಂದಂ ಕೈಮಿಗೆ ಸಿಂಗರಾರ್ಯರೊರೆದೀಕರ್ಣಾಟಕಂ ನಾಟಕಂ ||

ಗ್ರಂಥಾವತಾರದಲ್ಲಿ ಗೋವಿಂದನ ಸ್ತುತಿರೂಪವಾದ ನಾಂದಿ ಇದೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ತೆಂಗಾಳಿ

ಗೀದೇರನ ಬಗೆವಂದೊ | ಳ್ಗೆಳೆಯುಂ ತೆಂಗಾಳಿ ಮಾವುರಗಳೊಳ್ಮೊಗುಳಂ |
ಬೆಳೆಯಿಸುತಂಗನೆಯರ ಮನ| ದೊಳೆ ಮಾನಮನುಡುಗಿಸುತ್ತೆ ಬೀಸುಗುಮಳಿಂ||

ಮನಸ್ಸನ್ನು ಕುರಿತು ಸಾರಸ್ವತಿಯ ಉಕ್ತಿ

ಒಡನೊಗೆದು ನಲಿದು ಬಳೆಯಿಸಿ| ಯೊಡನಾಡಿರ್ದೆನ್ನನುಳಿದು ನೀನೊರ್ಮೆಯೆ ಕ|
ಣ್ಗಡಸಿದ ಜನಮಂ ಬಳಸಿಸಂ | ದೊಡನೀಪರಿ ಪೋಪೆ ನಿನಗೆ ನಾನೆಲ್ಲಕಟಾ ||

ಚಿತ್ರಪಟಮಂನೋಡಿ ವಾಸುದೇವನುಕ್ತಿ

ಕಮಲಾಕೃತಿಯಂ ಲೀಲಾ | ಕ್ರಮದಿಂ ಕೀಳ್ಗೆಯ್ದು ಪಕ್ಷಪಾತಮನೆಸ್ಗೊಳ್ |
ಸಮೆಯಿಸುತಿರ್ಪಳ್ ಮಾನಸ|ಕಮರ್ಕೆಯಿಂ ಪೊಕ್ಕು ರಾಜಹಂಸಿವೊಲಮಮಾ |

ಸಾರಸ್ವತಿಯಸೌಂದರ್ಯ

ಇಳೆಯೊಳ್ ಪೆಂಡಿರ ಜೊಂಪಿಲೊಳ್ಮಣಿಯನೀಚಂದ್ರಾಸ್ಯೆಯಂ ಸೃಷ್ಟಿಗೆ |
ಯ್ದಳವಿಂ ನೋಡಿಯುರಲ್ಚಿ ಕಣ್ಗಳನಜಂ ತಾಂ ವಿಸ್ಮಯಂದಾಳ್ದಿಯಂ |
ಗುಳಿಯಂ ಮೂಗಿನಮೇಲಮರ್ಚಿ ತಲೆಯಂ ತೂಗುತ್ತೆ ಸಂತೋಷದಿಂ |
ಭಳಿರೇ ಪೂತು ಮಝೂರೆ ಭಾಪೆನುತೆ ನಾಲ್ಕಾಸ್ಯಂಗಳಿಂ ಬಣ್ಣಿಕುಂ ||

ವಾಸುದೇವನ ವಿರಹ

ಮುನಿಸಿಂ ಲೆಕ್ಕಕೆ ಬಾರದಂತೆ ಮದನಾ ನೀನೆಚ್ಚ ಬಾಣಂಗಳಂ |
ಜನದೊಳ್ ಪಂಚತೆಯಂ ನೆಗಳ್ಚಿ ಮಿಗೆ ಕಾಮಂಗೈದುಕೋಲಂತವ ||
ರ್ಕನಿತೋ ಎನ್ನವೊಲಿರ್ಪವಂ ಗುಣಿಯೆನುತ್ತುಂ ಲೋಗರೊಲ್ದಾಡುವೀ |
ಯನುವಾತಂ ತಳಮೇಲೊಡರ್ಚದೆ ಗಡಾ ನಿನ್ನಾಪರ್ಣನೇವಣ್ಣಿಪೆಂ ||

## ಹೊನ್ನಮ್ಮ. ಸು. 1680

ಈಕೆ ಹದಿಬದೆಯಧರ್ಮವನ್ನು ಬರೆದಿದ್ದಾಳೆ. ಇವಳು ಚತುರ್ಥವರ್ಣದವಳೆಂದು ತೋರುತ್ತದೆ. ಮೈಸೂರುದೊರೆಯಾದ ಚಿಕ್ಕದೇವರಾಜನ (1672-1704) ಸಂಚಿಯ ಊಳಿಗದಲ್ಲಿದ್ದಂತೆ ಹೇಳಿಕೊಂಡಿದ್ದಾಳೆ. ಈ ರಾಜನ ಪಟ್ಟಮಹಿಷಿಯಾದ ಎಳಂದೂರು ದೇವಾಜಮ್ಮಣ್ಣಿಯ ಪ್ರೀತಿಗೆ ಪಾತ್ರಳಾಗಿದ್ದಂತೆ ತಿಳಿವುದರಿಂದ ಇವಳ ಸ್ಥಳವು ಎಳಂದೂರಾಗಿದ್ದರೂ ಇರಬಹುದು. ತನ್ನ ವಿದ್ಯಾಗುರು ವೇದಮಾರ್ಗಪ್ರತಿಷ್ಠಾಪನಾಚಾರ್ಯ ಉಭಯವೇದಾಂತಾಚಾರ್ಯ ಅಳಸಿಂಗರಾರ್ಯನೆಂದು ಹೇಳಿಕೊಂಡಿದ್ದಾಳೆ. ಈತನು ಚಿಕ್ಕದೇವರಾಜನಲ್ಲಿ ಮಂತ್ರಿಯಾಗಿದ್ದ ತಿರುಮಲಾರ್ಯನ ತಮ್ಮನೂ ಮಿತ್ರವಿಂದಾಗೋವಿಂದವೆಂಬ ನಾಟಕದ ಕರ್ತೃವೂ ಆದ ಅಳಸಿಂಗರಾರ್ಯನೇ ಆಗಿರಬೇಕು. ಚಿಕ್ಕದೇವರಾಜನು ದೇವಾಜಮ್ಮಣ್ಣಿಯೊಡನೆ "ಈ ಹೊನ್ನಿ ಸರಸಸಾಹಿತ್ಯದ ವರದೇನತೆ, ಕಾವ್ಯಾಲಂಕಾರನಾಟಕಗಳ ಪವಣೆಗೆಯ ಬಲ್ಲವಳು ಎಂದು ಅಳಸಿಂಗರಾರ್ಯನು ಹೇಳಿರುವನು. ವಿದ್ಯಾಗುರು ಶಿಷ್ಯರನ್ನು ಹೊಗಳಬೇಕಾದರೆ ಅವರಲ್ಲಿ ವಿಶೇಷಯೋಗ್ಯತೆ ಇರಬೇಕು. ಇವಳಿಂದ ಸರಸವಾದ ಒಂದು ಗ್ರಂಥವನ್ನು ಮಾಡಿಸು" ಎಂದು ಹೇಳಲು, ರಾಣಿ ಅದೇ ಮೇರೆಗೆ ಅಪ್ಪಣೆಮಾಡಲು ಹೊನ್ನಮ್ಮನು ಈ ಗ್ರಂಥವನ್ನು ಬರೆದಂತೆ ತಿಳಿಯುತ್ತದೆ. ಇವಳ ಕಾಲವು ಸುಮಾರು 1680 ಆಗಬಹುದು.

ಇವಳ ಗ್ರಂಥ

### ಹದಿಬದೆಯಧರ್ಮ

ಇದು ಸಾಂಗತ್ಯದಲ್ಲಿ ಬರೆದಿದೆ; ಸಂಧಿ 9, ಪದ 468. ಇದರಲ್ಲಿ ಹದಿಬದೆಯ ಎಂದರೆ ಪತಿವ್ರತಾಸ್ತ್ರೀಯ ಧರ್ಮವು ವಿಶದವಾಗಿ ನಿರೂಪಿಸಿದೆ. ರಾಮಾಯಣ, ಮಹಾಭಾರತ, ಮನ್ವಾದಿಧರ್ಮಶಾಸ್ತ್ರಗಳು ಇವುಗಳಲ್ಲಿ ಉಕ್ತವಾದ ವಿಷಯಗಳನ್ನು ಸಂಗ್ರಹಿಸಿ ಬರೆದಂತೆ ಹೇಳಿದೆ. ಗ್ರಂಥಾವತಾರದಲ್ಲಿ ಪಶ್ಚಿಮರಂಗಧಾಮನ ಸ್ತುತಿ ಇದೆ. ಬಳಿಕ ರಂಗನಾಯಕಿಯನ್ನು ಸ್ತುತಿಸಿ ಮೈಸೂರುರಾಜರ ಪರಂಪರೆಯನ್ನು ಸಂಕ್ಷೇಪವಾಗಿ ಹೇಳಿ ಗ್ರಂಥವು ಹುಟ್ಟುವುದಕ್ಕೆ ಕಾರಣವನ್ನು ತಿಳಿಸಿ ಕವಿ ಗ್ರಂಥವನ್ನು ಆರಂಭಿಸಿದ್ದಾಳೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ಮಱೆ ಕಱೆವುದು ಬೆಳೆ ಪೆರ್ಚುವುದಿಳೆ ತಳ| ಕೆಟ್ಟಿದು ಪೋಗದೆ ತಡೆದಿಹುದು |
ಪಟಿವಿಲ್ಲದ ಪತಿವ್ರತೆಯರ ನಡತೆಯು | ಬಳೆದೊಳೆಂಬರು ಬಲ್ಲವರು ||
ಪಲವು ಸುಕೃತಮಿಂತು ಪರಿಣತಿವೆತ್ತುದೊ | ಕುಲದೇಱ್ಗೆ ಗುಂಪುಕೂಡಿದುವೋ |
ಸಲೆ ಪರಿಶುದ್ಧಿ ಸಾಕಾರಮಾದುದೊ ಎನೆ | ಕುಲವಧು ಕುಱುಹುಗೊಂಡಿಹಳು ||
ಉಣದುಡದೊಡಲ ದಂಡಿಸುವಾಯಸವಿಲ್ಲ | ಪಣವ ವೆಚ್ಚಿಸುವ ಪಾಡಿಲ್ಲ |
ಗುಣವಂತೆಯರೆಸಗುವ ಪತಿಶುಶ್ರೂಷೆ | ಗೆಣೆಯುಹ ತಪವಿನ್ನೊಳವೇ ||
ಮುಡಿಯೊಳು ಪೊತ್ತು ಮುದ್ದಿಸಿದೊಡೇನಡಿಗಳಿಂ|ಪೊಡವಿಗಿಟ್ಟೊಱಸಿದೊಡೇನು |
ಒಡೆಯನಿಟ್ಟಂತಿರ್ಪುದೊಡವೆಗುಚಿತಮೆಂದು | ನಡೆವುದು ಸಲ್ವೆಂಡಿರೊಲಿದು ||
ಮನದೊಳು ಮನ ನೆನಹಿನೊಳು ನೆನಹು ಮತ್ತೆ | ತನು ತನುವಿನೊಳೊಡವೆರಸಿ |
ಅನುಗೊಳೆ ಪಾಲುನೀರುಗಳಂತಿನಿಯನು | ಮಿನಿಯಳುಮೇಕವೆನಿಪುದು ||
ತಾಯ ತಂದೆಯ ದೆಸೆ ಗಂಡನ ನೆಸೆಯೆಂ | ಬೀಯೆರಡಿರವಿನೊಳೆಸೆವ |
ಕಾಯಬಾಂಧವರ ಕಣ್ಣೆರಡೆಂದು ಕಾಣ್ಬುದ | ಸೂಯೆಗೊಳ್ಳದೆ ಸುಖಿಸುವುದು ||
ಬಸವೞಿಸದೆ ಪೞಿಯುದೆ ಭಂಗವಡಿಸದೆ | ಹಸಗೆಡಿಸದೆ ಹಗುಗಿಸದೆ |
ಬಸಿಱೊಳು ಬಂದ ಪೆಣ್ಮಕ್ಕಳ ಮಱುಕವ | ಸೊಸೆಯುರೆಡೆಯೊಳೆಸಗುವುದು ||
ಪೆಣ್ಣಲ್ಲವೆ ತಮ್ಮನೆಲ್ಲ ಪಡೆದ ತಾಯಿ | ಪೆಣ್ಣಲ್ಲವೆ ಪೊರೆದವಳು |
ಪೆಣ್ಣು ಪೆಣ್ಣೆಂದೇತಕೆ ಬೀೞುಗಳೆವರು | ಕಣ್ಣುಕಾಣದ ಗಾವಿಲರು ||
ಪಣದಾಸ್ತೆನಂಟುತನದ ಪತ್ತುಗೆ ನೇಹ | ದೆಣಿಕೆಗಳಿಂದೆದೆಗರಗಿ |
ಗುಣಜೌವನಕುಲರೂಪುಗುಂದಿದ ನಡೆ | ವೆಣಕೀಯಲಾಗದು ಪೆಣ್ಣ ||
ನಸುನಾಣ್ಬುವೆಳವೆಂಡಿರ ನಲವೇಱಿಸಿ | ಬಸಗೆಯ್ಯದೆ ಬಚ್ಚೆದೋಱಿ |
ಪೊಸಪೂವ ಸರಗೈದು ಮುಡಿಯುದೆ ನಲಿಗಿಸಿ | ರಸದೆಗೆವೆಸಕವೆನಿಪುದು ||

---

## ವೇಣುಗೋಪಾಲವರಪ್ರಸಾದ. ಸು. 1680

ಈತನು ಚಿಕ್ಕದೇವರಾಜವಂಶಾವಳಿಯನ್ನು ಬರೆದಿದ್ದಾನೆ. ಇವನು ಬ್ರಾಹ್ಮಣಕವಿ. "ಹೃದಯಾಂಭೋರುಹದಲ್ಲಿಯಾಂ ನೆನೆದು ಗೋಪಾಲಾಂಘ್ರಿಪಂಕೇಜಮಂ ಆತನನುಜ್ಞೆಯಾಂತುಸಿರ್ವೆಂ" ಎಂಬುದರಿಂದ ಈತನ ಗುರು ಗೋಪಾಲನೆಂದೂ ಆತನ ಆಜ್ಞೆಯಿಂದ ಈ ಗ್ರಂಥವನ್ನು ಕವಿ ರ೦

ಸಿದನೆಂದೂ ತಿಳಿಯುತ್ತದೆ. ಮದರಾಸ್ ಪ್ರಾಚ್ಯಕೋಶಾಲಯದಲ್ಲಿರುವ ಈ ಗ್ರಂಥದ ಪ್ರತಿಯಲ್ಲಿ ಕವಿಯ ಹೆಸರು ಮೇಲೆ ಹೇಳಿರುವಹಾಗೆ ಕೊಟ್ಟಿದೆ. ಮೈಸೂರಲ್ಲಿ ಅಚ್ಚಾಗಿರುವ ಪುಸ್ತಕದಲ್ಲಿ ಕವಿಯ ಹೆಸರಿಲ್ಲ. ಗ್ರಂಥಾಂತ್ಯದಲ್ಲಿ 'ಚಿಕದೇವರಾಜಂ ಆಳುತಿರ್ಪಂ' ಎಂಬುದರಿಂದ ಕವಿ ಆ ರಾಜನ ಆಳಿಕೆಯಲ್ಲಿ (1672-1704) ಇದ್ದವನೆಂಬುದು ವ್ಯಕ್ತವಾಗುತ್ತದೆ. ಇವನು ಸುಮಾರು 1680 ರಲ್ಲಿ ಇದ್ದಿರಬಹುದು. ಪೂರ್ವಕವಿಗಳಲ್ಲಿ ವಾಲ್ಮೀಕಿ, ವ್ಯಾಸ, ಕಾಳಿದಾಸ, ಬಾಣ ಇವರುಗಳನ್ನು ಸ್ಮರಿಸುತ್ತಾನೆ.

ಯಾದವಗಿರಿಮಾಹಾತ್ಮ್ಯವೇ ಮೊದಲಾದ ಗ್ರಂಥಗಳನ್ನು ರಚಿಸಿದ ತಿಮ್ಮಕವಿಯ "ಗೋಪಾಲಪಾದವನೇಜಾತಭೃಂಗಂ" ಎಂದು ಹೇಳಿಕೊಂಡಿರುವುದರಿಂದಲೂ ಈ ಗ್ರಂಥದ ಕೆಲವು ಪದ್ಯಗಳು ಯಾದವಗಿರಿಮಾಹಾತ್ಮ್ಯದಲ್ಲಿಯೂ ದೊರೆವುದರಿಂದಲೂ ಅವನೇ ಈ ಗ್ರಂಥವನ್ನೂ ಬರೆದಿರಬಹುದೆಂಬ ಸಂದೇಹಕ್ಕೆ ಅವಕಾಶವಿದೆ. ಆದರೆ ಹೆಸರುಹೇಳಿಕೊಳ್ಳದೆ ಇರುವುದರಿಂದ ಇದು ಹೀಗೆಯೇ ಎಂದು ನಿಶ್ಚಯಿಸುವ ವಿಷಯದಲ್ಲಿ ಸ್ವಲ್ಪ ಹಿಂದೆಗೆಯಬೇಕಾಗಿದೆ.

ಇವನ ಗ್ರಂಥ

## ಚಿಕ್ಕದೇವರಾಜವಂಶಾವಳಿ

ಇದು ಚಂಪೂರೂಪವಾಗಿದೆ; ಇದರಲ್ಲಿ 138 ಪದ್ಯಗಳಿವೆ. ಮೈಸೂರುದೇಶದ ರಾಜರ ವಂಶಾವಳಿ ಇದರಲ್ಲಿ ಸಂಗ್ರಹವಾಗಿ ವರ್ಣಿತವಾಗಿದೆ; ವರ್ಣನಾಭಾಗವೇ ಹೆಚ್ಚಾಗಿದೆ. ಗ್ರಂಥಾವತಾರದಲ್ಲಿ ರಂಗನಾಥನ ಸ್ತುತಿ ಇದೆ. ಬಳಿಕ ಕವಿ ರಂಗನಾಯಕಿ, ಸರಸ್ವತಿ, ಗಣೇಶ, ಗಂಗಾಧರ ಇವರುಗಳನ್ನು ಹೊಗಳಿದ್ದಾನೆ. ಅನಂತರ ಗೋಪಾಲನ ಆಜ್ಞೆಯಿಂದ ಗ್ರಂಥವನ್ನು ಬರೆಯುತ್ತೇನೆ ಎಂದು ಕಥೆಯನ್ನು ಆರಂಭಿಸಿದ್ದಾನೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

### ಸಮುದ್ರ

ಚಳದುತ್ಕಲ್ಲೋಲಮಾಲಾಹತಿವಿದಳಿತಶುಕ್ತಿವ್ರಜೋನ್ಮುಕ್ತಮುಕ್ತಾ |
ವಳಿ ತಾರಾಸಂಚಯಂ ತತ್ತಟಕಲಿತಮಹಾವಿದ್ರುಮಚ್ಛಾಯೆ ಸಂಧ್ಯಾ ||
ವಿಳಸದ್ರಾಗಂ ತದಂತರ್ಗತವಡಬನಧಸ್ಥಾರ್ಕಬಿಂಬಂ ತದೀಯೋ |
ಜ್ವಳಶಂಖಂ ಚಂದ್ರನಂತೊಪ್ಪಿರೆ ಮೆಱೆದುದು *ಸಂಧ್ಯಾನಭಂಬೊಲ್ ಸಮುದ್ರಂ ||

### ಮೇರು

ಬಳಸಿ ಬರುತ್ತುಮಿರ್ಪ ಹಿಮಧಾಮನೆ ದೀಪಿಕೆ ಚಾರುತಾರಕಾ |

* 498 ನೆಯ ಪುಟವನ್ನು ನೋಡಿ.

ವಳಿಯಿ ಸುಗಂಧಮಾಂತ ಕುಸುಮವ್ರಜಮೊಪ್ಪುವ ಜಾಹ್ನವೀನದೀ ||
ಜಳಮಭಿಷೇಕವಾರಿ ಘನರಾವಮೆ ಗಂಟೆಯದಾಗೆ ದೇವಸಂ |
ಕುಳಮಿರದರ್ಚಿಸಿರ್ದ ಘನಲಿಂಗಮೆನಲ್ ಕನಕಾದ್ರಿ ರಂಜಿಕುಂ ||

ಚಿಕ್ಕದೇವರಾಜನಕೀರ್ತಿ

ಪರಿಪಂಥಿಕ್ಷಿತಿರಾಡ್ಯಶೋರುಚಿಸುಕರ್ಪೂರರಾಳಿಯಂ ತಂದು ಭೂ |
ಧರವರ್ಯಂ ಚಿಕದೇವಭೂಪತಿಗೆ ತತ್ಕೀರ್ತ್ಯುಜ್ವಲತ್ಕಾಂತೆ ತಾಂ ||
ಸ್ಫುರಿಸಲ್ ಪೊತ್ತಿಸಿ ತತ್ಪ್ರತಾಪಶಿಖಿಯೊಳ್ ನೀರಾಜನವ್ಯೂಹಮಂ |
ನಿರತಂ ಗೈದುರೆ ಮಂಗಳಾರತಿಯನೆತ್ತುತ್ತಿರ್ದಪಳ್ ಮೋದದಿಂ ||

ನರ್ತಕಿಯರು

ನಿಡುಜಡೆಯಿಂದಲರ್ ಜಗುಳ್ದಿ ಕಣ್ಗಳ ನುಣ್ಬೊಗರುರ್ವೆ ವಕ್ತ್ರಮಂ |
ಪಿಡಿಯೆ ಬೆಮರ್ ತೆರಂಬೊಳೆಯೆ ನುಣ್ಗದಪುಣ್ಮಿರೆ ದಂತಕಾಂತಿ ಮೆ ||
ಲ್ಲಡಿಯ ಸುವರ್ಣಕಿಂಕಿಣಿಯ ಮೆಲ್ಲುಲಿ ರಂಜಿಸೆ ಲಾಸ್ಯಮಾರ್ಗದೊಳ್ |
ಬಿಡದೆ ಬೆಡಂಗು ಮಿಾರ್ದಿ ಮಿಗೆ ನರ್ತಕಿಯರ್ ಸೊಗಸಿಂದಮೊಪ್ಪಿದರ್ ||

---

ಚಿದಾನಂದಕವಿ. ಸು. 1680

ಈತನು ಮುನಿವಂಶಾಭ್ಯುದಯವನ್ನು ಬರೆದಿದ್ದಾನೆ. ಇವನು ಜೈನ ಕವಿ. ತನ್ನ ಗ್ರಂಥದಲ್ಲಿ ಮೈಸೂರು ದೊರೆಯಾದ ಚಿಕ್ಕದೇವರಾಜನನ್ನು (1672-1704) ಸ್ತುತಿಸಿ, ಆತನ ವಂಶಾವಳಿಯನ್ನು ಹೇಳಿ ಅವನನ್ನೇ ಸಂಬೋಧಿಸಿ ವಿಷಯಗಳನ್ನು ಹೇಳುವುದರಿಂದ ಈಕವಿ ಚಿಕ್ಕದೇವರಾಜನಕಾಲದವನು ಎಂಬುದು ವ್ಯಕ್ತವಾಗುತ್ತದೆ ; ಸುಮಾರು 1680 ರಲ್ಲಿ ಇದ್ದಿರಬಹುದು. ಚಿಕ್ಕದೇವರಾಜನ ವಂಶಾವಳಿಯನ್ನೂ ಶ್ರವಣಬೆಳುಗೊಳಕ್ಕೆ ಸಂಬಂಧಿಸಿದ ಕೆಲವು ವಿಷಯಗಳನ್ನೂ ಈರೀತಿಯಾಗಿ ಹೇಳಿದ್ದಾನೆ-

ಬೆಟ್ಟದ ಚಾಮರಾಜ; ಮಕ್ಕಳು ತಿಮ್ಮರಾಜ, ಕೃಷ್ಣರಾಜ, ಚಾಮರಾಜ; ಚಾಮರಾಜನ ಮಕ್ಕಳು ರಾಜನೃಪ, ಬೆಟ್ಟದಚಾಮರಾಜ, ದೇವರಾಜ, ಚೆನ್ನರಾಜ; ರಾಜನೃಪನು ಪಟ್ಟಕ್ಕೆ ಬಂದನು; ಬೆಟ್ಟದ ಚಾಮರಾಜನು ಯುವರಾಜನಾಗಿದ್ದನು. ರಾಜನೃಪನು

ಕಾರುಗಹಳ್ಳಿಯವರ ಕಡಿದೋಡಿಸಿ| ಮಿಾರ್ದಿದ ತಿರುಮಲನೃಪನ |
ಭಾರಿಯ ಜಗಳದಿ ಕೆಣಕಿ ಮುಱಿದು ಹಮ್ಮ | ಶ್ರೀರಂಗಪುರವ ಸಾಧಿಸಿದ ||

---

1. ಈ ಎರಡುಪದ್ಯಗಳು ತಿಮ್ಮಕವಿಯ ಯಾದವಗಿರಿಮಾಹಾತ್ಮ್ಯದಲ್ಲಿಯೂ ದೊರೆಯುತ್ತವೆ; 494 ನೆಯ ಪುಟವನ್ನು ನೋಡಿ.

ರಾಜನೃಪನ ಮಗ ನರಸರಾಜನ ಮಗ ಚಾಮರಾಜನು ಬಳಿಕ ಪಟ್ಟಕ್ಕೆ ಬಂದನು. ಈತನು ಶ್ರವಣಬೆಳುಗೊಳಕ್ಕೆ ಹೋಗಿ ಅಲ್ಲಿಯ ಶಾಸನಗಳನ್ನು ಓದಿಸಿ ಕೇಳಿ ತೆಲುಗುರಾಜನಾದ ಜಗದೇವನ ಹಾವಳಿಯಿಂದ ಗೋಮಟದೇವರ ಪೂಜೆ ನಿಂತುಹೋಗಿ ಚಾರುಕೀರ್ತಿಪಂಡಿತನು ಆ ಸ್ಥಳವನ್ನು ಬಿಟ್ಟು ಭಲ್ಲಾತಕೀಪುರಕ್ಕೆ ಹೊರಟುಹೋಗಿ ಭೈರವರಾಜನ ಪೋಷಣೆಯಲ್ಲಿ ಇರುವುದನ್ನು ತಿಳಿದು ಆತನನ್ನು ಕರಸಿ ಪುನಃ ಬೆಳುಗೊಳದಲ್ಲಿ ನಿಲ್ಲಿಸಿ ದೇವರಿಗೆ ಮಾನ್ಯಗಳನ್ನು ಬಿಟ್ಟನು. ಬಳಿಕ ರಾಜನೃಪನ ಕಿರಿಯಣುಗ ಇಮ್ಮಡಿರಾಜನೂ ಅನಂತರ ಬೆಟ್ಟದ ಚಾಮರಾಜನ ಮಗ ಕಂಠೀರವನರಸರಾಜನೂ ಆಳಿದರು. ರಾಜನೃಪನ ತಮ್ಮ ದೇವರಾಜನ ಮಕ್ಕಳು ದೊಡ್ಡದೇವರಾಜ, ಚಿಕ್ಕದೇವರಾಜ, ದೇವರಾಯ, ಮರಿದೇವ; ದೊಡ್ಡದೇವರಾಜನ ಹೆಂಡತಿ ಅಮೃತಮ್ಮ, ಮಕ್ಕಳು ಚಿಕ್ಕದೇವರಾಜ, ಕಂಠೀರವೇಂದ್ರ. ಕಂಠೀರವನರಸರಾಜನನಂತರ ದೊಡ್ಡದೇವರಾಜನ ತಮ್ಮ ದೇವರಾಜನು ಪಟ್ಟಕ್ಕೆ ಬಂದನು; ಇವನ ಆಳಿಕೆಯಲ್ಲಿ ಇವನ ಅಣ್ಣನ ಮಗನಾದ ಚಿಕ್ಕದೇವರಾಜನು ಬೆಳುಗೊಳಕ್ಕೆ ಹೋಗಿ ದಾನಶಾಲೆಗಾಗಿ ಮದನಯ ಎಂಬ ಗ್ರಾಮವನ್ನು ದೇವರಾಜನಿಗೆ ಹೇಳಿ ಕೊಡಿಸಿದನು. ಬಳಿಕ ಆತನೇ ಪಟ್ಟಕ್ಕೆ ಬಂದನು. ಇವನಿಗೆ ಶೃಂಗಾರಕರ್ಣಾಟಚಕ್ರಿ ಎಂಬ ಬಿರುದು.

ಇವನ ಗ್ರಂಥ

ಮುನಿವಂಶಾಭ್ಯುದಯ.

ಇದು ಸಾಂಗತ್ಯದಲ್ಲಿ ಬರೆದಿದೆ; ನಮಗೆ ದೊರೆತ ಅಸಮಗ್ರಪ್ರತಿಯಲ್ಲಿ 5 ಸಂಧಿಗಳಿವೆ. ಈ ಗ್ರಂಥದಲ್ಲಿ ಜೈನಮುನಿಗಳ-ಮುಖ್ಯವಾಗಿ ಮೂಲಸಂಘದ ದೇಶೀಯಗಣದ ಕೊಂಡಕುಂದಾನ್ವಯದ ಮುನಿಗಳ-ಪರಂಪರೆ ಹೇಳಿದೆ. ಶ್ರುತಕೇವಲಿಯಾದ ಭದ್ರಬಾಹು ಬೆಳುಗೊಳಕ್ಕೆ ಬಂದು ಚಿಕ್ಕಬೆಟ್ಟದಲ್ಲಿ ಇದ್ದಂತೆಯೂ ಚಂದ್ರಗುಪ್ತನು ಅರ್ಹದ್ಬಲ್ಯಾಚಾರ್ಯನ ಕಾಲದಲ್ಲಿ ಬೆಳುಗೊಳಕ್ಕೆ ಬಂದು ದೀಕ್ಷೆವಡೆದಂತೆಯೂ ಹೇಳಿದೆ. ಗ್ರಂಥಾವತಾರದಲ್ಲಿ ಜಿನಸ್ತುತಿ ಇದೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ಆಲಿಗಲ್ಲು

ಗುಡುಗು ಮದ್ದಳೆ ಗಗನವು ರಂಗಸ್ಥಳ | ಕುಡಿಮಿಂಚು ನರ್ತಕಿಯಾಗೆ |
ಬಿಡದೆ ಸೂಸುವ ಮುಖ್ಯಪುಷ್ಪಾಂಜಲಿಶೋಭೆ | ವಡೆದುವಂದಾಲಿಗಲ್ಲುಗಳು ||

ಬಳ್ಳಿಮಿಂಚುಗಳು ಬಲ್ಮುಗಿಲೆಯ ಭರಕೆ ಸುತ್ತ | ಕೊಳ್ಳಿಯ ಬೀಸಿದಂತಾಗೆ |
ಬಳ್ಳಬಳ್ಳದಿ ಮೊಗೆಮೊಗೆದು ಚೆಲ್ಲಿದನ್ತೋಲು | ಚೆಲ್ಲಿದುವಾಲಿಗಲ್ಲುಗಳು ||

ರಾಜನೀತಿ

ದಂಡವ ದೋಷಕ್ಕೆ ತಕ್ಕಷ್ಟು ನಡಸದೆ | ಮಂಡಲಪತಿಯುಪೇಕ್ಷಿಸಲು |
ಪುಂಡೆದ್ದು ಮಾತ್ಸ್ಯನ್ಯಾಯದೊಳೊಬ್ಬರನೊಬ್ಬ | ರಂಡಲೆಯದೆ ಸುಮ್ಮನಿಹರೇ ||
ನೀರಪೂರಿತವಾದ ಹಲವುಕುಂಭಗಳೊಳು | ತೋಱುವಾದಿತ್ಯನಂದದೊಳು |
ಮೇರೆಗೊಂಡಖಿಲಮತಂಗಳೊಳಿರ್ಪಂತೆ | ತೋಱುವರವನಿಪಾಲಕರು ||
ಪರಮಕುಲಜನುಪಧಾಶುದ್ಧಿಸಹಿತನಂ | ತುರುಶಾಸ್ತ್ರಶಸ್ತ್ರಕೋವಿದನು |
ಗರುವನು ಸ್ವಾಮಿಭಕ್ತನು ನಿಜದೇಶಜ | ನರುಹನು ಮಂತ್ರಿಪದವಿಗೆ ||

ಕಾಮ

ವರವಹ್ನಿಸಾಕ್ಷಿಕವಾಗಿ ತಾನಂಗೀ | ಕರಿಸಿದವರೊಳಲ್ಲದುೞಿದ |
ಪರಪರಿಗ್ರಹದ ಪೆಣ್ಣುಗಳೊಳು ಮಾಡಿದ | ದುರಭಿಸಂಧಿಯೆ ಕಾಮವರಸಾ ||

ಆತ್ಮ

ತನ್ನಿಂದ ತಾನೆ ಬದ್ಧಾತ್ಮನು ಭಾವಿಸೆ | ತನ್ನಿಂದ ತಾನೆ ಮುಕ್ತಾತ್ಮ |
ಇನ್ನೊಬ್ಬ ಕೊಡುವ ಬಿಡುವನೆಂಬ ಮಾತಿನ | ಗನ್ನಗೊಕ್ಕಗೆ ಸಿಕ್ಕನಾತ್ಮ ||
ಸತ್ಕರ್ಮಗಳ ಮಾಡಿ ಸುಖಿಸುಹನಂತೊಮ್ಮೆ | ದುಷ್ಕರ್ಮಗಳ ಮಾಡಿ ದುಃಖಿ |
ಸತ್ಕರ್ಮದುಷ್ಕರ್ಮವೆರಡ ತಪದಿ ಸು | ಟ್ಟಿಕ್ಕಲೊಮ್ಮೆಗೆ ಮುಕ್ತನಾತ್ಮ ||

---

## ಮಲ್ಲರಸ. ಸು. 1680

ಈತನು ದಶಾವತಾರಚರಿತೆಯನ್ನು ಬರೆದಿದ್ದಾನೆ. ಇವನು ಬ್ರಾಹ್ಮಣ ಕವಿ; ಶ್ರೀವತ್ಸಗೋತ್ರದವನು; ಕಮ್ಮೆವಂಶದವನು. ಇವನ ತಂದೆ ತಿಮ್ಮರಸ ಮಂತ್ರಿ; ತಾಯಿ ತಿಪ್ಪಾಂಬಿಕೆ; ಗುರು ಸದಾನಂದ; ಸ್ಥಳ ನಾರವಂಗಲ. ಪೂರ್ವಕವಿಗಳಲ್ಲಿ ಕುಮಾರವ್ಯಾಸ (ಶುಕರೂಪ)ನನ್ನು (ಸು. 1430) ಸ್ತುತಿಸುವುದರಿಂದ ಕವಿ ಅವನ ಕಾಲಕ್ಕೆ ಈಚೆಯವನೆಂಬುದು ವ್ಯಕ್ತವಾಗಿದೆ. ನಮಗೆ ದೊರೆತ ಪ್ರತಿಯಲ್ಲಿ ಗ್ರಂಥಾಂತ್ಯದ ಗದ್ಯಕ್ಕೆ ಹಿಂದೆ ಚಿಕ್ಕುಪಾಧ್ಯಾಯನ ಅಜ್ಞಾನುಸಾರವಾಗಿ ಗ್ರಂಥವು ಪ್ರತಿಮಾಡಲ್ಪಟ್ಟಿತೆಂದು ಹೇಳಿರುವುದರಿಂದ ಗ್ರಂಥವು ಬಹುಶಃ ಚಿಕ್ಕುಪಾಧ್ಯಾಯನಕಾಲದಲ್ಲಿ ಹುಟ್ಟಿರಬಹುದೆಂದು

ತೋರುತ್ತದೆ. ಹಾಗಿದ್ದ ಪಕ್ಷದಲ್ಲಿ ಕವಿಯ ಕಾಲವು ಸುಮಾರು 1680 ಆಗಬಹುದು

ಪೂರ್ವಕವಿಗಳನ್ನು ಈ ಪದ್ಯದಲ್ಲಿ ಸ್ಮರಿಸಿದ್ದಾನೆ—

ಕವಿಕುಲಕಾಂ ನಮಸ್ಕರಿಪೆ ಯುಕ್ತಿನಿವಾಸಗೆ ಕಾಳಿದಾಸಗಂ |
ನವರಸಭೂಷಹಂಪೆಯುಹರೀಶಗೆ ಕೀರ್ತಿಲಸತ್ಪ್ರಕಾಶಗಂ |
ಭುವನ...........ಭದ್ರಗೆ ಸತ್ಕವಿರಾಯರುದ್ರಗಂ |
ತನೆ ಕವಿಸಾರ್ವಭೌಮಶುಕರೂಪಗೆ................ ||

ತನ್ನ ಗುಣಾದಿಗಳನ್ನು ಕವಿ ಈ ಪದ್ಯಗಳಲ್ಲಿ ಹೇಳಿಕೊಂಡಿದ್ದಾನೆ—

ಹರಿಪದಪದ್ಮಭೃಂಗನವನೀಸುರಸದ್ಗುರುಸೇವ್ಯನವ್ಯವಿ !
ಸ್ತರಶುಭಚಿತ್ತನುತ್ತಮಚರಿತ್ರಲಸನ್ಮೃದುವಾಕ್ಯಭಾವಜಂ ||
ಧುರರಸರೀತಿಮಾರ್ಗವರಸಜ್ಜನಬಂಧುವಿಲಾಸಮೂರ್ತಿಭಾ |
ಸುರತರಕಲ್ಪಭೂರುಹಲಸತ್ಕವಿಮಲ್ಲರಸಾಂಕಪಂಡಿತಂ ||
ಎಸೆವ ಪದಂ ಸುಶಬ್ದಮಣಿನೂಪುರದಿಂ ಮಿಗೆ ತೋಱೆ ಭಾವದ |
ಲ್ಲೆಸೆನತಿಜಾತಿವಸ್ತ್ರದೊಳೆ ವೃತ್ತಕುಚಂ ರಸಗಂಧದಿಂ ಸದಾ ||
ಪೊಸದೆನಿಪಾಕಜಂ ಸಕಲಕನ್ನಡಪೂಗಳಿನೊಪ್ಪೆ ಕಬ್ಬಮೆಂ |
ಬಸಿಯಳನಿಂತು ಸಿಂಗರಿಸಿ ರಾಜಿಸುವಂ ಕವಿರಾಜಮಲ್ಲುಗಂ ||

ಇವನ ಗ್ರಂಥ

ದಶಾವತಾರಚರಿತೆ

ಇದು ಚಂಪೂಗ್ರಂಥ; ಆಶ್ವಾಸ 11, ವೃತ್ತವಚನಸಹ 1179. ಇದರಲ್ಲಿ ವಿಷ್ಣುವಿನ ಹತ್ತು ಅವತಾರಗಳು ವರ್ಣಿತವಾಗಿವೆ. ಈ ಗ್ರಂಥದ ಉತ್ಕೃಷ್ಟತೆಯನ್ನು ಕವಿ ಈ ಪದ್ಯದಲ್ಲಿ ಹೇಳಿದ್ದಾನೆ—

ಕವಿಗಳ ಕರ್ಣರಸಾಯನ | ಮವಿರಳವಿದ್ವಾಂಸರಾನನಾಬ್ಜದಿನೇಶಂ |
ನವರಸಿಕರ ಜಿಹ್ವಾಮೃತ | ಮವನಿಯೊಳೀಕಾವ್ಯಮೆಂದು ನುಡಿವುದು ಲೋಕಂ ||

ಇದರಲ್ಲಿ ಕಾವ್ಯದ 18 ಅಂಗಗಳನ್ನೂ ವರ್ಣಿಸಿರುವಂತೆ ಹೇಳುತ್ತಾನೆ ಅಲ್ಲದೆ ಇದು ಹರಿಪದಸಂಕೀರ್ತನೆಯಾದರೂ ಇದರಲ್ಲಿ ಬಿಟಕುಳಕ್ಷಳದ ನೇಮಗಳನ್ನೂ ಸದಲಂಕಾರರಸಗಳನ್ನೂ ಒದವಿಸಿರುವುದಾಗಿ ಈ ಪದ್ಯದಲ್ಲಿ ಹೇಳುತ್ತಾನೆ:—

ಇದು ಹರಿಪದಸಂಕೀರ್ತನೆ | ಯದಱಿಂದಂ ಬಲಿಕುಳಕ್ಷಳದ ನೇಮಗಳಂ |
ಸದಲಂಕಾರರಸಂಗಳ | ನೊದವಿಸಿತಿಲ್ಲೆನ್ನಬೇಡ ಸುಪ್ರೌಢಜನಂ ||

ಗ್ರಂಥಾವತಾರದಲ್ಲಿ ವಿಷ್ಣುಸ್ತುತಿ ಇದೆ. ಬಳಿಕ ಕವಿ ಲಕ್ಷ್ಮಿ, ಈಶ್ವರ, ಪಾರ್ವತಿ, ಗಣೇಶ, ಪರಾಶರಭೀಷ್ಮವಿಭೀಷಣನಾರದರುಕ್ಮಾಂಗದ ಸನಕಾದಿಗಳು ಇವರುಗಳನ್ನು ಸ್ತುತಿಸಿದ್ದಾನೆ. ಆಶ್ವಾಸಾಂತ್ಯದಲ್ಲಿ ಈ ಗದ್ಯವಿದೆ—

ಇದು ವೃಂದಾರಕವೃಂದಮಣಿಖಚಿತಮಕುಟರಂಜಿತಶ್ರೀಮದಾದಿನಾರಾಯಣ ಶ್ರೀಚರಣಸರಸಿರುಹಮಕರಂದಷಟ್ಚರಣ ಸಲ್ಲಲಿತಮಲ್ಲರಸಾಂಕವಿರಚಿತಮಪ್ಪ ದಶಾವತಾರಚರಿತ್ರಮಹಾಪ್ರಬಂಧದೊಳ್

ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

### ಕಾಳಕೂಟ

ಎಱಗಿತ್ತೊತ್ತಿತ್ತು ಪೊಯ್ದತ್ತಡಸಿತುಱುಬಿತುರ್ಬಿತ್ತು ಮೆಟ್ಟಿತ್ತು ಸುಟ್ಟಿ |
ತ್ತುಱಿಯಟ್ಟಿತ್ತೆತ್ತಿ ಮುತ್ತಿತ್ತಱಿಸಿತೊಱಲಿಸಿತ್ತಾಲಿಸಿತ್ತಂಬಿಸಿತ್ತಾ ||
ಮಱಿಹಂ ಸೂಸಿತ್ತು ದೇವಾಸುರಮನುಮುನಿಲೋಕೇಶರಂ ಸುತ್ತಿ ಕಿಚ್ಚಂ |
ಕಱೆಯಿತ್ತೇನೆಂಬೆ ಭೋಭೋರ್ಭುಗಿಲುಸಿಮಿಸಿಮಿಧ್ವಾನದಿಂ ಕಾಲಕೂಟಂ |

### ಊಟ

ಉಪ್ಪಿನಕಾಯಂ ನಾನಾ | ಹಪ್ಪಳಸಂಡಗೆಯು ಬಾಳುಕಂಗಳ ಸಲವಿಂ |
ದೊಪ್ಪುವ ರಸಾಯನಂಗಳ |ತಪ್ಪದೆಬಡಿಸಿದರು ಚಂದ್ರಮುಖಿಯರ್ ಸಖಿಯರ್ ||
ಅನ್ನಂ ರಾಜಾನ್ನಂ ಪರ | ಮಾನ್ನಂ ಪರಿಪರಿಯ ಕಲಸಿದನ್ನಂಗಳುಮಂ |
ಬಿನ್ನಾಣದಿಂದೆ ಸಖಿಯರ್ | ಸನ್ನುತರಾಜಗೆ ಬಡಿಸಿದರ್ ಸಂತಸದಿಂ ||

### ಮುಡಿವಾಳ

ಬೇರಂ ಬಲ್ಲಗ್ಗಳಿಸುಂ | ತೋಱುವೆ ನೀನೆನುತೆ ಬಂದು ಮುಡಿವಾಳದ ಬ |
ಲ್ಬೇರಂ ಪರಿಮಳಗಳ ನಿಡು | ಬೇರಂ ತೆಗೆವಂತೆ ತೆಗೆದರಾಕೋಮಳೆಯರ್ ||

### ಚಂದ್ರೋದಯ

ಅರಳುತಿರೆ ಕುಮುದನಿಚಯಮಂ | ಕರಗುತ್ತಿರೆ ಚಂದ್ರಕಾಂತಮಂಬುಧಿ ಪೆರ್ಚಲ್ |
ತಿರಲು ಚಕೋರೌಘಕ್ಕಂ | ಹರುಷಂ ಮಿಗಿಲಾಗಲಿಂದುವುದಯಂಗೆಯ್ದಂ ||
ಅಗಲುವ ಪೊಣರ್ವಕ್ಕಿಯುಮಂ | ಮುಗಿವಬ್ಜವ ವಿರಹಮಿಂದೆ ವಿಕಳತೆಗೊಳ್ವಾ |
ಮುಗುಧೆಯರ ತಂಡಮಂ ಮಿಗೆ | ನಗುವಂತಿರೆ ನೈದಿಲ್ಪೆದಿದುವು ವಿಕಸನಮಂ ||

ವರಾಹಾವತಾರ

ಎಳವೆಱೆಯ ಕೆಚಿಳ ನೀಲಾ | ಚಳ ನಡೆಯಲ್‌ಕಲ್ತುದೆಂಬಶೆಜ್ಜನಿಂ ದೇವರ್ |
ನಲಿಯೆ ಸುರರುಲಿಯೆ ಬಾಹಾ | ಬಲದೆ ವರಾಹಾವತಾರಮಂ ಹರಿ ತಾಳ್ದಂ ||

---

**ಚಿಕ್ಕರಸ. ಸು. 1680**

ಈತನು ಸೊಣ್ಣಬೈರೆಗೌಡನ ಚರಿತ್ರೆಯನ್ನು ಬರೆದಿದ್ದಾನೆ. ಇವನು ಜೈನಕವಿ; ಇವನ ತಂದೆ ಗಿರಿಯಪ್ಪಯ್ಯ, ತಾಯಿ ತಿಮ್ಮಮ್ಮ, ಅಣ್ಣ ದೊಡ್ಡಪ್ಪಯ್ಯ. ಇವನು ಸೊಣ್ಣಬೈರೆಗೌಡನ ಆಶ್ರಿತನಾಗಿದ್ದಂತೆ ಕಾಣು ತ್ತದೆ. ತನ್ನ ಸ್ವಾಮಿ ಶಿವಾಜಿಯ ಮಗನಾದ ಸಂಭೋಜಿಯನ್ನು ಯುದ್ಧದಲ್ಲಿ ಜಯಿಸಿದಂತೆ ಹೇಳುವುದರಿಂದ ಕವಿಯ ಕಾಲವು ಸುಮಾರು 1680 ಆಗಿರ ಬಹುದು.

ಇವನ ಗ್ರಂಥ

ಸೊಣ್ಣಬೈರೆಗೌಡನ ಚರಿತ್ರೆ

ಇದು ಸಾಂಗತ್ಯದಲ್ಲಿ ಬರೆದಿದೆ; ಸಂಧಿ 13, ಪದ್ಯ 1318. ಇದರಲ್ಲಿ ಆವತಿನಾಡ ಪ್ರಭುವಾದ ದೇವನಾಪುರದ ಸೊಣ್ಣಬೈರೆಗೌಡನ ವಿಜಯಾದಿ ಗಳು ವರ್ಣಿತವಾಗಿವೆ. ತನ್ನ ಕಾವ್ಯವನ್ನು ಕುರಿತು ಕವಿ ಹೀಗೆ ಬರೆ ದಿದ್ದಾನೆ.—

ಜಾಣತನವು ಮುದ್ದು ರಸಿಕತೆ ಮೋಹವು | ಕಾಣಿಸಬೇಕು ಕಬ್ಬದೊಳು ||
ಸ್ವರ ಕಿತ್ತ ವೀಣೆಯ ಹೊಳಪಿನಂದದೊಳಲ್ಲ |ಕುರುಡುಂಡ ಬೆಳಗಾಯಂತಲ್ಲ |
ಕರತಳದಾಮಳಕದಂತೆ ನಿಬ್ಬಿಣಿಗೆ | ವರಾನ್ನದ ಕೈಪಿಡಿಯು ||

ಗ್ರಂಥಾವತಾರದಲ್ಲಿ ಶಿವಸ್ತುತಿ ಇದೆ; ಬಳಿಕ ಕವಿ ವಿಷ್ಣು, ಬ್ರಹ್ಮ, ಸರಸ್ವತಿ, ಗಣೇಶ, ವೀರೇಶ, ಗೋಪಾಲಕೃಷ್ಣ, ಇವರುಗಳನ್ನು ಸ್ತುತಿಸಿ ದ್ದಾನೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ--

ದೊರೆರನ್ನ ಸೊಣ್ಣಭೂಪಾಲನ ಕೀರ್ತಿಯ | ಕಱೆನು ಸುಧೆಯ ಬಿತ್ತಿ ಬೆಳೆದು |
ತರುವಿನ ಪಣ್ಗಳ ನರರೆಲ್ಲ ಸವಿವಂತೆ | ಯೊರೆವೆನು ಸುಗುಣರಾಲಿಪುದು ||

ಕೇದಗೆ

ಆದರಿಸಿವನು ಮದನ ಕರದೊಳಗಾಂತು | ಕಾದಲೆಯರುಗಳ್ದರ ಎದೆಯ |
ಭೇದಿಸಿ ಕೊಱೆವಂತ ಕರಗಸ ನೋಡೆಂದು | ಕೇದಗೆಗಳ ಮಾಱುತಿಹರು ||

ನೇತ್ರವಾಡುವುದು

ಹಣಹೊನ್ನನೊಡ್ಡಿ ಹಾಸಂಗಿಯ ಡಾಳಿಸು | ಎಣಿಸು ಮುಂಗಾಯನಗಲವೆ |
ಎಣೆಯಿಡುವಂತಿಡು ದ್ವಿಗುಣತ್ರಿಗುಣಚತು | ರ್ಗುಣವೆಂದು ನೇತ್ರವಾಡುವರು ||

ಸ್ತ್ರೀವರ್ಣನೆ

ಕರವೆ ಕಾವನ ಪಾಶ ಕುರುಳೆ ಕಾವನ ಬಲೆ | ಗಿರಿಕುಚ ಕಾವನ ಚೆಂಡು |
ಕೊರಳೆ ಕಾವನ ಕಾಳೆ ಕಬರಿ ತುಂಬಿಯ ವೊತ್ತು | ವರಲ ಕಂಗಳೆ ಕಾವನಂಬು ||
ತುಱುಬುಗಳೊಲೆಯುತ ಕೊರಳುಗಳ್ ಕೊಂಕುತ | ಗಿರಿಕುಚಗಳು ಕುಣಿಯುತಲಿ|
ಪೋಱವಾಱ ಬಿಣ್ಪಿಗೆ ತೊಡೆಗಳು ನಡುಗುತ| ನೆಱೆದರು ಕಮಲನೇತ್ರೆಯರು ||

ಬೆಳುದಿಂಗಳು

ಇಳೆಯೊಳು ಮುಸುಕಿಪ್ಪ ನಿಶಿಗೆ ಕುಮುದಸಖ | ಬೆಳುವಟ್ಟೆ ಮುಸುಕಿದಂತಿಹುದು|
ತಳವೇಲುದಶೆಗಳನೊಳಕೊಂಡು ಪರಿವಂತೆ | ತಿಳಿವಾಲಿನಂತಿರೆ ಜೊನ್ನ ||

---

ಪದ್ಮನಾಭ. ಸು. 1680

ಇವನು ಪದ್ಮಾವತೀಚರಿತೆಯನ್ನು ಬರೆದಿದ್ದಾನೆ. ಈ ಗ್ರಂಥಕ್ಕೆ ಜಿನದತ್ತರಾಯಚರಿತೆ, ಅಮ್ಮನವರ ಚರಿತೆ ಎಂಬ ಹೆಸರುಗಳೂ ಇರುವಂತೆ ತೋರುತ್ತದೆ. ಈತನು ಜೈನಕವಿ; ತನ್ನ ಮತ್ತು ತನ್ನ ದೇಶದ ದೊರೆಯ ವಿಷಯವಾಗಿ ಹೀಗೆ ಹೇಳಿದ್ದಾನೆ-

ತುಳುವದೇಶದ ಮಧ್ಯದಲ್ಲಿ ಮೂಲಿಕೆ ಎಂಬ ಪಟ್ಟಣವಿರುವುದು. ಆ ಪಟ್ಟಣಕ್ಕೆ ಅಯಿಕಳ, ಬಿಳಲಂಕೆ ಎಂಬ ಹೆಸರುಗಳೂ ಉಂಟು. ವಿಜಯಣ್ಣವರ್ಣಿಯ ಶಿಷ್ಯನಾದ ದುರ್ಗಣಸಾಮಂತರಾಯನ ತಂಗಿ ದೇವಮ್ಮಾಜಿಗೂ ಇವಳ ಗಂಡ ಪಶ್ಚಿಮವೇಣುಪುರಪತಿ ಮಾಲಿಂಗರಾಜನಿಗೂ ಕಿನ್ನಿಗಸಾಮಂತ, ತಿರುಮಲೇಂದ್ರ, ಚೆನ್ನಿಗ, ಚೆನ್ನಮಾಂಬಿಕೆ, ಶಂಕರನೃಪತಿ, ತಿರುಮಲರಸ, ಅಬ್ಬಕದೇವಿ ಎಂಬ 7 ಮಕ್ಕಳಿದ್ದರು. ತುಳುವದೇಶದಲ್ಲಿ ಅಳಿಯಸಂತಾನವಾದುದರಿಂದ ಕಿನ್ನಿಗನು ದೊರೆಯಾದನು. ಅವನ ಕಾಲಕ್ಕೆ ಅನಂತರ ತಿರುಮಲರಾಯನು ಪಟ್ಟಕ್ಕೆ ಬಂದನು. ಇವನಿಗೆ ಕಾದಂಬಕುಲ

ದೀಪ ತಿರುಮಲಸಾಮಂತ ಎಂಬ ಬಿರುದೂ ಹನುಮನಟೆಕ್ಕೆಯೂ ಇದ್ದುವು. ಇವನ ಬಳಿಕ ಚೆನ್ನಮ್ಮಾಂಬಿಕೆ ಆಳಿದಳು. ಇವಳ ಗಂಡ ಶಂಕರರಸ; ಮಗ ಚಿಕ್ಕರಾಯ. ಚೆನ್ನಮ್ಮಾಂಬೆ ಧರೆಯನ್ನು ಪಾಲಿಸುವಂದು ಕಾರಸ್ಕಾರಪುರದ ವರ್ಧಮಾನಸ್ವಾಮಿಯ ಕೃಪೆಯಿಂದ ತಿರುಮಲಸಾಮಂತನೃಪನ ಕೋಶಾಧ್ಯಕ್ಷನಾದ ಪದ್ಮನಾಭನು ಈ ಗ್ರಂಥವನ್ನು ಬರೆದನು.

ನಮಗೆ ದೊರೆತ ಈ ಗ್ರಂಥದ ಪ್ರತಿ 1761 ರಲ್ಲಿ ಬರೆದುದಾದುದರಿಂದ ಗ್ರಂಥವು ಆ ಕಾಲಕ್ಕೆ ಹಿಂದೆಯೇ ಹುಟ್ಟಿರಬೇಕು. ಸುಮಾರು 1680 ರಲ್ಲಿ ಹುಟ್ಟಿರಬಹುದೆಂದು ತೋರುತ್ತದೆ.

ಇವನ ಗ್ರಂಥ

### ಪದ್ಮಾವತೀಚರಿತೆ

ಇದು ಸಾಂಗತ್ಯದಲ್ಲಿ ಬರೆದಿದೆ; ಸಂಧಿ 12, ಪದ್ಯ 1671. ಇದರಲ್ಲಿ ಪಾರ್ಶ್ವನಾಥನ ಶಾಸನದೇವಿಯಾದ ಪದ್ಮಾವತಿಯ ಚರಿತೆ ಹೇಳಿದೆ. ಗ್ರಂಥಾವತಾರದಲ್ಲಿ ಜಿನಸ್ತುತಿ ಇದೆ. ಬಳಿಕ ಕವಿ ಸಿದ್ಧಾದಿಗಳು, ಸರಸ್ವತಿ, ಬ್ರಹ್ಮ, ಪದ್ಮಾವತೀದೇವಿ ಇವರುಗಳನ್ನು ಸ್ತುತಿಸಿದ್ದಾನೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ--

#### ಕರ್ಣಾಟದೇಶ

ಕಟ್ಟೆಂಬ ಮಾತಿಲ್ಲ ಕುಟ್ಟೆಂಬ ನುಡಿಯಿಲ್ಲ | ಕೊಟ್ಟು ಬೇಡುವ ಜನವಿಲ್ಲ |
ಕಟ್ಟುಕುಟ್ಟೆಂಬರು ಮನೆಯನು ಭರ್ತ್ತವ | ಕೊಟ್ಟು ಬೇಡುವರು ಮುನಿಗಳ ||

#### ರಾಜರು

ಒಲಿದರೆ ಸಕಲಭಾಗ್ಯವನೀವರು ಕೂಡೆ | ಮುಲಿದರು ಬೆನ್ನ ಚರ್ಮವನು |
ಕಲಿಯನು ಹೇಡಿಯೆಂಬರು ಹಂದೆಯನು ಬಲು | ಕಲಿಯೆಂಬರು ಭೂಮಿಪರು ||

#### ಪದ್ಮಾವತಿ

ಎಸಳುಕೇದಗೆಯನು ಶಶಿಯ ಕಿರಣವನು | ಬಿಸಿಕಮಾರನ ಸುರಗಿಯನು |
ನಸುನಗುವುದೊ ತಾನೆಂಬಂತೊಪ್ಪುವುದು | ಮಿಸುಗುವ ಹಸ್ತದ ನಖವು ||

#### ಹೆಣ್ಣುಮಗಳು

ಹೆಣ್ಣುಮಕ್ಕಳ ಹೆತ್ತು ಹೆಚಿರ ಬಾಳುಗೆ ಕೊಟ್ಟು | ಕಣ್ಣೀರಿಕ್ಕುತ ಮನದಿ |
ಉಣ್ಣರೊ ಉಡರೊ ಎನುತ ಚಿಂತಿಸುತಿಹ | ಹೆಣ್ಣಿಂದ ಫಲವುಂಟೆ ನಮಗೆ ||

ಸ್ತ್ರೀಶಕ್ತಿ

ಹೆಣ್ಣಿನ ಮಾತ ಮೀಱುವರಾರು ಪೆಣ್ಣಿಯಿಲ್ಲ | ಕಣ್ಣಾದುದು ಸುರಪತಿಗೆ |
ಕಣ್ಣುಮೂಱುಳ್ಳವ ತಲೆಯೊಳು ಧರಿಸಿದ | ಬಣ್ಣವಳಿವ ಕಮಲಜನು ||

---

ವೈಕುಂಠದಾಸ ಸು. 1680

ಈತನು ಕೀರ್ತನೆಗಳನ್ನು ಬರೆದಿದ್ದಾನೆ. ಇವನು ಶ್ರೀವೈಷ್ಣವ ಕವಿ. ಇವನ ಸ್ಥಳ ಬೇಲೂರು. ಇವನು ಇನ್ನೊಂದು ಜನ್ಮದಲ್ಲಿ ವೇಣುಗೋಪಾಲದಾಸನಾಗಿ ಹುಟ್ಟಿದನೆಂದು ಹೇಳುತ್ತಾರೆ. ಈತನ ಕೀರ್ತನೆಗಳಲ್ಲಿ ವೈಕುಂಠ ಎಂಬ ಅಂಕಿತವಿದೆ. ಇವನು ಸುಮಾರು 1680 ರಲ್ಲಿ ಇದ್ದಿರಬಹುದೆಂದು ಊಹಿಸುತ್ತೇವೆ. ಇವನ ಕೀರ್ತನೆಗಳಲ್ಲಿ ಒಂದನ್ನು ತೆಗೆದು ಬರೆಯುತ್ತೇವೆ—

ರಾಗ ಘಂಟಾ, ಆದಿತಾಳ

ಪಲ್ಲವಿ|| ಶ್ರೀಯದುವರ ಪರಿಪಾಲಿಸು ಎನ್ನನು ಭಕ್ತಕಾಮಧೇನು |
ಕಾಯದೆ ನೀ ಭಕ್ತನ ಬಿಟ್ಟರೆ ನಾನು ಮಾಡುವುದೇನು ||
ಪೆತ್ತ ತಾಯಿ ತನ್ನ ಶಿಶುವನು ಕೊಲ್ಲಲು ಮತ್ತೆ ಕಾವರಾರೈ |
ಸುತ್ತಿದ್ದ ಬೇಲಿಯು ಎದ್ದು ಪೈರ ಮೇಯೆ ಮತ್ತೆ ಕಾವರಾರೈ |
ಕತ್ತಲೆಯೊಳು ಮೇಲೆ ಗಗನವು ಬಿದ್ದರೆ ಮತ್ತೆ ಕಾವರಾರೈ |
ಉತ್ತಮವಾದೀಯನ್ನವು ವಿಷವಾಗೆ ಮತ್ತೆ ಕಾವರಾರೈ ||1||
ವೈಕುಂಠಪುರದ ನರಸಿಂಹರೂಪನೆ ನೀನೆ ಲೋಕಬಂಧು |
ಲೋಕಂಗಳನು ಪಾಲನಕಾರ್ಯವನು ಗೈವರು ಯಾರು ಪೇಳು ಇಂದು |
ಲೋಕಂಗಳನು ಕೆಲಸವನು ಮಾಡುವ ಮನುಜಗೆ ತನ್ನ ಕೆಲಸ ಹಿರಿದೆ |
ಸಾಕು ಸಾಕು ಸರ್ವೇಶ ನೀಯೆನ್ನನು ಸಾಕು ಸಾಕು ಸಾರಿದೆ ||2||

---

ಶೃಂಗಾರಮ್ಮ ಸು. 1685

ಈಕೆ ಪದ್ಮಿನೀಕಲ್ಯಾಣವನ್ನು ಬರೆದಿದ್ದಾಳೆ. ಇವಳು ಶ್ರೀವೈಷ್ಣವ ಕವಿ; ಇವಳ ತಂದೆ ಚಿಂತಾಮಣಿ ದೇಶಿಕೇಂದ್ರ; ಗುರು ಶ್ರೀನಿವಾಸದೇಶಿಕ ಅಥವಾ ಶ್ರೀನಿವಾಸಾಚಾರ್ಯ. 'ಕಂತುಗಿಮ್ಮಡಿರೂಪ ಚಿಕದೇವಭೂಪನ

ಲ ಸಂತವಿಸಿದ ಸಣ್ಣಮ್ಮಗಳು' ಎಂಬುದರಿಂದ ಮೈಸೂರು ರಾಜನಾದ ಚಿಕ್ಕದೇವರಾಜನ (1672-1704) ಪೋಷ್ಯವರ್ಗಕ್ಕೆ ಸೇರಿದವಳೆಂದು ತಿಳಿಯುತ್ತದೆ. ಆದುದರಿಂದ ಇವಳ ಕಾಲವು ಸುಮಾರು 1685 ಆಗಬಹುದು.

ಇವಳ ಗ್ರಂಥ

ಪದ್ಮಿನೀಕಲ್ಯಾಣ

ಇದು ಸಾಂಗತ್ಯದಲ್ಲಿ ಬರೆದಿದೆ; ಪದ್ಯ 189. ಇದರಲ್ಲಿ ತಿರುಪತಿ ಶ್ರೀನಿವಾಸದೇವರಿಗೂ ಪದ್ಮಿನಿಗೂ ನಡೆದ ವಿವಾಹವು ವರ್ಣಿಸಿದೆ. ಇದರಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ:—

ಪದ್ಮಿನಿ

ಪದ್ಮವ ಪೋಲುವ ಕರಚರಣಂಗಳು | ಪದ್ಮದೆಸಳ ಪೋಲ್ವ ನಯನ |
ಪದ್ಮದಂದದೆ ಮುಖವುಳ್ಳಕಾರಣದಿಂದೆ | ಪದ್ಮಿನಿಯೆಂದು ಕರೆದರು ||
ಪುಟ್ಟಕೈಯಲಿ ತಪ್ಪಾಳೆಯನಿಕ್ಕುವಳು ತಪ್ಪು | ದಟ್ಟಡಿಯಿಟ್ಟು ನಡೆವಳು |
ಬಟ್ಟಮುಖದ ಬಾಲೆಯ ನುಡಿಗೇಳುತೆ | ಸೃಷ್ಟಿಯ ಜನವು ಮೋಹಿಸಿತು ||
ನುಡಿವರು ಗಿಳಿಯಂತೆ ಸಖಿಯರೊಂದಾಗಿ ಮೆ | ಲ್ಲಡಿಯಿಡುವರು ಹಂಸೆಯಂತೆ |
ಬೆಡಗಿಂದ ನವಿಲಂತೆ ನಲಿಯುತ್ತಿದ್ದರು ಮುದ್ದು | ಕಡುಚಪಳೆಯರೊಂದುಗೂಡಿ ||

---

ಪಂಡಿತಮಲ್ಲಿಕಾರ್ಜುನ. 1687

ಇವನು ಶಂಕರದಾಸಿಮಯ್ಯನ ಚರಿತ್ರೆಯನ್ನು ಬರೆದಿದ್ದಾನೆ. ಈತನು ವೀರಶೈವಕವಿ; ಪೊಳಲ್ಗುಂದಾಪುರದವನು. "ಕರುಣಾನಿಧಿ ನಾಗರಿಕವಂಶೋದ್ಧರಣ ಚೆನ್ನವೀರಯತನುಜ ಚಿಪ್ಪಿಗರ ಶಿರೋಮಣಿ" ಸಂಗಿಸೆಟ್ಟಿಯ ಪ್ರಾರ್ಥನೆಯಿಂದ ಕವಿ ಈ ಗ್ರಂಥವನ್ನು ಚಿಕ್ಕವೀರಶಾಂತೇಶ್ವರನ ಮನೆಯಲ್ಲಿ ರಚಿಸಿದಂತೆ ತಿಳಿಯುತ್ತದೆ. ಗ್ರಂಥಾಂತ್ಯದಲ್ಲಿ ಪ್ರಭವಸಂವತ್ಸರದ ಪುಷ್ಯಬಹುಳ ದ್ವಾದಶಿಯ ದಿವಸ ಗ್ರಂಥವು ಮುಗಿದಹಾಗೆ ಹೇಳಿದೆ. ಇದು ಆವ ಪ್ರಭವವರ್ಷವೋ ತಿಳಿಯದು. 1687 ಕ್ಕೆ ಸರಿಯಾದ ಪ್ರಭವವರ್ಷವಾಗಿರಬಹುದೆಂದು ಊಹಿಸುತ್ತೇವೆ. ಪೂರ್ವಕವಿಗಳಲ್ಲಿ ಕಾಳಿದಾಸ, ಪಂಡಿತ ಇವರ ಹೆಸರುಗಳು ಹೇಳಿವೆ.

ಇವನ ಗ್ರಂಥ

## ಶಂಕರದಾಸಿಮಯ್ಯನ ಚರಿತ್ರೆ

ಇದು ಭಾಮಿನೀಷಟ್ಪದಿಯಲ್ಲಿ ಬರೆದಿದೆ; ಸಂಧಿ 16, ಪದ್ಯ 1175. ಇದರಲ್ಲಿ ಚಿಪ್ಪಿಗರ ವಂಶಕ್ಕೆ ಗುರುವಾದ ಶಂಕರದಾಸಿಮಯ್ಯನೆಂಬ ಶಿವಭಕ್ತನ ಚರಿತ್ರವು ಹೇಳಿದೆ.

ಕಥಾಗರ್ಭ—ಕುಂತಳದೇಶದ ಸ್ಕಂದಶಿಲೆಯಲ್ಲಿ ಗೋವಿಂದದೇವನೆಂಬ ವೈಷ್ಣವನಿದ್ದನು. ಇವನ ಹೆಂಡತಿ ದುಮ್ಮವ್ವೆ. ಇವರು ಕಾಶಿಗೆ ಪ್ರಯಾಣಮಾಡಿ ದಾರಿಯಲ್ಲಿ ನವಿಲೆಗೆ ಬಂದು ಜಡೆಯುಶಂಕರನ ದೇವಸ್ಥಾನವನ್ನು ಕಂಡಾಗ ಜಡೆಯುಶಂಕರನು ಗುರುರೂಪಿಯಾಗಿ ಬಂದು ಗೋವಿಂದದೇವನಿಗೆ ವೀರಶೈವವನ್ನು ಬೋಧಿಸಿ ದೀಕ್ಷೆಯನ್ನು ಕೊಟ್ಟು ಶಂಕರದಾಸನೆಂದು ಅವನಿಗೂ ಶಿವದಾಸಿ ಎಂದು ಅವನ ಹೆಂಡತಿಗೂ, ಹೆಸರುಗಳನ್ನಿಟ್ಟು ಸೂಜಿಯ ಕಾಯಕವನ್ನು ನೇಮಿಸಿದನು. ಶಂಕರದಾಸಿಮಯ್ಯನು ಜಡೆಯುಶಂಕರನಿಂದ ಭಾಳನೇತ್ರವನ್ನು ಪಡೆದು, ಮುದನೂರ ದೇವದಾಸಿಮಯ್ಯನ ತವನಿಧಿಯನ್ನು ಬಯಲುಮಾಡಿ ಪುನಃ ಕೊಟ್ಟು, ಕಲ್ಯಾಣದ ಜಯಸಿಂಹರಾಯನ ಕೊಟ್ಟಣವನ್ನು ಮಾರಿಯರ ಕೈಯಲ್ಲಿ ಕುಟ್ಟಿಸಿ, ನಯನಶಿಖಿಯಿಂದ ನರಹರಿಯ ಮೂರ್ತಿಯನ್ನುರುಪಿ, ಮೈಲಾರದೇವರಿಂದ ಕೊಡೆಹಿಡಿಸಿಕೊಂಡು, ಉಜ್ಜೆನಿಯ ಮಹಾಕಾಳಿಯಿಂದ ಕಾಳಂಜಿಹಿಡಿಸಿಕೊಂಡು, ಜೋಗಿಗಳನ್ನು ಗೆದ್ದು, ನವಿಲೆಗೆ ಮರಳಿ ಬಂದು ಜಡೆಯಶಂಕರನಲ್ಲಿ ಐಕ್ಯವಾದನು.

ನಮಗೆ ದೊರೆತ ಪ್ರತಿಯಲ್ಲಿ ಮೊದಲು 13 ಪದ್ಯಗಳು ಇಲ್ಲದೆ ಇದ್ದುದರಿಂದ ಆ ಭಾಗದಲ್ಲಿ ಉಕ್ತವಾದ ವಿಷಯಗಳನ್ನು ತಿಳಿಸಲು ಅವಕಾಶವಿಲ್ಲದೆ ಇದೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ—

### ಸ್ತ್ರೀಗರ್ಹಣ

ಅತ್ತಿ ಪೂವಾದಾಗ ವಾರಿಧಿ । ಬತ್ತಿಬಯಲಾದಾಗ ಪಶ್ಚಿಮ ।
ದತ್ತಣಿಂ ಚಂದ್ರಾರ್ಕರಿಂದ್ರನ ದೆಸೆಗೆ ನಡೆದಾಗ ॥
ಮುತ್ತು ಮೃದುವಾದಾಗ ಹೇಸರ । ಗತ್ತೆ ವಾರುವನಾದಕಾಲಕೆ ।
ಚಿತ್ತ ನಿರ್ಮಲವಹುದು ಸತಿಯರಿಗೆಂಬುದರಿದರಿದು ॥

### ಶ್ರೀಗರ್ಹಣ

ಸಿರಿಯ ಬಯಸುವುದಧಿಕಕಾಮಂ । ಸಿರಿಯನಪಹರಿಸುವುದು ಕ್ರೋಧಂ ।

ಸಿರಿ ಬರಲು ಹಮ್ಮಂ ಕೊಡುವುದದು ಬಾಸೆವಂತರೊಳು ||
ಸಿರಿಯುತನು ಸೆಣಸುವುದು ಮಚ್ಚರ | ಸಿರಿಯು ಸಂಗ್ರಹಿಸುವುದು ಲೋಭಂ |
ಸಿರಿಗೆ ಮನಮಿಕ್ಕುವುದು ಮೋಹಂ ಸಿರಿಯೆ ಷಡ್ವರ್ಗ ||

ನೀತಿ

ಹಿಂದೆ ಮಾಡಿದ ವಿವಿಧಕರ್ಮಗ | ಳಿಂದಲೀಜನ್ಮದೊಳಗೈಸಿರಿ |
ಬಂದು ಪೊರ್ದುವುದದಕೆ ಹಿಗ್ಗದೆ ತನಗದೇ ನಿತ್ಯ ||
ಎಂದು ಬಗೆಯದೆ ಕಮಲಜಲದೊಳ | ಗೊಂದಿಯುಂ ಮೈಸೆನೆಯದೆಸೆದಿ |
ರ್ಪಂದದೊಳಗಿರವೇಟ್ಕು ಭಾಗ್ಯವ ಬಯಸಿದಣ್ಣಗಳು |
ಹೋಗೆ ಬಾರವು ಪ್ರಾಣಮಾನಂ | ಪೋಗಿ ಬರ್ಪುವು ಸಿರಿದರಿದ್ರತೆ |
ಪೋಗವೆಂದಿಗು ಬಂದ ಬಳಿಕಂ ಕೀರ್ತಿಯಪಕೀರ್ತಿ ||
ಪೋಗದಿಹುವೆರಡಕ್ಕೆ ಕಾರಣ | ಮಾಗಿಹುವು ಸಚ್ಚರಿತದುಶ್ಚರಿ |
ತಾಗಮೋಭಯಮೊಂದ ಪಿಡಿಯದಿರೊಂದ ಬಿಡಬೇಡ ||
ನಳಪರಿಕ್ಷಿಂದ್ರಾದಿಭೂವರ | ರಳಿದುದಿಲ್ಲನೆಯವರ ಕೀರ್ತಿಗ |
ಳಳಿದುವೇ ಲೋಕಾಪವಾದಿಗಳಾಗಿ ಬದುಕಿದರೆ ||
ಅಳಿವುದೊಡಲಪಕೀರ್ತಿ ಕೀರ್ತಿಗ | ಳುಳಿವುವದುಕಾರಣದೆ ಮೂಜಗ |
ದೊಳಗೆ ಸತ್ಯವ ಬಿಟ್ಟು ಬದುಕುವ ಮನುಜ ನಡೆವೆಣನು ||

---

ರಾಮ. 1689

ಈತನು ಜಗನ್ನಾಥವಿಜಯುವನ್ನು ಶಕ 1611 ಶುಕ್ಲವರ್ಷದಲ್ಲಿ (1689) ಕೃಷ್ಣಮಂತ್ರಿಗೋಸ್ಕರ ಪ್ರತಿಮಾಡಿದ್ದಾನೆ. ಅಲ್ಲದೆ ಕೆಳಗಣ ಪದ್ಯದಲ್ಲಿ ತಾನು ಉನ್ನತಸತ್ಕವಿ ಎಂದು ಹೇಳಿಕೊಂಡಿದ್ದಾನೆ-

ವಿಪ್ರಕುಲಾವತಂಸಪರಿಶುದ್ಧತರೋನ್ನತವಂಶಕಲ್ಪಭೂ ||
ಜಪ್ರತಿಮಾನಭಾವಗುರುನಾಥತನೂಭವಕೃಷ್ಣವರ್ಯಬು ||
ದ್ಧಿಪ್ರದಮಂತ್ರಿಶೇಖರಗೆ ತ್ರೈಭುವನೇಶ್ವರಜೈತ್ರಕಾವ್ಯಮಂ |
ಸುಪ್ರಮುದೋದಯಂ ಬರೆದನುನ್ನತಸತ್ಕವಿ ರಾಮಭೂಸುರಂ ||

---

## ಸಂಪಾದನೆಯ ಪರ್ವತೇಶ್ವರ. 1698

ಈತನು ಚತುರಾಚಾರ್ಯಪುರಾಣವನ್ನು ಬರೆದಿದ್ದಾನೆ. ಇವನು ವೀರಶೈವಕವಿ. ತನ್ನ ಗುರುಪರಂಪರೆಯನ್ನು ಹೀಗೆ ಹೇಳಿಕೊಂಡಿದ್ದಾನೆ–

ತೋಂಟದ ಸಿದ್ಧಲಿಂಗ; ಶಿಷ್ಯ "ಗುರುವಿನನುಪಮವೀಟಿಕಾಪ್ರಸಾದದ ಮಹಿಮ ಸರಸಾನುಭವ'' ನಾದ ಬೋಳಬಸವ; ಶಿಷ್ಯ ಚೆನ್ನಾಚಾರ್ಯ; ಶಿಷ್ಯ ಮಲಯಗುರು ಶಾಂತ; ಶಿಷ್ಯ ವೀರಶೈವಾಚಾರಸಂಗ್ರಹಕರ್ತೃವಾದ ''ಜಗದೊಳು ಶೈವವ ವೀರಶೈವಮಂ ಸ್ಥಾಪಿಸಿದ" ಸಂಪಾದನಾಸಿದ್ಧವೀರೇಶ; ಶಿಷ್ಯ ಚೆನ್ನಮಲ್ಲಿಕಾರ್ಜುನದೇವ; ಶಿಷ್ಯ ಕವಿ ಸಂಪಾದನೆಯ ಪರ್ವತೇಶ್ವರ.

ಈ ಗ್ರಂಥವನ್ನು ಶಕ 1619 ನೆಯ ಈಶ್ವರವರ್ಷದಲ್ಲಿ–ಎಂದರೆ 1698 ರಲ್ಲಿ–ಬರೆದಂತೆ ಹೇಳುತ್ತಾನೆ.

ಪೂರ್ವಕವಿಗಳಲ್ಲಿ ಬಾಣ, ಕಾಳಿದಾಸ, ಮಯೂರ, ಹರೀಶ್ವರ, ಪದ್ಮರಾಜ, ಪಾಲ್ಕುರಿಕೆ ಸೋಮ, ಮಲುಹಣ, ಕೇಶಿರಾಜ, ರಾಘವ, ಮಲಯರಾಜ, ಗೂರ್ಜರ, ಹಲಾಯುಧ, ಮಾಯಿದೇವಾಚಾರ್ಯ, ಚಾಮರಸ, ಚಿಕ್ಕಣ್ಣ, ನಿಜಗುಣೇಶ ಇವರುಗಳನ್ನು ಸ್ಮರಿಸಿದ್ದಾನೆ.

ಇವನ ಗ್ರಂಥ

### ಚತುರಾಚಾರ್ಯಪುರಾಣ

ಇದು ವಾರ್ಧಕಷಟ್ಪದಿಯಲ್ಲಿ ಬರೆದಿದೆ; ಕಾಂಡ 6, ಸಂಧಿ 54, ಪದ 3187. ಇದರಲ್ಲಿ ರೇಣುಕ, ಮರುಳುಸಿದ್ಧ, ಏಕೋರಾಮ, ಪಂಡಿತಾರಾಧ್ಯ ಈ 4 ಆಚಾರ್ಯರುಗಳ[1] ಚರಿತವು ಹೇಳಿದೆ. ವಿಶ್ವೇಶ್ವರಾಚಾರ್ಯನನ್ನೂ ಸೇರಿಸಿಕೊಂಡು ಪಂಚಕಲಶದಾಚಾರ್ಯರ ಚರಿತ ಎಂದೂ ಹೇಳುವಂತಿದೆ. ತನ್ನ ಗುರು ಸಂಪಾದನೆಯ ಚೆನ್ನಮಲ್ಲಿಕಾರ್ಜುನನು ತನಗೆ ಬೋಧಿಸಿದ ಈ ಚರಿತವನ್ನು ಕವಿ ಪದ್ಯರೂಪವಾಗಿ ರಚಿಸಿದಂತೆಯೂ ಪೌರಾಣಿಕ ಬಸವಯ್ಯನಿಗೆ ಹೇಳಿದಂತೆಯೂ ತಿಳಿಯುತ್ತದೆ. ಈ ಗ್ರಂಥದ ಉತ್ಕೃಷ್ಟತೆಯನ್ನು ಕವಿ ಹೀಗೆ ಹೇಳಿದ್ದಾನೆ—

ಇದು ಕಣಾ ಪರಶಿವನ ಬೀಡು ಮುಕ್ತಿಯ ನಾಡು |
ಇದು ಕಣಾ ಲಿಂಗಾಂಗಸದನ ಭಕ್ತಿಯ ವದನ |

---

1. Vol. I, 162-163

ವಿದುಕಣಾ ಗುರುಶಿಷ್ಯರಮಳನುಕುರಂ ಸುಕರನಿಕರಕರದಾಮಳಕವು ||
ಇದುಕಣಾ ಶರಣಜನವಾನಂದಸಂಧಾನ|ವಿದುಕಣಾ ನವರಸದ ಹಕ್ಕೆ ಭಾವದ ತೆಕ್ಕೆ|
ಇದುಕಣಾ ಸತ್ಕವಿಯು ಮೆಚ್ಚು ಕುಕವಿಗೆ ಕಿಚ್ಚು ಮಚ್ಚು ಬುಧಜನರ ಪೆರ್ಚು ||
ಮಧುಸಮಯದೊಳಗೆ ಪೂಮರ ಚಿಗುರಲೆಳದಳಿರ |
ಕರ್ದುಕಿ ಪೊಕ್ಕುಟಿವಕ್ಕಿ ಕೊರಳಿನಿಂಚರಮುದಿಪೆ |
ಮುದದಿಂದ ಕೊಂಡಾಡುವಂತೆನ್ನ ಕಾವ್ಯ ಸತ್ಕವಿಸೇವ್ಯ ಜನಭವ್ಯವು ||

ಇದರಲ್ಲಿ ವೇದ, ಉಪನಿಷತ್ತು, ಕಾಮಿಕಾಗಮ, ವೀರಾಗಮ, ವಾತೂಲಪಾರಮೇಶ್ವರತಂತ್ರಗಳು, ಲೈಂಗ್ಯಶೈವಗಳು, ಪಾದ್ಮೋತ್ತರ, ಸ್ಕಾಂದ, ಪಟ್ಸ್ಥಲಜ್ಞಾನದೀಪಿಕೆ, ಗುರುಬಸವೇಶ್ವರನ ಷಟ್ಕಾವ್ಯ, ಸಿದ್ಧಾಂತಶಿಖಾಮಣಿ, ನಿಜಗುಣನ ವಿವೇಕಚಿಂತಾಮಣಿ ಇವುಗಳಿಂದ ಹಲವು ವಿಷಯಗಳು ಸಂಗೃಹೀತವಾಗಿವೆ.

ಗ್ರಂಥಾವತಾರದಲ್ಲಿ ಶಿವಸ್ತುತಿ ಇದೆ. ಬಳಿಕ ಕವಿ ಪಾರ್ವತಿ, ಗಣೇಶ, ಷಣ್ಮುಖ, ವೀರಭದ್ರ, ಬಸವ, ಚೆನ್ನಬಸವ, ಪ್ರಭುದೇವ ಇವರುಗಳನ್ನು ಕ್ರಮವಾಗಿ ಹೊಗಳಿದ್ದಾನೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ--

## ಚಂದ್ರಿಕೆ

ಇದು ತನುಸ್ಸೆಂಬ ಪರ್ವತವ ಪೋಟ್ಟುಗಟ್ಟುವತಿ |
ಛಿದುರಮಿದೆಯುಡರ್ದ ತಮಮೆಂಬಟವಿಯುಂ ದಹಿಸು |
ವ ದವವಹ್ನಿಯ ರಾಶಿಯಿದೆಯುಂಛಕಾರನೆನಿಸುವ ವಾರ್ಧಿಯುಂ ಪೀರುವ ||
ವಿದಿತಬಡಬಾನಲವು ಇದೆ ರಾತ್ರಿಯೆಂದೆಂಬ |
ಮದಗಜಂಗಳ ಮೊತ್ತನುಂ ಗೆಲುವ ಮೃಗರಾಜ |
ನಿದೆಯಿದೆಕೊ ನೋಡೆಂಬ ಜನದ ಮನಕುತ್ಸವಂಬೀಱಿತ್ತು ಚಂದ್ರಾತಪಂ ||

## ನರ್ತನ

ತಿಂಗಳಿನ ತಣ್ಣದಿರ ಪಸರಿಸಲ್ ನೃತ್ಯವಿಭ |
ವಂಗೊಂಡು ಕರ್ಣ್ಪುರಲ್ಕಾಂತಿ ಪುಂಸಭೆಯೊಳಗೆ |
ಪೊಂಗಲಶಳಚದ ಗಣಿಕಾಜನಂ ಸೊಗಸು ತಳಕಳಿಸೆ ನಲಿದೋಳಲುಗಲು ||

ಪೊಂಗೆಜ್ಜೆಯುಲಿಯೆ ಕಾಂಚೀದಾಮ ಕದಕದಿಸೆ |
ಪಿಂಗದಧರೋರುಕಂ ಚಲಿಸೆ ಕಂಕಣ ಸುದಿರೆ |
ಯಂಗಜಾರಿಯ ಮುಂದೆ ನಟಿಸುತಿರ್ದುದು ಸೃಷ್ಟಿಕಾಲದ ನವಿಲ ಪಾಂಗಿನಿಂ ||

ವೇಶ್ಯಾಸ್ತ್ರೀವರ್ಣನೆ

ಕಂಗಳೋ ಕಾಮಬಾಣಂಗಳೋ ಕಟ್ಟಿದಲ |
ಕಂಗಳೋ ಕಾಮಪಾಶಂಗಳೋ ಕುರುಳಸಲು |
ರಂಗಳೋ ಕಾಮಕುಂತಂಗಳೋ ಪೊಸ್ತಪೊಸನಾಟಿ ಸುಟಿಯುಂತೊಪ್ಪುವ ||
ಅಂಗವೋ ಕಾಮರಾಜ್ಯಾಂಗವೋ ತ್ರಿವಳಿಗಳ |
ಭಂಗವೋ ಕಾಮರಸನದಿಯ ಮೇಲ್ವಾಯ್ವಸೆವ |
ಭಂಗವೋ ಮೇಣಾವಧೂಟಿಯುರು ಉಾಟಿಂದರ ಪಿಲನಿಟಚತ್ರಘನನುಂ ||

ತುಱುಗೆವೆಯ ಓರೆನೋಟಂ ಮೋಹಿಗಳ ಕಾಟ |
ಸರಸನುಡಿಗಳ ತಂಪು ಭೋಗಿಗಳ ಎರ್ದೆಗಿಂಪು |
ನಿರತವಧರದ ಕೆಂಪು ವಿಟರ ಭಾಗ್ಯದ ಸೊಂಪು ರದನ ಮೋಹನದ ಕದನ ||

ವರಮೊಗದ ಹೊಗರು ಕೋವಿದರ ಹೃದಯದ ಚಿಗುರು |
ಪರಮಕತ್ತುರಿಬೊಟ್ಟು ಸಂಗಸುಖರಸವೊಟ್ಟು |
ಭರಿತಜವ್ವನ ಪೊನ್ನ ಪುತ್ಥಳಿಯು ಪಾಂಗಿಸಿಂದಿರ್ದರಾ ಕಾಮಿನಿಯರು ||

ಲಕ್ಷ್ಮೀಶ ಸು. 1700

ಈತನು ಜೈಮಿನಿಭಾರತವನ್ನು ಬರೆದಿದ್ದಾನೆ. ಇವನು ಶ್ರೀವೈಷ್ಣವ ಕವಿ; ಭಾರದ್ವಾಜಗೋತ್ರದವನು, ಇವನ ತಂದೆ ಅಣ್ಣಮಾಂಕ; ಇವನ ಸ್ಥಳ ಕಡೂರುತಾಲ್ಲೂಕಿನಲ್ಲಿರುವ ದೇವನೂರು. ಈ ಸ್ಥಳದ ಲಕ್ಷ್ಮೀರಮಣಸ್ವಾಮಿಯ ಅಂಕಿತದಲ್ಲಿ ತನ್ನ ಗ್ರಂಥವನ್ನು ಬರೆದಿದ್ದಾನೆ. ಇವನಿಗೆ ಲಕ್ಷ್ಮೀಪತಿ ಎಂಬ ಹೆಸರೂ ಉಂಟು. ದೇವನೂರಲ್ಲಿ ದೊರೆತ ಜೈಮಿನಿಭಾರತದ ಒಂದು ಓಲೆಯ ಪ್ರತಿಯ ಕೊನೆಯಲ್ಲಿ ಈ ಗ್ರಂಥವು ಶಕ 1337 ಮನ್ಮಥ ಸಂವತ್ಸರದಲ್ಲಿ, ಎಂದರೆ 1415ರಲ್ಲಿ ಹುಟ್ಟಿದಂತೆ ಹೇಳಿದೆಯೆಂದೂ ಇದು ನಂಬಿಕೆಗೆ ಅರ್ಹವಲ್ಲವೆಂದೂ ಇದಕ್ಕೆ 300 ರನ್ನು ಸೇರಿಸಿ 1715 ಎಂದು ಇಟ್ಟು

ಕೊಂಡರೆ ಒಂದುವೇಳೆ ಕಾಲವು ಸರಿಹೋಗಬಹುದೆಂದೂ ಮೆ||ರೈಸ್ ಹೇಳು ತ್ತಾರೆ.[1] ಈ ಗ್ರಂಥವು 1691 ರಲ್ಲಿ ಹುಟ್ಟಿದುದಾಗಿ ಹೇಳುವ ಇತಿಹಾಸವನ್ನು ಪ್ರಥಮಸಂಪುಟದಲ್ಲಿ ತಿಳಿಸಿದ್ದೇವೆ.[2] ಲಕ್ಷ್ಮಕವಿ (1724), ಕೋನಯ್ಯ (ಸು. 1740), ಬೊಬ್ಬೂರುರಂಗ (ಸು. 1760) ಇವರುಗಳು ಲಕ್ಷ್ಮೀಶನನ್ನು ಸ್ತುತಿಸುವುದರಿಂದ ಮೇಲಣ ಇತಿಹಾಸದಲ್ಲಿ ಉಕ್ತವಾದ ಕಾಲವು ನಿಜವಾಗಿದ್ದರೂ ಇರಬಹುದು. ಅಂತೂ ಈತನು ಸುಮಾರು 1700 ರಕ್ಕೆ ಈಚೆಯವನಲ್ಲವೆಂದು ತೋರುತ್ತದೆ. ಶೈಲಿಯಲ್ಲಿ ಸ್ವಲ್ಪಮಟ್ಟಿಗೆ ಚೆನ್ನಬಸವಪುರಾಣವನ್ನು (1584) ಅನುಸರಿಸಿರುವಂತೆ ತೋರುತ್ತದೆ.

ಈತನಿಗೆ ಕರ್ಣಾಟಕವಿಚೂತವನಚೈತ್ರ ಎಂಬ ಬಿರುದಿದ್ದಂತೆ ತಿಳಿಯುತ್ತದೆ. ತನ್ನ ಕವಿತಾಚಾತುರಿಯನ್ನು ಈ ಪದ್ಯದಲ್ಲಿ ಹೇಳಿಕೊಂಡಿದ್ದಾನೆ:—

ಸಾರದೆ ಪರಾರ್ಥಮುಂ ನೆರೆಯತಿಗೆ ಭಂಗಮುಂ |
ತಾರದೆ ನಿಜಾನ್ವಯಕ್ರಿಯೆಗಳ್ಗೆ ದೂಷಣಂ |
ಬಾರದೆ ವಿಶೇಷಗುಣಗಣಕಲಾಗೌರವಂ ತೀರದೆ ದುರುಕ್ತಿಗಳ್ಗೆ ||
ಸೇರದೆ ಸುಮಾರ್ಗದೊಳ್ ನಡೆವ ಸತ್ಪುರುಷನ ಗ |
ಭೀರದಶೆಯಂ ಪೋಲ್ವ ಕಾವ್ಯಪ್ರಬಂಧಮಂ |
ಶಾರದೆಯ ಕರುಣದಿಂ ಪೇಳ್ವೆನಾಂ ದೋಷಮಂ ತೊಱೆದೆಲ್ಲರುಂ ಕೇಳ್ವುದು ||

ಇವನ ಗ್ರಂಥ

## ಜೈಮಿನಿಭಾರತ

ಇದು ವಾರ್ಧಕಷಟ್ಪದಿಯಲ್ಲಿ ಬರೆದಿದೆ; ಸಂಧಿ 34, ಪದ್ಯ 1907. ಸಂಸ್ಕೃತ ಜೈಮಿನಿಭಾರತದ ಆಶ್ವಮೇಧಿಕಪರ್ವದ ಆಧಾರದಮೇಲೆ ಕವಿ ಈ ಗ್ರಂಥವನ್ನು ರಚಿಸಿದ್ದಾನೆ ಇದರ ಉತ್ಕೃಷ್ಟತೆಯನ್ನು ಈ ಪದ್ಯಗಳಲ್ಲಿ ಹೇಳಿದ್ದಾನೆ:—

ವರವರ್ಣದಿಂದೆ ಶೋಭಿತಮಾಗಿ ರೂಪವಿ |
ಸ್ತರದಿಂದೆ ಚೆಲ್ವಾಗಿ ಮಧುರತರನವರಸೋ |
ದರಭರಿತದಿಂದೆ ವಿಲಸಿತಮಾಗಿ ಸುಮನೋನುರಾಗದಿಂ ಪ್ರಚುರಮಾಗಿ ||

---

1. ಶಬ್ದಾನುಶಾಸನದ ಉಪೋದ್ಘಾತ, ಪುಟ 46. 2. ಪುಟ 210.

ನಿರತಮಂಜುಳಶಬ್ದದಿಂದೆ ಕಿವಿಗಿಂಪಾಗಿ |
ಚರಿಸುವ ಸುಲಲಿತಷಟ್ಪದಿಗಳಿಡೆವಿಡದೆ ಝೇಂ |
ಕರಿಸದಿರ್ಪವೆ ಬಂದು ನೆರೆದ ವಿದ್ವತ್ಸಭಾನೀರೇರುಹಾಕರದೊಳು ||
ಪುಣ್ಯಮಿದು ಕೃಷ್ಣಚರಿತಾಮೃತಂ ಸುಕವೀಂದ್ರ |
ಗಣ್ಯಮಿದು ಶೃಂಗಾರಕುಸುಮತರು ತುಱುಗಿದಾ |
ರಣ್ಯಮಿದು ನವರಸಪ್ರೌಢಿಶಾಲಿತ್ವನಾನಾವಿಚಿತ್ರಾರ್ಥಂಗಳ ||
ಪಣ್ಯಮಿದು ಶಾರದೆಯ ಸನ್ಮೋಹನಾಂಗಲಾ |
ವಣ್ಯಮಿದು ಭಾವಕರ ಕಿವಿದೊಡವಿಗೊದವಿದ ಹಿ |
ರಣ್ಯಮಿದು ಭೂತಳದೊಳಿನೆ ವಿರಾಜಿಪುದು ಲಕ್ಷ್ಮೀಪತಿಯ ಕಾವ್ಯರಚನೆ ||

ಗ್ರಂಥಾವತಾರದಲ್ಲಿ ದೇವಪುರಲಕ್ಷ್ಮೀರಮಣನ ಸ್ತುತಿ ಇದೆ. ಬಳಿಕ ಕವಿ ಶಿವ, ಗಣೇಶ, ಸರಸ್ವತಿ ಇವರುಗಳನ್ನು ಹೊಗಳಿದ್ದಾನೆ.

ಇವನ ಬಂಧವು ಲಲಿತವಾಗಿಯೂ ಮನೋಹರವಾಗಿಯೂ ಇದೆ. ಆಧುನಿಕವಾದರೂ ಈ ಗ್ರಂಥಕ್ಕೆ ಕನ್ನಡನಾಡಿನಲ್ಲಿರುವ ಪ್ರಾಶಸ್ತ್ಯವೂ ಪ್ರಸಿದ್ಧಿಯೂ ಮತ್ತಾವ ಗ್ರಂಥಕ್ಕೂ ಇಲ್ಲ. ಇದು ಪಂಡಿತಪಾಮರರೆಲ್ಲರ ಆದರಕ್ಕೂ ಪಾತ್ರವಾಗಿದೆ. ಪ್ರಾಯಿಕವಾಗಿ ಇದನ್ನು ಓದದ ಕನ್ನಡಿಗರೇ ಇಲ್ಲ. ಇದರಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ:

ಸ್ತ್ರೀಯರು

ತಳಿರಡಿಗೆ ತೊಂಡೆವಣ್ ತುಟಿಗೆ ತಾವರೆ ಮೊಗಕೆ |
ಬೆಳಗಾಯಿ ಮೊಲೆಗೆ ನೈದಿಲೆ ಕಣ್ಗೆ ಬಾಳ್ಕಿ ತೊಡೆ |
ಗೆಳವಳ್ಳಿ ಮೈಗೆ ಸಂಪಗೆ ನಾಸಿಕಕ್ಕೆ ಮಲ್ಲಿಗೆ ನಗೆಗೆ ಮೊಲ್ಲೆ ಪಲ್ಗೆ ||
ಅಳಿ ಕುಂತಳಕೆ ನವಿಲ್ ಮುಡಿಗಂಚೆ ನಡೆಗೆ ಕೋ |
ಗಿಲೆಗಿಳಿಗಳಿಂಚರಕೆ ಸೋಲ್ದುವೆಯುವಂಗಳೊಳ್ |
ನೆಲಸಿದುವು ಪೆಣ್ಗಳ್ಗೆ ಸೋಲದವರಾರೆನಲ್ ನವೆತಂಪುರಂಗನೆಯರು ||

ಚಂದ್ರಿಕೆ

ಪ್ರಾಚೀನಿತಂಬಿನಿಯ ಮುಖಬಿಂಬದೆಳನಗೆಯ |
ರೋಚಿಗಳೊ ಪೆರ್ಚುಗೆಯೊಳುಬ್ಬೆದ್ದ ಪಾಲ್ಗಡಲ |
ವೀಚಿಗಳೊ ಮನ್ಮಥನ ಕೀರ್ತಿಯ ಮರೀಚಿಗಳೊ ನಿಜಕಾಂತನಂ ಕಾಣುತೆ ||

ನಾಚಿ ಬೆಳ್ಪೇಱುದಳೊ ರಾತ್ರಿವಧು ಚೆಲ್ಲಿದನೊ |
ಭೂಚಕ್ರಕಂಗಜಂ ಬೇಳುವೆಯ ಬೂದಿಯಂ |
ವಾಚಿಸುವೊಡರಿಂದೆನಲ್ ಪಸರಿಸಿತು ಚಂದ್ರಕಿರಣಂಗಳೆಲ್ಲಾ ದೆಸೆಯೊಳು ||

ಸಮುದ್ರ

ಚಿಪ್ಪೊಡೆದು ಸಿಡಿವ ಮುತ್ತುಗಳಲ್ಲದಿವು ಮುಗು |
ಳ್ದಪ್ಪರಿಸುವೆಳಮೀನ್ ಬಿದಿರ್ವ ಶೀಕರಮಲ್ಲ |
ನೊಪ್ಪುವ ಸುಲಲಿತಶಂಖದ ಸರಿಗಳಲ್ಲದಿವು ಬೆಳ್ನೊರೆಗಳೊಟ್ಟಿಲಲ್ಲ ||
ತಪ್ಪದೊಳಗಣ ರನ್ನವೆಳಗಲ್ಲದಿವು ತೋಱ |
ದೀಪ್ಪ ಕೆಂಬವಳವಲ್ಲಿವು ಪಯೋನಿಧಿಯು ಕೆನೆ |
ಯೊಪ್ಪಮಲ್ಲದೆ ನೀರ್ನೋರ್ಗೆಯಲಿಱುವ ಮೇಘಂಗಳಲ್ಲೆನಿಸಿದುವು ಕಡಲೊಳು ||

ಸಂಜೆ

ರಂಜಿಸುವ ಪಶ್ಚಿಮಾಚಲಕಿರಾತಂ ತೊಟ್ಟ |
ಗುಂಜಾಭರಣಮೊ ಮೇಣ್ ಗಗನಾಂಬುಧಿಯ ತಡಿಯ |
ಮಂಜುವಿದ್ರುಮಲತೆಯೊ ಮೇಣಪರದಿಗ್ವಧುವಿನಂಗಕುಂಕುಮಲೇಪವೋ ||
ಅಂಜನೇಭದ ಸಿಂದುರವೊ ಶಿವನ ಕೇಶಗಳ |
ಕೆಂಜಡೆಯೊ ವಿಷ್ಣುಪದಪಂಕರುಹದರುಣತೆಯೊ |
ಸಂಜೆವೆಣ್ಣುಟ್ಟ ರಕ್ತಾಂಬರವೊ ಪೇೞೆನಲ್ಕಾಬ್ಯೆಗುಕೆಂಪೆಸೆದುದು ||

ಸುಧನ್ವನ ಹೆಂಡತಿ ಪ್ರಭಾವತಿ

ಮುಡಿಯ ಪೊಸಮಲ್ಲಿಗೆಯ ಸೂಸುನೆಳನಗೆಯ ಸವಿ |
ನುಡಿಯ ಬಾಯ್ದೆಱೆಯ ಹೊಳೆಹೊಳೆವ ದಶನದ ಮಿಸುಪ |
ಕಡೆಗಣ್ಣ ತೋಱಗುವ ನಖಾವಳಿಯ ಥಳಥಳಿಪ ಕಂಠಮಾಲೆಯ ಮುತ್ತಿನ ||
ತೊಡವುಗಳ ಘನಸಾರದನುಲೇಪನದ ಸಣ್ಣ |
ಮಡಿದುಕೂಲದ ಬೆಳ್ಪುಗಳ್ ಕೋಮಲಾಂಗದೊಳ್ |
ಬಿಡದೆ ಪಸರಿಸೆ ಚಂದ್ರಕಾಂತದಿಂ ನಿರ್ಮಿಸಿದ ಪುತ್ತಳಿವೊಲವಳೆಸೆದಳು ||

ಧರ್ಮರಾಜನ ಕೀರ್ತಿ

ನಾಗೇಂದ್ರನಂ ಬಿಡದೆ ತಲೆವಾಗಿಸಿತ್ತಮರ |
ನಾಗೇಂದ್ರನಂ ಬುದ್ಧಿದೋಱಿಸಿತ್ತು ಪುರಮದರ್ |

ನಾಗೇಂದ್ರನಂ ನಿಂದು ಬೆಳಗಾಗಿಸಿತ್ತಮಲಧರ್ಮಜನ ಕೀರ್ತಿ ಬಟ್ಟಿಕ ॥
ನಾಗೇಂದ್ರಶಯನನಾಲಯಿರುವ ಜಡಧಿಯೆನಿಸಿ ನುತ |
ನಾಗೇಂದ್ರವರದಾಯುಧವ ಪೊಳ್ಳುಗಳೆದು ಮಥ |
ನಾಗೇಂದ್ರಧರನ ಜಾತೆಯು ನಿಲವುಗೆಡಿಸಿ ನೆಱೆ ರಾಜಿಸಿತು ಮೂಜಗದೊಳು ॥

---

## ಚಂದ್ರಶೇಖರ ಸು. 1700

ಈತನು ರಾಮಚಂದ್ರಚರಿತ್ರವೆಂಬ ಗ್ರಂಥದಲ್ಲಿ ಸ್ವಲ್ಪಭಾಗವನ್ನು ಬರೆದಿದ್ದಾನೆ. ಈ ಗ್ರಂಥವನ್ನು 1750 ರಲ್ಲಿ ಪೂರ್ತಿ ಮಾಡಿದ ಪದ್ಮನಾಭನು ಗ್ರಂಥಾಂತ್ಯದಲ್ಲಿ ಹೇಳುವ

ಈರಾಮಚಂದ್ರಚರಿತ್ರವ ಜಿನಮತ | ವಾರಿಧಿಪೂರ್ಣಶಶಾಂಕ |
ಸಾರಸದ್ಗುಣಭೂಷಿತಾಂಗ ಲಕ್ಷ್ಮಣಬಂಗ | ಭೂರಮಣನಾಸ್ಥಾನದಲ್ಲಿ ॥
ತ್ರೈವಿದ್ಯಚಕ್ರೇಶನಮಲಸಾಹಿತ್ಯಕ | ಲಾವರನೂರ್ಜಿತತೇಜ |
ಕೋವಿದ ಚಂದ್ರಶೇಖರಕವಿ ನವರಸ | ಭಾವನೂತ್ನಾರ್ಥಶಬ್ದಗಳಿಂ ॥
ಪದಿನಾಱುಸಂಧಿಯಿಂದಧಿಕತ್ರಯೋದಶ | ಪದಪದ್ಯಂತ ಲೀಲೆಯೊಳು |
ಚದುರಿಂದಿರ್ಛಾಸಿರದನೂಱೈವತ್ತೊಂದು | ಪದವನು ಹರ್ಷದೇಳ್ಗೆಯಲಿ ॥
ವಿರಚಿಸಿದನು ವಿದ್ವಜ್ಜನವೆಲ್ಲ ಮೆಚ್ಚುವ | ಪರಿಯೊಳಂತವಱಿಂದ ಮುಂದೆ |
ಪಿರಿದೆನಿಸೀರಾಮಚಂದ್ರಚರಿತ್ರವಂ | ತರಿಸಿ ಕೆಲವುಕಾಲ ಪೋಗೆ ॥
ತರಣಿಯಿದಿರ ಸೊಡರಂತಬ್ಧಿಯೊತ್ತಿನೊ | ಳಿರುತಿಹ ಬೆಂಚೆಯೆಂತಂತೆ |
ಮೆಱೆವುದು ನನ್ನುಕ್ತಿ ಶಂಕರಕವಿಯ ಬಂ | ಧುರಸೂಕ್ತಿಮಾಲೆಯಮುಂದೆ ॥

ಈ ಪದ್ಯಗಳಿಂದ ಕವಿ ಲಕ್ಷ್ಮಣಬಂಗರಾಜನ ಆಸ್ಥಾನದಲ್ಲಿ ಈ ಗ್ರಂಥದ ಮೊದಲು 16 ಸಂಧಿಗಳನ್ನೂ 15 ನೆಯ ಸಂಧಿಯಲ್ಲಿ 13 ಪದ್ಯಗಳನ್ನೂ-ಅಂತೂ ಒಟ್ಟು 2151 ಪದ್ಯಗಳನ್ನು ರಚಿಸಿ ಕಾಲವಾದಂತೆಯೂ ಪದ್ಮನಾಭನಿಗಿಂತ ಪ್ರಸಿದ್ಧಕವಿಯಾಗಿದ್ದಂತೆಯೂ ತಿಳಿಯುತ್ತದೆ. ಈ ಜೈನಕವಿಗೆ ಶಂಕರ ಎಂಬ ನಾಮಾಂತರವೂ ಇದ್ದಂತೆ ವ್ಯಕ್ತವಾಗುತ್ತದೆ. “ಕೆಲವು ಕಾಲ ಪೋಗೆ” ಎಂಬುದರಿಂದ ಪದ್ಮನಾಭನಿಗಿಂತ ಸುಮಾರು 50 ವರ್ಷ ಹಿಂದೆ-ಎಂದರೆ ಸುಮಾರು 1700ರಲ್ಲಿ ಈ ಕವಿ ಇದ್ದಿರಬಹುದು. ಈ ಗ್ರಂಥದಲ್ಲಿ 29ನೆಯ ಸಂಧಿಯಿಂದ ಮುಂದಕ್ಕೆ ನಮಗೆ ಪ್ರತಿ ದೊರೆತಿರುವು

ದರಿಂದ ಈ ಕವಿಗೆ ಸಂಬಂಧಪಟ್ಟ ಇತರವಿಷಯಗಳನ್ನು ಹೇಳುವುದಕ್ಕಾಗಲಿ ಅವನ ಬಂಧವನ್ನು ಉದಾಹರಿಸಿ ತೋರಿಸುವುದಕ್ಕಾಗಲಿ ಅವಕಾಶವಿಲ್ಲದೆ ಇರುವುದಕ್ಕಾಗಿ ವಿಷಾದಿಸಬೇಕಾಗಿದೆ

---

ಸೋಮಶೇಖರಶಿವಯೋಗಿ. ಸು. 1700

ಇವನು ಬಸವನ ಷಟ್ಸ್ಥಲದ ಬೆಡಗಿನವಚನದ ಟೀಕೆ, ತೋಂಟದ ಸಿದ್ಧಲಿಂಗನ ಷಟ್ಸ್ಥಲಜ್ಞಾನಸಾರಾಮೃತದ ವಚನದ ಟೀಕೆ, ಇವುಗಳನ್ನು ಬರೆದಿದ್ದಾನೆ. ಈತನು ವೀರಶೈವಕವಿ; 'ಶ್ರೀಸಚ್ಚಿದಾನಂದನಿತ್ಯಪರಿಪೂರ್ಣ ಅವಿರಳಪರಂಜ್ಯೋತಿಲೀಲಾವಿಗ್ರಹಮೂರ್ತಿಯಾದ ಶ್ರೀಸೋಮಶೇಖರಲಿಂಗಚರಣಾರವಿಂದಮಕರಂದರಸಪಾನಪ್ರಮತ್ತಮಧುಕರಾಯಮಾಣ' ಎಂದು ತನ್ನನ್ನು ವಿಶೇಷಿಸಿ ಹೇಳಿಕೊಂಡಿದ್ದಾನೆ. ತೋಂಟದಸಿದ್ಧಲಿಂಗನ ಷಟ್ಸ್ಥಲಜ್ಞಾನಸಾರಾಮೃತದ ಟೀಕೆಯ ಆರಂಭದಲ್ಲಿ

> ತೋಂಟದ ಸಿದ್ಧಲಿಂಗೇಶ್ವರನ ಕರುಣಾಪ್ರಸಾದಪಾತ್ರನಾದ ಬೋಳಬಸವೇಶ್ವರ; ಅವನ ಕರುಣಾಪ್ರಸಾದಪಾತ್ರನಾದ ಗೂಳೂರು ಸಿದ್ಧಲಿಂಗಯ್ಯ; ಅವನ ಕೃಪಾಪಾತ್ರ ಗುಮ್ಮಳಾಪುರದ ಸಿದ್ಧವೀರಯ್ಯ; ಅವನ ಕರುಣಾಪಾತ್ರ ಗಗನದಯ್ಯ; ಅವನ ಕೃಪಾಪಾತ್ರ ಕಟ್ಟಿಗೆಹಳ್ಳಿ ಸಿದ್ಧಲಿಂಗೇಶ್ವರ; ಅವನ ಕೃಪಾಪಾತ್ರ ಮುರಿಗೆ ಶಾಂತವೀರೇಶ್ವರ; ಅವನಿಂದನುಗ್ರಹವ ಪಡೆದ ಮುರಿಗೆ ಗುರುಸಿದ್ಧೇಶ್ವರ. ಹೀಂಗೆ ಗುರುಸಂಪ್ರದಾಯವಿಡಿದು ಬಂದು ಬಸವಾದಿಪ್ರಮುಥಗಣಂಗಳ ವಚನಾನುಭಾವವನು ಬೆಸಗೊಂಡ ಸೋಮಶೇಖರಶಿವಯೋಗಿ ನವರತ್ನಂಗಳ ಸಮೂಹವನು ತರವರಿದು ಸರಂಗೊಳಿಸುವಹಾಂಗೆ ಆ ಗುರುಮುಖದಿಂದ ಬೆಸಗೊಂಡ ಮಹಾನುಭಾವದ ವಾಕ್ಯಂಗಳನು ಕ್ರೋಡೀಕರಿಸಿ ಲೇಖನಂಗೈದಲ್ಲಿ ಮೊದಲು ಸಿದ್ಧೇಶ್ವರಸ್ವಾಮಿಗಳ ಷಟ್ಸ್ಥಲಜ್ಞಾನಸಾರಾಮೃತದ ವಚನದಲ್ಲಿ (ಇತ್ಯಾದಿ)

ಎಂದಿರುವುದರಿಂದ ಕವಿ ತೋಂಟದಸಿದ್ಧಲಿಂಗನ (ಸು. 1470) ಶಿಷ್ಯಪರಂಪರೆಯಲ್ಲಿ 8 ನೆಯವನಾಗಿದ್ದಂತೆ ತೋರುವುದರಿಂದ ಇವನಕಾಲವು ಸುಮಾರು 1700 ಆಗಬಹುದು.

ಮೇಲೆ ಹೇಳಿದ ಎರಡು ಗ್ರಂಥಗಳಲ್ಲಿರುವ ಬೆಡಗಿನವಚನಗಳಿಗೆ ಎಂದರೆ ಕಠಿನವಾದ ವಚನಗಳಿಗೆ ಕವಿ ಟೀಕೆಯನ್ನು ಬರೆದಿದ್ದಾನೆ.

## ಕೃಷ್ಣಶರ್ಮ. ಸು. 1700

ಈತನು ಸರಜಾಹನುಮೇಂದ್ರಚರಿತೆಯನ್ನು ಬರೆದಿದ್ದಾನೆ. ಈ ಗ್ರಂಥಕ್ಕೆ ಸರಜಾಹನುಮೇಂದ್ರಯಶೋವಿಲಾಸ ಎಂಬ ಹೆಸರೂ ಉಂಟು.

ಇವನು ಬ್ರಾಹ್ಮಣಕವಿ; ಭಾರದ್ವಾಜಗೋತ್ರದವನು; ಯಜುಶ್ಶಾಖಾಧ್ಯಾಯಿ. ಇವನ ಪಿತಾಮಹನು ಅಪ್ಪಾಜಿ, ತಂದೆ ಪಟ್ಟತಿವ್ಯಾರ್ಯ, ತಾಯಿ ತಿರುಮಲಾಂಬೆ. " ಮಧುರಾಮೀನಾಕ್ಷೀಚರಣಕೋಕನದಮಕರಂದಾಸಕ್ತಭ್ರಮರ, ಮಹೀಶೂರರಾಡ್ಗೇಹದ್ವಾರಾಧ್ಯಕ್ಷ, ಅಚ್ಚಿವಂಗ್ಯಪುರಲ ಕಾರ್ಯಖಡ್ಗ ಕವಿತ್ವಕರಣಿಕ ಕಕಾರಚಾತುರ್ವಿಧಕ್ರಮಾಚಾರ್ಯಧುರ್ಯ, ಲಕ್ಷಣಕವಿ, ಕುಕವಿನೀರ್ದೇರುಪ್ರಚಂಡಜಂಝೂಮಾರುತ, ಆಶುಕವಿ " ಎಂದು ತನ್ನನ್ನು ವಿಶೇಷಿಸಿ ಹೇಳಿಕೊಂಡಿದ್ದಾನೆ. ಇದರಿಂದ ಇವನು ಮೈಸೂರು ರಾಜರ ಅರಮನೆಯಲ್ಲಿ ಬಾಗಿಲು ಅದ್ದಿಕವನ್ನು ಮಾಡುತ್ತಿದ್ದನೆಂದೂ ಮಧುರಾಮೀನಾಕ್ಷಿಯ ಭಕ್ತನೆಂದೂ ಕವಿತೆಯಲ್ಲಿ ಪ್ರವೀಣನೆಂದೂ ತಿಳಿಯುತ್ತದೆ. ಕಥಾನಾಯಕನ ತಂದೆಯಾದ ಸೀತಾರಾಮಪ್ಪನಾಯಕನು 1681 ರಲ್ಲಿ ಆಳುತ್ತಿದ್ದಂತೆ ಶಾಸನಗಳಿಂದ ತಿಳಿವುದರಿಂದ ಅವನ ಕಾಲವು ಸುಮಾರು 1700 ಆಗಬಹುದು. ಕವಿಯ ಕಾಲವೂ ಅದೇ.

ಇವನ ಗ್ರಂಥ

### ಸರಜಾಹನುಮೇಂದ್ರಚರಿತೆ

ಇದು ಚಂಪೂರೂಪವಾಗಿದೆ; 5 ಆಶ್ವಾಸಗಳಾಗಿ ಭಾಗಿಸಲ್ಪಟ್ಟಿದೆ. ಅಲ್ಲಲ್ಲಿ ಸಾಂಗತ್ಯಗಳೂ ಷಟ್ಪದಿಗಳೂ ಸಹ ಇವೆ. ಇದರಲ್ಲಿ ಸೂರ್ಯಕುಲೋದ್ಭವನಾದ ಸೀತಾರಾಮನ ಮಗ ತರೀಕೆರೆಪ್ರಭು ಸರಜಾಹನುಮೇಂದ್ರನ ಚರಿತವು ಹೇಳಿದೆ. ಗ್ರಂಥಾವತಾರದಲ್ಲಿ ಪಾರ್ವತೀಸ್ತುತಿ ಇದೆ. ಬಳಿಕ ಕವಿ ವಿಷ್ಣು, ಜಾನಕಿ, ಶಿವ, ಮೀನಾಕ್ಷಿ, ಗಣಪತಿ, ಸರಸ್ವತಿ ಇವರುಗಳನ್ನು ಹೊಗಳಿದ್ದಾನೆ. ಕಥಾನಾಯಕನ ಪರಂಪರೆಯನ್ನು ಹೀಗೆ ಹೇಳಿದ್ದಾನೆ–

ವಿಷ್ಣುವಿನ ನಾಭಿಯಲ್ಲಿ ಬ್ರಹ್ಮನು ಹುಟ್ಟಿದನು; ಅವನ ಮಗ ಕಶ್ಯಪ; ಅವನ ಮಗ ಸೂರ್ಯ; ಇವನಿಂದ ಕ್ಷತ್ರಿಯರು ಹುಟ್ಟಿದರು. ಪೂವಿನಗೆಣೆಯನ (ಸೂರ್ಯನ) ವಂಶದಲ್ಲಿ ಜನಿಸುದುದರಿಂದ ಪೂವಲಕುಲವೆಂಬ ನಾಮವಾಯಿತು. ಈ ಕುಲದಲ್ಲಿ ಕುಮಾರನರೇಂದ್ರನು ಹುಟ್ಟಿ ಸಂತೆಬೆನ್ನೂರವನು (ಸಂತೆಬೆನ್ನೂರನ್ನು) ಆಳಿದನು.

ಅವನ ಮಗ ಜೋಳಿಹನುಮ; ಅವನ ಮಗ ಇಮ್ಮಡಿಹನುಮ; ಅವನಮಗ ಸರಜಾ ಹನುಮ; ಅವನ ಮಗ ಸೀತಾರಾಮ, ಇವನಿಗೆ ರಾಜಕಂಠೀರವನು ಪಾತುಷಾ ಎಂಬ ನಿಜನಾಮವನಿತ್ತನು; ಇವನ ಹೆಂಡತಿ ಲಕ್ಕಮಾಂಬೆ; ಮಗ ಸರಜಾಹನುಮೇಂದ್ರ, ಇವನಿಗೆ 12 ಜನ ರಾಣಿಯರು, ಪಟ್ಟದರಾಣಿ ಗಂಗಾಂಬೆ; ಮಕ್ಕಳು ಸೀತಾರಾಮ, ಕನ್ನಪ್ಪ, ಕೃಷ್ಣಾಂಬೆ, ಹನುಮಾಂಬೆ.

ಈ ಗ್ರಂಥದಲ್ಲಿ ಬೇಟೆ, ಜಾತ್ರೆ, ಮುಂತಾದುವುಗಳ ವರ್ಣನೆಗಳಿವೆಯೇ ಹೊರತು ಚರಿತ್ರಸಂಬಂಧವಾದ ವಿಷಯಗಳೇನೂ ಹೇಳಿಲ್ಲ. ಇದರಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ--

ಹನುಮೇಂದ್ರನ ಕೀರ್ತಿ

ಹನುಮರಾಜನ ಕೀರ್ತಿಲಕ್ಷ್ಮಿಯು | ಘನತರದ ಸತ್ತಿಗೆಯು ವ್ಯೋಮವು |
ಹರನ ಗಿರಿಯದು ದಂಡ ಚಂದ್ರನು ಮೇಲೆಸೆವ ಕಳಸ ||
ಕೊನೆದು ತೂಗುವ ಮಣಿಯು ತಾರಕೆ | ನೆನೆನೆಯದಿ ಪೊತ್ತಿರುವ ಶೇಷನು |
ಧರಣಿ ಪೊಗಳುವಳೇನು ಮಹಿಮೆಯೊ ಮೇಣ್ ತ್ರಿಲೋಕದಲಿ ||

ಬಾಲಲೀಲೆ

ಸರಿದೊರೆಗಳ ದುರ್ಗಗಳನು ತಾ ಕಿತ್ತಿತ್ತಿ | ಕರದೊಳಲ್ಲಾಡಿಸುವಂತೆ |
ತರುಣನು ಗಿಲಿಕೆಯ ಪಿಡಿದಾಡಿದನಾಗ | ಸರಸದೊಳ್ ಬೊಪ್ಪನನುಂದೆ ||

ಸಾಯಂಕಾಲ

ಪಡುವಲವನಿತೆಯು ಕುಂಕುಮರಸದಲ್ಲಿ | ಬಿಡದೆ ಮಜ್ಜನವನು ಗೈದ |
ಬಿಡುನೀರೊ ಎಂಬಂತೆ ಪರ್ಬಿತು ಗಗನದ | ನಡೆಗರದಲಿ ಸಂಧ್ಯಾರಾಗ ||
ಸರಸಿಜ ಮುಚ್ಚಿತು ನೈದಿಲು ಮೆಚ್ಚಿತು | ವರಚಕ್ರವಾಕ ಬೆಚ್ಚಿತು |
ಶರನಿಧಿ ಹೆಚ್ಚಿತು ಜೊನ್ನವು ಮುಚ್ಚಿತು | ಹರಿಣಾಂಕನುದಯದೊಳಾಗ ||

ಸಮುದ್ರ

ಕೋಡಗ ದಾಟಿತು ಜೋಗಿಯು ಮುಸಿದನು | ಚಾಡಿಯ ನುಡಿದ ಗಾಯಕನು |
ಬಳಿಸಬ ದಹಿಸುವನಿದರಿಂದ ಮುನಿಸಿ ಮಾ | ತಾಡದೆ ಮೊರೆದಿರ್ದನುದಧಿ ||

## ಚೆನ್ನಿಗ. ಸು. 1700

ಈತನು ಪ್ರಹ್ಲಾದಚರಿತೆಯನ್ನು ಬರೆದಿದ್ದಾನೆ. ತನ್ನ ಪರಂಪರೆಯನ್ನು ಹೀಗೆ ಹೇಳಿಕೊಂಡಿದ್ದಾನೆ—ಹೊಕ್ಕುಳಿಕೆಯ ಪುರಕಥಿಪತಿ ಹರಿಭಕ್ತ ನರಸಿಂಹದೇವ, ಮಗ ಶಂಕರಲಿಂಗದೇವ, ಮಗ ಕವಿ ಚೆನ್ನಿಗ ತನ್ನ ಗ್ರಂಥವನ್ನು ಅವುಬಳನರಸಿಂಹದೇವರ ಅಂಕಿತದಲ್ಲಿ ಬರೆದಿದ್ದಾನೆ. ಪೂರ್ವಕವಿಗಳಲ್ಲಿ ಕುಮಾರವಾಲ್ಮೀಕಿಯನ್ನು (ಸು. 1500) ಸ್ಮರಿಸುವುದರಿಂದ ಅವನ ಕಾಲಕ್ಕೆ ಈಚೆಯವನು ಎಂಬುದು ವ್ಯಕ್ತವಾಗಿದೆ; ಸುಮಾರು 1700 ರಲ್ಲಿ ಇದ್ದಿರಬಹುದೆಂದು ಊಹಿಸುತ್ತೇವೆ.

ಪೂರ್ವಕವಿಗಳನ್ನು ಈ ಪದ್ಯದಲ್ಲಿ ಸ್ಮರಿಸುತ್ತಾನೆ-

ಉತ್ತಮಕವಿ ಕಾಳಿದಾಸ ಭಾರತನನು| ವಿಸ್ತರಿಸಿದ ವ್ಯಾಸರಾಯ |
ಒತ್ತಿಲೇಶ್ವರವಾಲ್ಮೀಕಿಗಳಂಘ್ರಿಗೆ | ಭಕ್ತಿಯಿಂದಲಿ ವಂದಿಸುವೆ ||

ಇವನ ಗ್ರಂಥ

### ಪ್ರಹ್ಲಾದಚರಿತೆ.

ಇದು ಸಾಂಗತ್ಯದಲ್ಲಿ ಬರೆದಿದೆ; ಸಂಧಿ 13, ಪದ್ಯ 915. ಇದಕ್ಕೆ ನರಸಿಂಹಚಾರಿತ್ರ ಎಂಬ ಹೆಸರೂ ಉಂಟು. ದರಿಂದ ನರಸಿಂಹಸ್ತುತಿಇರೂಪವಾದ ಒಂದೆರಡು ಪದ್ಯಗಳನ್ನು ಉದಾಹರಿಸುತ್ತೇವೆ—

ದುರಿತಗಿರಿಗೆ ವಜ್ರ ಕರ್ಮವೆಂಬಡವಿಯ | ಸುರುಹುವ ದಾವಾನಳನು |
ಕರುಣಾಕರನವುಬಳನರಸಿಂಹನ | ಚರಣವ ನಾ ಬಲಗೊಂಬೆ ||
ಬ್ರಹ್ಮನ ಜನಕ ಭಕತಜನವತ್ಸಲ | ಕರ್ಮದುರಿತಸಂಹರಣ |
ನಿರ್ಮಳಮೂರ್ತಿಯೌಬಳನರಸಿಂಹಗೆ | ಸುಮ್ಮಾನದಿಂದೆಱಗುವೆನು ||

---

## ಮುರುಳುಸಿದ. ಸು. 1700

ಈತನು ಬಸವರಾಜನ ಪವಾಡಗಳನ್ನು ಬರೆದಿದ್ದಾನೆ. ಇವನು ವೀರಶೈವಕವಿ; ಪೂರ್ವಕವಿಗಳಲ್ಲಿ ಸಿಂಗಿರಾಜನನ್ನು (ಸು. 1500) ಹೇಳುವುದರಿಂದ ಅವನ ಕಾಲಕ್ಕೆ ಈಚೆಯವನು ಎಂದು ವ್ಯಕ್ತವಾಗುತ್ತದೆ; ಸುಮಾರು 1700 ರಲ್ಲಿ ಇದ್ದಿರಬಹುದೆಂದು ತೋರುತ್ತದೆ.

ಇವನ ಗ್ರಂಥ

### ಬಸವರಾಜನಪವಾಡಗಳು

ಇದು ಗದ್ಯಗ್ರಂಥ; ಇದರಲ್ಲಿ ಬಸವನು ಕಾಯವಚನಮನಸ್ಸುಗಳಿಂದ ನಡಸಿದ ೭೭೦ ಪವಾಡಗಳು ವರ್ಣಿತವಾಗಿವೆ. ಪೂರ್ವಗ್ರಂಥಗಳಿಂ

ಈಯಂಶಗಳನ್ನು ಸಂಗ್ರಹಿಸಿ ಬರೆದಂತೆ ಕವಿ ಈ ಪದ್ಯದಲ್ಲಿ ಹೇಳುತ್ತಾನೆ:

ಬಸವಪುರಾಣದೊಳ್ ವಸುಮತೀಶ್ವರಮಂಡನ ಸಿಂಗಿರಾಜನಿ |
ರ್ಮಿಸಿದ ಪುರಾಣದೊಳ್ ಸಕಳಭಕ್ತಮಹೇಶ್ವರರಿಂದ ಪೇಳ್ದಪೆಂ ||
ಪೆಸೆವ ಕಥಾಳಿಯಲ್ಲಿ ವಚನೌಘದೊಳಿರ್ದ ಮಹತ್ವಮಾಲೆಯಂ |
ಒಸೆದು ಸಮಸ್ತಭಕ್ತರಱಿವಂತೆ ವಿಳಾಸದಿ ಪೇಳ್ವೆನಾನಿನಂ ||

ಆರಂಭದಲ್ಲಿ ಈ ವಾಕ್ಯವಿದೆ--

ಶ್ರೀಮದನುಪಮಕಲ್ಯಾಣಪುರವರಾಧೀಶ ಮಹಾಮಹಿಮ ಬಸವರಾಜದೇವರು ಶಿವನ ಆಜ್ಞೆಯಿಂದ ನಂದಿಕೇಶ್ವರರಗೆ ಭೂಲೋಕದಲ್ಲಿ ಮಾದರಸ ಮಾದಲಾಂಬೆಯರ ಗರ್ಭದಲ್ಲಿ ಬಸವನಾಮದಲ್ಲವತರಿಸಿ ಕೆಳಗೆ ಉದಾಹರಿಸುವಂತೆ 360 ಪವಾಡಗಳ ನಡಸಿ ಕಪ್ಪಡಿಸಂಗಮನಾಥಲಿಂಗದಲ್ಲಿ ಐಕ್ಯರಾದರು.

ಈ ಗ್ರಂಥದಿಂದ ಸ್ವಲ್ಪಭಾಗವನ್ನು ತೆಗೆದು ಬರೆಯುತ್ತೇವೆ--

ಪವಾಡಗಳು

(1) ಗಾನಲೋಲನಾದ ಸಂಗಮನನ್ನು ಜಂಗಮಾಕಾರದಿಂದ ಕಂಡು ಆತನಿಂದ ಷಟ್ಸ್ಥಲಶಾಸ್ತ್ರವ ತಿಳಿದು ಅಭ್ಯಾಸಿಸಿದ ಪ್ರಸ್ತಾವ (ವಾಕ್ಸಂಬಂಧ)

(2) ಲಿಂಗಧಾರಿಯಾದಕಾರಣ ಮುಂಜಿಯು ಮಾಡುವೆನೆಂಬ ಬಂಧುಗಳ ತಿರಸ್ಕರಿಸಿ ಅಕ್ಕನಾಗಮ್ಮನವರಿಂದ ಕೂಡಿ ಸಂಗಮಕ್ಕೆ ಬಂದುದು (ವಾಕ್ಸಂಬಂಧ)

(3) ಹರುಷದಿಂದಲ್ಲಮಪ್ರಭು ಬರುವನೆಂದು ತಾನೆ ತಿಳಿದು ಶೂನ್ಯಸಿಂಹಾಸನವ ನಿರ್ಮಾಣಮಾಡಿದುದು (ಕಾಯಸಂಬಂಧ)

(4) ಈಶನ ಜಂಗಮ ಬೇಡಿದುದಕ್ಕೆ ೧೦ ಖಂಡುಗ ಜೋಳವ ಮುತ್ತುಮಾಡಿ ಸಮರ್ಪಣಮಾಡಿ ಮೆಱೆದಿರ್ದುದು. (ಮನಸ್ಸಂಬಂಧ)

---

## ಬೆಂಗಳೂರು ಮುದ್ದುವೀರಸ್ವಾಮಿ ಸು. 1700

ಈತನು ವಚನಗಳನ್ನು ಬರೆದಿದ್ದಾನೆ. ಇವನು ವೀರಶೈವಕವಿ. ಈತನ ಗ್ರಂಥದ ಒಂದು ಪ್ರತಿ 1744 ರಲ್ಲಿ ಬರೆದುದಾಗಿ ತಿಳಿವುದರಿಂದ ಇವನು ಆ ಕಾಲಕ್ಕೆ ಹಿಂದೆ ಸುಮಾರು 1700 ರಲ್ಲಿ ಇದ್ದಿರಬಹುದೆಂದು ಊಹಿಸುತ್ತೇವೆ.

---

## ಕಾರುಗಹಳ್ಳಿ ಶಾಂತಯ್ಯ ಸು. 1700

ಈತನು ವಚನಗಳನ್ನು ಬರೆದಿದ್ದಾನೆ. ಇವನು ವೀರಶೈವಕವಿ. ಇವನ ಗ್ರಂಥದ ಒಂದು ಪ್ರತಿ 1744 ರಲ್ಲಿ ಬರೆದುದಾಗಿ ತಿಳಿವುದರಿಂದ ಇವನು ಆ ಕಾಲಕ್ಕೆ ಹಿಂದೆ ಸುಮಾರು 1700 ರಲ್ಲಿ ಇದ್ದಿರಬಹುದೆಂದು ತೋರುತ್ತದೆ

---

## ಘಟ್ಟಗಂಬಳಿ ಸಿದ್ಧಲಿಂಗಸ್ವಾಮಿ ಸು. 1700

ಇವನು ಗುಬ್ಬಿಯಮಲ್ಲಣಾರ್ಯನ ಭಾವಚಿಂತಾರತ್ನಕ್ಕೆ (1513) ಕನ್ನಡಟೀಕೆಯನ್ನು ಬರೆದಿದ್ದಾನೆ. ಈತನು ವೀರಶೈವಕವಿ. ಇವನ ಸ್ಥಳ ಬ್ರಹ್ಮವಾರ. ಇವನು ಸುಮಾರು 1700 ರಲ್ಲಿ ಇದ್ದಿರಬಹುದು.

---

## ಸರ್ವಜ್ಞ ಸು. 1700

ಈತನು ತ್ರಿಪದೀರೂಪವಾದ ಒಂದು ಗ್ರಂಥವನ್ನು ಬರೆದಿದ್ದಾನೆ. ಇದಕ್ಕೆ ಸರ್ವಜ್ಞನತ್ರಿಪದಿ ಎಂದು ಹೆಸರು. ಇವನು ವೀರಶೈವಕವಿ. ತಾನು ಮೊದಲು ಕೈಲಾಸದಲ್ಲಿ ಪುಷ್ಪದತ್ತನಾಗಿದ್ದಂತೆಯೂ ಬಳಿಕ ವರರುಚಿಯಾಗಿ ಹುಟ್ಟಿದಂತೆಯೂ ಅನಂತರ ಸರ್ವಜ್ಞನಾಗಿ ಜನಿಸಿದಂತೆಯೂ ಹೇಳುತ್ತಾನೆ ತನ್ನಹುಟ್ಟಿನವಿಷಯವಾಗಿ ಹೀಗೆ ಹೇಳಿದ್ದಾನೆ:--

ಧಾರವಾಡಜಿಲ್ಲೆಯ ಮಾಸೂರು ಎಂಬ ಗ್ರಾಮದಲ್ಲಿ ಬಸವರಸನೆಂಬ ಆರಾಧ್ಯ ಬ್ರಾಹ್ಮಣನಿದ್ದನು. ಅವನ ಹೆಂಡತಿ ಮಲ್ಲಮ್ಮ. ಈಕೆಗೆ ಮಕ್ಕಳಿಲ್ಲದೆ ಇದ್ದುದರಿಂದ ತನ್ನ ಕೊರತೆಯನ್ನು ಗಂಡನೊಡನೆ ಹೇಳಿಕೊಳ್ಳಲು ಆತನು ಕಾಶಿಗೆ ಹೋಗಿ ಈಶ್ವರನಲ್ಲಿ ಗಂಡುಮಗುವಾಗಬೇಕೆಂದು ಬೇಡಿಕೊಂಡನು. ಈಶ್ವರನಿಂದ ಪಡೆದ ಪ್ರಸಾದವನ್ನು ನುಂಗಿ ಮರಳಿ ತನ್ನೂರಿಗೆ ಬರುವ ದಾರಿಯಲ್ಲಿ ಅಂಬಲೂರೊಳಗೆ ಒಬ್ಬ ಕುಂಬಾರನ ಮನೆಯಲ್ಲಿ ಇಳಿದುಕೊಂಡನು. ಅಲ್ಲಿದ್ದ ಮಾಳಿಯೆಂಬವಳಲ್ಲಿ ಮೋಹಗೊಳ್ಳಲು ಅವಳು ಗರ್ಭಿಣಿಯಾಗಿ ಸರ್ವಜ್ಞನನ್ನು ಹಡೆದಳು

ಸರ್ವಜ್ಞನು "ಸರ್ವರೊಳೊಂದೊಂದುನುಡಿಗಲ್ತುವಿದ್ಯೆಯಾ ಪರ್ವತವೆ" ಆದನು ಎಂದು ಹೇಳಿದೆ.

ಅಚ್ಚಾಗಿರುವ ಕೆಲವು ಪ್ರತಿಗಳಲ್ಲಿ ಇವನ ಗ್ರಂಥದ ಕಾಲಜ್ಞಾನಪದ್ಧತಿಯಲ್ಲಿ ವಿಜಯನಗರವು ಮಹಮದೀಯರಿಂದ ನಾಶವಾದುದು, ಇಕ್ಕೇರಿಸಂಸ್ಥಾನವು ಹಾಳಾ

ದುದು, ಶ್ರೀರಂಗಪಟ್ಟಣವು ಆಂಗ್ಲೇಯರ ಕೈಸೇರಿದುದು ಮುಂತಾದ ವಿಷಯಗಳು ಉಕ್ತವಾಗಿರುವುದರಿಂದ ಕೆಲವರು ಇವನ ಕಾಲವು ಸುಮಾರು 1800 ಆಗಿರಬಹುದು ಎಂದು ಊಹಿಸುತ್ತಾರೆ. ಆದರೆ 1800 ಕ್ಕೆ ಹಿಂದೆ ಬರೆದ ಈತನ ಗ್ರಂಥದ ಓಲೆಯ ಪ್ರತಿಗಳು ದೊರೆವುದರಿಂದಲೂ ಅವುಗಳಲ್ಲಿ ಱ ಎಂಬ ಹಳಗನ್ನಡದ ಅಕ್ಷರವು ಇರುವುದರಿಂದಲೂ ಈತನ ಕಾಲವು ಸುಮಾರು 1700 ಕ್ಕೆ ಈಚೆ ಇರಲಾರದೆಂದು ನಾವು ಊಹಿಸುತ್ತೇವೆ. ಅಚ್ಚಾಗಿರುವ ಪ್ರತಿಗಳು ಒಂದರ ಹಾಗೆ ಒಂದಿಲ್ಲ. ಇವುಗಳಲ್ಲಿ ಹಲವು ಹೊಸಪದ್ಯಗಳೂ ಸೇರಿರುವಂತೆ ತೋರುತ್ತದೆ. ನಮಗೆ ದೊರೆತ ಒಂದು ಓಲೆಯಪುಸ್ತಕದಲ್ಲಿ "ಸಂಪಾದನೆಯ ಸಿದ್ಧವೀರಾಹ್ವಯಾಚಾರ್ಯರು ಸೇರಿಸಿದ ಸರ್ವಜ್ಞಮೂರ್ತಿ ನಿರೂಪಿಸಿದ ತ್ರಿವಿಧಿ" ಎಂದಿದೆ. ಈ ಸರ್ವಜ್ಞಮೂರ್ತಿ ಈ ಕವಿಯೇ ಆಗಿದ್ದ ಪಕ್ಷದಲ್ಲಿ ಇವನು ಸಂಪಾದನೆಯ ಸಿದ್ಧವೀರಾಚಾರ್ಯನ (ಸು. 1600) ಕಾಲಕ್ಕೆ ಹಿಂದೆ ಇದ್ದಿರಬೇಕು.

ಇವನ ಗ್ರಂಥ

### ಸರ್ವಜ್ಞನ ತ್ರಿಪದಿ

ಇದಕ್ಕೆ ಸರ್ವಜ್ಞಮೂರ್ತಿವಚನ ಎಂಬ ಹೆಸರೂ ಇರುವಂತೆ ತಿಳಿಯುತ್ತದೆ. ಪ್ರತಿಪದ್ಯವೂ ಸರ್ವಜ್ಞ ಎಂದು ಮುಗಿಯುತ್ತದೆ. ನಮಗೆ ದೊರೆತ ಒಂದು ಓಲೆಯ ಪ್ರತಿಯಲ್ಲಿ ಪ್ರತಿಪದ್ಯವೂ ಪರಮಾರ್ಥ ಎಂದು ಮುಗಿವುದಲ್ಲದೆ ಗ್ರಂಥಕ್ಕೆ ಪರಮಾರ್ಥಿಕೆ ಎಂಬ ಹೆಸರೂ ಹೇಳಿದೆ. ಗ್ರಂಥವು ಪದ್ಧತಿಗಳಾಗಿ ಭಾಗಿಸಲ್ಪಟ್ಟಿದೆ. ಕೆಲವು ಪ್ರತಿಗಳಲ್ಲಿ 27 ಪದ್ಧತಿಗಳೂ ಮತ್ತೆ ಕೆಲವು ಪ್ರತಿಗಳಲ್ಲಿ 29 ಪದ್ಧತಿಗಳೂ ಇವೆ. ಪದ್ಯಸಂಖ್ಯೆಯೂ ವ್ಯತ್ಯಾಸವಾಗಿದೆ: ಕೆಲವು ಪ್ರತಿಗಳಲ್ಲಿ ಸಾವಿರಕ್ಕೆ ಅಧಿಕವಾಗಿಯೂ ಇನ್ನು ಕೆಲವು ಪ್ರತಿಗಳಲ್ಲಿ ಸಾವಿರಕ್ಕೆ ಸ್ವಲ್ಪ ಕಡಮೆಯಾಗಿಯೂ ಇವೆ. ಗ್ರಂಥದಲ್ಲಿ ಧರ್ಮ ನೀತಿ, ಜ್ಞಾನ, ಜ್ಯೋತಿಷ ಮುಂತಾದ ಹಲವು ವಿಷಯಗಳು ಪ್ರತಿಪಾದಿಸಲ್ಪಟ್ಟಿವೆ. ಆರಂಭದಲ್ಲಿ ಶಿವಸ್ತುತಿ ಇದೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ--

ನೀತಿ

ಕೋಪವೆಂಬುದು ಕೇಳಿ | ಪಾಪದ ನೆಲೆಗಟ್ಟು |
ಕೂಪದೊಳು ನೇಣು ಹಱಿದಂತೆ ನರಕಕ್ಕೆ | ಕೋಪಿ ಹೋಗುವ ಸರ್ವಜ್ಞ ||

ಸತ್ಯರ ನುಡಿ ತೀರ್ಥ | ನಿತ್ಯರ ನಡೆ ತೀರ್ಥ |
ಉತ್ತಮರ ಸಂಗನದು ತೀರ್ಥ ಹರಿವ ನೀ | ರೆತ್ತಣತೀರ್ಥ ಸರ್ವಜ್ಞ ||
ಸಜ್ಜನರ ಸಂಗವು | ಹೆಜ್ಜೇನುಮೆದ್ದಂತೆ |
ದುರ್ಜನರ ಸಂಗದೊಡನಾಟ ಬಚ್ಚಲ | ಗೊಜ್ಜಲಂತಿಹುದು ಸರ್ವಜ್ಞ ||
ಹಿರಿದು ಕರ್ಮವ ಮಾಡಿ | ಹರಿವ ಗಂಗೆಯ ಮಿಂದು |
ಹರಿಯಿತು ಪಾಪವೆನಬೇಡ ಆಪಾಪ | ಎರೆಯ ಮಣ್ಣಲ್ಲ ಸರ್ವಜ್ಞ ||
ಮಟ್ಟಿಯ ಮಣ್ಣನು | ಇಟ್ಟು ತಾ ನೊಸಲೊಳಗೆ |
ನೆಟ್ಟನೆ ಸ್ವರ್ಗವ ಪಡೆವೊಡೆ ಸಾಣೆಕಲ್ | ಕೆಟ್ಟ ಕೇಡೇನು ಸರ್ವಜ್ಞ ||
ನಿದ್ದೆಗಳು ಬಾರವು | ಬುದ್ಧಿಗಳು ತಿಳಿಯವು |
ಮುದ್ದಿನಮಾತು ಸೊಗಸವು ಬೋನದ | ಮುದ್ದೆ ತಪ್ಪಿದರೆ ಸರ್ವಜ್ಞ ||
ಸಿರಿ ಬಂದ ಕಾಲಕ್ಕೆ | ಕರೆದು ದಾನವ ಮಾಡು |
ಪರಿಣಾಮವಕ್ಕು ಪದವಕ್ಕು ಸ್ವರ್ಗ | ನೆರೆಮನೆಯಕ್ಕು ಸರ್ವಜ್ಞ ||
ಎಲುತೊಗಲುನರಮಾಂಸ | ಬಲಿದ ಚರ್ಮದ ಹೊದಿಕೆ |
ಹೊಲೆರಕ್ತಶುಕ್ಲದಿಂದಾದ ಈ ದೇಹಕೆ | ಕುಲವಾವುದಯ್ಯ ಸರ್ವಜ್ಞ ||
ಎಣಿಸುತಿರ್ಪುದು ಬೆರಳು | ಗುಣಿಸುತಿರ್ಪುದು ಜಿಹ್ವೆ |
ಮನ ಹೋಗಿ ಹಲವನೆಣಿಸಿದರೆ ಹಾಳೂರ | ಶುನಕನಂತಕ್ಕು ಸರ್ವಜ್ಞ ||
ಕೊಲುವ ಕೈಯೊಳು ಪೂಜೆ | ಮೆಲುವ ಬಾಯೊಳು ಮಂತ್ರ |
ಸಲೆ ಪಾಪನೆರೆದ ಮನದೊಳು ಪೂಜಿಸನು | ಹೊಲೆಯಂಗು ಕಷ್ಟ ಸರ್ವಜ್ಞ ||
ಕಟ್ಟಾಳೊಡನೆ ಬಗಲು | ಬಟ್ಟೆಗೆ ನೆರವೇಕೆ |
ಶಿಷ್ಟಂಗ [illegible] ಕಳ್ಳಂಗೆ | ದಟ್ಟಡಿಗಳೇಕೆ ಪರಮಾರ್ಥ ||
ಹಸಿವಿಲ್ಲದುಣಬೇಡ | ಹಸಿದು ಮತ್ತಿರಬೇಡ |
ಬಿಸಿಗೂಡಿ ತಂಗೂಳುಣಬೇಡ ವೈದ್ಯರಾ | ಗಸಣಿಯೇ ಬೇಡ ಪರಮಾರ್ಥ |

## ಜ್ಯೋತಿಷ

ಸಂದಿದ್ದ ಮಾಸವನು ಕುಂದದಿಮ್ಮಡಿಮಾಡಿ |
ಬಂದಿನ ತಿಥಿಯನೊಡಗೂಡ ಲಾಕಾರೆ | ಮುಂದೆ ಬಂದಿಹುದು ಸರ್ವಜ್ಞ ||

## ಒಗಟೆ

ನೆತ್ತಿಯಲುಂಬುದು | ಸುತ್ತಲು ಸುರಿವುದು |
ಎತ್ತಿದರೆಗಡುಹೋಗುಹುದು ಕವಿಗಳಿದ | ರರ್ಥವನು ಪೇಟ್ ಸರ್ವಜ್ಞ ||

(ಬೀಸುವಕಲ್ಲು)

ಇವನ ಕಾಲಜ್ಞಾನತ್ರಿಪದಿಯಲ್ಲಿ 456 ಪದ್ಯಗಳಿವೆ. ಇದರ ಮೊದಲಲ್ಲಿರುವ

ಬಸವ ನೀವು ನಿರೂ । ಪಿಸಿದ ಕಾಲಜ್ಞಾನವ ।
ಭಸಿತವಿಟ್ಟು ಮರ್ತ್ಯದಿರವನು ನಾ ನಿಮ್ಮ । ಸಿಸುವೆಂದು ಪೇಟ್ವೆ ಸರ್ವಜ್ಞ ॥

ಎಂಬ ಪದ್ಯದಿಂದ ಈತನು ಬಸವನ ಕಾಲಜ್ಞಾನವನ್ನೇ ಅನುಸರಿಸಿರುವಂತೆ ತಿಳಿಯುತ್ತದೆ.

---

## ಲಕ್ಷ್ಮಯ್ಯ. ಸು. 1700

ಈತನು ಪಶ್ಚಿಮರಂಗಧಾಮಶತಕವನ್ನು ಬರೆದಿದ್ದಾನೆ. ಇವನು ಚತುರ್ಥವರ್ಣದವನು ಎಂದು ತೋರುತ್ತದೆ; ಇವನ ತಂದೆ ರಂಗನಾಥ. ಈ ಕವಿ ಸುಮಾರು 1700 ರಲ್ಲಿ ಇದ್ದಿರಬಹುದು.

ಇವನ ಗ್ರಂಥ

### ಪಶ್ಚಿಮರಂಗಧಾಮಶತಕ

ಇದು ವೃತ್ತಗಳಲ್ಲಿ ಬರೆದಿದೆ; ಶ್ರೀರಂಗಪಟ್ಟಣದ ರಂಗನಾಥದೇವರ ಸ್ತುತಿರೂಪವಾಗಿದೆ. ಇದರಿಂದ ಒಂದು ಪದ್ಯವನ್ನು ತೆಗೆದು ಬರೆಯುತ್ತೇವೆ.

ಕ್ರಿಮಿಗಳಿಗಾಲಯಂ ವ್ರಣದ ಬೀಡು ಜ್ವರಂಗಳಿಗಾಶ್ರಯಸ್ಥಳಂ ।
ಕ್ರಮಗಳಿಗಿಕ್ಕೆ ವಾತಕಫಪಿತ್ತಕೆಯಾಗರಮೀಶರೀರಮೆಂ ॥
ದುಮಿದು ಮಹೋಗ್ರದುಃಖಕೆ ನಿವಾಸಮಿದಂ ನೆಱೆ ಮಾಣಿಸುತ್ತಮೆ ।
ನ್ನನು ಸಲೆ ರಕ್ಷಿಸಾ ಶರಣುವೊಕ್ಕೆನು ಪಶ್ಚಿಮರಂಗನಾಯಕಾ ॥

---

## ಚಾಮಯ್ಯ. ಸು. 1700

ಈತನು ದೇವರಾಜೇಂದ್ರಸಾಂಗತ್ಯವನ್ನು ಬರೆದಿದ್ದಾನೆ. ಇವನ ಕಾಲವು ಸುಮಾರು 1700 ಆಗಬಹುದು. ಪೂರ್ವಕವಿಗಳಲ್ಲಿ ವ್ಯಾಸವಾಲ್ಮೀಕಿಗಳನ್ನು ಸ್ಮರಿಸಿದ್ದಾನೆ.

ಇವನ ಗ್ರಂಥ

### ದೇವರಾಜೇಂದ್ರ ಸಾಂಗತ್ಯ

ನಮಗೆ ದೊರೆತ ಅಸಮಗ್ರಪ್ರತಿಯಲ್ಲಿ 2 ಸಂಧಿಗಳಿವೆ. ಈ ಗ್ರಂಥ

ಹಳ್ಳಿ ಮೈಸೂರುಗೊರೆಯಾದ ದೇವರಾಜನ ಚರಿತವು ಹೇಳಿದೆ. ಇದರಲ್ಲಿ ಕವಿ

ಪಂಥದ ರಿಪುನೃಪಕುಲಗಿರಿವಜ್ರ ಭೂ । ಕಾಂತ ಸದ್ಧರ್ಮಚರಿತನ ।
ಕಂತುಸನ್ನಿಭದೇವರಾಜನರೇಂದ್ರನ । ಸಂತತಸತ್ಕೃತಿಯಃ ಪೇಟಿಂವೆನು ॥

ಎಂದು ಹೇಳಿ ಗ್ರಂಥದ ಉತ್ಕೃಷ್ಟತೆಯನ್ನು ಈ ಪದ್ಯದಲ್ಲಿ ಹೇಳಿದ್ದಾನೆ—

ಒಲಿದು ಲಾಲಿಪ ಮುಗುದೆಯ ಮುದ್ದುನುಡಿಯೊ ಸ|ದ್ವಿಲಸಿತವಾದ ಪಾಲ್ಗೆನೆಯೋ।
ಎಳಬಾಲಕರ ತೊವಲ್ನುಡಿಯೋ ಚಾಮನು ಪೇಟ್ದಿ। ಲಲಿತಸಂಗರದ ಸತ್ಕಥೆಯೋ ॥
ಶೃಂಗಾರನಿಧಿ ಸೀತಿಯಂಗ ವೀರತ್ವದು । ತ್ತುಂಗಸದನ ಮಂತ್ರಿಜನಕೆ ।
ಸಂಘಟಿಸುವ ಬುದ್ಧಿಯೆನಿಸಿ ವೆಱಿವುದೀ। ಮಂಗಳೋತ್ಸವಸುಚರಿತ್ರೆ ॥

ಗ್ರಂಥಾದಿಯಲ್ಲಿ "ಪದ್ಮಗಿರಿಯೊಳು[1] ನೆಲಸಿದ ದೇವನ" ಸ್ತುತಿ ಇದೆ. ಬಳಿಕ ಕವಿ ಪಶ್ಚಿಮರಂಗನಾಥ, ನರಸಿಂಹ, ಲಕ್ಷ್ಮೀಕಾಂತ, ತ್ರಿಣಯನ. ಗಣೇಶ, ಸರಸ್ವತಿ, ಚೆನ್ನಿಗರಾಯ, ನಂಜುಂಡೇಶ, ಚಾಮುಂಡಿ, ಸೂರ್ಯ, ವರಪ್ಪಯಾಚಾರ್ಯ ಇವರುಗಳನ್ನು ಹೊಗಳಿದ್ದಾನೆ. ಈ ಗ್ರಂಥದಿಂದ ಒಂದೆರಡು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ—

ದೇಶ

ಭಂಗವೆಂಬೆಂಬ ಹೆಸರು ಜಲನಿಧಿಯ ತ । ರಂಗದೊಳಲ್ಲದೀನೆಲನ ।
ತುಂಗವಿಕ್ರಮದೊಳಾಳುವ ನೃಪರೆಡೆಯಲಿ । ಸಂಘಟಿಸದು ಜಗವಱಿಯೆ ॥

ಪರ್ವತ

ಚಂಡಕಿರಣಸೋಮಪಾವಕಧರ ವೃಷ । ಮಂಡಿತ ಶಿವಗಣೋಲ್ಲಾಸ ।
ಕುಂಡಲಿಯುತ ಮುನಿಸಂಚಯದಿಂದದ್ರಿ । ಖಂಡಪರಶುವಿನಂತೆಸೆಗುಂ ॥

---

ಸಾಗರ, ಸು. 1700

ಈತನು ಮಾಣಿಕಸ್ವಾಮಿಚರಿತೆಯನ್ನು ಬರೆದಿದ್ದಾನೆ. ಇವನು ಜೈನಕವಿ; ಇವನ ತಂದೆ ಕೋಟಿಲಾಭಾನ್ವಯದ ಸೊಡ್ಡಿಸೆಟ್ಟಿ, ತಾಯಿ ಚಾಡಾಂಬಿಕೆ. ಇವನು ಸುಮಾರು 1700ರಲ್ಲಿ ಇದ್ದಿರಬಹುದೆಂದು ತೋರುತ್ತದೆ.

ಇವನ ಗ್ರಂಥ

---

1. ಪದ್ಮಗಿರಿ ಎಂದರೆ ಕಮಲಾಚಲವೆಂಬ ಹಿಮವದ್ಗೋಪಾಲಸ್ವಾಮಿಬೆಟ್ಟ.

## ಮಾಣಿಕಸ್ವಾಮಿಚರಿತೆ

ಇದು ಭಾಮಿನೀಷಟ್ಪದಿಯಲ್ಲಿ ಬರೆದಿದೆ; ಸಂಧಿ 3, ಪದ್ಯ 298. ಇದರಲ್ಲಿ ಮಾಣಿಕಜಿನೇಶನ ಚರಿತೆ ಹೇಳಿದೆ.

ಕಥಾಸಾರ—ದೇವೇಂದ್ರನು ತಾನು ಪೂಜಿಸುತ್ತಿದ್ದ ಮಾಣಿಕಜಿನಬಿಂಬವನ್ನು ರಾವಣನ ಹೆಂಡತಿಯಾದ ಮಂಡೋದರಿಯ ಪ್ರಾರ್ಥನಾನುಸಾರವಾಗಿ ಅವಳಿಗೆ ಕೊಟ್ಟನು. ಅವಳು ಅದನ್ನು ಪೂಜಿಸುತ್ತಿದ್ದು ರಾವಣವಧಾನಂತರ ಶತ್ರುಗಳ ಭಯದಿಂದ ಸಮುದ್ರದಲ್ಲಿ ಇರಿಸಿದ್ದಳು. ಬಹುಕಾಲದಮೇಲೆ ಶಂಕರಗಂಡನೆಂಬ ಮಹಾರಾಜನು ಈ ಸಂಗತಿಯನ್ನು ಒಬ್ಬ ಬೇಡನಿಂದ ತಿಳಿದು ಆ ಬಿಂಬವನ್ನು ಒಬ್ಬ ಪತಿವ್ರತಾಸ್ತ್ರೀಯ ಸಹಾಯದಿಂದ ತರಿಸಿಕೊಂಡು ಕೊಲ್ಲಿಪಾಕ್ಕ ಎಂಬ ಪಟ್ಟಣದಲ್ಲಿ ದೇವಸ್ಥಾನವನ್ನು ಕಟ್ಟಿಸಿ ಅದರಲ್ಲಿ ಪ್ರತಿಷ್ಠೆಮಾಡಿದನು.

ಗ್ರಂಥಾವತಾರದಲ್ಲಿ ಮಾಣಿಕಜಿನಸ್ತುತಿ ಇದೆ. ಬಳಿಕ ಕವಿ ಸಿದ್ಧಾದಿಗಳು, ಸರಸ್ವತಿ, ಗಣಧರರು, ಯಕ್ಷಯಕ್ಷಿಯರು ಇವರುಗಳನ್ನು ಹೊಗಳಿದ್ದಾನೆ. ಈ ಗ್ರಂಥದಿಂದ ಒಂದೆರಡು ಪದ್ಯಗಳನ್ನು ತೆಗೆದು ಬರೆಯುತ್ತೇನೆ—

ಚಂದ್ರಲೇಖೆಯನ್ನು[1] ಕುರಿತು ಲಕ್ಷ್ಮಣನ ಉಕ್ತಿ.

ಪರಸತಿಗೆಯಳುಪಿದಡೆ ಪಾತಕ | ದೊರೆಕೊಳುಗು ಭವಭವದಿ ಬಿಡದೆಯು |
ಧರೆಯೊಳಗೆ ಸತ್ಕೀರ್ತಿಯಳಿದಪಕೀರ್ತಿ ಪಸರಿಪುದು ||
ನಿರುತದಿಂ ಕುಲಹಾನಿ ಬಳಸಿ | ತೊಲಗುವುದು ತತ್ಕ್ಷಣದೊಳಂಗಳೆ |
ಕುರುಳುಗೆಡಬೇಡೆನುತ ಸೌಮಿತ್ರಿಯರ ಸುತ ಜರಿದ ||

ಹನುಮಂತನ ಯುದ್ಧ

ಕೆಲರ ಸರಳಿಂವೆಚ್ಚು ತಿರುಗಿಸಿ | ಕೆಲರ ಧನುವಿಂದೊಗೆದು ಕೊಲುತನೆ |
ಕೆಲರ ಕಾಲಲಿ ಮೆಟ್ಟಿ ಸೀಳುತ ಕೆಲರನೊದೆದುರ್ಬಿದು |
ಕೆಲರ ಶಿರಗಳ ಕಿತ್ತು ಹನುಮನು | ಕೆಲರ ಗಗನಕ್ಕಿಡುತಮಾಗಳು |
ಕೊಳಗುಳದೊಳೊಪ್ಪಿದನು ಮಾರಿಯ ಮೋರೆಯಂದದಲಿ ||

---

1. ಜೈನರ ರಾಮಾಯಣದಲ್ಲಿ ಶೂರ್ಪನಖಿಗೆ ಈ ಹೆಸರು ಕೊಟ್ಟಿದೆ.

ಚಂದ್ರೋದಯ

ಧರಣಿವಲ್ಲಭೆಗೋತು ವೇಘನು | ಪಿರಿಯ ನೀಲಿಯ ವಸ್ತ್ರದೊಳಗೆಯು |
ವಿರಳವಹ ಮೌಕ್ತಿಕವ ಸೇರಿಸಿ ಕಟ್ಟಿಸಿದತೆಱದಿಂ ||
ಪರಿಕಿಸಲು ಮೇಲ್ಕಟ್ಟಿನಂತಿರೆ | ನಿರುತದಿಂ ಜಗದೊಳಗೆ ತವುವದ |
ಹುರುಳುಗೆಡಿಸುವೆನೆನುತ ಸರಸಿಜಶತ್ರುವುದಯಿಸಿದ ||

---

ಬಸವರಾಜೇಂದ್ರ. ಸು. 1700

ಇವನು ಮಹಾವಿಭೂತಿಮಹಿಮೆಯನ್ನು ಬರೆದಿದ್ದಾನೆ; ಶಂಕರಸಂಹಿತೆಯನ್ನು ಪೂರ್ತಿಯಾಗಿ ಬರೆದಿರುವಂತೆ ತೋರುತ್ತದೆ. ಈತನು ಮೈಸೂರು ಅರಸುಗಳ ಸಮುದಾಯಕ್ಕೆ ಸೇರಿದವನಾಗಿರಬಹುದು. ಇವನ ಕಾಲವು ಸುಮಾರು 1700 ಆಗಿರಬಹುದೆಂದು ಊಹಿಸುತ್ತೇವೆ.

ಇವನ ಗ್ರಂಥ

ಮಹಾವಿಭೂತಿಮಹಿಮೆ

ಇದು ಗದ್ಯರೂಪವಾಗಿದೆ; ಅಧ್ಯಾಯ 22. ಸ್ಕಾಂದಪುರಾಣದ ಶಂಕರಸಂಹಿತೆಯಲ್ಲಿ ಶಿವರಹಸ್ಯಕಾಂಡದೊಳಗಣ ಉಪದೇಶಕಾಂಡದಲ್ಲಿ ಉಕ್ತವಾದುದು. ಗ್ರಂಥಾಂತ್ಯದಲ್ಲಿ ಈ ಗದ್ಯವಿದೆ-

ಶ್ರೀಮತ್ಕಮಲಭವಶತಮಖಮುಖಸುರಸಮುದಯಪ್ರಣತಮಕುಟತಟಘಟಿತಮಂಜುಮಾಣಿಕ್ಯಪ್ರಭಾಪುಂಜರಂಜಿತಪದನಖಮಯೂಖಸಾಂಬಶಿವಸುರುಚಿರಚರಣಾರವಿಂದಮಕರಂದಾಸ್ವಾದನಮತ್ತಮಧುಕರಾಯಮಾನ ಬಸವರಾಜೇಂದ್ರವಿರಚಿತಮಪ್ಪ ಕರ್ಣಾಟಕವಚನರಚನಾಭಿಧಾನಮಾದ ಸ್ಕಾಂದಪುರಾಣದ ಶಂಕರಸಂಹಿತೆಯಲ್ಲಿ ಶಿವರಹಸ್ಯಕಾಂಡದ ಉಪದೇಶಕಾಂಡದೊಳ್.

---

ಸೋಮ. ಸು. 1700

ಈತನು ವೀರಭದ್ರಸಾಂಗತ್ಯವನ್ನು ಬರೆದಿದ್ದಾನೆ. ಇವನು ವೀರಶೈವಕವಿ. ತೋಂಟದಸಿದ್ಧೇಶ್ವರನನ್ನು (ಸು. 1470) ಸ್ತುತಿಸಿದ್ದಾನೆ. ಸುಮಾರು 1700 ರಲ್ಲಿ ಇದ್ದಿರಬಹುದೆಂದು ತೋರುತ್ತದೆ.

ಇವನ ಗ್ರಂಥ

ವೀರಭದ್ರಸಾಂಗತ್ಯ

ಸಂಧಿ 5, ಪದ್ಯ 515. ಆರಂಭದಲ್ಲಿ ಹಲಗೂರಲಿಂಗದ ವಂದನೆ ಇದೆ.

ಹೊಸಲೂರ ವೀರೇಶ್ವರನ ಕರುಣದಿಂದ | ಎಸಗಿ ಪೇಳ್ದೆನೀಕೃತಿಯ |

ಎಂದು ಕವಿ ಹೇಳುತ್ತಾನೆ.

---

ಪರಮಭಕ್ತ. ಸು. 1700

ಇವನು ಘೋರಾಸುರಯುದ್ಧವನ್ನು ಬರೆದಿದ್ದಾನೆ. ಈತನು ವೀರಶೈವಕವಿ. ತನ್ನ ಹೆಸರನ್ನು ಸ್ಪಷ್ಟವಾಗಿ ಹೇಳಿಕೊಂಡಿಲ್ಲ. ಕೊನೆಯ ಪದ್ಯದಲ್ಲಿ-ಧರೆಯೊಳೀಕಥೆಯನಿರದೋದಿಯಾಲಿಪ ಜನರ ಕರುಣದಿಂ ಪಾರ್ವತೀಶನು ಪಾಲಿಪನು ಎಂದು ಪರಮಭಕ್ತನು ಅವಿರಳಸಿದ್ಧಲಿಂಗೇಶ ನಾಣತಿಯೊಳ್ ವರ್ಣಿಸಿದನು-ಎಂದು ಹೇಳಿರುವುದರಿಂದ ಇವನ ಹೆಸರನ್ನು ಪರಮಭಕ್ತ ಎಂದು ಮೇಲೆ ಬರೆದಿದ್ದೇವೆ. ಇವನು ಸುಮಾರು 1700 ರಲ್ಲಿ ಇದ್ದಿರಬಹುದು.

ಇವನ ಗ್ರಂಥ

ಘೋರಾಸುರಯುದ್ಧ

ಇದು ವಾರ್ಧಕಷಟ್ಪದಿಯಲ್ಲಿ ಬರೆದಿದೆ; ಸಂಧಿ 8, ಪದ್ಯ 617.

ಕಥಾಗರ್ಭ—ವೃತ್ರನನ್ನು ಇಂದ್ರನು ಕೊಲ್ಲಲು ತ್ವಷ್ಟೃವಿಗೆ ಕೋಪ ಬಂದು ತನಗೆ ಇಂದ್ರನನ್ನು ಕೊಲ್ಲುವ ಮಗನಾಗಬೇಕೆಂದು ಮಾರಣಕೃತ್ಯದಲ್ಲಿ ಹೋಮಿಸಲು ಘೋರಾಸುರನು ಹುಟ್ಟಿದನು. ಇವನನ್ನು ಮಣಿಪುರದ ಕುಲಿಶಭುಜನೆಂಬ ಶಿವಭಕ್ತನು ನಾರದನ ಉಪದೇಶದಿಂದ ಜಯಿಸಿದನು.

ಈ ಕಥೆಯನ್ನು ಕೈಲಾಸದಲ್ಲಿ ಶಿವನ ಆಜ್ಞಾನುಸಾರವಾಗಿ ನಿರಂಜನಮುನಿ ಪಾರ್ವತಿಗೆ ಹೇಳಿದನು. ಇದನ್ನು ಕವಿ ಪುಲಿಯೂರ ಸೋಮೇಶನ ಕರುಣದಿಂದ ಕನ್ನಡದಲ್ಲಿ ರಚಿಸಿದಂತೆ ಹೇಳುತ್ತಾನೆ. ಸಂಧಿಗಳ ಕೊನೆಯಲ್ಲಿ ಅವಿರಳೇಶ್ವರಸಿದ್ಧಲಿಂಗೇಶನ ಅಂಕಿತವಿದೆ. ಗ್ರಂಥಾವತಾರದಲ್ಲಿ ಗಣೇಶ, ಸರಸ್ವತಿ ಇವರುಗಳ ಸ್ತುತಿ ಇದೆ. ಈ ಗ್ರಂಥದಿಂದ ಒಂದು ಪದ್ಯವನ್ನು ತೆಗದು ಬರೆಯುತ್ತೇವೆ—

### ಸೈನ್ಯ

ಕಂಘಟಾವಳಿಯ ಪೆರ್ಮೇರೆಯ ತಿಂಥಿಣಿಗಳಿಂ |
ತುರಗನಿಚಯದ ವೀಚಿಮಾಲೆಗಳ ಸೊಗಸಿನಿಂ |
ಪರತರಸಿತಚ್ಛತ್ರಡಿಂಡೀರದೊಟ್ಟಿಲಿಂ ರಥನಿವಹಚೈತ್ರಂಗಳಿಂ ||
ಕರಮೆಸೆವ ಚಾಮರಾಳಿಗಳ ತುಂತುರ್ಗಳಿಂ |
ಪರಿಪರಿಯ ವಾದ್ಯರವಮೋ ಘೋಷದಂತಾಗೆ |
ಉರರೆ ಕೇಳುಭಯಬಲ ಮೇರೆವಿರಾಜಿಸಿದ ಶರಧಿಗಳ ಮಾಟ್ಕೆಯೆನಲೆಸೆದುವು ||

---

## ಕೃಷ್ಣ. ಸು. 1700

ಈತನು ಕೃಷ್ಣಕರ್ಣಾಮೃತವನ್ನು ಬರೆದಿದ್ದಾನೆ. ಇವನು ಬ್ರಾಹ್ಮಣಕವಿ ಎಂದು ತೋರುತ್ತದೆ; ಇವನ ತಂದೆ ಬಳ್ಳಾಪುರದ ಯಾದವರಾಯ. ನಮಗೆ ದೊರೆತ ಪ್ರತಿ ಅಸಮಗ್ರ; ಇದರಲ್ಲಿ ಆದ್ಯಂತಭಾಗಗಳು ಇಲ್ಲವಾದುದರಿಂದ ಕವಿಯ ವಿಷಯವಾಗಿ ಇನ್ನೇನೂ ಹೇಳಲಾರೆವು. ಇವನು ಸುಮಾರು 1700 ರಲ್ಲಿ ಇದ್ದಿರಬಹುದೆಂದು ತೋರುತ್ತದೆ,

ಇವನ ಗ್ರಂಥ

### ಕೃಷ್ಣಕರ್ಣಾಮೃತ

ಇದು ಭಾಮಿನೀಷಟ್ಪದಿಯಲ್ಲಿ ಬರೆದಿದೆ; ನಮಗೆ ದೊರೆತ ಪ್ರತಿಯಲ್ಲಿ 10 ಶತಕಗಳೂ 11 ನೆಯ ಶತಕದಲ್ಲಿ ಕೆಲವು ಪದ್ಯಗಳೂ ಇವೆ ಇದರಲ್ಲಿ ಭಾಗವತದಶಮಸ್ಕಂಧದ ಕಥೆ ಹೇಳಿದೆ. ಇದರಿಂದ ಕೆಲವು ಪದ್ಯಗಳನು ತೆಗೆದು ಬರೆಯುತ್ತೇವೆ—

### ಕಾಳಿಯಹ್ರದಪ್ರವೇಶಸಮಯ

ಬಿಡುಮುಡಿಯೆ ಮುಗಿಲೆನಲು ಮೋಹಕ | ಪ್ಪಡೆಯ ನೋಟವೆ ಮಿಂಚು ನೋಡ|
ಲ್ಕಡೆಗುಡದೆಯುಬ್ಬಿತಿರ್ಪ ದನಿಯೇ ಗುಡುಗಿನಂದವೆನೆ ||
ಬಿಡದೆ ಸುರಿವಾಕಣ್ಣನೀರ್ ಮಳೆ | ನಡುಗುತಿಹ ಕುಚ ಕೋಕವೆನೆ ತಾ |
ಸಡೆದು ಬಹ ಕಾರ್ಗಾಲದಂತಾಗೋಪಿಯೈದಿದಳು ||

### ವರ್ಷಾಕಾಲ

ದುಷ್ಟರಂದದಿ ಕೂಡುತ ಕೂಗುತ | ಕಷ್ಟವೆಂದೆನುತೊಡನೆ ಜಾರುತ |

ತುಷ್ಟಿಬಡಿಸುತ ಸಿಡಿಲ ಗರ್ಜನೆಯಿಂದ ಬೆದಱಿಸುತ ||
ನಷ್ಟಚಿಂತೆಯೊಳ್ಳಿದೆ ಕರಗುತ | ಕುಷ್ಟರೋಗಿವೊಲ್ ಬೆಳ್ಳನಾಗುತ |
ಲಿಷ್ಟವಿಲ್ಲದ ಡಂಭದಾನಿವೊಲಿರ್ದುದಾಮೇಘ ||

ಚಂದ್ರೋದಯ

ಮುಂಬರಿಯೆ ಮುನ್ನೀರ್ ಚಕೋರಕ | ದಂಬ ಪೊಂಪುಟಿವೋಗೆ ಸಸಿಗಳ |
ಕೊಂಬೆ ಪೆಂಪಿಂ ಮೆಱೆಯೆ ಕುವಲಯನಿಕರ ಕಂಪೇಱೆ ||
ತಂಬೆಲರ ಮುಂಚೂಳಿ ಪಸರಿಸೆ | ತುಂಬೆ ಪರಭೃತಗಳ ಪೊಗೞ್ಕೆಯೊ |
ಳಂಬುಜಾರಿಯ ಬಿಂಬವೆಸೆದುದು ಇಂದ್ರದಿಕ್ಕಿನೊಳು ||

ಗೋಪಿಯರ ನರ್ತನ

ನಿಱಿ ಜಗುಟೆ ಮುಡಿ ಜಾಱೆ ಹಾರವು|ಪಱಿಯೆ ಬೆಮರ್ವನಿ ಸುರಿಯೆ ಪದನೂ|
ಪುರಗಳಂದುಲಿದೋಱೆ ಮೈಪರಿಮಳಕೆ ಒರುವಳಿಯ ||
ಮೆಱೆವ ಝೇಂಕೃತಿ ಗಾನದಂತಿರೆ | ವರವಿಭೂಷಣಮುಲಿಯೆ ತಾಳದೊ |
ಲಿಕೆ ಮಹಾರಮಣೀಯದಿಂ ನಟಿಸಿದರು ಗೋಪಿಯರು ||

---

## ಸಹವಾಸಿ ನಿರಂಜನಾವಧೂತ. ಸು. 1700

ಈತನು ಗಗನತಾರಾವಳಿ, ಕಾಮುವಚನ ಇವುಗಳನ್ನು ಬರೆದಿದ್ದಾನೆ ಇವನು ಬ್ರಾಹ್ಮಣಕವಿ; ಇವನ ಗುರು ಗಗನಾನಂದ; ಶ್ರೀಶೈಲಪರ್ವತಕ್ಕೆ ಯಾಮ್ಯಭಾಗದಲ್ಲಿರುವ ಹರನಗರದ ಮಾರುತಿಯ ಪರಮಸೇವಕ, ಪರ ಮವೈಷ್ಣವವಟು ಎಂದು ತನ್ನನ್ನು ವಿಶೇಷಿಸಿ ಹೇಳಿಕೊಂಡಿದ್ದಾನೆ. ಅನುಭ ವಾಮೃತವನ್ನು ಬರೆದ ಸಹವಾಸಿ ರಂಗನಾಥನಿಗೂ ಇವನಿಗೂ ಏನಾದರೂ ಸಂಬಂಧವಿರಬಹುದೋ ಏನೋ ತಿಳಿಯದು. ಇವನ ಕಾಲವು ಸುಮಾರು 1700 ಆಗಿರಬಹುದೆಂದು ಊಹಿಸುತ್ತೇವೆ.

ಇವನ ಗ್ರಂಥಗಳಲ್ಲಿ

1 ಗಗನತಾರಾವಳಿ

ಇದು ಭಾಮಿನೀಷಟ್ಪದಿಯಲ್ಲಿ ಬರೆದಿದೆ; ನಮಗೆ ದೊರೆತ ಪ್ರತಿ ಅಸ ಮಗ್ರ, ಇದರಲ್ಲಿ 2 ಅಧ್ಯಾಯಗಳಿವೆ. ಇದರ ಹೆಸರು, ಪ್ರತಿಪಾದಿತವಾದ ವಿಷಯ ಇವುಗಳನ್ನು ಕುರಿತು ಕವಿ ಹೀಗೆ ಬರೆದಿದ್ದಾನೆ—

ಶ್ರೀಮಹಾಗುರುಗಗನರೂಪಗೆ | ಯೀಮಹಾಗಗನದಲಿ ಬೆಳಗುವ |
ಸೋಮರವಿತಾರಾಪವಮಾನಹವ ಬೆರಸಿ ನರಗೊಳಿಸಿ ||
ನೇಮಿಸಿಯೆ ಕಂಠಾಭರಣದಂ | ತಾಮಹಾಗುರು ಧರಿಪವೊಲು ಸುಖ |
ಧಾಮ ನಿರುಪಮಗಗನತಾರಾವಳಿಯ ವಿರಚಿಸಿದ ||
ಪಣಿದ ಮೌಕ್ತಿಕಸರವ ಜೋಡಿಸಿ | ಮೆಚ್ಚಿವ ಕಂಠಾಭರಣಮೆನಿಸುವ |
ಶೆಟ್ಟಿದಲಾ ಪರಿಪರಿಯ ರುಚಿ ವಿಸ್ತರದಲಾಗಮದ ||
ತೆಟ್ಟಿಗಳಂ ವಿಸ್ತರಿಸುವೆನು ಕ | ನ್ನಡದಲಾಕನ್ನಡಿಯೆ ದರ್ಪಣ |
ದಿರವದಲ್ಲದೆ ಭೇದವಿಲ್ಲದಶೆಟ್ಟಿದಲಾನಿದನು ||

ಪೀಠಿಕಾಧ್ಯಾಯದ 20 ಪದ್ಯಗಳು ಗುರುಸ್ತುತಿರೂಪವಾಗಿವೆ; ಕೊನೆಯಲ್ಲಿ

ಇತಿ ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯ ಗಗನಾನಂದಗುರುವರ್ಯಪದಕಮಲಭೃಂಗಾಯಮಾನ ಸಹವಾಸಿನಿರಂಜನಾವಧೂತವಿರಚಿತಮಪ್ಪ ಗಗನತಾರಾವಳೀಗ್ರಂಥೇ ಗಗನಗುರುನಿರಂಜನಾವಧೂತಸಂವಾದೇ ವೇದಾಂತಪ್ರಕರಣೇ

ಎಂದಿದೆ. ಗ್ರಂಥವು ಗುರುಶಿಷ್ಯಸಂವಾದರೂಪವಾಗಿದೆ. ಗಗನಾರ್ಯನೆನ್ನೊಡಲೊಳಾವಿರ್ಭವಿಸಿ ನುಡಿಸುತಿಹನೀಕಾವ್ಯಮಂ-ಎಂದು ಕವಿ ಹೇಳುತ್ತಾನೆ. ಎರಡನೆಯ ಅಧ್ಯಾಯದ ಆರಂಭದಲ್ಲಿ ಪರಾಶರವ್ಯಾಸಾದಿಋಷಿಗಳು, ಗಣೇಶ, ಸರಸ್ವತಿ, ಶಿವ, ವಿಷ್ಣು, ಬ್ರಹ್ಮ, ಪಾರ್ವತಿ, ಮಾರುತಿ ಇವರುಗಳ ಸ್ತುತಿ ಇದೆ. ಈ ಗ್ರಂಥದಿಂದ ಒಂದು ಪದ್ಯವನ್ನು ತೆಗೆದು ಬರೆಯುತ್ತೇವೆ-

ಸೇರೆಗಂಗಳ ಸೊಬಗು ಚಂದ್ರನ | ಸೋಲಿಸುವ ಮುಖವೆಳಗು ವಿಟಜನ |
ಭೂರಿಮನವಳಿರಿಪುಗೆ ಮನಸಿಜ ಶೂರನೆನಿಸಿದಲಗು ||
ವಾರಿಜಾಸನನಮಲಬುದ್ಧಿವಿ | ಚಾರದಿಂ ನಿರ್ಮಿಸಿದ ಚಿತ್ರದ |
ವಾರಿಜಾಕ್ಷಿಯರೆನಲು ವಾರಿಜಮುಖಿಯರೊಪ್ಪಿದರು ||

## 2 ಕಾಮವಚನ

ಇದಕ್ಕೆ ಕಾಮನವದ ಎಂಬ ಹೆಸರೂ ಉಂಟು; ಪದ 120. ಇದ ವೇದಾಂತವನ್ನು ಬೋಧಿಸುತ್ತದೆ. ಆದಿಯಲ್ಲಿ ಘನಪುರೀಶ ಗಗನಲಿಂಗಸ್ತುತಿ ಇದೆ. ಬಳಿಕ ಕವಿ ಲಿಂಗನಗರವಾಸಹನುಮ, ಗಣಪತಿ, ಸರಸ್ವತಿ, ಕಾಳಿ ಇವರುಗಳನ್ನು ಸ್ತುತಿಸಿದ್ದಾನೆ. ಈ ಗ್ರಂಥದಿಂದ ಕೆಲವು ಪದಗಳನ್ನು ತೆಗೆದು ಬರೆಯುತ್ತೇವೆ—

ಇನ್ನು ಹೇಳುತಿಹೆನು ಕೇಳಿ | ಮುನ್ನ ಕಾಮ ಪುಟ್ಟಿದುದನು |
ಅನ್ಯನಲ್ಲ ಕಾಮ ಬ್ರಹ್ಮ | ವಿನ್ನು ನೋಡಿ ತಿಳಿಯಿರೋ ||
ನೆನಹು ತೋಱಲೊಡನೆ ತೋರ್ಪ | ನೆನಹು ತೋಱದಿರಲು ತೋಱ |
ನೆನಹಿನೊಡನೆ ತೋಱುವವನ | ನೆನಹಿನಿಂದಱಿಯಿರೋ ||
ಹಱಿವ ವಿಾಂಟೆಯುಱಿವ ದಾಂಟಿ | ಒಳೆಯ ಬೆಳಗಿನೊಳಗೆ ನಾಂಟಿ |
ತಿಳಿವ ಮನಮನುಱಿವನವನೆ | ಒಱುಿಯ ಕಾಮ ತಿಳಿಯಿರೋ ||

---

ರಾಮಬ್ರಹ್ಮಾನಂದ. ಸು. 1700

ಈತನು ವಿದ್ಯಾರಣ್ಯಕೃತವಾಕ್ಯಸುಧೆಗೆ ಕನ್ನಡಟೀಕೆಯನ್ನು ಬರೆದಿದ್ದಾನೆ. ಇವನು ಬ್ರಾಹ್ಮಣಕವಿ; ತುರುವೆಯಕೆರೆ ನಾರಾಯಣನ ಮಗನು; ಪರಮಹಂಸಪರಿವ್ರಾಜಕಾಚಾರ್ಯ ರಾಮಾನಂದಭಾರತಿಯ ಶಿಷ್ಯನು. ಇವನ ಟೀಕೆಗೆ ಸ್ವಪ್ರಕಾಶ ಎಂದು ಹೆಸರು. ಇವನ ಕಾಲವು ಸುಮಾರು 1700 ಆಗಿರಬಹುದು.

ರಾಮಬ್ರಹ್ಮಾನಂದಸರಸ್ವತಿಯಿಂದ ರಚಿತವಾದ ಭಾಷಾಕುಸುಮಮಂಜರಿ ಎಂಬ 26 ವಿಕಾಸವುಳ್ಳ ವೇದಾಂತಬೋಧಕವಾದ ಒಂದು ಟೀಕೆಯಿದೆ. ಇದೂ ಏತತ್ಕವಿಕೃತವೇ ಎಂದು ತೋರುತ್ತದೆ. ಆದರೆ ಇದರಲ್ಲಿ ಗುರುವಿನ ಹೆಸರು ಸ್ವಯಂಪ್ರಕಾಶ ಎಂದು ಹೇಳಿದೆ. ಆರಂಭದಲ್ಲಿ ರಾಮಚಂದ್ರ, ಸ್ವಯಂಪ್ರಕಾಶಗುರು, ಗಣಪತಿ, ಸರಸ್ವತಿ ಇವರುಗಳ ವಂದನಾನಂತರ ಈ ಶ್ಲೋಕವಿದೆ—

ನಾನಾವೇದಾಂತಸಿದ್ಧಾಂತಾರ್ಥಾನ್ ಸಂಗೃಹ್ಯ ಚಾಖಿಲಾದ್ಧರೇಃ |
ವಕ್ಷ್ಯಾಮಿ ಮಂದಬೋಧಾರ್ಥಂ ಭಾಷಾಕುಸುಮಮಂಜರೀಂ ||

---

ಚೆನ್ನಮಲ್ಲೇಶ. ಸು. 1700

ಈತನು ದೀಪದಕಲಿಯಾರ ಕಾವ್ಯ, ವೀರಸಂಗಯ್ಯನ ಚೌಪದ ಇವುಗಳನ್ನು ಬರೆದಿದ್ದಾನೆ. ಇವನು ವೀರಶೈವಕವಿ; ಇವನ ಸ್ಥಳ ಕಲುಬುರಿಗೆ ದೇಶದ ಉಂಬುಲಿಗೆ; "ಓದಿಸುವ ಭಕ್ತ" ಎಂಬುದರಿಂದ ಉಪಾಧ್ಯಾಯನಾಗಿದ್ದಂತೆ ತೋರುತ್ತದೆ. ಪೂರ್ವಕವಿಗಳಲ್ಲಿ ಚಾಮರಸನನ್ನು (ಸು. 1430) ಸ್ತುತಿಸುವುದರಿಂದ ಕವಿ ಅವನ ಕಾಲಕ್ಕಿಂತ ಈಚೆಯವನು ಎಂಬುದು ವ್ಯಕ್ತವಾಗಿದೆ ; ಸುಮಾರು 1700 ರಲ್ಲಿ ಇದ್ದಿರಬಹುದು.

ಪೂರ್ವಕವಿಗಳಲ್ಲಿ ಕೆರೆಯಪದ್ಮರಸ, ಮಯೂರ, ಮಲುಹಣ, ಹರೀಶ್ವರ, ರಾಘವಾಂಕ, ಭೀಮಕವಿ, ಚಾಮರಸ, ಉದ್ಭಟ, ಪಾಲ್ಕುರಿಕೆ ಸೋಮ ಇವರುಗಳನ್ನು ಸ್ಮರಿಸಿದ್ದಾನೆ.

ಇವನ ಗ್ರಂಥಗಳಲ್ಲಿ

1. ದೀಪದಕಲಿಯಾರ ಕಾವ್ಯ

ಇದು ಸಾಂಗತ್ಯದಲ್ಲಿ ಬರೆದಿದೆ; ಸಂಧಿ 9, ಪದ್ಯ 1i16. ಇದರಲ್ಲಿ 63 ಶಿವಭಕ್ತರಲ್ಲಿ ಒಬ್ಬನಾದ ದೀಪದಕಲಿಯಾರ ಚರಿತೆ ಹೇಳಿದೆ. ಈ ಕಥೆ ಪಾಲ್ಕುರಿಕೆಸೋಮ, ಭೀಮಕವಿ ಇವರುಗಳಿಂದ ವರ್ಣಿತವಾಗಿದೆ ಎಂದು ಕವಿ ಹೇಳುತ್ತಾನೆ. ಈ ಗ್ರಂಥಕ್ಕೆ ಸಂಗೀತಸತ್ಕೃತಿ ಎಂಬ ಹೆಸರೂ ಇರುವಂತೆ ತೋರುತ್ತದೆ. ಇದರ ಉತ್ಕೃಷ್ಟತೆಯನ್ನು ಕವಿ ಹೀಗೆ ಹೇಳಿದ್ದಾನೆ—

ಸಂಗೀತದೊಳಗೆ ಪ್ರಸಂಗದೊಳಗೆ ಬೆಳ ! ದಿಂಗಳ ಬೆಳಗು ಬೊಪ್ಪಡಿಯು (?) !
ಅಂಗನೆಯರಿಗೆ ಸರ್ವಾಂಗಾಭರಣದೊಳು | ಮಂಗಳಸೂತ್ರವೀಕಾವ್ಯ ||

ಗ್ರಂಥಾವತಾರದಲ್ಲಿ ಶಿವಸ್ತುತಿ ಇದೆ. ಬಳಿಕ ಕವಿ ಗಣೇಶ, ವೀರಭದ್ರ, ಬಸವ, ನಾರದ, ಭೃಂಗಿ, ಷಣ್ಮುಖ ಇವರುಗಳನ್ನು ಸ್ಮರಿಸಿದ್ದಾನೆ. ಈ ಗ್ರಂಥದಿಂದ ಒಂದೆರಡು ಪದ್ಯಗಳನ್ನು ತೆಗೆದು ಬರೆಯುತ್ತೇವೆ:—

ಶಿವಸ್ತುತಿ

ಕಾಡಿನೊಳ್ ಮನೆ ತಲೆಯೋಡಿನೊಳ್ ತಿರಿದುಂಬ | ಸೂಡಿದ ಫಣಿರಾಜಭೂಷ |
ಜೋಡುಸತಿಯುರಾಳ್ದ ಗಾಡಿಕಾಜಿನ ನಾನು | ಬೇಡಿಕೊಂಬೆನು ಪದಗಳನು ||

ಹಾಳುದೇಗುಲದಲ್ಲಿದ್ದ ಲಿಂಗವನ್ನು ನೋಡಿ ದೀಪದಕಲಿಯಾರ ಉಕ್ತಿ

ಕರಳರು ಅವನಿಯ ಸರಿಸಮಕೊಡು ಎಂದು | ಇರುಳುಹಗಲು ಪಿತನೊಡನೆ |
ಗುರುಗುರುಗುಟ್ಟುತ ಕರೆಕರೆಮಾಟಿಪ್ಪೊಡೆ | ದುರುಳರ ಬಾಧೆಗೆ ಬಂದ ||

ಸಿಂಧುಮರಾಳನ ಉಕ್ತಿ

ತಿರಿದುಂಬ ದೇಸಿಗಗರಸುಮಂತ್ರಿಗಳೆಂಬ | ಬಱಯು ಬನ್ನಣೆನುಡಿ ಸಲ್ಲ |
ಟೊರೆತನ ಸುಡಲಿ ಹಗಲಿರುಳುನಿದ್ರೆಯ ಕಾಣ | ದಿರುವರು ಭೂಮಿಪಾಲಕರು ||

2. ವೀರಸಂಗಯ್ಯನ ಚೌಪದ

ಪದ್ಯ 89. ಇದರಲ್ಲಿ ವೀರಸಂಗಯ್ಯನಿಗೂ ಚಂದ್ರಿಣಿಗೂ ಮದುವೆ

ಯಾದ ಕಥೆ ಹೇಳಿದೆ. ಆರಂಭದಲ್ಲಿ ಶಿವ, ಗಣೇಶ, ಪಾರ್ವತಿ ಇವರುಗಳ ಸ್ತುತಿ ಇದೆ. ಇದರಿಂದ ಒಂದೆರಡು ಪದ್ಯಗಳನ್ನು ತೆಗೆದು ಬರೆಯುತ್ತೇವೆ:-

ಭಾಸ್ಕರಚಂದ್ರಿಣಿಯರ ಸಂವಾದ

ಹರಿಕುಲದ ಅರಸೆ ಕೇಳಯ್ಯ ಭಾಸ್ಕರನೆ|ದೊರೆಪಟ್ಟ ಹೆಚ್ಚಿದರೆ ಇರಲಿ ನಿನ್ನೊಡನೆ |
ಸರಸದ ಮಾತಾಡಬೇಡ ನನ್ನೊಡನೆ| ಪರನ ಭಕ್ತರು ಕೊಡರು ಹೆಣ್ಣ ನಿನ್ನೊಡನೆ ||
ಹೆಣ್ಣ ಕೊಡದವನಿಗೆ ಬೆನ್ನ ಸೀಳಿಸುವೆ| ಕಣ್ಣುನಾಲಗೆಕಿತ್ತು ಹೊಳಿಗೆ ಹಾಕಿಸುವೆ|
ನಿನ್ನ ಮುಖನೋಡಿ ನಿನ್ನವರ ಮನ್ನಿಸುವೆ | ಎನ್ನ ಕೆಣಕಿದನ ಶೂಲಕ್ಕೆಹಾಕಿಸುವೆ||
ಕತ್ತೆ ಹೊತ್ತರೆ ಕೊನ್ನ ನೋಟನೋಡುವುದೇ | ಎತ್ತೇರಿ ಮೆರೆದರೆ ತೊತ್ತು ಗರಿತಹುದೇ ||
ಉತ್ತಮರ ನಾಯಿ ಒಗುಳಿದರೆ ಸರಿಬಹುದೇ | ಸತ್ತಹೆಣಕತ್ತರೆ ಪಂತ ಸಲ್ಲುವುದೇ |

---

## ವೆಂಕಟಾರ್ಯಶಿಷ್ಯ ಸು. 1700

ಯಾದವಗಿರಿಮಾಹಾತ್ಮ್ಯ, ಕೃಷ್ಣಗೋಪೀವಿಲಾಸ ಎಂಬ ಗ್ರಂಥಗಳನ್ನು ಬರೆದ ಕವಿ ತನ್ನ ಹೆಸರನ್ನು ಹೇಳಿಕೊಂಡಿಲ್ಲ; ತನ್ನ ಗುರುವಿನ ಹೆಸರನ್ನು ವೆಂಕಟಾರ್ಯ ಎಂದು ಹೇಳಿದ್ದಾನೆ. ಇವನು ಶ್ರೀರಂಗಪಟ್ಟಣದವನು ಎಂದು ತೋರುತ್ತದೆ. ಶ್ರೀವೈಷ್ಣವಕವಿಯಾಗಿರಬಹುದು. ತನ್ನ ಗುರು ವೆಂಕಟಾರ್ಯನನ್ನು ಭಾಗವತಪುಂಗವ, ವರವರಯೋಗಿಪದಾಂಬುರುಹಭೃಂಗ, ವಾದಿಭಯಂಕರಾತ್ಮಜ, ಭೋಗಿಪತಿಶಾಯಿಯ ಗುಣಾಮೃತಸಾಗರದಿ ಮುಳುಗಿಪ್ಪವ ಎಂದು ವಿಶೇಷಿಸಿ ಹೇಳಿದ್ದಾನೆ. ಕವಿಯ ಕಾಲವು ಸುಮಾರು 1700 ಆಗಿರಬಹುದೆಂದು ಊಹಿಸುತ್ತೇವೆ.

ಇವನ ಗ್ರಂಥಗಳಲ್ಲಿ

1 ಯಾದವಗಿರಿಮಾಹಾತ್ಮ್ಯ

ಇದು ಭಾಮಿನೀಷಟ್ಪದಿಯಲ್ಲಿ ಬರೆದಿದೆ; ನಮಗೆ ದೊರೆತ ಅಸಮಗ್ರಪ್ರತಿಯಲ್ಲಿ 10 ಸಂಧಿಗಳಿವೆ. ಇದರಲ್ಲಿ ನಾರದೀಯಪುರಾಣಕಥಿತವಾದ ಯಾದವಗಿರಿಯ ಅಥವಾ ಮೇಲುಗೋಟೆಯ ಮಾಹಾತ್ಮ್ಯವು ಹೇಳಿದೆ. ಗ್ರಂ

---

1. 437 ನೆಯ ಪುಟವನ್ನು ನೋಡಿ.

ಥವನ್ನು "ವೆಂಕಟಗುರುಕರುಣವಿಡಿದು ಪೇಳ್ವೆ" ಎಂದು ಕವಿ ಹೇಳು ತ್ತಾನೆ.ಆರಂಭದಲ್ಲಿ ರಂಗನಾಥವೆಂಕಟೇಶ ವರದರಾಜ ನಾರಾಯಣರ ಸ್ತುತಿ ಇದೆ. ಅನಂತರ ಕವಿ ತನ್ನ ಗುರು ವೆಂಕಟಾರ್ಯ, ಯದುಗಿರಿನಾರಾಯಣ, ಯದುಶೈಲನಾಯಕಿ, ಯದುಗಿರಿನರಸಿಂಹ, ರಾಮಾನುಜ, ವಕುಳಾಭ ರಣ ಇವರುಗಳನ್ನು ಕ್ರಮವಾಗಿ ಸ್ತುತಿಸಿದ್ದಾನೆ. ಈ ಗ್ರಂಥದಿಂದ ಒಂ ದೆರಡು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ಋಷಿಗಳು

ಅಸಮಜಡೆಗಳ ಲಂಬಕೂರ್ಚದ | ಕೃಶತರದ ತನು ಬೆರಳ ದರ್ಭೆಯ |
ಪೊಸಕಮಂಡಲ ಕೈಯೊಳಿರಲೆಯ ಚರ್ಮವನು ಧರಿಸಿ ||
ಪಸರಿಸಿಪ್ಪ ಸಿತೋಪವೀತದ | ಒಸೆದು ಪಿಡಿದ ಜಪಾಕ್ಷಮಾಲೆಗ |
ಳೆಸೆವ ಋಷಿಜನ ಭಕ್ತಿಭಾವದಿ ನೋಡಿದರು ಹರಿಯು ||

ರಾಕ್ಷಸರಿಂದ ನೊಂದ ಭೂದೇವಿ

ಸಡಿಲಿದಳಕದ ನಿಟ್ಟುಸಿರ ದಡ | ದಡಿಪ ಮೆಲ್ಲೆದೆದಾಣ ದೇಹದೊ |
ಳಡಸಿದತಿಕಂಪನದ ಭೀತಿಯ ಮುಚ್ಚಿದಕ್ಷಿಗಳ ||
ನುಡಿಯೊಳಲಸಿಕೆವೆತ್ತ ರಕ್ಕಸ | ಗಡಣದಲಿ ಮೈನೊಂದ ಭಾಮಿನಿ |
ಪೊಡವಿಯನು ಕರುಣಾವಲೋಕನದಿಂದ ನೋಡಿದನು ||

2 ಕೃಷ್ಣಗೋಪೀವಿಲಾಸ

ಇದು ಸಾಂಗತ್ಯದಲ್ಲಿ ಬರೆದಿದೆ; ಬಾಲವಿಲಾಸಶತಕ, ವೇಣುವಿಲಾಸ ಶತಕ, ಶೃಂಗಾರಸಪ್ತತಿ ಪ್ರಥಮ ದ್ವಿತೀಯ ತೃತೀಯ ಎಂದು 5 ಭಾಗಗ ಳಾಗಿ ವಿಂಗಡಿಸಲ್ಪಟ್ಟಿದೆ; ಒಟ್ಟು 451 ಪದ್ಯಗಳಿವೆ. ಇದರಲ್ಲಿ "ಗೋವಿಂದ ಧರೆಯೊಳವತರಿಸಿ ನಂದಗೋಕುಲದೊಳಗಾಡಿದ ನಾಟಕದಂದವೆಲ್ಲವ ವಿವ ರಿಸುವೆ" ಎಂದು ಕವಿ ಹೇಳುತ್ತಾನೆ. ಗ್ರಂಥಾವತಾರದಲ್ಲಿ ವಿಷ್ಣುಸ್ತುತಿ ಇದೆ, ಬಳಿಕ ಕವಿ ಸರಸ್ವತಿ, ರಾಮಾನುಜ, ಸ್ವಗುರುವೆಂಕಟಾರ್ಯ ಇವರುಗಳನ್ನು ಸ್ತುತಿಸಿದ್ದಾನೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆ ಯುತ್ತೇವೆ—

ಚಂದ್ರೋದಯ

ಮಾರನಲಗ ಸಾಣೆವಿಡಿವ ಚಕ್ರವೊ ಪ್ರಾಚೀ | ನಾರಿಯ ಕರ್ಣಕುಂಡಲವೋ |

ಕ್ಷೀರಾಬ್ಧಿಕುವರಿಯೊಣ್ಮನ ಶ್ವೇತಚ್ಛತ್ರದಂ | ತೀಱಿದ ಶಶಿ ಪೂರ್ವ ಗಿರಿಯು ||

### ಯಮುನಾನದಿ

ಕಿಱ್ರಾನಗೆಯೆಂಬ ನೊರೆಯ ಬೆಳ್ಪ ಸೊಬಗಿನ | ತೆರೆಯೆಂಬ ನಳಿತೋಳ್ಗಳಾಗೆ |
ಸಿರಿಗಂಗೆಳೆ ವತ್ಸ್ಯ ವರನಾಭಿ ಸುಳಿಯಾಗೆ | ಮೆಱಿದಳಂಗನೆಯಂತ್ರೋಲ್ ಯಮುನೆ ||

### ಅಶೋಕ

ತಾಕಿದ ಬಾಣ ಕೊಲ್ಲದೆ ಹುಸಿಪೆಟ್ಟಾಗೆ | ಶೋಕಪಡುವನು ಗಾಯದೊಳು |
ಸೋಕಿದಾಕ್ಷಣ ಹರಣವ ಕೊಂಬ ಸರಳನ | ಶೋಕನೆಂಬರು ಲೋಕದೊಳಗೆ ||

### ವಸಂತ

ಇರಲು ವಸಂತಸಮಯ ಬಂದುದಾಗಲೀ | ವಿರಹಿಮೇಧಕ್ರತುವಿಂಗೆ |
ತುಱುಗಾತಿಯರ ಕಾಮಾಗ್ನಿಯನು ತಂಬೆಲರಿಂದ | ಉಱ್ರಬಿದನಾಗ ವಸಂತ ||
ಕಾಮನಾಚಾರ್ಯನಾದನು ವಸಂತನು ತಾನೆ | ನೇಮದಿಂ ದೀಕ್ಷಿತನಾದ |
ಸೋಮರಜತಪಾತ್ರೆಯೊಳು ಸುಧೆಯಾಜ್ಯವ | ಹೋಮಕಾಹುತಿಯ ಮಾಡಿದನು||
ಶುಕ ಮಂತ್ರಗಳನು ವಾಚಿಸೆ ಸಾಮಗಾನದಿಂ | ಪಿಕನಿಕರಗಳು ಘೋಷಿಸಲು |
ಸ್ರುಕುಸ್ರುವ ಮಾಂದಳಿರಾಗೆ ಭ್ರಮರತತಿ | ಬಕುತಿಯಿಂ ಮೊಱ್ರಪದಱಿಗವ ||
ಮಂದಮಾರುತನಗ್ನಿಯನು ಹುತಗೊಳಿಸೆ ತಾ | ನಿಂದು ಋತ್ವಿಜನಾದನಾಗ |
ತಂದರು ವಿರಹಿಗಳೆಂಬ ಪಶುವ ಬೇಗ | ಬಂಧಿಸಿದರು ಲತೆಗಳಲಿ ||

---

### ತಿಮ್ಮರಸ. ಸು. 1700

ಈತನು ಕ್ಷೇತ್ರಗಣಿತವನ್ನು ಬರೆದಿದ್ದಾನೆ. ಇವನು ಬ್ರಾಹ್ಮಣ ಕವಿ; ಶ್ರೀವತ್ಸಗೋತ್ರದವನು; ವಿಷ್ಣುಭಕ್ತನು; ಇವನ ತಂದೆ ಲಕ್ಷ್ಮರಸ, ಸ್ಥಳ ಘನಗಿರಿಯ (ಪೆನಗೊಂಡೆ) ಪಡುವದಿಕ್ಕಿನಲ್ಲಿರುವ ಕಂಭ. ಇವನು ಸುಮಾರು 1700 ರಲ್ಲಿ ಇದ್ದಿರಬಹುದೆಂದು ತೋರುತ್ತದೆ.

ಇವನ ಗ್ರಂಥ

### ಕ್ಷೇತ್ರಗಣಿತ

ಇದು ಪ್ರಾಯಿಕವಾಗಿ ಕಂದಗಳಲ್ಲಿ ಬರೆದಿದೆ; ಟೀಕೆಯೂ ಉದಾಹ

ರಣೆಗಳೂ ಇವೆ. ಹಲವುಕಡೆ ಆಕೃತಿಗಳೂ ಕೊಟ್ಟಿವೆ. ಇದರಿಂದ ಕೆಲವು ಪದ್ಯಗಳನ್ನು ಉದಾಹರಿಸುತ್ತೇವೆ.

ಅಳತೆಯ ವ್ಯತ್ಯಾಸ ದೋಷಕರ

ಅಂಗುಲಭೂಮಿಯು ತಪ್ಪಲು | ಪಿಂಗದೆ ತಾಂ ನರಕದಲ್ಲಿ ಸಂತತಮಿರ್ಪಂ |
ಅಂಗುಲ ಹೆಚ್ಚದೆ ತಗ್ಗದೆ | ಸಂಗತಮಾಗಳೆಯೆ ಭೂಮಿ ರಕ್ಷಿಪಳೆಂದುಂ ||

ಗಟಿಕಟ್ಟಳೆಬುಜಾಸೂತ್ರ

ಅಂಗುಲ ಮೂವತ್ತೆರಡುಂ | ಸಂಗತಮಾಗೊಂದು ಹಸ್ತ ಹಸ್ತಗಳೆಂಟುಂ |
ಹಿಂಗದೆ ಗಟಿ ತಾನಕ್ಕುಂ | ತುಂಗಭುಜಾ ಸೇಟಿನಲ್ಕೆ ಗಣಿತಕ್ರಮದಿಂ ||

ಟೀಕೆ|| ಅಂಗುಲ 32 ಒಂದು ಹಸ್ತ; ಅಂತಹ ಹಸ್ತ 8 ಗಟಿಯೊಂದೆನಿಸುವುದು. ಇದು ಕ್ಷೇತ್ರಗಳನಳೆವ ಶಾಸ್ತ್ರದ ಕಟ್ಟಳೆಯ ಗಟಿಯಕ್ಕುಂ. ಇದುವುಮಲ್ಲದೆ ಇನ್ನುಂ ಗಟಿಗಳುಂಟು. ಒಂದೊಂದುದೇಶಕ್ಕೆ ಒಂದೊಂದು ಪ್ರಕಾರದ ಗಟಿಯುಂಟು. ದೇಶದೇಶಕ್ಕೆ ತಕ್ಕಹಾಗೆ ಗಟಿಗಳಂ ತಿಳಿದುಕೊಂಬುದು.

ಪಾಶಾಕಾರದ ಭೂಮಿಗೆ ಬುಜಾಸೂತ್ರ

ಪ್ರಗ್ರಹದಂಡದ ಭೂಮಿಯ | ನೊಗ್ಗಿನ ತುದಿಮೊದಲನಳೆದು ಕೂಡರ್ಧಿಸುತಂ |
ಹಿಗ್ಗುತ ವರ್ಣಿಸಿಯರ್ಧಿಸೆ | ಭಗ್ನನೆ ತಾಂ ಬರ್ಕು ಕಂಭ ಕನ್ನಡಜಾಣಾ ||

ಉದಾಹರಣೆ ||

ಮೊದಲಗಲ ದಶಕವಿರೆ ತಾಂ| ತುದಿಯಗಲಂ ಪತ್ತುಗಟಿಯುಮೊಪ್ಪಿರೆ ನಿರುತಂ |
ತುದಿಮೊದಲನಾರಯಿದು ನೆಱೆ | ಪದುಳದಿ ಗುಣಿಸಲ್ಕೆ ಕಂಭ ತಪ್ಪದೆ ಬರ್ಕುಂ ||

ಒಡ್ಡು || ಪಾಶದ ತುದಿಯಗಲ 10, ಮೊದಲಗಲ 10; ಕಂಭದ ಲಬ್ಧ 50, ಹಾರ 2, ಗುಣಿಸು 1, ಗುಣಾಕಾರ 100. ಮೊದಲಳತೆಯ ಗಟಿ 10 ನು ತುದಿ 10 ಬಿಲ್ಲಿ ಕೂಡಿ ಅರ್ಧಿಸಲು 10; ಇದನು ಹೆಚ್ಚು ಗುಣಿಸಿ ಅರ್ಧಿಸಲು ಲಬ್ಧ 50.

ಸಮಚತುರಕ್ಕೆ ಬುಜಾಸೂತ್ರ

ಮೂಡಣ ಪಡುವಣ ನೆಸೆಯುಂ | ಕೂಡರ್ಧಿಸಿ ತೆಂಕ ಬಡಗಲಾಕ್ರಮದಿಂದಂ |
ನೋಡಿ ಪ್ರತಿಯಿಟ್ಟು ಗುಣಿಸಲು| ರೂಢಿಯ ಸಮಭುಜಕೆ ಕಂಭ ತಪ್ಪದೆ ಬರ್ಕುಂ ||

ದೀರ್ಘವಿಷಮತ್ರಿಭುಜೆಗೆ ಸೂತ್ರ

ಇಪ್ಪೆಸೆಯ ಭುಜವು ಸಮವಿರೆ | ಮಧ್ಯದ ಶಾನಳೆದುವುಳಿದಭುಜೆಯೊಂದನುವ |
ತ್ತರ್ಧಿಸಿ ಗುಣಿಯಿಸೆ ಕಂಭಂ | ನಿರ್ಧರದಿಂದದುವೆ ದೀರ್ಘತ್ರಿಭುಜೆಗೆ ಬರ್ಕುಂ ||

ನೇತ್ರಾಕಾರದ ಭೂಮಿಗೆ ಓಜಾಸೂತ್ರ

ನೇತ್ರಾಕಾರದೊಳಸೆದಿಹ | ಧಾತ್ರಿಯ ನಡುವಗಲವಳೆದು ಅರ್ಧಿಸುತದನುಂ |
ನೇತ್ರದ ನೀಳದೋಳ್ಗುಣಿಯಲು | ಧಾತ್ರಿಯೊಳಂ ಕಂಭವೆಂದು ಪೇಟ್ಟೈ ಗಣಕಾ ||

ಶೂರ್ಪಾಕಾರಕ್ಕೆ ಓಜಾಸೂತ್ರ

ಮೊಐದಂದವಿರ್ದ ಭೂಮಿಯ | ಸ್ಟೆಟ್ರಿ ನೀಳವ ಹಿಂದುಮುಂದನಳೆದರ್ಧಿಸುತಂ |
ಮೊಐದಗಲದಿಂದಮಿಟಿಯಲು | ಮೊಐನುರ್ವಿಗೆ ಕಂಭವೆಂದ ಗಣಕಸುಜಾಣ ||

ಲಿಂಗಾಕಾರದ ಭೂಮಿಗೆ ಓಜಾಸೂತ್ರ

ಲಿಂಗದ ವಳಯದ ಗಟಿಗಳ | ಸಂಗಡದಿಂ ಪೀಠನೀಳಗಟಿಗಳ ಕೂಡಾ |
ತುಂಗಗತಿಯಿಂದ ಭಾಗಿಸೆ | ಲಿಂಗವು ಪೀಠಕ್ಕೆ ಕಂಭ ತಪ್ಪದೆ ಬರ್ಕುಂ ||

---

ನಂಜ. ಸು. 1700

ಈತನು ಕಪೋತವಾಕ್ಯವನ್ನು ಬರೆದಿದ್ದಾನೆ. ಇವನು ವೀರಶೈವ ಕವಿ. ಇವನ ಗುರು ಸಿದ್ಧವೀರ ಎಂದು ತೋರುತ್ತದೆ. ಗ್ರಂಥದ ಕೊನೆಯಲ್ಲಿ ಗುರುವೆರನಹ ಚಂಪಕಸಿದ್ಧಲಿಂಗೇಶನನ್ನು ಸ್ಮರಿಸಿದ್ದಾನೆ. ಕಂಠೀರವನರಸರಾಜವಿಜಯವನ್ನು ಬರೆದ ಭಾರತಿನಂಜನೇ ಈ ಗ್ರಂಥವನ್ನೂ ಬರೆದಿದ್ದಾನೆ ಎಂದು ಕೆಲವರು ಅಭಿಪ್ರಾಯಪಡುತ್ತಾರೆ. ಆದರೆ ಭಾರತಿನಂಜನು ವೀರಶೈವಕವಿಯಲ್ಲವೆಂದು ತೋರುತ್ತದೆ. ಯಕ್ಷಗಾನರೂಪವಾದ ಕಪೋತವಾಕ್ಯವನ್ನು ಬರೆದಿರುವ ನಂಜಯ್ಯನೂ ವೀರಶೈವಕವಿಯಂತೆ ಕಾಣುವುದಿಲ್ಲ. ಪ್ರಕೃತಕವಿ ತತ್ಕವಿದ್ವಯಭಿನ್ನನೆಂದು ತೋರುತ್ತದೆ. ಇವನ ಕಾಲವು ಸುಮಾರು 1700 ಆಗಿರಬಹುದು .

ಇವನ ಗ್ರಂಥ

ಕಪೋತವಾಕ್ಯ

ಇದು ಸಾಂಗತ್ಯದಲ್ಲಿ ಬರೆದಿದೆ; ಪದ್ಯ 116. ಇದರಲ್ಲಿ ಕಪೋತ ದಂಪತಿ ಬೇಡನಿಗೆ ಆಹಾರವನ್ನು ಒದಗಿಸಲು ಅಗ್ನಿಪ್ರವೇಶಮಾಡಿದ ಸುಪ್ರಸಿದ್ಧವಾದ ಕಥೆ ಹೇಳಿದೆ. ಗ್ರಂಥಾವತಾರದಲ್ಲಿ ಶಿವ, ಗುರುಸಿದ್ಧವೀರ ಇವರುಗಳ ಸ್ತುತಿ ಇದೆ. ಬಳಿಕ ಕವಿ ಕೋರಣ್ಯದಯ್ಯ, ಬಸವ, ಮಡಿವಳ, ಸಪ್ಪಣ್ಣ, ಪ್ರಭುರಾಜ, ಕೊಟ್ಟೂರವಿರೂಪಾಕ್ಷ, ಕಲ್ಯಾಣದಯ್ಯ, ಅರೆಮಲೆ

ಸಿದ್ಧಮುನಿ ಇವರುಗಳನ್ನು ಸ್ಮರಿಸಿದ್ದಾನೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ಸತಿಯನ್ನು ಅಗಲಿದ ಕಪೋತದ ಉಕ್ತಿ

ಮಥನಿಸಿ ಮನೆಯೊಳು ಕದನಕಲಹದಿಂದೆ | ಮತಿಗೇಡಿತನದೊಳಗಿಹಳ |
ಗತಿಗೇಡಿ ಗಂಡನ ಖತಿಮಾಡಿ ಬೈವಂತ | ಸತಿಯಳಾದಡೆ ನಿನ್ನ ನೆನೆಯೆ ||
ಜಗಳವೆಂದರೆ ಬೇಗ ಲಗಡುತನವ ತೋಱಿ | ಬಗೆಯದೆ ಪುರುಷನ ಮಾತ |
ನಗೆಗೇಡಿತನದಲ್ಲಿ ಬಗುಳಾಟದೊಳಗಿಹ | ವಿಗಡೆಯಾದಡೆ ನಿನ್ನ ನೆನೆಯೆ ||
ಬಡತನವಡಸಿದ ಕಾಲಕ್ಕೆ ಗಂಡನ | ನುಡಿಗೆಡಿಸದೆ ಗರ್ಭೀಕರಿಸಿ |
ದೃಢಗೆಡದಂದದಿ ನಡೆಯುವ ಸತಿಯಳ | ಬಿಡುವ ಮನುಜ ಶತದ್ರೋಹಿ ||

## ಶ್ರೀನಿವಾಸಕವಿ. ಸು. 1700

ಈತನು ಭಾರತದಲ್ಲಿ ಸ್ತ್ರೀಪರ್ವವನ್ನು ಬರೆದಿದ್ದಾನೆ. ಇವನು ಬ್ರಾಹ್ಮಣಕವಿ; ಇವನ ಸ್ಥಳ ಮಾಗಡಿಯ ಸಮೀಪದಲ್ಲಿರುವ ತಿರುಮಲೆ; ಅಲ್ಲಿಯ ರಂಗನಾಥದೇವರ ಅಂಕಿತದಲ್ಲಿ ತನ್ನ ಗ್ರಂಥವನ್ನು ಬರೆದಿದ್ದಾನೆ. ಇವನ ಕಾಲವು ಸುಮಾರು 1700 ಆಗಿರಬಹುದೆಂದು ಊಹಿಸುತ್ತೇವೆ.

ಇವನ ಗ್ರಂಥ

### ಭಾರತ ಸ್ತ್ರೀಪರ್ವ

ಇದು ಭಾಮಿನೀಷಟ್ಪದಿಯಲ್ಲಿ ಬರೆದಿದೆ; ಸಂಧಿ 4, ಪದ್ಯ 243. ಆರಂಭದಲ್ಲಿ ಸಾಮಂತದುರ್ಗದ ನೂಕುಟೇಪುರಸನ್ನಿಹಿತತಿರುಮಲೆಯ ಶ್ರೀರಂಗನ ಸ್ತುತಿ ಇದೆ. ಪರ್ವದ ಕೊನೆಯಲ್ಲಿ—ಶ್ರೀಮದಪರಿಮಿತಶಕ್ತಿಕನಾದ ತಿರುಮಲೆಯ ರಂಗನಿಗಂಕಿತವಾಗಿ ಶ್ರೀನಿವಾಸಕವಿರಚಿತವಾದ ಸ್ತ್ರೀಪರ್ವಂ ಸಂಪೂರ್ಣಂ—ಎಂಬ ಗದ್ಯವಿದೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ಸ್ತ್ರೀಶೋಕ

ಒಮ್ಮೆಯಱಲುವರೊಮ್ಮೆ ಬಱಲುವ | ರೊಮ್ಮೆ ತೊಱಲುವರೊಮ್ಮೆ ಸರಳುವ |
ರೊಮ್ಮೆ ಮೂರ್ಛಿಪರೊಮ್ಮೆ ಚೇತರಿಸೊಮ್ಮೆ ಪೊರಳುವರು ||
ಒಮ್ಮೆಯೆದೆಬಾಯ್ಗಳನು ಪೊಡೆವೊಡೆ | ದೊಮ್ಮೆ ತಲೆಗಳನಱಿಗೆ ತಾಗಿಪ |
ರಿಮ್ಮಹಿಯೊಳವರಂದ ನೋಡಿಪ್ಪೊಡೆ ಮಱುಗದವರಾರು ||

ಧೃತರಾಷ್ಟ್ರನನ್ನು ಕುರಿತು ವ್ಯಾಸನುಕ್ತಿ

ನರನು ನಾನಾರೂಪಗಳ ತಾ | ಧರಿಸಿ ಬಹುತರಸಾಸುಗಳನನು |
ಕರಿಸಿ ನಾಟ್ಯವನಾಡುವಂದದಿ ದೇಹಿಯಾದವನು ||
ಪರಿಪರಿಯ ಜನ್ಮಗಳ ಬಳಸುತ | ದುರಿತವೆಚ್ಚಿರೆ ಜನನಮೃತಿಗಳ |
ಪರಿವಿಡಿಯಲೋಲಾಡುತಿರ್ಪನು ಕಾಲಗತಿಯಿಂದ ||

---

ಶಾಂತವೃಷಭೇಶ ಸು. 1700

ಈತನು ಅನುಭವಶತಕವನ್ನು ಬರೆದಿದ್ದಾನೆ. ಇವನು ವೀರಶೈವ ಕವಿ. ಶಾಂತೇಶ್ವರನ ಕರುಣದಿಂದ ಈ ಗ್ರಂಥವನ್ನು ಬರೆದಂತೆ ಹೇಳುತ್ತಾನೆ. ಇವನ ಕಾಲವು ಸುಮಾರು 1700 ಆಗಿರಬಹುದು.

ಇವನ ಗ್ರಂಥ

ಅನುಭವಶತಕ

ಇದು ಕಂದದಲ್ಲಿ ಬರೆದಿದೆ; ಪದ್ಯ 115. ತನ್ನ ಗ್ರಂಥವನ್ನು 'ಶರಣರು ಕೇಳಲು ಭ್ರಾಂತಳಿದಜಿದಪರು ವೀರಶೈವದ ಮತಮಂ' ಎಂದು ಕವಿ ಹೇಳುತ್ತಾನೆ. ಇದರಿಂದ ಒಂದು ಪದ್ಯವನ್ನು ತೆಗೆದು ಬರೆಯುತ್ತೇವೆ—

ಮಾಯದ ತನುವೆಂದೆನ್ನದು | ಹೇಯದ ತನುವೆಂದು ನುಡಿದು ಸೂತಕಗೈಯದು |
ಕಾಯ ಶಿವಕಾಯವದನಾ | ಮ್ನಾಯದೊಳಜಿವನೆ ವೀರಶೈವಾಚಾರ್ಯಂ ||

---

ಸಿದ್ಧಪ್ಪ ಸು. 1700

ಇವನು ಸಿದ್ಧನೀತಿಯನ್ನು ಬರೆದಿದ್ದಾನೆ. ಈತನು ವೀರಶೈವಕವಿಯೆಂದು ತೋರುತ್ತದೆ; ಇವನ ತಂದೆ ಲಕ್ಕಪ್ಪ; ಸ್ಥಳ ಕೆಳಲೆಯನಾಡ ತೈಲೂರು. ಇವನು ಸೇನಬೋವನಾಗಿದ್ದನೆಂದು ಹೇಳುತ್ತಾನೆ. ಇವನ ಕಾಲವು ಸುಮಾರು 1700 ಆಗಿರಬಹುದೆಂದು ಊಹಿಸುತ್ತೇವೆ.

ಇವನ ಗ್ರಂಥ

ಸಿದ್ಧನೀತಿ

ಇದು ಕಂದದಲ್ಲಿ ಬರೆದಿದೆ; ಪದ್ಯ 105; ನೀತಿಬೋಧಕವಾದ ಗ್ರಂಥ. ಗ್ರಂಥಾರಂಭದಲ್ಲಿ ಶಿವಸ್ತುತಿ ಇದೆ. ಬಳಿಕ ಕವಿ ವೀರಭದ್ರ, ಗಣೇಶ,

ಇವರನ್ನು ಹೊಗಳಿದ್ದಾನೆ. ಈಗ್ರಂಥದಿಂದ ಒಂದೆರಡುಪದ್ಯಗಳನ್ನು ತೆಗೆದು ಬರೆಯುತ್ತೇವೆ—

ಸಾಲಕ್ಕೆ ಭೀತನಾಗಿರು । ನಾಲಗೆಯುಂಟೆಂದು ಹಲವ ಗಳಹದಿರೆಂದುಂ ।
ಬಾಲೆಯರ ನಂಬಲಾಗದು । ಸೋಲನಿರಾಗೆಲುವರೊಡನೆ ಸಿದ್ಧನ ವಚನಂ ॥

ಬಗೆಯದ ನಂಟರ ಮನೆಗಂ। ಜಗಳವನಾಡುತ್ತಮಿರ್ಪ ತಾಣಕೆ ಮತ್ತಂ ।
ಪಗೆಯಿರ್ಪ ಪಳ್ಳಿಯೊಳಗಂ । ಪುಗಲಾಗದು ಕಷ್ಟವೆಂದನಾಕವಿಸಿದ್ಧಂ ॥

ಚಂದನನೆಂಬುದು ಶಿಶಿರಂ । ಚಂದನದಿಂ ಶಿಶಿರವಪ್ಪುದುಡುಪತಿಬಿಂಬಂ ।
ಚಂದನದಿಂ ಶಶಿಮಂಡಲ । ದಿಂದಂ ಸಿರಿದಾದ ತಣ್ಪು ಸತ್ಸಂಗತಿಯೊಳ್ ॥

---

ಬಸವ. ಸು. 1700

ಇವನು ರೇಣುಕಾರ್ಯಚರಿತೆಯನ್ನು ಬರೆದಿದ್ದಾನೆ. ಈತನು ವೀರ ಶೈವಕವಿ; ಇವನ ತಂದೆ ಗುಡ್ಡದ ವೀರೇಶ್ವರನ ಕುಲಾಬ್ಧಿಚಂದ್ರ ವೀರಣ್ಣೊಡೆಯ, ಗುರು ರಾಮಗಿರಿಯ ಕರಿಯಸಿದ್ಧೇಶ, ಸ್ಥಳ ದೇವಪುರ. ಇವನ ಕಾಲವು ಸುಮಾರು 1700 ಆಗಿರಬಹುದು.

ಈತನ ಗ್ರಂಥ

ರೇಣುಕಾರ್ಯಚರಿತೆ

ಇದು ಸಾಂಗತ್ಯದಲ್ಲಿ ಬರೆದಿದೆ; ಸಂಧಿ 15; ಪದ್ಯ 1675. ಇದಕ್ಕೆ ರೇವಣಸಾಂಗತ್ಯ ಎಂಬ ಹೆಸರೂ ಉಂಟು. ಇದರಲ್ಲಿ ವೀರಶೈವರ ಪಂಚಾಚಾರ್ಯರೊಳಗೆ ಮೊದಲನೆಯವನಾದ ರೇಣುಕಾರ್ಯನ ಅಥವಾ ರೇವಣಾರ್ಯನ ಕಥೆ[1] ಹೇಳಿದೆ. ಆರಂಭದಲ್ಲಿ ಶಿವಸ್ತುತಿ ಇದೆ. ಬಳಿಕ ಕವಿ ಪಾರ್ವತಿ, ವೀರಭದ್ರ, ಷಣ್ಮುಖ, ಪ್ರಭು, ರೇವಣ, ಗಣೇಶ, ವಾಣಿ, ಗುಡ್ಡದವೀರೇಶ ಇವರುಗಳನ್ನು ಸ್ತುತಿಸಿದ್ದಾನೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ಸಮುದ್ರ

ಮೊಗೆವ ಮೇಘಗಳಿಂದ ಹೊಗುವ ನದಿಗಳಿಂದ । ನೆಗೆವ ಮಿಾನ್ಗಳ ಘನರವದಿ ।
ತೆಗೆದುಬ್ಬುವ ಘುಳುಘುಳಿಪಬ್ಬರಗಳ । ಬಗೆಯೊಳೊಪ್ಪಿದುದಿಂಗಡಲು ॥

---

1. Vol. I. 1,62.

ನೀತಿ

ಪಾಪವಾವುದು ಪರನಿಂದೆಯು ನರಕದ | ಕೂಪವಾವುದು ದಾರಿದ್ರ್ಯ |
ತಾಪವಾವುದು ಘನಚಿಂತೆ ಸುಜ್ಞಾನದ | ರೂಪವಾವುದು ಜ್ಞಾನಮೊದಮೆಯು ||

ಬಿಜ್ಜಳನ ಕುಮಾರಿ

ಚಂದದ ಕನಕಲತೆಯು ಕಟ್ಟೆ ತುದಿಯೊಳು | ಹೊಂದಾವರೆ ಸೇರಿದಂತೆ |
ಅಂದವಡೆದ ನಳಿತೋಳಂಗ್ಳೆಬೆರ | ಳಂದವೊಪ್ಪಿದುವು ಕಾಮಿನಿಗೆ ||
ಅಂಗಜಭವನು ಜಗಂಗಳ ಗೆಲುವರೆ | ರಂಗುವಡೆದ ನೀಲದಲಿ |
ಹೊಂಗಿ ಹೊಯ್ದ ಗೂಡಾರವೊ ಎನೆ ಕೋಪು | ಲಾಂಗಿಯ ಬಲುಮುಡಿಯೆಸೆಗು ||

---

ದೊಡ್ಡತಿಮ್ಮದಾಸ. ಸು. 1700

ಈತನು ರಾಮಾನುಜವಿಜಯುವನ್ನು ಬರೆದಿದ್ದಾನೆ. ಇವನು ದೊಡ್ಡ ತಿಮ್ಮದಾಸನ ಮಗನು; ಲಕ್ಷ್ಮೀರಮಣಭಕ್ತನು; ಸೂತಕುಲೋದ್ಭವ ಎಂದು ಹೇಳಿಕೊಂಡಿದ್ದಾನೆ. ಇವನ ಕಾಲವು ಸುಮಾರು 1700 ಆಗಿರ ಬಹುದು.

ಇವನ ಗ್ರಂಥ

ರಾಮಾನುಜವಿಜಯ

ಇದು ಗದ್ಯರೂಪವಾಗಿದೆ; ನಮಗೆ ದೊರೆತ ಅಸಮಗ್ರಪ್ರತಿಯಲ್ಲಿ 25 ಪ್ರಕರಣಗಳವೆ. ಪ್ರಕರಣಗಳ ಕೊನೆಯಲ್ಲಿ ಒಂದೊಂದು ಕಂದವಿದೆ ಇದರಲ್ಲಿ ರಾಮಾನುಜಗುರುವಿನ ಚರಿತವೂ, ವಿಷ್ಣುಪಾರಮ್ಯವೂ, ವಿಶಿಷ್ಟಾದ್ವೈತಮತವೂ ನಿರೂಪಿಸಲ್ಪಟ್ಟವೆ. ಈ ವಿಷಯಗಳನ್ನು ಶಿವನು ನಾರದ ನಿಗೆ ಬೋಧಿಸಿದಂತೆ ಕವಿ ಹೇಳುತ್ತಾನೆ. ಈ ಗ್ರಂಥಕ್ಕೆ ಕೈವಲ್ಯಚಿಂತಾ ಮಣಿ ಎಂಬ ಹೆಸರೂ ಇರುವಂತೆ ತೋರುತ್ತದೆ. ಪ್ರಕರಣಾಂತ್ಯದಲ್ಲಿ ಈ ಗದ್ಯವಿದೆ–

ಇದು ಶ್ರೀಮದ್ರಾಮಾನುಜಾಚಾರ್ಯರ ಮತಸಂಪ್ರದಾಯಪ್ರಿಯಶಿಷ್ಯನಪ ಶ್ರೀಲಕ್ಷ್ಮೀರಮಣನ ಶ್ರೀಪಾದಭಕ್ತಿಯುಕ್ತನಪ್ಪ ಸೂತಕುಲೋದ್ಭವ ದೊಡ್ಡತಿಮ್ಮದಾಸನ ಕುಮಾರ ದೊಡ್ಡತಿಮ್ಮದಾಸವಿರಚಿತಮಪ್ಪ ರಾಮಾನುಜವಿಜಯದೊಳ್.

---

ಅದ್ವೈತಾನಂದ. ಸು. 1700

ಈತನು ಕೇಶವಶತಕವನ್ನು ಬರೆದಿದ್ದಾನೆ. ಇವನು ಬ್ರಾಹ್ಮಣಕವಿ; ಗಾಳಿಪೂಜೆಯ ಪೂರ್ಣಾನಂದಯೋಗೀಶ್ವರನ ಶಿಷ್ಯನು ಇವನ ಸ್ಥಳ ಹಳೆಯಬೀಡು. ಈತನು ಸುಮಾರು 1700 ರಲ್ಲಿ ಇದ್ದಿರಬಹುದು.

ಇವನ ಗ್ರಂಥ

ಕೇಶವಶತಕ

ಇದು ಕಂದದಲ್ಲಿ ಬರೆದಿದೆ; ವೇಲಾಪುರಿಯ ಅಥವಾ ಬೇಲೂರ ಚೆನ್ನಕೇಶವದೇವರ ಸ್ತುತಿರೂಪವಾಗಿದೆ.

ವಿಜಯವೆಂಕಟರಮಣ. ಸು. 1700

ಈತನು ಭಗವಚ್ಚರಿತ್ರೆಯನ್ನು ಬರೆದಿದ್ದಾನೆ. ಇವನು ಬ್ರಾಹ್ಮಣಕವಿ. ಇವನ ಪಿತಾಮಹನು ಅತ್ರೇಯಗೋತ್ರದ ನಾಗರಸ, ತಂದೆ ವೆಂಕಟಗುರು ಕೌಂಡಿನ್ಯಗೋತ್ರದ ವೆಂಕಟೇಶ, ಸ್ಥಳ ಚಿಕ್ಕಹೆಜ್ಜಾಜಿ. ಇವನ ಕಾಲವು ಸುಮಾರು 1700ಆಗಿರಬಹುದೆಂದು ಊಹಿಸುತ್ತೇವೆ.

ಇವನ ಗ್ರಂಥ

ಭಗವಚ್ಚರಿತ್ರೆ

ಇದು ವಾರ್ಧಕಷಟ್ಪದಿಯಲ್ಲಿ ಬರೆದಿದೆ; ಅಧ್ಯಾಯ 15 ಇದರೊಳಗೆ ಭಾಗವತಪುರಾಣದಲ್ಲಿ ಉಕ್ತವಾದ ಧ್ರುವಚರಿತೆ ಮೊದಲಾದ ವಿಷಯಗಳು ಹೇಳಿವೆ.

---

ಶಾಂತಾಚಾರ್ಯ. ಸು. 1700

ಈತನು ಪ್ರಸಾದಚಿಂತಾಮಣಿಗೆ ಕನ್ನಡಟೀಕೆಯನ್ನು ಬರೆದಿದ್ದಾನೆ. ಈವನು ವೀರಶೈವಕವಿ; ಯೋಗಾಚಾರ್ಯಷಟ್ಸ್ಥಲನಿರ್ಣಯಾನ್ವಿತ ಎಂದು ಇನ್ನನ್ನು ವಿಶೇಷಿಸಿ ಹೇಳಿಕೊಂಡಿದ್ದಾನೆ; ಇವನ ಗುರು ಸಿದ್ಧೇಶ್ವರ. ಈ ಕವಿ ಸುಮಾರು 1700 ರಲ್ಲಿ ಇದ್ದಿರಬಹುದು.

ತನ್ನ ಟೀಕೆಯ ವಿಷಯವಾಗಿ ಹೀಗೆ ಹೇಳುತ್ತಾನೆ---

ಪ್ರಸಾದಚಿಂತಾಮಣಿಯೆಂಬ ವೇದಾಗಮ ನಿರತಾರ್ಥಸಂಗ್ರಹದಲ್ಲಿ ಗುರುಲಿಂಗಜಂಗಮಪಾದೋದಕಪ್ರಸಾದಚರವಿಶೇಷೋತ್ಪತ್ತಿಯಂ ಅನ್ಯಮತಶಾಸ್ತ್ರಂಗಳಲ್ಲಿ ಪ್ರತ್ಯಕ್ಷಪ್ರಮಾಣದಿಂ ಪೇಳ್ದಪೆಂ.

ಅಷ್ಟಾಂಗಯೋಗಸಂಪನ್ನರಾದ ಷಟ್ಸ್ಥಲಬ್ರಹ್ಮಸಮಾಧಿ ಸಿದ್ಧೇಶ್ವರನ ಪರಕಾರುಣ್ಯಕೃಪಾವಲೋಕನದಿಂದ ಈ ಪ್ರಸಾದಚಿಂತಾಮಣಿಯಲ್ಲಿ ತೀರ್ಥಪ್ರಸಾದಗುರುಲಿಂ

ಗಜಂಗಮೋತ್ಪತ್ತ್ಯಾದಿವಿಶೇಷಮಂ ವೇದಾಗಮಪುರಾಣಂಗಳಲ್ಲಿ ವಿಧಿವಾದಗ್ರಂಥಮಂ ಸೂಚನಾಮಾತ್ರದಿಂ ಯೋಗಾಚಾರ್ಯಷಟ್ಸ್ಥಲನಿರ್ಣಯಾನ್ವಿತನಪ್ಪ ಶಾಂತಾಚಾರ್ಯನು ಸಮಸ್ತಶಿವಮಾಹೇಶ್ವರರ ಪರಕಾರುಣ್ಯದಿಂ ಕಿಂಚಿತ್ಸುಮತಿಯಿಂ ಸ್ವಾನುಭಾವಸಿದ್ಧಿಯಿಂ ಪ್ರಕಾಶಪಡಿಸಿದಂ.

---

## ಆದಿಯಪ್ಪ. ಸು. 1700

ಇವನು ಪಟಹಸ್ತನ ಚರಿತ್ರೆಯನ್ನು ಬರೆದಿದ್ದಾನೆ. ಈತನು ಬ್ರಾಹ್ಮಣಕವಿ; ಇವನ ಸಳ ಚಂಗಳನಾಡೊಳಗಣ ಸಪ್ಪಾರದಹಳ್ಳಿ. ಇವನು ಸುಮಾರು 1700 ರಲ್ಲಿ ಇದ್ದಿರಬಹುದು

ಇವನ ಗ್ರಂಥ

### ಪಟಹಸ್ತನ ಚರಿತ್ರೆ

ಇದು ಸಾಂಗತ್ಯದಲ್ಲಿ ಬರೆದಿದೆ; ಪದ್ಯ 107. ಇದರ ಕಥಾಗರ್ಭವು ಈ ಪದ್ಯದಲ್ಲಿ ಹೇಳಿದೆ—

ಮುನ್ನೊಬ್ಬ ಪಟಹಸ್ತ ಲೋಭತ್ವದಿಂದ | ಹೊನ್ನೆತ್ತಮಾಡಿಯೆ ಮಡಗಿ |
ಇನ್ನೊಂದ ಮಾಡುವೆನೆಂಬಾಕಾಂಕ್ಷೆಯಿಂದ | ಮುನ್ನಲಿಸ್ವರ್ಣದ ನೀಗಿದನು ||

---

## ಮುಪ್ಪಿನಯ್ಯ. ಸು. 1700

ಇವನು ಆಚರಣೆಯಸಂಬಂಧನ ವಚನಗಳನ್ನು ಸೇರಿಸಿದಾನೆ. ಈತನು ವೀರಶೈವಕವಿ; ಸುಮಾರು 1700 ರಲ್ಲಿ ಇದ್ದಿರಬಹುದೆಂದು ಊಹಿಸುತ್ತೇವೆ. ಇವನಿಂದ ಸಂಕಲಿತವಾದ ವಚನಗಳು 275. ಇವುಗಳಲ್ಲಿ ಒಂದನ್ನು ಉದಾಹರಿಸುತ್ತೇವೆ—

ನೀತಿಗೆ ನೀತಿ ಜಾತಿಗೆ ಜಾತಿ ಭೇದವನಱಿದು ಕೂಟಕೆ ಕೂಟ; ಕ್ಷೀರಕೆ ಕ್ಷೀರ ಕೂಡಿದಂತಿರಬೇಕು; ವಾರಿಯು ವಾರಿ ಕೂಡಿದಂತಿರಬೇಕು; ಇದು ಜ್ಞಾನಿಗಳ ಮಹಾಪ್ರಕಾಶದ ಕೂಟದ ಸುಖ ನಿಃಕಳಂಕಮಲ್ಲಿಕಾರ್ಜುನಾ.

---

## ಚೆನ್ನವೃಷಭ. ಸು. 1700

ಈತನು ನುಲಿಯಚಂದಯ್ಯನ ಕಥೆಯನ್ನು ಬರೆದಿದ್ದಾನೆ. ಇವನು ವೀರಶೈವಕವಿ. ಕರಪುರೀಶನ ಕರುಣದಿಂದ ತನ್ನ ಗ್ರಂಥವನ್ನು ಬರೆದಂತೆ ಹೇಳುತ್ತಾನೆ. ಇವನು ಸುಮಾರು 1700 ರಲ್ಲಿ ಇದ್ದಿರಬಹುದೆಂದು ತೋರುತ್ತದೆ. ಇವನ ಗ್ರಂಥದಲ್ಲಿ 25 ಹಾಡುಗಳಿವೆ. ನುಲಿಯಚಂದಯ್ಯನು ಬಸವನ ಸಮಕಾಲದವನು; ನೊದೆಯಹುಲ್ಲ ನುಲಿಹೊಸೆದು ಕಲ್ಯಾಣಪುರದಲ್ಲಿ ಮಾರಿ ಜೀವಿಸುತ್ತಿದ್ದನು.

---

## ಸಿದ್ಧ. ಸು. 1700

ಈತನು ಸಿರುಮನ ಸಾಂಗತ್ಯವನ್ನು ಬರೆದಿದ್ದಾನೆ. ಇವನು ವೀರಶೈವಕವಿ; ಸುಮಾರು 1700 ರಲ್ಲಿ ಇದ್ದಿರಬಹುದು.

ಇವನ ಗ್ರಂಥ

### ಸಿರುಮನ ಸಾಂಗತ್ಯ

ಸಂಧಿ 5, ಪದ್ಯ 606. ಇದರಲ್ಲಿ ಶಿವಭಕ್ತನಾದ ಗೊಲ್ಲಸಿರುಮನ ಕಥೆ ಹೇಳಿದೆ.

---

## ರಾಮಚಂದ್ರಕವಿ. ಸು. 1700

ಈತನು ಮಲ್ಲಿಕಾರ್ಜುನಶತಕವನ್ನು ಬರೆದಿದ್ದಾನೆ; ಪಾರ್ವತಿಯ ಸೋಬಾನೆಯನ್ನೂ ಬರೆದಿರುವಂತೆ ತೋರುತ್ತದೆ. ಅಲ್ಲದೆ ಇವನು ಮಾಡಿದ ವೀರಭದ್ರರಾಜಸ್ತುತಿರೂಪವಾದ ಕೆಲವು ಪದ್ಯಗಳೂ ದೊರೆಯುತ್ತವೆ.

ಇವನು ಬ್ರಾಹ್ಮಣಕವಿ; ತಮ್ಮಯಾರ್ಯನ ಮಗನು. ಇವನ ಕಾಲವು ಸುಮಾರು 1700 ಆಗಿರಬಹುದು.

ಇವನ ಗ್ರಂಥಗಳಲ್ಲಿ

### 1 ಮಲ್ಲಿಕಾರ್ಜುನಶತಕ

ಇದು ವೃತ್ತಗಳಲ್ಲಿ ಬರೆದಿದೆ; ಮಲ್ಲಿಕಾರ್ಜುನಶಿವಸ್ತುತಿರೂಪವಾಗಿದೆ.

### 2. ಪಾರ್ವತಿಯ ಸೋಬಾನೆ

ಇದರಲ್ಲಿ 27 ಹಾಡುಗಳಿವೆ; ಒಂದು ನುಡಿಯನ್ನು ಉದಾಹರಿಸುತ್ತೇವೆ-

ವಾಣಿಯ ಫಣಿವೇಣಿಯು ಗೀರ್ವಾಣಿಯು |
ಜನವಿನುತೆಯ ಬೊಮ್ಮನ ರಾಣಿಯು ಗುಣಮಣಿಯ ಮನದಣಿಯೆ |
ಮನದಣಿಯಲು ನಮಿಸುವೆ ವೀಣಾಪಾಣಿಯ ಪದಯುಗಕೆ ಮುದದಿಂದ ||

---

ಪತ್ತಿಯಣ್ಣ. ಸು 1700

ಈತನು ನರಸಿಂಹಸ್ತುತಿರೂಪವಾದ ಹಾಡುಗಳನ್ನು ಬರೆದಿದ್ದಾನೆ. ಇವನ ಕಾಲವು ಸುಮಾರು 1700 ಆಗಿರಬಹುದು.

---

ಶ್ರೀಶೈಲಾರ್ಯ. ಸು. 1700

ಈತನು ನೃಸಿಂಹಸ್ತವ, ಕೃಷ್ಣಚಾರಿತ್ರ ಇವುಗಳನ್ನು ಬರೆದಿದ್ದಾನೆ ತತ್ವತ್ರಯವಿವರಣವನ್ನೂ ಬರೆದಿರುವಂತೆ ತೋರುತ್ತದೆ. ಇವನು ಶ್ರೀವೈಷ್ಣವಕವಿ; ಸುಮಾರು 1700 ರಲ್ಲಿ ಇದ್ದಿರಬಹುದು.

ಇವನ ಗ್ರಂಥಗಳಲ್ಲಿ

1. ನೃಸಿಂಹಸ್ತವ

ಇದು ಸಾಂಗತ್ಯದಲ್ಲಿ ಬರೆದಿದೆ; ಪದ್ಯ 97. ಕೊನೆಯಲ್ಲಿ "ಶ್ರೀಶೈಲಾರ್ಯಕೃತನೃಸಿಂಹಸ್ತವಂ ಸಂಪೂರ್ಣಂ" ಎಂದಿದೆ.

2. ಕೃಷ್ಣಚಾರಿತ್ರ

ಇದೂ ಸಾಂಗತ್ಯದಲ್ಲಿ ಬರೆದಿದೆ. ಪದ್ಯ 100.

3 ತತ್ವತ್ರಯವಿವರಣ

ಇದು ಗದ್ಯರೂಪವಾಗಿದೆ; ದ್ರಾವಿಡಭಾಷೆಯಲ್ಲಿ ಪಿಳ್ಳೈಲೋಕಾಚಾರ್ಯಗುರು ಚಿತ್ತು, ಅಚಿತ್ತು, ಈಶ್ವರ ಎಂಬ ಮೂರು ತತ್ವಗಳ ವಿಷಯವಾಗಿ ಬರೆದಿರುವ ವಿಶಿಷ್ಟಾದ್ವೈತಗ್ರಂಥದ ವಿವರಣವು

---

ಬಸವಾರಾಧ್ಯ. ಸು. 1700

ಈತನು ಚೆನ್ನಸದಾಶಿವಯೋಗಿಕೃತ ಶಿವಯೋಗಪ್ರದೀಪಿಕೆಗೆ ಕನ್ನಡ ಟೀಕೆಯನ್ನು ಬರೆದಿದ್ದಾನೆ. ಇವನು ವೀರಶೈವಕವಿ; ವೀರಶೈವಮಾರ್ಗಸ್ಥಾಪನಾಚಾರ್ಯ ಎಂದು ತನ್ನನ್ನು ವಿಶೇಷಿಸಿ ಹೇಳಿಕೊಂಡಿದ್ದಾನೆ; ಸುಮಾರ

1700 ರಲ್ಲಿ ಇದ್ದಿರಬಹುದೆಂದು ಊಹಿಸುತ್ತೇವೆ. ಟೀಕೆಯ ಕೊನೆಯಲ್ಲಿ ಈ ಗದ್ಯವಿದೆ—

ಇತಿ ಶ್ರೀಮದ್ವೇದವೇದಾಂತಾಗಮಪುರಾಣಸ್ಮೃತೀತಿಹಾಸಪ್ರತಿಪಾದಿತ ಶ್ರೀವೀರಶೈವಮಾರ್ಗಸ್ಥಾಪನಾಚಾರ್ಯಶ್ರೀಬಸವಾರಾಧ್ಯವಿರಚಿತಕರ್ಣಾಟಕಟೀಕಾ ಸಮಾಪ್ತಾ

---

ದೈವಜ್ಞವಲ್ಲಭ. ಸು. 1700

ಈತನು ಮಹಾವೀರಾಚಾರ್ಯನ ಗಣಿತಕ್ಕೆ ಕನ್ನಡವ್ಯಾಖ್ಯಾನವನ್ನು ಬರೆದಿದ್ದಾನೆ. "ಆಂಧ್ರಭಾಷಾಮಯವ್ಯಾಖ್ಯಾನಕರ್ತ್ರಾ ಶ್ರೀಮತ್ಸರ್ವಮಂತ್ರಪ್ರಸಾದಾಸಾದಿತಗಣಿತಶಾಸ್ತ್ರತತ್ವಜ್ಞೇನ ದೈವಜ್ಞವಲ್ಲಭಾಖ್ಯೇನ ವಿರಚಿತಾ" ಎಂಬುದರಿಂದ ಇವನು ಈ ಗಣಿತಕ್ಕೆ ತೆಲುಗಿನಲ್ಲಿಯೂ ವ್ಯಾಖ್ಯಾನವನ್ನು ಬರೆದಿರುವಂತೆಯೂ ಸರ್ವಮಂತ್ರ ಎಂಬವನಿಂದ ಗಣಿತಶಾಸ್ತ್ರವನ್ನು ಕಲಿತಂತೆಯೂ ತಿಳಿಯುತ್ತದೆ. 'ಬಾಲಬೋಧಾಖ್ಯಕರ್ಣಾಟದೇಶೀಯಭಾಷಾಮಯಟೀಕಾ' ಎಂಬುದರಿಂದ ಇವನ ಕನ್ನಡವ್ಯಾಖ್ಯಾನಕ್ಕೆ ಬಾಲಬೋಧ ಎಂಬ ಹೆಸರನ್ನು ಇಟ್ಟಿರುವಂತೆ ತಿಳಿಯುತ್ತದೆ.

---

ಬಸವಪ್ಪನಾಯಕ. ಸು. 1700

ಈತನು ಸೂಕ್ತಿಸುಧಾಕರವೆಂಬ ವಸ್ತುಕಕಾವ್ಯವನ್ನು 'ಗೀರ್ವಾಣಕರ್ಣಾಟಕಭಾಷೆಗಳಿಂ' ರಚಿಸಿದಂತೆ ಕೆಳದಿನೃಪವಿಜಯದಲ್ಲಿ ಹೇಳಿದೆ ಈ ಗ್ರಂಥವು ನಮಗೆ ದೊರೆತಿಲ್ಲ. ಇವನು ಇಕ್ಕೇರಿಯ ಅರಸರಲ್ಲಿ ಒಬ್ಬನು; 1697 ರಿಂದ 1714ರ ವರೆಗೆ ಆಳಿದನು.

---

ದೇವರಸ. ಸು. 1700

ಈತನು ಶ್ರೀಪಾಲಚರಿತೆಯನ್ನು ಬರೆದಿದ್ದಾನೆ. ಇವನು ಜೈನಕವಿ; ವರ್ಧಮಾನ ಭಟ್ಟಾರಕನ ಶಿಷ್ಯನು. ಇವನ ಕಾಲವು ಸುಮಾರು 1700 ಆಗಿರಬಹುದು.

ಇವನ ಗ್ರಂಥ

ಶ್ರೀಪಾಲಚರಿತೆ

ಇದು ಸಾಂಗತ್ಯದಲ್ಲಿ ಬರೆದಿದೆ; ನಮಗೆ ದೊರೆತ ಅಸಮಗ್ರಪ್ರತಿಯಲ್ಲಿ 2 ಸಂಧಿಗಳಿವೆ.

---

ನಂಜನಾಥಭೂಪಾಲ. ಸು. 1700

ಈತನು ವೈದ್ಯಸಾರಸಂಗ್ರಹವನ್ನು ಬರೆದಿದ್ದಾನೆ. ಇವನು ರಾಜವಂಶಕ್ಕೆ ಸೇರಿದವನು; "ಕಪಿಲಾಕೌಂಡಿನೀಸಂಗಮಕ್ಷೇತ್ರನಿವಾಸ ನಂಜುಂಡೇಶಕೃಪಾಲಬ್ಧವಿಭವಂ, ಶಾಂಕೂರಪುರವರಾಧೀಶಂ" ಎಂದು ಹೇಳಿಕೊಂಡಿದ್ದಾನೆ. ಈತನು ಸುಮಾರು 1700 ರಲ್ಲಿ ಇದ್ದಿರಬಹುದು.

ಸದಾಶಿವ ಸು. 1700

ಈತನು ಒಂದು ಕಾಲಜ್ಞಾನವನ್ನು ಬರೆದಿದ್ದಾನೆ. ಇವನು ಬ್ರಾಹ್ಮಣಕವಿಯೆಂದು ತೋರುತ್ತದೆ. ಇವನ ಕಾಲವು ಸುಮಾರು 1700 ಆಗಿರಬಹುದು.

ಶಿವಲಿಂಗಯೋಗಿ ಸು. 1700

ಈತನು ಶಿವಸರ್ವಾಂಗಸ್ತುತಿಯನ್ನು ಬರೆದಿದ್ದಾನೆ. ಇವನು ವೀರಶೈವಕವಿ; ತುಂಗಭದ್ರಾನದೀತೀರವಿರಾಜಿತವರ್ಗಪುರದ ಗುರುನಂಜೇಶ್ವರನ ಶಿಷ್ಯನು. ಇವನ ಕಾಲವು ಸುಮಾರು 1700 ಆಗಿರಬಹುದು.

ಇವನ ಗ್ರಂಥ

ಶಿವಸರ್ವಾಂಗಸ್ತುತಿ

ಪದ್ಯ 35. ಇದಕ್ಕೆ ಶಿವಸರ್ವಾವಯವಸ್ತೋತ್ರ ಎಂಬ ಹೆಸರೂ ಉಂಟು. ಗ್ರಂಥಾಂತ್ಯದಲ್ಲಿ ಈ ಗದ್ಯವಿದೆ—

ಇದು ಪರಮತುಂಗಭದ್ರಾನದೀತೀರವಿರಾಜಿತವರ್ಗಪುರಾಲಯ ಶ್ರೀಮದ್ಗುರುನಂಜೇಶ್ವರಾಹ್ವಯದಿವ್ಯಶಿವಯೋಗೀಂದ್ರಶ್ರೀಚರಣಾರುಣಸರೋಜಪರಾಗದ್ವಿರೇಫಾಯಮಾನ ಶಿವಲಿಂಗಯೋಗಿವಿರಚಿತಮಾದ ಶಿವಸರ್ವಾಂಗಸ್ತುತಿ.

ಇದರಿಂದ ಒಂದು ಪದ್ಯವನ್ನು ತೆಗೆದು ಬರೆಯುತ್ತೇವೆ—

ಶ್ರೀಮತ್ಪ್ರಾಲೇಯಶೈಲಾಧಿಪತನುಜೆ ಯನಕ್ತ್ರಾಬ್ಜಮಿತ್ರಂ ಪವಿತ್ರಂ |
ವ್ಯೋಮಾತ್ಮಾರ್ಕೇಂದುಧಾತ್ರೀಜಲಶಿಖಿಪವಮಾನಾಷ್ಟಕಾಯಂ ವಿಮಾಯಂ ||
ಧಾಮಶ್ರೀಸೋಮನೇಮಾಭರಣಯುತಜಟಾಜೂಟಕಾಂತಂ ಮಹಾಂತಂ |
ಹೇಮಾಗಾಗಾರನೆಮ್ಮಂ ಸಲಹುಗೆ ಸತತಾನಂದವೇಶಂ ಮಹೇಶಂ ||

## ನಿಃಕಲ ಸು. 1700

ನಿಃಕಲರ ವಚನ ಎಂಬ ಒಂದು ಗ್ರಂಥವು ದೊರೆಯುತ್ತದೆ. ಇದು ನಿಃಕಲ ಎಂಬವನಿಂದ ರಚಿತವಾದುದೆಂದು ಹೇಳುತ್ತಾರೆ. ಇವನು ವೀರಶೈವಕವಿ; ಸುಮಾರು 1700 ರಲ್ಲಿ ಇದ್ದಿರಬಹುದೆಂದು ಊಹಿಸುತ್ತೇವೆ. ಇವನಗ್ರಂಥದಲ್ಲಿ ಸ್ಥಲ 42 ಪದ 575ಇವೆ. ಪ್ರತಿಪದವೂ ನಿಃಕಲನೆ ಎಂದು ಮುಗಿಯುತ್ತದೆ. ಕೊನೆಯಲ್ಲಿ ಬಸವಸ್ತುತಿ ಇದೆ ಇದರಿಂದ ಕೆಲವು ಪದಗಳನ್ನು ತೆಗೆದು ಬರೆಯುತ್ತೇವೆ--

ಅರಿಯೆನೆಂದೆನಬೇಡಿ | ಅರಿತೆನೆಂದೆನಬೇಡಿ | ಅರಿವುಮರವೆಗಳನಳಿದರೆ |
ಅರಿಯುವಲ್ಲಿ ಪರವು ಬೇರಿಲ್ಲ | ಪರಬೊಮ್ಮ ತಾನಯ್ಯ ನಿಃಕಲನೆ ||
ಸ್ಮರಣೆಯಿಂ ಮನಶುದ್ಧಿ | ದರುಶನದಿ ತನುಶುದ್ಧಿ | ಸ್ಪರುಶನದಿ ಆತ್ಮಶುದ್ಧಿಯು
ಶರಣೆನಲು ಮುಕ್ತಿಸಿದ್ಧಿಯು | ಶರಣನ ಹರನೆಂದು ನಂಬು ನಿಃಕಲನೆ ||
ಕುಲ್ಲಮನುಜರ ಸಂಗ| ಕಲ್ಲ ಪದರದಹಾಂಗೆ | ಅಲ್ಲೇನು ಕಂಪು ಭೂಷಣವು |
ಒಲ್ಲಂತ ಸುಜ್ಞಾನಿಗಳ ಸಂಗ ಕಂಠದೊಳು | ಮಲ್ಲಿಗೆಯ ಹಾರ ನಿಃಕಲನೆ ||

---

## ಸಪ್ಪಣ್ಣ. ಸು. 1700

ಈತನು ಕೈವಲ್ಯಕಲ್ಪವಲ್ಲರಿಯನ್ನು ಬರೆದಿದ್ದಾನೆ, ಇವನು ವೀರಶೈವಕವಿ, ಗುರುಸಿದ್ಧಯತಿಯ ಶಿಷ್ಯನು. ಇವನಿಗೆ ಸರ್ಪಭೂಷಣ ಎಂಬ ಹೆಸರೂ ಇದ್ದಂತೆ ತೋರುತ್ತದೆ. ಇವನ ಕಾಲವು ಸುಮಾರು 1700 ಆಗಿರಬಹುದು.

ಇವನ ಗ್ರಂಥ

### ಕೈವಲ್ಯಕಲ್ಪವಲ್ಲರಿ

ಇದು ಹಾಡಿನರೂಪವಾಗಿದೆ. ಸ್ಥಲ 5, ವಚನ ಸಂಪುಟ 177, ವಿರಳಪದಗಳು 710 ಗ್ರಂಥಾಂತ್ಯದಲ್ಲಿ ಈ ಗದ್ಯವಿದೆ--

ಇತಿ ಶ್ರೀಮದವಿರಳಾನಂದಬಂಧುರಸಮಸ್ತತತ್ವತಾತ್ವಿಕರಹಸ್ಯೋಪದೇಶಕ್ಯಣರಚಾತುರೀಧುರೀಣ ನಿರಾಭಾರಿಗುರುಕುಲಕೇತನಾಯಮಾನ ಗುರುಸಿದ್ಧಯತಿವರೇಣ್ಯಾಚರಣಾರವಿಂದಮಕರಂದಮಧುಕರಸ್ವರೂಪ ಶ್ರೀಸರ್ಪಭೂಷಣಶಿವಯೋಗಿವಿರಚಿತಮಪ್ಪ ಕೈವಲ್ಯಕಲ್ಪವಲ್ಲರಿಯೆಂಬಧ್ಯಾತ್ಮಸುಖಬೋಧಕಪ್ರಕರಣದಲ್ಲಿ

ಇದರಿಂದ ಒಂದು ಹಾಡನ್ನು ತೆಗೆದು ಬರೆಯುತ್ತೇವೆ--

ಪಲ್ಲವಿ|| ಬೆರೆಯಬಾರದೇ | ತಿಳಿದು | ಬೆರೆಯಬಾರದೇ ||
ಅನುಪಲ್ಲವಿ|| ಮಱೆದು ಬಾಹ್ಯವನ್ನು ತನ್ನ | ಕರದಖಂಡತೇಜನೊಡನೆ ||
ತಿಳಿವೆನಿಸುವ ಸುರಭಿಗೂಡಿ | ನಳನಳಿಸುವ ವಿಕಚಹೃದಯ |
ನಳಿನದಮಲಕರ್ಣಿಕೆಯೊಳು | ಬೆಳಗುವಿಷ್ಟಲಿಂಗದೊಡನೆ ||1||
ಪರಿವ ಗಂಗೆಯಮುನೆಯೆರಡು | ಬೆರೆದ ಸಂಗಮಸ್ಥಳದೊಳ |
ಗಿರುವ ಗಗನಗಿರಿಯ ತುದಿಯೊ| ಳುರಿವ ಪ್ರಾಣಲಿಂಗದೊಡನೆ ||2||
ಮಹಿಶಶ್ರೀಗುರುಸಿದ್ಧನೊಲಿದು | ವಿಹರಿಸುವ ಸುಷುಮ್ನನಾಡಿ |
ಕುಹರದಗ್ರದಚಲಸರಸಿ | ರುಹದ ಭಾವಲಿಂಗದೊಡನೆ ||3||

---

ನಿರಾಲಂಬಶರಣ. ಸು. 1700

ಈತನು ಅಖಂಡೇಶ್ವರವಚನವನ್ನು ಬರೆದಿದ್ದಾನೆ. ಇವನು ವೀರ ಶೈವಕವಿ; ಇವನನ್ನು 'ಶ್ರೀಮತ್ಪರಮಹಂಸಪರಿವ್ರಾಜಕ ಸದ್ಗುರುಸತ್ಸಂಪ್ರದಾಯಕ ಸಿದ್ಧಯೋಗೀಂದ್ರ' ಎಂದು ವಿಶೇಷಿಸಿ ಹೇಳಿದೆ. ಇವನ ಕಾಲವು ಸುಮಾರು 1700 ಆಗಿರಬಹುದೆಂದು ತೋರುತ್ತದೆ.

ಇವನ ಗ್ರಂಥ

ಅಖಂಡೇಶ್ವರವಚನ

ಇದರಲ್ಲಿ ಸ್ಥಲಗಳನ್ನಿಟ್ಟು ವಚನಗಳು ಹೇಳಿವೆ; ಪ್ರತಿವಚನದಲ್ಲಿಯೂ ಅಖಂಡೇಶ್ವರ ಎಂಬ ಅಂಕಿತವಿದೆ. ಕೆಲವು ವಚನಗಳನ್ನು ಉದ್ಧರಿಸಿ ಬರೆಯುತ್ತೇವೆ.—

ಸುಡು ಸುಡು ಈದೇಹದ ರೂಪು ನೋಡಿದರೇನುಹುರುಳಿಲ್ಲವಯ್ಯ; ಎಲುವುಚರ್ಮನರಮಾಂಸಮಲಮೂತ್ರಯುಕ್ತವಾದ ಅನಿತ್ಯದೇಹವ ನೆಚ್ಚಿ ನಿಮ್ಮ ನಿಜವನು ಮಱೆದು ಭವಭಾರಿಯಾದೆನಯ್ಯ ಅಖಂಡೇಶ್ವರಾ.

ತನ್ನ ಎಡೆಯಲ್ಲಿ ನೊಣವನಱಸುವ ಮರುಳುಮಾನವನಂತೆ ತನ್ನಂಗದ ಮನದ ಅವಗುಣಂಗಳ ತೊಲಗನೂಕಲಱಿಯದೆ ಅನ್ಯರಲ್ಲಿಯವಗುಣಂಗಳ ಸಂಪಾದನೆಯಮಾಡುವ ಕುನ್ನಿಗಳ ಎನಗೊಮ್ಮೆ ತೋಱದಿರಯ್ಯ ಅಖಂಡೇಶ್ವರಾ.

ಅನುಭಾವಿಗಳಸಂಗ ಕೀಟಕ ಭ್ರಮರವಾದಂತೆ ಕೇಳಿರೋ; ಅನುಭಾವಿಗಳ ಸಂಗ ಪರುಷಲೋಹದಂತೆ ಕೇಳಿರೋ; ನಮ್ಮ ಅಖಂಡೇಶ್ವರಲಿಂಗದೊಡನೆ ಬೆರೆದ ಶಿವಾನುಭಾವಿಗಳ ಸಂಗ ಕರ್ಪೂರಜ್ಯೋತಿಯಂತೆ ಕಾಣಿರೋ.

---

# Appendix 1
## ಪರಿಶಿಷ್ಟ 1
## ಕರ್ಣಾಟಕ ಕವಿಚರಿತೆಯ ದ್ವಿತೀಯಸಂಪುಟಕ್ಕೆ ಸೇರಬೇಕಾದ ಕೆಲವರು ಕವಿಗಳ ವಿಷಯ

### ಬಾಯಣಾಚಾರ್ಯ. ಸು. 1410

---

ಈತನು ದಾವಣಗೆರೆ 23 ನೆಯ ಶಾಸನವನ್ನು ಬರೆದಂತೆ ಆ ಶಾಸನದ ಕೊನೆಯಲ್ಲಿರುವ "ಈ ಶಾಸನಕೃತಿಯನು ಹೇಱಿದುದಕೆ ಕಾಶ್ಯಪಗೋತ್ರದ ಯಜುಶ್ಶಾಖೆಯ ಚಲಸಂಪ್ರದಾಯದ ಮಲ್ಲಿಕಾರ್ಜುನಾಚಾರ್ಯರ ಮಕ್ಕಳು ಬಾಯಣಾಚಾರ್ಯರಿಗೆ ಧಾರಾಪೂರ್ವಕವಾಗಿ ಕೊಟ್ಟುದು ಎಂಟು ಕೊಳಗದ ಗದ್ದೆ" ಎಂಬ ವಾಕ್ಯದಿಂದ ತಿಳಿಯುತ್ತದೆ. ಯದ್ಯಪಿ ಈ ಶಾಸನವು ಸಂಸ್ಕೃತಶ್ಲೋಕರೂಪವಾಗಿದ್ದರೂ ಅಲ್ಲಲ್ಲಿ ಕನ್ನಡಗದ್ಯಭಾಗಗಳೂ ಕೊನೆಯಲ್ಲಿ ಎರಡು ಕಂದಗಳೂ ಇರುವುದರಿಂದ ಬಾಯಣಾಚಾರ್ಯನು ಕನ್ನಡಕವಿಯೂ ಆಗಿದ್ದನು ಎಂಬುದರಲ್ಲಿ ಸಂಶಯವಿಲ್ಲ.

ಈ ಶಾಸನವು ವಿಜಯನಗರದ ರಾಜನಾದ 1ನೆಯ ದೇವರಾಜನ (1406-1416) ಆಳಿಕೆಯಲ್ಲಿ ಶಕ 1332 ನೆಯ ವಿಕೃತಿಯಲ್ಲಿ ಬರೆದುದು. ಇದರಲ್ಲಿ ಹೊನ್ನನಿಕ್ಕಿ ಹರಿದ್ರಾನದಿಯನ್ನು ಕಟ್ಟಿ ಹರಿಹರಕ್ಕೆ ಕಾಲುವೆಯನ್ನು ತಂದ ಮಹಾಜನಗಳಿಗೆ ಆ ಕಾಲುವೆಯಕೆಳಗೆ ಒಂದು ಪಾಲು ಭೂಮಿಯೂ ಹರಿಹರದೇವರಿಗೆ ಎರಡು ಪಾಲು ಭೂಮಿಯೂ ಸಲ್ಲಬೇಕೆಂದು ನಿರ್ಣಯವು ಮಾಡಲ್ಪಟ್ಟಿದೆ. ಇದರ ಕೊನೆಯಲ್ಲಿರುವ ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ಅಱಿಗುಹದಾನವಮುದಸಂ | ಹರಣಂಗಳ್ ವಿಮಲಕರಣಭುಜಶಾಸ್ತೀಕೋ |
ದ್ಧರಣಂಗಳ್ ಹರಿಹರನರ | ಚರಣಂಗಳ್ ಪೊರೆಗೆ ಧರೆಯನಾಚಂದ್ರಾರ್ಕಂ ||
ಹರಿಹರಸೇವಾಪರಿಣತ | ಕರಣಂ ಸಂಗಾಯಪುಣ್ಯಜಠರಾಬ್ಧಿಸುಧಾ |
ಕಿರಣಂ... .......... | ...... .... ಶಿಲಾಶಾಸನಮಂ ||

---

## ನರಸಾರ್ಯ. ಸು. 1600

ಈತನು ಪದ್ಮಗಣಸಹಸ್ರನಾಮವನ್ನು ಬರೆದಿದ್ದಾನೆ. ಇವನು ಬ್ರಾಹ್ಮಣಕವಿಯೆಂದು ತೋರುತ್ತದೆ. ಉತ್ತೊಳಲೀಶ್ವರನಾದ ಅಮೃತನೃಪನ ಆಜ್ಞಾನುಸಾರವಾಗಿ ಪಾಲ್ಕುರಿಕೆಸೋಮಾರಾಧ್ಯರಚಿತವಾದ ಸಹಸ್ರಗಣನಾಮವನ್ನು ಕಂದವೃತ್ತಗಳಿಂದ ರಚಿಸಿದಂತೆ ಕವಿ ಈ ಪದ್ಯದಲ್ಲಿ ಹೇಳುತ್ತಾನೆ—

ಸಿರಿವೆತ್ತುತ್ತೊಳಲೀಶ್ವರಾಮೃತನೃಪಂ ಸದ್ವೃತ್ತಕಂದಂಗಳಿಂ |
ಶರಣಶ್ರೇಷ್ಠರೆನಿಪ್ಪ ಪಾಲ್ಕುರಿಕೆಸೋಮಾರಾಧ್ಯರಿಂದಾದ ಸಾ ||
ಸಿರದುದ್ಯದ್ಗಣನಾಮಮಂ ರಚಿಸೆನುತ್ತುಂ ಪೇಳೆ ಸಂತೋಷದಿಂ |
ನರಸಾರ್ಯಂ ನೆಗಳ್ದಂ ಮಹಾಸುಜನಕರ್ಣಶ್ರಾವ್ಯಮಂ ದಿವ್ಯಮಂ ||

ಇವನು ಹೇಳುವ ಅಮೃತನೃಪನಾರೋ ತಿಳಿಯದು. ಇವನ ಕಾಲವು ಸುಮಾರು 1600 ಆಗಿರಬಹುದೆಂದು ಊಹಿಸುತ್ತೇವೆ.

ಇವನ ಗ್ರಂಥ

### ಪದ್ಯಗಣಸಹಸ್ರನಾಮ

ಇದು ಕಂದವೃತ್ತಗಳಲ್ಲಿ ಬರೆದಿದೆ; ಪ್ರಕರಣ 8, ಪದ್ಯ 191 ಇದರಲ್ಲಿ ಪ್ರಮಥಗಣ, ರುದ್ರಗಣ, ವೃಷಭಗಣ, ತ್ರಿಷಷ್ಟಿಗಣ, ಷೋಡಶಗಣ, ತೇರಸಗಣ ಅಥವಾ ತ್ರಯೋದಶಗಣ, ದಶಗಣ, ಅಸಂಖ್ಯಾತಗಣ ಈ ಗಣಗಳ ಹೆಸರುಗಳು ಹೇಳಿವೆ. ಆರಂಭದಲ್ಲಿ ಶಿವಸ್ತುತಿ ಇದೆ. ಪ್ರಕರಣಗಳ ಆದಿಯಲ್ಲಿ ಶಿವಪಾರ್ವತೀಸಂವಾದರೂಪವಾಗಿ ಚಮತ್ಕಾರವಾದ ಕೆಲವು ವೃತ್ತಗಳಿವೆ. ಮುಂದಕ್ಕೆ ನಾಮಗಳು ಹೇಳಿವೆ. ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ—

ಕಳಿರಾಡ್ಗಾಮಿನಿ ಸಿಂಹವಾಹನೆ ಮಹಾಕಾಳಿ ಸ್ಫುರದ್ಗೌರಿ ನಿ |
ನ್ನಿರವೆಂತೆಂದೊಡೆ ವಾಮದೇವನತುಳೋದ್ಯದ್ದಕ್ಷಿಣಾಮೂರ್ತಿ ಭೀ ||
ಕರರುದ್ರಂ ವರಶಾಂತನೆಂತು ತವ ರೂಪಂ ಚೋದ್ಯಮೆಂದಾರ್ಯೆಯು |
ತ್ತರಕಂ ಸಸ್ಮಿತನಾದ ಸಾಂಬಶಿವನೆಮ್ಮಂ ರಕ್ಷಿಕಾನಂದದಿಂ ||

ವಿಳಸಚ್ಚಂಪಕಫುಲ್ಲನಾಸಿಕೆ ಜಳದ್ಭೃಂಗಾಳಿಕಾಳಿಪ್ರಭೋ |
ಜ್ವಳಿ ಕಾಳೋರಗವೇಣಿ ಸೋಗೆಮುಡಿಯೊಪ್ಪಂಬೆತ್ತ ನೀಂ ಸರ್ವಮಂ ||
ಗಳಿಯಿಂತೆಂದೊಡೆ ನೀಂ ಶಿವಾಖ್ಯನವ್ಯಕೃತಶ್ರೀಪ್ರಾಣನಾಥಂ ವಿಷೋ |
ದ್ಗಳನೆಂತೆಂದೊಡೆ ನಕ್ಕ ಸಾಂಬಶಿವನೆಮ್ಮಂ ರಕ್ಷಿಕಾನಂದದಿಂ ||

ಅರಿವುದು ಭವವಲ್ಲರಿಯಂ | ಮುಱಿವುದು ದುಷ್ಕೃತಮದೇಭದಂತಮನದಟಿಂ |
ಸುರಿವುದು ಶಿವಸುಖಸುಧೆಯಂ | ತರದಿಂದಱವತ್ತುಮೂಱು ಶರಣಸ್ಮರಣಂ ||

ತೇರಸರಂ ಶಿವಮಂತ್ರಕೆ | ಆರಸರಂ ಭಕ್ತಹೃದಯಸಾರಸರಂಜ |
ತ್ಸಾರಸರಂ ಶುಭಸೌಖ್ಯಸು | ಧಾರಸರಂ ವಂದಿಪೆಂ ದಯಾರಸಭರರಂ ||

---

## ಪೂಜ್ಯಪಾದಯೋಗಿ. ಸು. 1600

ಈತನು ಜ್ಞಾನಚಂದ್ರಚರಿತೆಯನ್ನು ಕನ್ನಡಷಟ್ಪದಿಯಲ್ಲಿ ಬರೆದಿರುವುದಾಗಿ ಪಾಯಣವರ್ಣಿಯ (1659) ಜ್ಞಾನಚಂದಚರಿತೆಯ ಈ ಪದ್ಯದಿಂದ ತಿಳಿಯುತ್ತದೆ—

ಅದ ನೋಡಿ ಕರ್ಣಾಟಕದೊಳ್ನುಡಿಯಲ್ಲಿ | ಯೊದವಿದ ಚಾರುಷಟ್ಪದವ |
ಮುದದಿಂದ ಶ್ರೀಪೂಜ್ಯಪಾದಯೋಗೀಶನು | ಸದಮಲಜ್ಞಾನಿ ಪೇಳಿದನು ||

ಇವನು ಜೈನಕವಿ. ಇವನ ಗ್ರಂಥವು ವಾಸವಚಂದ್ರಮುನಿಯಿಂದ ಪ್ರಾಕೃತದಲ್ಲಿ ರಚಿತವಾದ ಜ್ಞಾನಚಂದ್ರಚರಿತ್ರೆಯ ಪರಿವರ್ತನವೆಂದೂ ಇದನ್ನು ನೋಡಿ ತಾನುಸ್ಲಿಅದೇ ಕಥೆಯನ್ನು ಸಾಂಗತ್ಯದಲ್ಲಿ ಬರೆದೆನೆಂದೂ ಪಾಯಣವರ್ಣಿ ಹೇಳುತ್ತಾನೆ. ಇದರಿಂದ ಈ ಕವಿ ಪಾಯಣವರ್ಣಿಯ ಕಾಲಕ್ಕೆ (1659) ಹಿಂದೆ ಇದ್ದಿರಬೇಕು; ಎಷ್ಟು ಹಿಂದೆ ಇದ್ದನೋ ತಿಳಿಯದು; ಸುಮಾರು 1600 ರಲ್ಲಿ ಇದ್ದಿರಬಹುದೆಂದು ಊಹಿಸುತ್ತೇವೆ. ಇವನ ಗ್ರಂಥವು ನಮಗೆ ದೊರೆತಿಲ್ಲ.

---

## ಪಾಯಣವರ್ಣಿ. ಸು. 1659

ಈತನು ಜ್ಞಾನಚಂದ್ರಚರಿತೆಯನ್ನು ಬರೆದಿದ್ದಾನೆ. ಇವನು ಜೈನ ಕವಿ; ಚಾರುಕೀರ್ತಿಪಂಡಿತಾಚಾರ್ಯನ ಶಿಷ್ಯನು; "ಬೆಳುಗುಳಾದ್ರಿಯ ಗುಮ್ಮಟಸ್ವಾಮಿ ಸೇವಕ ನಾಗಪ್ಪಯ್ಯನ ಸಂತಾನ" ಎಂದು ಹೇಳಿಕೊಂಡಿರುವುದರಿಂದ ಇವನ ಸ್ಥಳ ಬೆಳುಗೊಳವೆಂದು ತೋರುತ್ತದೆ. ತನ್ನ ಗ್ರಂಥವನ್ನು ಶಕ 1581 ನೆಯ ವಿಕಾರಿಯಲ್ಲಿ, ಎಂದರೆ 1659 ರಲ್ಲಿ, ಬರೆದಂತೆ ಹೇಳುತ್ತಾನೆ.

ಸುಮಾರು 1600 ರಲ್ಲಿ ಸಮ್ಯಕ್ತ್ವಕೌಮುದಿಯನ್ನು ಬರೆದ ಪಾಯಣ್ಣವ್ರತಿ ಪೆನಗೊಂಡೆದೇಶದ ನಂದಿಯಪುರದವನೆಂದೂ, 1606 ರಲ್ಲಿ ಸನತ್ಕುಮಾರಚರಿತೆಯನ್ನು ಬರೆದ ಪಾಯಣಮುನಿ ಶ್ರೀರಂಗಪಟ್ಟಣದವನೆಂದೂ ತಿಳಿವುದರಿಂದ ಈ ಕವಿ ಅವರಿಬ್ಬರಿಗಿಂತಲೂ ಬೇರೆಯವನು ಎಂದು ತೋರುತ್ತದೆ.

ಪೂರ್ವಕವಿಗಳಲ್ಲಿ ಜಿನಸೇನ, ಗುಣಭದ್ರ, ಅಕಲಂಕ, ಕನಕನಂದಿ, ಭರತೇಶ್ವರಚರಿತೆಯನ್ನು ಬರೆದ ರತ್ನಾಕರ (1557), ಕುಮುದಚಂದ್ರ, ಪ್ರಭಾಚಂದ್ರ, ಸೋಮದೇವ ಇವರುಗಳನ್ನು ಸ್ಮರಿಸಿದ್ದಾನೆ.

ಇವನ ಗ್ರಂಥ

### ಜ್ಞಾನಚಂದ್ರಚರಿತೆ

ಇದು ಸಾಂಗತ್ಯದಲ್ಲಿ ಬರೆದಿದೆ; ಸಂಧಿ 45 ಪದ್ಯ 6334. ಇದರಲ್ಲಿ ಚಂದ್ರವಂಶದ ದೊರೆಯಾದ ಜ್ಞಾನಚಂದ್ರನು ತಪಸ್ಸನ್ನು ಮಾಡಿ ಮುಕ್ತಿಯನ್ನು ಪಡೆದ ಕಥೆ ಹೇಳಿದೆ. ಗ್ರಂಥಾವತಾರದಲ್ಲಿ ಶಾಂತಿಜಿನಸ್ತುತಿ ಇದೆ. ಬಳಿಕ ಕವಿ ಸಿದ್ಧಾದಿಗಳು, ಸರಸ್ವತಿ, ಗಣಧರರು ಇವರುಗಳನ್ನು ಸ್ತುತಿಸಿ ಭದ್ರಬಾಹುಬಲಿಯಿಂದ ಲಕ್ಷ್ಮೀಸೇನನ ವರೆಗೆ ಜೈನಗುರುಗಳನ್ನು[1] ಹೊಗಳಿದ್ದಾನೆ. ಈ ಕಥೆಯನ್ನು ಮೊದಲು ವಾಸವಚಂದ್ರಮುನಿ ಪ್ರಾಕೃತದಲ್ಲಿಯೂ ಅದನ್ನು ನೋಡಿ ಪೂಜ್ಯಪಾದಯೋಗಿ ಕರ್ಣಾ

1. ಭದ್ರಬಾಹುಬಲಿ, ಕವಿಪರಮೇಷ್ಠಿ, ಗುಂಡಿಗೆಯುದಕವ ಮಂತ್ರಿಸಿ ವಿಷಾನೆಂದು|ಕೋಡುಕೊನರೆ ಮಿಥ್ಯಾಜನವು||ಕಂಡು ಮೊಲ್ಲೆಯ ಕುಸುಮವ ಮಾಡಿ ಜಯಿಸಿದ ಕುಂಡಕುಂದಾರ್ಯ, ಗಿರಿಪುರದೊಳು ಕಲ್ಲವಾಣಿಯ ನುಡಿಯಿಸಿ| ವರಮೂಲಸಂಘವೆಂದು || ದುರುಳಶ್ವೇತಾಂಬರರನು ಗೆಲ್ದ ಉಮಾಸ್ವಾತಿಮುನಿ, ಅಕಳಂಕ, ಭೋಜರಾ

ಟಕಷಟ್ಪದಿಯಲ್ಲಿಯೂ ಬರೆದಿರುವಂತೆಯೂ ಆ ಷಟ್ಪದೀಗ್ರಂಥವನ್ನು ನೋಡಿ ತಾನು ಹಾಡುಗಬ್ಬ(ಸಾಂಗತ್ಯ)ದಲ್ಲಿ ಅದೇ ಕಥೆಯನ್ನು ಬರೆದಂತೆಯೂ ಕವಿ ಹೇಳುತ್ತಾನೆ ಸಂಧಿಗಳ ಕೊನೆಯಲ್ಲಿ ಈ ಗದ್ಯವಿದೆ--

ಇದು ಸುರನರಫಣಿಪತಿಮಕುಟತಟಘಟಿತಮಾಣಿಕ್ಯಮರೀಚಿಮಾಲಾಲಂಕೃತಕ್ರಮಕಮಲಯುಗಲಶ್ರೀಮಜ್ಜಿನಾಧೀಶ್ವರಮತಾಂಬರದ್ಯುಮಣಿ ಸ್ಯಾದ್ವಾದವಿದ್ಯಾಭರಣಭೂಷಿತ ಶ್ರೀಮಚ್ಚಾರುಕೀರ್ತಿಪಂಡಿತಾಚಾರ್ಯಪದೇಂದೀವರಾನಂದಾಮಂದಮಕರಂದಸಂದೋಹಬಂಧುರಕುಸುಮಂಧಯ ಶ್ರೀಮತ್ಪಾಯಣವರ್ಣಿವಿರಚಿತಮಪ್ಪ ಜ್ಞಾನಚಂದ್ರಚರಿತಪುರಾಣದೊಳ್.

ಈ ಗ್ರಂಥದಿಂದ ಕೆಲವು ಪದ್ಯಗಳನ್ನು ತೆಗೆದು ಬರೆಯುತ್ತೇವೆ--

ಜಿನಚಂದ್ರರಾಜನ ಹೆಂಡತಿ ಶ್ರೀಕಾಂತಾದೇವಿ

ವಾಣಿ ಶ್ರೀಕಾಂತೆಯ ಜಾಣ್ನುಡಿಯನು ಕೇಳಿ । ಜಾಣು ಸಾಲದು ತನಗೆಂದು ।
ವಾಣಿದ್ಯೆಯುಂದಿಂದ ಜಪಸರವಿಡಿದು ಸು । ಶ್ರೋಣಿ ಮಾಡುವಳು ಜಪವನು ॥

ದುಷ್ಟರಾಹುವಿಗಳ್ಕಿ ಸುರರೆಲ್ಲ ನೆರೆದಾ । ಗಷ್ಟಮಿಚಂದ್ರನ ತಂದು ।
ಶಿಷ್ಟೆ ಶ್ರೀಕಾಂತೆಯ ನಿಟಿಲವ್ಯಾಜದಿ ಬೈ । ಚಿಟ್ಟರೊ ಎನೆ ಪಣೆಯಿಹುದು ॥

ತಿರಿಕರು ಮನೆಮನೆದಪ್ಪದೆ ತಾವೈದಿ । ತಿರಿವಾಗ ಕರ್ಚೀ ಪೂರಿಸುವ ।
ಮುಱುಕುತಂಖವ ಹೂರೇಖೆಗೂಡಿದ ಮುದ್ದು । ಕೊರಲಿಗೆ ಸರಿಯೆನ್ನಬಹುದೇ ॥

ಸುಲಿನಾಭಿಯೆಂದೆಂಬ ಕೊಳದೊಳಿರ್ದಮೃತವ । ನಳಿನಾಕ್ಷಿ ರತಿ ಮನದಂದು ।
ಘಲಿಲನೆ ಕಡೆವ ಮಂತಿನ ನಿಲುಗಾವೆಸೆ । ಲಲನೆಯ ಬಡಬಾಸೆಯಿಹುದು ॥

---

ಜನ ಸಭೆಯಲ್ಲಿ ಅಮಾವಾಸೆಯ ಹುಣ್ಣಿಮೆಯನು ಮಾಡಿದ ಪ್ರಭೇಂದು, ಪೂಜ್ಯಪಾದ, ಕೊಲ್ಲಾಪುರದ ಮಾಘನಂದಿ, ಲಬ್ಧಿಗೋಮಟತ್ರಿಲೋಕಸಾರಗಳ ಕರ್ತೃ ನೇಮಿಚಂದ್ರ, ಅದ್ವೈತಮತಧ್ವಂಸಕ ಶುಭಚಂದ್ರ, ಶಿಷ್ಯ ಚಾರುಕೀರ್ತಿ, ಗೋಮಟಸಾರಕ್ಕೆ ಸಕ್ಕದದಿಂ ಸಪಾದಲಕ್ಷಟೀಕನೊರೆದ ಪಂಡಿತರಾಯ, ಬಿಲವನು ಫಲವೊಂದರಿಂದ ಹೂಳಿದ ಪಂಡಿತಾರ್ಯ, ಶಿವಿಕೆಯನು ದೈವಂಗಳಿಂದ ಹೊರಿಸಿದ ಪಂಡಿತಮುನಿ, ಲಲಿತಕೀರ್ತಿ, ಬಲಾತ್ಕಾರಗಣದ ವಿದ್ಯಾನಂದ, ಕಾಣೂರ್ಗಣದ ದೇವಕೀರ್ತಿ, ಲಕ್ಷ್ಮೀಸೇನ.

## ಚಂದ್ರ

ಕಿರಣವಾಗಲು ತಂತು ವಿಧುಬಿಂಬ ಪಟವಾಗಿ | ಸರಸಿಜೋದ್ಭವವಟು ಪಿಡಿದು |
ಹರುಷದಿಂ ನಭದೊಳಾಡಿಪ ಚಕ್ರಪಟವೆನೆ | ಸ್ಮರಸಖಬಿಂಬ ರಾಜಿಸಿತು ||
ಕರಿವದನನ ಡೊಳ್ಳುಹೊಟ್ಟೆಯನಣಕಿಸೆ | ಭರದಿ ಕಿತ್ತಿಡೆ ದಂತವನು |
ಉರದೊಳು ತಾಗಿದ ಪುಣ್ಣಿನ ಕಲೆಯೆನೆ | ಮೆಱೆದುದು ಚಂದ್ರಲಾಂಛನವು ||

## ಕೌಂಗು

ವನರಾಜನು ಭೂಪತಿಗೆ ಪಚ್ಚೆಯ ಕ | ವಿನದೊಂದು ಮೆಱೆವ ಸತ್ತಿಗೆಯ |
ಅನುರಾಗದಿಂದೆತ್ತಿಸಿದನೋ ಎಂಬಂತೆ | ವನದೊಳು ಕೌಂಗು ರಾಜಿಪುದು ||

## ಒಡದಾಸಿಯರು

ತಱಗೆಲೆ ಚಿಪ್ಪಿನ ಸುಣ್ಣ ಗೋಟಡಕೆಯ | ಭರದಿಯಡಸಿ ದಾಡೆಯೊಳು |
ಱುಕುಸೀರೆಯನುಟ್ಟು ಜಾರರಿರ್ದೆಡೆಗಾಗ | ತೆರಳಿತು ದಾಸಿಯರ ಪೌಜು ||

# Appendix II

## ಪರಿಶಿಷ್ಟ II

## ಗ್ರಂಥಶುದ್ಧಿ

| ಪುಟ | ಪಙ್ತಿ | ಅಶುದ್ಧ | ಶುದ್ಧ |
|---|---|---|---|
| 3 | 5 | ಇದಿರಬೇಕು | ಇದ್ದಿರಬೇಕು |
| ,, | 21 | ಸು. 1550 | ಸು. 1560 |
| 4 | 3 | ಗ್ರಂಥವನ್ನು | ಗ್ರಂಥವನ್ನುಕವಿ |
| 6 | 19 | ಅರಿಸ್ಟ | ಅರಿಷ್ಟ |
| 7 | 24 | ಅಶ್ವಾಸ | ಆಶ್ವಾಸ |
| 8 | 10 | ವರ್ದಮಾನ | ವರ್ಧಮಾನ |
| ,, | 15 | ಕವೀಶ್ವರ | ಕವೀಶ್ವರಂ |
| 15 | 4 | ಅಭಯಚಂದ್ರ | ಅಭಯಚಂದ್ರ |
| 18 | 15 | ನೆಗೞ್ತಿ | ನೆಗೞ್ತೆ |
| 22 | 17 | ಪೊಂಪುೞ' | ಪೊಂಪುೞ' |

33 ಪದ್ಮಪ್ರಭನ ಟೀಕೆಯ ಆದಿಯಲ್ಲಿ ಈ ಪದ್ಯವಿದೆ—

ಶ್ರೀವರ್ಧಮಾನನಾನತ | ದೇವಾಧಿಪ ಮಕುಟಕಿರಣಘಟ್ಟಿತ ಚರಣಂ |
ಕೇವಲಬೋಧವಿಲೋಚನ | ನಾವಿಷ್ಕೃತಸಕಲತತ್ವನೀಗೆಮಗೞ'ವಂ ‖

| ಪುಟ | ಪಙ್ತಿ | ಅಶುದ್ಧ | ಶುದ್ಧ |
|---|---|---|---|
| 35 | 14 | ಪ್ರತೀಕೋದ್ಭವ | ಪ್ರತೀಕೋದ್ಭವ |
| 37 | 20 | ಅಗೞ್ದಿಡಪಿ | ಅಗೞ್ದಿಡಪಿ |
| 42 | 10 | ಪತೇ | ಪತೇ |
| 47 | 21 | ಸಿದ್ಧಾದಿಗಳು | ಸಿದ್ಧಾದಿಗಳು[1] |
| ,, | 25 | ಸಿದ್ಧರು | 1. ಸಿದ್ಧರು |
| 57 | 16 | ಸಲ | ಸ್ಥಲ |
| 58 | 1 | ಚಾಮರಸ | ಚಾಮರಸನ |

| ಪುಟ | ಪಙ್ಕ್ತಿ | ಅಶುದ್ಧಿ | ಶುದ್ಧಿ |
|---|---|---|---|
| 61 | 27 | ಬರೆದಿದಾನೆ | ಬರೆದಿದ್ದಾನೆ |
| 66 | 4 | ದ|ದಗ್ಗಳಿಕೆ | ದ|ಗ್ಗಳಿಕೆ |
| 68 | 6 | ಪಲ್ಲವವವಾಗಿ | ಪಲ್ಲವವಾಗಿ |
| 72 | 3 | 10ı | 101 |
| ,, | 6 | ಎಂದ | ಎಂದು |
| ,, | 20 | ಸಂಶ್ಕೃತಿ | ಸಂಸ್ಕೃತಿ |
| 76 | 11 | ಪೆರಚಿಂ | ಪೆಱರಂ |
| 77. | 15 | ನೋಣ | ನೊಣ |
| 78 | 5 | ಪುಷ್ಪ | ಪುಷ್ಪ |
| 80 | 4 | ದುಱು | ದುರು |

84 ಕಲ್ಯಾಣಕೀರ್ತಿಯ ಜ್ಞಾನಚಂದ್ರಾಭ್ಯುದಯದ ಮತ್ತೊಂದು ಪ್ರತಿಯಲ್ಲಿ ಪದ್ಯಸಂಖ್ಯೆ 2300 ಎಂದಿದೆ.

| ಪುಟ | ಪಙ್ಕ್ತಿ | ಅಶುದ್ಧಿ | ಶುದ್ಧಿ |
|---|---|---|---|
| 85 | 11 | ದಾನೆ | ದ್ದಾನೆ |
| 90 | 20 | ವರೆಗಿ | ವರೆಗೆ। |
| 92 | 17 | ಗ್ರಂಥದನ್ನು | ಗ್ರಂಥವನ್ನು |
| 99 | 25 | ಉಪ್ಪಿನಹಳಿ | ಉಪ್ಪಿನಹಳ್ಳಿ |
| 101 | 10 | ಕಾರುಣ | ಕಾರುಣ್ಯ |
| 102 | 16 | ಪತಿ | ಪ್ರತಿ |
| 103 | 31 | ಸದಕ್ತ | ಸದ್ಭಕ್ತ |
| 105 | 19 | ಸಕಲೇಶಮಾದರಸ | 1ಸಕಲೇಶಮಾದರಸ |
| 107 | 19 | ದಱ'ಯಿತ್ತು | ದಟ'ಯಿತ್ತು |
| 108 | 10 | ನುಂಗಿತೆಂ | ನುಂಗೀತೆಂ |
| 112 | 21 | ದೇ | ದೇಹ |
| 114 | 14 | ಶಿಷ್ಯನಾಗಿದಂತೆ | ಶಿಷ್ಯನಾಗಿದ್ದಂತೆ |
| 117 | 10 | ಸಂಪನ್ನನೆ ! | ಸಂಪನ್ನನೆ ? |

| ಪುಟ | ಪಙ್ತಿ | ಅಶುದ್ಧ | ಶುದ್ಧ |
|---|---|---|---|
| 122 | 2 | ನಾವ | ನಾವು |
| 130 | 3 | ಪೊಜ್ಯಪಾದ | ಪೂಜ್ಯಪಾದ |
| ,, | 20 | ದಿಟ್ಟ | ದಿಟ್ಟಿ |
| ,, | 21 | ಪುಟ್ಟ | ಪುಟ್ಟಿ |
| 131 | 1 | ತೆಱು | ತೆಱ |
| ,, | 15 | ದಳೆದಸೆದು | ದಳೊಸೆದು |
| 132 | 12 | ಮಲ್ಲಿಕಾರ್ಜು | ಮಲ್ಲಿಕಾರ್ಜುನ |
| 134 | 6 | ಪರಮಳಂ | ಪರಿಮಳಂ |
| 136 | 14 | ನತತ | ಸತತ |
| 138 | 14 | ಸ್ಪಷವಾಗಿದೆ | ಸ್ಪಷ್ಟವಾಗಿದೆ |
| 143 | 25 | ನೆಗಱ' | ನೆಗಱ |
| ,, | 21 | ನಳಸ | ನಳನ |
| 151 | 8 | ಅಪ್ಪಕವಿಯು | ಅಪ್ಪಕವಿಯ |

169 ಚೆನ್ನವೀರನು ವೀರಮಾಹೇಶ್ವರತಂತ್ರಕ್ಕೆ ಟೀಕೆಯನ್ನೂ ಬರೆದಿದ್ದಾನೆ (*Indian Antiquary*, V, 183)

| | | | |
|---|---|---|---|
| ,, | 15 | ಶಾಖಾಧ್ಯಾಯ | ಶಾಖಾಧ್ಯಾಯಿ |
| ,, | 21 | ಆಗಿರಬುದು | ಆಗಿರಬಹುದು |
| 174 | 26 | ಬರೆದಿದಾ | ಬರೆದಿದ್ದಾ |
| 176 | 6 | ದೈವನುದಟ | ದೈವಮುಟ್ಟದ |
| 177 | 12 | ವಿದಗ್ದ | ವಿದಗ್ಧ |

178 ಈಚೆಗೆ ದೊರೆತ ಬಿರುದುಗಳುಳ್ಳ ಇನ್ನು ಕೆಲವು ಪದ್ಯಗಳು ಕೆಳಗೆ ಕೊಟ್ಟಿವೆ--

ಚಂದನತಿಲಕ

ಅಕ್ಷರವೆ ತಂದೆತಾಯ್ಗಳು । ಮಕ್ಷರವೇ ಬಂಧುಬಳಗ ಸಮಯದ ಧನಮುಂ ॥
ಅಕ್ಷರವಾತ್ಮಕ್ಕೆ ಹಿತಕರ । ಮಕ್ಷರ ಸಗ್ಗಕ್ಕೆ ಬೀಜ ಚಂದನತಿಲಕಾ ॥

ವರಕವಿಚಂದ್ರ

ಕಣ್ಣಿನ ಬಾಲದ ಡೊಂಕಂ । ಕಾನನದೊಳ್ ಪುನ ಪಳ್ಳಕೊಳ್ಳದ ಡೊಂಕಂ ।

| ಪುಟ | ಪಙ್ಕ್ತಿ | ಅಶುದ್ಧ | ಶುದ್ಧ |
|---|---|---|---|

ವರಾನಿನಿಯು ಮನದ ತೊಂಕಂ | ಭಯಾನ್ತಂ ತಿರ್ದಲುಕುರೆ ನರಕವಿಕಂಠಾ ||
ನೀರೊಳಗೆ ಕಲ್ಲು ಕೊಟಿವೃನೆ | ಊರೆಲ್ಲಂ ಕೂಡಿ ತೊಳೆಸಿ ಮಸಿ ಬೆಳ್ಪಕುನೆ |
ಧಾರಿಣಿಯೊಳ್ ಕಡುಮೂರ್ಖರ | ನಾರಾನುಂ ತಿರ್ದಬಹುದೆ ವರಕವಿಕಂಠಾ ||

ವಾಣೀಮುಕುರ

ಪರಗೃಹವಾಸಂ ಕಷ್ಟಂ | ಸಿರಿವಂತರ ಮನೆಯ ಹೆಣ್ಣ ತರುವುದು ಕಷ್ಟಂ |
ಧರಣಿಪತಿಸೇವೆ ಕಷ್ಟಂ | ಧರೆಯೊಳ್ ಬಡತನಮೆ ಕಷ್ಟ ವಾಣೀಮುಕುರಾ ||

ಸುಕವಿಕರ್ಣಾಭರಣ

ವಿದ್ಯೆಯೆ ಮಾತಾಪಿತರರ್ | ಬುದ್ಧಿಯೆ ನೋವವರು ವಿನಯುವಶನವೆ ನಂಟಂ |
ಅಧ್ಯಾನವಿಲ್ಲದುದೆ ಸುಖ | ವಿದರ್ದೆ ತನ್ನೂರು ಸುಕವಿಕರ್ಣಾಭರಣಾ ||

ಸುಜನಮನೋಜ

ಕುಲವಾವುದು ಸಚ್ಚರಿತಂ | ಚೆಲುವಾವುದು ಸಕಲಕಲೆಯುಪಟ್ಟಿವುದು ಯೋಗದ |
ನೆಲೆಯಾವುದು ಕ್ಷಮೆ ಬದುಕಿದ | ಫಲವಾವುದು ಪರಹಿತಾರ್ಥ ಸುಜನಮನೋಜಾ ||
ಸ್ವೈರಿಸಿ ಕಾರ್ಯವ ಗೆಲುವುದು | ವೈರಿಯ ಮನದಿಚ್ಛೆಯುಟ್ಟಿತು ನಡೆವುದು ಮತ್ತಾ |
ಸ್ವೈರಣೆಯಿಲ್ಲದನಾಗ್ರಹ | ವೈರಿಗೆ ಜಯ ತನಗೆ ಹಾನಿ ಸುಜನಮನೋಜಾ ||
ಮಜ್ಜಿಗೆಯಿಲ್ಲದಿಹೂಟಂ | ಸಜ್ಜನಸತ್ಪಾತ್ರವಟ್ಟಿತು ಮಾಡದ ದಾನಂ |
ಲಜ್ಜೆಗೆಡಿಸುವವನೋಲಗ | ಹಜ್ಜೆಗೆ ಹರಳೊತ್ತಿದಂತೆ ಸುಜನಮನೋಜಾ ||

| | | | |
|---|---|---|---|
| 180 | 28 | ಪಭೇಂದು | ಪ್ರಭೇಂದು |
| 181 | 26-27 | ಪದ್ಯಲ್ಲಿ | ಪದ್ಯದಲ್ಲಿ |
| 182 | 22 | ಪಙ್ಕ್ತಿಗಳು | ಪಙ್ಕ್ತಿಗಳು |
| 183 | 4 | ಊಪೆಟ್ಟಿ | ಮೇಟ್ಟಿ |
| 184 | 20 | ಮಾಟ್ಪಂ | ಮಾಟ್ಪ |
| 185 | 26 | 1538 | 5133 |
| 186 | 5 | ಸ್ಮರಿಸಿ | ಸ್ಮರಿಸಿ |
| 187 | 26 | ರಾವ್ರಳ | ರಾವುಳ, |
| ,, | 28 | ಶಬೆದ್ರ | ತಭದ್ರ |

| ಪುಟ | ಪಙ್ತಿ | ಅಶುದ್ಧ | ಶುದ್ಧ |
|---|---|---|---|
| 190 | 4 | ಗ್ರಂಥಕೆ | ಗ್ರಂಥಕ್ಕೆ |
| 191 | 21 | ಸು. 1513 | 1513 |
| 192 | 2-3 | ಪಂತ | ಪಂಡಿತ |
| ,, | 23 | ಶಕ 145 | ಶಕ 1452 |
| 193 | 8 | 156 | 1526 |
| ,, | 27 | ತರಿದೆಂಟು | ತಱಿದೆಂಟು |
| 194 | 14 | ಉದರಿಸಿ | ಉದ್ಧರಿಸಿ |
| 200 | 10 | 150 | 1520 |
| 201 | 21 | ಬಿರ್ದು | ಬಿಟ್ಟು |
| 203 | 9 | ಜೈನಕಥೆ | ಜೈನಕಥೆ |
| 207 | 26 | 440 | 440I |
| 209 | 18 | ದಾಱ | ದಾಟ |

212 ಸೋಮಶೇಖರಶಿವಯೋಗಿ ( ಪುಟ 527 ) ಕೊಟ್ಟಿರುವ ತೋಂಟದ ಸಿದ್ಧಲಿಂಗನ ಶಿಷ್ಯಪರಂಪರೆಯ ಪ್ರಕಾರ ಮುರಿಗೆಯ ಶಾಂತವಿರನು ಆ ಗುರುವಿನಿಂದ 6 ನೆಯವನಾಗುತ್ತಾನೆ. ಇದು ನಿಜವಾಗಿದ್ದ ಪಕ್ಷದಲ್ಲಿ ಇವನ ಕಾಲವನ್ನು ಸುಮಾರು 30 ವರುಷ ಈಚೆ ಹಾಕಬೇಕಾಗುತ್ತದೆ. ಇವನು ಶಿವಲಿಂಗಮಹಿಮಾಷಟ್ಪದ ಎಂಬ ಗ್ರಂಥವನ್ನೂ ಬರೆದಿರುವಂತೆ ತೋರುತ್ತದೆ. ಇದು ವಾರ್ಧಕಷಟ್ಪದಿಯಲ್ಲಿ ಬರೆದಿದೆ; ಪದ್ಯ 105; ಪ್ರತಿಪದ್ಯವೂ ಶಿವಲಿಂಗೇಶ್ವರ ಎಂದು ಮುಗಿಯುತ್ತದೆ. ಇದರಿಂದ ಒಂದು ಪದ್ಯವನ್ನು ತೆಗೆದು ಬರೆಯುತ್ತೇವೆ—

ಕೊಡು ನಿನ್ನ ಭಕ್ತರಡಿದಾವರೆಯ ಭಕ್ತಿಯನು ।
ಕೊಡು ನಿನ್ನ ಶರಣರೊಳ್ನುಡಿಯಲ್ಲಿ ನಂಬುಗೆಯ ।
ಕೊಡು ನಿನ್ನ ಭಕ್ತರ ಕಥಾಶ್ರವಣವನು ಬಚಿಕ್ಕವರ ಸಂಕೀರ್ತನೆಯನು ॥
ಕೊಡು ನಿನ್ನ ಭಕ್ತರ್ಕಳೊಲುಮೆಯನು ಮನವೊಲ್ದು ।
ಕೊಡು ನಿನ್ನ ಭಕ್ತರ್ಕಳೇ ನಿನ್ನ ರೂಪರೆಂ ।
ದೆಡೆವಿಡದ ಭಾವವನು ಮಿಕ್ಕ ಪದವಿಯನೊಲ್ಲೆ ಜಯತು ಶಿವಲಿಂಗೇಶ್ವರಾ ॥

| ಪುಟ | ಪಙ್ತಿ | ಅಶುದ್ಧ | ಶುದ್ಧ |
|---|---|---|---|
| 213 | 5 | ವಾಖ್ಯಾನ | ವ್ಯಾಖ್ಯಾನ |
| 214 | 12 | ಚೆನ್ನಂಜೆದೇವ | ಚೆನ್ನಂಜಿದೇವ |
| 215 | ಹೆಡ್ಡಿಂಗ್ | ಸಂಪಾದನೆಯು ಚೆನ್ನಂಜಿದೇವ | ಲಿಂಗಮಂತ್ರಿ |
| ,, | 21 | ವಿರೂಪಾಲಿಂಗ | ವಿರುಪಾಲಿಂಗ |
| 218 | 5 | ವಿರೇಶನ | ವೀರೇಶನ |
| 221 | 15 | ಕೆಲಪು | ಕೆಲವು |
| 224 | 14 | ಮಲ್ಲಯುದ | ಮಲ್ಲಯುದ್ಧ |
| 226 | 3 | ಪಙ್ತಿ | ಪಙ್ಕ್ತಿ |
| 234 | 25 | ಕರಸಲದ | ಕರಸ್ಥಲದ |
| ,, | 29 | ಜಾಂಬೂನವಾದಿ | ಜಾಂಬೂನದಾದ್ರಿ |
| ,, | 30 | ಪಾಪ್ತ | ಪ್ರಾಪ್ತ |
| 235 | 2 | ಇವರುಗಳನು | ಇವರುಗಳನ್ನು |
| ,, | 16 | ರನ್ನು | ರನ್ನು2 |
| 238 | 9 | ಕೃಷಚರಿತೆ | ಕೃಷ್ಣಚರಿತೆ |
| 246 | 14 | ಜೀವಣ | ಜೀವಣ |
| 249 | 25 | ಯುದ್ಧದೋಳ್ | ಯುದ್ಧದೊಳ್ |
| 251 | 4 | ನೆಟಿ3 | ನೆಟಿ3 |
| 253 | 8 | ಳನ್ನು | ಳನ್ನು1 |
| 255 | 17 | ಬಾಣೋದಟ | ಬಾಣೋದ್ಭಟ |
| 259 | 11 | ಮದ್ಗೋರಕೋಡ | ಮದ್ಗೊರಕೋಡ |
| 265 | 17 | 127 | 1257 |
| 267 | 20 | ಇವೆ | ಇದೆ |
| 269 | 12 | ಒದೆವ್ದಾನೆ | ಬರೆದಿದ್ದಾನೆ |
| 270 | 1 | ಕರ್ಣಾಮೃತವ | ಕರ್ಣಾಮೃತವು |
| 71 | 18 | ಇದ | ಇದು |

| ಪುಟ | ಪಙ್ಕ್ತಿ | ಅಶುದ್ಧ | ಶುದ್ಧ |
|---|---|---|---|
| 274 | 10 | ಕಿಱಿಸುತ್ತುಂ | ಕಿಱಿ ಸುತ್ತುಂ<br>ಱ |
| 280 | 2 | ಗಿಱಿದು | ಗಿಱಿದು |
| ,, | 15 | ಟಱ್ವ | ಟಱ್ವ |
| 282 | 14 | ಡಿದ್ದಾನ | ಡಿದ್ದಾನೆ |
| ,, | 27 | ನಿರೂಪಿಸಿದಾನೆ | ನಿರೂಪಿಸಿದ್ದಾನೆ |
| ,, | 283ನೆಯ ಪುಟದ ಕೆಳಗಣ 1 ನೆಯ ಟಿಪ್ಪಣವನ್ನು ಈ ಪುಟದ ಬುಡಕ್ಕೆ ತರಬೇಕು. | | |
| 283 | 15 | ವೀರೇಶನವರೆಗೆ | ವೀರೇಶನವರೆಗೆ1 |
| ,, | 24 | ಬಸನ | 1 ಬಸವ |
| 285 | 11 | ಉದರಿಸಿ | ಉದ್ಧರಿಸಿ |
| 286 | 2 | ಟಿಕ್ಕಯುದ | ಟಿಕ್ಕೆಯುದ |
| ,, | 25 | ತುಱುಮುಂದೆ | ತುಱುಮಂದೆ |
| 287 | 11 | ರವಂಱ್ತೆ | ರಱ್ವಂತೆ |
| ,, | 27 | ನರಸಿಂಹಭ | ನರಸಿಂಹಭೂ |
| 292 | 1 | ಕೊಂಡಿದಾನೆ | ಕೊಂಡಿದ್ದಾನೆ |
| 293 | ಹೆಡ್ಡಿಂಗ್ | ಮುರಿಗೆದೇಶಿಕೇಂದ್ರ ಮಹಾಂತಸ್ವಾಮಿ | |

294 ಒಂದು ಪ್ರತಿಯಲ್ಲಿ ಕಂಪಿನಂಜಯ್ಯ ಎಂಬುದಕ್ಕೆ ಪ್ರತಿಯಾಗಿ ಕಪ್ಪಿ ನಂಜದೇವರು ಎಂದಿದೆ. ಇವನ ನಾಂದ್ಯದಿಂದ ಒಂದು ಪದ್ಯವನ್ನು ತೆಗೆದು ಬರೆಯುತ್ತೇವೆ—

ನೆಲದೇರನಮಾಡಿ ಜಗದಿಟ್ಟಮಿಗಲಚ್ಚುಣರ |
ಬಲುಗಾಲಿಗಳನೆಸಗಿ ನಿಗಮಾರ್ವಮಂ ಪೂಡಿ |
ಮಲರಿಜನ ಸಾರಥಿಯುಮಾಡಿ ಪೊಂಬೆಟ್ಟುವಿಲ್ಲೊಳ್ ಕಟ್ಟಿ ಪಾವುನೆದೆಯುಂ ‖
ನಳಿನಾಕ್ಷಶರಕೆ ಪಣೆಯಗ್ಗಿಯಲಗಂ ಮಾಡಿ |
ಗೆಲವಿನಿಂ ಬಾಂಬೊಟ್ಟಿಲನುರುಪಿ ಬರ್ದಿಲರ ಪೊರೆದ |
ಸುಲಭ ಮದ್ಗುರು ಶಾಂತವೀರೇಶನೀಗೆಮಗೆ ಸಲೆ ಸತ್ಯ ಮುಕ್ತಿಸುಖಮಂ ‖

| | | | |
|---|---|---|---|
| 295 | 9 | ಕಱ್ರನೆ | ಕಱನೆ<br>ಱ |

| ಪುಟ | ಪಙ್ಕ್ತಿ | ಅಶುದ್ಧ | ಶುದ್ಧ |
|---|---|---|---|
| 295 | 24 | ತಿವಿಧಿ | ತ್ರಿವಿಧಿ |
| 297 | 3 | 000 | 1000 |
| ,, | 8 | ಷಟ್ಸಲಕ್ರವ | ಷಟ್ಸ್ಥಲಕ್ರಮ |
| 298 | 24 | 530 | 1530 |
| ,, | ,, | 565 | 1565 |
| 301 | 4 | ಬಾಲಚಂದ್ರಪೂರ | ಬಾಲಚಂದ್ರಪುರಾ |
| 302 | 20 | ನಿಂತುಪೆ | ನಿಂತುಪೇ |
| 303 | 27 | ಅಟಿ'ಯಡ | ಅಱಿ'ಯಡ |
| 304 | 29 | ದರಿಸಿದ | ಧರಿಸಿದ |
| 306 | 20 | ನಿಧಿಯಱುವಂತೆ | ನಿಧಿಯಟುವಂತೆ |
| 307 | 17 | ಕದಪು | ಕದಪ |
| 308 | 13 | ಮಳೆಯ | ಮಳಯ |
| ,, | 15 | ಪಾಲ್ಕುರಿಕೆ | ಪಾಲ್ಕುಱಿ'ಕೆ |
| ,, | 17 | ಕೃತಿವೇಜಿ್ವನು | ಕೃತಿವೇಱ್ವನು |
| 309 | 5 | ಕೆಳದೇ | ಕೇಳದೇ |
| ,, | 8 | ಎಂದೂ ಎಂಬುದು ಪಙ್ಕ್ತಿಯಕೊನೆಯಲ್ಲಿ ಬೇಕು | |

313 ಇಮ್ಮಡಿ ಮುರಿಗೆಯಸ್ವಾಮಿ. ಈತನ ಹೆಸರು ಗುರುಸಿದ್ಧ. ಇವನು ಮುರಿಗೆಯ ಶಾಂತವೀರನ (ಪುಟ 212) ಶಿಷ್ಯನು. ಇವನ ನಾಂದ್ಯದ ಒಂದು ಪ್ರತಿಯಲ್ಲಿ 35 ಪದ್ಯಗಳಿವೆ. ಇವುಗಳಲ್ಲಿ ಕೆಲವು ಶಿವಲಿಂಗ ಎಂದು ಮುಗಿಯುತ್ತವೆ, ಈತನು ಹಾಲಾಸ್ಯಪುರಾಣ ಎಂಬ ಚಂಪೂಗ್ರಂಥವನ್ನೂ ದೇವೀಸ್ತೋತ್ರವನ್ನೂ ಬರೆದಿದ್ದಾನೆ. ಹಾಲಾಸ್ಯಪುರಾಣವು ದೊಡ್ಡಗ್ರಂಥವೆಂದು ತೋರುತ್ತದೆ. ಇದರ ನಾಂದೀಪದ್ಯಗಳು ಮಾತ್ರ ನಮಗೆ ದೊರೆತಿವೆ. ಇವುಗಳಲ್ಲಿ ಕೆಲವು ಶಿವಲಿಂಗಸ್ತುತಿರೂಪವಾಗಿಯೂ ಕೆಲವು ಸುಂದರೇಶಸ್ತುತಿರೂಪವಾಗಿಯೂ ಇವೆ. ಇವುಗಳನ್ನು ನೋಡಿಯೇ ಷಡಕ್ಷರದೇವನು (ಪುಟ 442) ತನ್ನ ನಾಂದೀಪದ್ಯಗಳನ್ನು ರಚಿಸಿರುವಂತೆ ತೋರುತ್ತದೆ. ಇವುಗಳಲ್ಲಿ ಕೆಲವನ್ನು ಉದಾಹರಿಸುತ್ತೇವೆ.—

ಶ್ರೀಮತ್ಕಲ್ಯಾಣೇಶನ | ನಾಮಯನನುಪಮನಮೇಯನನಗಣಿತಮಹಿಮಂ |
ಕಾಮಾರಿ ದಿವಿಜಸನ್ನುತ | ನಾಮಂ ಪೊರೆಗೆಮ್ಮನೂರ್ಜಿತಂ ಶಿವಲಿಂಗಂ ||
ಶ್ರೀಮತ್ಸುಧಾಮಯೂಖಸು | ಧಾಮಂಜುಲಕುಂದಮಾಲ್ಯಭೂಷಿತಮಕುಟಂ |
ಹೈಮಗಿರಿನಂದನಾಪತಿ | ಸಾಮದೆ ರಕ್ಷಿಕ್ಕೆ ಸರ್ವರಂ ಶಿವಲಿಂಗಂ ||
ಶ್ರೀಮದ್ಗೌರೀಕಬರೀ | ಸೌಮೋನ್ಮಕರಂದಸಿಕ್ತಭುಜನಜನಜರಂ |
ಸೋಮೋತ್ತಂಸಂ ಪಾಲಿಕೆ | ಶ್ಯಾಮಗ್ರೀವಂ ಪುರಾರಿ ಪರಶಿವಲಿಂಗಂ ||
ಮುನಿಗಳ್ಗೆಂದುಸಿರಿಂದೆ ವೇದಚಯಮಂ ಪೆತ್ತಲ್ಕಱಿಂ ಬೋಧಿಸು |
ತ್ತನುವಾಗಲ್ ಜಗದೊಳ್ ಸುಕರ್ಮಮುಮನಾತ್ಮಜ್ಞಾನಮಂ ತೋಱಿವೇ ||
ಲ್ದನಿಮಿತ್ತಂ ನುತಬಂಧುವೆಂಪೆನಿಸಿನಾನಂದಾತ್ಮಕಂ ಸುಂದರಂ |
ಮನಮೊಲ್ದೀಗೆಮಗುಜ್ವಳಶ್ರುತಿಶಿರೋಸ್ಯಸ್ವಾರ್ಥಮಂ ಸ್ವಾರ್ಥಮಂ ||
ಪೆಱೆಯಂ ಸೂಡಿದ ಪೆಣ್ಣನೊಳ್ಕೊಣಲೊಳಂ ತಾಳ್ದೊಪ್ಪದಿಂದಿರ್ಪ ಬಾಂ |
ದೊಱೆಯುಂ ಮಂಡೆಯೊಳಿಟ್ಟ ಮುಪ್ಪೊಱಲನಾಬೆಂಗಣ್ಗೆ ಕೊಟ್ಟಱೆಱ್ಕಂ ||
ಕಱೆಯಂ ಗೋಣೊಳಮರ್ಚಿ ನಾಡನಿರದಾಗಳ್ ಕಾದ ಸಬ್ಬೇಸರಂ |
ನೆಱೆ ಬೇಱ್ಪಿಟ್ಟಮನೀಗೆ ತಾಂ ಮಱುಕದಿಂ ಚೊಕ್ಕೇಶನೀಭೂಮಿಯೋಳ್ ||

ಇವನ ದೇವೀಸ್ತೋತ್ರವು ನಾನಾವೃತ್ತಗಳಲ್ಲಿ ಬರೆದಿದೆ; ಪದ್ಯ 65. ಇವು ಹಾಲಾಸ್ಯಪುರಾಣದ ಆಶ್ವಾಸಾಂತ್ಯಪದ್ಯಗಳಾಗಿರಬಹುದು. ಈ ಯಂಶದಲ್ಲಿಯೂ ಷಡಕ್ಷರದೇವನು ಈ ಕವಿಯನ್ನು ಅನುಸರಿಸಿರುವಂತೆ ತೋರುತ್ತದೆ. ಒಂದು ಪದ್ಯವನ್ನು ಉದಾಹರಿಸುತ್ತೇವೆ —

ಜಯ ದೇವಿ ಜಗತ್ತ್ರಿತಿಮಾತೆ ನುತೇ | ಹಯವಾಹನಮಿತ್ರಶರೀರಯುತೇ |
ನಯವಾಣಿ ಮಹಾಫಣಿವೇಣಿ ಗುಣಾ | ಲಯೆ ರಕ್ಷಿಪುದೆಮ್ಮನಮಾಯೆ ಶಿವೇ ||

| | | | |
|---|---|---|---|
| 313 | 24 | ಈತನ | ಈತನು |
| 314 | 8 | ಪಂಡಿತಾರಾಧ | ಪಂಡಿತಾರಾಧ್ಯ |
| 315 | 3 | ಪಡೆದಿದ್ದನು | ಪಡೆದಿದ್ದನು |
| 316 | 22 | ತಾ \| | \| ತಾ |
| 321 | 17 | ಪುಷ್ಟವಾಗಿ | ಪುಷ್ಟಮಾಗಿ |
| 322 | 17 | ಹೇಳ | ಹೇಳು |
| 324 | 15 | ಸಿದ | ಸಿದ್ಧ |

| ಪುಟ | ಪಙ್ಕ್ತಿ | ಅಶುದ್ಧ | ಶುದ್ಧ |
|---|---|---|---|
| 325 | 16 | ಪೀಂ | ಪೀ |
| ,, | 17 | ಮಾಯಿ | ಮಾಯಿ |
| 326 | 10 | ವೈಷವ | ವೈಷ್ಣವ |
| 332 | 18 | ಲಕ್ಷ್ಮೀಸೆನ | ಲಕ್ಷ್ಮೀಸೇನ |
| 339 | 1 | ಪೆರರುಕ್ತಿ | ಪೆಱರುಕ್ತಿ |
| 341 | 26 | ಪತಿಯುನು | ಪತಿಯನ್ನು |
| 342 | 16 | ಧಾರಣೆ | ಧಾರಿಣೆ |
| 347 | 21 | ಸಪ್ಪಿಂಟಿ | ಸಪ್ಪಿಜಿಂ |
| 349 | 27 | ರಸ | ರಸ್ನ |
| 356 | 13 | ಪೇ | ಪೇಜಿ |

,, 1634 ರಲ್ಲಿ ಬರೆದ ಶ್ರವಣಬೆಳುಗೊಳದ 84 ನೆಯ ಶಾಸನದಲ್ಲಿ ಪಂಚಬಾಣಕವಿಯ ಮಗ ಬೊಮ್ಮಿಯಪ್ಪನು ಆ ಕಾಲದಲ್ಲಿದ್ದಂತೆ ಹೇಳುವುದರಿಂದ ಪಂಚಬಾಣಕವಿ ಈ ವರ್ಷಕ್ಕೆ ಸ್ವಲ್ಪ ಹಿಂದೆ ಇದ್ದಿರಬೇಕು. ಈ ವಿಷಯವು ನಾವು ಕೊಟ್ಟಿರುವ ಕಾಲವನ್ನು ದೃಢಪಡಿಸುತ್ತದೆ.

| ಪುಟ | ಪಙ್ಕ್ತಿ | ಅಶುದ್ಧ | ಶುದ್ಧ |
|---|---|---|---|
| 357 | 13 | ಪವಾವತಿ | ಪದ್ಮಾವತಿ |
| 360 | 17 | ಪಿದ್ವಜ್ಜನ | ಪಿದ್ವಜ್ಜನ |
| 361 | 12 | ನಾಯಕ | ನಾಯಕ |

,, ನಮಗೆ ದೊರೆತ ಶಂಕರದೇವರ ಕಂದದ ಒಂದು ಪ್ರತಿಯಲ್ಲಿ ಗ್ರಂಥಕ್ಕೆ ಇಷ್ಟಲಿಂಗ ಸ್ತೋತ್ರ ಎಂಬ ಹೆಸರು ಉಕ್ತವಾಗಿರುವುದಲ್ಲದೆ ಶಂಕರದೇವರು ನಿರೂಪಿಸಿದುದು ಎಂದು ವ್ಯಕ್ತವಾಗಿ ಹೇಳಿದೆ.

| ಪುಟ | ಪಙ್ಕ್ತಿ | ಅಶುದ್ಧ | ಶುದ್ಧ |
|---|---|---|---|
| 365 | 23 | ದೃಗವ | ದೃಗಪ. |
| 366 | 1 | ಸಿದಾರ್ಥ | ಸಿದ್ಧಾರ್ಥ |
| 367 | 4 | 1623 | ಸು. 1623 |
| ,, | 10 | (1623) | (ಸು. 1623) |
| 374 | | ಲಕ್ಷ್ಮೀಕಾಂತ | ಲಕ್ಷ್ಮೀಕಾಂತ |
| 378 | | ಚಾರಿತ್ರ | ಚಾರಿತ್ರ |

| ಪುಟ | ಪಙ್ಕ್ತಿ | ಅಶುದ್ಧ | ಶುದ್ಧ |
|---|---|---|---|
| 379 | 18 | ಸ. 1650 | ಸು. 1650 |
| 380 | 7 | ದಲ್ಲಿಯ | ದಲ್ಲಿಯು |
| 384 | 3 | ವಿರತ | ವಿರತಿ |
| ,, | 26 | ಕರುಚಿ | ಕರರುಚಿ |
| 385 | 8 | ಒರೆವೆ | ಒರೆವೆ |
| 390 | 16 | ವಿಡಿಮೊಪ್ಪುವ | ವಿಡಿಮೊಪ್ಪುವ |
| ,, | 22-23 | ಸಿದಾಂತ | ಸಿದ್ಧಾಂತ |
| 391 | 13 | ಬಾನು | ಭಾನು |
| 394 | 15 | ಬೇಡ | ಬೇಡ |
| 395 | 11 | ಉತ್ಕೃಷ | ಉತ್ಕೃಷ್ಟ |
| 398 | 12 | ಪಾಲಿಪ್ಪುದು | ಪಾಲಿಪ್ಪುದು, |
| ,, | 21 | ಯೋಜಿ | ಯೋಜಿ |
| ,, | 23 | ಬೆಂಚಿ | ಬೇಂಚಿ |
| 400 | 12 | ಸೀಸ | ಸೀಸು |
| ,, | 22 | ಸ್ಮರಿಸಿದಾನೆ | ಸ್ಮರಿಸಿದ್ದಾನೆ |
| 411 | 23 | ದಾಸ | ದಾಸ' |
| 412 | 5 | ಒರೆ ಯುತ್ತೇನೆ | ಒರೆಯುತ್ತೇನೆ |
| ,, | 23 | ವಂದಿಸುವೆ | ವಂದಿಸುವೆ |
| 416 | 12 | 65 | 1650 |
| 424 | 11 | ಗಂಡನೆ | ಗಂಡನೆ |
| 428 | 11 | 650 | 1650 |
| 429 | 10,14 | ಷಟ್ಸಲ | ಷಟ್ಸ್ಥಲ |
| ,, | 21,25 | 65 | 1650 |
| 430 | 9 | 650 | 1650 |
| 431 | 3 | ಪೊಸವನ | ಪೊಸವನ |
| 439 | | ಸಿದಾದಿಗಳು | ಸಿದ್ಧಾದಿಗಳು |

| ಪುಟ | ಪಙ್ಕ್ತಿ | ಅಶುದ್ಧ | ಶುದ್ಧ |
|---|---|---|---|
| 441 | 1 | ಷಟ್ಕದೀಕ್ಷಿತ | ಷಟ್ಸ್ಥಲದೀಕ್ಷಿತ |
| 442 | 3 | ದಂಡಕವನಸೂ | ದಂಡಕವನನ್ನೂ |
| ,, | 5 | ಸಳ | ಸ್ಥಳ |
| | 8 | ರೇವಣಸಿದ | ರೇವಣಸಿದ್ಧ |
| 444 | 15 | ಹೊಗಳಿದಾನೆ | ಹೊಗಳಿದ್ದಾನೆ |
| 447 | 27 | ಲೋಕದೊೞ್ | ಲೋಕದೊೞ್ |
| 448 | 18 19 | ಆಶಾಸ | ಆಶ್ವಾಸ |
| ,, | 26 | ಮನವಾಱಿ | ಮನವಾಜಿ |
| 455 | 3 | ಪೆಳಿದ | ಪೇಳಿದ |
| 456 | 7 | ಉಥ್ಗ್ರಂಥ | ಉದ್ಗ್ರಂಥ |
| 458 | 16 | 1 ಚಿಕದೇವರಾಜ | ಚಿಕದೇವರಾಜ |
| 459 | 7 | ನಾದುಪಱಿಂ | ನಾದುದಱಿಂ |
| 461 | 2 | ವ ಱಿವನು | ಮಱಿವನು |
| 463 | 1 | ಸುಱಿದು | ಸುಱಿದು |
| 465 | 21 | ಮಂಡಲೇಶ್ವರ್ವ | ಮಂಡಲೇಶ್ವರತ್ವ |
| ,, | 23 | ಭಾಗಿಸ್ಪಟ್ಟಿದೆ | ಭಾಗಿಸಲ್ಪಟ್ಟಿದೆ |
| 470 | 11 | ವಶು | ವಶ |
| 473 | 21-22 | ಯುವರ್ಗ॥ಕಾ | ಯುವರ್ಗಳಕ\|ಕ್ಕಾ |
| ,, | 22 | ಕಾಯೆಮ್ಮಂಳಕ\| | ಕಾಯೆಮ್ಮಂ\|\| |
| ,, | 23 | ಹಸ್ತಿಗಿರಿಯ | 2 ಹಸ್ತಿಗಿರಿ |
| 475 | 23 | ಪ್ರಹಾ | ಪ್ರಹ್ಲಾ |
| 476 | 11 | ಸಂಮ್ಮೇಳ | ಸಮ್ಮೇಳ |
| 478 | 25 | ನಚದ | ಚಂದನ |
| 482 | 27 | ಗೋಟಿಮುಯ | ಗೋಟಿಯುಮ |
| ,, | ,, | ಆದರ್ಶೆ | ಆದರೆ |
| ,, | 28 | ಚಾರ್ಯನನು | ಚಾರ್ಯನನ್ನು |

| ಪುಟ | ಪಙ್ತ್ತಿ | ಅಶುದ್ಧ | ಶುದ್ಧ |
|---|---|---|---|
| 494 | 10 | ಕೊಂಡನು | ಕೊಂಡನು |
| 496 | 28 | ವೃತ | ವೃತ್ತ |
| 501 | ಹೆಡ್ಡಿಂಗ್ | ಮಾನ | ಶತಮಾನ |
| 503 | 8 | ಇವನ | ಇವನು |
| 507 | 9 | ಕವಿಯು | ಕವಿಯೂ1 |
| 508 | 8 | ವೋದದಿಂ | ಮೋದದಿಂ1 |
| 509 | ಚಿದಾನಂದಕವಿಯ ಮುನಿವಂಶಾಭ್ಯುದಯ; ಸಂಧಿ 16, ಪದ್ಯ 2530. | | |
| 516 | 23 | ವೈಷ್ವ | ವೈಷ್ಣವ |
| 517 | 24 | ಪೂರ್ವಕ | ಪೂರ್ವಕವಿ |
| 522 | 18 | ವೈಷವ | ವೈಷ್ಣವ |
| ,, | 20 | ಲಕ್ಷೀ | ಲಕ್ಷ್ಮೀ |
| 526 | 20 | 15ನೆಯ | 17ನೆಯ |
| 529 | 18 | ಮಜ್ಜವನು | ಮಜ್ಜನವನು |
| 530 | 15 | ಇದಿಂದ | ಇದರಿಂದ |
| ,, | ,, | ಸ್ತುತಿಇ | ಸ್ತುತಿ |
| ,, | 21 | ಮರುಳುಸಿದ | ಮರುಳುಸಿದ್ಧ |
| ,, | 29 | ಗ್ರಂಥಗಳಿಂ | ಗ್ರಂಥಗಳಿಂದ |
| 532 | 23 | ಅಪರ್ವತ | ಪರ್ವತ |
| 534 | 8 | ಸರ್ವಜ್ಞ | ಸರ್ವಜ್ಞ (ಎಲ್ಲಾ ಕಡೆಯೂ) |
| 536 | 24 | 1700 ಲ್ಲಿರ | 1700 ರಲ್ಲಿ |
| 537 | 24 | ಕೊಳಗುಳ | ಕೊಳುಗುಳ |
| 540 | 18 | ಪದ್ಯಗಳನು | ಪದ್ಯಗಳನ್ನು |
| 542 | 23 | ಇದ | ಇದು |
| 543 | 19 | ಸಿದಾಂತಾರ್ಣ | ಸಿದ್ಧಾಂತಾರ್ಣ |
| 553 | 23 | ಶಿಷ್ಯನಪ | ಶಿಷ್ಯನಪ್ಪ |

| ಪುಟ | ಪಙ್ತಿ | ಅಶುದ್ಧ | ಶುದ್ಧ |
|---|---|---|---|
| 554 | 1 | ಅದ್ವೈವ | ಅದ್ವೈತ |
| ,, | 11 | ವೆಂಕಟ | ವೆಂಕಟ, |
| ,, | 21 | ತವನು | ಇವನು |
| ,, | 22 | ಇನ್ನನ್ನು | ತನ್ನನ್ನು |
| 555 | 7 | ಸಳ | ಸ್ಥಳ |
| ,, | 16 | ಸೇರಿಸಿದಾನೆ | ಸೇರಿಸಿದ್ದಾನೆ |
| 557 | 24 | ಸುಮಾರ | ಸುಮಾರು |
| 560 | 23 | ಕೃಗಾರ | ಕರಣ |
| 564 | 11 | ಜ್ಞಾನಚಂದ | ಜ್ಞಾನಚಂದ್ರ |
| 565 | 1 | ಸು. 1659 | 1659 |
| ,, | 8 | ವ್ಯಕ್ತಿ | ಸವ್ಯಕ್ತಿ |
| 567 | 7 | ಕ\| ಏನ | ಕಾ\|ಏನ |
| 569 | 8 | ಪೆಟಿರಂ | ಪೆಟ್ಟಿರಂ |
| 571 | 24 | ಸ್ಮರಸಿ | ಸ್ಮರಿಸಿ |
| 576 | 12 | ಕೊಟ್ಟಿಱಿಱ್ದಂ | ಕೊಟ್ಟಿಕ್ಕಱಂ |

# Appendix III

# ಪರಿಶಿಷ್ಟ III

## ಈಚೆಗೆ ತಿಳಿದುಬಂದ ಒಬ್ಬ ಪುರಾತನಕವಿಯ ವಿಷಯ.

### ಕವಿರಾಜರಾಜ 930

---

ಈತನು ದಾರವಾಡಜಿಲ್ಲೆಯ ಬಂಕಾಪುರತಾಲ್ಲೂಕಿನ ಕಳಸದಲ್ಲಿರುವ ಒಂದು ಶಾಸನವನ್ನು ಬರೆದುದಾಗಿ ಆ ಶಾಸನದ ಕೊನೆಯಲ್ಲಿರುವ

ಕವಿರಾಜರಾಜವಿಭುಧ | ಪ್ರವರಂ ಶ್ರೀಕಾಡಿಯೂರನಲ್ಲಿಯ ಕಮಲೋ |
ದ್ಭವವಂಶಪ್ರೋಕ್ತ್ರವರಂ | ನವೀನವರ್ಣನೆಯಿನೆಸೆಯುಲಭಿವರ್ಣಿಸಿದಂ ||

ಎಂಬ ಪದ್ಯದಿಂದ ತಿಳಿಯುತ್ತದೆ[1]. ಈ ಶಾಸನವು ರಾಷ್ಟ್ರಕೂಟ ರಾಜನಾದ ಗೊಜ್ಜಿಗದೇವ ಅಥವಾ 4ನೆಯ ಗೋವಿಂದ ಎಂಬವನ (918-933) ಆಳಿಕೆಯಲ್ಲಿ ಬರೆದುದು. ಇದರಲ್ಲಿ ರೇವದಾಸದೀಕ್ಷಿತ, ವೀಸೋತ್ತರದೀಕ್ಷಿತ ಎಂಬ ಇಬ್ಬರು ದಂಡನಾಯಕರಿಗೆ ದೊರೆ ಎರೆಯುನಕಾಡಿಯೂರೆಂಬ ಗ್ರಾಮವನ್ನು ಸರ್ವನಮಸ್ಯವಾಗಿ ಶಕ 851ನೆಯ ವಿಕೃತಸಂವತ್ಸರದಲ್ಲಿ, ಎಂದರೆ 930 ರಲ್ಲಿ, ಕೊಟ್ಟಂತೆ ಹೇಳಿದೆ. ಈ ಶಾಸನದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ—

ಗೊಜ್ಜಿಗದೇವ

ನಗರಾಜಂ ಧೈರ್ಯದೊಳ್ದೇವಿಟ್ಗೆಯುನವನಿತಳಂ ಕ್ಷಾಂತಿಯೊಳ್ದುರ್ವನಂಭೋ |
ಧಿ ಗಭೀರೋದಾತ್ತನಿಯೊಳ್ದುನ್ನತಿಯನೆಸೆವಿನಂ ತಾಳ್ದಿದತ್ತೊಳ್ಪಿನಿಂ ಗೊ ||
ಜ್ಜಿಗದೇವಂ ಕೊಟ್ಟೊಡೆಂದುತ್ತಮವಿಬುಧಜನಂ ತಮ್ಮದೊಂದಟ್ಟಿಯಿಂದಂ |
ಪೊಗಳಲ್ ಬಾಪ್ಪುಪ್ಪುಕೆಯ್ದಂ ನೃಪಗುಣಗಣಮುಂ ರಟ್ಟಕಂದರ್ಪದೇವಂ ||

---

1. *Epigraphia Indica*, XIII. 327

ಬೆಸೆದೊಡೊಸೆದೊಡೆ ಕೊಳಲ್ ರ । ಕ್ಷಿಸಲ್ಬಂಕಕಕಾಜನಬ್ಜಸಂಭವನೆನಲೀ ।
ವಸುಧಾತಳದೊಳ್ ಕೋಪ । ಪ್ರಸಾದಮಂ ಪೊಗೞಲಾಪರಾರ್ ಗೊಜ್ಜಿಗನಾ ॥

## ಎರೆಯನಕಾಡಿಯೂರು

ತುಱುಗಿ ಕವಲ್ತು ಕತ್ತರಿಪ ಜೊಕಕುಬಂಗಳೊಳೊಂದಿ ಕಂಪಿನೊಳ್ ।
ನೆಱೆದು ರಸಂಗಳಂ ತಳೆದ ಪಣ್ಗೊಲೆಯುಂ ಗಿಳಿವಿಂಡು ಜುಂಜುವಿಂ ॥
ದಿಱಿದೊಡೆ ಸೋರ್ವ ಸೋನೆಯೊಳೆ ದಾಂಗುಡಿಯಿಂದೆಸೆದಿರ್ಪ ವೃಕ್ಷನಿಂ ।
ದೆಱೆಯನಕಾಡಿಯೂರ ಲತೆವಳ್ಳಿಯುಮಲ್ಲಿಯ ನಾಗವಳ್ಳಿಯುಂ ॥
ಪೊಱಪೊಱಲೊಳ್ ಪೊದಲ್ದು ವನಸಂದನಬೃಂದದಿನೊಳ್ಪನಾಳ್ದ ಪೆ ।
ಗೆಱೆಗಳಿನೊಲ್ದು ಗಾವರಿಸುತಿರ್ಪ ಮದಾಳಿಯಿನೆಯ್ದೆ ಪೂವ ಕಿ ॥
ಕ್ಕಿಱಿ ಸಿಮಿರ್ದಿರ್ದ ಪಾದರಿಯಿನೂದುವ ಕೆಂಬಲರಿಂ ಬೆಡಂಗುವೆ ।
ತ್ತೆಱೆಯನಕಾಡಿಯೂರ್ ಒಯಸಿ ನೋಟ್ಪರ ಕಣ್ಗೆಸೆದೊಪ್ಪಿ ತೋಱುಗುಂ ॥

## Extracts from
## Opinions of Scholars and the Press
## On Volume I of the Karnataka Kavicharite or
## Lives of Kannada Poets.

The work on Kannada literature which is being published by my Assistant Mr. R. Narasimhachar, M. A. is the only one of the kind and of the greatest value for the history of the language. It may be accepted as a standard authority and is well deserving of the utmost patronage and encouragement of the Governments of those countries in which the Kannada language prevails, as well as of the Universities of Madras, and Bombay.—*Mr. B. Lewis Rice, C. I. E.*

I have read your introduction and looked into some pages of the book itself, with great interest; and I can sincerely congratulate you and your ollaborateur Mr. S. G. Narasimhachar on the value of the work that you have turned out.—*Dr. J. F, Fleet, C. I. E.*

I must congratulate you on the completion of what must have been a very heavy task, not without its own delight and reward.—*Rev. E. W. Thompson, M. A.*

I am so glad to be able to congratulate you and your fellow-worker, Mr. S. G. Narasimhacharyar, on this excellant addition you have succeeded in making to Kanarese literature. It is clear in almost every page of the book that it must have cost you both enormous labour and thought in producing it. Only those, that have done work of the kind with old manuscripts and unpublished material, can know how trying it must have been to collect the matter, to arrange it well, and to give it the chronological consistency you have so well succeeded in doing,—*Professor M. Rangacharya, M. A.*

It is a most useful publication and must have involved immense labour, reading and research. Unless the Government set apart some money for bonuses for such work, I fear that very few would undertake such labour as you have done.—*Mr. M. Shama Rao, M. A.*

There are few persons who take to archeological and historical research. This defect they have nobly supplied by this epoch-making work. They have really done yeoman's service to the Kannadigas and Kannada literature by supplying them with a long-felt want. The illustrative poetical passages have been skilfully selected. Several wrong notions have been corrected.—*M. R. H. Desapande, M. A.*

I have read your *Kavicharite* more than three times and the more I read the greater is my admiration for it. Surely that one book, even if there were nothing else, is enough to give you undying fame.—*Mr. B. Rama Rao, M. A., L. L. B.*

The issue of this book, as the first volume of a series, the title of which means "Lives of Kannada or Kanarese Poets," inaugurates a scheme for exhibiting the history of Kanarese literature from the earliest time to which it can be traced back. Some studies in this line of research have been given to us by the Rev. F. Kittel and by Mr. Rice. The present writers, however, aim at a much more exhaustive treatment, and, basing their work on various important collections of manuscripts and also on the inscriptions of Southern India as far as they have been exploited, they have made an excellent start: they have brought the matter in detail down to the end of the fourteenth century A. D.

In compiling the present volume, they have succeeded in tracing out and bringing to light a variety of authors and works not previously known. In addition to that, and to the inclusion of many new facts about such writers and works as were already known, they claim to have established the following points. Mr. R. Narasimhachar had already, in the in-

troduction to his edition of the *Kavyavalokana*, published in 1903, brought out clearly the fact that there were two writers named Nagavarma; one belonging to the close of the tenth century, the other to a period about a hundred and fifty years later. The authors now show that there were also two Gunavarmas and two Mangarasas. They have adduced evidence that the literary activity among the Vira-Saivas or Lingayets began in the middle of the twelfth century, at an appreceably earlier time than had previously been supposed. And they have shown that the poet Rudrabhatta, who was previously referred to the sixteenth century, flourished four centuries sooner. We hope that future researches by them may result in the discovery of works dating from before the time to which belongs the earliest Kanarese literary production that is at present known.—*Indian Antiquary.*

The publication of the "Lives of Kannada Poets" is an event in the history of Oriental re-search in India. Its authors are to be congratulated on the work they have produced. Its importance is manifest when we remember that so far there has not been available to the literary public a proper guide to Kannada literature. There has thus been for a considerable time past a real necessity for a scientifically written history of Kannada Literature, and the Messrs Narasimhachar have laid Oriental students and scholars under an obligation by the publication of the work they have now put forward. Though the account before us runs to nearly 400 pages, we are only at the end of the 14th century after Christ. The poets are taken in chronological order, the only intelligible order in a work of this sort. It is apparent on the face of it that the authors have not had an easy task. Chronology is an idea foreign to earlier poets; nor are they much interested in adding details about their lives. They were so far impersonal that they have lost themselves in their works. Hence the lives and times of these have had to be determined mainly from a close and painstaking study of inscriptions,

genealogies of kings, succession lists of *gurus*, numerous works on history and a large number of published and unpublished works in Kannada. The authors have not only included many facts not known before, but have endeavoured to remove previous misconceptions about several authors and works, *Madras Mail.*

On the retirement of Mr. Lewis Rice the State was fortunate in securing the services of a local scholar of great ability and profound erudition, whose history of Kanarese Literature, recently published is a monument of research and a mine of information. If a similar work had been written on classical authors, it would have made a world-wide reputation.—*Indian Spectator.*

Messrs. R. Narasimhachar, M. A. and S G Narasimhachar have published the first volume of their Lives of Kannada Poets, over which they were known to have been spending years of patient labour and research. We must congratulate these great scholars on the valuable work they have brought out and as far as we are aware, this is a work of original research, which marks a new era in the literary history of modern Kannada. The publication of the Lives of Kannada Poets is so refreshing that we are sure that genuine lovers of the Kannada language and literature will receive it with great exultation. The present volume deals with about 200 Kannada peots and poetesses who flourished till about the 14th century. As the authors have explained in their preface, the task of collecting facts about the lives of even famous poets is very great as the poets themselves have carefully eluded leaving any trace of their life except their works. The book is written in the form of the histories of English literature in a chronological order with the age and account of the poets and poetesses as far as ascertained, together with the list of their works and specimens of their thought and style. There is no doubt that a labour so vast as this extending over a period of 10 or 15 years has been one of pure love of literature and there could be no suitable recompense for his work except in the grat

itude of the Kannada people and their appreciation of the monumental results of the two celebrated Kannada scholars of the age.

There are many interesting and startling facts unearthed concerning the extent and uses of the Kannada authorship and literature which greatly interest students of literature.—

*Mysore Standard.*

---

"ಕರ್ಣಾಟಕ ಕವಿಚರಿತೆ" ಎಂಬ ಒಂದು ಪುಸ್ತಕವನ್ನು ಗ್ರಂಥಕರ್ತರಾದ ಮ|| ರಾ|| ಆರ್. ನರಸಿಂಹಾಚಾರ್ ಎಂ. ಎ. ಅವರು ನಮಗೆ ಕಳುಹಿಸಿಕೊಟ್ಟಿರುವದಕ್ಕೆ ವಂದಿಸುತ್ತೇವೆ. ಇದು ಕರ್ಣಾಟಕದೇಶದಲ್ಲಿ ಆದಿಯಿಂದಲೂ ಇದ್ದ ಕವಿಗಳ ಚರಿತ್ರೆಯನ್ನೂ ಅವರ ಬರವಣಿಗೆಯ ಕ್ರಮವನ್ನೂ ತೋರಿಸುವ ಪುಸ್ತಕವಾಗಿರುವದು. ಇಂಥ ಉಪಯೋಗವಾದ ಪುಸ್ತಕವನ್ನು ಈವರೆಗೆ ಯಾರೂ ಹುಡುಕಿ ಬರೆಯಲಿಲ್ಲ. ಅನೇಕವರ್ಷಗಳಿಂದ ಶ್ರಮಪಟ್ಟು ಸಾವಿರಾರು ಗ್ರಂಥಗಳನ್ನು ಶೋಧಿಸಿ, ಪುರಾತನ ಗ್ರಂಥಕರ್ತರ ಚರಿತ್ರೆ ಮೊದಲಾದ ವಿಷಯಗಳನ್ನು ಹುಡುಕಿ ಈ ಹೊಸ ಪುಸ್ತಕವನ್ನು ಬರೆದದ್ದಕ್ಕೆ ಕರ್ನಾಟಕದೇಶದಲ್ಲಿ ಅಭಿಮಾನಿಗಳೆಲ್ಲಾ ಮ|| ರಾ|| ಆರ್. ನರಸಿಂಹಾಚಾರ್ ಮತ್ತು ಮ|| ರಾ|| ಎಸ್. ಜಿ. ನರಸಿಂಹಾಚಾರ್ ಎಂಬವರಿಗೆ ಬಹಳ ಕೃತಜ್ಞರಾಗಿರಬೇಕು. ಇವರು ೧೪ನೇ ಶತಮಾನದವರೆಗೆ ಇದ್ದ ಸುಮಾರು ೨೨೦ ಕವಿಗಳ ಹೆಸರು, ಅವರು ಹುಟ್ಟಿದ ಕಾಲ, ಅವರು ಬರೆದ ಗ್ರಂಥಗಳ ಹೆಸರು, ಬರವಣಿಗೆಯ ಸ್ವರೂಪ ಮೊದಲಾದವುಗಳನ್ನು ೪೦೦ ಪುಟಗಳುಳ್ಳ ಈ ಪುಸ್ತಕದಲ್ಲಿ ಅಡಕಮಾಡಿದ್ದಾರೆ. ಇದು ಮೊದಲನೇ ಭಾಗವು. ಮುಖ್ಯವಾಗಿ ದೇಶಾಭಿಮಾನದಿಂದಲೂ, ಕರ್ನಾಟಕ ಭಾಷಾಭಿರುಚಿಯಿಂದಲೂ, ಸಾಹಸಪಟ್ಟು ಬರೆದ ಈ ಮುಖ್ಯಗ್ರಂಥವು ಬಹುಜನ ಕರ್ನಾಟಕರಿಗೆ ಉಪಯೋಗವಾಗಿ ಇದುವರೆಗೆ ತಿಳಿಯದೆ ಗೂಢವಾಗಿದ್ದ ಬಹು ಸಂಗತಿಗಳನ್ನು ತಿಳಿಯಲಿಕ್ಕೆ ಅನುಕೂಲವಾಗಿವೆ ಎಂದು ಬಹು ಸಂತೋಷಪಡುತ್ತೇವೆ.

ನವಗನ್ನಡಿ.

ಕವಿಗಳ ವಿಷಯದಲ್ಲಿ ಇದುವರೆಗಿದ್ದ ಭಿನ್ನಾಭಿಪ್ರಾಯಗಳೂ ಉದ್ದಾ
ಕವಿಗಳಾಗಿದ್ದರೂ ಅವರ ಹೆಸರುಕೂಡ ಅನೇಕರಿಗೆ ತಿಳಿದಿರಲಿಲ್ಲವೆಂಬ ಸಂಗತಿಯೂ ಪ್ರ
ದ್ಧರಾದ ಕವಿಗಳ ಗ್ರಂಥಗಳಲ್ಲಿಯೂ ಕೆಲವು ಗ್ರಂಥದ ನಾಮಧೇಯವುಕೂಡ ಜನಗಳಿ
ಗೊತ್ತಾಗಿರಲಿಲ್ಲವೆಂಬ ಸಂಗತಿಯೂ ಇದರಲ್ಲಿ ಸ್ಪಷ್ಟವಾಗಿರುವುವು. ಹೀಗೆ ಇರತಕ್ಕ
ಗ್ರಂಥವೆಲ್ಲವನ್ನೂ ಆದ್ಯಂತವಾಗಿ ನೋಡುವುದೂ ಸರ್ವಜನರಿಗೂ ವೇದ್ಯವಾಗುವಂ
ಅವರವರ ಕಾಲಮುಂತಾದುವುಗಳನ್ನು ಸಮಂಜಸವಾಗಿರುವಂತೆ ನಿರ್ಧರಿಸುವುದೂ ಕೂ
ಸಾಮಾನ್ಯವಾದ ಕಾರ್ಯವಲ್ಲವೆಂದು ಎಲ್ಲರೂ ಬಲ್ಲರು. ಇಂಥ ಗ್ರಂಥವನ್ನು ಕನ್ನಡದ
ಇದುವರೆಗೆ ಯಾರೂ ಬರೆದಿಲ್ಲ. ಆದ್ಯಂತವಾಗಿ ಈ ಗ್ರಂಥವನ್ನು ನೋಡಿದರೆ ಕರ್ಣಾ
ಟಕ ಗ್ರಂಥಕಾರರು ಇಷ್ಟು ಜನರಿದ್ದರೆಂದಾಗಲಿ ಇಷ್ಟು ಗ್ರಂಥಗಳಿರುವುವೆಂದಾಗ
ಗೊತ್ತಾಗಿರಲಿಲ್ಲವೆಂದೂ ಇದಕ್ಕಾಗಿ ಕರ್ಣಾಟಕ ಭಾಷಾಭಿಮಾನಿಗಳು ಕರ್ಣಾಟ
ಕವಿಚರಿತ್ರಕಾರರ ವಿಷಯದಲ್ಲಿ ಕೃತಜ್ಞರಾಗಿರಬೇಕಾದುದು ಕರ್ತವ್ಯವಾಗಿರುವುದೆ
ದೂ ಗುಣಗ್ರಾಹಿಗಳಾದ ಯಾರಿಗೂ ತೋರದಿರಲಾರದು.

ಧರೆಯೊಳಡಂಗೆ ರತ್ನನಿಕರಂ ತೆಗೆವುಬ್ಬುಗಡೊಳ್ ರಸಾತಲಂ |
ಬರೆಗಮಗುಳ್ದು ಬಿಣ್ಣಿತಿದು ನುಣ್ಣಿತು ಸಣ್ಣಿತು ತೆಳ್ಳಿತೆಂಬಹೋ ||
ಪಿರಿದೆನಿಸಿಲ್ಲಮಂ ತೆಗೆದು ಕಾಲಕೆ ತಕ್ಕವೊಲೋರಣಕ್ಕೆ ತಂ |
ದಿರಿಸಿ ಜನಕ್ಕೆ ತೋರ್ಪ ಮನೆಗಾರರ ಜಾಣ್ಮೆಯನಾರೊ ಮೆಚ್ಚದರ್ ||
ಪಿರಿಯರೆನಿಪ್ಪ ಪೆಳ್ಳವಿಗಳಿರ್ಕೆಮ ಪಾಯ್ತುರೆ ಕಾಲಚಕ್ರಮೀ |
ಧರೆಯೊಳುರುಳ್ದು ಪಾಸಿ ಮುಸುಳ್ದುಂ ಸವೆದುಂ ನವೆದಿರ್ದ ಕಾಣದಂ
ತಿರೆ ಕಡಿವೋದ ಕಬ್ಬಿಗರುಮಂ ನೆರೆ ಕಾಣಿಸುಮೀ ಚರಿತ್ರಮು |
ಚ್ಚರಿಯೆನೆ ಪೇಳ್ವುದೇಂ ಕವಿಗೆ ನೋಳ್ಪಡೆ ಕನ್ನಡಿಯಾಗದಿರ್ಕುಮೇ ||

ವಿದ್ಯಾದಾಯಿನಿ.